# ವೇಮನ ವಿಶ್ವಗೀತೆ

ಗ್ರಂಥಕರ್ತ : ಶ್ರೀ ಎಸ್. ಆರ್. ಪಾಟೀಲ



ಮಹಾಯೋಗಿ ವೇಮನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**Vemana Vishwa Geete (a collection of Vemana Poems)**

| | | |
|---|---|---|
| Written by | : | Shri S. R. Patil<br>Hulkoti, Gadag |
| Published by | : | Dr. H. B. Neelgund<br>Co-ordinator<br>Mahayogi Vemana Peetha<br>Karnatak University, Dharwad – 580 003. |
| Copies | : | 1000 |
| First Edition | : | 1998 |
| Second Edition | : | 2019 |
| Pages | : | xxiv + 778 |
| Price | : | Rs.1000/- |

**ವೇಮನ ವಿಶ್ವಗೀತೆ**

| | | |
|---|---|---|
| ಗ್ರಂಥಕರ್ತ | : | **ಶ್ರೀ ಎಸ್. ಆರ್. ಪಾಟೀಲ**<br>ಹುಲಕೋಟಿ, ಗದಗ |
| ಪ್ರಕಾಶಕರು | : | **ಡಾ. ಎಚ್. ಬಿ. ನೀಲಗುಂದ**<br>**ಸಂಯೋಜಕರು**<br>ಮಹಾಯೋಗಿ ವೇಮನಪೀಠ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಪ್ರತಿಗಳು | : | ೧೦೦೦ |
| ಪ್ರಥಮ ಮುದ್ರಣ | : | ೧೯೯೮ |
| ದ್ವಿತೀಯ ಮುದ್ರಣ | : | ೨೦೧೯ |
| ಪುಟ ಸಂಖ್ಯೆ | : | xxiv + ೭೭೮ |
| ಬೆಲೆ | : | ರೂ. ೧೦೦೦/- |


ಮುದ್ರಕರು : **ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್**
ಶ್ರೀ ವಿಠ್ಠಲ ಮಂದಿರರಸ್ತೆ, ಗದಗ - ೫೮೨ ೧೦೧
ಮೊ: ೯೪೪೮೨೨೩೬೦೨. ೮೮೮೪೪೯೫೩೩೧, ೭೪೧೧೬೮೮೨೭೨
E_mail : chaitanyaoffset@gmail.com

# ಅರ್ಪಣೆ

ಕಾಯಕವೇ ಕೈಲಾಸವೆಂದು ಬಗೆದು,
ಪತಿಭಕ್ತಿಯೇ ಪರಮಾರ್ಥವೆನಿಸಿ,
ಗುರು–ದೇವತಾ ಭಕ್ತಿಯಲ್ಲಿ ಬಾಳಿ,
ಜೀವನದ ಸಿಹಿ ಕಹಿಗಳನ್ನು ಉಂಡು,
ಭೂದೇವಿಯ ಸಹನ ಶಕ್ತಿಯೇ ಮೂರ್ತಿಗೊಂಡು,
ತನ್ನ ಸುಖವೆಣಿಸದೆ, ಮಕ್ಕಳ ಸುಖ ಕೋರಿ,
ಮರದಂತೆ ಪರಾರ್ಥಕ್ಕಾಗಿ ಜೀವಿಸಿದ,
ಗಂಧ ಸೂಸುವ ಚಂದನ ಕೊರಡಿನಂತೆ,
ಕಷ್ಟದಲ್ಲಿಯೂ ವಾತ್ಸಲ್ಯ ತೋರಿದ,
ಪೂಜ್ಯ ಪ್ರಾತಃಸ್ಮರಣೀಯ ಮಾತೆ,
ದಿ. ಲಿಂಗಮ್ಮ ಕೋಂ ರಂ. ಪಾಟೀಲ
ಅವರ ಅಡಿದಾವರೆಯಲ್ಲಿ ಈ ಪುಷ್ಪಾರ್ಪಿತ.

– ಎಸ್. ಆರ್. ಪಾಟೀಲ

# ಪ್ರಕಾಶಕರ ಮಾತು

(ಪ್ರಥಮ ಮುದ್ರಣ)

ಪ್ರಪಂಚದಲ್ಲಿ ಸಾವಿರ ಸಂಖ್ಯೆಯಲ್ಲಿ ಭಾಷೆಗಳು ಬಳಕೆಯಲ್ಲಿವೆ. ಎಲ್ಲರೂ ಎಲ್ಲ ಭಾಷೆಗಳನ್ನು ಕಲಿಯುವುದು ಸಾಧ್ಯವಿಲ್ಲ; ಅದು ಅಪೇಕ್ಷಣೀಯವೂ ಅಲ್ಲ, ಆದರೆ ಒಂದು ಭಾಷೆಯಲ್ಲಿಯ ಶ್ರೇಷ್ಠ ಕೃತಿ ಕೇವಲ ಆ ಭಾಷೆಯ ಸೊತ್ತಾಗಬಾರದೆಂದರೆ ಭಾಷಾಂತರವೊಂದೇ ಪರಿಹಾರ. ಆದರೆ ಭಾಷಾಂತರ, ಅನುವಾದ ಸುಲಭದ ಕೆಲಸವಲ್ಲ. ಒಂದು ಭಾಷೆಯಲ್ಲಿರುವ ಸತ್ವ, ಚೈತನ್ಯ, ಲಾಲಿತ್ಯ, ಮಾಧುರ್ಯ ಇನ್ನೊಂದು ಭಾಷೆಯಲ್ಲಿ ಅದೇ ಮಟ್ಟದಲ್ಲಿರಲಾರದು. ಜೊತೆಗೆ ಅನುವಾದಕನಿಗೂ ಕೆಲವು ಮಿತಿಗಳಿರುತ್ತವೆ. ಕಾಲ ಬದಲಾದಂತೆ ಭಾಷಾಂತರದ ಆದ್ಯತೆಗಳೂ ಬದಲಾಗಿವೆ. ಭಾಷಾಂತರವೆಂದರೆ ಕೇವಲ ಪದಗಳ ಸಂಖ್ಯೆ, ಅರ್ಥದ ಪದ ಹುಡುಕಿ ಬರೆಯುವ ಯಾಂತ್ರಿಕ ಕೆಲಸವಲ್ಲ. ಮೂಲದ ಭಾವ ಭಾವನೆಗಳು ಭಾಷಾಂತರದಲ್ಲಿಯೂ ಮೂಡಿಬಂದು ಅದು ಮೂಲಕೃತಿಯಷ್ಟೇ ಪ್ರಭಾವಶಾಲಿಯಾಗಬೇಕು. ಸತ್ವಶಾಲಿಯಾಗಬೇಕು. ಲಾಲಿತ್ಯ, ಮಾಧುರ್ಯ ಹೊಂದಿರಬೇಕು. ಮೂಲದ ಅಕ್ಷರಶಃ ಅನುವಾದಕ್ಕಿಂತ ಸರಳವಾಗಿ ಮೂಲದ ಭಾವಕ್ಕೆ ಸಂವಾದಿಯಾಗುವಂತೆ ಭಾಷಾಂತರ ಮಾಡುವುದು ಇಂದು ಹೆಚ್ಚು ಕಂಡು ಬರುತ್ತದೆ. ಮೂಲ ಕೃತಿಯ ಅರ್ಥ, ಭಾವಕ್ಕೆ ಚ್ಯುತಿ ಬರದಂತೆ ಅನುವಾದ ಮಾಡವುದು ಕಷ್ಟದ ಕೆಲಸ. ಅದರಲ್ಲಿಯೂ ಪಾರಮಾರ್ಥಿಕ ಕಾವ್ಯಗಳನ್ನು ಅನುವಾದ ಮಾಡುವುದು ಕಲ್ಲಿನ ಬೆಟ್ಟದಲ್ಲಿ ಸುರಂಗ ಅಗೆಯುವಷ್ಟು ಕಠಿಣವಾದ ಕೆಲಸ. ಈ ಕೆಲಸದಲ್ಲಿ ಎಷ್ಟೇ ಪರಿಶ್ರಮಿಸಿದರೂ ಮೂಲದ ಸೌಂದರ್ಯತಂದು ಕೊಡುವುದು ಇನ್ನಷ್ಟು ಕಠಿಣವಾದ ಕೆಲಸ. ಈ ಕಡು ಕಠಿಣ ಕೆಲಸವನ್ನು ಶ್ರೀ ಎಸ್. ಆರ್. ಪಾಟೀಲರು ಹತ್ತಾರು ವರ್ಷಗಳ ತಪಸ್ಸಿನ ಫಲವಾಗಿ ಸಮರ್ಥವಾಗಿ ಮಾಡಿದ್ದಾರೆ.

ತೆಲುಗು, ಕನ್ನಡ ಸೋದರ ಭಾಷೆಗಳು. ಈ ಎರಡೂ ಭಾಷೆಗಳ ಮಧ್ಯ ಸಾಮ್ಯತೆಗಳು ಸಾಕಷ್ಟಿದ್ದರೂ ಅವುಗಳು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿವೆ. ತೆಲುಗು ಭಾಷೆಯ ಶ್ರೇಷ್ಠ ದಾರ್ಶನಿಕ ಕವಿ, ಸಂತ, ಯೋಗಿ ವೇಮನರು ಆಟವೇಲದಿ ಛಂದಸ್ಸಿನಲ್ಲಿ ಬರೆದ ಕವನಗಳನ್ನು ಶ್ರೀ ಎಸ್. ಆರ್. ಪಾಟೀಲರು ಮೂಲಕ್ಕೆ ಚ್ಯುತಿಬರದಂತೆ, ಮೂಲದ ಸತ್ಯಕ್ಕೆ ಧಕ್ಕೆಯಾಗದಂತೆ ಅದನ್ನು ಕಾಪಾಡಿ ಕನ್ನಡದ ಸಲಿಲತೆ ಮಾಧುರ್ಯ ಮೈಗೂಡಿಸಿ ಅನುವಾದ ಮಾಡಿದ್ದಾರೆ. ಅವರು ಈ ಕೆಲಸವನ್ನು ತಪಸ್ಸು ಎಂದು ಮಾಡಿರುವದರಿಂದಲೇ ಸುಮಾರು ನಾಲ್ಕು ಸಾವಿರ ಕವನಗಳು ಭಾಷಾಂತರವಾಗಲು ಸಾಧ್ಯವಾಗಿದೆ. ಈ ಕಠಿಣ ಕೆಲಸ ಮಾಡಿದ ಶ್ರೀ ಎಸ್. ಆರ್. ಪಾಟೀಲರು ಅಭಿನಂದನಾರ್ಹರು.

ವೇಮನರನ್ನು ಕುರಿತು ಶ್ರೀ ಎಸ್. ಆರ್. ಪಾಟೀಲರದು ಇದು ಚೊಚ್ಚಲ ಕೃತಿಯಲ್ಲ. ಎರಡು ದಶಕಗಳಿಂದ ಅವರು ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ವೇಮನರ ಕವನಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಈ ಮೊದಲೇ ಪರಿಚಯಿಸಿದ್ದಾರೆ. ವೇಮನರ ಎಲ್ಲ ಕವನಗಳ ಕನ್ನಡಾನುವಾದವಿರುವ ಸಮಗ್ರ ಗ್ರಂಥದ ಕೊರತೆ ಈ ಕೃತಿಯಿಂದ ನೀಗಲಿದೆ. ಯೋಗಿ ವೇಮನರ ಜೀವನ, ತತ್ವ, ಸಿದ್ಧಾಂತ, ಸಂದೇಶಗಳನ್ನು ಕನ್ನಡ ಓದುಗರಿಗೆ ತಲುಪಿಸುವುದೇ ಈ ಕೃತಿಯ ಮೂಲ ಉದ್ದೇಶ. ಈ ಕೃತಿ ರಚನೆಯಲ್ಲಿ ಲೇಖಕರು ಮೂಲಕ್ಕೆ ಧಕ್ಕೆ ಬರದಂತೆ, ಅರ್ಥಕ್ಕೆ ಚ್ಯುತಿ ಬರದಂತೆ, ಮಾಧುರ್ಯಕ್ಕೆ ಮುಕ್ಕಾಗದಂತೆ ಎಚ್ಚರಿಕೆ ವಹಿಸಿದ್ದಾರೆ. ಈ ಮೊದಲೇ ನಾವು ಹೇಳಿದಂತೆ ಇದು ಸುಲಭದ ಕೆಲಸವಲ್ಲ. ಅತ್ಯಂತ ಕ್ಲಿಷ್ಟಕರವಾದ ಕೆಲಸವನ್ನು ಲೇಖಕರು ಸಮರ್ಥವಾಗಿ ಮಾಡಿದ್ದಾರೆ. ಇದು ಉಭಯ ಭಾಷಾ ಪಂಡಿತರ ಮೆಚ್ಚುಗೆಗೆ ಪಾತ್ರವಾಗುತ್ತದೆಂದು ಆಶಿಸುತ್ತೇವೆ.

ಮಹಾಯೋಗಿ ವೇಮನ ಪೀಠ ಈ ಬೃಹತ್ ಗ್ರಂಥವನ್ನು ಪ್ರಕಾಶಿಸುವ ಸಾಹಸ ಮಾಡಲು ಸಾಧ್ಯವಾದುದು ಕುಲಪತಿಗಳಾದ ಡಾ. ಪಠಾಣ ಅವರ ಪ್ರೋತ್ಸಾಹ ಸಹಾಯ ಸಹಕಾರದಿಂದ ಹಾಗೂ ಕರ್ನಾಟಕ ವಿ.ವಿ. ಹಿಂದಿನ ಕುಲಸಚಿವರಾದ ಡಾ. ಪುನೀತ ಅವರು ಪೀಠದ ವ್ಯವಹಾರಗಳಲ್ಲಿ ಅಪಾರ ಆಸಕ್ತಿವಹಿಸಿದ್ದರಿಂದ ಪೀಠ ಇಂದು ಈ ಕೃತಿಯನ್ನು ಪ್ರಕಟಿಸಲು ಸಾಧ್ಯವಾಯಿತೆಂದು ಹೇಳಬಹುದು. ಇಂದಿನ ಕುಲಸಚಿವರಾದ ಡಾ. ಎಸ್. ರಾಜಶೇಖರ ಅವರು ಸಹಾಯದ ಹಸ್ತವನ್ನು ನೀಡಿದ್ದಾರೆ. ಬೆಂಬಲ ಪ್ರೋತ್ಸಾಹ ಹರಿಸಿದ್ದಾರೆ. ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಚ್. ವಿ. ನಾಗೇಶ ಅವರು ಪೀಠದ ಕೆಲಸ ಕಾರ್ಯಗಳಲ್ಲಿ ತಳೆದಿರುವ ಆಸಕ್ತಿ, ನೀಡುತ್ತಿರುವ ಸಹಾಯ ಮಾರ್ಗದರ್ಶನ ಬಣ್ಣಿಸಲು ಶಬ್ದಗಳಿಂದ ಸಾಧ್ಯವಿಲ್ಲವೆಂದರೆ ತಪ್ಪಾಗದು. ಈ ಕೃತಿಯ ಪರಿಶೀಲನಾ ಸಮಿತಿಯ ಮುಖ್ಯಸ್ಥರಾಗಿ ನೆರವಾದ ಬೆಂಗಳೂರು ವಿಶ್ವ ವಿದ್ಯಾಲಯದ ತೆಲುಗು ವಿಭಾಗದ ಮುಖ್ಯಸ್ಥರಾದ ಡಾ.ಟಿ.ವ್ಹಿ. ಸುಬ್ಬರಾವ್ ಅವರಿಗೆ ಹಾಗೂ ಪರಿಶೀಲನಾ ಸಮಿತಿಯ ಸದಸ್ಯರಾಗಿ ತ್ವರಿತವಾಗಿ ನೆರವಾದ ಮದ್ರಾಸ ವಿಶ್ವ ವಿದ್ಯಾಲಯದ ತೆಲುಗು ವಿಭಾಗದ ಪ್ರೊ. ಡಿ. ರಾಮಚಂದ್ರ ಅವರಿಗೆ ಅಭಿನಂದನೆಗಳು. ಪ್ರತಿಯೊಂದು ಕವನದ ಸಾಲುಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ ಶ್ರೀಮತಿ ಶೀಲಾ ಅಂಕೋಲಾರ ಶ್ರಮ ಬಹುದೊಡ್ಡದು. ಅವರ ಸೇವೆ ಸ್ಮರಣೀಯ. ಅಕ್ಷರ ಜೋಡನೆ ಕೆಲಸ ನಿರ್ವಹಿಸಿದ ಹುಲಕೋಟಿಯ ವೇಮನ ಪ್ರಿಂಟರ್ಸ್ ಮಾಲಿಕರು ಹಾಗೂ ಸಿಬ್ಬಂದಿವರ್ಗಕ್ಕೆ ಕೃತಜ್ಞತೆಗಳು. ಅತ್ಯಲ್ಪಕಾಲದಲ್ಲಿ ಮುದ್ರಣ ಕೆಲಸ ನಿರ್ವಹಿಸಿ ಈ ಗ್ರಂಥ ಸುಂದರವಾಗಿ ಮುದ್ರಣಗೊಳ್ಳಲು ಕಾರಣರಾದ ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣಾಲಯದ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಹಾಗೂ ಕೃತಿ ಹೊರ ಬರುವಲ್ಲಿ ನೆರವಾದ ಅಸಂಖ್ಯ ಅಭಿಮಾನಿ ಹಿತೈಷಿಗಳಿಗೆಲ್ಲ ಹೃತ್ಪೂರ್ವಕ ಅಭಿನಂದನೆಗಳು.

**– ಪ್ರೊ. ಪಿ.ಎಸ್.ಎನ್. ರೆಡ್ಡಿ**

ಸಂಯೋಜಕರು, ಮಹಾಯೋಗಿ ವೇಮನ ಪೀಠ

■■

# ಕುಲಪತಿಗಳ ನಲ್ನುಡಿ

ವಿಶ್ವವಿದ್ಯಾಲಯಗಳು ಪ್ರಪಂಚದ ವಿವಿಧ ವಿಷಯಗಳ ಜ್ಞಾನವನ್ನು ಸಮಗ್ರವಾಗಿ ಒಟ್ಟುಗೂಡಿಸಿ ಜನ ಸಮುದಾಯಕ್ಕೆ ತಲುಪಿಸುವ ಉದ್ದೇಶದಿಂದ ಸ್ಥಾಪಿತವಾದವುಗಳು. ಇವುಗಳ ಗುರಿ ವಿವಿಧ ಆಯಾಮಗಳಲ್ಲಿ ಸಂಶೋಧನೆ ಅದರಿಂದ ಬರುವ ಪರಿಣಾಮಗಳನ್ನು ಸಂಗ್ರಹಿಸಿ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಬಳಸುವುದು. ಹೊಸ ಜ್ಞಾನವನ್ನು ಬೆಳೆಸುವುದು. ಒಟ್ಟಾರೆ ಉದ್ದೇಶ ಪ್ರಕೃತಿಗೆ ಹಾನಿಯಾಗದಂತೆ ಮಾನವನ ಸರ್ವತೋಮುಖ ಅಭಿವೃದ್ಧಿಗೆ ಪ್ರಯತ್ನಿಸುವುದು. ಈ ಹಿನ್ನಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಹಲವು ನೆಲೆಗಳಲ್ಲಿ ಅಮೋಘ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ.

ಕನ್ನಡದ ಸರ್ವಜ್ಞನಂತೆ ತೆಲುಗಿನ ಮಹಾಯೋಗಿ ವೇಮನ ಜನಪರ ಕವಿ. ಸರಳ ಭಾಷೆಯಲ್ಲಿ ಸಾಮಾನ್ಯ ವಿಷಯದಿಂದ ಗಹನವಾದ ವಿಷಯದವರೆಗೆ ಜನಹಿತ ವಿಷಯಗಳನ್ನೇ ಸಾರಿದ ಸಂತ ಕವಿ. ಈ ಪ್ರಜಾ ಕವಿಯ ಪದ್ಯಗಳನ್ನು ನಮ್ಮ ವಿಶ್ವವಿದ್ಯಾಲಯ 'ವೇಮನ ವಿಶ್ವಗೀತೆ' ಎಂಬ ಹೆಸರಿನಲ್ಲಿ ೧೯೯೮ ರಲ್ಲಿ ಪ್ರಕಟಿಸಿತು. ಇದಕ್ಕೆ ಕಾರಣೀಕರ್ತರಾದ ಶ್ರೀ ಎಸ್. ಆರ್. ಪಾಟೀಲರು ಮಹಾಯೋಗಿ ವೇಮನ ಪೀಠದ ಸಂಸ್ಥಾಪಕರು ಹೌದು. ಇವರ ಸಂಕಲ್ಪ ಹಾಗೂ ಶ್ರೀ ಎಚ್. ಕೆ. ಪಾಟೀಲರ ಸತತ ಸಹಾಯದ ಫಲವಾಗಿ ಮಹಾಯೋಗಿ ವೇಮನ ಪೀಠವು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

ಕ್ರಿ. ಶ. ೨೦೧೮ರಲ್ಲಿ ಕರ್ನಾಟಕ ಸರ್ಕಾರವು ಮಹಾಯೋಗಿ ವೇಮನರ ಜಯಂತ್ಯುತ್ಸವವನ್ನು ಸರ್ಕಾರದ ವತಿಯಿಂದ ಆಚರಿಸಲು ಪ್ರಾರಂಭಿಸಿರುವುದರಿಂದ ಮತ್ತು ಮಹಾಯೋಗಿ ವೇಮನ ಪೀಠವು 'ಮಹಾಯೋಗಿ ವೇಮನ ಸದ್ಭಾವನಾ ಯಾತ್ರೆ' ಎಂಬ ಕಾರ್ಯಕ್ರಮದ ಮೂಲಕ ರಾಜ್ಯದ ಹಲವಾರು ಭಾಗಗಳಲ್ಲಿ ಸಂಚರಿಸಿ ವೇಮನ ತತ್ವ ಪ್ರಚಾರ ಮಾಡಿರುವದರಿಂದ, ಶ್ರೀ ಎಚ್. ಕೆ. ಪಾಟೀಲರ ಧನಸಹಾಯದಿಂದ ಮುದ್ರಿತವಾದ 'ಮಹಾಯೋಗಿ ವೇಮನ' ಎಂಬ ಪುಸ್ತಕದ ೫೦ ಸಾವಿರ ಪ್ರತಿಗಳನ್ನು ಉಚಿತವಾಗಿ ರಾಜ್ಯದ ತುಂಬೆಲ್ಲಾ ಹಂಚಿರುವುದರಿಂದ ವೇಮನ ಪದ್ಯಗಳ ಮೂಲಗ್ರಂಥವಾದ 'ವೇಮನ ವಿಶ್ವಗೀತೆ' ಗ್ರಂಥಕ್ಕೆ ಬೇಡಿಕೆ ಹೆಚ್ಚಿ, ಪುಸ್ತಕದ ಪ್ರತಿಗಳು ಮುಗಿದ ಕಾರಣ ಮರು ಮುದ್ರಣವಾಗುತ್ತಿರುವುದು ಸಂತಸದ ವಿಷಯ.

ಇತ್ತೀಚಿನ ದಿನಗಳಲ್ಲಿ ಮಹಾಯೋಗಿ ವೇಮನ ಪೀಠದ ಸಂಯೋಜಕರಾದ ಡಾ. ಎಚ್. ಬಿ. ನೀಲಗುಂದ ಅವರ ವಿಶೇಷ ಪ್ರಯತ್ನದಿಂದ ನಾಲ್ಕು ಪುಸ್ತಕಗಳು ಪ್ರಕಟವಾಗಿದ್ದು, ರಾಜ್ಯದ ವಿವಿಧ ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ

ಭಾಗವಹಿಸಿ ಪ್ರಚಾರೋಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದರಿಂದ ಮಹಾಯೋಗಿ ವೇಮನರ ತತ್ವ ಸಿದ್ಧಾಂತಗಳು ರಾಜ್ಯದ ತುಂಬೆಲ್ಲಾ ಪ್ರಸಾರವಾಗುತ್ತಿವೆ. ಹಲವಾರು ಭಾಷೆಗಳಿಗೆ ತರ್ಜುಮೆಯಾಗುತ್ತಿವೆ. ಮಹಾಯೋಗಿ ವೇಮನ ಎಂಬ ಕನ್ನಡದ ಗ್ರಂಥ ಈಗಾಗಲೇ ಇಂಗ್ಲೀಷ ಮತ್ತು ತಮಿಳು ಭಾಷೆಗೆ ತರ್ಜುಮೆಯಾಗಿರುವುದು ಹೆಮ್ಮೆಯ ವಿಷಯ.

ಇದೇ ರೀತಿ ಮಹಾಯೋಗಿ ವೇಮನರ ತತ್ವ ಸಿದ್ಧಾಂತಗಳು ಸರ್ವ ಸಮಾಜಕ್ಕೆ ತಲುಪಿ, ಸಮಾಜದಲ್ಲಿ ಶಾಂತಿ, ನೆಮ್ಮದಿ ಸ್ಥಾಪಿತವಾಗಲು ಶ್ರೀ ಎಸ್. ಆರ್. ಪಾಟೀಲರ 'ವೇಮನ ವಿಶ್ವಗೀತೆ' ಎಂಬ ಈ ಗ್ರಂಥವು ಮಾರ್ಗದರ್ಶನ ನೀಡಲಿ ಎಂದು ಹಾರೈಸುತ್ತೇನೆ. ಮಹಾಯೋಗಿ ವೇಮನ ಪೀಠವು ಇದೇ ರೀತಿ ಸಂಶೋಧನೆ, ಪ್ರಕಟಣೆ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಇನ್ನಷ್ಟು ವ್ಯಾಪಕವಾಗಿ ಹಮ್ಮಿಕೊಳ್ಳುವ ಮೂಲಕ ಮಾನವ ಕಲ್ಯಾಣದ ಕೆಲಸವನ್ನು ಮುಂದುವರೆಸಲೆಂದು ಹಾರೈಸುತ್ತೇನೆ.

ಧಾರವಾಡ
೦೨.೦೧.೨೦೧೯

**ಡಾ. ಪ್ರಮೋದ ಬಿ. ಗಾಯಿ**
ಕುಲಪತಿಗಳು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

# ಸಂಯೋಜಕರ ನುಡಿ

ಮಹಾಯೋಗಿ ವೇಮನರು ಭಾರತೀಯ ದಾರ್ಶನಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಸಂತ ಕವಿ. ಪರಮಜ್ಞಾನಿ, ಸ್ಥಾಪಿತ ಧರ್ಮ, ಜಾತಿ, ಜನಾಂಗ, ದೇಶ, ಭಾಷೆ ಮತ್ತು ವ್ಯಕ್ತಿ ಪ್ರಚಾರದಂತಹ ಮಾನವ ಕಲ್ಪಿತ ವಿಷಯಗಳನ್ನು ಮೀರಿ ಇರುವ ಪರಮ ಶಾಂತಿಯನ್ನು ದರ್ಶಿಸಲು ಮಾರ್ಗ ತೋರಿಸಿದವರು. ಇವರು ಯಾವುದೇ ಸಂಘ–ಸಂಸ್ಥೆ, ಮತ–ಸಂಪ್ರದಾಯಗಳನ್ನು ಸ್ಥಾಪಿಸದೇ ಕೇವಲ ಸತ್ಸಂಗದ ಮೂಲಕ ಸಮಾನ ಮನಸ್ಕರನ್ನು ಆಕರ್ಷಿಸಿ ಸಾಧನಾ ಪಥವನ್ನು ನಿರ್ದೇಶಿಸಿದ್ದಾರೆ.

ಮಹಾಯೋಗಿ ವೇಮನರನ್ನು ಕನ್ನಡ ನಾಡಿಗೆ ಪರಿಚಯಿಸಲು ತಮ್ಮನ್ನೇ ತಾವು ಸಮರ್ಪಿಸಿಕೊಂಡವರು ಹುಲಕೋಟಿಯ ಶ್ರೀ ಎಸ್. ಆರ್. ಪಾಟೀಲರು. ವೃತ್ತಿಯಿಂದ ಅಭಿಯಂತರರಾಗಿ, ಅಧೀಕ್ಷಕ ಅಭಿಯಂತರರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದವರು. ಸಹಕಾರಿ ರಂಗದ ಭೀಷ್ಮ, ಹುಲಕೋಟಿಯ ಹುಲಿ, ಜನಮೆಚ್ಚಿದ ನಾಯಕನೆಂದು ಬಿರುದು ಪಡೆದಿದ್ದ ದಿ. ಕೆ. ಎಚ್. ಪಾಟೀಲರ ಸಹೋದರರಾಗಿದ್ದ ಶ್ರೀ ಎಸ್. ಆರ್. ಪಾಟೀಲರು, ರಾಜಕೀಯದ ಸುಳಿಯಲ್ಲಿ ಸಿಗದೇ, ಶ್ರೇಷ್ಠ ಆಧ್ಯಾತ್ಮಿಕ ಜೀವಿಯಾಗಿದ್ದರು. ನಾಡಿನ ದಾರ್ಶನಿಕರು, ಸಂತರು, ಸಿದ್ಧಿ ಪುರುಷರ ಒಡನಾಟವನ್ನಿಟ್ಟುಕೊಂಡಿದ್ದ ಶ್ರೀ ಎಸ್. ಆರ್. ಪಾಟೀಲರು, ಆಧ್ಯಾತ್ಮಿಕ ಚಿಂತನೆಗಾಗಿ 'ಪ್ರಜ್ಞಾನೋದಯ' ಎಂಬ ಆಶ್ರಮವನ್ನು ಸ್ಥಾಪಿಸಿದರು.

ಆನಂದ ಮಾರ್ಗದ ಸಂಸ್ಥಾಪಕರಾಗಿದ್ದ ಪ್ರಭಾತ ರಂಜನ ಸರಕಾರವರ ಪ್ರಭಾವಕ್ಕೊಳಗಾದ ಶ್ರೀ ಎಸ್. ಆರ್. ಪಾಟೀಲರು, ಅವರಿಂದ ಆಧ್ಯಾತ್ಮಿಕ ದೀಕ್ಷೆ ಪಡೆದು ಜ್ಞಾನಯೋಗ ಸಾಧಕರಾಗಿ ಪರಿವರ್ತನೆಯಾದರು. ನಂತರ ಹಲವಾರು ಸತ್ಪುರುಷರ ಯೋಗಿಗಳ ಜೀವನವನ್ನು ಆಳವಾಗಿ ಅಧ್ಯಯನ ಮಾಡಿದರು. ಅವರೆಲ್ಲರಲ್ಲಿ ಮತ್ತು ಮಹಾಯೋಗಿ ವೇಮನರು ಅವರ ಅಂತರಂಗವನ್ನು ಆವರಿಸಿದರು. ತೆಲುಗು ಭಾಷೆಯಲ್ಲಿರುವ ವೇಮನರ ಸಾಹಿತ್ಯವನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಲು ಇಳಿ ವಯಸ್ಸಿನಲ್ಲೂ ಮಗುವಿನಂತೆ ತೆಲುಗು ಭಾಷೆಯನ್ನು ಕಲಿತರು.

ತೆಲುಗು ನಾಡಿನಲ್ಲಿ ಹಂಚಿಹೋಗಿದ್ದ ಮಹಾಯೋಗಿ ವೇಮನರ ಪದ್ಯಗಳನ್ನು ಸಂಗ್ರಹಿಸುವ ಅಭಿಯಾನವನ್ನಾರಂಭಿಸಿ ಸುಮಾರು ನಾಲ್ಕುಸಾವಿರ ಪದ್ಯಗಳನ್ನು ಸಂಗ್ರಹಿಸಿ ಕನ್ನಡ ಭಾಷೆಗೆ ತರ್ಜುಮೆಗೊಳಿಸಿದರು. ಈ ಸಂದರ್ಭದಲ್ಲಿ ವೇಮನ ತತ್ವ ಸಿದ್ಧಾಂತಗಳನ್ನಾಧರಿಸಿ ಹಲವಾರು ಗ್ರಂಥಗಳನ್ನು ರಚಿಸಿದರು. ಸರ್ವ ಸಮಾಜಕ್ಕೂ ವಾಸ್ತವಿಕ ಸತ್ಯದ ದರ್ಶನ ಮಾಡಿಸುವ ವೇಮನರ ಸಾಹಿತ್ಯವು ಸರ್ವ ಜನಾಂಗಕ್ಕೆ

ತಲುಪಿಸುವ ಸಂಕಲ್ಪ ಮಾಡಿದರು. ಈ ಕಾರ್ಯಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಹಾಯೋಗಿ ವೇಮನ ಪೀಠವನ್ನು ಸ್ಥಾಪಿಸಿದರು. ತಾವು ಸಂಗ್ರಹಿಸಿದ ಮಹಾಯೋಗಿ ವೇಮನರ ಅಮೂಲ್ಯ ಪದ್ಯಗಳಲ್ಲಿ ೩೮೧೩ ಪದ್ಯಗಳನ್ನು 'ವೇಮನ ವಿಶ್ವಗೀತೆ' ಎಂಬ ಹೆಸರಿನಿಂದ ೧೯೯೮ರಲ್ಲಿ ಪ್ರಕಟಿಸಿದರು. ಆ ಗ್ರಂಥಗಳು ಮುಗಿದ ಕಾರಣ ಅದೇ ಗ್ರಂಥವನ್ನು ಮೂಲದಲ್ಲಿರುವಂತೆ ಮರುಮುದ್ರಣ ಮಾಡಲಾಗುತ್ತಿದೆ.

ಈ ಕಾರ್ಯಕ್ಕೆ ಪ್ರೋತ್ಸಾಹ ನೀಡಿದ ಮಾನ್ಯ ಶ್ರೀ ಎಚ್. ಕೆ. ಪಾಟೀಲರಿಗೂ, ಸಲಹಾ ಸಮಿತಿಯ ಸರ್ವ ಸದಸ್ಯರಿಗೂ ಹೃದಯಪೂರ್ವಕ ಧನ್ಯವಾದಗಳು. ಪೀಠದ ಸರ್ವಕಾರ್ಯಗಳಿಗೆ ಪ್ರೋತ್ಸಾಹಿಸುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯ ಶ್ರೀ ಪ್ರಮೋಧ ಭೀ ಗಾಯಿ ಅವರಿಗೂ ಪ್ರಸಾರದ ಜವಾಬ್ದಾರಿಯನ್ನು ಹೊತ್ತಿರುವ ಕ.ವಿ.ವಿ.ಯ ಪ್ರಸಾರಾಂಗದ ನಿರ್ದೇಶಕರಾದ ಹರಿಲಾಲ ಪವಾರ ಅವರಿಗೂ ಹೃದಯಪೂರ್ವಕ ಧನ್ಯವಾದಗಳು. ಕರಡು ಪ್ರತಿಗಳಲ್ಲಿನ ತಪ್ಪುಗಳನ್ನು ತಿದ್ದಲು ಸಹಾಯ ಮಾಡಿದ ಪ್ರೊ. ಕೃ. ಅನ್ವನ್, ಡಾ. ಆರ್. ಬಿ. ಚಿಲುಮಿ ಮತ್ತು ಶ್ರೀಮತಿ ಗಾಯತ್ರಿ ಹುದ್ದಾರ ಅವರಿಗೂ ಕೃತಜ್ಞತೆಗಳು. ಡಿ.ಟಿ.ಪಿ. ಕಾರ್ಯ ನಿರ್ವಹಿಸಿದ ಶ್ರೀ ಆರ್. ಕೆ. ಹೆಗಡೆ ಹಾಗೂ ಮುಖ ಪುಟ ವಿನ್ಯಾಸಗೊಳಿಸಿದ ಚಿತ್ತಾರ ಗ್ರಾಫಿಕ್ಸ್‌ನ ಶ್ರೀ ಮಾರುತಿಯವರಿಗೂ ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ತ್ವರಿತ ಮುದ್ರಣಾಲಯ, ಗದಗ ಅವರಿಗೂ ಹೃದಯಪೂರ್ವಕ ಧನ್ಯವಾದಗಳು.

ಧಾರವಾಡ
೨-೧-೨೦೧೯

– ಡಾ. ಎಚ್. ಬಿ. ನೀಲಗುಂದ
ಸಂಯೋಜಕರು,
ಮಹಾಯೋಗಿ ವೇಮನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜಂಗಮವಾಣಿ:೯೪೪೯೮೦೦೨೧೬

■■

# ಅರಿಕೆ

ವೇಮನ, ಭಾರತೀಯ ದಾರ್ಶನಿಕ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ಓರ್ವ ಸಂತ ಕವಿ. ನಿಷ್ಕಾಮ ಕರ್ಮ ಮತ್ತು ಜ್ಞಾನಗಳ ಜಗಿತದ ಹಲಗೆಯನ್ನು ಮೀಟಿ, ಧ್ಯಾನ ಶಕ್ತಿಯಿಂದ ಪರಾಭಕ್ತಿಯ ಈಜುಗೊಳದಲ್ಲಿ ಮುಳುಗಿ ಈಜಾಡಿದ ವಿರಳ ಸಿದ್ಧ ಪುರುಷ. ವೇಮನರನ್ನು ವೇಮನರಿಗೇ ಹೋಲಿಸಬಹುದಲ್ಲದೆ, ಇತರರನ್ನು ಅವರೊಡನೆ ತುಲನಿಸುವುದು ವೃಥಾ ಶ್ರಮವಾಗಬಹುದು.

ಸರ್ವಜ್ಞ ಕವಿಯನ್ನು ಕನ್ನಡದ ವೇಮನ ಎಂದು ಕರೆದು ಕೆಲವರು ತೃಪ್ತಿ ಪಟ್ಟಿದ್ದಾರೆ. ವೇಮನರನ್ನು ತೆಲುಗಿನ ತಿರುವಳ್ಳುವರೆಂದು ಕರೆದು ಇನ್ನು ಕೆಲವರು ಸಂತೋಷಿಸಿದ್ದಾರೆ. ವೇಮನರನ್ನು ದಕ್ಷಿಣ ಕಬೀರರೆಂದೂ ಕರೆಯಲಾಗಿದೆ. ಅನಂತರ ಕಾಲದ ಮಹಾರಾಷ್ಟ್ರದಲ್ಲಿ ಕ್ರಾಂತಿ ಕಿಡಿ ಹಾರಿಸಿದ ಮಹಾಸಂತ ತುಕಾರಾಮರು ವೇಮನರಿಗೆ ಇನ್ನೂ ಹತ್ತಿರದವರೆಂದೂ ಹಲವರ ಅಭಿಪ್ರಾಯವುಂಟು.

ಈ ಮಹಾಪುರುಷರು ಚಾರಿತ್ರಿಕ ವ್ಯಕ್ತಿಗಳಾದರೂ ಅವರ ಜೀವನ ಕುರಿತ ದಾಖಲೆಗಳು ಸಿಗುವುದು ವಿರಳ. ಕ್ರಾಂತಿ ಕಹಳೆ ಊದಿದ ಈ ಸಮಾಜ ಸುಧಾರಕರು ಶೋಷಿತ ವರ್ಗದಿಂದ ಬಂದವರಾಗಿರುವುದರಿಂದ ಆಯಾ ಕಾಲದ ಮೇಲ್ವರ್ಗದ ತಿರಸ್ಕಾರ, ಅಸಡ್ಡೆಗೊಳಗಾಗಿದ್ದಾರೆ. ಪಾಶ್ಚಾತ್ಯರ ಆಗಮನವಾಗುವವರೆಗೆ ಇವರ ಬಗ್ಗೆ ಗಂಭೀರ ಅಧ್ಯಯನವೇ ನಡೆದಿರಲಿಲ್ಲ. ಜೊತೆಗೆ ಈ ಮಹಾಪುರುಷರ ಜೀವನ ಚರಿತ್ರೆ ವಿಕೃತಕ್ಕೊಳಗಾಗಿದ್ದು ಕಂಡು ಬರುತ್ತದೆ. ಜ್ಞಾನ ಒಂದು ಪ್ರಬಲವಾದ ಅಸ್ತ್ರ. ಈ ಅಸ್ತ್ರ ಕೇವಲ ಮೇಲ್ವರ್ಗಕ್ಕೆ ಮಾತ್ರ ಲಭ್ಯವಾಗುವಂತಹ ವ್ಯವಸ್ಥೆಯಲ್ಲಿಯೂ ಅರಳಿದ ಮಹಾನ್ ವ್ಯಕ್ತಿಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಜನಸಾಮಾನ್ಯರಾಡುವ ಭಾಷೆಯಲ್ಲಿ ಬೋಧಿಸಿ, ಅವರಿಗೆ ತಿಳಿಯುವಂತಹ ಅಲಂಕಾರಗಳನ್ನು, ಜೀವನಾನುಭವದಿಂದ ನೇಯ್ದು ಈ ಮಹಾಪುರುಷರು ಹೊಸ ಮತ ಇಲ್ಲವೇ ಪಂಥ ಸ್ಥಾಪಿಸಲಿಲ್ಲ, ಅದು ಅವರ ಗುರಿಯೂ ಆಗಿರಲಿಲ್ಲ. ವ್ಯಕ್ತಿ ಡಾಂಭಿಕತೆಯಿಂದ ದೂರಾಗಿ ಗೊಡ್ಡು ಆಚಾರಗಳನ್ನು ತಿರಸ್ಕರಿಸಿ ಸರಳವಾದ ಜೀವನ ನಡೆಸಿ ಸಾತ್ವಿಕತೆ ಮೈಗೂಡಿಸಿಕೊಂಡು ಪಾರಮಾರ್ಥಸಾಧಿಸುವ ಸಹಜ ಮಾರ್ಗವನ್ನು ಕಂಡುಕೊಳ್ಳಲು ನೆರವಾದ ಈ ಪುಣ್ಯ ಪುರುಷರು ಪಟ್ಟಭದ್ರ ಹಿತಾಸಕ್ತಿಗಳ ಅವಹೇಳನಕ್ಕೆ ಗುರಿಯಾಗಿದ್ದರೆ ಆಶ್ಚರ್ಯವಿಲ್ಲ. ಜನರನ್ನು ಅಜ್ಞಾನದಲ್ಲಿರಿಸಿ ಅವರನ್ನು ಶೋಕಿಸುತ್ತಿದ್ದ ವರ್ಗ ಶ್ರೀಸಾಮನ್ಯರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿ ಬ್ರಹ್ಮವಿದ್ಯೆ

ಬೋಧಿಸಿದ ಅನುಭಾವಿಗಳ ಜೀವನ ಹಾಗು ಸಂದೇಶ ಹೆಚ್ಚು ಪ್ರಚಾರಗೊಳ್ಳಲು ಅಡ್ಡಿಯಾಗಿದ್ದರೆ ಆಶ್ಚರ್ಯವಿಲ್ಲ.

ಈ ಎಲ್ಲ ಮಹಾಪುರುಷರು, ಇರುವ ಜಾತಿ- ಮತಗಳಿಗೆ ಇನ್ನೊಂದನ್ನು ಸೇರಿಸಲು ಮುಂದಾಗಲಿಲ್ಲ. ಜಾತೀಯ ಇಲ್ಲವೆ ಮತೀಯ ಸಂಘ-ಸಂಸ್ಥೆಗಳನ್ನು ಕಟ್ಟಲಿಲ್ಲ. ಆದರೆ, ಜಾತಿ-ಮತಗಳಿಂದ ದೂರವಾಗಿ, ಸತ್ಸಂಗದಲ್ಲಿ ಸಮಾನ ಮನಸ್ಕರನ್ನು ಆಕರ್ಷಿಸಿ, ಸಾಧನ ಪಥವನ್ನು ನಿರ್ದೇಶಿಸುತ್ತಿದ್ದರು. ಇವರ ಬಾಹ್ಯ ಆಚಾರವೆಂದರೆ ಸಾಮಾನ್ಯ ನೀತಿ ಪಾಲನೆಯೇ ಆಗಿತ್ತು. ಹೀಗಾಗಿ, ಅವರ ಲೋಕ ಸಾಹಿತ್ಯವು ನೀತಿ ಬೋಧಾತ್ಮಕವಾಗಿದೆ. ಇನ್ನು ಅವರ ದಾರ್ಶನಿಕ ಸಾಹಿತ್ಯದಲ್ಲಿ ಅಲ್ಪ ಸ್ವಲ್ಪ ಭೇದವು ತೂರಿಕೊಂಡಿದೆ. ಸರ್ವಜ್ಞನು ದೇಹದ ಮೇಲೆ ಲಿಂಗಧಾರಣೆಯನ್ನು ಖಂಡಿಸಿದರೂ, ಲಿಂಗ ಪೂಜೆಯನ್ನೂ, ಭಸ್ಮ-ರುದ್ರಾಕ್ಷಿ ಧಾರಣೆಯನ್ನೂ ಪುರಸ್ಕರಿಸಿದ್ದಾನೆ. ತುಕಾರಾಮನು ಕ್ಷುದ್ರ ದೇವತೆಗಳ ಮೂರ್ತಿ ಪೂಜೆಯನ್ನು ಖಂಡಿಸಿದರೂ, ಹೆಚ್ಚಿನ ಹಿನ್ನೆಲೆಯಿರದ, ಪಂಢರಪುರದ ವಿಠ್ಠಲನನ್ನು ಒಪ್ಪಿಕೊಳ್ಳುವವರೊಂದಿಗೆ ಸಂಧಿ ಮಾಡಿಕೊಂಡಿದ್ದಾನೆ. ಇತ್ತ ವೇಮನ ಮತ್ತು ಕಬೀರರು ಯಾವುದೇ ಬಗೆಯ ಬಾಹ್ಯ ಪೂಜೆಯನ್ನೂ, ಚಿಹ್ನೆಗಳನ್ನೂ, ಅಂಧ:ಶ್ರದ್ಧೆ, ಕಂದಾಚಾರಗಳನ್ನೂ ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಮೂರ್ತಿ ಪೂಜೆಗಂತೂ ಅವರು ಎಳ್ಳಷ್ಟೂ ಇಂಬುಗೊಟ್ಟಿಲ್ಲ. 'ಕಾಷ್ಠ-ಲೋಹೇಷ್ಟು ಮೂರ್ಖಾಣಾಂ, ಹೃದಯೇಷು ಚ ಪಂಡಿತಾನಾಂ' ಎಂದು ವಿಷ್ಣು ಪುರಾಣದಲ್ಲಿಯೇ ಹೇಳಿದ ಮೇಲೆ, ಇಂಥ ಮಹಾ ಪುರುಷರು ಮೂರ್ತಿಪೂಜೆಯನ್ನು ಹೇಗೆ ಪುರಸ್ಕರಿಸಬಲ್ಲರು? ತೀರ್ಥಯಾತ್ರೆಗಾದರೂ ಎಲ್ಲಿ ಸ್ಥಾನವಿದೆ? ಇವರೆಲ್ಲರಿಗೂ ಪೂರ್ವದ, ಸುಮಾರು ಒಂದು ಇಲ್ಲವೆ ಎರಡನೆಯ ಶತಮಾನದವರೆಂದು ಗುರುತಿಸಲಾದ, ತಿರುವಳ್ಳುವರ್ ಅಂತೂ ಯಾವುದೇ ಮೂರ್ತಿಯನ್ನು, ಅದೇಕೆ, ವಿಶಿಷ್ಟ ನಾಮವನ್ನೂ ಸಹ ಪ್ರಸ್ತಾಪಿಸದೆ, ಪುರುಷಾರ್ಥಗಳಲ್ಲಿ ದರ್ಮ,ಅರ್ಥ, ಕಾಮ ಎಂಬ ತ್ರಿವರ್ಗಗಳನ್ನು ಮಾತ್ರ ವಿಶದೀಕರಿಸಿ, ನಾಲ್ಕನೆಯ ಮೋಕ್ಷವೆಂಬ ಅಪವರ್ಗವನ್ನು ಕುರಿತು ಬರೆಯಲು ಹೋಗಿಲ್ಲ.

ಭಾರತ ದೇಶದ ಆಸೇತು ಹಿಮಾಚಲ ಪರ್ಯಂತ ಪ್ರಚಲಿತವಿರುವ ಯಾವುದೇ ಸಂಘಟಿತ ಧರ್ಮಕ್ಕೆ ಸೇರದೆ, ನುಲಿ ಹರಿದ ಸ್ವಚ್ಛಂದ ಹಕ್ಕಿಗಳಂತೆ, ಆಧ್ಯಾತ್ಮಿಕ ದಿಗಂತದಲ್ಲಿ ಹಾರಾಡಿದ ಈ ಸಂತ ಕವಿಗಳು ಉಲಿದ ಭಾಷೆ, ನಡೆದಾಡಿದ ಪ್ರದೇಶ ಹಾಗೂ ಬಾಳಿದ ಕಾಲಗಳನ್ನು ಕುರಿತು – ಇದುವರೆಗೆ ಸಂಶೋಧಿಸಲ್ಪಟ್ಟ ಸಂಗತಿಗಳನ್ನು ಈ ಕೆಳಗಿನಂತೆ ನೀಡಬಹುದು.

| ಕ್ರ.ಸಂ. | ಸಂತ ಕವಿಯ ಹೆಸರು | ಭಾಷೆ | ಪ್ರದೇಶ | ಕಾಲ ಕ್ರಿ.ಶ. |
|---|---|---|---|---|
| ೧ | ತಿರುವಳ್ಳುವರ್ | ತಮಿಳು | ತಮಿಳುನಾಡು | ೧೦೦-೨೦೦ |
| ೨ | ವೇಮನ | ತೆಲುಗು | ಆಂಧ್ರಪ್ರದೇಶ | ೧೪೧೨-೧೪೮೦ |
| ೩ | ಸರ್ವಜ್ಞ | ಕನ್ನಡ | ಕರ್ನಾಟಕ | ೧೫೦೦ ರ ಸುಮಾರು |
| ೪ | ತುಕಾರಾಮ | ಮರಾಠಿ | ಮಹಾರಾಷ್ಟ್ರ | ೧೬೦೮-೧೬೫೦ |
| ೫ | ಕಬೀರ | ಹಿಂದಿ | ಉತ್ತರ ಪ್ರದೇಶ (ಭೋಜಪುರಿ) | ೧೪೯೯-೧೫೨೦ |

ಇವರಲ್ಲಿ ತಿರುವಳ್ಳುವರನ್ನು ಹೊರತು ಪಡಿಸಿ ಉಳಿದವರು ಕುಳಿತು ಗ್ರಂಥ ಬರೆಯಲಿಲ್ಲವೆಂದೂ, ಆದರೆ, ಅಂತಃಸ್ಫುರಣೆಯಾದಾಗ, ಒಳದನಿಯು ವೈಖರಿ ರೂಪ ತಾಳಿದಾಗ, ಅವರ ಶಿಷ್ಯ ವರ್ಗದವರು ಅವುಗಳನ್ನು ಕೇಳಿ ಬರೆದುಕೊಂಡರೆಂದೂ ಜನಶ್ರುತಿಯಿದೆ. ಕಾರಣ, ಈ ಮಹಾತ್ಮರ ತತ್ತ್ವ ಬೋಧೆಯನ್ನೂ, ನೀತಿ ಬೋಧೆಯನ್ನೂ ಪರಿಣಾಮಕಾರಿಯಾಗಿ ಬಿಂಬಿಸುವ ಮುನ್ನ, ಅವರ ಪದ್ಯಗಳನ್ನು ಒಂದು ನಿಯತ ಕ್ರಮಕ್ಕೆ ಅನುಸರಿಸಿ ಜೊಡಿಸಬೇಕಾದುದು ಅನಿವಾರ್ಯವಷ್ಟೇ.

**ಚತುರ್ವಿಧ ಪುರುಷಾರ್ಥ:**

ತಮ್ಮ ಬಾಳಿನಲ್ಲಿ ಸತ್ಯವನ್ನು ಕಂಡುಕೊಂಡು, 'ನಿಜವು ತಿಳಿದ ಬಳಿಕ ಸುಜನರಾ ನಿಜವನ್ನ, ಪೇಳುತಿರುವರಷ್ಟೇ ಪರರಿಗಾಗಿ; ಬಚ್ಚಿಡುವುದು ಬೇಡ; ಬೇರೆ ಹೇಳೆ ಹೊಲ್ಲ' ಎಂಬ ಗ್ರಹಿಕೆಗಂಟಿ ವೇಮನಯೋಗಿ ತಮ್ಮ ಸಾವಿರಾರು ಪದ್ಯಗಳನ್ನು ಹಾಡಿದ್ದಾರೆ. ಈ ಪದ್ಯ ರಚನೆಯ ಗುರಿಯು ಅವರೇ ಹೇಳುವಂತೆ,

ಧರ್ಮಾರ್ಥ ಕಾಮ ಮೋಕ್ಷವ
ಉರ್ಮೆಯಲಿ ಮನದಿ ತಿಳಿದೊಡೆ ಅಮೋಡಂ ಆ
ನಿರ್ಮಲ ಗಡಿ ಕಾಣಬೇಕು.
ಕರ್ಮಿಗಳಿಗಿರದು ಮುಕ್ತಿಯು, ಅಲ್ಲವೆ, ವೇಮಾ?

ಮನುಷ್ಯನಿಗೆ ಇರಬಹುದಾದ ಒಳ್ಳೆಯ ಉದ್ದೇಶ ಇಲ್ಲವೆ ಗುರಿ ಇಲ್ಲವೆ ಅರ್ಥ, ಅರ್ಥಾತ್ ಪ್ರಯೋಜನಗಳನ್ನು ಆರ್ಯ ಮಹರ್ಷಿಗಳು ನಾಲ್ಕಾಗಿ ವಿಭಜಿಸಿದ್ದಾರೆ. ನಮ್ಮ ಹಿರಿಯ ಕವಿಗಳಾದ ತಿರುವಳ್ಳುವರು ಸಹ ಧರ್ಮ, ಅರ್ಥ ಮತ್ತು ಕಾಮ ಎಂಬ ತ್ರಿವರ್ಗಗಳಲ್ಲಿ ತಮ್ಮ ಪದ್ಯಗಳನ್ನು ಕ್ರೋಢೀಕರಿಸಿದ್ದಾರೆ. ಈ ಆಧಾರವನ್ನಿರಿಸಿಕೊಂಡು, ನಾವು ವೇಮನರ ಪದ್ಯಗಳನ್ನು ಧರ್ಮ, ಅರ್ಥ ಮತ್ತು ಕಾಮ ಎಂಬ ಮೂರು ವರ್ಗಗಳಲ್ಲಿಯೂ ಮತ್ತು ಮೋಕ್ಷವೆಂಬ ನಾಲ್ಕನೆಯ ಅಪವರ್ಗದಲ್ಲಿಯೂ ಹೊಂದಿಸಲು ಯತ್ನಿಸಿದ್ದೇವೆ.

**(I) ಧರ್ಮ:**

'ಧರ್ಮ' ಇದು ಸಂಸ್ಕೃತ ಪದ. ಧೃ ಧರ. ' ಧಾರಣಾತ್ ಧರ್ಮ ಇತ್ಯಾಹುಃ; ಧರ್ಮೋ ಧಾರಯತಿ ಪ್ರಜಾನಾಮ್! ಧರ್ಮವೆಂದರೆ 'ಎತ್ತಿ ಹಿಡಿಯುವುದು.' ಲೋಕ ಸಂಗ್ರಹವೇ ಧರ್ಮವೆನಿಸುತ್ತದೆ. ನೆರೆಹೊರೆಯವರಿಗೆ ಕೇಡಾಗದಂತೆ ನಮ್ಮ ಬಾಳನ್ನು ನಡೆಸಿದರೆ ಅದು ಧರ್ಮ ಜೀವನವೆನಿಸುತ್ತದೆ. ಜೊತೆ-ಜೊತೆಗೆ ನಮ್ಮ ಬಾಳನ್ನೂ ಎತ್ತರಿಸಿಕೊಳ್ಳಬೇಕು. ಧರ್ಮ ವರ್ಗವನ್ನು ಗೃಹಸ್ಥ ಮತ್ತು ಯೋಗಿ ಎಂದು ಎರಡಾಗಿ ವಿಭಜಿಸಿದ್ದೇವೆ. ಮನೆ-ಮಾರು, ತಂದೆ-ತಾಯಿ, ಹೆಂಡಿರು-ಮಕ್ಕಳು, ಬಂಧು-ಬಳಗದವರು, ನೆರೆ-ಹೊರೆಯವರು, ಇಷ್ಟ-ಮಿತ್ರರೇ ಮೊದಲಾದ ಐಹಿಕ ಸಂಬಂಧಗಳ ಅಂದರೆ ವ್ಯಕ್ತಿ, ವಸ್ತು ಮತ್ತು ವಿಚಾರ ಸಂಬಂಧ ಕುರಿತು ಇರುವ ನಡೆ ನುಡಿಗಳನ್ನು ಗೃಹಸ್ಥ ವಿಭಾಗದಲ್ಲಿ ಸೇರಿಸಿದ್ದೇವೆ. ಇನ್ನು ಯೋಗಿ ಜೀವನದಲ್ಲಿ ಮುಂದುವರಿಯುವ ಕಳಕಳಿಯ ಸಾಧಕನು, ತನ್ನ ಲೌಕಿಕ ಸಂಬಂಧಗಳನ್ನು ಕುರಿತು ಹೆಚ್ಚು ಆಸಕ್ತಿ ತೋರದೆ, ಲೌಕಿಕ ಆಶೆ-ಆಮಿಷ, ತನ್ನ ಎಳೆತ-ಸೆಳೆತಗಳ ರಭಸಕ್ಕೆ ಕೊಚ್ಚಿ ಹೋಗದೆ, ಮನಸ್ಸಿನ ಶಾಂತಿಯತ್ತ ಲಕ್ಷ್ಯವಹಿಸಿ ನಡೆಯಬೇಕಾಗುತ್ತದೆ. ಸತ್ಯ ಅಹಿಂಸಾದಿ ಯಮ ಸಾಧನೆಗಳನ್ನೂ ಶೌಚ-ಸಂತೋಷಾದಿ ನಿಯಮ ಸಾಧನೆಗಳನ್ನೂ ಎದುರಿಟ್ಟುಕೊಂಡು ಸಾಗಬೇಕಾಗುತ್ತದೆ. ಬಾಲಕನಿರುವಾಗ ಬಲು ಪ್ರೀತಿಯವೆನಿಸುವ ಆಟಿಕೆಗಳೇ, ಕಿಶೋರಾವಸ್ಥೆಯಲ್ಲಿ ನೀರಸವೆನಿಸುವಂತೆ, ಯೋಗಜೀವನದತ್ತ ನಡೆದಾಗ, ಮುಂಚಿನ ಅನಿಸಿಕೆಗಳು ಹುಡುಗತನವೆನಿಸುತ್ತವೆ. ಆದ್ದರಿಂದ ಯೋಗಿ ವೇಮನರ ಹಲವು ಪದ್ಯಗಳಲ್ಲಿ ಗೃಹಸ್ಥ ಪರ ಅರ್ಥ ಹೊರಹೊಮ್ಮುತ್ತಿದ್ದರೆ, ಬೇರೆ ಪದ್ಯಗಳಲ್ಲಿ ಅವುಗಳನ್ನು ಗೌಣವೆನಿಸುವ ಇಲ್ಲವೆ ಘೃಣೀಕರಿಸುವ ಅರ್ಥ ಸೂಸುವ, ಯೋಗಿಗೆ ಅನ್ವಯಿಸುವ, ಅರ್ಥಹೊರಹೊಮ್ಮುತ್ತಿದೆ. ಪರಸ್ಪರ ವಿರೋಧಿ ಪದ್ಯಗಳಿವೆಯೆಂಬ ಹಲವು ವಿಮರ್ಶಕರ ಟೀಕೆಗೆ ನಮ್ಮ ಈ ಬಗೆಯ ವಿಷಯಾನುಕ್ರಮಣಿಕೆಯ ವಿಭಜನೆಯು ಸಮಾಧಾನ ನೀಡಬಹುದಾಗಿದೆ. ಈ ವಿಭಾಗದಲ್ಲಿ ಒಟ್ಟು ೧೧೮೦ ಪದ್ಯಗಳಿವೆ.

**(II) ಅರ್ಥ :**

ಪರಮಾರ್ಥವೆಂದರೆ ಪರಮ ಪ್ರಯೋಜನೆ; ಶಾಶ್ವತ ಶಾಂತಿ. ಅರ್ಥವೆಂದರೆ ಸದ್ಯದ ಪ್ರಯೋಜನೆ, ತುರ್ತು ಶಾಂತಿ. ಧನ-ಕನಕ, ಆಸ್ತಿ-ಪಾಸ್ತಿ, ಸಾಲ-ಸೊತ್ತು, ಹಕ್ಕು-ಹೊಣೆ, ಆಡಳಿತ-ಪ್ರಜಾಪಾಲನೆ, ಧೈರ್ಯ-ಸ್ಥೈರ್ಯ, ಅರಸು-ಮಂತ್ರಿಗಳ ಗುಣ-ನಡತೆ, ಸಜ್ಜನ-ಸಂಗ, ದುರ್ಜನ-ಸಂಗತ್ಯಾಗ, ಸ್ನೇಹ-ಹಗೆ, ಹಿರಿಯರಿಗೆ ಗೌರವ, ವೇಶ್ಯಾ ಸಂಗ, ಜೂಜು, ಮದ್ಯ ಸೇವನೆ, ಕುಲ, ಮಾನ, ಹಿರಿಮೆ, ಬಡತನ, ಭಿಕ್ಷಾಟನೆ, ಕೀಳುತನ ಇತ್ಯಾದಿ ವಿಷಯಗಳನ್ನು ಅರ್ಥ ವರ್ಗದಲ್ಲಿ ಸೇರಿಸಲಾಗಿದೆ. ಈ ವಿಭಾಗದಲ್ಲಿ ಸೇರಿಸಬಹುದಾದ ಅನೇಕ ಪದ್ಯಗಳು, ಸದ್ಯ ಮುದ್ರಿತ ಸಾಹಿತ್ಯದಲ್ಲಿ ಲಭ್ಯವಿಲ್ಲವಾದುದರಿಂದ, ಲಭ್ಯವಿದ್ದ ಪದ್ಯಗಳನ್ನು ಮಾತ್ರ

ಬಳಸಿಕೊಳ್ಳಲಾಗಿದೆ. ಮುಂದೆ, ಅಧಿಕ ಪದ್ಯಗಳು, ಸಂಶೋಧಕರಿಗೆ ಲಭ್ಯವಾದಲ್ಲಿ ಈ ವರ್ಗವನ್ನು ವಿಸ್ತರಿಸಿ ಪರ್ಯಾಪ್ತಿಯನ್ನು ಸಾಧಿಸಬಹುದು. ಈ ವಿಭಾಗದಲ್ಲಿ ೭೩೦ ಪದ್ಯಗಳಿವೆ.

**(III) ಕಾಮ :**

ಕಾಮ ಎಂದರೆ ಭೌತಿಕ ಆಕರ್ಷಣೆ. ಪ್ರೇಮ ಎಂದರೆ ಪರಮನ ಆಕರ್ಷಣೆ; ಆತ್ಮಾರಾಮನ ಆಕರ್ಷಣೆ. ಆದ್ದರಿಂದಲೇ ಕಾಮವಿರುವಲ್ಲಿ ಪ್ರೇಮವಿರದು. ಮತ್ತು ಪ್ರೇಮವಿರುವಲ್ಲಿ ಕಾಮವಿರದು ಎಂದು ಹೇಳುತ್ತಾರೆ. ಹೆಚ್ಚಾಗಿ, ಜೀವನ ದರ್ಶನದಲ್ಲಿ ಕಾಮದ ಚರ್ಚೆಯಿಲ್ಲದೆ, ಅದು ಸಂಪೂರ್ಣವೆನಿಸದು. ಪ್ರಾಚೀನ ತಮಿಳು ಕಾವ್ಯಗಳಲ್ಲಿ ಕಾಮ ವರ್ಗವನ್ನು ಅಂತಃಸ್ಫುರಿತ ಅಭಿವ್ಯಕ್ತಿಯೆಂದೂ ಇನ್ನಿತರ ತ್ರಿವರ್ಗಗಳನ್ನು ಬಾಹ್ಯಸ್ಫುರಿತ ಅಭಿವ್ಯಕ್ತಿಗಳೆಂದೂ ವರ್ಗೀಕರಿಸುತ್ತಿದ್ದರು. ದಕ್ಷಿಣದ ತಿರುವಳ್ಳುವರು, ಸರ್ವಜ್ಞ ಮತ್ತು ವೇಮನ ಈ ಮೂವರು ಕವಿಗಳು, ಕಾಮ ಕುರಿತು ವಿಶದವಾಗಿ ವಿವೇಚಿಸಿದ್ದರೂ, ಅವರು ತಾಳಿದ ದೃಷ್ಟಿಕೋನವು ಮಾತ್ರ ವಿಭಿನ್ನ. ತಿರುವಳ್ಳುವರು ಸಾಂಪ್ರದಾಯಿಕವಾಗಿ, ಸ್ತ್ರೀ–ಪುರುಷರಲ್ಲಿ ಸ್ಫುರಿಸುವ ಮಧುರ ಭಾವನೆಗಳನ್ನು, ವಿವಾಹ ಪೂರ್ವದ ಕಳವಿನ ವ್ಯವಹಾರ, ವಿವಾಹ ನಂತರದ ಮಧುರ–ಮಿಲನ, ಗೃಹಕೃತ್ಯದ ಹುಸಿಮುನಿಸು, ತೋರಿಕೆಯ ವಿರಹ, ಪುನರ್ಮಿಲನಗಳನ್ನು ಸಖಿ, ನಾಯಕ–ನಾಯಕಿಯರ ಪಾತ್ರದ ಮೂಲಕ ಬಣ್ಣಿಸಿದ್ದಾರೆ. ಇತ್ತ ಕನ್ನಡದ ಕವಿ ಸರ್ವಜ್ಞರು ಕಾಮ ಜೀವನವನ್ನು, ಸೂಳೆಗಾರಿಕೆಯನ್ನು, ಕಾಮ ಸೂತ್ರಾನುಸಾರ, ಇಲ್ಲವೆ, ಸೈದ್ಧಾಂತಿಕವಾಗಿ ಬಣ್ಣಿಸಿದ್ದಾರೆ. ವೇಮನರು ಅಲ್ಪ–ಕಾಮಿಗಳನ್ನೂ, ಅತಿಕಾಮಿಗಳನ್ನೂ, ಅತೃಪ್ತ ಕಾಮಿಗಳನ್ನೂ, ಜಾರ–ಜಾರೆಯರನ್ನೂ, ಕುರಿತು ಕಟುವಾಗಿ ನುಡಿದಿದ್ದಾರೆ. ತಾವು ಕಂಡುಂಡ ಕಟು ಅನುಭವ, ಕೇಳಿ–ತಿಳಿದ ಸತ್ಯ–ಘಟನೆಗಳು ಆಳ ಚಿಂತನ–ಮಂಥನದಿಂದ ಮೂಡಿ ಬಂದ ಹಿತನುಡಿಗಳನ್ನು ಅವರು ತುಂಬಾ ಸ್ಫುಟವಾಗಿ ಮತ್ತು ಮಾರ್ಮಿಕವಾಗಿ, ಮನಸ್ಸಿನಲ್ಲಿ ನಾಟುವಂತೆ ನುಡಿದಿದ್ದಾರೆ. ಅವರು ಅಲ್ಲಿ ಇಲ್ಲಿ ಲಘು ಹಾಸ್ಯದ ಕಿಡಿಗಳನ್ನು ಸಿಡಿಸಿರಬಹುದು. ಆದರೆ ಅವರ ಮಾತು–ಮಾತಿನಲ್ಲಿ ಮಾನವನನ್ನು ಕಾಮದ ಗುಂಡಿಯಲ್ಲಿ ಬೀಳದಿರುವಂತೆ ಎಚ್ಚರಿಸುವ ಛಾಟಿ ಏಟಿದೆ. ಈ ವಿಭಾಗದಲ್ಲಿ ೩೭೮ ಪದ್ಯಗಳಿವೆ. ಸಂಕೀರ್ಣ ವಿಭಾಗದಲ್ಲಿ 82 ಪದ್ಯಗಳನ್ನು ಜೋಡಿಸಲಾಗಿದೆ.

**(IV) ಮೋಕ್ಷ:**

ಜೀವನು ದೇಹಾಭಿಮಾನದಿಂದ, ಮನಸ್ಸಿನ ಉಪಾಧಿಯಿಂದ ದೂರವಾಗಿ ನಿರಪೇಕ್ಷನಾಗಿ ಚಿದ್ಬಯಲು ಸೇರಿ, ಸಗುಣ ಬ್ರಹ್ಮನಲ್ಲಿ ಲಯಿಸಿದರೆ, ಮುಕ್ತಿ ಇಲ್ಲವೆ ಬಿಡುಗಡೆ ಎನ್ನುತ್ತಾರೆ. ಆಗ ಜೀವಿಯು ಸಂಸಾರ ತಾಪತ್ರಯ, ಅಷ್ಟ ಪಾಶ, ಸಪ್ತ ವ್ಯಸನಗಳ ಬಾಧೆ ತಟ್ಟದಂತೆ ಆಗುತ್ತಾನೆ. ಸಗುಣ ಬ್ರಹ್ಮ ಸ್ಥಿತಿಯಿಂದ

ನಿರ್ಗುಣೋಪಾಸನೆಯ ಮೂಲಕ, ಗುಣಾತೀತ ಅರ್ಥಾತ್ ನಿರ್ಗುಣ ತಲುಪಿದರೆ ಮೋಕ್ಷವೆನ್ನುತ್ತಾರೆ. 'ನೀರು ಮುತ್ತಾದ ಬಳಿಕ ಮರಳಿ ನೀರಾಗದು.' ಇದುವೇ ಪರಮ ಸ್ಥಿತಿ; ಚರಮಸ್ಥಿತಿ. ಜೀವನದ ಅಂತಿಮ ಧ್ಯೇಯವೇ ಮೋಕ್ಷ ಪ್ರಾಪ್ತಿ. ಮುಕ್ತಿಯೇ ಇರಲಿ; ಮೋಕ್ಷವೇ ಇರಲಿ; ಇದೆಲ್ಲ ಸಾಮಾನ್ಯರ ಅನುಭವಕ್ಕೆ ದೂರವಾದ ವಿಷಯವೆಂದು ಹಲವರು ಹೇಳಿದ್ದರೂ, ಯಾವನೊಬ್ಬನೂ ಜಾತಿಯ ಮೇಲು ಕೀಳಿನಿಂದಾಗಲಿ, ಧನ-ಕನಕದ ಏರು ಪೇರುಗಳಿಂದಾಗಲಿ, ಓದಿನ ಹೆಚ್ಚು ಕಡಿಮೆಗಳಿಂದಾಗಲಿ ಮೋಕ್ಷಸಾಧನೆಗೆ ಅನಧಿಕಾರಿಯಾಗನು. ಮಾನವ ಜನ್ಮ ತಳೆದರೆ ತೀರಿತು. ಮೋಕ್ಷಕ್ಕೆ ಅಧಿಕಾರ ಪಡೆದಂತೆಯೇ. ತನಗೆ ದಕ್ಕಿದ ಅಧಿಕಾರವನ್ನು ದೈವೀ ಸಂಕಲ್ಪಕ್ಕೆ ಅನುಗುಣವಾಗಿ ಬಳಸಿಕೊಳ್ಳುವುದಷ್ಟೇ ಮಾನವನ ಕರ್ತವ್ಯ. ಮನೋಶುದ್ಧಿ, ಗುರು ದೀಕ್ಷೆ, ತತ್ತ್ವ ವಿವೇಚನೆ, ಜೀವ ಶಿವೈಕ್ಯ, ನಿಜ, ಬೋಧೆ; ಹಠ, ಲಯ, ರಾಜ ಮತ್ತು ಭಕ್ತಿ ಯೋಗಗಳು ಸಾಧಕನನ್ನು ಸಹಜ ಸಮಾಧಿಯ ಸ್ಥಿತಿಗ ತಲುಪಿಸುತ್ತವೆ. ಇಹದಲ್ಲಿಯೇ ಮುಕ್ತಿ ಅರ್ಥಾತ್ ಜೀವನ್ಮುಕ್ತಿಯೇ ಪರಮ ಪದ. ಹೀಗೆ, ವೇಮನ ಯೋಗಿ, ಈ ಅಂತಿಮ ಅಪವರ್ಗ ಕುರಿತು ೧೧೮೭ ಪದ್ಯಗಳಲ್ಲಿ, ಸುಸ್ಪಷ್ಟ ಶಬ್ದಗಳಲ್ಲಿ, ಶ್ರುತಿ, ಯುಕ್ತಿ ಮತ್ತು ಅನುಭವ ಪ್ರಮಾಣ ಮೂಲಕ ಮುಮುಕ್ಷುಗಳಿಗೆ ತಿಳಿಸಿ ಹೇಳಿದ್ದಾರೆ. ಅವರ ಮಾತು ಜ್ಯೋತಿರ್ಲಿಂಗ. ಅಲ್ಲಿ ಹೊಯ್ದಾಟವೂ ಇರದು; ಸಂದಿಗ್ಧತೆಯೂ ಇರದು. ಹಸಿ ಗೋಡೆಯ ಮೇಲೆ ಒಗೆದ ಹರಳಿನಂತೆ, ಶ್ರೋತೃವಿನ ಹೃದಯದಲ್ಲಿ ಅಂಟಿಕೊಳ್ಳುತ್ತದೆ. ಈ ಗ್ರಂಥದಲ್ಲಿ ಒಟ್ಟು ೪೦೭೦ ಪದ್ಯಗಳ ಅನುವಾದವಿದೆ.

**ಪ್ರಸವ ವೇದನೆ:**

ಪ್ರಸೂತಿಯ ನಂತರ ಸುಖ-ಶಾಂತಿ ಲಭ್ಯ. ಆದರೆ, ಪ್ರಸೂತಿ ಕಾಲದಲ್ಲಿ ದುಗುಡ ಬಳಲಿಕೆಗಳು ಅನಿವಾರ್ಯ. ವೇಮನರ ಪದ್ಯಗಳು, ನಾವು ಈಗಾಗಲೇ ತಿಳಿಸಿದಂತೆ, ಕ್ರಮ-ಬದ್ಧ ಜೋಡಣೆಗೆ ಒಳಪಟ್ಟಿರಲಿಲ್ಲ. ಅತಿ ಹೆಚ್ಚೆಂದರೆ, ಮೋಕ್ಷ-ಅಪವರ್ಗಕ್ಕೆ ಒಳಪಡುವ ಪದ್ಯಗಳು ಸಹ, ಬೇರೆ ಬೇರೆ ಪದ್ಧತಿಗಳಲ್ಲಿ, ಉದಾ ಯೋಗ ಪದ್ಧತಿ, ಗುರುಭಕ್ತಿ ಪದ್ಧತಿ, ಬ್ರಹ್ಮ ಸ್ವರೂಪ ಪದ್ಧತಿ, ಜೀವನ್ಮುಕ್ತಿ ಪದ್ಧತಿ, ಕೂಟ ವೇದಾಂತ ಪದ್ಧತಿ, ಇತ್ಯಾದಿಗಳಲ್ಲಿ ಅಕಾರಾದಿ ಕ್ರಮಗಳಲ್ಲಿ ಮಾತ್ರ ಜೋಡಣೆಯಾಗಿದ್ದವು. ನಡುನಡುವೆ ಬೇರಾವುದೋ ಲಘುಭಾವದ ಪದ್ಯವು, ಶಿವ ಪೂಜೆಯಲ್ಲಿ ಬರುವ ಕರಡಿಯಂತೆ, ತೂರಿ ಬರುತ್ತಿತ್ತು. ಭಾವಭಂಗ ಉಂಟುಮಾಡುತ್ತಿತ್ತು. ಮೊದಲೇ ಅರ್ಥಾನುಕ್ರಮಣಿಕೆ ಇಲ್ಲ. ಸಾಲದ್ದಕ್ಕೆ ಅಸಂಗತ ಜೋಡಣೆಯು ಬೇರೆ. ಹೀಗಾಗಿ, ಕಳಕಳಿಯ ಜಿಜ್ಞಾಸುವಿಗೆ ಉತ್ಸಾಹ ಭಂಗವಾಗುತ್ತಿತ್ತು. ನಾವು, ನಮ್ಮ ಬುದ್ಧಿಗೆ ಹೊಳೆದ ಮಟ್ಟಿಗೆ, ಪದ್ಯ ಜೋಡಣೆಯನ್ನು ಕ್ರಮ-ಬದ್ಧಗೊಳಿಸಲು ಹೆಣಗಿದ್ದೇವೆ. ನಮ್ಮ ಓದುಗರೇ ನಮ್ಮ ನ್ಯಾಯಾಧೀಶರು.

ಪದ್ಯ- ಸಂಕಲನ:

ವೇಮನರ ಪದ್ಯಗಳ ಸಂಖ್ಯೆಯು ಒಟ್ಟು ಹದಿನೈದು ಸಾವಿರ.

ಶ್ರೀಕರ ಶಿವತತ್ತ್ವ ಶೀಲನೆ; ವೇಮನರ
ಹದಿನೈದು ಸಾವಿರ ಪದ್ಯಗಳನು,
ಲೋಕದಲಿ ಪಠಿಸೆ, ಪ್ರಾಕೃತರು ದಡ ಸೇರ್ವರು.
ವಿಶ್ವದಾಭಿರಾಮ ಕೇಳು ವೇಮ.

ಇವುಗಳನ್ನು ಸಾವಿರ, ಸಾವಿರ ಪದ್ಯ ಗುಚ್ಛಗಳಲ್ಲಿ ಜೋಡಿಸಿಟ್ಟಂತೆ ಕಾಣುತ್ತದೆ.

ಆ: ಶ್ರೀಕರ ಶಿವತತ್ತ್ವ ಶೀಲನೆ; ವೇಮನರ
ಪ್ರಾಕಟಗೊಳಿಸಿದ ಸಹಸ್ರ ಪದ್ಯಗಳನು
ಲೋಕದಲ್ಲಿ ಓದೆ, ಸಾಕೆನಿಪುದ ಒಳಹೊರಗು.
ವಿಶ್ವದಾಭಿ ರಾಮ ಕೇಳು ವೇಮ.

ಗೀತ:

ನೀತಿ ವೈರಾಗ್ಯ ಭಕ್ತಿ ವಿನೀತ ಜನರಿಗೆ
ಘಾತಕರಿಗಲ್ಲ, ಜ್ಞಾನ ಸಂಕಲಿತ ಜನಕೆ;
ಮಾತಿನ ಸೋನೆಯ ಪದ್ಯಗಳು, ಸಾವಿರ ಸಂಖ್ಯೆ
ಚೇತನ ಹೊಂದಿ ವೇಮನ ಸಾರಿದಿಹದಿ.

ಆ :

ಸಾಸಿರ ಪದ್ಯಗಳ ಶುದ್ಧ ಭಕ್ತಿಯಿಂದ,
ಪಠಣ ಗೆಯ್ಯುವಂಥ ಭಕ್ತ ಜನಕೆ
ತಪ್ಪದೆ ಮೋಕ್ಷ ಪದವಿ ಅಂಗೈಯೊಳಗಿಹುದು.
ವಿಶ್ವದಾಭಿ ರಾಮ ಕೇಳು ವೇಮ.

ಅದರಲ್ಲಿಯೂ ಹಲವು ಸುಲಭ ಪದ್ಯಗಳನ್ನು ನೂರರ ಕಟ್ಟಿನಲ್ಲಿಯೂ ನೀಡಿರಬಹುದೆಂಬ ಬಗ್ಗೆ ಸುಳಿವು ಇಲ್ಲಿದೆ.

ಕಂದ:

ಶತ ಸಂಖ್ಯೆ ಪದ್ಯಗಳನಾ
ಮತಿವಂತನು ಪಠಣ ಗೆಯ್ಯೆ ಮಮತೆಯ ತೊರೆವನ್.
ಆತನು ನಾಲ್ಕು ಪದಗಳ
ನೀತಿಯರಿಯೆ ಶಿವ ಪದ ಸೇರುತಿಹನು ವೇಮಾ.

ಇಷ್ಟು ಮಾತ್ರಕ್ಕೆ ವೇಮನರನ್ನು ಶತಕ ಕವಿಯೆಂದು ಲಘುವಾಗಿ ಗಣಿಸಕೂಡದು. ಮೋಕ್ಷದಂಥ ಕ್ಲಿಷ್ಟ ವಿಷಯ ಸಮೇತ ಅವರ ಪದ್ಯಗಳ ಸಂಖ್ಯೆ ೩೯೫೦ ನ್ನೂ ಮಿಕ್ಕುತ್ತದೆ. ಈ ಪದ್ಯಗಳನ್ನು ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ವಿವಿಧ ವರ್ಗಗಳಲ್ಲಿ ಮೊದಲು ಹಂಚಿ ಹಾಕಿ, ಪ್ರತಿಯೊಂದು ವರ್ಗದಲ್ಲಿ ವಿಷಯವಾರು ವಿಭಜಿಸಿ, ಅಗತ್ಯವೆನಿಸಿದ ಟೀಕೆ ಟಿಪ್ಪಣಿಗಳನ್ನು ಬರೆದಿದ್ದೇವೆ. ಇದರಿಂದ; ವೇಮನರ ಹೃದಯದಾಳಕ್ಕೆ ಹೆಚ್ಚು ಹೆಚ್ಚು ನಿಕಟ ಹೋಗುವ ನಮ್ಮ ಹಂಬಲಕ್ಕೆ, ಗುರುಕೃಪೆಯು ಅನುವು ನೀಡಿದಷ್ಟು ಮಾತ್ರ ನಾವು ಸಫಲರಾಗಿದ್ದೇವೆ.

**ಅನುವಾದ:**

ಪ್ರಚಲಿತ ಪೇಟೆಯಲ್ಲಿ ಉಪಲಬ್ಧವಿರುವ, ಎಲ್ಲ ಮುದ್ರಿತ ಆವೃತ್ತಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಪುನರುಕ್ತಿ ದೋಷವು ಅನಗತ್ಯವಾಗಿ ನುಸುಳದಂತೆ ಎಚ್ಚರವಹಿಸಿ, ಪದ್ಯಗಳನ್ನು ಸಂಕಲಿಸಲಾಗಿದೆ. ವೇಮನರು ಮಾನವ ಜೀವನವನ್ನು ಕುರಿತು ಎಲ್ಲವನ್ನೂ ಬರೆದಿದ್ದಾರೆ, ಎಂದು ಕೆಲವರು, 'ಆಡು ಮುಟ್ಟದ ಗಿಡವಿಲ್ಲ; ವೇಮನರು ಚರ್ಚಿಸದ ವಿಷಯವಿಲ್ಲ' ಎಂದು ಕೆಲವರು, ಉತ್ಪ್ರೇಕ್ಷಿಸಿ ನುಡಿಯುತ್ತಾರೆ. ವೇಮನರು ರಚಿಸಿದ ಎಲ್ಲ ಹದಿನೈದು ಸಾವಿರ ಪದ್ಯಗಳು ಲಭ್ಯವಿದ್ದರೆ. ಅಂಥ ಮಾತುಗಳಿಗೆ ಹೆಚ್ಚು ಅರ್ಥಬರುತ್ತಿತ್ತು. ಆದರೆ ಸದ್ಯೋಭವಿಷ್ಯದಲ್ಲಂತೂ ಅಂಥ ಹಾರೈಕೆ ಈಡೇರುವಂತಿಲ್ಲ.

ವೇಮನರ ತೆಲುಗು ಪದ್ಯಗಳು ಹೆಚ್ಚಾಗಿ ಆಟವೆಲದಿ ಛಂದಸ್ಸಿನಲ್ಲಿವೆ. ಅದರ ನಂತರದ ಸ್ಥಾನ ಕಂದ ಪದ್ಯಗಳದ್ದಾಗಿದೆ. ಸೀಸ ಪದ್ಯಗಳು, ಚಂಪೂ, ಮತ್ತೇ ಭಕ್ರೀಡಿತ ವೃತ್ತಗಳೂ ಅಲ್ಲಲ್ಲಿ ಕಾಣಬರುತ್ತವೆ. ಕೆಲವೆಡೆ ಅಪವಾದಾತ್ಮಕವಾಗಿ ರಗಳೆಗಳೂ ಇವೆ. ವಾಕ್ಯ ಗುಚ್ಛಗಳೂ ಇವೆ. **ಆಟವೆಲದಿ ಎಂದರೆ ನೃತ್ಯಗಾತಿ ಎಂದು ಶಬ್ದಾರ್ಥ. ಇದು ವೇಮನ ಕವಿ ಬಳಸಿರುವ ವಿಶೇಷ ಛಂದಸ್ಸು. ಇದು ನಾಲ್ಕು ಪಾದಗಳನ್ನು ಹೊಂದಿದ್ದು, ನಾಲ್ಕನೆಯ ಚರಣವು ಹೆಚ್ಚಾಗಿ ಮುಕುಟ ಚರಣವೇ ಆಗಿದೆ.**

ಅತಿ ಚಿಕ್ಕದಾದ ಅಚ್ಚ ತೆಲುಗು ಭಾಷೆಯ ಈ ಛಂದಸ್ಸಿನ ಲಕ್ಷಣಗಳನ್ನು ಈ ರೀತಿ ಸಂಕ್ಷೇಪಿಸಬಹುದು.

"ಮೊದಲನೆ ಪಾದ ಮತ್ತು ಮೂರನೆಯ ಪಾದ ಒಂದು ರೀತಿಯಲ್ಲಿರುತ್ತವೆ. ಎರಡನೆಯ ಪಾದ ಮತ್ತು ನಾಲ್ಕನೆಯ ಪಾದ ಸಮಾನ ರೂಪದಲ್ಲಿರುತ್ತವೆ. ೧-೩ ಪಾದಗಳಲ್ಲಿ ಮೂರು ಸೂರ್ಯ (ತೆಲುಗಿನ) ಗಣಗಳೂ ಮತ್ತು ಎರಡು ಇಂದ್ರ ಗಣಗಳೂ ಇರುತ್ತವೆ. ೨-೪ ಪಾದಗಳಲ್ಲಿ ಐದೂ ಸೂರ್ಯಗಣಗಳೇ ಇರುತ್ತವೆ. ಪ್ರತಿ ಪಾದದಲ್ಲಿಯ ೧-೪ ಗಣಗಳ ಮೊದಲನೆಯ ಅಕ್ಷರಗಳಿಗೆ ಯತಿ ಮೈತ್ರಿ ಇರುತ್ತದೆ.

ಇನ್ನು, ನಾವು ಕನ್ನಡದಲ್ಲಿ ಹೆಚ್ಚು ಕಡಿಮೆ ಇದನ್ನೇ ಅನುಸರಿಸಿದ್ದರೂ, ಹೆಚ್ಚಾಗಿ ಈ ಕೆಳಗಿನ ನಿಯಮಕ್ಕೆ ಅಂಟಿಕೊಂಡಿದ್ದೇವೆ.

ಒಂದನೆಯ ಮತ್ತು ಮೂರನೆಯ ಚರಣಗಳಲ್ಲಿ ಮೂರು ಮೂರು ಮಾತ್ರೆಗಳ ಆರು ಗಣಗಳು ಒಂದನೆಯ ಮತ್ತು ನಾಲ್ಕನೆಯ ಗಣದ ಪ್ರಥಮಾಕ್ಷರಗಳು ಸಜಾತೀಯ ಶಬ್ದಗಳಾಗಿರಬೇಕು. ಹಾಗಿಲ್ಲದ ಪಕ್ಷದಲ್ಲಿ, ಕನಿಷ್ಠ ನಂತರದ ಶಬ್ಧವಾದರೂ ಸಜಾತೀಯವಿರಬೇಕು.

ಇನ್ನು ಎರಡನೆಯ ಮತ್ತು ನಾಲ್ಕನೆಯ ಚರಣಗಳು ಮೂರು ಮಾತ್ರೆಯ ಐದು ಗಣಗಳನ್ನು ಹೊಂದಿರಬೇಕಲ್ಲದೆ, ಮೊದಲನೆಯ ಮತ್ತು ನಾಲ್ಕನೆಯ ಗಣಗಳ ಆದ್ಯಕ್ಷರವು ಸಜಾತೀಯವಿರಬೇಕು; ಇಲ್ಲವಾದರೆ ತದನಂತರದ ಅಕ್ಷರಗಳಾದರೂ ಸಜಾತೀಯವಾಗಿರಬೇಕು ಇನ್ನು, ಕಂದ ಛಂದಸ್ಸು ಕನ್ನಡ-ತೆಲುಗು ಭಾಷೆಗಳಿಗೆ ಸಾಮಾನ್ಯವಾಗಿದೆ. ಈ ಛಂದಸ್ಸುಗಳ ಪದ್ಯಗಳನ್ನು ಕನ್ನಡಿಸುವಾಗ ನಾವು, ತೆಲುಗು ಛಂದಸ್ಸುಗಳನ್ನೂ, ಮತ್ತು ಪ್ರಾಸಾಕ್ಷರಗಳನ್ನೂ ಅನುಸರಿಸಿದ್ದು, ಮೂಲದ ಸುಭಗತೆ, ರಮ್ಯತೆ, ಚೂಟಿತನಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಸಾಕಷ್ಟು ಮಾಡಿದ್ದೇವೆ. ಶಬ್ದ ಹಾಗೂ ವಾಕ್ಯ ರಚನೆಗಳ ಅರ್ಥವನ್ನು ಹೆಚ್ಚಾಗಿ ತೆಲುಗು ಬಲ್ಲವರಿಂದ ಹಾಗೂ ಅರ್ಥಕೋಶಗಳಿಂದ ಹೆಕ್ಕಿ ತೆಗೆದಿದ್ದೇವೆ ಅಂತಿಮವಾಗಿ, ತೆಲುಗು ಪಂಡಿತರ ಬಳಿ ಕುಳಿತು ತಾಳೆ ನೋಡಿದ್ದೇವೆ.

ತೆಲುಗು ಭಾಷೆಯ ಉಡುಗೆ-ತೊಡುಗೆ ಧರಿಸಿದ ವೇಮನ-ಸಾಹಿತ್ಯ ಕನ್ಯೆಯನ್ನು ಕನ್ನಡ ಭಾಷೆಯ ಉಡುಗೆ-ತೊಡುಗೆಗಳಲ್ಲಿ ಕಾಣಬೇಕೆಂಬ ನಮ್ಮ ಬಹು ದಿನದ ಬಯಕೆಯ ಫಲವಾಗಿ ನಾವು ಕ್ರಿ. ಶ ೧೯೬೭ ರಷ್ಟು ಪೂರ್ವದಲ್ಲಿಯೇ ವೇಮನ ಗೀತೆ ಭಾಗ-೧ ಮತ್ತು ವೇಮನ ಗೀತೆ-ಭಾಗ-೨ ಎಂಬ ಎರಡು ಗ್ರಂಥಗಳನ್ನು ಹೊರತಂದಿದ್ದೆವು. ಅಲ್ಲಿಂದೀಚೆಗೆ ಚಿಕ್ಕ ಪುಟ್ಟ ಗ್ರಂಥಗಳನ್ನು ಹೊರತಂದಿದ್ದರೂ ಸಹ, ಕಳೆದ ವರ್ಷದವರೆಗೆ ವೇಮನ ಸಾಹಿತ್ಯದ ಮಟ್ಟಿಗೆ ಭಾಷಾಂತರ ಹಾಗೂ ಅಭ್ಯಾಸದಲ್ಲಿಯೇ ಕಾಲವು ಕಳೆಯಿತು. ಏತನ್ಮಧ್ಯೆ, ನಾವು ಭಾಷಾಂತರಿಸಿದ್ದ ಸುಮಾರು ಎರಡು ಸಾವಿರ ಪದ್ಯಗಳ ಭಾಷಾಂತರದ ಹಸ್ತ ಪ್ರತಿಗಳೂ, ಸಂಬಂಧಿಸಿದವರ ನಿರ್ಲಕ್ಷ್ಯದಿಂದ, ಕಾಣೆಯಾದವು. ಜೊತೆಗೆ ಐದು ಸಾವಿರ ಪದ್ಯಗಳನ್ನೊಳಗೊಂಡ ಶ್ರೀ ನೇದನೂರಿ ಗಂಗಾಧರರು ಸಂಕಲನ ಮಾಡಿದ ಗ್ರಂಥದ ಪ್ರತಿಯೂ ಹೋಯಿತು. ಈಗ ಆ ಗ್ರಂಥದ ಪ್ರತಿಗಳೇ ಲಭ್ಯವಿಲ್ಲ, ಹೀಗಾಗಿ, ಕಳೆದ ವರ್ಷ ನಾವು ಮರಳಿ ನಮ್ಮ ಭಾಷಾಂತರ ಕಾರ್ಯವನ್ನು ಆರಂಭಿಸಿ, ಗದಗಿನಲ್ಲಿ ಇರುವ ತೆಲುಗು ಬಲ್ಲ ಅಧ್ಯಾಪಕರು, ಪ್ರಾಧ್ಯಾಪಕರು, ವಕೀಲರು ಹೀಗೆ ಅವರಿವರೆನ್ನದೆ, ಸಂಪರ್ಕಿಸಿ, ಅವರ ಜೊತೆಗೂಡಿ ತೆಲುಗು ಭಾಷೆಯಿಂದ ಕನ್ನಡ ಭಟ್ಟಿಗೆ ವೇಮನ ಸಾಹಿತ್ಯವನ್ನು ಇಳಿಸಿದೆವು, ಪದ್ಯಗಳ ಛಂದಸ್ಸನ್ನಾಗಲಿ, ಅರ್ಥ- ಗಾಂಭೀರ್ಯವನ್ನಾಗಲಿ, ಭಾವ- ಸ್ಫುಟತೆಯನ್ನಾಗಲಿ, ಬಾಧಿಸದಂತೆ, ಆದಷ್ಟು ಆಯಾ ಛಂದೋಬಂಧದಲ್ಲಿ ಶಬ್ದಗಳ ಜೋಡಣೆ ಮಾಡಿದ್ದೇವೆ. ನಮ್ಮ ಈ ಮುಂಚಿನ ಭಾಷಾಂತರ ಶೈಲಿಯನ್ನು ಕನ್ನಡ ವಿದ್ವಾಂಸರು ಒಪ್ಪಿ ಶ್ಲಾಘಿಸಿದ್ದಾರೆ. ಇದು ಅವರ ಔದಾರ್ಯವೇ ಸರಿ.

ಹೀಗೆ, ಭಾಷಾಂತರಿಸುವ ತಪಸ್ಸು ಮುಗಿದ ಮೇಲೆ, ಅವುಗಳನ್ನು ವಿಷಯವಾರು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರಷಾರ್ಥ ವರ್ಗಗಳಲ್ಲಿ ವಿಂಗಡಿಸುವ ಉಗ್ರ ತಪಸ್ಸನ್ನು ನಿರ್ವಹಿಸಿದ ವಿಧವನ್ನು ಈ ಮುನ್ನ ತಿಳಿಸಿದ್ದೇವೆ. ಈಗ ಈ ಪದ್ಯಗಳನ್ನು ಪ್ರಸ್ತುತ ಗ್ರಂಥದಲ್ಲಿಯೇ ತೆಲುಗು ಮೂಲ ಹಾಗೂ ಟೀಕಾರ್ಥ ಸಮೇತ ಓದುಗರಿಗೆ ಒದಗಿಸಬೇಕೆಂಬ ಹಿರಿಯಾಸೆ ನಮ್ಮದಾಗಿತ್ತು. ಆದರೆ, ಅಂಥ ಪುಸ್ತಕದ ಗಾತ್ರವು ಹದಿನೈದು ನೂರು ಪುಟವನ್ನು ಮೀರಬಹುದಾದ್ದರಿಂದ, ಪ್ರಕಾಶಕರ ಪೂರ್ವಾನುಭವದ ಹಿತವಚನದ ಮೇರೆಗೆ, ಆಯಾ ಭಾಗದ ಪೀಠಿಕೆಯ ಮಟ್ಟಿಗೆ ಟೀಕಾರ್ಥವನ್ನು ಸಂಕ್ಷೇಪಿಸಿ, ಪೇಟೆಯಲ್ಲಿ ಲಭ್ಯವಿರುವ ಮುದ್ರಿತ ತೆಲುಗು ಗ್ರಂಥಗಳಲ್ಲಿ ಲಭ್ಯವಿರುವ ಪದ್ಯಗಳನ್ನೆಲ್ಲ ಸಂಕಲಿಸಿ ಭಾಷಾಂತರಿಸಿ ನೀಡಿದ್ದೇವೆ. ಹೀಗೆ, ಇದು ಕೇವಲ ವೇಮನರ ಪದ್ಯಗಳ ಕನ್ನಡ ಭಾಷಾಂತರವಷ್ಟೇ ಅಲ್ಲ, ಆದರೆ, ವೇಮನರ ಸಾಹಿತ್ಯದ ಪ್ರಚಲಿತ ಗರಿಷ್ಠ ಸಂಖ್ಯೆಯ ಸಂಕಲನವೂ ಆಗಿದೆ; ಉತ್ತಮ ಸಂಯೋಜನವೂ ಆಗಿದೆ. ಈ ಬೃಹತ್ ಕೃತಿಗೆ ಕನ್ನಡ ಓದುಗರ ಪ್ರತಿಕ್ರಿಯೆ ನೋಡಿಕೊಂಡು, ಪ್ರತಿ ಪದ್ಯದ ಟೀಕಾರ್ಥ ಹಾಗೂ, ತೆಲುಗು ಮೂಲ ಸಮೇತ (೧) ಧರ್ಮ (೨) ಅರ್ಥ (೩) ಕಾಮ ಮತ್ತು (೪) ಮೋಕ್ಷ ಎಂಬ ನಾಲ್ಕು ಪ್ರತ್ಯೇಕ ಗ್ರಂಥಗಳನ್ನು ಪ್ರಕಟಿಸುವ ಮಹದಾಸೆ ನಮ್ಮದಾಗಿದೆ. ಯೋಗಿ ವೇಮನರು ನುಡಿದ ಕಟು ಸತ್ಯವನ್ನು ಪೂರ್ಣ ಅರಗಿಸಿಕೊಳ್ಳಲು ಹಿಂದುಳಿದ ಸಮಾಜಗಳು ತಕ್ಕ ಅಧಿಕಾರಿಗಳಾಗಬೇಕಾಗಿದೆ. ಇನ್ನು ಅವರ ವಿಚಾರಧಾರೆಯು ಸ್ಥಾಪಿತ ಹಿತ ಸಂಬಂಧಿಗಳಿಗೆ ಅವರ ವಿರೋಧವನ್ನು ಎದುರಿಸಿ ಈ ಸಾಹಿತ್ಯ ಪ್ರಸಾರವು ದಾಪುಗಾಲು ಹಾಕಬೇಕಾಗಿದೆ. ಆದರೆ, ಇಂದಿನ ಕಾಲಮಾನವು ಇಂಥ ದಾರ್ಶನಿಕ ಸಾಹಿತ್ಯದ ಬೀಜ ಊರಲು ತಕ್ಕದ್ದಾಗಿದೆಯೆಂದು ಬೇರೆ ಹೇಳಬೇಕಿಲ್ಲ.

ಈ ಗ್ರಂಥ ಸಿದ್ಧತೆಯಲ್ಲಿ ಸಾಕಷ್ಟು ಜನರು ನೆರವು ಸಲ್ಲಿಸಿದ್ದಾರೆ. ಭಾಷಾಂತರ ಕಾರ್ಯದಲ್ಲಿ ಸಹಕರಿಸಿದ ಪ್ರೊ. ಸ್ವತಂತ್ರರಾವ, ಜೆ.ಟಿ. ಕಾಲೇಜು, ಗದಗ, ಶ್ರೀಮತಿ ಪಿ. ಉದಯಶ್ರೀ, ಗದಗ, ಶ್ರೀ ಸಂಪತ್ಕುಮಾರ, ಪಂಜಾಬ ನ್ಯಾಶನಲ್ ಬ್ಯಾಂಕ್, ಗದಗ, ಶ್ರೀ ಸುಧಾಕರ ಎಮ್.ಡಿ. ಜೆ.ಸಿ.ಟಿಎಮ್, ಹುಲಕೋಟಿ ಇವರನ್ನು ನಾವು ಕೃತಜ್ಞತೆಯಿಂದ ಸ್ಮರಿಸದಿರಲಾರೆವು. ಪದ್ಯಗಳ ಜೋಡಣೆಯಲ್ಲಿ, ಕನ್ನಡ ಮತ್ತು ತೆಲುಗು ಪದ್ಯಗಳನ್ನು 'ಅ' ಕಾರಾದಿ ಜೋಡಿಸುವಲ್ಲಿ ಶ್ರೀಮತಿ ರತ್ನ ಕುಮಾರಿ ಬಿ.ಈ. ಲೆಕ್ಚರರ, ಆರ್.ಟಿ.ಈ.ಎಸ್. ಇಂಜನೀಯರಿಂಗ ಕಾಲೇಜು ಹುಲಕೋಟಿ ಹಾಗೂ ಶ್ರೀಮತಿ ಯಶೋದಾ ಪಾಟೀಲ ಎಂ.ಎ. ಗದಗ ಇವರು ನೀಡಿದ ಸಹಾಯ ಅಪ್ಪಿಷ್ಟಲ್ಲ.

ಹುಲಕೋಟಿ — ಎಸ್.ಆರ್.ಪಾಟೀಲ

೧-೧೨-೧೯೯೭

■■

## ಡಾ. ಎನ್. ಗೋಪಿ ಅವರು ಸಮುದ್ಧರಿಸಿದ ಪ್ಯಾರಿಸ್ ಪ್ರತಿಯಲ್ಲಿ ದೊರಕಿದ, ನಮ್ಮ ಗಮನಕ್ಕೆ ಬಾರದ ಏಳು ಹೊಸ ಪದ್ಯಗಳು

ವಿಧದ ಮತಗಳಂತೆ ವರ್ಣ ಆಶ್ರಮಂತೆ
ದರ್ಶನಾದಿಯಂತೆ ದೈವವಂತೆ
ತಗುಲಿ ತಿರುಗುವವರು ತೆರೆಯಲಿ ಪಡೆಹರೇನು?
ವಿಶ್ವದಾಭಿರಾಮ ಕೇಳು ವೇಮ.

ಜೀವರಾಶಿಯಲ್ಲ ಚಿತ್ರ ಬೊಂಬೆ ತಾನು
ಅಲ್ಲಿ ಪಂಚ ಭೂತ ಐದು ಬಣ್ಣ
ತಿಳಿದ ಜನರಿಗೆಲ್ಲ ದೇಹವಿಷ್ಟೆ ಕಾಣು
ವಿಶ್ವದಾಭಿರಾಮ ಕೇಳು ವೇಮ.

ಕಾಯ ಸಂಬಂಧವು ಕಾಯ ಸಂಕೋಲೆಯು
ಜೀವ ಸಂಬಂಧವು ಅಂಟು ಕೊಂಬೆ
ಅರಿತು ಈ ಎರಡನು ಅರಿತುಕೊ ಬ್ರಹ್ಮನ
ವಿಶ್ವದಾಭಿರಾಮ ಕೇಳು ವೇಮ.

ವೃಕ್ಷವೊಂದು ಹುಟ್ಟಿ ವಿಪರೀತ ಫಲವಾಯ್ತು
ಅದರ ಜೀವ ಮತ್ತೆ ಆಯ್ತು ಎಲೆಯು
ಹುಟ್ಟು ಸಾವು ಅಷ್ಟೆ, ಪುತ್ರರು ಇನ್ನಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ತಾಳಕವನು ತಂದು ತಾಳಕದಲಿ ಬೇಯ್ಸಿ
ಬಿಟ್ಟು ಕೂಡಿಸುವುದು, ಬೇಕೆ ಬೇರೆ?
ಕುಣಿಯೊಳಗಿನ ಮಣ್ಣು ಕ್ರಮವಾಗಿ ಬರಬಹುದೆ?
ವಿಶ್ವದಾಭಿ ರಾಮ ಕೇಳು ವೇಮ.

ಮಾಯೆಯಿಂದ ಬ್ರಹ್ಮ ಮೈಲಿಗೆಯನು ಪಡೆದು.
ಮಾಯೆಯಿಂದ ಶಿವನು ಮಗ್ನನಾದ.
ಮಾಯೆ ಸೂಳೆಯಂತೆ ಮರುಳು ಮಾಡುತಿಹುದು
ವಿಶ್ವದಾಭಿರಾಮ ಕೇಳು ವೇಮ.

ಒಳನೋಟ ನೋಡದಿ ಒಟ್ಟು ನೋಡುವಾಗ,
ಬೆಳಕಿನಲ್ಲಿ ಬೆಳಕು ಬೆಳಗುವಾಗ,
ಮಾತಿನಲ್ಲಿ ಮಾತು ಮಥಿಸೆ ತತ್ವವಾಯ್ತು
ವಿಶ್ವದಾಭಿರಾಮ ಕೇಳು ವೇಮ.

ಸೂಚನೆ: (೧೭೯೮ ರಲ್ಲಿ ಅಬೆ ದುಬಾಯಿ ಎಂಬ ಫ್ರೆಂಚ್ ಪಾದ್ರಿ ತೆಗೆದುಕೊಂಡು ಹೋದ ತಾಳೆಗರಿ ಪ್ರತಿಯಲ್ಲಿ ಈ ಪದ್ಯಗಳಿವೆ. ಈ ಪ್ರತಿ ಬಿಬ್ಲಿಯೋಥಿಕಾ ಪ್ಯಾರಿಸಿನಲ್ಲಿದೆ. ಅದರ ಮೈಕ್ರೋ ಫಿಲ್ಮ ಡಾ. ಎನ್. ಗೋಪಿಯವರ ಸಂಗ್ರಹದಲ್ಲಿದೆ.)

■■

# ಪರಿವಿಡಿ


* ಪ್ರಕಾಶಕರ ಮಾತು iv
* ಕುಲಪತಿಗಳ ನಲ್ನುಡಿ vi
* ಸಂಯೋಜಕರ ನುಡಿ viii
* ಅರಿಕೆ x

೧. ಜೀವನ ಚರಿತ್ರೆ ೧-೬೮

೨. ಪದ್ಯಗಳಲ್ಲಿ ಚರಿತ್ರೆ ೬೯-೮೧

೩. ಧರ್ಮವರ್ಗ – ಗೃಹಸ್ಥ ೮೨-೧೬೭

ದೇವರು – ಮೂರ್ತಿಪೂಜೆ– ತೀರ್ಥಯಾತ್ರೆ
ಮತಗಳು–ಧರ್ಮದರ್ಶನ – ಗೃಹಸ್ಥನಬಾಳು
ಗೃಹಿಣಿಯ ಒಳಿತು – ಮಕ್ಕಳ ಪ್ರಾಪ್ತಿ – ಕೃತಜ್ಞತೆ
ಸಮದರ್ಶಿತ್ವ – ಮಧುರ ಮಾತು – ಸಂಯಮ – ಸನ್ನಡತೆ
ಅನುಸೂಯ ಕೀಳು ನಡತೆ – ಉಪಕಾರ
ಸ್ಮರಣೆ – ನೀಚ ಕಾರ್ಯ – ನಿಂದನೆ – ಕೊಡುಗೆ

೪. ಧರ್ಮವರ್ಗ – ಯೋಗ ೧೬೮-೨೨೮

ಯಮಸಾಧನೆ – ಸತ್ಯ – ಅಹಿಂಸೆ – ಅಸ್ತೇಯ
ಅಪರಿಗ್ರಹ – ಬ್ರಹ್ಮಚರ್ಯೆ – ನಿಯಮಸಾಧನೆ – ಶೌಚ
ಸಂತೋಷ – ತಪಸ್ಸು – ಸ್ವಾಧ್ಯಾಯ – ಈಶ್ವರ – ಪ್ರಣಿಧಾನ.
ಆಸೆ – ಲೋಭ – ಮೋಹ – ಮದ – ಮತ್ಸರ – ವಿವೇಕ
ವೈರಾಗ್ಯ – ತ್ಯಾಗ

೫. ಧರ್ಮವರ್ಗ ವಿಧಿ ೨೨೯-೨೫೯

ಕರ್ಮ–ಕರ್ಮಫಲ–ವಿಧಿಯ ಕೈವಾಡ
ದೃಷ್ಟಾಂತಗಳು – ಸಂಕೀರ್ಣ

೬. ಅರ್ಥವರ್ಗ – ರಾಜನೀತಿ ೨೬೦-೨೯೧

ರಾಜನ ಗುಣ – ಕೇಳುವಿಕೆ – ತಿಳಿಯುವಿಕೆ
ಸಜ್ಜನ ಸಂಘ – ಬಲದ ಅರಿವು – ಸ್ಥಲಪರಿಜ್ಞಾನ
ನ್ಯಾಯಾಡಳಿತ – ಚಾಡಿಖೋರ – ಕ್ರೂರಾಡಳಿತ
ಕರುಣೆಯ ದೃಷ್ಟಿ – ಸಾಮರ್ಥ್ಯ – ಆಪತ್ತಿನಲ್ಲಿ ಸ್ಥೈರ್ಯ

೭. ಅರ್ಥವರ್ಗ – ಆಪ್ತಾಲೋಚನೆ ೨೯೨-೩೦೦

ಮಾತಿನ ಒಲುಮೆ – ಕಾರ್ಯವಿಧಾನ

೮. ಅರ್ಥವರ್ಗ – ರಾಜ್ಯವಿಭಾಗ ೩೦೧-೩೨೫

ಧನಸಂಚಯ–ಧನದ ಮದ– ರಸವಾದ–ಕಾಯಕಲ್ಪ–ಮದ್ದು
ಕೆಟ್ಟ ಸ್ನೇಹ – ಹಗೆತನ – ಹಿರಿಯರಿಂಗೆ ಗೌರವ

೯. ಅರ್ಥವರ್ಗ - ಅನುಬಂಧ ೩೨೬-೩೯೦
ಜನ್ಮ - ಚತುರ್ವರ್ಣ - ಮೇಲುಕೀಳು ಧನ-ಅಧಿಕಾರ
ಬ್ರಹ್ಮ ಕ್ಷತ್ರಿಯ - ವೈಶ್ಯ - ಶೂದ್ರ - ಅತಿಶೂದ್ರ - ಯಾಗ
ಪುರೋಹಿತ - ಶೀಲವಂತಿಕೆ - ಮುಟ್ಟು - ವಸುಧೈವ ಕುಟುಂಬಕಂ
ಸ್ವಂತ ನಡತೆ - ಸಾಲ - ಶೂಲ - ಮುಟ್ಟು - ಮಡಿ - ಹಿರಿಮೆ
ಸದ್ಗುಣ ಸಂಪಾದನೆ - ನೆರವಿಗೆ ಬಾರದ ಸಿರಿ - ಒಕ್ಕಲಿಗ
ಕಾಮ - ಬಡತನ - ಕೀಳುತನ

೧೦. ಕಾಮವರ್ಗ ೩೯೧-೪೩೯
ಕಾಮ - ಸಂಸಾರ ಕಲಹ - ದಾಂಪತ್ಯದಲ್ಲಿ ವರಸ
ಚೋರತನ - ಜಾರತನ - ಜಾರ ಪುರುಷರು - ವೇಶ್ಯೆಯರು
ವಿಟಪುರುಷರು - ದೇವದಾಸಿಯರು - ಸಾಧನೆ ಮತ್ತು ಕಾಮ

೧೧. ಸಂಕೀರ್ಣ ೪೪೦-೪೫೧
೧೨. ಮೋಕ್ಷ ವರ್ಗ - ಅಧಿಕಾರ ಲಕ್ಷಣ ೪೫೨-೪೬೨
೧೩. ಮೋಕ್ಷ ವರ್ಗ - ಮನೋಶುದ್ಧಿ ೪೬೩-೪೭೮
೧೪. ಮೋಕ್ಷ ವರ್ಗ - ಗುರು-ದೀಕ್ಷೆ ೪೭೯-೫೦೨
೧೫. ಮೋಕ್ಷ ವರ್ಗ - ತತ್ತ್ವ ನಿರ್ಣಯ (೧, ೨, ೩) ೫೦೩-೫೩೯
೧೬. ಮೋಕ್ಷ ವರ್ಗ - ಜೀವ ಶಿವೈಕ್ಯ ೫೪೦-೫೫೩
೧೭. ಮೋಕ್ಷ ವರ್ಗ - ನಿಜಬೋಧೆ ೫೫೪-೫೬೩
೧೮. ಮೋಕ್ಷ ವರ್ಗ - ಹಠಯೋಗ ೫೬೪-೬೦೬
ನಾಡಿ - ಚಕ್ರದೇವತೆ - ವಿಮರ್ಶೆ - ನಿಮ್ನಸಿದ್ಧಿ - ಮುದ್ರೆಗಳು
ಕುಂಭಕ - ಯೋಗ - ಗುಣಾತೀತಭಾವ - ಊರ್ಧ್ವಗತಿ
ಪರಾಗತಿ - ಪರಮಹಂಸ ಪಟ್ಟ - ಫಲ

೧೯. ಲಯಯೋಗ ೬೦೭-೬೧೮
೨೦. ಭಕ್ತಿಯೋಗ ೬೧೯-೬೬೮
ಭಕ್ತಿ ಎಂದರೇನು? - ಯೋಗ - ಭಕ್ತನ ಧ್ಯಾನ
ಮೂರ್ತಿ - ಶಿವಪೂಜೆ - ಶಿವನು ಇರುವುದೆಲ್ಲಿ?
ಶಿವದರ್ಶನ ಭಕ್ತನ ಸ್ಥಿತಿ - ನಿರ್ಗುಣೀ ಭಕ್ತ

೨೧. ರಾಜಯೋಗ ೬೬೯-೭೩೨
ಬ್ರಹ್ಮ ಸ್ವರೂಪ - ಮನಸ್ಸು ಮತ್ತು ಆಚೆ
ತಿಳಿವಿನಾಚೆಯ ಸಾಧನೆ - ನಿಜದ ಅರಿವು

೨೨. ಗುರು ಶಿಷ್ಯ ಲಕ್ಷಣ ೭೩೩-೭೩೭
೨೩. ಸಾಧುಲಕ್ಷಣ ೭೩೮-೭೪೬
೨೪. ಸಹಜ ಸಮಾಧಿ ೭೪೭-೭೫೩
೨೫. ಜೀವನ್ಮುಕ್ತಿ ಸ್ಥಿತಿ ೭೫೪-೭೬೦
೨೬. ಅವಧೂತ ಚರ್ಯೆ ೭೬೧-೭೭೦
೨೭. ಆಧ್ಯಾತ್ಮ ಸುಖಬೋಧೆ ೭೭೧-೭೭೮

# ೧. ಜೀವನ ಚರಿತ್ರೆ

## ೧. ಭ್ರಮರವಾದ ಕೀಟ

ಕತ್ತಲೆಗೆ ಉಷೆ ಕೊಟ್ಟಾಗ ಮುತ್ತು ಬಯಲೆಲ್ಲ ಬೆಳಗಾಗಲು ಸಿದ್ದವಾಗಿತ್ತು. ಆಕಾಶದಲ್ಲಿಯ ನಕ್ಷತ್ರಗಳೆಲ್ಲ ಮಾಯವಾಗಿ ಆಕಾಶವೆಲ್ಲ ನೀಲಿಯಾಗಿತ್ತು. ಪೂರ್ವದ ದಿಗಂತ ಕೆಂಪೇರ ತೊಡಗಿತ್ತು. ಬೆಟ್ಟ ಪ್ರದೇಶದ ಗಿಡ ಮರಗಳಿಗೆ ಧ್ವನಿ ಬಂದಂತಾಗಿತ್ತು. ಪಕ್ಷಿ ಸಂಕುಲ ಚಿಲಿಪಿಲಿಗುಟ್ಟಲಾರಂಭಿಸಿತು. ವನಕುಸುಮಗಳು ಅರಳಿದವು. ಸುಗಂಧ ತೀಡಿದ ಮಂದ ಮಾರುತ ಜೀವಿಗಳಿಗೆಲ್ಲ ಹಿತ ಹಂಚಲಾರಂಭಿಸಿತು.

ಹಸಿರು ಸೂಸುವ ಗಿಡಮರಗಳಿಂದ, ಹೂಗಳ ಭಾರದಿಂದ ಬಗ್ಗಿದ ಬಳ್ಳಿಗಳಿಂದ ಆವೃತ್ತವಾಗಿದ್ದ ಬೆಟ್ಟದ ಕೊಳ್ಳದಲ್ಲಿ ಗವಿಯ ಬಾಗಿಲು ತೆರೆಯಿತು. ತೆಳುವಾದ ಮೈಕಟ್ಟು, ಎತ್ತರವಾದ ನಿಲುವ, ಮೈಕಾಂತಿಯಿಂದ ಬೆಳಗುವ ದಿಗಂಬರಮೂರ್ತಿ ಮುಗುಳು ನಗೆ ಬೀರುತ ಗವಿಯ ತೆರೆದ ಬಾಗಿಲಿಂದ ಹೊರಬಂದರು. ಮಂದಹಾಸ ಬೀರುವ ಆ ದಿಗಂಬರ ಮೂರ್ತಿಯ ಶಾಂತಿಯುತವಾದ ತೇಜಸ್ವಿ ಕಣ್ಣುಗಳಿಂದ ಕರುಣೆ ಓತಪ್ರೋತವಾಗಿ ಹರಿಯಿತು. ತಮ್ಮ ಮುಂದೆ ನಿಂತ ಸ್ಫುರದ್ರೂಪಿ ಯುವಕನನ್ನು ಆಪಾದಮಸ್ತಕ ನೋಡಿ ದಿಗಂಬರ ಮೂರ್ತಿಯ ಮುಖ ಮಂದಾರವಾಯಿತು. ಹರುಷದಲ್ಲಿ ಶಾಂತಿಯುತ ನೇತ್ರಗಳು ಮಿಂದವು.

"ಮಗು ಎಷ್ಟು ಕಾಲ ಕಾಯಿಸಿದೆ, ನಿನಗಾಗಿ ಕಾದು ಕಾದು ಸಾಕಾಗಿತ್ತು, ಏಕೆ ಇಷ್ಟು ತಡಮಾಡಿದೆ; ಈಗ ಏಕೆ ಬಂದೆ" ಎಂದು ಏಕ ಕಾಲದಲ್ಲಿಯೆ ಸ್ವಾಮಿ ಕೇಳಿದರು.

'ತಂದೆ, ಲೋಕದ ಮಾಯಾ ನಿದ್ರೆಯಲ್ಲಿದ್ದೆ. ಮಾಯೆಗೆ ಮರುಳಾಗಿದ್ದೆ. ಗಾಢ ನಿದ್ರೆಯಲ್ಲಿದ್ದೆ ಎಚ್ಚರವಾಯಿತು ತಕ್ಷಣ ತಮ್ಮ ದರ್ಶನಕ್ಕಾಗಿ ಓಡೋಡಿ ಬಂದೆ. ವಿಳಂಬ ಮಾಡಿದ್ದಕ್ಕೆ ಕ್ಷಮಿಸಿ ಕರುಣಿಸಬೇಕೆಂದು ಪ್ರರ್ಥಿಸುವೆ' ಎಂದ ಯುವಕ.

ಎಲ್ಲವೂ ಪೂರ್ವ ನಿಶ್ಚಿತ. ಬಾ ಮಗು ಇಲ್ಲಿ ಕುಳಿತುಕೊ ಎಂದು ಹೇಳಿದ ದಿಗಂಬರ ಯೋಗಿ ಯುವಕನ ಭ್ರುಕುಟಿಯನ್ನು ತಮ್ಮ ಹೆಬ್ಬೆರಳಿನಿಂದ ಒತ್ತಿದರು. ಯುವಕ ಅವರ್ಣನೀಯ, ಅನಿರ್ವಚನೀಯ ಆನಂದ ಅನುಭವಿಸಲಾರಂಭಿಸಿದ. ಪೊದೆಯಿಂದ ಹಾರಿ ಹೋಗುವ ಪಕ್ಷಿಯಂತೆ ಯುವಕನ ಮನವು ಲೋಕದ ಸೊಡುರು ಬಿಟ್ಟು, ಹಾರಿತು. ಕೆಲಕಾಲ ಸಮಾಧಿ ಸ್ಥಿತಿಯ ಆನಂದ ಅನುಭವಿಸಿದ ಯುವಕ. ವೃದ್ಧಯೋಗಿಯ ಪ್ರಿಯವಾದ ಕರೆಗೆ ಉತ್ತರಿಸಿ ಅರಿವೆಗೆ ಬಂದ.

— — — — — — — — — — — — — — — — — — — — — — —

ಮಗು, ನಿನ್ನಿಂದ ಲೋಕಕಲ್ಯಾಣವಾಗಬೇಕಿದೆ. ಲೋಕದ ಅಂಕುಡೊಂಕುಗಳನ್ನು ತಿದ್ದಿ ಜನರನ್ನು ಡಂಭಾಚಾರದಿಂದ ಮುಕ್ತಗೊಳಿಸಿ ಅವರನ್ನು ಸನ್ಮಾರ್ಗಕ್ಕೆ ಹಚ್ಚುವ ಗುರುತರನಾದ ಹೊಣೆಗಾರಿಕೆಯುನ್ನು ನೀನು ನಿರ್ವಹಿಸಬೇಕಾಗಿದೆ. ಇವೆಲ್ಲ ನಿನ್ನ ಪೂರ್ವಜನ್ಮದ ಪುಣ್ಯಫಲ. ನಿನ್ನೊಡನೆ ಕೆಲ ಕಾಲ ಇರುವ ಭಾಗ್ಯ ನನಗಿಲ್ಲ. ನನ್ನ ಕಾಲ ಸನ್ನಿಹಿತವಾಗಿದೆ. ನಾನು ಹೋಗಲೇಬೇಕು. ನೀನು ತಾಯಿಯ ಗರ್ಭದಿಂದ ಬಂದಾಗ ಹೇಗೆ ಇದ್ದೆಯೋ ಹಾಗೂ ಅಂತ್ಯದಲ್ಲಿ ಈ ಲೋಕದಿಂದ ತೆರಳುವಾಗ ಹೇಗೆ ಇರುವೆಯೋ ಆ ಸ್ಥಿತಿಯಲ್ಲಿ ಇರಬಲ್ಲೆಯಾ? ಎಂದರು.

ಮಹಾತಪಸ್ವಿಯ ಇಂಗಿತ ಅರಿತ ಯುವಕ. ಕ್ಷಣಮಾತ್ರದಲಿ ದಿಗಂಬರನಾಗಿ ಯೋಗಿಯ ಮುಂದೆ ಆಸೀನನಾದ. ಯುವಕ ಕೇವಲ ಬಟ್ಟೆ ಕಳಚಿರಲಿಲ್ಲ. ಲೋಕದ ಮಾಯೆಯನ್ನು ಕಳಚಿದ್ದ. ಕಾಮ, ಕ್ರೋಧ, ಮೋಹ, ಮದ, ಲೋಭ, ಮತ್ಸರಗಳಿಂದ ಮುಕ್ತನಾಗಿದ್ದ. ಯೋಗಿಗಳಿಗೆ ಕಾಯಾ – ವಾಚಾ– ಮನಸಾ ಸಂಪೂರ್ಣ ಸಮರ್ಪಿತನಾಗಿದ್ದ. ಯೋಗಿರಾಜ ಯುವಕನ ಮೈಯನ್ನೆಲ್ಲ ಸವರಿದರು. ಮನಸ್ಸು – ಬುದ್ಧಿ – ಹೃದಯಗಳು ಒಂದಾದವು. ಯುವಕನಿಗೆ ಅಲೌಕಿಕವಾದ ಆನಂದ. ಪಂಜರದಿಂದ ಮುಕ್ತವಾದ ಪಕ್ಷಿ ಸ್ವಚ್ಛಂದವಾದ ಗಗನದಲ್ಲಿ ಮೇಲೇರುವಂತೆ ಯುವಕನ ಸ್ಥಿತಿಯಾಯಿತು. ಗುರುಗಳು ಹಿಗ್ಗಿದರು. ಸಂತಸದಿಂದ ಮಂತ್ರೋಪದೇಶ ಮಾಡಿದರು.

ಮಗು, ನನ್ನ ಕೆಲಸವಾಯಿತು, ನನ್ನ ಜವಾಬ್ದಾರಿಯೂ ಮುಗಿಯಿತು. ನಾನು ತೆರಳಬೇಕಾದ ಸುಮುಹೂರ್ತ ಸಮೀಪಿಸಿದೆ. ನೀನೀಗ ನಿನ್ನನರಿತ ಜ್ಞಾನಿಯಾದೆ. ಯೋಗಿಯಾದೆ. ಯೋಗಿರಾಜನಾದೆ, ಅನ್ಯರಿಗೆ ಬೋಧಿಸಬಲ್ಲ ಗುರುವಾದೆ ಎಂದು ಆಶೀರ್ವದಿಸಿದ ಮಹಾ ತಪಸ್ವಿ. ನಿನ್ನಿಂದ ಲೋಕಕ್ಕೆ ಹಿತವಾಗಲಿ ಎಂದು ಹಾರೈಸಿದರು. ಎದ್ದು ನಿಂತ ಯೋಗಿಗಳು ಯುವಕನಿಗೆ ನಿಂತಲ್ಲಿಗೆ ಇರಲು ಸೂಚಿಸಿ ತಾವು ಮಾತ್ರ ಗವಿಯತ್ತ ಹೆಜ್ಜೆ ಹಾಕಿದರು. ಬೆಳಕು ಕತ್ತಲೆಯನ್ನು ಪ್ರವೇಶಿಸಿತು. ಪ್ರಖರವಾದ ಬೆಳಕು ಮಂದಮಂದವಾಗುತ್ತ ಸಾಗಿತ್ತು.

ಯುವಕ ವೇಮನ ಮಹಾಯೋಗಿ ವೇಮನನಾಗಿದ್ದ. ಲೋಕ ಹಿತಕ್ಕಾಗಿ ಎಲ್ಲ ಬಂಧನಗಳನ್ನು ಕಳಚಿ ನಿಂತಿದ್ದ.

❖❖❖

# ೨. ಹೆಸರಿನ ಹಿನ್ನೆಲೆ

ವೇಮನ ಹೆಸರು ರೆಡ್ಡಿಗಳಲ್ಲಿ ಅಪರೂಪವಲ್ಲವೇ? ಹೌದು ವೇಮ + ಅನ್ನ ಸೇರಿ ವೇಮನ್ನ ಆಗಿದೆ. ಅದೇ ರೂಢಿಯಲ್ಲಿ ವೇಮನ ಎಂದಾಗಿದೆ. ಈ ಅಪರೂಪದ ಹೆಸರಿನ ಹಿಂದೆ ದೊಡ್ಡ ಕಥೆ ಇದೆ.

ಹದಿಮೂರನೇ ಶತಮಾನದ ಆದಿ ಕಾಲದಲ್ಲಿ ಒಬ್ಬ ಶ್ರೇಷ್ಠಿ ಶಿವರಾತ್ರಿಯ ಉತ್ಸವ ಕಾಲಕ್ಕೆ ಶ್ರೀಶೈಲಕ್ಷೇತ್ರಕ್ಕೆ ಶ್ರೀಚನ್ನಮಲಿಕಾರ್ಜುನನ ದರ್ಶನಕ್ಕಾಗಿ ಬಂದ, ಆತನ ಹೆಸರೇ ವೇಮ.

ಶ್ರೀಶೈಲ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಪವಿತ್ರವಾದ ತಾಣ. ಶ್ರೀ ಚನ್ನಮಲ್ಲಿಕಾರ್ಜುನ ಇಲ್ಲಿ ನೆಲೆಸಿರುವುದರಿಂದ ಈ ಕ್ಷೇತ್ರದ ಪ್ರಸಿದ್ಧಿ ಅಲೌಕಿಕ. ಶಿವನ ಆವಾಸಸ್ಥಾನವಾಗಿರುವ ಶ್ರೀಶೈಲ ಕ್ಷೇತ್ರ ಬಹುದೊಡ್ಡ ಸಂಖ್ಯೆಯಲ್ಲಿ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತದೆ.

ಶ್ರೀಶೈಲದಲ್ಲಿ ಜರುಗುವ ಶಿವರಾತ್ರಿ ಉತ್ಸವಕ್ಕೆ ಕುಂಭಮೇಳಗಳಲ್ಲಿ ಭಕ್ತರು ಸೇರುವಂತೆ ಸದ್ಭಕ್ತರು ಸೇರುತ್ತಾರೆ. ಶಿವರಾತ್ರಿ ದಿನ ಇಲ್ಲಿ ಸೇರುವ ಸದ್ಭಕ್ತರು ಕೃಷ್ಣೆಯಲ್ಲಿ ಮಿಂದು ವಿಭೂತಿ ಧಾರಣ ಮಾಡಿ ಮಂಗಲವಾದ್ಯಗಳನ್ನು ಮೂಳಗಿಸುತ್ತ ಶಿವಸ್ತುತಿ ಮಾಡುತ್ತಾರೆ. ರಾತ್ರಿ ಪೂರ್ಣ ಜಾಗರಣೆ. ಇಂತಹ ಶಿವರಾತ್ರಿ ಉತ್ಸವದಲ್ಲಿ ಪಾಲ್ಗೊಳ್ಳಲು ಶ್ರೇಷ್ಠಿ ವೇಮ ಶ್ರೀಶೈಲಕ್ಕೆ ಆಗಮಿಸಿದ್ದ.

ಶ್ರೇಷ್ಠಿ ವೇಮ ತ್ಯಾಗದ ಸಾಕಾರಮೂರ್ತಿಯಾಗಿದ್ದ. ಆತ್ಮ ಕಲ್ಯಾಣಕ್ಕೆ ಬಾಧಕವಾದ ಸಂಗ್ರಹ ಪ್ರವೃತ್ತಿಯಿಂದ ವಿಮುಖನಾಗಿದ್ದ. ವಿಮುಕ್ತನಾಗಿದ್ದ ಮಾಯಾ–ಮೋಹಗಳಿಂದ ಮುಕ್ತನಾಗಿದ್ದ. ಭಗವಂತನ ಕರುಣೆಗಾಗಿ ಪರೋಪಕಾರ ಮಾಡುವುದೇ ಶ್ರೇಷ್ಠ ಮಾರ್ಗವೆಂದು ನಂಬಿ ತನ್ನ ಜೀವನವನ್ನೇ ಪರೋಪಕಾರಕ್ಕೆ ಮುಡುಪಾಗಿರಿಸಿದ್ದ. ಜೀವನದ ಸುಖ ದುಃಖಗಳನ್ನು ಸಮನಾಗಿ ಕಂಡು ಆ ಬಂಧನದಿಂದ ಮುಕ್ತನಾಗಿ ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆಯಲು ತೀರ್ಥಯಾತ್ರೆ ಕೈಕೊಂಡಿದ್ದ.

ಶಿವರಾತ್ರಿ ಉತ್ಸವಗಳು ಮುಗಿದರೂ ಶ್ರೇಷ್ಠಿ ವೇಮ ಮಾತ್ರ ಶ್ರೀಕ್ಷೇತ್ರದಲ್ಲಿಯೇ ನೆಲೆಸಿದ. ಶಿವನನ್ನು ಅನನ್ಯವಾಗಿ ಪ್ರಾರ್ಥಿಸುವುದು ನಿತ್ಯ ಶ್ರೀಮಲ್ಲಿಕಾರ್ಜುನನ ದರ್ಶನ ಮಾಡುವುದು, ಶಿವಸ್ತುತಿಯಲ್ಲಿ ಮೈಮರೆತು ಬಿಡುವುದು ಆತನ ಸಾಮಾನ್ಯ ವರ್ತನೆಯಾಗಿದ್ದಿತು. ಒಂದು ರಾತ್ರಿ ಶ್ರೀ ಮಲ್ಲಿಕಾರ್ಜುನ ಶ್ರೇಷ್ಠಿ ವೇಮನಿಗೆ ದರ್ಶನ

ಕರುಣಿಸಿದ. "ನಿನ್ನ ಸದ್ಭಕ್ತಿಗೆ ಮೆಚ್ಚಿದ್ದೇನೆ. ಶೀಘ್ರ ಭವಿಷ್ಯದಲ್ಲಿ ಶಿವಭಕ್ತಿಯ ಮಹಿಮೆಯನ್ನು ಜಗತ್ತಿಗೆ ಸಾರುವ ಶಿಬಭಕ್ತೆ ಹಾಗೂ ಲೋಕ ಕಲ್ಯಾಣಕ್ಕಾಗಿ ಸದ್ ವಿವೇಕವನ್ನು ಬೋಧಿಸುವ ಮಹಾನ್ ಯೋಗಿ ಇಬ್ಬರು ಜನ್ಮ ತಾಳುವವರಿದ್ದಾರೆ. ಅವರ ಕುಟುಂಬಕ್ಕೆ ನಿನ್ನಿಂದ ಉಪಕಾರವಾಗಬೇಕು ಅದಕ್ಕಾಗಿ ನನ್ನ ತಾಣವಾದ ಶ್ರೀಶೈಲ ಬೆಟ್ಟದ ತುತ್ತತುದಿಯಲ್ಲಿರುವ ಬಿಲ್ವಪತ್ರದ ಮರದಲ್ಲಿ ಪುರುಷಮಣಿ ಇದೆ. ನೀನು ಬಿಲ್ವಪತ್ರದ ಮರದ ಕೆಳಗೆ ಪ್ರಕಾಶ ಬೀಳುವ ಸ್ಥಳವನ್ನು ಸ್ವಲ್ಪ ಅಗೆದರೆ ಸಾಕು ಅದು ಸಿಗುವುದು. ಅದನ್ನು ತೆಗೆದುಕೊಂಡು ಹೋಗಿ ತೀವ್ರ ತೊಂದರೆಯಲ್ಲಿರುವ ನನ್ನ ಸದ್ಭಕ್ತ ಅಳಿಯ ರೆಡ್ಡಿಗೆಕೊಡು. ಅನುಮಗೊಂಡ ಗ್ರಾಮದ ಹೊರ ಅಂಚಿನಲ್ಲಿರುವ ತೋಟದ ಮನೆಯಲ್ಲಿ ಅಳಿಯ ರೆಡ್ಡಿ ವಾಸವಾಗಿದ್ದಾನೆ. ಅನಂತರ ನೀನು ಜ್ಯೋತಿರ್ಲಿಂಗಗಳ ದರ್ಶನ ಮಾಡಿ ಮುಕ್ತಿ ಪಡೆ" ಎಂದು ಆದೇಶಿಸಿದ.

ಶ್ರೇಷ್ಠಿ ವೇಮನಿಗೆ ಶಿವನ ಆದೇಶ ಎಚ್ಚತ್ತಾಗಲೂ ಸ್ಪಷ್ಟವಾಗಿತ್ತು. ಆದರೂ ಶ್ರೀಶೈಲ ಬಿಡಲು ಮನಸ್ಸಾಗದೆ ಶ್ರೇಷ್ಠಿ ವೇಮ ಮತ್ತೊಂದು ರಾತ್ರಿ ಅಲ್ಲಿಯೇ ತಂಗಿದ. ಮತ್ತೆ ಪರಮೇಶ್ವರ ಶ್ರೇಷ್ಠಿ ವೇಮನನ ಕನಸಿನಲ್ಲಿ ಕಾಣಿಸಿಕೊಂಡ. " ಏಕೆ ನನ್ನ ಆದೇಶ ಪಾಲಿಸಲು ವಿಳಂಬ ಮಾಡುತ್ತಿ. ಕನಸಿನ ಆದೇಶದ ಬಗ್ಗೆ ಸಂದೇಹ ಪಡಬೇಡ. ಲೋಕಕಲ್ಯಾಣಕ್ಕಾಗಿ ಪರೋಪಕಾರಿಯಾದ ನಿನ್ನಿಂದಲೇ ಈ ಕೆಲಸವಾಗಬೇಕಾಗಿದೆ. ನಿನ್ನ ಹೆಸರು ಸಹ ಇದರೊಂದಿಗೆ ಅಮರಗೊಳಿಸುವುದೇ ನನ್ನ ಲೀಲೆಯ ರಹಸ್ಯ. ಬೆಟ್ಟದಲ್ಲಿರುವ ಕ್ರೂರಪಶುಗಳ ಬಗ್ಗೆ ಅಳುಕಬೇಡ. ಯಾವ ರೀತಿಯ ಭೀತಿಯೂ ನಿನ್ನಲ್ಲಿ ಸುಳಿಯದಿರಲಿ. ನಾಳೆ ಮುಂಜಾನೆ ಎದ್ದು ನಿತ್ಯ ಕರ್ಮಗಳನ್ನು ಮುಗಿಸಿ ಶ್ರೀಮಲ್ಲಿಕಾರ್ಜುನ ದರ್ಶನ ಪಡೆದು ಬೆಟ್ಟ ಏರಲು ಪ್ರಾರಂಭಿಸು, ಹಾಗು ನಾನು ಆದೇಶಿಸಿದಂತೆ ಸ್ಪರ್ಶಮಣಿಯನ್ನು ತಂದು ಅಳಿಯ ರೆಡ್ಡಿಗೆ ತಲುಪಿಸು. ನಿನ್ನ ಈ ಕೃತಿಯಿಂದ ನಿನ್ನ ಹೆಸರು ಅಮರವಾಗಲಿದೆ. ಲೋಕಕಲ್ಯಾಣಕ್ಕಾಗಿ ಸದ್ಭಕ್ತಿ ಹಾಗು ಸದ್‌ವಿವೇಕ ಈ ನಾಡಿನಲ್ಲಿ ಹರಡಲಿದೆ" ಎಂದು ಆದೇಶಿಸಿದ.

ಸದ್ಭಕ್ತನಾಗಿದ್ದ ಶೇಷ್ಠಿ ವೇಮನಿಗೆ ಶಿವನ ಕರುಣೆ ಲಭ್ಯವಾಗಿತ್ತು: ಶಿವನ ಆದೇಶ ದೊರೆತಿದ್ದಿತು. ಆತ ತಡಮಾಡಲಿಲ್ಲ. ಮರುದಿನ ಎದ್ದು ನಿತ್ಯದ ಕರ್ಮಗಳನ್ನು ಮುಗಿಸಿ ಕೃಷ್ಣೆಯಲ್ಲಿ ಮಿಂದು ಶ್ರೀಮಲ್ಲಿಕಾರ್ಜುನನ ದರ್ಶನ ಪಡೆದು ಬೆಟ್ಟ ಏರಲು ಆರಂಭಿಸಿದ.

ಶಿವನ ಮೇಲಿನ ಅಚಲವಾದ ನಿಷ್ಠೆ; ಭಕ್ತಿ ಆತನನ್ನು ಧೈರ್ಯಶಾಲಿಯನ್ನಾಗಿ ಮಾಡಿದ್ದವು. ಕಾಡಿನಲ್ಲಿದ್ದ ಕ್ರೂರ ಪಶುಗಳ ಗರ್ಜನೆ ಆತನ ಮನೋಬಲ ತಗ್ಗಿಸಲಿಲ್ಲ.

ಶಿವನ ಕರುಣೆ ಇದ್ದಾಗ ಏತರ ಅಂಜಿಕೆ. ಶ್ರೇಷ್ಠಿ ಬೆಟ್ಟದ ತುದಿ ತಲುಪಿ ಅಲ್ಲಿದ್ದ ಏಕೈಕ ಬಿಲ್ವ ಪತ್ರದ ಮರದಡಿಯಲ್ಲಿ ಕುಳಿತು ಕೆಲ ಕಾಲ ಶಿವಧ್ಯಾನ ಮಾಡಿದ. ಮರದ ಬುಡದಲ್ಲಿ ನೆಲದಿಂದ ಪ್ರಕಾಶ ಹೊರಹೊಮ್ಮುತ್ತಿದ್ದ ಭಾಗವನ್ನು ಕಟ್ಟಿಗೆಯ ತುಂಡೊಂದರಿಂದ ಸ್ವಲ್ಪ ಅಗೆದ ತಕ್ಷಣ ಪ್ರಕಾಶ ಹೊರಹೊಮ್ಮುತ್ತಿದ್ದ " ಸ್ಪರ್ಶವೇದಿ" ಪುರುಷಮಣಿ ಗೋಚರಿಸಿತು. ಶಿವನನ್ನು ಧ್ಯಾನಿಸಿ ಆ ಮಣಿಯನ್ನು ತೆಗೆದುಕೊಂಡು ಶಿವಲಿಂಗವನ್ನು ಭದ್ರಪಡಿಸುವಂತೆ ಶುಭ್ರವಾದ ಬಟ್ಟೆಯಲ್ಲಿ ಭದ್ರವಾಗಿಟ್ಟು ಅದನ್ನು ಕಮಂಡಲದಲ್ಲಿರಿಸಿ ಶಿವನ ಆಜ್ಞೆಯನ್ನು ಪಾಲಿಸಲು ಅನುಮಕೊಂಡ ಗ್ರಾಮದತ್ತ ಪ್ರಯಾಣ ಬೆಳೆಸಿದ.

ಅನುಮಕೊಂಡದಲ್ಲಿಯೂ, ಶಿವನ ಕರುಣೆ ಪ್ರಕಟವಾಗಿದ್ದಿತು. ದೊಂತಿ ಅಳಿಯ ರೆಡ್ಡಿ ಒಬ್ಬ ಸಾತ್ವಿಕ ವ್ಯಕ್ತಿಯಾಗಿದ್ದ. ಆದರೆ ಜೀವನದಲ್ಲಿ ಬಹಳಷ್ಟುನೊಂದು ಬೆಂದು ಹೋಗಿದ್ದ. ಶಿವನ ಮೇಲಿನ ಆತನ ನಿಷ್ಠೆ ಭಕ್ತಿ ಮಾತ್ರ ಎಂದೂ ಕುಂದಿರಲಿಲ್ಲ. ಬಡತನ ಆತನ ಸಾತ್ವಿಕತೆಗೆ ಅಡ್ಡಿಯಾಗಿರಲಿಲ್ಲ. ಅನೇಕ ಮಕ್ಕಳ ಅಗಲುವಿಕೆ ಆತನನ್ನು ಭಗವದ್ ಭಕ್ತಿಯಿಂದ ವಿಚಲಿತನನ್ನಾಗಿ ಮಾಡಿರಲಿಲ್ಲ. ಅಳಿಯ ರೆಡ್ಡಿಯ ಅವಿಚಲಿತ ಭಕ್ತಿಗೆ ಮೆಚ್ಚಿದ ಭಗವಂತ ಆತನ ಕಷ್ಟಗಳನ್ನು ಪರಿಹರಿಸಲು ಆತನಿಗೆ ಕನಸಿನಲ್ಲಿ ದರ್ಶನ ಕರುಣಿಸಿ "ನಾಳೆ ನಿನ್ನ ಜೀವನದಲ್ಲಿ ಶುಭದಿನ. ಮುಂಜಾನೆ ನಿತ್ಯ ಕರ್ಮಗಳನ್ನು ಮುಗಿಸಿ ಮನೆಯನ್ನೆಲ್ಲಾ ಸ್ವಚ್ಛಗೊಳಿಸಿ ಅಂಗಳಕೆಲ್ಲ ಛಳಿಹೊಡೆದು ರಂಗವಲ್ಲಿ ಹಾಕಿಸಿ ಒಬ್ಬ ಸತ್ಪುರುಷನ ಬರುವಿಕೆಗಾಗಿ ದಾರಿ ನೋಡು. ಒಬ್ಬ ಸತ್ಪುರುಷ ನಿನ್ನ ಮನೆಗೆ ಬರುತ್ತಾನೆ. ಆತನನ್ನು ಪ್ರೀತಿಯಿಂದ ಭಕ್ತಿಯಿಂದ ಬರಮಾಡಿಕೊ, ಆದರೋಪಚಾರಮಾಡು ಹಾಗು ನಿನ್ನ ವಂಶದ ಕುಡಿಗೆ ಇನ್ನು ಮೇಲೆ ಆ ಸತ್ಪುರುಷನ ಹೆಸರನ್ನಿಡು" ಎಂದು ಆದೇಶಿಸಿದ.

ಶಿವನ ಕೃಪೆಗೆ ಪಾತ್ರನಾದ ಅಳಿಯರೆಡ್ಡಿ ಮುಂಜಾನೆ ಎದ್ದು ಶಿವನ ಆದೇಶವನ್ನು ಪತ್ನಿಗೆ ತಿಳಿಸಿ ಮನೆಯನ್ನು ಸ್ವಚ್ಛಗೊಳಿಸಿ ಅಲಂಕರಿಸಿ ಅಂಗಳ ಸಾರಿಸಿ ರಂಗವಲ್ಲಿ ಹಾಕಿಸಿ ಮಾಲೆ ಸಿದ್ಧವಾಗಿಟ್ಟುಕೊಂಡು ನಿಂತ. ಕಾರುಣ್ಯವೇ ರೂಪವೆತ್ತಿದ ತ್ಯಾಗಮೂರ್ತಿ ಶ್ರೇಷ್ಠಿ ವೇಮ ನೇರವಾಗಿ ಅಳಿಯರೆಡ್ಡಿ ಮನೆಯತ್ತ ನೋಡುತ್ತ ನಿಂತ. ಮುಂದೆ ಧಾವಿಸಿದ ಅಳಿಯರೆಡ್ಡಿ ಸತ್ಪುರುಷನಿಗೆ ಶರಣಾಗಿ ಪಾದಕ್ಕೆರಗಿ ಶಿವನ ಕರುಣೆಯಾಗಿದೆ. ತಾವು ಮನೆಗೆದಯಮಾಡಿಸಬೇಕೆಂದು ಪ್ರಾರ್ಥಿಸಿದ. ಶ್ರೇಷ್ಠಿ ವೇಮನಿಗೆ ಎಲ್ಲವೂ ಸ್ಪಷ್ಟವಾಗಿತ್ತು. ಆಜ್ಞೆಯಂತೆ ಅಳಿಯ ರೆಡ್ಡಿಗೆ ಸ್ಪರ್ಶವೇದಿ ಪುರುಷ ಮಣಿ ನೀಡಿ ಶಿವನ ಆಶಯವನ್ನು ಅರುಹಿದ. ಆಳಿಯರೆಡ್ಡಿ ದಂಪತಿಗಳು ನೀಡಿದ ಆದರಾತಿಥ್ಯಗಳನ್ನು ಆದರದಿಂದ ಸ್ವೀಕರಿಸಿದ. ಶ್ರೇಷ್ಠಿ ವೇಮ ಶಿವನ ಆದೇಶ ಪಾಲಿಸಿದ. ಕೃತಾರ್ಥಭಾವದಿಂದ ಅಲ್ಲಿಂದ ತೆರಳುವ

ಪೂರ್ವ ಅಳಿಯರೆಡ್ಡಿಗೆ ಹರಿಸಿ ಲೋಕಕಲ್ಯಾಣದ ಕೆಲಸದಲ್ಲಿ ಭಗವಂತನ ಲೀಲೆಯಲ್ಲಿ ಪಾತ್ರವಹಿಸಿದ್ದಕ್ಕಾಗಿ ಅಭಿನಂದಿಸಿ ಪ್ರಯಾಣಿಸಿದ.

ವ್ಯವಹಾರಿಕವಾಗಿ ಬುದ್ಧಿಶಾಲಿಯಾಗಿದ್ದ ಅಳಿಯರೆಡ್ಡಿ ಬಡತನಕ್ಕೆ ವಿದಾಯ ಹೇಳಿದಂತೆಯೇ ಅನುಮಗೊಂಡ ಗ್ರಾಮಕ್ಕೆ ವಿದಾಯ ಹೇಳಿದ. ಗುಂಟೂರು ಜಿಲ್ಲೆಯ 'ಕೊಂಡವೀಡು' ಪಟ್ಟಣಕ್ಕೆ ವಾಸ್ತವ್ಯ ಬದಲಿಸಿದ. ಪುರುಷವೇದಿ ಬಳಸಿ ಲೋಹಗಳನ್ನು ಸುವರ್ಣವನ್ನಾಗಿ ಪರಿವರ್ತಿಸುತ್ತ ಶ್ರೀಮಂತಿಕೆಯಲ್ಲಿ ಮೆರೆದು ಅಪಾರ ಆಸ್ತಿಪಾಸ್ತಿ ಸಂಪಾದಿಸಿದ. ಶಿವಭಕ್ತನಾಗಿದ್ದ ಅಳಿಯರೆಡ್ಡಿಗೆ ಅಲ್ಲಾಡರೆಡ್ಡಿ ಎಂದೂ ಕರೆಯುತ್ತಿದ್ದರು. ಜನಹಿತ ಕೆಲಸಗಳಲ್ಲಿ ತನ್ನನು ತಾನು ತೊಡಗಿಸಿಕೊಂಡಿದ್ದ. ಅಳಿಯರೆಡ್ಡಿ ಜನಪ್ರೀತಿ, ಜನಾನುರಾಗ ಗಳಿಸಿದ. ಭೋಗದಿಂದ ವಿರಕ್ತನಾದ ಅಳಿಯರೆಡ್ಡಿಗೆ ಲೌಕಿಕಭೋಗಕ್ಕಿಂತ ಅಲೌಕಿಕವಾದ ಸಾತ್ವಿಕತೆಯ ಮಹತ್ವ ತಿಳಿದಿತ್ತು. ಮನೆತನಕ್ಕೆ ಸಾಕಷ್ಟು ಸಂಪತ್ತು ಸಂಗ್ರಹವಾಗಿತ್ತು. ಎಷ್ಟು ಸಂಪತ್ತು ಸಂಗ್ರಹಿಸಿದರೂ ಅದಕ್ಕೆ ಕೊನೆ ಇಲ್ಲ. ಆದರೂ ಅದು ಶಾಶ್ವತವೂ ಅಲ್ಲವೆಂಬ ಸತ್ಯ ದರ್ಶನ ಮಾಡಿಕೊಂಡಿದ್ದ ಅಳಿಯರೆಡ್ಡಿ ಪುರುಷವೇದಿ ಬಳಕೆ ನಿಲ್ಲಿಸಿದ್ದ. ಅನಂತರ ಆತ ಬಹುಕಾಲ ಬಾಳಲಿಲ್ಲ. ಆತನ ನಂತರ ಆತನ ಪುತ್ರ ಪ್ರೋಲಯ ವೇಮಾರೆಡ್ಡಿ ಧೈರ್ಯಶಾಲಿ ಸಾಹಸಿಯಾಗಿ ಕೀರ್ತಿಗಳಿಸಿದ.

❖❖❖

## ೩. ರಾಜಕೀಯ ಪರಿಸ್ಥಿತಿ

ಇಂದಿನ ಆಂಧ್ರಪ್ರದೇಶ – ತೆಲುಗು ಭಾಷಿಕ ಪ್ರದೇಶವನ್ನು ಮೂರು ಶತಮಾನ ಕಾಲ ಆಳಿದ ಕಾಕತೀಯ ಅರಸರು ೧೩೦೯ ರಲಿ ಮಲ್ಲಿಕಾಫರನ ದಾಳಿಗೆ ತತ್ತರಿಸಿದ್ದರು. ಮಹಮ್ಮದ್‌ಬಿನ್ ತಘಲಕ್‌ನ ಕಾಲದಲ್ಲಿ ಆದ ಭಾರಿ ದಾಳಿಯಲ್ಲಿ ಕಾಕತೀಯ ಅರಸು ವಾರಂಗಲ್ಲದ ಪ್ರತಾಪರುದ್ರ ಸೋತು ಸೆರೆ ಸಿಕ್ಕ. ಸೆರೆಯಾಳಾಗಿ ದಿಲ್ಲಿಗೆ ಹೋಗುವ ಮಾರ್ಗ ಮಧ್ಯದಲ್ಲಿಯೇ ಅಸುನೀಗಿದ. ಕಾಕತೀಯ ಸಾಮ್ರಾಜ್ಯ ಪತನವಾದ ನಂತರ ಆಂಧ್ರದಾದ್ಯಂತ ಸಣ್ಣ ಪುಟ್ಟ ಅರಸು ಮನೆತನಗಳು ಹುಟ್ಟಿಕೊಂಡವು. ರಾಜಕೀಯನಾಗಿ ಅರಾಜಕ ಪರಿಸ್ಥಿತಿಯಲ್ಲಿ ಧೈರ್ಯಶಾಲಿಯಾದ ಪ್ರೋಲಯ ವೇಮಾರೆಡ್ಡಿ ಆದ್ದಂತಿಯನ್ನು ರಾಜಧಾನಿಯಾಗಿ ಮಾಡಿಕೊಂಡು ೧೩೨೪ ರಲಿ ಸ್ವತಂತ್ರ ರಾಜ್ಯವನ್ನು ಸ್ಥಾಪನೆ ಮಾಡಿದ.

ಪ್ರೋಲಯ ವೇಮಾರೆಡ್ಡಿಯು ರಾಜ್ಯ ಸ್ಥಾಪನೆ ಮಾಡಿದ ಹನ್ನೆರಡು ವರ್ಷಗಳ ನಂತರ ದಿಲ್ಲಿ ಆಡಳಿತದಲ್ಲಿ ಸೈನ್ಯಾಧಿಕಾರಿಯಾಗಿ ಅನುಭವಗಳಿಸಿದ್ದ ಹಕ್ಕ ಬುಕ್ಕ ಎಂಬ ಸಹೋದರರು ಮಹಾತಪಸ್ವಿ ವಿದ್ಯಾರಣ್ಯರ ಅನುಗ್ರಹದಿಂದ ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರು.

ರೆಡ್ಡಿಯವರು – ವಿಜಯನಗರದ ಅರಸು ಹಿಂದೂ – ಧರ್ಮದ ಪಾಲಕರಾಗಿ ಅದರ ರಕ್ಷಣೆಗೆ ಅರ್ಪಿತರಾದರು. ರೆಡ್ಡಿಯವರು ಮೊದಲು ವೇದ ಸಮ್ಮತ ಶೈವ ಧರ್ಮಪಾಲನೆ ಮಾಡಿದರೆ ಮುಂದೆ ಭಾಗವತ ಪಂಥಾನುಯಾಯಿಗಳಾದರು.

ರೆಡ್ಡಿ ರಾಜರಲ್ಲಿ ಪ್ರೋಲಯ ವೇಮಾರೆಡ್ಡಿಯ ನಂತರ ಅವನ ಮಗ ಅನಪೋತರೆಡ್ಡಿ (ಕ್ರಿ.ಶ. ೧೩೫೦ – ೧೩೬೧) ಪಟ್ಟಕ್ಕೇರಿದನು. ಅವನ ನಂತರ ಅವನ ಮಗನಾದ ಕೊಮರುಗಿರಿ ರೆಡ್ಡಿಯು (ಕುಮಾರಗಿರಿರೆಡ್ಡಿ) ಅಲ್ಪವಯಿಯಾಗಿದ್ದುರಿಂದ ಕಕ್ಕನಾದ ಅನವೇಮಾರೆಡ್ಡಿಯೇ (ಕ್ರಿ. ಶ. ೧೩೬೨– ೧೩೮೦) ಪಟ್ಟವೇರಿದನು. ಅನವೇಮಾರೆಡ್ಡಿಗೆ ಗಂಡು ಮಕ್ಕಳಿರಲಿಲ್ಲ. ಅನವೇಮಾರೆಡ್ಡಿ ಮರಣದ ಬಳಿಕ ಕೊಮರುಗಿರಿ ರೆಡ್ಡಿಯೇ (೧೩೮೦ – ೧೪೦೦) ಪಟ್ಟವೇರಿದನು. ಈ ದೊರೆಯು ಶೃಂಗಾರ ಪ್ರಿಯ ರಸಿಕನೂ, ಬರೆಹಗಾರನೂ ಆದುದರಿಂದ ರಾಜ್ಯಭಾರದತ್ತ ಹೆಚ್ಚು ಆಸಕ್ತನಿರಲಿಲ್ಲ. ಹೀಗಾಗಿ ತನ್ನ ಸೋದರಿ ಮಲ್ಲಾಂಬೆಯ ಗಂಡ ಕಾಟಮ ವೇಮಾರೆಡ್ಡಿಯನ್ನು ಪ್ರಧಾನ ಅಮಾತ್ಯನನ್ನಾಗಿ ನೇಮಿಸಿಕೊಂಡನು.

— — — — — — — — — — — — — — — — — — — — — —

ಸಾಲದೆ, ತನಗೆ, ಇದ್ದೊಬ್ಬ ಪುತ್ರನು ಮೃತನಾದುದರಿಂದ ರಾಜಮಹೇಂದ್ರವರಂ ಹಾಗೂ ಸುತ್ತಮುತ್ತಿನ ಪ್ರದೇಶವನ್ನು ಜಹಗೀರು ನೀಡಿ, ಕಾಟಮ ವೇಮನನ್ನು ಸತ್ಕರಿಸಿದನು. ಈ ಕೃತಿಯು ದಾಯಾದಿಗಳ ಮತ್ಸರದ ಜ್ವಾಲೆಗೆ ಎಣ್ಣೆ ಸುರಿದಂತಾಯಿತು. ಸಾಲದ್ದಕ್ಕೆ ೧೩೯೬ ರಲ್ಲಿ ಭೀಕರ ಬರಗಾಲ ಬಿದ್ದು ಕ್ಷೋಭೆಯುಂಟಾಯಿತು. ಈ ಅಸಂತೋಷವನ್ನೇ ಉಪಯೋಗಿಸಿಕೊಂಡು, ದಾಯಾದಿ ಅಂದರೆ ಪ್ರೋಲಯ ವೇಮನ ತಮ್ಮನ ಮೊಮ್ಮಗನಾದ ಕೊಮಟಿ ವೇಮನು (೧೪೦೦ – ೧೪೨೦) ರಾಜ್ಯವನ್ನು ಆಕ್ರಮಿಸಿಕೊಂಡು, ಪಟ್ಟವೇರಿದನು. ಅವನ ನಂತರ ಮಗನಾದ ರಾಚವೇಮಾರೆಡ್ಡಿ ನಾಲ್ಕು ವರ್ಷ ರಾಜ್ಯವಾಳಿ ಆಂತರಿಕ ಕಲಹದಲ್ಲಿ ಅಸು ನೀಗಿದನು. ರಾಜ್ಯವು ವಿಜಯನಗರ ರಾಜ್ಯದಲ್ಲಿ ವಿಲೀನಗೊಂಡಿತು.

❖❖❖

# ೪. ವೇಮನನ ಜನನ

ದೊರೆ ಕೊಮರುಗಿರಿರೆಡ್ಡಿ (ಕುಮಾರಗಿರಿರೆಡ್ಡಿ) ತನ್ನ ವೈಯಕ್ತಿಕ ದೌರ್ಬಲ್ಯಗಳಿಂದ ರಾಜ್ಯವನ್ನು ಕಳೆದುಕೊಂಡು ಬಳಿಕ ಮೂಗಚಿಂತಪಲ್ಲೇ ಗ್ರಾಮದ ಹೊರವಲಯದಲ್ಲಿಯ ತೋಟದಲ್ಲಿ ಮನೆಕಟ್ಟಿಕೊಂಡು ವಾಸಮಾಡಲಾರಂಭಿಸಿದ. ಪದಚ್ಯುತ ದೊರೆಯ ಏಕೈಕ ಪುತ್ರ ಅನಪೋತ ವೇಮನ ಅಕಾಲಿಕ ಸಾವನ್ನಪ್ಪಿದ. ದೊರೆ ಕೊಮರುಗಿರಿಡ್ಡಿಗೆ ರಾಜ್ಯವೂ ಇಲ್ಲ– ರಾಜ್ಯಭಾರವೂ ಇಲ್ಲ – ಸುಖವೂ ಇಲ್ಲ. ಧೈವಭಕ್ತಿ ಹೆಚ್ಚಲು ಇನ್ನೇನು ಬೇಕು. ದೊರೆ ಪುಣ್ಯಕ್ಷೇತ್ರಗಳನ್ನೆಲ್ಲ ಸಂಚರಿಸಲಾರಂಭಿಸಿದ. ತೀರ್ಥಯಾತ್ರೆಗಳನ್ನು ಕೈಕೊಂಡ. ರೆಡ್ಡಿಯ ಜೀವನದಲ್ಲಿ ಮತ್ತೆ ಸಂತಸದ ಪ್ರವೇಶವಾಯಿತು. ಮಲ್ಲಮ್ಮ ಗರ್ಭವತಿಯಾದಳು. ಹತ್ತು ತಿಂಗಳು ಕಾಲ ಪುತ್ರನನ್ನು ಹೊಟ್ಟೆಯಲ್ಲಿ ಹೊತ್ತು ಮಲ್ಲಮ್ಮ ಗಂಡು ಮಗುವನ್ನು ಹೆತ್ತಾಗ ಕುರುಡನಿಗೆ ಕಣ್ಣು ಬಂದಷ್ಟು ಸಂತಸವಾಯಿತು ದೊರೆಗೆ. ಬತ್ತಿದ ಹೊಳೆಯಲ್ಲಿ ಹೊಸ ನೀರು ಹರಿದಂತೆ ಮನೆಯಲ್ಲಿ ಸಂತಸದ ಪ್ರವಾಹ ಬಂದಿತು.

ವೇಮನನ ಸೋದರತ್ತೆ ರಾಜಮಹೇಂದ್ರದ ರಾಣಿ ಮಲ್ಲಾಂಬೆ ಅಣ್ಣನ ಮಗನನ್ನು ನೋಡಿ ಆನಂದಿಸಲು, ಹರಿಸಲು ಮೂಗ ಚಿಂತಪಲ್ಲೆಗೆ ಆಗಮಿಸಿದಳು. ಹುಟ್ಟಿದ ಮಗುವಿನ ನಕ್ಷತ್ರವು ಕಾರ್ತಿಕ ಶುದ್ಧ ಪೂರ್ಣಿಮೆಯಾಗಿದ್ದೀತು. ಮುಂಜಾನೆಯ ಆರು ಗಂಟೆಯ ಸಮಯ.

ಜ್ಯೋತಿಷಿಗಳು ಮಗುವಿನ ಕುಂಡಲಿ ಹಾಕಿದರು. ದೊರೆಸಾನಿ ಮಲ್ಲಾಂಬೆ ಜ್ಯೋತಿಷಿಗಳಿಗೆ ಮಗುವಿನ ಕುಂಡಲಿ ಏನು ಹೇಳುತ್ತಿದೆಯೆಂದು ವಿಚಾರಿಸಿದಾಗ ಜ್ಯೋತಿಷ್ಯ ಶಾಸ್ತ್ರ, ಪಾರಂಗತರಾಗಿದ್ದ ಅವರು " ಈ ಮಗು ಮಹಾಯೋಗಿಯಾಗುವ ಯೋಗವಿದೆ. ಅವನು ಮಹಾ ಕವಿ ಆಗುವ ಸಾಧ್ಯತೆಯೂ ಇದೆ" ಎಂದರು.

ವಿಧಿ ಈಗಾಗಲೇ ರಾಜ್ಯ ಸೆಳೆದಿತ್ತು. ಈಗ ಇರುವ ಏಕೈಕ ಆಶಾಕಿರಣ ಪುತ್ರನನ್ನು ಮನೆಯಿಂದ ದೂರ ಮಾಡುವ ಯೋಗಿಯ ಮಾತು ಬಾಣಂತಿ ಮಲ್ಲಮ್ಮನಿಗೆ ಆತಂಕ ಮೂಡಿಸಿತು. ಅವಳ ಮುಖ ಬಾಡಿತು.

ದೊರೆಸಾನಿ ಮಲ್ಲಾಂಬೆ ದೈವಭಕ್ತಳಾಗಿದ್ದಳು. ಸಂಸಾರ ಸುಖದಲ್ಲಿ ಮುಳುಗುವ ಸಾಮಾನ್ಯ ವ್ಯಕ್ತಿಯಾಗುವದಕ್ಕಿಂತ ಮಹಾಯೋಗಿಯಾಗುವುದು ಅವಳಿಗೆ ಪ್ರಿಯವೆನಿಸಿದರೂ ಅದನ್ನು ತೋರ್ಪಡಿಸಲಿಲ್ಲ. ಶಿಲ್ಪಶಾಲೆಯಲ್ಲಿ ದೇವಮೂರ್ತಿ ನಿರ್ಮಾಣದಲ್ಲಿ ಮಗ್ನನಾಗಿದ್ದ ಅಣ್ಣನಿಗೆ ಜ್ಯೋತಿಷ್ಯದ ವಿಷಯ ತಿಳಿಸಿದಳು. ಕೆಲಕಾಲ ಚಿಂತಿತನಾಗಿದ್ದ ರೆಡ್ಡಿ " ಅಹುದೇ ! ಮಹಾಯೋಗಿ ಯಾಕಾಗಬಾರದು ? ಕೆಸರಿನಲ್ಲಿ ತಾನೆ ಕಮಲ ಹುಟ್ಟುವದು" ಎಂದು ಗಂಭೀರ ಪ್ರತಿಕ್ರಿಯೆ ವ್ಯಕ್ತಪಡಿಸಿದ. ಯೋಗಿಯಾಗುವವನೋ, ಕವಿಯಾಗುವವನೋ ಎರಡೂ ಆಗುವವನೋ ಎಂದು

ಅಣ್ಣ ತಂಗಿ ಚರ್ಚಿಸುತ್ತಲೇ ಮಗುವಿಗೆ 'ವೇಮಾರೆಡ್ಡಿ' ಎಂದು ಹೆಸರಿಡಲು ನಿರ್ಧರಿಸಿದರು.

**ಕಾಟಯ ವೇಮಾರೆಡ್ಡಿಯ ಮರಣ:**

ವೇಮನನಿನ್ನೂ ಎರಡು ವರುಷಗಳ ಹಸುಳೆ. ರೆಡ್ಡಿ ರಾಜ್ಯಗಳ ದಾಯಾದಿ ಕಲಹ ನಂದಿರಲಿಲ್ಲ. ರಾಜಮಹೇಂದ್ರವರಂ ದೊರೆ ಕಾಟಯವೇಮಾರೆಡ್ಡಿಯು ಕೊಂಡವೀಡಿನ ಪೆದಕೊಮಟಿ ವೇಮನ ಆದಿಪತ್ಯಕೆ ಅಂಕಿತನಾಗಿರಲಿಲ್ಲ. ಕೊನೆಗೆ ಕ್ರಿ.ಶ. ೧೪೧೪ ರ ಸುಮಾರಿಗೆ ಭಾರಿ ಸೇನೆಯೊಂದಿಗೆ ಪೆದಕೊಮಟಿ ವೇಮನು ರಾಜಮಹೇಂದ್ರದ ಮೇಲೆ ದಂಡೆತ್ತಿ ಬಂದನು. ಘೋರ ಯುದ್ಧ ನಡೆದು ಕಾಟಯ ವೇಮನು ವೀರ ಸ್ವರ್ಗ ಪಡೆದನು. ಕಾಟಯ ವೇಮನು ಮಡಿದನಷ್ಟೇ ಹೊರತು, ರಾಜಮಹೇಂದರವರಂದ ಶಕ್ತಿ ಕುಂದಲಿಲ್ಲ. ಕಾಟಯ ವೇಮನ ಬಳಗದವನಾದ, ಮತ್ತು ಕೊಂಡವೀಡು ರಾಜ ಕುಟುಂಬದ ಬೀಗನಾದ, ಅಲ್ಲಾಡರೆಡ್ಡಿ ರಾಜ್ಯಭಾರ ಹೊರಲು ಮುಂದಾದನು. ಈ ಅಲ್ಲಾಡರೆಡ್ಡಿಯು ಕೊಂಡವೀಡಿನ ಹಿಂದಿನ ದೊರೆ ಅನವೇಮಾರೆಡ್ಡಿಯ ಮಗಳಾದ ವೇಮಾಂಬೆಯನ್ನು ಮದುವೆಯಾಗಿದ್ದನು. ಇತ್ತ ತನ್ನ ಎರಡನೆಯ ಮಗ ವೀರಭದ್ರಾರೆಡ್ಡಿಗೆ ಕಾಟಯವೇಮಾರೆಡ್ಡಿ –ಮಲ್ಲಾಂಬೆಯರ ಕುಮಾರಿ ಅನತಲ್ಲಿ ಊರ್ಫನರಸಾಂಬೆಯೊಂದಿಗೆ ಮದುವೆ ಮಾಡಿದ್ದನು. ಮೇಲಾಗಿ, ಕಾಟಯ ವೇಮನ ನಿಧನದ ನಂತರ ಅವನ ಏಕಮೇವ ಪುತ್ರನಾದ ಕುಮಾರಗಿರಿಯು ಇನ್ನೂ ಪ್ರಾಪ್ತವಯಸ್ಕನಾಗಿರಲಿಲ್ಲ. ಹೀಗಾಗಿ, ಕಾಟಯವೇಮನ ಅಲ್ಪವಯಿ ವಾರಸುದಾರನ ಪರವಾಗಿ, ರಾಜಮಹೇಂದ್ರವರಂ ರಾಜ್ಯಾಧಿಕಾರವನ್ನು ತಾನೇ ವಹಿಸಿಕೊಂಡನು. ಇವನು ಅಪ್ರತಿಮ ಶೂರನು. ಆದರೆ ಕೊಂಡವೀಡಿನ ದೊರೆ ಕೊಮಟಿ ವೇಮನು ತನಗೆ ಕಂಟಕವಾದ ಈ ರಾಜಮಹೇಂದ್ರವರಂ ರಾಜ್ಯವನ್ನು ಕಾಟಯ ವೇಮನ ಕಾಲಕ್ಕೆ ಸೋಲಿಸಲಾಗದಿದ್ದರೂ, ಅವನ ಮರಣಾನಂತರ, ಬಹಮನೀ ಸುಲ್ತಾನನೊಡನೆ ಒಟ್ಟಾಗಿ ಸೇರಿ, ಸೋಲಿಸಲು ಪ್ರಯತ್ನಿಸಿದನು. ಆದರೆ, ಅಲ್ಲಾಡರೆಡ್ಡಿ ಸೇರಾಗಿ, ರಾಮೇಶ್ವರ ಎಂಬಲ್ಲಿ ಆ ಮಹಾ ಸೇನೆಯನ್ನು ಸೋಲಿಸಿ ಓಡಿಸಿದನು. ಅಲ್ಲಾಡ ರೆಡ್ಡಿಯ ಆಳ್ವಿಕೆಯ ಕಾಲದಲ್ಲಿಯೇ ಕಾಟಯ ವೇಮನ ಮಗನಾದ ಕುಮಾರಗಿರಿಯು ಬೇನೆಗೆ ತುತ್ತಾಗಿ ಅಸು ನೀಗಿದನು. ಮೊದಲೇ ದೈವಭಕ್ತೆಯಾದ ರಾಣಿ ಮಲ್ಲಾಂಬೆ ಪುತ್ರವಿಯೋಗದಿಂದ ಇನ್ನಷ್ಟು ವಿರಕ್ತಳಾದಳು. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಜೀರ್ಣೋದ್ಧಾರ, ಮಹಾದ್ವಾರಗಳ ನಿರ್ಮಾಣ, ಪ್ರಸ್ತಗಳನ್ನು ನಡೆಸುವುದರಲ್ಲಿ ಹೆಚ್ಚಿನ ಸಮಯ ಕಳೆದಳು.

ಅಲ್ಲಾಡರೆಡ್ಡಿ ಅರಸನಾದಾಗ ವೇಮನ ಎರಡು ವರುಷದ ಕೂಸು. ಕಾಟಯ ವೇಮನ ಮರಣಾನಂತರ ಮತ್ತು ಅಲ್ಲಾಡರೆಡ್ಡಿಯು ರಾಜ್ಯ ಭಾರವನ್ನು ಭದ್ರಪಡಿಸಿದ ನಂತರ, ಕೊಮಟಿ ವೇಮಾರೆಡ್ಡಿ, ಮಾಜಿ ದೊರೆ ಕೊಮರುಗಿರಿಯು

ಕುಟುಂಬದೊಡನಿರುವ ಮತ್ಸರವನ್ನು ನೀಗಿದ್ದನು. ಹೀಗಾಗಿ, ಸಂಗೀತ, ನೃತ್ಯಲೋಲನಾಗಿದ್ದ, ಶಿಲ್ಪ ಕಲೋಪಾಸಕನಾಗಿದ್ದ ಕುಮಾರಗಿರಿ ವೇಮ ದೊರೆಯ ಕುಟುಂಬವು ಕೊಂಡವೀಡಿನಲ್ಲಿ ಪುನರ್ನೆಲೆಸಲು ವಿರೋಧಿಸಲಿಲ್ಲ. ಬಾಲ ವೇಮನ ಹಳ್ಳಿಯ ಪರಿಸರದಿಂದ ಪುರದ ಪರಿಸರಕ್ಕೆ ಹೊಂದಿಕೊಳ್ಳತೊಡಗಿದನು. ಆಗೀಗ ಸೋದರತ್ತೆ ಮಲ್ಲಾಂಬೆಯಲ್ಲಿಗೆ ಹೋಗಿಬರುತ್ತಿದ್ದ. ಅದೇ ಕಾಲಕ್ಕೆ ನರಸಾಂಬೆಯೊಂದಿಗೆ ಆತ್ಮೀಯ ಪರಿಚಯವೂ ಬೆಳೆಯಿತು.

ವೇಮನ ಮುದ್ದಾದ ಬಾಲಕ. ಕೊಂಡವೀಡುನಲ್ಲಿಯೇ ಇರಲಿ, ರಾಜಮಹೇಂದ್ರದಲ್ಲಿಯೇ ಇರಲಿ, ರಾಜಪರಿವಾರದ ಪರಿಪಾಠದಂತೆ, ಮನೆಯಲ್ಲಿಯೇ ಶಿಕ್ಷಣ ನಡೆಯಿತು. ವೇಮನನಿಗಿನ್ನೂ ಎಂಟರ ಎಳೆಯ ಪ್ರಾಯ. ರಾಜಮಹೇಂದ್ರವರಂ ದೊರೆ ಅಲ್ಲಾಡರೆಡ್ಡಿ ನಿಧನದ ನಂತರ ಕೂಡಲೇ ಅವನ ಅಣ್ಣನು ಮೂರು ವರ್ಷ ರಾಜ್ಯಭಾರ ನಡೆಸಿದನು. ಕ್ರಿ.ಶ. ೧೪೨೩ ರಲ್ಲಿ ಅಲ್ಲಾಡರೆಡ್ಡಿಯ ಹಿರಿಯ ಮಗ ವೇಮಾರೆಡ್ಡಿಯು ತನ್ನ ಜಾತಿ ಬಂಧುಗಳನ್ನು ಹೊರದಬ್ಬಿ, ರಾಜಮಹೇಂದ್ರವರಂ ರಾಜ್ಯವನ್ನು ಮರಳಿ ಸಂಪಾದಿಸಿದನು. ಆದರೆ, ವೇಮಾರೆಡ್ಡಿಯು ಹೆಚ್ಚಾಗಿ ನಿಸ್ವಾರ್ಥಿಯಾಗಿದ್ದನು. ಮೇಲಾಗಿ ದೂರ ದೃಷ್ಟಿಯವನಾಗಿದ್ದನು ಮತ್ತು ಭ್ರಾತೃವಾತ್ಸಲನಾಗಿದ್ದನು. ಹೀಗಾಗಿ, ಕಾಟಯ ವೇಮನ ಮಗಳ ಗಂಡನಾದ, ತನ್ನ ತಮ್ಮ ವೀರಭದ್ರಾರೆಡ್ಡಿಗೆ ಅರಸೊತ್ತಿಗೆ ಸಲ್ಲಬೇಕೆಂದು ವೇಮಾರೆಡ್ಡಿ ನಿರ್ಧರಿಸಿದನು. ತಾನು ತಮ್ಮನಿಗೆ ಅಂಕಿತನಾಗಿ ರಾಜ್ಯಭಾರವನ್ನು ನಿರ್ವಹಿಸತೊಡಗಿದನು. ಮುಂದೆ ಕ್ರಿ.ಶ. ೧೪೨೪ ರಲ್ಲಿ ಕೊಂಡವೀಡು ರಾಜ್ಯವು ನಶಿಸಿದ ಬಳಿಕ ಪದ್ಮನಾಯಕರು, ವಿಜಯನಗರದ ರಾಯರೊಂದಿಗೆ ಸೇರಿ, ಪೂರ್ವತೀರ ಪ್ರದೇಶವನ್ನು ಗೆದ್ದಕೊಂಡರು. ಹೀಗಾಗಿ, ರಾಜಮಹೇಂದ್ರ ರಾಜ್ಯವು ವಿಜಯನಗರ ರಾಯರ ಸಾಮಂತಿಕೆಯನ್ನು ಒಪ್ಪಿಕೊಳ್ಳಬೇಕಾದರೂ ಇದು ಕೇವಲ ನಾಮ ಮಾತ್ರವಿತ್ತು.

**ಕಿಶೋರಾವಸ್ಥೆ :**

ವೇಮನನು ಕೊಂಡವೀಡುವಿನಲ್ಲಿ ಬೆಳೆಯುತ್ತಿದ್ದನು. ಅವನಿಗೀಗ ಇಪ್ಪತ್ತರ ಏರುಜವ್ವನ. ಈ ಮುನ್ನ ಇವ್ವಟೂರಿ ಸೋಮಶೇಖರ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡಿದನು. ಕವಿ ಬೊಮ್ಮೆರ ಪೋತೆನನು ಅದೇ ಗುರುಪೀಠದಲ್ಲಿ ಅರಳಿದ ಹೂವು. ವೇಮನ ಶಾಲೆಯ ಓದಿನಲ್ಲಿ ನಿರಾಸಕ್ತ; ಪ್ರಕೃತಿ ಸೌಂದರ್ಯ ಸವಿಯುತ್ತ, ಹೊಳೆ – ಹಳ್ಳಗಳ ಹರಿತ, ಪಶು – ಪಕ್ಷಿಗಳ ಓಡಾಟ ಹಾರಾಟಗಳಲ್ಲಿ ಮನಸ್ಸನ್ನು ಮಗ್ನವಾಗಿಸಿದ್ದ. ತನ್ನ ಕುಟುಂಬದ ಏಳುಬೀಳುಗಳನ್ನೂ, ಯಾದವೀ ಕಲಹಗಳನ್ನೂ, ಮತ್ತು ಅಧಿಕಾರ ದಾಹದಿಂದ ಪರಸ್ಪರ ಕತ್ತು ಹಿಸುಕುವುದನ್ನೂ ಕಣ್ಣಾರೆ ಕಂಡು, ಕಿವಿಯಾರೆ ಕೇಳಿ, ಅವನ ಮನಸ್ಸು ವಿಹ್ವಲಗೊಂಡಿತ್ತು. ಸೋಮಶೇಖರ ಗುರುಗಳು

ತುಂಬಾ ಪ್ರಭಾವಿಗಳು. ಆಯಾ ಶಿಷ್ಯರಲ್ಲಿ ಹುದುಗಿದ ಸುಪ್ತ ಚೇತನವನ್ನು ಬಡಿದೆಬ್ಬಿಸುವವರು. ವೇಮನನಲ್ಲಿ ಕವಿಯಾಗುವ ಸುಪ್ತ ಚೇತನವಿದೆಯೆಂಬುದನ್ನು ಅವರು ಕಂಡರಿತಿದ್ದರು. ಅವನಿಗೆ ಅದೇ ದಾರಿಯಲ್ಲಿ ಹೋಗುವಂತೆ ಅನುವು ಮಾಡಿಕೊಟ್ಟರು.

**ಮೋಹದ ಮಡುವಿನಲ್ಲಿ :**

ವೇಮನ ಗುರುಕುಲ ವಾಸದಿಂದ ಬೇಗ ಮರಳಬೇಕಾಯಿತು. ಏಕೆಂದರೆ, ಅವನ ಸೋದರತ್ತೆಯ ಮನೆಯಲ್ಲಾದ ರಾಜಕೀಯ ಸ್ಥಿತ್ಯಂತರಗಳು ಅವನ ಮನಸ್ಸಿನ ಮೇಲೆ ತೀರ ಆಘಾತವನ್ನುಂಟುಮಾಡಿದವು. ಯುದ್ಧಗಳು ಅವ್ಯಾಹತವಾಗಿ ಸಾಗಿ, ರಾಜ್ಯ ವಿಸ್ತಾರ ದಾಹದಿಂದ ಅಮಾನುಷ ಕೃತ್ಯಗಳು, ಸಂಚು – ಹೊಂಚುಗಳು, ವಿಶ್ವಾಸದ್ರೋಹಗಳು ಆ ಎಳೆಯ ಮನಸ್ಸನ್ನು ತುಂಬಾ ವ್ಯಾಕುಲಗೊಳಿಸಿದ್ದವು. ಮೇಲಾಗಿ, ತಂದೆಯು ತನ್ನ ಪ್ರೇಯಸಿಯ ಜೊತೆಗೆ ನೃತ್ಯ – ಸಂಗೀತಗಳಲ್ಲಿ ಲೋಲನಾಗಿ, ತನ್ನ ಹಿಂದಿನ ರಾಜಭೋಗದಲ್ಲಿ ಮೆರೆಯುವುದನ್ನು ಕಂಡಿದ್ದನು. ಹೀಗೆ ತಂದೆಯ ಪ್ರೇಯಸಿ ಲಕುಮಾದೇವಿಯ ಮನೆಯ ಪರಿಸರದಲ್ಲಿ, ದೇವದಾಸಿ ಕನ್ಯೆಯರ ಸ್ನೇಹದಲ್ಲಿ, ವೇಮನ ಸಿಲುಕಿಕೊಂಡ. ಸ್ಫುರದ್ರೂಪಿ ದೇಹ; ಸುಂದರ ಮುಖ, ಕಾವ್ಯ ರಚನೆಯ ಸೂಕ್ಷ್ಮ ದೃಷ್ಟಿ, ಇವು ವೇಮನನನ್ನು ಹೆಚ್ಚು ಭಾವುಕನನ್ನಾಗಿ ಮಾಡಿದವು. ಮೇಲಾಗಿ, ಇಪ್ಪತ್ತರ ಏರು ಜವ್ವನ ! ದೇವದಾಸಿ ಕನ್ಯೆಗೆ ಬೇರಿನ್ನೇನು ಬೇಕು ? ಓರ್ವ ಸುಂದರ ದೇವದಾಸಿ ಕನ್ಯೆ ವೇಮನನನ್ನು ಮೆಚ್ಚಿದಳು. ವೇಮನನೂ ಅವಳ ರೂಪ ಲಾವಣ್ಯವನ್ನೂ, ಗಾಡಿಮೋಡಿಯನ್ನೂ, ಸುಖಭೋಗದಲ್ಲಿ ತನ್ನ ಮೈಯನ್ನು ಮನಸಾರೆ ನೀಡುವದನ್ನೂ ಕಂಡುಕೊಂಡನು. ಬಿಸಿಗೆ ಬೆಣ್ಣೆ ಕರಗದಿದ್ದೀತೇ? ಜವನಿಕೆ ಕಾಮಾಸಕ್ತಿಯಲ್ಲಿ ಮೈಮರೆಯಿತು. ಮನಸ್ಸಿನ ದುಗುಡವನ್ನು ಕಳೆಯುವ ಮಾರ್ಗವನ್ನು ಅವನು ಕಂಡುಕೊಂಡನು.

**ದೇವದಾಸಿಯ ಹೊಂಚುಃ**

ಬಾಳು ಸುಖದ ಸುಪ್ಪೊತ್ತಿಗೆಯೇನಲ್ಲ. ಬಾಳ ಪಥದಲ್ಲಿ ಕಲ್ಲುಮುಳ್ಳುಗಳೂ ಇವೆ. ಮೆತ್ತನೆಯ ತಂಪೆರಚುವ ಹುಲ್ಲುಗದ್ದೆಗಳೂ ಇವೆ. ತನ್ನ ಮಗಳ ತಾರುಣ್ಯವು ಓರ್ವ ತರುಣನ ಪ್ರಣಯದಲ್ಲಿಯೇ ಪರ್ಯವಸಾನವಾಗದಿರಲೆಂದು ಆ ಅನುಭವಸ್ಥ ಹಿರಿಯ ದೇವದಾಸಿ ಬಗೆದಳು. ಆದರೆ, ತನ್ನ ಮಗಳು ವೇಮನನಲ್ಲಿ ಅನುರಕ್ತಳಾದುದನ್ನು ಅವಳು ನಿರ್ಲಕ್ಷಿಸುವಂತಿರಲಿಲ್ಲ. ಹೀಗಾಗಿ, ಮಗಳನ್ನು ಪುಸಲಾಯಿಸಿ ವೇಮನನಿಂದ ಅಂಥ ಇಂಥ ಚಿಕ್ಕ ಪುಟ್ಟ ವಸ್ತ್ರ ಒಡವೆ ಬೇಡ ಹಚ್ಚಿದಳು. ಇದನ್ನು ಹಾಗೂ ಹೀಗೂ ಮಾಡಿ ವೇಮನ ಒದಗಿಸಿದನು. ಇದರಿಂದ ದೇವದಾಸಿ ವೇಮನರ ಸಂಬಂಧ ಗಾಢವಾಯಿತೇ ಹೊರತು ಸಡಿಲುಗೊಳ್ಳಲಿಲ್ಲ. ದೇವದಾಸಿಯ ತಾಯಿ ಈ ಮಧುರ ಸಂಬಂಧದಲ್ಲಿ ಹುಳಿ ಹಿಂಡುವ ಹಂಚಿಕೆ

ಹೂಡಿದಳು. ಒಮ್ಮೆ ರಾಣಿ ನರಸಾಂಬೆ (ಅನತಲ್ಲಿ) ಕೊಂಡವೀಡುವಿನಲ್ಲಿರುವ ತನ್ನ ತಾಯಿಯ ತೌರಿನ ಜನರನ್ನು ಭೆಟ್ಟಿಯಾಗಲು ಬಂದಿದ್ದಳು. ವೇಮನನು ಅತ್ತಿಗೆ ನರಸಾಂಬೆಗೆ ತುಂಬಾ ಬೇಕಾದವನೆಂದು ಹಿರಿಯ ದೇವದಾಸಿಗೆ ತಿಳಿದೇ ಇತ್ತು. ಇದರಿಂದಾಗಿ ಅವಳು ತನ್ನ ಮಗಳನ್ನು ವೇಮನನಿಂದ ದೂರವಾಗಿಸಲು ಒಂದು ಹಂಚಿಕೆ ಹೂಡಿದಳು. ಅವಳು ಮಗಳಿಗೆ " ಆ ವೇಮನ ಮಾಡುವುದೆಲ್ಲ ಪ್ರೀತಿಯ ನಾಟಕ. ಎಲ್ಲ ಗಂಡಸರೂ ಹಾಗೆಯೇ. ಅವನಿಗೆ ನಿನ್ನಲ್ಲಿ ನಿಜವಾದ ಪ್ರೀತಿ ಇರುವುದೋ ಹೇಗೆಂಬುದನ್ನು ಒಮ್ಮೆ ಪರೀಕ್ಷಿಸಿ ನೋಡು" ಎಂದಳು. "ಯಾವ ಪರೀಕ್ಷೆ?" ಎಂದು ಕೇಳಿದಳು, ದೇವದಾಸಿ ಕನ್ಯೆ. "ಅವನ ಅತ್ತಿಗೆ ರಾಣಿ ನರಸಾಂಬೆಯಲ್ಲಿ ವಜ್ರ ವೈಢೂರ್ಯಗಳಿವೆ. ಆ ಆಭರಣಗಳನ್ನು ತಂದು ನಿನಗೆ ತೊಡಿಸಿ ನೋಡಿ ಆನಂದಪಡುವಂತೆ ಹೇಳು" ಎಂದಳು.

**ತ್ಯಾಗದ ಪರೀಕ್ಷೆ :**

ಹರೆಯದ ಹುಡುಗಿ ಲಗುಬಗೆಯಾಗಿ ಈ ಪರೀಕ್ಷೆಯಲ್ಲಿ ಗೆದ್ದು, ತನ್ನ ಪ್ರೀಯತಮನ ತೆಕ್ಕೆಯಲ್ಲಿ ಶಾಶ್ವತ ಸುಖ ಅನುಭವಿಸಲು ಹಾತೊರೆದಳು. ಆ ದಿನ ಸಾಯಂಕಾಲ ಶಯನಾಗಾರಕ್ಕೆ ಬಂದ ವೇಮನರೊಂದಿಗೆ ಎಲ್ಲವನ್ನು ಹೇಳಿ, " ಈ ಪರೀಕ್ಷಯಲ್ಲಿ ಪಾಸಾದರೆ, ನಾವಿಬ್ಬರೂ ಎಂದೆಂದಿಗೂ ಕೂಡಿಕೊಂಡಿರಬಹುದು. ಮದುವೆಯಾದರೂ ಸರಿ, ಇಲ್ಲವಾದರೂ ಸರಿ. ಹೇಗೂ ರಾಜವಂಶದಲಿ ಜನಿಸಿದವರು, ಉಪಪತ್ನಿ ಹೊಂದದಿರುವುದು ಘನತೆಗೆಕುಂದು. ನಮ್ಮ ಕುಲದಲ್ಲಂತೂ ರಾಜರ ಉಪಪತ್ನಿಯರಾಗುವದೇ ಧರ್ಮ" ಎಂದು ಪರಿಪರಿಯಾಗಿ ಸಮಕಾಲೀನ ಸಮಾಜ ಪದ್ಧತಿಯನ್ನು ಹೇಳಿದಳು. ವೇಮನ ಒಪ್ಪಿದ. ಸರಸರನೆ ಅಲ್ಲಿಂದ ಹೊರಟು ಮನೆಗೆ ಬಂದು ಮೂಲೆ ಹಿಡಿದು ಕುಳಿತ. ಮಾತನಾಡದಾದ. ಊಟ ಬಿಟ್ಟ. ಅವರಿವರು ಹೇಳಿ ನೋಡಿದರು. ಪ್ರಯೋಜನವಾಗಲಿಲ್ಲ. ಕೊನೆಗೆ ಅತ್ತಿಗೆ ನರಸಾಂಬೆ ತಾನೊಬ್ಬಳೇ ಬಂದು, ಮುನಿದುಗೊಂಡು ಕುಳಿತಿರುವುದಕ್ಕೆ ಕಾರಣ ಕೇಳಿದಳು. ವೇಮನ ತಲೆ ತಗ್ಗಿಸಿದ. ಭೀತಿ ನಾಚಿಗೆಗಳು ಅವನ ಬಾಯಿ ಮುಚ್ಚಿಸಿದವು. ತಾನು ಊಟ ಮಾಡದಿದ್ದರೆ, ಅತ್ತಿಗೆಯೂ ಬಾಯಿಗೆ ಊಟ ಒಯ್ಯುವುದಿಲ್ಲವೆಂಬ ಅವಳ ಮಾತು ಕೇಳಿ ಅರಿತು, ವೇಮನ ಬಾಯಿ ಬಿಟ್ಟ. ತನ್ನ ಪ್ರೇಯಸಿ ಹೇಳಿದುದನ್ನೇ ಅಕ್ಷರಶಃ ಪುನರುಕ್ತಿ ಮಾಡಿದ. ಒಂದೆಡೆ ಕಾಮ, ಇನ್ನೊಂದೆಡೆ ವಾತ್ಸಲ್ಯ ಸೆಣಸಾಟಕ್ಕಿಳಿದಿದ್ದವು. ನರಸಾಂಬೆ ಆಭರಣ ಒಪ್ಪಿಸಿ ವೇಮನನಿಗೆ ಹಣ್ಣಿನ ರಸ ಕುಡಿಸಿದಳು. ತನ್ನ ಆಭರಣಗಳನ್ನು ಬಿಚ್ಚಿ ಕೊಟ್ಟಳು. ವೇಮನ ತನ್ನನ್ನೇ ನಂಬದಾದ. ಅತ್ತಿಗೆಯ ವಾತ್ಸಲಕ್ಕೆ ಮಾರುಹೋದ. ಕಾಮದಾಹದ ಸೆಳೆತವನ್ನು ವಾತ್ಸಲ್ಯದ ಆಕರ್ಷಣೆಯೊಂದಿಗೆ ತುಲನೆ ಮಾಡಲು ಮನಸ್ಸಿಗೆ ಇಂಬುಗೊಟ್ಟು, ಈ ಹೊಯ್ದಾಟದ ಮನ ಹೊತ್ತು, ಪ್ರೇಯಸಿಯ ಎದುರು ಆಭರಣಗಳ ಗಂಟನ್ನಿಟ್ಟನು. ಅವಳಿಗೆ ಅಪಾರ ಸಂತೋಷವಾಯಿತು. ಆದರೆ

ಅವಳ ತಾಯಿ, ಆ ಹದ್ದುಗಣ್ಣಿನ ಹೆಂಗಸು, ಅವುಗಳನ್ನು ನೋಡಿ, "ಎಲ್ಲಿದೆ ಆ ರಾಣಿಯ ರತ್ನ ಖಚಿತ ಮೂಗುತಿ? ನನಗೆ ತಿಳಿದೇ ಇತ್ತು. ಈ ಪ್ರೀತಿಯೆಲ್ಲ ಅರೆಬರೆ ಎಂದು" ಎಂದು ಮೂಗು ಕೊಂಕಿಸಿ ನುಡಿದಳು. "ಎಲಾ ರಕ್ಕಸಿ ! ನನ್ನ ದೇವತಾ ಸಮಾನ ಅತ್ತಿಗೆಯ ಮೂಗುತಿಯ ಮೇಲೂ ಕಣ್ಣಿರಿಸಿದೆಯಾ?" ಎಂದು ಮರು ಮಾತನಾಡದೆ ಮನೆಗೆ ಬಂದನು. ಆದರೆ ಇಷ್ಟು ಬೇಗ ಮನೆಗೆ ಬಂದ ಮೈದುನನನ್ನು ಕಂಡು ನರಸಾಂಬೆ ಮೃದುವಾಗಿ ಕೇಳಿದಳು. "ಸರಿ ಹೋಗಲಿಲ್ಲವೇನಪ್ಪಾ?" ವೇಮನನಿಗೆ ಮಾತು ಮೂಕವಾಗಿತ್ತು. ಅವನ ಕಣ್ಣೀರೇ ಉತ್ತರಿಸಿದವು. ಅವನು ಅವಳ ಮೂಗುತಿಯತ್ತ ನೋಡಿದನಾದರೂ ಬಾಯಿಬಿಟ್ಟು ಕೇಳಲಿಲ್ಲ. ದುಃಖ ಉಮ್ಮಳಿಸಿತು. ಇದೆಲ್ಲವನ್ನೂ ಕಂಡು, ಕಾರಣವನ್ನು ಊಹಿಸಿದ ನರಸಾಂಬೆ, ಸರಸರನೆ ಮೂಗುತಿ ಬಿಚ್ಚಿ ಅವನ ಕೈಗಿತ್ತು, ಒಂದು ಕರಾರು ವಿಧಿಸಿದಳು. "ನೀನೀಗ ಈ ಮೂಗುತಿಯನ್ನು ಆ ಪ್ರೇಯಸಿಯ ಕೈಯಲ್ಲಿ ಕೊಡಬೇಡ. ಅದನ್ನು ಶಯನ ಗೃಹದ ಬಾಗಿಲು ಹೊಸ್ತಿಲಿನ ಮೇಲಿಡು. ಅವಳು ನಗ್ನಳಾಗಿ, ಹಿಂತಿರುಗಿ ಬಾಗಿ, ಇದನ್ನು ತನ್ನ ತುಟಿಯಿಂದ ಎತ್ತಿಕೊಳ್ಳಲಿ. ಆ ಸಮಯ ಅವಳ ಅಂಗಾಂಗಗಳನ್ನು ನೋಡುತ್ತಿರು" ಎಂದಳು. ವೇಮನ ಮತ್ತೆ ಬೇಗ ಹಿಂತಿರುಗಿ ಬಂದದ್ದನ್ನು ನೋಡಿ ತಾಯಿ ಮಗಳಿಬ್ಬರೂ ಅಚ್ಚರಿಬಟ್ಟರು. ಅವನು ಬಂದು ಮೂಗುತಿಯ ಹಸ್ತಾಂತರದ ಕ್ರಮವನ್ನು ತಿಳಿಸಿದನು. ಆ ಬಗೆಯ ಮೈ ಬಾಗಿಸುವ ವ್ಯಾಯಾಮವನ್ನು ಆ ನೃತ್ಯಗಾತಿಯರು ರೂಢಿಸಿಕೊಂಡಿದ್ದರಿಂದ ಸಹಜವಾಗಿ ಕರಾರು ಪಾಲಿಸಲು ಸಿದ್ಧರಾದರು.

**ಹೇಸಿಕೊಂಡ ನಗ್ನತೆ:**

ದೇವದಾಸಿ ಬಟ್ಟೆ ಕಳಚಿದಳು. ಹಿಂದಕ್ಕೆ ಬಾಗಿದಳು. ವೇಮನ ಅವಳ ನಗ್ನ ದೇಹದ ಉಬ್ಬು ತಗ್ಗುಗಳನ್ನು ಕಂಡನು. ಮೊದಲು ಅರೆಬರೆ ಬಟ್ಟೆಯಲ್ಲಿ, ಮಂದ ಬೆಳಕಿನಲ್ಲಿ, ಕಾಮದ ಪರವಶತೆಯಲ್ಲಿ "ತೊಡೆ ಕುಂಡಿಯ ಕಂಡು, ತುಂಬಿದೆದೆಯ ಕಂಡು, ಶಬ್ದ ಬಳಸದಂಥ ಸ್ಥಳ ಕಂಡು, ಮೋಹ ಮುಕುರುತಿಹುದು, ಮುನಿಯೇ ಆದರೇನು?" ಎಂದು ಸಂವೇದನೆಯಾಗುತ್ತಿತ್ತು. "ಸ್ಫುಟಗೊಂಡಸ್ತನವ ತೋರಿ, ಮನ ಕರಗಿಸಿ, ಕೈಯ ಕಾಸು ಕಿತ್ತುಕೊಳ್ಳುತಿಹಳು; ಕಾಂತೆ ಕಾಮ ಪಿಡಿದ ಕತ್ತಿ ಕಾಣಿರಯ್ಯ" ಎಂದು ಹೇಳಿ – ಕೊಳ್ಳುತ್ತಿದ್ದನು. ಆದರೆ ಇಂದು "ಸ್ವೈರಿಣಿಯೆಂತು ಬಲ್ಲಳು ಸಾಧ್ವಿ ಮಹಿಮೆಯನ್ನು?" ಎಂಬ ವಿಶ್ಲೇಷಣೆಯಿಂದ ಚಿಂತನ ಮಂಥನಕ್ಕಿಳಿದಾಗ, ಕದ್ದು ಮುಚ್ಚಿ ನೋಡಿದಾಗ, ಅಂದ ಚೆಂದವಾಗಿ ಕಂಡ ಅವಯವಗಳೇ ಇಂದು ಬಿಚ್ಚಿ ಬಯಲಾದಾಗ ಅಸಡ್ಡೆಯೆನಿಸಿದವು. ತೆರೆಮರೆಯ ಮುಸುಕಿನ ನೋಟ ಮಾಟವಾಗಿ ಕಂಡು ಮೋಹ ಕುದುರಿಸಿದರೆ, ಬಟ್ಟೆ ಕಳಚಿದ

ಪೂರ್ಣ ನಗ್ನತೆಯು ಅಸಡ್ಡೆ ಬರಿಸಿತು ಯಾವ ದೇಹರಚನೆಯ ಸೌಂದರ್ಯ, ಹೃಷ್ಟ –ಪುಷ್ಟತೆ, ಮಾಟ ಮೋಡಿಗಳಿಗೆ ಮೊದಲು ಮರುಳಾಗಿದ್ದನೋ, ಅದರ ನಗ್ನ ರೂಪದ ಅಸಡ್ಡಾಳತೆ ಕಂಡು ಹೇಸಿಕೊಂಡನು. ಭೌತಿಕ ಆಕರ್ಷಣೆಯು ಹಿಂಗಿ ಹೋಯಿತು. ಇನ್ನು ಆದರಾಚೆಯ ಮನಸಿನ ಹೂರಣವೂ ಹೊರಬಿದ್ದಿತು. ಅತ್ತಿಗೆ ನರಸಾಂಬೆಯ ಮನಸ್ಸಿನ ವಾತ್ಸಲ್ಯ ಪೂರ್ಣ ಕಲ್ಯಾಣಚಿಂತನೆಯ ಆಳ ಹಾಗೂ ವ್ಯಾಪ್ತಿಗಳು, ಮೈ ಮಾರಿಕೊಂಡು ಹಣ ದೋಚುವ ದೇವದಾಸಿಯ ಕ್ಷಣಿಕ ಭೋಗದಾಸೆಯ ಜಾಲದ ಹಿನ್ನೆಲೆಯಲ್ಲಿ ಪ್ರಕಾಶಿಸಿದವು. ಈ ಪ್ರಖರ ಪ್ರಕಾಶದೆದುರು, ಕಾಮ ಚೋದಿತ ಮೋಹಾಂಧಕಾರವು ತೊಲಗಿತು. ಸ್ಥಿತಿಯು ಶೂನ್ಯಾವಸ್ಥೆ ತಲುಪಿತು.

ಅಂತೂ ವೇಮನನ ಮನದ ಮೇಲಿನ ಮೋಹದ ಪರದೆ ಕಳಚಿತು. ಹೊಳೆಯುವುದೆಲ್ಲ ಬೆಳ್ಳಿಯಲ್ಲ; ಕಪ್ಪೆ ಚಿಪ್ಪು ಸಹ ಹೊಳೆಯುತ್ತದೆ ಎಂಬುದನ್ನು ಅವನು ಮನಗಂಡನು. ನಾವು ಊಟದ ಎಲೆಯಲ್ಲಿ ಊಟ ಮಾಡುತ್ತೇವೆ. ಊಟ ಮುಗಿದ ಬಳಿಕ ಅದನ್ನು ಎತ್ತಿ ಬೀಸಾಡುತ್ತೇವೆ. ಮರಳಿ ಅದನ್ನು ಬಳಸುವುದಿಲ್ಲ. ವೇಮನ ಸ್ತ್ರೀ ಸಹವಾಸ ಭೋಗವನ್ನು ಮುಗಿಸಿಯಾಗಿತ್ತು. ಆ ಭೋಗ ವಸ್ತುವನ್ನು ಅವನು ಬೀಸಾಡಿದ. ಮುಂದೆ ಕೊನೆಯವರೆಗೂ ಅತ್ತ ಮನ ಹರಿಸಲಿಲ್ಲ.

❖❖❖

## ೫. ಪರಿವರ್ತನೆ

ದೇವಾದಾಸಿಯ ಘಟನೆಯಿಂದ ವೇಮನ ಲಜ್ಜಿತನಾಗಿದ್ದ. ಅವನ ಮನಸ್ಸು ರೋಸಿಹೋಗಿತ್ತು. ಭೋಗದಲ್ಲಿ ಮೈ ಮರೆತಿದ್ದ ವೇಮನನಿಗೆ ಸತ್ಯ ದರ್ಶನವಾಗಿತ್ತು. ತನ್ನ ಕುರಿತು ಹೀನಭಾವನೆ ಉಂಟಾಗಿತ್ತು. ಶಾರೀರಿಕ ಮಾನಸಿಕ ದೌರ್ಬಲ್ಯ ಉಂಟಾಗಿತ್ತು. ಇದರಿಂದ ಮುಕ್ತಗೊಳ್ಳಲು ಮನಸ್ಸು ಪರಿತಪಿಸುತ್ತಿದ್ದಿತು. ಅಂತಹ ಸಮಯದಲ್ಲಿ ತನಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯನಾದ ಬಾಲ್ಯ ಸ್ನೇಹಿತ 'ಅಭಿರಾಮ' ನೆರವಾದ.

ವೇಮನ ಸ್ನೇಹಿತ ಅಭಿರಾಮನಲ್ಲಿ ಮನದಾಳದ ನೋವನ್ನು ವಿವರಿಸಿದ. ತನಗೆ ಲೌಕಿಕ ಸುಖಬೇಡ. ಪಾರಮಾರ್ಥಿಕ ಆನಂದ ಅನುಭವಿಸಬೇಕು. ಲೋಕಕ್ಕೆ ದಾರಿದೀಪವಾಗಬೇಕೆಂಬ ಆಶಯ ತಿಳಿಯಪಡಿಸಿದ.

ಶ್ರದ್ಧೆಯೇ ಜೀವನದ ಆಧಾರ. ಶ್ರದ್ಧೆ ಇಲ್ಲದಿದ್ದರೆ ಏನೂ ಸಾಧಿಸಲಾರರು. ಶ್ರದ್ಧೆ ಕೇವಲ ಆಶ್ರಯ ಸ್ಥಾನ ಮಾತ್ರವಲ್ಲ, ಅದು ಮಹಾನ್ ಪ್ರೇರಕ ಶಕ್ತಿಯೂ ಹೌದು. ತಾತ್ಕಾಲಿಕ ವೈರಾಗ್ಯದಿಂದ ಶ್ರದ್ಧೆ ಹುಟ್ಟೀತು. ಜೀವನ ಗುರಿ ಸಾಧನೆಗೆ ನಿಜವಾದ ಶ್ರದ್ಧೆ ಜೊತೆಗೆ ಗುರಿ ಸಾಧನೆಗೆ ಸತತ ಪರಿಶ್ರಮಿಸುವ ಮನೋಬಲಬೇಕೆಂದು ಹೇಳಿದ ಅಭಿರಾಮ, ವೇಮನನನ್ನು ಪರೀಕ್ಷಿಸಲಾರಂಭಿಸಿದ.

ವೇಮನನಲ್ಲಿ ಬಂದಿದ್ದ ಬದಲಾವಣೆ ಅದೇನು ಅಭಾವ ವೈರಾಗ್ಯದಂತಹ ತಾತ್ಕಾಲಿಕ ವೈರಾಗ್ಯವಾಗಿರಲಿಲ್ಲ. ನಿಜವಾಗಿಯೂ ವೇಮನನ ಅಂತರಾಳ ಬೆಂದಿತ್ತು. ಪಕ್ವವಾಗಿದ್ದಿತು.

ಪಾರಮಾರ್ಥಿಕ ಉನ್ನತಿ ಸಾಧಿಸಲು ನಿರ್ಭಯತೆಬೇಕು. ನಿರ್ಭಯತೆ ಅಂದರೆ ಮನೆಯಲ್ಲಿ ವನದಲ್ಲಿ ಜನರಲ್ಲಿ ಮನದಲ್ಲಿ ಜೀವನದಲ್ಲಿ ಸಾವಿನಲ್ಲಿ ಎಲ್ಲಿಯೂ ಭಯವಿಲ್ಲದಿರುವ ಸ್ಥಿತಿ. ಅಂತಹ ಸ್ಥಿತಿ ತಲುಪಿದಾಗ ಪಾರಮಾರ್ಥಿಕ ಯಶಸ್ಸಿನ ಮಾರ್ಗ ಸುಲಭವಾಗುತ್ತದೆಂಬುದನ್ನು ಅಭಿರಾಮ ವೇಮನನಿಗೆ ಮನಗಾಣಿಸುವ ಅವಶ್ಯಕತೆ ಇಲ್ಲದ ಸ್ಥಿತಿ ವೇಮನ ತಲುಪಿದ.

ಸತ್ವ, ರಜ, ತಮ ಈ ಮೂರು ಗುಣಗಳು ವಿಶ್ವವ್ಯಾಪಿಸಿವೆ. ಮಾನವನ ಮನಸ್ಸು ಕೂಡಾ ಈ ಮೂರು ಗುಣಗಳಿಂದ ಕೂಡಿದ್ದಾಗಿದೆ. ಮನಸ್ಸಿನ ಈ ತ್ರಿಗುಣಾತ್ಮಕ ಆವರಣ ಆತ್ಮವನ್ನು ಮುಚ್ಚಿ ಬಿಟ್ಟಿದೆ. ಕ್ರಮವಾಗಿ ತಮದಿಂದ ರಜೋಗುಣಕ್ಕೇರಿ ರಜೋಗುಣದಿಂದ ಸಾತ್ವಿಕತೆಯ ವಲಯದಲ್ಲಿ ಲೀನವಾಗಿ ಕೊನೆಗೆ

ಅದರಿಂದಲೂ ಬೇರ್ಪಟ್ಟು ಆತ್ಮ ಸ್ವರೂಪದ ದರ್ಶನ ಪಡೆಯುವ ಪರಮ ಗುರಿಯತ್ತ ವೇಮನ ಸಾಗುತ್ತಿರುವುದನ್ನು ಸಾತ್ವಿಕತೆಯ ಸಾಕಾರ ಮೂರ್ತಿಯಾಗಿದ್ದ ಅಭಿರಾಮ ಗುರುತಿಸಿದ. ಗುರುವಿನ ದರ್ಶನಕ್ಕೆ ಇದು ಸಕಾಲವೆಂದು ಭಾವಿಸಿ ಗುರುಗಳ ಶೋಧನೆಗಾಗಿ ವೇಮನನೊಂದಿಗೆ ಅರಣ್ಯಗಳನ್ನು ಅಲೆಯಲಾರಂಭಿಸಿದ.

ರಾಜಮಹೇಂದ್ರಿಯ ಹೊರವಲಯದ ಬೆಟ್ಟದಲ್ಲಿ ಸಂಚರಿಸುತ್ತಿದ್ದಾಗ ಗುಹೆಯೊಂದರಿಂದ ಓಂಕಾರನಾದ ಕೇಳಲಾರಂಭಿಸಿತು. ವೇಮನ ಓಂಕಾರ ನಾದದತ್ತ ಆಕರ್ಷಿತನಾದ. ಓಂಕಾರನಾದ ಆಲಿಸುತ್ತ ಅಲ್ಲಿಯೇ ಮೈಮರೆತು ಕುಳಿತ. ಅಭಿರಾಮ ಮಿತ್ರನನ್ನು ಸ್ಥಿತಿಗೆ ತರುವ ಪ್ರಯತ್ನ ಮಾಡಿ ವಿಫಲನಾದ. ಗಲಿಬಲಿಗೊಂಡ ಅಭಿರಾಮ ಹಿರಿಯರನ್ನು ಕರೆಯಲು ತೆರಳಿದ.

ಕೆಲಕಾಲದ ನಂತರ ಗುಹೆಯಿಂದ ದಿವ್ಯ ಪ್ರಕಾಶ ಹೊರಹೊಮ್ಮಿತು. ಯೋಗಿಯೊಬ್ಬರು ಕಾಣಿಸಿಕೊಂಡರು. ವೇಮನನ್ನು ನೋಡಿ "ಮಗ ಎಷ್ಟು ಕಾಲ ಕಾಯಿಸಿದೆ. ಬೇಗ ಬರಬಾರದಿತ್ತೆ" ಎಂದು ಹೇಳಿದರು. ಯೋಗಿ ಅಂತಃಕರಣದಿಂದ ಆಶೀರ್ವದಿಸಿದರು. ತಲೆಯ ಮೇಲೆ ಕೈ ಇಟ್ಟು ತಾನು ಆರ್ಜಿಸಿದರು. ತಪಃಶಕ್ತಿಯನ್ನು ಧಾರೆಯೆರೆದರು. ವೇಮನನಿಗೆ ಎಲ್ಲವೂ ಅರಿವಿಗೆ ಬರುವುದಕ್ಕೆ ಮೊದಲೇ ಓಂಕಾರನಾದದೊಂದಿಗೆ ಯೋಗಿಕಣ್ಮರೆಯಾಗಿದ್ದರು.

ವೇಮನ ಸಂಪೂರ್ಣ ಬದಲಾಗಿದ್ದ. ಆತನಿಗೆ ಸಿದ್ಧಿಗಳು ಸುಲಭವಾಗಿ ಲಭ್ಯವಾಗಿದ್ದವು. ದಿವ್ಯ ತೇಜ ಅವನ ಮುಖ ಮಂಡಲದಲ್ಲಿ ರಾರಾಜಿಸುತ್ತಿತ್ತು. ನಡೆದುದ್ದೆಲ್ಲವನ್ನು ಮಿತ್ರ ಅಭಿರಾಮನಿಗೆ ತಿಳುಹಿಸಿದ. ಸನ್ಮಾರ್ಗದಲ್ಲಿ ಜೊತೆಯಾಗಿ ನಡೆದ; ನಡೆಸಿದ ಅಭಿರಾಮನನ್ನು ಎಂದೆಂದಿಗೂ ಲೋಕಮರೆಯದಂತೆ ಮಾಡಲು ವೇಮನ ನಿರ್ಧರಿಸಿದ.

❖❖❖

## ೬. ಲೋಕ ಪರ್ಯಟನ

ಯೋಗಿ ವೇಮನರು ಕೊಂಡವೀಡು ಸೀಮೆ ತೊರೆದು ನಡೆದೇ ಬಿಟ್ಟರು. ಹಡೆದ ತಾಯಿ ಮಲ್ಲಾಂಬೆಗೆ ಹೋಗುವ ಮುಂದೆ ಒಂದು ಮಾತು ಕೂಡ ಹೇಳಲಿಲ್ಲ. ಏಕೆಂದರೆ, ಮಗನ ದಿಗಂಬರತ್ವವನ್ನು ಕಾಣಲು ತಾಯಿ ಒಪ್ಪಲಿಲ್ಲ. ದಿಗಂಬರ ವೇಮನ, ದೀಕ್ಷಾನಂತರ ಸ್ವಂತದ ಮನೆಗೆ ಬರುವಂತಿರಲಿಲ್ಲ. ಅಂತೂ ತಾಯಿ ಮಗನ ಅಗಲಿಕೆಯಲ್ಲಿ ಸಾಕಷ್ಟು, ಅನುತಾಪ ಉಂಟಾಗಿತ್ತು. ಹಿಂದಿನ ರಾಜ ವೈಭವ ಈಗಿರಲಿಲ್ಲಿವಾದರೂ, ಮಲ್ಲಮ್ಮರಾಣಿಗೆ ಆಪ್ತ ವರ್ಗದಲ್ಲಿ ಸಾಕಷ್ಟು ಗೌರವವಿತ್ತು; ಹೆಚ್ಚಾಗಿ ಅನುಕಂಪವಿತ್ತು. ಹಿರಿಯ ಮಗನು ತೀರಿಕೊಂಡ ಮೇಲೆ, ರಾಜ್ಯ ಮಹಿಷಿ ಪಟ್ಟವು ತಪ್ಪಿ ಹೋದ ಮೇಲೆ, ಮಲ್ಲಮ್ಮ ದೇವರು – ದಿಂಡರತ್ತ ಹೆಚ್ಚಾಗಿ ವಾಲಿದ್ದಳು. ಈ ಕಾಲದಲ್ಲಿ ಇರುವ ಒಬ್ಬ ಮಗನನ್ನು ಅಚ್ಚಯಿಂದ ಬೆಳೆಸಿದ್ದಳು. ಅವನು ದೇವದಾಸಿ ಸಂಗದಲ್ಲಿದ್ದಾಗ, ರಾಜ ಕುಟುಂಬಕ್ಕೆ ಆ ವೃತ್ತಿ ರೂಢಿಗತವಾದುದರಿಂದ ಅವಳ ಮನಸ್ಸುಕ್ಷೋಭೆಗೊಂಡಿರಲಿಲ್ಲ. ಮುಂದೆ, ತನ್ನ ನಾದಿನಿ ಮಲ್ಲಾಂಬೆಯ ಮಗಳಾದ ನರಸಾಂಬೆಯ ಬುದ್ಧಿ ಕೌಶಲದಿಂದ ಮಗನು ಸನ್ಮಾರ್ಗಹಿಡಿದಾಗ, ಸಮಾಧಾನದ ಸ್ಥಿತಿ ಉಂಟಾಗಿತ್ತು. ಇನ್ನೇನು, ಎಲ್ಲವೂ ಸರಿಹೋಯ್ತು ಎನ್ನುವಷ್ಟರಲ್ಲಿ ವೇಮನನ ದೀಕ್ಷೆ – ದಿಗಂಬರತ್ವಗಳ ಆಘಾತಕರ ಸುದ್ದಿಯಿಂದ ಅವಳು ಇಹ್ವಲಗೊಂಡಿದ್ದಳು. ಇಷ್ಟೆಲ್ಲ ಆದ ಬಳಿಕ, ದಿಗಂಬರನಾದ ಮಗನ ಆಕಾರವನ್ನು ರೂಪಿಸಿಕೊಳ್ಳಲಾರದೆ ಹಾಗೂ ತಾಯಿಯೆಂಬ ಅಭಿಮಾನ ತುಂಬಿ, ತಾನಾಗಿಯೇ ಗವಿಗೆ ಹೋಗಿರಲಿಲ್ಲ, ಆ ತಾಯಿ. ಆದರೆ ಇನ್ನೇನು? ಮೊಹಮ್ಮದ ಬೆಟ್ಟಕ್ಕೆ ಬಾರದಿದ್ದಾಗ, ಬೆಟ್ಟವೇ ಮೊಹಮ್ಮದನತ್ತ ಬರಬೇಕಷ್ಟೇ. ಈ ಸ್ಥಿತಿಯಲ್ಲಿ ತನ್ನ ಮನಸ್ಸಿನ ಸಾಂತ್ವನಕ್ಕಾಗಿ ಕಾಶೀ ಯಾತ್ರೆ ಕೈಕೊಳ್ಳುವ ನಿರ್ಧಾರ ಮಾಡಿದಳು. ಈ ಪ್ರಸಂಗದಲ್ಲಿ, ಮಗನು ಈ ಪುಣ್ಯ ಕ್ಷೇತ್ರ ಯಾತ್ರೆಯಿಂದ, ವಿಶ್ವನಾಥನ ದರ್ಶನದಿಂದ, ಮನೆಯ ದೀಪದ ಕುಡಿ ಬೆಳಗಿಸುವಂತಾಗಬಹುದೆಂದು ಎಣಿಸಿದಳು. ಹೀಗಾಗಿ, ವೇಮನ ಆಗ ವಾಸವಾಗಿದ್ದ ಸಮೀಪದ ಹಳ್ಳಿಗೆ, ಚಿಕ್ಕ ಪರಿವಾರದೊಂದಿಗೆ, ತಾನೇ ಹೋದಳು. ತಾಯಿಯನ್ನು ಕಂಡು ವೇಮನ ಎಂದಿನಂತೆ ಮುಗುಳುನಕ್ಕು ನಮಸ್ಕರಿಸಿದನಾದರೂ ಆ ದಿಗಂಬರ ಯುವಕ ಮಗನನ್ನು ಕಂಡು ತಾಯಿ ಹೌಹಾರಿದಳು. ಊಹಿಸಿ ತಿಳಿಯುವುದು ಬೇರೆ; ಸಾಕ್ಷಾತ್ ಅನುಭವಿಸುವುದು ಬೇರೆ.

" ಕ್ಷಮಿಸಮ್ಮಾ ! ನಿನಗೆ ಹೇಳದೆ ಬಂದೆ. ಕೆಲ ದಿನಗಳಲ್ಲಿ ನಾನು ಮರಳುವವನಿದ್ದುದರಿಂದ ಬಂದು ಬಿಟ್ಟೆ." ಎಂದನು ಯೋಗಿ.

" ಇರಲಪ್ಪ ! ಈಗೇನಂತೆ. ನಾನು ಮುಂದಿನ ವಾರ ಕಾಶಿ ಯಾತ್ರೆಗೆ ಹೊರಟಿದ್ದೇನೆ. ಕಾರಣ, ನೀನೂ ವಿಶ್ವನಾಥ ಸ್ವಾಮಿಯ ದರ್ಶನ ಪಡೆಯಬೇಕೆಂದು

ನಮ್ಮೆಲ್ಲರ ಬಲವಾದ ಆಸೆ" ಎಂದಳು ಮಲ್ಲಮ್ಮ ರಾಣಿ. ವೇಮನರಿಗೆ ವಿಶ್ವನಾಥ ಅನುಗ್ರಹಿಸಿ ಸಂಸಾರಕ್ಕೆ ಮರಳಿಸಲಿ ಎಂಬ ಆರದ ಆಸೆ ಆ ಹಡೆದ ತಾಯಿಯದು.

" ಅಲ್ಲಿ ಇರುವುದು ಇಲ್ಲಿಯೂ ಇದೆಯಮ್ಮ" ಎಂದರು ಯೋಗಿ.

" ಇಲ್ಲ ಮಗೂ; ಅದು ಪುಣ್ಯಕ್ಷೇತ್ರ ಮಾನವರನ್ನು ಮುಕ್ತಿ ಮಾರ್ಗಕ್ಕೆ ತರುವ ಪುಣ್ಯ ನೆಲ ಕಾಶಿ."

" ಇರಲಿ ; ಈ ಬಾರಿ ನೀನು ಹೋಗಿ ಬಾರಮ್ಮ. ಈ ತಾಮ್ರದ ದುಡ್ಡನ್ನು ನಿನ್ನ ಕೊರಳ ಸರದಲ್ಲಿ ಕಟ್ಟಿಕೋ. ಇದು ಎಲ್ಲಿ ಬಂಗಾರದ್ದಾಗಿ ಪರಿವರ್ತಿಸುವುದೋ, ಅದುವೇ ಪುಣ್ಯ ಕ್ಷೇತ್ರ. ಕಾಶಿಯಲ್ಲಿ ಆದರೆ, ನಾನು ಬರಬಹುದು" ಎಂದು ತಾಯಿಗೆ ಸಮಾಧಾನಕರವಾಗುವಂತೆ ಉಪಾಯದಿಂದ ನುಡಿದ, ಯೋಗಿ. ಏನೇ ಇರಲಿ; ಮಗನು ಕಾಶೀ ಯಾತ್ರೆಗೆ ಮುಂದೊಮ್ಮೆಯಾದರೂ ಬರುವ ಮಾತು ಕೊಟ್ಟನೆಂಬ ಸಮಾಧಾನವು ತಾಯಿಗೆ ಆಯಿತು. ಆ ತಾಮ್ರದ ದುಡ್ಡನ್ನು ಕೊರಳಲ್ಲಿ ಕಟ್ಟಿಕೊಂಡಳು.

ರಾಜ ಪರಿವಾರದೊಂದಿಗೆ ಮಲ್ಲಮ್ಮ ರಾಣಿ ಕಾಶೀ ಯಾತ್ರೆ ಮಾಡಿದಳು. ಅಲ್ಲಿ ವೇಮನನ ಹೆಸರಿನಲ್ಲಿ ವಿಶ್ವನಾಥನಿಗೆ ಅಭಿಷೇಕ ಮಾಡಿಸಿ, ಅವನಿಗೆ ಹಿಡಿದಿರುವ 'ಹುಚ್ಚು' ಇಳಿದು, ಅವನು ಪೂರ್ವಾವಸ್ಥೆಗೆ ಬರಲಿ ಎಂದು ಹರಕೆ ಹೊತ್ತಳು. ಕಾಶಿ, ಪ್ರಯಾಗಗಳ ಯಾತ್ರೆ ಮುಗಿಸಿಕೊಂಡು ಪರಿವಾರವು ಒಂದು ತಿಂಗಳ ನಂತರ ಕೊಂಡವೀಡುವಿಗೆ ಮರಳಿತು. ಇಷ್ಟರಲ್ಲಿ ಯೋಗಿ ವೇಮನ ಚಂದನೂಲ (ಕರ್ನೂಲ) ಮಂಡಲದ ಆರೇಳು ಗ್ರಾಮಗಳಲ್ಲಿ ಅಲೆದಾಡಿ, ನೂರಾರು ಪದ್ಯಗಳನ್ನು ರಚಿಸಿ, ಪೋಥಿ ಗ್ರಂಥಗಳೊಂದಿಗೆ ತಮ್ಮ ಕೊಂಡವೀಡು ಗುಹೆಗೆ ಮರಳಿದ್ದರು. ಅನಂತರ, ಮಾರನೆಯ ದಿವಸ ತಾಯಿಯ ದರ್ಶನಕ್ಕೆ, ಬೆಳಿಗ್ಗೆ ಬರುವುದಾಗಿ ಓರ್ವ ಶಿಷ್ಯನ ಮೂಲಕ ಕೇಳಿ ಕಳಿಸಿದರು. ತಾಯಿಗೆ ಹಿಡಿಸಲಾರದ ಸಂತೋಷವಾಯಿತು. ಎಲ್ಲವೂ ವಿಶ್ವನಾಥನ ಕೃಪೆಯೆಂದು ನಂಬಿದಳು. ಮಾರನೆಯ ದಿನ ತೀರ ನಸುಕಿನಲ್ಲಿ ಯೋಗಿ ವೇಮನ ಗವಿಯಿಂದ ಹೊರಟು ಇಬ್ಬರು ಶಿಷ್ಯ – ಸಮೇತ ಮಾತೃ ದರ್ಶನಕ್ಕೆ ಆಗಮಿಸಿದರು.

" ಯಾತ್ರೆ ಸುಖಕರವಾಗಿತ್ತೇನಮ್ಮ? ಪ್ರಯಾಗದಲ್ಲಿ ಸ್ನಾನ ಕಾಲಕ್ಕೆ ಗದ್ದಲ ಬಹಳ. ಸ್ವಲ್ಪ ಅನಾನುಕೂಲವಾಗಿರಬಹುದು" ಎಂದು ಮಾತಿಗಾರಂಭಿಸಿದ.

" ಹೌದಪ್ಪ; ಯಾರು ಹೇಳಿದರು ?" ಎಂದು ಕುತೂಹಲದಿಂದ ಕೇಳಿದಳು, ತಾಯಿ.

" .. .. .." ಮುಗುಳು ನಕ್ಕರು, ವೇಮನ.

" ಅಮ್ಮಾ ನಾನೊಂದು ತೂತಿನ ದುಡ್ಡು ಕೊಟ್ಟಿದ್ದೆ. ಅದೇನು ಸ್ವರ್ಣವಾಗಿದೆಯೇ?" ಎಂದು ಕೇಳಿದರು ಯೋಗಿ.

" ತಾಮ್ರದ ದುಡ್ಡು ಸ್ವರ್ಣವೆಂತಾದೀತ?" ಎಂದಳಾ ತಾಯಿ.

"ಎಲ್ಲಿದೆ? ಇಲ್ಲಿ ತಾರಮ್ಮ" ಎಂದು ಕೇಳಿ ಪಡೆದರು. ಅದನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಒಂದೆರಡು ನಿಮಿಷ ದಿಟ್ಟಿಸಿದರು. ತಾಮ್ರದ ದುಡ್ಡು, ಲಕ ಲಕ ಹೊಳೆಯಹತ್ತಿತು. ಸ್ವರ್ಣವಾಯಿತು. ಮರಳಿ ಅದನ್ನು ತಾಯಿಗೇ ಅರ್ಪಿಸಿದರು. " ಇದೇನಪ್ಪ ಪವಾಡ !" ಎಂದು ಅಚ್ಚರಿ ತುಂಬಿದ ಕಣ್ಣುಗಳಿಂದ ನೋಡಹತ್ತಿದಳು.

"ನಾನು ಮೊದಲೇ ಹೇಳಿರಲಿಲ್ಲವೇ? ಮನಸ್ಸಿನ ಪರಿವರ್ತನೆ ಎಲ್ಲಿ ಆಗುವುದೋ, ಅದೇ ಕಾಶಿ ಎಂದು. ಮನೋ ಸಂಕಲ್ಪದ ಅಭಿವ್ಯಕ್ತಿಯೇ ಈ ಧಾತುವಿನ ಮೇಲ್ತರಗತಿಯಲ್ಲಿಯ ಪರಿಣಾಮ. ಅದೇ ರೀತಿ, ಮಾನವನ ಮಾನಸ – ಧಾತುವೂ ಮಾರ್ಪಡಬಹುದು" ಎಂದು ಪರಿಸರದ ಜನರನ್ನು ಕುರಿತು ಹೇಳಿದರು.

**ತಂಜಾವೂರು ಪ್ರಯಾಣ :**

ವೇಮನರು ಈ ಬಾರಿ ಕೊಂಡವೀಡುವಿನಿಂದ ಸುದೂರ ಹೋಗಲಿಚ್ಛಿಸಿದರು. ಅವರು ತಂಜಾವೂರ ಪರ್ಯಂತ ಪ್ರಯಾಣ ಬೆಳೆಸಿದರು. ಹಾದಿಯಲ್ಲಿ ಹಲವಾರು ಗ್ರಾಮಗಳಲ್ಲಿ ತಂಗುತ್ತಿದ್ದರು. ಅನುಕೂಲ ತಾಣಗಳಲ್ಲಿ ವಾರಗಟ್ಟಲೆ ವಾಸ ಮಾಡಿದುದೂ ಉಂಟು. ಯಾವುದೇ ಊರಿನಲ್ಲಿ ತಂಗಲು ಮರದಡಿಯನ್ನಾಗಲಿ, ಇಲ್ಲವೆ ಧರ್ಮಶಾಲೆಯನ್ನಾಗಲಿ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಇಂಥ ವಾಸದ ಕಾಲದಲ್ಲಿ ಕೆಲವೆಡೆ ಜಿಜ್ಞಾಸುಗಳು ಸೇರುತ್ತಿದ್ದರು. ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಇಂಥ ಒಂದು ವಸತಿಯ ಕಾಲಕ್ಕೆ,

" ನೀವು ಎಲ್ಲಿಯವರು?" ಎಂದು ಪ್ರಶ್ನಿಸಿದರು.

"ಊರು ಕೊಂಡವೀಡು ವಾಸ ಪಶ್ಚಿಮ ವೀಧಿ
ಮೂಗಚಿಂತಪಲ್ಲೆ ಮೊದಲ ಮನೆಯು.
ಎಟ್ಟಿ ರೆಡ್ಡಿ ಕುಲವು ಅದನೇನು ಹೇಳ್ವುದು?
ವಿಶ್ವದಾಭಿರಾಮ ಕೇಳು ವೇಮ."

ಎಂದು ನೀಲಕಂಠನು ತಾನೇ ಪದ್ಯ ಪಠಿಸಿ, ಪ್ರಶ್ನೆಗೆ ಉತ್ತರಿಸಿದನು.

" ನಿಮ್ಮ ಮುಖ್ಯ ಸಾಧನ ಮಾರ್ಗ ಯಾವುದು?" ಎಂದು ಪ್ರಶ್ನಿಸಿದರು.

" ರಾಜ ಯೋಗ," ಉತ್ತರಿಸಿದರು.

" ನಿಮ್ಮ ಮೇರೆಗೆ ಯೋಗಿ ಯಾರು?" ಪ್ರಶ್ನಿಸಿದನು, ಒಬ್ಬ.

" ಆಸೆಗಳ ಕಡಿದು ಅಗ್ನಿಯನು ಆರಿಸಿ,
ಕಟ್ಟಿ ಬಿಗಿದು ಚೆಡ್ಡಿ, ಕೋಪ ತಗ್ಗಿ,
ಆಶೆ ತೊರೆದು ಇರುವ ಅವನೆ ಯೋಗಿ ಎನಿಪ.
ವಿಶ್ವದಾಭಿರಾಮ ಕೇಳು ವೇಮ."

“ ನಿಮ್ಮದು ಏರು ಜವ್ವನ. ತುಂಬಾ ಆಕರ್ಷಕ ಸ್ಫುರದ್ರೂಪ. ಈ ಅವಸ್ಥೆಯಲ್ಲಿ ಬೆತ್ತಲೆಯಾಗಿದ್ದರೆ ಜನರಿಗೆ ನಾಚುಗೆಯೆನಿಸದೇ?”

“ ಲಜ್ಜೆ ತೊರೆಯದನಕ ಲಭಿಸದು ಶಿವ ಸೌಖ್ಯ.
ಬಗ್ಗಿ ನಡೆಯದನಕ ಎಗ್ಗು ಬಿಡದು.
ಲಜ್ಜೆ ತೊರೆಯುವವನೆ ಲಯವಿಲ್ಲದ ಜೀವಿ.
ವಿಶ್ವದಾಭಿರಾಮ ಕೇಳು ವೇಮ.”

ಎಂದು ವೇಮನ ಯೋಗಿ ಹಾಡಿದಾಗ, ಲಜ್ಜೆ ಮರ್ಯಾದೆ ಕುರಿತು ಆಗುಂತುಕರಿಗೆ ಹೊಸ ಪರಿಕಲ್ಪನೆ ಮೂಡಿತು.

“ ಅಪ್ಪಾ ತಾವು ದೇವರನ್ನು ಕಂಡಿರುವಿರಾ ?” ಎಂದು ಓರ್ವ ಜಿಜ್ಞಾಸು ಪ್ರಶ್ನಿಸಿದನು.

“ ಕಾಣುವುದು ದೇವರಲ್ಲವಪ್ಪಾ ಮನಸ್ಸಿನಾಚೆಗೆ ಇರುವ ಸ್ಥಲದಲ್ಲಿ ದೇವರನ್ನು ಅನುಭವಿಸಬಹುದು” ಎಂದರು ಯೋಗಿ.

ಪ್ರಶ್ನೆ ಕೇಳಿದವನು ಇನ್ನಷ್ಟು, ಸಂದಿಗ್ಧತೆಗೆ ಸಿಲುಕಿದನು. ಅವನು ತನ್ನ ದುಗುಡವನ್ನು ವ್ಯಕ್ತಪಡಿಸಿ,

“ ಅನೇಕರು ಬೇರೆ ಬೇರೆ ದೇವ ಮೂರ್ತಿಗಳನ್ನು ಆರಾಧಿಸಿ ಸಾಕ್ಷಾತ್ಕರಿಸಿಕೊಂಡಿದ್ದೇವೆಂದು ಹೇಳಿರುವರಲ್ಲ?” ಎಂದನು.

“ ನಿಜ; ಅವರ ಭಾವನೆಯ ಪ್ರತಿ ರೂಪವನ್ನವರು ಕಂಡಿದ್ದಾರೆ.
ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ,
ರೂಪವೇನು ಇರದ ರೀತಿಯಲ್ಲಿ,
ಪರಮಯೋಗಿ ನೋಳ್ಪ ಪರಮಾತ್ಮನಿರವನು.
ವಿಶ್ವದಾಭಿರಾಮ ಕೇಳು ವೇಮ.”

**ನಾನು ಯಾರು? :**

ವೇಮನ ಯೋಗಿ ಮತ್ತು ಅವರ ಶಿಷ್ಯಗಣದ ಜೀವನ ಚರ್ಚೆಯು ಕೆಲವೊಂದು ಸಾಮಾನ್ಯ ನಿಯಮಗಳಿಗೆ ಒಳಪಟ್ಟಿತ್ತಾದರೂ, ದಿನ ದಿನದ ಸೈನಿಕ ಶಿಸ್ತನ್ನು ಅಲ್ಲಿ ಕಾಣುವಂತಿರಲಿಲ್ಲ. ಈ ತಿಂಗಳು ಜನರೊಡನೆ ವಿಶೇಷವಾಗಿ ಬೆರೆತು, ಸಂಭಾಷಿಸಿದರೆ ಮುಂದಿನ ಹಲವು ಕಾಲ ಏಕಾಂತದಲ್ಲಿಯೇ ಧ್ಯಾನ ಚಿಂತೆಗಿಳಿಯುತ್ತಿದ್ದರು. ಸಂಭಾಷಿಸುವ ಕಾಲಕ್ಕೆ ಸಾಮಾನ್ಯ ನೀತಿಪರ ವಿಷಯದಲ್ಲಿ ಆಶು ಕವಿತೆಗಳ ಬಳಕೆ ಹೆಚ್ಚಾಗಿತ್ತು. ಪ್ರಸಂಗಾವಧಾನದಿಂದ ಅವಶ್ಯ ಉಪದೇಶ ನುಡಿಯುತ್ತಿದ್ದರು. ಆದರೆ ಒಳ ಮನಸ್ಸು, ಮಾನಸಾತೀತ ವಿಷಯಗಳನ್ನು ತಿಳಿಸುವಾಗ,

ಅವರು ಬೋಧೆಯ ಪ್ರೇರಣೆಗೆ ಒಳಗಾಗುತ್ತಿದ್ದರು. ಅವರ ನಿಕಟ ಜೀವಿಸುವ ಶಿಷ್ಯರಿಗೆ, ಅವರನ್ನು ಪೂರ್ಣ ಶ್ರದ್ಧೆಯಿಂದ ಸೇವಿಸುವ ಹಲವು ಭಕ್ತರಿಗೆ, ಅವರ ಈ ಸ್ಥಿತಿಗಳಲ್ಲಿಯ ಅಂತರವು ವೇದ್ಯವಾಗುತ್ತಿತ್ತು. ಅವರ ಐಹಿಕ ಲೋಕ ಮನದಲ್ಲಿ ವಸ್ತುವಿಚಾರಗಳ ವಿಶ್ಲೇಷಣೆ, ವೈರಾಗ್ಯ –ವಿರಕ್ತಿ ಭಾವಗಳ ನೇರ ಅಭಿವ್ಯಕ್ತಿ ಕಾಣ ಬರುತ್ತಿತ್ತು. ಅದೇ ಹೊತ್ತಿಗೆ, ಅವರು ದಾರ್ಶನಿಕ ಬೋಧೆಯನ್ನು ಬೋಧೆಯ ಮೂಲಕ ನೀಡುವಾಗ, ಅವರ ಧ್ವನಿಯೇನೂ ಬದಲಾಗುತ್ತಿರಲಿಲ್ಲವಾದರೂ, ಅವರ ಮುಖ ಮುದ್ರೆ ಗಂಭೀರವಾಗಿರುತ್ತಿತ್ತು; ಅವರ ಭಾಷೆ ಭಾವಮಯವಾಗಿರುತ್ತಿತ್ತು. ಲಘು ಹಾಸ್ಯ ವಿಡಂಬನೆಗಳಿಂದ ದೂರವಾಗಿರುತ್ತಿತ್ತು. ಇಷ್ಟೊಂದು ತಿಳಿ ಹಾಸ್ಯದಲ್ಲಿ ಜೀವನವನ್ನು ಬಣ್ಣಿಸುವ ವರ್ಣಕ ಕವಿಯೇ, ಇಂಥ ರಹಸ್ಯಮಯ ದಾರ್ಶನಿಕ ಸತ್ಯವನ್ನು ತಿಳಿಸಿರುವನೇ? ಎಂದು, ಬೇರೆಯವರಿಂದ ಅವರ ಕವಿತೆಗಳನ್ನು ಕೇಳಿದವರು, ಅಚ್ಚರಿ ಪಡುವಂತಾಗುತಿತ್ತು. ಆದರೆ ಅವರು ಆಯಾ ಪದ್ಯಗಳನ್ನಾಡುತ್ತಿದ್ದರು. ಈ ಪದ್ಯ ಸಂಕಲನಗಳನ್ನು ಸೂಕ್ತಿ ರತ್ನಾಕರವೆಂದೇ ಬಣ್ಣಿಸಬಹುದಾಗಿದೆ.

ಆ ಸಾಯಂಕಾಲ, ದಂಡೀ ಸನ್ಯಾಸ ಸ್ವೀಕಾರ ಮಾಡಿದ, ಇಳಿವಯಸ್ಸಿನ ಸಾಧುಗಳೊಬ್ಬರು, ಯುವಕ ಅವಧೂತ ಯೋಗಿಯೊಬ್ಬರು ತುಂಬಾ ಉದ್ಬೋಧಕವಾಗಿ ತಿಳಿಸಿಕೊಡುವರೆಂದು ಕೇಳಿ, ವೇಮನರಲ್ಲಿಗೆ ಬಂದನು. ಉಭಯ ಕುಶಲೋಪರಿಯಾದ ಬಳಿಕ, ವೇಮನರು ಅವರಿಗೆ ಕೈ ಜೋಡಿಸಿ ಕುಳಿತುಕೊಳ್ಳಲು ಹೇಳಿದರು. ರಾಮರೆಡ್ಡಿಯು ಅಷ್ಟರಲ್ಲಿ ಚಾಪೆ, ಕೃಷ್ಣಾಜಿನವನ್ನು ಹಾಸಿದ್ದನು. ಬಂದ ಸನ್ಯಾಸಿ, ಆಶೀರ್ವಾದ ಪೂರ್ವಕಕೈಯೆತ್ತಿದನೇ ಹೊರತು ಬಾಗಿ ಕೈ ಜೋಡಿಸಲಿಲ್ಲ. ಉಭಯ ಕುಶಲೋಪರಿಯ ನಂತರ, ತಾನು ಜ್ಯೋತಿರ್ಮಠದ ಶಾಂಕರ ಸಂಪ್ರದಾಯದವನೆಂದೂ, ದೇಶ ಸಂಚಾರ ನಿಮಿತ್ತ ಈ ದಕ್ಷಿಣ ದೇಶ ಸಂಚಾರ ಮಾಡುತ್ತ ಇಲ್ಲಿಗೆ ಬಂದುದಾಗಿಯೂ ತಿಳಿಸಿದನು. ಅವನು ಮೂಲತಃ ಮದ್ರಾಸಿನವನಾದುದರಿಂದ ಸಾಕಷ್ಟು ತೆಲುಗು ಬಾಷೆಯ ಪರಿಚಯವಿತ್ತು. "ಆದಿ ಶಂಕರಾಚಾರ್ಯ ಭಗವತ್ಪಾದರು ಸಾಕ್ಷಾತ್ ಶಿವನ ಅವತಾರ. ಅವರು ಹಿಂದು ಧರ್ಮಗ್ಲಾನಿ ನಡೆದ ಕಾಲದಲ್ಲಿ ಅವತರಿಸಿ, ಬೌದ್ಧರ ದಾಳಿಗೆ ಸಿಕ್ಕ ಧರ್ಮವನ್ನು ಕಾಪಾಡಿದವರು. " ಬ್ರಹ್ಮ ಸತ್ಯಂ; ಜಗನ್ಮಥ್ಯಾಜೀವೋಬ್ರಹ್ಮೈವ ನಾ ಪರಃ" ಎಂಬ ಕಟು ಸತ್ಯವನ್ನು ಸಾರಿ, ಬೌದ್ಧರ ಕ್ಷಣಿಕವಾದ ಮತ್ತು ಶೂನ್ಯವಾದಗಳಿಗೆ ತಕ್ಕ ಉತ್ತರ ನೀಡಿದ ಮಹಾಜ್ಞಾನಿಗಳು." ಎಂದು ಮುಂತಾಗಿ ನಿರರ್ಗಳವಾಗಿ ಅರ್ಧ ಘಂಟೆ ಮಾತನಾಡಿದನು. ಎಲ್ಲರೂ ಮಂತ್ರ ಮುಗ್ಧರಾಗಿ ಬೋಧೆಯನ್ನು ಆಲಿಸಿದರು. ಆಗಂತುಕ ಸನ್ಯಾಸಿಯ ನಿರರ್ಗಳ ವಾಣಿಗೆ ವೇಮನ ಯೋಗಿಯೂ ಒಂದೆರಡು ಬಾರಿ ಸೈಗುಟ್ಟದಿರಲಿಲ್ಲ. ಮಾತು ಮುಂದುವರಿದು, ಭಗವತ್ಪಾದರು ಕಾಶಿಯಲ್ಲಿ ಓರ್ವ ಚಾಂಡಾಲನನ್ನು ಶಿವರೂಪದಲ್ಲಿ ಕಾಣುವ ಕತೆಯು ಪ್ರಸ್ತಾಪಿಸಲ್ಪಟ್ಟಿತು.

— — — — — — — — — — — — — — — — — — — — — —

"ಅಹುದು; ಅಂದು ಕಾಶಿಯಲ್ಲಿದ್ದ ಭಗವತ್ಪಾದರು ಗಂಗೆಯಲ್ಲಿ ಮಿಂದು ಹೊರಟಿದ್ದರು. ಪಾಪ! ಮಾರ್ಗ ಮಧ್ಯದಲ್ಲಿ ಓರ್ವ ಚಾಂಡಾಲ ಸಾಧುವು ತನ್ನ ನಾಯಿಯೊಂದಿಗೆ ನದಿಯುತ್ತ ನಡೆದಿದ್ದನು. ಆಚಾರ್ಯರು ಆ ಶ್ವಾನವನ್ನು ಮತ್ತು ಆ ಚಾಂಡಾಲ ಸಾಧುವನ್ನು ಸ್ಪರ್ಶಿಸದಂತೆ ಎಚ್ಚರವಹಿಸಿ ಸಾಗಿದ್ದರು. ಆದರೆ ರಸ್ತೆ ಇಕ್ಕಟ್ಟಾಗಿದ್ದರಿಂದ ಜೋಲಿ ಹೋಗಿ, ಆ ಚಾಂಡಾಲ ಸಾಧುವಿನ ಮೇಲೆ ಬಿದ್ದು ಬಿಟ್ಟರು. ಆಚಾರ್ಯರ ಶಿಷ್ಯರು ರೊಚ್ಚಿಗೆದ್ದರು. ಆ ಚಾಂಡಾಲನ ಮೇಲೆ ಕೈಮಾಡುವುದರಲ್ಲಿದ್ದರು. ಆದರೆ ಅವನನ್ನು ಹೇಗೆ ಸ್ಪರ್ಶಿಸುವುದು! ದಿಙ್ಮೂಢರಾಗಿ ಆಚಾರ್ಯರ ಆದೇಶ ನಿರೀಕ್ಷಿಸುತ್ತ ನಿಂತರು. ಇತ್ತ ಆಚಾರ್ಯರು ಚಾಂಡಾಲ ಸಾಧುವಿನತ್ತ ಹೊರಳಿ, "ಏನಯ್ಯ! ಎಲ್ಲ ಮೈಲಿಗೆಯಾಯಿತು. ಇದರ ಪಾಪ ನಿನಗೆ ತಟ್ಟದಿರದು" ಎಂದರು. ಆಗ ಆ ಚಾಂಡಾಲ ಸಾಧುವು,

" ಏನು ಆಚಾರ್ಯ! ನೀನು ಜ್ಞಾನಿಯೆಂದು ಜನರು ಸ್ತುತಿಸುತ್ತಾರೆ. ಇದಿಷ್ಟೇ ಜ್ಞಾನವೇ?" ಎಂದು ಕೊಂಕು ನುಡಿದನು.

" ಅಂದರೆ... ..."

" ನೀನು ದೇಹವೂ; ಬ್ರಹ್ಮನೋ?"

" ಅಹಂ ಬ್ರಹ್ಮ ಆಸ್ಮಿ" ಎಂದರು ಆಚಾರ್ಯರು.

" ನಾನು ಮತ್ತು ಈ ನಾಯಿ ಏನು ಮತ್ತೆ?" ಎಂದು ಪ್ರಶ್ನಿಸಿದನು. ಆ ಚಾಂಡಾಲ ಸಾಧು.

"ಸರ್ವಂ ಖಲ್ವಿದಂ ಬ್ರಹ್ಮ" ಎಂದು ಗುಡುಗಿದರು ಆಚಾರ್ಯರು. "ಸರಿ; ಈಗ ಮುಟ್ಟು, ಬ್ರಹ್ಮನಿಗೆ ಬ್ರಹ್ಮನಿಂದಾಗಿದೆಯೋ ಇಲ್ಲವೆ ದೇಹದಿಂದ ದೇಹಕ್ಕಾಗಿದೆಯೋ?" ಎಂದೂ ಪ್ರಶ್ನಿಸಿದನು, ಆ ಚಾಂಡಾಲ ಸಾಧು.

" .. .. .. .." ನಿರುತ್ತರರಾದರು ಆಚಾರ್ಯ ಶಂಕರರು. ಒಂದೆರಡು ನಿಮಿಷ ಗಂಭೀರ ಮೌನ ಆವರಿಸಿತು. ಮೋಡ ಕವಿದ ಇರುಳಿನಲ್ಲಿ ಮಿಂಚು ಮೂಡಿದಂತೆ ಸಮನಾಗಿರುವರೋ, ಆ ಭಗವಂತನ ರೂಪವೇ ಈ ಚಾಂಡಾಲ ರೂಪೀ ಗುರು. ಗುರುವು ಚಾಂಡಾಲನಲ್ಲ. ಚಾಂಡಾಲನಾಗಿ ಜನಿಸಿದವನು ಸಾಧನ ಸಿದ್ಧಿಯಿಂದ ಗುರುವಾಗಿದ್ದಾನೆ; ಎಂದು ಅರಿತು, ಶಂಕರರು ಆ ಚಾಂಡಾಲ ಗುರುವಿಗೆ ದೀರ್ಘದಂಡ ನಮಸ್ಕಾರ ಮಾಡಿದರು. "ತಮ್ಮ ದರ್ಶನದಿಂದ ನನ್ನ ಕುಲ ಮೋಹವು ಕಳೆಯಿತು. ಮಡಿ ಮೈಲಿಗೆಯ ಕಲ್ಪನೆಯೂ ಅಳಿಯಿತು." ಎಂದರು. ಈ ಕತೆಯನ್ನು ಆ ಸನ್ಯಾಸಿ ಹೇಳಿ ಮುಗಿಸಿದನು. ಅಂದಿನ ಚರ್ಚೆ ಅಲ್ಲಿಗೆ ಮುಗಿಯಿತು.

ತಂಜಾವೂರಿನಲ್ಲಿ, ಮುಂದಿನ ಹಲವಾರು ದಿನಗಳ ವರೆಗೆ ತಂಗಿ, ಅನಂತರ ವೇಮನ ಯೋಗಿ ನೆಲ್ಲೂರು ಕಡೆಗೆ ಪ್ರಯಾಣ ಬೆಳೆಸಿದರು. ಈ ಮಧ್ಯಂತರ

ಅವಧಿಯಲ್ಲಿ ಆಯ್ದ ಕೆಲವು ಜಿಜ್ಞಾಸುಗಳೊಂದಿಗೆ ನಡೆದ ಚರ್ಚೆಯ ಮೂಲಕ ಧರ್ಮಪ್ರಸಾರವಾಯಿತೇ ವಿನಹ ಪ್ರವಾಸದಲ್ಲಿ ಇರಲಿಲ್ಲ. ಆದರೆ, ಸಾಹಿತ್ಯ ಕೃಷಿಯು ವಿಪುಲವಾಗಿ ನಡೆಯಿತು. ಮರು ಪ್ರಯಾಣದಲ್ಲಿ ಅಲ್ಲಲ್ಲಿಯ ಬೆಟ್ಟದೂರುಗಳಲ್ಲಿ ಬಿಡಾರ ಹೂಡುತ್ತಿದ್ದರು. ಕಾಲುವೆಯ ಇಲ್ಲವೆ ಕೆರೆಯ ಪಕ್ಕದ ದೊಡ್ಡ ಮರ, ಧರ್ಮಶಾಲೆ ಇಲ್ಲವೆ ಊರ ಹೊರವಲಯದ ಹಾಳು ಗುಡಿಗಳೇ ಇವರ ಬಿಡಾರ ಸ್ಥಾನಗಳಾಗಿದ್ದವು. ಭಿಕ್ಷಾಟನೆಯು ಉಪಜೀವನ ವೃತ್ತಿಯಾಗಿತ್ತು. ಒಂದೊಂದು ಊರಿನಲ್ಲಿ ಎರಡು ಮೂರು ದಿನ ಬಿಡಾರ ಹೂಡಿದರೆ, ಭಕ್ತರಿರುವಲ್ಲಿ ವಾರ ವಾರಗಳ ವರೆಗೆ ನಿಲ್ಲುತ್ತಿದ್ದರು. ಇಂಥ ಒಂದು ಗ್ರಾಮದಲ್ಲಿ ನೆಲೆಗೊಂಡಾಗ, ಸಾಯಂಕಾಲ ಹಲವಾರು ರೈತರು ಜನರು ಬಂದು ಸೇರಿದರು. ಮಳೆ – ಬೆಳೆ ಕುರಿತು ಮಾತಕತೆ ನಡೆಯಿತು.

'ಅಪ್ಪ! ವೈಶಾಖ ಮಾಸ ಕಳೆಯುತ್ತ ಬಂದಿತು. ಇಷ್ಟರಲ್ಲಿ ಒಂದೆರಡು ಸೆಳಕುಗಳು ಬೀಳಬೇಕಾಗಿತ್ತು. ಆದರೆ ಮಳೆಯೇ ಬಿದ್ದಿಲ್ಲ. ತಾವು ಅರವ ನಾಡಿನಲ್ಲಿ ಇರುವಾಗ ಒಂದು ಬಾರಿ ಮಳೆತರಿಸಿದ್ದಿರಿ, ಎಂದು ಕೇಳಿದ್ದೇವೆ. ನಮ್ಮ ಮೇಲೂ ಕೃಪೆ ತೋರಿದರೆ ಲೇಸು" ಎಂದು ಹಿರಿಯನೊಬ್ಬ ನುಡಿದ.

"... ..." ಏನನ್ನೂ ಹೇಳದೆ, ಕೇವಲ ಮುಗುಳುನಕ್ಕರು ಯೋಗಿಗಳು. ಅವರು ಕಣ್ಣು ಧ್ಯಾನಿಸಿದರು. ಕೆಲ ನಿಮಿಷಗಳುರುಳಿದ ಮೇಲೆ,

"ದೇವರು ಕಣ್ತೆರೆದರೆ, ಎಲ್ಲವೂ ಸರಿ ಹೋಗುವುದು" ಎಂದು ನುಡಿದರು.

"ತಾವು ಸಂಕಲ್ಪಿಸಿದರೆ ಅದೆಲ್ಲ ಸಾಧ್ಯ; ಸ್ವಾಮೀ!" ಎಂದನು ಆ ಹಿರಿಯ.

"ಹನಿಯು ಬೀಳುವಂದ; ಹರಣ ತೊಲಗುವಂದ,
ತಿಳಿಯಲಾರ ಘನನು ತಾನಿರಲೂ.
ತಿಳಿಯಲಾಗ ಕಲಿಯುಗ ಉಳಿಯುವುದು ಎಂತು?
ವಿಶ್ವದಾಭಿರಾಮ ಕೇಳು ವೇಮ.
ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ,
ನಿಶ್ಚಲಾಗಿ ಭಕ್ತಿ ನಿಲಿಸಿದವನು,
ಸರ್ವ ಮುಕ್ತ ನಿಹನು ಸರ್ವ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ."

ಮಾತು ಮೌನವಾಯಿತು. ಮಾತು ಬೆಳ್ಳಿಯಾಗಿತ್ತು. ಈಗ ಮೌನ ಬಂಗಾರವಾಯಿತು. ವಾತಾವರಣದ ಪ್ರಶಾಂತತೆ ಮೂಡಿ ಗಾಢವಾಗುತ್ತ ನಡೆಯಿತ್ತು. ಒಂದು ವಿಚಾರ ಇನ್ನೊಂದು ವಿಚಾರದ, ಒಂದು ಘಟನೆ ಇನ್ನೊಂದು ಮಧ್ಯಂತರ ಅವಧಿಯ ಮಾನಸಿಕ ಕಲ್ಪನೆಯೇ 'ಕಾಲ'ವಷ್ಟೇ. ಆದರೆ ವಿಚಾರಗಳ ಸುಳಿವೇ ಇರಲಿಲ್ಲ.

— — — — — — — — — — — — — — — — — — — — —

ಅಂದು ಸೋಮವಾರ. ರಾಮರೆಡ್ಡಿ ಮತ್ತು ನೀಲಕಂಠರಿಬ್ಬರೂ ಭಿಕ್ಷಾಟನೆಗೆಂದು ಹೋಗಿದ್ದರು. ಇತ್ತ ಯೋಗಿಗಳು ಎದ್ದು ನಡೆದರು. ತೋಟದ ಬದಿಯ ಹಾದಿ ಹಿಡಿದು ಸಾಗಿದರು. ಅವರು ನಡೆಯವುದು ಕಡಿಮೆಯಾದರೂ ಯೋಗಬಲದಿಂದ ಅವರ ಶರೀರಕ್ಕೊಂದು ರೀತಿಯ ಲಾಘವತೆ ಬಂದಿತ್ತು. ಹೀಗಾಗಿ, ನಡಿಗೆಯಲ್ಲಿ ತೀವ್ರತೆ ಶರೀರಕ್ಕೊಂದು ರೀತಿಯ ಲಾಘವತೆ ಬಂದಿತ್ತು. ಹೀಗಾಗಿ, ನಡಿಗೆಯಲ್ಲಿ ತೀವ್ರತೆ ಸಹಜವಾಗಿತ್ತು. ಅವರು ಒಂದು ಘಂಟೆಯವರೆಗೆ ನಡೆದಿರಬಹುದು. ನೆರೆಯ ಹಳ್ಳಿಯ ಅಂಚು ತಲುಪಿದರು., ಅಲ್ಲಿ ಒಂದು ಸಣ್ಣ ಗುಡಿಸಲು; ವಯಸ್ಸಾದ ಬಡ ದಂಪತಿ. ಒಲುಮೆಯನ್ನೇ ಕೊಂಡು ಕೊಟ್ಟು ಬಾಳುತ್ತಿದ್ದರು. ತಮ್ಮ ಮನೆಯ ಮುಂದಿನ ಹಾದಿ ಹಿಡಿದು ನಗ್ನ ಸ್ವಾಮಿಯೋರ್ವನು ಬರುತ್ತಿದ್ದದನು ಆ ಗುಡಿಸಲಿನ ಹೊರಗಟ್ಟೆಯ ಮೇಲೆ ಕುಳಿತಿದ್ದ ದಂಪತಿ ಕಂಡರು. ಆ ಹಿಂದಿನ ರಾತ್ರಿ ತಮ್ಮ 'ಮನೆಗೆ ಮಹಾತ್ಮನೊಬ್ಬನು ಬರುತ್ತಾನೆ. ನಿಮ್ಮ ಕಷ್ಟ ದೂರವಾಗುತ್ತದೆ' ಎಂಬ ಸ್ವಪ್ನ ದರ್ಶನ ಇಬ್ಬರಿಗೂ ಆಗಿತ್ತು. ಇಬ್ಬರು ಒಂದೇ ಬಗೆಯ ಸ್ವಪ್ನ ಕಂಡಿದ್ದು ತಮ್ಮ ಜೀವನದಲ್ಲಿ ಇದೇ ಮೊದಲು. ಸ್ವಾಮಿ ಮನೆಯನ್ನು ಸಮೀಪಿಸಿದ. ನೋಡಲು ಸುಂದರ ಯುವಕ. ದಿಕ್ಕೇ ಅಂಬರವಾಗಿತ್ತು, ಆ ಅವಧೂತನಿಗೆ. ಮುಖ ಕಾಂತಿಯುತವಾಗಿತ್ತು. ದಂಪತಿ ಮಾರ್ಗದ ಒಂದಂಚಿಗೆ ನಿಂತು ಸ್ವಾಗತಿಸಿದರು.

"ಬನ್ನಿ ಅಪ್ಪಾ! ತಮ್ಮ ಬರುವಿಕೆ ಕುರಿತು ನಿನ್ನೇ ನಾವಿಬ್ಬರೂ ಸ್ವಪ್ನ ಕಂಡೆವು." ಎಂದನು ವೃದ್ಧ.

"ಹೌದೇ?" ಎಂದು ಮುಗುಳು ನಕ್ಕರು ಯೋಗಿ.

"ನಮ್ಮ ಗುಡಿಸಲಿಗೆ ದಯ ಮಾಡಿಸಿ ನಮ್ಮನ್ನು ಉದ್ಧರಿಸಬೇಕು" ಎಂದಳು ವೃದ್ಧೆ.

ವೇಮನ ಯೋಗಿ ಆ ದಂಪತಿಗಳನ್ನು ಹಿಂಬಾಲಿಸಿದರು. ವೃದ್ಧೆಯು ತಾಮ್ರದ ತಂಬಿಗೆಯಲ್ಲಿ ನೀರನ್ನು ತಂದಳು. ಜೊತೆಗೆ ತಾಟನ್ನು ತಂದಳು. ಯೋಗಿಗೆ ಕುಳಿತುಕೊಳ್ಳಲು ಹಳೇ ಕಂಬಳಿಯನ್ನು ಹಾಸಿದನು, ಅ ವೃದ್ಧ. ಅಷ್ಟರಲ್ಲಿ ತಾಟನ್ನು ಇದಿರು ನಿಂತ ಯೋಗಿಯ ಪಾದಗಳಡಿಗಿಟ್ಟು ಭಕ್ತಿಯಿಂದ ಪಾದ ತೊಳೆದಳು, ವೃದ್ಧೆ. ಅನಂತರ ಆ ಸಿದ್ಧಪಡಿಸಿದ ಆಸನದ ಮೇಲೆ ಯೋಗಿ ಆಸೀನರಾದರು. ವೃದ್ಧನು ನಮಸ್ಕರಿಸಿ, ಎದ್ದು ಕೊಯ್ತದಿಂದ ತನ್ನ ಮನೆಯಂಗಳದಲ್ಲಿ ಬೆಳೆದ ಪಪ್ಪಾಯಿ ಗಿಡದಿಂದ ಒಂದು ಪಕ್ವ ಫಲವನ್ನು ಕೊಯ್ದು ತಂದನು. ತಾಟನ್ನು ಸ್ವಚ್ಛವಾಗಿ ತೊಳೆದು, ಹಣ್ಣನ್ನು ಕೊಯ್ತದಿಂದಲೇ ಹೋಳು ಹೋಳು ಮಾಡಿ, ಬೀಜ ತಗೆದು, ಯೋಗಿಯ ಎದುರು ಇಟ್ಟನು. ಯೋಗಿಯು ಎರಡು ಮೂರು ತೊಳೆಗಳನ್ನು ತಿಂದು ಸಂತೃಪ್ತಿ ಬೀರಿದರು. ಅವರು ಸಂತೃಪ್ತಿ ಸೂಸುವಾಗ, ವೃದ್ಧ ದಂಪತಿಗಳು ಸಹೃದಯರಾಗಿ ಸಂತೃಪ್ತರಾದರು. ಅಷ್ಟರಲ್ಲಿ ಆ ವಿಚಿತ್ರ ದಿಗಂಬರ ಸಾಧುವನ್ನು ಕಂಡು ಹಾದಿಯಲ್ಲಿ ಹೋಗುವ ಜನ ನಿಂತು ನೋಡತೊಡಗಿದರು.

— — — — — — — — — — — — — — — — — — — — — — —

ಆ ಬಡ ದಂಪತಿಗಳ ಗುಡಿಸಲಿಗೆ ಬರುವುದು ತಮ್ಮ ಘನತೆಗೆ ಕೀಳೆಂದು, ಸಿರಿವಂತರು, ಉಚ್ಚಕುಲದವರು ದೂರದಿಂದಲೇ ನಡೆದುದನ್ನು ವೀಕ್ಷಿಸುತ್ತಿದ್ದರು. ಹೀಗೆಯೇ ದೇವರ ಸೇವೆ ಕುರಿತು, ಬಾಳಿನ ಗುರಿ ಹಳ್ಳಿಗರ ಸಾದಾ ಸರಳ ಭಾಷೆಯಲ್ಲಿಯೇ ನಾಲ್ಕು ಮಾತು ನುಡಿದರು, ಯೋಗಿ. ಕೆಲ ಬಡವರು, ನೆರೆದ ಮಕ್ಕಳು ಆಲಿಸಿದರು. ಅವರಿಗೇನು ಅರ್ಥವಾಯಿತೋ ಏನೋ! ಹೀಗೆ ಒಂದೆರೆಡು ಘಂಟೆ ಆಡಾಡುತ್ತ ಕಳೆಯಿತು. ಕೊನೆಗೆ, ಯೋಗಿ ಗುಡಿಸಲೊಳಗೆ ಹೋಗಿ ಒಂದು ಮಡಿಕೆಯಲ್ಲಿ ಮೂತ್ರ ವಿಸರ್ಜಿಸಿ ಬಂದರು. ಕಂಡ ಮಕ್ಕಳಿಗೆ ಇದು ಸೋಜಿಗವೆನಿಸಿತು. ವಯಸ್ಸಾದ ಜನರಿಗೆ ಇದು ತಿಳಿಗೇಡಿ ವರ್ತನೆ ಎನಿಸಿತು. ಆ ಗುಡಿಸಲಿನ ಒಡೆಯರಾದ ವೃದ್ಧ ದಂಪತಿಗಳಿಗೆ, ತಮ್ಮ ಸ್ವಪ್ನದರ್ಶನವು ನೆನಪಾಗಿ, ಇದೊಂದು ಮಹಾಪುರುಷನ ವಿಚಿತ್ರವಾಗಿ ತೋರಿತು, ಅನಂತರ, ಯೋಗಿ ಹೊರಬಂದು ವೃದ್ಧ ದಂಪತಿಗಳನ್ನು ಕುರಿತು,

"ದೇವರು ನಿಮ್ಮ ಕೂಗಿಗೆ ಓಗೊಟ್ಟಿದ್ದಾನೆ. ನೆಮ್ಮದಿಯಿಂದ ಇರಿ" ಎಂದು ಆಶೀರ್ವದಿಸಿದರು.

ಇತರರು ಯೋಗಿಯನ್ನು 'ಹುಚ್ಚ' ಎಂದೇ ತಿಳಿದುದರಿಂದ ಅವರು ಅವನ ಚಲನವಲನಗಳನ್ನು ಮತ್ತು ಅದರಲ್ಲಿಯ ವೈಪರೀತ್ಯ ಹಾಗೂ ವಿಕ್ಷಿಪ್ತತೆಗಳತ್ತ ಗಮನವಿತ್ತರೇ ಹೊರತು, ಯೋಗಿಯ ಮಹಿಮೆ ಕಲ್ಪನೆಯೂ ಅವರ ಮನದಲ್ಲಿ ಸುಳಿಯಲಿಲ್ಲ. ಮನೆಯ ಒಳಗೆ ಜನರೆದುರೇ ಮೂತ್ರ ವಿಸರ್ಜನೆ ಮಾಡಿದ ಮರುಳ ಶಂಕರನೆಂದು ಚಿಕ್ಕ ಮಕ್ಕಳು ಯೋಗಿಯನ್ನು ಹಿಂಬಾಲಿಸಿದರು.

ಯೋಗಿ ಇನ್ನೂ ಊರನ್ನು ದಾಟಿ ಹೋಗಿರಲಿಲ್ಲ. ಅಷ್ಟರಲ್ಲಿ ಅವರು ಊರ ಆಚೆಯ ಸೆರಗಿನಲ್ಲಿರುವ ಗುಡಿಸಲಿನಲ್ಲಿ ಒಳಹೊಕ್ಕು, ಮೂತ್ರ ವಿಸರ್ಜನೆಯನ್ನು ಮಾಡಿರುವ ಸುದ್ದಿ ಹಬ್ಬಿತು. ನಾಲ್ಕಾರು ಯುವಕರು ಈ 'ಹುಚ್ಚ' ನಿಗೆ ಬುದ್ಧಿ ಕಲಿಸಲೆಂದು ಬಂದರು. ಯೋಗಿಯ ಸುತ್ತು ನೆರೆದ ಹುಡುಗರು, ಮೂತ್ರ ವಿಸರ್ಜಿಸಿದುದನ್ನು ತಾವೇ ಖುದ್ದಾಗಿ ನೋಡಿದ್ದೇವೆಂದು ಹೇಳಿದರು. ಕೂಡಲೇ ಯುವಕನೊಬ್ಬನು.

"ಏ ಹುಚ್ಚಯ್ಯ! ಎಲ್ಲಿ ಮೂತ್ರ ಬಿಡಬೇಕೆಂದು ನಿನಗೆ ತಿಳಿಯುವುದಿಲ್ಲವೋ?" ಎಂದು ಕೇಳಿದನು.

"ಅದೆಲ್ಲ ದೇವರಿಚ್ಛೆ" ಎಂದು ಕೈ ಮೇಲೆ ತೋರಿಸಿದರು, ಯೋಗಿ, ಅಷ್ಟರಲ್ಲಿ ಇನ್ನೊರ್ವನು ಇವರ ಚಿಕ್ಕ ಲಂಗೋಟಿಯನ್ನು ಹಿಡಿದು ಎಳೆದನು. ಲಂಗೋಟಿ ಹರಿಯಿತು. ಮತ್ತೊಬ್ಬನು ಒಂದು ಕಟ್ಟಿಗೆ ತುಂಡೊಂದನ್ನು ಹಿಡಿದು ಶಿಶ್ನವನ್ನು ಅಲುಗಾಡಿಸಿ, ಇದು ತಾನೇ ಮೂತ್ರ ಬಿಟ್ಟಿತೋ? ಇಲ್ಲವೆ ನೀನೇ ಬಿಟ್ಟೆಯೋ?" ಎಂದು ಎಲ್ಲರಿಗೂ ಕೇಳಿಸುವಂತೆ ಖೊಳ್ಳೆಂದು ನಕ್ಕನು. ಯೋಗಿಗಳೂ ನಕ್ಕರು.

— — — — — — — — — — — — — — — — — — — — — —

"ಇಷ್ಟೆಲ್ಲ ಮಾಡಿದರೂ ನಗುವೆಯಾ?" ಎಂದು ಆ ಯುವಕರು ಯೋಗಿಯನ್ನು ಕೆಡವಿ ನಾಲ್ಕೇಟು ಕೊಟ್ಟರು. ಇದುವರೆಗೆ ದೂರ ನಿಂತ ಹುಡುಗರೂ ಒಂದೆರಡು ಏಟು ಕೊಟ್ಟರು.

ವೇಮನರು ಮಾತನಾಡಲಿಲ್ಲ. ಬೇರೆಯವರಿಗೆ ಬೀಳುವ ಏಟುಗಳನ್ನು ನೋಡುವಂತೆ ಬೀಳುವ ಏಟುಗಳನ್ನು ಕಂಡರು.

"ಇಷ್ಟರಲ್ಲಿ, ವೇಮನರು ನೆಲ್ಲೂರಿನ ತೋಟದ ಕುಟೀರದಲ್ಲಿ ದೀರ್ಘಕಾಲ ಕಾಣದೆ ಗುರುಗಳಿಗಾಗಿ ಹಾದಿ ಹೋಕರೊಂದಿಗೆ ವಿಚಾರಿಸುತ್ತ ರಾಮರೆಡ್ಡಿ ಆ ಗ್ರಾಮಕ್ಕೆ ಬಂದನು. ಅಲ್ಲಿಯ ಜನ ಸಂದಣಿಯಲ್ಲಿ ಅವನು ಗುರುಗಳನ್ನು ಒಮ್ಮೆಲೇ ಕಾಣಲಿಲ್ಲ. ತನ್ನ ಗುರುವಿನ ವೇಷ ಭೂಷಣಗಳನ್ನು ತಿಳಿಸಿ, ಅಂಥವರು ಈ ಕಡೆಗೆ ಹೋಗಿರುವರೇನೆಂದು ವಿಚಾರಿಸಿದನು. ಆ ಮನುಷ್ಯನು, ಗುಂಪಿನಲ್ಲಿ ಅಡಗಿದ ಬೆತ್ತಲೆಯಾದ 'ಹುಚ್ಚ' ನನ್ನು ತೋರಿಸಿ, "ಅವನೇ ನಿನ್ನ ಗುರುವಿರಬೇಕು ನೋಡು' ಎಂದು ಹಾಸ್ಯ ಮಾಡಿದನು.

ರಾಮರೆಡ್ಡಿ ಕಣ್ಣಾರೆ ಕಂಡ ದೃಶ್ಯದಿಂದ ಕಂಗಾಲಾದನು. ಲಗುಬಗೆಯಿಂದ ಯೋಗಿಯ ಬಳಿಸಾರಿ, ದೀರ್ಘದಂಡ ನಮಸ್ಕಾರ ಮಾಡಿದನು. ಅವನ ನಿಬಿಡದಲ್ಲಿ ವಿದ್ಯುತ್ಸಂಚಾರವಾದಂತಾಯಿತು.

"ಏನಾಯಿತಪ್ಪಾ! ನಿನಗೇಕೆ ಈ ಪಾಡು?" ಎಂದು ಕನಿಕರಿಸಿ ಕೇಳಿದನು, ರಾಮರೆಡ್ಡಿ.

"ಗೋಟಿ ಬಿಟ್ಟ ಯೋಗಿ ಕೋತಿಯಾಟಾಡಿಸಿ,
ವಿಕೃತ ಕ್ರೀಡೆ ಗೆಯ್ದು, ವ್ಯಥೆಗೆ ಸಿಲುಕಿ,
ಮಾಳ್ಪರಯ್ಯ ಏನೊ? ಮಾಳ್ಪರೇತಕೇನೋ?
ವಿಶ್ವದಾಭಿರಾಮ ಕೇಳು ವೇಮ.

ಅವರ ಪೈಕಿ ಓರ್ವನು ಇಷ್ಟೆಲ್ಲ ತಿಳಿದ ಜ್ಞಾನಿಯಾಗಿದ್ದರೆ. " ಆ ಗುಡಿಸಲಿನಲ್ಲಿ ಎಲ್ಲರೆದುರು ಮೂತ್ರ ವಿಸರ್ಜನೆ ಮಾಡಿದ್ದೇಕೆ? ಎಂದು ಪ್ರಶ್ನೆಯೆತ್ತಿದನು. ಅಷ್ಟರಲ್ಲಿ, ಆ ಗುಡಿಸಲಿನ ವೃದ್ಧನೇ ಲಗುಬಗೆಯಾಗಿ ಇವರತ್ತ ಬರಹತ್ತಿದನು. ಎಲ್ಲರೂ ಅವನತ್ತ ತಿರುಗಿ,

" ಏನಪ್ಪಾ! ನಿನ್ನ ಮನೆ ಸಮಾಚಾರ? ಈ ನಗ್ನ ಯುವಕ ನಿನ್ನ ಮನೆಯಲ್ಲಿ ಮೂತ್ರ ವಿಸರ್ಜನೆ ಮಾಡಿದುದು ನಿಜವೇ?" ಎಂದು ಕೇಳಿದರು.

ವೃದ್ಧನು ಇವರತ್ತ ಲಕ್ಷ್ಯವಹಿಸದೆ, ನೇರವಾಗಿ ಯೋಗಿವರ್ಯರನ್ನು ಸಮೀಪಿಸಿ, ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು.

" ಈ ಬಡವನ ಮೇಲೆ ಕೃಪೆ ಮಾಡಿದುದನ್ನು ಎಷ್ಟು ಜನ್ಮ ಸ್ಮರಿಸಿದರೂ ಕಡಿಮೆಯಪ್ಪಾ!" ಎಂದು ನಿವೇದಿಸಿದನು.

ಬಳಿಕ ಜನರತ್ತ ಹೊರಳಿ,

"ಇವರು ಸಾಕ್ಷಾತ್ ಶಿವ ಸ್ವರೂಪರು. ತಾವು ನನ್ನ ಗುಡಿಸಲಿಗೆ ಬರುವ ಸೂಚನೆಯನ್ನು, ನಿನ್ನೆ ನನಗೂ, ನನ್ನ ಮಡದಿಗೂ ಕನಸಿನಲ್ಲಿ, ತಿಳಿಸಿದರು. ಇಂದು ಆಗಮಿಸಿ ನಾವು ಭಕ್ತಿಯಿಂದ ನೀಡಿದ ಪಪ್ಪಾಯಿ ಸೇವಿಸಿದರು. ಕೊನೆಗೆ ನಮ್ಮ ಮನೆಯಲ್ಲಿ ಮೂತ್ರ ವಿಸರ್ಜಿಸಿದರು.. ಆ ಮೂತ್ರವು ಈಗ ಬಂಗಾರವಾಗಿದೆ. ಎಂಥ ಪವಾಡವಿದು!" ಎಂದು ಹೃದಯಂಗಮವಾಗಿ ಬಣ್ಣಿಸಿದನು. ಅವನ ಕಣ್ಣು ಕೃತಜ್ಞತೆಯಿಂದ ನೀರು ತುಂಬಿತ್ತು.

ಇದನ್ನು ಕೇಳಿ, ಎಲ್ಲರೂ ಅವಾಕ್ಕಾದರು. ರಾಮರೆಡ್ಡಿಯ ಪ್ರತಿರೋಧವನ್ನು ಲೆಕ್ಕಿಸದೆ, ಯೋಗಿಯನ್ನು ಹೊತ್ತುಕೊಂಡು ಊರಲ್ಲಿ ಮೆರೆಸಿದರು. ನಂತರ, ಯೋಗಿವರ್ಯರು ಆ ಗ್ರಾಮದಲ್ಲಿಯೇ ಸಾಯಂಕಾಲದ ವರೆಗೆ ಉಳಿದು, ರಾಮರೆಡ್ಡಿಯೊಂದಿಗೆ ನೆಲ್ಲೂರಿನ ಹಾದಿ ಹಿಡಿದರು.

ಜನರು ಅವರನ್ನು ಕಳಿಸಲು ಬಂದರು. ಹಾದಿಯಲ್ಲಿ ಓರ್ವ ಹಿರಿಯನು ಈ ಮುನ್ನ ಯೋಗಿಗಳು ನುಡಿದ ಪದ್ಯದ ಮುಕುಟ ಚರಣದ ಅರ್ಥ ಕೇಳಿ, ಅದರಲ್ಲಿ ಅಳವಡಿಸಲಾದ ಅಭಿರಾಮಯ್ಯನನ್ನು ಕುರಿತು ತಿಳಿಯಬಯಸಿದನು. ಆಗ ರಾಮರೆಡ್ಡಿ,

"ಅವರು, ಗುರುಗಳು ಪೂರ್ವಾಶ್ರಮದಲ್ಲಿ ಸ್ವರ್ಣಶಿಲ್ಪ ಶಾಲೆಯ ವರಿಷ್ಠರಿದ್ದಾಗ, ಅಲ್ಲಿ ಸೇವೆಯಲ್ಲಿದ್ದ ಕರ್ಮಚಾರಿ. ತುಂಬಾ ಸಾಧು ವೃತ್ತಿಯ ಸಜ್ಜನ ಶ್ರೇಷ್ಠ. ಕಾಯಕ ನಿಷ್ಠ, ಸುಶೀಲ ಮನುಷ್ಯ. ನಮ್ಮ ಪರಮ ಗುರುಗಳಾದ ಲಂಬಿಕಾಯೋಗಿಗಳಲ್ಲಿ ವಿಶೇಷ ಭಕ್ತಿ ಹೊಂದಿ, ಜೀವನವನ್ನು ಉದ್ದೀಪಿಸಿಕೊಂಡ ಮಹಾತ್ಮ. ಆ ಕುರಿತು ಯೋಗಿಗಳು ಹೀಗೆ ತಿಳಿಸಿದ್ದಾರೆ,

**ಕಂದಃ** ಪ್ರತಿದಿನವೂ ಉದಯದಲ್ಲಿ–
ಮಿತಿ ಕಾಲವ ಲೆಕ್ಕಿಸದೆಯೆ, ಮೀರಿ ಕೆಲಸಕಾ–
ಗತವೇಕೆಂಬಾ ರಾಮಯ
ವ್ರತವರಿಯುತ, ಕಂಡೆನಿಂಥ, ಇರವನು, ವೇಮಾ.

ಅಭಿರಾಮಯ್ಯನವರು ಅಚಿತಿಮ ದೀಕ್ಷೆಗಾಗಿ ಎಲ್ಲ ಸಿದ್ಧತೆ ಹೊಂದಿದ್ದರು. ಆದರೆ ಆ ಕುಟುಂಬಸ್ಥನಿಗೆ ದಿಗಂಬರತ್ವದ ದೀಕ್ಷೆ ನೀಡುವುದನ್ನು ತಪ್ಪಿಸಲೆಂದೋ ಏನೋ, ಪರಮ ಗುರು ಲಂಬಿಕಾಯೋಗಿಗಳು, ನಮ್ಮ ಗುರುಗಳನ್ನು ಪ್ರೇರೇಪಿಸಿ, ಅಭಿರಾಮಯ್ಯನವರಿಗೆ ಆ ಭಾಗ್ಯ ತಪ್ಪುವಂತೆ ಮಾಡಿದರು. ಇದು ವಿಧಿಯ ಕೈವಾಡವೇ ಆದರೂ, ಲೋಕ ನೀತಿಯ ದೃಷ್ಟಿಯಿಂದ ದೋಷಪೂರ್ಣ ನಡತೆಯೆನಿಸುವುದರಿಂದ ಗುರುಗಳು ತಮ್ಮ ಸದುವಿನಯದ ನಡೆಯಿಂದ ಲೋಕಕ್ಕೆ

ಪಾಠ ಹೇಳಿದರು. ಹೀಗಾಗಿ,

"ಬ್ರಹ್ಮ ಕುಲಜನಾ ಅಭಿರಾಮಯಾರ್ಯ!
ಮೋಸವಾಯಿತೆ ಎನ್ನಿಂದ; ದಾಸನೆಂದು
ತಪ್ಪು ಕ್ಷಮಿಸಿದೆವೆಂದು ತಿಳಿಸಬೇಕು;
ಅಭಯ ಹೊಂದದೆ ಬಿಡೆ; ನಾನು ಆಂಘ್ರಿ, ವೇಮ."

**ಅಪ್ಪಟ ಭಕ್ತ :**

ಹಾದಿಯಲ್ಲಿ ಒಂದೆರಡು ಗ್ರಾಮಗಳನ್ನು ದಾಟಿ ಗುಂಟುಪಲ್ಲಿಯನ್ನು ತಲುಪಿದರು. ಅಲ್ಲಿಯ ಮುತ್ತಯ್ಯನೆಂಬ ಓರ್ವ ಸದ್ಗುಣಿ ಭಕ್ತನು ತನ್ನ ಪೂಜೆ ಪುನಸ್ಕಾರಗಳಿಂದ, ಜನರಿಗೆ ಓರ್ವ ಆದರ್ಶ ವ್ಯಕ್ತಿಯಾಗಿದ್ದನು. ಅವನೇ ಕಟ್ಟಿಸಿದ ಒಂದು ಧರ್ಮ ಛತ್ರದಲ್ಲಿ ವೇಮನ ಯೋಗಿಗಳು ಉಳಿದುಕೊಂಡರು. ಮುತ್ತಯ್ಯನು ಬಂದು ಸಾಧು ಸಂತರಿಗಾಗಲಿ, ಕೂಳಿಲ್ಲದ ಕಂಗಾಲಾದ ಬಡವರಿಗಾಗಲಿ, ಅನ್ನಕ್ಕೆ ಬರವಿಲ್ಲದಂತೆ ನೋಡಿಕೊಳ್ಳುತ್ತಿದ್ದನು. ತ್ರಿಕಾಲ ಶಿವಪೂಜೆ ಮಾಡುತ್ತಿದ್ದನು. ಮೇಲಾಗಿ, ಶಿವನು ತನ್ನ ಹೃದಯದಲ್ಲಿಯೇ ಇರುವನೆಂದೂ ನಂಬಿಕೊಂಡ ಸಜ್ಜನವಾಗಿದ್ದನು.

ತರುಣ ಯೋಗಿಯೊಬ್ಬರು ಊರಿನ ಹೊರವಲಯದ ಧರ್ಮಛತ್ರದಲ್ಲಿ ಉಳಿದುಕೊಂಡಿರುವುದನ್ನು ತಿಳಿದ ಮುತ್ತಯ್ಯನು ಅವರನ್ನು ಕಾಣಲು ಹೋದನು. ಆಗ ಸಾಯಂಕಾಲದ ಸಮಯ. ಹಲವು ಜನ ಜಿಜ್ಞಾಸುಗಳು ಸೇರಿದ್ದರು. ಯೋಗಿಗಳು ತಮ್ಮ ಬೋಧೆ ಆರಂಭಿಸಿದ್ದರು. ಶಿವಭಕ್ತನಾದ ಮುತ್ತಯ್ಯ ಬಂದಾಗ, ಉಳಿದ ಜನ ಅವನತ್ತ ನೋಡಿದರು. ಮುತ್ತಯ್ಯನು ನಿಗರ್ವಿಯಾಗಿ ಜನ ಮಧ್ಯೆ ಸೇರಿ ಕುಳಿತುಕೊಳ್ಳುವ ಮುನ್ನ ಯೋಗಿಗೆ ನಮಸ್ಕರಿಸಿದನು.

ಮುತ್ತಯ್ಯನ ಆಕಸ್ಮಿಕ ಆಗಮನದಿಂದ ವಾತಾವರಣದಲ್ಲಿ ವಿದ್ಯುತ್ಸಂಚಾರವಾಯಿತು. ತನ್ನ ಧ್ಯಾನ ಬಲದಿಂದ ಶಿವ ಸಾಕ್ಷಾತ್ಕಾರ ಪಡೆದ ಮಹಾತ್ಮನವನು. ಅನ್ನ ದಾನದ ಪುಣ್ಯಕಾರ್ಯದಂಥ ಸೇವೆಗೆ ತನ್ನ ಬಾಳನ್ನೇ ಮೀಸಲಾಗಿರಿಸಿದ ಸಜ್ಜನನಾತ.

"ತಮ್ಮ ಸಾಧನಾ ಪಥ ಕುರಿತು ತಿಳಿಯಬಹುದೇ?" ಎಂದು ನಿಃಸಂಕೋಚದಿಂದ ಸರಳ ಪ್ರಶ್ನೆ ಕೇಳಿದನು, ಮುತ್ತಯ್ಯ.

"ಸಾಮಾನ್ಯವಾಗಿ ಮತ್ತು ಮುಖ್ಯವಾಗಿ, ರಾಜಯೋಗವೇ. ಆದರೆ, ಕೆಲವೊಂದು ರಹಸ್ಯಮಯ ವಿಶೇಷಯೌಗಿಕ ಕ್ರಿಯೆಗಳೂ ಉಂಟು." ಎಂದು ಉತ್ತರಿಸಿದರು ಯೋಗಿ, ಮುತ್ತಯ್ಯನ ಯೌಗಿಕ ಪ್ರಗತಿಯನ್ನು ಸೂಕ್ಷ್ಮ ದೃಷ್ಟಿಯಿಂದ ಅರಿತು.

"ತಮ್ಮ ಗುರುಗಳಾರು?" ಎಂದು ತಿಳಿಯಬಯಸಿದರು, ಮುತ್ತಯ್ಯ.

"ಅವರೊಬ್ಬ ಹೆಸರು ಹೇಳಿಕೊಳ್ಳದ ಸಿದ್ಧ ಪುರುಷರು. ಆದರೂ ಶಿಷ್ಯಗಣದ

ಮಧ್ಯೆ ಅವರನ್ನು ಲಂಬಿಕಾಯೋಗಿಗಳೆಂದೇ ಕರೆಯುವುದು ರೂಢಿ. ಅವರು ಹಲವರಿಗೆ ಕಠಿಣವಾದ ಲಂಬಿಕಾ ಯೋಗದ ಕ್ರಮಗಳನ್ನು ತಿಳಿಸಿಕೊಟ್ಟ ಕಾರಣ, ಆ ಹೆಸರೇ ರೂಢಿಯಾಗಿದೆ" ಎಂದು ವಿವರಿಸಿದರು ಯೋಗಿ.

"ಇಂಥ ಹೆಸರು ಬಯಸದ ಸಿದ್ಧ ಪುರುಷರಿಂದಲೇ ಪ್ರಪಂಚದಲ್ಲಿ ಧರ್ಮ ಉಳಿದಿದೆ. ನಮಗೂ ಈ ಮುನ್ನ ಓರ್ವ ಸಿದ್ಧ ಪುರುಷರು ದರ್ಶನ ಲಾಭ ನೀಡಿ, ಸತ್ಸಂಗ ದಯಪಾಲಿಸಿ, ಬರೀ ದಾನಧರ್ಮಾದಿ ಕರ್ಮಗಳೇ ಧರ್ಮಸಾಧನಗಳೆಂದು ಗ್ರಹಿಸಿದ್ದ ನಮಗೆ ಹೃದಯ ಮಂದಿರದಲ್ಲಿ ಹರನನ್ನು ಅರಸುವಂತೆ ಹರಸಿದರು. ನಾವು ಆ ದಿಶೆಯಲ್ಲಿ ನಮ್ಮ ಕೈಲಾದಷ್ಟು ಪ್ರಯತ್ನಿಸುತ್ತಿದ್ದೇವೆ." ಎಂದರು ಮುತ್ತಯ್ಯ.

"ಅದು ತುಂಬಾ ಆದರ್ಶಪ್ರಾಯ ವರ್ತನೆ. 'ಆತ್ಮ ಮೋಕ್ಷಾರ್ಥಂ; ಜಗತ್ ಹಿತಾಯ ಚ' ಎಂಬ ಗುರಿಯೇ ಸರಿಯಾದದ್ದು. ನೀವು ಮಾಡುವ ಪುಣ್ಯ ಕಾರ್ಯದಿಂದ ನಿಮ್ಮ ಪೌತ್ರಾದಿಗಳಿಗೂ ಪ್ರಯೋಜನ ಉಂಟು. ನಿಮ್ಮ ಹೃದಯಸ್ಥ ಶಿವನ ಪೂಜೆಯಿಂದ ನಿಮ್ಮ ಮನವು ಉದ್ದೀಪ್ತವಾಗುತ್ತದೆ." ಎಂದು ಹರಸಿದರು, ಯೋಗಿಗಳು. ಸಂಭಾಷಣೆಯ ಮೂಲಕ ಬೀರಿದ ಕೃಪಾಧಾರೆಗಿಂತ, ಯೋಗಿಗಳ ಸನ್ನಿಧಿಯಲ್ಲಿರುವ ಆಧ್ಯಾತ್ಮಿಕ ವಿಕಿರಣಗಳಿಂದ, ಅಗ್ರಸರ ಸಾಧಕರಾದ ಮುತ್ತಯ್ಯನವರ ಮನ ನಿಸ್ತರಂಗ ಜಲಧಿಯಂತಾಯಿತು. ಅವರು ಅಲ್ಲಿಯೇ ಕಣ್ಣುಮುಚ್ಚಿ ಕುಳಿತರು. ಸಾಯಂಕಾಲ ಧ್ಯಾನದ ವೇಳೆಯಾದುದರಿಂದ ಎಲ್ಲರೂ ಚದುರಿದರು.

ಧ್ಯಾನ ಪೂಜೆ ಮುಗಿದ ಬಳಿಕ ಶಿಷ್ಯ ರಾಮರೆಡ್ಡಿ ಮತ್ತು ನೀಲಕಂಠರನ್ನು ಉದ್ದೇಶಿಸಿ ಮಾತನಾಡುತ್ತ, ಯೋಗಿವರ್ಯರು,

"ನೋಡಿಯಪ್ಪ! ಭಕ್ತನ ಸ್ಥಿತಿಯನ್ನು! ಅನ್ನದಾನ, ಅರವಟ್ಟಿಗೆಗಳಿಂದ ಲೋಕ ಹಿತಗೆಯ್ಯುವ ಈ ಮುತ್ತಯ್ಯನು ಕೇವಲ ಕರ್ಮಜೀವಿಯೇನಲ್ಲ. ಆತ್ಮಧ್ಯಾನದಲ್ಲಿ ಗುಣಗಳನ್ನು ಹೊಂದಿದ ಪರಮ ಗುಣಿಯೀತ.

ಪ್ರಕಟವಾಗಿ ಇಹನು ಪ್ರಪಂಚದಲ್ಲಿ ಗುಂಟು–
ಪಲ್ಲಿ ಮುತ್ತನೆಂಬ ಪರಮ ಗುಣಿಯು.
ಅನ್ನದಾನ ಗೆಯ್ದು, ಹರ ಪೂಜೆ ಗೆಯ್ಯುತ;
ಹರನನೊಳಗೆ ನೋಳ್ಪ ಅರಸಿ ವೇಮ."

ಎಂದು ಮುತ್ತಯ್ಯನನ್ನು ಕುರಿತು ಪ್ರಶಂಸಾ ರೂಪಿ ಪದ್ಯವೊಂದು ಯೋಗಿಯ ಬಾಯಿಯಿಂದ ಹೊರಬಿತ್ತು. ಇಂಥ ಮಾದರಿಯ ವ್ಯಕ್ತಿ ಪ್ರಶಂಸೆಯ ಪದ್ಯಗಳನ್ನು ಆ ಮುನ್ನ ಕೇಳದ ರಾಮರೆಡ್ಡಿ ಅಚ್ಚರಿಪಟ್ಟನು. ಯೋಗಿ ಅವನ ಆಶ್ಚರ್ಯಕ್ಕೆ ಉತ್ತರವಾಗಿ ಕೇವಲ ನಸುನಕ್ಕರು.

ಮುಂದೆ ನಾಲ್ಕಾರು ದಿನ ಅಲ್ಲಿಯೇ ಉಳಿದು, ಯೋಗಿಯ ಪರಿವಾರವು ಕೊಂಡವೀಡುವಿನತ್ತ ಸಾಗಿತು.

**ಸ್ಪೃಶ್ಯ – ಅಸ್ಪೃಶ್ಯ ಭೇದ :**

ಮಾರ್ಗಮಧ್ಯೆ ರಾತ್ರಿಯಾದ ಪ್ರಯುಕ್ತ ಒಂದು ಚಿಕ್ಕ ಗ್ರಾಮದಲ್ಲಿ ಬಿಡಾರ ಹೂಡಿದರು. ಅಂದು, ಮುಳುಗುವ ಸೂರ್ಯನ ಕೆಂಪು ಎಲ್ಲೆಡೆಗೆ ಪಸರಿಸಹತ್ತಿತ್ತು. ಗ್ರಾಮದ ಎರಡು ಪಂಗಡಗಳ ಮಧ್ಯೆ ಬಹುದಿನಗಳಿಂದ ನುಸುಳಿದ ವಿರಸವು ಭುಗಿಲೆನ್ನಲು ಯಾವುದೋ ಕುಂಟು ನೆಪಕ್ಕಾಗಿ ಕಾಯುತ್ತಿತ್ತು. ಅಂಥ ನೆಪವೂ ಕೂಡಿ ಬಂದಿತ್ತು. ಹರಿಜನ ಮಹಿಳೆಯೊಬ್ಬಳು ಹೊಸ ಸೀರೆಯುಟ್ಟುಕೊಂಡು, ಆಭರಣ ಧರಿಸಿ, ತಾಮ್ರದ ಕೊಡ ಹೊತ್ತು ಊರ ಬಾವಿಗೆ ನೀರು ಒಯ್ಯಲು ಬಂದಿದ್ದಳು. ಅವಳು ಸಾಕಷ್ಟು ಸ್ಫುರದ್ರೂಪಿಯಾಗಿದ್ದಳು. ಇಪ್ಪತ್ತರ ತರುಣಿ. ಅನೇಕ ಮೇಲು ವರ್ಗದ ಹೆಂಗಸರು ನೀರು ಸೇದಿಕೊಂಡು ಹೋದರು, ಅವಳತ್ತ ಬಿಗುವಿನ ದೃಷ್ಟಿ ಬೀರಿದರೇ ಹೊರತು, ಅವಳಿಗೆ ನೀರು ಹಣಿಸಬೇಕೆಂಬ ಕರುಣೆಯ ದೃಷ್ಟಿ ಬೀರದೆ ಕೊನೆಗೆ ಓರ್ವ ಯುವಕನು ಕನಿಕರಿಸಿ, ತನ್ನ ಕೊಡದಿಂದ ನೀರು ಹಣಿಸತೊಡಗಿದ. ಅದನ್ನು ಕಂಡ ಉಳಿದ ಸವರ್ಣೀಯ ಹೆಣ್ಣು ಮಕ್ಕಳು ಆ ಯುವಕನನ್ನು ತಡೆದರು.

"ಏನು ನಿಮ್ಮ ಜೊಂಜಾಟ? ಪಾಪ! ಆ ಹುಟುಗಿ ಮಾಡಿದ ಪಾಪವೇನು?" ಎಂದು ಕನಿಕರಿಸಿ ಕೇಳಿದ ಯುವಕ.

"ಕಾಣುವುದಿಲ್ಲವೇ ಕೊರಳಲ್ಲಿ ಸರ ಹಾಕಿದ್ದಾಳೆ. ಮೇಲೆ ಹೊಸ ಸೀರೆ! ಸಾಲದೆ, ಹೊಲೆ – ಮಾದಿಗರಿಗೆ ನಿಷಿದ್ಧವಾದ ತಾಮ್ರದ ಕೊಡ ! ಮಣ್ಣಿನ ಕೊಡ ಬಳಕೆ ಮಾಡಲು ಇವಳಿಗೇನು ಧಾಡಿ. ಇಂಥ ವೈಯ್ಯಾರಿಗೆ ನಿನ್ನ ಹರೆಯವು ಒಲಿಯ ನೀರು ಹಣಿಸುತ್ತಿದೆಯೋ?" ಎಂದು ಕೊಂಕಿಸಿ ನುಡಿದರು. ಆ ಸ್ತ್ರೀಯರು.

"ದಯವಿಟ್ಟು, ನಾಲಗೆ ಬಿಗಿ ಹಿಡಿಯಿರಿ. ನಿಮ್ಮ ಕುಲಾಭಿಮಾನವು ಮರ್ಯಾದೆಯಲ್ಲಿರಲಿ" ಎಂದು ಸಿಟ್ಟಿಗೆದ್ದು ನುಡಿದ ಆ ಯುವಕನು ಹೊರಟು ಹೋದನು. ಯುವಕನು ಹಣಿಸಿದ ನೀರಿನ ಕೊಡವನ್ನು ಕಂಕುಳಲ್ಲಿ ಇರಿಸಿಕೊಂಡು, ಆ ಮಾದರ ಯುವತಿ, ಗೆಲುವಿನ ನಗೆ ಬೀರಿ, ಸ್ತ್ರೀಯರತ್ತ ನೋಡಿದಳು.

ದೀಪಕ್ಕೆ ಎಣ್ಣೆಯನ್ನು ಎರಚಿದಂತಾಯಿತು. ಆ ಸವರ್ಣೀಯ ಸ್ತ್ರೀಯರು ತಮ್ಮ ಗಂಡಂದಿರನ್ನು ಸೇರಿಸಿ, ಒಂದಕ್ಕೆ ಎರಡು ಮಾಡಿ, ಭಾವಕ್ಕೆ ಬಣ್ಣ ಹಚ್ಚಿ ಬಣ್ಣಿಸಿದರು. ಕುಲದ ದುರಭಿಮಾನ ದಳ್ಳುರಿಯಂತೆ ವ್ಯಾಪಿಸಿತು. ರಾತ್ರಿಯಾಯಿತು. ನೀರು ಹಣಿಸಿದ ಯುವಕನ ಬಣಿವೆ ಬೆಂಕಿಗೆ ಆಹುತಿಯಾಯಿತು. ನೀರನ್ನು ತಾಮ್ರದ ಪಾತ್ರೆಯಲ್ಲಿ ತಂದ ಹೊಸ ಸೀರೆಯ ಮಾದರ ಹುಡುಗಿಯನ್ನು ಸವರ್ಣೀಯ ಯುವಕನನ್ನು ಕೆಡಿಸುವ ಪ್ರಯತ್ನದ ಮಿಥ್ಯಾರೋಪದಿಂದ, ಅರೆ ಬೆತ್ತಲೆ ಮೆರವಣಿಗೆ ಮಾಡಲಾಯಿತು. ಈ ವಿಷಯವನ್ನು ಕುರಿತು ಮಾದಿಗ ಜನಾಂಗವು ಒಳಗೊಳಗೇ ಕುದಿಯಿತು. ತಾವು ಕೂಲಿ ಮಾಡುತ್ತಿದ್ದ ಜಮೀನುದಾರನ ಬಳಿ ತಮ್ಮ ಅಳಲನ್ನು ತೋಡಿಕೊಂಡರು.

ಪಾಪ! ಜಮೀನುದಾರರು ಈ ಧರ್ಮದ ವಿಷಯದಲ್ಲಿ, ಪುರೋಹಿತರ ಸಲಹೆ ಕೇಳಿದರು. ಪುರೋಹಿತನು ತನಗೆ ಸಿಕ್ಕ ಸಂಧಿ ಬಳಸಿ, ಆರ್ಯ ಧರ್ಮದ ಮೇಲ್ಮೆಯನ್ನೂ ವರ್ಣಾಶ್ರಮ ಧರ್ಮದ ಸನಾತನತ್ವವನ್ನೂ ಬಿಂಬಿಸಿ, ಪರಮಾತ್ಮನ ಶಿರದಲ್ಲಿ ಬ್ರಾಹ್ಮಣ, ತೋಳಿನಲ್ಲಿ ಕ್ಷತ್ರಿಯ, ತೊಡೆಯಲ್ಲಿ ವೈಶ್ಯ ಹಾಗೂ ಪಾದದಲ್ಲಿ ಶೂದ್ರರ ಜನನವಾಗಿದ್ದುದನ್ನು ಶ್ರುತಿ ಮಂತ್ರಗಳಿಂದ ತಿಳಿಸಿದ; ಮೇಲಾಗಿ, ಮನು ಧರ್ಮ ಸೂತ್ರ ವಾಕ್ಯಗಳನ್ನೂ ಉದ್ಧರಿಸಿ ಸಮರ್ಥಿಸಿದ. ಜಮೀನುದಾರನಿಗೆ ಮುಂದಾವ ಯೋಚನೆಯೂ ಹೊಳೆಯಲಿಲ್ಲ. ಆದರೂ ಮಾನವೀಯ ಅನುಕಂಪವನ್ನು ತೋರಿಸಿದ ನಷ್ಟೇ.

ಹಿಂದಿನ ವಾರವೇ ನಡೆದ ಈ ಕ್ಷೋಭೆಕಾರಕ ಘಟನೆಯ ನೆನಪು ಹಳ್ಳಿಗರ ಮನದಲ್ಲಿ ಹಸಿರಾಗಿಯೇ ಉಳಿದಿತ್ತು. ಮೇಲಾಗಿ, ಈ ಘಟನೆಗೆ ಕಾರಣಕರ್ತನಾದ, ನೀರು ಹಣಿಸಿದ ಯುವಕನೂ ಅಲ್ಲಿಗೆ ಬಂದಿದ್ದ. ಹೀಗಾಗಿ, ನಡೆದ ವಾಸ್ತವಿಕ ಘಟನೆಯನ್ನು ಆ ಯುವಕನ ಬಾಯಿಯಿಂದ ಕೇಳುವ ನೆಪದಲ್ಲಿ ಈ ಪ್ರಸಂಗವನ್ನು ಓರ್ವ ತರುಣನು ಪ್ರಸ್ತಾಪಿಸಿದನು.

“ ಈ ಮಡಿ, ಮೈಲಿಗೆ ಹೊಲೆತನ ಮತ್ತು ಕುಲಾಭಿಮಾನಗಳು ಸಮಾಜದ ಒಳಿತಿಗೆ ಅಗತ್ಯವೇ? ಇಲ್ಲವೆ ಅವು ಸಮಾಜಕ್ಕೆ ಅಂಟಿದ ಜಾಡ್ಯಗಳೇನು?” ಎಂದು ಪ್ರಶ್ನೆಯನ್ನೆತ್ತಿದ ಓರ್ವ ಯುವಕ.

ವೇಮನ ಯೋಗಿ ಇದು ವರೆಗೆ ನಡೆದುದನ್ನೆಲ್ಲ ಆಲಿಸುತ್ತ ಕುಳಿತಿದ್ದರು. ಈಗ ಈ ಪ್ರಶ್ನೆಯಿಂದ ಚರ್ಚೆಗೆ ಆಹ್ವಾನ ದೊರೆತಂತಾಯಿತು. ಅವರು ಮುಚ್ಚಿದ ನಯನಗಳಿಂದ ಚಿಂತನ ಶೀಲರಾಗಿ ಒಳದನಿಯನ್ನು ಹರಿಬಿಟ್ಟರು.

ಜಾತಿಯೊಳಗೆ ಮೇಲು ಜಾತಿ, ಕೀಳು ಎಲ್ಲಿ?
ನಿಜವರಿಯದೆ ತಿರುಗಲೇನು ಫಲವು?
ಇದನರಿತ ಮನುಜನ ಕುಲವೆ ಮಿಗಿಲು ಕಾಣಾ!
ವಿಶ್ವದಾಭಿರಾಮ ಕೇಳು ವೇಮ.

ಮಾರನೆಯ ದಿನ, ಯೋಗಿಗಳ ಪರಿವಾರವು ಕೊಂಡವೀಡುವಿಗೆ ಪಯಣಿಸಿತು. ಊರಿನಲ್ಲಿ ‘ನಗ್ನ ಯೋಗಿ’ ಯ ಕುರಿತು ಎಲ್ಲರೂ ಮಾತಾಡಿದರು. ಏಕೆಂದರೆ, ಕುಲಾಭಿಮಾನ ಕಳೆಯುವ ಅವರ ನುಡಿಗಳಿಂದ ಎಲ್ಲರ ಮನ ಕಲಕಿತ್ತು. ಒರತೆಯ ಜಲವು ಕಲಕದೆ ತಿಳಿಯಾಗದಲ್ಲವೆ?

**ಮರಳಿ ಕೊಂಡುವೀಡಿನಲ್ಲಿ :**

ಮುಂದೆರಡು ದಿನ ದಾರಿ ತುಳಿದು, ಕೊನೆಗೆ ವೇಮನರ ಪರಿವಾರವು ಕೊಂಡವೀಡುಗೆ ಬಂದಿತು. ‘ಲಂಬಿಕಾಯೋಗಿ’ ಯ ಗವಿಯಲ್ಲಿಯೇ ನೆಲೆಸಿದರು.

ನಿತ್ಯದ ಭಿಕ್ಷಾಟನೆ ಮತ್ತು ಸಾಯಂಕಾಲದ ಬೋಧನೆಗಳು ಎಂದಿನಂತೆ ಸಾಗಿದವು ಬಹುಜನ ಪರಿಚಿತರು ಬಂದು ಇದುವರೆಗಿನ ಸಂಚಾರದಲ್ಲಿ ನಡೆದ ಹೃದಯಂಗಮ ಘಟನೆಗಳನ್ನು ಕುರಿತು ನೀಲಕಂಠ, ರಾಮರೆಡ್ಡಿಯವರಿಂದ ಕೇಳಿ ತಿಳಿದರು.

**ಸ್ನಾನದ ವಿಧಿ :**

ಕೊಂಡ ವೀಡಿನಲ್ಲಿ ವೇಮನರು ಹೆಚ್ಚಾಗಿ ಗುಹೆಯಲ್ಲಿಯೇ ಇರತೊಡಗಿದರು. ಅವರು ತಮ್ಮ ಗುರುವಿನ ಆ ತಪೋಭೂಮಿಯಲ್ಲಿ ಹೆಚ್ಚು ಹೆಚ್ಚು ಅಂತರ್ಮುಖಿಯಾಗುತ್ತಿದ್ದರು. ಯಾವಾಗಲಾದರೊಮ್ಮೆ ಬಹಿರ್ಮುಖರಾಗಿ, ಶಿಷ್ಯರೊಂದಿಗೆ ಸಂಭಾಷಿಸುತ್ತಿದ್ದರು. ಮಾತು ಮಿತ ಇಲ್ಲವೆ ಮೌನವೇ ಹೆಚ್ಚು ಹಿತಕವಾಗಿತ್ತು. ಕೆಲವೊಮ್ಮೆ ಗವಿಯ ಹೊರಗೆ ಹೋಗುವಾಗ, ಹಳೆಯ ಮೇಣಗಮಟಿನ ತಟ್ಟನ್ನೇ ಉಟ್ಟು, ಅಂಥ ಇನ್ನೊಂದು ತುಂಡನ್ನು ಉತ್ತರೀಯವಾಗಿ ಹೊರುತ್ತಿದ್ದರು. ಶೌಚ ಕ್ರಿಯೆಗಳನ್ನೇ ನಿರ್ಲಕ್ಷಿಸುವ 'ಹುಚ್ಚು' ಹಿಡಿದವನಂತೆ ಜನರಿಗೆ ಕಾಣಿಸಿಕೊಳ್ಳುವದರ ಇಂಗಿತವೇನಿದ್ದಿತೋ ತಿಳಿಯದು. ಇಂಥ ಅವರ ವಿಪರೀತ ಸ್ಥಿತಿಗೆ ಕಾರಣವೇನೆಂಬುದು ಬಹು ಜನರಿಗೆ ತಿಳಿಯಲಿಲ್ಲ. ಅವರ ನಿಕಟ ಶಿಷ್ಯರಾದ ರಾಮರೆಡ್ಡಿ, ನೀಲಕಂಠರಿಗೂ ಈ ಸ್ಥಿತಿಯನ್ನು ವಿವರಿಸುವುದು ಇರುಸು ಮುರುಸಾಯಿತು. ಅಂಥ ದಿನಮಾನದಲ್ಲಿ ಒಂದು ಸಾಯಂಕಾಲ ವೇಮನರೇ ಪದ್ಯ ಮೂಲಕ ಹೀಗೆ ನುಡಿದರು.

ಮಲವು – ಮೂತ್ರ, ರಕ್ತ, ಮಾಂಸಯುಕ್ತವಾದ
ಮಲಿನ ಘಟವು; ಜಲಧಿ ಮುಳುಗಲೇನು?
ಹೊರಗಿನ ಮಲ ಮೂತ್ರ; ಹೋಗದೊಳಗಿನ ಮಲ.
ವಿಶ್ವದಾಭಿರಾಮ ಕೇಳು ವೇಮ.

ನಾನು ಉಡುವ ಹರಕು ಚಿಂದಿಗಳ ವಿಷಯವೇ ಬೇರೆ; ಉಡುವ ಬಟ್ಟೆ ಯಾವುದೇ ಇರಲಿ; ದೇಹದ ಜೋಪಾಸನೆಯನ್ನು ಯಾವ ರೀತಿಯೇ ಮಾಡಲಿ; ಅದರಿಂದ ಮನದ ಮೇಲಾವ ಪರಿಣಾಮವಾಗದೆಂಬುದನ್ನು ಖಚಿತ ಪಡಿಸಿಕೊಳ್ಳುವ ಪರೀಕ್ಷೆಯದು.

ಚಿಂದಿ ಬಟ್ಟೆಯಲ್ಲ, ಚೀನಾಂಬರವೆ ಹೊರತು;
ಮಲಿನ ದೇಹವಲ್ಲ; ಮುಕ್ತಿ ಹೊರತು;
ಪರಮ ಯೋಗಿ ಮಹಿಮೆ ಪರಿಕಿಸುವರೆ ನರರು?
ವಿಶ್ವದಾಭಿರಾಮ ಕೇಳು ವೇಮ.

ಮನಸ್ಸಿನ ದೊಡ್ಡಿಯಲ್ಲಿ ಐದು ಇಂದ್ರಿಯಗಳೆಂಬ ಹಸುಗಳನ್ನು ಕಟ್ಟಿ ಹಾಕಲಾಗಿದೆ. ಅವುಗಳ ಆರೈಕೆ ಮಾಡುವಾಗ ವಾಸನೆಗಳ ಜಿಡ್ಡು ಅಂಟುತ್ತದೆ. ಆಗ ಆ ಹಸುಗಳನ್ನು ಮರ್ಯಾದೆಯಿಂದ ಕಟ್ಟಿ ಹಾಕಿ, ಸಮರ್ಪಣ ಭಾವದಿಂದ ಆ ಹಸುಗಳ ಫಲವಾದ ಹಾಲನ್ನು ಒಡೆಯನಿಗೆ ಅರ್ಪಿಸುವುದೇ ಗವಳಿಗನ ಕರ್ತವ್ಯ ತಾನೇ?

— — — — — — — — — — — — — — — — — — — — — —

"ಮನ ವೇಷವು ಮೇಣ್‌ಗಮಟಿನ ಜಿಡ್ಡಿ
ಬಾಗಿದ ಐದಾಕಳುಗಳ ದೊಡ್ಡಿ.
ಅನುವಿಲೆಸಗಿದನೆಲ್ಲ ವನೊಡ್ಡಿ.
ವಿಖ್ಯಾತನು ಕಾಣಾ, ವೇಮನ ರೆಡ್ಡಿ."

ಇಷ್ಟರಲ್ಲಿ ವೇಮನ ಯೋಗಿವರ್ಯರ ತಾಯಿ, ಮಲ್ಲಮ್ಮ ರಾಣಿ (ಹಿಂದಿನ) ಪರಿಚಾರಿಕೆಯರೊಂದಿಗೆ ಹಣ್ಣು, ಹಾಲು ತೆಗೆದುಕೊಂಡು ಬಂದಳು. ತಾಯಿ ಮಗನ ಭೇಟ್ಟಿಗೆ ಬಂದುದು ಅಪರೂಪವೆ ಆಗಿತ್ತು. ಪರಸ್ಪರ ಸಂಬಂಧವೇನೋ ಮಧುರತಮವೇ ಇತ್ತು. ಆದರೆ, ಅವಧೂತ ಯೋಗಿಯೊಂದಿಗೆ ಹಡೆದ ತಾಯಿ ಎಷ್ಟು ಲೌಕಿಕ ಸಂಬಂಧವಿಟ್ಟುಕೊಳ್ಳಬೇಕೆಂಬ ಬಗೆಗೆ ಕಟ್ಟು ನಿಟ್ಟುಗಳು ಇದ್ದೇ ಇದ್ದವು.

"ಮಗೂ .. .. .. ನಿನ್ನನ್ನು ಹೇಗೆ ಸಂಬೋಧಿಸಬೇಕೆಂಬುದೇ ತಿಳಿಯುತ್ತಿಲ್ಲ. ನಿನ್ನ ಸುದೀರ್ಘ ಪ್ರವಾಸ ಕುರಿತು ಕೇಳಿದೆ. ಶಿವನು ನನಗೆ ಮಗನಾಗಿ ಬಂದಿರುವುದು ನಮ್ಮ ಮನೆಯ ಪುಣ್ಯ. ನೀನು ದಿಗಂಬರನೇ ಆಗಿರು; ಚೀನಾಂಬರನೇ ಆಗಿರು ಅವಧೂತ ಸನ್ಯಾಸಿಯೇ ಆಗಿರು; ಗ್ರಹಸ್ಥ ವಿರತನೇ ಆಗಿರು. ಅದು ನಿನ್ನ ಗುರುಗಳ ಬೋಧಾನುಸಾರ ನಡೆಯುವಂಥದು. ಆದರೆ, ಶುಚಿರ್ಭೂತನಾಗಿ ಇರುವುದಕ್ಕೇನು ಆತಂಕ? ನಿತ್ಯ ಸ್ನಾನ ಮಾಡಿ, ಶುಭ್ರ, ಲಂಗೋಟಿಯನ್ನೇ ಧರಿಸುವಲ್ಲಿ ಏನು ತೊಂದರೆ?" ಎಂದು ತನ್ನ ತಾಯ್ತನದ ಅಧಿಕಾರವನ್ನು ಆ ತಾಯಿ ಚಲಾಯಿಸಿದಳು.

" ಸರಿ; ಅವ್ವ! ಯೋಗದಲ್ಲಿ, ಗುರು ಕೃಪೆಯಿಂದ, ನಿತ್ಯ ಅಂತಃ ಶೌಚ ನಡೆದೇ ಇರುತ್ತದೆ. ಇನ್ನು ಬಾಹ್ಯ ಶೌಚದ ವಿಷಯ ಕೆಲವೊಂದು ಯೋಗ ಕ್ರಿಯೆಗಳನ್ನು ಸರಿಯಾಗಿ ಆಚರಿಸಿದರೆ, ಶರೀರವು ಸುಗಂಧಯುಕ್ತವಾಗುತ್ತದೆ.

ಮಲಿನತೆಯ ಪ್ರಶ್ನೆಯೇ ಏಳದು. ಏನೇ ಆಗಲಿ, ಅಂತಃ ಶೌಚ ಮತ್ತು ಬಾಹ್ಯ ಶೌಚಗಳನ್ನು ಕುರಿತು ತಾಯಿಯ ಆದೇಶ ಪಾಲಿಸುವುದು ನಮ್ಮ ಕರ್ತವ್ಯ. ಅದನ್ನು ಕಣ್ಣಾರೆ ಕಾಣಲು ನಾಳೆ ಸೂರ್ಯೋದಯಕ್ಕೆ, ಸಮೀಪದ ಕೊಳ್ಳಕ್ಕೆ ಬರುವ ಶ್ರಮ ಕೈಕೊಳ್ಳಬಲ್ಲೆಯಾ?" ಎಂದು ತಾಯಿಯನ್ನು ಆಹ್ವಾನಿಸಿದರು ಯೋಗಿ.

ಮಾರನೆಯ ಸೂರ್ಯೋದಯಕ್ಕೆ ಯೋಗಿ ವೇಮನರು ಸರಸಿಯ ಮಧ್ಯೆ ಆಳ ಮಡುವಿನಲ್ಲಿ ಸಾಗಿದರು.. ಅಲ್ಲಿ ನೀರಿನ ಮೇಲೆಯೇ ಪದ್ಮಾಸನ ಹಾಕಿ ಕುಳಿತರು. ಉದಾನ ನಾಡಿಯ ಕ್ರಿಯೆಯಿಂದ ನೀರಿಗಿಂತ ಹಗುರಾಗಿತ್ತು ಯೋಗಿಯ ದೇಹ.

ಅಷ್ಟರಲ್ಲಿ ವೇಮನರ ತಾಯಿ ಮಲ್ಲಮ್ಮ ನಾಲ್ವರು ಪರಿಚಾರಕರೊಡನೆ ಕೆರೆಯ ದಂಡೆಗೆ ಆಗಮಿಸಿದ್ದರು. ಬಂದು ನೋಡಿ, ನೀರಿನ ಮೇಲೆ ತೇಲುವ ಮಗನನ್ನು

ಕಂಡು ಅಚ್ಚರಿ ಪಟ್ಟರು. ಅಷ್ಟೇ ಗಾಬರಿಯಿಂದ “ಅವನಿಗೆ ಜೀವವಿದೆಯಷ್ಟೇ?” ಎಂದು ಕಾತರಿಸಿ ಕೇಳಿದರು. ಅಷ್ಟರಲ್ಲಿ ರಾಮರೆಡ್ಡಿ ಅವರಲ್ಲಿಗೆ ಧಾವಿಸಿ ಬಂದು, “ಇದೊಂದು ಸಾಮಾನ್ಯ ಸಿದ್ಧಿಯಮ್ಮ.” ಎಂದನು.

ಅನಂತರ, ನಡೆದುದು ಕಣ್ಣು ಕಟ್ಟಿನ ಆಟದಂತೆ. ಯೋಗಿಯು ಎಲ್ಲರ ಕಣ್ಣೆದುರೇ, ತನ್ನ ಹೊಟ್ಟೆಯನ್ನು ಬಗೆದು, ಒಳಗಿನ ಸೂಕ್ಷ್ಮ ಅಂಗಗಳನ್ನು ನೀರಿನಿಂದ ತೊಳೆದರು. ಬಳಿಕ, ಕಣ್ಣು ಮುಚ್ಚಿ ಐದು ನಿಮಿಷಗಳಾದ ಮೇಲೆ, ಸೀಳಿದ ಹೊಟ್ಟೆಯು ಒಂದಾಗಿ ಮೊದಲಿನಂತಾಯಿತು. ತಾಯಿಗೆ ಮಾತೇ ಹೊರಡಲಿಲ್ಲ. ‘ಅವನ ಮಹಿಮೆ ಉಪಮಾತೀತವಪ್ಪ! ನಮ್ಮಂಥವರಿಗೆ ತಿಳಿಯದ ರಹಸ್ಯವಿದು’ ಎಂದು ನುಡಿದು ಮಗನು ಸ್ನಾನ ಮುಗಿಸುವ ವರೆಗೆ ನಿಂತು, ಅನಂತರ ಇತರರೊಂದಿಗೆ ತಾನೂ ಮನದಲ್ಲಿಯೇ ಮಗನಿಗೆ ವಂದಿಸಿ, ಮನೆಗೆ ಮರಳಿದಳು.

**ತೋಟದ ಕೃಷಿ :**

ನೆಲ್ಲೂರು ಬಳಿಯ ತೋಟದ ಗದ್ದೆಯಲ್ಲಿಯೇ ದೀರ್ಘ ಕಾಲ ಕಳೆದ ವೇಮನರಿಗೆ, ಮತ್ತವರ ಶಿಷ್ಯರಿಗೆ, ಇಲ್ಲಿಯೂ ಒಂದು ತೋಟವನ್ನು ನಿರ್ಮಿಸುವ ಇಚ್ಛೆಯಾಯಿತು. ಈಗ ಅವರು ವಾಸವಾದ ಗವಿಯಿಂದ ಅನತಿ ದೂರದಲ್ಲಿ ಅವರ ಕುಟುಂಬಕ್ಕೆ ಸೇರಿದ ಒಂದು ಜಮೀನಿತ್ತು. ಅದರಲ್ಲಿ ಸಿಹಿ ನೀರಿನ ಬಾವಿಯೂ ಇತ್ತು. ತಮ್ಮ ಈ ಇಚ್ಛಯನ್ನು ರಾಮರೆಡ್ಡಿ, ಮಲ್ಲಮ್ಮ ರಾಣಿಯೆದುರು ಪ್ರಸ್ತಾಪಿಸಿದರು. ಈಗಂತೂ ರಾಣಿ ಮಗನ ಯಾವ ಕೋರಿಕೆಯನ್ನೂ ತಳ್ಳಿ ಹಾಕುವಂತಿರಲಿಲ್ಲ. ಅವನ ಮಹಿಮೆಯನ್ನು ಕುರಿತು ಬೇರೆ ಯಾರೂ ಆಕೆಗೆ ಹೇಳಬೇಕಿರಲಿಲ್ಲ. ಕೂಡಲೇ ರಾಮರೆಡ್ಡಿಯ ಸೂಚನೆಗೆ ಸಮ್ಮತಿಸಿ, ಮಾರನೆಯ ದಿನದಿಂದ ಹಲವು ಜನರನ್ನು ಕಳಿಸಿದಳು. ಬಂದವರು, ಆ ಜಮೀನನ್ನು ಅಗೆದು ಸಮಪತಳಿ ಮಾಡುವಲ್ಲಿ ನೆರವಾದರು, ಮುಂದೆ ಅವರ ಅಗತ್ಯವಿಲ್ಲೆಂದೂ ತಾವೇ ಸಾಗುವಳಿ ಮಾಡುವುದಾಗಿಯೂ ಹೇಳಿ ಅವರನ್ನು ಮರಳಿ ಕಳಿಸಿದರು ಯೋಗಿವರ್ಯರು. ತಾವು ಸ್ವತಃ ಗುದ್ದಲಿ ಪಿಕಾಶಿ ಹಿಡಿದು, ನೀರುಗಾಲುವೆ ತೋಡುತ್ತಿದ್ದರು. ಸಸಿಗಳನ್ನು ನೆಡುತ್ತಿದ್ದರು. ಜೊತೆಗೆ ರಾಮರೆಡ್ಡಿ, ನೀಲಕಂಠರಂತೂ ಇದ್ದೇ ಇದ್ದರು. ಆಗೀಗ, ಅಗತ್ಯವೆನಿಸಿದಲ್ಲಿ, ಯೋಗಿಗಳಲ್ಲಿ ಜಿಜ್ಞಾಸುಗಳಾಗಿ ಬರುತ್ತಿದ್ದ, ಹಲವಾರು ಯುವಕರು ಶ್ರಮದಾನ ಮಾಡುತ್ತಿದ್ದರು. ಕಾಯಿ ಪಲ್ಲೆ, ಹಣ್ಣು ಹಂಪಲು ಬೆಳೆದರು, ಎರಡು ಹಸುಗಳನ್ನು ಮಲ್ಲಮ್ಮ ರಾಣಿ ಕಳಿಸಿದ್ದಳು, ಹೀಗಾಗಿ ಹೈನಕ್ಕೂ ತೊಂದರೆಯಾಗಿರಲಿಲ್ಲ. ಸಂಸಾರದ ಜಂಜಡಕ್ಕೆ ಒಳಗಾಗದೆ, ಮತ್ತು ತತ್ಕಾಲಕ್ಕೆ, ಐಹಿಕ ಜೀವನದಿಂದ ಬೆದರಿ ಓಡದಂತೆ, ತಮ್ಮ ಶಿಷ್ಯರಿಗೆ ತರಬೇತಿ ನೀಡುವಲ್ಲಿ ಯೋಗಿವರ್ಯರು ಈ ಉಪಾಯವನ್ನು ಅನುಸರಿಸಿದ್ದರೆಂದು ಕಾಣುತ್ತದೆ.

ಈ ತೋಟದ ಒಂದು ಭಾಗದಲ್ಲಿ ಪಾಪರಕಾಯಿಯ (ಕರಣಿ) ಬೀಜಗಳನ್ನು ಬಿತ್ತಿದರು. ಈ ಬೆಳೆಯು ಸಮೃದ್ಧವಾಗಿ ಬೆಳೆಯಿತು. ಬಡ ಬಗ್ಗರು ಬಂದಾಗ,

ಹೊಲದಲ್ಲಿ ಶ್ರಮದಾನ ಮಾಡಬೇಕೆಂದು ತಿಳಿಸಿ, ಅವರಿಗೆ ಪ್ರತಿಫಲವೆಂದೋ, ಕೃಪಾಶೀರ್ವಾದವೆಂದೋ ಒಂದೊಂದು ಕಾಯಿ ನೀಡುತ್ತಿದ್ದರು. ಒಮ್ಮೆ ಓರ್ವ ಮುದುಕಿಯು ಇಂಥ ಒಂದು ಕಾಯಿ ಪಡೆದು ಮನೆಗೆ ಹಿಂತಿರುಗಿದಾಗ, ಅವಳ ಮಗನು ಅದನ್ನು ಕಂಡು ರೊಚ್ಚಿಗೆದ್ದನು. ಮತ್ತು ಆ ಕಾಯಿಯನ್ನು ಬೀಸಿ ಒಗೆದನು. ಆದರೆ, ಅಲ್ಲಿ ಅಚ್ಚರಿ ಕಾದಿತ್ತು! ಅದರಲ್ಲಿಯ ಬೀಜಗಳು ಬಂಗಾರದವಾಗಿದ್ದವು. ಆಗ ಬಂದು ಕ್ಷಮಾಪಣೆ ಕೇಳಿದನು. ಈ ಪವಾಡ ಪ್ರಾಯ ಸುದ್ದಿಯು ಕರ್ಣಾಕರ್ಣಿಯಾಗಿ ಊರಿನಲ್ಲೆಲ್ಲ ಹಬ್ಬಿತು. ರಾತ್ರಿ ಕಾಲದಲ್ಲಿ ಹಲವರು ಆ ಪಾಪರ ಕಾಯಿಗಳನ್ನು ಕದ್ದೊಯ್ದರು. ಮನೆಗೆ ಹೋಗಿ ಒಡೆದು ನೋಡಿದರೆ, ಅವರಿಗೆ ತುಂಬಾ ನಿರಾಶೆ ಕಾದಿತ್ತು. ಆ ಕಾಯಿಗಳ ತುಂಬ ಹುಳುಗಳೇ ತುಂಬಿದ್ದವು. ಆದರೆ ಸೋಜಿಗವೆಂದರೆ, ಅವರ ಬಳಗದವರಲ್ಲಿಯೇ ಒಬ್ಬಿಬ್ಬರು, ಪ್ರಸಾದ ರೂಪವಾಗಿ ಇಲ್ಲವೆ ಶ್ರಮದ ಪ್ರತಿಫಲ ರೂಪವಾಗಿ, ಯೋಗಿಗಳ ಹಸ್ತದಿಂದ ಪಡೆದ ಕಾಯಿಗಳಲ್ಲಿ ಹೊನ್ನಿನ ಬೀಜಗಳಿರುವುದು ಖಚಿತಪಟ್ಟಿತು. ಇದು ಯೋಗಿಯ ಮಹಿಮೆಯೆಂದೇ ಜನರಿಗೆ ಮನದಟ್ಟಾಯಿತು.

ಇಂಥ ದಿನಮಾನಗಳಲ್ಲಿ, ಒಂದು ಸಾಯಂಕಾಲ ವೇಮನ ಯೋಗಿಗಳ ಸಾಯಂಕಾಲದ ಬೋಧೆಯ ಕಾಲಕ್ಕೆ, ಈ ವಿಷಯದ ಪ್ರಸ್ತಾಪವಾಯಿತು.

"ತಾವು ಕೈಯಾರೆ ನೀಡಿದ ಪಾಪರ ಕಾಯಿಯ ಬೀಜಗಳಲ್ಲಿ ಸ್ವರ್ಣದ ಬೀಜಗಳಿರುವುದೂ ಹಾಗೂ ಕದ್ದು ಒಯ್ದು ಕಾಯಿಗಳ ಬೀಜಗಳಲ್ಲಿ ಹುಳುಗಳಿರುವುದೂ ಖಚಿತಪಟ್ಟಿತು ಅಂದ ಮೇಲೆ, ಇದು ನಿಮ್ಮ ಪವಾಡ ಶಕ್ತಿಯೇ?" ಎಂದು ಓರ್ವ ಜಿಜ್ಞಾಸುವು ಕೇಳಿದನು.

"ಅವರವರಿಗೆ ತೋಚಿದಂತೆ ಭಾವಿಸುತ್ತಾರೆ. ಘಟಿಸುವ ವೈಚಿತ್ರ್ಯವೇ ಪವಾಡವೆನಿಸಬಹುದು. ಘಟಿಸುವುದೆಲ್ಲ ಆ ಪರಮನ ಕೃಪೆಯಿಂದ ತಾನೇ?

ಬೇಕು ಎನಲು ಬರದು; ಬೇಡವೆನಲು ಬಿಡದು;
ಪೂರ್ವ ಕರ್ಮಕಂಟಿ ಫಲವು ಉಂಟು.
ಹೃದಯದಲ್ಲಿ ದು:ಖ ಪಡದಿರುವುದೆ ಧರ್ಮ.
ವಿಶ್ವದಾಭಿರಾಮ ಕೇಳು ವೇಮ.

ಇಹದಲ್ಲಿ ಹಾಯಾಗಿರಲು ದ್ರವ್ಯ ಗಳಿಸಬೇಕು; ಹೊನ್ನು ಮಾಡಬೇಕು. ಆದರೆ, ಅದರಿಂದ ಪಡೆಯುವ ಸುಖಕ್ಕೆ ಮಿತಿಯುಂಟು. ಅದರ ದುರ್ವಿನಿಯೋಗದಿಂದ ಹಾನಿಯೂ ಆಗುತ್ತದೆ. ಕೇವಲ ಬ್ರಹ್ಮ ವಿದ್ಯೆಯೊಂದೇ ಪರದಲ್ಲಿ ಸುಖಿಸಲು ಕಾರಣವಾಗಿದೆ. ಅದನ್ನೇ ಅರ್ಜಿಸಬೇಕು. ಅದುವೇ ನಿಜಾರ್ಥದಲ್ಲಿ ವಿದ್ಯಾರ್ಜನೆ. ಅದರ ಹೊರತು ಅನ್ಯಗಳಿಕೆಯೆಲ್ಲ ವ್ಯರ್ಥವಷ್ಟೇ?

"ಹಾಯಾಗಿರೆ, ಇಹದಿ ಹೇಮಕಾರಕ ವಿದ್ಯೆ;
ಪರದಲ್ಲಿ ಸುಖಿಸಲು ಬ್ರಹ್ಮ ವಿದ್ಯೆ,
ಅನ್ಯ ವಿದ್ಯೆಯೆಲ್ಲ ಅಂತೆ ನಿಷ್ಫಲವದು.
ವಿಶ್ವದಾಭಿರಾಮ ಕೇಳು ವೇಮ."

ಬ್ರಹ್ಮವೇ ರಸವಾಗಿದ್ದಾನೆ. ರಸವನ್ನು ಪಡೆದು ಆನಂದದಲ್ಲಿ ಮಗ್ನನಾಗಬಹುದು. ಅಂಥ ರಸಾಯನ ವಿದ್ಯೆಯೊಂದಿದೆ. ಸಗುಣ ಬ್ರಹ್ಮನ ಶಕ್ತಿಯಿಂದ ಅಘಟಿತ ಘಟನೆಗಳು ನಡೆಯಬಹುದು. ಅದುವೇ ಐಶ್ವರ್ಯ ಅರ್ಥಾತ್ ಈಶ್ವರೀಯ ಸಿದ್ಧಿ. ಆದರೆ, ಆ ಸಿದ್ಧಿಯ ಬಳಕೆಯು ಸ್ವಾರ್ಥ ಸಂಕಲ್ಪದಿಂದ ಆದರೆ ಸಾಧಕನ ಮನಸ್ಸು ನಿಮ್ನ ಸ್ತರಕ್ಕಿಳಿಯುತ್ತದೆ. ಸರ್ವಾರ್ಪಿತವಾದರೆ, ಈಶ್ವರನ ಉಪಕರಣವಾಗಿ, ಯಾವ ಕಾರ್ಯಕ್ಕಾದರೂ ನಿಮಿತ್ತ ಮಾತ್ರನಾಗಬಹುದು. ಆದ್ದರಿಂದ,

ಹೊನ್ನು ಗೆಯ್ವ ವಿದ್ಯೆ ಹೊಳೆದ ಮನುಜರೆಲ್ಲ;
ವ್ಯಥೆ ಪಡುವರಂಥ ವಿದ್ಯೆಯಿಂದ.
ತತ್ತ್ವ ತಿಳಿದ ಬಳಿಕ, ತನಗೆ ಚಿಂತೆಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಎಂದು ಮಾತು ನಿಲ್ಲಿಸಿದರು ಯೋಗಿಗಳು. ಜಿಜ್ಞಾಸುಶ್ರೋತೃಗಳು ಈಶ್ವರೀಯ ಶಕ್ತಿಯ ನೆಲೆಯನ್ನೂ, ಮತ್ತು ಅದನ್ನು ನಿಮ್ನ ಸ್ತರಗಳಲ್ಲಿ ಪ್ರಯೋಗಿಸುವುದರ ಹಾನಿಯನ್ನೂ ಗುರುತಿಸುವಲ್ಲಿ ಚಿಂತನ ನಡೆಸಿದರು. ಮೇಲಾಗಿ ಸ್ವಾರ್ಥಕ್ಕಾಗಿ ಇಲ್ಲವೆ ಅಹಮಹಮಿಕೆಯನ್ನು ಬೆಳೆಸಲು, ಶಕ್ತಿಯ ಬಳಕೆ ಯಾವುದು? ಹಾಗೂ ದೈವೀ ಸಂಕಲ್ಪದ ಈಡೇರಿಕೆಯಲ್ಲಿ ತಮ್ಮನ್ನು ತಾವು ಉಪಕರಣವಾಗಿ ಒದಗಿಸುವುದಾದರೆ, ಇವುಗಳ ನಡುವಿನ ಭೇದವನ್ನೂ ಗುರುತಿಸುವ ಯತ್ನ ನಡೆಸಿದರು.

ವೇಮನ ಯೋಗಿ ಹಲವಾರು ವರುಷ ಕೊಂಡವೀಡುವಿನಲ್ಲಿ ತಮ್ಮ ತೋಟ ಪಟ್ಟಿಯ ಕಾಯಕದಲ್ಲಿ ಅಲ್ಪ ಸ್ವಲ್ಪು ಸಾಧಕ ಗಣಕ್ಕೆ ಮಾರ್ಗದರ್ಶನ ಮಾಡುತ್ತ ಇದ್ದರು. ಎಲ್ಲವೂ ನೆಲೆಗೊಂಡಂತಾಯಿತೆಂದು ರಾಮರೆಡ್ಡಿ ಮತ್ತು ನೀಲಕಂಠರು ಹಾಯಾಗಿದ್ದರು. ತೋಟದಲ್ಲಿ ಪೈರು ಬೆಳೆದು ನಿಂತಿತ್ತು.ಊಟ ವಸತಿಯ ಸೌಕರ್ಯವೂ ಸರಿಯಾಗಿ ಸಾಗಿತ್ತು. ಆದರೆ ಒಳದನಿಯನ್ನೇ ಕೇಳಿ, ಅಂತೆಯೇ ನಡೆಯುತ್ತಿದ್ದ ಯೋಗಿವರ್ಯರು ಕೂಡಲೇ ಕೊಂಡವೀಡುವಿನಿಂದ ಗಂಡಿಕೋಟೆಗೆ ಹೋಗುವ ತಮ್ಮ ನಿರ್ಧಾರವನ್ನು ತಿಳಿಸಿದರು. ಒಂದೆರಡು ದಿನಗಳಲ್ಲಿ, ಈ ಪ್ರಯಾಣದ ಸುದ್ದಿ ಎಲ್ಲರಿಗೂ ಕರ್ಣಾಕರ್ಣಿಯಾಗಿ ಹಬ್ಬಿತು. ಸಾಯಂಕಾಲವಂತೂ ಜನಸಂದಣಿ ದಿನೇ ದಿನೇ ಹೆಚ್ಚಿತು. ಕೊನೆಗೊಂದು ಪ್ರಾತಃಕಾಲದಲ್ಲಿ ತಮ್ಮ ಅತ್ಯಲ್ಪ ಸಾಮಾನುಗಳೊಂದಿಗೆ, ಯೋಗಿಗಳು ಶಿಷ್ಯರಿಬ್ಬರನ್ನು ಕರೆದುಕೊಂಡು ಹೊರಟೇ ಬಿಟ್ಟರು. ಊರ ಭಕ್ತಗಣ ಕಣ್ಣೀರು ಹಾಕಿತು. ಬಂಧು ಬಳಗ ಬಾಯಿ ಬಿಟ್ಟು

ಅಳಲಾರದಷ್ಟು ದುಃಖ ಉಗ್ಗಡಿಸಿ ಸುಮ್ಮನಿದ್ದರು. ಆ ತೋಟದ ಗಿಡಗಂಟಿಗಳು ಬಾಡಿದಂತಾದವು. ಕಟ್ಟಿದ ಹಸುಗಳೆರಡು ತಮಗೇನು ತಿಳಿಯಿತೋ? 'ಅಂಬಾ' ಎಂದು ಕೂಗಿದವು. ಯಾವುದರ ಬಗೆಗೂ ಯಾವುದೇ ಅಂಟು ಇರದ ಯೋಗಿಯು ಕೂಡಿದ ಜನಕ್ಕೆ ಕೈ ಬೀಸಿ ನಡೆದೇ ಬಿಟ್ಟರು.

ಮುಂದೆ ಹಲವು ದಿನ ಹಾದಿ ತುಳಿಯುತ್ತ, ನೇಸರು ಮುಳುಗುವ ಕಾಲಕ್ಕೆ ತಲುಪಿದ ಊರಿನ ಹೊಲವಲಯದಲ್ಲಿ ಭಿಕ್ಷಾಟನೆ ಮಾಡಿ ಅಲ್ಲಿಯೇ ತಂಗುತ್ತಿದ್ದರು. ಸೂರ್ಯೋದಯದ ಕಾಲಕ್ಕೆ, ಗಿಡದ ಮೇಲಿನ ಹಕ್ಕಿಗಳ ಹಾಗೆ, ಅಲ್ಲಿಂದ ಪಯಣ ಮಾಡುತ್ತಿದ್ದರು. ಒಂದು ದಿನ, ತಮ್ಮೊಂದಿಗೆ ಹಾರಿ ಹೋಗುವ ಪಕ್ಷಿಗಳ ಹಿಂಡನ್ನು ಕಂಡು.

"ಖಗಗಳಿರವು ಚೆಂದ, ಕಾಣಲಂದವಹುದು;
ಗುಂಪು ನೋಡಿದೊಡನೆ ಗುರುತಾಗದೆ?
ದೇವ ಕೊಡದ ಸೊಗಸು ತಾನು ಬಯಸಲೇಕೆ?
ವಿಶ್ವದಾಭಿರಾಮ ಕೇಳು ವೇಮ."

ಎಂದು ಹಾಡಿದರು.

ಆಗ ಕ್ರಿ.ಶ. ೧೪೪೭ ರ ವರ್ಷ. ಕಪಿಲೇಶ್ವರ ಗಜಪತಿಯ ಏರಿಕೆಯ ಕಾಲ. ಹದಿಮೂರು ವರುಷ ಮುನ್ನ, ಕಳಿಂಗ ರಾಜ್ಯವನ್ನು ಈತನು ವಶಪಡಿಸಿಕೊಂಡಿದ್ದನು. ಈಗ, ನೆಮ್ಮದಿಯಿಂದಿದ್ದ ರಾಜ ಮಹೇಂದ್ರವರಂ ರಾಜ್ಯದ ಮೇಲೆ ದಂಡೆತ್ತಿ ಬರತೊಡಗಿದ್ದನು. ಹಾದಿಯಲ್ಲಿ ಹಳ್ಳಿಗರು ಹೌಹಾರಿದ್ದರು. ಯಾರಿಗೆ, ಯಾವ ವೇಳೆ, ಯಾವ ಕುತ್ತು ಕಾದಿದೆಯೋ? ಎಂದು ಅರಿಯದವರಾಗಿದ್ದರು. ಹೀಗಾಗಿ ಹೊತ್ತು ಮುಳುಗಿದ ಮೇಲೆ, ಗುಂಪಾಗಿ ಸೇರುವುದಕ್ಕೆ ಜನರು ಅಂಜುತ್ತಿದ್ದರು. ಅಲ್ಲಲ್ಲಿ ಗಜಪತಿಯ ಸೇನೆಯ ಕ್ರೌರ್ಯದ ಸುದ್ದಿಗಳೂ ಹಬ್ಬಿದ್ದವು. ರಾಜ ಮಹೇಂದ್ರವರಂ ರಾಜ್ಯದ ಮೇಲೆ ಗಜಪತಿಯ ಸೇನೆ ಘೋರ ಯುದ್ಧ ನಡೆಸಿದ ವಾರ್ತೆಯೂ ಬಂದಿತು. ಸಾಲದೆ, ವೇಮನರ ಅತ್ತಿಗೆಯ ಗಂಡ, ರಾಜ ಮಹೇಂದ್ರವರಂ ದೊರೆ ವೀರಭದ್ರಾರೆಡ್ಡಿ, ವೀರಸ್ವರ್ಗ ಪಡೆದನು. ತನ್ನ ತಮ್ಮನನ್ನು ಮುಂದಿರಿಸಿಕೊಂಡು, ಮಹಾಮಾತ್ಯನಾಗಿ ಉಳಿದ ವೇಮಾರೆಡ್ಡಿಯು ಸಹ ತಮ್ಮನೊಂದಿಗೆ ಮಡಿದನು. ಗಜಪತಿಯು ವಿಜಯಪತಾಕೆ ಹಾರಿಸಿದನು. ಅವನ ಸೈನಿಕರು, ರಣಹದ್ದು ಹೆಣದ ಮೇಲೆರಗುವಂತೆ, ಸೋತ ಪ್ರಜೆಗಳ ಮೇಲೆರಗಿದರು. ಈ ಸುದ್ದಿಯನ್ನು ಕೇಳಿ ಯೋಗಿಗಳಿಗೆ ಸ್ವಲ್ಪ ಕೆಡುಕೆನಿಸಿತು. ಏಕೆಂದರೆ, ಚಿಕ್ಕ ವಯಸ್ಸಿನಲ್ಲಿ ತಮಗೆ ತಾಯಿಯಂತೆ ಮಾರ್ಗದರ್ಶನ ಮಾಡಿದ ಅನತಲ್ಲಿಯ (ನರಸಾಂಬೆ) ವೈಧವ್ಯ ಹಾಗೂ ರಾಜ್ಯ ವಿಯೋಗಗಳು ವಿಧಿಯು ಅವಳಿಗಿತ್ತ ಶಿಕ್ಷೆಯಂತೆ ಕ್ಷಣ ಕಾಲ ಎನಿಸಿದ್ದರೆ ಅಚ್ಚರಿಯಲ್ಲ.

ಸತ್ತು ಬಿದ್ದ ಪಶುವ, ಕತ್ತು ಚರ್ಮ ಹಿಡಿದು,
ಮತ್ತೆ ಹರಿದು ತಿನುವುದು ರಣ ಹದ್ದು.
ಗೃದ್ಧನಂಥವ ತಾ ಗಜಪತಿಯಲ್ಲವೇ?
ವಿಶ್ವದಾಭಿರಾಮ ಕೇಳು ವೇಮ.

ಯುದ್ಧ ಕಾಲದಲ್ಲಿ, ಅಲೆಯದೆ ಒಂದು ಚಿಕ್ಕ ಗ್ರಾಮದಲ್ಲಿ ನೆಲೆನಿಂತು, ತಮ್ಮಷ್ಟಕ್ಕೆ ಧ್ಯಾನ ಕ್ರಿಯಾದಿಗಳಲ್ಲಿ ಮಗ್ನರಾಗಿರುತ್ತಿದ್ದರು. ತಮ್ಮ ಶಿಷ್ಯರಿಗೆ ಅಗತ್ಯವಿದ್ದ ಮಾರ್ಗದರ್ಶನ ಮಾಡುತ್ತಿದ್ದರು. ಅಲ್ಪ ಸ್ವಲ್ಪ ಪದ್ಯ ರಚನೆಯೂ ಸಾಗಿತ್ತು.

ಮುಂದೆ, ಒಂದು ತಿಂಗಳ ನಂತರ ಗಂಡಿಕೋಟೆಯ ನಿಕಟ ಸಮೀಪಿಸಿದರು. ಕೋಟೆಯು ಗಜಪತಿಯ ವಶವರ್ತಿಯಾಗಿತ್ತು. ದುರ್ಗಾಧಿಪತಿಯನ್ನು ನಿಯಮಿಸಲಾಗಿತ್ತು. ಪಾಪ ಅವನೇನು ಮಾಡಬಲ್ಲನು? ತನ್ನಷ್ಟಕ್ಕೆ ತಾನು ಜನರೆದುರು ಬಲಶಾಲಿಯೆಂದು ತೋರಿಸಿಕೊಳ್ಳುವುದಷ್ಟೇ ಅವನಿಗುಳಿದ ಉಪಾಯವಾಗಿತ್ತು. ಹೀಗಾಗಿ, ಚಿಕ್ಕಪುಟ್ಟ ಆಸೆಯ ಕವಿಗಳು, ವಂದಿ ಮಾಗಧ, ವಿದೂಷಕರು ಹಾಡಿ ಹೊಗಳಿದ ಮಾತುಗಳಿಂದ ಉಬ್ಬಿ ಸಂತಸಪಡುವುದೇ ಅವನ ಮಹಾ ಪೌರುಷವೆನಿಸಿತ್ತು. ಅದನ್ನು ಕುರಿತು ಹೇಳುತ್ತ, ಕವಿ ವೇಮನರು,

ರಾಜಗೀರವಿರಲಿ, ರುದ್ರಾಕ್ಷಿ ಹೂವಿರಲಿ,
ತಿನಲು ರೊಟ್ಟಿ ಇರಲಿ, ತೌಡೆ ಇರಲಿ,
ಕವನ ನುಡಿದ ಕವಿಯ ಕರ್ಮವೇನೆನುವುದು?
ವಿಶ್ವದಾಭಿರಾಮ ಕೇಳು ವೇಮ.

ರಾಜ ಮಹೇಂದ್ರವರಂ ರಾಜ್ಯದ ಪತನದ ಸುದ್ದಿ ಕೇಳಿ, ವೇಮನರ ಮನವು ಸ್ವಲ್ಪು ಕನಲಿತ್ತು. ಈ ಕಾಲಕ್ಕೆ ಗಂಡಿಕೋಟೆಯ ದುರ್ಗಾಧಿಪನನ್ನು ಕುರಿತು, ವಿಜಯೀ ಗಜಪತಿಯನ್ನು ಕುರಿತು, ಚಾಟು ಪದ್ಯ ಹಾಡುವ ಕವಿಗಳನ್ನು ಕಂಡು ಅವರಿಗೆ ತಮ್ಮ ಚಿಕ್ಕಮ್ಮನ ಗಂಡ, ರಾಜಮಹೇಂದ್ರವರಂ ರಾಜ್ಯದ ಸ್ಥಾಪಕ ದೊರೆ ಕಾಟಯ ವೇಮಾರೆಡ್ಡಿಯ ಮಂತ್ರಿ ರಾಯ ಭಾಸ್ಕರನ ನೆನಪಾಯಿತು. ಅವನನ್ನು ಸ್ಮರಿಸುತ್ತ.

"ಮೆರೆವ ರಾಯನ ಕುಲ ಮಾಡಿದ ಧನವೆಲ್ಲ;
ಭಟರ ಪಾಲು, ಕವಿಗಳ ಪಾಲು; ತಿಳಿಯೆ,
ತುಚ್ಛ ಜನರ ಧನವು ದಾಯಾದಿಗಳ ಪಾಲು;
ಬರಿದೆ, ಜಾರಕಾಂತೆ ಪಾಲು; ವೇಮ."

ಎಂದೂ ಪದ ಹಾಡಿದರು.

ಗಂಡಿಕೋಟ ದುರ್ಗವು ಗಜಪತಿಯ ವಶವಾಗಿತ್ತು. ಅಲ್ಲಿಯ ದುರ್ಗಾಧಿಪತಿಯು ಗಜಪತಿ ರಾಜನ ಕೈಗೊಂಬೆಯಾಗಿದ್ದನು. ತನ್ನ ಸ್ವಾತಂತ್ರ್ಯವು

ತನ್ನ ಪ್ರಜೆಗಳ ಒಲುಮೆ ಗಳಿಸುವಲ್ಲಿಯೇ ಇದೆಯೆಂದು ತಿಳಿಯಲಾರದೆ, ಆ ದುರ್ಗಾಧಿಪತಿಯು ಅದನ್ನು ಅನ್ಯತ್ರ ಅರಸುತ್ತಿದ್ದನು. ಕಸ್ತೂರಿ ಮೃಗದ ನಾಭಿಯಲ್ಲಿಯೇ ಸುಗಂಧವಿದ್ದರೂ ಅದಕ್ಕೆ ಆ ಸತ್ಯ ತಿಳಿಯದು. ಅದನ್ನು ಹುಡುಕುತ್ತ ಸುತ್ತೆಲ್ಲ ಅಲೆದಾಡಿ, ಕೊನೆಗೆ ಪ್ರಾಣ ತೊರೆಯುತ್ತದೆ. ಅದೇ ರೀತಿ, ತನ್ನ ಸ್ವಾತಂತ್ರ್ಯವು ಪ್ರಜೆಗಳ ವಿಶ್ವಾಸ, ಸೇವೆಯಲ್ಲಿ ಇದೆಯೆಂದು ತಿಳಿಯದ ಗಂಡಿಕೋಟದ ದೊರೆಯು ಆಡಳಿತ ನಡೆಸದೆ ಅವನು ಮುಗ್ಗರಿಸುತ್ತಿದ್ದನು.

ಗಂಡಿ ಕೋಟೆಯಲ್ಲಿ ಕಸ್ತೂರಿ ಮೃಗವುಂಟು;
ರಾಜ ದೊಡ್ಡ ಅಶ್ವ – ರೋಹಿಯಲ್ಲ;
ಯಾವನಿದ್ದರೇನು? ಎತ್ತಿ ಕೆಡಹುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಇಂಥ ಅನರ್ಹ, ಅದಕ್ಷ ದುರ್ಗಾಧಿಪತಿಯು ಗಜಪತಿ ಕಪಿಲೇಶ್ವರನ ಕೃಪೆಗೆ ಪಾತ್ರನಾದರೆ ತೀರಿತು; ಅವನ ಮಾತಿಗೆ ಎಲ್ಲರೂ ಸೈಗುಡುವರು. ಗಜಪತಿ ಹೇಳಿದರಾಯಿತು, ಕವಡಿ ನಾಣ್ಯವಾಗಿ ಚಲಾವಣೆಯಾಗುವುದಲ್ಲವೇ?

ಅಧಮನಾದ ಮನುಜ ಅಧಿಕನ ಕೈ ಹಿಡಿಯೆ,
ಅವನ ಮಾತೆ ನಡೆವುದು ಅವನಿಯಲ್ಲಿ;
ಗಜಪತಿ ರಾಜ್ಯದಲಿ ಕವಡೆ ನಾಣ್ಯವಲ್ತೆ?
ವಿಶ್ವದಾಭಿರಾಮ ಕೇಳು ವೇಮ.

ಯೋಗಿ ವೇಮನರು ಸಾಮಾನ್ಯವಾಗಿ ರಾಜಕೀಯ ವ್ಯವಹಾರಗಳಲ್ಲಿ ತಲೆ ಹಾಕದೆ ನಿರ್ಲಿಪ್ತರಾಗಿರುತ್ತಿದ್ದರು. ಆದರೆ ರಾಜಮಹೇಂದ್ರವರಂ ರಾಜ್ಯದ ವಿಷಯವು ಅವರ ಅತ್ತಿಗೆಯ ಭಾಗ್ಯಕ್ಕೆ ನೇರ ಸಂಬಂಧ ಹೊಂದಿದ್ದ ಕಾರಣ ಆನುಷಂಗಿಕವಾಗಿ ಕೊಂಚ ತ್ರಸ್ತರಾದಂತೆ ಕಂಡುಬಂದರಾದರೂ, ಅದು ಕೆಲ ದಿನಗಳ ಮಟ್ಟಿಗೆ ಮಾತ್ರ.

**ನೀತಿವಾದ :**

ಈಗಾಗಲೇ, ರಾಜಮಹೇಂದ್ರವರಂ ಆಕ್ರಮಣವು ನಡೆದು ಹಳೆಯ ಮಾತಾಗಿತ್ತು. ಜನರು ಅನಾನುಕೂಲ ತಾಣಗಳಿಂದ ಅನುಕೂಲ ಸ್ಥಾನಗಳಿಗೆ ಗುಳೇ ಹೋಗುತ್ತಿದ್ದರು. ವಿಜಯಿಗಳು ಸೋತವರ ಮೇಲೆ ಠಬರು ಮಾಡುವುದು ಸಹಜವಾಗಿಯೇ ನಡೆದಿತ್ತು. ಇಂಥ ಪರಿಸ್ಥಿತಿಯಲ್ಲಿ ಯೋಗಿಗಳ ಸಾಧನ ಕ್ರಮಕ್ಕೆ ಯಾವ ಕುಂದೂ ಇರಲಿಲ್ಲ. ನಿತ್ಯ ಧ್ಯಾನಪೂಜೆಗಳು ಚ್ಯುತಿ ಇಲ್ಲದೆ ಸಾಗಿದ್ದವು. ಭಿಕ್ಷಾಟನೆಯೂ ನಿರಾತಂಕವಾಗಿ ನಡೆದಿತ್ತು. ಆಪತ್ತು ಹೆಚ್ಚಿದಾಗ, ದಾನ ಧರ್ಮ ಕಾರ್ಯಗಳೂ ಹೆಚ್ಚಾಗುವುದು ಸ್ವಾಭಾವಿಕ ಸ್ಥಿತಿ. ಜನರ ಆಸ್ತಿಕ ಭಾವನೆಯು ಹೆಚ್ಚಾಗಿ ಕುದುರುವುದು ಈ ಕಾಲದಲ್ಲಿಯೇ. ಇಂಥ ಒಂದು ಸಂಜೆಯ ದಿನ ಯೋಗಿಗಳ ದರ್ಶನಕ್ಕಾಗಿ ಬಹು ಜನರು ಸೇರಿದ್ದರು. ಕೂಡಿದ ಜನರು ಇತ್ತೀಚೆಗಿನ ಯುದ್ಧ ಕಾಲೀನ ಪ್ರಸಂಗಗಳನ್ನು ನೆನಪಿಸಿಕೊಳ್ಳುತ್ತಿದ್ದರು.

ತಮ್ಮ ತಮ್ಮಲ್ಲಿ ಮುಂದಿನ ಬಾಳಿನ ಸುರಕ್ಷಿತತೆ ಕುರಿತು ಮಾತಾಡಿಕೊಳ್ಳುತ್ತಿದ್ದರು. ಆದರೆ ಯೋಗಿಗಳೆದುರು ಅಂಥ ವಿಷಯ ಪ್ರಸ್ತಾಪವು ಸೂಕ್ತವಲ್ಲವೆಂದು ಆ ವಿಚಾರಗಳನ್ನು ಅದುಮಿ ಹಿಡಿದಿದ್ದರಷ್ಟೇ. ಉಭಯ ಕುಶಲೋಪರಿಯ ನಂತರ, ವೇಮನ ಯೋಗಿಗಳು ಅಂತರ್ಮುಖಿಗಳಾದರು. ಪದ್ಯಗಳು ತೂರಿ ಬಂದವು

"ಊರು ತೊರೆಯಬೇಕು, ವಿರಾಮವಿರದಾಗ,
ನಾರಿ ತೊರೆಯಬೇಕು, ನಡತೆಯರಿತು.
ದೊರೆಯು ತೊರೆಯಬೇಕು, ಇರದಿರಲು ಉದಾರ.
ವಿಶ್ವದಾಭಿರಾಮ ಕೇಳು ವೇಮ.
ಕೆಡುಕನನ್ನು ಹೆಚ್ಚು ಕೆಡಿಸುತಿಹುದು ದೈವ.
ಅಡ್ಡ ಬರದು, ಕಷ್ಟ ಅವನಿಗಿರಲು.
ಬೀಳು ಭೂಮಿ ಕಂಡು, ಭೂಪ ಮೆಚ್ಚುತಿಹನೆ?
ವಿಶ್ವದಾಭಿರಾಮ ಕೇಳು ವೇಮ.

ಹೀಗೆ, ಪದ್ಯ ಮೂಲಕ ಯೋಗಿಗಳು ತಮ್ಮ ಅನಿಸಿಕೆ ವ್ಯಕ್ತ ಪಡಿಸಿದಾಗ, ನೆರೆದ ಶ್ರೋತೃಗಣ ತದೇಕಚಿತ್ತರಾಗಿ ಆಲಿಸಿದರು. ಯೋಗಿಗಳು ತಮ್ಮ ಭಾವನೆಗಳನ್ನೇ ವ್ಯಕ್ತಪಡಿಸುತ್ತಾರೇನು? ಎನ್ನಿಸಿತು, ಜನತೆಗೆ.

ಅನಂತರ, ಹಲವು ಹಿರಿಯರು ತಮ್ಮ ಸ್ವಂತದ ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆದರು.

ಹೊತ್ತು ಹೆಚ್ಚಾದ ಕಾರಣ, ಯೋಗಿಗಳು ಎಲ್ಲರನ್ನೂ ಬೀಳ್ಕೊಟ್ಟರು.

**ನಿನ್ನ ದೇವರು ನಿನ್ನೊಳಗೇ**

ಭಿಕ್ಷಾಟನೆಯಿಂದ ಉದರ ನಿರ್ವಹಣೆ, ಸಾಯಂಕಾಲದ ಸತ್ಸಂಗ ಮತ್ತು ಅನಂತರದ ಧ್ಯಾನ ಪೂಜೆಗಳಲ್ಲಿ ಅದೆಷ್ಟೋ ದಿನಗಳು ಕಳೆದವು. ಅಲ್ಪ ಸ್ವಲ್ಪ ಸಾಹಿತ್ಯ ಸೃಷ್ಟಿಯೂ ಆಯಿತು. ಇಷ್ಟರಲ್ಲಿ ಮುಂಚಿನ ಸಾವಿರ ಪದ್ಯಗಳಿಗೆ ಮತ್ತೊಂದು ಸಾವಿರ ಪದ್ಯಗಳ ಕೂಡಿಕೆಯಾಗಿತ್ತು.

ಅಂದು ಗುರುವಾರ. ಬೇರೆ ಊರಿನಿಂದ ಯೋಗ ಸಾಧಕನೋರ್ವನು ಮಾರ್ಗದರ್ಶನಕ್ಕಾಗಿ ಆಗಮಿಸಿದ್ದನು. ಮಾತು ಕತೆಯು ಬಾಹ್ಯ ಪೂಜೆಯ ಅಗತ್ಯ ಕುರಿತು ನಡೆದಿತ್ತು. ಅದರಲ್ಲಿಯೂ ವಿಶೇಷವಾಗಿ ಮಂದಿರದಲ್ಲಿ ನಡೆಯುವ ಪೂಜೆ – ಸಮಾರಂಭಗಳ ಅಗತ್ಯ ಕುರಿತು ಪ್ರಸ್ತಾಪ ಬಂದಿತ್ತು. ಉತ್ತರ ಭಾರತದಲ್ಲಿ, ಬೌದ್ಧ ವಿಹಾರಗಳೂ, ಜೈನ ಬಸದಿಗಳೂ ಮತ್ತು ಹಿಂದೂ ದೇವಾಲಯಗಳೂ ನೆಲಸಮವಾಗಿದ್ದವು. ಅವುಗಳ ಜಾಗೆಯಲ್ಲಿ ಮಸೀದೆಗಳು ತಲೆಯೆತ್ತಿದ್ದವು. ದಕ್ಷಿಣದಲ್ಲಿ ಸಹ, ಒಂದೆಡೆ ಮುಸಲ್ಮಾನರು ಹಲವು ಮಂದಿರಗಳಲ್ಲಿಯ ಮೂರ್ತಿಗಳನ್ನು ಭಗ್ನ

ಮಾಡಿದ್ದರೆ, ಆಂಧ್ರದಲ್ಲಂತೂ ಬಹಳಷ್ಟು ಜೈನ ಬಸದಿಗಳನ್ನು ವೀರಶೈವ ಕ್ರಾಂತಿಕಾರರು ಈಶ್ವರ–ಗುಡಿಗಳಾಗಿ ಪರಿವರ್ತಿಸಿದ್ದರು. ಜನರನ್ನು ಜೈನ ಧರ್ಮದಿಂದ ವೀರಶೈವರನ್ನಾಗಿಸಿದ್ದರು. ಇಂಥ ಕಾಲದಲ್ಲಿ, ಬ್ರಾಹ್ಮಣರು, ಅದರಲ್ಲಿಯೂ ಪ್ರತಿಯೊಂದಕ್ಕೂ ಜನರು ಪುರೋಹಿತರನ್ನೇ ನಿಂದಿಸುವುದು ರೂಢಿಯಾಗಿತ್ತು. ತಮ್ಮ ಸ್ವಂತ ಕರ್ತವ್ಯವೇನು? ಎಂಬುದನ್ನೇ ಬಹುಜನರು ಮರೆತಿದ್ದರು. ಈ ಎಲ್ಲ ವಿಷಯಗಳು ನಡೆದ ಚರ್ಚೆಯಲ್ಲಿ ಸೇರಿದ್ದವು. ಎಲ್ಲರೂ ಯೋಗಿಗಳ ಬೋಧೆಗಾಗಿ ಕಾತರಿಸಿ ಕುಳಿತಿದ್ದರು. ಯೋಗಿಗಳು ಅರೆಮುಚ್ಚಿದ ನೇತ್ರಗಳಿಂದ ಪದ್ಯ ರಚನೆಗಿಳಿದರು.

**ರಾಜಮಹೇಂದ್ರಿಗೆ ಪ್ರಯಾಣ :**

ವೇಮನರು ಗಂಡಿಕೋಟದಿಂದ ರಾಜಮಹೇಂದ್ರವರಂ ಕಡೆಗೆ ಪ್ರಯಾಣ ಬೆಳೆಸಿದರು. ಹಾದಿಯಲ್ಲಿ ಹತ್ತಾರು ಊರುಗಳಲ್ಲಿ ವಸತಿ ಮಾಡಿದರು. ಆದರೆ, ಎಲ್ಲಿಯೂ ಒಂದೆರಡು ದಿನಗಳಿಗಿಂತ ಹೆಚ್ಚು ಕಾಲ ತಂಗಲಿಲ್ಲ. ವಿಶೇಷ ಚರ್ಚೆಗಳಾಗಲಿ, ಪದ್ಯ ರಚನೆಯಾಗಲಿ ನಡೆಯಲಿಲ್ಲ. ಅಂತೂ ಕೊನೆಗೆ ರಾಜ ಮಹೇಂದ್ರವರಂ ಪಟ್ಟಣದ ನಿಕಟವಿರುವ ಗ್ರಾಮವೊಂದನ್ನು ತಲುಪಿದರು. ಆ ಗ್ರಾಮದ ಬಳಿಯ ಸಣ್ಣದಿನ್ನೆಯ ಬಳಿ ಹೆಮ್ಮರವಾಗಿ ಬೆಳೆದು ನಿಂತಿದ್ದ ಹುಣಸೇ ಮರದ ಅಡಿ ತಂಗಿದರು. ದಿನಾಲು ಬೆಳಗಿನ ಧ್ಯಾನಪೂಜೆ, ಅನಂತರ ಭಿಕ್ಷಾಟನೆ, ಮಧ್ಯಾಹ್ನ ಧ್ಯಾನ ಪೂಜೆಯ ನಂತರ ಜಿಜ್ಞಾಸುಗಳೊಂದಿಗೆ ಸತ್ಸಂಗ, ಕೊನೆಗೆ ಸಾಯಂಕಾಲದ ಧ್ಯಾನ ಪೂಜೆಗಳು ನಡೆದಿದ್ದವು. ಮೊದಮೊದಲು ಯಾರೂ ವೇಮನರ ಗುರುತು ಹಿಡಿದಿರಲಿಲ್ಲ. ಇಂಥ ಒಂದು ಸಾಯಂಕಾಲ ಕರ್ಮ ಫಲ ಕುರಿತು ಚರ್ಚೆ ನಡೆದಿತ್ತು.

"ಯೋಗಿವರ! ನನ್ನದೊಂದು ಚಿಕ್ಕ ಪ್ರಶ್ನೆ. ತಮ್ಮ ಭಾವ ಸ್ರೋತಕ್ಕೆ ಆತಂಕವೆನಿಸದಿದ್ದರೆ, ದಯವಿಟ್ಟು ತಿಳಿಸಬೇಕು. ಅದೇನೆಂದರೆ, ಕರ್ಮವು, ಸಂಸ್ಕಾರದ ತೀವ್ರತೆಯ ಮೇಲೆ ಸಂಚಿತವೆಂದೂ, ಪ್ರಾರಬ್ಧವೆಂದೂ ಮತ್ತು ಆಗಾಮಿ ಎಂದೂ ವರ್ಗೀಕೃತವಾಗುವಷ್ಟೇ. ಪ್ರಾರಬ್ಧವು ಬಿಟ್ಟ ಬಾಣದಂತೆ ಅನಿವಾರ್ಯವೇ?" ಎಂದು ಕೇಳಿದನು, ಶ್ರೋತೃಗಳಲ್ಲಿಂದ ಓರ್ವ ಮುಂದುವರಿದ ಸಾಧಕ.

"ಕರ್ಮ ಫಲ ನಿಯಮಾನುಸಾರ, ಅದು ಹಾಗೇಯೇ ಸರಿ. ಆದರೆ, ಕರ್ಮಫಲದ ಆ ವೇಗದಲ್ಲಿ ಅಪವಾದಾತ್ಮಕವಾಗಿ ಏರುಪೇರಾಗಬಹುದು.

"ಹಿಂದೆ ಮಾಡಿದಂಥ ಕರ್ಮ ಬಂಧವೆಲ್ಲ,
ಗತಿಸುತಿಹುದು ಸತ್ಯ ಗುರುವಿನಿಂದ.
ಕುಂಬಾರಗೆ ವರುಷ ಕೋಲಿಗೊಂದೆ ನಿಮಿಷ.
ವಿಶ್ವದಾಭಿರಾಮ ಕೇಳು ವೇಮ.

ಆದರೆ, ಸಿಕ್ಕ ಸಿಕ್ಕ ಜನರನ್ನು ಹಿಂಬಾಲಿಸಕೂಡದು. ಕುರುಡನಿಗೆ ಕುರುಡನು ದಾರಿ ತೋರಲಾರನು, ಇಬ್ಬರೂ ಕೂಡಿ ಹಳ್ಳ ಬೀಳುವರು.

ಜೊಳ್ಳು ಮಾತನಾಡಿ, ಜಗದಿ ತಿರುಗುವಂಥ
ಕಳ್ಳ ಗುರು ಕಟ್ಟುವನು ಕರ್ಮವೆಲ್ಲ.
ಹಲ್ಲೊಳು ಹುಳು ಸೇರಿ, ಹೆಚ್ಚಿಸದೆ ನೋವನು?
ವಿಶ್ವದಾಭಿರಾಮ ಕೇಳು ವೇಮ.

ಯೋಗಿವರ್ಯರು ಪದ್ಯ ಪಾಠ ನಿಲ್ಲಿಸಿದರು. ಗಾಢ ಮೌನ ಆವರಿಸಿತ್ತು. ಕೆಲ ಸಮಯದ ನಂತರ ಆಗಮಿಸಿದ ಶ್ರೋತೃಗಳು ಒಬ್ಬೊಬ್ಬರಾಗಿ ಯೋಗಿಗಳಿಗೆ ವಂದಿಸಿ ಚದರಿದರು.

**ನರಸಾಂಬೆಯ ಭೆಟ್ಟಿ :**

ರಾಜ ಮಹೇಂದ್ರವರಂದಿಂದ ಅನತಿ ದೂರದಲ್ಲಿರುವ ಗ್ರಾಮದಲ್ಲಿ ತಮ್ಮ ಬಿಡಾರ ಹೂಡಿದ ವೇಮನರು, ತಮ್ಮ ನಗ್ನ ಅವಸ್ಥೆಯಿಂದ ಬಹು ಜನರ ಲಕ್ಷ್ಯ ಸೆಳೆದಿದ್ದರು. ಆದರೆ, ಯೋಗ ಸಾಧಕರಲ್ಲಿ ಹಲವರು ಅವರ ದರ್ಶನ ಪಡೆದು, ಅವರ ಬೋಧೆ ಶ್ರವಣ ಮಾಡಿ, ಅವರ ಆಳ ಎತ್ತರಗಳನ್ನು ನೋಡಲು ಇಣಿಕಿ ಹಾಕಿದ್ದರು. ಅವರ ಹರಕೆಯಿಂದ ತಮ್ಮ ಹಲವು ಕಷ್ಟ ಕಾರ್ಪಣ್ಯಗಳು ದೂರಾದವೆಂದು ನಂಬಿಕೊಂಡ ಭಕ್ತರೂ ಹಲವರಿದ್ದರು. ಇಷ್ಟಾದರೂ, ಅತ್ತಿಗೆ ನರಸಾಂಬೆಯವರ ಬಳಿ ವೇಮನರು ಸ್ವತಃ ಹೋಗಿರಲಿಲ್ಲ. ಪತಿ ವಿಯೋಗದ ದುಃಖದಲ್ಲಿದ್ದ ರಾಣಿಗೆ ಯೋಗಿ ವೇಮನರ ಸಂದೇಶವೂ ತಲುಪಿರಲಿಲ್ಲ.

ಒಂದು ಮುಂಜಾನೆ, ಶಿಷ್ಯ ರಾಮರೆಡ್ಡಿ, ರಾಜಮಹೇಂದ್ರವರಂಗೆ ಭಿಕ್ಷಾಟನೆಗಾಗಿ ಬಂದು, ರಾಣಿ (ಹಿಂದಿನ) ನರಸಾಂಬೆಯ ವಾಸಗೃಹದೆದುರೇ ನಿಂತು,

"ವೇಮನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲಿಸಿರವಗೆ ಪುಣ್ಯ ಪುರುಷರಿರ !
ಪೂಜೆ ಸಲಿಸಿದಷ್ಟು ಸುಖ ಶ್ರೇಯ ಲಭ್ಯ!
ವಿಶ್ವದಾಭಿರಾಮ ಕೇಳು ವೇಮ"

ಎಂಬ ಪದ್ಯ ಪಠಿಸಿ, 'ಭಿಕ್ಷಾಂ ದೇಹಿ' ಎಂದು ವಿನಮ್ರತೆಯಿಂದ ಸೂಚನೆ ಕೊಟ್ಟನು.

ರಾಣಿ, ಮುಕುಟ ಪಾದ ಕೇಳಿ, ಭಿಕ್ಷುಕನನ್ನು ಕರೆ ಕಳುಹಿ, ಎಲ್ಲವನ್ನೂ ಕೇಳಿ ತಿಳಿದಳು, ಯೋಗಿ, ಸೀಮೆಗೆ ಬಂದು ಹತ್ತು ಹದಿನೆರಡು ದಿನಗಳು ಸಂದಿವೆಯೆಂದು ತಿಳಿದು, "ಇದು ವರೆಗೆ ವಿಷಯ ತಿಳಿಯಲಿಲ್ಲವಲ್ಲ!" ಎಂದು ಹಳಹಳಿಸಿದಳು.

"ಅಮ್ಮನವರೇ! ಯುದ್ಧಾರಂಭದಿಂದಲೂ ಯೋಗಿಗಳು ಆಕ್ರಮಣಕಾರರ ಕ್ರೌರ್ಯ ಕುರಿತು, ಕಾಲ – ಕರ್ಮ ಕುರಿತು ಚಿಂತನದಲ್ಲಿಯೇ ಇದ್ದಾರೆ. ನೇರವಾಗಿ ಏನನ್ನೂ ಹೇಳದಿದ್ದರೂ, ಅವರ ಆಳ ಮನದಲ್ಲೂ ಸಹ, ತಮ್ಮನ್ನು ಕುರಿತು ಎಂಥ

ಅನುಕಂಪವಿದೆ ಎಂಬುದನ್ನು ನಾವು ಗುರುತಿಸಿದ್ದೇವೆ." ಎಂದು ಮನ ನಾಟುವಂತೆ ನುಡಿದನು.

"ಅಪ್ಪಾ! ಇಲ್ಲಿಯೇ ಊಟ ತೀರಿಸಿಕೊಂಡು, ಯೋಗಿಗಳಿಗೆ ಬುತ್ತಿ ಕಟ್ಟಿಸಿಕೊಂಡು ಹೋಗು" ಎಂದಳು.

"ಇಲ್ಲ, ತಾಯಿ; ಭಿಕ್ಷಾನ್ನವನ್ನೇ ನಾವು ಗುರುಗಳೊಂದಿಗೆ ಸೇರಿ, ಶಿವನ ಪ್ರಸಾದ ರೂಪದಲ್ಲಿ ಸ್ವೀಕರಿಸುತ್ತೇವೆ. ಭಿಕ್ಷೆ ನೀಡಿದರೆ ಸಾಕು" ಎಂದನು.

"ಹಾಗಾದರೆ ನಾವು ಇಂದೇ ಸಾಯಂಕಾಲ ದರ್ಶನಕ್ಕಾಗಿ ಬರುತ್ತೇವೆಂಬುದನ್ನು ತಿಳಿಸಿರಿ" ಎಂದು ಹೇಳಿ ಸೇವಕರಿಗೆ ಭಿಕ್ಷಾರೂಪದಲ್ಲಿ, ಮಾಡಿದ ಅಡುಗೆಯೊಂದಿಗೆ ಹಣ್ಣು ಹಂಪಲಗಳನ್ನು ನೀಡಿರೆಂದು ತಿಳಿಸಿದಳು.

ಭಿಕ್ಷೆ ಎತ್ತಿಕೊಂಡು ರಾಮರೆಡ್ಡಿ ಬರುವಷ್ಟರಲ್ಲಿ ಮಧ್ಯಾಹ್ನವಾಗಿತ್ತು. ಯೋಗಿಗಳ ಮಧ್ಯೆ – ಸಂಧ್ಯೆಯ ಧ್ಯಾನವೂ ಅದೇ ಮುಗಿದಿತ್ತು. ಅಷ್ಟು ಹೊತ್ತಿಗೆ ನೀಲಕಂಠನೂ ಬಂದಿದ್ದನು. ಊಟದ ಕಾಲಕ್ಕೆ ವಿಶೇಷ ಅಡುಗೆ ಬಗೆಗೆ ಹೇಳುತ್ತ, ರಾಮರೆಡ್ಡಿಯು ನರಸಾಂಬೆ ರಾಣಿಯ ಭೆಟ್ಟಿ ಕುರಿತು, ನಡೆದ ಸಂಭಾಷಣೆ ಕುರಿತು, ಮತ್ತು ಅದೇ ಸಾಯಂಕಾಲ ದರ್ಶನಕ್ಕಾಗಿ ಅವರು ಆಗಮಿಸುವ ಸಂದೇಶ ಕುರಿತು ತಿಳಿಸಿದನು.

"ಅತ್ತಿಗೆಯವರು ಚನ್ನಾಗಿದ್ದಾರೆಯೇ? ಇಲ್ಲವೆ ಪತಿ ವಿಯೋಗದಿಂದ ಬಹಳ ಕುಸಿದಿದ್ದಾರೆಯೇ?" ಎಂದು ಅನುಕಂಪ ಸೂಚಿಸಿದರು. ರಾಮರೆಡ್ಡಿಯು ರಾಜಮಹೇಂದ್ರವರಂ ಪ್ರಜೆಗಳ ಇಂದಿನ ಸ್ಥಿತಿಗತಿಗಳ ಬಗ್ಗೆ, ಗಜಪತಿಯ ಹೊಸ ಆಳ್ವಿಕೆಯ ಬಗ್ಗೆ, ಜನರ ಅಭಿಮತವನ್ನು ತಿಳಿಸಿದನು. ರಣರಂಗದಲ್ಲಿ ವೀರಸ್ವರ್ಗ ಪಡೆದ ದೊರೆ ವೀರಭದ್ರಾರೆಡ್ಡಿ ಹಾಗೂ ಮಹಾ ಮಂತ್ರಿ ವೇಮಾರೆಡ್ಡಿಯವರನ್ನು ಕುರಿತು ಪ್ರಜೆಗಳಲ್ಲಿ ತುಂಬಿರುವ ಅನುಕಂಪ ಕುರಿತು ಸಹ ನಿವೇದಿಸಿದನು.

ಆ ಸಾಯಂಕಾಲ, ಸ್ವಲ್ಪ ಹೆಚ್ಚು ಜನ ಸೇರಿದ್ದರು. ಮಧ್ಯಾಹ್ನದ ವೇಳೆಗಾಗಲೇ ನರಸಾಂಬೆ (ಅನತಲ್ಲಿ) ರಾಣಿಯ ಆಗಮನದ ಸುದ್ದಿ ಅದೆಂತೋ ಕಿವಿಯಿಂದ ಕಿವಿಗೆ ಹರಡಿತ್ತು. ಮೇಲಾಗಿ, ಯೋಗಿಯ ಏರು ಜವ್ವನದಲ್ಲಿ ಈ ರಾಣಿಯ ಸಮಯಪ್ರಜ್ಞೆ ಹಾಗೂ ಅನುಕಂಪಗಳ ನಿಮಿತ್ತವಾಗಿ ವೇಮನರ ಬಾಳಿನಲ್ಲಿ ಆದ ದೊಡ್ಡ ತಿರುವನ್ನು ಕುರಿತು, ರಾಜಮನೆತನದ ಪೂರ್ವ ಪರಿಚಯವಿದ್ದವರಿಗೆ ವೇದ್ಯವಿತ್ತು. ಇಂದು ಆ 'ಸ್ವೇಚ್ಛಾಚಾರಿ' ಯುವಕನು 'ಯೋಗಿರಾಜ'ನಾಗಿದ್ದ; ರಾಜಯೋಗಿಯಾಗಿದ್ದ. ಆ ರಾಣಿ 'ಮಾಜಿ' ರಾಣಿಯಾಗಿದ್ದಳು. ಮೇಲಾಗಿ ಯುದ್ಧಾನಂತರ, ಅವಳ ಚಲನವಲನವನ್ನು ಯಾರೂ ಕಂಡಿರಲಿಲ್ಲ. ಹೀಗಾಗಿ, ಜನರ ಕುತೂಹಲ ಹೆಚ್ಚಾಗಿದ್ದುದು ಸ್ವಾಭಾವಿಕವಾಗಿತ್ತು.

ಸಾಯಂಕಾಲದ ಹೊತ್ತಿಗೆ ನಿತ್ಯದ ಶ್ರೋತೃವರ್ಗ ಸೇರಿತ್ತು. ಸತ್ಸಂಗ ಕುರಿತು ಚರ್ಚೆ ನಡೆದಿತ್ತು.

— — — — — — — — — — — — — — — — — — — — — —

"ಸಜ್ಜನರ ಸ್ನೇಹ ಸಂಗ ತೊರೆಯಬೇಡ;
ಪ್ರಕೃತಿಯರಿಯದಿರಲು ಭಕ್ತಿಯಿಲ್ಲ.
ಪಾಪಿ ಯಾವ ರೀತಿ ಭಕ್ತಿ ನಿಲಿಸಬಲ್ಲ?
ವಿಶ್ವದಾಭಿರಾಮ ಕೇಳು ವೇಮ.

ಅಷ್ಟರಲ್ಲಿ ರಾಣಿ ನರಸಾಂಬೆ ಆಗಮಿಸಿದಳು. ಜೊತೆಗೆ ನಾಲ್ಕೈದು ಜನ ಸ್ತ್ರೀಯರೂ ಇದ್ದರು. ತಾವು ಹತ್ತಿ ಬಂದ ಕುದುರೆಯ 'ಬಗಿ' ಯನ್ನು ಸ್ವಲ್ಲು ದೂರ ನಿಲ್ಲಿಸಿ ಬಂದಿದ್ದರು. ಏಕೆಂದರೆ, ಮಹಾತ್ಮರನ್ನು ಭೆಟ್ಟಿಯಾಗುವ ಪರಿಪಾಠವನ್ನು ಅವರು ಮುಂಚಿನಿಂದ ರೂಢಿಸಿಕೊಂಡಿದ್ದರು. ಅವರು ಬಂದೊಡನೆ, ವೇಮನರು ತಮ್ಮ ಪದ್ಯ ನಿಲ್ಲಿಸಿ, ಕುಳಿತುಕೊಳ್ಳಲು ಸೂಚಿಸಿದರು. ಕೈಜೋಡಿಸಿ ಪರಸ್ಪರರು ನಮಿಸಿದರು. ಹಾಡು ಮುಂದುವರಿಯಿತು.

"ಪೊಡವಿ ತಿರುಗಿ ಪಡೆವ ಪುಣ್ಯ ರಾಶಿಯೆಲ್ಲ,
ಸಾಧು ಜನರ ನೋಡೆ, ಶೀಘ್ರ ಲಭ್ಯ.
ನದಿಯ ತಳಕೆ ಬಿದ್ದ ನೀರು ಇಂಗಿ ಶುದ್ಧ.
ವಿಶ್ವದಾಭಿರಾಮ ಕೇಳು ವೇಮ.

"ಅಪ್ಪಾ! ಜಗತ್ತಿನಲ್ಲಿ! ಒಳ್ಳೆಯವರಿಗೆ ಇಂಬಿಲ್ಲದಂತಾಗುತ್ತಿದೆ. ದೇವರು ಕಣ್ಣು ಮುಚ್ಚಿದಂತಾಗಿದೆ ಎಂದನು ಓರ್ವ ಹಿರಿಯನು. ನರಸಾಂಬೆ ರಾಣಿ ಆ ಹಿರಿಯನತ್ತ ಸಮ್ಮತಿ ಪೂರ್ವಕ ನೋಡಿದಳು. ಅವಳು ಬೆಳಿಗ್ಗೆ ತನ್ನಲ್ಲಿ ಭಿಕ್ಷೆಗೆ ಬಂದ ಯುವಕ ರಾಮರೆಡ್ಡಿಯು ವೇಮನರು ಪಠಿಸಿದ ಪದ್ಯಗಳನ್ನು ಬರೆದುಕೊಳ್ಳವತ್ತ ಹೆಚ್ಚು ಲಕ್ಷ್ಯ ನೀಡಿದಳು.

"ಖಳರು ಹೆಚ್ಚು ದನಿ ಮಾಡುತ್ತಿರಬಹುದು. ಆದರೆ ಸಜ್ಜನಿಕೆಗಾವ ಕುಂದೂ ಇಲ್ಲ. ಕಂಚು ಮೊಳಗುವಂತೆ ಕನಕವು ಹೆಚ್ಚು ಶಬ್ದ ಮಾಡದು ತಾನೇ?"

ಸುರರು ಮೌನವಿಹರು ಸರಿಯಾಗಿ ನಡೆವರು;
ಧರ್ಮ ಮಾರ್ಗವೊಂದೆ ತಾರಕವದು.
ಅಂತೆ ಅಲ್ಲದವರು ಅಸುರರಾಗಿ ಕೆಡುಗು.
ವಿಶ್ವದಾಭಿರಾಮ, ಕೇಳು ವೇಮ.

ಎಂದು ಹಾಡು ನಿಲ್ಲಿಸಿ, ಕಣ್ಣು ಮುಚ್ಚಿದರು ಯೋಗಿ, ಜನರು ನಮಸ್ಕರಿಸಿ ಹೊರಟರು. ಸ್ವಲ್ಪು ಸಮಯದ ಬಳಿಕ ನರಸಾಂಬೆ ರಾಣಿಯೂ ಹೊರಡುವ ವೇಳೆಯಾಯಿತೆಂದು ಏಳುವುದರಲ್ಲಿದ್ದಳು. ಅಷ್ಟರಲ್ಲಿ ವೇಮನರು.

"ನೀವು ಸ್ವಲ್ಪು ಕುಳಿತುಕೊಳ್ಳಿ" ಎಂದು ಹೇಳಿದರು.

ಜನರು ಹೋದ ಬಳಿಕ ನರಸಾಂಬೆಯನ್ನು ಹತ್ತಿರ ಕರೆದು, ನಡೆದ ಅನನುಕೂಲ ಘಟನೆಗಳ ಬಗ್ಗೆ ಸಾಂತ್ವನ ನುಡಿ ಆಡಿದರು. ಅವಳ ಪತಿವಿಯೋಗ ಕುರಿತು

ಸಂತಾಪ ಸೂಚಿಸಿದರು. ಔಪಚಾರಿಕ ಮಾತುಕತೆ ಮುಗಿದ ಬಳಿಕ ಯೋಗಿಗಳು ಅರೆಮುಚ್ಚಿದ ನೇತ್ರದಿಂದ ಅಂತರ್ಮುಖಿಯಾದರು. ಐದಾರು ನಿಮಿಷಗಳ ನಂತರ, ತಮ್ಮ ಧ್ಯಾನಸ್ಥ ಅವಸ್ಥೆಯಲ್ಲಿಯೇ ತಮ್ಮ ಹೆಬ್ಬಟ್ಟನ್ನು ನರಸಾಂಬೆಯ ಭೃಕುಟಿಗೆ ಒತ್ತಿದರು. ನರಸಾಂಬೆಯಲ್ಲಿ ವಿದ್ಯುತ್ಸಂಚಾರವಾಯಿತು. ಮನದ ಚಿಂತೆಗಳೆಲ್ಲವೂ ಶೂನ್ಯವಾಗಿ ಅವಳ ಮನಸ್ಸು ಪ್ರಶಾಂತವಾಯಿತು. ದೇಹವು ಉತ್ಸಾಹದ ಚಿಲುಮೆಯಂತಾಯಿತು. ಹಿಂದೆ ಸರ್ಪದಂಶದಿಂದ ತನ್ನನ್ನು ಪಾರು ಮಾಡಿದ ಮೈದುನನು, ಇಂದು ಮಹಾಯೋಗಿಯಾಗಿ, ಕೇವಲ ಸ್ಪರ್ಶ ಮಾತ್ರದಿಂದ ತನ್ನ ಸಂಸ್ಕಾರಗಳನ್ನೆಲ್ಲ ನಿರ್ಮೂಲಮಾಡುವ ಮಹಾಪುರುಷನಾಗಿರುವುದನ್ನು ಸ್ವತಃ ಅನುಭವಿಸಿದಳು. ಅವಳ ಕಂಠ ಕೃತಜ್ಞತೆಯಿಂದ ಬಿಗಿದು ಬಂದಿತು. ಇನ್ನೊಮ್ಮೆ ಬಾಗಿ ನಮಸ್ಕರಿಸಲು ಎದ್ದಳು. ಅಷ್ಟರಲ್ಲಿ ಯೋಗಿಗಳೇ ಮುಂದಾಗಿ ಅವಳಿಗೆ ನಮಸ್ಕರಿಸಿ ಬೀಳ್ಕೊಟ್ಟರು. ಹೋಗುವಾಗ, ತಮಗೆ 'ಮತ್ತಾವಾಗ ಮುತ್ತಿನಂಥ ಮಾತುಗಳನ್ನು ಆಲಿಸುವ ಭಾಗ್ಯ ಬರುವುದೋ?' ಎಂದು ನರಸಾಂಬೆ ನುಡಿದಳು. ಯೋಗಿಯು ರಾಮರೆಡ್ಡಿಯನ್ನು ಕರೆದು ಆಯ್ದ ಶತ ಸಂಖ್ಯೆಯ ಪದ್ಯಗಳನ್ನು ಪ್ರತಿ ಮಾಡಿ ಅತ್ತಿಗೆಗೆ ಮರುದಿನ ನೀಡಲು ಹೇಳಿದರು. ಮಾರನೆಯ ದಿನ ಭಿಕ್ಷಾಟನೆಗೆ ಹೋದಾಗ, ರಾಮರೆಡ್ಡಿ ಪದ್ಯಗಳ ಪ್ರತಿ ನೀಡಿದನು. ರಾಣಿ ನರಸಾಂಬೆ ಆ ಶತ ಸಂಖ್ಯೆಯ ಪದ್ಯಗಳನ್ನು ದಿನನಿತ್ಯ ಪಾರಾಯಣ ಮಾಡತೊಡಗಿದಳು. ಸತ್ಸಂಗದ ಸವಿನೆನಹನ್ನು ಸ್ಮರಿಸಿಕೊಳ್ಳುತ್ತ ಬಾಳಿದಳು.

**ಚಂದನೂಲಿಗೆ ಪಯಣ:**

ನರಸಾಂಬೆ ರಾಣಿಯು ಬಂದು ಹೋದ ಬಳಿಕ, ವೇಮನಯೋಗಿಗಳ ಭೆಟ್ಟಿಗಾಗಿ ಬರುಹೋಗುವವರ ಸಂಖ್ಯೆ ವಿಪರೀತವಾಯಿತು. ವೇಮನರನ್ನು ರಾಜಯೋಗಿಯೆಂದೂ ಮತ್ತು ಜ್ಞಾನಿಯೆಂದೂ ಭಾವಿಸಿ ಬರುವ ಮುಮುಕ್ಷುಗಳು ಎಲ್ಲೋ ಒಬ್ಬಿಬ್ಬರು. ಆದರೆ, ಪವಾಡ ಪುರುಷರೆಂದೂ, ಅಷ್ಟೇ ಅಲ್ಲದೆ ಕೊಂಡವೀಡನ ರಾಜವಂಶೀಯರೆಂದೂ, ತಿಳಿದು ಕುತೂಹಲಕರ ಪ್ರಶ್ನೆ ಕೇಳಲೆಂದು ಬರುವವರೇ ಬಹಳ ಜನರಾದರು. ಈ ಜನರ ಗದ್ದಲದಲ್ಲಿ ಯೋಗ ಸಾಧಕರು ವಿಚಲಿತರಾಗುವ ಪ್ರಸಂಗ ಒದಗಿತು. ರಾಮರೆಡ್ಡಿ ಮತ್ತು ನೀಲಕಂಠರು ತಮ್ಮ ಗುರುಗಳಲ್ಲಿ ಈ ವಿಷಯ ಪ್ರಸ್ತಾಪಿಸಿದರು. ಅವರು ಮುಗುಳ್ನಕ್ಕರು, "ನಿಮಗೆ ಸರಿಯೆನಿಸಿದ ತಾಣ ಹುಡುಕಿರಿ" ಎಂದಿಷ್ಟೇ ನುಡಿದು ಸುಮ್ಮನಾದರು.

ಮಾರನೆಯ ದಿನ, ಯೋಗಿ ಪರಿವಾರವು ದಕ್ಷಿಣದತ್ತ ಪಯಣ ಬೆಳೆಸಿತು. ಅದೊಂದು ಸುದೀರ್ಘ ಪ್ರಯಾಣವೇ ಸರಿ. ಮಾರ್ಗಮಧ್ಯೆ ಪ್ರಶಾಂತ ತಾಣವಿರುವಲ್ಲಿ ಇಲ್ಲವೆ ಸಾಧಕರ ಗಣ ಇರುವಲ್ಲಿ ಹಲವಾರು ದಿನ ತಂಗುತ್ತಿದ್ದರು. ಇಂಥ ತಾಣಗಳಲ್ಲಿ ಊರ ಹೊರವಲಯದ ಮರದ ಛಾಯೆ ಇಲ್ಲವೆ ಧರ್ಮಶಾಲೆಗಳಲ್ಲಿ ತಂಗಿ, ಭಿಕ್ಷಾಟನೆಯಿಂದ ಹೊಟ್ಟೆ ಹೊರೆಯುತ್ತಿದ್ದರು. ಸಾಯಂಕಾಲ ಆಗಮಿಸಿದ ಅಷ್ಟಿಷ್ಟು

ಜಿಜ್ಞಾಸು ಭಕ್ತರೊಂದಿಗೆ ಪ್ರಪಂಚದ ರೀತಿ – ನೀತಿ, ಸಾಂಸಾರಿಕ ಬಾಂಧವ್ಯ ಮತ್ತು ಅಲ್ಪ ಸ್ವಲ್ಪ ಜನರೊಡನೆ ಯೋಗ ಸಾಧನೆ ಕುರಿತು ಸಂಭಾಷಿಸುತ್ತಿದ್ದರು. ಇದರೊಂದಿಗೆ ಪದ್ಯ ರಚನೆಯು ಕ್ರಮೇಣ ಸಾಗಿತ್ತು. ಇವರು ಆಶು ಕವಿಗಳೆಂದು ಪಂಡಿತರು ಇವರ ಕವಿತಾ ರಚನಾ ಶಕ್ತಿಗೆ ಮಾರುಹೋಗುತ್ತಿದ್ದರು. ತೀರ ಸಹಜವಾಗಿ, ಸುಲಭವಾಗಿ, ತಡೆಗಟ್ಟಿದ ಜಲರಾಶಿಯ ತಡೆಯನ್ನು ಹರಿಗಡಿದಂತೆ ಚಿಮ್ಮಿಕ್ಕುವ, ಆ ಕಾವ್ಯ ಗಂಗೆಯನ್ನು ಶ್ರೋತೃಗಳು ಕೇಳಿ ಆನಂದಿಸುತ್ತಿದ್ದರು. ಅವರು ಆಯಾ ಪ್ರಸಂಗಗಳಿಗನುಸರಿಸಿ, ಅಪ್ರಯತ್ನಿತವಾಗಿ ಪದ್ಯ ರಚಿಸುತ್ತಿದ್ದರು. ಅವರು ಹೇಳಿದ್ದೇ ಪದ್ಯವೆನಿಸುತ್ತಿತ್ತೆಂದರೂ ಸರಿಯೇ. ಅವರು ನೀಡುವ ದೃಷ್ಟಾಂತಗಳಂತೂ ಕಲ್ಪನಾ ಲೋಕದ ಇಲ್ಲವೆ ಪೂರ್ವ ಕವಿಗಳ ಮಾದರಿಯವೇನಲ್ಲ. ದಿನನಿತ್ಯ ಜೀವನದಲ್ಲಿ ಕಾಣಬರುವ ದೃಷ್ಟಾಂತಗಳನ್ನೇ ಅವರು ಉದಹರಿಸುತ್ತಿದ್ದರು. ಒಂದೆರಡು ಬಾರಿ ಶ್ರವಣ ಮಾಡಿದರೆ ಸಾಕು; ಆ ಮಾತುಗಳು ಕೇಳುಗರ ಹೃದಯದಲ್ಲಿ ಅಂಟಿ ಬಿಡುತ್ತಿದ್ದವು.

ಹೀಗೆ, ಹೋದ ಹೋದಲ್ಲಿ ಜನಮನದ ಮೇಲೆ ವಿಶೇಷ ಪ್ರಭಾವ ಬೀರುತ್ತ, ಅವರ ದೃಷ್ಟಿಕೋನವನ್ನೇ ಮಾರ್ಪಡಿಸುತ್ತ, ಮೂಢ ನಂಬುಗೆಗಳನ್ನು ಕೊಚ್ಚುತ್ತ, ಹಲವಾರು ತಿಂಗಳು ಕಾಲ ಪ್ರಯಾಣ ಮಾಡಿ, ವೇಮನರು, ಕೊನೆಗೆ ಕದಿರಿ ಪಟ್ಟಣವನ್ನು ಸಮೀಪಿಸಿದರು. ಅದರ ಪೂರ್ವಕ್ಕೆ ಸನಿಹದಲ್ಲಿಯೇ ಇರುವ ಕಟಾರ್ಲುಪಲ್ಲೆ ತಲುಪಿದರು. ಅಲ್ಲಿಯ ಕೆರೆಯ ಬಳಿ ಒಂದು ವಿಶಾಲ ಹುಣಸೇಮರದಡಿ ಬೀಡು ಬಿಟ್ಟರು. ಇಲ್ಲಿ ಪರಿಚಿತರಾರೂ ಇರಲಿಲ್ಲ. ಹೀಗಾಗಿ ಯೋಗಿಗಳ ಸಾಧನೆಗಾಗಲಿ, ಸಾಹಿತ್ಯ ರಚನೆಗಾಗಲಿ ಯಾವುದೇ ಅಡೆತಡೆಯಿರಲಿಲ್ಲ. ಈ ಗ್ರಾಮದಲ್ಲಿ ಆಸ್ತಿಕ ಜನರು ಬಹಳ. ಅದರಲ್ಲಿಯೂ ಅವರು ಹೆಚ್ಚಾಗಿ ವಿಷ್ಣು ಭಕ್ತರೇ. ಅಂದು ಸಾಯಂಕಾಲ. ಅನೇಕ ದಿನಗಳ ತರುವಾಯ ವೇಮನ ಯೋಗಿ ಅರೆಗಣ್ಣಿನಿಂದ ಧ್ಯಾನಶೀಲರಾದರು.

**ವೀರಶೈವ ಕುರಿತು ವಿಮರ್ಶೆ :**

ಈ ಕಾಲದಲ್ಲಿ ಯುದ್ಧ ಪ್ರತಿಯದ್ಧಗಳ ಫಲವಾಗಿ, ವಿಜಯನಗರ ರಾಜ್ಯಕ್ಕಿಂತ ಮುನ್ನ ಸ್ಥಾಪಿತವಾದ ರೆಡ್ಡಿ ರಾಜ್ಯ ಹಾಗೂ ನಾಯಕ ರಾಜ್ಯಗಳು ಅಸ್ತಮಿಸಿದ್ದವು. ವಿಜಯನಗರದ ಪ್ರೌಢದೇವರಾಯನ ರಾಜ್ಯ ವಿಸ್ತಾರವು ದೂರ ದಕ್ಷಿಣದ ವರೆಗೆ ವಿಸ್ತರಿಸಿತ್ತು. ಪ್ರೌಢ ದೇವರಾಯನ ಕಾಲದಲ್ಲಿ ಕವಿಸಾರ್ವಭೌಮ ಶ್ರೀನಾಥನಿಗೆ ಕನಕಾಭಿಷೇಕದ ಗೌರವವೂ ಲಭಿಸಿತ್ತು. ಪ್ರೌಢ ದೇವರಾಯನು ಚಂದ್ರಭೂಷಣ ಕ್ರಿಯಾಶಕ್ತಿಯೆಂಬ ಶೈವ ಗುರುವನ್ನು ಸ್ವೀಕರಿಸಿದ್ದನು. ಮುಂದೆ, ಪ್ರೌಢ ದೇವರಾಯನ ಮಗನಾದ ಮಲ್ಲಿಕಾರ್ಜುನನು ಸಹ, ವೀರಶೈವ ಮತವನ್ನು ಒಪ್ಪಿ, ಅನೇಕ ಮತ ಪ್ರಚಾರಕರಿಗೆ ಆಶ್ರಯ ನೀಡಿದ್ದನು. ಜನರಿಗೆ ವೀರಶೈವ ಕುರಿತು ಹೆಚ್ಚಿನ ಕುತೂಹಲವಿತ್ತು.

— — — — — — — — — — — — — — — — — — — — — — — — — — —

ಅಂದು ಸೋಮವಾರದ ಸಾಯಂಕಾಲ, ವೀರಶೈವ ವಿರಕ್ತ ಬಣಕ್ಕೆ ಸೇರಿದ ವಿರಕ್ತ ಜಂಗಮನೋರ್ವನು ವೇಮನ ಯೋಗಿಗಳ ವಾಸ್ತವ್ಯವನ್ನು ತಿಳಿದು ಆಗಮಿಸಿದನು. ವೇಮನರು ಅವನನ್ನು ಆತ್ಮೀಯವಾಗಿ ಸ್ವಾಗತಿಸಿದರು. ಉಭಯ ಕುಶಲೋಪರಿಯಾದ ನಂತರ, ಚರ್ಚೆ ಆರಂಭವಾಯಿತು.

ಶ್ರೋತೃ ವರ್ಗದಿಂದ ಓರ್ವ ಜಿಜ್ಞಾಸುವು,
"ಲಿಂಗವೆಂದರೇನು ಅಯ್ಯನವರೇ?" ಎಂದು ಕೇಳಿದನು.
"ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ।
ತದೇತಲ್ಲಿಂಗಮಿತ್ಯುಕ್ತಂ ಲಿಂಗ ತತ್ತ್ವ ಪರಾಯಣ್ಯೈಃ॥

ಎಂದಿದ್ದಾರೆ ಮೊಗ್ಗಿಯ ಮಾಯಿದೇವ ಶಿವಾಚಾರ್ಯರು. ಅದರ ಅರ್ಥವೆಂದರೆ "ಚರಾಚರವಾದುದೆಲ್ಲವೂ ಯಾವುದರಿಂದ ಬರುವುದೋ, ಮತ್ತು ಯಾವುದರಲ್ಲಿ ಲೀನವಾಗುವುದೋ, ಅದನ್ನೇ ಲಿಂಗವೆನ್ನುತ್ತಾರೆ ಲಿಂಗ ತತ್ತ್ವ ಪರಾಯಣರು."

ಯೋಗಿವರ್ಯರು ಜಂಗಮರ ವ್ಯಾಖ್ಯೆಗೆ ತಲೆದೂಗಿದರು. ಅಷ್ಟರಲ್ಲಿ ಅವರು ಅಂತರ್ಮುಖಿಗಳಾದರು. ಅವರು ಮುಖದಿಂದ ಪ್ರಸಾಧ ವಾಣಿ ಕೇಳಿಬಂದಿತು.

ಅಚರ ಚರ ಸಮೂಹ ಅಂಗ ಲಿಂಗಗಳು,
ಸರಣಿ ತಿಳಿಯದಂಥ ಶೈವವೇಕೆ?
ಅಷ್ಟ ತನುವೊಳೊಪ್ಪ, ಹರನನರಿಯರಲ್ಲ?
ವಿಶ್ವದಾಭಿರಾಮ ಕೇಳು ವೇಮ.

ಲಿಂಗಮತವೇ ಅಧಿಕವಾದ ಮತವೆಂದು ಸಾರಿದ್ದಾರೆ. ಅಂದ ಮೇಲೆ, ಪಂಚಭೂತಗಳಲ್ಲಿ ಚಿತ್ತ, ಮನಸ್ಸು ಹಾಗೂ ಬುದ್ಧಿಗಳಲಿ ಹರನು ಹರಡಿರುವುದನ್ನು ಏಕೆ ತಿಳಿಯರೋ ಏನೋ? ಹರನು ಮನದೊಳಗೆ ಮತ್ತು ಮನದಾಚೆಗೆ ಇರುವುದನ್ನು ಒಪ್ಪಿದ ಮೇಲೆ ಅನುಭಾವಿಗಳಾಗಬೇಕು. ಶಿವಾನುಭವ ಹೊಂದಬೇಕು.

ಆತ್ಮ ಮತಕಿಂತ ಅಧಿಕವಾದ ಮತವು,
ಲಿಂಗ ಮತಕಿಂತ, ಲೋಕದಿಲ್ಲ.
ಲಿಂಗಧಾರಿಗಿಂತ ಲೋಕದಿಲ್ಲ ಕಳ್ಳ.
ವಿಶ್ವದಾಭಿರಾಮ ಕೇಳು ವೇಮ.
ವೀರಶ್ವೆವ ನಡತೆ ವಿಧವನರಿತು ಮತ್ತೆ,
ಬ್ರಹ್ಮ ವಿದ್ಯೆ ಮೀರಿ ಬೆಳಗುತಿರಲು;
ಶೂರ ಹುಲಿಯು, ಬಂಟ ಸಿಂಹ ಮರಿಯೆ ಆಯ್ತು.
ವಿಶ್ವದಾಭಿರಾಮ ಕೇಳು ವೇಮ.

ನಾವು, ವೀರಶೈವರ ಸಾಮಾಜಿಕ ಸಮತೆ, ಕೇಡಿಲ್ಲದ, ರೂಹಿಲ್ಲದ, ಚೆಲುವ ದೇವ ಕಲ್ಪನೆ ಮತ್ತು ಶರಣರ ದೇವಾಲಯದ ಜಡ ಮೂರ್ತಿಗಳ ತಿರಸ್ಕಾರಗಳನ್ನು ಮೆಚ್ಚಲೇಬೇಕು. ಅಲ್ಲಿರುವ ಸತ್ಯ ನಿಷ್ಠೆ ಮತ್ತು ಅಹಿಂಸೆಗಳ ತತ್ತ್ವಗಳಿಗೆ ತಲೆಬಾಗಲೇಬೇಕು. ಆದರೆ, ಅದೇ ಕಾಲಕ್ಕೆ ತತ್ತ್ವಾಚರಣೆಯ ಕಾಲಕ್ಕೆ ಎಡವಬಾರದು.

"ನಿಮ್ಮ ವಿಚಾರಗಳು ಸ್ವಲ್ಪ ಭಿನ್ನವಾಗಿವೆಯೇನೋ ಸರಿ. ಆದರೆ, ವೀರಶೈವಕ್ಕೆ ಹೊಸ ಆಯಾಮ ನೀಡುವಂಥವಾಗಿವೆ. ಈ ಕುರಿತು ಇನ್ನೂ ಹೆಚ್ಚಿನ ವಿವೇಚನೆ ಮಾಡಬೇಕಿದೆ. ಆದರೆ ವೀರಶೈವರಲ್ಲಿಯೂ ಸಾಕಷ್ಟು ಮತಭೇದವಿದೆ. ಇಷ್ಟಲಿಂಗ ಪೂಜೆಯು ಮುಂದುವರಿದ ಸಾಧಕರಿಗೆ ಅನಿವಾರ್ಯವಲ್ಲವೆಂದು ಲಕ್ಕುಂಡಿಯ ಶರಣೆ ಮುಕ್ತಾಯಕ್ಕ, ಅಲ್ಲಮ ಪ್ರಭುದೇವರೊಂದಿಗೆ ಆಳವಾಗಿ ಚರ್ಚಿಸಿ, ತನ್ನ ಅಣ್ಣನ ನಿಲುಮೆಗೆ ಪ್ರಭುದೇವರ ಸಮ್ಮತಿ ಪಡೆದಿದ್ದಾಳೆ. ಅಜಗಣ್ಣನು ಮೊದಮೊದಲು ಇಷ್ಟಲಿಂಗದ ಬಾಹ್ಯ ಪೂಜೆಯಲ್ಲಿ ನಿರತನಾಗಿದ್ದ ಸಾಧಕನೇ ಆಗಿದ್ದನು. ಆದರೆ, ಹಲವಾರು ನಿದರ್ಶನಗಳಿಂದ, ಶಿವನ ಸಾನ್ನಿಧ್ಯವನ್ನು ಹೆಚ್ಚು ನಿಕಟವಾಗಿ ಅನುಭವಿಸಲು ಮತ್ತು ಅವನಲ್ಲಿ ತನ್ನನ್ನು ಲೀನಗೊಳಿಸಲು ಅಂತರಂಗದ ಸಾಧನೆಯೇ ಹೆಚ್ಚು ಸಮರ್ಪಕ ಸಾಧನೆಯೆಂಬ ಅರಿವು ಹೊಂದಿದನು. ಅಂದಿನಿಂದ ಬಾಹ್ಯ ಉಪಾಸನೆಯನ್ನು ನಿಲ್ಲಿಸಿ, ಗುಪ್ತ ಅಂತರಂಗದ ಭಕ್ತಿ ಸಾಧನೆಯಲ್ಲಿ, ಮೌನಿಯಾಗಿ ನಿರತನಾದನು. ತತ್ಪರಿಣಾಮವಾಗಿ ಅವನ ದೇಹ ಭಾವವು ನಶಿಸಿ, ಅಹಂಭಾವವು ಶೂನ್ಯವಾಗಿ, ಸೋಹಂ ಭಾವದ ಅನುಭಾವದಲ್ಲಿ ನೆಲೆಸಿದನು. ಆ ಹಿನ್ನೆಲೆಯಲ್ಲಿ ಯೋಗಿಗಳ ಉಪದೇಶವು ಮನನೀಯವಾಗಿದೆ" ಎಂದು ದೀರ್ಘವಾಗಿ ಪ್ರವಚಿಸಿದನು, ಆ ಜಂಗಮ. ಎಲ್ಲರೂ ನಿಶ್ಶಬ್ದರಾಗಿ ಆಲಿಸಿದರು.

> ಮುಕ್ತಾಯಕ್ಕ, ಪ್ರಭುದೇವರ ಸಂವಾದದಲ್ಲಿನ,
> "ತನ್ನ ತಾನರಿದಡೆ, ನುಡಿಯೆಲ್ಲ ಪರತತ್ತ್ವ ನೋಡಾ!
> ತನ್ನ ತಾ ಮರೆದಡೆ, ನುಡಿಯೆಲ್ಲ ಮಾಯೆ ನೋಡಾ!
> ಅರಿದು ಮರೆದ ಶಿವಯೋಗಿಯ ಶಬುದವೆಲ್ಲವು
> ಉಪದೇಶವಲ್ಲದೆ ಭಿನ್ನ ಉಂಟೇ?"

ಎಂಬ ಪ್ರಭುದೇವರ ವಚನ ಭಾಗವನ್ನು ಯೋಗಿಗಳಿಗೆ ಅನ್ವಯಿಸಿ ನುಡಿದಾಗ, ಶ್ರೋತೃಗಳ ಮೇಲೆ ಗಂಭೀರ ಪರಿಣಾಮವಾದುದನ್ನು ಕಂಡವರೇ ಅನುಭವಿಸಬೇಕಷ್ಟೇ" ಎಂದು ನುಡಿದು ಜಂಗಮನು ಮಾತು ನಿಲ್ಲಿಸಿದನು.

ಆಗ ಓರ್ವ ಶ್ರೋತೃ, ಅಣ್ಣ ಬಸವಣ್ಣನ ನಿಲುಮೆ ಕುರಿತು ಪ್ರಸ್ತಾಪಿಸಿದನು.

"ಬಸವಣ್ಣನವರ ಅನೇಕ ವಿಚಾರಗಳಿಗೂ, ಯೋಗಿವರ್ಯರ ವಿಚಾರಗಳಿಗೂ ತುಂಬಾ ಸಾಮ್ಯವಿದೆ. ದೇವರ ಕಲ್ಪನೆಯಲ್ಲಿ, ವೇದಾಂತವೇದ್ಯ ಕಲ್ಪನೆಯಿಂದ ದೂರವಾದ ಇಷ್ಟ ಲಿಂಗ ಕಲ್ಪನೆಯನ್ನು ವೀರಶೈವದಲ್ಲಿ ಅಳವಡಿಸಿದ್ದನ್ನು ಕೈಬಿಟ್ಟರೇ — — — — — — — — — — — — — — — — — — — — — —

ಲೇಸೆಂದು ಯೋಗಿವರ್ಯರ ನಿಲುಮೆ. ಇದಲ್ಲದೆ, ಯಾವುದೇ ಬಾಹ್ಯ ಆಚರಣೆಗೆ, ಇಷ್ಟ ಲಿಂಗ ಪೂಜೆ ಸಮೇತ, ಯೋಗಿಗಳ ಪೂರ್ಣ ಅಸಮ್ಮತಿಯಿದೆ. ಹಾಗೆ ನೋಡಿದರೆ, ಶೂದ್ರರಿಗೆ ವೇದದ ಅಧ್ಯಯನವನ್ನು ನಿರಾಕರಿಸಿದ, ಉಪನಯನ ಸಂಸ್ಕಾರವನ್ನು ಪೂರ್ವಭಾವಿಯಾಗಿ ಅಲ್ಲಗಳೆದ ವಿಪ್ರರು ಅವರಿಗಾಗಿ 'ಮಹಾಭಾರತ'ದಂಥ ಪುರಾಣೇತಿಹಾಸವನ್ನು ಪಾರಾಯಣ ಮಾಡಲು ನಿರ್ದೇಶಿಸಿದ್ದಾರೆ. ಇಂಥ ಸೋದರರ ವಧೆಯ ಹಿಂಸೆ ಹಾಗೂ ರಾಜವಂಶದ ಹಾದರದ ಕಥೆ ಓದುವುದಕ್ಕಿಂತಲೂ ಚೆನ್ನಾಗಿ ಹಾಗೂ ಸುಂದರವಾಗಿ, ಪಾಲ್ಕುರಿಕೆ ಸೋಮನಾಥರು ರಚಿಸಿದ 'ಬಸವ ಪುರಾಣ' ಓದುವುದೇ ಮೇಲೆಂದು ಯೋಗಿಗಳು ಒಂದೆಡೆ ಹೇಳಿದ್ದಾರೆ" ಎಂದು ರಾಮರೆಡ್ಡಿ ಮಧ್ಯ ಪ್ರವೇಶಿಸಿ, ನುಡಿದು ಅನುಮೋದನೆಗಾಗಿ ಯೋಗಿಗಳತ್ತ ನೋಡಿದನು. ಅವರು ಮುಗುಳ್ನಗೆಯ ಮೂಲಕ ಸಮ್ಮತಿ ಸೂಚಿಸಿದರು. ಆಗ ರಾಮರೆಡ್ಡಿಯು ಈ ಕೆಳಗಿನ ಪದ್ಯಗಳನ್ನು ಸುಶ್ರಾವ್ಯವಾಗಿ ಪಠಿಸಿದನು.

" ಪಂಚಮನ ವೇದವೆನೆ ಭಾರತವೆ ಎನ್ನುತ,  
ಸ್ತುತಿಪರೇಕೆ ಜನ; ಮತಿಯ ತೊರೆದು?  
ಹಿಂಸೆಯರಿತು ನೋಡೆ, ಹೇಗೆ ಇಷ್ಟವಿಹುದು?  
ವಿಶ್ವದಾಭಿರಾಮ ಕೇಳು ವೇಮ.

"ಹಾದರದ ಕಥೆಯಿದು; ಸೋದರರ ವಧೆಯಿದು.  
ಪಠಿಕಿಸಲುಂಟೆ ಪುಣ್ಯ ಭಾರತವನು?  
ಪಾಪ ಹರಣವಯ್ಯ ಬಸವ ಪುರಾಣವೇ.  
ವಿಶ್ವದಾಭಿರಾಮ ಕೇಳು ವೇಮ.

ಬಸವಣ್ಣನವರು ಬ್ರಾಹ್ಮಣರಾಗಿ ಜನಿಸಿ, ಧರ್ಮ ಕ್ರಾಂತಿಗಾಗಿ ವೀರಶೈವ ಮತವನ್ನು ಅಂಗೀಕರಿಸಿ, ಅದರ ಆಚರಣೆಯಲ್ಲಿ ಕ್ರಾಂತಿಕಾರಕ ಕ್ರಮಗಳನ್ನು ಜರುಗಿಸಿರುವುದಕ್ಕಾಗಿ, ಯೋಗಿಗಳು ಅವರನ್ನು ಮುಕ್ತಕಠದಿಂದ ಹೊಗಳಿದ್ದರೂ ಸಹ, ಅವರು ತಮ್ಮ ಧರ್ಮನೀತಿಯಲ್ಲಿ ಇನ್ನಷ್ಟು ಹೆಚ್ಚು ಕಡಿಮೆ ಮಾಡಿಕೊಂಡಿದ್ದರೆ, ಹುಲಿಯಂಥ ಧರ್ಮವು ಸಿಂಹ ಗರ್ಜನೆಗೆ ಸಿದ್ಧಗೊಳ್ಳುತ್ತಿತ್ತು; ಎಂದು ಯೋಗಿಗಳು ನುಡಿದಿರುವುದನ್ನು ಆ ಜಂಗಮನೂ ಮತ್ತು ನೆರೆದ ಶ್ರೋತೃಗಳೂ ತುಂಬಾ ಮೆಚ್ಚಿಕೊಂಡರು.

**ನೆಲ್ಲ ಚೆರುವಿಗೆ ಸ್ಥಳಾಂತರ :**

ಕಟಾರ್ಲುಪಲ್ಲೆಯಲ್ಲಿ ಸುದೀರ್ಘಕಾಲ ತಂಗಿದ ಕಾರಣ ಆ ಊರಿನ ರೆಡ್ಡಿ ಕುಟುಂಬದ ಜನರು ರಾಮರೆಡ್ಡಿಯೊಂದಿಗೆ ಸಲುಗೆ ಬೆಳೆಸಿದರು. ವೇಮನ ಯೋಗಿಗಳು ತಮ್ಮವರೇ ಎಂದು ಹೆಚ್ಚಿನ ಅಭಿಮಾನಪಡಹತ್ತಿದರು. ಆದರೆ, ಆ ರೆಡ್ಡಿಗಳೇನೂ ಆಧ್ಯಾತ್ಮಿಕ ಸಾಧಕರಾಗಿರಲಿಲ್ಲ, ಅಹಿಂಸೆಯ ಪಾಲಕರಾಗಿರಲಿಲ್ಲ.

ಹೀಗಾಗಿ, ಇಂಥ ಪರಿಸರವನ್ನು ಬಿಡುವುದೇ ಲೇಸೆಂದು ಯೋಗಿ ಬಗೆದು ನೀಲಕಂಠನಿಗೆ ಮಾರನೆಯ ದಿನ ಊರು ಬಿಡುವ ಸಿದ್ಧತೆ ಮಾಡಬೇಕೆಂದು ತಿಳಿಸಿದರು. ರಾಮರೆಡ್ಡಿ ಭಿಕ್ಷಾಟನೆ ನಂತರ ಮರಳಿದಾಗ, ನೀಲಕಠನು ನಿರ್ಧಾರದ ಇಂಗಿತ ತಿಳಿಸಿದನು. ಸುಖದ ಸೌಕರ್ಯಗಳಿಗೆ ಒಂದಿಲ್ಲೊಂದು ದಿನ ಬೀಳಬೇಕಾದ ತಡೆಯು ಅಂದೇ ಬಿದ್ದಿತ್ತು. ರಾಮರೆಡ್ಡಿಯ ಮನಸ್ಸು ಮ್ಲಾನವಾಯಿತು. ಗುರ್ವಾಜ್ಞೆಯೆಂದು ಮೇಲೆ ಶಿರಸಾ ವಹಿಸದೆ ಬೇರೆ ಉಪಾಯವೇ ಇರಲಿಲ್ಲ.

ನೆಲ್ಲಚೆರುವು ಅಪರಿಚಿತ ಊರೇನಲ್ಲ. ಆ ಗ್ರಾಮದ ಅನೇಕರು ಕಟಾರ್ಲುಪಲ್ಲೆಗೆ ಯೋಗಿಗಳ ದರ್ಶನಕ್ಕಾಗಿ ಆಗೀಗ ಬರುತ್ತಿದ್ದರು. ಅನೇಕರ ಮುಖ ಪರಿಚಯವಿತ್ತು. ಕೆಲವರ ನಿಕಟ ಪರಿಚಯವೂ ಇತ್ತು.

ಮಾರನೆಯ ಬೆಳಿಗ್ಗೆ ಯೋಗಿವರ್ಯರ ಚಿಕ್ಕ ಪರಿವಾರವು ಕಟಾರ್ಲುಪಲ್ಲೆಯಿಂದ ಹೊರಟು ನೆಲ್ಲಚೆರುವು ಸೇರಿತು. ಪ್ರಯಾಣದ ಆ ದಿನ ತಂಗುದಾಣದ ಅರಸುವಿಕೆ ಇತ್ಯಾದಿಗಳಲ್ಲಿ ವೇಳೆ ವಿನಿಯೋಗವಾದುದರಿಂದ, ಭಿಕ್ಷಾಟನೆ ಮತ್ತು ಧ್ಯಾನ ಪೂಜೆಗಳ ಹೊರತು ಬೇರಾವ ಕಾರ್ಯಕ್ರಮಗಳಿರಲಿಲ್ಲ.

ಮಾರನೆಯ ದಿನ ಶುಭ ಸೋಮವಾರ. ಈ ಉರಿನ ಧನಿಕನ ಮಗನ ಮದುವೆಯ ಸಡಗರ. ಊರಿಗೆಲ್ಲ ಊಟದ ಆಮಂತ್ರಣವಿತ್ತು. ರಾಮರೆಡ್ಡಿ ಭಿಕ್ಷಾಟನೆಗೆಂದು ಹೋಗಿದ್ದರೂ, ಧನಿಕನ ಮನೆಯಿಂದ ಸಿಹಿ ತಿಂಡಿಗಳ ಊಟದ ತಟ್ಟೆಯು ಯೋಗಿಗಳ ತಂಗುದಾಣ ತಲುಪಿತ್ತು. ಸಮೀಚೀನ ಭೋಜನವಾಯಿತು. ಮದುವೆಯ ನಿಬ್ಬಣ, ಮಂಟಪದ ಶೃಂಗಾರ, ಇತ್ಯಾದಿಗಳನ್ನು ನೀಲಕಂಠನೆದುರು ರಾಮರೆಡ್ಡಿ ಬಣ್ಣಿಸಿದ. ಸಾಯಂಕಾಲ ದಿನದಂತೆ ಭಕ್ತರು ಸೇರಿದರು. ಸಿರಿವಂತನ ಹಣಗಳಿಕೆಯ ವಿಧಾನವನ್ನೂ ಮತ್ತು ಅದು ಇತ್ತೀಚೆಗೆ ನೀರಿನಂತೆ ವೆಚ್ಚವಾಗುತ್ತಿರುವುದನ್ನೂ ಜನರು ಪ್ರಸ್ತಾಪಿಸಿದರು.

"ಹಣಗಳಿಸಬೇಕು. ಆದರೆ ಸನ್ಮಾರ್ಗದಿಂದ ಗಳಿಸಬೇಕು. ಹಣ ವ್ಯಯಿಸಬೇಕು; ಆದರೆ ಸತ್ಕರ್ಮಗಳಿಗಾಗಿ ಮಾತ್ರ ಹಣ ನೀಡಬೇಕು; ಆದರೆ ಸತ್ಪಾತ್ರದಲ್ಲಿ ಮಾತ್ರ" ಎಂದು ನುಡಿದ ವೇಮನ ಯೋಗಿ ಅರೆಗಣ್ಣು ಮುಚ್ಚಿ ಪದ್ಯಪಾಠ ಆರಂಭಿಸಿದರು.

> "ಹಸಿದು ಬಂದವಂಗೆ ಹಾಕಲನ್ನವನ್ನು
> ಹರನಿಗರ್ಪಿತೆಂದು ಹರಸಿ ತಿನುವ.
> ಧನ ವಿಹೀನಗೀವ ದಾನವಂತೆ ನೋಡು.
> ವಿಶ್ವದಾಭಿರಾಮ ಕೇಳು ವೇಮ.

ನೆಲ್ಲ ಚಿರುವಿನಲ್ಲಿ ಮುಂದೆ ಎರಡು ವಾರವಿದ್ದು, ಬಳ್ಳಾರಿಯತ್ತ ಪಯಣಿಸಲು ನಿರ್ಧರಿಸಿದರು.

ಬಳ್ಳಾರಿಯ ಹೊರವಲಯದ ಅಲಿಪುರದ ಬಳಿ ಬೆಟ್ಟದಡಿಯ ಹುಣಸೇ ಮರದಡಿ ವೇಮನ ಯೋಗಿಗಳು ತಂಗಿದರು. ಅವರದು ತುಂಬಾ ಸರಳ ಜೀವನ. 'ಎದ್ದೇನೋ ಸನ್‌ಯಾಸಿ ಎಂದರೆ, ಹೆಗಲ ಮೇಲೆಯೇ ಶ್ಯಾಟಿ, ' ಹೊತ್ತು ಸಿದ್ಧರಾಗುವಂಥ ಸರಳ ಜೀವಿಗಳವರು. ಅಲ್ಪ ಸ್ವಲ್ಪ ಭಿಕ್ಷಾ ಪಾತ್ರೆ, ಹಾಸುಗೆ, ಅರಿವೆಗಳನ್ನು ರಾಮರೆಡ್ಡಿ, ನೀಲಕಂಠರು ನೋಡಿಕೊಳ್ಳುತ್ತಿದ್ದರು. ಬಳ್ಳಾರಿಯ ಬದಿಯ ಬೆಟ್ಟ ಪ್ರದೇಶವು, ಆ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ, ವಿಜಯನಗರದ ರಾಜಧಾನಿ ಹಂಪೆಯಿಂದ ಸಾಕಷ್ಟು ದೂರವಿತ್ತು. ಬೇರಾವ ಗೊಂದಲಕ್ಕೂ ಎಡೆಯಿಲ್ಲದ ಪ್ರದೇಶವದು.

ವೇಮನರು ಅಲ್ಲಿಗೆ ಬಂದ ಮೊದಲ ದಿನಗಳಲ್ಲಿ ಹೆಚ್ಚು ಜನರೇನೂ ಬುರುತ್ತಿರಲಿಲ್ಲ. ಆಗ ಆ ಭಾಗದಲ್ಲಿ ವೀರಶೈವ ಧರ್ಮದ ವಿರಕ್ತರು ಮತ್ತು ವಿರತರು ಧರ್ಮದ ತೀವ್ರ ಪ್ರಚಾರ ನಡೆಸಿದ್ದರು. ವಿಜಯನಗರದ ಸಂಗಮ ವಂಶದ ರಾಯರು ವೀರಶೈವವನ್ನು ಅಪ್ಪಿಕೊಂಡಿದ್ದರು. ಅದರಿಂದ ಸಾಮಾನ್ಯ ಜನರು 'ಯಥಾರಾಜಾ, ತಥಾ ಪ್ರಜಾ' ಎಂದು ಆ ದಿಕ್ಕಿನಲ್ಲಿ ಮುನ್ನಡೆದಿದ್ದರು. ಈ ಮುನ್ನ ಒಂದು ಶತಮಾನ ಪೂರ್ವದಲ್ಲಿ ಮಾಧವ (ವಿದ್ಯಾರಣ್ಯ) ಮಂತ್ರಿಯ ಪ್ರಭಾವದಿಂದ ಶಾಂಕರ ಅದ್ವೈತಕ್ಕೆ ಹೆಚ್ಚಿನ ಮಾನ್ಯತೆ ಇದ್ದಿತಾದರೂ, ಬಹು ಸಂಖ್ಯೆಯ ಶೂದ್ರ ಪ್ರಜೆಗಳಿಗೆ ಧರ್ಮದ ಮೂಲ ಗ್ರಂಥಗಳ ಬೋಧೆಯು ಇನ್ನೂ ನಿಷಿದ್ಧವಿತ್ತು. ಮಾಧ್ವರು ವ್ಯಾಸರಾಯರ ಹಿರಿತನದಲ್ಲಿ ಪೀಠ ಸ್ಥಾಪಿಸಿಕೊಂಡು ರಾಜರ ಮೇಲೆ ಪ್ರಭಾವ ಬೀರಿ, ತಮ್ಮ ಮತವನ್ನು ನೆಲೆಗೊಳಿಸಲು ಅಣಿಯಾಗಿದ್ದರು. ಶೂದ್ರರನ್ನು ತಮ್ಮ ಬೆನ್ನ ಹಿಂದಿರಿಸಿಕೊಳ್ಳಲು ಮತ್ತು ಶೂದ್ರ ರಾಜರನ್ನು ತಮ್ಮ ನೆರವಿಗೆ ಕರೆದುಕೊಳ್ಳಲು ವ್ಯಾಸರಾಜರು ಉದಾರ 'ಭಾಗವತ' ಧರ್ಮ ಪ್ರತಿಪಾದಿಸುತ್ತಿದ್ದರು.

ವೇಮನ ಯೋಗಿಗಳಲ್ಲಿ ಯೋಗ ಸಾಧಕರನೇಕರು ಬರತೊಡಗಿದರು. ವಿಜಯನಗರದ ವೈಭವದ ಕಥೆಗಳನ್ನು ಕೇಳಿ ಆಕರ್ಷಿತರಾಗಿ, ಪಂಪಾಪತಿ, ವಿರೂಪಾಕ್ಷನ ದರ್ಶನ ಪಡೆಯಬೇಕೆಂದು ದೂರ ದೂರದಿಂದ ಬರುತ್ತಿದ್ದ ರಾಜಯೋಗ ಸಾಧಕರು, ತಮ್ಮ ಸಹ ಯಾತ್ರಿಗಳಿಂದ ಈ ಅದ್ಭುತ ಯೋಗಿವರ್ಯರ ಸುದ್ದಿ ತಿಳಿದು ಬರುತ್ತಿದ್ದರು. ಅವರಿಗೆ ಸೂಕ್ತ ಮಾರ್ಗದರ್ಶನ ಮಾಡುವಲ್ಲಿ, ಸೂಕ್ಷ್ಮ ಅನುಭವಗಳನ್ನು ಕುರಿತು ಚರ್ಚಿಸುವಲ್ಲಿ ಯೋಗಿಗಳು ದೀರ್ಘ ಕಾಲ ಕಳೆಯುತ್ತಿದ್ದರು. ನೆರೆ ಗ್ರಾಮದ ಸಾಧಕರು ಬಂದಾಗ, ಪದ್ಯ ರಚನೆಯೂ ನಡೆಯುತ್ತಿತ್ತು.

ರಾಜರು ವೀರಶೈವರಾದರೂ, ಪ್ರಜೆಗಳ ಮೇಲಾವ ಬಲಾತ್ಕಾರವಿರಲಿಲ್ಲ. ಆಯಾ ಜನರು ತಮ್ಮ ಒಲವಿಗೆ ತಕ್ಕ ಮತಗಳನ್ನು ಆಯ್ಕೆ ಮಾಡಿಕೊಳ್ಳಲು ಸ್ವತಂತ್ರರಿದ್ದರು. ವಿವಿಧ ಶೈವ, ವೈಷ್ಣವ, ಶಾಕ್ತ ಮತ ದೇವತೆಗಳ ಮಂದಿರಗಳಿಗೆ ಉದಾರ ದತ್ತಿಗಳನ್ನೀಯುತ್ತಿದ್ದ ಅರಸೊತ್ತಿಗೆಯು, ಒಂದೆರಡು ಕಡೆ ಮುಸಲ್ಮಾನರಿಗೆ

ಮಸೀದೆಗಳನ್ನು ಸಹ ಕಟ್ಟಿಸಿಕೊಟ್ಟಿದ್ದರು. ಆದರೂ, ಆತ್ಮಾಭಿಮಾನಿಗಳಾದ ವೀರಶೈವ ಜೈನರಲ್ಲಿ ಮತೀಯ ದ್ವೇಷ ಜ್ವಾಲೆ ಆಗೀಗ ಭುಗಿಲೆದ್ದು, ಜೈನ ಬಸದಿಗಳನ್ನು ಶೈವ ಮಂದಿರಗಳಾಗಿ ಪರಿವರ್ತಿಸುವ ಚಳುವಳಿಗೆ ಹೆಚ್ಚು ಜೋರು ಬಂದಿತ್ತು. ಸಾಮಾನ್ಯ ಜನತೆ ಜೈನ ಧರ್ಮದಿಂದ ಪ್ರಚಲಿತ ರಾಜಪೋಷಿತ ವೀರಶೈವಕ್ಕೆ ಮತಾಂತರ ಹೊಂದಿ, ತಮ್ಮ ದೈವಾನುಕೂಲಗಳನ್ನು ಕುದುರಿಸಿಕೊಳ್ಳುತ್ತಿದ್ದರು.

**ಬಡವರ ಬಂಧು :**

ನೆಲ್ಲಚೆರುವಿನಿಂದ ಮಾರನೆಯ ಬೆಳಿಗ್ಗೆ ಹೊರಟ ಯೋಗಿಯ ಪರಿವಾರವು ಚಂದನೂಲಿ (ಕರ್ನೂಲ) ನತ್ತ ನಡೆಯಿತು. ಹಾದಿಯಲ್ಲಿ ಒಂದೆರಡು ಊರುಗಳಲ್ಲಿ ಬಿಡಾರ ಮಾಡಿತ್ತಾದರೂ, ವಿಶೇಷ ಚರ್ಚೆಗಳನ್ನೇನೂ ನಡೆಸಿರಲಿಲ್ಲ. ಕೆರೆಗಳ ಬದಿಯ ದೊಡ್ಡ ಮರಗಳಡಿ ವಾಸ, ಊರಿನಲ್ಲಿ ಭಿಕ್ಷೆ, ತ್ರಿಕಾಲ ಧ್ಯಾನಗಳಲ್ಲಿ ಸಮಯ ಕಳೆದರು. ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ. ಹದಿನೈದು ದಿನ ಪ್ರವಾಸದಲ್ಲಿ ಕಳೆದು ಚಂದನೂಲ ನಗರವನ್ನು ಸಮೀಪಿಸಿದರು. ಊರು ಇನ್ನೂ ಎರಡು ಗಾವುದ ದೂರವಿದ್ದಾಗ, ಬೆಟ್ಟದಡಿ ಹಲವು ಆದಿವಾಸಿಗಳ ಗುಡಿಸಲುಗಳಿದ್ದವು. ಅಲ್ಲಿಂದ ಅನತಿ ದೂರದಲ್ಲಿಯೇ ದೊಡ್ಡ ಕೆರೆಯಿತ್ತು. ಅದರಿಂದ ಎತ್ತರದ ಪ್ರದೇಶವೇ ಬೆಟ್ಟದಂಚು. ಅಲ್ಲಿ ಹತ್ತಾರು ಹುಲುಸಾಗಿ ಬೆಳೆದು ನಿಂತ ಹುಣಸೇಮರಗಳಿದ್ದವು. ಅಲ್ಲಿಯೇ ಒಂದೆಡೆ ವಾಸಕ್ಕೆ ಅನುಕೂಲ ತಾಣ ನಿರ್ಧರಿಸಿದರು.

ಮಾರನೆಯ ದಿನ ಬೆಳಿಗ್ಗೆ ಧ್ಯಾನ ಪೂಜೆ ನಡೆದ ಬಳಿಕ, ಆದಿವಾಸಿ ಹುಡುಗರು ಮತ್ತು ಹೆಂಗಳೆಯರು ಯೋಗಿಗಳ ದರ್ಶನಕ್ಕೆ ಬಂದರು. ಆ ಕಾಲಕ್ಕೆ ರಾಮರೆಡ್ಡಿ ಮತ್ತು ನೀಲಕಂಠರು ಭಿಕ್ಷೆಗೆ ಹೋದ ಕಾರಣ ಭೆಟ್ಟಿಗೆ ಯಾವ ಕಟ್ಟುಪಾಡೂ ಇರಲಿಲ್ಲ. ಮೇಲಾಗಿ, ಆ ಆದಿವಾಸಿ ಜನರಿಗೆ ಕೇವಲ ಲಂಗೋಟಿಧಾರಿ ಯೋಗಿ ತಮಗೆ ತೀರ ಹತ್ತಿರದವರಾಗಿ ಕಂಡರು. ಮೇಲಾಗಿ ಅವರ ಗುಡಿಸಲುಗಳ ವರೆಗೆ, ಇದು ವರೆಗೆ ಯಾವ ಮಹಾತ್ಮರೂ ಸುಳಿದಿರಲಿಲ್ಲ. ಹೀಗಾಗಿ, ಯೋಗಿಗಳೊಂದಿಗೆ ತಮ್ಮ ಆತ್ಮೀಯ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು.

ಅಷ್ಟರಲ್ಲಿ ಓರ್ವ ಯುವತಿ ತನ್ನ ತಾಯಿಯೊಂದಿಗೆ ಬಂದಳು. 'ಮಾರೆವ್ವ ಬಂದಳು; ಮಾರೆವ್ವ' ಎಂದು ಎಲ್ಲರೂ ಗುಜು ಗುಜು ನಡೆಸಿದರು. ಆ ಯುವತಿ ಮಾತನಾಡದೆ ಸುಮ್ಮನಿದ್ದಳು. ಅವಳ ತಾಯಿ,

"ಯಪ್ಪಾ! ಮಗಳಿಗೆ ಏಳೆಂಟು ತಿಂಗಳಾಯಿತು. ಏನೋ ಕಾಟವಿದೆ. ಊಟ ನಿದ್ರೆಗಳೂ ಸರಿಯಾಗಿ ಇಲ್ಲ. ಹೆಚ್ಚಿನ ಮಾತುಗಳೂ ಇಲ್ಲ. ನೋಡಿರಿ ಸೊರಗಿ ಸಾಯಲಾಗಿದ್ದಾಳೆ" ಎಂದು ಮಾತಿಗೆ ಮೊದಲು ಮಾಡಿದಳು.

ಯೋಗಿಗಳು, ಈ ಪೀಡೆ ಆರಂಭವಾದ ರೀತಿಯನ್ನು ಕೇಳಿ ತಿಳಿದರು.

"ನಿನಗೆ ತೊಂದರೆಯಾಗುತ್ತಿದೆಯೇ?" ಎಂದು ತರುಣಿಯನ್ನು ಕೇಳಿದರು. "ತಲೆ ತಿರುಗಿದಂತಾಗಿ, ಸಿಟ್ಟು ಹೆಚ್ಚಾಗಿ, ಮೈ ಮೇಲಿನ ಪ್ರಜ್ಞೆಯು ತಪ್ಪುತ್ತದೆ. ಬಳಿಕ ಏನಾಗುವುದೆಂದು ನಾನರಿಯೆ. ಆದರೆ ಘಟನೆಗಳು ನಡೆದು ನಾನು ಪೂರ್ವಾವಸ್ಥೆಗೆ ಬಂದ ಮೇಲೆ, ಇವರು ಹೇಳಿದ ಸಂಗತಿಗಳು ನನ್ನ ನೆನಪಿನ ಸುರುಳಿಯಲ್ಲಿ ಉಳಿದಿವೆ" ಎಂದು ಬಿಡಿಸಿ ಹೇಳಿದಳು.

"ಸರಿ ಇಲ್ಲಿ ಬಾ." ಎಂದು ಬಳಿಗೆ ಕರೆದರು. ಜನರೆಲ್ಲ ಕುತೂಹಲದಿಂದ. ಭೂತ ಬಿಡಿಸುವರೆಂದು ಕಣ್ಣು ಬಿಟ್ಟು ನೋಡ ಹತ್ತಿದರು. ಆದರೆ, ಇದು ಬೇರೆ ವಿಧಾನ. ಪೂರ್ಣ ಮಾನಸಾಧ್ಯಾತ್ಮಿಕ. ಯೋಗಿಗಳು ಅರೆಗಣ್ಣು ಮುಚ್ಚಿ ಧ್ಯಾನಶೀಲರಾದರು. ನಂತರ ತಮ್ಮ ಹೆಬ್ಬೆರಳಿನಿಂದ ಅವಳ ಭೃಕುಟಿಯನ್ನು ಒತ್ತಿದರು. ಆ ಯುವತಿ ಕೂಡಲೇ ನಿದ್ರೆ ಹೋದಳು. ಮುಂದೆ ಯೋಗಿಗಳು ಐದು ನಿಮಿಷ ಬಿಟ್ಟು, ಅವಳ ಭೃಕುಟಿಯನ್ನು ಮರಳಿ ಹೆಬ್ಬೆರಳಿನಿಂದ ಒತ್ತಿದಾಗ, ಆ ಯುವತಿ ನಿದ್ರೆಯಿಂದ ಎದ್ದಂತೆ ಎದ್ದು ಕುಳಿತಳು. ಯೋಗಿಗಳಿಗೆ ದೀರ್ಘದಂಡ ನಮಸ್ಕಾರ ಮಾಡಿ, ಅವರೆದುರು ನಿಲ್ಲಲು ನಾಚಿ, ಬದಿಗೆ ಸರಿದಳು.

ಇಷ್ಟರಲ್ಲಿ ವಸತಿಯ ಹಿರಿಯರೂ ಬಂದರು. ರಾಮರೆಡ್ಡಿಯೂ ಬಂದನು.

ಜೊಳ್ಳು ಮಾತನಾಡಿ ಜಗದಿ ತಿರುಗುತಿರುವ,
ಕಳ್ಳ ಗುರು ಕಟ್ಟುವನು ಕರ್ಮಗಳನು.
ಹಲ್ಲೊಳು ಹುಳು ಸೇರಿ, ಹಾಯ್ ಎನಿಸದೆ ನೋವು.
ವಿಶ್ವದಾಭಿರಾಮ ಕೇಳು ವೇಮ.

ದಮ್ಮು ಗುಣ ಹೊಂದಲು ದುರಗಮ್ಮಗೆ ಮುಡಿಪು;
ಭಕ್ಷ್ಯ ಬೇಕೆ ? ದಮ್ಮು ಬಂತೆ ಅಮ್ಮಗೆ?
ಮಾರಿಯಮ್ಮ ಹೆಸರು ಮಾಡುವುದು ತಿನ್ನಲು.
ವಿಶ್ವದಾಭಿರಾಮ ಕೇಳು ವೇಮ.

ಹಾಲ – ಹಕ್ಕಿ ಶಕುನ ಫಲವರಿವುದೆನುವರು.
ಹಾಲಹಕ್ಕಿ ಎಷ್ಟು ಫಲವರಿವುದು?
ತನ್ನ ಮೇಲು ಕೀಳು ತನ್ನಿಂದ ಇಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಗಳ ಪದ್ಯಪಾತವು ನಿಂತ ಬಳಿಕ, ಅವರು ಧ್ಯಾನಸ್ಥರಾದರು. ಆಗ ರಾಮರೆಡ್ಡಿ ನೆರೆದವರನ್ನು ವಿಚಾರಿಸಿ, ವಿಷಯವನ್ನು ಅರಿತನು. ಮತ್ತು 'ಮಾರೆಮ್ಮ' ನತ್ತ ವಿಚಕ್ಷಕನಾಗಿ ನೋಡಿದನು ಅವಳು ಜನರು ತನ್ನತ್ತ ದೃಷ್ಟಿಸುವುದಕ್ಕೆ ನಾಚಿಕೊಂಡು

ಹೊರಗೆ ನಡೆದಳು. ಜನರೂ ಸಹ ಚದುರಿದರು. ಅಷ್ಟರಲ್ಲಿ ಅವಳ ಗಂಡನು ಬಂದನು. ಅಲ್ಲಿಯ ಹಿರಿಯನೊಬ್ಬನು ಯೋಗಿಗಳಿಗೆ.

"ಇವನೇ ಆ 'ಮಾರಮ್ಮ'ನ ಗಂಡನು" ಎಂದು ಪರಿಚಯಿಸಿದನು.

"ಹೀಗೋ! ನೋಡಪ್ಪಾ! ನಿನ್ನ ಹೆಂಡತಿಯ ಮನೋರೋಗವು ದೇವರ ದಯೆಯಿಂದ ಗುಣವಾಗಿದೆ." ಎಂದರು. ಆಗ ಹಿರಿಯನೊಬ್ಬನು,

"ತಮ್ಮ ಕರುಣೆಯ ಮಹಿಮೆ ತಂದೆ!" ಎಂದನು.

"ಏನೇ ಇರಲಿ; ಈ ಯುವಕನು ಅವಳೊಂದಿಗೆ ವ್ಯವಹರಿಸುವಾಗ ಅವಳು ಭೀತಳಾಗದಂತೆ ಎಚ್ಚರವಹಿಸಬೇಕು" ಎಂದು ಸಕಾಲಿಕ ಎಚ್ಚರ ನೀಡಿ.

" ಎಲ್ಲವೂ ಒಳ್ಳೆಯದಾಗಲಿ" ಎಂದು ಅವನ ಬೆನ್ನು ತಟ್ಟಿದರು.

" ಈ ಭೂತ ಬಡಿಯುವಿಕೆ ಎಂದರೇನು ಸ್ವಾಮೀ?" ಎಂದು ಕೇಳಿದನು, ಯುವಕ.

"ಯಾರು ಬಹಳ ಚಿಂತೆ ಮಾಡುವರೋ, ಆದರೆ ಬಾಯಿಯಿಂದ ಹೆಚ್ಚು ಮಾತನಾಡುವುದಿಲ್ಲವೋ, ಯಾರು ಬಹಳ ಅಂಜುಗುಳಿಗಳಾಗಿರುತ್ತಾರೋ, ಯಾರ ಮನವು ದುರ್ಬಲವಾಗಿರುವುದೋ, ಅಂಥವರಲ್ಲಿ, ವಿಶೇಷವಾಗಿ ಸ್ತ್ರೀಯರಲ್ಲಿ ಈ ಮನೋರೋಗವು ಹೆಚ್ಚಾಗಿರುತ್ತದೆ." ಎಂದು ನುಡಿದರು ಯೋಗಿಗಳು.

ಮಧ್ಯಾಹ್ನದ ಧ್ಯಾನಾನಂತರ ಭಿಕ್ಷಾನ್ನ ಸೇವಿಸಿ ವಿಶ್ರಮಿಸಿದರು. ಆ ಸಾಯಂಕಾಲ ಹಾಗೂ ಮುಂದೆರಡು ದಿನ ಸುತ್ತ ಮುತ್ತಿನ ಆದಿವಾಸಿಗಳು ತಂಡವಾಗಿ ಬಂದು ಯೋಗಿಗಳ ದರ್ಶನ ಪಡೆದರು. ಹಲವರು ತಮ್ಮ ದೀರ್ಘರೋಗಗಳಿಗೆ ಆಯುರ್ವೇದೀಯ ಔಷಧಿಗಳನ್ನು ಪಡೆದರು.

ಎಲ್ಲರೂ,

ವೇಮನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲಿಸಿರವಗೆ ಪುಣ್ಯ ಪುರುಷರಿರ!
ಸಲಿಸಿದಷ್ಟು, ಪೂಜೆ, ಸುಖ ಸೌಖ್ಯ ಲಭ್ಯ.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಗಳ ಕರುಣಾ ಪಾತ್ರಳಾದ ತರುಣಿಯನ್ನು 'ಮಾರೆಮ್ಮ' ಎಂದೇ ಕರೆಯುತ್ತಿದ್ದರು. ಆ ದಿನದಿಂದ ಅವಳು ಪ್ರತಿದಿನ ಒಂದು ಗಿಂಡಿ ಹಾಲನ್ನು ವೇಮನರಿಗೆ ತಂದು ಕೊಡುತ್ತಿದ್ದಳು. ಅವಳ ಭಕ್ತಿಯು ಪರಿಪಕ್ವವಿತ್ತು. ಮನಸ್ಸು ಸರ್ವಾರ್ಪಿತವಿತ್ತು. ಹೀಗಾಗಿ, ಅವಳಿಂದ ಬಂದ ಹಾಲನ್ನಾಗಲಿ, ಇಲ್ಲವೆ ಅಕ್ಕಿಯ ಗಂಜಿಯನ್ನಾಗಲಿ, ಯೋಗಿಗಳೆಂದೂ ತಿರಸ್ಕರಿಸುತ್ತಿರಲಿಲ್ಲ. ಯೋಗಿಗಳಿಗೆ ಅವಳು

ದಿನಾಲು ಹಾಲು ತಂದು ಕೊಟ್ಟರೂ ಸಹ, ಅವಳ ತಿಂಗಳ ಆದಾಯದಲ್ಲಿ ಯಾವ ಕೊರತೆಯೂ ಆಗಲಿಲ್ಲ. ಅವಳ ಆಕಳು ಹೆಚ್ಚು ಹಾಲು ಕರೆಯುತ್ತಿತ್ತೋ ಇಲ್ಲವೆ ಕರೆದ ಹಾಲು ಹೆಚ್ಚಾಗುತ್ತಿತ್ತೋ ಹೇಳಲಾಗಲ್ಲ. ಹೀಗಾಗಿ, ಆ ಭಕ್ತೆಗೆ ಮಾತ್ರ ಇದೆಲ್ಲ ಪವಾಡದಂತೆನಿಸಿತ್ತು. ಮೇಲಾಗಿ, ಒಂದು ಮುಂಜಾನೆ ಅವಳು ಹಾಲು ತಂದು ಕೊಟ್ಟಾಗ, ಯೋಗಿಗಳು ಅವಳಿಗೆ ಒಂದು ತಾಮ್ರದ ದುಡ್ಡು ನೀಡಿದರು. ಅವಳು ಅದನ್ನು ದಿಟ್ಟಿಸಿ ನೋಡ ತೊಡಗಿದಾಗ, "ಅದನ್ನು ಒಂದು ವಾರ ಮುಚ್ಚಿ ಇಟ್ಟು ನಂತರ ಬಳಸಮ್ಮ" ಎಂದು ಕಿವಿಮಾತು ಹೇಳಿದರು ಯೋಗಿವರ್ಯರು. ಅವಳು ಹಾಗೇ ಮಾಡಿದಳು. ಎಂಟನೇ ದಿನ ಬೆಳಿಗ್ಗೆ ಅದನ್ನು ನೋಡಿದಾಗ, ಅದು ಬಂಗಾರದ್ದಾಗಿತ್ತು. ಅವಳು ತನ್ನ ಕಣ್ಣನ್ನೇ ನಂಬದಾದಳು. ಅದನ್ನೆತ್ತಿಕೊಂಡು ಹಾಲು ಗಿಂಡಿಯೊಂದಿಗೆ ಯೋಗಿಯ ಬಳಿಗೆ ಬಂದಳು.

"ಅಪ್ಪಾ! ನಿನ್ನ ತಾಮ್ರದ ದುಡ್ಡು ಬಂಗಾರದ್ದಾಗಿದೆ. ಇದನ್ನು ಮರಳಿ ಪಡೆ." ಎಂದಳು.

"ಹೌದೇನಮ್ಮ! ಅದು ನಿನ್ನ ಭಾಗ್ಯವಮ್ಮ. ನಿನ್ನ ಗಂಡನು ಮುಂದಿನ ವಾರ ಒಂದು ಗದ್ದೆಯನ್ನು ಕೊಳ್ಳಲಿದ್ದಾನೆ. ಅದಕ್ಕಾಗಿ ವೆಚ್ಚ ಮಾಡಲು ತಿಳಿಸು. ಮುಂದೆ ಆದಾಯ ಹೆಚ್ಚಾದರೆ. ದಾನ ಧರ್ಮ ಮಾಡಿರಿ" ಎಂದು ತಮ್ಮ ಸಂಕಲ್ಪವನ್ನು ಸೂಚಿಸಿದರು.

ಇಹದಲ್ಲಿ ಸುಖಿಸಲು ಹೇಮಕಾರಕ ವಿದ್ಯೆ;
ಪರದಲ್ಲಿ ಸುಖಿಸಲು ಬ್ರಹ್ಮವಿದ್ಯೆ.
ಕಡಿಮೆ ವಿದ್ಯೆಯೆಲ್ಲ ಕೆಲಸಕ್ಕೆ ಬಾರವು.
ವಿಶ್ವದಾಭಿರಾಮ ಕೇಳು ವೇಮ.

ವೇಮನ ಯೋಗಿಗಳು ಸಾಮಾನ್ಯರೊಡನೆ ತೀರ ಸಾಮಾನ್ಯರಂತೆ ವರ್ತಿಸುತ್ತಿದ್ದರು. ಮಕ್ಕಳೊಡನಿರುವಾಗಲಂತೂ ಅವರು ಬಾಲವತ್ ಆಗಿರುತ್ತಿದ್ದರು. ಅನನುಕೂಲ ಪ್ರಸಂಗಗಳಲ್ಲಿ ಉನ್ಮತ್ತರಂತೆ ವ್ಯವಹರಿಸುತ್ತಿದ್ದರು.

**ನಂಬ ಬಾರದ ರಾಜರು :**

ಅಂದು ಸೋಮವಾರ ನೆರೆ ಊರುಗಳ ಪ್ರತಿಷ್ಠಿತರು ಯೋಗಿಗಳ ದರ್ಶನ ಕೋರಿ ಬಂದಿದ್ದರು. ರಾಜ್ಯಭಾರದಲ್ಲಿ ಆಸ್ಥೆ ಹೊಂದಿದ ಅನೇಕರು ಅಲ್ಲಿದ್ದರು. ಮೇಲಾಗಿ ಆ ಕಾಲದಲ್ಲಿ ನಡೆದ ವಿದ್ರೋಹ ಹಾಗೂ ವಿಶ್ವಾಸ ಘಾತದ ಕಾರ್ಯಗಳು ಜನಮನವನ್ನು ಕದಡಿದ್ದವು. ಹೀಗಾಗಿ ಓರ್ವ ಪ್ರತಿಷ್ಠಿತರು,

"ಸ್ವಾಮೀ! ಈಗಿನ ಕಾಲದಲ್ಲಿ ಜನರನ್ನು ನಂಬುವುದೇ ಕಷ್ಟ. ಅದರಲ್ಲೂ ರಾಜರಿಗೆ ಸಂಬಂಧಿಸಿ ಹೇಳುವುದಾದರೆ, ವಿಶ್ವಾಸ ಘಾತದ ಕಾರ್ಯಗಳು ಇನ್ನೂ ಹೆಚ್ಚೆಂದು ತೋರುತ್ತದೆ" ಎಂದನು.

“ ಹೀಗೆ ಅಲ್ಲಲ್ಲಿ ಆಯಾ ಕಾಲಮಾನಕ್ಕನುಸರಿಸಿ ನಡೆದಿರುತ್ತದೆ. ಪ್ರಾಮಾಣಿಕತೆಗೆ ಇಂಬಿಲ್ಲದಿದ್ದರೆ, ಧರ್ಮಕ್ಕೆ ಚ್ಯುತಿ ತಾನೇ?” ಎಂದು ನುಡಿದು, ತಮ್ಮಷ್ಟಕ್ಕೆ ತಾವೇ ವಿಚಾರಮಗ್ನರಾಗಿ ಕೆಲ ನಿಮಿಷ ಕಳೆದರು. ನಂತರ, ಅವರು ಪದ್ಯ ಪಠಿಸತೊಡಗಿದರು:

ದೊರೆಯು ಘನನಾಗಿರೆ ರಣರಂಗದ ಚಿಂತೆ’
ಪರಮ ಮುನಿಗೆ ಪರಮಾತ್ಮನ ಚಿಂತೆ.
ನರನು ಅಲ್ಪನಿರಲು ನಾರಿ ಕುರಿತು ಚಿಂತೆ.
ವಿಶ್ವದಾಭಿರಾಮ ಕೇಳು ವೇಮ.
ಎದುರಾಳಿಯ ಬಲವು ಎಷ್ಟು ಎಂದೆಣಿಸದೆ,
ಎದುರಾಗುವ ಹಠದಿ ಎದುರಾಗಲು,
ಕರಡಿ ಉರಿಯ ಸುತ್ತಿ ಕುಣಿದು ಸುಟ್ಟ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಕೊಲ್ಲ ಲರ್ಹನೆನಿಪ ಶತ್ರು ವಶವಾಗಲು,
ಮುಳ್ಳನಾಡಿಸದಿರು ಸಿಕ್ಕನೆಂದು.
ಒಳ್ಳೆಯದನೆ ಬಗೆದು ಕಳಿಸುತಿಹುದೆ ಸಾವು.
ವಿಶ್ವದಾಭಿರಾಮ ಕೇಳು ವೇಮ.

ಯೋಗಿಗಳು ಹಾಡು ನಿಲ್ಲಿಸಿದಾಗ, ಅಂತರ್ಮುಖರಾಗಿಯೇನೂ ಇರಲಿಲ್ಲ. ಅವರ ವರ್ಣಕ ಕವಿತ್ವವು ತಂತಾನೇ ಉಗ್ಗಡಿಸಿತ್ತು. ರಾಜರು, ಸೇನಾನಿಗಳು, ಭಟರು ಹಾಗೂ ಕೊಂಡೆಯವರ ಗುಣ – ಸ್ವಭಾವಗಳನ್ನು ಕುರಿತು ಚೆನ್ನಾಗಿ ತಿಳಿದ ಜನರಿಗೆ ಈ ಕವಿ ವೇಮನರ ನುಡಿಗಳು ತಮ್ಮ ಸ್ವಂತದ ಭಾವಗಳಿಗೆ ಭಾಷೆ ನೀಡಿದ ಪದ್ಯಗಳಾಗಿದ್ದವು.

ಆದಿನ ಸಾಯಂಕಾಲದ ಧ್ಯಾನದ ಸಮಯವಾದ್ದರಿಂದ ಎಲ್ಲರೂ ನಮಸ್ಕರಿಸಿ ಯೋಗಿಗಳಿಂದ ಬೀಳ್ಕೊಟ್ಟರು.

**ಧ್ಯಾನದ ತರಬೇತಿ :**

ಚಂದನೂಲ ಪುರದ ಬೆಟ್ಟದ ವಸತಿಯಲ್ಲಿ ಜನರ ಬರುಹೋಗುವಿಕೆಯು ಹೆಚ್ಚಾಯಿತು. ಅಲ್ಲಿಯ ಆದಿವಾಸಿಗಳಂತೂ ವಿಶೇಷ ಭಕ್ತರಾದರು. ಪದ್ಯಗಳನ್ನು ಕಂಠಪಾಠ ಮಾಡಿಕೊಂಡು ತಮ್ಮ ಸಾರಿಗೆ ಕುದುರೆಗಳನ್ನೇರಿ ಹಾಡುತ್ತ ಊರೂರು ಅಲೆಯ ಹತ್ತಿದರು. ಆದರೆ ಈ ಜನಪ್ರಿಯತೆಯ ಹೆಚ್ಚಳವು ನೈಜ ಯೋಗ ಸಾಧಕರ ಸಾಧನಕ್ಕೆ ಅಡ್ಡಿಯೊಡ್ಡದಿರಲಿಲ್ಲ. ಈ ಕುರಿತು ರಾಮರೆಡ್ಡಿ, ನೀಲಕಂಠರು ಯೋಗಿಗಳೊಂದಿಗೆ ಆಪ್ತಾಲೋಚಿಸಿ, ಪಾಮೂರು ಗ್ರಾಮದ (ಇಂದಿನ ಪ್ರಕಾಶಂ ಜಿಲ್ಲೆಯ ಹಳ್ಳಿ) ಬಳಿಯ ಬೆಟ್ಟದ ಗವಿಗಳು ತುಂಬಾ ಪ್ರಶಾಂತ ನೆಲೆಗಳಾಗಿವೆಯೆಂದು ಸೂಚಿಸಿದರು.

ಮಾರನೆಯ ದಿನ ಯೋಗಿಗಳ ಪರಿವಾರವು ಪಾಮೂರಿನತ್ತ ಸಾಗಿತು. ಚಂದನೂಲ ಬೆಟ್ಟವಾಸಿಗಳು ಕಣ್ಣೀರಿಟ್ಟು ಬೀಳ್ಕೊಟ್ಟರು. ಇನ್ನೊಮ್ಮೆ ಬರುತ್ತೇವೆಂದು ಭರವಸೆ ನೀಡುವ ವರೆಗೂ ಮಾರೆಮ್ಮ ಹಿಡಿದಪ್ಪಿದ ಶ್ರೀಪಾದ ಬಿಡಲಿಲ್ಲ.

ಯೋಗಿಗಳು ದೀರ್ಘ ಪ್ರವಾಸ ಕಾಲದಲ್ಲಿ ಮಾರ್ಗ ಮಧ್ಯೆ ಇರುವ ಗ್ರಾಮಗಳ ಹೊರ ಅಂಚಿನ ದೊಡ್ಡ ಮರಗಳ ಅಡಿ, ಬಿಡಾರ ಹೂಡುತ್ತಿದ್ದರು. ಇಂಥ ಒಂದು ಮಧ್ಯಂತರ ವಾಸ ಕಾಲಕ್ಕೆ ಆಕಸ್ಮಿಕವಾಗಿ ನೆರೆದ ಯುವಕ ಸಮೂಹಕ್ಕೆ ಯೋಗಿಗಳು ಸಾಮಾನ್ಯ ನೀತಿ ಕುರಿತು ಬೋಧಿಸಿದರು.

ಅಂತೂ ಪಾಮೂರು ತಲುಪಿದರು. ಅಲ್ಲಿ ಗ್ರಾಮದಲ್ಲಿ ಹೆಚ್ಚು ವೇಳೆ ಕಳೆಯದೆ ಗವಿಯ ದಾರಿ ಹಿಡಿದು ಸಾಗಿದರು. ಹಾದಿಯಲ್ಲಿ ಭಕ್ತರು ನೀಡಿದ ಹಣ್ಣು ಹಂಪಲು ಸೇವಿಸಿ ಮೊದಲಿನ ರಾತ್ರಿಯನ್ನು ಶಾಂತವಾಗಿ ಕಳೆದರು.

ಮಾರನೆಯ ದಿನ ಎದ್ದು ಸನಿಹದ ಸರಸಿಯಲ್ಲಿ ಸ್ನಾನ ಮಾಡಿ, ಧ್ಯಾನ ಪೂಜೆ ತೀರಿಸಿ ರಾಮರೆಡ್ಡಿ, ನೀಲಕಂಠರು ಭಿಕ್ಷೆಗೆ ಹೋದರು. ಯೋಗಿವರ್ಯರು ಧ್ಯಾನಸ್ಥರಾದರು. ಈಗವಿಯಲ್ಲಿ ಧ್ಯಾನಕ್ಕೆ ಹೆಚ್ಚು ಅನುಕೂಲಕರ ಸ್ಪಂದನಗಳಿರುವುದನ್ನು ಯೋಗಿಗಳು ಸ್ವತಃ ಅನುಭವಿಸಿದರು. ಧ್ಯಾನ ಮುಗಿಸಿ ಹೊರಬಂದಾಗ ಓರ್ವ ಯುವಕನು ಇಬ್ಬರು ಕೂಲಿಯವರೊಂದಿಗೆ ಹಾದಿಯಲ್ಲಿ ಹೊರಟಿರುವುದನ್ನು ಕಂಡರು ಆ ಯುವಕನೂ ಈ ಅವಧೂತ ಸಾಧುವನ್ನು ಕಂಡು ಕುತೂಹಲ ತಾಳಿದನು. ಭೆಟ್ಟಿಯಾಗಿ ಹೋಗೋಣವೆಂದು ಇವರತ್ತ ಬರತೊಡಗಿದನು. ಅವನು ಈ ಊರ ಪ್ರಮುಖನ ಮಗನೇ ಆಗಿದ್ದನು. ಬಂದು ಕಾಲು ಹಿಡಿದು ನಮಸ್ಕರಿಸಿ ನಿಂತನು. ಉಭಯ ಕುಶಲೋಪರಿಯಾದ ಬಳಿಕ, ಯೋಗಿಗಳು ಆ ಯುವಕನಲ್ಲಿ ಹೆಚ್ಚಿನ ಆಸ್ಥೆ ತಳೆದರು. " ಬನ್ನಿ ಒಳಗೆ ಕುಳಿತುಕೊಳ್ಳೋಣ" ಎಂದು ಗವಿಯ ಕೋಡುಗಲ್ಲಿನ ಚಾಟಿಗೆ ಕರೆದರು.

"ಇಲ್ಲಿಗೆ ಎಂದು ಬಂದಿರಿ?" ಎಂದು ಕೇಳಿದ ಯುವಕ.

"ನಿನ್ನೆ ಸಾಯಂಕಾಲವಷ್ಟೇ" ಎಂದುತ್ತರಿಸಿದರು ಯೋಗಿವರ್ಯರು.

"ತಮ್ಮ ಊಟದ ವ್ಯವಸ್ಥೆ ಇದೆಯೇ?" ಎಂದು ವಿಚಾರಿಸಿದ ಯುವಕ.

"ನಾವು ಸಾಧುಗಳಪ್ಪಾ! ಭಿಕ್ಷಾಟನೆಯಿಂದ ಹೊಟ್ಟೆ ಹೊರೆಯುತ್ತೇವೆ. ನಮ್ಮ ಇಬ್ಬರು ಶಿಷ್ಯರು ಭಿಕ್ಷೆ ಎತ್ತಲು ಊರಲ್ಲಿ ಹೋಗಿದ್ದಾರೆ. ಎಂದರು.

ಯುವಕನು ತನ್ನೊಂದಿಗೆ ಬಂದವರಿಗೆ ಬೇಗನೇ ತೋಟದಲ್ಲಿ ಎಳಗಾಯಿ ಹರಿದುಕೊಂಡು ಬರಲು ತಿಳಿಸಿದನು, ತೀರ ಆಕಸ್ಮಿಕವಾಗಿ ಯೋಗಿಗಳಿಗೆ ನಿಕಟ ಪರಿಚಿತನಂತೆ ಭಾವಿಸಿದನು.

"ತಾವು ದೇವರನ್ನು ಕಂಡಿರುವಿರಾ?" ಎಂದು ಜಿಜ್ಞಾಸೆಯಿಂದ ಕೇಳಿದನು.

"ಸತ್ಯ ಹೇಳಬೇಕೆಂದರೆ, ದೇವರನ್ನು ಕಾಣುವುದೆಂದರೆ, ದೇವರಾಗುವುದು ತಾನೇ? ಜೀವವು ಶಿವನಲ್ಲಿ ಐಕ್ಯವಾಗುವುದೇ ಸಾಕ್ಷಾತ್ಕಾರ. ನಮ್ಮನ್ನು ನಾವು ಅರಿಯುವ ಮೂಲಕ ಸರ್ವವನ್ನೂ ಅರಿಯಬಹುದು" ಎಂದು ಹೇಳಿ ಯೋಗಿಗಳು ಕಣ್ಣು ಮುಚ್ಚಿದರು.

ಯುವಕನು ತನ್ನನ್ನು ತಾನು ಮರೆತು ಅವರನ್ನೇ ದಿಟ್ಟಿಸುತ್ತ ಕುಳಿತನು. ಯೋಗಿಗಳು ಮೆಲು ದನಿಯಲ್ಲಿ,

"ಕಣ್ಣು ಕಂಡಿತೆನಲು ಕರ್ಮಾಧಿಕಾರವು;
ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ.
ಬಟ್ಟ ಬಯಲು ಬ್ರಹ್ಮ ಪರಿಪರಿಯಲಿ ನೋಡು.
ವಿಶ್ವದಾಭಿರಾಮ ಕೇಳು ವೇಮ.
"ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ
ರೂಪವೇನು ಇರದ ರೀತಿಯಲ್ಲಿ;
ಪರಮ ಯೋಗಿ ನೋಳ್ಪ ಪರಮಾತ್ಮ ನಿರವನು.
ವಿಶ್ವದಾಭಿರಾಮ ಕೇಳು ವೇಮ."

ಪದ್ಯ ನಿಲ್ಲಿಸಿದ ನಂತರ ಹತ್ತು ನಿಮಿಷಗಳ ವರೆಗೆ ಯುವಕನ ತಲೆಯಲ್ಲಿ ತಣ್ಣನೆಯ ನೀರು ಹನಿಸಿದಂತಾಯಿತು. ಅವನು ಭಾವಾವೇಶದಿಂದ ಯೋಗಿಗಳ ಕಾಲಿಗೆರಗಿದನು.

"ತಾವು ವೇಮನ ಯೋಗಿಗಳ ಶಿಷ್ಯರೇನು?" ಎಂದು ಕೇಳಿದ ಯುವಕ? ತನ್ನ ಕಕ್ಕನು ಇತ್ತೀಚೆಗೆ ಅವರ ಹೆಸರನ್ನು ಪುನರಪಿ ಪ್ರಸ್ತಾಪಿಸುವುದನ್ನು ನೆನಪಿಸಿಕೊಂಡನು.

"ನನ್ನನ್ನೇ ಜನರು ಯೋಗಿ ಎಂದು ಕರೆಯುತ್ತಾರೆ" ಎಂದರು ವೇಮನ.

"ತಮ್ಮ ದಿವ್ಯ ದರ್ಶನವಾದುದು ನನ್ನ ಪೂರ್ವಜನ್ಮದ ಪುಣ್ಯವೇ ಸರಿ. ನನ್ನ ಕಕ್ಕನು ತುಂಬಾ ಧರ್ಮಿಷ್ಠನು. ತಮ್ಮ ದರ್ಶನ ಪಡೆಯಲು ಕಳೆದೆರಡು ತಿಂಗಳಿನಿಂದ ಚಡಪಡಿಸಿ ಎರಡು ಮೂರು ಕಡೆಗೆ ಅಲೆದು ನಿರಾಶನಾಗಿ ತಿರುಗಿದ್ದಾನೆ. ಅವನನ್ನು ಈಗಾಗಲೇ ಕರೆಕಳುಹಲೇ?" ಎಂದು ತವಕ ಹೆಚ್ಚಿ ಯುವಕನು ಕೇಳಿದನು.

"ಈಗ ಬೇಡ; ನಾಳೆ ಸಾಯಂಕಾಲ, ಅವನನ್ನು ಕರೆದುಕೊಂಡು ಜೊತೆಗೆ ನೀನೂ ಬಾ" ಎಂದರು, ಯೋಗಿಗಳು.

ಅಷ್ಟರಲ್ಲಿ ಆಳು ಎಳಗಾಯ ಒಡೆದು, ನೀರು ತೆಗೆದು ಹಿಡಿದ. ಯುವಕ ತನ್ನ ಕೈಯಿಂದ ಯೋಗಿಗಳಿಗೆ ಸೇವಿಸಲು ಆಗ್ರಹಿಸಿದ. ಅವನ ಆಗ್ರಹಕ್ಕೆ ಮಣಿದು ಸ್ವಲ್ಪ ಸೇವಿಸಿದರು.

"ಸನಿಹದಲ್ಲಿಯೇ ತಮ್ಮ ಚಿಕ್ಕ ತೋಟ ವಿದೆಯೆಂದೂ ಅಲ್ಲಿ ಬಾವಿಯ ನೀರಾವರಿಯಿದ್ದು, ನೀರು ಸಾಕಷ್ಟಿಲ್ಲವಾದುದರಿಂದ ತೋಟವನ್ನು ವಿಸ್ತರಿಸಲು ಆಗುತ್ತಿಲ್ಲ. ಪಕ್ಕದ ಜಮೀನಿನಲ್ಲಿ ಹೊಸ ಬಾವಿ ತೋಡಿ, ಐವತ್ತು ಅಡಿ ಅಗಿದರೂ ನೀರು ಬಿದ್ದಿಲ್ಲ. ಅದೊಂದು ಚಿಂತೆಯಾಗಿದೆ" ಎಂದು ತನ್ನ ಗೃಹಕೃತ್ಯವನ್ನು ಅನುಷಂಗಿಕವಾಗಿ ಹೇಳಿಕೊಂಡನು.

"ಆ ಜಮೀನು ಇಲ್ಲಿಂದ ಎಷ್ಟು ದೂರವಿದೆ?" ಎಂದು ಕೇಳಿದರು ಯೋಗಿಗಳು. ಯುವಕನಲ್ಲಿ ವಿಶೇಷ ಆತ್ಮೀಯತೆ ಬೆಳೆಯತೊಡಗಿತ್ತು.

"ಇಲ್ಲಿಂದ ಐದಾರು ಕವಣೆಗಲ್ಲಿನ ದೂರವಷ್ಟೇ." ಎಂದನು ಯುವಕ.

"ಹಾಗಾದರೆ, ಹಾಯಾಗಿ ನಡೆದುಕೊಂಡು ಹೋಗಿ ಬರೋಣ" ಎಂದು ಯುವಕನ ಹೆಗಲ ಮೇಲೆ ಕೈ ಹಾಕಿ ನಡೆದರು.

ಓರ್ವ ಕೂಲಿಯವನನ್ನು ಗವಿಯ ಬಳಿ ಇರಿಸಿ, ಇಬ್ಬರು ಶಿಷ್ಯ ಸಾಧುಗಳಿಗೆ ಸಂದೇಶ ಇರಿಸಿ ಹೊರಟರು.

ವೇಮನ ಯೋಗಿ ಬಾವಿ ಜಾಗೆಗೂ ಬಂದರು.

"ಅಬ್ಬಾ! ಇಲ್ಲಿ ದೊಡ್ಡ ನೀರಿನ ಸೆಲೆಯೇ ಇದೆಯಲ್ಲ !" ಎಂದು ಉದ್ಗರಿಸಿದರು ಏನನ್ನೋ ಕಂಡರವಂತೆ.

ಯುವಕ ಏನೂ ಮಾತಾಡಲಿಲ್ಲ. ಇಷ್ಟರಲ್ಲಿಯೇ ಅವನು ಅವರ ಮಹಿಮೆಗೆ ಮಾರು ಹೋಗಿ ಮೂಕವಿಸ್ಮಿತನಾಗಿದ್ದ. ಬೆಕ್ಕಸ ಬೆರಗಾಗಿ ಅವರ ಮುಖವನ್ನೇ ನೋಡ ತೊಡಗಿದ.

"ನೋಡಪ್ಪಾ! ಇಲ್ಲಿಯೇ ಪಕ್ಕದಲ್ಲಿ ದೊಡ್ಡ ನೀರಿನ ಸೆಲೆಯಿದೆ. ಅಂದರೆ, ಅಂತರ ಗಂಗೆ ಹರಿಯುತ್ತಿದ್ದಾಳೆ ಕಾರಣ ನೀನೀಗ ಪೂರ್ವ ದಿಕ್ಕಿನತ್ತ ಹತ್ತು ಅಡಿ ಅಡ್ಡ ಅಗಿದು ನೀರು ಹೊರಳಿಸಬೇಕಷ್ಟೇ, ನೀರಿಗಾವ ಕೊರತೆಯಿಲ್ಲ." ಎಂದು ಹೇಳಿದರು. ಎಲ್ಲವೂ ತಮ್ಮ ಕಣ್ಣೆದುರೇ ಇದೆಯೆಂಬಂತೆ.

"ಕಾಣಬಾರದ ದೇವರನ್ನು ಕಣ್ಣಿನಿಂದ ಕಾಣಲಾಗದು. ಹೊರಗಣ್ಣಿಗೆ ಕಾಣದ ನೀರಿನ ಸೆಲೆಯನ್ನು ಮಾನಸ ಚಕ್ಷುವಿನಿಂದ ಕಾಣಬಹುದು" ಎಂದು ಮತ್ತಷ್ಟು ಕುತೂಹಲ ಹೆಚ್ಚಿಸುವಂತೆ ನುಡಿದರು.

ಹೊತ್ತಾಯಿತು; ಎಂದು ಯೋಗಿಗಳು ಅಲ್ಲಿಂದ ಹೊರಟರು. ಯುವಕನು ಗುಹೆಯ ವರೆಗೆ ಬಂದು ಕಳಿಸಿ, ನಾಳೆ ತನ್ನ ಕಕ್ಕನೊಂದಿಗೆ ಬರುವುದಾಗಿ ತಿಳಿಸಿದನು. ಮತ್ತು ಯೋಗಿ ಹೇಳಿದಂತೆ, ಪೂರ್ವದಿಶೆಗೆ ವಿಸ್ತರಿಸಿ ಬಾವಿ ಅಗೆತವನ್ನು ಕೂಡಲೇ ಆರಂಭಿಸಿದನು.

— — — — — — — — — — — — — — — — — — — — — —

ರಾಮರೆಡ್ಡಿ ಮತ್ತು ವಿರೂಪಾಕ್ಷ(ನೀಲಕಂಠ)ರೀರ್ವರೂ ಬಂದು ಊರಿನ ಸಮಾಚಾರ ಹೇಳಿದರು. ವೆಂಕಟಪ್ಪ ಎನ್ನುವ ಕಾಪು ಕುಲದವನು ಯೋಗ ಸಾಧನದಲ್ಲಿ ಉತ್ಸುಕನಿದ್ದು, ತಮ್ಮನ್ನೇ ಹುಡುಕಿಕೊಂಡು ನೆರೆಹಳ್ಳಿಗೆ ಹೋಗಿದ್ದಾನೆಂದೂ ತಿಳಿಸಿದರು. ಯೋಗಿಗಳು ನಸುನಕ್ಕರು. ಆ ವೆಂಕಟಪ್ಪನ ಅಣ್ಣನ ಮಗನು ಆಕಸ್ಮಿಕವಾಗಿ ಭೆಟ್ಟಿಯಾದುದನ್ನು ಮತ್ತು ನಡೆದ ಸಂಗತಿಗಳನ್ನು ತಿಳಿಸಿ. ಅಲ್ಲಿ ಇರಿಸಿದ ಎಳೆಗಾಯಿಗಳತ್ತ ದೃಷ್ಟಿ ಬೀರಿದರು.

ಮಾರನೆಯ ಸಾಯಂಕಾಲ ಆ ಯುವಕನು ತನ್ನ ಕಕ್ಕ ವೆಂಕಟಪ್ಪನೊಂದಿಗೆ ಬಂದನು. ಜೊತೆಗೆ ನಾಲ್ಕಾರು ಜನರೂ ಕುತೂಹಲದಿಂದ ಬಂದಿದ್ದರು. ವೆಂಕಟಪ್ಪನು ಕಳೆದ ನಾಲ್ಕಾರು ವರ್ಷಗಳಿಂದ ತಾನು ಅಧ್ಯಯನ ಮಾಡಿದ ಗ್ರಂಥಗಳನ್ನು ಕುರಿತು ಹಾಗೂ ಭೆಟ್ಟಿಯಾದ ಸಾಧುಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಿದನು. ಆದರೆ ಕಳೆದ ತಿಂಗಳಿಂದ ತಮ್ಮನ್ನು ಭೆಟ್ಟಿಯಾಗಬೇಕೆಂಬ ಕಾತರ ವಿಪರೀತವಾಗಿದೆ. ಈಗ ಕೆಲ ತಿಂಗಳು ಮೊದಲು ತಾವು ಚಂದನೂಲ ಬಳಿ ಇದ್ದಾಗ ಭೆಟ್ಟಿಯಾದ ಓರ್ವ ಸಾಧುವಿನಿಂದ ತಮ್ಮ ಕುರಿತು ಮಾಹಿತಿ ಪಡೆದಂದಿನಿಂದ ಭೆಟ್ಟಿಯ ಇಚ್ಛೆಯು ಹೆಚ್ಚು ಹೆಚ್ಚು ತೀವ್ರಗೊಳ್ಳುತ್ತ ನಡೆಯಿತು. ನಿನ್ನೆ ನಮ್ಮ ಆಣ್ಣನ ಮಗನೊಂದಿಗೆ ನೀವು ತೋರಿದ ಆತ್ಮೀಯತೆಯಿಂದ ನನ್ನ ಹೃದಯವು ತುಂಬಿ ಬಂದಿದೆ." ಎಂದು ಮುಂದೆ ಮಾತನಾಡಲಾರದಾದನು.

".. .. .. .. .." ಯೋಗಿಗಳು ಮುಗುಳ್ನಕ್ಕರಷ್ಟೇ ಕೆಲ ನಿಮಿಷಗಳುರುಳಿದ ಬಳಿಕ ನಿನ್ನೆ ಬಂದ ಯುವಕನನ್ನೇ ಬಳಿಗೆ ಕರೆದು ಅವನ ಭೃಕುಟಿಯನ್ನು ತಮ್ಮ ಹೆಬ್ಬೆರಳಿನಿಂದ ಒತ್ತಿದರು. ಅವನು ಅನಾಯಾಸವಾಗಿ ಸಮಾಧಿ ಸ್ಥಿತಿಗೇರಿದನು. ಆದರೆ ಅವನ ಮನಸ್ಸು ನಿಷ್ಕಪಟಿಯಿತ್ತು; ಪರಿಶುದ್ಧವಿತ್ತು; ಶ್ರದ್ಧಾಯುಕ್ತವಿತ್ತು. ಎಲ್ಲರೂ ಅತ್ತ ಲಕ್ಷ್ಯ ವೇಧಿಸಿದರು.

ಯೋಗಿಗಳು ಅನಿಮಿಷರಾಗಿ, ವೆಂಕಟಪನನ್ನು ಕುರಿತು,

> ಗುರುವಿನ ಶಿಕ್ಷೆಯಿರದೆ, ಗುರುತು ದೊರೆವುದೆಂತು?
> ಅಜನೆ ಇರಲಿ; ಅವನ ಅಪ್ಪನಿರಲಿ.
> ಬೀಗದ ಕೈಯಿರದೆ, ಬೀಗ ತೆರೆವುದೆಂತು?
> ವಿಶ್ವದಾಭಿರಾಮ ಕೇಳು ವೇಮ."

ಯುವಕ ಮೆಲ್ಲನೆ ಕಣ್ತೆರೆದನು. ನಿದ್ರೆ ಸಮಾಧಿಗಳ ಅಂತರವನ್ನು ವಿವರಿಸಬಲ್ಲನಾಗಿದ್ದನು. ನಿದ್ರೆ ಹೋದವನು ಪೂರ್ವ ಸ್ಥಿತಿಯಲ್ಲಿಯೇ ಮರಳುತ್ತಾನೆ. ಹೆಚ್ಚೆಂದರೆ ದೇಹದ ಆಯಾಸ ಹೋಗಿರಬಹುದು, ಆದರೆ ಸಮಾಧಿಯ ಆ ಲೋಕ ಅಂದರೆ ಅನುಭವ ಕ್ಷೇತ್ರವೇ ಬೇರೆ. ನಿದ್ರೆ ಹೋದವನು ಎಚ್ಚತ್ತಾಗ ಆನಂದದ ಅನುಭೂತಿಯು ಹಚ್ಚ ಹಸುರಾಗಿರುತ್ತದೆ. ಇದನ್ನೆಲ್ಲ ರಾಮರೆಡ್ಡಿ ವಿವರಿಸಿದನು.

— — — — — — — — — — — — — — — — — — — — —

ಆ ಯುವಕನು ತಲೆದೂಗಿದನು. ವೆಂಕಟಪ್ಪನು ಹೆಚ್ಚು ಪ್ರಶ್ನೆ ಕೇಳುವ ಸ್ಥಿತಿಯಲ್ಲಿ ಉಳಿಯಲಿಲ್ಲ. ಅವನ ಮನವನ್ನು ಬಹು ದಿನಗಳಿಂದ ಕೊರೆಯುತ್ತಿದ್ದ ಗುರು ಮತ್ತು ಸಮಾಧಿಯ ಅನುಭೂತಿಗಳನ್ನು ಕುರಿತು ಅವನಲ್ಲಿದ್ದ ಜಿಜ್ಞಾಸೆಯೆಲ್ಲವೂ ಪೂರ್ಣ ಶಮನಗೊಂಡಿತು. ತನ್ನ ಅಣ್ಣನ ಮಗನ ಸುಕೃತ ಕುರಿತು ಅವನಲ್ಲಿ ಅಚ್ಚರಿ ಮೂಡಿತು.

ಇತರರು ಯೋಗಿಗಳ ನಮಸ್ಕರಿಸಿ, ಮತ್ತೆ ಬರುವ ಸಮಯಕ್ಕಾಗಿ ಕೇಳಿ ತಿಳಿದರು. " ಇದುವರೆಗೆ ದಿನಾಲು ಚರ್ಚೆ ಇರುತ್ತಿತ್ತು. ಇನ್ನು ಮೇಲೆ ಯೋಗದೀಕ್ಷೆ ಪಡೆದವರನ್ನು ಹೊರತು ಪಡಿಸಿ ಇತರರಿಗೆ ಸೋಮವಾರ ಸಾಯಂಕಾಲ ಮಾತ್ರ ದರ್ಶನ ಲಭ್ಯ" ಎಂದು ರಾಮರೆಡ್ಡಿ ಈ ಮುನ್ನವೇ ನಿರ್ಧರಿಸಿದಂತೆ ತಿಳಿಸಿದನು. ಅನಂತರ, ನೈಜ ಸಾಧಕರು ಹರ್ಷ ಈಡೇರಿಸಿದರು. ಕೇವಲ ಕೇಳಿ ತಿಳಿಯುವ, ತಿಳಿದು ಆಚರಿಸದ ಜಿಜ್ಞಾಸುಗಳು ಕೈ ಕೈ ಹಿಸುಕಿಕೊಂಡರು.

ಮಾರನೆಯ ದಿನದಿಂದ ಯೋಗ ಸಾಧಕರೆಲ್ಲ, ಪ್ರಾರಂಭಿಕ ದೀಕ್ಷೆ ಪಡೆದವರು ಸಾಯಂಕಾಲ ಬೋಧೆ ಪಡೆಯುತ್ತಿದ್ದರು. ಆಗೀಗ ಅಧಿಕಾರ ಸಂಪನ್ನರಿಗೆ ದೃಷ್ಟಿಯಿಂದಾಗಲಿ, ಸ್ಪರ್ಶದಿಂದಾಗಲಿ ಇಲ್ಲವೆ ಸಂಭಾಷಣದಿಂದಾಗಲಿ ಕೃಪಾಧಾರೆ ಸುರಿಸಿ ಅವರಿಗೆ ನೆರವಾಗುವುದೂ ನಡೆದಿತ್ತು.

ಪಾಮೂರ ಗುಹೆಯಲ್ಲಿ ನಡೆಸಿದ ಸಾಧಕರ ತರಬೇತಿ ಪ್ರಯೋಗವು ಯಶಸ್ವಿಯಾಗಿ ಮುಂದುವರಿಯಿತು. ವೆಂಕಟಪ್ಪನು ತನ್ನ ಜೀವನದ ಗುರಿಯು ಈ ರೀತಿ ಅನಾಯಾಸವಾಗಿ ಈಡೇರುವುದೆಂದು ತಿಳಿದಿರಲಿಲ್ಲ. ಅವನಿಗೆ ಅವನ ಅಣ್ಣನ ಮಗನ ಸಹಾನುಭೂತಿಯಿಂದಾಗಿ ಮನೆಯಲ್ಲಿ ಎಲ್ಲರ ಸಹಕಾರ ದೊರೆಯಿತು. ಈ ಕುಟುಂಬದ ಅಭ್ಯುದಯದೊಂದಿಗೆ ಗುಹೆಯ ಕಾರ್ಯಕ್ರಮಗಳೂ ಯಶಸ್ವಿಯಾದವು. ಸಾಧಕರ ಶ್ರೇಯಸ್ಸೂ ಬರದಿಂದ ಸಾಗಿತ್ತು.

ವೇಮನರ ದೇಹವು ಯೋಗ ಬಲದಿಂದಾಗಿ ಗಟ್ಟಿ ಮುಟ್ಟಾಗಿದ್ದರೂ ಅವರ ವಯಸ್ಸು ಅರವತ್ತು ಮೂರನ್ನು ದಾಟಿತ್ತು. ವೇಮನರು ಇಲ್ಲಿಂದ ವಿವಿಧ ಊರುಗಳಿಗೆ ಹೋಗಿ ತಿಂಗಳೆರಡು ತಿಂಗಳು ಇದ್ದು ಬರುತ್ತಿದ್ದರಾದರೂ ಮಳೆಗಾಲದಲ್ಲಿ ಮಾತ್ರ ಈ ಪಾಮೂರ ಗುಹೆಗೆ ಅವರ ಚಟುವಟಿಕೆ ಸೀಮಿತವಾಗಿತ್ತು.

ಯೋಗಿಗಳು ಹೆಚ್ಚು ಹೆಚ್ಚು ಅಂತರ್ಮುಖಿಗಳಾದಂತೆ, ಅವರ ಪ್ರಭಾವ ಹೆಚ್ಚು ಹೆಚ್ಚಾಗುತ್ತ ನಡೆಯಿತ್ತು. ಅವರು ಹೊಸ ಸಾಹಿತ್ಯ ರಚನೆಯನ್ನು ಹೆಚ್ಚಾಗಿ ನಿಲ್ಲಿಸಿದರೂ ಅದರ ಪ್ರಚಾರವು ಅಷ್ಟು ಭರದಿಂದ ನಡೆಯಿತು. ಪಂಡಿತರು ಯೌಗಿಕ ಪ್ರಕ್ರಿಯೆಗಳಲ್ಲಿ ತಮಗೆ ಎದುರಾಗುವ ತೊಂದರೆಗಳನ್ನು ವೇಮನ ಪದ್ಯಗಳ ಅಧ್ಯಯನ

ಮೂಲಕ ನಿವಾರಿಸಿಕೊಳ್ಳುತ್ತಿದ್ದರು. ಪಂಡಿತರಲ್ಲದವರಿಗೆ ಸಕಲ ಪದ್ಯಗಳೂ ವೇದತುಲ್ಯವೆನಿಸಿದವು. ಅವುಗಳನ್ನು ಕಂಠಪಾಠ ಮಾಡಿ, ಮೇಳ ತಂಡಗಳ ಮೂಲಕ ಸುಶ್ರಾವ್ಯವಾಗಿ ಏಕತಾರಿಯೊಂದಿಗೆ ಹಾಡುತ್ತ ಪ್ರಚಾರ ಮಾಡುತ್ತಿದ್ದರು.

ಹೀಗೆ, ಮುಂದಿನ ನಾಲ್ಕಾರು ವರ್ಷಗಳಲಿ ವೇಮನ ತತ್ತ್ವವು ಸಾಕಷ್ಟು ಪ್ರಚಾರ ಪಡೆಯಿತು. ವೇಮನರು ಪಾಮೂರಿನಲಿ ಇರುತ್ತ, ಕ್ರಿಷ್ಟಿಪಾಡ್, ಮಿನಿಕೊಂಡ, ಚಿಟ್ವೇಲ, ಕೊಂಡವೀಡು, ಗಂಡಕೋಟ, ಬಳ್ಳಾರಿ, ಕರ್ನೂಲಗಳಿಗೂ ಇನ್ನಿತರ ಪೂರ್ವ ಪರಿಚಿತ ಪ್ರದೇಶಗಳಿಗೂ ವರ್ಷದಲ್ಲಿ ಒಂದು ಬಾರಿ ಸಂದರ್ಶನ ವೀಯುತ್ತಿದ್ದರು. ಇತ್ತೀಚೆಗೆ ಹೆಚ್ಚಿನ ಚರ್ಚೆಗಳಲ್ಲಿ ವೇಳೆಗಳೆಯದೆ, ಮೌನ ವ್ಯಾಖ್ಯಾನ ಮೂಲಕ ಸಾಧಕರ ಮನದ ಸಂಶಯಗಳನ್ನು ನಿವಾರಿಸುತ್ತಿದ್ದರು. ಈ ಮಧ್ಯೆ, ನೆಲ್ಲಚೆರುವು ಕಟಾರುಪಲ್ಲೆಗಳಿಗೆ ಒಂದೆರಡು ಬಾರಿ ಹೋಗಿ ಬಂದಿದ್ದರು.

ತಮ್ಮ ವಯಸ್ಸಿನ ಅರವತ್ತೆಂಟನೆಯ ವರ್ಷದಲ್ಲಿ ವೇಮನರು ಕಟಾರ್ಲುಪಲ್ಲೆಯಲ್ಲಿಯೇ ನೆಲೆಸಿದರು. ಅಲ್ಲಿಂದ ಬೇರೆ ಕಡೆಗೆ ಹೋಗಲಿಲ್ಲ.

❖❖❖

## ೭. ಮಹಾನಿರ್ಯಾಣ

ಮಹಾ ಪುರುಷನೊಬ್ಬನು ಈ ಜಗತ್ತಿನಲ್ಲಿ ಅವತರಿಸಿ, ವಿಂಧ್ಯ ಪರ್ವತದಿಂದ ದಕ್ಷಿಣಕ್ಕಿರುವ ಪ್ರದೇಶದಲ್ಲಿಯ ಜನ ಜೀವನವನ್ನು ಆಧ್ಯಾತ್ಮದತ್ತ ತಿರುಗಿಸಿದ ಮಹಾ ಕಾರ್ಯವನ್ನು ಆರಂಭಿಸಿದನು. ಶರಣರನ್ನು ಮರಣದಲ್ಲಿ ನೋಡು; ಎಂಬಂತೆ, ಈ ಮಹಾಪುರುಷನ ಜೀವನದ ಮಹಿಮೆಯನ್ನು ಅವರು ದೇಹಾವಸಾನದ ನಂತರ ಬಹು ಜನರು ಮನಗಂಡರು.

ಮಹಾಯೋಗಿ ವೇಮನರ ಸ್ಪಷ್ಟ ನುಡಿ ಮೊನಚಾದ ಭಾಷೆ, ಕ್ರಾಂತಿಕಾರಕ ವಿಚಾರದೋಹಗಳು ಜನಮನದ ಮೇಲೆ ಎಷ್ಟೊಂದು ಪ್ರಭಾವ ಬೀರಿದ್ದವೆಂದರೆ, ಅವರ ನುಡಿಮುತ್ತುಗಳು ಜನಸಾಮಾನ್ಯರ ನಾಲಗೆಯ ಮೇಲೆ ನರ್ತಿಸಿದವು. ಅವರ ವಿಚಾರಗಳು ಎಷ್ಟೊಂದು ಉದ್ಬೋಧಕವಾಗಿದ್ದವೆಂದರೆ, ಸಾಧಕರಾಗಿರಲಿ ಸಾಮಾನ್ಯ ಗೃಹಸ್ಥರಾಗಿರಲಿ, ಅವುಗಳನ್ನು ನಾಣ್ಣುಡಿಯಂತೆ ತಮ್ಮ ನಿತ್ಯದ ಆಡು ಭಾಷೆಯಲ್ಲಿ ಬಳಸುತ್ತಿದ್ದರು. ಅವರ ತತ್ತ್ವ ಚಿಂತನೆಯು ಎಷ್ಟೊಂದು ಕ್ರಾಂತಿಕಾರಿಯಾಗಿತ್ತೆಂದರೆ, ಅದು ವರೆಗೆ ಸತ್ಯಾಂಶಗಳನ್ನು ತಿರುಚಿ, ಜನವರ್ಗವನ್ನು, ತಾತ್ವಿಕ ಚಿಂತನೆಗೆ ಎರವು ಮಾಡಿದ, ಪುರೋಹಿತರ ವರ್ಗವು ತಳಮಳಗೊಂಡು ಅವರ ಪದ್ಯದ ಪೋಥಿಗಳನ್ನು, ಜನರಿಗೆ ಸಿಗದಂತೆ, ತಮ್ಮ ತಮ್ಮ ಮನೆಗಳಲ್ಲಿಯೇ ಮರೆಯಾಗಿರಿಸಿದರು.

ಅಂದು ಶಾರ್ವರಿ ನಾಮ ಸಂವತ್ಸರದ, ಚೈತ್ರ ಮಾಸದ, ಶುಕ್ಲ ಪಕ್ಷದ ನವಮಿ ತಿಥಿಯಿತ್ತು. ವೇಮನಯೋಗಿ ಪೂರ್ವ ಸೂಚನೆ ನೀಡಿದಂತೆ, ಆ ದಿನ ಅವರು ದೇಹ ತೊರೆಯುವ ದಿನ. ಅಣು ಮನಸ್ಸಿನ ಪ್ರಕ್ರಿಯೆಯು ಮರಣವನ್ನು ತಿಳಿಯಲಾರದು. ಅವರೆ, ಆ ಮುನ್ನ, ಒಂದು ಬಾರಿ ತಿಳಿಸಿದಂತೆ,

**ಹನಿಯು ಬೀಳುವಂದ, ಹರಣ ತೊಲಗುವಂದ,**
**ತಿಳಿಯಲಾರ ಘನನೆ ಆದೊಡೇನು?**
**ತಿಳಿದೊಡಾಗ ಕಲಿಯುಗ ಉಳಿಯುವುದು ಎಂತು?**
**ವಿಶ್ವದಾಭಿರಾಮ ಕೇಳು ವೇಮ.**

ಆದರೆ, ಬ್ರಾಹ್ಮಿ ಮನವು ಆಗೀಗ ಬೋಧಿ ಸಂಪನ್ನರ ಮೂಲಕ ಕಾರ್ಯ ಮಾಡುವುದುಂಟು. ಆಗ ಅಣು ಮನಸ್ಸಿನ ಎಲ್ಲೆಯಾಚೆಯ ಸಂಗತಿಗಳು ವೇದ್ಯವಾಗುತ್ತವೆ. ಹೀಗಾಗಿ, ಯೋಗಿವರ್ಯರು ತಮ್ಮ ದೇಹತ್ಯಾಗದ ವಿಷಯವನ್ನು ಶಿಷ್ಯ ರಾಮರೆಡ್ಡಿಗೆ ತಿಳಿಸಿದ್ದರು. ಅವನ ಮುಖಾಂತರ ಇತರರಿಗೂ ತಿಳಿದಿತ್ತು. ಹೀಗಾಗಿ, ಸಮಾಧಿ ರಚನೆಯು ಆ ಮನ್ನವೇ ಆಗಿತ್ತು. ಅಂದು ಕಟಾರ್ಲುಪಲ್ಲೆಯ

ಹೊರವಲಯದ ದಿನ್ನೆಯ ಮೇಲೆ ಸಾಕಷ್ಟು ಜನ ಸೇರಿದ್ದರು. ಯೋಗಿಯೋರ್ವರ ಜೀವಂತ ಸಮಾಧಿಯ ವಿಚಾರವನ್ನು ಆ ಭಾಗದ ಹಲವು ಜನರು ಗ್ರಂಥಗಳಲ್ಲಿ ಓದಿದ್ದರೇ ಹೊರತು, ಕಣ್ಣಾರೆ ಕಂಡಿರಲಿಲ್ಲ.

ವೇಮನಯೋಗಿ ತಮ್ಮ ಕುಟೀರದಲ್ಲಿ ಆ ದಿನ ವಿಶೇಷ ಸ್ನಾನ ಮಾಡಿ ನಿತ್ಯದಂತೆ ಧ್ಯಾನಾದಿ ಕ್ರಿಯೆಗಳನ್ನು ತೀರಿಸಿದರು. ರಾಮರೆಡ್ಡಿ ಕೊಟ್ಟ ಒಂದು ಬಟ್ಟಲು ಸಿಹಿ ಹಾಲು ಸೇವಿಸಿದರು. ಹಾಲು ನೀಡುವಾಗ, ಇದೇ ಕೊನೆಯ ಸೇವೆಯೆಂಬ ನೆನಪಾಗಿ, ರಾಮರೆಡ್ಡಿಯ ಕಣ್ಣಂಚಿನಲ್ಲಿ ನೀರು ಕಾಣಿಸಿತು. ಹೊರಗೆ ಜನರ ಸದ್ದು ಗದ್ದಲವಿತ್ತು. ವೇಮನ ಯೋಗಿಗಳಿಗೆ ಜಯವಾಗಲಿ! ಪರಂಜ್ಯೋತಿ ವೇಮನ ಚಿರಾಯುವಾಗಲಿ ! ಎಂಬ ಉದ್ಘೋಷಗಳು ಕೇಳಿ ಬರುತ್ತಿದ್ದವು. ವೇಮನರು ಹೊರಬಂದರು. ತಮಗಾಗಿ ಸಿದ್ಧ ಪಡಿಸಿದ ಸಮಾಧಿ ಕಟ್ಟಡದತ್ತ ಹೆಜ್ಜೆ ಹಾಕಹತ್ತಿದರು. ನೆರೆದ ಜನ ಭಾವಾವೇಶಕ್ಕೊಳಗಾದರು.

'ತೊರೆಯದಿರು ತಂದೆ, ನಮ್ಮನ್ನು ತೊರೆಯದಿರು. ನಮ್ಮನ್ನು ಅನಾಥರನ್ನಾಗಿ ಮಾಡದಿರು" ಎಂದು ಬೊಬ್ಬಿಟ್ಟರು. ಆಗ ವೇಮನರು.

**"ಹುಟ್ಟುವವರು ಯಾರು? ಹುಟ್ಟದವರು ಯಾರು?**
**ಹುಟ್ಟಿ ಹುಟ್ಟದಂಥ ಪುರುಷರಾರು?**
**ಹುಟ್ಟಿ ಹುಟ್ಟದಿಹುದ ಬೋಧಿಸಲು, ಕಾಣಿಭೋ!**
**ವಿಶ್ವದಾಭಿರಾಮ ಕೇಳು ವೇಮ.**
**ಬದುಕುವವರು ಯಾರು? ಬದುಕದವರು ಯಾರು?**
**ಬದುಕಿ ಬದುಕದಂಥ ಪ್ರಾಣಿ ಯಾರು?**
**ಬದುಕು ಇರದ ಬದುಕು ಭ್ರಮೆಯಳಿದು ಕಾಣಿರೋ?**
**ವಿಶ್ವದಾಭಿರಾಮ ಕೇಳು ವೇಮ."**

**ಕಟ್ಟುವವರು ಯಾರು? ಕಟ್ಟದವರು ಯಾರು ?**
**ಕಟ್ಟಿ ಕಟ್ಟದಂಥ ಕರ್ಮಿ ಯಾರು?**
**ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡಿಕೊ.**
**ವಿಶ್ವದಾಭಿರಾಮ ಕೇಳು ವೇಮ."**

**ನೀಡುವವರು ಯಾರೋ? ನೀಡದವರು ಯಾರೊ?**
**ನೀಡಿ ನೀಡದಂಥ ನಿಷ್ಠರಾರೊ?**
**ಪಟ್ಟು ಹಿಡಿದು ಇದರ ಗುಟ್ಟ ಭಾವಿಸಿಕೊ !**
**ವಿಶ್ವದಾಭಿರಾಮ ಕೇಳು ವೇಮ."**

**ಸಾಯುವವರು ಯಾರು? ಸಾಯದವರು ಯಾರು?**
**ಸತ್ತು ಬದುಕುವಂಥ ಸುಜನರಾರು?**

**ಬಿಚ್ಚಿ ತೆರೆದು ಬಿಡಿಸಿ ಬಗೆದು ನೋಡಿರಯ್ಯ!**
**ವಿಶ್ವದಾಭಿರಾಮ ಕೇಳು ವೇಮ."**

ಇಷ್ಟು ಪದ್ಯಗಳನ್ನು ಪಠಿಸಿ, ರಾಮರೆಡ್ಡಿಯತ್ತ ನೋಡಿದರು. ಸುದೀರ್ಘ ಕಾಲ ಗುರು ಸೇವೆಯಲ್ಲಿದ್ದ ರಾಮರೆಡ್ಡಿ ಇಂಗಿತವರಿತು, ಯೋಗಿ ವಿರಚಿತ ಸೂಕ್ತ ಪದ್ಯ ಪಾಠ ಮಾಡಲಾರಂಭಿಸಿದನು. ಇತ್ತ ಯೋಗಿಗಳು ಧ್ಯಾನಸ್ಥರಾದರು.

**ಸೀಸ :**

**ದೇಹಗಳ ನಿತ್ಯ ದೇಹೀ ನಿತ್ಯ ನಿಹನು;**
**ದೇಹೇಂದ್ರಿಯಾದಿಯು ತೀವ್ರ ಗತಿಯಲಿ,**
**ಆ ಪರಮಾತ್ಮನೊಡನೆ ಐಕ್ಯಗೊಂಡು,**
**ಚಿತ್ತ ಶಾಂತಿಯ ಹೊಂದಿ, ಚಿನ್ಮಾತ್ರದಲಿ**
**ಇತರರನ್ನು ನೋಡದೆ ಎಂದಿಗೂನ.**
**ಸರ್ವಾತ್ಮವೆಂಬ ಸತ್ಯವನು ಸಲೆಗಾಣು**
**ವವರೆ ತತ್ತ್ವಜ್ಞರು ವಸುಧೆಯಲ್ಲಿ.**

**ತೇಃ**

**ಅಂಥವರ ಮರ್ಮವನು ಅರಿತುಕೊಳಲು,**
**ಹರಿಹರ ಬ್ರಹ್ಮರಿರಲು, ಅಳವು ಅಲ್ಲ,**
**ಹೀಗೆ ಶಾಸ್ತ್ರಗಳೆಲ್ಲ ಹೇಳುತಿಪ್ಪವು.**
**ತಿಳಿದು ಹೇಳಿದ ವೇಮನ ದೇಶಿಕಾರ್ಯ.**

**ದ್ವಿಪದಿಃ**

**"ಲೋಕಾಲೋಕವು ನಾನೇನಲ್ಲವು.**
**ನಾಕವು ಶಬ್ದವು ನಾನೇನಲ್ಲವು.**
**ಹೋಗುವ ಬರುವುದು ನಾನೇನಲ್ಲವು;**
**ತಾಕಿದೆ, ಸಿಕ್ಕಿತು, ದಕ್ಕಿತು ಎಂದಿರಿ.**
**ಏಕವನೇಕವು ನಾನೇ ಎಂದಿರಿ;**
**ಸೋಕಿದ ಮನದಲಿ ತಾಕಿದೆನೆಂದಿರಿ.**

**ಪಾಕವ ತಪ್ಪದೆ ಬಡಿಸಿರಿ ಎಂದಿರಿ.**
**ಪ್ರಾಕ್ದೆಶೆ ಉಷೆಯನು ಅರಿಯಿರಿ ಎಂದಿರಿ.**
**ನೆಪ ನೀಡಲೇಕೆ? ಸತ್ಯವ ನುಡಿದಿರಿ.**
**ಪಾಕವ ಬಯಸದೆ ಶ್ರಮಿಸಿರಿ, ಎಂದಿರಿ.**
**ಆಕಾರಗಳಿಗೆ ಆದಿಯು ಎಂದಿರಿ.**
**ಸಾಕಾರಗಳಿಗೆ ಸಾಕ್ಷಿಯು ಎಂದಿರಿ,**

— — — — — — — — — — — — — — — — — — — —

ನಿತ್ಯಾನಂದವು ನಿರ್ಮಲವೆಂದಿರಿ.
ಸತ್ಯಂ ಪರತೆಯು ಸಂಧಿಯು ಎಂದಿರಿ.
ಸಂಧಿಲಿ ವೇಮನ ಶೋಭಿಪನೆಂದಿರಿ.
ಸೋಹಂ ಭಾವದಿ ಮುಳುಗಿಹೆನೆಂದಿರಿ.

ಸೀಸ :

ಸಕಲ ವೇದಗಳ ಸಾರವಾಗಿ ಬೆಳಗುವ,
ಸದ್ಗುರು ವಾಕ್ಯವದು ಸತ್ಯವಿಹುದು.
ಮನದಲಿ ಸದ್ಭಕ್ತಿ ಮರೆಯದೆ ಮೂಡಿರಲು,
ಮಮತೆ ತೊರೆಯಲಾಗ ಮಹಿಮನಹನು.
ಚಿತ್ತ ವಿಭ್ರಮ ಭಾಷೆಯ ಚಿನ್ಮಾತ್ರದಲ್ಲಿಯೇ,
ಸೇರಿ, ಬಯಸಿದ ಮುಕ್ತಿ ಸೇರುತಿಹನು,
ಹರಿಹರಾದಿಯೆ ಇರಲಿ; ಪೊಂದಲಳವಲ್ಲ,
ಅನುಭವವೇದ್ಯವಾಗಿ ಅರಳುತಿಹುದು.

ತೇಟ:

ಅಂಥ ಸದ್ಬೋಧ ಮರ್ಮವ ಅರಿಯಬೇಕು.
ಮನಸಿನೊಳು ಕಲ್ಮಷಗಳನು ಮಾಣಬೇಕು.
ಶೀಘ್ರ ಕಾಲದಲಿ ಆತ್ಮ ಶುದ್ಧಿಯಹುದು.
ವಿಮಲ ಗುಣರಾಜೇಂದ್ರ, ವೇಮನಾರ್ಯ.

ಸೀಸ:

ಗುರುಬೋಧೆ ತಿಳಿಯದ ಕುಟಿಲ ಶಾಸ್ತ್ರಂಗಳ,
ಪರಿಕಿಸಿದೊಡೆ ಏನು ಫಲವು ಉಂಟು?
ಆತ್ಮೈಕ್ಯವರಿಯದ ಅಖಿಲ ಯೋಗಗಳು
ಸಾಧಿಸುವ ಫಲವೇನು ಸತ್ಯವಾಗಿ?
ತನ್ಮಯತ್ವವನು ತಾನರಿಯದ ನರನು
ಸೇವೆಗೆಯ್ದೊಡೆ ಏನು ಸುದ್ಧಿ ಯುಂಟೆ?
ತಮ್ಮ ಕುಂದನರಿಯದೆ, ತಾನೋದಲು ಬಹಳ,
ಓದಿನ ಫಲವೇನು ಒಪ್ಪವಾಗಿ?

ತೇಟ:

ನುಡಿದ ಸದ್ಗುರು ಬೋಧೆ ನಿತ್ಯವರಿತು,
ಮರೆಯದಿರುವಂಥವರು, ಮಾಯೆ ಜಗಕೆ
ಅಂಟರೆನ್ನುತಿಹರು, ಅಂದವಾಗಿ;
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ.

— — — — — — — — — — — — — — — — — — — — — —

ಯೋಗಿವರ್ಯರು ಕಣ್ಣು ತೆರೆದರು. ನೆರೆದ ಜನಸ್ತೋಮದತ್ತ ಕೃಪಾ ದೃಷ್ಟಿ ಹರಿಸಿದರು, ವರದ ಹಸ್ತ ಎತ್ತಿ ಅಭಯ ಮುದ್ರೆ ದಯಪಾಲಿಸಿದರು. ಜನಮಧ್ಯೆ ವಿದ್ಯುತ್ಸಂಚಾರವಾದಂತಾಯಿತು. ಗಂಭೀರತೆ ಪಸರಿಸಿತು. ಯೋಗಿಗಳು ಎದ್ದು, ಸಮಾಧಿ ಸ್ಥಳಕ್ಕೆ ಸಾಗಿ ಅಲ್ಲಿ ವೀರಾಸನದಲ್ಲಿ ಕುಳಿತು, ಇನ್ನೊಮ್ಮೆ ಜನತಾ ಜನಾರ್ದನನಿಗೆ ನಮಿಸಿ,

"ಓಂ ನಮಃ ಶಿವಾಯ" ಎಂದು ಶಿವ ಪಂಚಾಕ್ಷರಿ ಪಠಿಸಿದರು.

"ಶ್ರೀರಾಮನು ಹುಟ್ಟುವದರೊಂದಿಗೆ ತಾವು .. .." ಎಂದು ಊರಿನ ಹಿರಿಯ ಭಕ್ತ ನುಡಿದ. ಆಗ ಯೋಗಿಗಳು,

"ಜಯ ಶ್ರೀರಾಮ" ಎಂದು ಕಣ್ಣು ಮುಚ್ಚಿಬಿಟ್ಟರು, ಮುಂದೆ ರಾಮರೆಡ್ಡಿ, ವಿಧಿ ವಿಧಾನಗಳನ್ನು ಪೂರೈಸಿದನು. ಜನತೆಯೆಲ್ಲ ಏಕ ಕಂಠದಿಂದ,

**ವೇದಾತೀತನು ವೇಮನ ಕಾಣಾ.**
**ವೇಮನ ಮಾತೇ ವೇದವು ಕಾಣಾ.**
**ವೇದ ಶಾಸ್ತ್ರಗಳು ವಾದವು ಕಾಣಾ.**
**ವಾದಿಪ ಬಾಯಿಗ ಬೂದಿಯು ಕಾಣಾ.**
**ಬೇಸರಿಯದೋದೆ ಬಲು ರುಚಿ ಕಾಣಾ.**
**ಕೇಳಿದವರು ಮತ್ತೆ ಹೇಳರು ಕಾಣಾ.**

**ಹೇಳುವರಾರೂ ಮಾಡರು ಕಾಣಾ.**
**ಸಾಧಿಸಿದವರು ಸಿದ್ಧರು ಕಾಣಾ.**

**ಜಾತರ ಜಾತರ ಜಾತರ ಕಾಣಾ.**
**ಜಾತರತೀತನು ವೇಮನ ಕಾಣಾ.**
**ಎಂದು ಪಠಿಸಿದರು.**

**ಕೊನೆಗೆ ರಾಮರೆಡ್ಡಿ, ಗದ್ಗದಿತನಾಗಿ**

**"ವೇಮನೆಂಬ ಯೋಗಿ ವಾಸಿಸಿದ ಲೋಕದಿ;**
**ಪೂಜೆ ಸಲಿಸಿರವಗೆ ಪುಣ್ಯ ಪುರುಷರಿರಾ!**
**ಸಲಿಸಿದಷ್ಟು ಪೂಜೆ ಸುಖ ಶ್ರೇಯ ಲಭ್ಯ.**
**ವಿಶ್ವದಾಭಿರಾಮ ಕೇಳು ವೇಮ."**

**ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ**
**'ವೇಮನ ಮಹಾಯೋಗಿ ಚಿರಾಯುವಾಗಲಿ'**
**ಎಂಬ ಘೋಷವು ಎಲ್ಲೆಡೆ ಮಾರ್ದನಿಸಿತು.**

●●●

# ೨. ಪದ್ಯಗಳಲ್ಲಿ ಚರಿತ್ರೆ

## ಚರಿತ್ರೆ

**ತಾವರೆ ಎಲೆಯಡಿ ನೀರೆರೆ,**
**ವೇಮನ ಚರಿಸುತಲುಂಟು ಹುಡುಕುತ ಶಿವನಾ.**
**ಈ ಮಾಯೆ ನಂಬಕೂಡದು;**
**ಈ ಮಹಿಮೆ, ತಿಳಿಯಲಾರ ದೇವನು ವೇಮಾ.**

***

## ದೇಶ, ಕಾಲ

ನಂದನ ನಾಮ ಸಂವತ್ಸರವು ಅರವತ್ತು ವರ್ಷಕ್ಕೊಮ್ಮೆ ಪುನರಾವರ್ತಿಸುತ್ತದೆ. ಕ್ರಿ.ಶ ೧೪೧೨ ರಲ್ಲಿ ನಂದನ ನಾಮ ಸಂವತ್ಸರವಿತ್ತು. ಆಗ ಕಾರ್ತೀಕ ಮಾಸದ ಪೂರ್ಣಿಮೆಯಂದು ವಿಂಧ್ಯ ಪರ್ವತ ಮತ್ತು ಸೇತು ಬಂಧ ಮಧ್ಯದ ನಾಡನ್ನು ಆಧ್ಯಾತ್ಮಿಕವಾಗಿ ಬೆಳಗುವ ಮಹಾವೀರನಾದ ಯೋಗಿ ವೇಮನರ ಜನ್ಮವಾಯಿತು. ಅವರ ಮೊದಲಿನ ಊರು ಮೂಗಚಿಂತಪಲ್ಲಿ. ನಂತರ ಕೊಂಡವೀಡಿನಲ್ಲಿ ವಾಸ. ಹುಟ್ಟಿದ್ದು ರೆಡ್ಡಿ ಕುಲ.

ವೇಮನರ ಕಾಲದಲ್ಲಿ ಗಜಪತಿ ಕಪಿಲೇಶ್ವರನು ರಾಜಮಹೇಂದ್ರಿ ರಾಜ್ಯವನ್ನು ಆಕ್ರಮಿಸಿ ವಶಪಡಿಸಿಕೊಂಡನು. ಅವನು ಕ್ರೂರನು. ಗರುಡನಂತೆ ಎರಗಿ ಪ್ರಜೆಗಳೆಂಬ ಹಕ್ಕಿಗಳನ್ನು ಇರಿದನು. ಗಂಡಿಕೋಟೆಯಲ್ಲಿ ಓರ್ವ ದುರ್ಗಾಧಿಪತಿಯನ್ನು ನೇಮಿಸಿದನು. ಆ ದುರ್ಗಾಧಿಪತಿಯು ಆಡಳಿತದ ಕುದುರೆ ಸವಾರಿ ಮಾಡಲು ಅನರ್ಹನಿದ್ದನು.

ವೇಮನರ ಕಾಲದಲ್ಲಿಯೇ ಅವರ ಸೋದರತ್ತೆ ಮಲ್ಲಮ್ಮನ ಗಂಡ ಕಾಟಯ ವೇಮಾರೆಡ್ಡಿಯು ಮಂತ್ರಿಯೊಬ್ಬ ಕವಿ, ವಂದಿಮಾಗಧರ ಸ್ತುತಿಪಾಠಕ್ಕೆ ಕಿವಿಸೋಲುವವನಿದ್ದ. ಆ ರಾಯ ಭಾಸ್ಕರನ ಆಸ್ತಿ ಅವರ ಪಾಲಾಗುತ್ತಿತ್ತು ಇತರ ಜನರ ಆಸ್ತಿ ವೇಶ್ಯೆಯರ ಪಾಲಾಗುತ್ತಿತ್ತು.

ವೇಮನರ ಕಾಲದ ಇನ್ನೋರ್ವ ಹರಭಕ್ತನೆಂದರೆ ಗುಂಟುಪಲ್ಲಿಯ ಮುತ್ತನೆಂಬ ಸದ್ಗುಣಿ. ಈತನು ಗೋಲಕೊಂಡದ ಸುಲ್ತಾನನ ಮಂತ್ರಿ ಮುತ್ತಯ್ಯನ ಪೂರ್ವಜನಿರಬಹುದು.

---

೧ ನಂದನ ಸಂವತ್ಸರದಲಿ,
ಹೊಂದುವ ಕಾರ್ತೀಕ ಶುದ್ಧ ಹುಣ್ಣಿಮೆ ದಿನದೋಳ್
ವಿಂಧ್ಯಾದ್ರಿ ಸೇತು ಬಂಧನ
ಸಂದಿಯನೋರ್ವ ವೀರನಾಳ್ವ; ಸಾರೆಲೊ ವೇಮಾ

೨ ವೇಮನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲಿಸಿರವಗೆ ಪುಣ್ಯ ಪುರುಷರಿರಾ!
ಪೂಜೆ ಸಲಿಸಿದಷ್ಟು ಸುಖ ಶ್ರೇಯ ಲಭ್ಯ, ವಿಶ್ವ

೩ ಊರು ಕೊಂಡವೀಡು ವಾಸ ಪಶ್ಚಿಮ ಬೀದಿ,
ಮೂಗಚಿಂತಪಲ್ಲಿ ಮೊದಲ ಮನೆಯು,
ಮಡ್ಡ ರೆಡ್ಡಿ ಕುಲವು ಮತ್ತೆ ಹೇಳಲೇನು? ವಿಶ್ವ

೪ ಸತ್ತು ಬಿದ್ದ ಪಶುವ, ಕತ್ತು ಚರ್ಮ ಪಿಡಿದು,
ಮತ್ತೆ ಹರಿದು ತಿನುವುದು ರಣಹದ್ದು,
ಗೃದ್ಧನಂಥವ ತಾ ಗಜಪತಿಯಲ್ಲವೇ? ವಿಶ್ವ

೫ ಗಂಡಿಕೋಟೆಯೊಳಗೆ ಕತ್ತಿ ಝಳಪಿಸಲವ,
ರಾಜದಳಕಧಿಪತಿ ಎನಿಸಲೆಂತು?
ಎದುರು ನಿಂತು ರಣದಿ ವೈರಿಯಿರಿಯಬೇಕು ವಿಶ್ವ

೬ ಗಂಡಿ ಕೋಟೆಯಲ್ಲಿ ಕಸ್ತೂರಿ ಮೃಗವುಂಟು,
ರಾಜ ದೊಡ್ಡ ಅಶ್ವಾರೋಹಿಯಲ್ಲ,
ಯಾವನಿದ್ದರೇನು? ಎತ್ತಿ ಕೆಡಹುತಿಹುದು, ವಿಶ್ವ

೭ ಗಂಡಿಕೋಟೆಯಲ್ಲಿ ಕತ್ತಿ ಹಿಡಿದರೂನು,
ರಾಜ ದೊಡ್ಡ ಅಶ್ವಾರೋಹಿಯಲ್ಲ,
ಯಾವನಿದ್ದರೇನು?ಎತ್ತಿ ಕೆಡಹುತಿಹುದು, ವಿಶ್ವ

೮ ಮೆರೆವ ರಾಯನ ಕುಲ ಮಾಡಿದ ಧನವೆಲ್ಲ,
ಭಟರ ಪಾಲು, ಕವಿಗಳ ಪಾಲು; ತಿಳಿಯೆ
ತುಚ್ಛ ಜನರ ಧನವು ದಾಯಾದಿಗಳ
ಪಾಲು, ಜಾರಕಾಂತೆ ಪಾಲು, ವೇಮ

೯ ಪ್ರಕಟವಾದಂಥ ಲೋಕದಲ್ಲಿ ಗುಂಟಿ
ಪಲ್ಲೆ ಮುತ್ತನೆಂಬ ಪರಮ ಗುಣಿಯ,
ಅನ್ನದಾನದಿಂದ ಹರಿಯ ಪೂಜೆಯಿಂದ,
ಹರನ ಲೋಕದೈಕ್ಯ ಹೊಂದಿದ ವೇಮ

೧೦ ಪಾಕನಾಟಿರೆಡ್ಡಿ ಪೊಳೆವ ಮೋಟಾರೆಡ್ಡಿ
ಖ್ಯಾತ ತೋಟ – ಹಿರಿಯ ಕೆಂಪು ರೆಡ್ಡಿ
ಮೂಢರೆಲ್ಲ ಜಗದಿ ಮಿನ್ನ ಜೀವಿಸಿಪ್ಪ
ಪ್ರತಿಭೆಗೇರಿದಂತೆ ಪೊಳೆಯೊ ವೇಮ

೧೧ ಲೋಹದಿ ಮಾಡಿದ ಮೇಣದ ಕಡ್ಡಿ;
ಮನೆ ಹಿಂದಿನ ಹಾಯುವಾಕಳ ದೊಡ್ಡಿ;
ಅವುಗಳು ಮೇಯ್ದಿಹ ಹುಲ್ಲಿನ ಕಡ್ಡಿ,
ಬಿಚ್ಚಿ ಹೇಳೆಲೋ ವೇಮಾರೆಡ್ಡಿ

೧೨ ಕಾಪು ಕುಲಜರೆಷ್ಟೊ ಕರ್ಮಿಗಳಾದರೇನು?
ಪಾಪ ರಾಶಿ ಕೊಂಚ ಲೋಪವಹುದು
ಹೊಲಬನರಿಯದಂಥ ಹುಚ್ಚ ಜೀವರಷ್ಟೆ,

೧೩ ಕಲಿಯುಗದೊಳು ಮುನ್ನ ಒಕ್ಕಲಿಗರ ಕುಲಕೆ,
ಘನತೆಗಾಗಿ ವೇಮನ ಕೀರ್ತಿಯಿತ್ತ
ಭುವಿಯ ಸಕಲ ಧರ್ಮವನೆ ಸಾರಿ ಹರಡಿದ
ವಿಶ್ವದಾಭಿರಾಮ ಕೇಳು ವೇಮ

**೧೪ ಕದಿರಿ ಪೂರ್ವ ದಿಶೆಗೆ ಘನತೆಯಿಂ ಶೋಭಿಪ**
**ಬೆಳಗುತಿಹ ಕಟಾರುಪಲ್ಲೆ ಖ್ಯಾತ;**
**ಅಚಲ ನಷ್ಟೆಗೂಡಿ ಅಂದದಿದ್ದ ರಯ್ಯ**
**ಬಾಲ ಚಕ್ರ ವೇಮ ಭವ್ಯ ನಾಮ**

**ವಿಚಿತ್ರ ಅನುಭವ :**

ಸಾಕ್ಷಾತ್ಕಾರ ಹೊಂದಿದ ಸತ್ಪುರುಷರಲ್ಲಿ ಬಾಲ ಭಾವ, ಉನ್ಮತ್ತವತ್ ವರ್ತನೆ ಇಲ್ಲವೆ ಪಿಶಾಚವತ್ ವ್ಯವಹಾರವು ಕಂಡು ಬರುವುದು ತೀರ ಸಾಮಾನ್ಯ. ಲೌಕಿಕ ಗ್ರಹಿಕೆಗೆ ಮಹಾತ್ಮರು 'ಅರೆ ಹುಚ್ಚ' ರಂತೆ ತೋರಿ ಬರುತ್ತಾರೆ. ವೇಮನ ಯೋಗಿ ಅವಧೂತ ಸನ್ಯಾಸಿಗಳು. ಲಂಗೋಟಿಯೊಂದೇ ಅವರ ಉಡುಗೆ. ಹಲವರು, ತರುಣ ಯೋಗಿಗಳನ್ನು ಕಂಡು, ಇರುವ ಲಂಗೋಟಿಯನ್ನೂ ಕಳಚಿ, ಅವರ ಶಿಶ್ನದೊಡನೆ ಕೋತಿಯಾಟವಾಡಿದುದೂ ಉಂಟು.

ಅವರ ವಿಚಿತ್ರ ಕ್ರೀಡೆ ಕಂಡು, ಅವರನ್ನು ಹೊಡೆದು, ಬಡಿದವರೂ ಉಂಟು. ಆಗ ಅವರು ಮೌನವಾಗಿದ್ದುಕೊಂಡು, ತಮ್ಮ ಮಹಿಮೆಯಿಂದ ಆ ಜನರಿಗೆ ಪರಮಾತ್ಮ ಸ್ವರೂಪರೆನಿಸಿದುದೂ ಉಂಟು. ಜನರು ತನ್ನನ್ನು ಹೊಡೆದು ಬಡಿದರೆಂದು ಎಲ್ಲರನ್ನೂ ದೊಷಿಸಿವುದು ಸಲ್ಲದು. ತಪ್ಪು ಮಾಡಿದವರನ್ನು ಶಿಕ್ಷಿಸಲು ಅಖಿಲೇಶನು ಇದ್ದೇ ಇದ್ದಾನೆ. ಜನರು ತಪ್ಪು ತಿಳಿದು, ಹೊಡೆದು, ಕಟ್ಟಿ ಹಾಕಿದಾಗ ದೃಢ ಮನದಿಂದ ಶಿವನನ್ನು ನೆನೆಯಬೇಕು.

ನಗ್ನವಾಗಿರುವುದು ದೋಷವೇನಲ್ಲ. ಹಾಗೆ ನೋಡಿದರೆ, ನಿಸರ್ಗವು ತಾನೇ ಮರ್ಯಾದೆ ಮುಚ್ಚಲು ವ್ಯವಸ್ಥೆ ಮಾಡುತ್ತಿತ್ತು. ನೋಡಿ; ಪ್ರಾಣಿಗೆ ಬಾಲವುಂಟು, ಪಕ್ಷಿಗೆ ರೆಕ್ಕೆ ಉಂಟು. ಅದೇ ರೀತಿ, ಕೆಲವರು ಸೀರೆಯಿಂದ, ಕೆಲವರು ಧೋತರದಿಂದ ಮಾನ ರಕ್ಷಣೆ ಮಾಡಿಕೊಳ್ಳುತ್ತಾರೆ. ತನ್ನ ಸೂಕ್ಷ್ಮ ದೃಷ್ಟಿಯಿಂದ ಒಳಹೊರಗನ್ನೆಲ್ಲ ಅರಿಯುವ ಯೋಗಿಯು ಯಾವ ಮಾನವನ್ನು ಕಾಯ್ದುಕೊಂಡಾನು?

**೧೫ ಗೋಟಿ ಬಿಚ್ಚಿ ಯೋಗಿ ಕೋತಿಯಾಟಾಡಿಸಿ,**
**ವಿಕೃತ ಕ್ರೀಡೆಗೆಯ್ದು, ವ್ಯಥೆಗೆ ಸಿಲುಕಿ,**
**ಮಾಳ್ಪರಯ್ಯ ಏನೂ? ಮಾಳ್ಪರೇತಕೇನೊ?**

**೧೬ ಗೋಟಿ ಬಿಚ್ಚಿತೆಂದು ಕಾದಾಟವಾಡುತ,**
**ಹುಚ್ಚನೆಂದು ಊರ ಹೊರಗೆ ಹಾಕಿ,**
**ತರುಣಿಯರೆದುರು ತಾವೆ ಗೋಟಿ ಬಿಚ್ಚರೆ?**

೧೭ ಕಚ್ಚಿ ಕಳೆಯಿತೆನುತ ಕೋತಿಯಾಟವಾಡಿ,
"ಬೆಪ್ಪ ಯೋಗಿ! ಊರು ಬಿಡು" ಎನ್ನುವರು
ಯಾರೊ ಕಚ್ಚೆ ಕಳೆಯೆ, ಈ ಹೊತ್ತು ಮುಳುಗುವುದೆ? ವಿಶ್ವ

೧೮ ತಾಯಿಯುದರದಿಂದ ತಾನು ಜನಿಸಿದಾಗ,
ಆದಿಗಿಲ್ಲ ಬಟ್ಟೆ, ಅಂತ್ಯಕಿಲ್ಲ
ನಡುವೆ ಬಟ್ಟೆಯುಡಲು ನಗುಪಾಟಲಲ್ಲವೆ? ವಿಶ್ವ

೧೯ ಹುಟ್ಟಿ ಬೆತ್ತಲಾಗಿ, ಹೋಹ ಬೆತ್ತಲಾಗಿ,
ತಿರುಗುವ ಬೆತ್ತಲಾಗಿ ದೇಹಿ ಜಗದಿ
ಇರುವ ತನಕವಿರಲಿ; ಇರನು ಉಪಕಾರಿಯು, ವಿಶ್ವ

೨೦ ತನ್ನ ಹೊಡೆದು ಬಡಿದು, ತಲೆ ಮರೆಸಿ ನಿಲ್ಲಲು,
ದೂಷಣೆ ಗೈಯ್ಯುವುದು ದೊಡ್ಡ ಪಾಪ
ಅಖಿಲರನು ದಂಡಿಸೆ ಅಖಿಲೇಶನರನೇ? ವಿಶ್ವ

೨೧ ಹೊಡೆಯಲು ಬಡಿಯಲು ಕಾಣಾ
ಜಡಿದು ಬಿಗಿದು ಕಟ್ಟಿ ಕಾಣು; ಕಿರಿ ಕಿರಿ ಗೆಯ್ವರ್
ಹಿಡಿದರಸಿದರೆನ್ನುತಿರೆ,
ದೃಢ ಮನದಿ ಶಿವನ ನೆನೆಯದೆ ತೀರದು ವೇಮಾ

೨೨ ಬಯ್ದು ಹೊಡೆದರೆಂದು, ಬಳಿಕ ಮಾತು ತೊರೆದು,
ಬಾಯಿ ಮುಚ್ಚಿ ಇರಲು, ಭೂಮಿ ಮೇಲೆ,
ಪರಮಾತ್ಮನಾಗುವ; ಬಣ್ಣಿಸಲು ಶಕ್ಯವೆ? ವಿಶ್ವ

೨೩ ಕರೆದೊಡೆ ಮಾತನಾಡದೆ ಮರಳಿ ಕರೆಯೆ ಮೌನವಿರುವಾ;
ಅರಿತೊಡೆ ಯಾರೆ ಆಡಲೇನನು ಅಲ್ಲವೆಂದು ನಗುತಿಪ್ಪನ್
ಪರತತ್ವನಾತ್ಮದೊಳುವಿಚಾರಿಸಿ ನಿತ್ಯವು ತಾನೆಯಿಪ್ಪ ಸದಾ
ಅರಿತಿಹ ಯೋಗಿ ವೇಮನ ಗತಿಯು ಶಿವರೂಪವೆ ಸರ್ವ ತಾಣದೋಳ್

— — — — — — — — — — — — — — — — — — — — — —

೨೪ ಪಕ್ಕ ಕೆಲಕೆ ಉಂಟು; ಬಾಲ ಕೆಲಕೆ ಉಂಟು,
ಕೆಲರಿಗುಂಟು ಸೀರೆ, ಕೆಲರಿಗೆ ಪಂಜೆ,
ಕೆಲವು ಆಗಿ ಇಹುವು, ಗುರುತು ಮುಚ್ಚಿಕೊಳಲು, ವಿಶ್ವ

೨೫. ಕೂಳು ಹಾಳು ಮಾಡಿ, ಗುಡಿಯನೆ ಆಶ್ರಯಿಪ,
ಅಂತೆ ಬ್ರಹ್ಮ ಬರೆದ; ಅವರ ಹಣೆಗೆ
ತೋಯಜಾಕ್ಷಿಯ ಸೇರೆ, ದೋಷಗಳೇನುಂಟು? ವಿಶ್ವ

೨೬ ಪ್ರಾಣಿಗುಂಟು ಬಾಲ; ಪಕ್ಷಿಗುಂಟು ರೆಕ್ಕೆ;
ಉಡಿಗೆ ಅಂತೆ ಉಂಟು; ಉರ್ವಿಜನಕೆ
ಮಾನ ರಕ್ಷಣೆಯೇ ಮರ್ಯಾದೆಯೆನಿಪುದು, ವಿಶ್ವ

೨೭ ಪರಮಾತ್ಮನ ಚಿಂತನದೋಳ್,
ನಿರುತವು ಮನದೊಳಗಿದ್ದೊಡೆ, ಧರೆಯೊಳಗೋರ್ವಂ
ತಿರಿಪೆಯನೆತ್ತಿ ಭುಜಿಸುವನು;
ದೊರೆತಿಹ ಗೃಹ ವೇದಿಕೆಯಲಿ ತಂಗುವ, ವೇಮಾ

ಪರಮಾತ್ಮನ ಚಿಂತನದಲ್ಲಿಯೇ ಒಬ್ಬನು ಇರುವಾಗ ಅವನಿಗೆ ಐಂದ್ರಿಯಿಕ ಸುಖಭೋಗಗಳತ್ತ ಮನ ಹರಿಯದು; ದೇಹ ಪಾಲನೆಗಾಗಿ ತಿರಿದು ತಂದ ಭಿಕ್ಷಾನ್ನವೇ ಸಾಕು; ಮಲಗಲು ಯಾವುದಾದರೂ ಮನೆಯ ಮುಂದಿನ ಕಟ್ಟೆಯಾದರೂ ಸಾಕು.

'ಹಸಿವಾದೊಡೆ ಭಿಕ್ಷಾನ್ನಗಳುಂಟು; ತೃಷೆಯಾದೊಡೆ ಕೆರೆ ಭಾವಿಗಳುಂಟು; ಶಯನಕ್ಕೆ ಹಾಳು ದೇಗುಲಗಳುಂಟು; ಆತ್ಮ ಸಂಗಾತಕ್ಕೆ, ಚೆನ್ನ ಮಲ್ಲಿಕಾರ್ಜುನ ಎನಗುಂಟು' ಎಂದು ಇನ್ನೋರ್ವ ನಗ್ನ ಶರಣೆ ಹಾಡಿಲ್ಲವೇ?

**ಲೋಗರ ಗ್ರಹಿಕೆ:**

ಲೋಗರು ತಮ್ಮವೇ ಹಲವು ಗ್ರಹಿಕೆಗಳನ್ನು ಹೊಂದಿರುತ್ತಾರೆ. ಪ್ರಕೃತಿಯ ತ್ರಿಗುಣಗಳ ಎಳೆತ ಸೆಳೆತಕ್ಕೆ ಸಿಲುಕಿದ ಕರ್ಮ ಸಂಬುದ್ಧರು, ಪ್ರಕೃತಿಯಿಂದ ಅತೀತನಾದ ಜ್ಞಾನಿಯನ್ನು 'ಹುಚ್ಚ' ಎನ್ನುತ್ತಾರೆ. ಏಕೆಂದರೆ, ಗುಣಗಳಿಂದ ಪ್ರಭಾವಿತರಾಗಿ ವರ್ತಿಸುವವರಿಗೆ ಗುಣಾತೀತನ ವ್ಯವಹಾರಗಳು ವಿಚಿತ್ರವೆನಿಸುತ್ತವೆ ಹುಚ್ಚುಚ್ಚಾರ ಎನಿಸುತ್ತವೆ.

ಯೋಗಿ ವೇಮನರು ಕೆಸರು ತಟ್ಟದ ಕಮಲದ ಎಲೆಯಂತೆ ಈ ಪ್ರಪಂಚದಲ್ಲಿ ಬಾಳುವುದನ್ನು ಅರಿತಿದ್ದಾರೆ. ಅವರಿಗೆ ಈ ಲೋಕಮಾಯೆ ತಟ್ಟದು. ಶಿವನ ಧ್ಯಾನದಲ್ಲಿಯೇ ಸದಾ ಮಗ್ನರಾದ ಅಂತರ್ಮುಖಿಗಳವರು.

ಅವರಿಗೆ ಹರಕು ಬಟ್ಟೆಯೇನು? ರೇಶ್ಮೆಯ ಪೀತಾಂಬರವೇನು? ಜನರು ಬಟ್ಟೆ ನೋಡುತ್ತಾರೆಯೇ ಹೊರತು ಅಂತರಂಗದ ಜ್ಞಾನಮಹಿಮೆಯನ್ನಲ್ಲ. ಜ್ಞಾನಿಯ ಬಾಳು ಹಕ್ಕಿಯ ಬಾಳಿನಂತೆ. ಅವುಗಳ ಇರವು ಅಂದ-ಚಂದ. ದೇವ ಕೊಡದ ಸೊಗಸನ್ನು ಬಯಸದೆ, ತಮಗೆ ಲಭ್ಯವಾದುದರಲ್ಲಿ ಸಂತೃಪ್ತಿ ಹೊಂದಿ ಉಲಿಯುವ ಪಕ್ಷಿಗಳಂಥ ಬಾಳು ಅವರದು.

೨೮ ಕಡು ಜ್ಞಾನವಂತನ ಕರ್ಮ ಸಂಬುದ್ಧರು,
ಹುಚ್ಚನೆನ್ನುತಿಹರು ಪ್ರಕೃತಿ ಬಿಡದೆ,
ಹುಚ್ಚಿರದೆ, ಪ್ರಕೃತಿ ಹುಡುಕಲು ಸಿಗುವುದೇ? ವಿಶ್ವ

೨೯ ಕಾಯವಿರುವಾಗಲೇ ಕಾಮಾದಿಯ ಕೊಚ್ಚಿ,
ಜ್ಞಾನಮಾರ್ಗದತ್ತ ಸರಿಯಬೇಕು.
ತಡವಾದರೆ, ಕಾಯ ಮಾಗಲೇನು ಫಲವು? ವಿಶ್ವ

೩೦ ತಾವರೆ ಎಲೆಯಡಿ ನೀರಂತೆ,
ವೇಮನ ಚರಿಸುತಲುಂಟು ಹುಡುಕುತ ಶಿವನ
ಈ ಮಾಯೆ ನಂಬಕೂಡದು;
ಈ ಮಹಿಮೆ, ತಿಳಿಯಲಾರ ದೇವನು ವೇಮಾ

೩೧. ಕಂಡು ಹರಕು ಬಟ್ಟೆ, ಘನತೆಯಿಂದ ನುಡಿಯ,
ಕಾಣರಲ್ಲ ಒಳಗೆ ಘನತೆಯನ್ನು
ಜಂಗಮನಿರಲೇನು? ಜಾತಿ ಎಣಿಕೆ ಎಂತು. ವಿಶ್ವ

೩೨ ತತ್ತ್ವವಿಂದ್ರಿಯಗಳ ದಾರಿ ಕೆಡು ಗೆಲಲು,
ತತ್ತ್ವವೇತ್ತನಿರಲಿ ತಾನಾಗುವ
ರಾಜಯೋಗಿಯೆನಿಪ ತೇಜದಿಂದ ಕೂಡಿ,
ಬಾಳುತಿಹನು, ಜಗದಿ ಕೇಳು ವೇಮ

೩೩ ಅಳಿಯನಾದರೇನು? ಅನ್ಯನಾದರೇನು?
ಹೇಳುವಂಥ ರೀತಿ ಹೇಳುತಿಹೆನು.
ಹರನಿಗರಿಯದಂತೆ ಮರದೆಲೆಯು ಅಲುಗದು ವಿಶ್ವ

೩೪ ಖಗಗಳಿರವು ಚೆಂದ, ಕಾಣಲಂದವಹುದು;
ಗುಂಪು ನೋಡಿದೊಡನೆ ಗೊತ್ತಾಗದೆ?
ದೇವ ಕೊಡದ ಸೊಗಸು ತಾನು ಬಯಸಲೇಕೆ? ವಿಶ್ವ

೩೫ ಶಿವಕವಿಗಳ ನವಕವಿಗಳ
ಶಿವಭಕ್ತಿಯೆ ತತ್ತ್ವಗಳಿಗೆ ಚಿಂತಾಮಣಿಯೈ
ಶಿವಲೋಕದ ಪ್ರಮಥರಿಗೆ,
ಶಿವನಿಗೆ, ಗುರುವಿಗೆ ಶರಣೆಂದೆನ್ನಲೊ ವೇಮಾ

೩೬ ರವಿ ಕಾಣುದುದ ಕವಿಯರಿವ,
ಕವಿಯರಿಯದ ತಾಣವ ರವಿಗಾಣನು ಧರೆಯೊಳ್
ರವಿಗಿಂತ ಮಿಗಿಲು ಮೇಲ್ಮೆಯ
ಕವಿಯೇ ಹೊಳೆಯುವನು, ನೀವು ಕಾಣಿರೆ, ವೇಮಾ

೩೭ ತೋಟದಿಂದ ಕಾಯಿಪಲ್ಯೆ ಹಸಿರುಸೊಪ್ಪು,
ರೊಟ್ಟಿಚೂರು, ತೌಡು ಸಿವುಡು ಸಾಕು;
ಚಾಟು ಪದ್ಯ ಬರೆವ ಕವಿಯು ಧನದ ದಾಸ ವಿಶ್ವ

೩೮ ಜ್ಞಾನಿಯಾದ ನರನು ಘನ ತೇಜವಂತನು;
ಪೂರ್ಣ ಸುಖವ ಹೊಂದಿ, ಹುಟ್ಟುತಿಹನು
ತಾನು ತನ್ನ ರೀತಿ, ತನ್ನೊಳು ಬೆಳಗುವನು ವಿಶ್ವ

೩೯ ನುಡಿಯೆಂಬೆನೊ ದೇವ, ನುಡಿಯಲೊಲ್ಲೆಯೇಕೆ?
ನುಡಿಯೆನ್ನನೆ ಕುರಿತು ಪ್ರಬಲ –ವಾಕ್ಯ
ನುಡಿಯಯ್ಯ! ನಿನ್ನ ಧ್ವನಿ ನಾನು ಅರಿವೆ ವಿಶ್ವ

— — — — — — — — — — — — — — — — — — — — — —

೪೦ ನಿರ್ಮಲ ಸಮಾಧಿಯಿಂದ
ಕರ್ಮವ ತೊಲಗಿಸಿ, ನಿನ್ನೊಳು ನೂಕುತ ಇರಲಾ
ನಿರ್ಮೋಹವಾದ ಗುಣವಿಹ,
ಧರ್ಮವ ಪರಿಪೂರ್ಣವಾಗಿ ತಲುಪೈ ವೇಮಾ

೪೧ ನೋಡಲು ಕಾಣಲಾರ; ಗಗನವು ಭಂಗಿಸಲು,
ಕಡು ತೆರೆಗಳಿರದ ಕಡಲ ರೀತಿ.
ನಿರ್ವಿಕಾರದಲ್ಲಿ ನಿಶ್ಚಲತ್ವದಿ ತಾ–
ನಿರಲು ಇಹುದು ಮುಕ್ತಿ, ಅರಿಯೊ ವೇಮ

೪೨ ಮಾತನಾಡಬಹುದು ಮರ್ಮವರಿತ ಬಳಿಕ,
ಸಣ್ಣ ದೊಡ್ಡ ತನದ ಗಣನೆಯೇಕೆ?
ಬಾಲನ ಕೈದೀಪ ಬೆಳಗದೆ ಬೃಹದಾಗಿ? ವಿಶ್ವ

೪೩ ಸ್ವಾನುಭೂತಿಯಿರದೆ ಶಾಸ್ತ್ರ ನಂಬಿ ಕೂಡೆ,
ಸಂಶಯವು ತೊಲಗದು ಸಾಧಕನಿಗೆ
ಚಿತ್ರ ದೀಪದಿಂದ ಕತ್ತಲಳಿಯದಂತೆ. ವಿಶ್ವ

೪೪ ನಾಚುಗೆಯನು ಎಲ್ಲಿ ನಿಶೆ ಬಚ್ಚಿಡಲೆಲ್ಲಿ?
ಹಸಿವೆಯೆಲ್ಲಿಡುವುದು? ಹೃದಯದೊಳಗೆ;
ಬಚ್ಚಿಟ್ಟ ನಿದ್ರೆಯು ಬಚ್ಚಿಟ್ಟಿಹುದ ತಿಳಿ ವಿಶ್ವ

೪೫ ನಾಚಿಗೆಯುಳ್ಳವರು, ನಾಡಿನೊಳಿರುವವರು,
ಹುಚ್ಚು ವೇಮನೆಂದು ಹೆದರುತಿಹರು
ತನಗಿಪ್ಪ ನಾಚಿಗೆ ದೈವಕ್ಕೆ ತಿಳಿವುದು ವಿಶ್ವ

೪೬ ಲಜ್ಜೆ ಲಜ್ಜೆಯೆನುವ; ಲಲನೆ ಮೇಲಾಶಿಸಿ,
ಲಜ್ಜೆಗೆಟ್ಟು ತಿರುಗಲೇಕೆ ಮದದಿ
ಲಜ್ಜೆ ತಿಳಿದೊಡೇನು ಲಲನೆಯ ಮುಟ್ಟುವನೆ? ವಿಶ್ವ

— — — — — — — — — — — — — — — — — — — — — —

೪೭ **ಸಿಗ್ಗು ಉಳ್ಳವರೆನೆ, ಸೃಷ್ಟಿಯಲ್ಲಿ ಇಹರು**
**ಹುಚ್ಚು ವೇಮನೆಂಬ ಅಚ್ಚರಿಯದು!**
**ತನಗೆ ಇರುವ ಲಜ್ಜೆ ದೈವವರಿಯದೇನು?** ವಿಶ್ವ

೪೮ **ತನುವಿನೊಳಗೆ ಹುಡುಕಿ, ದೈವವನು ಗ್ರಹಿಸಿ,**
**ಮುಂಚಿನ ಕರ್ಮಗಳ ಮೂಲ ನೂಕಿ;**
**ಮನಸು ನಿಜವಗೆಯ್ದು, ಮಮತೆಯೆಲ್ಲ ತ್ಯಜಿಸು** ವಿಶ್ವ

**ಪದ್ಯ ಸಂಖ್ಯೆ:**

ವೇಮನ ಕವಿಗಳನ್ನು ದಾರ್ಶನಿಕ ಕವಿಗಳೆಂದು ಪರಿಗಣಿಸಬಹುದು. ಅವರು ಲೌಕಿಕ ಸಾಹಿತ್ಯವನ್ನು ವಿಪುಲವಾಗಿ ರಚಿಸಿದ್ದರೂ ಪ್ರತಿಯೊಂದು ಪದ್ಯವು ಆಧ್ಯಾತ್ಮಿಕ ತಿರುವು ನೀಡುತ್ತಿದೆ. ಬರಹವನ್ನು ರಾಜ–ಶ್ರೇಷ್ಠಿಗಳ ಮನರಂಜನೆಗಾಗಿ ಅವರು ಬರೆಯಲಿಲ್ಲ. ಅವರ ಬರಹವು ಲೌಕಿಕವಿದ್ದಲ್ಲಿ ನೀತಿ ಪರವಿದೆ. ಆಧ್ಯಾತ್ಮಿಕವಿದ್ದಲ್ಲಿ ದಾರ್ಶನಿಕವಿದೆ. ಅವರು ಒಟ್ಟು ಹದಿನೈದು ಸಾವಿರ ಪದ್ಯ ರಚಿಸಿದ ಬಗ್ಗೆ ಒಂದೆಡೆ ಬರೆದಿದ್ದಾರೆ. ಹಲ ಸಹಸ್ರ ಬರೆದುದಾಗಿ ಇನ್ನೊಂದೆಡೆ ಹೇಳಿದ್ದಾರೆ. ಅಷ್ಟೇ ಅಲ್ಲದೆ ಬರೆಯದ ಸಹಸ್ರಾರು ಪದ್ಯಗಳು ಇವೆಯೆಂದು ತಿಳಿಸಿದ್ದಾರೆ. ಕೆಲವು ವಿಷಯಗಳನ್ನು ಶತಸಂಖ್ಯೆಯ ಪದ್ಯ ಗುಚ್ಚದಲ್ಲಿಯೂ ಸಂಕಲಿಸಿದ್ದಾರೆ.

ವೇಮನ ಯೋಗಿಯ ಸಾವಿರ ಪದ್ಯಗಳನ್ನು ಸದ್ಭಕ್ತಿಯಿಂದ ಪಠನ ಮಾಡಿದವರಿಗೆ ಮೋಕ್ಷ ಪ್ರಾಪ್ತಿಯಾಗುವದೆಂಬ ಫಲಶ್ರುತಿಯನ್ನು ಸೂಚಿಸಿದ್ದಾರೆ. ಹಾಡಿನಲ್ಲಿ ಅನುರಕ್ತಿ ಹೊಂದಿ, ರಮ್ಯವಾಗಿ ಬರೆದು, ಶ್ರವಣ ಮಾಡಲು ಜನರು ಈಶನಲ್ಲಿ ಶ್ರದ್ಧೆ ತಾಳಿ, ಭಕ್ತಿ ಹೊಂದುತ್ತಾರೆ. ಭಕ್ತಿಯಿಂದ ಮುಕ್ತಿ ಮೋಕ್ಷಗಳಿಗೆ ದಾರಿಯನ್ನು ಕಂಡುಕೊಳ್ಳುತ್ತಾರೆ. ಪ್ರಸ್ತುತ ವೇಳೆಯಲ್ಲಿ ಈ ಪದ್ಯ ಪಠಿಸಿದರೆ, ಯಾವ ಪದ್ಯವೂ ಲೇಸೆನಿಸುವುದು. ಸುರತ ವೇಳೆಯಲ್ಲಿ ಲಲನೆ ಲಲ್ಲೆಗಿಳಿದಂತೆ.

೪೯ **ಶ್ರೀಕರ ಶಿವತತ್ತ್ವ ಶೀಲನೈ ವೇಮನನ**
**ಹದಿನೈದು ಸಾಸಿರ ಪದ್ಯಗಳನು**
**ಲೋಕದಲ್ಲಿ ಪಠಿಸೆ ಪ್ರಾಕೃತರು ದಡ ಸೇರಲ್ಕೆ** ವಿಶ್ವ

೫೦ **ವೇಮ ಹಾಡಿದ ಹಲ ಸಾಸಿರ ಪಂದ್ಯಗಳ**
**ತಪ್ಪನುಳಿದು ಕಂಡು ಒಪ್ಪು ತಿಳಿದು,**
**ಗುಣ ಗುರಿಯರಿತೋದಿ ಗಳಿಸು ವಿದ್ಯೆ ಬುದ್ಧಿ** ವಿಶ್ವ

---

೫೧ ಸಾಸಿರ ಪದ್ಯಗಳ ಸದ್ಭಕ್ತಿ ವಿವೇಕದಿ,
ಪಠಿಸುವಂಥ ಪರಮ ಭಕ್ತ ಜನಕೆ,
ಅವಗತವದು ಮೋಕ್ಷ ಅವರಂಗೈಯೊಳಗೆ ವಿಶ್ವ

೫೨ ಸಾಸಿರ ಪದ್ಯಗಳ ಶುದ್ಧ ಭಕ್ತಿಯಿಂದ,
ಪಠನ ಗೆಯ್ಯುವಂಥ ಭಕ್ತ ಜನಕೆ,
ತಪ್ಪದೇ ಮೋಕ್ಷ ಪದವಿ ಅಂಗೈಲಿಹುದು ವಿಶ್ವ

೫೩ ಸಾವಿರವಿಧಗಳರಿ; ವೇಮನ ಪದ್ಯಗಳು,
ಅರ್ಥವೀವವನೆ ಅರಸಿ ನೋಡೆ,
ನೋಡು ನೋಡಲುಂಟು, ಅದ್ಭುತ ಜ್ಞಾನವು! ವಿಶ್ವ

೫೪ ಶ್ರೀಕರ ಪರತತ್ವ ಶೀಲನ್ವೆ ವೇಮನ,
ಲಿಖಿತ ಸಾವಿರಾರು ಪದ್ಯ ಸಮುಚ್ಚಯವ,
ಲೋಕವೆಲ್ಲ ಓದಿ ಒಳಹೊರ ತಮವಳಿಯಲಿ ವಿಶ್ವ

೫೫ ನೀತಿ ವೈರಾಗ್ಯ ಭಕ್ತಿ ವಿನೀತ ಜನರಿಗೆ
ಘಾತುಕರಿಗಲ್ಲದೆ, ಜ್ಞಾನ ಸಂಕಲಿತ ಜನಕೆ
ಬರೆದಿರುವಂಥ ಪದ್ಯಗಳು ಸಾವಿರ ಸಂಖ್ಯೆ;
ಚೇತನ ಹೊಂದಿ ವೇಮನ ಸಾರಿದಿಹದಿ

೫೬ ಸಾವಿರ ಪದ್ಯಗಳ ವಿವೇಕಿ, ಭಕ್ತಿಯಿಂ
ಪಠಣ ಗೆಯ್ಯುವಂಥ ಭಕ್ತಕುಲಕೆ,
ಪ್ರಾಪ್ತವಿಹುದು ಮೋಕ್ಷಪದವಿ ಅಂಗೈಯಲಿ ವಿಶ್ವ

೫೭ 'ಶ್ರೀಕರ, ವೇಮನ ಪೇಳಿದಂಥ,
ಪದ್ಯಗಳನಾರಾದರೂ ಪಠಣಗೆಯ್ಯ,
ಅಂಥ ಪುರುಷಗೆ ಮನದಿ ಅಂದವಾಗಿ,
ಹೇಳಲಾರದಂಥ ಪದವಿ ಪ್ರಾಪ್ತ ವೇಮ

೫೮ ಶತ ಸಂಖ್ಯ ಪದ್ಯಗಳನೇ,
ಮತಿವಂತರು ಪಠಣ ಗೆಯ್ಯೆ ಮಮತೆಯು ಅಳಿಗುಂ
ಆತಗೆ ಚತುರ್ವಿಧ ಮುಕ್ತಿ,
ಶ್ರೀಕಂಠನ ಪದ ಸೇರ್ವುದು, ಸಿದ್ಧವು ವೇಮ

೫೯ ವೇಮನ ಪದ್ಯಗಳೆಲ್ಲವ
ಸೌಮ್ಯದಿ ಓದುತಿರುವಂಥ ಸಜ್ಜನರೆಲ್ಲರ್,
ಸೋಮನು ತಲೆಯೊಳಗಿರುವನ
ಸಾಮಿಪ್ಯವ ಹೊಂದುತಿಹರು ಸತ್ಯವು ವೇಮಾ

೬೦ ವೇಮನ ಹೇಳಿದ ಮಾತದು,
ಸಾಮವಹುದು; ಸಕಲ ವೇದ ಸಾರವೆನಿಸದದೇಂ?
ಸಾಮದಿ ಪಂಚಾಕ್ಷರಿಯಿಂ
ನೀ ಮಹಿಮೆಯ ತಿಳಿದಿರುವುದು, ಇಂಪದು ವೇಮಾ!

೬೧ ಇಹ ಪರಂಗಳಿಗೆ ಇದುವೆ ಸಾಧನವೆಂದು,
ಬರೆದು, ಓದಿ ಕೇಳಿದವರಿಗೆಲ್ಲ
ಮಂಗಳಾದಿಯುಂಟು; ಮಹಿಯೊಳಗೆ ನಿಜವಿದು ವಿಶ್ವ

೬೨ ಮುಕ್ತಿ ಮಾರ್ಗಗಳಿಗೆ ಮೂಲವಾದ ತಕ್ಕ
ಗ್ರಂಥವೆಲ್ಲ ಜನರು ಕಡೆಗೆ ಓದೆ,
ಕೇಳುವವರಿಗೆಲ್ಲ ವಿಭವಗಳಾಗುವವು ವಿಶ್ವ

೬೩ ರಕ್ತಿಯನುಳ್ಳ ಹಾಡನು ರಮ್ಯತೆಯಿಂದ ಬರೆದು ಕೇಳಲಾ
ಶಕ್ತಿಯೊಂದಿಗೆ ಈ ಪ್ರಜರುಗಳೆಲ್ಲರೂ ಶ್ರದ್ಧೆಯೊಡಗೂಡಿ ಪಾಡುವರ್;
ಮುಕ್ತಯೆಂಬುದು ಸಿಕ್ಕುವುದು ಮೋಕ್ಷಕೆ ದಾರಿಯು ನಿನಗೆ ದೊರೆವುದೈ;
ಭಕ್ತಿ ಚಿನ್ಮಯದಲ್ಲಿ ಪಕ್ವ, ಫಲ ಸಿಕ್ಕುವುದು ವೇಮ

೬೪ ಅರಿಯೆ, ವೇಮಣ್ಣ ಹೇಳಿದ ಆತ್ಮ ವಿಧವ
ತಿಳಿಯಲಾರದಂಥ ಅಜ್ಞಾನಿ ತುಚ್ಛರೆಲ್ಲ;
ತಲೆಯ ಮೇಲಿಟ್ಟಿಹ ಕೂದಲು ಗತಿಯೊಳಷ್ಟೆ
ಭುಕ್ತಿಮುಕ್ತಿಯ ಹೊಂದಲಾರರೈ ವೇಮ

೬೫ ಪ್ರಸ್ತುತಾದಿ ವೇಳೆ, ಪದ್ಯಗಳ ಪಠಿಸಲು,
ತಪ್ಪು ಇದ್ದರೆನೂ ಒಪ್ಪೆನಿಪವು
ಲಲನೆ ಸುರತ ವೇಳೆ ಲಲ್ಲೆ ಹೊಡೆಯುತಿಹಳು ವಿಶ್ವ

೬೬ ರಾಜಗೀರವಿರಲಿ, ರುದ್ರಾಕ್ಷಿ ಹೂವಿರಲಿ,
ತಿನಲು ರೊಟ್ಟಿ ಇರಲಿ, ತೌಡು ಇರಲಿ;
ಕಾವ್ಯ ನುಡಿವ ಕವಿಯ ಕರ್ಮವೇನೆನುವುದು? ವಿಶ್ವ

❖❖❖

# ೩. ಧರ್ಮವರ್ಗ

## ಗೃಹಸ್ಥ

**ಕಿವಿಯ ಗೂಡು ಗೆಯ್ದು ಕೂಗಿದನು ವೇಮನ;**
**ಬಟ್ಟ ಬಯಲೊಳುಂಟು ಬ್ರಹ್ಮವೆಂದು**
**ಹೊಳೆಯ ಬುದ್ಧಿಗದನೆ ಹೊಂದಿ ಸುಖಿಸಬಹುದು**
**ವಿಶ್ವದಾಭಿರಾಮ ಕೇಳು ವೇಮ**

❖❖❖

## ಧರ್ಮ ವರ್ಗ–ಗೃಹಸ್ಥ

**ದೇವರು:**

ದೇವರು ಒಬ್ಬನೇ. ಅವನನ್ನೇ ಬೇರೆ ಬೇರೆ ಜನರು ಬೇರೆ ಬೇರೆ ಹೆಸರುಗಳಿಂದ ಕರೆದಿದ್ದಾರಷ್ಟೇ. 'ಏಕಂ ಸತ್, ಬಹುಧಾ ವದಂತಿ ವಿಪ್ರಾಃ' ಎಂದು ಶ್ರುತಿಯೂ ಸಾರಿದೆ. ಆದರೆ, ಈ ದೇವರ ಬಣ್ಣನೆಯು ಏಕ ದೇವ ಕಲ್ಪನೆಗೆ ಎಳೆದೊಯ್ಯುವಂತಿರಬೇಕೇ ಹೊರತು, ಭಿನ್ನತೆಗೆ ಎಳೆದು ತರಬಾರದು.

ದೇವರನ್ನು ಕಲ್ಪಿಸುವುದಾದರೆ ಹೇಗೆ ಕಲ್ಪಿಸಬೇಕು? ಅವನ ವಿಶಾಲತೆ, ವಿಸ್ತಾರಗಳೇನು? ಅವನ ಮೂಲ ಕಾರ್ಯವೇನು? ಕಾರ್ಯ ವಿಧಾನವೇನು? ಆ ವಿಧಿಯು ಮಾನವನ ಬದುಕನ್ನು ಹೇಗೆ ನಿರೂಪಿಸುತ್ತಿದೆ? ಅವನಿರುವುದೆಲ್ಲಿ? ಅವನ ಮಹಿಮೆಯೇನು?

ಆ ಮಹಿಮನ ನೆರಳಲ್ಲಿ ನಾವು ನಮ್ಮ ಬಾಳಿನ ಬೇಗೆಯನ್ನು ತಣಿಸಿಕೊಳ್ಳಬೇಕು. ಹೇಗೆ ಚಿಂತೆಯನ್ನು ದೂರಗೊಳಿಸಿಕೊಳ್ಳಬೇಕು? ಭಕ್ತಿ ಶ್ರದ್ಧೆಗಳನ್ನು ಹೊಂದುವ ಪರಿಯೆಂತು? ಎಂಬುದನ್ನು ವೇಮನ ಯೋಗಿಗಳು ಕ್ರಮವಾಗಿ ತಿಳಿಸಿದ್ದಾರೆ.

**೬೭ ಟೀಕೆ ಬರೆಯುವಂಥನೇಕ ಹಿರಿಯರೆಲ್ಲ,**
**ಲೋಕಕೆ ಹೇಳಿದರು, ಏಕ ದೇವ**
**ಕಾಗೆಯಂಥ ಜನರು ಕಾಣರಿದರ ಭಾವ ವಿಶ್ವ**

— — — — — — — — — — — — — — — — — — — — —

೬೮ ಧ್ವಜವನೆತ್ತಿ ಸಾರು ದೇವನೊಬ್ಬನೆಂದು
ನಿಜವಿದಿಹುದು ಒಳಗೆ ನಿಂತಿರುವನು
ಚೊಕ್ಕ ನೋಡಲವನ ಸಂತಸದಿ ಮುಳುಗುವೆ ವಿಶ್ವ

೬೯ ಕಿವಿಯ ಗೂಡು ಗೈದು, ಕೂಗಿದನು ವೇಮನ;
ಬಟ್ಟ ಬಯಲೊಳುಂಟು ಬ್ರಹ್ಮವೆಂದು;
ಹೊಳೆಯೆ ಬುದ್ಧಿಗದನೆ, ಹೊಂದಿ ಸುಖಿಸಬಹುದು ವಿಶ್ವ

೭೦ ಏಕ ಬ್ರಹ್ಮವು ನಿತ್ಯವು;
ವೈಕಲ್ಪಿತವಾದಂಥ ವಸ್ತುಗಳೆಲ್ಲಂ
ಏಕತ್ವದೊಳಗೆ ಅರಿತೊಡೆ,
ಶೋಕವಿರದಂಥ ಮುಕ್ತಿಯು, ಸುಲಭವು, ವೇಮಾ

೭೧ ನಿಖಿಲಾಕಾರನು ಆತನು,
ನಿಖಿಲಾತ್ಮನು ಸರ್ವಸಾಕ್ಷಿ, ನಿಜದಲಿ, ತಾನೈ
ನಿಖಿಲದ ಒಳಗೇ ನೋಡಲು,
ನಿಖಿಲಾಗಿ ಉಂಟು ತಾನೇ, ನಿಜವಿದು, ವೇಮಾ

೭೨ ಅಖಿಲಾಕಾರನು, ಅನಂತನು,
ಸಕಲಾತ್ಮಕತೆಯಲ್ಲಿ ಸರ್ವ ಸಾಕ್ಷಿಯು ತಾನೇ
ನಿಖಿಲವದು ನಿರ್ವಿಕಾರವು
ನಿಕರವು ಬ್ರಹ್ಮವು ಎನುವುದು, ನಿಜವೈ, ವೇಮಾ

೭೩ ಕಮಲ ಭವಾಂಡವು ಸರ್ವವು,
ವಿಮಲವಹ ಸುಜ್ಞಾನಿಯೆಲ್ಲ ವೀಕ್ಷಿಸುತಿಪ್ಪರ್,
ವಿಮಲ ಮನವ ಹೊಂದಿರುತಿರೆ,
ಸುಮಹಿತ ಪಿಂಡಾಂಡವೆಂದಿಗೂ ಕಾಣು ವೇಮಾ

೭೪ ಕಮಲ ಭವಾಂಡವನೆಣಿಸಲು,
ವಿಮಲವಿಹ ಸುಜ್ಞಾನಿ ಸಕಲರೀಕ್ಷಿಪರಯ್ಯಾ;
ವಿಮಲವಿಹ ಮನವಿರುವಾಗ,
ಸಮನಾಗಿಯೆ ಪಿಂಡಾಂಡವ, ಸಾರೆಲೊ, ವೇಮಾ;

೭೫ ದೇವನೆನಲು ಬೇರೆ ದೇಶದಲ್ಲಿ ಇಹನೆ?
ದೇಹಿಯೊಡನೆ ಸತತ ದೇಹದಲ್ಲಿ
ಹತ್ತಿ ವಾಹನಗಳ ಹೊಡೆದುಕೊಂಡು ಹೋಗು ವಿಶ್ವ

೭೬ ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಪನು ಚೊಕ್ಕ ವಿಷ್ಣುವಿರೆ ಮತ್ತಾ
ವಿಶ್ವವ ಅಳಿಸುವ ಹರನೆನೆ
ವಿಶ್ವೇಶನಿಗಿಷ್ಟು ಹೆಸರು, ವಿನುತವು, ವೇಮಾ

೭೭ ವಿಶ್ವ ನಡೆಸುವವನು ವಿಶ್ವೇಶ್ವರನಿರಲು,
ಪ್ರಭುವು ನಾನು ಎಂದು ಪೇಳಲೇಕೆ?
ವನದೊಳಗಿಹ ಕೋತಿ ವಸುಧೆ ನಡೆಸಬಹುದೆ? ವಿಶ್ವ

೭೮ ವಿಶ್ವದ ಒಳಹೊರ ತಾನೇ
ವಿಶ್ವಾತೀತನು; ಮೇಣಾ ವಿಶ್ವಂಭರನೈ
ವಿಶ್ವಗಳಿಗೆ ಬೇರಾಗುತ,
ವಿಶ್ವದೊಳಗೆ ಬೆಳಗುತಿರುವ ಶಾಸ್ವತ ವೇಮಾ

೭೯ ಬ್ರಹ್ಮಾಂಡವೆ ದೇಹ, ಪ್ರಾಣವೆನಲು ಗಾಳಿ,
ಕಣ್ಣುಗಳು ರವಿ ಚಂದ್ರ, ಗೌರವವಿದು
ಇದಕಿಂತ ಬ್ರಹ್ಮ ಇರುವುದೇನು ಬೇರೆ? ವಿಶ್ವ

೮೦ ಬ್ರಹ್ಮ ಘಟವು ದೇಹ, ಪ್ರಾಣವೆನಲು ಗಾಳಿ,
ನೇಸರ ಶಶಿ ವಹ್ನಿ ನೇತ್ರಚಯವು;
ಮತ್ತೆ ಬ್ರಹ್ಮವೆನಲು ಮಹಿಯ ಮೇಲೆ ಇಹುದೆ? ವಿಶ್ವ

೮೧ ಭಗವಂತನಾದ ದೇವನು
ಜಗಗಳ ತನ್ನೊಳಗೆ ಬೆಳೆಸಿ, ಜಾಲವ ತೋರ್ಪಂ,
ಮಿಗೆ ಪರಿಯಲಿ ತಾನೆಲ್ಲೆಡೆ,
ಅಗಣಿತನಾಗಿ ಬೆಳಗುತಿಹನನುವಿನಲಿ, ವೇಮಾ

— — — — — — — — — — — — — — — — — — — — — —

೮೨ ವಿಶ್ವಕರ್ಮ ಮಹಿಮೆ ಕೇಳಲದು ವಿಚಿತ್ರ!
ವಿಶ್ವಕರ್ಮ ಮಹಿಮೆ ಶಾಶ್ವತವದು
ವಿಶ್ವ ಕರ್ಮನಿರದೆ ವಿಶ್ವ ನಿಲುವುದೇನು? ವಿಶ್ವ

೮೩ ಊಟವನೆ ಮಾಡಿಸಿ, ದೇಹ ಮರೆತು,
ನಿದ್ರೆ ಹೋಗಲು ಹಚ್ಚುವ, ನಿಖಿಲ ಗತಿಗಳ
ಸೂಚಿಸಿಳೆಬದ್ಧರಾಗಿಸುವ ಸೂಕ್ಷ್ಮ ರೂಪ
ನಾ ಮಹದೇವನಿಹನಲ್ತೆ ವೇಮ?

೮೪ ಕ್ಷಿತಿಯಲಿ ಸತಿಗೊಪ್ಪ ಶೃಂಗಾರಗಳಿದ್ದು,
ವಿಭುವಿನ ಕರುಣೆಯಿರದೆ ಒಪ್ಪದೆಂದು;
ನಿನ್ನ ಕೃಪೆಯು ಇರದೆ ನೇರವರಿವು ಇಲ್ಲ ವಿಶ್ವ

೮೫ ವಿಶ್ವನಾಥನಲ್ಲಿ, ವಿಪ್ರ ಜನತೆಯಲ್ಲಿ,
ವಿಭುವಿನಲ್ಲಿ, ವೇದ ವಿಧಗಳಲ್ಲಿ,
ಭಕ್ತಿಯಿಲ್ಲದವನು ಪಾಪಾತ್ಮ ಜಗದೊಳು ವಿಶ್ವ

೮೬ ಉಸಿರು ಇರುವ ತಿದಿಯ ಊದಲ್ಪದಷ್ಟು;
ಪಂಚಲೋಹವೆಲ್ಲ ಭಸ್ಮವಹವು
ಹಿರಿಯರುಸಿರಿಪ್ಪರು, ಹಿರಿಯುರಿ ಹೊತಿಸರೆ? ವಿಶ್ವ

**ವೇಷ–ಭೂಷಣಗಳು:**

ಮೋಕ್ಷಕ್ಕಾಗಿ ಹಂಬಲಿಸುವ ಮುಮುಕ್ಷುಗಳು ಯೋಗ ಪ್ರಕ್ರಿಯೆ, ಹಾಗೂ ಜ್ಞಾನ ಸಾಧನಗಳನ್ನು ಸಾಧಿಸಬೇಕು. ಪ್ರತಿಯಾಗಿ ಬೇರೆ ಬೇರೆ ಬಗೆಯ ವೇಷಭೂಷಣಗಳನ್ನು ಧರಿಸಿ, ಜನಮನದ ಮೇಲೆ ಪ್ರಭಾವ ಬೀರಿ, 'ರಾವಣ' ಸನ್ಯಾಸಿಗಳಾದರೆ ಬಂದ ಭಾಗ್ಯವೇನು? ಅವರು ಮಹಾಪಾತಕಿಗಳೇ ಸರಿ, ನಾರದ ಪರಿವ್ರಾಜಕೋಪನಿಷತ್ತಿನಲ್ಲಿ ಮತ್ತು ಸನ್ಯಾಸೋಪನಿಷತ್ತಿನಲ್ಲಿ ಆರು ವಿಧದ ಸನ್ಯಾಸಗಳನ್ನು ವರ್ಣಿಸಲಾಗಿದೆ.

(೧) ಕುಟೀಚಕ : ದಂಡ, ಕಮಂಡಲು ಧರಿಸಿ, ತಲೆ–ಗಡ್ಡ ಬೋಳಿಸಿ, ಕಾವಿಬಟ್ಟೆಯುಟ್ಟು ಒಂದೆಡೆ ವಾಸಿಸುವುದು.

| | | |
|---|---|---|
| (೨) ಬಹೂದಕ | : | ಮೇಲಿನಂತೆಯೇ, ಆದರೆ ಅವರು ಬಹಳ ಎಡೆಗಳ ಗೃಹಸ್ಥರಿಂದ ಪರಿಪೋಷಿತರಾಗಿರುತ್ತಾರೆ. |
| (೩) ಹಂಸ | : | ದಂಡ, ಕಮಂಡಲುಧರಿಸಿ ಗಡ್ಡ, ಜಡೆ ಬೆಳೆಸಿ, ಸತತ ಪರ್ಯಟನದಲ್ಲಿರುತ್ತಾರೆ. |
| (೪) ಪರಮ ಹಂಸ | : | ಬಿಳಿ ಇಲ್ಲವೆ ಕ್ಯಾವಿ ಬಣ್ಣದ ಒಂದೇ ಬಟ್ಟೆಯುಡುತ್ತಾರೆ; ದಂಡವಿರಬಹುದು; ಇರಲಿಕ್ಕಿಲ್ಲ, ಮಿತಾಹಾರಿಗಳು, ಸಂಘ–ದೂರರು ಮತ್ತು ವಿಧಿ–ನಿಷೇಧಗಳಿಗೆ ಒಳಗಾಗದವರು. |
| (೫) ತೂರ್ಯಾತೀತ | : | ನಗ್ನರು, ದಂಡ–ಕಮಂಡಲಗಳಿಲ್ಲ, ಕೇವಲ ಫಲ ಸೇವನೆ, ದೇಹವನ್ನು ಶವದಂತೆ ಕಾಣುತ್ತಾರೆ. |
| (೬) ಅವಧೂತ | : | ಯಾವುದೇ ತೆರನಾದ ನಿಯಮಕ್ಕೊಳಗಾಗದ ಆತ್ಯಾಶ್ರಮಿಗಳು, ಸತತ ಆತ್ಮಧ್ಯಾನ ನಿರತರು. |

ಇದಲ್ಲದೆ ಇತರ ಸಂಪ್ರದಾಯಗಳಲ್ಲಿ ನಿರ್ದೇಶಿಸಿದ ಇನ್ನೂ ಹಲವು ವೇಷ–ಭೂಷಣಗಳೂ, ವಿಧಿನಿಯಮಗಳೂ ಸನ್ಯಾಸಿಗಳಿಗೆ, ವಿರಕ್ತ, ಜಂಗಮರಿಗೆ, ಫಕೀರರಿಗೆ ಅನ್ವಯಿಸುತ್ತವೆ. ವೇಷವು ಯಾವುದೇ ಇರಲಿ, ಸಾಧಕನು ಕಳಕಳಿಯಿಂದ ಮನೋಶುದ್ಧಿಯ ಪ್ರಾಮಾಣಿಕ ಪ್ರಯತ್ನ ಮಾಡದಿದ್ದರೆ, ಅವನು ತನ್ನ ವೇಷದ ಬಲದಿಂದ ಜನವಂಚಕನಾಗುವ ಮತ್ತು ತನ್ಮೂಲಕ ಆತ್ಮವಂಚಕನಾಗುವ ಸಂಭವವೇ ಹೆಚ್ಚು. ಕಾರಣ ವೇಮನ ಯೋಗಿಗಳು ವೇಷ, ಭೂಷಣಗಳಿಂದ ವೈರಾಗ್ಯವನ್ನು, ಮನೋಶುದ್ಧಿಯನ್ನು ಗುರುತಿಸಬೇಕು. ಅವರೂ ಸಹ ಅಂತರ್ವೀಕ್ಷಣೆಗೆ ತೊಡಗಬೇಕು ಎಂದು ಉಪದೇಶಿಸಿದ್ದಾರೆ.

**೮೭ ಮೋಕ್ಷ ಮಾರ್ಗವನರಿಯದ ಮೂರ್ಖ ಜನರು**
**ಕುಕ್ಷಿ ತುಂಬುವ ವೇಷಗಳೋರಿ, ಧರಿಸಿ,**
**ನಿರ್ಗುಣಾತ್ಮನೆಂದು ಹೇಳೆ, ನೀತಿಯಲ್ಲ**
**ಅವರಿಗಿಹ ಪರಗಳು ಸೊನ್ನೆ ಆಯ್ತು ವೇಮ!**

**೮೮ ದೇಶ ದೇಶ ತಿರುಗುತಿಹುದು ತಿಂಡಿಗಾಗಿ;**
**ಹೆಣಗಿ ವೇಷ ಹಾಕುವುದು, ಹೊಟ್ಟೆಗಾಗಿ**
**ಮನಸಿನಲ್ಲಿ ಗುರಿಯ ಮತ್ತೆ ಕಂಡು ಮರಳಿ,**
**ಹುಟ್ಟುವಂಥ ಪದವಿಗೆ ಹೆಣಗು ವೇಮ**

— — — — — — — — — — — — — — — — — — — — — — —

೮೯ ತಪ್ಪು ವೇಷ ಹಾಕಿ ಧರೆಯೊಳೆಲ್ಲ ತಿರುಗುವವ,
ಗೆಯ್ವುದೆಲ್ಲ, ಸಾವು ಕೂಡಲಷ್ಟೆ
ಹೊಟ್ಟೆ ಹೊರೆಯಲಿಷ್ಟು ಕಷ್ಟ ಮತ್ತೆ ಏಕೆ? ವಿಶ್ವ

೯೦ ಸಾವಿರಾರು, ಜಗದಿ, ಸಲೆ ವೇಷಧಾರಿಗಳು
ಕೇಳಿದರು; ಕೂಳ ಫಲಕ್ಕಾಗಿ
ಮೇಲು ಅಲ್ಲ, ಮಹಿ–ಗಗನಕೆ ಅಂಟಿ, ವಿಶ್ವ

೯೧ ಹುಚ್ಚು ವೇಷಗಳನು ಹಾಕಿ ಹೋಗುತಿಹುದು;
ಕರಿಯ ನಾಯಿ ಬಿಳುಪು ಕಾಣದಲ್ಲ;
ಕಾಯದೊಳಿಹ ಗುಣವು ಹೋಳುವತನಕ ಇಹುದು ವಿಶ್ವ

೯೨ ಧರೆಯಲ್ಲಿ ಸಾವಿರ ಧರಿಸುತಿಹರು ವೇಷ.
ಮೈಗಳ್ಳರು, ತಿಂಡಿ ಫಲವ ಬಯಸಿ;
ಅಲ್ಲ; ಮೇಲು, ಹೃದಯ ಆಕಾಶದಿ ಉಂಟು ವಿಶ್ವ

೯೩ ಅವನಿ–ವೇಷವೆಷ್ಟೊ? ಅಜನಿಗಡ್ಡವಿಲ್ಲ
ಅಂತಕನ ಗೆಲಲಿಲ್ಲ ಅಧಮರೆಲ್ಲ;
ಸುಳ್ಳು ಪಥವು ಬೇಡ; ಸಿಗುವದೇ ಮೋಕ್ಷವು? ವಿಶ್ವ

೯೪ ಈ ಲೋಕ ಚಿಹ್ನೆಯೆಲ್ಲವು,
ಮೇಲ್ಮೆಯ ಗುರು ಶಕ್ತಿಗೂಡಿ, ಆಗಸದಿರಲಾ
ಕಾಲನು ಎದುರಿಸಲಾರನು;
ಸಾಲವೆ ಜನ್ಮಗಳೆಂಬವು, ಸಾರೆಲೊ, ವೇಮಾ ವಿಶ್ವ

೯೫ ತಪ್ಪು ರೂಪ ತಾಳಿ, ಧರೆಯೆಲ್ಲ ತಿರುಗಲು,
ನೇತಾರರೆಲ್ಲ ಸೇರಿ, ನಿಲುವ ವಿಧವು।
ಹೊಟ್ಟೆ ತುಂಬಲಿಷ್ಟು, ಕಷ್ಟಗಳು ಏತಕೆ? ವಿಶ್ವ

೯೬ ವಿಶ್ವಾಸಕ್ಕೆ ತಕ್ಕ ವೇಷವಾವುದಿಲ್ಲ;
ಉಣುವ ತಿಂಡಿ, ಇಲ್ಲ; ಉಡುವ ವಸ್ತ್ರ
ವಿಶ್ವಮಯನಾಗಿಯು ವಿಭುವು ಹೊಳೆಯನೆಂತು? ವಿಶ್ವ

೯೭ ಕಂಬಳಿಗಳ ಹೊತ್ತು, ಗೆಜ್ಜೆ ಹೆಣೆದ ಶಾಲು,
ಬೋಳು ತಲೆಯ ಸೊಂಪು ಪೆಂಪು ಮೀರಿ,
ಹೊಟ್ಟೆಗಾಗಿ ತಿರುಗೆ ಹಿರಿಯ ಘನರು ಎಂತು? ವಿಶ್ವ

೯೮ ಜಡೆಯು ಹುಲಿಯ ತೊಗಲು, ಬೂದಿಯುಂಟು ತೋರೆ,
ಜೋಳಿಗೆಗಳು ಹತ್ತು ಲಕ್ಷವಿರಲು,
ಹೊರಲು ಭಾರವಷ್ಟೆ; ಹೊಂದಲಾರ ಮೋಕ್ಷ ವಿಶ್ವ

೯೯ ಹೊಳೆವ ಬೋಳು ತಲೆಯು, ಬಿಳಿಯ ಕಂಬಳಿಗಳು;
ಒಡಲು ಬೂದಿ ಬಳಿದು, ಒಟ್ಟು ಇಹರು;
ಇಷ್ಟು ವೇಷವೆಲ್ಲ ಹೊಟ್ಟೆ ಕೂಳಿಗಷ್ಟೆ ವಿಶ್ವ

೧೦೦ ಗಾರ್ದಭ ಮೈ ಮೇಲೆ ಗಂಧವನು ಬಳಿಯಲು
ಬೂದಿಯಲ್ಲಿ ಬಿದ್ದು ಹೊರಳಾಡದೆ?
ಮೂಢನಿಹನ ಸೊಗಸು ಮತ್ತೆ ಅದೇ ರೀತಿ ವಿಶ್ವ

೧೦೧ ಕಂಬಳಿಯನು ಕಟ್ಟೆ, ಗಂಟೆ ಗೆಜ್ಜೆಯಾದಿ,
ತಲೆಯು ಬೋಳು ಅಷ್ಟೆ; ಕಲೆಯ ಚಿರತೆ;
ಆತ್ಮ ದೇವ ಪೂಜೆ, ಅವು ಮಾಡಲಾರವು ವಿಶ್ವ

೧೦೨ ಒಡಲು ಬೂದಿ ಬಳಿದು ಜಡೆಯ ಧರಿಸಿದೊಡನೆ,
ಒಡೆಯನಹುದು; ಮುಕ್ತಿ ಪಡೆಯಲಾರ
ತಟ್ಟಿ ಬಿಗಿಯಾಗಿರೆ ದ್ವಾರವೆಂತೆನಿಪುದು? ವಿಶ್ವ

೧೦೩ ಬೂದಿ ದೇಹದಲ್ಲಿ ಬಳಿದುಕೊಂಡರೇನು?
ನಿಷ್ಠೆ ಶಿವನ ಮೇಲೆ ನಿಲಿಸಬೇಕು
ಹೊರತು, ಭಸ್ಮದಲ್ಲಿ ಹೊರಳದೇನು ಕತ್ತೆ? ವಿಶ್ವ

೧೦೪ ಬೊಕ್ಕು ಬೋಳು ತಲೆಯು, ಬಿಳಿಯುಣ್ಣೆಯ ಬಟ್ಟೆ,
ಬೂದಿ ಬಳಿದ ದೇಹ ಬೇಸರಷ್ಟೆ
ಇಷ್ಟು ವೇಷವೆಲ್ಲ ಹೊಟ್ಟೆಗಾಗಿ ಮಾತ್ರ ವಿಶ್ವ

೧೦೫ ಬೂದಿ ಬಳಿಯಲೆಷ್ಟು ಭುಜದಿ ಅಲಂಕಾರ;
ಧರಿಸಿದ ಲಿಂಗಗಳು ತರದ ಮತವು!
ಇಲ್ಲಿ ಮಾತ್ರವಷ್ಟೆ; ಅಲ್ಲಿ ಸಲ್ಲವಯ್ಯ ವಿಶ್ವ

೧೦೬ ಜೋಡು ತಲೆಗಳು ಜಡೆ; ಬಳಿದುಕೊಂಡು ಬೂದಿ,
ಭೀಷಣಾಸನಗಳು, ವೇಷಗಳು!
ಯೋಗಿಯಲ್ಲ ಒಳಗೆ ಬಾಗು ಇರುವ ತನಕ ವಿಶ್ವ

೧೦೭ ಜಡೆಯ ಹೊಂದುತಿಹುದು, ಜಗವು 'ಛೀ' ಯೆನುವಂತೆ;
ಒಡಲು ಬಿರಿಯುತಖಿಲ ಯೋಗವೆಲ್ಲ
ಮುಕ್ತಿ ಕಾಂತೆಯೊಡನೆ ಮುದ್ದಾಡಲಲ್ಲವೆ? ವಿಶ್ವ

೧೦೮ ಜಡೆ ಬೆಳೆಸುವುದೆಲ್ಲ, ಜಗ ಛೀಯೆನಲೆಲ್ಲ,
ಒಡಲು ಮಣಿಸುವಂಥ ಯೋಗವೆಲ್ಲ,
ಮುಕ್ತಿ ಕಾಂತೆ ಹಿಡಿದು ಮುದ್ದಾಡಲಲ್ಲವೇ? ವಿಶ್ವ

೧೦೯ ಜಡೆಯ ಕಟ್ಟಲೇಕೆ? ಸನ್ಯಾಸ ಪದವೇಕೆ?
ಒಡಲು ಕಷ್ಟ ಕೊಡುವ ಯೋಗವೇಕೆ?
ಮುಕ್ತಿ ಕಾಂತೆ ಹಿಡಿದು ಮುದ್ದಾಡಲೆಂದೆ? ವಿಶ್ವ

೧೧೦ ಕಾವಿ ಪಂಜೆಯುಟ್ಟು, ಕಡು ಯೋಗಿಯಂದದಿ,
ಉಚ್ಚ ಕೋರಿಕೆಗಳ ಊದಿ ಬಿಟ್ಟು,
ಸೆಟೆದು ತಿರುಗುವವನು ಸನ್ಯಾಸಿಗಳ್ಳನು ವಿಶ್ವ

೧೧೧ ಪರಮ ಯೋಗಿಯೆನುತ ಪರಮ ಸೇರಿಕೊಳದೆ,
ಮಾಯೆ ಜನರಿಗೆಂತು ಮಹತಿಯುಂಟು?
ವೇಷಗಳನು ಬಿಟ್ಟು ವಿಹರಿಸಿದೊಡೆ ಮುಕ್ತಿ ವಿಶ್ವ

೧೧೨ ಪುಸ್ತಕಗಳು, ಜಡೆಯು, ಹುಲಿಯ ತೊಗಲು, ಬೆತ್ತ,
ಜೋಳಿಗೆಗಳು ಹತ್ತು ಲಕ್ಷವಿರಲಿ;
ಹೊರಲು ಭಾರವಷ್ಟೆ; ಹೊಂದಲಾರ ಮೋಕ್ಷ ವಿಶ್ವ

೧೧೩ ಮೋಸವ ಮಾಡುತ ಭುವಿಯಲಿ,
ದಾಸರೆನುತ ಬೂದಿ ಬಳಿದು ಧರಣಿ ತಿರುಗಲಾ,
ಮೋಸದ ಶಿವ ವಂಚಕರನು,
ದೂಷಿಸುವರು ಅವನಿ ಜನರು, ದುರಿತವು, ವೇಮಾ

೧೧೪ ಧರೆಯ ಬಡವರಾದ ವೈಷ್ಣವ ದಾಸ ಜನರು,
ಅನುತ, ನಾಮವ ಹಚ್ಚಿದೊಡೆ, ಅವನಿ ಜನರು
ಹುಚ್ಚು ವೇಷಕೆ ಹೂಂಗುಡಲು ಹುಚ್ಚುತನವು!
ಆಳ ನೋಡಬೇಕು; ಅವನಿಯಲ್ಲಿ ವೇಮ

೧೧೫ ತನುವಿನಲ್ಲಿ ಅಗ್ನಿ ತಗಲಿ ಸುಡುತಲಿಹುದು
ಸುಟ್ಟು ಮುದ್ರೆ ಜಡಿವ ಕರ್ಮವೇಕೆ?
ಸುಟ್ಟುಕೊಂಡ ಬಳಿಕ, ಶ್ರೇಷ್ಠ ತಾನಾಗನೆ? ವಿಶ್ವ

೧೧೬ ಕಾಯಿ ಪತ್ರಿ ತಿಂದು, ಕಾಷಾಯ ವಸ್ತ್ರಗಳ,
ಬೋಳು ನೆತ್ತಿ ಹೊಂದಿ ಬಾಳುತಿಹರು
ತಲೆಯು ಬೋಳು ಇರಲು, ತಿಳಿವು ಬೋಳಾದುದೆ? ವಿಶ್ವ

೧೧೭ ರೇಶ್ಮೆ ಪಾಗ ಸುತ್ತಿ, ರೇಶ್ಮೆ ಧೋತ್ರ ಕಟ್ಟಿ,
ಗಿರಿಯ ದೇವತೆಗಳ ಗರ್ವ ಪಡುವ;
ಚಿಹ್ನೆಯಷ್ಟು ಹೊರತು, ಶ್ರೀವೈಷ್ಣವ ಮತವು ವಿಶ್ವ

೧೧೮ ರೇಶ್ಮೆ ಶಾಲು ಸುತ್ತಿ, ರೇಶ್ಮೆ ಧೋತ್ರವುಟ್ಟು,
ಜಗದಿ ವೈಷ್ಣವೆನಿಸೆ ಶಾಶ್ವತವೇ?
ಚಿಹ್ನೆಗಳಿನಿತು ಏಕೆ ಶ್ರೀವೈಷ್ಣವರೊಳಗೆ? ವಿಶ್ವ

೧೧೯ ಪರಮ ಭಾಗವತರು ಪ್ರಜರ ಸಂತೋಷಿಪರು;
ಆಟ ಪಾಟ ಕಲಿತು ನೀಟವಾಗಿ,
ಕೋಟಿ ಹಣವ ತಂದು ಕೂಳಿಲ್ಲದಾಗುವರು ವಿಶ್ವ

---

೧೨೦ ಕಪಟ ವೇಷ ಹಾಕಿ, ಕಷ್ಟ ಪಡುವುದೇಕೆ?
ಭೂಮಿಯಡವಿಯಲೆವ ಬೇಸರೇಕೆ?
ಉಪಮೆಯೊಳಗೆ ಮುಕ್ತಿ ಉಂಟು ಕಾಣಬೇಕು ವಿಶ್ವ

೧೨೧ ಮೇಲೆ ಕೇಶ ತೆಗೆಸಿ ಮಿಕ್ಕ ಹಿರಿಯರೆನಿಸಿ
ಕಾಣಬರದೆ ತಿರುಗುವ ಕರ್ಮಿ ಜನರು
ಬಯಲು ಕೋರುವಂತೆ ಭಾವವನು ಕೋರರು ವಿಶ್ವ

೧೨೨ ದ್ವಾದಶ ತಿರುಮಣಿಯ ತಕ್ಕ ಹಾಗೆ ಧರಿಸಿ,
ದ್ರವಿಡ ಗ್ರಂಥಗಳನು ತಾವು ಓದಿ,
ಅಕ್ಷಯವಹ ಪಾತ್ರೆ ಅಂದವಿದೆ ಹಸ್ತದಲಿ ವಿಶ್ವ

೧೨೩ ಗುರುತು ಇಡುವುದರಿಂದ ಕುಲವೆಲ್ಲ ಕೆಟ್ಟಿತು
ಲಲನೆ ನಡತೆಯಿಂದ ಲಜ್ಜೆ ಹೋಯ್ತು;
ಹೊಲಸು ಗುಂಡಿಯಿಂದ ಇಳೆಯೆಲ್ಲ ಕೆಟ್ಟಿತು ವಿಶ್ವ

೧೨೪ ಪ್ರಾಣದಲ್ಲಿಹ ಶಿವನ ಭಾವಿಸಲು ತೀರದೆ,
ಮುದ್ರೆಯೆಂದು ಬೀಳ್ವ ಮೂಢ ಜನರೇ!
ಮುದ್ರೆಯಲ್ಲಿ ಇಲ್ಲ; ಮೂಲದಲ್ಲಿ ಮತ್ತೆ ವಿಶ್ವ

## ವೇದ–ವಿಧಿ–ಕರ್ಮ:

"ಓದಿ ಕೆಟ್ಟ, ಕೂಚ ಭಟ್ಟ" ಎಂಬ ನಾಣ್ಣುಡಿಯೇ ಇದೆ. ಭಗವಾನ ಶಂಕರಾಚಾರ್ಯರೂ ಸಹ, ಕಾಶಿಯಲ್ಲಿ ಓರ್ವ ಬ್ರಾಹ್ಮಣ ಯುವಕನು ವ್ಯಾಕರಣದ ಗಿಳಿಪಾಠ ಮಾಡುವುದನ್ನು ಕಂಡು,

**ಭಜ ಗೋವಿಂದಂ ಭಜ ಗೋವಿಂದಂ**
**ಗೋವಿಂದಂ ಭಜ ಮೂಢಮತೇ**
**ನಹಿನಹಿರಕ್ಷತಿ ಡುಂಕೃಂಕರಣೇ**

ಎಂದು ಹಾಡಿದ್ದಾರೆ. ಓದಬೇಕು; ಅರಿತುಕೊಂಡು ಓದಬೇಕು. ಅಗತ್ಯವಿರುವಷ್ಟು ಓದಬೇಕು. ಸ್ವಾಧ್ಯಾಯವು ನಿರ್ದಿಷ್ಟ ವಿಷಯಗಳನ್ನು ಕುರಿತು ಮಾತ್ರ ಇರಬೇಕು.

ಬರೀ ಓದಿ, ಅಂತೆ ಆಚರಿಸದಿದ್ದರೆ, ಓದಿನ ಕಾಲಕ್ಕೆ ಮಾತ್ರ ಒಳ್ಳೆಯವನಷ್ಟೇ. ಕಪ್ಪೆ ಕಮಲವೇರಿದ ಕಾಲ ಮಾತ್ರ ಘನವೆನಿಸಿದಂತೆ.

ವೇದಗಳನ್ನು ಓದಿ ಸೋಮಯಾಗವನ್ನು ಆಚರಿಸಿ, ಸುರಾಭಾಂಡ ಪೂಜಿಸಿ, ಸುರೆ ಸೇವಿಸಿ, ರಕ್ತ ಸಂಬಂಧ ತೊರೆದು ಸ್ತ್ರೀ ಭೋಗ ಮಾಡುವಂಥ ಅನಾಚಾರಿಗಳು ಎಷ್ಟು ಓದಿದರೇನು? ತಟ್ಟೆಯಷ್ಟು ಶಿಲೆಯ ಹರಳು ಇದ್ದರೇನು? ಚೊಕ್ಕವಾದ ನೀಲಮಣಿಯಂಥ ಒಂದು ಪದ್ಯ ಓದಿದರೂ ಸರಿ.

ಸರಿಯಾದ ಆಚಾರವಿರದವನ ವೇದ ಮಂತ್ರ ಪಠಣವು ಮಹಿಷದ ಕೂಗಿನಂತೆ, ಬರೀ ಕೂಗು ಮಾತ್ರವಷ್ಟೇ; ಎಂದು ವಿಮರ್ಶಿಸಿದ್ದಾರೆ, ಯೋಗಿವರ್ಯರು,

೧೨೫ ತನ್ನ ತಿಳಿಯದಿರಲು, ತಕ್ಕ ವೇದ; ಹುಚ್ಚು
ಸರ್ವ ಸಂಪದಗಳು ಸಪ್ಪೆ, ಹುಚ್ಚು
ಆರು ಶಾಸ್ತ್ರ ಮತ್ತೆ ಪುರಾಣಗಳು ಬರಿಯ
ಗೋಳು ಎಂದು ಜಗದಿ ಹೇಳು ವೇಮ

೧೨೬ ಮನವು ಮೆಚ್ಚಿದ ಭಾವಿ; ಒಳ್ಳೆ ನೀರೊಳು ಮುಳುಗಿ,
ಮನವು ಅಂಟಿ ಕುಡಿಯೆ ಮಮತೆ ಜನನ!
ತಾನು ಅಂಟದಿರಲು ತವಕ ಹುಟ್ಟಬಹುದೆ? ವಿಶ್ವ

೧೨೭ ವಿನುತ ಪರಮ ತತ್ತ್ವ ವಿಭವವನ್ನು ತಿಳಿಯದೆ,
ಬಾಹ್ಯ ವಿದ್ಯೆಯಿಂದ ಬಾಗುತೆಲ್ಲ;
ಗುಡಿಸಲಿಂದ ಗುಹೆಗೆ ನಡೆದ ಚೆಂದವಾಯ್ತು ವಿಶ್ವ

೧೨೮ ಅತಿಥಿ, ದೇವ, ವಿಪ್ರ, ಅಂಥವರಿಗೆ ಇಷ್ಟ;
ಹವ್ಯ ಕವ್ಯವೆಲ್ಲ ಅತಿಶಯಾಗಿ,
ಇಷ್ಟದಂತೆ ಮಾಂಸ ಇಳೆಯ ಜನರಿಗುಂಟು ವಿಶ್ವ

೧೨೯ ವೇದ ವಿದ್ಯೆಯಲ್ಲ, ವೀರ ವಿದ್ಯೆಯಲ್ಲ;
ಬಾಧೆ ವಿದ್ಯೆಯಲ್ಲ; ಭಾರವಲ್ಲ;
ಮಧುರವಾಗಿರುವಂಥ ಮನಸು ನಿಲಿಪ ವಿದ್ಯೆ;
ಸ್ವಾದ ವಿದ್ಯೆಯೆನಲು ಸರಳ ವೇಮ

೧೩೦ ಹುಚ್ಚ ನರಿಗಳಂತೆ ಹೆಚ್ಚು ವೇದ ಓದಿ,
ಆಶೆಗಳನರಿಯರು ಅಯ್ಯರವರು
ವೇದ ಸಾರವೆಲ್ಲ ವೇಮನನರಿಯುವನು ವಿಶ್ವ

---

೧೩೧ ನಗುತಲಿ ಓದುವ, ಹಾಡುವ,
ದುಗುಡ ಪಡದೆ, ತಾನು ಮೆಚ್ಚಿ ಒಳ ಪರಿ ಮರೆವಂ
ಮಿಗೆ ಲಭ್ಯವಾಯ್ತು ಮುದಿತನ;
ಬಗೆಯಿದು; ಅರಿ ಕಂಡು ಕಂಡು ಭುವಿಯಲಿ ವೇಮಾ

೧೩೨ ಸೂಕ್ಷ್ಮ ರೂಪ ತಿಳಿದು, ಸುಖ ಹೊಂದಲಾರದೆ,
ಬಹಳ ಓದುತಿಹನು, ಬಡವ ಮನುಜ!
ಸಾವು ಕೇಡರಿಯದ ಶಾಸ್ತ್ರ ಓದನೇಕೆ? ವಿಶ್ವ

೧೩೩ ಬೂಟಕವು ಪುರಾಣ ಕಥನ
ವಾಟವು ಅಲ್ಲಯ್ಯ; ಪರಮನಿಂದಗಲಿಸುವಾ
ಕೂಟವ ಸೇರದೆ, ಪೂರ್ಣದ,
ನೋಟವು ಯಾರಿಗೆ ವಶವೈ, ನಿಜದಲಿ, ವೇಮಾ

೧೩೪ ಕುಂಚಿಕೊರವ ಜನರು ಓದಿದೊಡೇನು?
ಓದುವನಕ ಒಳ್ಳೆ ಸುದ್ದುಣಿಯಿಹ
ಕಮಲ ಪುಷ್ಪದಲ್ಲಿ ಕಪ್ಪೆ ಕುಳಿತ ರೀತಿ ವಿಶ್ವ

೧೩೫ ಕಸವ ತಿನ್ನುವವನು ಘನ ಫಲಂಗಳ ರುಚಿ
ಕಾಣಲಾರನಲ್ತೆ? ಕಾಣು ಅಂತೆ
ಅಲ್ಪ ಓದಿನವಗೆ ಅಧಿಕ ಜ್ಞಾನವಿಲ್ಲ ವಿಶ್ವ

೧೩೬ ಹುಟ್ಟಿ ಶಕ್ತಿಯೈದು ಪೊಡವಿಯಲ್ಲಿ ನಟಿಸಿ,
ವಿಪ್ರರೆಲ್ಲ ವೇದ ವೇತ್ತರೆಂದರು
ಶಕ್ತಿ–ಪುತ್ರ ಕುಲವು ಜಗದಿ ಅರಿಯರಲ್ಲ! ವಿಶ್ವ

೧೩೭ ನೈಜವಾದ ಚೊಕ್ಕ ನೀಲವೊಂದೆ ಸಾಕು
ಥಳಕು–ಬೆಳಕಿನ ಶಿಲೆ–ತಟ್ಟೆಯೇಕೆ?
ಓದಲರ್ಹ ಪದ್ಯವೊಂದನೋದೆ, ಸಾಕು ವಿಶ್ವ

೧೩೮ ಅರಿವು ಹೊಂದಿದವರು, ನೆರೆತನವಿರುವವರು,
ವಿದ್ಯೆಯಿಂದ ಹುಚ್ಚರಾಗುತಿಹರು;
ಧನವ ಹೊಂದಿದವರು ದಾಸಿಯ ಮಕ್ಕಳೇ ವಿಶ್ವ

೧೩೯ ಓದನೆಷ್ಟು ಓದಲೇನು, ಅರಿಯದ ನರ?
ಓದುತಿಪ್ಪ ಕಾಲ ಸುಗುಣೆಯಂತೆ ತೋರ್ಪ
ಘನವೆನಿಸದೆ ಕಪ್ಪೆ ಕಮಲವೇರಿದಾಗ ವಿಶ್ವ

೧೪೦ ಎಷ್ಟೊ ಓದನೋದಿ ಎಷ್ಟು ಕೇಳಲೇನು?
ಹೀನನಿಹನ ಗುಣವು ಹೋಗದಲ್ಲ!
ಹಾಲೆರೆಯಲಿದ್ದಲು, ಹೋಹುದೇ ಮಲಿನವು? ವಿಶ್ವ

೧೪೧ ಎನಿತೊ ಜಾಣ್ಮೆ ಹೊಂದಿ, ಏನೇನೊ ಓದಲು,
ಚಿಂತೆಯಿರದ ವಿದ್ಯೆ ಸಿಗದೆ ಹೋಯ್ತು;
ಪಂಥ ಹಿಡಿದು ಮನದಿ ಪರಿಕಿಸಿ ನೋಡಿರೋ ವಿಶ್ವ

೧೪೨ ತನಗೆ ಹೊತ್ತು ಹೋಗದ ತರುಣದಲೇನಾದರು
ಕೇಳಬೇಕು, ಅಧಿಕ ವಿದ್ಯೆಯೆಲ್ಲ
ಕೇಳಳೇ ಪ್ರಿಯಗಾಗಿ ಕಾಕ ಧ್ವನಿಯ ಲಲನೆ? ವಿಶ್ವ

೧೪೩ ಆತ್ಮ ಸೂಕ್ಷ್ಮವಿರಲು ಆನಂದವರಿಯದೆ,
ಅದನು ತೊರೆದು ಓದಿ ಅಲ್ಲಿ ಮಗ್ನ!
ಅತಿ ರಹಸ್ಯವೆಲ್ಲ ಆ ಯೋಗಿ ಅರಿವನು ವಿಶ್ವ

೧೪೪ ಕಾಣ ಓದಿ ಓದಿ ಕರ್ಮಸಾರವನ್ನು
ತಿರುಗಿ ತಿರುಗಿ ತಿರುಗಿ ತಿರುಗುಣಿಯ್ಯೆ
ಮರಳಿ, ತಿರುಗಿ, ಬೊಗಳೆ ಮತ್ತೇರಿ ಸತ್ತನು ವಿಶ್ವ

೧೪೫ ಓದನೆಲ್ಲ ಓದಿ ಒಳ್ಳೆ ವಿವೇಕಿಯಿರೆ,
ಮನದಿ ತಮ್ಮನರಿಯದ ಮಂದ ಜನರು
ಬೇಸರದೋದೆಂದು ಬೆಪ್ಪರಾಗಿ ಕೆಡುವರು; ವಿಶ್ವ

೧೪೬ ವೇದಗಳನು ಓದಿ, ಒಣ ಜಂಭ ಪಡುವರು;
ಅಧೋಗತಿಗಿಳಿದರು, ಅಯ್ಯರೆಲ್ಲ,
ಬ್ರಹ್ಮ ಮಹಿಮೆಯರಿತು ಬದುಕುತಿಹುದೆ ಮೇಲು ವಿಶ್ವ

೧೪೭ ಹೆಚ್ಚು ಓದು ಏಕೆ? ಹೆಚ್ಚು ವಾದವೇಕೆ?
ಒಮ್ಮನಸ್ಸಿನಿಂದ ಸುಮ್ಮನಿರಲು,
ಸರ್ವ ಸಿದ್ಧನಾದ; ಸರ್ವವು ತಾನಾದ ವಿಶ್ವ

೧೪೮ ಸೋಮಯಾಜಿ ಹಿಡಿದು ಸೋಗು ವೇಷದಿ, ರಂಭೆ
ಎಂದು ಸೋಮಯಾಜಿ, ಮಣಿಸಿ ಹಿಡಿವ;
ಕ್ರತುವು ಗೆಯ್ದ ಫಲವು ಕೈಯಿಂದ ಆಗುವುದೆ? ವಿಶ್ವ

೧೪೯ ಸೋಮಯಾಜಿಯ ಹಿಡಿದು ಸೆಡ್ಡು ಹೊಡೆವಳು ರಂಭೆ
ಮನಸು ನಿಲುವುದಾಗ ಮಮತೆಯಿಂದ,
ಕ್ರತುವು ಗೆಯ್ಯೆ ಫಲವು ಕುದರಬಹುದೆ ಇಂತು? ವಿಶ್ವ

೧೫೦ 'ಎಂಬರು' ಮತ ವೇಷ ಧರಿಸಿ ಮಾಂಸ ಜಗಿದು,
ಅನ್ಯ ಹೆಸರು ಹೊತ್ತು ಮಧ್ಯ ಕುಡಿದು,
ರಕ್ತ–ಬಂಧ ತೊರೆದು, ರತಿ ಸುಖದಿ ಕೆಡುವರು ವಿಶ್ವ

೧೫೧ ಸೋಮಲತಾ ರಸವ ಪಾವಿನಳತೆಯಷ್ಟು,
ಸೇವಿಸಿ, ಮೇಣದನೆ ಸಾರವೆಂಬರು
ಕ್ರತು ಫಲಗಳು ಕಂಠಗತವಾಗಿರಲಳವೆ? ವಿಶ್ವ

೧೫೨ ಸೇಂದಿ ಗೊಬ್ಬೆಯಷ್ಟೊ ಚೆನ್ನು ಭೂಷಣೆಡಲು
ಅದರೊಳಗಿನ ಕಂಪು ಚದುರದಿಹುದೆ?
ತಿಳಿಯೆ, ಓದಿಕೊಳಲು ತೊಲಗುವವೆ ಮೊದಲ ಗುಣ? ವಿಶ್ವ

೧೫೩ ಮಹಿಷದಂತೆ ಕೂಗಲು ಮಹಾ ಫಲವುಂಟೆ?
ಅರ್ಥವಿರದ ನುಡಿಯು ಕೊರಳಗಂಟೆ?
ಕೇಳುವವರು ಅವರ ಕಣ್ಣಿಗೆ ಮರುಳರಷ್ಟೆ ವಿಶ್ವ

೧೫೪ ಒದರಿ, ಒದರಿ, ಒದರುವವನೆ ರಂಡೆಯಾದ
ತಿರುಗಿ, ತಿರುಗಿ, ತಿರುಗಿ ದಿಕ್ಕುಗೆಟ್ಟ
ಮುಳುಗಿ, ಮುಳುಗಿ, ಮುಳುಗಿ, ಮುಂಡೆಯಾಗಿ ಹೋದ ವಿಶ್ವ

೧೫೫ ಹಗಲು ಹೊಟ್ಟೆಗಾಗಿ ಬಹು ಧನಾರ್ಜನ ಚಿಂತೆ;
ರಾತ್ರಿ ರಮಣಿಯೊಡನೆ ರತಿಯ ಚಿಂತೆ;
ಮೋಕ್ಷ ಚಿಂತೆ ಇನ್ನು ಮೂಢಾತ್ಮಗೆಂದಿಗೊ? ವಿಶ್ವ

೧೫೬ ಅಂತ್ರ ಮಂತ್ರ ಮಹಿಮೆ ಅಗ್ನಿಹೋತ್ರಿಯರಿವ;
ಮಂತ್ರವಾದಿಯರಿವ ತಂತ್ರಮಹಿಮೆ
ಹುಣಸೆ ಹಣ್ಣ ಮಹಿಮೆ ತಿನುಸುಗಾರನರಿವ ವಿಶ್ವ

೧೫೭ ಸಕಲ ವಿದ್ಯೆಗಲಿತು, ಸಾವು–ಬದುಕು ವಿದ್ಯೆ–
ಯೊಂದು ದೋಷವೆನುವರು; ಉರ್ವಿ ಜನರು
ಕಟಿಪಿಟಿ ಪಡುತಿಹರು; ಕಡೆ ಹಾನಿ ತಿಳಿಯರು ವಿಶ್ವ

೧೫೮ ಕಣ್ಣಿನಲ್ಲಿ ಮದವು ತುಂಬಿ ಕಾಣದಿಹರು
ತಮಗಿಂತಲೂ ಹಿಂದೆ, ನಿನ್ನೆ ಮೊನ್ನೆ
ದಗ್ಧವಾದ ಜನರು ತಮಗಿಂತಲ್ಪರೇ? ವಿಶ್ವ

## ಮೂರ್ತಿ ಪೂಜೆ:

ಮೂರ್ತಿ ಪೂಜೆಯನ್ನು ಬಹುತೇಕ ಋಷಿಮುನಿಗಳು ತ್ಯಾಜ್ಯವೆಂದು ಕರೆದಿದ್ದಾರೆ. ವಿಷ್ಣು ಪುರಾಣದಲ್ಲಿ ಸಹ, 'ಕಾಷ್ಟ ಲೋಹೇಷು ಮೂರ್ಖಾಣಾಂ, ಜ್ಞಾನೀನಾಂ ಹೃದಯೇಷು ಚ' ಅಂದರೆ ಮೂರ್ಖರ ದೇವರು ಕಟ್ಟಿಗೆ ಲೋಹಗಳಲ್ಲಿಯೂ ಮತ್ತು ಜ್ಞಾನಿಗಳ ದೇವರು ಹೃದಯದಲ್ಲಿಯೂ ಇರುವನೆಂದು ಹೇಳಲಾಗಿದೆ.

ದೇವರು ಅಮೂರ್ತ, ಅವನನ್ನು ಮೂರ್ತೀಭವಿಸುವುದೇಕೆ? ಇನ್ನು ಎಷ್ಟು ಮಟ್ಟದವರೆಗೆ ಮೂರ್ತೀಭವಿಸಲು ಅಡ್ಡಿಯಿಲ್ಲ? ದೇವರನ್ನು ಅನುಭವಿಸಲು ಮನಸ್ಸು ಸಾಧನ ತಾನೇ? ಮನವನ್ನು ಪೂಜಿಗೊಳಿಸಿದರೆ ಉಳಿಯುವುದೇ ದೇವರು. ಈಗ ಮಾನಸ ಪೂಜೆಗೆ ನೆರವಾಗುವಂತೆ ಶಿವನನ್ನು ಭಾವಿಸಬೇಕು. ಇಂಥ ಅನುಭಾವದಿಂದ ಶಿವಾನುಭವ ಹೊಂದಬೇಕು, ಹೀಗೆ ಮಾಡದೆ,

**ಮನಸಾ ಕಲ್ಪಿತಾ ಮೂರ್ತಿಃ ನೃಣಾ ಚೇನ್ಮೋಕ್ಷ ಸಾಧನೀ**
**ಸ್ವಪ್ನ ಲಬ್ಧೇನ ರಾಜ್ಯೇನ ರಾಜಾ ನ ಮಾನವಸ್ತ,**

ಕೇವಲ ಮಾನವ ಮನಸ್ಸಿನಿಂದ ಮೂರ್ತಿಯನ್ನು ಕಲ್ಪಿಸಿಕೊಂಡರೆ, ಅದೆಂತು ಮೋಕ್ಷ ಸಾಧನವಾಗಬಲ್ಲದು? ಸ್ವಪ್ನದಲ್ಲಿ ರಾಜ್ಯ ಪಡೆದುಕೊಂಡ ಮಾನವನು ರಾಜನಾಗಬಲ್ಲನೇ? ಆದ್ದರಿಂದ,

**ಮೃಚ್ಛಿಲಾ ಧಾತು ದಾರವಾದಿ ಮೂರ್ತ್ತಾವೀಶ್ವರೌ ಬುದ್ಧಯೋ**
**ಕ್ಲಿಶ್ಯಂತಸ್ತಪಸಾ ಜ್ಞಾನಂ ವಿನಾ ಮೋಕ್ಷಂನ ಯಾಂತಿ ತೇ.**

ಅಂದರೆ, ಈಶ್ವರನು ಮಣ್ಣು, ಶಿಲೆ, ಧಾತು ಮತ್ತು ಕಟ್ಟಿಗೆಗಳಿಂದ ಮಾಡಿದ ಮೂರ್ತಿಗಳಲ್ಲಿ ಇರುವನೆಂದು ಮೂಢರು ಬಗೆಯುತ್ತಾರೆ. ಆದರೆ ತಪಸ್ಸಿನಿಂದ ಜ್ಞಾನ ಪಡೆಯದೆ ಅವರೆಂದೂ ಮೋಕ್ಷ ಹೊಂದರು.

ಆದ್ದರಿಂದ ವೇಮನ ಯೋಗಿಗಳು ಶಿಲೆಯನ್ನೇ ಶಿವನೆಂದು ಬಗೆಯುವ ಜನರಿಗೆ ಬಗೆ ಬಗೆಯಾಗಿ ತಿಳಿ ಹೇಳಿದ್ದಾರೆ. ಲೋಹದಿಂದಾಗಲಿ, ಶಿಲೆಯಿಂದಾಗಲಿ ಮೂರ್ತಿಗಳನ್ನು ಮಾಡುವ ವಿಧಾನಗಳನ್ನು ತಿಳಿಸಿ, ಪೊಳ್ಳು, ತುಂಬಿ ಮಾಡಿದ ಲೋಹ ಮೂರ್ತಿಯಾಗಲಿ, ಇಲ್ಲವೆ ಬಂಡೆಯನ್ನು ಕಾಲಿನಿಂದ ಮೆಟ್ಟಿ ಕಟೆದ ಶಿಲಾ ಮೂರ್ತಿಯಾಗಲಿ ಹೇಗೆ ದೇವರಾಗಬಲ್ಲದು? ಅದರಲ್ಲಿ ಪ್ರಾಣವು ಹೇಗೆ ಪ್ರತಿಷ್ಠಾಪಿತವಾದೀತು? ಇದನ್ನು ಸರಿಯಾಗಿ ತಿಳಿಯದೆ, ತಮ್ಮ ಮನೋರಂಜನೆಗಾಗಿ ರಂಗು ರಂಗಿನ ವಸ್ತ್ರ ಉಡಿಸಿ, ಆಭರಣ ತೊಡಿಸಿ ಇಂದ್ರಿಯ ವ್ಯಾಪಾರದ ರೂಢಿಯನ್ನೇ ಪ್ರಬಲಿಸಿದರೆ ಅವರನ್ನು ಅಧಮಾಧಮರೆಂದು ಶಾಸ್ತ್ರ ಹೇಳುವುದಷ್ಟೇ.

**ಉತ್ತಮೋ ಬ್ರಹ್ಮ ಸಧ್ಭಾವೋ, ಮಧ್ಯಮಾ ಧ್ಯಾನ ಧಾರಣಾ**
**ಜಪಸ್ತುತಿಯಧಮಾ ಚ ಮೂರ್ತಿ ಪೂಜಾ ಅಧಮಾಧಮಾ**

೧೫೯ **ಶಿವನು ಎಲ್ಲೆಡೆಯಲ್ಲಿ ಸಾಕ್ಷಿಯ ನುಡಿಯುತಿರಲು,**
**ಇಲ್ಲ ಇಲ್ಲೆಂಬ ನುಡಿ–ಸಾಧಕನೇಕೆ?**
**ಗಗನ ಸನ್ನಿಧಿಯಲ್ಲಿ ಗುರಿಯ ಹಿಡಿದು ನೋಡು! ವಿಶ್ವ**

೧೬೦ **ಶಿವನ ಮೇಲೆ ಮನಸು ಸ್ಥಿರತೆಯಿಂದ ನೆಲಸು;**
**ಅಹುದು ಮೋಕ್ಷವರಿಯೆ, ಅಹುದು, ಅಹುದು;**
**ಶಿವನ ಮೇಲೆ ಮನಸು ಇರುವೆಯಷ್ಟು ತಪ್ಪೆ,**
**ಅಲ್ಲ, ಅಲ್ಲ, ಮುಕ್ತಿ ಅಲ್ಲ ವೇಮ**

೧೬೧ ದೇವ–ಗುಡಿಗಳಲ್ಲಿ, ತೀರ್ಥಕ್ಷೇತ್ರದಲ್ಲಿ,.
ಮೂಲವರಿಯದಿರಲು, ಮುಕ್ತಿಯಿಲ್ಲ
ಆತ್ಮ ಮೂಲವರಿಯದೆ, ಅದನೆಂತು ತಿಳಿವನು? ವಿಶ್ವ

೧೬೨ ಸುತ್ತಿ ಗೋಪುರಗಳ, ಸ್ನಾನಗಟ್ಟೆ, ತೇರು,
ಪತ್ರಿವನ ಗುಡಿಗಳು ಪೊಳೆಯುತಿಹವು,
ದೇವ ಬಳಿಗೆ ಹೋಗೆ ದೈನ್ಯ ಪಟ್ಟುಕೊಳುವ ವಿಶ್ವ

೧೬೩ ಪೊಳೆವ ದೇವರ ಮಾಡಿ, ಪ್ರಜರ ಮಣೆಯ ಹಚ್ಚಿ,
ತುಳಿದು ಭೂಮಿಯೆಲ್ಲ ದೊರೆಯ ಮಾಡಿ,
ಮನುಜ ವರಗಿರಿಳೆಯ ಮಾಂಗಲ್ಯವ ಮಾಡಿ,
ಆಜ್ಞೆ ಮಾಡಿ ಆಳ್ದ ಅವನು ವೇಮ

೧೬೪ ಎಷ್ಟು ದೇವತೆಗಳು! ಏನೀ ರಹಸ್ಯ!!
ಚಿಹ್ನೆಗಳ ಹೊಂದಿ ಕಾಣ ಚಿನ್ಮಯಾತ್ಮ
ತನ್ನ, ತನ್ನೊಳು ಕಾಣಲು ತನ್ಮಯಾದ
ಚೆನ್ನು ಮೀರಲದು ಬಹಳ ಮೇಲು, ವೇಮ

೧೬೫ ಮೇಣ ಒತ್ತಿ ಬರೆದು ಮತ್ತೆ ರೂಪ ಮಾಡಿ,
ತಾಮ್ರ ಕರಗಿಸಿಟ್ಟು ತತ್ರ ಸುರುವಿ,
ಮನುಜರೆಲ್ಲ ಕೂಡಿ ಮತ್ತೆ ದೇವನೆಂದರು ವಿಶ್ವ

೧೬೬ ಮಣ್ಣು ಲೋಹಗಳಲಿ, ಮರ ಶಿಲಾದಿಗಳಲಿ,
ಪಟ–ಗೋಡೆಗಳಲಿ, ಪ್ರತಿಮೆಗಳಲಿ,
ತನ್ನ ನೆನಪು ಕೊಡಲು ತವಕಿಸ ಪರಮಾತ್ಮ ವಿಶ್ವ

೧೬೭ ಅಗಿದ ಮೇಲೆ ಮಣ್ಣು ಹುಗಿದ ಬಂಡೆ ತಲೆಯು
ಹುಟ್ಟಲಾರದವನ ಬುಡಕೆ ತೊಡುಗೆ;
ಗಟ್ಟಿಯಾದ ಮೂಟೆ ಕನಕ ಹುಟ್ಟಿದೇನು? ವಿಶ್ವ

— — — — — — — — — — — — — — — — — — — — — —

೧೬೮ ಮಣ್ಣು ಎತ್ತಿ ಹಾಕಿ, ಮತ್ತೆ ರೂಪುಗೊಳಿಸಿ,
ಗುಂಡಿ ತುಂಬಿ ಹೂಳಿ, ಗುರುತು ನಿಲಿಸಿ.
ಮನುಜರೆಲ್ಲ ಕೂಡಿ ಮತ್ತೆ ದೇವನೆಂದರು ವಿಶ್ವ

೧೬೯ ಮೇಣ ಒತ್ತಿ ಪೊಳ್ಳು ಮತ್ತೆ ರೊಪುಗೊಳಿಸಿ,
ತಾಮ್ರ ಕರಗಿಸಿಟ್ಟು ತತ್ರ ಸುರುವಿ,
ಮನುಜರೆಲ್ಲ ಕೂಡಿ ಮತ್ತೆ ದೇವನೆಂದರು ವಿಶ್ವ

೧೭೦ ಶಿವನೆಂದು ಭ್ರಮಿಸಿ ಶಿಲೆಗೆ ಶರಣೆಂಬಿರಿ
ಮೂರ್ಖ ಜೀವಿಗಳೇ! ಮೋಹ ಬಿಡಿರಿ
ಜೀವದೊಳಿರುತಿಹುದು, ಶಿಲೆಯೊಳಗೇನುಂಟು? ವಿಶ್ವ

೧೭೧ ಶಿವನು ಇರುವನೆನುತ, ಶಿಲೆಗಳಿಗೆ ಮಣಿಯುವ,
ಮೂರ್ಖ ಜೀವಿಗಳೇ ಮೋಹ ಬಿಡಿರಿ
ಜೀವಿಯಲ್ಲೆ ಹೊರತು, ಶಿಲೆಯೊಳೇನು ಉಂಟು? ವಿಶ್ವ

೧೭೨ ಶಿಲೆ ಪ್ರತಿಮೆ ಗೈದು ಕತ್ತಲೆಯೊಳಿಟ್ಟು,
ಶರಣೆಂಬನು ಮೂಢ ಮನುಜ!
ಹೃದಯದೊಳಗಿರುವ ಬ್ರಹ್ಮನ ತಿಳಿದು ನಡೆ ವಿಶ್ವ

೧೭೩ ಗಿರಿಯು ಹಿರಿಯ ಮಾವ; ಗಿರಿ ಕುವರಿ ವರಸತಿ
ಗಿರಿಯೆ ವೀರ–ಬಿಲ್ಲು, ಗಿರಿಯೆ ಗೇಹ;
ಗಿರಿಯಂಥ ದೊರೆಯು ಗುಂಡುಗಲ್ಲಾದನೆ? ವಿಶ್ವ

೧೭೪ ರೂಪುಗೊಳಿಸೆ ಕಲ್ಲು ರಾಜರೂ ಮಣಿವರು
ವರ್ಣ ಬಳಿಯಲದಕೆ ವೈಭವವದು!
ಕರ್ತನಾವನೆಂದು ಕಾಣರು ಮೂರ್ಖ ಜನ! ವಿಶ್ವ

೧೭೫ ಸಂಗಮವರಿ ಶಿಲೆ ತಂದು ಗುಡಿಕಟ್ಟಿ,
ಹೊಳೆವ ಶಿಲೆಗೆ ಸೇವೆ ಸಲಿಸಲೇಕೆ?
ಶಿಲೆಯ ಸೇವೆಯಿಂದ ಫಲವೇನು ಒಪ್ಪುದು? ವಿಶ್ವ

೧೭೬ ಬೆಟ್ಟ ಕಲ್ಲಿನಿಂದ, ಬಯಕೆ ಕೋರಲೇಕೆ?
ಕಟ್ಟಿದ ಗುಡಿಗಳಲಿ ಕರುಬಲೇಕೆ?
ಬಿಡಲಾರದ ಶಿವನು ಪ್ರಾಣಿಗಳಲ್ಲಿಹನು ವಿಶ್ವ

೧೭೭ ಗಟ್ಟಿ ಕಲ್ಲು ತಂದು, ಕಾಲು ಬೆರಳಿನಿಂದ
ಒತ್ತಿ, ಉಳಿಯ ಬಳಸಿ ಗಾಸಿಗೊಳಿಸಿ,
ಬಂಡೆಗಲ್ಲಿಗೆರಗುತಿಪ್ಪನೆಂಥ ಮೂರ್ಖ! ವಿಶ್ವ

೧೭೮ ಕಲ್ಲು ದಿನ್ನೆಯಿಂದ ಕಟ್ಟಿ ಗುಡಿಯ, ಮತ್ತೆ,
ಬೇರೆ ಶಿಲೆಯ ಕೊರೆದು, ವಿಗ್ರಹವೆಂದು,
ಪೂಜೆ ಮಾಡಿದಾಗ ಪುಣ್ಯ ಬರುವುದೇನು? ವಿಶ್ವ

೧೭೯ ಶಿವನೆ ಇರುವನೆಂದು ಶಿಲೆಗಳಿಗೆ ಮಣಿವಿರಿ
ಮೂರ್ಖ ಜೀವಿಗಳೇ! ಮೋಹ ಬಿಡಿರಿ
ಜೀವಿಯಲ್ಲೆ ಹೊರತು ಶಿಲೆಗಳಲೇನುಂಟು? ವಿಶ್ವ

೧೮೦ ಶಿಲೆಯ ನೋಡಿ ನರರು ಶಿವನೆಂದು ಭಾವಿಪರು
ಶಿಲೆಯು ಶಿಲೆಯೆ ಹೊರತು ಶಿವನು ಅಲ್ಲ
ತನ್ನೊಳಿರುವ ಶಿವನ ತಾನು ತಿಳಿಯನೇಕೊ? ವಿಶ್ವ

೧೮೧ ಶಿಲೆಯು ಅಯ್ಯ ದೇವ; ರಾಜ ಭೂಮಿಯಲ್ಲಿ
ಭಕ್ತಿಯಿಂ ಮಣಿವರು ಬಂಡೆಗಳಿಗೆ
ದೇವನಂಥವರಿವರು ಭಾವಿಸೆ ಭಕ್ತ ಜನ ವಿಶ್ವ

೧೮೨ ಬಿಳಿಯ ಶಿಲೆಯ ತಂದು ಬೇರೆ ಗುಡಿಯ ಕಟ್ಟಿ,
ಕಾಂತ ಶಿಲೆಯ ಪೂಜೆ ಗೆಯ್ಯುತಿಹರು
ಶಿಲೆಯ ಪೂಜೆಯಿಂದ ಸಿಗುವುದೇನು ಪುಣ್ಯ? ವಿಶ್ವ

೧೮೩ ಬಂಡೆ ಪೂಜೆ ಗೆಯ್ದು, ಬಹಳ ರಾಜ್ಯ ತಿರುಗಿ,
ಕಾಣಲಾರ ಮುಕ್ತಿ ಕಾಂತೆಯನ್ನು
ತಾನು ಇರುವ ತಾಣ, ದೈವವೇನಿಲ್ಲವೆ? ವಿಶ್ವ

೧೮೪ ಶಿಲೆಯ ದೇವತೆಗಳ, ಸ್ಥಿರವಾಗಿ ರೂಪಿಸಿ,
ಮಣ್ಣು ಪಾಲಾದರು; ಮನುಜರೆಲ್ಲ
ಮಣ್ಣಿನಲ್ಲಿ ಕಲ್ಲು; ಮನದೊಳಗೆ ತಿಳಿಯರು ವಿಶ್ವ

೧೮೫ ಪ್ರಾಣ ಪ್ರತಿಷ್ಠೆಯು ಪ್ರಪಂಚವೇ ಹೊರತು,
ಬೇರೆಯಲ್ಲ; ಜಗದಿ ಪರಿಕಿಸಿದೊಡೆ
ಪ್ರಾಣ ಪ್ರತಿಷ್ಠೆಯಿಂದ ಪ್ರತಿಮೆ ನುಡಿವುವೇನು? ವಿಶ್ವ

೧೮೬ ಭೂಮಿಯಲ್ಲಿ ಮತ್ತೆ ಪ್ರಾಣ ಪ್ರತಿಷ್ಠಿಪರು,
ನೀಡೆ ಪ್ರಾಣ, ಪ್ರತಿಮೆ ನುಡಿಯಬಹುದೆ?
ಮೊದಲಿನವನ ದೃಷ್ಟಿ ಮೂರ್ತಿವಂತನಾಗೆ ವಿಶ್ವ

೧೮೭ ಕಳ್ಳ ಯಾತ್ರೆ ಗೆಯ್ದು, ಗಂಟು ಬಿಚ್ಚುವ ಹೊರತು,
ಮಣಿಯೆ ವೇಳೆಯಿರದು; ಮೊದಲಿನಿಂದ;
ಶ್ವಾನ ಮನೆಯ ಹೊಗಲು ಸೇರಿಸುವುದೆ ಗಡಿಗೆ? ವಿಶ್ವ

೧೮೮ ಕಲ್ಲು ಬಸವನಿಗತಿ ರಂಗು ಪೂಜಾರ್ಚನ
ರೂಢಿ ಬಸವ ಕಂಡು ಉಗುಳುತಿಹರು
ಬಸವ–ಭಕುತರೆಷ್ಟು ಪಾಪಿಯರಿತು ನೋಡು ವಿಶ್ವ

೧೮೯ ಕಲ್ಲು ಬೊಮ್ಮಗೇಕೆ ಕೆಲ ಬಣ್ಣದ ವಸ್ತ್ರ?
ಗುಡಿಗೋಪುರವೆಲ್ಲ ಕಂಭ ಮತ್ತೆ?
ಬಟ್ಟೆ ಅನ್ನ ತಾನು ಬಯಸುತಿಹನೆ ದೇವ? ವಿಶ್ವ

## ತೀರ್ಥಯಾತ್ರೆ:

ಭವಸಾಗರದ ದಡ ಇಲ್ಲವೆ ತೀರವನ್ನು ತಲುಪಿ (ಸ್ಥಳ) ನಿಂತವರು ತೀರ್ಥರೆನಿಸುತ್ತಿದ್ದರು. ಅವರು ವಾಸಿಸುವ ತಾಣವು ಪವಿತ್ರ ಕ್ಷೇತ್ರವೆನಿಸುತ್ತಿತ್ತು. ಮುಂದೆ ನದಿಮೂಲ ಇಲ್ಲವೆ ನದಿ ಸಂಗಮಗಳೇ ತೀರ್ಥಗಳಾಗಿ, ಸ್ನಾನದ ತಾಣಗಳಾದವು. ಬೆಟ್ಟದಲ್ಲಿ ದೇವ ಮಂದಿರ ನಿರ್ಮಿಸಿ ಅವುಗಳನ್ನೇ ಪವಿತ್ರ ಕ್ಷೇತ್ರಗಳೆಂದು ಕರೆದರು. ಮಂದ ಅಧಿಕಾರಿಗಳಿಗೆ ದೇವ ಮಂದಿರದ ಬಾಹ್ಯ ಪೂಜೆಯನ್ನು ನಿಗದಿಗೊಳಿಸಿದ ಮೇಲಂತೂ ಈ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗುವ ಪದ್ಧತಿಯೂ

ಜನಪ್ರಿಯವಾಯಿತು. ಈ ವಿಷಯದಲ್ಲಿ ತಾರತಮ್ಯ ಜ್ಞಾನವನ್ನು ಆಗಮವು ಹೀಗೆ ತಿಳಿಸುತ್ತದೆ.

**ಗುರುಯಾತ್ರಾ, ದೇವಯಾತ್ರಾ ತೀರ್ಥಯಾತ್ರೇತಿ ತಥಾ.**
**ಆಸಾಂ ತ್ರಿವಿಧಯಾ ತ್ರಾಣಾಂ ಗುರು ಯಾತ್ರಾ ಫಲಾದಿಕಾ.**

ಅಂದರೆ, ತೀರ್ಥಯಾತ್ರೆ, ದೇವಯಾತ್ರೆ ಮತ್ತು ಗುರುಯಾತ್ರೆ ಎಂಬ ಮೂರು ತರದ ಯಾತ್ರೆಗಳಿವೆ. ಆ ಮೂರರಲ್ಲಿ ಗುರುಯಾತ್ರೆಯು ಫಲಕಾರಿಯಷ್ಟೇ.

ಅದನ್ನೇ ವೇಮನ ಯೋಗಿಗಳು ಪ್ರತಿಪಾದಿಸಿದ್ದಾರೆ. ಕಾಶಿ, ತಿರುಪತಿ ಯಾತ್ರೆಯೇ ಇರಲಿ, ಮಧುರೆ, ಮಕ್ಕಾ ಯಾತ್ರೆಯೇ ಇರಲಿ; ಮಾನವನಲ್ಲಿ ಮಾರ್ಪಾಡು ತಾರವು, ಕಾಶಿ ಕಂಡ ಹಂದಿ ಕರಿಯಾಗದು. ಮನೋಶುದ್ಧಿ ಮಾಡಿಕೊಂಡು ಗುರುವನ್ನು ಸೇರುವುದೇ ನೈಜ ಯಾತ್ರೆಯಷ್ಟೇ.

**೧೯೦ ದೇಹದೊಳಗೆ ಇಪ್ಪ ದೇಹಿ ದೇವನನ್ನು,**
**ಕಂಡುಕೊಂಡ ಬುಧರು ತೀರ್ಥಯಾತ್ರೆ,**
**ಗೆಯ್ಯರಯ್ಯ ಜಗದಿ; ಆತ್ಮ ರೂಪ ತಿಳಿದು; ವಿಶ್ವ**

**೧೯೧ ಆದಿ ತುದಿಯನರಿಯ; ಕಲ್ಪಿಸುವ ದಿನವೆಲ್ಲ**
**ಮಾರ್ಪಡುವುದು ಬುದ್ಧಿ ಮುದದಿ ತಿರುಗಿ,**
**ಮರವ ಮರವ ಅಲೆವ; ಮಹಿಯ ಕೋತಿಯಂತೆ ವಿಶ್ವ**

**೧೯೨ ನದಿ ನದಗಳ ಕುರಿತು, ನಿಬಿಡಡವಿಯ ಕುರಿತು,**
**ಗಿರಿ ಶಿಲೆಗಳ ಕುರಿತು, ಗೊಡವೆಯೇಕೆ?**
**ಹೃದಯದಲ್ಲಿ ಶಿವನ ಹೊಂದಿಹುದ ತಿಳಿಯರೇ? ವಿಶ್ವ**

**೧೯೩ ತನ್ನ ಆತ್ಮದಲ್ಲಿ ದೈವವು ಇರುವಾಗ,**
**ತೀರ್ಥಯಾತ್ರೆಗಿಳಿಯೆ ತಿರುಗುವ ನರ;**
**ಗಂಧ ಕಡ್ಡಿಗಳನು ಕತ್ತೆ ಹೊತ್ತ ಚೆಂದ ವಿಶ್ವ**

**೧೯೪ ಎಷ್ಟು ಭೂಮಿ ಕಂಡು ಏನು ಪಾಡು ಪಡುವ?**
**ಅಂಟಿಕೊಂಡ ಶನಿಯು ಅವನ ಬಿಡದು**
**ಭೂಮಿ ಹೊಸತು ಅಷ್ಟೆ; ಭೋಕ್ತರು ಹೊಸಬರೆ? ವಿಶ್ವ**

೧೯೫ ದೇವ ಭೂಮಿಯಲ್ಲಿ ದೇವಾಲಯಗಳಲ್ಲಿ,
ದೇವನೆಂದು ಮಣಿದು ತಿಳಿಯಲಿಲ್ಲ;
ತಿರುಗುತಿರುವ ಅವನೆ ದೇವಾದಿದೇವನು; ವಿಶ್ವ

೧೯೬ ಭೂಮಿ, ಹೆಸರಿನಿಂದ ಪುಣ್ಯ ಸ್ಥಳವೆ ಆಯ್ತು;
ಮಿನುಗುವ ಶಿಲೆಯಿಂದ ಮೂರ್ತಿಯಾಯ್ತು;
ನೀರು, ಹೆಸರಿನಿಂದ ನಿಖಿಲ ತೀರ್ಥವಾಯ್ತು ವಿಶ್ವ

೧೯೭ ಪುರುಷವರರು ಕೆಲವ ಪುಣ್ಯ ಭೂಮಿಯೆಂದರು
ಬುದ್ಧಿ ಇಲ್ವೆ? ಇದುವೆ ಭೂಮಿಯಲ್ವೆ?
ಪುಣ್ಯವೆನಲು ಏನು? ಪುರುಷ ಕರ್ಮವಷ್ಟೇ ವಿಶ್ವ

೧೯೮ ಬಾಹ್ಯಪೂಜೆ ಜಪವ ಬಹಳ ಗೈದು ಬಳಿಕ,
ಕಪಟ ಬಿಡದೆ ನರರು ಕಷ್ಟ ಪಡುತ,
ಮುಕ್ತಿ ಹೊಂದದಿದ್ದು ಮುಳುಗಿದರು ತಮದೊಳು ವಿಶ್ವ

೧೯೯ ಅಡವಿ ತಿರುಗಲಿಲ್ಲ; ಆಗಸದಲ್ಲೂ ಇಲ್ಲ
ಅವನಿ ತೀರ್ಥಯಾತ್ರೆಯಲ್ಲಿ ಇಲ್ಲ
ಒಡಲು ಶುದ್ಧಗೊಳಿಸಿ ಒಡೆಯನನ್ನು ನೋಡು ವಿಶ್ವ

೨೦೦ ತಿರುಗಿ ತಿರುಗಿ ನರನು ತಿರುಕನಾಗನೇನು?
ಅಲ್ಲಿ ಅನುವು ಎಷ್ಟು? ಅಧಿಕನಾಗೆ
ಅಂತರಂಗವರಿಯೆ ಆತ ಶಿವನೆ ಅಹುದು ವಿಶ್ವ

೨೦೧ ತಿರುಗಿ ತಿರುಗಿ ನರನು ಮರುಳು ಆದನಷ್ಟೆ
ಅಷ್ಟರಿಂದ ಏನು ಅಧಿಕನಹನು?
ಅಂತರಂಗ ಅರಿಯೆ; ಆಗ ಶಿವನೆ ಅಹನು ವಿಶ್ವ

೨೦೨ ಅಕ್ಷರವನರಿಯದೆ, ಅಡವಿಯೊಳು ತಿರುಗುತ,
ಬೆಟ್ಟ, ಕಲ್ಲು, ಕೊಳ್ಳ ಬಳಸಲೇಕೆ?
ಹೃದಯದಲ್ಲಿ ಶಿವನ ಇರವ ತಿಳಿಯರೇಕೊ? ವಿಶ್ವ

೨೦೩ ಎಷ್ಟು ಭೂಮಿ ತಿರುಗಿ, ಎಷ್ಟು ಪಾಡು ಪಡಲು,
ಅಂಟದದು? ಪ್ರಾಪ್ತಿ; ಉಂಟು ಹಿಂದೆ
ಭೂಮಿ ಹೊಸದಾದರೂ ಭುಕ್ತರು ಹೊಸಬರೇ? ವಿಶ್ವ

೨೦೪ ವಾದದಲಿ ನಡೆವ ನರಗೇ–
ನಾದರು ಆಗದಿರೆ ಭೂಮಿ ತಿರುಗುತ ಇಪ್ಪನ್
ಆದರೆ, ಹಾನಿಯು ಬಂದೊಡೆ,
ಸಾಧನ, ವಾದಗಳು ಆಗಿ ನಡೆಯವು ವೇಮಾ

೨೦೫ ದೇವ ಭೂಮಿಯಲ್ಲಿ, ದೇವಾಲಯಗಳಲಿ,
ದೇವನೆಂದು ಮಣಿದು ಸೇವೆ ಮಾಡಿ,
ತಿಳಿಯೆ, ವಿಶ್ವಕರ್ಮ, ದೇವಾದಿ ದೇವನು! ವಿಶ್ವ

೨೦೬ ತೀರ್ಥಯಾತ್ರೆಯೆಂದು ತಿರುಗಲು ಹೋಗುವವ,
ಪಾಮರಷ್ಟೆ ಹೊರತು ಭಕ್ತನಹನೆ?
ತೀರ್ಥಯಾತ್ರೆಯಿಂದ ದಿವ್ಯನಾಗಬಹುದೆ? ವಿಶ್ವ

೨೦೭ ಯಾತ್ರೆ ಹೋಗಿರುವವ ಎಷ್ಟು ದಿನ ತಿರುಗಲು,
ಕೆಡುವನಷ್ಟೆ; ಮುಕ್ತಿ ಕುದುರದವಗೆ
ಮನಸು ನಿಲಿಸುವವನೆ ಮಹನೀಯ ಮೂರ್ತಿಯು ವಿಶ್ವ

೨೦೮ ನದಿ ತೀರವ ಕುರಿತು ನಡುಕಾನನ ಕುರಿತು,
ಗುಡ್ಡ ಕಲ್ಲು ಕುರಿತು ಗೊಡವೆಯೇಕೆ?
ಮನಸಿನಲ್ಲಿ ಶಿವನು ಮಡಗಿಹುದನರಿಯರು ವಿಶ್ವ

೨೦೯ ಸಕಲ ತೀರ್ಥಂಗಳಲಿ, ಸಕಲ ಯಜ್ಞಗಳಲಿ,
ತಲೆಯ ಬೋಳಿಸದೊಡೆ ಫಲವು ಇರದೆ?
ಮಂತ್ರ ಜಲಕ್ಕಿಂತ ಮುಂಡನ ಜಲ ಹೆಚ್ಚೆ? ವಿಶ್ವ

೨೧೦ ಸರ್ವವು ತಾನದ ತಿಳಿಯಲು,
ನಿರ್ವಾಣಿಗೆ ಇರದೆ ಮುಕ್ತಿ ನಿಲುವಿಕೆ ವಶವೇ?
ಉರ್ವಿಯನೆಲ್ಲ ತಿರುಗಿ ತಾ
ಪರ್ವತ, ಬಿಲ, ಜಲಧಿಗಳಲಿ ಬೀಳುವ ವೇಮಾ

೨೧೧ ಪರ್ವತ ವನವಾಸಿ ಪರಿಣಾಮವರ್ತನ
ಕೂಪವಾಸಿಯೆಂತು ಕುರುಹು ಹಿಡಿವ?
ಬ್ರಹ್ಮ ನಿಷ್ಠ ಪರಿ, ಪ್ರಾಕೃತನರಿಯುವನೆ? ವಿಶ್ವ

೨೧೨ ಕಾಶಿ ಕಾಶಿ ಎಂದು ಕಡು ಹರ್ಷಿಸಿ ಹೋಹರು
ಅಲ್ಲಿ ಇರುವ ದೇವರಿಲ್ಲಿಲ್ಲವೆ?
ಇಲ್ಲು, ಅಲ್ಲು ಉಂಟು; ಹೃದಯ ಲೇಸಾಗಿರೆ ವಿಶ್ವ

೨೧೩ ಕಾಶಿ ಕಾಶಿ ಎಂದು ಕಡೆಗೆ ಹೋಗಲೇಕೆ?
ವಾಸಿ ತೀರ್ಥಗಳಲಿ ವ್ಯಥಿಸಲೇಕೆ?
ದೋಷಕಾರಿಗೆಂತು ದೊರಕುವುದಾ ಕಾಶಿ? ವಿಶ್ವ

೨೧೪ ಕಾಶಿಗೆ ಹೋದಾತ ಕಷ್ಟ ಸೋಸಿ ಬೇಡಿ,
ಇರುವದರಿತು ದ್ರೋಹ ತೊರೆಯುತಿರಲು
ನಾರಿಗೆ ತನುವಿತ್ತು ನರರೆ ಜಲ ಬಿಡುವರು! ವಿಶ್ವ

೨೧೫ ತಲುಪಿ, ನಡೆದು ನಡೆದು, ದಾರಿಯಲ್ಲಿ ಕಾಳಿ;
ಶ್ರವಣ ಮಾಡಿ ಪ್ರಣವ ಶಬುದ ವಿಭವ
ಕಂಡು ಕಂಡು ಹುಟ್ಟು ಕಾರಣವದು ಅಲ್ತೆ? ವಿಶ್ವ

೨೧೬ ಕಾಶಿಯಾತ್ರೆ ಗೆಯ್ದು, ಗಾಸಿ ಪಡುವುದೇಕೆ?
ಹೊಲಸು ಗುಣ ವಿಕಾಸ ಹೊಳಹು ತೊರೆದು,
ಮೋಸ ಹೋಗದರಿವು ಮೂಲ ಕಂಡುಕೊಳ್ಳು ವಿಶ್ವ

೨೧೭ ಸೇತುವಿನಲಿ ಮುಳುಗೆ ಕ್ಷಿತಿಯ ಕಾಗೆ ಬೆಳ್ಳಗಹುದೆ?
ಕಾಶಿಗೆ ಹೋದ ಹದ್ದು ಗರುಡವಹುದೆ?
ಬದರಿ ತಲುಪಿ ವೃದ್ಧ ಬಾಲನಾಗಬಹುದೆ? ವಿಶ್ವ

೨೧೮ ಕಾಶಿ ನೀರು ಹೊತ್ತು, ಕಾಲು ಮುಖವ ತೊಳೆದು,
ಕಾಣದಲ್ಲೊ ಸುಖ ಕೊರಗಿ ಕೊರಗಿ,
ಸತ್ತ ಬಳಿಕ ಮುಕ್ತಿ ಸಾಧಿಸುವರೇನೋ? ವಿಶ್ವ

೨೧೯ ಈಶನಲ್ಲಿ ಭಕ್ತಿ ಇಷ್ಟಾದರೂ ಇರದೆ,
ಪಾಶದಲ್ಲಿ ಸಿಕ್ಕು, ಫಲ ಗುಣವಿದೆ,
ಕಾಶಿ ಯಾತ್ರೆ ಗೆಯ್ಯೆ ಕಾಲನರಿಯದಿಹನೆ? ವಿಶ್ವ

೨೨೦ ಕಾಶಿ, ಮಧುರೆ, ಕಂಚಿ, ಗಯೆ ಪ್ರಯಾಗ ಸೇತು,
ಅಲೆದು ಅಲೆದು ತನ್ನ ಆತ್ಮ ಕಂಡು,
ವಾಸನೆಗಳಳಿಯದಿರೆ ವ್ಯರ್ಥ ವಿಧಗಳಷ್ಟೆ ವಿಶ್ವ

೨೨೧ ಸುತ್ತಲು ಕೊಂಕಣವ, ಸೊಣಗ ಸಿಂಹವಲ್ಲ
ಕಾಶಿ ಕಂಡ ಹಂದಿ ಕರಿಯು ಅಲ್ಲ
ಭಿನ್ನ ಬುದ್ಧಿಯವನು, ಬುದ್ಧನು ಅಲ್ಲವಲ್ಲ? ವಿಶ್ವ

೨೨೨ ಹುಟ್ಟಿ ಘಟದ ಒಳಗೆ, ಹಿಡಿದಿಟ್ಟ ಜೀವನ
ಕಾಣದಿದ್ದು, ನರನು ಕಾಶಿ ಕಂಡು,
ಹುಡುಕಿ, ಹುಡುಕಿ ಆತ ಹುಚ್ಚನಾಗಿ ಹೋಹ ವಿಶ್ವ

೨೨೩ ತಾವು ಇರುವ ತಾಣ, ದೈವವಿಲ್ಲವೇನು?
ಪಾಮರ ಜನರು ತಿರುಪತಿಗೆ ಅಲೆಯೆ,
ಜೋಗಿಯಾಗಿ ಕೈಯ ಸೊತ್ತು ಹೊರಟು ಹೋಯ್ತು ವಿಶ್ವ

೨೨೪ ತಿರುಪತಿ ಯಾತ್ರೆ ಕೋರಿ, ತಲೆಗೂದಲನು ಇತ್ತು,
ವೆಂಕಟೇಶನ ಕೋರಿ ಬೇಡಲೇಕೆ?
ಅಲ್ಲಿಹ ಶ್ರೀಹರಿ ಇಲ್ಲಿಯೇನಿರನೇ? ವಿಶ್ವ

೨೨೫ ತಿರುಮಲೆಯಲಿ ನಾಯಿ, ತಿರುಗೆ ಸಿಂಹವಲ್ಲ
ಕಾಶಿ ತಲುಪೆ ಹಂದಿ, ಗಜವು ಅಲ್ಲ
'ಭರತ' ಕುಣಿಯೆ ಸೂಳೆ, ಪತಿವ್ರತೆಯು ಅಲ್ಲ; ವಿಶ್ವ

೨೨೬ **ಮಕ್ಕಕೆ ಹೋಗಲೇಕೆ? ಮರಳಿ ಬರುವುದೇಕೆ?**
**ಏಕವಿಪ್ಪ ಕರ್ತ ಎಲ್ಲ ಎಡೆಗೆ**
**ಎಲ್ಲೆಡೆ ಪರಿಪೂರ್ಣ ಅಲ್ಲಾ ಮಹಾತ್ಮನು** ವಿಶ್ವ

೨೨೭ **ಕಳ್ಳ ತೀರ್ಥಕ ಹೋಗಿ ಗಂಟು ಬಿಚ್ಚುವ ಹೊರತು,**
**ಮಣಿಯೆ ವೇಳೆ ಇರದು ಮತ್ತೆ ಕೊನೆಗು**
**ಹೊಕ್ಕು ಮನೆಯ ನಾಯಿ ಹುಡುಕದೇ ಗಡಿಗೆಯ?** ವಿಶ್ವ

೨೨೮ **ಕಾಡು ಸೇರಿ ಇರಲಿ; ಗತಿಯ ಒಳಗೆ ಇರಲಿ;**
**ಉಭಯತಾಪಿ ಮಧ್ಯೆ ವಿಧವು ಒಂದೆ;**
**ಜಾಡ ತೊರೆದು ಮನದಿ ಚರ್ಚಿಸಿ ನೋಡಿರೋ** ವಿಶ್ವ

೨೨೯ **ಸಾಸಿರ ನದಿಗಳ ಜಲದಿ,**
**ಹೇಸುಗೆಯಿರೆ, ಮುಳುಗ ಹೋಗೆ ಅಂಡಲೆತಷ್ಟೇ**
**ಹೇಸಿ ಗುಲಾಮಗೆ ಜ್ಞಾನವ,**
**ಏಸಾದರೂ ಸಲ ತಿಳಿಸೆ ಕೇಳುವನೇ ವೇಮಾ?**

**ಮತಗಳು:**

ಮತಿಯಂತೆ ಮತ. ಪೂರ್ಣಜ್ಞಾನವುಳ್ಳವರು ಖಂಡಿತವಾದ ಮತಗಳನ್ನು ಮಂಡಿಸುವುದಿಲ್ಲ. ಮತ ಭೇಧ ಕಲ್ಪಿಸಿ ಜನರನ್ನು ಕಚ್ಚಾಡಲು ತೊಡಗಿಸುವುದಿಲ್ಲ. ವೇದಸಮ್ಮತವಾಗಿ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಕೌಮಾರ ಮತ್ತು ಸೌರ ಎಂಬಾರು ಮತಗಳಿವೆ. ಅವೈದಿಕ ದರ್ಶನಗಳಲ್ಲಿ ಬೌದ್ಧ ಮತ್ತು ಜೈನ ಮತಗಳಿವೆ. ಜ್ಞಾನಿಗೆ ಈ ಮತಗಳು ಖಂಡಿತ ಅಭಿಮತಗಳೆಂದೂ, ಅವು ಅಖಂಡದ ಚರಮ ಲಕ್ಷ್ಯ ತಲುಪಿಸಲಾರವೆಂದೂ ತಿಳಿದಿದೆ. ಕಾರಣ ಅವನು ಅವುಗಳನ್ನು ಮೀರುತ್ತಾನೆ. ಮತಗಳು ಲೋಕಮಾಯೆಗಳಷ್ಟೇ.

ಶೈವ ವೈಷ್ಣವರಲ್ಲಿ ಸಾಕಷ್ಟು, ತೀವ್ರ ಮತಾಭಿಮಾನವಿದೆ. ಶೈವರು ಶವವನ್ನು ದಪನ ಮಾಡಿದರೆ, ವೈಷ್ಣವರು ದಹನ ಮಾಡುತ್ತಾರೆ. ಅಂತೂ ಈ ಭೇದದ ಫಲವೆಂದರೆ ಶೈವನ ಶವ ಮಣ್ಣು ಪಾಲಾದರೆ, ವೈಷ್ಣವನ ಶವ ಬೂದಿ ಪಾಲಾಗುತ್ತದೆ. ಇದನ್ನು ತಿಳಿದರೆ ಶಿವನ ಮಂತ್ರವೇ ಶ್ರೀಹರಿಯ ಮಂತ್ರವು; ಮಂತ್ರ ಚೈತನ್ಯ ಎರಡರಿಂದಲೂ ಜಾಗೃತವಾಗುತ್ತದೆಯೆಂಬ ಸತ್ಯವು ಅನುಭವವೇದ್ಯವಾಗುತ್ತದೆ.

ಇನ್ನು ಶೈವರಲ್ಲಿಯ ಶಾಖೆಯಾದ ವೀರ ಶೈವವು, ಕ್ರಾಂತಿಕಾರಿಯಾಗಿದೆ. ಅದು ಇಷ್ಟಲಿಂಗ ಪೂಜೆಯನ್ನು ಸ್ವೀಕರಿಸಿದೆ; ಮತ್ತು ಪುನರ್ಜನ್ಮವನ್ನು ತಿರಸ್ಕರಿಸಿದೆ. ಆದರೆ ವಾಸ್ತವದಲ್ಲಿ ತತ್ತ್ವದೂರವಾಗಿದೆ.

ಕೊನೆಗೆ ಬೌದ್ಧ ಮತರಂತೂ ಆತ್ಮದ ಸ್ಥಾನದಲ್ಲಿ, ಬುದ್ಧಿಯನ್ನಿರಿಸಿ, ಬೇಗನೆ ಲಕ್ಷ್ಯ ತಲುಪಬಯಸುತ್ತಾರೆ. ಕತ್ತೆಗೆ ಗಕ್ಕನೇ ಲಕ್ಷ್ಮಿ ಒಲಿದಂತೆ. ಆದರೆ ನಿಜವಾಗಿ, ಹಸುಗಳ ಬಣ್ಣ ಬೇರಾದರೂ ಹಾಲು ಕೇವಲ ಬಿಳಿಯಾಗಿರುವಂತೆ, ಮತಗಳು ಬೇರೆ ಬೇರೆಯಾದರೂ ತತ್ವ ಒಂದೇ ಆಗಿದೆ.

**೨೩೦ ಮೊದಲು ಬಿಡದೆ ತನ್ನ ಮತವ,**
**ತುದಿಗಾವ ಮತವೆ ಇದ್ದರೂ ದೂಷಿಸದಿರುತಾ**
**ಕದಲದೆ, ಕೋರಿಕೆ ಕೋರದೆ,**
**ಮುದದಿಂದ ಚರಿಸುತಿಪ್ಪನು, ಮುಖ್ಯನು, ವೇಮಾ**

**೨೩೧ ಓದನೋದಲೇಕೆ? ಸನ್ಯಾಸವು ಏಕೆ?**
**ಷಣ್ಮತದಲಿ ಸಿಕ್ಕು ಸಾಯಲೇಕೆ?**
**ಹರನ ಭಜನೆ ಗೈದು ಆತ್ಮದಿಹುದನು ತಿಳಿ** ವಿಶ್ವ

**೨೩೨ ಓದನೋದದಿರಲು ಸೌಖ್ಯವೆಂಬುದಿಲ್ಲ**
**ಓದನೋದಿ ತಾನು ಒಪ್ಪವಿರಲು,**
**ಓದಿನರ್ಥವರಿತು ಓದಿನಾಚೆ ಓದು** ವಿಶ್ವ

**೨೩೩ ದರ್ಶನಗಳೊಳು ಸಲೆ ಷಣ್ಮತಂಗಳೊಳಗೆ,**
**ಧರೆಯ ವರ್ಣಾಶ್ರಮ ಬಿಡದೆಂದಿಗೂ,**
**ಬರಿದೆ ತಿರುಗುವವನು ಧರಣಿಯೊಳಜ್ಞಾನಿ,** ವಿಶ್ವ

**೨೩೪ ಮೊದಲ ಕ್ರಿಯೆಯು ತಪ್ಪಿ,, ಮೋಸವನು ಮಾಡುತ,**
**ಹೊಟ್ಟೆಗಾಗಿ ಮನಸು ಗಟ್ಟಿಗೊಳಿಸಿ,**
**ಬಿಡಾಡಿ ನಾಯಿ ತರ ಬೆಳೆಯುವರು ಮನುಜರು** ವಿಶ್ವ

**೨೩೫ ಮತಗಳಿಂದ ಲೋಕ ಮಾಯೆಗಳ ತಿಳಿಯದೆ,**
**ಮದದಿಂದ ತನ್ನ ಮರೆತನೆಂದೂ**
**ಬುದ್ಧಿ ಇರದ ಕಾರ್ಯ ಬದ್ಧನಾಗಿ ಕೆಡುವ** ವಿಶ್ವ

೨೩೬ ರಕ್ಷಕನಾದಂಥ, ರಂಡೆ ಮುಂಡೆಯವನ
ದೇವನೆಂದು ಎಣಿಸಿ ಸೇವೆ ಗೆಯ್ಯೆ,
ತಕ್ಕದಷ್ಟೆ; ಪರವ ತಾನು ಅಂಟಬಹುದೆ? ವಿಶ್ವ

೨೩೭ ಸಾರಿ ರಾಮ ಭಕ್ತ; ಶಿಲೆ ಬೊಂಬೆಗೆ ಮಣಿದು,
ಭಜನೆ ಗೆಯ್ವುದೇಕೆ ಭಕ್ತಿಯಿರದೆ?
ಭಕ್ತಿ ನಿಲಿಸಿದವನು ಭಜನೆಯ ಗೆಯ್ಯುವನೆ? ವಿಶ್ವ

೨೩೮ ವಿಷ್ಣು ಭಕ್ತರೆಲ್ಲ ಕೊನೆಗೆ ಬೂದಿ ಪಾಲು;
ವಾದವೇಕೆ? ಮತ ವಿಭೇದವೇಕೆ?
ಲಿಂಗಧಾರಿ ಮರಳಿ ಆದ ಮಣ್ಣು ಪಾಲು ವಿಶ್ವ

೨೩೯ ಶಿವನ ಮಂತ್ರವದು ಶ್ರೀಹರಿಯ ಮಂತ್ರವು
ತಿಳಿದು ತಿಳಿಯದಿಹರು, ತುಚ್ಛ ನರರು
ದೇವರನೆ ಮರೆತರು, ತಮ್ಮ ದೇಹ ನಂಬಿ ವಿಶ್ವ

೨೪೦ ಬೆಟ್ಟದಾ ಮಗಳ ಪತಿಯಾದ ಗಂಗಾಧರನ
ಗುಟ್ಟು ಮನದೊಳಗೆ ತಿಳಿದೊಡೆ, ಪಟ್ಟು ಬಿಡದೆ,
ಗಟ್ಟಿ ಶಿಲೆ ತರ ಮನವಿರೆ, ಶಾಶ್ವತಾಗಿ,
ದಿಟ್ಟನಿರುವಂಥ ಆತನೆ, ತಿಳಿಯೊ, ವೇಮ

೨೪೧ ಅಗ್ನಿ ಕೈಲಿ ಹಿಡಿದು ಆ ಪರಮೇಶ್ವರನ
ನಿಂದೆ ಗೆಯ್ದ ನರರು ನೀರಾದರು
ದಕ್ಷ ಯಜ್ಞದೊಳಗೆ ತಲ್ಲಣಿಸಿದುದರಿಯೆ ವಿಶ್ವ

೨೪೨ ವೀರಶೈವ ಧರ್ಮ ವಿಧವನರಿತ ಜನರು,
ಮತ್ತೆ ಬ್ರಹ್ಮವಿದ್ಯೆ, ಮನದೊಳಿಡಲು
ಗುಡುಗುವ ಹುಲಿಗೆ, ಮರಿ ಸಿಂಹ ರಕ್ಷಣೆಯಂತೆ ವಿಶ್ವ

೨೪೩ ವೀರಶೈವವೆಂಬ ವಿಭವನು ಕೈಹಿಡಿದು,
ಬ್ರಹ್ಮ ವಿದ್ಯೆ ಮೀರಿ ಬೆಳಗುತಿರಲು,
ಊರಿಗೆ ಮೃಗರಾಜ ಹೋದ ಚೆಂದವಾಯ್ತು ವಿಶ್ವ

೨೪೪ ಅಂಗದಲ್ಲಿ ಲಿಂಗ ಅತಿಶಯಾಗಿ ಕಟ್ಟಿ,
ತೀರ್ಥಗಳಿಗೆ ಹೋಗಿ ತಿರುಗುವವರು,
ಬೆಣ್ಣೆ ಕೈಯೊಳಿದ್ದು ತುಪ್ಪಕಳುವ ರೀತಿ; ವಿಶ್ವ

೨೪೫ ಬಂಡೆಗಲ್ಲು ತಂದು ಬಂಧಿಸುತ ಕಟ್ಟಲು,
ಲಿಂಗವೇನು ಕಳವು ಲಂಪಟಾಯ್ತೆ?
ಆತ್ಮಲಿಂಗವನ್ನು ಆರ್ಚಿಸದಿಹರೇಕೊ? ವಿಶ್ವ

೨೪೬ ಕರದಿ ಉರಗಳಲ್ಲಿ ಗಂಗಾಧರನ ಕಟ್ಟಿ;
ತೀರ್ಥಗಳಿಗೆ ಹೋಗಿ ತಿರುಗುವವರು,
ಬೆಣ್ಣೆ ಕೈಯೊಳಿದ್ದು ತುಪ್ಪಕತ್ತ ರೀತಿ; ವಿಶ್ವ

೨೪೭ ಜೀವ ಲಿಂಗ ಪೂಜೆ ಜನರು ಮಾಡುತಿರಲು,
ಶಿಲೆಯ ರೂಪ ಕುರಿತು ಚಿಂತೆಯುಂಟೆ?
ಸಿಹಿ ಮಧು ಸೇವಿಸಲು, ಕಹಿಯು ರುಚಿಸುವುದೆ? ವಿಶ್ವ

೨೪೮ ಅಚರ ಚರ ಸಮೂಹ ಅಂಗವು ಲಿಂಗವೂ
ಸರಿಯ ತಿಳಿಯದಂಥ ಶೈವವೇಕೆ?
ಅಷ್ಟ ತನುಗಳೆಲ್ಲ ಹರನೆ ಎಂದರಿಯರೇಕೊ ವಿಶ್ವ

೨೪೯ ಬೌದ್ಧ ಮತದ ಜನರು ಬುದ್ಧಿ ದೈವವೆಂದು
ಹೆಚ್ಚು ಕಡಿಮೆ ಗೈವ ಹೀನ ಬುದ್ಧಿ,
ಗಾರ್ದಭಕ್ಕೆ ಲಕ್ಷ್ಮಿ ಗಕ್ಕನೆ ಒಲಿವಂತೆ ವಿಶ್ವ

೨೫೦ ಭೂಮಿಯೆಂದರೇನು? ಪೊಡವಿಯೆಂದರೇನು?
ಧರಣಿಯೆಂದರೇನು? ಪುರುಷವರರೆ!
ಇಷ್ಟೂ ಒಂದೆ ಇರಲು, ಇನ್ನು ಮತಗಳೇಕೆ? ವಿಶ್ವ

೨೫೧ ಹಸುಗಳ ಬಣ್ಣ ಬೇರೆ; ಹಾಲು ಎಲ್ಲ ಒಂದೇ
ಪುಷ್ಪಜಾತಿ ಬೇರೆ; ಪೂಜೆಯೊಂದೇ
ದರ್ಶನಗಳು ಬೇರೆ ದೈವವೆಂಬುದೊಂದೇ ವಿಶ್ವ

---

೨೫೨ ಮತವು, ಭೇದವೆಲ್ಲ ಮಾಯೆ ಸಂಸಾರವೆ
ದಾರಿಯ ತಿಳಿಯಲಾರ ತಮವ ಹೊಂದಿ;
ದಾರಿ ತಿಳಿಯುವವನೆ ಧನ್ಯನಾದನಲ್ಲ! ವಿಶ್ವ

೨೫೩ ಮತಗಳೆಷ್ಟೆ ಇರಲಿ, ನಿತ್ಯವಾವುದಿಲ್ಲ
ನಿತ್ಯ ಕರ್ಮವಾಯ್ತು ನಿಖಿಲ ಜಗದಿ
ಅಖಿಲ ಮತಗಳಲ್ಲಿ ಅರಿಯೆ ಒಂದು ಇಲ್ಲ ವಿಶ್ವ

●

# ಧರ್ಮ ದರ್ಶನ

## ಆಚಾರ ವಿಧಿ:

ವಿಚಾರವು ಆಚಾರಕ್ಕೆ ಮೂಲವಾಗಿದೆ. ಹೇಗೆ ವಿಚಾರಿಸುವನೋ, ಅಂತೆಯೇ ಆಚರಿಸಬೇಕು, ಸ್ನಾನ, ನಿರಶನ, ಜಪ–ತಪ, ದೇವ–ಪೂಜೆಗಳು ನಿಯಮ ಸಾಧನೆಯ ಅಂಗಗಳೇನೋ ಸರಿ. ಆದರೆ, ಕೇವಲ ಮಡಿ–ಮೈಲಿಗೆಯ ಭಾವನೆಯಿಂದ ಮಾಡುವ ಸ್ನಾನ, ನೀರು ಮುಳುಗುಗಳಿಗೆ ವಿಶೇಷ ಅರ್ಥವಿಲ್ಲ. ಕಪ್ಪೆ ಸ್ನಾನದಂತೆಯೇ ಸರಿ.

ಉಪವಾಸವೆಂದರೆ ಉಪ+ವಸ. ಅರ್ಥಾತ್ ದೇವರ ಬಳಿ ಇರು; ಕೇವಲ ಹೊಟ್ಟೆಗೆ ಕೂಳು ತುಂಬುವಲ್ಲಿಯೇ ಕಾಲಹರಣ ಮಾಡಿದೆ, ನೆತ್ತಿಯಲ್ಲಿ ದೇವರ ಧ್ಯಾನ ಮಾಡಬೇಕೆಂಬ ಇಂಗಿತವಿದೆ. ಹಾಗೆ ಮಾಡದಿದ್ದರೆ, ದೇಹದಲ್ಲಿ ಕೂಡಿಬಿದ್ದ ಮಲ ಇಲ್ಲವೆ ನೆಣವನ್ನೇ ನಿರಶನ ವ್ರತಿಯು ಭಕ್ಷಿಸುತ್ತಾನಷ್ಟೇ. ಮಲ ಭಕ್ಷಿಸುವವನಿಗೆ 'ಊರ ಹಂದಿ' ಎನ್ನಬಹುದಲ್ಲವೇ?

ಹಲವರು ಕೇವಲ ಜಪಮಣಿ ತಿರುಗಿಸುತ್ತ ಹತ್ತೆಂಟು ಬಾಹ್ಯ ವ್ಯಾಪಾರಗಳಲ್ಲಿ ತೊಡಗಿರುತ್ತಾರೆ. ಜಪವು ವೈಖರಿಯಿಂದ, ಉಪಾಂಶುವಾಗಬೇಕು. ಉಪಾಂಶುವಿಂದ ಮಾನಸಿಕ ಅರ್ಥಾತ್ ಅಜಪಾಜಪವಾಗಬೇಕು. ಕೇವಲ ಮಣಿ ತಿರುಗಿಸಿದರೆ ಬರುವ ಭಾಗ್ಯವೇನು? ಅದೇ ರೀತಿ, ತಪ–ನೇಮಗಳನ್ನು ದೈಹಿಕ ಕ್ರಿಯೆಯೆಂದು ಮಾಡದೆ ಮಾನಸಿಕ ಏಕಾಗ್ರತೆಗಾಗಿ ಮಾಡಬೇಕು.

ಇನ್ನು ಪಿಂಡದಾನ, ಶ್ರಾದ್ಧ ಕರ್ಮಗಳಲ್ಲಿ ಕಂಡು ಬರುವ ಮೂಢ ಶ್ರದ್ಧೆಯಂತೂ ತೀರ ತ್ಯಾಜ್ಯವೇ ಸರಿ. ದೇವಾಲಯದ ಪೂಜೆಯಿಂದ ವೈಯಕ್ತಿಕ ಮನದ ಮೇಲಾಗುವ ಪರಿಣಾಮಗಳನ್ನು ಅರಿಯಬೇಕು.

— — — — — — — — — — — — — — — — — — — — — —

೨೫೪ ಗಂಗೆ ಸ್ನಾನ ಮಾಡಿ ಘನರೆನಿಸಿದವರೆಲ್ಲ,
ಭಂಗ ಪಡುವರಧಿಕ ಭಾಧೆ ಹೊಂದಿ,
ಗಂಗೆ ನೀರಿಗಿಂತ, ಗಯೆ–ತೀರ್ಥಕಿಂತ,
ಎಣಿಸೆ, ಬೇವಿನ ರಸ ಗಣ್ಯ ವೇಮ

೨೫೫ ನೀರು ಸುರಿದು ಹೊಳೆದು, ನಿತ್ಯ ಶೋಧಿಸುತ್ತ,
ಕೂಳು ಹಾಕಿ ಮೇಲೆ ಕಟ್ಟಿ, ಬಟ್ಟೆ,
ಏನು ಪಾಡು ಪಡುವ ಈ ದೇಹಕ್ಕಾಗಿ? ವಿಶ್ವ

೨೫೬ ಮೂಗು–ದಾರ ಜಗ್ಗಿ, ಮಲಿನ ಹೋಗುವಂತೆ,
ಮಡದ ಜಲದಿ ನಿಂತು ಮತ್ತೆ ತಿಕ್ಕಿ,
ತೊಗಡೆ ತೊಳೆದರಾಗ ದೊರಕಬಹುದೆ, ಮೋಕ್ಷ? ವಿಶ್ವ

೨೫೭ ನೀರು ಮುಳುಗುವವನು ನಿರ್ಮಲಾತ್ಮನಲ್ಲ;
ಪೂರ್ಣವಾದ ಮುಕ್ತಿ ಹೊಂದಲಾರ
ನೀರುಗೋಳಿ ನಿರುತ ನೀರೊಳು ಮುಳುಗದೆ? ವಿಶ್ವ

೨೫೮ ಮುಳುಗಿ ಬ್ರಾಹ್ಮಣನಿಹ ಮುಂದುಗಾಣದಾದ
ತಿರುಗಿ ತಿರುಗಿ ಅವನು ದಿಮ್ಮನಾದ
ಕೂಗಿ ಕೂಗಿ ಕಡೆಗೆ ಕುಕ್ಕರ ತಾನಾದ ವಿಶ್ವ

೨೫೯ ಶುಭ್ರ ಸ್ನಾನ ಗೈದು ದಾನವೀಯದನಕ,
ನೀರಲಿ ಮುಳುಗೆ ಬಂದ ಭಾಗ್ಯವೇನು?
ನೀರುಗೋಳಿ ನೀರಿನೊಳಗೆ ಮುಳುಗದೇನು? ವಿಶ್ವ

೨೬೦ ನೀರು ಮುಳುಗಲೇನು? ನಿಧಿಯ ಹೂಳಲೇನು?
ಮನದಿ ಗುಡಿಯೆಡೆ ಕರ ಮುಗಿದರೇನು?
ಕಪಟ ಕಲ್ಮಷಗಳು ಒಡಲು ತುಂಬಿ ಇರಲು! ವಿಶ್ವ

೨೬೧ ಶುದ್ಧ ಸ್ನಾನ ಮಾಡಿ, ಪಟ್ಟಿ ನಾಮ ಬಳಿದು,
ನೀರು ಕಾವಿ ಪಂಜೆ ನೀರಿಗೆಗಟ್ಟಿ,
ನೃತ್ಯಗಾತಿ ಕಾಣಲೆಲ್ಲ ವ್ರತ ಮರೆವರು ವಿಶ್ವ

೨೬೨ ಕುಕ್ಕರ ಏಕಾಂತ, ಕೊಕ್ಕರೆಯ ಧ್ಯಾನ,
ಕತ್ತೆ ರಾಗ ಮತ್ತೆ ಕಪ್ಪೆ ಮುಳುಗು,
ಆತ್ಮವರಿವ ಭಾವ ಅಂತುಕೊಳ್ಳರೇಕೊ? ವಿಶ್ವ

೨೬೩ ನೀರು ಅನ್ನಗಳನು, ನಿದ್ರೆಯತಾ ಬಿಟ್ಟು,
ಮುಕ್ತಿಗಾಗಿ ಅಲೆವ, ಮೂಢ ಮನುಜ!
ಹುಚ್ಚು ನಾಯಿಯಂತೆ ವ್ಯಥೆಯ ಅಲೆತವಷ್ಟೆ! ವಿಶ್ವ

೨೬೪ ದಶಮಿ ಏಕಾದಶಿ ಎಂಬ ವ್ರತ ಮಾಡಿ
ತಿನ್ನದಿರಲು ದುರ್ಗುಣವಡಗುವುದೆ?
ಹುತ್ತ ಮೇಲೆ ಹೊಡೆಯೆ ಹಾವು ಸಾಯದಲ್ಲ!
ಈ ರೀತಿಯು ಮೌಢ್ಯ; ಈ ರೀತಿಯ್ಕೆ ವೇಮ?

೨೬೫ ಕೂಳು ಹಾಕದಿರಲು ಕುಕ್ಷಿ ಜೊತೆ ಜಠರಾಗ್ನಿ,
ಭಕ್ಷಣ ಮಾಡುವುದು ಕುಕ್ಷಿಮಲವ;
ಕೂಳು ತೊರೆದು ಮಲವ ಕಬಳಿಪನೆ ಉಪವಾಸಿ? ವಿಶ್ವ

೨೬೬ ಉಪವಾಸವಿರುವವ ಊರ ಹಂದಿಯ ಮಗ,
ತಪಸಿಯಾಗೆ, ಬಡತನವೆನನುಭವಿಸು;
ಶಿಲೆಗೆ ಮಣಿಯಲೇಕೆ ಜೀವಿಯೊಳಿಹ ಬೊಮ್ಮ ವಿಶ್ವ

೨೬೭ ಉಪವಾಸ ಗೆಯ್ದು, ಯೋಗಿ ನೀರು ಮುಳುಗಿ
ಕೂಳು ಅಟ್ಟು, ದೇವಗೀವೆನೆನುತ,
ಅವನ ಬಾಯಿ ಕಟ್ಟಿ, ಅವರೆ ತಿನುವರಲ್ಲ? ವಿಶ್ವ

೨೬೮ ಎಣಿಸಿ, ಎಣಿಸಿ, ಪೂಜೆ ಎಷ್ಟು ಮಾಡಲೇನು?
ಭಕ್ತಿಯಿರದ ಪೂಜೆ ಫಲವು ಇಲ್ಲ
ಇಂತು ಪೂಜೆ ಗೆಯ್ಯೆ ಏನು ಕಾರಣವೋ? ವಿಶ್ವ

೨೬೯ ಅಕ್ಷಮಾಲ ಎಣಿಸಿ ಅಳಲು ಪಡೆಯಲೇಕೆ?
ನಿಶ್ಚಲಾತ್ಮ ಮೇಲು, ನಿಯತಿ ಇರದೆ;
ಕುಕ್ಷಿಯಿಂಪಿನವನು ಗುಹೆ ಸೇರಿ ಫಲವೇನು? ವಿಶ್ವ

೨೭೦ ಮಾಲೆಯ ತಿರುಗಿಸುತ, ಮಂತ್ರವನು ಗೊಣಗುತ,
ಮನದಿ ಏನೊ ಎಣಿಸೆ, ಮಹಿಮೆಯುಂಟೆ?
ಬುದ್ದಿ ನಿಲಿಸಿ, ಇರಲು ಪುಣ್ಯ ಕೈವಶವದು ವಿಶ್ವ

೨೭೧ ನೂರೆಂಟು ಮಣಿ, ನೇಮ ಪುಣ್ಯಗಳು
ಇರುವ ಜೀವಿಗಳಿಗೆ ಇಲ್ಲ ಲೆಕ್ಕ!
ಕೆಟ್ಟ ನೀರು ನದಿಗೆ ಕೂಡುವಂಥ ರೀತಿ ವಿಶ್ವ

೨೭೨ ಷೋಡಶೋಪಚಾರ, ಶೂನ್ಯ ಪ್ರಚಾರಗಳು
ಭಕ್ತಿಯಿರದ ಹಾಡು ಫಲವು ಉಂಟೆ?
ನಿಕ್ಕಿಯಾದ ಭಕ್ತಿ ಚೊಕ್ಕ ಮಣಿಯೆ ಸಾಕು; ವಿಶ್ವ

೨೭೩ ತಪವು ಏಕೆ? ಅರಿಯೆ ಧಾತ್ರಿ ಜನರಿಗೆಲ್ಲ?
ಒಪ್ಪ ಶಿವನ ನೋಡೆ, ಉಪಮೆ ಹೊಂದಿ,
ಮನಸು ಚದುರದಿದ್ದು ಮಹಿಯಲ್ಲಿ ನೋಡಿರೊ ವಿಶ್ವ

೨೭೪ ವ್ರತಗಳೆಷ್ಟೊ ಏನೋ? ವ್ಯರ್ಥ, ಸಿಗುವುದಿರಲಿ,
ಆತ್ಮ ಸಿಕ್ಕು ನೋಡೆ, ಅಸಾಧ್ಯವದು!
ಆತ್ಮ ಸಿಕ್ಕು ಬಿಡಲು, ಅವನೇ ಘನ ಯೋಗಿ, ವಿಶ್ವ

೨೭೫ ವ್ರತದೊಳಿರುವನಾರೊ? ವ್ರತವ ಗೆಯ್ವನಾರೊ?
ವರವನೀವನಾರೊ? ವಸುಧೆಯೊಳಗೆ
ಇಷ್ಟು ಕಂಡರಿಯಲು, ಇದೇನಿರುವುದು? ವಿಶ್ವ

೨೭೬ ನೂರು ಎಂಟು ಇಹವು ನೇಮದಿ ಪುಣ್ಯಗಳು,
ಉಂಟೊ? ಜೀವಿಗಳಿಗೆ ಗಣನೆಯಿಲ್ಲ
ಕೊಳಕು ನೀರು ನದಿಯ ಕೂಡಿದಂತೆ ಅಷ್ಟೆ ವಿಶ್ವ

೨೭೭ ಕಲಿಯುಗದಲಿ ಧರ್ಮ ಕೋಟಿಗೊಬ್ಬಗುಂಟು
ಇಲ್ಲ ಇಲ್ಲವೆನುತ ಇಹನು ಲೋಭಿ
ಅಷ್ಟು ಧರ್ಮಿಷ್ಠತನ ಆಚೆಗೇನಿರುವುದು? ವಿಶ್ವ

೨೭೮ ಜೊಳ್ಳು ಮಾತನಾಡಿ, ಜಗದಿ ತಿರುಗುವನು
ಕಳ್ಳ ಗುರು ಕಟ್ಟುವ ಕರ್ಮಗಳನ್ನು
ಹಲ್ಲೊಳು ಹುಳು ಸೇರಿ ಹಾಯೆನಿಸದೆ ನೋಡು ವಿಶ್ವ

೨೭೯ ಖೇಚರರು ಭುವಿಯಲಿ ಕಾಣದಿಹರೆನುವರು
ಕಂಡುಬಂದರೇನು, ಗೌರವಿಪರೆ?
ತಾಯಿ ತಂದೆ ಗುರುವು ತತ್ಸಮವಾಗರೇ? ವಿಶ್ವ

೨೮೦ ಪಿತರ ಅನ್ನವೆನುತ ಪ್ರೀತಿಯಿಂದ ಕರೆದು,
ಕಾಗೆಗಳಿಗೆ ಇಡುವ ಕರ್ಮಿಗಳೇ!
ಕಾಗೆಯಲ್ಲಿ ಏನು? ಘನರಿಗೀಯಬೇಕು ವಿಶ್ವ

೨೮೧ ಪಿಂಡಗಳನು ಮಾಡಿ, ಪಿತೃವೆಂದು ತಿಳಿದು,
ಕಾಗೆಗಳಿಗೆ ಇಡುವ ಕರ್ಮಿಗಳೇ!
ಶಗಣಿ ತಿಂಬ ಕಾಗೆ ಪಿತೃವೆಂತೆನಿಪುದು? ವಿಶ್ವ

೨೮೨ ನಿಯಮಗಳಲಿ ನಿಪುಣ; ನೇಮಗಳ ಪಾಲಿಪ;
ಷೋಡಶೋಪಚಾರ ಸೂಕ್ತಿಗಳನು
ಮಾಡಿ, ಶಿವನ ಸತತ ಸೇವಿಸುತ್ತ ಇರುವ ವಿಶ್ವ

೨೮೩ ದಮ್ಮು ಗುಣ ಹೊಂದಲು ದುರಗಮ್ಮಗೆ ಬೇಟೆ,
ಭಕ್ಷ್ಯ ಬೇರೆ? ಏನಮ್ಮಗೆ ದಮ್ಮೆ?
ಮಾರಿಯಮ್ಮ ಹೆಸರು! ಮಾಡುವುದು ತಿನ್ನಲು; ವಿಶ್ವ

೨೮೪ ಕಳ್ಳ ಗುಡಿಗೆ ಹೋಗಿ ಗಂಟು ಬಿಚ್ಚಿ ನೋಳ್ಪ:
ನಿಜದಿ ಸ್ವಾಮಿಯನ್ನು ನೋಡಲಿಲ್ಲ
ಸೇರಿ ಮನೆಯ, ನಾಯಿ ಸೇರಿಸಿಡದು ಗಡಿಗೆ ವಿಶ್ವ

೨೮೫ ದೇವ ಪೂಜೆ ಗೆಯ್ಯೆ ದಿವ್ಯ ಭೋಗವುಂಟು;
ತತ್ತ್ವವರಿಯುವವನು ದೈವ ಸಮನು
ಏನು ಇರದ ನರಗೆ ಯಾವ ಗತಿಯು ಇಲ್ಲ ವಿಶ್ವ

೨೮೬ **ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ;**
**ಪೂಜ್ಯ ವಸ್ತುವೆನಲು ಭುವಿಯಲಿ**
**ಎಲ್ಲಿ ಪೂಜೆ ಗೆಯ್ಯೆ? ಎಲ್ಲ ದಿಶೆಯಲಿ ತಾನೆ?**
**ತಾನು ನಾನು; ನಾನೆ ತಾನು ವೇಮ**

●

# ಗೃಹಸ್ಥನ ಬಾಳು

**ಅ. ಗೃಹಸ್ಥ ಧರ್ಮ:**

ಕುಟುಂಬವು ಸಮಾಜದ ಘಟಕ. ಸಮಾಜದ ನೆಮ್ಮದಿಗಾಗಿ ಕುಟುಂಬದಲ್ಲಿ ನೆಮ್ಮದಿ ನೆಲೆಸುವುದು ಅನಿವಾರ್ಯ. ತಾಯಿ–ತಂದೆಯಂದಿರನ್ನು ದೇವರೆಂದು ಕಾಣಬೇಕು. 'ಮಾತೃದೇವೋ ಭವ; ಪಿತೃ ದೇವೋ ಭವ' ಎಂದು ಶ್ರುತಿವಚನವೂ ಇದೆ.

ಸಮಾಜದಲ್ಲಿ ಸಮಾನತೆ, ಸಮಭಾವ ಕುದುರಲು, ಬಡವರೊಂದಿಗೆ ಲಗ್ನ ಸಂಬಂಧ ಬೆಳೆಸಬೇಕು. ಇದು ಪ್ರೀತಿ ವರ್ಧಕವೂ ಆಗಿರುತ್ತದೆ. ಧನದಾಶೆಯಿಂದ ಲಗ್ನ ಸಂಬಂಧ ಕುದುರಿಸಿದರೆ, ಅಲ್ಲಿ ದಾಂಪತ್ಯ ಸುಖವು ಸಿಕ್ಕದಿರಬಹುದು. ಸತಿ ಪತಿಯರು ಪರಸ್ಪರ ಒಲಿದು ಸಹಕರಿಸಿ ಬಾಳಿದರೆ ಮಾತ್ರ ದಾಂಪತ್ಯವು ಸುಖದ ಸಾಗರವಾಗುತ್ತದೆ, ಇಲ್ಲವಾದರೆ ವಿರಸ ಬೆಳೆದು ದುಃಖದ ಕೋಡಿ ಹರಿಯುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಂಡತಿಯನ್ನು ರಕ್ಷಿಸುವ ಹೊಣೆ ಗಂಡನದಾಗಿರುತ್ತದೆ. ಅವಳ ದೋಷವನ್ನು ಸಕಾಲದಲ್ಲಿ ಅರಿತು ತಿದ್ದಬೇಕು. ಸಸಿಯಾದಾಗ ಮಣಿಸದೆ, ಮರವಾದಾಗ ಮಣಿಸುವೆನೆಂದರೆ ಹುಚ್ಚುತನವಷ್ಟೇ.

೨೮೭ **ತಾಯಿಯೇ ಪಾರ್ವತಿಯು; ತಂದೆಯೇ ಶಂಭುವು;**
**ಪ್ರಮಥ ಗಣವು ಅಖಿಲ ಬಂಧು ಬಳಗ**
**ತಾನು ಹುಟ್ಟಿದ ಮನೆ, ತನಗೆ ಕೈಲಾಸವು ವಿಶ್ವ**

೨೮೮ **ತಾಯಿ ತಂದೆಯರೇ ತನಗೆ ಗುರುವು, ದೈವ;**
**ತಾಯಿ ತಂದೆಯರೇ ತನಗೆ ಜೋಡು**
**ತಾಯಿ ತಂದೆಯಿಂದ ತನುವು ಆಯಿತಲ್ಲ! ವಿಶ್ವ**

೨೮೯ **ತಾಯಿ ತಂದೆ ತಿಳಿಯೆ ಮೊದಲ ಗುರುವು,**
**ಪಾರ್ವತಿ ಭವರೆಲ್ಲ ಪರಮ ಗುರುವು**
**ಕೂಲಿ ಕೊಳ್ಳುವವನ ಗುರುವೆನಲು ದ್ರೋಹವು ವಿಶ್ವ**

೨೯೦ ತಾಯಿ ತಂದೆ ಹಿತರು ಬಂಧು ಬಳಗವೆಲ್ಲ,
ಒಳಿತು ಕೋರಿ ವರನ ಇರವ ನೋಡಿ,
ಕನ್ನೆ ಕೊಡುವರಷ್ಟೆ? ಭಾಗ್ಯ ಕೊಡಲರಿಯರು ವಿಶ್ವ

೨೯೧ ಮೊದಲಿಗಿಹ ಮಾತೃ ದೇವತೆ;
ತದನಂತರ ಜನಕನು ಇರುವ ಪರಿಕಿಸುತಿರಲ್,
ಕುದುರಿದ ಸದಮಲ ಗುರುವೇ
ತುದಿ ದೈವವು; ಪರರು ಬೇರೆ ತೋರರು ವೇಮ

೨೯೨ ತಾಯಿ ತಂದೆಗಳಲಿ ದಾರಿದ್ರ್ಯಯುತರಲಿ
ನಂಬಿಕೊಂಡ ಬಡವ ನರರಲ್ಲಿಯು,
ಪ್ರಭುಗಳಲಿ ಬಹಳ ಭಯ ಭಕ್ತಿಯಿರಿಸು ವಿಶ್ವ

೨೯೩ ತಾಯಿ-ತಂದೆ ಪೂಜೆಯ ದಾರಿಗಾಣ ಕೊಂಚ;
ಪಾಪ ಕೂಪದಲ್ಲಿ ಪತನವೇಕೆ?
ದಾನ ಧರ್ಮ ಗೆಯ್ಯೆ ದೈವ ತಾನಾಗುವ; ವಿಶ್ವ

೨೯೪ ತಾಯಿ-ತಂದೆಯಿಂದ ತಿಂಡಿ ಸಾಧನಾಯ್ತು;
ತಾಯಿ-ತಂದೆ ಶತ್ರು ತನಗೆ ಅಯ್ಯ;
ತಾಯಿ ತಂದೆಯರನು ತಂದುಕೊಳ್ಳಬಹುದೆ? ವಿಶ್ವ

೨೯೫ ತಾಯಿ ತಂದೆ ಮಡಿಯೆ, ತನಯ ತಾನು ಅಳುವ;
ಪತಿಯು ಮಡಿಯೆ ಮತ್ತೆ, ಪತ್ನಿ ಶೋಕ;
ಕಾಯ ವಶದಿ ಅಷ್ಟೆ; ಕುದುರಲಿಲ್ಲ ಮೋಹ ವಿಶ್ವ

೨೯೬ ಹಡೆದ ತಾಯಿ-ತಂದೆ ಹೊರೆಯುವುದನು ಬಿಡಲು,
ಹಡೆದು ಬೆಳೆಸಿದ ಋಣ ಹಿಂಗದಯ್ಯ ;
ತಾಯಿ-ತಂದೆ ನೋಯೆ, ತಪವು ಸಿದ್ಧಿಸುವುದೇ? ವಿಶ್ವ

೨೯೭ ತಾಯಿ ತಂದೆಯೆನಲು ತತ್ತ್ವವನು ತಿಳಿಯರು,
ಯೋನಿ ಲಿಂಗಗಳಲಿ ಉದ್ಭವಿಸುತ,
ವಿಷ್ಣುವರಿಯೆ ತಾಯಿ; ವಿಭವಿಪ ರುದ್ರ ತಂದೆ ವಿಶ್ವ

೨೯೮ ತಾಯಿ ಮಡದಿಯಾಗಿ, ತಕ್ಕ ಸೊಸೆಯು ಆಗಿ,
ಸೊಸೆಯೆನುತನುತಿರೆ ಸುಕುಮಾರಿಯು
ಮಾಯೆ ಬಿಡದೆ ಮುಕ್ತಿ ಮಹಿಯೊಳಗೆ ಆಗದು ವಿಶ್ವ

೨೯೯ ಗಂಡಸಿರಲಿ; ಹೆಂಗಸಿರಲಿ,
ಕಂಡು ಹಾಗೆ ಬಿಡದೆ ಇರಲಾ ಸಂಬಂಧಿ ಜನರ್,
ಬಂಡಲ್ವೆ ಯುಗ ಯುಗ ನಟಿಸೆ
ಕಂಡರಿಯೊ ಇಂಥ ವಸ್ತುವ ಸುಗುಣಾ! ವೇಮಾ

೩೦೦ ತಂದೆಗಿಂತ ಸುಗುಣಿ ತನಯ ತಾನಾಗಲು,
ಎಳತನ–ಹಿರಿತನದ ಎಣಿಸೆ ಹೊಲ್ಲ
ವಾಸುದೇವನುಳಿದು ವಸುದೇವನೆಂಬರೆ? ವಿಶ್ವ

೩೦೧ ಮಾತೆ ಬದುಕಿರಲ್ಕೆ ಮಗನ ಮುದ್ದಿಸುವಳು
ಸತ್ತು ಹೋಗಲವಳು ಪೊರೆವರಾರು?
ಸತ್ಕಾಲ ಒದಗಲು ಸತ್ಕೀರ್ತಿಯರ್ಜಿಸು ವಿಶ್ವ

೩೦೨ ಸತಿಯು ಜಪತಪಗಳ ಶುರುವು ಮಾಡಿದೊಡನೆ,
ಪುರುಷರೇಕೆ ಮತ್ತೆ ಪೊಡವಿಯಲ್ಲಿ,
ಪಾಪವೆಂದು ತಿಳಿದು ಪಿಡಿದು ಶಿಕ್ಷಿಸುವರೊ? ವಿಶ್ವ

೩೦೩ ಮಡದಿ ಮಕ್ಕಳಾಗಿ, ಮೇಲೆ ಸಂಪದವಿರೆ,
ಭಜನೆ ಗೆಯ್ವರೀಶ ಭಕ್ತಿ ಇರದೆ;
ಭಜನೆ ಮಡುವವನು ಭಕ್ತನಾಗಲಾರ ವಿಶ್ವ

೩೦೪ ಮಡದಿ ನೀಡದವನ, ಒಡಲು ತುಂಬಿದವನ,
ಒಡಲು ತಣಿಸಿ ಘನತೆ ಮೆರೆಸದವನು
ನಡತೆ ತಪ್ಪಿದವನು; ನೀಚಾಧಮನವನು ವಿಶ್ವ

೩೦೫ ಬಡವನಾಗಿರುವಗೆ ಪುತ್ರಿ ಇತ್ತರಾಗ,
ಧನವ ಕೇಳೆ ಹೊಲ್ಲ; ದುಷ್ಟನಿರಲಿ
ಹೊಲಸು ತಿಪ್ಪೆಗಾಗಿ ಹೈನ ಪಶು ಕೊಂಡಂತೆ ವಿಶ್ವ

೩೦೬ ಕೊಡುವ ಕೊಳುವ ಲಗ್ನ ಹಿತ ಸಂಬಂಧಗಳು,
ಕಡಿಮೆಗೊಳದೆ ಕಮಲದಂತೆ ಹಬ್ಬಿ,
ಕುಡಿಯು ಮೊಗ್ಗೆಯಾಗಿ ಕಡು ರಮ್ಯವಾಗಿಹವು! ವಿಶ್ವ

೩೦೭ ತನಗೆ ಬಂಧುವೆನುತ, ತಾನೆ ಕರೆದು ತಂದು,
ಸಂಪದಿಹುದ ಕಂಡು ಸಲೆಯಾಶಿಸಿ,
ದಕ್ಷಿಣೆಯಿತ್ತು ತರುಣಿ ತಾನು ಕೊಡುವ ನೋಡು; ವಿಶ್ವ

೩೦೮ ಕರೆದು ಬಲವಂತದಿ ಕನ್ನೆನೀಯ ಬೇಡ
ಚುರುಕು ಮುಂಡೆ ಜೊತೆಗೆ ಬೆರೆಯ ಬೇಡ
ನಾಚಿಕೆ ತೊರೆದು ಇನ್ನು ಜನಿಸುವುದೇ ಬೇಡ ವಿಶ್ವ

೩೦೯ ಕನಕ ನೋಡಿ ಕೊಡಲು, ಕಾಯ ಕೊಯ್ದ ಹಾಗೆ,
ಸರಿಕಗೀಯಲದುವೆ ಸರಸತನವು
ಬಡವಗಿತ್ತ ಮದುವೆ ಬಹು ಹೊಂದಿಕೆಯಲ! ವಿಶ್ವ

೩೧೦ ಕನಕವಿರುವವನನು ಕಂಡು ಹಿಡಿದು ಕೊಟ್ಟ,
ಮನವು; ಉಕ್ಕಿ ಹಾಲು ಮರಳುವಂತೆ;
ಒಳಗೆ ಅರಿ, ಕನಕ ಒಳಗೆ ಹಿಂಗದೇನು? ವಿಶ್ವ

೩೧೧ ಕಂಡು ಸಂಪದ ಬಲ, ಕನಕವನಾಶಿಸುತ,
ಕನ್ನೆಯೀಯೆ, ಪೂರ್ವ ಗತಿಗಳೆಂತೊ?
ಬಡವನನುವು ಮೀರಿ, ಬಾಲೆಯೀಯುತಿಹನು ವಿಶ್ವ

೩೧೨ ಒಳ್ಳೆ ಶಕುನಗಳನು, ಎಣಿಸಿ ಲಗ್ನ ಗೆಯ್ಯೆ,
ಅವರೊಳೊಬ್ಬರಿಲ್ಲ ಅವನಿಯಲ್ಲಿ!
ಜನರ ಕರ್ಮಗಳನು ಶಕುನ ನಿಲ್ಲಿಸುವವೆ? ವಿಶ್ವ

೩೧೩ ತಕ್ಕ ಸತಿಯು–ಪತಿಯು ಧರ್ಮಗೂಡಿ ಇರಲು,
ಕಡು ಬಲಿಷ್ಠ ಜನಿಪ ಘನತೆಯೊಡನೆ
ಪುರುಷ ಬಲಿಷ್ಠನಿರೆ, ಪುತ್ರ ಪ್ರಬಲನಿಪ್ಪ ವಿಶ್ವ

೩೧೪ ಕನಕ ಗ್ರಾಮಗಳಿಗೆ ಕಾರಣ ಕರ್ತರು
ಹೀಗೆ ಉಂಟಾಗುತ ಉಭಯರು ಇರುತಿರಲು,
ಗಂಡ ಪಕ್ಷಿ ಜೊತೆಯು ಕಂಡ ರೀತಿ,
ಉಂಟು; ಕೂಡಿ ಬದುಕುತಿಹರು ವೇಮ

೩೧೫ ಒಂದಾದ ದಂಪತಿ ಚಂದದ ಸಂಸಾರ,
ನಂದನನ ನಡೆನುಡಿ ನಂದಿನಿಯೊಳು;
ಸತಿಗಿತ್ತ ರಕ್ಷಣೆಯು ಸ್ವಂತಕ್ಕೆ ರಕ್ಷಣೆ ವಿಶ್ವ

೩೧೬ ಮನವಾರೆ ಮುದಿಸುವ ಮಡದಿ ತನ್ನವಳಿರೆ,
ಮನೆಗಾದರೂ ಒಡೆಯನೆನಿಸಬಹುದು
ಇನಿತಾದರು ಇರದ ಬದುಕು ಅಧಮ ಜಗದಿ ವಿಶ್ವ

೩೧೭ ಭಕ್ತಿ ಮುಕ್ತಿ ಉಂಟು ಭಾಗ್ಯ ಮತ್ತೆ ಉಂಟು;
ಚಿತ್ತವರಿತ ಮಡದಿ ಜೊತೆಯೊಳಿರಲು,
ಚಿತ್ತವರಿಯದ ಸತಿ ಹತ್ತಿರಿರಲು ಹೊಲ್ಲ ವಿಶ್ವ

೩೧೮ ಹೆಂಡತಿಯೆನೆ ಆತ್ಮ ಕಣಾ!
ಹೆಂಡತಿಯೆನೆ ತಾಯಿ ಕಾಣಾ ಅರಿತೊಡೆ ಮನದೊಳ್
ಹೆಂಡತಿ ತಾಯಿಯೆನಲಾರು?
ಕಂಡರಿಯಬೇಕಿದನೆ ತಪ್ಪದಂತೆ ವೇಮಾ,

೩೧೯ ಸೂತ್ರವಾವುದರಿಸಿ ನೋಡೆ,
ಸೂತ್ರ ಸ್ತ್ರೀಯದೆನುವುದೇ ಸಿದ್ಧವಿಹುದಲಾ!
ಸೂತ್ರವೆನೆ ಸ್ತ್ರೀ ಸೂತ್ರವೆ
ಸೂತ್ರವದ ತಿಳಿಯುವಾತನೆ ನಾಥನು ವೇಮಾ

೩೨೦ ಪುಣ್ಯವೆಲ್ಲ ಕೂಡಿ, ಪುರುಷನಾಗಿ ಜನಿಸಿ,
ಪಾಪವೆಲ್ಲ ಕೂಡಿ, ಬಂದಳು ಸತಿ
ಕಷ್ಟದ ಸತಿಯೆಂದು ಕಾಣುವವರು ಇಲ್ಲ ವಿಶ್ವ

೩೨೧ ಸತಿ ಪತಿ ಸೌಖ್ಯವು ಇಳೆಯಲಿ
ಇತಿಯೆಂದವಳ ಸತಿಯೆನ್ನ ಬಹುದೈ ಬಳಿಕಾ
ಸ್ಥಿತಿಯಂತಾಗದೆ ಇರ್ದೊಡೆ,
ಶ್ರುತವಿದು ಯಮದೂತನಂತೆ, ಸನಿಹದಿ ವೇಮ

೩೨೨ ಸತಿಯ, ಸುತರ, ಧನವ ಸಲೆಯರಿತು ಮೀರದೆ,
ಮತ್ತೆ ಕರ್ಮಗಳಲಿ ಮೋಸ ಹೋಗಿ,
ಕಾಲ ಬಂದೊಡಾಗ ಕಡೆಗೆ ತೀರ ತಲುಪ ವಿಶ್ವ

೩೨೩ ಸತಿಯು, ಸುತರು ಕೂಡಿ ಸಕಲರು ಗೆಯ್ದಾಗ,
ಕಾರಿಕೊಂಡುದನ್ನು ಕೂಡಿಸಿಟ್ಟು,
ಭೂತ ನೆಕ್ಕುವಂತೆ, ಬಾಗಿ ತಿನ್ನರೇನು? ವಿಶ್ವ

೩೨೪ ಸತಿಯು ಸುತರು ಕೂಡಿ ಸಾನಂದದಿಂದಿರೆ,
ಮೇಲು ಸುತನು ಹುಟ್ಟಿ ಮುದ್ದಿಸುವುದು;
ಬಿಡುವು ನೋಡಿ, ಮೀರಿ, ಬಿಡಲಾರರಿಳೆಯಲಿ ವಿಶ್ವ

೩೨೫ ಪತಿಯೊಪ್ಪಿರೆ ಸತಿಯೊಪ್ಪಲು,
ಸತಿಪತಿಯೊಂದಾಗಿ ಪರಮ ಪಾವನ ಹೊಂದಲ್
ಸತಿಪತಿ ನ್ಯಾಯವೆ ಮೋಕ್ಷವು;
ಬದುಕೇ ಪರಮಾತ್ಮನೆ ತಾನಾಯಿತು ವೇಮಾ

೩೨೬ ಪತಿಯೊಪ್ಪಿರೆ ಸತಿಯೊಪ್ಪಲು,
ಸತಿಪತಿಯೊಂದಾಗಲು ಪರಮ ಪಾವನರೋಳ್,
ಸತಿಪತಿ ನ್ಯಾಯವೇ ಮೋಕ್ಷಂ
ಪತಿಯೆ ಪರಮಾತ್ಮ; ಐಕ್ಯವು ಆಗರೆ ವೇಮಾ?

೩೨೭ ಪರ ನಾರೀ ದೂರನಿಹನು;
ಪರ ಧನಗಳಿಗಾಸೆ ಪಡದೆ ಪರಹಿತ ರತನೈ
ಪರರಳುಕಲು ತಾನಳುಕದೆ,
ಪರರೆನ್ನದೆ ಬದುಕುವವ ಪ್ರಾಜ್ಞನು ವೇಮಾ

೩೨೮ ಒಲುಮೆ ತೋರಿ ಸತಿಯ ಬಲೆಯನೊಡ್ಡಿ ಹಿಡಿವ,
ಗತಿಯ ರಾಜ ಮನಸು ಹಸನು ಅಹುದೆ?
ಒಳಗುಟ್ಟನು ಅರಿತು, ಒಲುಮೆ ಇಂದಿರುತಿರು ವಿಶ್ವ

೩೨೯ ಕಾಯುವಂಥ ಗಂಡ ಕಾಂತನೆನಿಸುತಿಪ್ಪ;
ಕಾಯಲಾರದಾತ ಸಾವ ರೀತಿ
ಕಾಯದೆ, ಬಿಟ್ಟವಳ ಕಷ್ಟ ಕೇಳಬಹುದೆ? ವಿಶ್ವ

೩೩೦ ಸಾಧು ಚರಿತೆಯುಳ್ಳ ಸಾಧ್ವಿ – ಸದ್ವರ್ತನೆ,
ಜಾರನೆಂತು ಅರಿವ? ಸಾಧು ತಾನೆ,
ಬ್ರಹ್ಮ ನಿಷ್ಠನರಿವ; ಪ್ರಾಕೃತನರಿಯುವನೆ? ವಿಶ್ವ

೩೩೧ ಪತ್ನಿ, ಪುತ್ರ, ಧನವ, ಪಡೆದು ತೊರೆಯದವನು,
ಮೋಹ ರಾಶಿಯೊಳಗೆ ಮುಳುಗುತಿಪ್ಪ;
ಮೋಕ್ಷ ಸೌಖ್ಯವೆಂತು ಮಹಿಯ ಜನತೆಗುಂಟು; ವಿಶ್ವ

೩೩೨ ಸತಿಯ ನೋಡಿ ನೋಡಿ ಸಂಸಾರಿಯಹ ಕೋರ್ಕೆ,
ಸುತರು ಹುಟ್ಟಿ ಹುಟ್ಟಿ ಸಂಕಟೆನುವ,
ಸತಿಯು ಕೆಟ್ಟು ಕೆಟ್ಟು ಕರ್ಮವೆಂದು ಅಳುವ ವಿಶ್ವ

೩೩೩ ಸತಿಯ ಕಡೆಯ ಜನರು ಸ್ವಂತ ಬಂಧುವಯ್ಯ!
ಅವ್ವನ ಕಡೆಯವರು ಅಷ್ಟಕಷ್ಟೆ!
ತಂದೆಯ ಕಡೆಯವರು ದಾಯಾದಿಯಾದರು ವಿಶ್ವ

೩೩೪ ಸ್ತ್ರೀ ನೆತ್ತಿಯಲ್ಲಿ ರುದ್ರಗೆ
ಸ್ತ್ರೀ ಬಾಯೋಳು ಬೊಮ್ಮಗೆಂದು, ಧನ ಸುರಿಯುತಿರಲ್
ಸ್ತ್ರೀ ಎದುರು ಎದೆಯಲಿ ಹರಿಗೆ
ಸ್ತ್ರೀ ಜೊತೆ ಹಗೆ ಗುರುವು ನೀವೆ, ದೇವರು ವೇಮಾ

೩೩೫ ಸತಿಯನೆತ್ತಿದೊಬ್ಬ; ಸತಿಯ ರುಚಿಸಿದೊಬ್ಬ;
ಸತಿಯನುರದಿ ಅಪ್ಪಿ ಬದುಕಿದೊಬ್ಬ
ಸತಿಗಾಗಿಯೆ ಬಹಳ ಪರಿಪಾಟಲ ಪಡುವರು ವಿಶ್ವ

೩೩೬ ಮಡದಿ ಹೊತ್ತನೊಬ್ಬ; ಮಡದಿ ಪಾಲಿಸಿದೊಬ್ಬ;
ಮಡದಿ ಎದೆಗೆ ಅವಚಿ ಬದುಕಿದೊಬ್ಬ;
ಕಾಂತೆಗಾಗಿ ಬಹಳ ಕಷ್ಟಪಡುವರಯ್ಯ! ವಿಶ್ವ

೩೩೭ ಸತಿಯ ಮಾಯೆ ನಂಬಿ, ಸೌಖ್ಯ ಉಂಟು ಎಂದು
ಮತಿಹೀನರಾದ್ರು ಮನುಜರೆಲ್ಲ
ಗತಿಗಳ ಸತಿಯಿಂದ ಕಾಣಲಾರರಯ್ಯ ವಿಶ್ವ

೩೩೮ ಪತಿಯ ಬಯ್ಯಬೇಡ, ಹತ್ತು ಸಾವಿರಕೂ;
ಕೊಟ್ಟು ಆಡಬೇಡ, ಕೋರು ಪ್ರೀತಿ;
ಪತಿಯ ಮೀರಬೇಡ ಸತಿ ಮಾನವತಿಯಿರೆ ವಿಶ್ವ

೩೩೯ ಸತಿಯಾಗಿ ಪತಿಯ ಬೇಡಲು,
ಸತಿ ಮರ್ಮವ ಕಾಣಬಹುದು ಸರಸೋಕ್ತಿಗಳು
ಮತಿ ತೊಲಗಿ ಅದುಮಿ ಹಿಡಿಯೆ,
ಸತಿ ದುರ್ಗತಿ ಖಂಡಿತಾಯ್ತು, ಸತ್ಯವು, ವೇಮಾ

೩೪೦ ಕೋಣ ಹೂಡಿದ ರಂಟೆ ಗಡಗಡನೆ ಸಾಗದು;
ಎತ್ತಿನ ರಂಟೆಗಿಂತ ಹೆಚ್ಚು ಅಲ್ಲ;
ಮುದ್ದು ಹೆಂಡತಿ–ಪತಿ, ಮುದುಕಿ ಮೆಚ್ಚುವನೆ? ವಿಶ್ವ

೩೪೧ ಎತ್ತಿಗಿಂತ ಕೋಣ, ಎಂಥ ವಿಧದಿ ಹೀನ?
ಕೆಂಪು ಇರದೆ ಹೋಯ್ತು, ಕ್ರಯದ ಮಟ್ಟ
ನೇರವರಿಯದವನ ನೆರೆ ಯೋಗಿಯೆನುವರೆ? ವಿಶ್ವ

೩೪೨ ಕೋಣ ಜೊತೆಯ ಕುಂಟೆ ವೇಗದೊಳು ಸಾಗದು
ಕೋಣ ಎತ್ತು ಕುಂಟೆ ಹೆಚ್ಚು ಅಲ್ಲ
ಮುಗುದೆ ಲಲನೆಯಿರಲು, ಮುದುಕಿ ಮೆಚ್ಚ ಗಂಡ! ವಿಶ್ವ

೩೪೩ ಮುಂಡೆ ವಿಧವೆಗೇಕೆ ಮುತ್ತೈದೆ ಬೈತಲೆ?
ವನಪು ಎಲ್ಲ ಪುಣ್ಯವತಿಗೆ ಹೊರತು;
ಕೆಟ್ಟ ಸೊಣಗಗೇಕೆ ಕುದುರೆಗಿರುವ ಥಡಿಯು ವಿಶ್ವ

೩೪೪ ಅಂದಗೇಡಿ ಹೆಣ್ಣ ತಂದು ಕೂಡೆ ಕೇಡು;
ಕೆಲಸವಿಲ್ಲದ ಪತಿಗೆ ಕೂಳು ಕೇಡು
ಕೆಲಸಗೇಡಿ ದಾಸಿ, ಕೂಲಿಯೆಲ್ಲ ಕೇಡು ವಿಶ್ವ

೩೪೫ ಕುಂಟ ನಾಯಿಗೇಕೆ, ಮೊಲದ ವೇಗದೋಟ?
ಕೇಡಿ ಬಂಟಗೇಕೆ, ಬಿರುದಿನಾಶೆ?
ಮುದುಕಿ ಮುಂಡೆಗೇಕೆ, ಹುಸಿ ಮುಸಿ ನಗೆಯಾಟ? ವಿಶ್ವ

೩೪೬ ವಿಧವೆ ಹೊಂದಿಕೊಳಲು, ವಿಧಿಯು ಅಡ್ಡವುಂಟು
ಬದುಕುವಾಸೆಯೆಲ್ಲ ಭ್ರಮೆಯ ನೆಲೆಯು
ಬದುಕು ಸಾವು ಎಲ್ಲ, ಬರಿಯ ಕೂಳಿಗಾಯ್ತು; ವಿಶ್ವ

೩೪೭ ತನ್ನಯ ತಾಯಿಯ ದೋಷವ,
ತಾನರಿಯೆ, ಮನುಜ ಮನದಲಿ ಚಿಂತಿಸುತಿರುವಂ
ತನ್ನ ಮಡದಿ ದೋಷವರಿಯೆ,
ತಾನಿರೆ, ಘನ, ಬಿಡುವನವಳ, ಧರೆಯಲಿ, ವೇಮಾ

೩೪೮ ಸತಿಯ ದೋಷ ತಿಳಿಯೆ, ಸಕಲ ಯಜ್ಞಂಗಳು,
ತಾಯಿ ದೋಷ ತಿಳಿಯೆ, ತಿಥಿಯಾದಿಯು;
ಅಲ್ಲ ಪಥವು, ಕರ್ಮ ಕಾಂಡ ಕಲ್ಪಿತವಲ್ತೆ ವಿಶ್ವ

೩೪೯ ಪತ್ನಿ ಮಾತಿನಿಂದ ಪರಿತಪಿಸಲೇಕೆ?
ಬರಿಯ ಚರ್ಯೆಯದುಮಿ ಬೇಡಿ ಗುರುವ,
ಅಡಿಗೆ ಬಾಗಿ ಮಣಿದು ಆಸೆಯ ಬಿಡಬೇಕು ವಿಶ್ವ

೩೫೦ ಮಾತು ಕೇಳದ ಸತಿ, ತಾ ಮೃತ್ಯು ದೇವತೆ;
ಫಣಿ ಹೊತ್ತ ನಾಗಿಣಿ; ಗೃಹ ಪಿಶಾಚಿ;
ತನಗೊಲಿಯದ ಮಡದಿ ಕಡು ರಕ್ಕಸಿ ಜಗದಿ; ವಿಶ್ವ

೩೫೧ ಮಡದಿ ಮಾರಿ, ಜಗದಿ ಆಚಾರ ವಿಹೀನ,
ಹೊಣೆಗೇಡಿಯೆನಿಪನು; ಆಣೆಗಾಗಿ
ನುಡಿಗೆ ತಪ್ಪದಂತೆ ಕಾಡು ಕಾಡು ಅಲೆದ ವಿಶ್ವ

೩೫೨ ವಾಕ್ಕಿನಿಂದ ತಪ್ಪು ವರ್ತಿ ಬಂಧು ಬಳಗ;
ವಾಕ್ಕಿನಿಂದ ತಪ್ಪು ವನಿತೆ ಗುಣವು;
ವಾಕ್ಕಿನಿಂದ ಆಯ್ತು ವರ ಕರ್ಮ ಫಲಗಳು ವಿಶ್ವ

೩೫೩ ಸತಿಯನಟ್ಟಿ ಹಿಂದೆ ಅಧಮನಾಗಿ ತಾನೆ;
ಏಕೆ ಹೋಹುದೆಲ್ಲ? ಎಂಥ ಹುಚ್ಚು?
ಸಸಿಯ ಬೆಳೆಯಗೊಟ್ಟು ಚಿವುಟಲು ಹೋಹುದೇ? ವಿಶ್ವ

೩೫೪ ಅಂಗನೆ ಬಿಗಿಯಿಡದ ಅಧಮನಾಗಿ ಇರಲು,
ಹಿಂದೆ ಮಣಿಸುವೆನೆನೆ ಹುಚ್ಚು ತನವು
ಸಸಿಯ ಬೆಳೆಯಗೊಟ್ಟು ಚಿವುಟಿದರೆ ಹೋಗುವುದೆ? ವಿಶ್ವ

೩೫೫ ಮಡದಿಯನು ಮಣಿಸದೆ ಮೊದಲು ಅಧಮನಾಗಿ,
ಮೀರೆ ಹಣಿವೆನೆನಲು ಮಂಕುತನವು
ಮರವಾಗಿ ಬೆಳೆದುದು ಚಿವುಟಲು ಅಳಿವುದೇ ? ವಿಶ್ವ

೩೫೬ ಅಲ್ಪ ವಯಸಿನಲ್ಲಿ ಅಮ್ಮ ಅಪ್ಪನ ರಕ್ಷೆ!
ಪಕ್ವ ವಯಸಿನಲ್ಲಿ ಪತಿಯ ರಕ್ಷೆ;
ಮುಪ್ಪು ಕಾಲದಲ್ಲಿ ಮಕ್ಕಳು ಮರಿ ರಕ್ಷೆ;
ಅಂಗನೆಗಿಲ್ಲ ಸ್ವೇಚ್ಛೆ ಅಯ್ಯೋ ವೇಮಾ!

೩೫೭ ಋಷಿಗಳಡವಿ ತುಂಬ ರುಚಿಗಳ ಕೋರೆ, ಹೊಲ್ಲ;
ನರರು ಹೊಂದಿ, ತಿನ್ನದಿರಲು ಹೊಲ
ಭಾರ್ಯೆಯೆನ್ನುವವರ ಭರ್ತಿಸದಿರೆ ಹೊಲ್ಲ ವಿಶ್ವ

೩೫೮ ಪುರುಷಗೆಂಥ ಗತಿಯು ಪುಟ್ಟಿದಾಗಿನಿಂದ,
ಪಾಪ ಚಿಂತೆ ಗೆಯ್ವ ಪಾಮರನಲ!
ಮಸ್ತ ಕುರುಡು ನಾಯಿ ಮಾಂಸಕೆಳಸುವಂತೆ ವಿಶ್ವ

೩೫೯ ಕಲುಷವೆಲ್ಲ ತಿಳಿಯೆ, ತಲೆ ತಗ್ಗಲು ಮೂಲ
ಅರಿತೊಡೆಲ್ಲ ತತ್ತ್ವಕಾತ್ಮ ಹುಟ್ಟು
ತಿಳಿದುಕೊಂಡು ಮತ್ತೆ ಧೀರನಾಗಿ ಸಾಗು ವಿಶ್ವ

೩೬೦ ಸತಿ ಮಾತು ಕೇಳಿ, ಸೋದರರನೆ ತೊರೆದು,
ಬೇರೆಯಾಗುವವನು ಬುದ್ಧಿಗೇಡಿ
ನಾಯಿ ಬಾಲ ಹಿಡಿದು ಗೋದಾವರಿ ದಾಟ ವಿಶ್ವ

೩೬೧ ಫಾಲ ನೇತ್ರನಿರಲು ಭಾವಿಸಲಾರನಲ!
ಮಡದಿ ಮೀರಗೊಟ್ಟು ಮೂಲ ಮರೆತ
ಗೋಳು ಎಂದು ನಂಬಿ, ಕುಳಿತ ಹುಚ್ಚನಾಗಿ ವಿಶ್ವ

೩೬೨ ಅಳಿಯನಾ ಮರಣಕೆ ಆತ್ಮ ಚಿಂತಿಸುವುದು;
ತನಯ ಮರಣ; ತಾನೆ ತಲ್ಲಣಿಸುವ
ಪುಣ್ಯ ಪುರುಷ ಮರಣ ಭೂಮಿಯೊಳಿಹ ಜನಕೆ,
ಕುಸಿದು ಬೀಳುವ ದುಃಖ, ಕಾಣು, ವೇಮ

೩೬೩ ಓರ್ವನಿರುವ ಗೃಹದಿ ಒಟ್ಟು ಅಡುಗೆ ಮಾಡಿ,
ಅಡುಗೆ ಉಣ್ಣುವಾಗ ಒಬ್ಬ ಬರಲು,
ಬಂದ ಹಾಗೆ ಅಲ್ಲ; ಬಿಡಲು ಉಭಯರಿಗೂ
ಎಡಚು ಆಗುತಿಹುದು, ಅಡುಗೆ ವೇಮ

೩೬೪ ಕೆರವಿನೊಳಗೆ ಕಲ್ಲು, ಕಿವಿಯ ಒಳಗೆ ಹುಳುವು;
ಕಣ್ಣಿನೊಳಗೆ ಕಸುರು ಕಾಲ-ಮುಳ್ಳು;
ಮನೆಯೊಳಗಿನ ಜಗಳ ಮತ್ತೆ ಹೇಳಲೆಷ್ಟು? ವಿಶ್ವ

೩೬೫ ಬೇಳೆಯಿರದ ಸಾರು ಬೇರೆಯವಗಸಹ್ಯ
ಸಾಲವಿಲ್ಲದವನು ಸಬಲ ತಾನು;
ಮುಪ್ಪು ಇಲ್ಲದವನು, ಮೊದಲು ಸುಜ್ಞಾನಿಯು ವಿಶ್ವ

೩೬೬ ಇಹದಲಿ ಸುಖಪಡಲು ಹೇಮ ತಾರಕ ವಿದ್ಯೆ;
ಪರದಲ್ಲಿ ಸುಖಪಡಲು ಬ್ರಹ್ಮ-ವಿದ್ಯೆ
ಕೀಳು ವಿದ್ಯೆಯೆಲ್ಲ ಸುಳ್ಳು ಮೂಢ ಜನಕೆ ವಿಶ್ವ

— — — — — — — — — — — — — — — — — — — — — —

**೩೬೭ ಮದ್ದು ತಿನಲಳಿವುದು ನೋವು;**
**ಮದ್ದು ತಿನಿಸಿದೊಡನೆ ಯುವತಿ ಮಹಿಯಲಿ ಒಲಿವಳ್**
**ಮದ್ದು ತಿನಲಳಿವುದು ರೋಗ**
**ಮದ್ದು ತಿನಲಪ್ಪುದು ಪುಷ್ಟಿ, ಮಹಿಯೋಳ್, ವೇಮಾ**

**೩೬೮ ಕಾಂತ ಸಿಂಧುರವನು ಕಡು ಪಿತ್ತರೋಗಿಗೆ**
**ಸೂಕ್ತ ಮಧುವಿನೊಡನೆ ನೀಡಲಾಗ,**
**ಸ್ವಾಸ್ಥ್ಯವುಂಟು ಧನ್ಯ; ಭಕ್ತ ದಡ ಮುಟ್ಟುವ ವಿಶ್ವ**

●

# ಗೃಹಿಣಿಯ ಒಳಿತು

'ಗೃಹಿಣೀ ಗೃಹಮುಚ್ಯತೇ' ಅಂದರೆ ಗೃಹಿಣೀ ಇದ್ದರೆ ಗೃಹಕ್ಕೆ ಶೋಭೆ ಎಂಬ ಸುಭಾಷಿತವು ಜನಪ್ರಿಯವಾಗಿದೆ. ಒಳ್ಳೆಯ ಸತಿ, ಸಚ್ಚರಿತೆಯ ಪುತ್ರರಿದ್ದರೆ, ಬೇರೆ ಸ್ವರ್ಗವೇಕೆ? ಇಂಥ ಸತಿಮಣಿಯು ಸುಶೀಲೆಯಾಗಿ ಪತಿಭಕ್ತಿ ಪರಾಯಣೆಯಾಗಿ ವರ್ತಿಸಿದರೆ, ಅವಳ ಬಾಳು ಸೌಖ್ಯದ ಸೆಲೆಯಾಗುತ್ತದೆ. ಅಲ್ಪ ಸ್ವಲ್ಪ ವಿರಸಗಳು ದಾಂಪತ್ಯ ಜೀವನದಲ್ಲಿ ನುಸುಳುವುದು ಸ್ವಾಭಾವಿಕ. ಆದರೆ, ಆ ವಿರಸವನ್ನೇ ದೊಡ್ಡದಾಗಿಸಿ, ಪತಿಯನ್ನು ತೊರೆಯುವುದು ಮೂರ್ಖತನ ಸಹನೆಯಿಂದ ಬಾಳಿ, ತಂಟೆಯನ್ನು ಬಗೆಹರಿಸಿಕೊಳ್ಳುವುದೇ ಉಚಿತ.

ಗಂಡನೂ ಸಹ ಪತ್ನಿ ವ್ರತಸ್ಥನಾಗಬೇಕು. ಗಂಡನು ಮಾಡುವ ಪುಣ್ಯ ಕರ್ಮಫಲದಲ್ಲಿ ಸತಿಗೆ ಅರ್ಧ ಪಾಲು ಸಿಕ್ಕುವುದೆಂದು ಧರ್ಮಶಾಸ್ತ್ರಕಾರರು ತಿಳಿಸಿ, ಸತಿಯ ಧಾರ್ಮಿಕ ಸ್ವಾತಂತ್ರ್ಯವನ್ನು ನಿರಾಕರಿಸಿದರು.ಆದರೆ, ಗಂಡ ಮಾಡುವ ಪಾಪದ ಪಾಲು ಹೆಂಡತಿಗೇಕೆ ಬಾರದು? ಅವನ ಸಡಿಲುಗಚ್ಚೆಯ ಜೀವನದಿಂದ ಹೆಂಡತಿಯ ಮೇಲೆ ಪರಿಣಾಮವಾಗದೇ?

ಪತಿಗೆ ಅಂಕಿತಳಾಗಿದ್ದರೆ ಸತಿಗೆ ಮುಂದೆ ಸೌಖ್ಯ ಕಾದಿದೆ. ಅವಳು ಮಕ್ಕಳ ಕಾಲದಲ್ಲಿ ಹಾಯಾಗಿ ಬಾಳಬಹುದು. ಆದರೆ, ಗಯ್ಯಾಳಿಯಾದರೆ, ಸುಳ್ಳು ಹೇಳಿ, ಶೀಲಗೇಡಿಯಾದರೆ ಇಬ್ಬರಿಗೂ ಹಾನಿ. ಗೃಹಿಣಿಯಾದವಳು, ಅನುಕೂಲವಾಗಿ ವರ್ತಿಸಿ, ಚೆನ್ನಾಗಿ ರುಚಿಕರ ಅಡುಗೆ ಮಾಡಿ ಬಡಿಸಿದರೆ, ಉಂಡು ಸುಖಿಸಬಹುದು. ಹದುಳದಿಂದ ಬಾಳಬಹುದು.

೩೬೯ ಗುಣವತಿಯಿರೆ ಯುವತಿ ಗೃಹವು ಚೊಕ್ಕಟಯ್ಯ;
ಬೀಳು ಮನೆಯ ದೀಪ ಬೆಳಗಿದಂತೆ
ದೇವಿಯಿಪ್ಪ ಗೃಹವು ದೇವಾಲಯವಯ್ಯ ವಿಶ್ವ

೩೭೦ ಸುಗಣವಂತೆ ಕಾಂತೆ ಸುದತಿಯಾಗಿರ್ದೊಡೆ,
ಮಿಗಿಲು ಬುದ್ಧಿವಂತ ಮಕ್ಕಳಿರಲು?
ಸಗ್ಗವೇತಕಯ್ಯ? ಸಂಸಾರ ಸಾಲದೆ? ವಿಶ್ವ

೩೭೧ ಗುಣವಂತೆ ತಾನಿರೆ ಗೃಹಕಿಪ್ಪುದು ಕಾಂತಿ;
ತಿಮಿರ–ತಾಣ ದೀಪ ತೊಳಗಿದಂತೆ;
ದುರ್ಗುಣಿಯಿರಲಾಗ, ದೀಪ ನಂದಿದಂತೆ ವಿಶ್ವ

೩೭೨ ಕಾಂತೆ ತನ್ನ ಕೀರ್ತಿ ಸರ್ವ ಕಾಲಮಾನ,
ಸಂತತಿ ಸ್ಮರಿಸುವಂತೆ ಪ್ರತಿಭೆವಂತೆ !
ಕಾಂತೆಗೆ ಪತಿ ಭಕ್ತಿ ಎಂತೆಷ್ಟು ಹಿತವಹ ! ವಿಶ್ವ

೩೭೩ ತರುಣಿ ಪುಣ್ಯವತಿ ವರ ನರನ ಕರ ಪಿಡಿಯೆ
ತಿರುಗಿ ಪಾಪಿ; ಪತಿಯು ಎಂತೊ ಇರಲು
ಪುರುಷನ ನಡೆವಳಿಯೆ ನಾರಿಯೊಳು ಇಪ್ಪುದು ವಿಶ್ವ

೩೭೪ ಪತಿಯ ಮೇಲೆ ಭಕ್ತಿ ಕಳೆದು ಕೊಳದೆ ಕಾಂತೆ
ಮೂರು ಲೋಕದೊಳಗೆ ಮುಕ್ತಿ ಪಾತ್ರಿ
ಸತಿ ಮಣಿಯರಿಗೆಲ್ಲ ಪತಿಯೆ ದೇವ ದೇವ ! ವಿಶ್ವ

೩೭೫ ಪತಿಯ ಕಾಲದಲ್ಲಿ ಸತಿಗೆ ಕಷ್ಟವಿಹುದು;
ಸುತನ ಕಾಲದಲ್ಲಿ ಸೌಖ್ಯವಿಹುದು
'ಉಳ್ಳ' ಇಲ್ಲವೆರಡು ಉಂಟು ಯಾರಿಗೇನು!
ಬಲವೆನೆ ಸುತ ಬಲವೆ ಬಲವು ವೇಮ ವಿಶ್ವ

೩೭೬ ಹತ್ತು ಮಂದಿಗೂಡಿ ಹರೆಯ ಯುವತಿ ಕುರಿತು
ಮೇಳ ತಾಳದಿಂದ ಮೆರೆಯಿಸುತ್ತ,
ಮದುವೆ ಮಾಡುತಿಹರು ಹೆಸರು ಏನಿದಕ್ಕೆ? ವಿಶ್ವ

೩೭೭ ಗುಣವತಿಯೆ ಇರುವ ಕುಲ ಸತಿಯನಾರೂ
ನಿಂದೆ ಮಾಡೆ ಹೊಲ್ಲ, ನೀತಿ ನೋಡಿ;
ಗುಣವೆ ಇಲ್ಲದಿರಲು ಕುಲಹೀನಳಲ್ಲವೆ? ವಿಶ್ವ

೩೭೮ ನಾಥನ ಪಡೆದಂಥ ನಾರಿಯಾತನನ್ನು,
ದೇವನೆಂದು ನಂಬಿ ಸೇವೆ ಗೆಯ್ಯೆ
ತಕ್ಕದಷ್ಟೆ; ಪರಗೆ ತಾನು ಅಂಟಬಹುದೆ? ವಿಶ್ವ

೩೭೯ ಸತಿ ಗೆಯ್ಯುವ ಕೆಡುಕು ಪತಿಗವಶ್ಯ ಬಪ್ಪುದು
ಪತಿ ಗೆಯ್ಯುವ ಒಳಿತು ಸತಿಗರ್ಧವು
ಪತಿ ಗೆಯ್ಯುವ ಕೆಡುಕು ಸತಿಗೇಕೆ ಬಾರದು? ವಿಶ್ವ

೩೮೦ ವಲ್ಲಭನಿಗೆ ಇಷ್ಟ ವಸ್ತುವ ಮುಟ್ಟಿಸುತ,
ಅವನ ಮಾನಸದಲಿ ಯುವತಿಯಿರಲು,
ಅಂಥ ವನಿತೆಗೊಳಿತೆ ಆಯ್ತು ಕಟ್ಟಳೆಯು ವಿಶ್ವ

೩೮೧ ಆಪತ್ತಿರುವಾಗ ನೋಡು, ಬಂಧುಭಾವ;
ಭಯದ ವೇಳೆ ನೋಡು, ಬಂಟ ಗುಣವ,
ಬಡತನ ಬಂದಾಗ, ಮಡದಿಯ ಗತಿ ನೋಡು ವಿಶ್ವ

೩೮೨ ಸತಿಯರು ಸಹ ಜಪವ ಚೊಕ್ಕ ಮಡಲು
ಪುರುಷರೇಕೆ ಇನ್ನು ಪೊಡವಿಯಲ್ಲಿ
ಪಾಪವೆಣಿಸೆ ಹೊಲ್ಲ; ವ್ಯರ್ಥ ಶಿಕ್ಷಿಸುವುದು? ವಿಶ್ವ

೩೮೩ ಪತಿಯ ಬಿಡಲು ಬೇಡ; ಹತ್ತು ಸಾವಿರೀಯೆ,
ಕೊಟ್ಟು ಹೇಳಬೇಡ; ಹಿರಿಯಗೀಯೆ
ಪತಿಯ ಬಯ್ಯಬೇಡ; ಸತಿಯು ಸುರೂಪಿಯಿರೆ, ವಿಶ್ವ

೩೮೪ ಸತಿಯೆನೆ ಸುಖ ಸೌಖ್ಯಗಳಿಗೆ
ಅತಿ ಪ್ರಿಯ ಆಲಯವಾಗೆ, ಸತಿಯೆನ ಬರ್ಕುಂ
ಅದು ವಿಧ; ಅಂತಿರದಾಕೆಯ
ಕತೆಯೇ? ಕಾಲನತಿ ಹಿರಿಯ ದೂತನು ವೇಮಾ

— — — — — — — — — — — — — — — — — — — — — — — — —

೩೮೫ ಪತಿಯ ನಿಂದೆ, ಪರೀಕ್ಷಿಸಿ ಎಣಿಸದೆ,
ಸತಿಗೆ ಎಂತು ಮುಕ್ತಿ ಸಾಧ್ಯವಿಹುದು?
ಎಂತು ಬಂತು ನಿಯತಿ? ಎಣಿಸಲು ಶಕ್ಯವೇ? ವಿಶ್ವ

೩೮೬ ಸ್ತ್ರೀಯ ಕೊಲ್ಲುವವನ ಶಿವನು ಸೈರಿಸನಲ;
ಸ್ತ್ರೀಯ ಕೊಲ್ಲುವವನು ಶಿಥಿಲಗೊಳುವ;
ಸ್ತ್ರೀಯ ಕೊಲ್ಲುವವನು ಶಿವ ಶಿವಾ ನರಕವು!
ಹೊಂದುತಿರುವನೇಕೆ? ಹೇಳುವೇಯ

೩೮೭ ಕನಕಕ್ಕಾಗಿ ಪತಿಯ ಕಲೆತು ಇರುವ ಕಾಂತೆ,
ಕನಕವಿರದ ವೇಳೆ ಗಡಸು ಇಹಳು
ಕನಕ ಸತ್ಯವಲ್ಲ; ಕಾಣಲಾರಳಲ್ಲ! ವಿಶ್ವ

೩೮೮ ಪತಿಯ ಕಾಲದಲ್ಲಿ ಸತಿ ಕಷ್ಟ ಪಡುತಿರೆ,
ಸುತರ ಕಾಲ ಸುಖವ ಸವಿಯುತಿಹಳು;
"ಉಳ್ಳ" 'ಇಲ್ಲ'ವೆಂಬೆರಡು ತಪ್ಪದಾರಿಗೂ ವಿಶ್ವ

೩೮೯ ತನಗೆ ಹೊತ್ತು ಹೋಗದಂಥ ಕಾಲವಿರಲಿ,
ಆಲಿಸದಿರೆ ಹೊಲ್ಲ ಅಧಿಕ ವಿದ್ಯೆ
ನಲ್ಲೆಯ ಕಾಗೆ-ಧ್ವನಿ ನಲ್ಲಗಾಗಿಯೆಷ್ಟೇ ವಿಶ್ವ

೩೯೦ ನಾರಿ ನುಡಿದ ನುಡಿಯ ನರಕಾಸುರನು ಸಹ,
ನಂಬದಂತೆ ಆಯ್ತು ಅತಿಶಯಾಗಿ
ಅಲ್ಲವೆಂದು ನಂಬೆ, ಅಡವಿಗಟ್ಟುತಿಹಳು; ವಿಶ್ವ

೩೯೧ ಇರಲೇನು ಸುಶೀಲ, ಇರುವನು ಕೆಲವು ದಿನ
ಇದ್ದು, ಇದ್ದು ಇರಲು ಇರಲಾರನು
ಇರುವ ರೀತಿ ತಿಳಿಯೆ, ಬರುವ ದೋಚುವವನು
ಕಡಿದು ಕಡಿದು ತಾ; ಕೂಡು ವೇಮ

೩೯೨ ಮುಂಡೆಗೇಕೆ ಬೇಕು, ಮುತ್ತೈದೆ ಬೈತಲೆ?
ರತುನ ಹಾರ ಪುಣ್ಯವತಿಗೆ ಹೊರತು
ಸೊಣಗಗೇಕೆ ಪುಚ್ಚದಾ ಪಾಲಕಿಯಾಸೆ? ವಿಶ್ವ

೩೯೩ ಪಾಯಸ, ವಡೆ, ಸಾರು, ಪರಮಾನ್ನವಾದಿ,
ಹೋಳಿಗೆ, ಮೆತ್ತನ್ನ ಹೂರ್ಣ ಕಡಬು,
ನಾಲಗೆಯ ವಿಲಾಸ; ನವನೀತ ಬೆರೆಯೆ; ವಿಶ್ವ

೩೯೪ ಆಡಲು ತಪ್ಪಲಾಗ ಅಡುಗೆ ವಿಷವೆ ಆಯ್ತು;
ಕಣ್ಣಿನಿಂದ ನೋಡೆ ಕಣ್ಣಿಗಿಂಜು
ಕಂಟಕಿಹುದು ತಿನಲು ಗಂಡಾಂತರ ಬಹುದು ವಿಶ್ವ

೩೯೫ ಅಡಲು ಬಂದರಾಗ, ಅಡುಗೆ ಅಮೃತವಹುದು
ಕಣ್ಣಿಗಿಂಪು ಆಗಿ ಕಾಣುತಿಹುದು
ಒಡಲ ತಿನಿಸು ತಿಂಡಿ ಕಡು ಕಷ್ಟ ಕಡೆಗಾಗೆ ವಿಶ್ವ

೩೯೬ ತುಪ್ಪವಿರದ ಊಟ ತೃಣದ ಪರಿಯ ಕಸವು;
ಸಾರುಯಿರದ ಊಟ ಶ್ವಾನ ಯೋಗ್ಯ
ಪ್ರೀತಿಯಿರದ ಊಟ ಪಿಂಡಕಿಟ್ಟ ಊಟ ವಿಶ್ವ

೩೯೭ ಸಾರು ಇರದ ಊಟ ಶ್ವಾನಕಿಟ್ಟ ಕೂಳು;
ಹೊರಳಿ ಹಾಕದಡುಗೆ ಹೊಲೆಯ ಮೂಟೆ;
ತುಪ್ಪವಿರದ ಊಟ ದೆವ್ವಕಿಟ್ಟ ಊಟ ವಿಶ್ವ

೩೯೮ ಉಪ್ಪು ಇರದ ಸಾರು, ಒಪ್ಪದು ರುಚಿಸುವಗೆ
ಬೇಳೆ ಇರದ ಊಟ ಫಲ ವಿಹೀನ;
ಸಾಲವಿಲ್ಲದವನು ಸಂಪನ್ನರೊಳಧಿಕ ವಿಶ್ವ

೩೯೯ ಹದುಳವಿರದೆ ತಿನಿಸು, ಹಬ್ಬದೂಟ ಕೇಡು;
ಭಕ್ತಿಯಿರದ ಪೂಜೆ ಪೂರ್ಣಕೇಡು
ಓಜೆಗೆಟ್ಟ ಹೆಣ್ಣಿಗೆ ಡೋಲಿ ಕಲಿಸೆ ಕೇಡು ವಿಶ್ವ

**೪೦೦ ನ್ಯೂನತೆಯಹ ತನ್ನ ಭಾರ್ಯೆ**
**ಕಾನನದಲ್ಲಿ ಕೊಲ್ಲಬಹುದು! ಕಡು ಚಿತ್ರವಲಾ!**
**ತಾನರಿತು ನುಂಗು ರೀತಿಯ**
**ಮಾನವ ಕಾಪಾಡಿಕೊಳ್ಳುವ ಮಹಿಮನು ವೇಮಾ!**

●

# ಮಕ್ಕಳ ಪ್ರಾಪ್ತಿ

ಸೃಷ್ಟಿಯಲ್ಲಿ ಜೀವಿಗಳು ಉದಿಸುತ್ತಾರೆ. ಅದೇ ರೀತಿ, ಮಾನವ ಜೀವಿಯ ಸಂತಾನವು ಮುಂದುವರಿಯುತ್ತಿದೆ. ಈ ಮುಂದುವರಿಕೆಯು ವಿಧಿನಿಯಮ. ಹೀಗಾಗಿ ಪುತ್ರಪ್ರಾಪ್ತಿಯು ಆಯಾ ವ್ಯಕ್ತಿಯ ಭಾಗ್ಯವನ್ನೇ ಅವಲಂಬಿಸಿ ಘಟಿಸುತ್ತದೆ.

ಆದರೆ ಅವರವರ ಪೂರ್ವ ಸಂಸ್ಕಾರಾನುಸಾರ, ಪುತ್ರನು ಒಳ್ಳೆಯವ–ನಾಗಿರಬಹುದು; ಕೆಟ್ಟವನೂ ಆಗಿರಬಹುದು. ಹಂದಿಯಂತೆ ಹತ್ತಾರು ಮಕ್ಕಳನ್ನು ಹಡೆಯಬಹುದು. ಇಲ್ಲವೆ ಆನೆಯಂತೆ ಓರ್ವನನ್ನೇ ಹಡೆಯಬಹುದು. ತಮ್ಮ ತಮ್ಮ ಕರ್ಮಕ್ಕೆ ತಾವೇ ಹೊಣೆ. ಹುಟ್ಟಿದ ಮಕ್ಕಳು ತಮ್ಮ ಕರ್ಮ. ಮಾಡಿದ ಕರ್ಮ ಫಲ ತಾನೇ ಭೋಗಿಸಬೇಕು. ಇದುವೇ ವಿಧಿನಿಯಮ. ಆನೆ ಬೀಳಲಾಗ ಸೊಳ್ಳೆ ಅದನ್ನು ಎತ್ತಬಹುದೇ?

ಸತಿ ಪತಿಯರ ಸಂಬಂಧವೂ ಇಲ್ಲಿ ಮುಖ್ಯ. ಸಂಭೋಗವು ಪರಸ್ಪರ ಮಧುರ ಭಾವದಿಂದ ಆದರೆ ಒಳ್ಳೆಯ ಪುತ್ರನು ಜನಿಸುತ್ತಾನೆ. ಸಂಸಾರದಲ್ಲಿ ಸಾಮರಸ್ಯದಿಂದ ಬಾಳಿ, ಪುತ್ರರನ್ನು ಪಡೆಯಬೇಕು. ಪುತ್ರರಿಲ್ಲದಿದ್ದರೆ, ಕೊರಗಬೇಕಾಗಿಲ್ಲ.

**೪೦೧ ಪೊಡವಿಯಲ್ಲಿ ನರರು ಪುತ್ರರನ್ನು ಕೋರಿ,**
**ಅಳುತಲಿಹರು ಬಹಳ ಆಶೆಯಿಂದ;**
**ಕುವರ ಹುಟ್ಟಿ ಕೊನೆಗೆ ಕುಲವನುದ್ಧರಿಪನೆ? ವಿಶ್ವ**

**೪೦೨ ಸತಿಯ ಕೂಡಲೆಂದು, ಸುತರ ಪಡೆಯಲೆಂದು,**
**ವ್ಯಥೆಯ ಪಡುವುದೆಂಥ ವಿಕೃತ ಮತಿಯು?**
**ನೆಲದೊಳಿರುವ ಕಲ್ಲು ನೆತ್ತಿಗೆತ್ತಿದಂತೆ! ವಿಶ್ವ**

— — — — — — — — — — — — — — — — — — — — — —

೪೦೩ ಸೌಂದರ್ಯವು ಏಕೆ? ಸಿರಿಸಂಪದವು ಏಕೆ?
ಶಿಕ್ಷಣ ಪಡೆಯಲೇಕೆ? ಭೂಮಿಯೇಕೆ?
ಪುತ್ರ ಪದವಿಗಿಂತ; ಭಿನ್ನ ಪದವಿಯೆಲ್ಲಿ? ವಿಶ್ವ

೪೦೪ ತಕ್ಕ ಸತಿಯ ಕೂಡಿ, ತರಳೆನಂತೆ ರಮಿಸೆ,
ಕಡು ಬಲಿಷ್ಠ ಜನಿಪ, ಗಟ್ಟಿಯಾಗಿ,
ಪುರುಷಸಬಲನಿರಲು, ಪುತ್ರ ಸಬಲನಯ್ಯ; ವಿಶ್ವ

೪೦೫ ಸಹನೆಯಿರದ ಸತಿಯ ಸೇರಲು ಫಲವೇನು?
ಬುದ್ಧಿಯಿರದ ಸುತರು ಪುಟ್ಟಲೇನು?
ಸದ್ಗುಣಗಳು ಇರದೆ ಸಲೆ ಓದುವುದೇಕೆ? ವಿಶ್ವ

೪೦೬ ಕುವರನಿಲ್ಲವೆಂದು ಗುಡಿಗೆ ಹೋಗಿ ಮಣಿಯೆ,
ಬಂಜೆ ಹೆಣ್ಣಿಗೇನು ಬಹನೆ ಕಂದ?
ಧರ್ಮಹೀನನೊಡನೆ ಧನವು ಇರದ ರೀತಿ ವಿಶ್ವ

೪೦೭ ತಂದೆಗಿದ್ದು ಧನವು, ತನಯರಿಲ್ಲದಿರಲು,
ಪುತ್ರರಾಸೆಯಿಂದ ಹೊರಳುತಿಹನು;
ಪುತ್ರ ಪ್ರಾಪ್ತಿಯಾಗೆ, ಭೂಮಿ ಮೇಲೆ ಪುಣ್ಯ
ಪುರುಷರೆನುವರೆಂಬ ಬುದ್ಧಿ ವೇಮ

೪೦೮ ಗರ್ಭದಿಂದ ಹುಟ್ಟು ಸುಖ ದುಃಖಗಳೆರಡೂ,
ಪತಿಗೆ ಸತಿಗೆ ಜನಿಪ ಪೊಳೆವ ಸುತನು
ಸತಿಗೆ ಪುತ್ರರಿಂದ ಸೌಖ್ಯ ಉಂಟಾಗದೆ? ವಿಶ್ವ

೪೦೯ ಸತಿಯ ಕಂಡು ನರನು ಸೌಖ್ಯ ಕೋರುತಿಹನು
ಗತಿಯ ಕಾಣಲಾರ ಕರ್ಮದಲ್ಲಿ
ಗತಿಯ ಪುತ್ರರಿಂದ ಕಾಣಲಾರನೇನು? ವಿಶ್ವ

೪೧೦ ಹಾಲು ಕುಡಿದ ಕೂಸು ಹಾರಾಡಿ ನಡೆಯದು,
ನಿಲ್ಲಲರಿತ ಕೂಸು ನೆಲಕೆ ಬೀಳ;
ಅಳಲು ಕಲಿತ ಕೂಸು ಅಳದೆ ಇರುವುದುಂಟೆ? ವಿಶ್ವ

೪೧೧ ಪುಣ್ಯ ಸುಖವ ಪುತ್ರರಿಂದ ಪಡೆಯಬಹುದೆ?
ಮನುಜ ಕರ್ಮ ಮತದಿ ಬಿದ್ದನಯ್ಯ!
ಆನೆ ಬೀಳಲಾಗ ಎತ್ತಬಹುದೆ ಸೊಳ್ಳೆ? ವಿಶ್ವ

೪೧೨ ಔರಸ ಮಗ ತಾನು ವಾರಸುದಾರನವ
ವೇಶ್ಯೆಯಲಿ ಪುಟ್ಟಲು ವಿಧವೆಯ ಮಗ
ನೀರು ಕೂಡ ಹಾಕಲಾರ ನೀ ಸಾಯಲು ವಿಶ್ವ

೪೧೩ ತಾಯಿ ತಂದೆಯರಲಿ ದಯೆದೋರದ ಪುತ್ರ,
ಹುಟ್ಟಲೇನು? ಮತ್ತೆ ಸತ್ತರೇನು?
ಹುತ್ತದಲಿ ಗೆದ್ದಲು ಹುಟ್ಟವೆ? ಸಾಯವೇ? ವಿಶ್ವ

೪೧೪ ‘ಕಾಯೊ’ ‘ಕಾಯೊ’ ಎಂದು ಕರುಣೆಯಿಂದ ಕರೆವ
ಕಂದನನ್ನು ಕಂಡು, ಕರೆದು ಮುದಿಸಿ,
ಕೊಟ್ಟು ಹಾಲು ಕುಡಿಸೆ, ಕಡು ಪುಣ್ಯವತಿಯಲ! ವಿಶ್ವ

೪೧೫ ಹಂದಿ ಈಯುತಿಹುದು ಹದಿನೈದು ಕುನ್ನಿ
ಆನೆ ಈಯ್ತು ಮರಿಯ ತಾನು ಒಂದೆ
ಉತ್ತಮ ಪುರುಷನಿರಲು ಓರ್ವ ಸಾಲನೇನು? ವಿಶ್ವ

೪೧೬ ತಗುಲಿದ ಸತಿಗೂಡಿ ಬಿಗುವಿನಿಂದ ರಮಿಸೆ,
ಕಡು ಬಲದ ಮಗು ಜನನ ಗಟ್ಟಿ ನೋಡು
ಪುರುಷ ಪ್ರಬಲನಿರಲು ಪುತ್ರನೂ ಬಲವಂತ ವಿಶ್ವ

೪೧೭ ನರನ ಬಿಂದು ಇಹುದು, ನಾರಿ ಗರ್ಭದೊಳಗೆ,
ಕಲ್ಲು ಉಪ್ಪಿನಿಂದ ರಸಗಟ್ಟಿತು
ಬುದ್ಧಿವಿವೇಕವಿರೆ, ಭುವನವ ಗ್ರಹಿಸನೆ? ವಿಶ್ವ

೪೧೮ ಗಿಳಿಯ ಗರ್ಭದಲ್ಲಿ ಘನ ಶುಕನು ಉದಯಿಸಿ,
ಮುನಿವರೇಣ್ಯರಲ್ಲಿ ಮುಖ್ಯನಾದ
ಹತ್ತಿಕಾಯಿಯಿಂದ ಹಲ ಬಟ್ಟೆ ಹುಟ್ಟವೆ? ವಿಶ್ವ

೪೧೯ ಧನ ಹೀನನಾದ ತಂದೆ ಗರ್ಭದಲ್ಲಿ,
ಭಾಗ್ಯ ಪುರುಷನೋರ್ವ, ಬರಲು ಹುಟ್ಟಿ,
ಬಹಳ ಧನವ ಹೊಂದಿ ಪರರಿಗುಪಕರಿಸುವ ವಿಶ್ವ

೪೨೦ ಕಂದನು ಬೆಳೆದು ಹಿರಿಯರಿಗೆ
ವಂದಿಸಿ ವಿಧೇಯನಿರಲಾನಂದವೆನಿಪುದೈ
ಹೊಂದಿ ಕೆಡನು ಸತ್ಪುರುಷರ;
ನಿಂದೆಗಿಳಿಯೆ ಚಿಂತೆಯುಂಟು, ನಿಜವಿದು ವೇಮಾ,

೪೨೧ ಉತ್ತಮರ ಉದರದಿ ಉಢಾಫೆ ಜನಿಸಿದೊಡೆ,
ಅವನು ಕೆಡಿಸುತಿಹನು ಅಖಿಲ ವಂಶ
ಕಬ್ಬು ತೆನೆಯು ಹುಟ್ಟಿ ಕೆಡಿಸದೆ ಸಿಹಿಯೆಲ್ಲ? ವಿಶ್ವ

೪೨೨ ಓರ್ವ ತಾಯಿಯುದರ, ವಸುಧೆಯಲಿ ಹತ್ತು ಜನ,
ಪುತ್ರ ಸಂತತಿಯು ಪುಟ್ಟಿ ಬಳಿಕ,
ಓರ್ವಗೀವ ಬುದ್ಧಿ, ಓರ್ವಗೀಯ ಹರನು ವಿಶ್ವ

೪೨೩ ತನ್ನ ಮೌಢ್ಯ ಗುರುತು ತೋರಿ ಹೇಳಲೇನು?
ತಿಳಿಯಬಹುದೆ ಆತ್ಮ? ತಿಳಿವೆ ಇರದು
ನೀಚ ಮಗನು ತಂದೆ ನುಡಿಯನಾಲಿಸುವನೆ? ವಿಶ್ವ

೪೨೪ ತನಯನಾವನಿರಲಿ; ತನ್ನ ತಂದೆಗಿಂತ,
ಘನತೆ ಗಳಿಸಿ ಹೆಸರು ವಾಸಿಯಾಗಿ,
ತನ್ನಪಿತನ ಹೀನನೆಣಿಸೆ ಕೇಡು ಕಾಣು ವಿಶ್ವ

೪೨೫ ಬೇಡಲು ಹುಟ್ಟುವವನು, ಬಹಳ ವಿನಯಶಾಲಿ;
ಹಾಳು ರಂಡೆ, ಮುಸುಕು ಹಾಕಿ ಹೊಳೆವಳು
ಕೇಡಿ ಮಗನು ಮಿಕ್ಕಿ ಕಡು ಅನಾಚಾರಿಯು ವಿಶ್ವ

೪೨೬ ಅಡವಿಯೊಳಗೊಂದು ಒಣ ಗಿಡ
ಗಡನೆ ಉರಿ ಜನಿಸಿ, ವೃಕ್ಷರಾಶಿಯೆಲ್ಲ ಕೆಡುಗುಂ
ಕಡು ಪೆಸರಾಂತಿಹ ವಂಶವ
ಕೆಡಿಸುವನೋರ್ವನೆ ಚಂಡಾಲ ಪುಟ್ಟಿ, ವೇಮಾ

೪೨೭ ತಂದೆ ಮಾತು ಕೇಳಿ, ತಾಯಿ ತಲೆಯ ಕಡಿದು
ಪರಶುರಾಮನೆಷ್ಟು ದುಃಖಪಟ್ಟ?
ನೆರಳು–ನೆಲೆಯುಳಿಯದೆ ಕುಲಗಿರಿ ಸೇರಿದನು ವಿಶ್ವ

೪೨೮ ಕುವರಸತಿಯರ, ಖ್ಯಾತ ಬಂಧು–ಬಳಗ,
ಸಂಪದವ ತನುಗಳ ಚೊಕ್ಕ ನಂಬೆ,
ಸಂತಸಕರರೆನುವರು; ಕ್ಷಣ ಭಂಗುರ,
ತಿಳಿಯಲಾರರೇಕೋ? ತಿಳಿಸು ವೇಮ

೪೨೯ ಸೇರಿ ಉಣ್ಣಬಹುದು, ಸ್ವಂತ ಪುತ್ರನಿರಲು;
ದತ್ತಕ ಮಗನೆಂಜಲು ಎತ್ತುತಿಹರೆ?
ಆದರವನ ಬಗೆಗೆ ಕಾಣರು ಈ ರೀತಿ; ವಿಶ್ವ

೪೩೦ ಹಡೆದ ಮಗನ ಆಶೆ, ಹೊನ್ನಿನ ಮೇಲಾಶೆ,
ಸ್ತ್ರೀಯ ಮೇಲೆ ಆಶೆ, ಚಿತ್ತ ಕನಲಿ,
ಭ್ರಮೆಯ ಹೊಂದಿ ಇರಲು, ಬ್ರಹ್ಮ ತೋಚುವುದೇ? ವಿಶ್ವ

೪೩೧ ಔರಸ ಮಗ ನಿನಗೆ ವಾರಸುದಾರನಹ,
ವೇಶ್ಯಯಲ್ಲಿ ಜನಿಸೆ ವ್ಯರ್ಥ ಮಗನು!
ನೀನು ಸಾಯಲಾಗ, ನೀರನು ಬಿಡಲಾರ ವಿಶ್ವ

೪೩೨ ಅಳಿಯ ಸಾಯಲಾಗ, ಆತ್ಮ ಚಿಂತಿಸುವುದು
ತನಯ ಸಾಯೆ, ತಾನು ತಲ್ಲಣಿಸುವ
ಪುಣ್ಯ ಪುರುಷ ಸಾಯೆ, ಭೂಮಿಯೆ ಸಾಯುವುದು ವಿಶ್ವ

●

## ಪ್ರೀತಿ

ಪರಸ್ಪರ ಆಕರ್ಷಣೆಯೇ ಪ್ರೀತಿಯಾಗಿದೆ. ಪ್ರೀತಿಯು ಸಹೃದಯತೆಯನ್ನು ಉಂಟು ಮಾಡುವುದು. ಸಹೃದಯತೆಯಿಂದ ಸ್ನೇಹ ವರ್ಧಿಸುತ್ತದೆ.

ತಾಯಿ, ತಂದೆ, ಸತಿ, ಅಣ್ಣ ತಮ್ಮಂದಿರು ಪ್ರೀತಿಯಿಂದ ಬೆಳೆದರೆ ಬಾಳಿಗೊಂದು ಘನತೆ ಇರುತ್ತದೆ. ತಾಯಿ–ತಂದೆಯರಲ್ಲಿ ದಯೆದೋರದ ಪುತ್ರನಿದ್ದರೇನು? ಇರದಿದ್ದರೇನು?

— — — — — — — — — — — — — — — — — — — — — — — —

ಹಿರಿಯರ ವಚನಗಳನು ಪ್ರೀತಿಯಿಂದ ಕಂಡು ಅಂತೆ ಆಚರಿಸಬೇಕು. ಅಂಥ ಅನುಕೂಲವಿಲ್ಲದವನು, ಪರಿಸ್ಥಿತಿಯು ತನಗೆ ಅನುಕೂಲಿಸಿದಷ್ಟು ಮಾಡಬೇಕು. ಹುಲಿಯನ್ನು ಕಂಡು ಅದರ ವಾಸನೆ ತಿಳಿಯಲು ನರಿಯು ಗಂಧ ಬಳಿದು ಕೊಂಡಂತಾಗಬಾರದು.

ಬಂಧು-ಬಳಗದವರಲ್ಲಿ ಪರಸ್ಪರ ಪ್ರೀತಿ ಸಂಬಂಧವಿರಬೇಕು. ಪತಿಯನ್ನು ಪತ್ನಿಯು ಹೆಚ್ಚು ಸೇವಿಸುತ್ತ ಒಳಗೊಳಗೇ ಮೆಚ್ಚುತ್ತಾಳೆ. ಪ್ರೀತಿಯು ಅಡ್ಡಗೋಡೆಗಳನ್ನು ನಿವಾರಿಸುತ್ತದೆ. ಹೆಂಡತಿ-ಮಕ್ಕಳು ಮತ್ತು ತಾನು ಒಂದೇ ಎಂಬ ಭಾವನೆ, ಪ್ರೀತಿಯಿರುವಾಗ ಇರುತ್ತದೆ. ಅವರ ಸಂತೋಷವೇ ತನ್ನ ಸಂತೋಷವೆನಿಸುತ್ತದೆ.

ಸತಿಯನ್ನು ಪ್ರೀತಿಸಬೇಕು. ಪ್ರೀತಿಯಿದ್ದಷ್ಟು ಸಂತೋಷ ಹೆಚ್ಚಾಗುತ್ತದೆ. ದೀಪಕ್ಕೆ ದೀಪ ಸೇರಿ ಬೆಳೆದಂತೆ. ಪ್ರೀತಿಯು ಬರಿ ಬಾಯಿಯಲ್ಲಿ ಇರಕೂಡದು; ಮಾತಿನಾಚೆ ಹೃದಯ ವೇದ್ಯವಾಗಿರಬೇಕು. ಮನಸಾ ಪ್ರೀತಿಸಬೇಕು.

**೪೩೩ ತಾಯಿ ತಂದೆ ತಮ್ಮ ತನಯ ಅಣ್ಣ ತಮ್ಮ**
**ಸುಖದಿ ಬಂಧು ಭೃತ್ಯು ಸಕಲ ಜನರು**
**ಕಲೆತು ವರ್ಧಿಸಲ್ಕೆ ಘನತೆ ಇರುವುದಷ್ಟೆ, ವಿಶ್ವ**

**೪೩೪ ತಾಯಿ ತಂದೆಯೆನಲು ತಮ್ಮ ಆತ್ಮಸಖರು**
**ನಲ್ಮೆ ಬಂಧು ಭೃತ್ಯುರೆಲ್ಲ ಜನರು**
**ಕೂಡಿ ವರ್ಧಿಸುತಿರೆ, ಘನತೆ ಹೆಚ್ಚುತಿಹುದು ವಿಶ್ವ**

**೪೩೫ ಪಿರಿಯರ ವಚನಗಳ ಪ್ರೀತಿಯಿಂದ ಕಂಡು,**
**ಅಂತೆ ನಡೆದುಕೊಳುವ; ಅನುವಿರದಿರೆ,**
**ಹುಲಿಯ ಕಂಡು ನರಿಯು ಗಂಧ ಬಳಿದ ರೀತಿ ವಿಶ್ವ**

**೪೩೬ ಮಾನ ಧನವ ಬಿಡದೆ ಮತ್ತೆ ಪುಣ್ಯವತಿಯಿರೆ,**
**ಹೆಣಗಿ ಪತಿಯ ಸೇವೆ ಹೆಚ್ಚು ಮಾಡಿ,**
**ಒಳಗೆ ಮೆಚ್ಚುತಿಹಳು; ಒಳಗುಟ್ಟನು ಕಾಣು ವಿಶ್ವ**

**೪೩೭ ದಾರಾ ಪುತ್ರಾದಿಯಾಗಿ,**
**ಪೀರುತಿ ಕೂಡಿದೊಡೆ ಏನು? ಕುದುರುತ ಮನದೊಳ್,**
**ಬೇರೆ ಎನಿಸದಂತೆ ನಿಲಲು,**
**ಸಾರವೆನಿಪ ಮುಕ್ತಿಯುಂಟು, ಸದ್ಗುಣ ವೇಮಾ**

---

೪೩೮ ಚೊಕ್ಕ ಸತಿಯು ಇರಲು, ಸರಸವಾಡುತಿರಲು,
ತೊಡೆಯು ದೇಹಗಳನೆ ತೋರಗೊಡದೆ,
ಸಂಧ್ಯೆ ಮುಗಿದ ಮೇಲೆ ಸರಸಾಟವಾಡಳೆ? ವಿಶ್ವ

೪೩೯ ಪ್ರತಿ ದಿನವು ಸತಿಯ ಪ್ರೇಮಿಸಿ ಬೇಜಾರು
ಜ್ಯೋತಿಯ ಪ್ರೇಮವನೆ ನೋಡಿ ಕಾಣು
ಮಾತೃ ಪ್ರೇಮವೇ ಮರ್ಯಾದೆ, ಶುಭಕರ ವಿಶ್ವ

೪೪೦ ಕಾಂತೆಯಲಿ ಪ್ರೇಮ ಸ್ವಂತ ರಂಜನೆಯದು
ಚಿಂತೆ ತೀರುತಿಹುದು ಸಿಗಲು ತರುಣಿ
ಶಿವನೊಳಿರುವ ಭಕ್ತಿ ಚಿಂತೆಯೊಳಗೆ ಇರದು ವಿಶ್ವ

೪೪೧ ಬಾಯಿಯಲಿ ಪ್ರೀತಿಸುವನ ಪೂಜೆ ದೋಷ;
ಉರದಿ ಪ್ರೀತಿಸುವನ ಊಹೆ ಲೇಸು;
ನೆತ್ತಿಯಲಿ ಪ್ರೀತಿಸುವನ ಭಕ್ತಿಗೆ ಫಲ ವಿಶ್ವ

●

## ಮಧುರ ಮಾತು

ಮಾತೇ ಜ್ಯೋತಿರ್ಲಿಂಗವೆಂದು ಜ್ಞಾನಿಗಳು ಹೇಳುತ್ತಾರೆ. ಮಾತು ಬಲ್ಲವ ಮಾಣಿಕ ತಂದ; ಮಾತು ಬರದವ ಜಗಳ ತಂದ; ಎಂಬ ನಾಣ್ಣುಡಿಯೂ ಇದೆಯಲ್ಲವೆ?

ಮಾತು ಮನಸ್ಸಿನ ಅಭಿವ್ಯಕ್ತಿ; ಮಾತು ಸಂಸ್ಕೃತಿಯ ಸೂಚಕ. ಮಾತನಾಡಿದರೆ ವನದಲ್ಲಿ ಕೋಗಿಲೆಯು ಕುಹೂ ಎಂದು ಉಲಿಯುವಂತೆ ಮಧುರವೆನಿಸಬೇಕು. ಕಾಗೆ ನುಡಿಯಂತೆ ಕರ್ಕಶವೆನಿಸಬಾರದು. ಮಾತನಾಡಿದರೆ ಲೋಕ ಮೆಚ್ಚುವಂತೆ ಮಾತನಾಡಬೇಕು.

ಬೇರೆಯವರು ಮಾತನಾಡುವಾಗ ಏಕ ಮನಸ್ಸಿನಿಂದ ಆಲಿಸಿ, ಉತ್ತರಿಸಬೇಕು. ಆಗ ಇಬ್ಬರಿಗೂ ಒಳಿತು. ಇದುವೆ ಮಧುರ ಸಂಬಂಧ. ಆದರೆ, ಅದೆಷ್ಟೋ ಜನರು ತಮ್ಮ ಒಳಿತು ಕೋರಿ ಹೇಳಿದ ಮಾತಿನಿಂದ ರೇಗಿ ಪ್ರತಿಕ್ರಿಯಿಸುತ್ತಾರೆ. ತಿನ್ನಲಿಕ್ಕೆ ಮೇವು ಹಾಕಿದರೆ, ಗೂಳಿ ಕೊಂಬು ತಿವಿಯುವಂತೆ ಇವರ ರೀತಿ.

ಒಳ್ಳೆಯವರ ನುಡಿ ಬಂಗಾರ ಮೊಳಗಿದಂತೆ. ಸದ್ದು ಕಡಿಮೆ. ಆದರೆ ಅಲ್ಪರ ಮಾತು ಕಂಚು ಮೊಳಗಿದಂತೆ. ಸದ್ದು ಜೋರಷ್ಟೇ.

೪೪೨ ಕೋಗಿಲೆ ವನದಲ್ಲಿ 'ಕು...ಕೂ' ಹಾಡುವಂತೆ,
ಸುರಿತ ಜನರ ಭಾವ, ನಡೆಯು, ನುಡಿಯು
ಕಾಗೆ ಕೂಗಿನಂತೆ ಕಲುಷಾತ್ಮನ ವಚನ ವಿಶ್ವ

೪೪೩ ಭಾಷೆಯಾಡದಿರಲು ದೇಶ ಮೆಚ್ಚದಯ್ಯ
ಭಾಷೆಯಾಡುವಾಗ ಬೇಕು ಹೊಣೆಯು
ಭಾಷೆ ಹಿರಿಮೆಯರಿತು ಈಶನರಿಯಬೇಕು ವಿಶ್ವ

೪೪೪ ಮಾತು ಮುನ್ನ ಅರಿತು, ಮತ್ತೋರ್ವನ ನುಡಿಗೆ
ಪ್ರತಿ ನುಡಿಯೆ ಅಮಿತ ಸಂತಸಕರ
ಮನವರಿಯದೆ ಒಳಗೊಳಗೆ ತಳಮಳವೇಕೆ? ವಿಶ್ವ

೪೪೫ ತನ್ನ ಒಳಿತು ಕೋರಿ, ಧರ್ಮ ಕರ್ಮ ತಿಳಿಸೆ,
ಮುನ್ನ ಜರಿದು ನುಡಿವ, ದುರಿತ ಖಳನು
ತಿನ್ನಲಿಡಲು ಗೂಳಿ, ಕೊಂಬು ತಿವಿವ ಪರಿಯು ವಿಶ್ವ

೪೪೬ ಢೋಂಗಿ ಮಾತನಾಡೆ ದೊರಕಬಹುದೆ ಮೋಕ್ಷ?
ಆಗು ಹೋಗದಂಥ ಕೂಗು ಹೊಲ್ಲ,
ಸದ್ಗುರುವಿನ ಚಿಹ್ನೆಯಲ್ಲ; ದುರ್ಗುಣಿಯದು ವಿಶ್ವ

೪೪೭ ಅಲ್ಪನಾಡುತಿಪ್ಪ ಆಡಂಬರದ ನುಡಿ,
ಒಳ್ಳೆಯವನಾಡುವ ಮಧುರ ನುಡಿಯ
ಮೊಳಗುವುದೇ ಹೊನ್ನು, ಕಂಚು ಧ್ವನಿಸುವಂತೆ ವಿಶ್ವ

೪೪೮ ಮಾತು ಕೇಳಿ ಒಬ್ಬ ಹೌದು ಆಹುದು ಎನಲು,
ಕೆಲವರು ಸಿದ್ಧ ಅಲ್ಲವೆನಲು ಕ್ಷಣದಿ
ದಾನಿ ನೀಡಬಹುದು ದಾತನೆನಿಸುವಂತೆ ವಿಶ್ವ

●

# ಕೃತಜ್ಞತೆ

ಒಬ್ಬನು ತನಗೆ ಮಾಡಿದ ಒಳಿತನ್ನು ಸ್ಮರಿಸುವುದು ಸಜ್ಜನಿಕೆಯ ಲಕ್ಷಣ. ಉಪಕಾರ ಸ್ಮರಣೆಯಿಂದ ಸದ್ಭಾವವು ಕುದುರುತ್ತದೆ. ಪರಸ್ಪರ ಪ್ರೀತ್ಯಾದರಗಳು ವರ್ಧಿಸುತ್ತವೆ. ತಮಗಾರಾದರೂ ಒಳಿತು ಮಾಡಿದಾಗ, ಅದನ್ನು ಮರೆಯಬಹುದೆಂಬ ಅಂಜಿಕೆಯಿಂದ ಬೇಗನೇ ಪ್ರತ್ಯುಪಕಾರ ಮಾಡಿ ಸಜ್ಜನರು ಮರ್ಯಾದೆಯನ್ನು ಕಾಣುವರು.

ಇನ್ನು ಸಜ್ಜನನಿಗೆ ಉಗುರಿನಷ್ಟು ಉಪಕಾರ ಮಾಡಿದರೂ ಸಹ ಅವನು ಅದನ್ನೇ ಗುಡ್ಡದಷ್ಟು ಎಂದು ನೆನಪಿಸಿಕೊಂಡು ವಿನಯಶೀಲನಾಗಿರುತ್ತಾನೆ.

ದೇವರು ನಮಗೆ ಅರಿವು ನೀಡಿದಂತೆ ಮರೆವನ್ನೂ ವರವಾಗಿ ನೀಡಿದ್ದಾನೆ. ಆದ್ದರಿಂದ ನಾವು ಪಾಪ ಸಂಗತಿಗಳನ್ನು ಮರೆಯಬೇಕು. ಅನ್ಯರ ದೋಷಗಳನ್ನೂ ಮರೆಯಬೇಕು. ಆದರೆ ಅನ್ಯರು ಮಾಡಿದ ಮೇಲ್ಮೆಯನ್ನು ಮರೆಯದೆ ಸದಾ ಸ್ಮರಿಸುತ್ತಿರಬೇಕು. ಹಾಗೆ ಮಾಡದವನು ಖಳನೇ ಸರಿ.

**೪೪೯ ಮರೆವೆವೆಂದು ತಿಳಿದು, ಮನದಿ ಸುಜನರೆಲ್ಲ;**
**ಯಾರೊ ಗೆಯ್ದ ಮೇಲ್ಮೆ ಎಂಥದಿರಲಿ?**
**ಮರಳಿ ಮೇಲ್ಮೆ ಬಗೆದು, ಮರ್ಯಾದೆ ಕಾಣುವರು ವಿಶ್ವ**

**೪೫೦ ಸುಗುಣವಂತನಿಗಿನಿತು ಉಗುರಿನಷ್ಟು ಒಳಿತು,**
**ಬಗೆಯೆ ಬೆಟ್ಟದಷ್ಟು; ಅವನ ಗುಣದಿ**
**ನಗದಳತೆಯ ಮಾಡೆ ಗುಣಹೀನನರಿವನೆ? ವಿಶ್ವ**

**೪೫೧ ಮರೆಯಬೇಕು ಪಾಪ ಸಂಗತಿ;**
**ಮರೆಯುತಿರಬೇಕು ಯುದ್ಧವ ಮತ್ತೀ ಜಗದೋಳ್.**
**ಮರೆಯಬೇಕು ಪರರ ದೋಷವ;**
**ಮರೆಯಬೇಡ ಪರರ ಮೇಲ್ಮೆಯ ಮಹಿಯಲಿ ವೇಮಾ**

**೪೫೨ ತನಗೆ ಗೆಯ್ದ ಮೇಲು, ತಾನು ಅರಿಯೆ ಕಲಿತು,**
**ಹರುಷದಿಂದ ಸೊಣಗ ಅರಿವುದಿಳೆಯ**
**ತನಗೆ ಗೆಯ್ದ ಮೇಲು ತಾ ತಿಳಿಯದಿದ್ದರೆ,**
**ಮನುಜನೆಂಥ ಖಳನು ಮಹಿಲಿ, ವೇಮಾ**

---

೪೫೩ **ತನಗಿತ್ತ ವಸ್ತು ಪರರಿಗಿತ್ತುದೊಂದೆ;**
**ಕಾಣದನುಭವಿಸದಿರೆ, ಕಡು ಚೋದ್ಯವು?**
**ತನ್ನ ಸತಿಯ ಮಾರಿ ದಾಸಿ ರಿಕಕ್ಷಿಸ ರಕ್ಷಿಪ ರೀತಿ** **ವಿಶ್ವ**

●

# ಸಮದರ್ಶಿತ್ವ

ಹೆಂಡಿರು ಮಕ್ಕಳಲ್ಲಿ, ಪತಿ ಪತ್ನಿಯಲ್ಲಿ ಆತ್ಮವು ಏಕವಾಗಿದೆ. ಭಿನ್ನತೆ ಇರುವುದು ಕೇವಲ ರೂಪದಲ್ಲಿ ಮಾತ್ರ. ಇದೇ ರೀತಿ ಧರೆಯ ಸಕಲ ಜೀವಜಂತುಗಳನ್ನು ತನ್ನಂತೆಯೇ ಬಗೆಯುವುದೇ ಸಮದರ್ಶಿತ್ವ. ಹಾಗಾದರೆ, ಇದನ್ನರಿತ ಜ್ಞಾನಿಯು ಇನ್ನೋರ್ವನನ್ನು ಹೇಗೆ ಕೊಲ್ಲಲೆಳಸುವನು?

ಸ್ವಯಂ, ಪರರು ಎನ್ನುವ ಬುದ್ಧಿ ಇರಬೇಕಾಗಿಲ್ಲ. ಪರರನ್ನು ತನ್ನಂತೆಯೇ ಭಾವಿಸಿ ಸಮದೃಷ್ಟಿ ತಿಳಿಯಬೇಕು. ಎಲ್ಲರನ್ನೂ ಸಮನಾಗಿ ನೋಡುವವನೇ ಯೋಗಿ.

ಈ ಜೀವನ ನಾಟಕದಲ್ಲಿ ಭಿನ್ನ ಭಾವದ ಬೂಟಕತನವನ್ನು ತೋರದೆ, ಸಮಭಾವ ತಾಳುವುದೇ ತುಂಬು ಬಾಳು.

೪೫೪ **ಸುತ–ಸತಿಪತಿಗಳಲಿ, ಸಕಲರಲ್ಲಿ ಆತ್ಮ,**
**ಮೇಲಾಗಿಯೇ ಇದ್ದು ಮೆರೆಯುತಿಹುದು**
**ಬೇರೆ ಬೇರೆಯಾಗಿ ಬೆಳಗುವುದು ರೂಪದಿ** **ವಿಶ್ವ**

೪೫೫ **ತನ್ನ ಹಾಗೆ ಅರಿಯೆ, ಧರೆಯ ಜೀವ ಜಂತು;**
**ಬಗೆಯೆ, ತನ್ನ ಹಾಗೆ ಬದುಕು ಅಲ್ತೆ?**
**ಜ್ಞಾನಿ ಜ್ಞಾನಿ ಕೊಲಲು ಏನು ಕಾರಣಯ್ಯ?** **ವಿಶ್ವ**

೪೫೬ **ಪರರನು ನೀವೆಂದರಿತೊಡೆ,**
**ಪರ ಬುದ್ಧಿ ಮೀರದೆ ನೀವು ಅದರದಿ ಇರಲಾ**
**ಸ್ಥಿರ ವೇತ್ತೃತೆಯಲಿ ತೋಚುವ**
**ಪರಿಪೂರ್ಣವೆ ಬಟ್ಟ ಬಯಲು, ಚೊಕ್ಕಟ, ವೇಮಾ**

೪೫೭ **ಅನ್ಯರಿಗೆ ಬರುತಿಹ ಆಪದ ತನ್ನದೆಂದು,**
**ಎನ್ನುವಾತ ಜಗದಿ ಇರುವಂಥವ**
**ಎಷ್ಟೋ ಅವನ ಒಳಗೆ ಇಹಪರವಿರೆ, ಲೇಸು**
**ಕಾಣುವವನು ಮಿಗಿಲು ಘನನು ವೇಮ**

---

**೪೫೮ ಸಮವು ಆದ ದೃಷ್ಟಿ ಸಮವಾಗಿಯೆ ನಿಲಿಸಿ,**
**ಬಾಹ್ಯರುಚಿಗಳ ತೊರೆದು ಭದ್ರವಾಗಿ,**
**ಬೆಳಗೆ ನೋಡು, ಬಟ್ಟೆ ಬಯಲಾಯ್ತು, ಬ್ರಹ್ಮ ವಿಶ್ವ**

**೪೫೯ ಸಕಲ ಜೀವಿಗಳನು ಸಮವಾಗಿ ನೋಡುವನು;**
**'ಅವನ' ಕ್ರಮವ ತಿಳಿಯೆ, ಅವನೆ ಯೋಗಿ**
**'ಅವನ' ನೀವೆನುವುದು; ಅನ್ಯನನ್ನು ಅಲ್ಲ, ವಿಶ್ವ**

**೪೬೦ ಬೂಟಕವೀ ಬದುಕು ನೋಡೆ,**
**ನಾಟಕವಹ ಲೋಕಗಳಲಿ ನಿಜವಿದೆ ನೋಡಲ್;**
**ವಾಟವರಿತು ಗುರು ಮುಖದಿಂ**
**ದೀಟಿಹ ಪರಿಪೂರ್ಣವಾಂತು, ದಾಟೆಲೊ, ವೇಮಾಸಂಯಮ**

ಸಂಯಮವು ಶ್ರೇಷ್ಠ ಸಂಪತ್ತಾಗಿದೆ. ಮಾತಿನಲ್ಲಿ ಸಂಯಮವಿರುವುದು ಇನ್ನೂ ಮುಖ್ಯ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು'. ಎಂಬ ನಾಣ್ಣುಡಿಯೂ ಇದೆ.

ಧರ್ಮ ನೀತಿ ತಿಳಿದು ಮಾತನಾಡಬೇಕು. ಮಾತು ಹಿತಮಿತವಾಗಿರಬೇಕು. ಬಾಗಿಲಿಗೆ ಚೌಕಟ್ಟು ಮಿತಿಯಾಗಿರುವಂತೆ ಮಾತಿಗೆ ಧರ್ಮವೇ ಮಿತಿಯಾಗಿರಬೇಕು.

ಇದು ನನಗೆ ಸಾಲದು, ಅದೂ ಸಹ ನನಗೆ ಬೇಕು. ಎಂದು ಅಳತೆ ಮೀರಿದ ಬೇಡಿಕೆಗಳನ್ನಿರಿಸಿಕೊಂಡು ಮಿತಿ ಮೀರಿ ನಡೆಯುವುದು ಸರಿಯಲ್ಲ. ಇಲ್ಲಿ ಸಂಯಮದ ಅಗತ್ಯವಿದೆ.

ಐಹಿಕದ ವ್ಯವಹಾರಕ್ಕೆ ಹೇಮ ಬೇಕು. ಆದರೆ ಹೇಮದ ಗಳಿಕೆಗಾಗಿ ತಮ್ಮ ಮಾನಸ ಶಕ್ತಿಯನ್ನು ಬಳಸುವ ಹೇಮಕಾರಕ ವಿದ್ಯೆಯವರು ಪತಿತರಾಗುತ್ತಾರೆ. ತತ್ತ್ವವರಿಯುವ ವರೆಗೆ ಹೇಮ ಗಳಿಕೆ ಇರಲಿ; ಅನಂತರ ಅದು ತ್ಯಾಜ್ಯ.

ಕೋಪದಿಂದ ಕಾರ್ಯ ಕೆಡಿಸಿಕೊಳ್ಳುವುದೂ ಸಲ್ಲ. ಸಹನೆ ಬೇಕು, ಸಂಯಮ ಬೇಕು.

**೪೬೧ ಅಂಕೆಯರಿತು ಮಾತು ಆಡಲು ಅರಿತಾಗ,**
**ಸಣ್ಣ ದೊಡ್ಡ ತನದ ಗಣನೆಯೇಕೆ?**
**ಬಾಲ ಹಿಡಿದ ದೀಪ ಬೆಳಗದೆ ಬಹದಾಗಿ? ವಿಶ್ವ**

---

೪೬೨ ದ್ವಾರ ಚೌಕಟ್ಟಿಗೆ ಕದದ ಅಳತೆ ಗಡಿಯು;
ಬಾಯಿಗೊಪ್ಪ, ನುಡಿಯೆ ಇತಿ ಮಿತಿಯು
ಧರ್ಮವರಿತು ತಿಳಿಸಿ ಧನ್ಯನಾಗು ಜಗದಿ ವಿಶ್ವ

೪೬೩ ಇದು ನನಗೆ ಸಾಲದೆನ್ನುತ,
ಅದ ತಾನರಿಯುತ ಎಂದೆಂದು ಮಮತೆ ಮತಿಯಂ,
ಬದಲಿಸದದ ಬಿಡದಿರುವುದು,
ಅದುವೇ ಸಂಸಾರ ಬೀಜ, ಮನುಜಗೆ, ವೇಮಾ ವಿಶ್ವ

೪೬೪ ಹೇಮಕಾರ ವಿದ್ಯೆ ಅರಿತ ಸಕಲ ಜನರು,
ವ್ಯಥೆಯ ಪಡದೆ ಇಹರು ವಿದ್ಯೆಯಿಂದ
ತತ್ತ್ವವರಿತ ಬಳಿಕ, ತನಗೆ ಚಿಂತೆಯೇಕೆ? ವಿಶ್ವ

೪೬೫ ಕೋಪದಿಂದ ನರಕ ಕೂಪವನು ಸೇರುವ;
ಕೋಪದಿಂದ ಗುಣವು ಕೊಂಚವಹುದು
ಬಾಳು ಕೋಪದಿಂದ ಕೀಳು ಆಗುತಿಹುದು ವಿಶ್ವ

೪೬೬ ದ್ವಾರ ಚೌಕಟ್ಟಿಗೆ ಕದದ ಅಳತೆ ಮಿತಿಯು
ಬಾಯಿಗೊಪ್ಪ ನುಡಿಯದಕಿತಿಮಿತಿಯು
ಧರ್ಮವರಿತು ತಿಳಿಸಿ, ಧನ್ಯನಾಗು ಜಗದಿ ವಿಶ್ವ

೪೬೭ ನುಡಿದು ನುಡಿದು ವಾಕ್ಕು ನಯವು ಹೋಗುತಿಹುದು
ತಿನುತ ತಿನುತ ರುಚಿಯು ಸ್ಥಿರವೆ ಬರದು
ಜಿಹ್ವೆ ತಿಂಡಿ ಹೊರತು ಜೀವೇಶ ಹೊಂದುವರೆ? ವಿಶ್ವ

೪೬೮ ನೀತಿ ತಿಳಿಸಿ ಹೇಳು ನಿಜವಾಗಿ ವೇಮನ,
ಪಾಪವೆಲ್ಲ ಹಿಂಗಿ ಹೋಗುವಂತೆ
ಆಳ ತತ್ತ್ವವರಸಿ ಲೋಕಕೆಲ್ಲ ತಿಳಿಸು ವಿಶ್ವ

●

# ಕೀರ್ತಿ

ಯಾವಾಗಲೂ ಬಡವರಿಗೆ ಉಪಕರಿಸಬೇಕು. ಕೊಟ್ಟ ಮಾತಿಗೆ ತಪ್ಪಬಾರದು. ಹಾಗೆ ಬಾಳಿದರೆ, ಸತ್ತ ಮೇಲೂ ಹೆಸರು ಉಳಿಯುವುದು. ಕೊಟ್ಟ ಮಾತನ್ನುಳಿಸಿಕೊಂಡನೆಂದೇ ಶಿಬಿ ಚಕ್ರವರ್ತಿಯು ಕೀರ್ತಿಶೇಷನಾಗಿ ಬಾಳಿದನು. ಅನ್ಯರ ಕೀಳನ್ನು ಎಣಿಸದವನು ಉಪಕಾರಿಯೇ ಸೈ, ಜೀವನ ಬದುಕು ಎಷ್ಟು ಕಾಲ? ಅವನ ಸ್ಥಾವರ ಆಸ್ತಿ ಪಾಸ್ತಿ ಎಷ್ಟು ಕಾಲದ್ದು? ಆದ್ದರಿಂದ ವಿದೇಹಿಯು ನಿತ್ಯವಾದ ಬ್ರಹ್ಮವನ್ನು ತಲುಪಬೇಕಲ್ಲವೇ?

ಸಂಸಾರ ಜೀವನದಲ್ಲಿ ಕಷ್ಟನಷ್ಟಗಳು ಬರುವುದು ಸಹಜ. ಆದ್ದರಿಂದ ಕಷ್ಟಗಳಿರದ ಪರದ ಬದುಕನ್ನು ಬಾಳಲು ಕಲಿಯಬೇಕು. ನಿತ್ಯವಾವುದು? ಅನಿತ್ಯವಾವುದು? ಇದನ್ನು ಭೂಮಿಯ ಮೇಲೆ ಆಗು ಹೋಗುಗಳನ್ನು ವಿಮರ್ಶಿಸಿ ಗುರುತಿಸಿಕೊಳ್ಳಬೇಕು. ಇಂಥ ವಿವೇಕಿಯು ಮಾತ್ರ ಸತ್ತು ಬದುಕುವ ರಹಸ್ಯವನ್ನು ತಿಳಿಯಬಲ್ಲನು. ಹೀಗೆ ಮಾಡದೆ ಹೇಗೋ ಬದುಕಿ, ಎಲ್ಲಿಗೋ ಹೋದರೆ, ಧ್ಯೇಯ ಸಿದ್ಧಿ ಸಿದ್ಧಿಸದು. ಬಾಳು ಹಾಳಾಗುವುದು. ಇದರಲ್ಲಿ ಅಂಥವರು ಅಪಕೀರ್ತಿಯನ್ನು ಕಾಣರೆಂಬುದೇ ದುರ್ದೈವ.

೪೮೯ ಗುಬ್ಬಿಗಾಗಿ ದೇಹ ಕೊಯ್ದನಾ ಶಿಬಿರಾಜ
ವಾರ್ತೆ ಬಿಡದೆ ಬಂತು, ಕೀರ್ತಿ ಪಡೆದ
ಎಣಿಸದಿರಲು ಕೀಳು ಎನುವರು ಉಪಕಾರಿ ವಿಶ್ವ

೪೯೦ ನಡೆ-ಜೀವ ಸ್ಥಾವರಗಳು,
ಗಡ ಸತ್ತು ಹೋಹುದನರಿತು, ಭಾವದ ಒಳಗೇ,
ಬಿಡದೆ ಬ್ರಹ್ಮವ ತಲುಪರು
ಬಿಡು ಸತ್ತು ಹೋಗುದುಂಟೇನು? ಜಗದಿ ವೇಮಾ

೪೯೧ ಇಹದ ಬಾಧೆಯೆಷ್ಟೊ, ಇರಲು ಬಹುದು ಬಾಳಿ
ಯಮನ ಬಾಧೆ ಇರದೆ, ಅಮರರಂತೆ
ಪರದಿ ವ್ಯಥೆ ಇರದ, ಬದುಕರಿಯಿರಿ ನರರೆ! ವಿಶ್ವ

೪೯೨ ಬದುಕುವವರು ಯಾರು? ಬದುಕದವರು ಯಾರು?
ಬದುಕಿ ಬದುಕದಿರುವ ಪ್ರಾಣಿ ಯಾರು?
ಕ್ಷಿತಿಯ ಶೋಧ ಗೆಯ್ದು, ಸ್ಥಿರವಾಗಿ ನೋಡಿರೋ ವಿಶ್ವ

೪೭೩ **ಸಾಯುವವರು ಯಾರು? ಸಾಯದವರು ಯಾರು?**
**ಸತ್ತು ಬದುಕುತಿರುವ ಸುಜನರಾರೊ?**
**ಪೂರ್ಣವಾಗಿ ಕಂಡು ಪರಿಕಿಸಿ ನೋಡಿರೋ** ವಿಶ್ವ

೪೭೪ **ಯಾವನರಿಯದಿದ್ದು, ಎಲ್ಲಿಗೊ ಹೋಗುವನು?**
**ತೊಲಗಿತಕಟ ಜೀವ, ದೇಹ ತೊರೆದು**
**ಅಷ್ಟು ಮಾತ್ರಕೂನು ಅಪಕೀರ್ತಿ ಕಾಣನು**
**ಮನುಜರನ್ನು ಅರಿಯೊ ಮಂಕು ವೇಮ**

೪೭೫ **ಹುಳುವು ಸೇರಿದ ಗಿಡ ಹೂ ಫಲಗಳ ಬಿಡದು,**
**ನಡುವು ಮುರಿದ ನಾಯಿ ನಡೆಯದಲ್ಲ**
**ಕೀರ್ತಿಗೆಟ್ಟ ಯೋಗಿ ಮೂರ್ತಿ ಕಾಣಲಾರ** ವಿಶ್ವ

●

## ಸನ್ನಡತೆ

ಜನರ ಸ್ವಭಾವವೇ ಅವರ ನಡೆನುಡಿಯಲ್ಲಿ ಅಭಿವ್ಯಕ್ತವಾಗುತ್ತದೆ. ಇದನ್ನೇ ಶೀಲವೆನ್ನುತ್ತಾರೆ. ಸದ್ಗುಣಿಗಳು ಜಗತ್ತಿನಲ್ಲಿ ಇರುವರೆಂದೇ ಸನ್ನಡೆ, ಸವಿಮಾತುಗಳು ರೂಢಿಯಲ್ಲಿವೆ. ಹಿರಿಯರು ಹೇಳುವುದನ್ನು ಆಲಿಸಿ, ಅಂತೆಯೇ ವರ್ತಿಸಬೇಕು. ಹಾಗೆ ವರ್ತಿಸದೆ, ಮನ ಬಂದಂತೆ ವರ್ತಿಸಿದರೆ, ಹುಲಿಯನ್ನು ಕಂಡು ನರಿಯು ಅದರಂತೆ ಕಾಣಲು ಗಂಧವ ಬಳಿದ ರೀತಿಯಾದೀತು!

ಶುದ್ಧ ಮನಸ್ಸೇ ಸದ್ವಿಚಾರಗಳ ನೆಲೆ. ಅಂಥ ಮನವು ಪುಣ್ಯ ಕಾರ್ಯ ಗೆಯ್ಯಬಲ್ಲದು. ಸದ್ವಿಚಾರ ಮಾಡದೆ, ಪಾಪ ಚಿಂತೆಗೆ ಇಂಬುಗೊಟ್ಟರೆ, ಕೇಡು ಅನಿವಾರ್ಯ, ಚಿಂತೆಯನ್ನು ಕೊನೆಗೊಳಿಸುವುದೇ ಅಪೂರ್ವ ಸಂಪದವು.

ಮನಸ್ಸು ಶುದ್ಧವಾದಾಗ ಮುಚ್ಚುಮರೆಗೆ ಅವಕಾಶವಿಲ್ಲ. ಆಗ ನಾಚುವುದೇತಕ್ಕೆ? ಹೀಗೆ ನಾಚದ ನಡೆಯವನೇ ಲಯವಿಲ್ಲದ ಜೀವಿ. ನುಡಿದಂತೆ ನಡೆಯಬೇಕು; 'ಹೇಳುವುದು ಶಾಸ್ತ್ರ, ತಿನ್ನುವುದು ಬದನೇಕಾಯಿ' ಆದರೆ, ಬಂದದ್ದೇನು? ಆದ್ದರಿಂದ ನಿಮ್ಮ ಶೀಲವನ್ನು ಕಾಯ್ದುಕೊಳ್ಳಬೇಕಾದರೆ, ನೀವು ಏನನ್ನು ಆಲೋಚನೆ ಮಾಡುತ್ತೀರಿ? ಎಂಬುದನ್ನು ಗಮನದಲ್ಲಿ ಇಡಿರಿ.

೪೭೬ **ಭೂಮಿಯಲ್ಲಿ ಪುಣ್ಯ ಪುರುಷರಿಲ್ಲದಿರಲು,**
**ಜಗವದೆಂತು ತಾನು ಬಿರಿಯದಿಹುದು?**
**ಅಲ್ಲಲ್ಲಿ ದೊರಕರು ಅಂಥವರತಿಯಾಗಿ** ವಿಶ್ವ

೪೭೭ ಹಿರಿಯರ ನುಡಿಗಳನು ಹದುಳದಿಂದಾಲಿಸಿ,
ಅಂತೆ ನಡೆಯದಿರಲು ಅಲ್ಲ ಫಲವು
ಹುಲಿಯ ಕಂಡು ನರಿಯು ಗಂಧ ಬಳಿದ ರೀತಿ ವಿಶ್ವ

೪೭೮ ಚಿತ್ತ ಶುದ್ಧಿ ಹೊಂದಿ ಗೈದ ಪುಣ್ಯ ಕಾರ್ಯ
ಕೊಂಚವಾದರೇನು ಕ್ಷುಲ್ಲಕಲ್ಲ
ಆಲದ ಮರವೆಷ್ಟು? ಅದರ ಬೀಜವೆಷ್ಟು? ವಿಶ್ವ

೪೭೯ ಕುಲದೊಳೊಬ್ಬ ಮನುಜ ಗುಣವಂತನಾಗಲು,
ಕುಲಕೆ ಶೋಭೆಯವನ ಗುಣಗಳಿಂದ
ಕಳೆಗಟ್ಟಿತು ವನ ಗಂಧದ ಗಿಡದಿಂದ ವಿಶ್ವ

೪೮೦ ಎಷ್ಟು ಕಷ್ಟ ಉಂಟೊ, ಅಷ್ಟು ಪಾಪ ಚಿಂತೆ;
ಚಿಂತೆಯಿಂದ ಮಿಕ್ಕಿ ಚಿಕ್ಕ ಮನಸು;
ಕೊನೆಗೊಳಿಸಲು ಚಿಂತೆ, ಕೆಡದ ಸಂಪದ ಕಾಣು ವಿಶ್ವ

೪೮೧ ಭಾವ ಬಂಧು ಸಂಬಂಧಿ ಮರ್ಯಾದೆಗಳೊಳು
ನೀತಿ ತಪ್ಪಿದಾಗ, ತಾಪಕೀಡು
ಬಿಡದೆಂದು ಬಪ್ಪುದು; ತಪ್ಪದಯ್ಯ ನೋವು ವಿಶ್ವ

೪೮೨ ಅಲ್ಪನಾದವನಿಗೆ ಅಧಿಕಾರ ನೀಡಲು,
ದೊಡ್ಡ ಸಣ್ಣ ಎನದೆ ದೂಡುತಿಪ್ಪ;
ಕೆರಹ ಕಡಿವ ಸೊಣಗ ಕಬ್ಬಿನ ಸಿಹಿಯರಿವುದೆ? ವಿಶ್ವ

೪೮೩ ಮನದಿ ದಯವಿರದ ಹೀನ ಹೊಲೆಯನ
ಕೂಡಿಕೊಂಡ ಜನಕೆ ಕೇಡು ನಿಜವು
ದೊಡ್ಡತನವಿರದೊಡೆ, ಮಡ್ಡಿ ಮಂಕಂದಿರಿಗು ವಿಶ್ವ

೪೮೪ ತನುಗಳಸ್ಥಿರೆಂದು, ಧನವು ಅಸ್ಥಿರೆಂದು,
ತಿಳಿಸಬಲ್ಲ; ತಾನು ತಿಳಿಯಲಿಲ್ಲ;
ಹೇಳಬಹುದು; ಕಾರ್ಯ ಹಾಗೆ ಮಾಡೆ ಕಷ್ಟ ವಿಶ್ವ

೪೮೫ **ಶ್ರವಣೇಂದ್ರಿಯ ವಿರಲು ಸಾರ್ಥಕವುಂಟೇನು?**
**ಆಲಿಸು; ಹಿರಿಯ ಜನ ಆಡುವುದನು**
**ಕೇಳಿ ಕೇಳಿ ನಿನಗೆ ಖಚಿತವೆನಿಸುವುದಲ್ಲ!** ವಿಶ್ವ

೪೮೬ **ಸತ್ಯ ಪರರ ಸಂಗದಲ್ಲಿ ಸರಸ ಹೊಲ್ಲ**
**ಬಡವರೊಡನೆ ಬಲದ ಸೆಣಸು ಹೊಲ್ಲ**
**ಧನಿಕ ಜನರ ಸಂಗದಾಸೆ ಮೊದಲು ಹೊಲ್ಲ** ವಿಶ್ವ

●

## ಪರಸ್ತ್ರೀಯಲ್ಲಿ ಮಾತೃಭಾವ

ಮಾನವನು ಗೃಹಸ್ಥನಾಗಿದ್ದರೆ, ಪತ್ನಿ ವ್ರತಸ್ಥನಾಗಬೇಕು. ತಾನು ಚಿಕ್ಕಂದಿನಲ್ಲಿ ಹಾಲು ಕುಡಿದ ಸ್ತನಗಳೇ ಈತನು ಕ್ರೀಡಿಸುತ್ತಿರುವ ಸ್ತನಗಳಲ್ಲವೇ? ಎಂಬ ವಿವೇಕ ಹೊಂದಬೇಕು. ಮುಂದೆ ತಾನು ಮೋಹಿಸುವ ಪರಸ್ತ್ರೀಯನ್ನು ತನ್ನ ತಾಯಿಯಂತೆ ಬಗೆಯಲು ಸಮರ್ಥನಾಗುತ್ತಾನೆ. ಆಗ ಕಾಮವು ವಾತ್ಸಲ್ಯವಾಗಿ ಮಾರ್ಪಡುತ್ತದೆ.

ವಿರಕ್ತಿ ತಾಳಿದವನು ಸಕಲ ಸ್ತ್ರೀಯರನ್ನೂ ತಾಯಿಯಂತೆ ಕಾಣಬಲ್ಲವನಾಗುತ್ತಾನೆ. ಮುಂದೆ ಮಾತೃ ಪೂಜೆಗೆ ಅಣಿಯಾಗುತ್ತಾನೆ.

೪೮೭ **ತನ್ನ ಹೆತ್ತು ಹೊತ್ತ ತಾಯಿಯಂತೆ ಕಾಣು**
**ಅನ್ಯನ ಸತಿ; ನ್ಯಾಯವರಿತು ನೋಡಿ**
**ತನ್ನ ತಾಯಿಯಂತೆ ಕಾಣಲಾರ ನರನು!** ವಿಶ್ವ

೪೮೮ **ಪರಸತಿ ಗಮನವು ಪ್ರತ್ಯಕ್ಷ ನರಕವು**
**ಅರಿಯೆ ನಿಂದೆಗೆಲ್ಲ ಆಲಯವೈ**
**ಪುರುಷ ಕೇಳೆ ಕೊಲುವ; ಭೂಪತಿ ಕಾಡುವನು** ವಿಶ್ವ

೪೮೯ **ಅಮ್ಮ ಕಣಾ! ಭಾರ್ಯೆಯೆನೆ,**
**ಅಮ್ಮ ಭಾರ್ಯೆ ಕಾಣು, ಆ ಈರ್ವರಿಗುಂ**
**ಈ ಮಹಿಯಲಿ ಭೇದಂಗಳ**
**ನೆಮ್ಮದಿಯಿಂದರಿಯವವನೆ, ನಿಪುಣನು, ವೇಮಾ**

●

## ಸಹನ ಶೀಲತೆ

ಸಹನ ಶೀಲತೆಯು ಮಾನವನು ಸಾಧಿಸಬೇಕದ ಶ್ರೇಷ್ಠ ಸದ್ಗುಣವಾಗಿದೆ. ಸಹನೆಯಿಲ್ಲದವನು ಅನ್ಯರ ಮೇಲು ಕಂಡು ಹುಚ್ಚನಂತೆ ವರ್ತಿಸುತ್ತಾನೆ. ಅದೆ ಓರ್ವನ ಏಳ್ಗೆಯನ್ನು ಕಂಡು, ಚೆನ್ನಾಗಿ ಸಹಿಸಲು ಅವನು ಗೃಹಸ್ಥನಾಗಿದ್ದರೂ ಸರಿ, ವಿರಕ್ತನಾಗಿದ್ದರೂ ಸರಿ, ಅವನ ಇರವು ಮೇಲುಮಟ್ಟದ್ದೇ ಆಗಿರುತ್ತದೆ.

ಒಬ್ಬನು ಹೆಚ್ಚು ಓದಿ ಪಂಡಿತನಾಗಬಹುದು. ಆದರೆ ಸಹನೆಯನ್ನು ಹೊಂದದಿದ್ದರೆ ಓದು ನಿಷ್ಫಲ. ಸಹನೆ ಇರದವನು ಒಬ್ಬನನ್ನು ನಿಂದಿಸಬಹುದು. ಅದನ್ನು ಸಹಿಸಿ ಮರೆತು ಬಿಡಬೇಕು.

ಏನೇ ಆಗಲಿ; ಎಂಥ ಪ್ರಸಂಗದಲ್ಲಿಯೂ ಸಹನೆಯನ್ನು ಕಳೆದುಕೊಳ್ಳಬಾರದು. ಇನಿತಾದರೂ ಸಹನೆ ಕಳೆದುಕೊಂಡರೆ, ಕೇಡು ಕಟ್ಟಿಟ್ಟ ಬುತ್ತಿ.

**೪೯೦ ಸಹನೆಯಿಲ್ಲದವರು ಸರಿಕರನ್ಯರ ಯಶ,**
**ಕೇಳಿದಂತೆ ಅಧಿಕ, ಹುಚ್ಚು ರೋಗ;**
**ಅದರ ಪರಿಹಾರಕೆ ಅಭಿಮಾನಿ ಮಾನವಗೆ;**
**ಸ್ವಯದ ಘನತೆಯನ್ನು ಸಾರು ಜಗದಿ ವೇಮ**

**೪೯೧ ಸಾಧು ಜನರ ಮೇಲೆ ಸಂತಸಪಡುವವನು,**
**ಓರ್ವನೇಳ್ಗೆ ಕಂಡು, ಒಪ್ಪ ಸಹಿಸೆ,**
**ಮಹನೆಯೊಳಿದ್ದರೇನು? ಮಾರಿನೊಳಿರಲೇನು? ವಿಶ್ವ**

**೪೯೨ ಬಹಳ ಕಾವ್ಯಗಳನು ಓದಿ ತಿಳಿಯಬಹುದು**
**ಬಹಳ ಭಾಷೆ ಬಳಸಬಹುದು**
**ಸಹನೆಯೊಂದು ಅಬ್ಬ ಬಹಳ ಕಷ್ಟಕರವು; ವಿಶ್ವ**

**೪೯೩ ಮನಸಿನೊಳಗೆ ತಿಳಿಯೆ, ಮಾಯುವುದೆಂದೆಂದು,**
**ಸಹನೆ ಇರದ ಹೀನ ನರನ ಗಂಟು;**
**ತನಗೆ ಆಯ್ತು ಕಾಣು; ತಪ್ಪದೆಂದೆ ಇರಲಿ, ವಿಶ್ವ**

**೪೯೪ ಬಹಳ ಕಾವ್ಯಗಳ ಓದಿದೊಡೆ ಏನು?**
**ಬಹಳ ಶಬ್ದಗಳ ಬಳಸಲೇನು?**
**ಸಹನೆ ಸೇವಕರಿಗೆ ಬಹಳ ಕಷ್ಟಕರವು, ವಿಶ್ವ**

೪೯೫ ಎಷ್ಟೆ ಇರಲಿ ಸಹನೆ? ಇಷ್ಟು ಮಾತ್ರ ಕೆಡಲು,
ಶುಭ್ರ ಕೀರ್ತಿ ಕೂಡ ಶೂನ್ಯವಹುದು
ಗೆಯ್ದ ಪೂರ್ವ ಕೆಡುಕು ಗೇಲಿಯಾಡುತಿಹುದು, ವಿಶ್ವ

೪೯೬ ಗಂಗೆ ಹರಿಯುತಿಹುದು ಕದಲದ ತೆರದಲ್ಲಿ,
ರಾಡಿ ನಾಲೆ ನೀರಿಗುಂಟು ಶಬ್ದ;
ದಾನಿ ಸಹಿಸುವಂತೆ ಹೀನ ಸಹಿಸಲಾರ, ವಿಶ್ವ

೪೯೭ ಸಹನ ಶಕಿ ಎಷ್ಟಿರಲದು; ಕೊಂಚ ಕೆಡಲು,
ನಿನ್ನ ಶುಭ್ರ ಕೀರ್ತಿ ಕೂಡ ಶೂನ್ಯ
ಮುನ್ನ ಗೈದ ಕೆಡುಕು ಗೇಲಿಯಾಡುತಿಹುದು, ವಿಶ್ವ

●

## ಅನಸೂಯೆ

ಅಸೂಯೆ ಇಲ್ಲವೆ ಹೊಟ್ಟೆ ಕಿಚ್ಚು ಪರರ ಮೇಲ್ಮೆ ಕಂಡು ಕರುಬುವುದಾಗಿದೆ. ಹಾಗೆ ಕರುಬದಿರುವುದೇ ಅನಸೂಯೆಯಾಗಿದೆ.

ಈ ಹೊಟ್ಟೆ ಕಿಚ್ಚು ಬೆಂಕಿ ಹಚ್ಚಲು ಬಳಸುವ ಉರಿಯುವ ಕೋಲಿನಂತೆ. ಅದು ತನ್ನನ್ನು ಸುಟ್ಟಲ್ಲದೆ ಅನ್ಯವನ್ನು ಸುಡಲಾರದು. ತಾನು ಮಾಡಿದ ಪಾಪದ ಪೀಡೆಯಾಗಿ ಹೊಟ್ಟೆಕಿಚ್ಚು ಹುಟ್ಟುತ್ತದೆ. ಅದು ರಾಜರನ್ನೂ ಬಿಡದು; ಅಷ್ಟೇಕೆ, ಯಮನ ಭಟರನ್ನೂ ಬಿಡದು. ಅನೇಕರು ಕುತ್ಸಿತತನ ಹೊಂದಿ ಭ್ರಮೆಗೆ ಸಿಲುಕುತ್ತಾರೆ. ಹಾಗಾಗಿ ಅವರು ಶಿಕ್ಷೆಗೊಳಗಾಗುತ್ತಾರೆ. ಕುತ್ಸಿತತನವನು ತೊರೆಯುವುದೇ ಲೇಸು.

ತನ್ನನ್ನು ತಾನೇ ಬಣ್ಣಿಸಿಕೊಳ್ಳುವುದು ಕುತ್ಸಿತತನ. ಇನ್ನು ಲೋಕನಿಂದೆಗೆ ತೊಡಗುವುದಂತೂ ಕೀಳುತನವೇ ಸರಿ. ಹೀಗೆ ಮಾಡಿ ಅಸೂಯೆ ಹುಟ್ಟಿ ಮಾನವನು ಹಾಳಾಗುತ್ತಾನೆ. ಮಂದಿಯನ್ನು ಕೆಡಿಸಬಯಸುವ ಅಸೂಯಾಪರನು ಮೊದಲು ತನ್ನನ್ನೇ ತಾನು ಕೆಡಿಸಿಕೊಳ್ಳುತ್ತಾನೆ. ಮನೆಯ ಸುಟ್ಟಲ್ಲದೆ ಕಿಚ್ಚು ನೆರೆಮನೆಯ ಸುಡದು.

ಎದುರಿಗಿರುವವರ ಬಗ್ಗೆ ಕಾಣದಂತೆ ತೆಪ್ಪಗಿದ್ದು, ಅವರು ಇಲ್ಲದಾಗ ಪಿಸುಮಾತಿಗಿಳಿಯುತ್ತಾರೆ. ಇಂಥ ಪೆದ್ದನಿಗೆ ಭಯವು ಬರುವುದೇಕೋ?

— — — — — — — — — — — — — — — — — — — — — —

೪೯೮ ಹೊಟ್ಟೆ ಕಿಚ್ಚು ಹುಟ್ಟಿ, ಪಾಪ ಕರ್ಮದ ಪೀಡೆ;
ಪ್ರಭುಗಳಿರಲಿ, ಯಮನ ಭಟರೆ ಇರಲಿ;
ಚೇಳು ಕಂಡ ಬಳಿಕ ಚಚ್ಚದೆ ಬಿಡುವರೇ? ವಿಶ್ವ

೪೯೯ ಗುಣ ಗಣಂಗಳಲಿ ಕುತ್ಸಿತತನ ಹೊಂದಿ,
ತಗಲಿ ಭ್ರಮೆಗೆ ಸಿಲುಕಿ, ದಂಡ ಧರನ
ಕರೆತರುವುದು ಮತ್ತೆ ಕಳೆಯದಿರಲಿರುವುದ ವಿಶ್ವ

೫೦೦ ಹೊಗಳಿಕೆ ಭುವಿಯೊಳಗವಶ್ಯ
ಜಗನಿಂದೆ, ಕುತ್ಸಿತವಿರಲು, ಕೋವಿದನಿರಲುಂ,
ಲಗುಬಗೆ ಹಾನಿಯು ಬಪ್ಪುದು;
ಜಗದಲಿ ಮತ್ಸರವೇ ತನ್ನ ಕೆಡಿಪುದು ವೇಮಾ

೫೦೧ ಪರರ ಕೆಡಿಸಲೆಂದು ಮನದಿ ಎಣಿಸುತಿಹರು,
ತಮಗೆ ಬರುವ ಕೇಡು ತಾವರಿಯದೆ;
ತಮ್ಮನೆ ಕೆಡಿಸುವುದು ದೈವವೊಂದಲ್ಲವೇ? ವಿಶ್ವ

೫೦೨ ಎದುರಿಗಿರುವವನನು ಎಂದಿಗೂ ಕಾಣರು
ನೆರೆಯವನ ಮರೆಯಲಿ ನುಡಿವರು ಪಿಸುಮಾತು
ಪೆದ್ದ ಮೂಳಗೇಕೆ, ಭಯವು ಬರುತಲಿಹುದು? ವಿಶ್ವ

●

## ಲೋಭ

ಇಲ್ಲದುದನ್ನು ಬಯಸುವದು ಆಸೆ. ಆದರೆ ಇದ್ದುದನ್ನು ಸಹ ಉಪಭೋಗಿಸದೆ ಕರುಬುವುದು ಲೋಭ. ಲೋಭಿಯು ತಾನೂ ಉಣ್ಣನು, ಇತರರಿಗೂ ಉಣಗೊಡನು. ಅವನು ಗೋದಲೆ ನಾಯಿಯಂತೆ.

ಲೋಭಿಯಲ್ಲಿ ಹಣವಿದೆಯೆಂದು ಅವನನ್ನು ಬೇಡ ಹೋದರೆ, ಬರುವ ಭಾಗ್ಯವೇನು. ಗೊಡ್ಡು ದನವನ್ನು ಹಿಂಡುವುದೂ, ಲೋಭಿಯನ್ನು ಕೇಳುವುದೂ ಒಂದೇ ರೀತಿ. ಲೋಭಿಯನ್ನು ಕೊಲ್ಲಲು ವಿಷ ನೀಡಬೇಕಿಲ್ಲ.ಹಣ ಕೇಳಿದರೆ ಸಾಕು, ಅವನು ಸತ್ತೇ ಹೋಗುತ್ತಾನೆ.

ತಾನೂ ಭೋಗಿಸದೆ, ತನ್ನ ಸುತರಿಗಾಗಿ ಹಣ ಶೇಖರಿಸುವ ಲೋಭಿಯನ್ನು ಹೊಲದಲ್ಲಿಯ ಬೆದರು ಬೊಂಬೆಗೆ ಹೋಲಿಸಬಹುದು. ಲೋಭದಿಂದ ತಾನೇ

ಅನ್ನ ಸೇವಿಸದೆ, ಹೊಟ್ಟು ಮುಕ್ಕಿ ಕಾಲ ತಳ್ಳುವ ಲೋಭಿಯು. ಇತರರಿಗೆ ಹೇಗೆ ಅನ್ನ ನೀಡುತ್ತಾನೆ?

ಈ ಬಾಳು ಕ್ಷಣ ಭಂಗುರ, ಇರುವಾಗ ಕೊಟ್ಟು ಪುಣ್ಯ ಸಂಪಾದಿಸದವನ ಬದುಕು ವ್ಯರ್ಥ. ಲೋಭಿಯ ಬಾಳನ್ನು ಜೇನು ನೊಣದ ಬಾಳಿಗೆ ಹೋಲಿಸಬಹುದು. ತಾನು ಶೇಖರಿಸಿಟ್ಟ ಮಧುವನ್ನು ಜೇನ್ನೊಣವು ಪರರ ಪಾಲಿಗಿತ್ತು ಸಾಯುತ್ತದೆ. ದಾನ ಕೊಡುವವನ ಬಳಿಯಿರುವ ಲೋಭಿಯು ದಾನಕ್ಕೆ ಅಡ್ಡಗಾಲು ಹಾಕುತ್ತಾನೆ. ಅವನು ಚಂದನದ ಗಿಡದಲ್ಲಿಯ ಸರ್ಪದಂತೆ.

**೫೦೩ ಗೊಡ್ಡು ಹಸು ಹಿಂಡಲು ಗಡಿಗೆ ದೂರ ಬಿದ್ದು,**
**ಹಲ್ಲು ಮುರಿವ ಒದೆತ; ಹಾಲು ಇಲ್ಲ**
**ಲೋಭಿ ನರನ ಕೇಳೆ, ಲಾಭವೇನು ಇಲ್ಲ ವಿಶ್ವ**

**೫೦೪ ಕಡುಲೋಭಿಯ ಹಣಕೆ, ಆಶೆಪಟ್ಟುಕೊಂಡು,**
**ಬಡವ ತಿರುಗಾಟದಿ, ಸುಖವರಸುವ**
**ಟಗರಿನ ಹಿಂದೆ ನರಿ, ತಗಲಿಕೊಂಡ ರೀತಿ ವಿಶ್ವ**

**೫೦೫ ತೆಗೆದು ಮುಡಿಯಲಿಲ್ಲ, ತೊಟ್ಟು ಉಣಲು ಇಲ್ಲ**
**ಬೋಧಿಯಲ್ಲ; ವಿದ್ಯೆ ಶೋಧಕಲ್ಲ**
**ಕೂಡಿ ಹೋಗದವನು ನಡೆವ ಕಳೇವರವು ವಿಶ್ವ**

**೫೦೬ ತಾನು ಉಣ್ಣಲಾರ; ಸಂಪದಕಾಪ್ತರನು**
**ಸೇರಿಸಿಕೊಳದಿಹನು, ಕೀಳು ಪಶುವು**
**ಬೆಳೆದ ಭೂಮಿಯಲ್ಲಿ, ಬೆದರು ನಿಂತ ರೀತಿ ವಿಶ್ವ**

**೫೦೭ ತಾನು ತಿನದೆ, ತಕ್ಕ ಧರ್ಮವನು ಮಾಡದೆ,**
**ಸುತರಿಗೆಂದು ಧನವ ಸೇರಿಸಿಟ್ಟು,**
**ತಿಳಿಸಿ ಹೇಳದಿದ್ದು, ತೀರಿ ಹೋದ ಬಳಿಕ,**
**ಸೊತ್ತು ಪರರಿಗಾಯ್ತು; ಸತ್ಯ ವೇಮ**

**೫೦೮ ಲೋಭಿ ನರನ ಕೊಲಲು ಲೋಕದೊಳಗೆ ಮತ್ತೆ**
**ಬೇಡ ಮದ್ದು; ಬೇರೆ ವಿಧವು ಇಹುದು**
**ಹಣವ ಕೇಳೆ ಸಾಕು; ಹೊರಳಿ ಬಿದ್ದು ಸಾಯ್ವ, ವಿಶ್ವ**

೫೦೯ ನಾಯಿಯಾಕಳಲ್ಲ; ಮೊಲವು ಹುಲಿಯು ಅಲ್ಲ
ಸೊಳ್ಳೆಯಾನೆಯಲ್ಲ; ದೊಡ್ಡದಿರಲು
ಲೋಭಿ ದಾತನಲ್ಲ; ಲೋಕದೊಳಗೆ ಎಂದು, ವಿಶ್ವ

೫೧೦ ದಾನ ಜಗದಿ ಗೆಯ್ಯೆ ಧರೆಯಲಾಡದು ಕೈ
ಬಹಳ ಧನ ಸೇರಿಸಿ ಬಚ್ಚಿ ಇಟ್ಟು,
ತುದಿಗೆ ಹಾಳು ಅಷ್ಟೆ; ಮೊದಲು ಕೆಡುತಲಿಹನು, ವಿಶ್ವ

೫೧೧ ಇರುತ ತಾನೆ ಕೊಡದೆ, ಪರರು ಹೇಳಲು ಸಹ,
ಇಷ್ಟವಿರದೆ, ವಿಧಿ! ಎನುತ ಗೋಣಗುವ
ಹೊಟ್ಟು ಇಡುವ ಪಾತ್ರೆ ಹೂವನಿಡುವರೇನು? ವಿಶ್ವ

೫೧೨ ದಾನಿಯಲ್ಲದವಗೆ ದುಂಬಾಲು ಬೀಳಲು,
ದಾನಿಯಾಗುವನೇ ಧರೆಯೊಳವನು?
ದರ್ಭೆಯಹುದೆ ಗರಿಕೆ, ಅಬ್ಧಿಯೊಳಗದ್ದಲು? ವಿಶ್ವ

೫೧೩ ಇತ್ತೆವೆನುವರವ್ವ ಹೊತ್ತಳು ಮೈಲಿ ಸೀರೆ
ಹೊತ್ತನವರ ಅಪ್ಪ ಭತ್ತ-ಕೂಲಿ;
ಕತ್ತೆ-ಮಕ್ಕಳೆ ಮತ್ತೆ ಘನವತಿ ಘನವೇನು? ವಿಶ್ವ

೫೧೪ ಒಟ್ಟಿ ತಾನು ಕೊಡನು ಎಷ್ಟು ಹೇಳಿದರೂ,
ಕೊಟ್ಟು ಬಿಡದೆ ಭ್ರಮಿಸುತಿಹನೆಂದೊ;
ಹೊಟ್ಟು ತಿನ್ನುವ ಲೋಭಿ ಅನ್ನವಿಡುವನೆಂತು? ವಿಶ್ವ

೫೧೫ ಸಕಲ ವಿದ್ಯೆ ಗಳಿಸಿ, ಸಂತಸ ಪಡಬಹುದು;
ಕೈಯಿಂದ ಪುಡಿಗಾಸು ಕೊಡಲು ಆರ
ಮೆರೆವ; ಪರರಿಗಷ್ಟೆ ಅರುಹಬಹುದೆ ಹೊರತು,
ತಾನು ಆಚರಿಸನು, ತಿರೆಯಲಿ ವೇಮ

೫೧೬ ಸ್ನಾನ ಸಂಧ್ಯೆ ಜಪವು ತಪಾಹಾರ ನಿಷ್ಠೆ,
ಏನೆನಿತೊ ಬೋಧಿಸಲಾಚರಿಪ;
ದಾನವೀಯ ಕಾಸು ಪುಣ್ಯ ಫಲವಿರಲು ವಿಶ್ವ

೫೧೭ ಅರ್ಥವಂತನ ಸಿರಿ ಆಶಿಪಅರುರ್ಥಿಗಳು,
ಅರ್ಥಿಗೀಯದ ಸಿರಿ ವ್ಯರ್ಥ ಕಣಾ
ವ್ಯರ್ಥವಾದ ಸಿರಿಯು ವ್ಯರ್ಥರಿಗೆ ನೋಡು ವಿಶ್ವ

೫೧೮ ಮನೆಯ ಒಳಗೆ ಧನವ, 'ಇದುವೆ ನನ್ನ'ದೆಂದು,
ಮಣ್ಣಿನಲಿ ಮುಚ್ಚುವ ಮಂಕು ಜೀವಿ
ಕೊಂಡು ಹೋಗ ಹಿಂದೆ ಕುರುಡು ಕಾಸನೊಂದ, ವಿಶ್ವ

೫೧೯ ನರಹರಿಯೆನಬಹುದು; ನಾರಾಯಣನೆನಬಹುದು;
ಒಳ್ಳಿತೊಳ್ಳಿತೆಂದು ಮೆಚ್ಚಬಹುದು
ಬಿಡಿಯ ಕವಡಿ ತೆಗೆದು ಒಡನೆ ನೀಡರಲ್ಲ! ವಿಶ್ವ

೫೨೦ ಹರಿ ಹರಿಯೆನಬಹುದು, ಹರ ಹರಯೆನಬಹುದು;
ಮೇಲು ಇಹನ ನೋಡಿ ಮೆಚ್ಚಬಹುದು
ಸೆರಗು ಗಂಟು ಬಿಚ್ಚಿ ಸರ್ರನೆ ಕೊಡ ಬೇಡ; ವಿಶ್ವ

೫೨೧ ದಾನವೀಯಲಾರ; ಧರೆಯೊಳಿರುವ ತನಕ,
ಬಹಳ ಧನಗೂಡಿಸಿ, ಬಚ್ಚಿ ಇಡಲು,
ಕೊನೆಗೆ ದಂಡ ಕೊಟ್ಟು ಕೆಡುವ ನರನು ನೋಡು, ವಿಶ್ವ

೫೨೨ ಮನೆಯೊಳಗಿನ ಧನ ಠಣ ಠಣೆನಿಸುತಿಹುದು
ಮಣ್ಣಿನಲ್ಲಿ ಹುಗಿವ ಮಂಕು ಜೀವಿ;
ಕಾಯ ನಡೆಯೆ, ಹಿಂದೆ ಕವಡಿ ಕಾಸು ಬರದು, ವಿಶ್ವ

೫೨೩ ಧನವ ಕೂಡಿ ಹಾಕಿ, ಧರ್ಮವಾಚರಿಸದೆ,
ತಾನು ತಿನದೆ ಬಹಳ ಬಚ್ಚಿಡುವನು
ಜೇನು ಹುಳುವು ಕೂಡಿಸಿಟ್ಟು ಪರರಿಗೀಯದೆ? ವಿಶ್ವ

೫೨೪ ಕೊಟ್ಟು ಹೋಗದಂಥ ಖೊಟ್ಟಿ ನರರು ಜಗದಿ,
ಹುಟ್ಟಲೇನು ಮತ್ತೆ ಸತ್ತರೇನು?
ಹುಟ್ಟವೇನು ಹುತ್ತದಿ ಗೆದ್ದಲು? ಸಾಯವೆ? ವಿಶ್ವ

೫೨೫ ಧನವ ಕೂಡಿಸಿಟ್ಟು, ಧರ್ಮ ಗೆಯ್ಯದಿರಲು,
ಭೋಗ ಹೊಂದ; ತಾನು ಬಚ್ಚಿ ಇಡುವ
ಜೇನು ಕೂಡಿಸಿಟ್ಟು ಜನಕೀವ ನೊಣ ತೆರ ವಿಶ್ವ

೫೨೬ ಕಡು ಲೋಭಿಯಾದವ ಕನಕವನು ಆಶಿಸಿ,
ಬಡವನಾಗಿ ತಿರುಗಿ ಪರಿಣಮಿಸುವ;
ತಗರು ಹಿಂದೆ ನರಿಯು ತಗಲಿಕೊಂಡ ಚೆಂದ ವಿಶ್ವ

೫೨೭ ಇಟ್ಟು ಸಂದುವಾತ ದಾನಶೀಲನಲ್ಲ
ಕೆಟ್ಟ ನುಡಿಯುವಾತ ಪುಟ್ಟ ಕೀಟ
ಗುಟ್ಟು ಗಳುಪುವಾತ ಒಟ್ಟು ಬೆಳಗಲಾರ ವಿಶ್ವ

೫೨೮ ಇರುವ ಕಾಲ ದಾನ ಈಯದಂಥ ಜನರು,
ಇದ್ದು ತಿನ್ನದಿಹರು ಇರುವ ತನಕ,
ಕನಕ ಕಾಣದೆಂದು ಕೆಟ್ಟು ಹೋಹರಯ್ಯ! ವಿಶ್ವ

೫೩೦ ದಾನವರಸಿ ಗೈವ ದಾತನಾಶ್ರಯದೊಳು,
ಕೊಂಕು ಮಾತನಾಡುವಂಥ ಮೂಢ;
ಚಂದನ ಗಿಡದೊಳು ಸರ್ಪವಿಪ್ಪ ರೀತಿ ವಿಶ್ವ

೫೩೧ ಕೊಡುವ ಒಡೆಯನೊಡನೆ ಕೊಡದ ಲೋಭಿಯಿರಲು,
ಬೈದು ಬೈದು ಬಿಡದಾಚೆ ತಳ್ಳುವ
ಮರದ ಹಣ್ಣು ಅಡಿಯ ಮುಳ್ಳು ಕೊಂಪೆಯಂತೆ ವಿಶ್ವ

೫೩೨ ಧನವ ನೋಡುವವರು ಧನವ ಮೆಚ್ಚುತಿಹರು
ಧನದ ಮೇಲೆ ಮೋಹ ಧರಿಸುವವರು;
ಧನವ ನೀಡುವವನ ದೊರೆಯೆಂದು ನೋಳ್ಪರು ವಿಶ್ವ

೫೩೩ ಮರಳಿ ಬರುವ ವೇಳೆ, ಮತ್ತೆ ಹೋಹ ವೇಳೆ,
ತೆಗೆದುಕೊಂಡು ಬಾರ; ತಾನು ಒಯ್ಯ;
ಧನವು ಹೋಹನೋ? ತಾನು ಹೋಹನೆಲ್ಲೋ? ವಿಶ್ವ

೫೩೪ ತಾವೆ ಹಡೆದ ಸುತರು, ತಮ್ಮನೆ ಹಡೆದವರು,
ಸಾವುದೆಲ್ಲ ತಮಗೆ ಸಾಕ್ಷಿಯಲ್ತೆ?
ಜೀವನವದು ತಮಗೆ ಬ್ರಹ್ಮಕಲ್ಪನೆಯೆ? ವಿಶ್ವ

೫೩೫ ತೆರಳಿ ಮರಳುವಾಗ, ಮರಳಿ ತೆರಳುವಾಗ,
ಹೊರಳಿ ಬಂದು ಹಣವ ಹೊತ್ತು ಒಯ್ಯ
ತಾನೆಲ್ಲಿ ಹೋಹನೋ? ಧನವೆಲ್ಲಿ ಹೋಹುದೊ? ವಿಶ್ವ

೫೩೬ ದೇಹವಾರ ಸೊತ್ತು ಪೋಷಿಸಲು ಹಲ ಬಾರಿ?
ಪ್ರಾಣವಾರ ಸೊತ್ತು ಭಕ್ತಿ ಗೆಯ್ಯೆ?
ಧನವು ಯಾರ ಸೊತ್ತು? ಧರ್ಮ ತನ್ನ ಸೊತ್ತು ವಿಶ್ವ

೫೩೭ ಇತ್ತು ಪೋಷಿಸದಿರೆ ಇಳೆಯ ಬಾಳು ವ್ಯರ್ಥ
ಪುಟ್ಟಲೇನು ಅವರು ಸತ್ತರೇನು?
ಹುತ್ತದಲಿ ಗೆದ್ದಲು ಹುಟ್ಟವೇ? ಸಾಯವೆ? ವಿಶ್ವ

೫೩೮ ಹಿಡಿಯೆ ಕೊಂಬೆಯಿಲ್ಲ; ಹಲಪಾಡು ಪಡುವರು
ಇಟ್ಟು ಹೋಗಲಿಲ್ಲ; ಅಟ್ಟುವವರು
ಮುಟ್ಟಿ ಶಿವನ ಪೂಜೆ ಮೊದಲೆ ಮಾಡರವರು ವಿಶ್ವ

೫೩೯ ಮೊದಲು ಆಸೆ ಬೆಳೆಸಿ, ತುದಿಗೆ ಇಲ್ಲವೆನಲು,
ಪರಮ ಲೋಭಿಯೇನು, ಪಾಪವದುವೆ?
ಬೆಂದ ಉಸಿರು ಸೋಂಕಿ, ಬಳಲಿ ನಾಶವಹರು ವಿಶ್ವ

೫೪೦ ಗಂಡನಾದ ಕಳ್ಳ ಕವಿ ಸೊತ್ತ ತಿರುಗಿಸದೆ,
ತುಂಬಿ ದೇಹ ಮದವು, ತಾನು ಕೊಬ್ಬಿ,
ಗಂಡು ನಾಯಿಯಂತೆ ಕಡೆಯುತ ತಿರುಗನೇ? ವಿಶ್ವ

೫೪೧ ದಾನಗಳನು ಮಾಡೆ, ಧರೆ ಕೈ ಮುಂದಾಗದು
ಬಹಳ ಧನಗೂಡಿಸಿ, ಬಿಟ್ಟು ಹೋಹ
ತುದಿಗೆ ದಂಡವೀವ; ಮೊದಲು ಕೆಡುಕ ನರನು ವಿಶ್ವ

— — — — — — — — — — — — — — — — — — — — — —

೫೪೨ **ಗ್ರಾಮವು, ಭೂಮಿಯು, ಗಿಡ ಮರ**
**ಪ್ರೇಮವು ದಯೆಗಳಿನಿತಿರದ, ಭೀಕರ ಮತಿಗಳ್**
**ಭಾಮೆಯ ಸುತರಿಂದಗಲದೆ,**
**ಮಮ್ಮಲ ಮರುಗುವುದು ಏಕೆ ಅಡವಿಲಿ ವೇಮಾ?**

●

## ಕೀಳು ನಡತೆ

ಮಾನವನು ಸಮಾಜ ಜೀವಿ. ಎಂಥ ವ್ಯಕ್ತಿಗಳೋ, ಅಂಥ ಸಮಾಜ ಕುಟುಂಬವು ಸಮಾಜದ ಘಟಕವಷ್ಟೇ. ಆದ್ದರಿಂದ ಮನೆಯಲ್ಲಿ ತಾಯಿ ತಂದೆಯಂದಿರಿಗೆ ವಿಧೇಯರಾಗಿರಬೇಕು. ತಾಯಿಗೆ, ತಂದೆಗೆ ಮತ್ತು ಅನ್ನ ನೀಡುವ ಪೋಷಕರಿಗೆ ಎದುರು ಹೋಗುವುದೆಂದರೆ ಪಾತಕವೇ ಸರಿ. ಅಲ್ಲಿ ಶೀಲದ ಪತನವಾಗುತ್ತದೆ. ಏಕೆಂದರೆ ಹಾಗೆ ಮಾಡುವುದು ಕೃತಘ್ನತನವಾಗುತ್ತದೆ.

ಹೀಗೆ ಯಾವುದು ಒಪ್ಪು? ಇನ್ನಾವುದು ತಪ್ಪು? ಎಂಬ ವಿವೇಕ ವಿರಬೇಕು. ಹಾಗೆ ಮಾಡದೆ, ಯಾವುದೋ ಪ್ರಸಂಗದಲ್ಲಿ ಸಿಲುಕಿದ ಕರ್ಮ ಜೀವಿಯನ್ನು, ಸುಳ್ಳು ಬೋಧೆಯಿಂದ ಶೋಷಿಸಿ ಕೊಬ್ಬುವವನ ಮನಸ್ಸು ಎಂಥ ಕೀಳು ಮನವಲ್ಲವೇ? ಅಂಥವರ ಮಾತು ಬರಿ ಸುಳ್ಳು; ಕೃತಿಯು ಬರೀ ಮೋಸ. ಅವನು ಬೀದಿಯ ನಾಯಿಯಂತೆ ಕೇವಲ ಪರರ ಸೊತ್ತಿಗಾಗಿ ಅಲೆಯುತ್ತಾನೆ. ಇಂಥ ಕಪಟ ಜೀವಿಗೆ ಧನ್ಯತೆ ಪ್ರಾಪ್ತವಾಗದು.

ಇವರು ಇಷ್ಟಕ್ಕೆ ನಿಲ್ಲುವುದಿಲ್ಲ. ವ್ಯಾಪಾರಿಯಾಗಿದ್ದರೆ, ಧಾರಣಿ ಹೆಚ್ಚಿಸಲು ಅನುಕೂಲವಾಗುವಂತೆ ಕ್ಷಾಮ ಬೀಳಲೆಂದು ಕೋರಲು ಸಹ ಹಿಂಜರಿಯರು. ಇಂಥವರು ಎಷ್ಟು ಓದಿದರೇನು? ಎಲ್ಲವೂ ವ್ಯರ್ಥ. ಆದ್ದರಿಂದ ಮಾನವಾ! ಯೋಗ್ಯ ಮಾರ್ಗ ಹಿಡಿದು ಬಾಳು. ಒಣ ಠೀವಿಗೆ ಮರುಳಾಗಬೇಡ.

೫೪೩ **ತಾಯಿಗೆದುರಿಪ್ಪುದು, ತಂದೆಗೆದುರಿಪ್ಪುದು**
**ಅನ್ನಕೆದುರಿಪ್ಪುದು ತಿಳಿಯೆ ಮೂರು,**
**ಪಾತಕಗಳನರಿತು ವರ್ತಿಸಬೇಕಯ್ಯ,** ವಿಶ್ವ

೫೪೪ **ಒಪ್ಪು ತಪ್ಪರಿಯದ ವ್ಯರ್ಥ ಮೂಢ ಜನರು,**
**ಇಳೆಯ ಜನರನೆಲ್ಲ ಒಳಿತೆನುವರು,**
**ಚಿಗರೆ ಜೊತೆಗೆ ನಾಯಿ ಮೆರೆವ ಹಾಗೆ ನೋಡು,** ವಿಶ್ವ

---

೫೪೫ ಕಾಲ ವಶದಿ ಸಿಕ್ಕು ಕರ್ಮ ಜೀವಿಯ ಹಿಂದೆ,
ಮತ್ತನಾಗುತಿಹನು; ಮದ ಮತ್ಸರದಿ,
ಮತ್ತರಾದ ಜನರ ಮನವು ಎಂಥ ಮನವು? ವಿಶ್ವ

೫೪೬ ಶೀಲವೆನುತ ನರನು, ನಾಚುಗೆಯೇ ಇರದೆ,
ಪರರ ಸೊತ್ತನೆಲ್ಲ ಅಪಹರಿಸುವ
ವೇಷ ಭಾಷೆಯಿಂದ ಮೋಸವ ಗೆಯ್ಯುವನು, ವಿಶ್ವ

೫೪೭ ಮೊದಲ ಕ್ರಿಯೆ ತಪ್ಪಿ ಮೋಸವನೆ ಮಾಡುತ,
ಹೊಟ್ಟೆಗಾಗಿ ಮನಸು ಹೊಂದಿಸಿಹನು,
ಬೀದಿ ನಾಯಿ ರೀತಿ ಬೆಳೆವ ಮನುಜನಷ್ಟೆ, ವಿಶ್ವ

೫೪೮ ಕಪಟವಾದ ಕಾರ್ಯ ಕಡೆ ತನಕ ನೋಡದೆ,
ತತ್ತ್ವವೆಂತು ತನಗೆ ತಗಲಬಹುದು?
ತಗಲಿಕೊಳದ ಹೊರತು ಧನ್ಯತೆ ಹೊಂದಲಾರ, ವಿಶ್ವ

೫೪೯ ಕೊಮಟಿ ಕೋರುತಿಪ್ಪ ಸತತ ಕ್ಷಾಮದಾಶೆ,
ವೈದ್ಯಗಂಟು ನಿತ್ಯ ವ್ಯಾಧಿಯಾಶೆ
ಊರ ಬಡವಗೊಂದೆ ಧನಿಕನ ಬಳಿ ಇರುವಾಸೆ ವಿಶ್ವ

೫೫೦ ಬದುಕುವ ಪಥವಿರದ ಬಡವನಾಗಿ ದೊಡ್ಡ
ಯೋಗಿವರನು ಎಂದು ಸಾಗಿ ಬರಲು,
ಭಂಡ ಜನರು ದೀರ್ಘ ದಂಡ ಹಾಕುತಿಹರು ವಿಶ್ವ

೫೫೧ ಎಷ್ಟೊ ಓದನೋದಿ ಎಷ್ಟು ಕೇಳಲೇನು?
ಹೀನನಿಹನ ಗುಣವು; ಹೋಗದಲ್ಲ!
ಹಾಲೆರೆಯಲಿದ್ದಲು, ಹೋಹುದೆ ಮಲಿನವು? ವಿಶ್ವ

೫೫೨ ಪುಟ್ಟನಿರಲು ಕೀಳು; ಪೊಡವಿ ಹುಳುವು ಕೀಳು;
ವ್ಯರ್ಥ ಆಸೆ ಕೀಳು, ವರಟು ಕೀಳು;
ಗಿಡ್ಡ ಕಾಲು ಕೈಗಳು ಘಟಿಸಲಾಗ ಕೀಳು ವಿಶ್ವ

೫೫೩ ಮತ್ತ ಚಿತ್ತದವನು ಮರ್ಮವರಿಯದನಕ,
ಚಿತ್ತ ಚಪಲ ಹೊಂದಿ, ಜಗದಿ ಕೆಡುವ
ಭಕ್ತಿಯಿಲ್ಲದವನು ಪರಮಾತ್ಮನನರಿಯ ವಿಶ್ವ

೫೫೪ ಶೀವಿ ಹೆಚ್ಚು ಹೊಂದಿ, ಶಬರು ಶಕ್ತನೆಂದು,
ಇಂಥದೇಕೆ? ಮುಕ್ತಿ ಇಷ್ಟವಿರಲು,
ಉಚಿತ ಮಾರ್ಗ ಹಿಡಿದು, ಉರ್ವಿಯಲಿ ಯತ್ನಿಸು ವಿಶ್ವ

೫೫೫ ಗುಣ ವಿಹೀನರಲ್ಲಿ ಗುಣವನೆಣಿಸಲೇಕೆ?
ಬುದ್ಧಿಯಿಲ್ಲದವನ ಪೂಜೆಯೇಕೆ?
ಮನಸು ಇಲ್ಲದವನ ಮಂತ್ರ ಮತ್ತೆ ಏಕೆ? ವಿಶ್ವ

೫೫೬ ಧರ್ಮಗಳಿಗೆ ಕೇಡು ತಿಳಿದ ಮನುಜ ತಾನು,
ದುಷ್ಟನಪ್ಪ; ಕೊನೆಗೆ ದಾರಿಗೆಟ್ಟು;
ಗುರು–ಪತ್ನಿಯ ಕಂಡು ಕೋರುವ ನೀಚನರಿ
ಮೊದಲೆ ಕೆಡನೆ? ಮುಪ್ಪು ಮೂಡಿ ವೇಮ

೫೫೭ ನೀತಿ ಹೀನರಿಂದ ನಾಣ್ಯ–ಕವಡಿ ಎತ್ತೆ,
ಹಿಂದೆ ತಿರುಗುವವನು ಹುಚ್ಚನಷ್ಟೇ
ಬೆಕ್ಕು ಹಿಡಿದ ಕೋಳಿ ಬರುವುದೇ ಕರೆಯಲು? ವಿಶ್ವ

೫೫೮ ಕರಡಿ ಚರ್ಮ ತಂದು, ಎಷ್ಟು ತೊಳೆದರೇನು?
ಇರುವ ಕಪ್ಪು ಹಿಂಗಿ ಬಿಳಿದು ಅಹುದೆ?
ಕೊರಡು ಮೂರ್ತಿ ಹೊಡೆಯೆ, ಗುಣವ ಹೊಂದಬಹುದೆ? ವಿಶ್ವ

●

## ಭಂಡ ಮಾತು

ಆಗು–ಹೋಗದ, ಕೆಲಸಕ್ಕೆ ಬಾರದ ಮಾತನ್ನು ಭಂಡ ಮಾತು ಎನ್ನುತ್ತಾರೆ. ಇಂಥ ಭಂಡ ಮಾತನ್ನು ಕಳ್ಳ, ಸುಳ್ಳರು ತಮ್ಮ ನೈಜ ಸ್ಥಿತಿಯನ್ನು ಮರೆಮಾಚಲೆಂದು ಬಳಸುವುದುಂಟು ಏನನ್ನಾದರೂ ಆಶಿಸಿ, ಭಂಡ ಮಾತನಾಡುವವನು, ಕಡಿಮೆಯಾಗಿರಬಹುದಷ್ಟೇ.

— — — — — — — — — — — — — — — — — — — — — —

ಮಾಟ–ಮದ್ದಿನ ಮೊರೆ ಹೋಗುವ ಹಲವರು ಸುಳ್ಳನ್ನೇ ಸತ್ಯವೆಂದು ಸಾಧಿಸುತ್ತಾರೆ. ಅಲ್ಪನು ಆಡಂಬರದ ಬುರುಡೆ ಬಿಚ್ಚುತ್ತಾನೆ. ಆದರೆ ಸಜ್ಜನನು ಹಾಗೆ ಮಾಡುವುದಿಲ್ಲ. ಕೀಳು ಲೋಹವಾದ ಕಂಚೇ ಉಚ್ಚ ಲೋಹವಾದ ಬಂಗಾರಕ್ಕಿಂತಲೂ ಹೆಚ್ಚು ಶಬ್ದಮಾಡಿದಂತೆ.

ವ್ಯರ್ಥ ಬೊಗಳೆಯಿಂದ ಭಂಡನು ಬಾಯಿ ಬಡಿಯಲು ಯತ್ನಿಸಬಹುದು. ಆದರೆ ಸಾಧು ಪುರುಷನು ಶಾಂತನಾಗಿಯೇ ಉಳಿಯುತ್ತಾನೆ. ನಾಯಿ ಕೂಗಿದರೆಷ್ಟು? ಕುದುರೆಗಾವ ಲೆಕ್ಕ?

೫೫೯ ಮಾತು ಎಲ್ಲ ಸುಳ್ಳು, ಮನಸು ಎಲ್ಲ ಕಳ್ಳ
ಇಂಥ ಪ್ರಾಣಿಗಿನ್ನು ಏಕೆ ಬದುಕು?
ಮಾತು ಸತ್ಯವಿರಲು, ಮತ್ತೆ ಶತಾಯುಷಿಯು ವಿಶ್ವ

೫೬೦ ಮಾತು ಕೆಟ್ಟ ಮೂಟೆ; ಮರ್ಮವೇ ಕರ್ಮವು
ಆಶೆ ಬದ್ಧ ಕೊನೆಗು ಅಪ್ಪಿ ಮುಪ್ಪು,
ಮತ್ತೆ ಭಾಷೆ ದೋಷ, ಮಾತು ಮಿದುವು ಅಷ್ಟೆ;
ಲೇಶವಾದರರಿಯಲಾರ ವೇಮ

೫೬೧ ಸುಳ್ಳು ಸತ್ಯ ಗೆಯ್ದು, ಶುಷ್ಕಭಾವ ಹೊಂದಿ,
ಬಯ್ದು ಬೊಗಳುತಿಹಗೆ ಭಕ್ತಿಯಿಲ್ಲ
ಮಾಟ–ಮಾಯದವನು ಮಹಿಮಾತ್ಮ ಸಮನೆ? ವಿಶ್ವ

೫೬೨ ಬೂಟಕವನು ಗೆಯ್ದು, ಸುಳ್ಳು ನುಡಿದುದೆ ಸಾಕು;
ಸುಳ್ಳು; ಸುಳ್ಳುಗಿಂತ ಚುಚ್ಚಿ ಹೋಗಿ,
ವ್ಯಾಘ್ರ ಕೈಲಿ ಸಿಕ್ಕು ಶೀಘ್ರ ಸತ್ತ ಬಂಟ ವಿಶ್ವ

೫೬೩ ಜ್ಞಾನಿಯೆಂದು ತಿಳಿದು, ಚಪಲಾತ್ಮರಾದರು
ತಿಳಿವು ಇಲ್ಲ; ತಮ್ಮ ತಿಳಿಯರಲ್ಲ!
ಕಷ್ಟವೆಂಬರಣ್ಯ ಭ್ರಷ್ಟನಾಗಿ ಹೋಗುವ ವಿಶ್ವ

೫೬೪ ಕಂಡ ಸುದ್ದಿ ಕೊಂಚ, ಕೇಳಿದ ಸುದ್ದಿ ಕೊಂಚ,
ವಿಚಿತ್ರ ಸುದ್ದಿ ಎಷ್ಟೊ ಕೇಳಿ ಹೇಳ್ವ
ತಾನು ಕಂಡಂತಹ ಡಾಂಭಿಕನು ಸಂತತ ವಿಶ್ವ

೫೬೫ ಅಲ್ಪನಾಡುತಿಪ್ಪ ಆಡಂಬರದ ನುಡಿ;
ಒಳ್ಳೆಯವನಾಡುವ ಮಧುರ ನುಡಿಯ
ಮೊಳಗುವುದೇ ಹೊನ್ನು, ಕಂಚು ಧ್ವನಿಸುವಂತೆ ವಿಶ್ವ

೫೬೬ ಢೋಂಗಿ ಮಾತನಾಡೆ ದೊರಕಬಹುದೆ ಮೋಕ್ಷ?
ಆಗು ಹೋಗದಂಥ ಕೂಗು ಹೊಲ್ಲ
ಸದ್ಗುರುವಿನ ಚಿಹ್ನೆಯಲ್ಲ, ದುರ್ಗುಣಿಯದು ವಿಶ್ವ

೫೬೭ ಬಾಯಿ ಬಡಿಯಲೊಬ್ಬ ಭಂಡ ಪಂಡಿತೆಂದು,
ಸಾಧು ಪಂಡಿತನಿರಲು ಶಾಂತನಿಹನು
ಬೊಗಳಲೇನು ನಾಯಿ? ಬೆದರದಲ್ಲ ಕುದುರೆ ವಿಶ್ವ

೫೬೮ ಧಾರ್ಮಿಕನಿಹ ಹೊರತು ಧರ್ಮ ಕಾಣನಯ್ಯ;
ದುಷ್ಟ ಜೀವಿಯೆಂತು ಕಾಣಬಲ್ಲ?
ನೀರಿಗಿಳಿಯದಾಳ ನಿಜವಾಗಿ ತಿಳಿಯದು ವಿಶ್ವ

●

## ನೀಚ ಕಾರ್ಯ ನಿಂದನೆ

ಸುಳ್ಳು ನುಡಿಯುತ್ತ, ಕೊಂಕು ಮನಸ್ಸನ್ನು ಹೊಂದಿದವನ ಬಾಳು ಏತಕ್ಕಾಗಿ? ಸತ್ಯಪರನಿದ್ದರೆ ಮಾತ್ರ ಅವನು ಪೂರ್ಣಾಯುಷಿಯಾಗಿರಲು ಯೋಗ್ಯನು.

ಮಾತು ಮಿತವಾಗಿರಬೇಕು. ನಿಜ ಮಹಾತ್ಮರೊಡನೆ ಮಾತ್ರ ನಿಜವನ್ನು ಆಡಬೇಕು. ಹಾಗೆ ಮಾಡದೆ, ಸಿಕ್ಕ ಸಿಕ್ಕವರೊಡನೆ, ತನ್ನ ಆಪ್ತರೊಡನೆ, ಪ್ರತಿಷ್ಠೆಗೋಸುಗ ಪರವನ್ನು ಕುರಿತು ಗಳಪಿದರೆ, ಕೇಡು ತಪ್ಪದು; ಮಹಿಮೆಗೆ ಹಾನಿಯುಂಟು.

ಉಡಾಫೆ ಮಾತುಗಳನ್ನು ಆಡುವುದಾದರೂ ಏತಕ್ಕೆ? ಬಾಯಿ ತುಂಬ ಮೃಷ್ಟಾನ್ನ ಕಬಳಿಸುವುದಕ್ಕಾಗಿ ತಾನೇ? ಅಂಥ ನಾಲಿಗೆ ರುಚಿಯವನಿಗೆ ಬುದ್ಧಿಯೂ ಬರದು; ಇರುವ ಮರ್ಯಾದೆಯೂ ಹಾಳು.

ಇನ್ನು ಜನರನ್ನು ಕೊಂದು, ಕೊಳ್ಳೆ ಹೊಡೆಯುವ ನೀಚನಿಗಂತೂ ಯಮನು ಬೆನ್ನು ಹತ್ತದೆ ಬಿಡನು. ಹಾದಿಯಲ್ಲಿ ಅಡ್ಡಗಟ್ಟಿ, ಜನರನ್ನು ದೋಚುತ್ತ ದೊಡ್ಡವನೆಂದು ಹೇಳಿದರೆ, ಅಂಥ ದೋಷ ಪೂರ್ಣ ಕಾರ್ಯದ ಫಲ ಬೆನ್ನು ಬಿಡದು.

— — — — — — — — — — — — — — — — — — — — — —

ನೀಚ ಕೆಲಸ ಮಾಡುವ ಜೊತೆಗೆ, ಮದ್ಯ ಸೇವಿಸಿ ಮಾನಗೇಡಿಯಾಗಿ ತಿರುಗುತ್ತ, ಎಲ್ಲವನ್ನೂ ಕಳೆದುಕೊಂಡು, ಉಡುವ ಬಟ್ಟೆಗೂ ಕೊರತೆಯಾಗುತ್ತದೆ. ಹೀಗೆ ಕುಡುಕನು ಭಂಡನಾಗಿ ನೀಚನೆನಿಸುತ್ತಾನೆ.

೫೬೯ **ಮಾತು ಎಲ್ಲ ಸುಳ್ಳು ಮನಸು ಮತ್ತೆ ಡೊಂಕು,**
**ಇಂತಿಪ್ಪ ಪ್ರಾಣಿಗೇಕೆ ಬದುಕು?**
**ಮಾತು ಸತ್ಯವಿರಲು ಮತ್ತೆ ಶತಾಯುಷಿಯು** ವಿಶ್ವ

೫೭೦ **ಅಧಿಕ ಜನರ ಜೊತೆಗೆ, ಆಪ್ತ ಜನರ ಜೊತೆಗೆ,**
**ಪರದ ಗುರುತನರಿತು ಪೇಳುತಿರಲು,**
**ಬರುವುದು ಖೊಟ್ಟಿತನ; ಹೆಚ್ಚಿ ಗಾಂಭೀರ್ಯವು**
**ಮಹಿಮೆ ಹಾನಿಯುಂಟು, ಮಹಿಲಿ ವೇಮ**

೫೭೧ **ಉಡಾಫೆಯ ಬಾಯಿ ಉಬ್ಬಿಕೊಂಡು ಇಹುದು**
**ಅದನು ಇದನು ತಿನಲು ಮೊದಲು ಮಾಳ್ಪ**
**ಮರಳದಿನಿತು ಬುದ್ಧಿ; ಮರ್ಯಾದೆ ಹೋಹುದು** ವಿಶ್ವ

೫೭೨ **ಬಹಳ ಜನರ ಇರಿದು ಬಡವರನ್ನು ವಧಿಸಿ**
**ಸುಲಿದು, ಕೊಳ್ಳೆ ಹೊಡೆದು, ಹೊಟ್ಟೆ ಹೊರೆದು,**
**ಎತ್ತ ಕಡೆಗೆ ಹೋದರೇನು? ಯಮನು ಬಿಡನು** ವಿಶ್ವ

೫೭೩ **ದೊಡ್ಡವರೆಂದು ಹಾದಿಯೊಳು ಮುಳ್ಳು ಚೆಲ್ಲಿ,**
**ಅಡ್ಡವಿದ್ದು ಜನರ ಸುತ್ತುಗಟ್ಟಿ,**
**ದೋಚುತಿರುವ ಕೃತ್ಯ; ದೋಷ ಹೋಗುದೆಂತು?** ವಿಶ್ವ

೫೭೪ **ಮದ್ಯ ಕುಡಿದು ಮತ್ತೆ ದೊಡ್ಡ ಜನರ ಮಧ್ಯೆ,**
**ಬಟ್ಟೆ ಕಳಚಿ ತಿರುಗುವಂಥ ದುಷ್ಟ**
**ಎಲ್ಲ ಹೋದ ಮೇಲೆ, ಹರಕು ವಸ್ತ್ರ ಹೊದೆವ** ವಿಶ್ವ

೫೭೫ **ಮದ್ಯವಸ್ತು ಬೇಡಿ ಭುಜಿಸಿ ನಿಲದೆ ಮತ್ತೆ**
**ನಿಂದ್ಯ ಕಾರ್ಯ ನಿರತನಾಗಿ ನಡೆಯೆ,**
**ಅಂಥ ನರನು ಪತಿತ, ಅಧಮ ನೀಚನೆನಿಪ** ವಿಶ್ವ

---

**೫೭೬ ಹಾದಿಗುಂಟ ಹೊಲಸು ನಿಂದೆ; ಬೇಡವೆನಲು,**
**ಮೊದಲು ಪತಿಯ ನಿಂದೆ; ಮುಸುಕು ಬೇರೆ**
**ಗಂಡು ಬೀರಿ ಗಂಡ ಕಾಸಿಗೆ ಪಂಥೇರು ವಿಶ್ವ**

**೫೭೭ ಪುರುಷನರಿಯೆ ಮರಣ, ಅರಸನರಿಯೆ ಕಠಿಣ,**
**ಸಕಲ ನಿಂದೆಗಳಿಗೆ, ಒಂದೆ ನೆಲೆಯು,**
**ಪರಪುರುಷ ಗಮನವು ಪ್ರತ್ಯಕ್ಷ ನರಕವು, ವಿಶ್ವ**

●

## ಉಪಕಾರ ಸ್ಮರಣೆ

ದೇವ ಕೊಡದ ಸೊಗಸು ತಾನು ಬಯಸಲೇಕೆ? ಎಂದು ತಿಳಿದು ಮನುಷ್ಯನು ತನಗೆ ಇದ್ದುದರಲ್ಲಿಯೇ ಹಂಚಿಕೊಂಡು ಉಪಕಾರಿಯಾಗಿ ಬಾಳಬೇಕು. ಆದರೆ, ತನಗೆ ಸಂಪದವಿರುವಾಗ ಗರ್ವ ಉದಿಸಿ, ದೀನರರನ್ನು ನಿರ್ಲಕ್ಷಿಸುವನು. ಹೀಗೆ ಮಾಡಿದರೆ ಅವನು ಪರವನ್ನು ಕಾಣುವ ಬಗೆ ಹೇಗೆ?

ಹೀಗೆ ತನಗೆ ಸಾಕಷ್ಟಿರುವಾಗ ದಾನ ಮಾಡಬೇಕು. ಹಾಗೆ ಮಾಡದೆ ದಿನ ನೂಕುತ್ತ ಸಾಗಿದರೆ, ಮುಂದೆ ತಾನು ಏನಾಗುವನೋ? ತನ್ನ ಬದಕು ಏನಾಗುವದುದೋ? ಯಾರು ಬಲ್ಲರು? ಹಲವರು ನೀಡುತ್ತಾರೆ. ಆದರೆ ನೂಕಿ ನೀಡುತ್ತಾನೆ ಆದರೂ ಅವನು ದಾತನೇ. ಅದೇ, ದೋಚುವವನು ಮಾತ್ರ ದ್ರೋಹಿಯೆ ಸರಿ. ನಿಮಗೊಂದು ನೆಲೆ ತೋರಿ, ಬಾಳಿಗೆ ಹಾದಿ ಮಾಡುವವನೇ ಪುಣ್ಯವಂತ. ಆದರೆ ನೆಲೆಗೆಡಿಸಿ, ಜೀವನವನು ಆಪತ್ತಿಗೀಡುಮಾಡುವವನು ನಾಯಿಯೇ ಸರಿ.

ಕೀಳು ಮನುಷ್ಯರು ಸತ್ಪಾತ್ರದಲ್ಲಿ ದಾನ ಮಾಡರು. ಹಸಿದವರಿಗೆ ತುತ್ತು ಅನ್ನ ನೀಡರು. ಸೂಳೇ ಮಕ್ಕಳ ಸೊತ್ತು ಸೂಳೆಯ ಪಾಲೇ ಸರಿ. ನಿಮ್ಮಲ್ಲಿರುವಾಗ ನೀಡಿ ಪುಣ್ಯ ಸಂಚಯಿಸಬೇಕು. ಹಾಗೆ ಮಾಡದಿದ್ದರೆ, ನಿಮಗೂ ಸಹ ತಿರಿಪೆಯೂ ಸಿಕ್ಕದಂತಾಗಬಹುದು.

ನಾಯಿಯಂಥ ಪ್ರಾಣಿಯೂ ಸಹ ತನಗೆ ಗೆಯ್ದ ಒಳಿತನ್ನು ಸ್ಮರಿಸಿ ಶ್ರದ್ಧೆಯಿಂದ ಇರುವುದು. ಆದರೆ ಮನುಷ್ಯನು ಹಾಗಲ್ಲ. ಇಂಥ ಖಳನ ಬಾಳು ಏತಕ್ಕೂ ಬೇಡ

**೫೭೮ ಇರುವುದರಲ್ಲಿ ಮನುಜ ಇರನು ಉಪಕಾರಿ**
**ಕಣ್ಣು ಕಾಣದಲ್ಲ ಗರ್ವದಲ್ಲಿ;**
**ದೀನರಾದವರನು ದಯನೀಯದಿ ಕಂಡು,**
**ಪರಮ ಕಾಣ; ಬಾವಿ ಬೀಳ್ವ ವೇಮ**

---

೫೭೯ ಉಳ್ಳ ಮನುಜ ತಾನು ಉಪಕಾರಿಯಿರದಿರೆ,
ಕಣ್ಣು ಕಾಣದೆ ಮದ ತುಂಬಿದ ಜಡ
ದೀನನಿರಲು ತನಗೆ ದಿಕ್ಕು ತೋರ್ಪರಾರು? ವಿಶ್ವ

೫೮೦ ದಾನ ಧರ್ಮ ಗೆಯ್ಯೆ, ದಿನವ ನೂಕಿ ನೂಕಿ,
ಕಾಲ ವ್ಯಯಿಸುತಿಹನು; ಕೀಳು ನರನು,
ತಾನು ಏನಾಗುವ? ತನ್ನ ಬದುಕದೇನೊ? ವಿಶ್ವ

೫೮೧ ನೂಕಿ ನೀಡುವವನು ನಿನ್ನನೆತ್ತುವ ದಾತ,
ದೋಚಿಕೊಳ್ಳುವವನು ದ್ರೋಹಿಯವನು,
ನೆಲೆಯ ತೋರುವವನು ನೆರೆ ಪುಣ್ಯವಂತನು
ನೆಲೆಯ ಕೆಡಿಸುವವನು ನಾಯಿ ವೇಮ

೫೮೨ ಹಸಿದು ಬಂದನೆಂದು ಪರದೇಶಿಯಿರುವಗೆ
ಹಿಡಿಯನ್ನ ಕೂಡ ಕೊಡುವುದಿಲ್ಲ
ಸೂಳೆಮಗನು ಮತ್ತೆ ಸೂಳೆಗೀಯುತಿಹನು ವಿಶ್ವ

೫೮೩ ಪರರಿಗುಪಕರಿಸಲು ಪರರ ಸೊತ್ತು ಪರಗೆ,
ಮರಳಿ ನೀಡಲಾಗ ಪರಮ ಪ್ರಾಪ್ತಿ
ಪರಮಕಿಂತ ಪಾವನವೆ ಆ ಸೊತ್ತು? ವಿಶ್ವ

೫೮೪ ಧನವ ನೀಡದಿರುವ ಕರ್ಮಜೀವಿಗಳಿಗೆ,
ತಿರಿಪೆ ಕೂಡ ಸಿಗದು; ದೀನ ಜನರೆ!
ತಿಳಿದು ಕಂಡು ಕೊಳಿರಿ ದೃಷ್ಟಾಂತವಿದು ನಿಮಗೆ ವಿಶ್ವ

೫೮೫ ಎಂಥ ಕ್ಷಾಮವಿರಲಿ, ಎಂಜಲಿಕ್ಕಬೇಡ;
ಪರರಿಗಿಕ್ಕು; ಧರ್ಮ–ಪರರ ನೋಡಿ;
ಭೂಮಿ ಮೇಲೆಂಜಲು ಪತ್ರೋಳಿ ತೆರ ಕೆಡುವ ವಿಶ್ವ

೫೮೬ ತನಗೆ ಮೇಲು ಗೆಯ್ಯೆ ತಾ ತಿಳಿಯಲು ಕಲಿತ,
ನಲುಮೆಯಿಂದರಿವುದು ನಾಯಿ ಜಗದಿ
ತನಗೆ ಗೆಯ್ದ ಮೇಲು, ತಾನು ತಿಳಿಯದಿರುವ,
ಮನುಜನೆಂಥ ಖಳನೊ, ಮಹಿಲಿ ವೇಮ?

೫೮೭ ಪರರಿಗುಪಕರಿಸಲು ಪಾಪ ಕ್ಷಯವಹುದು;
ಪರರಿಗುಪಕರಿಸಲು ನೆರವು ಆಯ್ತು
ಪರರಿಗುಪಕರಿಸಲು ಪರಲೋಕ ಸಾಧನ;
ಪರರಿಗುಪಕರಿಸಲು ಬಲವು ವೇಮ

●

## ಕೊಡುಗೆ

ಕೊಡುಗೆ ಅರ್ಥಾತ್ ದಾನಗಳಲ್ಲಿ ಅನ್ನದಾನವೇ ಮಿಗಿಲಾದುದು. ಹಸಿದು ಬಂದವನಿಗೆ ಹಿಡಿ ಅನ್ನ ನೀಡಿದರೆ, ಅವನು ಹರಸಿ ತಿನ್ನುತ್ತಾನೆ.

ದಾನವೀಯುವವರ ಪುಣ್ಯವು ಒರತೆಯ ನೀರಿನಂತೆ, ವರ್ಧಿಸುತ್ತಲೇ ಹೋಗುತ್ತದೆ. ತಾವೇ ತಿಳಿದು ನೀಡಿದರೆ, ತಮಗೆ ಬೇಕಾದಷ್ಟು ಉಳಿಯುತ್ತದೆ. ಬಂದು ಕೇಳಿದಾಗ ನೀಡಿದರೆ, ತಮಗೂ ಕೇಳಿದಷ್ಟು ದೊರೆಯುತ್ತದೆ. ಕೇಳಿದರೂ ಈಯದವನಿಗೆ ಏನೂ ಲಭಿಸದು.

ತನ್ನ ಆಸ್ತಿ ಎನ್ನದೆ, ಅಡ್ಡ ಮಾತಾಡದೆ, ಬಯ್ಯದೆ, ತಾನು ಕೊಡಬೇಕಾದುದನ್ನು ಕೊಟ್ಟುಬಿಡಬೇಕು.

ದಾನ ನೀಡಬೇಕಾದವನು ಕೈ ಎತ್ತಿದ್ದರೂ, ದಾನ ಕೇಳುವುದು ಮಾತ್ರ ಅಧಮ ಕಾರ್ಯವೇ ಸರಿ. ಮಾನವ ಸ್ವಾವಲಂಬಿಯಾಗಬೇಕು. ಕೈ ಚಾಚದೆ ಬದುಕಬೇಕು. ಕೇವಲ ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ಹೆರವರ ಕೊಡುಗೆಗಾಗಿ ಕೈ ಮುಂದೆ ಮಾಡಬೇಕು.

ಗಳಿಸಿ ಇಟ್ಟ ಧನವು ತಮ್ಮದಲ್ಲ; ತಾವು ಇನ್ನೋರ್ವನಿಗೆ ದಾನ ನೀಡಿ ಪಡೆದ ಪುಣ್ಯವೇ ತಮ್ಮದು. ತನ್ನ ಸಂಪದದಿಂದ ಪರರಿಗುಪಕರಿಸಿ ಬದುಕಬೇಕು. ಕರ್ಣನನ್ನು ಘನನೆಂದೇಕೆ ಬಣ್ಣಿಸುತ್ತಾರೆ? ಅವನ ದಾತೃ ಗುಣವೇ ಕರ್ಣನ ಮೇಲ್ಮೆ.

ದೊಡ್ಡವನೆಂದು ಗಡ್ಡ ಮೀಸೆ ಬೆಳೆಸಿದರೆ, ದೊಡ್ಡವನಾಗನು. ಅವರ ದಾನಶೀಲ ಗುಣದಿಂದ ಅವರವರ ದೊಡ್ಡಸ್ತಿಕೆ ನಿರ್ಣೀತವಾಗುತ್ತದಷ್ಟೇ. ಇನ್ನು ಅಪಕಾರ ಮಾಡದಿರಲು ದಾನ ನೀಡಿದಷ್ಟೇ ಪುಣ್ಯ ಸಂಚಯವಾಗುವದು. ಅನ್ಯರನ್ನು ಕೆಡಿಸದಿದ್ದರಂತೂ ಮದುವೆ ಮಾಡಿದಷ್ಟು ಪುಣ್ಯ ಬರುತ್ತದೆ.

ಸಾವು ಎಲ್ಲರಿಗೂ ಸುನಿಶ್ಚಿತ. ಆದರೆ ಕೊಡುಗೆ ನೀಡಿ, ಪುಣ್ಯ ಸಂಚಯಿಸಿದವನು, ನಾಲ್ಕು ಜನರ ಬಾಯಲ್ಲಿ ಸತ್ತೂ ಬದುಕುವವನೆನಿಸುತ್ತಾನೆ.

— — — — — — — — — — — — — — — — — — — — — —

೫೮೮ ಉಣ್ಣುವ 'ಬಾನ' ದೊಳು ಇನಿತು ದೈವಕಿಡಲು,
ಪುಣ್ಯ ಲೋಕಕವನು ಹೋಗುತಿಪ್ಪ
ಅನ್ನ ದಾನಕಿಂತಮಿನ್ನ ದಾನವಿಲ್ಲ ವಿಶ್ವ

೫೮೯ ಅನ್ನವಿಡುವುದಕಿಂತಮಿನ್ನ ದಾನವಿಲ್ಲ
ಏನು ಗೆಯ್ದೊಡೇನು ಎಣಿಕೆ ಇರದು
ಅನ್ನವೆಷ್ಟು ಜೀವ ಆಧಾರವಪ್ಪುದು? ವಿಶ್ವ

೫೯೦ ಹಸಿವು ಆಗಿ, ಬಂದಂತಹ ಪರದೇಶಿಗೆ
ಹಿಡಿಯಾದರು ಅನ್ನ ಕೊಡುವುದಿಲ್ಲ;
ಸೂಳೆ ಮಗನು ಮತ್ತೆ ಸೂಳೆಗೀಯುತಿಪ್ಪ ವಿಶ್ವ

೫೯೧ ದಾನದಲ್ಲಿ ಅನ್ನ ದಾನವತಿ ದೊಡ್ಡದು;
ಗಾನದಲ್ಲಿ ಸಾಮಗಾನ ಹೆಚ್ಚು
ಧ್ಯಾನದಲ್ಲಿ ಶಿವ ಧ್ಯಾನವೇ ಶ್ರೇಷ್ಠವು ವಿಶ್ವ

೫೯೨ ಅಖಿಲ ದಾನಕ್ಕಿಂತ ಅನ್ನದಾನ ಮೇಲು
ಹಡೆದವರಿಗಿಂತ ಹೆಚ್ಚು ಯಾರು?
ಎನ್ನ ಗುರುವಿಗಿಂತ ಯಾರು ಹೆಚ್ಚು ಅಲ್ಲ ವಿಶ್ವ

೫೯೩ ನೀಡುತ್ತಿರುವರ ಸಂಪದ
ಈಡಾಗದೆ? ಎಂದಾದರು ಕುಂಠಿತವಹುದೇ?
ನೋಡೊರತೆ ಜಲ ಹೊಡೆದಂತೆ,
ಕೂಡಿ ಸೇರುತಿಹುದು, ತೀರದ ವಿಧವದು ವೇಮಾ

೫೯೪ ತಾವೆ ಬಂದು ಕೊಡಲು ತಮಗೆ ಅದುವೆ ಉಂಟು
ಕೇಳಲೀಯೆ ತಮಗೆ ಕೇಳಿದಷ್ಟು
ಕೇಳಲೀಯದಾತಗೆಂದು ಇಲ್ಲವೇನು ವಿಶ್ವ

೫೯೫ ದಾನ ಧರ್ಮಗಳನು ತಾನು ಮಾಡಿ ಜನಿಸೆ,
ಕರ್ಮ ಗತಿಯಲಿ ಯಮ ಕಷ್ಟವೀಯ
ಕರ್ಮ ಧರ್ಮಗಳನು ಕಡೆಗಾಣಲು ಬ್ರಹ್ಮ ವಿಶ್ವ

೫೯೬ ತಾನು ಗೈದ ದಾನ ತನುಜೆಗೆ ಸಮ ಜಗದಿ
ತಂದೆ–ದಾನವೆಲ್ಲ ತನಗೆ ಸಮವು
ತಾಯಿ ಸಮವೆನಿಪುದು, ಹೆರವರಿತ್ತ ದಾನ ವಿಶ್ವ

೫೯೭ ತನ್ನ ಸೊತ್ತು ನೋಡಿ ದಾನವೀಯದಿರಲು,
ಅವನಿಯೊಳಲ್ಲ ಹಿರಿಯ, ಆವನಿರಲಿ;
ಅದರಿ ಬೆದರದ್ದು, ಅನ್ಯನಿಗೆ ಸೊತ್ತನು
ದಾನವೀಯುವವನು ದಾತ ವೇಮ

೫೯೮ ಅರಿತನ್ನಾರ್ಸ್ತಿಯೆನದೆ ಅಡ್ಡ ಮಾತಾಡದೆ,
ಬಯ್ಯದೆ, ಮನದೊಳಗೆ ಪರಿತಪಿಸದೆ,
ತನ್ನದಲ್ಲವೆಂದು ತಾ ಕೊಡುವುದನು ಕೊಡು ವಿಶ್ವ

೫೯೯ ದಾನ ಒಪ್ಪ ಗೆಯ್ಯೆ, ದಡವ ಸೇರಬಹುದು;
ಮನವ ನಂಬಿ ಇರಲು, ಮಾಯೆ ಮುಳುಗು
ಜ್ಞಾನ ಕಳೆಯ ನಂಬಿ, ಜಡಿಯೊ ವೈರಿಗಳನು ವಿಶ್ವ

೬೦೦ ದಾನ ಕೇಳುವವನು ಧರಣಿಯೊಳಗಧಮನು;
ದಾನ ಕೇಳದವನು ದೈವ ಸಮನು
ದಾನ ಕೊಡದಿರುವವ ಧನ್ಯನಲ್ಲ ನೋಡು ವಿಶ್ವ

೬೦೧ ಉಚಿತವಂತನಿರಲಿ; ಉದ್ಯೋಗ ಪರನಿರೆ
ಸಂಪದ ತನಗುಂಟು; ಸಮಯದಲ್ಲಿ
ಪರರಿಗುಪಕರಿಸುತ, ಪಾಲಿಸಲ್ಕೆ ಉಂಟು ವಿಶ್ವ

೬೦೨ ಕರ್ಣನೋರ್ವ ಘನನು ಎಂದು ಕರೆವುದೇಕೆ?
ದಾನಶೀಲ ಗುಣದಿ ಮುಕುಟ ಮಣಿಯು
ಮೇರು ಧನವು ಕರ್ಣ ದಾತನೆನಿಸೆ ಮೂಲ ವಿಶ್ವ

೬೦೩ ಸಿರಿಯ ನೀಡುವವನು ಸಮನೆನಿಸದ ದಾನಿ;
ದೋಚುವವ ಮತ್ತೆ ದ್ರೋಹಿಯೆನಿಪ
ಪ್ರಾಪ್ತಿ ತೋರುತಿಹನೆ ಪರಮ ಪೂಜ್ಯನಪ್ಪ ವಿಶ್ವ

೬೦೪ ಕೊಡುವವರು ಯಾರೋ? ಕೊಡದವರು ಯಾರೋ?
ಕೊಟ್ಟು ಕೊಡದ ಅಂಥ ದಿಟ್ಟರಾರೊ?
ಪಟ್ಟು ತಪ್ಪದಿದ್ದು ಭಾವಿಸಿ ನೋಡಿರೋ ವಿಶ್ವ

೬೦೫ ಗಡಸು; ಉದ್ದವಿರಲು, ಗಡ್ಡಮೀಸೆಯಿರಲು
ದಾತಗುಣಗಳಿರದೆ, ದಾತನೆಂತು?
ಎಮ್ಮೆ ದೊಡ್ಡದಿರಲು, ಆನೆಯ ಹೋಲುವುದೆ? ವಿಶ್ವ

೬೦೬ ಕೇಳದರ್ಥವೀವ, ತಾನೆ ಬ್ರಹ್ಮಜ್ಞಾನಿ;
ಕೇಳಲರ್ಥವೀವ ತಾನೆ ತ್ಯಾಗಿ;
ಕೇಳಲೀಯದಾತ ಇನ್ನು ಮಹಾ ಲೋಭಿ ವಿಶ್ವ

೬೦೭ ಏನೋ ಒಂದು ಸಾರೆ ಬೇಡಲರ್ಥಿಯಲ್ಲ;
ಸತತತ ನೀಡದಾತ ದಾತನಲ್ಲ
ದಾತ ಅರ್ಥಿಗಳಲಿ ತಾರತಮ್ಯವುಂಟು ವಿಶ್ವ

೬೦೮ ಕೊಡುಗೆಯಷ್ಟು ಫಲವು, ಕೊಡುವುದಪಕಾರ
ಗೆಯ್ಯದಿರಲು; ತಾನು ಕೆಡಿಸದಿರಲು,
ಮದುವೆ ಮಾಡಿದಷ್ಟು ಮಹಾ ಫಲವು ನೋಡು ವಿಶ್ವ

೬೦೯ ಸಕಲ ತನುಗಳೆತ್ತಿ, ಸಂಚರಿಸುವ ಜೀವಿ,
ಕನಕ ಬಲವು ತಗಲಿ ಕನವರಿಸುವ;
ಆತ್ಮ ತೇಜ ಗಟ್ಟಿ ಅಚ್ಚಿನಂತೆ ನೋಡು ವಿಶ್ವ

೬೧೦ ಸಾಯುವವರು ಯಾರು? ಸಾಯದವರು ಯಾರು?
ಸತ್ತು ಬದಕುತಿರುವ ಸುಜನರಾರು?
ಒಟ್ಟು ಪಾಶ ಕಳಚಿ ವಿವರಿಸಿ ನೋಡಿರೋ ವಿಶ್ವ

●●●

# ೪. ಧರ್ಮ ವರ್ಗ–ಯೋಗ

## ಆ–ಯೋಗಿ ಧರ್ಮ

**ಧರ್ಮಾರ್ಥ ಕಾಮ ಮೋಕ್ಷವ**
**ಉರ್ಮೆಯಲಿ ಮನದಿ ತಿಳಿದೊಡೆಯಾಮೋದಾ ಆ**
**ನಿರ್ಮಲ ಗತಿ ಕಾಣಬೇಕು**
**ಕರ್ಮಿಗಳಿಗಿರದು ಮುಕ್ತಿಯು, ಅಲ್ಲವೆ, ವೇಮಾ.**

●

## ಯಮ ಸಾಧನೆಗಳು

### (ಅ) ಸತ್ಯ

ಯೋಗ ಸಾಧನೆಯನ್ನು ಅಷ್ಟಾಂಗಗಳಲ್ಲಿ ವಿಭಜಿಸುತ್ತಾರೆ. ಇವುಗಳಲ್ಲಿ ಯಮನಿಯಮ ಸಾಧನೆಯೇ ಪ್ರಥಮ ಅಂಗ. ಯಮದಲ್ಲಿ ಪಂಚ ವಿಭಾಗಗಳು. ಅವುಗಳೆಂದರೆ, ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯ.

ಸತ್ಯವು ಎರಡು ವಿಧ. ಒಂದು ಋತ, ಇನ್ನೊಂದು ಸತ್ಯ. ಇರುವುದನ್ನು ಇದ್ದಂತೆ ಹೇಳುವುದು ಋತ. ಆದರೆ ಪರರ ಹಿತವಾಗುವಂತೆ ಯಾವುಯದಿದೆಯೋ ಅದು ಸತ್ಯವಾಗಿದೆ. ಭಾರತದ ಕತೆಯಲ್ಲಿ ಶ್ರೀಕೃಷ್ಣನು ಪಾಲಿಸಿದ ಸತ್ಯವು ಈ ಮಾದರಿಯದು.

ಋತವಾವುದು? ಅನೃತವಾವುದು? ಇದನ್ನು ಬಲ್ಲವರಾರು? ಕೇಳಿದಷ್ಟರಿಂದ ಹೇಳಹೋಗುವುದು ಸರಿಯಾಗದು. ಇರುವ ಸ್ಥಿತಿಗತಿಗಳನ್ನು ತಿಳಿದುಕೊಂಡು ಒಳಿತಾದುದನ್ನು ಕಂಡು ಹಿಡಿಯಬೇಕು. ಏಕೆಂದರೆ ಸತ್ಯವು ಒಪ್ಪವಾಗಿದ್ದರೆ, ಜ್ಞಾನವೂ ಸಹ ಒಪ್ಪವಾಗಿರುತ್ತದೆ. ನಮಗೆ ತಿಳಿದು ಬರುವುದಕ್ಕಿಂತಲೂ ಪರರ ಹಿತದ ಕಾರಣಗಳು ಬೇರೆಯಾಗಿರಬಹುದು. ಎಷ್ಟೋ ಬಾರಿ ನುಡಿಯೊಳಗಿನ ಪದವ ನುಡಿಯದಿರಬೇಕಾಗುತ್ತದೆ. ಮನವು ಮೌನವಾಗಬೇಕಾಗುತ್ತದೆ. ಮನಸ್ಸು ನಿಂತರೆ ಯೋಗ ಸಾಧಿಸುತ್ತದೆ.

ಹೀಗೆ ಸತ್ಯಕ್ಕೆ ಅಂಟಿಕೊಂಡು, ಸಾಹಸಕ್ಕಿಳಿಯಬೇಕು. ಭಕ್ತಿ ಹೊಂದಿ, ಧೀರ ಬಂಟನಾಗಬೇಕು. ಇದು ಯೋಗಿಗೆ ಸಾಧ್ಯ. ಕರ್ಮಜೀವಿ ಇಂಥ ಸತ್ಯ

ನಿಷ್ಠೆಯ ಸಾಹಸ ಕಾರ್ಯವನ್ನು ಕಾಣಲಾರನಲ್ಲ! ಮತ ಯಾವುದಿದ್ದರೇನು? ಯಾವ ಮಂತ್ರ ಪಠಿಸಿದರೇನು? ಸತ್ಯನಿಷ್ಠೆ ಇಲ್ಲದೆ ಜಾಡ್ಯವು ತೊಲಗದು. ಜಾಡ್ಯ ತೊಲಗದೆ ದ್ವಿಜನಾಗಲಾರನು.

೬೧೧ ಋತವನೃತವರಿಯಲು ಯಾರಿಗೇನು ಅಳವೆ?
ಸ್ಥಿತಿಯ ಗತಿಯ ತಿಳಿಯೆ ಸ್ಫುಟವಾಯ್ತು
ಕೇಳಿದಷ್ಟರಿಂದ ಹೇಳ ಹೋಗೆ ಸಲ್ಲ, ವಿಶ್ವ

೬೧೨ ನಿಜವ ಸುಳ್ಳನೆರಡು ನೀಲಕಂಠನರಿವ;
ನೀರಿನಾಳವರಿತು ನಿಜವ ಕಾಣು,
ತನಯ ಜನ್ಮ ತಾಯಿ ತಾನೆ ಅರಿಯುತಿಹಳು, ವಿಶ್ವ

೬೧೩ ಸತ್ಯ ಒಪ್ಪವಿರಲು, ಜ್ಞಾನ ಒಪ್ಪ ಉಂಟು;
ಜ್ಞಾನ ಒಪ್ಪವಿರಲು ಸತ್ಯವುಂಟು
ಜ್ಞಾನ ಸತ್ಯಗಳನು ಸಮನಿರಿಸೆ ದ್ವಿಜನು, ವಿಶ್ವ

೬೧೪ ನಿಜವ ಕ್ರಮದಿ ಅರಿತು ನಿತ್ಯನಾಗಬೇಕು
ಮಾತಿನೊಳಗೆ ಮಾತಿ–ಗಾತುಕೊಂಡು;
ನುಡಿಯ ಕೇಳುವವರೆ, ನಿರುಕಿಸಿ ನೋಡಿರೋ, ವಿಶ್ವ

೬೧೫ ನಿಜವನರಿತು ಏಕೆ ನಿತ್ಯನಾಗಲಿಲ್ಲ?
ನುಡಿಯೊಳಗಿನ ಪದವ ನುಡಿದು ನುಡಿದು,
ಮನಸು ನಿಲಿಸಿದೊಡನೆ ಮತ್ತೆ ಯೋಗಿಯಹುದು, ವಿಶ್ವ

೬೧೬ ಸತ್ಯವನ್ನು ಬಿಡದೆ ಸಾಹಸವನು ತೋರಿ,
ಬಂಟ ಪಂಥ ಧರಿಸು ಭಕ್ತಿಯಿಂದ,
ಕರ್ಮ ಜೀವಿ ತಾನು ಕಾಣಲಾರನಲ್ಲ, ವಿಶ್ವ

೬೧೭ ನಿಜವನರಿತು ಏಕೆ ನಿತ್ಯವನಾಗಲಾರ?
ನುಡಿಯೊಳಗಿನ ಬಿಂದು ನಿಲಿಸಿ ಭದ್ರ
ಹರ್ಷವಿಪ್ಪ ಬಿಂದು ಬೀಜ ಊರಿದಂತೆ, ವಿಶ್ವ

೬೧೮ ನಿಜವನಾಡುವವನು ನಿರ್ಮಲನಾಗಿಹನು
ನಿಜವನಾಡುವವನು ನೀತಿ ಪರನು;
ನಿಜವನಾಡದವನು ನೀಚ ಚಂಡಾಲನು, ವಿಶ್ವ

೬೧೯ ನಿಜವನೆ ನುಡಿಯುವ ಜನರಿಗೆ
ವಿಜಯವಿಹುದೆಂದಿಗೂ; ಅವರ ವಿಭವವ ನೋಡಲ್
ಕುಜನಾಳಿ ಸಹಿಸೆ ಶಕ್ಯವೆ?
ಸುಜನರು ಮನದೆಣಿಸೆ ತರವೆ? ಸರಳವು ವೇಮಾ

೬೨೦ ಸುಳ್ಳು ಸತ್ಯವೆರಡು ನೀಲಕಂಠನರಿವ;
ಜಲ ಬಲ್ಲದು ನಿಜದಿ ಹಳ್ಳದಿರವ
ಜನನಿ ತಾನರಿವಳು ನಿಜ ತನಯ ಜನನವ, ವಿಶ್ವ

೬೨೧ ತಿಳಿದು ಸುಳ್ಳು ನಿಜವ ದೆವ್ವ–ಗಾಳಿಗೆ ಹೇಸಿ,
ಮನೆಯ ಮೇಲಣಾಸೆ ಮಾಣನೇಕೆ?
ನೀರ ಮೇಲೆ ಗುಳ್ಳೆ ನಿಲದೆ ಹೋಗದಿಹುದೆ? ವಿಶ್ವ

೬೨೨ ಮತವೆಂತಿರಲೇನು? ಮಂತ್ರವಾವುದೇನು?
ಸತ್ಯವಿನಿತು ಇರದೆ, ಜಾಡ್ಯಬಿಡದು
ಸತ್ಯವನೇ ತಿಳಿಯೆ, ಜಗದಿ ದ್ವಿಜನಪ್ಪ, ವಿಶ್ವ

೬೨೩ ಎಷ್ಟೆ ಮತಗಳಿರಲಿ, ಯಾವ ಮಂತ್ರವಿರಲಿ;
ಸತ್ಯವಿನಿತು ಇರದೆ ಸರಿದ ಪಥದಿ,
ಸತ್ಯ ಹೊಂದಿ ಇರಲು ಜಗದಿ ದ್ವಿಜನಾಗುವ, ವಿಶ್ವ

●

## (ಆ) ಅಹಿಂಸೆ

ಯಮ ಸಾಧನೆಯಲ್ಲಿ ಅಹಿಂಸೆಯ ಸ್ಥಾನವು ಎರಡನೆಯದು. ಹಿಂಸೆಯನ್ನು ಮಾಡದಿರುವುದೇ ಅಹಿಂಸೆ. ದೈಹಿಕ ಹಿಂಸೆಯೂ ನಿಷಿದ್ಧ; ಮಾನಸಿಕ ಹಿಂಸೆಯೂ ನಿಷಿದ್ಧ. ಹಿಂಸೆ ಮಾಡದಿರುವುದೇ ಹಿರಿಯ ಧರ್ಮವೆಂದು ತಿಳಿಯದೆ, ಜನರು ಹಿಂಸೆಗಿಳಿಯುತ್ತಾರೆ. ಹಾಗೆ ನೋಡಿದರೆ, ಹಿಂಸೆ ಮಾಡಿ, ಪಶುಗಳನ್ನು ವಧಿಸಿ ಮಾಂಸ ಭಕ್ಷಣ ಮಾಡುವದಕ್ಕಿಂತ ಸತ್ತ ಪಶುವನ್ನು ತಿನ್ನುವ ಚಾಂಡಾಲನೇ ಲೇಸು.

ಅಗ್ನಿಹೋತ್ರ ಕರ್ಮ ಮಾಡುವ ಯಾಜ್ಞಿಕನು, ಸತಿಯನ್ನು ಕೋರುತ್ತಾನೆ. ಸುತರನ್ನೂ ಕೋರುತ್ತಾನೆ. ಮಾಂಸ ಮದ್ಯಗಳನ್ನು ಕೋರುತ್ತಾನೆ. ನಿತ್ಯದ ಕೂಳಿಗಾಗಿ ಪ್ರಾಣಿಗಳನ್ನು ಕೊಲ್ಲುತ್ತಾನೆ. ಯಜ್ಞ, ಬಲಿದಾನಕ್ಕಾಗಿ ಪ್ರಾಣಿಗಳ ಹಿಂಸೆ ಮಾಡುತ್ತಾನೆ. ಇಂಥ ಜೀವ ಹಿಂಸಕನಿಗೆ ಮೋಕ್ಷವೆಂತು ಪ್ರಾಪ್ತವಾದೀತು?

ಕೆಲವರು ಹಕ್ಕಿಗಳನ್ನು ಹಿಡಿದು ಅವುಗಳಿಗೆ ಕಾಳು–ಕಡಿ ಹಾಕಿ ಚೆನ್ನಾಗಿ ಬೇಯಿಸಿ ತಿನ್ನುತ್ತಾರೆ. ಇಂಥವರಿಗಿಂತ ಚಾಂಡಾಲರು ಬೇರೆ ಇರುವರೇ?

ಬಾಲವಿರುವ ಪ್ರಾಣಿಗಳ ಗೋಣು ಕೊಯ್ಯುತ್ತಾರೆ. ಆಡು–ಟಗರುಗಳಂಥ ಪಶುಗಳ ಗೋಣು ಮುರಿಯತ್ತಾರೆ. ಇತ್ತ ಮೀನು ಇತ್ಯಾದಿಗಳನ್ನು ಬೇಯಿಸಿ ತಿನ್ನುತ್ತಾರೆ. ಹೀಗೆ ಜೀವಿಯು ಜೀವಿಯನ್ನು ಕೊಂದು ತಿನ್ನುವುದು ಕ್ರೌರ್ಯವಲ್ಲವೇ?

ನಮಗೆ, ಧರ್ಮ ತಿಳಿಸುವುದೆಂದು ಸಾರುವ, ಮಹಾಭಾರತದಲ್ಲಿ ಹಿಂಸೆ ಗೆಯ್ಯುವುದನ್ನೇ ಮುಖ್ಯ ಧರ್ಮವೆಂದು ತಿಳಿಸುರುವುದಂತೂ ತುಂಬಾ ಶೋಚನೀಯ.

**೬೨೪ ಹಿಂಸೆ ಗೆಯ್ಯದಿಹುದೆ ಹಿರಿಯ ಪುಣ್ಯ ಧರ್ಮ**
**ಅನದೆ, ಹಿಂಸೆ ಗೆಯ್ವರವನಿ ಸುರರು;**
**ಸತ್ತ ಪಶುವ ತಿನುವ ಚಂಡಾಲನೇ ಮೇಲು, ವಿಶ್ವ**

**೬೨೫ ಕ್ಷಮಿಸುವಂಥ ಮನುಜ ಸಾಧುವಾಗಿ ಮೆರೆವ;**
**ಕ್ಷಮೆಗೆ ಸರಿಯೆನಿಪುದು ಕ್ಷಿತಿಯೊಳಿಹುದೆ?**
**ಮೇಲ್ಮೆಯೊಂದುಗೂಡೆ, ಮೇಲ್ಮೆ ಬರುವುದಾಗ, ವಿಶ್ವ**

**೬೨೬ ಜಿಹ್ವೆ ರುಚಿಯ ಕೋರಿ, ಜೀವಿಸಿರುವ ತನಕ,**
**ಸತಿಯ, ಪತಿಯ ಕೋರಿ, ಸುತರ, ಧನವ,**
**ಅಗ್ನಿಹೋತ್ರಿ ನೋಡು; ಅವನೆಲ್ಲ ಕೋರುವ, ವಿಶ್ವ**

**೬೨೭ ಸ್ಥಾವರಗಳ ಬಕ್ಷಿಸುವರು,**
**ಭಾವಿಸುವೊಡೆ, ಜಂಗಮಗಳು ಬಹುವಿಧ ರುಚಿಗಳ್**
**ಆ ವಿಧ ಸಕಲ ಪ್ರಾಣಿಗಳು**
**ತಾವೇ ತಮ್ಮನು ತಿನ್ನುತಿರುವವು ವೇಮ,**

೬೨೮ ಭೂರಿ ಪಶು ಮೇಕೆ ಮತ್ತಾ
ನೇರವಿಹ ಜಂತುಗಳ ಕೊಂದು ಸುಖಿಸಿ ತಿನಲಾ,
ಕ್ರೂರತೆ, ಸಂಕರ ಜಾತಿಯ
ಮಾರಣವೇ ಅಲ್ಲಿ ಇನ್ನು, ಮಹಿಯಲಿ, ವೇಮಾ

೬೨೯ ಜೀವಿ ಜೀವಿ ಕೊಂದು ಜೀವಿಗಾಗಿ ಇರಿಸಿ,
ಜೀವಿ ತಾನು ಬಲಿತು ಬೆಳಗುತಿರುವ;
ಜೀವ ಹಿಂಸಕರಿಗೆ ಸಿಕ್ಕುವುದೇ ಮೋಕ್ಷ? ವಿಶ್ವ

೬೩೦ ಹಕ್ಕಿ ಜಾತಿ ಹಿಡಿದು, ಹೆಚ್ಚು ಹಿಂಸೆ ಗೆಯ್ದು,
ಹೊಟ್ಟೆ ತುಂಬ ಕಾಳು ಹಾಕಿ ತುರುಕಿ,
ಅಟ್ಟು ತಿನ್ನುವವನು ಅವನಿ ಚಾಂಡಾಲನು, ವಿಶ್ವ

೬೩೧ ವೃಕ್ಷ ಹೊದರಿನೊಳಗೆ ವಾಸಿಪ ಕ್ಷುದ್ರ ಜೀವಿಯ
ಕಾರಣವಿರದೆ ಮುದದಿ ಕೊಲ್ಲುತಿಹುದು;
ಅಗ್ನಿಯಿರದ ಬೆಂಕಿ ಅದು ಎಂಥ ಚೋದ್ಯವು? ವಿಶ್ವ

೬೩೨ ಪಕ್ಷಿ ಹಿಂಡು ಹಿಡಿದು ಮಿಗಿಲು ಹಿಂಸೆ ಗೈದು,
ಗೂಡು ಮಾಡಿ ಅಲ್ಲಿ ಕೂಡಿ ಹಾಕಿ,
ಇರಿಸುವವಗೆ ವಂಚಿಸಿರ್ದ ದೋಷ ಬರದೇಕೆ? ವಿಶ್ವ

೬೩೩ ಹಕ್ಕಿ ಕುಲವ ಹಿಡಿದು ಹೆಚ್ಚು ಹಿಂಸೆ ಮಾಡಿ,
ಹೊಟ್ಟೆ ತುಂಬ ಗಟ್ಟಿ ಕೂಳು ತುಂಬಿ;
ಮೇಯಿಸಿ ತಿನುವವನೆ ಜಗದೊಳು ಚಂಡಾಲ, ವಿಶ್ವ

೬೩೪ ಬಲೆಯ ಹಾಕಿ, ದುಷ್ಟ ಪ್ರಾಣಿ ಮೃಗಗಳನ್ನು
ಹಿಡಿಯಬಹುದೆ ಹೊರತು, ಹಾಳು ಕರ್ಮ;
ಗುರು ಬೋಧೆಯು ಇರದೆ, ಕುದುರುವಿಕೆ ಹೊಂದದು, ವಿಶ್ವ

೬೩೫ ಬಾಲವಿರುವ ಪ್ರಾಣಿ ಪಿಡಿದು, ಕತ್ತು ಕೊಯ್ದು,
ಮೇಕೆ ಜೀವಿಗಳನು ಕತ್ತು ಮುರಿದು,
ಬಾಕಿ ಜೀವಿಯೆಲ್ಲ ಬೇಯಿಸಿ ತಿನ್ನುವರು, ವಿಶ್ವ

೬೩೬ ನರಿಯ ಬಾಯಿ ಮಾಂಸ ನದಿಯ ಮೀನಿಗಾಯ್ತು
ಮೂಳ, ಹಿಡಿತ ಬಿಟ್ಟು ಮಣಿದು ಕೆಡುವ,
ಹದ್ದು ಆಸೆ ಬಿಟ್ಟು ಹೋಯ್ತು ಮಾಂಸ ಎತ್ತಿ, ವಿಶ್ವ

೬೩೭ ಹಿಂಸೆ ಗೈಯ್ವದಿಹುದೆ ಮುಖ್ಯ ಧರ್ಮವಯ್ಯ;
ಪ್ರಾಣಿ ಕೊಂದು ತಿನ್ನುವವನಿಗಿಂತ,
ಸತ್ತ ಪಶುವ ತಿಂಬ ಚಂಡಾಲನೇ ಮೇಲು, ವಿಶ್ವ

೬೩೮ ಪಂಚಮ ವೇದವೆನೆ, ಭಾರತವೆ ಎನ್ನುತ
ಸ್ತುತಿಪರೇಕೆ ಜನ, ಮತಿಯ ತೊರೆದು;
ಹಿಂಸೆಯರಿತು ನೋಡೆ, ಇಷ್ಟವೆಂತೆನಿಪುದು? ವಿಶ್ವ

೬೩೯ ಮೇವು ಹುಲ್ಲು ತಿನುವ ಮೇಕೆ ಹೋತಿಗೆಲ್ಲ;
ದೊರೆಯದೆ ಹೋಗುವುದೆ 'ದೇಹ ಸಿದ್ಧಿ'?
ಪ್ರಜೆಗಳೆಲ್ಲ ಬರಿಯೆ ಪೆಚ್ಚಾಗಿ ಹೋದರು, ವಿಶ್ವ

೬೪೦ ನೊಸಲು ಭಕ್ತನಹುದು, ನಾಲಗೆ ತೋಳನದು;
ಚಿತ್ತ ಭೂತದಂತೆ ಚಲಿಸುವವನು,
ನೋಡಿದೆ ಶಿವನೆನೆ, ನಾಚುಗೆ ಎನಿಸದೆ? ವಿಶ್ವ

●

## (ಇ) ಅಸ್ತೇಯ

ಅಷ್ಟಾಂಗ ಯೋಗ ಸಾಧನೆಯಲ್ಲಿ ಯಮ–ನಿಯಮ ಸಾಧನೆಯನ್ನು ಪ್ರಾರಂಭಿಕ ಅಂಗವೆಂದು ಪರಿಗಣಿಸುತ್ತಾರೆ. ಯಮ ಸಾಧನೆಯು ಸಾಮಾಜಿಕ ವಿಧಿಯಾದರೆ ನಿಯಮ ಸಾಧನೆಯು ವೈಯಕ್ತಿಕ ವಿಧಿಯಾಗಿದೆ. ಯಮ ಸಾಧನೆಯು ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯೆಗಳನ್ನೊಳಗೊಂಡಿದೆ.

ಅಸ್ತೇಯವೆಂದರೆ ಕಳವು ಮಾಡದಿರುವುದು. ಅಂದರೆ ಬಾಹ್ಯಿಕವಾಗಿಯೂ ಕಳವು ಸಲ್ಲದು, ಮಾನಸಿಕವಾಗಿಯೂ ಕಳವು ಸಲ್ಲದು, ಏನನ್ನಾದರೂ ವಾಸ್ತವವಾಗಿ ಕದ್ದೊಯ್ಯುವ ಕಾರ್ಯಕ್ಕಿಂತ ಮುನ್ನ ಅದನ್ನು ಹೇಗೆ ಕದಿಯಬೇಕೆಂದು ಮನದಲ್ಲಿ ಯೋಜನೆಗೆ ತೊಡಗುತ್ತಾರಷ್ಟೇ.

— — — — — — — — — — — — — — — — — — — —

ದೇವನು ಕೊಟ್ಟದ್ದರಲ್ಲಿಯೇ ತೃಪ್ತಿ ಪಟ್ಟು ಇರಬೇಕು. ಹಕ್ಕಿಗಳು ಹೇಗೆ ಸಂತೋಷದಿಂದ ನಲಿದಾಡುತ್ತಿವೆ, ಹಾರಾಡುತ್ತಿವೆ, ಎನ್ನುವುದು ನಮಗೂ ನಿದರ್ಶನವಾಗದೇ? ಇದನ್ನು ಮರೆತು, ಮಾನವನು ಅಲ್ಪ ಸುಖಕ್ಕಾಗಿ ಪರಿತಪಿಸಿ, ಅನಂತ ಆನಂದಕ್ಕೆ ಎರವಾಗುತ್ತಾನೆ.

ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇನು? ಕಲ್ಲೊಳಗಿನ ಕಪ್ಪೆಗೂ ಅಲ್ಲಲ್ಲಿ ಆಹಾರ ಒದಗಿಸುವುದಿಲ್ಲವೇ? ಮನದ ಕೋರಿಕೆಗಳನ್ನು ತೃಪ್ತಿಪಡಿಸಲು, ಮಕ್ಕಳಿಗಾಗಿ ಧನ ಶೇಖರಿಸಿಡುವ ಸಂಗ್ರಾಹಕ ವೃತ್ತಿಯನ್ನು ತೊರೆಯದೆ ಮಾರ್ಗವಿಲ್ಲ.

**೬೪೧ ಖಗಗಳಿರವು ಚೆಂದ ಕಾಣಲಂದವಹುದು;**
**ಕಂಡು ಅರಿತೊಡನೆ ಗುರುತಾಗದೆ?**
**ದೇವ ಕೊಡದ ಸೊಗಸು ತಾನು ಬಯಸಲೇಕೆ?** ವಿಶ್ವ

**೬೪೨ ಅಲ್ಪ ಸುಖವನೆಲ್ಲ ಆಶಿಸುತ್ತ ಮನುಜ,**
**ಬಹಳ ದುಃಖದಿಂದ ಬಾಧೆ ಪಡುವ;**
**ಪರ ಸುಖವನ್ನು ಹೊಂದಿ ಬದುಕಲರಿಯನಲ್ಲ?** ವಿಶ್ವ

**೬೪೩ ಪರರ ಆಸ್ತಿಯಲ್ಲಿ ಭ್ರಾಂತಿ ಇಲ್ಲದಂಥ,**
**ಪುರುಷನವನಿಯಲ್ಲಿ ಪುಣ್ಯ ಮೂರ್ತಿ**
**ಪರರ ಆಸ್ತಿಯಾಸೆ ಪಾಪ ಚಿಂತೆಯಹುದು,** ವಿಶ್ವ

**೬೪೪ ಹೊಟ್ಟೆಗಾಗಿ ಮನವು ಹ್ರಾಸಗೊಳುವುದೇಕೆ?**
**ಹೊಟ್ಟೆ ಎಲ್ಲಿ ತೃಪ್ತಿ ಹೊಂದುತಿಹುದು?**
**ಹೊಟ್ಟೆಯುಂಟು ಕಲ್ಲು ಹೊದರೊಳಿಹ ಕಪ್ಪೆಗೂ** ವಿಶ್ವ

**೬೪೫ ಆಶೆಗಳನು ಕಡಿದು ಅಗ್ನಿಯನು ಆರಿಸಿ,**
**ಕಚ್ಚೆ ಬಿಗಿದು ಚಡ್ಡಿ, ಕೋಪ ತಗ್ಗಿ,**
**ಆಶೆ ತೊರೆದು ಇರುವ ಅವನೆ ಯೋಗಿ ಎನಿಪ,** ವಿಶ್ವ

**೬೪೬ ತಾನು ತಿನ್ನಲಿಲ್ಲ; ಧರ್ಮ ಮಾಡಲಿಲ್ಲ**
**ಸುತರಿಗಾಗಿ ಸೊತ್ತು ಶೇಖರಿಸುತ,**
**ತಿಳಿಸಿ ಹೇಳದಂತೆ ತೀರಿ ಹೋಹ ಮನುಜ,** ವಿಶ್ವ

---

**೬೪೭ ಶೇಖರಿಸಿದ ಧನಕೆ ಸತಿ ಸುತಾದಿಯೆಲ್ಲ,**
**ಆಶೆ ಪಡುವರಷ್ಟೆ, ಅದು ಭ್ರಮೆಯು**
**ಭಾಗ್ಯ ಹೀನನಿರಲು ಫಲವು ಲಭ್ಯವೆಂತು? ವಿಶ್ವ**

**೬೪೮ ರಾಜ ಪದವಿ ಕೋರಿ, ರಾಜ್ಯ ಭಾರದಲ್ಲಿ,**
**ಕೆಡುವನು ಇಹ ಪರದಿ ಕೆಚ್ಚು ಇರದೆ,**
**ನೀರ ಮೇಲೆ ಗುಂಡು ನಿಲ್ಲುವುದೆ ಮುಳುಗದೆ? ವಿಶ್ವ**

**೬೪೯ ಮನದಿ ಹುಟ್ಟುತಿಹವು ಮತ್ತೆ ಕೋರಿಕೆಗಳು;**
**ಕೋರಿಕೆಯಲಿ ಮುಕ್ತಿ ಕುದುರದಲ್ಲ!**
**ಮನವು ಬ್ರಹ್ಮವೆಂದು ಮನವ ತಿಳಿದುಕೊಳರು ವಿಶ್ವ**

●

## (ಈ) ಅಪರಿಗ್ರಹ

ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ? ಕಲ್ಲೊಳಗೆ ಹುಟ್ಟಿದ ಕಪ್ಪೆಗೆ ಅಲ್ಲಿ ಆಹಾರವನ್ನು ನೀಡುವವರಾರು?ಸಾಧಕನು ಈ ಗುಟ್ಟನ್ನು ಅರಿತು ತನಗೆ ಅಂದಂದಿಗೆ ಅಗತ್ಯವಾದಷ್ಟನ್ನೇ ಇರಿಸಿಕೊಂಡು, ಮಿಕ್ಕುಳಿದುದನ್ನು ಇಲ್ಲದವರೊಂದಿಗೆ ಹಂಚಿಕೊಂಡು ತಿನ್ನಬಹುದು. ಭೌತಿಕ ವಸ್ತುಗಳನ್ನು ಭೋಗಿಸುವಾಗ ಮಾಡುವ ಆಂತರಿಕ ನಿಯಂತ್ರಣಕ್ಕೆ ಬ್ರಹ್ಮ ಚರ್ಯೆ ಅನ್ನುತ್ತಾರೆ ಮತ್ತು ವಿಷಯಗಳ ನಿಯಂತ್ರಣಕ್ಕೆ ಅಪರಿಗ್ರಹ ಎನ್ನುತ್ತಾರೆ.

'ದೇಹ ರಕ್ಷಾತಿರಿಕ್ತ ಭೋಗ ಸಾಧನ ಸ್ವೀಕಾರೋ ಅಪರಿಗ್ರಹಂ' ಅಂದರೆ ಜೀವವನ್ನು ಹಿಡಿಯಲು ಬೇಕಾದುದಕ್ಕಿಂತ ಹೆಚ್ಚಾಗಿರುವ ಸುಖ–ಸೌಕರ್ಯಗಳನ್ನು ಭೋಗಿಸದಿರುವುದನ್ನು ಅಪರಿಗ್ರಹವೆನ್ನುತ್ತಾರೆ. ದೇವ ಕೊಡದ ಸೊಗಸನ್ನು ತಾನೇಕೆ ಬಯಸಬೇಕು?

ತನಗೆ ಅಗತ್ಯವಾದುದಕ್ಕಿಂತ ಹೆಚ್ಚು ಕೂಡಿ ಹಾಕುವ ಪ್ರವೃತ್ತಿ ಮಾನವನಿಗೇಕೋ ಕಾಣೆವು. ಬಚ್ಚಿಟ್ಟ ದ್ರವ್ಯವು ಪರರ ಪಾಲೇ ಆಗುತ್ತಿರುವ ನಿದರ್ಶನಗಳೆಷ್ಟಿಲ್ಲ? ಆದ್ದರಿಂದ ಅಪರಿಗ್ರಹ ವ್ರತಿಗಳಾಗಿ ಯೋಗಿ ಜೀವನ ಸಾಗಿಸಬೇಕು.

**೬೫೦ ಜಲಧಿ ಸ್ತಂಭವೊಂದು ನಿಲ್ಲುವಂತೆ ಮಾಡಿ,**
**ದುಂಡಗಾದ ಹುಲ್ಲು ಗುಡಿಸಲು ಹಾಕಿ,**
**ಹುಲ್ಲು ಗುಡಿಸಲು ಕೊಯ್ದು, ಪುಣ್ಯಾರ್ಚನೆ ಮಾಡು ವಿಶ್ವ**

— — — — — — — — — — — — — — — — — — — —

೬೫೧ ಖಗಗಳಿರವು ಚೆಂದ ಕಾಣಲಂದವಿಹುದು;
ಗುಂಪು ನೋಡಿದೊಡನೆ ಗುರುತಾಗದೆ;
ದೇವ ಕೊಡದ ಸೊಗಸು ತಾನು ಬಯಸಲೇಕೆ? ವಿಶ್ವ

೬೫೨ ಮರೆವೆವೆಂದು ತಿಳಿದು ಮನದಿ ಸುಜನರೆಲ್ಲ,
ಯಾರೊ ಗೆಯ್ದ ಮೇಲ್ಮೆ ಎಂಥದಿರಲಿ;
ಮರಳಿ ಮೇಲ್ಮೆ ಗೆಯ್ದು ಮರ್ಯಾದೆ ಕಾಣುವರು ವಿಶ್ವ

೬೫೩ ತೆರಳಿ ಮರಳುವಾಗ, ಮರಳಿ ತೆರಳುವಾಗ,
ಹೊರಳಿ ಬಂದು ಹಣವ ಹೊತ್ತು ಒಯ್ಯ
ತಾನೆಲ್ಲಿ ಹೋಹನೋ? ಧನವೆಲ್ಲಿ ಹೋಹುದೋ? ವಿಶ್ವ

೬೫೪ ಭಿಕ್ಷುಕಾದ ನರನು ಭಿಕ್ಷೆಯೆತ್ತಿದಂಥ,
ಭಿಕ್ಷೆಯಲ್ಲಿ ತಾನು ಭಿಕ್ಷೆ ಕೊಡಲು,
ಭಿಕ್ಷೆ ಭಿಕ್ಷೆಯೊಳಗೆ ಸೇರಿ ಹೋಗುತಿಹುದು ವಿಶ್ವ

೬೫೫ ಕಣ್ಣು ಇಲ್ಲದವನು ಕಾಲು ಇಲ್ಲದವನು,
ಉಭಯರು ಒಡಗೂಡಿ ಉಂಟು ಅಂತೆ;
ಬಡವ ಬಡವನೊಡನೆ ಬೆರೆತು ಇರುವ ನೋಡು ವಿಶ್ವ

೬೫೬ ಇದು ಎನಗೆ ಸಾಲದೆನುತಿರೆ,
ಕದಲದೆ ಮನದಲಿ ಸಕಲ ವಸ್ತುಗಳ ಭ್ರಮೆಯೊಳ್
ಮುದಿಸುತ ಬಿಡದಿರುತಿಪ್ಪೊಡೆ,
ಅದುವೇ ಸಂಸಾರ ಬೀಜವೆನುವರು ವೇಮಾ

೬೫೭ ಕನಕ, ಸುಖ ದುಃಖ ಸಕಲಕೆ ಕಾರಣಾಯ್ತು;
ಸಂಪದಗಳಿರಲು ಯಾರಿಗೆ ಶಾಶ್ವತವದು?
ತಿಳಿವು–ಸಂಪದವುಳ್ಳವನೆ ದೇವ ಸಮನು
ನಿತ್ಯವದು, ಹರ್ಷದಾಯಿನಿ, ನಿಜವು, ವೇಮಾ

**೬೫೮ ಅಲ್ಪಸುಖವನೆಲ್ಲ ಆಶಿಸುತ್ತ ಮನುಜ,**
**ಬಹಳ ದುಃಖದಿಂದ ಬಾಧೆ ಪಡುವ**
**ಪರ ಸುಖವನು ಹೊಂದಿ ಬದುಕಲರಿಯನಲ್ಲ! ವಿಶ್ವ**

●

## (ಉ) ಬ್ರಹ್ಮಚರ್ಯೆ

ಬ್ರಹ್ಮ+ಚರ್ಯೆ; ಅಂದರೆ 'ಬ್ರಹ್ಮಣಿ ವಿಚರಣಂ ಬ್ರಹ್ಮ ಚರ್ಯಂ' ಅರ್ಥಾತ್ ಸತತ ಬ್ರಹ್ಮ ವಿಚಾರದಲ್ಲಿರುವುದೇ ಬ್ರಹ್ಮಚರ್ಯೆಯಾಗಿದೆ. ಮಾನವನು ವ್ಯವಹರಿಸುವ ಪ್ರತಿಯೊಂದು ವಸ್ತುವಿಗೂ ಬ್ರಹ್ಮಭಾವವನ್ನು ಆರೋಪಿಸುವುದೇ ಬ್ರಹ್ಮಚರ್ಯೆ. ಇಂಥ ಗ್ರಹಿಕೆಯಿಂದ ಮನವು ಎಲ್ಲಿಯೇ ಇರಲಿ, ಬ್ರಹ್ಮಭಾವ ತಾಳಿರುತ್ತದೆ. ಸರ್ವಂ ಬ್ರಹ್ಮಮಯಂ ಜಗತ್.

'ಸಂಕಟ ಬಂದಾಗ ವೆಂಕಟರಮಣ' ಎಂದು ದೇವರನ್ನು ನೆನೆಯುವುದು ಬೇರೆ. ಆದರೆ ಪರಮಾತ್ಮನಿಗೆ ಆನಂದದ ಕೊಡುಗೆಯಿಂದ ಆನಂದ ಸಂವರ್ಧನೆ ಮಾಡುವುದು, ಇನ್ನೊಂದು ರೀತಿ. ಕಾಸು ಇಲ್ಲದಾಗ, ಕಾಮತೃಪ್ತಿಗೆ ಅನುಕೂಲವಿರದು. ಆಗ ಬ್ರಹ್ಮಚಾರಿ ಆಗಿದ್ದರೇನು ಫಲ?

ಒಳ್ಳೆ ಬುದ್ಧಿ ಕುದುರದೆ, ಕೇವಲ ಕಚ್ಚೆಗಳನ್ನು ಬಿಗಿಯಾಗಿ ಕಟ್ಟಿದರೆ ಫಲವೇನು? ಕರ್ಮೇಂದ್ರಿಯಗಳನ್ನು ಅದುಮಿ ಜ್ಞಾನೇಂದ್ರಿಯ ಹರಿಬಿಟ್ಟರೆ, ಅವನು ಮಿಥ್ಯಾಚಾರಿಯಾಗುವನು. ಅಲ್ಲಿ ಇಲ್ಲಿ ಮನ ಹರಿಸಿ ಮಹಿಯ ಜನರು ಬ್ರಹ್ಮವನ್ನೇ ಅರಿಯರು. ತನ್ನೊಳಗೆ ಬ್ರಹ್ಮವನ್ನು ಕಂಡು ಹರ್ಷಪಡಬೇಕು.

ಕೇವಲ ಕೂಳಿಗಾಗಿ ಅಲೆದಾಟ ಸಲ್ಲದು, ಹೊಟ್ಟೆಗಾಗಿ ಹೆಚ್ಚು ಹ್ರಾಸಗೊಳ್ಳುವುದೇಕೆ? ಹೊಟ್ಟೆ ತೃಪ್ತಿ ಎಲ್ಲಿದೆ? ತನ್ನ ಮನದಲ್ಲಿ ತಾನೇ? ಕಲ್ಲೊಳಗಿರುವ ಕಪ್ಪೆಗೂ ಹೊಟ್ಟೆಯುಂಟು. ಅದು ಹೇಗೆ ತೃಪ್ತಿ ಹೊಂದುತ್ತದೆಯೆಂಬುದನ್ನು ತಿಳಿದು ಮನಗಾಣಬೇಕು.

ಹೀಗೆ ತನ್ನ ದೇಹದ ಅಗತ್ಯಗಳ ಭಾರವನ್ನು ಶಿವನ ಮೇಲೆ ಹೇರಿ, ಸದಾ ಧ್ಯಾನದಲ್ಲಿ ನಿರತನಾದರೆ, ಎಲ್ಲವೂ ಕೈಗೂಡುವುದು. ಇಲ್ಲದುದಕ್ಕಾಗಿ ಆಸೆ ಪಡಬಾರದು.

**೬೫೯ ಕಟ್ಟಿಗೆಯಲಿ ಬೆಂಕಿ ಕಾಣುವಂಥ ರೀತಿ,**
**ತನುವಿನಲ್ಲಿ ಆತ್ಮ ತಗಲಿ ಉಂಟು**
**ಗುಟ್ಟು ತಿಳಿದು ಬಳಿಕ ಕಂಡುಕೊಳ್ಳಬಹುದು ವಿಶ್ವ**

**೬೬೦ ಅದುಮಿ ಮನಸು ನಿಲಿಸಿ, ಆನಂದ ಕೇಳಿಯಲಿ,**
**ಬ್ರಹ್ಮಮಯದಿ ಮುಕ್ತಿ ಪಡೆಯೆ ಕೋರು;**
**ಜಿಹ್ವೆ ರುಚಿಗಳಿಂದ ಜೀವಿ ಕೆಡುವನಲ್ಲ! ವಿಶ್ವ**

೬೬೧ ದೊಡ್ಡ ರೋಗ ಬಡಿಯೆ, ದೇವತಾ ಭಕ್ತನು
ಈಟಿಯಿಲ್ಲದವನು ಇರಿವ ಬಂಟ!
ಕಾಸು ಇಲ್ಲದವನು ಕಡು ಬ್ರಹ್ಮಚಾರಿ ವಿಶ್ವ

೬೬೨ ಕಚ್ಚೆಗಳನೇಕೆ ಬಿಗಿಯಾಗಿ ಕಟ್ಟಬೇಕು?
ಬುದ್ಧಿ ಕುದುರದೆ ಇದ್ದೊಡೆ ಬರಿಯ ಗೋಟಿ
ಏನು ಮಾಳ್ಪದದುವೆ ಇರದೆ? ಬಿಗಿದೊಡೆಷ್ಟು? ವಿಶ್ವ

೬೬೩ ಬ್ರಹ್ಮವನರಿಯರು ಬಹಳಕಂಟಿರುವೊಡೆ,
ಮತ್ತೆ ಅರಿಯುತಿಹರು ಮಹಿಯ ನರರು;
ಹುಡುಕಿ ತನುವಿನೊಳಗೆ ಹರ್ಷದಿ ನಿನ್ನ ಕಂಡು ವಿಶ್ವ

೬೬೪ ಹೊಟ್ಟೆಗಾಗಿ ಮನ ಹ್ರಾಸಗೊಳುವುದೇಕೆ?
ಹೊಟ್ಟೆ ಎಲ್ಲಿ ತೃಪ್ತಿ ಹೊಂದುತಿಹುದು?
ಹೊಟ್ಟೆಯುಂಟು ಕಲ್ಲು ಹೊದರೊಳಿಹ ಕಪ್ಪೆಗೆ ವಿಶ್ವ

೬೬೫ ಮತದ ದಾರಿ ಮರೆವ ಮಧುರಾಧರ ನೋಡಿ,
ಮುಗುದೆ ರೂಪ ಕಂಡು ಮನಸು ಮರೆವ,
ಯೋನಿ ನೋಡಿ ಸರ್ವ ಯೋಗಗಳನೆ ಮರೆವ ವಿಶ್ವ

●

## ನಿಯಮ ಸಾಧನೆ

### (ಅ) ಶೌಚ

ನಿಯಮ ಸಾಧನೆಯು ವೈಯಕ್ತಿಕವಾಗಿದೆ. ಶೌಚ, ಸಂತೋಷ, ತಪ, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನಗಳು ನಿಯಮ ಸಾಧನೆಯ ಪಂಚ ಅಂಗಗಳಾಗಿವೆ. ಶೌಚವು ದ್ವಿವಿಧ. ಒಂದನೆಯದು ಬಾಹ್ಯ ಶೌಚ; ಎರಡನೆಯದು ಅಂತಃ ಶೌಚ. ಮಣ್ಣು ನೀರು ಮುಂತಾದವುಗಳ ಸರಿಯಾದ ಬಳಕೆಯಿಂದ ದೇಹವನ್ನು ಮತ್ತು ಬಳಕೆಯ ವಸ್ತುಗಳನ್ನು ಶುಚಿಯಾಗಿಡಬಹುದು. ಆದರೆ ಅಂತಃ ಶೌಚವು ತುಂಬಾ ಮಹತ್ವಪೂರ್ಣವಾಗಿದೆ. ಸ್ವಾರ್ಥಪರತೆ ಇರುವಲ್ಲಿ ಅತ್ಯಂತ ಪ್ರಾಮಾಣಿಕ ಮನುಷ್ಯರೂ ಕೂಡ ಮಲಿನರಾಗುತ್ತಾರೆ. ಇನ್ನಷ್ಟು, ಮತ್ತಷ್ಟು ಗಳಿಸಬೇಕೆಂಬ ಮಾನವನ ಆಶೆಗೆ ಮಿತಿಯೇ ಇಲ್ಲ. ಒಬ್ಬನು ಇನ್ನೊಬ್ಬನಿಗೆ ಏನನ್ನಾದರೂ ನೀಡಿದರೆ, ಅಲ್ಲಿ ದಾನ

ದೃಷ್ಟಿ ಇರುವುದು ವಿರಳ. ತನಗೆ ಅವನಿಂದ ಯಾವ ಪ್ರತಿಫಲ ದೊರೆಯುತ್ತದೆ? ಎಂಬ ಪ್ರತೀಕ್ಷೆಯೆ ಮುಖ್ಯವಾಗಿರುತ್ತದೆ. ನಾನು ಅವರಿಗೆ ನೆರವು ನೀಡಿದೆ. ಈಗ ನೋಡಿ; ಅವರು ನನಗೇನು ಮಾಡಲಿಲ್ಲ; ದೇವರಿದ್ದಾನೆ. ಅವರಿಗೆ ತಕ್ಕ ಶಾಸ್ತಿ ಮಾಡುತ್ತಾನೆ, ಎಂದು ಹಲುಬುವವರೇ ಎಲ್ಲೆಡೆ ತುಂಬಿದ್ದಾರೆ. ಇದು ಶುಚಿಯಾದ ಮನಸ್ಸಲ್ಲ. ತಲೆ ಬೋಳಾಗಬೇಕು. ಮನವು ಶುದ್ಧವಾಗಬೇಕು.

**೬೬೬** **ಕೊಳೆತು ಇರುವ ಹಣ್ಣು ಒಳಿತಲ್ಲವೆನುವರು**
**ತಮ್ಮೊಳಗಿನ ಕೊಳೆಯ ತಿಳಿಯದಿಹರು**
**ಆತ್ಮ ಸ್ತುತಿಸುವವ ಅರಿಯನೊಳಗಿನ ಕೊಳೆ** **ವಿಶ್ವ**

**೬೬೭** **ಕಾಲ ಧರ್ಮವರಿತು ಕಪಟ ವೃತ್ತಿ ತೊರೆದು,**
**ಅಂಗನೆ ಮಕ್ಕಳಲಿ ಆಶೆ ಬಿಟ್ಟು,**
**ಮೇಲ್ಮೆಯುಳ್ಳ ಶಿವನ ಮೇಲೆದ್ದು ನೋಡು** **ವಿಶ್ವ**

**೬೬೮** **ಅಂತರಂಗದಲ್ಲಿ ಅಪರಾಧವ ಗೆಯ್ದು,**
**ಒಳ್ಳೆಯವನ ರೀತಿ ಉಂಟು ಮನುಜ**
**ಇತರರರಿಯದಿರಲು, ಈಶ್ವರನರಿಯನೇ?** **ವಿಶ್ವ**

**೬೬೯** **ಉದರದಲ್ಲಿ ಮಲವು, ಉಂಟು ಬಾಯೆಂಜಲು,**
**ಕಡೆಗೆ ವಶವೆ ಬ್ರಹ್ಮ? ಕಾಣರಲ್ಲ!**
**ಸತ್ಯವಿನಿತು ಇರದೆ ಸಿದ್ಧಿಯೆಂತು ಬಹುದು?** **ವಿಶ್ವ**

**೬೭೦** **ಪಾಪವೇನು ಅನ್ಯ ಲೋಕದ ಫಲವಲ್ಲ**
**ತನ್ನ ಕರ್ಮಕಂಟಿ ತಾನು ಗೆಯ್ವ,**
**ಕರ್ಮ ಶುದ್ಧಿಗಿಂತ, ಪಾಪ ತೊರೆಯೆ ಲೇಸು** **ವಿಶ್ವ**

**೬೭೧** **ಕಲುಷವೆಲ್ಲ ತಿಳಿಯೆ, ತಲೆ ತಗ್ಗಲು ಮೂಲ;**
**ಅರಿತೊಡೆಲ್ಲ ತತ್ವ ಆತ್ಮ ಮೂಲ**
**ತಿಳಿದುಕೊಂಡು ಮತ್ತೆ ಧೀರನಾಗಿ ಸಾಗು** **ವಿಶ್ವ**

●

## (ಆ) ಸಂತೋಷ

'ತೋಷ' ಎಂದರೆ ಮಾನಸಿಕ ಆರಾಮ. ಸಂತೋಷವೆಂದರೆ ಚೆನ್ನಾದ ಮಾನಸಿಕ ಆರಾಮ. ವ್ಯಕ್ತಿಯು ಐಹಿಕ ಸುಖಭೋಗಗಳನ್ನು ಬೆಂಬತ್ತಿದರೆ ತೃಪ್ತಿ ಕಷ್ಟ ಸಾಧ್ಯ. ಆಶಿಸಿದ ವಸ್ತು ಪ್ರಾಪ್ತಿಯಿಂದ ಅಲ್ಪ ಕಾಲ ತೃಪ್ತಿ ದೊರೆಯಬಹುದು. ಮನಸ್ಸು ಮತ್ತೆ ಮತ್ತೆ ಹೆಚ್ಚಿನ ಭೋಗವಸ್ತುಗಳಿಗಾಗಿ ಹಾತೊರೆಯುತ್ತದೆ.

**೬೭೨ ಇಲಿಯ ಹಿಡಿಯೆ ಬೆಕ್ಕು ಇಷ್ಟ ಪೂರ್ತಿಯಹುದೆ?**
**ಕೋಳಿ ಹಿಡಿಯೆ ಮತ್ತೆ ಕೋರುತಿಹುದು**
**ಮಮತೆ ತೊರೆಯದನಕ ಮೋಕ್ಷ ದೊರೆವುದೆಂತು? ವಿಶ್ವ**

**೬೭೩ ಒಂದಾದ ದಂಪತಿ ಚೆಂದಾದ ಸಂಸಾರ**
**ನಂದನನ ನಡೆ ನುಡಿ ನಂದಿನಿಯೊಳು;**
**ಸತಿಗಿತ್ತ ರಕ್ಷಣೆಯೆ ಸ್ವಂತಕ್ಕೆ ರಕ್ಷಣೆಯು ವಿಶ್ವ**

**೬೭೪ ಅತಿ ಹಿತವಾಗಿಯೆ ಆಡುತಿಪ್ಪ ನುಡಿಗೆ,**
**ಸಂತೋಷಿಪರೆಲ್ಲ ಸತ್ಪುರುಷರು**
**ಅಧಿಕ ಭಾಷಣವಿರೆ ಆಯಾಸವದೆಲ್ಲ; ವಿಶ್ವ**

**೬೭೫ ಸುಗುಣವಂತೆ ಕಾಂತೆ ಸುದತಿಯಾಗಿರ್ದೊಡೆ,**
**ಮಿಗಿಲು ಬುದ್ಧಿವಂತ ಮಕ್ಕಳಿರಲು,**
**ಸಗ್ಗವೇತಕಯ್ಯ ಸಂಸಾರ ಸಾಲದೆ? ವಿಶ್ವ**

**೬೭೬ ಸುರಿವ ಮಳೆಗೆ ಅಂಜಿ ಸರ್ರನೋಡುತಿಹರು**
**ಸುಡುವ ಬಿಸಿಲೊಳಿಹರು ಸಹಿಸಿ ಉರಿಯ;**
**ಭುವಿಯ ಜನರು ಒಳಿತು ಬಯಸರೇಕೊ ತಾವು? ವಿಶ್ವ**

**೬೭೭ ಭುಕ್ತಿ ಮುಕ್ತಿ ಉಂಟು; ಭಾಗ್ಯ ಮತ್ತೆ ಉಂಟು;**
**ಚಿತ್ತಕಂಟಿ ಮಡದಿ ಜೊತೆಯೊಳಿರಲು,**
**ಚಿತ್ತವರಿಯದ ಸತಿ ಹತ್ತರಿರಲು ಹೊಲ್ಲ ವಿಶ್ವ**

●

## (ಇ) ತಪಸ್ಸು

ತಪಸ್ ಎಂದರೆ ಗುರಿಯನ್ನು ತಲುಪಲು ಬರಮಾಡಿಕೊಳ್ಳವ ಕಷ್ಟ ಸಹಿಷ್ಣುತೆ. ತಪಸ್ಸು ಕಾಯಕವಿರಬಹುದು, ವಾಙ್ಮಯವಿರಬಹುದು. ಮಾನಸಿಕವಿರಬಹುದು. ಕಾಯಕ ತಪಸ್ಸಿಗೆ ಶೂದ್ರೋಚಿತ ಸೇವೆಯೆಂದೂ ಹೆಸರು. ರೋಗದಿಂದ ನರಳುವ ದೀನನಿಗೆ ಕೈಯಾರೆ ಸೇವೆ ಸಲ್ಲಿಸುವುದು ಕಾಯಕ ತಪಸ್ಸೇ ಆಗಿದೆ. ಯಾರನ್ನೇ ಆಗಲಿ, ಕೀಳೆಂದು ಭಾವಿಸದೆ, ನಿಂದಿಸದೆ, ಅವಾಚ್ಯ ನುಡಿಯದಿರುವುದು ವಾಙ್ಮಯ ತಪಸ್ಸಾಗಿದೆ. ಇನ್ನು ಮನದಲ್ಲಿ ಅನ್ಯರನ್ನು ಕುರಿತು ಅಸಹ್ಯ ಪಡದಿರುವುದು, ಅವರಿಗೆ ಅಹಿತ ಬಗೆಯದಿರುವುದು, ಮಾನಸಿಕ ತಪಸ್ಸಾಗಿದೆ. ತಪಸ್ಸು ನೈತಿಕ ತತ್ತ್ವ ಮಾತ್ರ. ಅಷ್ಟರಿಂದಲೇ ಮುಕ್ತಿ ಫಲ ದೊರೆಯದು. ಜ್ಞಾನವಿಲ್ಲದ ತಪವು ವ್ಯರ್ಥ. ನಾವು ಕೈಕೊಂಡ ತಪವು ಏತಕ್ಕಾಗಿ? ಅದು ಯಾವ ಪ್ರಯೋಜನಕ್ಕಾಗಿ? ಎಂಬ ವಿವೇಚನೆಯು ತುಂಬಾ ಅಗತ್ಯ.

**೬೭೮ ಕಲಿಯುಗದೊಳು ಹುಟ್ಟಿ ಕಡೆಯ ಗುರಿ ತಲುಪದೆ,**
**ಒಡಲು ಬಡವ ಮಾಡಿ, ಉಗ್ರ ತಪವ**
**ತಾವು ಗೆಯ್ದರೆಷ್ಟು? ತತ್ತ್ವವರಿಯಬಹುದೆ?** ವಿಶ್ವ

**೬೭೯ ಸುಮ್ಮನಿದ್ದು ತಿಳಿಯೆ ಉತ್ತಮ ಯೋಗವದು**
**ಮನಸು ಒಲಿಸಿಕೊಳಲು ಮಧ್ಯಮವದು;**
**ಆಸನಾದಿ ವಿಧಿಯು ಅಧಮ ಯೋಗ ಕಾಣಾ** ವಿಶ್ವ

**೬೮೦ ತಾಯಿ ತಂದೆಗಳಲಿ, ದಾರಿದ್ರ್ಯಯುತರಲ್ಲಿ,**
**ನಂಬಿಕೊಂಡ ಬಡವ ನರರಲ್ಲಿಯು**
**ಪ್ರಭುಗಳಲಿ ಬಹಳ ಭಯಭಕ್ತಿಯನಿರಿಸು** ವಿಶ್ವ

**೬೮೧ ಅತಿ ಹಿತವಾದಂಥ ಆಡಿದಾ ಮಾತಿಗೆ,**
**ಸಂತಸಿಸುವರೆಲ್ಲ ಸತ್ಪುರುಷರು;**
**ಅಧಿಕ ಭಾಷಣಾದಿ ಆಯಾಸಕರವಷ್ಟೆ** ವಿಶ್ವ

●

## (ಈ) ಸ್ವಾಧ್ಯಾಯ

ಸ್ವಾಧ್ಯಾಯವೆಂದರೆ ಆಧ್ಯಾತ್ಮಿಕ ವಿಷಯಗಳನ್ನು ಅರಿತುಕೊಳ್ಳುವುದು. ಪ್ರಾಚೀನ ಕಾಲದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿದಿನದ ಸ್ವಾಧ್ಯಾಯವನ್ನು ಋಷಿಗಳ

ಆಶ್ರಮಗಳಲ್ಲಿ ಮಾಡುತ್ತಿದ್ದರು. ಆದರೆ ಬರುಬರುತ್ತ ಪರಿಸ್ಥಿತಿ ಬದಲಾದಂತೆ ಸ್ವಾಧ್ಯಾಯದ ಅರ್ಥವೂ ಬದಲಾಯಿತು. ವೃತ್ತಿಪರ ಬೋಧಕರು, ಇಂಥ ಇಂಥ ಪುಸ್ತಕಗಳನ್ನು ಓದುವುದೇ ಸ್ವಾಧ್ಯಾಯ ಎಂದು ಅರ್ಥೈಸಿದರು. ಸ್ವಾಧ್ಯಾಯವೆಂದರೆ ವಿಷಯ ಕುರಿತು ಓದುವುದಾಗಲಿ ಶ್ರವಣ ಮಾಡುವುದಾಗಲಿ ಮಾತ್ರವಲ್ಲ ಓದಿನಾಚೆಯ ಅರ್ಥವನ್ನು ಗ್ರಹಿಸುವುದೂ ಆಗಿದೆ.

೬೮೨ ಓದಿನಲ್ಲಿ ಓದಿ ಒಳ್ಳೆ ವಿವೇಕಯೆನೆ,
ಕಪಟವರಿತು ಏನು ಕಾಣ ಮುಕ್ತಿ
ತಿಪ್ಪೆ ಗುಂಡಿ ನಾಯಿ ತಳೆದ ಧ್ಯಾನದಂತೆ ವಿಶ್ವ

೬೮೩ ಓದುಗ ಮತಿಗಿಂತ ಸಾಧಕ ಮತಿ ಮೇಲು
ವೇದದಲ್ಲೂ ಇಲ್ಲ; ವಾದದಲ್ಲು,
ಒಡಲು ಶುದ್ಧಿಗೆಯ್ದು ಒಡೆಯನನ್ನು ನೋಡು ವಿಶ್ವ

೬೮೪ ಸೂಕ್ಷ್ಮರೂಪ ತಿಳಿದು ಸುಖ ಹೊಂದಲಾರದೆ,
ಬಹಳ ಓದುತಿಹನು ಬಡವ ಮನುಜ
ಸಾವು ಕೇಡರಿಯದ ಶಾಸ್ತ್ರ ಓದನೇಕೆ? ವಿಶ್ವ

೬೮೫ ಓದು ಶಾಸ್ತ್ರವೆಲ್ಲ ಓದಿ ಮತ್ತೆ ಬರೆದು,
ತಿಳಿಯುವವರು ಮರಣ ತಿಳಿಯದಿಹರು;
ಮರಣವರಿಯದಿರಲು ಮರಳಿ ಓದು ಏಕೆ? ವಿಶ್ವ

೬೮೬ ಸಾಯುವವರು ಯಾರೊ? ಸಾಯದವರು ಯಾರೊ?
ಸತ್ತು ಬದುಕುತಿರುವ ಸುಜನರಾರೊ?
ತತ್ವವೇನಿಹುದೋ ತಿಳಿದು ಬಾಳಬೇಕು ವಿಶ್ವ

೬೮೭ ಎಷ್ಟೊ ಓದನೋದಿ, ಎಷ್ಟುಕೇಳಲೇನು?
ಹೀನನಿಹನ ಗುಣವು ಹೋಗದಲ್ಲ?
ಹಾಲೆರೆಯಲಿದ್ದಲಿಗೆ ಹೋಗಬಹುದೆ ಕಪ್ಪು? ವಿಶ್ವ

೬೮೮ ವೇದಗಳನು ಓದಿ ಒಣ ಜಂಭ ಪಡುವರು
ಅಧೋಗತಿಗಿಳಿದರು ಅಯ್ಯರೆಲ್ಲ.
ಬ್ರಹ್ಮ ಮಹಿಮೆಯರಿತು ಬದುಕುತಿಹುದೆ ಮೇಲು, ವಿಶ್ವ

೬೮೯ ಓದಿನೆಲ್ಲ ಓದಿ ಸರ್ವಜ್ಞನಾಗಿದ್ದು,
ಬ್ರಹ್ಮ ವಿದ್ಯೆಯೆಲ್ಲ ಬಹಳ ಕೆಡಿಸಿ,
ಯುವತಿ ಕಂಡ ಬಳಿಕ ಯೋಗ ಮರೆವ ಮೂಢ! ವಿಶ್ವ

೬೯೦ ಓದನೋದಲೇಕೆ? ಸನ್ಯಾಸವು ಏಕೆ?
ಷಣ್ಮತದಲಿ ಸಿಕ್ಕು ಸಾಯಲೇಕೆ?
ಹರನ ಭಜನೆ ಗೆಯ್ದು ಅರಿಯೊ ಆತ್ಮದಾಳ ವಿಶ್ವ

೬೯೧ ಅಲ್ಪವಾದರೇನು? ಅಧಿಕವಾದರೇನು?
ಹೇಳುವಂಥ ರೀತಿ ಹೇಳುತಿಹನು
ಹರನಿಗರಿಯದಂತೆ ಮರದೆಲೆಯು ಅಲುಗದು ವಿಶ್ವ

೬೯೨ ಪಾಠದಲ್ಲಿ, ರಾಜ್ಯ ಪದವಿ ಪಟ್ಟಗಳಲಿ,
ಹೈನ ಪಶುಗಳಲ್ಲಿ, ಹೆಣ್ಣಿನಧರದಿ,
ಆಶೆಯುಡುಗಿದಂಥ ಅಯ್ಯನಯ್ಯ ಮುಕ್ತ ವಿಶ್ವ

೬೯೩ ವಾದವರಿತು ನುಡಿವ ವಾಕ್ಯವೊಂದೆ ಸಾಕು;
ಬಹಳ ಬೇಕೆ ಬಾಯಿ ಬಡಾಯಿ? ಅರಿ
ಒಪ್ಪಲೇಕೆ ಬಹಳ? ಒಂದಕಷ್ಟೆ ಮಣಿವೆ ವಿಶ್ವ

೬೯೪ ನುಡಿಯು ಶುದ್ಧವಿರದ ನೀಚ ಚಂಡಾಲನು,
ಪ್ರೇಮ ಶುದ್ಧವಿರದೆ ಪಾತ್ರಿಯೆಂತು?
ತೋರಲು ಹಣೆ ಭಕ್ತ ತೋಳನ ಬಾಯಿಯವ ವಿಶ್ವ

೬೯೫ ಠಕ್ಕ ಮಾತನಾಡಿ, ಸಿಕ್ಕು ಕಷ್ಟದಲ್ಲಿ,
ನಿಜವನರಿತುಕೊಳದೆ ನಿರ್ಗಮಿಸಲು,
ಸಮನಾದ ಜ್ಞಾನ ಸಾರ ತಿಳಿಯಲಾರ ವಿಶ್ವ

**೬೯೬ ಮಾತನಾಡಬಹುದು ಮರ್ಮ ತಿಳಿದ ಬಳಿಕ,**
**ಸಣ್ಣ ದೊಡ್ಡ ತನದ ಗಣನೆ ಏಕೆ?**
**ಬಾಲನ ಕೈದೀಪ ಬೆಳಗದೆ ಬೃಹದಾಗಿ? ವಿಶ್ವ**

●

## (ಉ) ಈಶ್ವರ ಪ್ರಣಿಧಾನ

ಈಶ್ವರ ಪದದ ಅರ್ಥವೆಂದರೆ ಪರಮ ನಿಯಂತ್ರಕ. ರೂಢಾರ್ಥದಲ್ಲಿ ಈ ವಿಶ್ವದ ನಿಯಂತ್ರಕ. ಎಂದು ಈ ಪದವ ಬಳಕೆಯುಂಟು. ಪ್ರಣಿಧಾನ ಎಂದರೆ ಆಶ್ರಯ ಕೋರುವುದು. ಪಂಚಭೂತಾತ್ಮಿಕವಾದ ದೇಹವು ಈಶ್ವರ ಸಂಕಲ್ಪಕ್ಕೆ ವಿರೋಧವಾಗಿ ವರ್ತಿಸಲಾರದು. ಆದರೆ ಮಾನವ ಮನವು ಮಾತ್ರ ತನಗಿರುವ ದತ್ತ ಸ್ವಾತಂತ್ರ್ಯದ ಬಲದಿಂದ, ಈಶ್ವರ ಸಂಕಲ್ಪದ ವಿರುದ್ಧ ಹೋಗಬಹುದು. ಕಾರಣ, ಮನವನ್ನು ಸರಿಯಗಿ ಅರಿತು, ಅದು ಈಶ್ವರ ಸಂಕಲ್ಪದ ವಿರುದ್ಧ ಹೋಗದಂತೆ ಇರಿಸಿದರೆ ಕ್ಲೇಶ, ಕರ್ಮ ವಿಪಾಕಗಳಿಂದ ದೂರವಾಗಬಹುದು. ಮನಸ್ಸಿನಲ್ಲಿ ಏಳುವ ಅಲ್ಪ, ಸಂಕುಚಿತ, ವೃತ್ತಿಗಳನ್ನು ನಿಲ್ಲಿಸಿ ಬ್ರಹ್ಮಭಾವ ಆರೋಪಿಸಬೇಕು. ಮನಸ್ಸು ಬ್ರಹ್ಮವೆಂದು ಮನವ ತಿಳಿಯಬೇಕು. 'ಸಃಅಹಂ' ಸೋಹಂ ಅಂದರೆ ಶಿವನೇ ಜೀವ, ಜೀವನೇ ಶಿವ ಎಂಬ ಭಾವದಿಂದ ಮಾನಸಿಕವಾಗಿ ಮಾಡುವ ಧ್ಯಾನವೇ ಶಿವಪೂಜೆ, ದೇವ ಪೂಜೆ. 'ತನ್ನ ತಾನು ತಿಳಿಯೆ, ತಾನೇ ಹೋಗು ಶಿವನು'. ದೇವ ಪೂಜೆ ಗೆಯ್ಯೆ ದಿವ್ಯ ಭೋಗವುಂಟು. ಇಲ್ಲಿ ವಿಧಿ ಪೂರ್ವಕ ಷೋಡಶೋಪಚಾರ ಪೂಜೆಯನ್ನು ವೇಮನರು ಸೂಚಿಸಿಲ್ಲ. ಬಾಹ್ಯ ಪೂಜೆಯನ್ನೂ ಸೂಚಿಸಿಲ್ಲ. ಇಂಥ ಶಿವಪೂಜೆಯೇ ಈಶ್ವರ ಪ್ರಣಿಧಾನವಾಗಿದೆ. ಸೂತ್ರಧಾರ ಈಶ್ವರನೇ ಜೀವಿಗಳ ಸರ್ವ ನಿಯಂತ್ರಕನು. ಅವನೇ ಸೂತ್ರಧಾರ. ಜೀವಿಗಳೆಲ್ಲ ಅವನ ಕೈಯಲ್ಲಿಯ ಬೊಂಬೆಗಳಂತೆ.

**೬೯೭ ಬೊಂಬೆಯಾಟದವನು ಬೊಂಬೆಯಾಡಿಸುತಿಹನು**
**ಧರಣಿ ಜನರ ನೋಟದೆಲ್ಲೆ ಮೀರಿ**
**ತಾನು ಮರೆಯೊಳಿದ್ದು ದೈವವಾಡಿಸುವನು ವಿಶ್ವ**

**೬೯೮ ಜೀವಿ ಕೊಲ್ಲರಾಗ ಶಿವನು ಭಕ್ತಿದೂರ**
**ಜೀವಿಯರಲಿ ನೋಡೆ ಶಿವನಲ್ಲವೆ?**
**'ಶಿವನೆ ಜೀವಿ' ನುಡಿಯೆ ಸಿದ್ಧಾಂತವೆನಿಪುದು ವಿಶ್ವ**

೧೯೯ ವಿಶ್ವನಾಥನಲ್ಲಿ, ವಿಪ್ರ ಜನತೆಯಲ್ಲಿ,
ವಿಭುಗಳಲ್ಲಿ, ವೇದ ವಿಧಗಳಲ್ಲಿ;
ಭಕ್ತಿ ಇಲ್ಲದವನು ಪಾಪಾತ್ಮ ಜಗದೊಳು ವಿಶ್ವ

೨೦೦ ಎಣಿಸುತೆಷ್ಟು ಪೂಜೆ ಎಷ್ಟು ಮಾಡಲೇನು?
ಭಕ್ತಿ ಇರದ ಪೂಜೆ ಫಲವ ಕೊಡದು
ಭಕ್ತಿ ಇರುವ ಪೂಜೆ ಮುಕ್ತಿ ಕಾರಣವದು ವಿಶ್ವ

೨೦೧ ಹಾನಿಯುಂಟಾಗದು ಹರನ ಮನದಿ ನೆನೆಯೆ,
ಅವನಕಾವ್ಯ ಪರಮ ಅವನಿಯಲ್ಲಿ
ಹಿಡಿದ ನಿಷ್ಠೆ ಬಿಡದೆ ಹೊಂದಬಹುದು ಶ್ರೇಯ ವಿಶ್ವ

೨೦೨ ಬಾಹ್ಯಪೂಜೆ ಜಪವ ಬಹಳ ಗೆಯ್ದು ಬಳಿಕ,
ಕಪಟ ಬಿಡದೆ ನರರು ಕಷ್ಟಬಡುತ,
ಮುಕ್ತಿ ಹೊಂದದಿದ್ದು ಮುಳುಗಿದರು ಭವದೊಳು ವಿಶ್ವ

೨೦೩ ಕೊಳೆತು ಇರುವ ಹಣ್ಣು ಒಳಿತಲ್ಲವೆನುವರು
ತಮ್ಮೊಳಿರುವ ಕೊಳೆಯ ತಿಳಿಯದಿಹರು
ಆತ್ಮ ಸ್ತುತಿಸುವವ ಅರಿಯನೊಳಗಿನ ಕೊಳೆ ವಿಶ್ವ

೨೦೪ ಇಂದ್ರಿಯಂಗಳಿಂದ ಇಷ್ಟು ನುಗ್ಗಲಾಗಿ,
ಹುಡುಕಲೇಕೆ ಶಿವನ ಹುಚ್ಚು ಮನುಜ?
ಇಂದ್ರಿಯಗಳ ತೊರೆದು ಈಶನನ್ನು ಕಾಣು ವಿಶ್ವ

೨೦೫ ವ್ರತಗಳೆಷ್ಟೊ ಏನೋ? ವ್ಯರ್ಥ ಸಿಗುವುದೇನು?
ಆತ್ಮ ಸಿಕ್ಕು ನೋಡೆ ಅಸಾಧ್ಯವಲ!
ಆತ್ಮ ಸಿಕ್ಕು ಬಿಡಲು ಅವನೆ ಯೋಗಿ ಮಹಿಮ! ವಿಶ್ವ

೨೦೬ ಸೊಂಕಿ ಪರುಷ, ಲೋಹ ಸ್ವರ್ಣವಾದ ರೀತಿ;
ಕಪ್ಪುರಕೆ ಜ್ಯೋತಿ ಕಲೆಯುವಂತೆ.
ಹೂವಿನಲ್ಲಿ ಗಂಧ ಹೊಂದಿಕೊಂಡ ರೀತಿ ವಿಶ್ವ

— — — — — — — — — — — — — — — — — — — — — —

**೭೦೭ ಜೀವ ಭೇದಕಂಟಿ ಸತ್ತು ಹೋಹರೆಲ್ಲ;**
**ಬ್ರಹ್ಮ ಭಾವ ಹೊಂದಿ ಬಾಳಬಹುದು**
**ನೀರು ಮುತ್ತಾದರೂ ನೀರಾಗಿ ಬದಲದು ವಿಶ್ವ**

**೭೦೭ ಕಫವು ಮೀರಿಮತ್ತೆ ಕಣ್ಣು ಕಾಣದಾಗಿ,**
**ಬುದ್ಧಿ ತಪ್ಪಿ ಪೂರ್ಣ ಭುವಿಯ ಮರೆತು,**
**ಅಂಥ ಕಾಲ ನಿನ್ನ ಅರಸಲೆಂತು ಸಾಧ್ಯ? ವಿಶ್ವ**

●

## ಆಸೆ

ಮಾನವನ ದುಃಖಕ್ಕೆ ಮೂಲ ಕಾರಣವೇ ಆಸೆ. ವಿತ್ತ, ಪತ್ನಿ ಮತ್ತು ಪುತ್ರರನ್ನು ಕುರಿತಿರುವ ಆಸೆಯನ್ನು ವಿತ್ತೇಷಣ, ದಾರೇಷಣ ಮತ್ತು ಪುತ್ರೇಶಣ ಎನ್ನುತ್ತಾರೆ. ಒಟ್ಟಾರೆ ಈ ಷಣತ್ರಯಗಳೇ ದುಃಖಕಾರಣಗಳು. ಈಷಣಗಳು ಮಾನವನನ್ನು ಕಚ್ಚುವ ನಾಯಿಯಂತೆ ಬೆನ್ನಟ್ಟುತ್ತವೆ.

ಆಸೆಯನ್ನು ಪೂರೈಸಿದಷ್ಟು. ಅದು ಹೆಚ್ಚುತ್ತದೆ. ದೀಪಕ್ಕೆ ಎಣ್ಣೆ ಸುರಿದಂತಾಗುತ್ತದೆ. ಇಲಿಯನ್ನು ಹಿಡಿದ ಬೆಕ್ಕಿನ ಆಸೆ ಶಮನಗೊಳ್ಳದು. ಮತ್ತೆ ಕೋಳಿಯನ್ನು ಕಾಣಲು, ಅದನ್ನು ಕಬಳಿಸಲು ಮುಂದಾಗುತ್ತದೆ. ಹೀಗೆ ಆಸೆ ಏರುತ್ತ ಹೋಗುತ್ತದೆ.

ಆಸೆಯು ಮುನಿಗಳನು ಸಹ ಬಾಧಿಸುತ್ತದೆ. ಆಸೆಯು ಹೇಗೆ ಹುಟ್ಟುತ್ತದೆ? ಅದು ಹೇಗೆ ಪೋಷಣೆ ಪಡೆಯುತ್ತದೆ? ಎಂಬ ಜ್ಞಾನ ಪಡೆದು ಅದನ್ನು ಜ್ಞಾನ ಛೂರಿಯಿಂದ ಕಡಿದೊಗೆಯಲು ಯತ್ನಿಸಬೇಕು.

ಪುರಾಣದ ದೇವತೆಗಳಿಗೂ ಆಸೆ ಬಿಡದು. ಅನಿಮಿಷೇಶ್ವರನು ಕನಕ ಪರ್ವತವಾಸಿಯಾದರು, ಕರ್ಣನ ಕುಂಡಲಗಳನು ಆಶಿಸಿ ಕೇಳುವನಲ್ಲವೇ? ತಾನು ಬದುಕುವುದು ಎಷ್ಟು ದಿನ? ಸತ್ತ ಮೇಲೆ ಏನು? ಎಂದು ವಿಚಾರಿಸಬೇಕು. ಆಶಾಗ್ರಸ್ತನಾದರೆ, ಅವನಿಗೆ ಮುಕ್ತಿಯಿಲ್ಲ. ಏಕೆಂದರೆ ಮನವು ಆಶೆಗಳಿಂದ ಬದ್ಧವಾಗಿರುತ್ತದೆ. ಆದ್ದರಿಂದ ಆಶೆಯನ್ನು ಕೊಚ್ಚಿ ಹಾಕಿ ಮುಕ್ತನಾಗಬೇಕು. ಆಸೆಯನ್ನು ಕಡಿದು, ಅನುರಾಗದ ಅಗ್ನಿಯನ್ನು ಆರಿಸಿ, ಇಂದ್ರಿಯಗಳನ್ನು ಸಂಯಮದಲ್ಲಿರಿಸಿ ಕೋಪ ತಗ್ಗಿಸಿ, ಯೋಗಿಯಾಗಬೇಕು.

ಆಸೆಯನ್ನು ತೊರೆಯದೆ ಪಾಶಮುಕ್ತನಾಗಲಾರನು. ಜೀವಾತ್ಮ ಪರಮಾತ್ಮರ ಐಕ್ಯ ಸಾಧ್ಯವಾಗದು. ದುಃಖ ನಿವೃತ್ತಿಯಾಗದು. ನಿರ್ವಾಣವು ಕೈಗೂಡದು.

೭೦೯ ಏರುತಿಪ್ಪ ಆಶೆ ಎರಡು ಪಟ್ಟು ಅಗೆ,
ದಿಕ್ಕುಗೆಟ್ಟು ನರನು ತಿರುಗುತಿಹನು
ಸೋಣಗನಂಥ ಆಶೆ ಸೇರಿಕೊಳಲು ಬಿಡದು. ವಿಶ್ವ

೭೧೦ ಆಶೆಗಿಂತ ದುಃಖ ಅತಿಶಯಾಗಿ ಅಲ್ಲ.
ನೋಟ ನಿಲಿಸದಿರಲು ನೆಮ್ಮದಿಯಿಲ್ಲ,
ಮನಸು ನಿಲಿಸದಿರಲು ಮತ್ತೆ ಮುಕ್ತಿ ಇಲ್ಲ. ವಿಶ್ವ

೭೧೧ ಹೆತ್ತ ಪುತ್ರನಾಸೆ, ಹೇಮದ ಮೇಲಾಸೆ,
ಸ್ತ್ರೀಯ ಮೇಲಿನಾಸೆ, ಚಿತ್ತ ಭ್ರಾಂತಿ!
ಭ್ರಮೆಯ ಬಿಡದಿರಲು, ಬ್ರಹ್ಮವನು ಕಾಣರು, ವಿಶ್ವ

೭೧೨ ಭಾರ್ಯೆ ಮೇಲೆ ಆಶೆ, ಪಡುವ ಪುರುಷ ಮತ್ತೆ,
ಗಂಡನ ಮೇಲಾಸೆ ಹೆಂಡತಿಗಿದೆ.
ಶಿವನ ಮೇಲಿನಾಸೆ ಸಿದ್ಧ ಜನರಿಗುಂಟು. ವಿಶ್ವ

೭೧೩ ಪರಮ ಹಂಸನೆನುತ ಪರ್ಯಟಿಸುವ ಭೂಮಿ;
ಪರಧನಕ್ಕೆ ಆಸೆ ಪಡುತ ಇರುವ,
ಪರಮ ಹಂಸನಲ್ಲ ಪರ ಹಿಂಸಕನವನು. ವಿಶ್ವ

೭೧೪ ಇಲಿಯ ಹಿಡಿಯೆ ಬೆಕ್ಕು ಇಷ್ಟ ಪೂರ್ತಿಯಹುದೆ?
ಕೋಳಿ ಹಿಡಿಯೆ ಸಿದ್ಧಗೊಳ್ಳುತಿಹುದು.
ಮಮತೆ ತೊರೆಯದನಕ ಮೋಕ್ಷ ದೊರೆವುದೆಂತು? ವಿಶ್ವ

೭೧೫ ನೀರಿನಲ್ಲಿ ಮೀನು ನೆರೆ ಮಾಂಸಕಾಶಿಸಿ,
ಗಾಳದಲ್ಲಿ ಸಿಲುಕಿ ಗಾಸಿ ಪಡದೆ?
ಆಸೆ ಹುಟ್ಟಿ ಮನುಜ ಆ ರೀತಿ ಕೆಡುತಿಪ್ಪ ವಿಶ್ವ

೭೧೬ ಮನದಿ ಹುಟ್ಟುತಿಹವುಮನದ ಕೋರ್ಕೆಯೆಲ್ಲ;
ಕೋರ್ಕೆಯಲ್ಲಿ ಮುಕ್ತಿ ಕುದುರದಯ್ಯ!
ಮನವೆ ಬ್ರಹ್ಮವೆಂದು ಮನದೊಳರಿಯಬೇಕು ವಿಶ್ವ

೭೧೭ ಬರಿದೆ ಪಡುವ ಆಶೆ, ಗುರಿಯ ತಲುಪಿಸದದು
ಕಷ್ಟದೊಳಗೆ ಕೆಡವಿ ಕಾಡುತಿಹುದು
ಜಗದಿ ಜನದಿ ಭಕ್ತಿ ಜನಿಸಗೊಡದು ನೋಡು ವಿಶ್ವ

೭೧೮ ಆಶೆ ಪಾಪವಹುದು, ಎಲ್ಲಕ್ಕಿಂತ ಆಚೆ
ಆಶೆಯಿಂದ ಮುನಿಯು ಮೋಸಗೊಳನೆ?
ಸಮೀಕ್ಷಿಸಿ ಬಿಡುವನೆ ಶುದ್ಧಾತ್ಮನೆನಿಪನು ವಿಶ್ವ

೭೧೯ ಆಶೆಯೆಂಬ ಪಾಶ ಅಖಿಲ ಜಂತುಗಳನು,
ಕಟ್ಟುತಿಹುದು ಕಾಣು; ಸತ್ಯವ
ಜ್ಞಾನ ಛೂರಿ ಹಿಡಿದು, ಜಡವ ಕಡಿಯಬೇಕು ವಿಶ್ವ

೭೨೦ ಆಶೆಯಿಂದ ಮನುಜ ಆಯುವಿರುವ ಕಾಲ,
ತಿರುಗುತಿಪ್ಪ ಭ್ರಮೆಯ ತೊರೆಯದಿದ್ದು;
ಮುಸುರೆ ಪಾತ್ರೆಯಲ್ಲಿ ಮುಕುರುವ ನೊಣದಂತೆ ವಿಶ್ವ

೭೨೧ ಅಲ್ಪ ಸುಖವನೆಲ್ಲ ಆಶಿಸುತ ಮನುಜರು,
ಬಹಳ ದುಃಖ ಬಾಧೆ ಪಡುತಲಿಹರು
ಪರ ಸುಖವನು ಹೊಂದಿ ಬದುಕಲರಿಯರಲ್ಲ! ವಿಶ್ವ

೭೨೨ ನೀರಿನೊಳಗಿನ ಬರೆಹ ನಿಲದೆ ಹೋಗುವಂತೆ,
ಸಾಟಿ ಇಹದೊಳಿಲ್ಲ; ಪರದೊಳಿಲ್ಲ
ಮಾತು ಮಾತಿಗೆಲ್ಲ ಮನಸು ಕೋರುತಿಹುದು ವಿಶ್ವ

೭೨೩ ಲೆಕ್ಕವಿಲ್ಲ ದಾಶೆ ಲೀಲೆಯಂತೆ ಉಂಟು;
ದಿಕ್ಕು ಗೆಟ್ಟು ನರನು ತಿರುಗಬಹುದು.
ಸೊಣಗನಂಥ ಮನಸು ಸೇರಿ ಕುಳಿತಿರದೇ? ವಿಶ್ವ

೭೨೪ ಲೋಕದಲ್ಲಿ ಹುಟ್ಟಿ, ಲೋಕದಲ್ಲಿ ಬೆಳೆದು,
ಲೋಕದಲ್ಲಿ ವಿಧದ ಸಹನೆ ಇರದ ಜನರು
ಲೋಕದಲ್ಲಿ ಆಶೆ ಲೋಲರಾಗಿ ಹಾಳು ವಿಶ್ವ

೭೨೫ ಕನಕ ಬೆಟ್ಟವಾಸಿಯಾಗಿ ತಾನು ಇರಲು,
ಅನಿಮಿಷೇಶ್ವರನಿಗೆ ಆಶೆ ಬಿಡದು
ಕನಕ ಕುಂಡಲಗಳ ಕರ್ಣನೊಳು ಕೇಳನೆ? ವಿಶ್ವ

೭೨೬ ಕನಕ ಪರ್ವತದಲಿ ಕಾಯ ವಾಸವಿರಲು,
ಅಮರ ವಿಭುವಿಗೂ ಆಶೆ ಬಿಡದು
ಕನಕ ಕುಂಡಲಗಳ ಕರ್ಣನಿಂ ಕೇಳನೇ? ವಿಶ್ವ

೭೨೭ ಮರಳಿ ತಿರುಗಿ ನರನು ಮರುಳುಗೊಳುವನಷ್ಟೆ
ಅದರಿಂದಲಿ ಯಾವ ಆಶೆಯುಂಟು?
ಅಂತರಾತ್ಮ ನಿಲಿಸೆ, ಅವನೆ ತಾನಾಗುವ ವಿಶ್ವ

೭೨೮ ಸಾವು ಇಂದೊ ನಾಳೆಯೊ, ಜೊತೆಗೆ ಬಾರದಿರದು
ಹೆಚ್ಚು ದಿನವು ಕೂಡ ಹೂಳಲೇಕೆ?
ಅನುತ ಆಶೆಯುಡುಗಿದಂಥವರಾರಿಹರು? ವಿಶ್ವ

೭೨೯ ನಿಬಿಡವಾದ ತಮವು ನಿಕ್ಕಿ ದಾಟಲಾರ
ಬಟ್ಟಬಯಲು ದಟ್ಟ, ಬೆರೆವುದೆಂತು?
ಪ್ರಬಲಿಸುತಿಹ ಮನದಿ ಪಾಲಿಸುತ ಇರುವನು ವಿಶ್ವ

೭೩೦ ಧನ ದಾರಾ ಪುತ್ರೇಷಣ,
ಎನುವಂಥ ಘನವಹ ಲೋಕವಾಂಛೆಯ ತಿಳಿಯಲ್,
ಮನುಜರೊಡನೆ ಸೇರನೆಂದು, ಮಹಿಯಲಿ ವೇಮಾ ವಿಶ್ವ

೭೩೧ ಮೂರು ಈಷಣಗಳ ಮೊದಲು ತೀರಿಸದೆ,
ಚಿತ್ತ ನಿಲುವುದೆಂತು ಸ್ಥಿರವಾಗಿ,
ಚಿತ್ತ ಶುದ್ಧಿಯಿರದೆ ಶಿವನ ಕಾಣಬಹುದೆ? ವಿಶ್ವ

೭೩೨ ಆಸೆಯುಡುಗುವನಕ ಪಾಶಮುಕ್ತನಲ್ಲ
ಮುಕ್ತನಾಗಬಹುದು; ಮುನಿಯಾಗನು
ಮುನಿಯೆ ಆಗಬಹುದು; ಮೋಹವ ಬಿಡಲಾರ, ವಿಶ್ವ

— — — — — — — — — — — — — — — — — — — — — —

೭೩೩ ಆಸೆಗಳನು ಕಡಿದು, ಅಗ್ನಿಯನು ಆರಿಸಿ,
ಕಟ್ಟಿ ಬಿಗಿದು ಚಡ್ಡಿ, ಕೋಪ ತಗ್ಗಿ,
ಆಸೆ ಬಿಟ್ಟು ಇರುವ, ಅವನೆ ಯೋಗಿಯೆನಿಪ ವಿಶ್ವ

೭೩೪ ಭೋಗಂಗಳಿಗಾಶೆ ಪಡದೆ,
ರಾಗ ದ್ವೇಷಗಳು ಉಡುಗಿ, ತಮ್ಮೋಳ್
ವೇಗದಿ ಮೋಕ್ಷ ಪದಂಗಳ,
ಆಗಮನ ಕಂಡ ಆತನೆ ಯೋಗಿ, ವೇಮಾ

೭೩೫ ಅಂಗದಲ್ಲಿ ಇರುವ ಆಸೆಗಳ ಛೇದಿಸಿ,
ಮೆರೆವ ಹೃದಯವಂತೆ ಸ್ಥಿರವಗೊಳಿಸಿ,
ಗೃಹವ ನಿಲಿಸುವವನು ಘನ ತತ್ತ್ವ ವೇದಿಯು, ವಿಶ್ವ

೭೩೬ ದೊಡ್ಡ ತೊಲೆಗಳಂಥ ದುರವಸ್ಥೆಗಳನ್ನೆಲ್ಲ;
ಹಾಳು ಆಸೆಯೆಲ್ಲ ಹಸನ ಮಾಡಿ,
ಹೋದೊಡೆ ವಾಸನೆಯು, ಹೋಗು ಅವನೆ ಬ್ರಹ್ಮ ವಿಶ್ವ

೭೩೭ ಆಸೆಯೆನುವುದನ್ನು ರೋಸಿ ಕೊಯ್ಯದಿರಲು,
ಮೋಸ ಬುದ್ಧಿಯಿಂದ ಮುಳುಗುತಿಹರು
ಕಾಶಿವಾಸಿ ಇರಲಿ, ಕಾಣಲಾರ ಮೋಕ್ಷ, ವಿಶ್ವ

೭೩೮ ನೀರ ಮೇಲಣ ಬರೆಹ ನಿಲ್ಲದಿರುವ ಹಾಗೆ,
ಸಮವು ಜಗದೊಳಿಲ್ಲ; ಪರದಿ ಇಲ್ಲ
ಮಾತು ಮಾತಿಗೆಲ್ಲ ಮನಸು ಕೋರುತಿಹುದು ವಿಶ್ವ

೭೩೯ ಕೆಣಕುವಂಥ ಆಸೆ ಕೊನೆಗೊಳ್ಳಲಾರದು;
ಕೋರಿಕೆಗಳ ತುಂಬಾಕರ್ಷಿಸುತಿದೆ
ಪೊಡವಿ ಜನರ ಭಕ್ತಿ ಫಲವನೀಯದಯ್ಯ ವಿಶ್ವ

೭೪೦ ಆಶಾಪಾಶವನು ಹಿಡಿಯುತ ಆ ಸತಿ ಸುತರಾದಿ
ಗಾಸಿಗೊಳ್ಳುತಿಹರು, ಕೂಳಿಗೆ ಗತಿಗಾಣರು
ಶೋಕ ಹೊಂದಲು ಯಮರಾಯ ತಾಕಿ ಬಿಡನು
ಪಾಕವರಿತೊಡೆ, ಬ್ರಹ್ಮ ಪೊಳೆವುದು ವೇಮ! ವಿಶ್ವ

೭೪೧ ಆಸೆ ಪಾಪ ಜಾತಿ, ಅಖಿಲಕಿಂತಲು ಆ
ಆಸೆಯಿಂದ ಯತಿಗಳು ಮೋಸ ಹೋದ್ರು,
ನೋಡಿ ಬಿಡುತ ಇರುವರೆ, ನಿತ್ಯ ಶುದ್ಧಾತ್ಮರು, ವಿಶ್ವ

೭೪೨ ಆಸೆಯ ಬಿಡುತಿಹ ಜೀವಿಗೆ
ಕ್ಲೇಶವು; ಬಿಡಿಸಲು ಶಕ್ಯವೆ ಕೇಶವನಿರಲುಂ?
ಆಶಾ ಪಾಶವನೆಲ್ಲವ,
ರೋಸಲು ಕ್ಲೇಶವು ಬಿಡುವುದು ಸಹಜವು ವೇಮಾ.

೭೪೩ ಆಶಾ ಪಾಶ ಮೊದಲು ಅಂಟದಂತೆ ಕೊಚ್ಚಿ,
ಪಾರು ಗಾಣದಿರೆ, ಫಲವು ಉಂಟೆ?
ಹೆಗ್ಗಣ ಬಲೆಯೊಳಗೆ ಹೋಗಿ ಸಿಕ್ಕ ರೀತಿ, ವಿಶ್ವ

೭೪೪ ಓದಿನಲ್ಲಿ, ರಾಜ್ಯ ಪದವಿಯಲ್ಲಿ ನಶಿಸಿ,
ಹೈನ ಪಶುಗಳಲ್ಲಿ ಸ್ತ್ರೀಯಧರದಿ,
ಆಶೆಯುಡುಗಿದಂಥ ಅಯ್ಯನಯ್ಯ ಮುಕ್ತ! ವಿಶ್ವ

೭೪೫ ದೊಡ್ಡ ತೊಲೆಗಳಂಥ ದುರವಸ್ಥೆಯನೆಲ್ಲ,
ಆಶೆಪಾಶಗಳನು ಬೀಸಿ ಚೆಲ್ಲಿ,
ವಾಸನೆಗಳನರಿತು ಇಪ್ಪ ಅವನೆ ಬ್ರಹ್ಮ ವಿಶ್ವ

೭೪೬ ಆಶೆ ಬಿಡದ ಹೊರತು ಪಾಶ ಮುಕ್ತನಲ್ಲ;
ಕಾಮ ಮುಕ್ತನಾದ ಹೊರತು ಮೃತನೆ
ಮೃತನೆ ಆಗದಿರಲು ಕ್ಷಿತಿ ಮೋಹವಳಿಯದು, ವಿಶ್ವ

೭೪೭ ಆಶೆಯೆಂಬ ಲತೆಯ ನಾಶಗೊಳಿಸದನಕ,
ಮೋಹ ಜಲಧಿಯಲ್ಲಿ ಮುಳುಗುತಿಹರು
ಕಾಶಿವಾಸಿಯೇನು? ಕಾಣನೆಂದು ಮೋಕ್ಷ, ವಿಶ್ವ

೭೪೮ ಆಶೆಯಂಬ ಪಾಶ ಅರಿತು ಕೊಯ್ದು ಹಾಕಿ,
ದೂರವೆಸೆಯದಿರಲು ಪರವು ಇಲ್ಲ,
ತಿಂಡಿಗಾಶೆ ಪಡಲು ತೊಂದರೆ ಹೆಗ್ಗಣಕೆ, ವಿಶ್ವ

೭೪೯ ದೋಷಪೂರ್ಣ ಘಟನೆ ತಟ್ಟನೆ ತಿಳಿಯುವವನು,
ಯೋಗಿ–ಯೋಗಿ ಯೋಗಿ; ಯತಿಗೆ ಯತಿಯು
ಇಚ್ಛೆಯಡಗಿಸಿದ, ಇದನು ತಿಳಿದರಿಯನೆ? ವಿಶ್ವ

೭೫೦ ಹುಟ್ಟಿ ಬರುವಾಗ ತಾರನು, ಪೊಡವಿ ಬಿಟ್ಟು
ತೊಲಗುವ ಕಾಲ ಕೊಂಡೊಯ್ಯದಂಥ ಧನವು;
ನಡುವೆ ನಿನ್ನಾಜ್ಞೆ ಬರಲಿ; ತ್ರಿ–ನಯನನೆನುತ,
ಅರ್ಥಿಗೀಯನು ಏನೆಲ್ಲ ವ್ಯರ್ಥ ವೇಮ

೭೫೧ ಮನಸು ಕೋರ್ಕೆಗಂಟಿ ಮತ್ತೆ ಸಿಲುಕುತಿಹುದು;
ಕೋರ್ಕೆಯದುಮಿ ಯುಕ್ತಿ ಗುರುತನರಿತು,
ಗುರುತಿಗಂಟಿ ನೋಡೆ, ಗುಣವೆ ಆಯ್ತು ತತ್ವ, ವಿಶ್ವ

೭೫೨ ಕಾಂಚನಾದಿಗಾಗಿ, ಕಾಂತೆಗಾಗಿ ಮತ್ತೆ,
ಬೊಮ್ಮನಿರಲಿ, ತಲೆಯು ತಿರುಗುತಿಹುದು;
ತೋಯಜಾಕ್ಷಿ ತೊರೆವ ದೊರೆಯು ಯಾವನಿಹನು? ವಿಶ್ವ

೭೫೩ ಲೋಭಿ, ಮನೆಯೊಳಿಂದ ಕಳೇಬರ ಹೊರಡಲು,
ಸೌದೆ–ಸಿದಿಗೆಗಾಗಿ ಬಹಳ ಕಾಸು
ವೆಚ್ಚವಾಯಿತೆಂದು ಬಿಕ್ಕಿ ಬಿಕ್ಕಿ ಅಳುವ, ವಿಶ್ವ

೭೫೪ ಮದ್ಯವಸ್ತು ಬೇಡಿ, ಭುಜಿಸಿ ನಿಲದೆ ಮತ್ತೆ,
ನಿಂದ್ಯ ಕಾರ್ಯನಿರತನಾಗಿ ನಡೆಯೆ,
ಅಂಥ ನರನು ಪತಿತ ಆಧಮ ನೀಚನೆನಿಪ ವಿಶ್ವ

●

## ಕೋಪ

ಕೋಪವು ಒಂದು ಮನೋವಿಕಾರ, ಮಾನವನು ವಿಷಯ ಭೋಗವನ್ನು ಕೋರುತ್ತಾನೆ. ಹಾಗಾಗಿ ವಿಷಯಗಳಲ್ಲಿ ಅವನಿಗೆ ಸಂಗಮವಾಗುತ್ತದೆ. ಸಂಗದಿಂದ ಕಾಮ; ಕಾಮನೆಯು ಈಡೇರದಿದ್ದರೆ ಕ್ರೋಧದ ಪ್ರತಿಕ್ರಿಯೆ ಹೊರಹೊಮ್ಮುತ್ತದೆ.

ಮಂಗಳಕರ ಭಾವವೇ ಶಿವ ಭಾವವು. ಕೋಪಗೊಂಡರೆ ಮಂಗಳ ಭಾವವು ಭ್ರಷ್ಟವಾಗುತ್ತದೆ. ಮನುಷ್ಯನು ಕೀಳಾಗುತ್ತಾನೆ. ಕೋಪದಿಂದ ಶಿವನು

ಸಹ ಕೆಡುವನು. ಗೌತಮ ಋಷಿಯು ಶಾಪ ನೀಡಲು ಮುಂದಾಗಿ ತನ್ನ ತಪಃಶಕ್ತಿಯನ್ನು ಹಾಳು ಮಾಡುತ್ತಾನೆ.

ಆದ್ದರಿಂದ, ಸಾಧಕನು ಪರಸತಿಯನ್ನು ತನ್ನ ಸೋದರಿಯಂತೆ ಕಾಣಬೇಕು. ಪರರ ಧನಕ್ಕೆ ಆಸೆ ಪಡಬಾರದು. ಅದರಲ್ಲೂ ಮುಖ್ಯವಾಗಿ ಪರರು ರೇಗಿದರೂ. ತಾನು ರೇಗದೆ, ಪರರ ದೋಷವೆಣಿಸದೆ ಇದ್ದರೆ, ತಾನೇ ಪ್ರಾಜ್ಞನೆನಿಸುತ್ತಾನೆ.

ಅದೇ ರೀತಿ ಯೋಗಿಯು, ಘೃಣೆಯನ್ನು ತೊರೆದು, ಕಾಮಾಗ್ನಿಯನ್ನು ಆರಿಸಿ, ಇಂದ್ರಿಯ ನಿಗ್ರಹ ಮಾಡಬೇಕಲ್ಲದೆ, ಕೋಪವನ್ನು ಮೆಟ್ಟಿ ನಿಲ್ಲಬೇಕು. ಏಕೆಂದರೆ ಬಹಳ ಹಸಿವೆ, ಕಾಮಜ್ವಾಲೆ, ಕ್ರೋಧ ಅಗ್ನಿ, ಕುಟಿಲತನ ಇವುಗಳನ್ನು ಗೆದ್ದು ಏಕ ಮನಸ್ಸಿನಿಂದ ಇದ್ದರೆ ಮನಸ್ಸು ಮುಕ್ತವಾಗುವುದು.

**೭೫೫ ದುಃಖವೆನಲು ಶಿವನು ಧುಮುಕಿ ಆಟವಾಡುವ;**
**ಕೋಪವೆನಲು ಶಿವನು ಕೆಳಗೆ ಇಳಿವ;**
**ಕೊಡವುದೆನಲು ಶಿವನು ಕರದಲ್ಲಿಯೆ ಇಹನು,** ವಿಶ್ವ

**೭೫೬ ಕದಲದೆ ಮತಗಳನರಸಲು,**
**ಅದಾವ ವಸ್ತುವಿರಲಿ; ಬಿಡದು ಸಮಯವನರಿಯಲ್,**
**ಮುದ ಸಿರಿಯು ತುಂಬಿದ ಬಳಿಕ,**
**ಅದ ಖಂಡಿಸಿದೊಡೆ, ದೋಷವಿರುವುದೇ ವೇಮಾ?**

**೭೫೭ ಕೋಪದಿಂದ ನರಕ ಕೂಪವನು ಸೇರುವ,**
**ಕೋಪದಿಂದ ಗುಣವು ಕೊಂಚವಹುದು,**
**ಕೋಪದಿಂದ ಬಾಳು ಕೀಳು ಆಗುತಿಹುದು** ವಿಶ್ವ

**೭೫೮ ಕೋಪದಿಂದ ಘನತೆ ಕೊಂಚತನಕಿಳಿವುದು;**
**ಕೋಪದಿಂದ ಮಿಗಿಲು ತಾಪವಿಹುದು**
**ಕೋಪ ನಿಗ್ರಹಿಸಲು ಕೋರಿಕೆ ಫಲಿಸುವುದು** ವಿಶ್ವ

**೭೫೯ ಕರಕಂಠನ ಕೋಪದಂತೆ,**
**ವರ ಗೌತಮ ಶಾಪದಂತೆ ವರ್ಣಿಸಲಳವೇ?**
**ಚಿರ ಕಷ್ಟ ಜೀವರಿಗೆ ಸಲೆ,**
**ನರಗೆ ಮನದಿ ನೋವು, ನಿಂದೆ, ನಾಶವು ವೇಮಾ**

— — — — — — — — — — — — — — — — — — — — — —

**೭೬೦ ಅನವರತ ಘೃಣೆ ತೊರೆದು, ಅನಲವನು ಆರಿಸಿ,**
**ಗೋಟಿ ಬಿಗಿದು ಕಟ್ಟಿ, ಕೋಪ ಮೆಟ್ಟಿ,**
**ಆಸೆ ಬಿಡುವ ಅವನೆ ಆಗುವನು ಯೋಗಿಯು ವಿಶ್ವ**

**೭೬೧ ಮೂಗು ಕೋಪಂಗಳು, ಮೋಹ ಲೋಭಂಗಳು,**
**ನರಿಯ ಕೊಲೆಯು, ಕ್ರೌರ್ಯ ಅಧಿಕವಾಯ್ತು,**
**ಕಷ್ಟ ನೋವು-ಕಾರ್ಯ, ಕಾಲರಾಯ ಮಾಳ್ಪ;**
**ಮಣಿದು ಹೋಹರು ತುದಿ ಮೊದಲು ವೇಮ**

**೭೬೨ ಕೆಟ್ಟ ಹಸಿವಿನಿಂದ ಕಾಮ ಜ್ವಾಲೆಯಿಂದ**
**ಕ್ರೋಧದಗ್ನಿಯಿಂದ ಕುಟಿಲ ಪಡದೆ,**
**ಒಂದೇ ಮನಸಿನಿಂದ ಇದ್ದೊಡಿಹುದು ಮುಕ್ತಿ ವಿಶ್ವ**

●

## ಲೋಭ

ಆಧ್ಯಾತ್ಮವಾದಿಗಳು ಆತ್ಮವನ್ನು ಅರಿಯುವ ಅಂತರ್ಮುಖೀ ಗತಿಯಲ್ಲಿ ಆರು ವೃತ್ತಿಗಳನ್ನು ಬಲವಾದ ವೈರಿಗಳೆಂದು ಭಾವಿಸಿದ್ದಾರೆ. ಈ ಷಡ್ರಿಪುಗಳೆಂದರೆ, ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರ. ಇವುಗಳಲ್ಲಿ ಕಾಮ, ಕ್ರೋಧಗಳನ್ನು ವಿವೇಚಿಸಿದ್ದೇವೆ. ಲೋಭವೂ ಬಲವತ್ತರವಾದ ವೃತ್ತಿ. ತನ್ನಲ್ಲಿ ಇಲ್ಲದ ವಸ್ತುವಿನ ಕೋರಿಕೆಯನ್ನು ಆಸೆ ಎಂದು ತಿಳಿಸಿದ್ದೇವೆ. ತನ್ನಲಿರುವ ವಸ್ತುವನ್ನು ಬಿಟ್ಟುಕೊಡದಿರುವ ವೃತ್ತಿಯೇ ಲೋಭ. ಹಣಕ್ಕಾಗಿಯೇ ಹಣ ಗಳಿಸುವ, ಹಣವನ್ನು ನೋಡುತ್ತ ಸುಖ ಪಡುವ ಧನ ಪಿಪಾಸೆಯೇ ಲೋಭ, ವಿತ್ತವನ್ನು ಓರ್ವನಿಗಿತ್ತು, ವಿತರಣ ಗುಣವನ್ನು ಮತ್ತೋರ್ವನಿಗಿತ್ತು ಬ್ರಹ್ಮನು ಚೇಷ್ಟೆ ಮಡುವಂತೆ ಕಾಣುತ್ತಿದೆ. ಲೋಭವು ಉಣಗೊಡುವುದಿಲ್ಲ. ಗೋದಲೆಯಲ್ಲಿಯ ನಾಯಿಯಂತೆ ಧನಿಕನು ಇರುತ್ತಾನೆ.

ಹಣ ಶೇಖರಿಸಿದ ಬಳಿಕ ಬಡವರಲ್ಲಿ ಹಂಚಿಕೊಂಡು ಉಣ್ಣ ಬೇಕಾದುದು ಧರ್ಮ ನೀತಿ. ಆದರೆ ಲೋಭಿ ಹಾಗೆ ಮಾಡನು. ಲೋಭಿ ಗೊಡ್ಡು ಹಸು ಇದ್ದಂತೆ ಆಡಿನ ಕೊರಳ ಮೊಲೆಯಿದ್ದಂತೆ, ಅವರನ್ನು ಕೇಳುವುದು ವ್ಯರ್ಥವಷ್ಟೆ. ಇನ್ನು ಧನವಂತನೊಬ್ಬನಲ್ಲಿ ದಾತ ಗುಣವಿದ್ದರೂ, ಅವನ ಬಳಿ ಹಣ ಕೊಡಿಸದ ಪಾಪಿಯು, ಕಲ್ಪವೃಕ್ಷದಡಿಯ ಮುಳ್ಳು ಕೊಂಪೆಯಂತಿರುತ್ತಾನೆ.

೭೬೩ ಕೇಳದರ್ಥವೀವ ತಾನೆ ಬ್ರಹ್ಮಜ್ಞಾನಿ
ಕೇಳಲರ್ಥವೀವ ಕಾಣು ತ್ಯಾಗಿ,
ಕೇಳಲೀಯದಾತ ಕಡು ಲೋಭಿ ತಾನಿಹ. ವಿಶ್ವ

೭೬೪ ತಾನು ತಿನ್ನಲಿಲ್ಲ, ಧರ್ಮ ಮಾಡಲಿಲ್ಲ,
ಸುತರಿಗಾಗಿ ಸೊತ್ತು ಶೇಖರಿಪರು,
ತಿಳಿಸಿ ಹೇಳದಿದ್ದು ತೀರಿ ಹೋಹರವರು, ವಿಶ್ವ

೭೬೫ ತೆಗೆದು ಮುಡಿಯಲಿಲ್ಲ; ತೊಟ್ಟು ಸುಖಿಸಲಿಲ್ಲ
ಬೋಧಕಲ್ಲ; ವಿದ್ಯೆ ಶೋಧಕಲ್ಲ
ಕೂಡಿ ಬಾಳದವನು ಕಳೇವರದಂತಿಹನು ವಿಶ್ವ

೭೬೬ ಸ್ವಂತ ಉಣ್ಣಲಾರ, ಸಂಪದಕಾಪ್ತರನು,
ಸೇರಿಸಿಕೊಳದವನು ಶುದ್ಧ ಪಶುವು;
ಬೆಳೆದ ಭೂಮಿಯಲ್ಲಿ ಬೆದರು ನಿಂತ ರೀತಿ ವಿಶ್ವ

೭೬೭ ಧನವ ಕೂಡಿ ಹಾಕಿ, ಧರ್ಮವಾಚರಿಸದೆ,
ಬಚ್ಚಿಡುವ, ತಿನ್ನದೆ ಬರಿದೆ ಹೋಯ್ತು,
ಜೇನು ಹುಳುವು ಕೂಡಿಸಿಟ್ಟು ಪರಗೀಯದೆ? ವಿಶ್ವ

೭೬೮ ಆಡು ಕತ್ತು ಹಿಡಿದು, ಅಪ್ಪಿಕೊಂಡು ಎದೆಗೆ,
ಹೀರಲು ಕೊರಳು ಮೊಲೆ ಹಸಿವಳಿವುದೇ?
ಲೋಭಿ ನರನ ಕೇಳೆ, ಲಾಭವೇನು ಉಂಟು? ವಿಶ್ವ

೭೬೯ ಒಟ್ಟು ತಾನು ಕೊಡನು ಎಷ್ಟು ಹೇಳಿದರೂ,
ಈಯಲಾರ ಭ್ರಮಿಸಿ ಇಳೆಯೊಳೆಂದು
ಹೊಟ್ಟು ತಿನುವ ಲೋಭಿ ಹೇಗೆ ಅನ್ನವಿಡುವ? ವಿಶ್ವ

೭೭೦ ಲೋಭ ಮೋಹದಿಂದ ಲಾಭ ಪ್ರಾಪ್ತಿ ಇರದು
ನೆನೆದ ಕಾರ್ಯವೆಲ್ಲ ನೆರವೇರವು
ತಾವೊಂದು ಬಗೆದರೆ, ದೈವದ ಬಗೆಯೊಂದು ವಿಶ್ವ

೭೭೧ ಶೇಖರಿಸಿದ ಧನಕೆ ಸತಿ ಸುತಾದಿ ಸಕಲ;
ಆಶೆ ಪಡುವರಷ್ಟೆ ಅದು ಭ್ರಮೆಯು!
ಭಾಗ್ಯ ಹೀನನಿರಲು ಫಲವು ಲಭ್ಯವೆಂತು? ವಿಶ್ವ

೭೭೨ ಮೊದಲು ಆಸೆ ಬೆಳೆಸಿ ತುದಿಗೆ ಇಲ್ಲವೆನಲು,
ಪರಮ ಲೋಭಿಯೇನು? ಪಾಪವದುವೆ
ಬೆಂದ ಉಸಿರು ಸೋಂಕಿ ಬಳಲಿ ನಶಿಸುತಿಹರು ವಿಶ್ವ

೭೭೩ ಕಂಡು ಕಾಣಲಾರ, ಕದಲಿಸಲಾರ ತುಟಿ;
ಆಲಿಸಾಲಿಸದಂತಿಹ ಅಚ್ಚರಿಯಿದು!
ಸಂಪದವಿರುವವನ ಸನ್ನಿಪಾತಕವಿದು! ವಿಶ್ವ

೭೭೪ ಗೊಡ್ಡು ಹಸು ಹಿಂಡಲು ಗಡಿಗೆ ದೂರ ಬಿದ್ದು,
ಹಲ್ಲು ಮುರಿಯೆ ಒದೆತ, ಹಾಲು ಇಲ್ಲ
ಲೋಭಿ ನರನ ಕೇಳೆ ಲಾಭವೇನು ಇಲ್ಲ ವಿಶ್ವ

೭೭೫ ನರಹರಿಯೆನೆ ಲೇಸು, ನಾರಾಯಣೆನೆ ಲೇಸು
ಮಿಗಿಲು ಒಳ್ಳಿತೆಂದು ಮೆಚ್ಚಬಹುದು
ಬಿಡಿಯ ಕವಡಿ ತೆಗೆದು ಒಡನೆ ನೀಡಲೊಲ್ಲ ವಿಶ್ವ

೭೭೬ ಧನವ ನೋಡುವವರು ಧನವ ಮೆಚ್ಚು ತಿಹರು;
ಧನದ ಮೇಲೆ ಮೋಹ ತಳೆಯುವವರು
ಧನವ ನೀಡುವವನ ದೊರೆಯೆಂದು ನೋಳ್ಪರು ವಿಶ್ವ

೭೭೭ ನೀಡುವಪ್ಪನ ಬಳಿ ನೀಡದಪ್ಪನಿರಲು,
ಮಡಿದ ಹೊರತು ಕೊಡುಗೆ ನಡೆಯಗೊಡನು;
ಕಲ್ಪ ವೃಕ್ಷದ ಅಡಿಯ ಕಲ್ಲು ಮುಳ್ಳಿನಂತೆ ವಿಶ್ವ

೭೭೮ ಹಸುವು ಅಲ್ಲ ನಾಯಿ; ಹುಲಿಯು ಅಲ್ಲ ಮೊಲವು;
ಅತಿ ದೊಡ್ಡ ಸೊಳ್ಳೆಯು ಆನೆಯಲ್ಲ
ಲೋಭಿ ದಾತನಲ್ಲ; ಲೋಕದೊಳೆಂದಿಗೂ ವಿಶ್ವ

---

# ಮೋಹ

ಮುಹ್ ಧಾತುವಿನಿಂದ ಮೋಹ ಶಬ್ದದ ಉತ್ಪತ್ತಿಯಾಗಿದೆ. ಮುಹ್ ಎಂದರೆ ಮುಚ್ಚು ಎಂದರ್ಥ. ನೈಜ ಅರಿವನ್ನು ಮುಚ್ಚಿ ಸತ್ಯವನ್ನು ಕಾಣದ ಹಾಗೆ ಮಾಡುವ ವೃತ್ತಿಯೇ ಮೋಹವೆನಿಸುತ್ತದೆ.

ಕ್ಷುದ್ರ ಮತ್ತು ಕ್ಷಣಿಕ ವಸ್ತುಗಳನ್ನು ಮೋಹಿಸಿದ ಮನವು ತನ್ನ ಮುಕ್ತಿಯ ಮಾರ್ಗವನ್ನು ಕಂಡುಕೊಳ್ಳಲಾರದು. ದಾರೇಷಣ, ಪುತ್ರೇಷಣ ಮತ್ತು ವಿತ್ತೇಷಣಗಳೆಂಬ ಈ ಷಣತ್ರಯಗಳಿಂದ ಮೋಹಿತನಾದ ನರನು ತನ್ನ ಮನದ ಬಿಡುಗಡೆ ಇಲ್ಲವೆ ಮುಕ್ತಿಯ ಮಾರ್ಗವನ್ನು ಕಂಡುಕೊಳ್ಳನು.

ತನ್ನ ಪ್ರಿಯತಮೆಯ ರೂಪ ಲಾವಣ್ಯಗಳನ್ನೂ, ಅವಳ ಆಕರ್ಷಕ ಮೊಲೆಗಳನ್ನೂ ಕಂಡು ಮೋಹಿಸಿ ಮೋಸ ಹೋಗುತ್ತಾನೆ. ಅವಳು ಕರೆದಳೆಂದರೆ ತೀರಿತು, ಅಗ್ನಿಗೆ ಅರಗು ಕರಗುವಂತೆ, ಇವನ ಹೆಪ್ಪುಗಟ್ಟಿದ ಕಾಮವು ಕರಗಿ ಹರಿಯುತ್ತದೆ. ನಾರಿಯನ್ನು ಬಯಸದವನು ಜಗದಲ್ಲಿ ಸಿಕ್ಕಬಹುದೇ? ಆದ್ದರಿಂದ ತನ್ನ ಅರಿವಿನ ಕಣ್ಣನ್ನು ಮುಚ್ಚಿದ ಕುಟಿಲ ಗುಣಗಳ ಪರದೆಯನ್ನು ಜಾಣನು ಹರಿದು, ಕಿಂಡಿ ಮಾಡಿಕೊಂಡು ಸತ್ಯವಾವುದೆಂಬುದನ್ನು ಅರಿಯುತ್ತಾನೆ.

ಮಕ್ಕಳು, ಮಡದಿ, ಅಣ್ಣ ತಮ್ಮಂದಿರು, ತಾಯಿ ತಂದೆಯಂದಿರು ತನ್ನ ಅರಿವಿನ ಕಣ್ಣು ಮುಚ್ಚಿದ ಮಾಯೆಯಂತೆ, ಹೀಗಾಗಿ, ಪರಸ್ಪರರನ್ನು ಅರಿಯಲು ಈ ಮಾಯೆ ಅನುವು ಈಯದು.

ಸಾಮಾನ್ಯರ ಮಾತೇನು? ಯೋಗಿಗಳೂ ಸಹ, ಅಧರ–ಸುಧೆಸವಿದು ಎಲ್ಲವನ್ನೂ ಮರೆಯುತ್ತಾರೆ. ತರುಣಿ ರೂಪ ಕಂಡು ತಾನು ಯೋಗಿ ಎಂಬುದನ್ನೇ ಮರೆಯುತ್ತಾನೆ. ಅವಳು ಮಾತನಾಡಿದರಂತೂ ಲೋಕವನ್ನೇ ಮರೆಯುತ್ತಾನೆ.

**೭೭೯ ಮೋಹವೆಂಬ ಬುದ್ಧಿ ಮೂಲವರಿತು ತಾನು,**
**ಮೋಹ ಪಟ್ಟು ಗುರು ಮುಖವ ನೋಡಿ,**
**ಮೋಹದಿಂದ ಮುಕ್ತಿ ಮುಂದೆ ನಿತ್ಯವಯ್ಯ! ವಿಶ್ವ**

**೭೮೦ ಅನ್ನಕಿನಿತು ಗತಿಗಾಣದೆ ಕುಳಿತ ನರನು,**
**ಕನ್ನೆ ಕಂಡು ಮೋಹದಿ ಸಿಲುಕುವವ!**
**ಧಗಿಸುವಗ್ನಿ ಕಂಡ, ಪತಂಗದಂತಯ್ಯ ವಿಶ್ವ**

— — — — — — — — — — — — — — — — — — — — — —

೭೮೧ ಸತಿಯು ಸುತರು ಎನಲು ಅತಿ ಮೋಹವಿರುವುದು,
ಧನದ ಮೇಲಿನಾಸೆ ತಗಲಿ ಇಹುದು
ಅಂಥ ನರರಿಗೆಲ್ಲ ಅವನಲಿ ಮುಕ್ತಿ ಸಿಗದು ವಿಶ್ವ

೭೮೨ ಇನಿಯಳ ಮೊಲೆ ಕಂಡು ಇಂತು ಅಂತು ನೋಡಿ,
ಮೋಹವಡರಿ ಬುದ್ಧಿ ಮೋಸ ಹೋಯ್ತು
ನಾರಿ ಬಯಸದವನು ನೋಡೆ ಸಿಗನು ಜಗದಿ ವಿಶ್ವ

೭೮೩ ಇನಿಯಳ ಕಂಡೊಡೆ ಇಷ್ಟು ಅಷ್ಟು ಏನು?
ಅಗ್ನಿಗರಗು ಕರಗುವಂಥ ರೀತಿ
ಬೆಳೆದ ಮೋಹವಿಂಥ ಬೆರಗುಗೊಳಿಸುತಿಹುದು ವಿಶ್ವ

೭೮೪ ಪಟುತ್ವವಿಹ ಬುದ್ಧಿ ಪರಕಿಸಿ ನೋಡುವುದು;
ಕುಟಿಲ ಗುಣಗಳೆಲ್ಲ ಕೆಳಗೆ ತುಳಿದು,
ಪಟುತರದಿಂ ಮೋಹ ಪಟಲ ಚುಚ್ಚಿ ಹರಿವ ವಿಶ್ವ

೭೮೫ ತನಯ ಮಡದಿ ಮಾಯೆ, ತಮ್ಮ ಅಣ್ಣ ಮಾಯೆ,
ತಾಯಿ ತಂದೆ ಮಾಯೆ, ತಾನು ಮಾಯೆ
ತಿಳಿಯಲೀಯದು ಮಾಯೆ ತನ್ನ ಮನೆ ಹಾಳಾಗ ವಿಶ್ವ

೭೮೬ ಆಸೆಯೆಂಬ ಲತೆಯ ನಾಶಗೊಳಿಸದನಕ,
ಮೋಹ ಜಲಧಿಯಲ್ಲಿ ಮುಳುಗುತಿಹರು
ಕಾಶಿ ವಾಸಿಯೇನು; ಕಾಣಲಾರ ಮೋಕ್ಷ,? ವಿಶ್ವ

●

## ಮದ–ಮತ್ಸರಾದಿ

ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಮನೋವೃತ್ತಿಗಳನ್ನು ವೈರಿಗಳೆಂದು ಕರೆಯುತ್ತಾರೆ. ಸಂಸ್ಕೃತದಲ್ಲಿ ಇವುಗಳಿಗೆ ಒಟ್ಟಾರೆ, ಅರಿಷಡ್ವರ್ಗಗಳೆಂದು ಹೆಸರು.

ಯೌವನ ಮದ, ಕುಲಮದ, ಅನ್ನಮದ ಇತ್ಯಾದಿ ಎಂಟು ವಿಧ. ಧನದ ಮದ, ರಾಜ್ಯ ಮದ, ವನಿತೆ ಮದ, ಇತ್ಯಾದಿ. ಬೇರೆಯವರ ಸೌಖ್ಯ ಕಂಡು

ಕರುಬುವುದು ಮತ್ಸರ. ಹೊಟ್ಟೆಕಿಚ್ಚು ಕೂಳಿನ ಮದವೂ ಮಾನವನ ಕೇಡಿಗೆ ಕಾರಣವಾಗುತ್ತದೆ. ಅತಿಯಾಗಿ ಸೇವಿಸಿದರೆ ಸಾವು. ಅನ್ನ ಜೀರ್ಣವಾಗದಿದ್ದರೆ, ನೋವು, ಸಾವು, ಅನ್ನಮದ ಹೆಚ್ಚಿದರೆ, ಅದರಿಂದ ಮಾನವನೇನೂ ಹೆಚ್ಚಿನವನಾಗನು.

ಪೂರ್ವದಲ್ಲಿ ನೀಡಿದ ಉಪದೇಶಾನುಸಾರ, ಮದವನ್ನು ತೊರೆಯದೆ ನಂತರ ಹಳಹಳಿಸಿದರೆ, ಮನಸ್ಸನ್ನು ನಿಲ್ಲಿಸಬಹುದೇ?

ಚಿಂತೆ ಮಾಡುವುದೆಂದರೆ ಮನವನ್ನು ಪಾಪಕೂಪದಲ್ಲಿ ಕೆಡವಿದಂತೆ, ಹೆಚ್ಚು ಚಿಂತೆಗಿಳಿದರೆ ಮನಸ್ಸು ಸಹ ಅಷ್ಟು ಕೀಳಾಗುವುದು. ಆದರೆ ಎಲ್ಲ ಭಾರವನ್ನು ಈಶ್ವರನ ಮೇಲೆ ಹಾಕಿರಿ.

**೭೮೭ ಅರಿಷಡ್ವರ್ಗಗಳಿಂದಲಿ,**
**ನರರೆಲ್ಲರು ಸಿಕ್ಕು, ಸೊಕ್ಕಿ ನಿಜವನು ಬಿಡದೇ,**
**ಸರಿಯುತಿಹರು ಜೀರ್ಣಿಸದೆ,**
**ಮರೆಯಾಗಿಹುದು ಬ್ರಹ್ಮವು ಎನುವರು, ವೇಮಾ**

**೭೮೮ ಅನ್ನ ಅಧಿಕವಾಗೆ ಅರಿಯೆ ಮೃತ್ಯು ನಿಜವು,**
**ಅನ್ನ ಜೀರ್ಣಿಸಿದರೆ ಆತ್ಮ ನೋವು**
**ಸಾವು; ಬದುಕಿಗೂಟ ಸಾಲದೇಕೆ ಸತತ? ವಿಶ್ವ**

**೭೮೯ ಮಾಯೆ ಜಗದ ಒಳಗೆ ಮಮಕಾರ ವೃತ್ತಿಯ**
**ಮಾಯೆ ತಗಲಿ ಮನಸು ಮಂಕು ಬಿಡದು**
**ಮದದ ಕೆಲಸದಿಂದ ಮಹಿಮನಾಗುವನೇ? ವಿಶ್ವ**

**೭೯೦ ಆಗ ನನ್ನ ಮಾತು ಅನುಸರಿಸದೆ ಇದ್ದು,**
**ಈಗ ಹಳಹಳಿಸಲು ಇಹುದು ಏನು?**
**ಮದವ ನಿಲಿಸುವತನಕ ಮನವ ನಿಲಿಸಬಹುದೆ? ವಿಶ್ವ**

**೭೯೧ ಎಷ್ಟುಕಷ್ಟವುಂಟೊ ಅಷ್ಟು ಪಾಪ ಚಿಂತೆ**
**ಚಿಂತೆಯಿಂದ ಬಹಳ ಕೀಳು ಮನಸು**
**ಚಿಂತೆಯಿಲ್ಲದಿಹುದೆ ಕೆಡದ ಸೊತ್ತು ನೋಡು ವಿಶ್ವ**

೭೯೨ ಮದವು ಮತ್ಸರಾದಿ ಮಮಕಾರವೆನ್ನುವ,
ವ್ಯಸನಗಳ ದಹಿಸಿ ವೇಗವಾಗಿ,
ಪರರಿಗುಪಕರಿಸಲು, ಪರ ನಂಬುವ ಯೋಗಿ ವಿಶ್ವ

೭೯೩ ಮದವು ಬಿರಿಯುವುದಕೆ ಮದ್ದು ಬೇರೆ ಉಂಟು;
ಮನಸು ಕಳಿಸಲೊಳಗೆ ಮೇಯ್ದು ಬಂತು;
ಮೇಯ್ದು ಬಂದ ಬಳಿಕ ಕತ್ತು ಹಿಡಿದೆಳೆವುದು ವಿಶ್ವ

೭೯೪ ಕಾನನವ ಹೊಕ್ಕು ತಿರುಗುತ, ಕೂಡಬೇಡ;
ಹೆಣಗಿ, ಮದ ಮತ್ಸರಾಳಿಯ ಹೂಳಿ ಬಿಟ್ಟು,
ಮೌನಿ ನಿಜ ಕೇಳಿಯನು ಸೇರೆ ಮಾನ್ಯನರಿಯೊ
ಧ್ಯಾನ–ಧಾರಣ ಯೋಗವನೆ ಬಾಳು ವೇಮ

೭೯೫ ಹೊಟ್ಟೆ ಕಿಚ್ಚಿನವನ ಹತ್ತಿರ ಮಾತಾಡೆ,
ದೊಡ್ಡ ಮರ್ಮಗಳನು ತಿಳಿಸೆ ಹೊಲ್ಲ
ಹೆಸರು, ಹಾದಿ ತಿಳಿಸೆ ಹರಡುವವು ಊರೆಲ್ಲ ವಿಶ್ವ

●

## ವಿವೇಕ

ಸಾಧನ ಚತುಷ್ಟಯಗಳಲ್ಲಿ ವಿವೇಕಕ್ಕೆ ಪ್ರಥಮ ಸ್ಥಾನವಿದೆ ಯಾವುದು ಒಳಿತು? ಯಾವುದು ಕೇಡು? ಯಾವುದು ಸ್ಥಿರ? ಯಾವುದು ಅಸ್ಥಿರ? ಯಾವುದು ಅವಶ್ಯಕ? ಯಾವುದು ಅನಾವಶ್ಯಕ? ಎಂಬುದನ್ನು ವಿಶ್ಲೇಷಿಸಿ ಗುರುತಿಸುವುದಕ್ಕೆ ವಿವೇಕವೆನ್ನುತ್ತಾರೆ.

ಸರಿಯಗಿ ವಿವೇಚನೆ ಮಾಡಿದ ಮೇಲೆ ಅನಾವಶ್ಯಕವಾದುದರಲ್ಲಿ ಅನಾಸಕ್ತಿ ತಾಳಿ, ವಿರಾಗ ಹೊಂದಿ ವೈರಾಗ್ಯ ತಾಳಬೇಕು. ವಿದ್ಯೆಯೆಂಬ ಅಡವಿಯನ್ನು ವಿವೇಕವೆಂಬ ಕೊಡಲಿಯಿಂದ ತರಿದು, ತಿಳಿವು ಎಂಬ ದೀಪ ಹಿಡಿದು ಮುಕ್ತಿ ಮಾರ್ಗ ತುಳಿಯಬೇಕು. ಮಾನವನು ಜೀವಿ ರಾಶಿಯಲ್ಲಿ ಪುನರಪಿ ಜನ್ಮ ತಳೆದು, ತಲೆ ಚಿಟ್ಟು ಹಿಡಿದರೂ ದೇಹವೇ ಸ್ಥಿರವೆಂದು ತಿರುಗಿದರೆ ನಗೆಪಾಟಲಾಗದೇ? ಸಾವಿಲ್ಲದ, ಕೇಡಿಲ್ಲದ ಆತ್ಮವನ್ನು ಗ್ರಹಿಸಿ ಅನುಸಂಧಾನ ಮಾಡಬೇಕು. ತನ್ನನ್ನು ಹಡೆದವರು ಸಾಯುವುದನ್ನು ಕಂಡ ಮೇಲಾದರೂ ದೇಹವನ್ನು ನಂಬಿ ನಡೆಯಬಾರದು. ಈ ಶರೀರವು ಮಣ್ಣಿನ ಗಡಿಗೆಯಂತೆ. ಒಂದು ದಿನ ಒಡೆದು

ಹೋಗುತ್ತದೆ. ಆತ್ಮವು ಮಾತ್ರ ಸ್ಥಿರವಾಗಿರುತ್ತದೆ. ಕಾಯವಿರುವಾಗಲೇ ಕಾಮಾದಿ ಮೆಟ್ಟಿ ಜ್ಞಾನಮಾರ್ಗ ಹಿಡಿಯಬೇಕು. ಕಾಯ ಬಿದ್ದ ಮೇಲೆ ಏನು ಸಾಧಿಸಬಹುದು? ಸಾಧನವಾದರೂ ಎಲ್ಲಿ?

ಕಾಲವು ಚಲಿಸುತ್ತದೆ. ಬಾಲ್ಯವು ಯೌವನದಲ್ಲಿ, ಯೌವನವು ಮುಪ್ಪಿನಲ್ಲಿ ಪರ್ಯವಸಾನ ಹೊಂದುತ್ತದೆ. ಕಾರಣ ಬೇಗನೆ ಸಾಧನ ಪಥದಲ್ಲಿ ಪದಾರ್ಪಣೆ ಮಾಡಬೇಕು. ತನಗೆ ಬೇಕಾದವರು, ಬಂಧು ಬಳಗದವರು ಎಂಬ ಮಮಕಾರ ಹೊಂದಿ ಬಾಳುವುದು ಲೇಸಲ್ಲ. ತನಗೆ ಬೇಕಾದವನೆಂದರೆ ತಾನೇ. ಕಾರಣ ತಾನು ಯೋಗ ಸಾಧನಕ್ಕಿಳಿದು ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು.

೭೯೬ ವಿವೇಕವೆನಲು ಕೇಳು; ವಿಚಿತ್ರ ಕೊಡಲಿಯಿಂದ,
ಅವಿದ್ಯೆಯೆಂಬ ಅಡವಿ ತರಿದು,
ತಿಳಿವು ಎಂಬ ಚೊಕ್ಕ ದೀಪ ಕೈಲಿ ಹಿಡಿದು,
ಮುಕ್ತಿ ಕಾಣಬಹುದು ಮುಂದೆ ವೇಮ

೭೯೭ ಬಾಲನು ತಾನಾಗಿರುತಿರೆ,
ಸಾಲದೆ ಯೌವನದಲಿ ಸಂಪದ ರೂಪಂಗಳ್
ಕಾಲ ಮುದಿತನವಿರುವಂಥ
ವೇಳೆಯಲಿ ತನ್ನ ಮನದಿ ಶಿವವರಿವ ವೇಮ

೭೯೮ ಪುರುಷನಿರಲಿ, ವನಿತೆಯಿರಲಿ;
ಸರಣಿಲಿ ವಿಶ್ವಾಸದಿ ಕೊನೆ ನಿರ್ಣಯಿಸಲ್
ನಿರುತದಿ ಯುಗಯುಗ ನಟಿಸುತ,
ಅರಿಯೈ ಈ ತೆರ ವಸ್ತುವ, ಸುಗುಣಾ! ವೇಮಾ

೭೯೯ ಜೀವ ರಾಶಿಯಲಿ ಜನಿಸಿ, ಮರಳಿ ಜನಿಸಿ,
ತಲೆಯ ಬಿಟ್ಟು ಹಿಡಿದು ತಿರಿಗಿ ತಿರಿಗಿ,
ತನುವು ಸತ್ಯವೆಂದು ತಿಳಿಯೆ ನಗಪಾಟಲು! ವಿಶ್ವ

೮೦೦ ಜನಿಸಿ ಸಾಯುವವರು, ಸಾಯದೆ ಇರುವೊಡೆ,
ಹಿಡಿಯದಲ್ಲ ಪೊಡವಿ ಹುಟ್ಟುವವರ
ಹೊಸತು ನೀರು ಬರಲು ಹಳೆಯದುಳಿಯುವುದೇ? ವಿಶ್ವ

೮೦೧ ಮಡಿಯುವವರು ಯಾರು? ಮಡಿಯದವರು ಯಾರು?
ಪಾಡು ಬಿಟ್ಟು ನೋಡೆ, ಬಟ್ಟಬಯಲು
ಜಲ ಘಟದೊಳಗೆ ಸಲೆ ಸೂರ್ಯನಿಪ್ಪ ರೀತಿ ವಿಶ್ವ

೮೦೨ ಹುಟ್ಟು ಮುಗ್ಧ; ತಿರುಗಿ ಹೋಗುವಿ ನೀ ಮುಗ್ದ:
ತೀರ ಮುಗ್ಧ; ತನ್ನ ತಿಳಿಯಲಾರ
ಉಳ್ಳ ಕಾಲ ಕೂಡ ಉಪಕಾರ ಗೆಯ್ಯನು ವಿಶ್ವ

೮೦೩ ಸಾಯುವವರು ಯಾರೊ? ಸಾಯದವರು ಯಾರೊ?
ಸತ್ತು ಬದುಕಿರುವ ಸುಜನರಾರೊ?
ನಿಶ್ಚಯಿಸಿ ಕಂಡುಕೊ; ನೋಡು ವಿವರವನು ವಿಶ್ವ

೮೦೪ ಬದುಕು ಅಸ್ಥಿರೆಂದು ಭಾವಿಸಲು ಆಗದ,
ಬಿರ್‍ರನೆ ಬಿಗಿಯುತಿಹ ಬೆಪ್ಪ ಜನರು
ಪ್ರಾಣಿಯೆಲ್ಲ ಯಮನ ಬಲಿಯ ಕುರಿಗಳಯ್ಯ! ವಿಶ್ವ

೮೦೫ ತನುವು ತೊರೆದು ತಾನು ತೆರಳುತಿರುವ ವೇಳೆ,
ತನ್ನ ಭಾರ್ಯೆ, ಸುತರು, ತಗಲಿದವರು,
ಒಬ್ಬರೂನು ಬರರು, ಉಸಿರು ಹೊರತು, ನೋಡು;
ತನ್ನ ಒಳಿತೆ ಜೊತೆಯು ತನಗೆ ವೇಮ. ವಿಶ್ವ

೮೦೬ ಇಹದೊಳಗೆ ಹುಟ್ಟಿ ಇಂಗಿತವನರಿಯದೆ,
ಜನರನರಿತು ನೋಡಿ, ಸ್ಥಾವರವ,
ಜಂಗಮವೆನ್ನುವುದು ಜಗದಿ ಪಾಪ ನೋಡು ವಿಶ್ವ

೮೦೭ ಎನಿತು ದಿನ ತಾನಿರುವನೋ?
ಎನಿತು ದಿನ ತಾ ಕಲಿವನೋ? ಅನಿತು ಮರೆವನ್ನೆ
ಕೊನೆಗೊಮ್ಮೆ ಹಿಂದೆ ಸರಿಯಲು,
ತನಗಿಹ ವಿದ್ಯೆಯು, ವ್ಯರ್ಥ ಮಹಿಯಲಿ ವೇಮಾ ವಿಶ್ವ

---

೮೦೮ ನೀರ ಮೇಲೆ ಗುಳ್ಳೆ ನಿಂತುಕೊಳ್ಳಬಹುದೆ?
ಅಲೆಯು ಬೇಗ ಬಂದು ಅಪ್ಪಳಿಪುದು;
ಬೀಳ್ವ ಘಟದ ಮೇಲೆ ಭ್ರಾಂತಿ ಪಡುವುದೇಕೆ? ವಿಶ್ವ

೮೦೯ ಅಸ್ಥಿರ ದೇಹವನು ಅರ್ಭಟಿಸುತ ಹೊಂದಿ,
ಸಕಲ ವಿಧಗಳಿಂದ ಸಾಕಿ ಸಲಹಿ,
ಅಗ್ನಿಗಿಡುವರಲ್ಲ; ಅಡವಿ ನರಿಗಿಡುವರು ವಿಶ್ವ

೮೧೦ ಉಸಿರು ಇರುವನಕ ಸಂಸಾರದಿ ಉಳಿದುಕೊಂಡು,
ಭೋಗಿಸುವ ಕಡೆ ಬಾರದೆ ಬಳಲಿ ಸಿಲುಕಿದ;
ಪಾಪೆಯೊಳು ಕಂಡು ಮೀರಿವುದೆ ಪಾಪವಲ!
ಅದರ ಹಾದಿಯನು ಅರಿತೊಡೆ ಆಯ್ತು ವೇಮಾ

೮೧೧ ಉಸಿರು ಇರದ ತಿದಿಯ ಊದಲಿನಿತಾದರು,
ಪಂಚ ಲೋಹವೆಲ್ಲ ಭಸ್ಮವಹವು
ದೊಡ್ಡವರುಸಿರಿದಾಗ, ದೊಡ್ಡ ಉರಿಯುಳದೆ? ವಿಶ್ವ

೮೧೨ ದೇಹವೆಂಬ ಮನೆಯ ದಿನದಿನಗೂಡಿಸುತ;
ಸಾರಿಸಿ ಸಲೆ ಮೆತ್ತಿ ಶೋಭೆಗೊಳಿಸಿ,
ಸಲಹದಿದ್ದು ಹೋಹ, ಚಡಪಡಿಸುತ ಜೀವ ವಿಶ್ವ

೮೧೩ ತನುವದಾರ ಸೊತ್ತು? ತನ್ನದೆಂದು ಸಲಹೆ,
ಧನವದಾರ ಸೊತ್ತು? ಧರೆಯೊಳಿಡಲು;
ಪ್ರಾಣವಾರ ಸೊತ್ತು? ಹೋಗದಂತಿರಿಸಲು? ವಿಶ್ವ

೮೧೪ ವತ್ತಿ ಚೀಲವದುವೆ ಉಪಯೋಗವೆ ಇಲ್ಲ
ಚೀಲಕಾಗಿ ಕೆಡುವ ಶೋಧ ಮಾಡಿ,
ಕತ್ತಿ ಮೇಲೆ ಸಾಮು ಕಡೆಗಾಣಿಸದೆ ಹೋಯ್ತು ವಿಶ್ವ

೮೧೫ ತನುವು ಅಸ್ಥಿರೆಂದು ಧನವು ಅಸ್ಥಿರೆಂದು,
ತಿಳಿಸುವವನು ತಾನು ತಳಿಯಲಾರ
ಹೇಳಬಹುದು;ಕಾರ್ಯಕಾರಿಗೊಳಿಸೆ ಕಷ್ಟ. ವಿಶ್ವ

೮೧೬ ತನುವ ಸ್ಥಿರವೆಂದು, ಧನವ ಸ್ಥಿರವೆಂದು,
ತಿಳಿಯ ಹೇಳಿ, ತಾನು ತಿಳಿಯಗಲಿತು,
ಪಾತ್ರನಾದ ಯೋಗಿ ಪರಮಾತ್ಮನು ಕಣಾ ವಿಶ್ವ

೮೧೭ ಯಾರು ಅರಿಯದಂತೆ ಯಾವ ಕಾಲ ಹೋಹ?
ಹೋಹ ಜೀವವಕಟ ಹೊಂದಿ ಬಿಟ್ಟು
ಅಷ್ಟು ಮಾತ್ರಕೂನು ಅಪಕೀರ್ತಿ ಕಾಣನು;
ಗೋಳು ಪಡುವ ನರನು ಮೂಳ ವೇಮ

೮೧೮ ಹೊಲಸಿನಲ್ಲಿ ಹುಟ್ಟಿ, ಹೊಲಸಿನಲ್ಲಿ ಬೆಳೆದು,
ಮಲಿನ ತನುವಿಗಿಷ್ಟು ಮೋಹವೇಕೆ?
ಹೊಲಸು ಅರಿಯುವವನು ಹೊಲಸಿನಲಿ ಹುಟ್ಟುವನೆ? ವಿಶ್ವ

೮೧೯ ಹುಟ್ಟಿ ದುಃಖದಲ್ಲಿ, ಹೊರಳಿ ದುಃಖದಲ್ಲಿ,
ಅಳಿವು ದುಃಖದಲ್ಲಿ ಅಡಿಗೆ ಬೀಳ್ವ
ಮನುಜ ದುಃಖದಂತೆ ಮತ್ತೆ ದುಃಖವಿಲ್ಲ ವಿಶ್ವ

೮೨೦ ಸಾಕು ಸಾಕಿಳೆಯಲಿ ಜನನ ಮರಣಗಳು;
ಮೇಲು ಅಲ್ಲ; ಮಾಯೆ ಮೆಲಕು ಹಾಕೆ,
ಬಾಳು; ಅಲಸದಿಳೆಯಲಿ ಭಕ್ತಿಯಿಂದ ಜಡಿದು ವಿಶ್ವ

೮೨೧ ಬೂಟಕವು ಹುಟ್ಟಿ ಸಾವುದು ಭೂಮಿಯಲ್ಲಿ,
ನಾಟಕವಾಯಿತು ಬದುಕೆಲ್ಲ ಗುಣಗಳಲ್ಲಿ;
ಗುರುತಿಸಿ ಜಾಗೆಯ, ಸೇರಿ, ಕಾಣಬೇಕು
ತೊರೆದು ಮಾತುಗಳ ಪರತತ್ವವ ತಿಳಿಯೊ ವೇಮ

೮೨೨ ತನ್ನ ಹಡೆದ ಅವರು, ತಾವು ಹಡೆದ ಅವರು,
ಸಾವುದೆಲ್ಲ ತಮಗೆ ಸಾಕ್ಷಿಯಲ್ತೆ?
ಬದುಕು ಸಕಲ ತಮಗೆ ಬ್ರಹ್ಮ ಸಂಕಲ್ಪ ವಿಶ್ವ

— — — — — — — — — — — — — — — — — — — — —

೮೨೩ ತಂದೆ ತಾಯಿಯೆನಲು ತನ್ನ ಜನ್ಮವೆಷ್ಟೊ?
ತಿರುಗಿ ತಿಳಿಯದಂಥ ದಿಕ್ಕು ಎಷ್ಟೊ?
ಸ್ಥಿರವನಸ್ಥಿರವನು ತಿಳಿಯನು ಅಜ್ಞಾನಿ ವಿಶ್ವ

೮೨೪ ಇಲ್ಲಿ ತಾಯ್ತಂದೆಯಣ್ಣ ತಮ್ಮರು ತಾತ ಬಂಧುಗಳೇತಕೋ?
ಇಲ್ಲ ಮರಳಿ ಜನ್ಮ; ಸದ್ಗುರು ಮರ್ಮ ಭಾವವ ಸೇರಿರೋ
ಹುಲ್ಲು ಕೂಡ ಬರದು ಹಿಂದೆ, ಪೊಡವಿ ದಾಟುವ ವೇಳೆಯೋಳ್;
ಸುಳ್ಳು ಭ್ರಾಂತಿಯ ಬಿಟ್ಟು ವೇಮನ ಕಾರಣಂಗಳ ಕಾಣಿರೊ

೮೨೫ ಧನವ, ಸತಿಯ, ಸುತರ ತಿಳಕೊಂಡು ಮೀರದೆ,
ಮಾಳ್ಪ ಕರ್ಮದಿಂದ ಮೋಸ ಹೋಹೆ
ಕಾಲ, ನೋಡಿ, ಆಗ ಕಡೆಯ ಮುಟ್ಟಗೋಡನು ವಿಶ್ವ

೮೨೬ ವಿಷಯಗಳಲಿ ಬಹಳ ಹೊರಳದೆ,
ವಿಷಯಗಳಿಗಂಟದೆ, ಮಹಾತ್ಮ ವಿಧದಿ ಧರೆಯೊಳ್,
ವಿಷ ಸಂಸಾರಗಳೆನ್ನುವ
ವಿಷಯಗಳೆಲ್ಲವನು ಗೆಲಲು ವೇಮನನರಿವನ್

೮೨೭ ಮಣ್ಣು ಗಡಿಗೆಯಂತೆ ಮಾಯಾ ಶರೀರವಿದು
ಸಾವುದೆಂದಾದರು ಸಾಯದಾತ್ಮ
ಘಟಗಳೆಷ್ಟೊ ಇರಲಿ, ಗಗನ ಒಂದಲ್ಲವೇ? ವಿಶ್ವ

೮೨೮ ತನುವು ತನ್ನ ಮನೆಯು, ತತ್ರ ಶತೃ ಮಿತ್ರ;
ತಿಳಿಯಲಾರದವನ ತಿಳಿವದೇಕೆ?
ತಿಳಿದು ಸರಿಗೊಳಿರಪುದೆ, ದಿವ್ಯಾಮೃತ ನೋಡು ವಿಶ್ವ

೮೨೯ ಮಾಯೆಯಲ್ಲಿ ಹುಟ್ಟಿ, ಮಾಯೆಯಲ್ಲಿ ಬೆಳೆದು,
ಮಾಯೆ ತಿಳಿಯದಿಪ್ಪ ಮನುಜರೇಕೆ?
ಮಾಯೆ ತಿಳಿಯುವವನು ಮಹಿಯ ಮೇಲೆ ಧನ್ಯ ವಿಶ್ವ

೮೩೦ ಕಾಯವಿಷ್ಟ ಕಾಲ ಕಾಮಾದಿ ಮೆಟ್ಟುತ,
ಹಿಡಿಯೆ ಜ್ಞಾನಮಾರ್ಗ, ಹೆಣಗಬೇಕು
ಬಿಟ್ಟು ನಡೆಯೆ ದೇಹ ಬಿದ್ದ ಬಳಿಕವೇನು? ವಿಶ್ವ

೮೩೧ ಈಜಲು ಬಲ್ಲಾತನಿರಲು,
ಈ ಜಗದಿ ಆಳ ಬಾವಿಲಿ ಬೀಳುತಿರುವನೇ?
ಈಜಲು ಕಲಿಸುವ ಯೋಗವು,
ಕೈ ಚಲಿಸದಿರಲು ಏನನು ಮಾಳ್ಪುದು? ವೇಮಾ

೮೩೨ ಈಜು ಬಾರದವನು ಏಳುವನು; ಮುಳುಗುವ;
ಪಾರು ಗಾಣ ನದಿಯ; ಬಾರದೀಸು
ಪರನು ಅಲ್ಲದವನು ಪರಲೋಕ ಹೊಂದುವನೆ? ವಿಶ್ವ

೮೩೩ ಕಾಲಗಳ ಮಹಿಮೆ ತಿಳಿಯದೆ,
ಕಾಲ ಸದಾ ನಿತ್ಯವೆನುತ ವರ್ತಿಪರಿಂತೇ
ಕಾಲವನಾರೂ ತಿಳಿಯರು;
ಕಾಲ ಸದಾ ಜಂಜಾಟವು, ಇಳೆಯಲಿ, ವೇಮಾ

೮೩೪ ನೀನು–ಇರುತಲಿಪ್ಪ ನೆಲವ ತಿಳಿಯುವವನು
ವಸುಧೆಯಲ್ಲಿ ಹೋಗಿ ವರ್ಜಿಸವನು
ಕಾಲ ಕದಲದಂತೆ, ಕೂಡುವನು ನಿನ್ನನೆ ವಿಶ್ವ

೮೩೫ ಮಾಡಿ ತಾಣ ಶುದ್ಧಿ, ಮನೆ ಕಟ್ಟುವರಲ್ತೆ
ಇರದೆ, ಬಿಸಿಲು ತಾಪ ಇರಲುಬಹುದು;
ಜನ್ಮ ಸ್ಥಿರವೆನ್ನುತ ಜಲದಲಿ ಮನೆ ಕಟ್ಟುವರೆ? ವಿಶ್ವ

೮೩೬ ಕಾಯವನ್ನು ಹೊಂದಿ, ಕಡೆಗೆ ಯೋಗಿಯಾದ
ಕಾಯಕಂಟಿದವನು ಘನನು ಅಲ್ಲ
ಕಾಯವನ್ನು ಮುಕ್ತಿ ಗತಿಗೆ ಒಯ್ಯಬೇಕು ವಿಶ್ವ

೮೩೭ ತಿಳಿವು ಹೊಂದಿದಂಥ ಸ್ಥಿರವನು ತಿಳಿಯದೆ,
ತಿರುಗುವಸ್ಥಿರನಾಗಿ ದೇಹಿ ಜಗದಿ
ತಿರುಗುವುದೇಕೆಂದು ತಿಳಿಯನು ಅಜ್ಞಾನಿ ವಿಶ್ವ

೮೩೮ ಕದಲದ ಜೀವಿಗಳೊಳಗೇ
ತುದಿ ಮೊದಲಾಗಿಹ ಆರು ರುಚಿ ತೊಲಗದೆ ಇರಲ್,
ಕದಲಿಸಜೀವಿಗಳೊಳಗೆ ವ–
ಸುಧೆಯಲಿ, ಕಷ್ಟ ಸುಖಂಗಳು, ತಪ್ಪುವು ವೇಮಾ

೮೩೯ ಸಾಮು ಗೆಯ್ದ ಜಟ್ಟಿ, ಸಾಹಸಿಯಾಗಿರುವ;
ಸಾಮು ಗೆಯ್ಯದಿರಲು ಸರಣಿಗಾಣ;
ಸಾಮು ಗೆಯ್ಯುವವನು ಸಾಯದೆ ಇರುವನೇ? ವಿಶ್ವ

೮೪೦ ನಿತ್ಯವು ಅಲ್ಲವು ಒಡಲಿಗೆ
ನಿತ್ಯವು ದುಃಖದಿ ಬೀಳುವ ನಿರುತವು ಧರೆಯೊಳ್,
ನಿತ್ಯಾನಂದದ ಪದವಿಗೆ
ನಿತ್ಯದಲಿ ದುಃಖವನು ಪಡಬಾರದು ವೇಮಾ

೮೪೧ ಎಣ್ಣೆ ಸುರಿಯೆ ದೀಪ ನುಣ್ಣಗೆ ಬೆಳಗುವುದು
ಎಣ್ಣೆ ತೀರೆ ದೀಪ ಇಂಗುತಿಹುದು
ತನುವು ತೀರಿದಾಗ, ಹರಕೆ ಹಿಂಗುತಿಹುದು ವಿಶ್ವ

೮೪೨ ಸುಖಗಳೆಲ್ಲವನ್ನು ಸುಳ್ಳೆಂದು ಹೇಸುತ;
ನಡೆಯುತಿರಲುಬೇಕು ನೇಸರಂತೆ;
ತಿರುಗಿ ಅರಿತು ನೋಡೆ, ಧೀರನಾಗುತಿಹನು ವಿಶ್ವ

೮೪೩ ಇದುವೆ ಪರಮವೆಂದು ಇಷ್ಟು ತೋಚೆ ಸಾಕು;
ಮನಸು ಚೆದರುವ ಕೋರಿಕೆ ಮೆಟ್ಟಿ ಹಾಕಿ,
ಸುಧೆಯ ಕುಡಿಯುವವನು ಸುತ್ತಿ ಸಾಯುತಿಹನು? ವಿಶ್ವ

೮೪೪ ಚುರುಕು ಆದ ಬುದ್ಧಿ ಪರಿಕಿಸಿ ಒಳನೂಕಿ,
ಕುಟಿಲ ಗುಣಗಳೆಲ್ಲ ಕೊಚ್ಚಿ ಹಾಕಿ,
ಪಟುತರವಹ ಮೋಹ ಪಟಲವ ತೆಗೆದು ಒಗೆ ವಿಶ್ವ

೮೪೫ ಬೇಕಾದವರೆಂದು, ಬಳಗ ಆಪ್ತರೆಂದು
ಬಂಧುವೆಂದು ನಂಬೆ, ಬೇರೆಯಲ್ಲ;
ತನಗೆ ಬೇಕಾದವ ತಾನೊಬ್ಬನಷ್ಟೆ ವಿಶ್ವ

೮೪೬ ಶತ್ರು ವರರನರಸಿ ಸರ್ರನೆ ಖಂಡಿಸುತ,
ಮಿತ್ರ ವರ್ಗಗಳಿಗೆ ಮೇಲು ಗೆಯ್ದು,
ಬಹಳ ಬೆಳಕು ಕಂಡು, ಪಿಂಡ ಮಧ್ಯದಲ್ಲಿ,
ಅರ್ಥಿ ನಿಲಿಸುವವನು ಹರನು ವೇಮ

೮೪೭ ಮಿಥ್ಯವಿದ್ಯೆಯಿಂದ ಮೋಕ್ಷ ದೊರಕಬಹುದೆ?
ಕೂಡದ ಕರ್ಮಗಳ ಮಾಡಬೇಡ.
ಗುರುವು ಅಲ್ಲವವನು, ಗುಣ ಹೀನನು ಕೇಳು ವಿಶ್ವ

೮೪೮ ತನ್ನನು ಜನರೇನೆನುವರೊ?
ಎನ್ನುತ ಕರ್ಮಕಿಳಿಯಲಾ ಹೊಂದಿಕೆ ಕೆಡದೇ?
ತಾ ನಡೆಯೆ ಮರಳದ ಪಥದಿ,
ತಾನೇ ಧರ್ಮಾತ್ಮನೆಂದು,ತನ್ನನೆ, ವೇಮಾ

೮೪೯ ಬದುಕು ಎಲ್ಲ ಮಾಯೆ; ಭವ ಬಂಧವು ಮಾಯೆ;
ತಿಳಿವು ಮಾಯೆ, ತನ್ನ ತಿಳಿಯದಿಹುದು
ಮಾಯೆ ತಿಳಿಯುವವನು ಮರ್ಮಜ್ಞನಹ ಯೋಗಿ ವಿಶ್ವ

೮೫೦ ಜಾಣರೆಂದು ಕೊಳುವ ಚಪಲಾತ್ಮರಿಗೆಲ್ಲ
ತಿಳಿವುಇಲ್ಲ, ತಮ್ಮ ತಿಳಿಯರಲ್ಲ!
ಕಷ್ಟದಿ ಅಡವಿಯಲಿ ಗಾಸಿ ಪಡುತಲಿಹರು ವಿಶ್ವ

---

೮೫೧ ತನ್ನ ಕಷ್ಟ ತಿಳಿದು, ತಪ್ಪಿಸಲೆಳಸುತಿಹ,
ಎಂಥ ಮನುಜನಿರಲಿ; ಎಂತೊ ಇರಲಿ;
ನರಕ ಬಾಧೆ ಕೇಳಿ ನೆರೆಗಾಣ ಧರ್ಮವ ವಿಶ್ವ

೮೫೨ ಮುಕ್ತರಿಗೇಕೆ ಕೊಡದಿಹರು ಮೂಢ ಜನರು?
ಹತ್ತಿ ಮೂಟೆಯು ಸಾಕಷ್ಟು ಹಿರಿಯ ಹೊಟ್ಟೆ,
ಸತ್ಯವೆನುತ್ತ ತುಂಬುತಿಹ ನಿತ್ಯವಾಗಿ
ಕೂಳು–ಹೊಟ್ಟೆಯುದ್ಧರಿಪುದೆ? ತನ್ನ ಕಡೆಗೆ ವೇಮ

೮೫೩ ಮೊದಲಿನವನು ಜ್ಞಾನ ಮುದ್ರಾಂಕಿತನೆ ಹೊರತು
ಆ ವಿಧವ ತಿಳಿಯದಿರೆ ಅಜ್ಞಾನಹನು
ನಡುವೆ ಜ್ಞಾನಕಿಳಿಯೆ ನಗೆಪಾಟಲಾಗದೆ? ವಿಶ್ವ

೮೫೪ ಸುಖವನೆಲ್ಲ ತಿಳಿದು, ಸಮೀಕ್ಷಿಸಲು ದುಃಖ,
ಪುಣ್ಯಗಳಿಗೆ, ಪಾಪ ಪೂರ್ವವಿಹದು
ಕೊರತೆಯೆಲ್ಲ ಕಳ್ಳ ಕೋರಿಕೆ ಇರುವ ರೀತಿ ವಿಶ್ವ

೮೫೫ ನರ ಕುಲದಲಿ ತಾ ಹುಟ್ಟಿಯು,
ನರ ಕುಲದಲಿ ತಾ ಬೆಳೆದು ನರನಾದ ತಾನೇ
ನರ ಕುಲದಲಿ ಛೀ ಛೀಯೆನೆ,
ಹರಕುಲದಲಿ ತಿರುಗಲಾಗ ಹರನಹ ವೇಮಾ

೮೫೬ ನಿತ್ಯವಿರದೀ ಒಡಲಿಂಗೆ,
ನಿತ್ಯವು ದುಃಖ ಪಡುತಿರುವರು, ನಿರುತ ಧರೆಯೋಳ್
ನಿತ್ಯಾನಂದದ ಪದವಿಗೆ
ನಿತ್ಯವು ದುಃಖ ಪಡದಿರಲು, ಅರಿಯೈ ವೇಮಾ

೮೫೭ ಯೌವನವೆನ್ನಲು ಏನೋ?
ಯೌವನ ಕೌಮಾರ್ಯವೆನಲಾವಸ್ಥೆ ಎಂತೋ?
ಆವಸ್ಥೆಯು ವಾರ್ಧಿಕ್ಯದಿ
ಭಾವಿಸಿ ಮನದಲಿ, ಚಿಂತಿಸು ತಪ್ಪದೆ ವೇಮಾ

— — — — — — — — — — — — — — — — — — — — — —

೮೫೮ ಬರೀ ತಿದಿಯೆ ದೇಹ; ಉಪಯೋಗವೆ ಇಲ್ಲ,
ತಿದಿಗಾಗಿ ಕೆಡುವನು ತೊಂದರೆಯದು
ಕತ್ತಿ ಮೇಲೆ ಸಾಮು ಗುರಿ ಮುಟ್ಟಿಸದಷ್ಟೆ ವಿಶ್ವ

೮೫೯ ಜಗವರಿಯೆ ಇಂದ್ರಜಾಲವು,
ಜಗವೆನಲಾ ಮಾಯೆ ಕಾಣು ಜನ್ಮಾದಿಗಳೈ:
ಭಗವಂತನಾದ ಬ್ರಹ್ಮನು,
ನಿಗಮಾಗಮ ನಿರ್ವಿಕಾರ ನಿಪುಣನು ವೇಮಾ!

೮೬೦ ಅಡವಿ ತಿರುಗಲಿಲ್ಲ; ಆಗಸದೊಳಗೆ ಇಲ್ಲ;
ಅವನಿಗಿ ತೀರ್ಥಯಾತ್ರೆಯಲ್ಲಿ ಇಲ್ಲ
ಒಡಲು ಶುದ್ಧಿ ಗೆಯ್ದು ಒಡೆಯನನ್ನು ನೋಡು ವಿಶ್ವ

೮೬೧ ಪಡೆದ ಮುನ್ನಿನ ತಮ್ಮ ಬಾಳ ಪಥವರಿಯದೆ,
ಸಕಲ ಸಂಪದಗಳು ಸತ್ಯವೆನುತ,
ಜಲವ ಬಿಟ್ಟ ಮೀನಿನ ಚಂದವೇರ್ಪಡಲು ತುದಿ
ಗತಿಯು ಬೇರೆಯಿರದೆ ಘಟಿಸಿತು ವೇಮ

೮೬೨ ಬಿಸಿಲು–ನೆರಳು ಬಾಳುವವನು ತಿಳಿದು,
ಇರುವನೆಲ್ಲ ಕಾಲ ಒಂದೆ ತಾಣ;
ತಿಂಡಿ ಬಯಸಿ ಯೋಗಿ ತಿರುಗುತಿರುವನಲ್ಲ? ವಿಶ್ವ

೮೬೩ ಕದಲದಂತೆ ಇದ್ದು, ಗಟ್ಟಿಯಾಗಿ ಅಂಗ
ಕಟ್ಟಿಹಾಕಲೇನು ಘನತೆಯಿಹುದು?
ಭಾವದಲ್ಲಿ ಶಿವನ ಭಾವಿಸಿ ಕಾಣರೇ? ವಿಶ್ವ

●

## ವೈರಾಗ್ಯ

ಸಾಧನ ಚತುಷ್ಟಯಗಳಲ್ಲಿ ವಿವೇಕ, ವೈರಾಗ್ಯ, ಷಟ್ಕಸಂಪತ್ತಿ ಮತ್ತು ಮುಮುಕ್ಷುತ್ವಗಳನ್ನು ಸೇರಿಸಲಾಗಿದೆ. ಇವುಗಳಲ್ಲಿ ವೈರಾಗ್ಯವು ತುಂಬಾ ಮಹತ್ವದ್ದಾಗಿದೆ. ರಂಜ್ ಎಂದರೆ ಬಣ್ಣ ಬಳೆ, ಎಂದರ್ಥ. ರಂಜ್ ರಾಗ, ವಿರಾಗದಿಂದ ವೈರಾಗ್ಯ ಅರ್ಥಾತ್ ರಾಗವಿಹೀನವಾದುದು.

— — — — — — — — — — — — — — — — — — — — — —

ವೈರಾಗ್ಯವೆಂದರೆ ಊರು ಕೇರಿ ಬಿಟ್ಟು ಅಡವಿ ಸೇರುವುದೆಂದೇನೂ ಅಲ್ಲ. ಮನೆ ಮಾರು ತೊರೆಯುವುದೂ ಅಲ್ಲ. ಆದರೆ ಊರು ಅಡವಿಗಳನ್ನು ಸಮನಾಗಿ ಕಾಣುವುದು. ಅನಿಷ್ಟ ಬುದ್ಧಿಯನ್ನು ತ್ಯಜಿಸಿ, ಭೋಗಕ್ಕಂಟದೆ ಯೋಗಿಯಾಗಬೇಕು. ಇದನ್ನು ಬಿಟ್ಟು ಯೋಗಿಗೆ ಬೇರಾವ ಕೋಡುಗಳಿರುವುದಿಲ್ಲ. ಯೋಗಿ ಸಂಸಾರದಲ್ಲಿದ್ದರೂ ಅದರ ಲೇಪವು ಹತ್ತದಂತಿರುತ್ತಾನೆ. ಸತಿ, ಸುತ, ಬಂಧು ಬಾಂಧವರ ಮಮತೆಯ ಮಾಯೆಗೆ ಸಿಲುಕದೆ ಮನ ಚದರದಂತೆ ಇರುವವನೇ ಯೋಗಿಯು. ಆದರೆ ಜನರು ಪರಮ ಯೋಗೀಶ್ವರನನ್ನು ಕಂಡು ಹೊಗಳದೆ, ತೆಗಳುವುದೊಂದು ವಿಚಿತ್ರ!

ತಿಳಿದು ನೋಡಿದರೆ ಮುಕ್ತಿ ಮಾರ್ಗದಲ್ಲಿ ಮುನ್ನಡೆಯುವವನಿಗೆ ಸತಿ ನನ್ನವಳು, ಸುತರು ನನ್ನವರು ಎನ್ನುವ ಮಮಕಾರ ಅಡರಿದರೆ ಅವರು ಕೆಡುತ್ತಾರೆ. ಸತಿಯು ಭಾರದ ಸಂಕೋಲೆಯೆನಿಸುತ್ತಾಳೆ. ಸುತರು ತನ್ನನ್ನು ಸಂಸಾರಕ್ಕೆ ಬಂಧಿಸಿ ಜಡಿದ ಮೊಳೆಗಳಂತಿರುತ್ತಾರೆ.

ಸಂಸಾರದ ಮೋಹ ಸುಳ್ಳು, ಸತಿಯ ಮಮತೆ ಸುಳ್ಳು; ತಾಯಿ ತಂದೆಯಂದಿರ ವಾತ್ಸಲ್ಯವೂ ಸುಳ್ಳು, ಪಂಚಾಕ್ಷರಿ ಮಂತ್ರವೊಂದೇ ನಿಜವಾದ ತಾಯಿ.

ಮಲವು ತುಂಬಿದ ತೊಗಲಿನ ತಡಿಕೆಯ ಮೇಲೆ ಏಕಿಷ್ಟು ವ್ಯಾಮೋಹ? ಒಣ ದೇಹಾಭಿಮಾನ ಸಲ್ಲದು. ಈ ದೇಹವಾದರೂ ಯಾರ ಸೊತ್ತು? ಆ ಹರನದಲ್ಲವೆ? ಆದ್ದರಿಂದ ಹರನನ್ನೇ ನೆನೆಯುತ್ತ ವಿರಾಗಿಯಾಗಿ ಬಾಳಬೇಕು.

**೮೬೪ ಛಾಯೆ ಯಾವ ಮರವು ಸಾಧುಗಳ ಬೋಧೆ ತೆರ.**
**ವಿನಯದಿ ಬಳಿ ಸೇರಿ ವರಿಸಬಹುದು**
**ಅತ್ತ ಇತ್ತ ಅಲೆಯೆ ಅದು ಹೋಹುದಿದಿಲ್ಲ. ವಿಶ್ವ**

**೮೬೫ ಊರು ಸೇರಿಕೊಂಡು ಉಬ್ಬಿ ಸಂತಸಬಡುವ;**
**ಅಡವಿಯಲ್ಲಿ ಮಾತ್ರ ಅಳಲುಬಡುವ**
**ಊರು ಅಡವಿಯೆರಡು ಒಂದೆಯಾಗಿ ನೋಳ್ಪ,**
**ಅರಿತ ನಿಪುಣ ಯೋಗಿ ಆತ, ವೇಮ**

**೮೬೬ ಊರಿನೊಳಗೆ ಹುಟ್ಟಿ, ಊರಿನೊಳಗೆ ಬೆಳೆದು,**
**ಊರಿನೊಳಗೆ ಜ್ಞಾನವಂತನಾಗಿ,**
**ಊರು ತೊರೆದು ಬಿಟ್ಟು ಅಡವಿ ಸೇರುವುದೇಕೆ? ವಿಶ್ವ**

೮೬೭ ಆಗಬೇಕು ಯೋಗಿ ಅನಿಷ್ಟ ಮತಿ ತೊರೆದು,
ಭೋಗಕಂಟಿ ಯುಕ್ತಿ ಬಳಸಬೇಡ
ಸದ್ಗುಣವೆ ಮೊದಲು ಚೆನ್ನಾಗಿ ನೋಡಿರಿ ವಿಶ್ವ

೬೮೬ ಹೃದಯವು ಸುಸ್ಥಿರವಾಗಿರೆ,
ಅದು ಸರಿ; ಸನ್ಯಾಸಿಗಳಿಗೆ ಕೊಂಬುಗಳಿಹವೇ?
ಇದನರಿಯದೆ ಓದಲರಿಯೆ,
ಮೇದಿನಿಯಲಿ ಮುಕ್ತಿಗಿಂಬು ಇರುವುದೆ ವೇಮಾ?

೮೬೯ ಹಂಸ ಮಾನಸ ಜಲ ಹತ್ತದಂತೆ ಚಲನೆ,
ಆವ ಕರ್ಮಚಯವು ಅಂಟದಂತೆ
ಯೋಗಿ ಅಲೆವ ಸಕಲ ಭೋಗವೆದುರಿಗಿರಲು, ವಿಶ್ವ

೮೭೦ ಹೊಳೆಯ ದಾಟಿ, ಆಚೆ ಹೋದ ಪುರುಷವರನು
ನಾವ ಗರತಿಯೆಣಿಸದೆ ನಡೆದ ರೀತಿ
ಯೋಗ ಪುರುಷಗೇಕೆ ಒಡಲ ರಕ್ಷಿಪ ಭಾರ? ವಿಶ್ವ

೮೭೧ ಹುಣಸೆ ಹಣ್ಣ ರೀತಿ, ಹೊಂದಿ ಹೊಂದದಿಹದಿ,
ಸನ್ಯಾಸಿ ಯೋಗವನು ಸಲುಹಬೇಕು
ಸಂಸಾರಿಯಿಂತಿರಲು ಸಂನ್ಯಾಸಿಗಿಂದಧಿಕ ವಿಶ್ವ

೮೭೨ ತನ್ಮಯತ್ವವನು ತಾನರಿಯದ ನರನು
ಸೇವೆ ಗೊಯ್ದೊಡೆ ಏನು ಉಂಟು?
ತಮ್ಮ ಕುಂದನರಿಯದೆ ತಾನೋದಲು ಬಹಳ,
ಓದಿನ ಫಲವೇನು? ಒಪ್ಪವಾಗಿ

೮೭೩ ಅತುಲ ವೈರಾಗ್ಯ ಬೋಧನೆಗೆ ಅಂಟಿ ಅರಿತು,
ಸತಿಯ ಮಮತೆಗೆ ಸಿಗದೆ ಸತ್ಯ ತಿಳಿದು,
ಮತಿಯು ಚೆದರದೆ ಹರಿಯುವ ಮಾನ್ಯ ರೀತಿ
ಇದುವೆ ಕುದುರಿದವ ಸಜ್ಜನನು ಇಳೆಯಲಿ ವೇಮ

೮೭೪ ಅರಿವು ಉಳ್ಳ ಅವನು ಇರದೆ ಊರು ಹಿಡಿದು,
ತಿರುಗಲೇಕೆ? ತನಗೆ ದಿವ್ಯವಿರಲು,
ಹಣ್ಣು ಹಣ್ಣಾಗಲು ಭಕ್ಷಿಸದೆ ಇರುವನೆ? ವಿಶ್ವ

೮೭೫ ಉರ್ವಿ ಜನರು ಪರಮ ಯೋಗೀಶ್ವರನ ಕಂಡು,
ತೆಗಳುತಿಹರೆ ಹೊರತು ತಿಳಿಯುತಿಲ್ಲ;
ಅಮೃತ ರುಚಿಯನೆಂತು ಹಸ್ತವರಿಯಬಹುದು? ವಿಶ್ವ

೮೭೬ ಭಾರ್ಯೆ ತನ್ನ ಪಾಲಿಗೆ ಭಾರದ ಸಂಕೋಲೆ
ಚಿಕ್ಕ ಚಿಕ್ಕ ಶಿಶುವು ಚುಚ್ಚು ಮೊಳೆಯು;
ಸೆರೆಮನೆಯಾಗುವುದು ಸಂಸಾರ ಅರಿತೊಡೆ ವಿಶ್ವ

೮೭೭ ತಿಳಿಯೆ, ತನ್ನ ಭಾರ್ಯೆ ತೆಗೆಯದ ಸಂಕೋಲೆ
ಸಣ್ಣ ಶಿಶುಗಳೆಲ್ಲ ಜಡಿದ ಮೊಳೆಯು;
ಅರಸಿ ನೋಡೆ, ತನುವೆ ಅಲ್ಲಿ ಜೈಲುಖಾನೆ ವಿಶ್ವ

೮೭೮ ಮಾಯೆಯೇ ಸೆರೆಮನೆ, ಮನಸು ಯೋಚಿಸಿದಾಗ,
ಭಾರಿ ಸರಪಳಿಗಳು ಭೇದವೆಲ್ಲ
ಇಂಥ ಬದ್ಧ ನರಗೆ ಎಂತು ಮೋಕ್ಷವುಂಟು? ವಿಶ್ವ

೮೭೯ ಕಾಲ ಸಂಕೋಲೆಯು ಕಾಣು ತನ್ನ ಭಾರ್ಯೆ;
ಕೈಗೆ ಬಿಗಿಯ ಕಟ್ಟು ಕುವರರೆಲ್ಲ,
ಸರಿಯಾಯ್ತು ಸೆರೆಮನೆ ಸಂಸಾರ ಕೂಪವದು! ವಿಶ್ವ

೮೮೦ ಸತಿಯು ಕೈಯ ಬೇಡಿ, ಸುತರು ಸಂಕೋಲೆಯು,
ಬಂಧು ವರ್ಗವೆಲ್ಲ ಪ್ರಹರ ಗೋಡೆ
ಮೋಹವರಿಯದಾತ ಮತ್ತೆ ಧೀರನಾಗ, ವಿಶ್ವ

೮೮೧ ಸತಿಯರ ಮಾಯೆ ಕಂಡು, ಸಾಕಾಯ್ತು, ಭೈರವಗೆ,
ಮಹಾ ಹೊಟ್ಟೆಯವನು ಮದುವೆ ಬಿಟ್ಟ
ಚಡ್ಡಿ ಬಿಗಿ ಕಟ್ಟಿದ, ಜಗದಿ ಆಂಜನೇಯ ವಿಶ್ವ

೮೮೨ ಸತಿಯು, ಸುತರು ಮಾಯೆ, ಸಂಸಾರಗಳು ಮಾಯೆ,
ಧನವು, ತನವು, ಮಾಯೆ, ತಿಳಿವುಮಾಯೆ;
ಮಾಯೆ ಬದುಕು ಎನದೆ, ಮಮತೆ ಕಲ್ಪಿಸುವರು ವಿಶ್ವ

೮೮೩ ಮಡದಿ ಮಕ್ಕಳು ಮತ್ತೆ ಮೆರೆವ ಬಂಧು ಬಳಗ,
ಸೊತ್ತು ತನುಗಳಾ ಜಾಲ ನಂಬಿ,
ಸಂತಸಿಸುತ ಇಹರು; ಕ್ಷಣ ಭಂಗುರವೆಲ್ಲ;
ತಿಳಿಯಲಾರನೇಕೆ? ತಿಳಿಸು ವೇಮ

೮೮೪ ಸತಿಯು ಸುತರು ಮಾಯೆ, ಸಂಸಾರಗಳು ಮಾಯೆ;
ಧನವು ಘನವು ಮಾಯೆ, ತನುವು ಮಾಯೆ,
ಮಾಯೆ ಗೆಲ್ಲುವವನು ಮರ್ಮಜ್ಞನಹ ಯೋಗಿ ವಿಶ್ವ

೮೮೫ ಸುತರು ಸತಿಯು ಮಾಯೆ; ಸುಖ ದುಃಖವು ಮಾಯೆ;
ಸಂಸಾರವು ಮಾಯೆ, ಸಾವು ಮಾಯೆ;
ಮಾಯೆ ಬದುಕು, ಇಷ್ಟುಮಾಯೆ ಹುಟ್ಟಿಸಿತಲ್ಲ! ವಿಶ್ವ

೮೮೬ ತನಯ ಮಡದಿ ಮಾಯೆ; ತಮ್ಮ ಅಣ್ಣ ಮಾಯೆ;
ತಾಯಿ; ತಂದೆ ಮಾಯೆ; ತಾನು ಮಾಯೆ
ಅರಿಯಗೊಡದು ಮಾಯೆ; ಅದರ ಮನೆ ಹಾಳಾಗ! ವಿಶ್ವ

೮೮೭ ಮಡದಿ ಮಕ್ಕಳೆನುತ ಮೋಹವತಿಯಾಗಿರೆ,
ಧನದ ಮೇಲ ಆಸೆ ತಗಲಿ ಇರಲು,
ಅಂಥ ಜನಕೆ ಮುಕ್ತಿ ಅವನಿಯಲ್ಲಿ ಇಲ್ಲ ವಿಶ್ವ

೮೮೮ ಇಲ್ಲಕಣಾ ಸಂಸಾರವು,
ಇಲ್ಲ ಕಣಾ ಆಯುಧಗಳು ಸಾಕೆನಿಸುವವೋಲ್
ನಲ್ವ ಜನನಿ ಪಂಚಾಕ್ಷರಿ,
ಸುಳ್ಳು ಕಣಾ ಸತಿಯ ಮಮತೆ ಸಲೆಯರಿ ವೇಮಾ

— — — — — — — — — — — — — — — — — — — — — —

೮೮೯ ಮಾಯೆ ನರಕವೆಂದು ಮಾಯೆ ತೊರೆವುದೆ ಸರಿ
ಸಮ ಕಾಣದೆ ದೇವ ಸಭೆಗಳಲ್ಲಿ,
ಸರುವರು ಘನರಿರಲು ಹರನಿಗೆಲ್ಲಿ ಸ್ಥಾನ? ವಿಶ್ವ

೮೯೦ ಮಾಯೆಯ ಸಂಸಾರಗಳಲಿ,
ಮಾಯೆಗಳೊಳಗೇ ತಿರಗುವ ಮನುಜರು ವಶರೈ
ಮಾಯೆಯನರಿತಾ ಬಳಿಕವೆ
ಮಾಯೆಗಳಮುಕ್ತಿಯುಮಹಿಯೊಳಗುಂಟು ವೇಮಾ

೮೯೧ ಮಾಯೆ ತೋಕದಿರುವ ಮರ್ಮವನು ಅರಿಯದೆ,
ಮಾಯೆಗೆ ಸಿಕ್ಕಿ ಬಿದ್ದು ಮಾಯವಾದ್ರು
ಮಾಯೆಯರಿಯೆ, ದಿವ್ಯ ಮಾಯೆ ತನ್ನ ಜನ್ಮ ವಿಶ್ವ

೮೯೨ ಈ ಮಾಯ ಜಗವ ನೋಡಲು,
ಪ್ರೇಮಾಸ್ಪದ ದೃಷ್ಟಿಯೊಳಗೆ ಪೆಂಪಾಗಿರಲೇಂ?
ಕಾಮಾಂಧಕಾರದಿ ಬಿದ್ದು,
ತಾಮಸದಲಿ ತಿಳಿಯಲಾರ ದೇವನ ವೇಮಾ

೮೯೩ ಮಾಯೆಯ ಸಂಸಾರವಿದ್ಯೆ;
ಮಾಯೆಯೊಳಗೇ ತಿರುಗುತಿಹರು ಮನುಜರು ಒಳಗೇ,
ಮಯೆಯ ತಿಳಿದೊಡೆ, ಕೊನೆಯಲಿ,
ಮಾಯೆಯೊಳಗೆ ಮುಕ್ತಿಯುಂಟು, ಮಹಿಯಲಿ, ವೇಮಾ

೮೯೪ ಬದುಕು ಎಲ್ಲ ಮಾಯೆ, ಭವ ಬಂಧಗಳು ಮಾಯೆ,
ತಿಳಿವು ಮಾಯೆ, ತನ್ನ ತಿಳಿಯೆ ಮಾಯೆ,
ಮಾಯೆ ತಿಳಿಯುವವನು ಮರ್ಮಜ್ಞನಾಗುವನು, ವಿಶ್ವ

೮೯೫ ಸತಿಯು, ಸುತರು, ಎನುತ ಅತಿ ಮೋಹವು ಇರಲು,
ಧನದ ಮೇಲೆ ವಾಂಛೆ ತಗಲಿ ಇರಲು,
ಅಂಥ ನರಗೆ ಮುಕ್ತಿ ಅವನಿಯೊಳಗೆ ಇಲ್ಲ ವಿಶ್ವ

೮೯೬ ಮಡದಿ ಮಕ್ಕಳು ವಿತ್ತ ಮಾತೆಗಾತ ಮನುಜ
ಕನಕ ಪಡೆಯೆ ಬಹಳ ಕಷ್ಟ ಪಡುವ;
ತನಗೆ ಯಾರು ಇಲ್ಲ; ತಾನು ಬ್ರಹ್ಮವರಿಯೆ, ವಿಶ್ವ

೮೯೭ ಸತಿಯು, ಸುತರು, ಧನವು, ಧಾನ್ಯಾದಿ ಸಂಪದ,
ಸುತ್ತಿಕೊಂಡು ಮತ್ತೆ ಮುತ್ತುತಿರಲು,
ರೇಷ್ಮೆ ಹುಳುವಿನಂತೆ ಸ್ವೇಚ್ಛೆಯಿಂದ ಬದ್ಧ, ವಿಶ್ವ

೮೯೮ ತರುಣಿಯ ಲಗ್ನವಾಗಿ ಸಲೆ ತಮ್ಮಂದಿರಣ್ಣರು ಭಾವಾದಿಯಾಗಿ,
ಬಳಗದಿ ಸಿಕ್ಕು ಸೊರಗಿಯೂ, ಆಶೆಗೆಬೀಳುತಜೇನು ನೊಣವಾಗಿ,
ಸರಣಿ ಮುಳುಗಿಹ ಆತನಿಗೆ ಸತ್ಪಥವಪ್ಪುದೆ ನಿನ್ನ ಕಾಣದೆ,
ಧರಣಿಯ ಮುಕ್ತಿ ಇಲ್ಲಿನ್ನು ಮುಚ್ಚದೆ ಹೇಳೆಲೊ, ಹುಚ್ಚು ವೇಮನಾ

೮೯೯ ಬಂಗಾರವ ಕಂಡು, ಭಾಮೆಯರನು ಕಂಡು,
ಮನದಲ್ಲಿ ಚಿಂತೆ ಮಾಡದಿರಲು,
ಅವನೆ ಪರಮ ಯೋಗಿ ಅವನಿಯಲಿ ಬಣ್ಣಿಸೆ, ವಿಶ್ವ

೯೦೦ ಭವ–ಸಾಗರದಂತೆ, ಭಾರ್ಯೆ ಮೊಸಳೆಯಂತೆ,
ಮೀನು ನೀರು ಜಂತು; ಮಕ್ಕಳೆಲ್ಲ;
ಭವಹರನ ನೆನೆಯದೆ, ಪಾರುಗಾಣರಾರು ವಿಶ್ವ

೯೦೧ ಪಿತೃ ಪತಿಯಲಿ ಸಿಕ್ಕು, ಪಿರಿ ಪಥವ ಕಾಣದೆ,
ವ್ಯಥೆಗೆ ಸಿಕ್ಕುವವನು ವಿಕೃತ ಮತಿಯು
ಸತಿಯ ಬಲೆಗೆ ಸಿಕ್ಕು ಸಂತಾಪ ಪಡನೇಕೆ? ವಿಶ್ವ

೯೦೨ ತನುವು ತೊರೆದು, ತಾನು ತೆರಳಿ ಹೋಹ ವೇಳೆ,
ತನ್ನ ಭಾರ್ಯೆ ಸುತರು, ತನ್ನ ಬಳಗ,
ಒಬ್ಬರೂ ಜೊತೆಗಿರರು ಅಬ್ಬ! ಉಸಿರು ಹೊರತು
ತನ್ನ ಒಳಿತು ಮಾತ್ರ, ತನ್ನಜೊತೆಗೆ ವೇಮ

೯೦೩ ವ್ಯರ್ಥ ಮಮತೆಗೆ ಸಿಕ್ಕು ಬಂಧು ಬಳಗವೆನುತ,
ದಿಕ್ಕು ಹಿಡಿದು ನರನು ತಿರುಗವನಷ್ಟೆ,
ಎಲ್ಲಿಯ ತಾಯಿ ತಂದೆ ಏಕೆ, ತನಗಿದೆಲ್ಲ? ವಿಶ್ವ

೯೦೪ ತಾಯಿ ತಂದೆಯು ಅಣ್ಣ ತಮ್ಮರು ತಾತ ಬಂಧುಗಳೇಕಲೊ?
ಮರಳಿ ಜನ್ಮವು ಇರದ ಸದ್ಗುರು ಮರ್ಮ ಭಾವವ ಹೊಂದೆಲೋ
ಹುಲ್ಲು ಕಡ್ಡಿಯು ಬರದು ಬೆನ್ನಿಗೆ ಪೃಥಿವಿ ದಾಟಿ ಪೋಪುದೆಲ್ಲಿಗೋ?
ಸಲ್ಲ; ಭ್ರಾಂತಿಯ ತೊರೆಯೊ ವೇಮನ, ಸಿದ್ಧಿ ಕಾರ್ಯದಿ ಕಾಣೆಯೋ?

೯೦೫ ಪಾತಕ ಸಂಸಾರಾರ್ಣವ,
ಈ ತೆರದಲಿ ದಾಟಿ ನೀವು, ಎಚ್ಚರದಿ ಇರಲ್,
ಚೇತನ ಮೂರ್ತಿಯ, ಮನದಲಿ,
ಖ್ಯಾತಿಯ ನೆನೆದೊಡನೆ ಆಯ್ತು, ಘನಮತಿ ವೇಮಾ

೯೦೬ ಮೂಢಾತ್ಮರಾದ ಮನುಜರು,
ಗೂಢವನರಿಯದಿರಲು ಗುರಿಗಾಣಲು ಅಳವೇ?
ಗಾಢಾಂಧಕಾರ ತೊಲಗಿಸಿ,
ರೂಢಿಗೊಳಿಸಿ ಸೇರಲುಂಟು, ರೂಢವು, ವೇಮಾ

೯೦೭ ಎಲ್ಲಿಯ ಸುತರೆಲ್ಲಿಯ ಸತಿ?
ಎಲ್ಲಿಯ ಬಂಧುಗಳು? ಸಖರು? ಎಲ್ಲಿಯ ಭೃತ್ಯರ್?
ಇಲ್ಲಿ ಬಳಲಿ ಹೋಹ ವೇಳೆಗೆ
ಅಲ್ಲಿಗೆ ಯಾರೂ ಬಾರರು, ಸಹಜವು ವೇಮಾ

೯೦೮ ಉಚಿತ ಮಿತ್ರರು, ಸತಿ, ಸುತ, ಊರು, ಹೆಸರು,
ಧನವು, ಧಾನ್ಯಗಳು, ಸಂಪದ, ಘನಮತಗಳು
ನಸಿಸುವವು ಸಕಲ; ಧೀರನೇ! ನಂಬ ಬೇಡ
ನೀನೆ ಸ್ಥಿರನಿರುವೆ; ಅರಿತುಕೊ ನಿನ್ನ ವೇಮ

೯೦೯ ಮನೆ, ಮಡದಿ, ಬಿಟ್ಟು ಮತ್ತೆ ಕಚ್ಚೆ ಕಟ್ಟಿ,
ಅಡುಗೆ, ತಿಂಡಿ ನೀರು ಆಶೆ ಹಿಂಗಿ,
ಒಂಟಿಯಾದೊಡನೆ ಉಂಟಾದುದೆ ತತ್ತ್ವ? ವಿಶ್ವ

೯೧೦ ಮುಖವ ನೋಡಿ ಕೊನೆಗೆ ಮೋಹ ಘನವೆ ಆಯ್ತು
ದಿಗಂಬರತೆ ಕಂಡು ತೀರಿತದುವೆ
ಕೂಡಿದಂತೆ ಎಲ್ಲ ಕೊರಗು ತಣಿಯದಿಹುದೆ? ವಿಶ್ವ

೯೧೧ ಕಲ್ಲು ಉಸುಕಿದ್ದಲು, ಕಬ್ಬಿಣ, ಚರ್ಮಗಳ
ಕಸವ, ಹುಲ್ಲು ಕಡ್ಡಿ ಕಟ್ಟಿ ಹಿಡಿದು,
ಹಲ್ಲು ಉಜ್ಜಲು ಕೊನೆಗೆ ಪರಿಶುದ್ಧವಪ್ಪುದೆ? ವಿಶ್ವ

೯೧೨ ಸತಿಯು, ಸುತರು ಆಗಿ, ಸಂಪದಧಿಕವಾಗಿ,
ಭಜನೆ ಗೆಯ್ವರೀಶ ಭಕ್ತಿಯಿರದೆ,
ಭಜನೆ ಮಾಡದವನು ಭಕ್ತನಾಗಲಾರ ವಿಶ್ವ

೯೧೩ ತಾತ ತಾಯಿ ತಂದೆ ತೆರಳುತಿಹುದ ನೊಡಿ,
ಜಾತಿ ಕುಲವು ಎಂಬ ಚಪಲವೇಕೆ?
ತಾನು ಇರಲು ತಕ್ಕ ಆದಿಯಾಯಿತಯ್ಯ ವಿಶ್ವ

೯೧೪ ಸತಿಯ ಗೆಲ್ಲಲೆಂದು, ಸುತರ ಪಡೆಯಲೆಂದು,
ಹೆಚ್ಚುಕಷ್ಟ ಪಡಲು ಹುಚ್ಚುತನವು,
ನೆಲದೊಳಿರುವ ಕಲ್ಲು ಗೆತ್ತಿಗೆತ್ತಿದಂತೆ, ವಿಶ್ವ

೯೧೫ ತರುಣಿ, ಸುತರು, ಧನವು, ಧಾನ್ಯಾದಿ ಸಂಪದ,
ಎಷ್ಟು ಸುತ್ತುವುದೋ ಅಷ್ಟುಕೇಡು,
ರೇಶ್ಮೆಯಾ ಹುಳುವಿನ ರೀತಿಯಿಹುದು ಕಣಾ ವಿಶ್ವ

೯೧೬ ತಟ್ಟನೆ ಧನ, ಪುತ್ರ, ತರುಣಿ ಭ್ರಮೆಯ ಹೊಂದಿ,
ಕ್ಷೀಣಿಸುವನು ದೇಹಿ, ಚಿಂತೆಯಿಂದ;
ಅಕಟಕಟೀ ದೇಹಿಆಚೆ ದಡ ತಲುಪನು ವಿಶ್ವ

೯೧೭ ಇಂಥ ತನುವ ಹೊಂದಿ, ಈ ಲೋಕದಲ್ಲಿಯೆ
ಹುಟ್ಟಿ, ಸತ್ತು, ಭ್ರಮೆಯ ಕಟ್ಟಿ ಹಾಕಿ,
ತೇಟ ದಾರಿ ಸೇರಿ, ತಿಳಿವಿಗಂಟಿ ನೋಡು ವಿಶ್ವ

೯೧೮ ಸ್ತ್ರೀಯರು ಪುರುಷರು ತಮ್ಮೊಳು,
ಭಾರ್ಯೆ–ಪತಿಯೆಂದು ನಂಬುತ ಅನುಭವಿಸುವರೈ,
ಮಾಯದಿ ತಾವೆ ಭ್ರಮಿಪರು,
ಹಾಯಾಗಿ ಹುಟ್ಟು–ಸಾವನು ಹುಡುಕರು ವೇಮಾ;

೯೧೯ ಜಂತು, ರಾಶಿಗಳಲ್ಲಿ ಜನಿಸುತ್ತ ಜನಿಸುತ್ತ,
ದಿಮ್ಮು ಹಿಡಿದ ರೀರಿ ತಿರುಗಿ ತಿರುಗಿ,
ತನುವು ನಿತ್ಯವೆನುತ ತಿಳಿದು, ನೆನೆಯದೆ ಇಹರೆ? ವಿಶ್ವ

೯೨೦ ತೊಗಲು ಚೀಲದಲ್ಲಿ ತಾನು ಮೊದಲು ಹುಟ್ಟಿ,
ಬಳಿಕ ತಿಳಿಯುವಂತೆ ಹುಡುಕಿ ವಿವರ
ಬಳಿಕ ತಿಳಿಯದಿರಲು ಬೆಪ್ಪನಾಗಿ ಕೆಡುವ ವಿಶ್ವ

೯೨೧ ಕಣ್ಣೊಳು ಮದ ತುಂಬಿ ಕಾಣರು ತಾವೆಂದು,
ಇಂದು, ಹಿಂದೆ, ಅಂದು, ನಿನ್ನೆ, ಮೊನ್ನೆ,
ದಗ್ಧರಾಗಿಪ್ಪರು ತಮಗಿಂತ ಕಡಿಮೆಯೆ? ವಿಶ್ವ

೯೨೨ ಹುಟ್ಟಿದಂದಿನಿಂದ ಪುರುಷ ಸರ್ವ ಕಾಲ
ಪಾಪ ತಿಳಿದು ಶುದ್ಧ ಪಶುವಾಗನೀ?
ಮುದಿಯಿರೆ ಯೋಗಿ ತೀರ ಮೋದ, ಒಪ್ಪಬೇಕು ವಿಶ್ವ

೯೨೩ ಹುಟ್ಟಿದಂದಿನಿಂದ ಪುರುಷನ ಕಾಲದೊಳು,
ಪಾಪವರಿಯೆ, ಶುದ್ಧ; ಪಶುವು ಅಲ್ಲ
ಮುದದಿ ಯೋಗಿ ರೀತಿ ಮನವೊಪ್ಪುವಂತಿದೆ ವಿಶ್ವ

೯೨೪ ಕಂಬದಲ್ಲಿ ಸೇರಿ, ಕಡೆಗೆ ಆಗಿ ಹೋಹ;
ತೆರನ ಅರಿಯದಿಹನು; ತಿರುಗಿ ಬಂದು,
ದಾರಿ ತಿಳಿದು ಬೇರೆ, ದೇವನೆಂಬರಲ್ಲ; ವಿಶ್ವ

೯೨೫ ಯೌವನದಲಿ ಯುವತಿ ಜೊತೆಯ ಹೊಂದೆ,
ಆಸೆ ಪಡದವರು ಆರು ಇಲ್ಲ
ಅದನು ಕೋರದಂಥ ಅವರೆ ಘನರು ಕಣಾ ವಿಶ್ವ

೯೨೬ ದೇಹಾಭಿಮಾನವಿರುತಿರೆ,
ಮೋಹಾದಿಗಳ ಬಿಡಲೆಂತು ಮುನಿಜನರಿರಲುಂ?
ಸಾಹಸದಿಂದದನು ಬಿಡಲು,
'ಸೋಹ' ಮ್ಮನು ತಿಳಿಯಬಹುದು, ಕಾಣಾ ವೇಮ

೯೨೭ ತಾನು ತನ್ನದೆನುತ ದಯದಲ್ಲಿ ನುಡಿಯುತ,
ಮೋಹವಾರ್ಧಿಯೊಳಗೆ ಮುಳುಗಿ ನರನು
ಕಾಣಲಾರ; ಮೋಕ್ಷ ಗತಿಯೆಂತು ಸಿದ್ಧಿಪುದು? ವಿಶ್ವ

೯೨೮ ದೇಹವೆಂಬ ಮನೆಯ ದಿನ ದಿನ ಕಸಗುಡಿಸಿ,
ಸಾರಿಸಿ ಸಲೆ ಮೆತ್ತಿ ಸರಿಯ ಮಾಡಿ,
ಫಲವ ಬಿಟ್ಟು ಹೋಹ; ಪಟಪಟವೀ ಜೀವಿ ವಿಶ್ವ

೯೨೯ ದೇಹವಾರ ವಸ್ತು? ಪೋಷಿಸೆ ಹಲಬಾರಿ?
ಪ್ರಾಣವಾರ ವಸ್ತು? ಭಕ್ತಿ ಗೆಯ್ಯೆ,
ಧನವದಾರ ವಸ್ತು? ಧರ್ಮ ತನ್ನ ವಸ್ತು ವಿಶ್ವ

೯೩೦ ಕಂಡ ಸುಖವನೆಲ್ಲ ಕನಸೆಂದು ಭಾವಿಸಿ,
ಮರೆಯಲಿ ಇರಬೇಕು; ರವಿಯ ರೀತಿ
ತಿರುಗಲರಿವು ನೋಡು; ಧೀರ ಸಂಚಾರಿಯು! ವಿಶ್ವ

೯೩೧ ದೊಂಬರಾಟದವನ ತೋಳು ಬಲವದೆಲ್ಲ
ಹೊಟ್ಟೆ ಕೂಳಿಗಾಗಿ, ಪಡುವ ಕಷ್ಟ;
ಅದುವೆ ಯೋಗಿಗಮರ ಆನಂದವೀವುದು ವಿಶ್ವ

೯೩೨ ಹೊನ್ನು ಗೈವ ವಿದ್ಯೆ ಹೊಳೆದ ಮನುಜರೆಲ್ಲ,
ವ್ಯಥೆ ಪಡುವರಂಥ ವಿದ್ಯೆಯಿಂದ
ತತ್ತ್ವ ತಿಳಿದ ಬಳಿಕ ತನಗೆ ಚಿಂತೆಯಿಲ್ಲ ವಿಶ್ವ

೯೩೩ ಎಷ್ಟು ಕಾಲದಿಂದ ಮೋಹವೋ?
ನೇಹ ಕಾರ್ಯದಿಂದ ನೆಗೆದು ಬಿಡದೆ,
ತಾಯಿ ತಂದೆ ಮಗನು ದಾಯಾದಿಯೆನುವಂಥ,
ಭ್ರಾಂತಿಯಿಂದ ಸಿಕ್ಕು ಬೀಳ್ವ ವೇಮ

೯೩೪ ಪೂರ್ವ ವಾಸನೆಯಿಹ ಪುಣ್ಯಾತ್ಮರೆಂದಿಗು,
ಹೊತ್ತಿಗಾಗುವ ಒರತೆ ರೀತಿ, ಊರಿ–
ನೆಲ್ಲರಿಗೀವಂತೆ, ನೆಲೆಸಿ ಇರುವರರಿತು ವಿಶ್ವ

೯೩೫ ಅರಿವಿಗಾಗಿ ತಿರುಗಿ, ಅರಸಿ ಏಕಾಂತವ,
ಪರಿದಾಡದೆ ಯೋಗ ಪಥವ ಹಿಡಿದು,
ಪರಮ ಕೋರಿ, ಮೀರಿ ಪರಿಪೂರ್ತಿ ಹೊಂದಿರೊ ವಿಶ್ವ

೯೩೬ ಬಿಸಿಲರಿಯದೆ ತಿರುಗಿ, ಬೇಶಿಯರಿವ ಯೋಗಿ;
ಇರುವ ಕಾಲವೆಲ್ಲ ಇಳೆಯ ಮಧ್ಯೆ,
ತಿಂಡಿ ಪೋಕನಹಗೆ ತಿಳಿಯಲಳವೆ ಜ್ಞಾನ? ವಿಶ್ವ

೯೩೭ ಯೋಗವು ಕಷ್ಟವೆ ಆದರು,
ರಾಗ ದ್ವೇಷಗಳು ಮೀರಿ ರಂಜಿಸಿ ಮನದೋಳ್,
ಭೋಗವ ಹೊಂದುತಲಿಪ್ಪುದು, ವಿಶ್ವ

೯೩೮ ಯೋಗಿಗಳೆನ್ನುತ ಕೆಲವರು
ಕೂಗುತದುವೆ ಲೇಸೆನ್ನುತ ವಾಗ್ವಾದಿಪರು ಚೆ–
ನ್ನಾಗಿಯೆ ಮನದಲಿ ಮರ್ಮವ,
ತಾಗದಿಳೆಯಲಿ ತವಕ ಪಡರು, ತಥ್ಯವು, ವೇಮ

೯೩೯ ಕಾಗೆ ಪಡೆದ ಮರಿಯು ಕಾಗೆಗೆ ಕಡು ಅಂದ,
ಕೋಳಿ ಪಡೆದ ಮರಿಯು ಕೋಳಿಗಂದ;
ಯೋಗಿ ಪಡೆದ ಕಳೆಯು ಯೋಗಿಗಂದವಯ್ಯ! ವಿಶ್ವ

೯೪೦ ಕಾಯದಲಿ ಕನಕವ ಕಂಡು ಈ ಕಡೆಗಿದ್ದು,
ಕಾಯವ ಬಿಡುತಿರೆ, ಆಗ ಯೋಗಿ;
ಕಾಯದಲ್ಲಿ ಮುಕ್ತಿ ಗತಿ ಸೇರಬೇಕು ವಿಶ್ವ

೯೪೧ ಸತಿ ಸುತರಿಬ್ಬರು ಕೂಡಿಯೆ,
ಸತಿಯೊಡನೆ ಮಲಗುತಿಹರು ಸ್ತನಗಳ ಮೇಲಾ–
ಸುತನಂಟಲು ಹಾಲಿಪ್ಪುದು,
ಪತಿಯಂಟಲು ನಲ್ಮೆ ತಾಣ ಪಡುವನು, ವೇಮಾ

೯೪೨ ಸ್ಕಾಂತದ ಭಸ್ಮವ ಗೆಯ್ಯಲು,
ಶಾಂತಯುತಗೆ ಜ್ಞಾನ ಸೌಖ್ಯ ಸಂಜೀವಿನಿಯೈ;
ಕಾಂತೆಯ ಚಿಂತಿಸದಿದ್ದೊಡೆ,
ಶಾಂತವಿರುವ ದೈವವಾಯ್ತು, ಜಗದಲಿ, ವೇಮಾ

೯೪೩ ಉದರದಲ್ಲಿ ಮಲವು; ಉಂಟು ಎಲುಬು ಗೂಡು
ಮೇಲೆ ಚರ್ಮ ಹೊದೆದ ಮಾಂಸವಿಹುದು
ಮಲದ ತಿದಿಯ ಮೇಲೆ ಮನವೆಂತು ಹರಿವುದು? ವಿಶ್ವ

೯೪೪ ಇಂದ್ರ ಪದವಿಕೋರಿ, ಇಂಪಾಗಿ ಯಜ್ಞವ,
ಕನಕದಿಂದ ಮಾಡಿ ಕಾಮಿಯಾದ
ಪರಮ ಯೋಗ ಮಾಡೆ, ಪಟ್ಟ ಇಲ್ಲವೇನು? ವಿಶ್ವ

೯೪೫ ಪಾಶ ಬಂಧದಿಂದ ಬಂಧು ವರ್ಗವೆಲ್ಲ,
ಕಟ್ಟಲೆಳಸುವರಲ; ಜೀವ ತೊಲಗೆ,
ಒಬ್ಬ ಕೂಡ ಹೋಹ; ಉಸಿರು ಹೊರತು ಮತ್ತೆ ವಿಶ್ವ

೯೪೬ ನೀರ ಮೇಲೆ ಬುಗ್ಗೆ ನಿಂತುಕೊಂಡ ಕಾಲ;
ತೂರಿ ವೇಗದಿಂದ ತಾಕುತಿಹುದು
ಒಡೆವ ಮಡಿಕೆಗೆಷ್ಟು ವಿಭ್ರಾಂತಿ ಪಡುವರು? ವಿಶ್ವ

---

೯೪೭ ಮನುಜನಾವನೇನು? ಮರ್ಯಾದೆ ತಿಳಿದಿರಲು,
ಮತ್ತೆ ಅವರನರಿತು ಮಾನ ನೀಡು
ಜಗದಿ ಮೇಲು ಸೊಣಗ; ಬೆಳೆಗನೇನು ತಾನು? ವಿಶ್ವ

೯೪೮ ಈ ಜಗ ಜನ ಗುಣ ಸಂಕುಲ
ವೀಜಗದಲಿ ಪಟ್ಟು ಕಲಿತು ವಿರಸವ ಪಡದೇ
ಆ ಜನರೆ ಮುಕ್ತಿ ಗರ್ಹರು;
ರಾಜಿ ಪರಿಪೂರ್ಣ ಹೃದಯ ರಂಜಕ ವೇಮಾ

೯೪೯ ಕಲ್ಲು ಕಲ್ಲು ಕೂಡ್ಸಿ, ಕಡೆಗೆ ತಿಕ್ಕಿ ತಿಕ್ಕಿ,
ನುಣ್ಣಗಾದ ಅಂಥ ನಿಖಿಲ ಕಾರ್ಯ;
ಕೆಲಸ ಮಾಡಿ ಕೊನೆಗೆ ಕ್ರಮವೆ ಆಗುತಿಹುದು ವಿಶ್ವ

೯೫೦ ಗಟ್ಟಿ ಸಾಧು ವಿದ್ಯೆ ಕೊಂಚವಾದರಿರಲಿ,
ಗಾಢ ವಿದ್ಯೆ ಕಲಿತು ಕಾಣು ಘನತೆ
ಸಾಧು ಸಜ್ಜನಾದಿ ಸಾಂಗತ್ಯವನು ಅರಿ ವಿಶ್ವ

೯೫೧ ಸಾವು ತಿಳಿಯುವವನು ಸನ್ಯಾಸಿಯೆಂತಾಗುವ?
ಕೊನೆಗೆ ತನ್ನ ಘನತೆ ಬೆಳೆವುದೆಂತು?
ಪಾಪವೊಂದೆ ಅಧಿಕ; ಫಲವು ಏನು ಇಲ್ಲ ವಿಶ್ವ

೯೫೨ ಜನಿಸಿದ ಜನರೆಲ್ಲ ಮಹಿಯ ಮೇಲುಳಿಯಲು,
ಅನುವು ಇಹುದೆ ಜಗದಿ? ಆಗದೆಂದು
ಗಣನೆ ಯಮನದು; ಬೆಳೆದಂತೆ ಕಳೆಯುತಿಹುದೆ ವಿಶ್ವ

೯೫೩ ಅತಿ ಮೋಹಾನ್ವಿತ ಶುದ್ಧಿಲಿ
ಸತತವು ಕ್ಷೀಣಿಸುತ ಇರಲು ಸತ್ಯವು ಕಾಣಾ,
ಮತಿ ನಿಲಿಸಲಾರರಾದರು,
ಯುತವಹ ಸ್ಥಿತಪ್ರಜ್ಞೆಗೂಡೆ ಯುಕ್ತಿಯು ವೇಮಾ

೯೫೪ ಗೋಟಿ ಪಂಚೆ ಧರಿಸಿ, ಕೋರಿ ತಾ ಮುನಿ ಯೆನುವ;
ಮನದ ಒಳಗಿನಾಶೆ ಮಾಣದಲ್ಲ
ಆಕೃತಿಗಳು ಬೇರೆ; ಆಶೆಯೆಲ್ಲ ಬೇರೆ ವಿಶ್ವ

೯೫೫ ಅಡ್ಡ ದಾರಿ ಬಿಟ್ಟು ಆಗಬೇಕು ಯೋಗಿ,
ಭೋಗಕಂಟಿ ಯುಕ್ತಿ ಬಳಸಬೇಡ
ಸದ್ಗುಣವನು ಮೊದಲು ಸವಿದು ರುಚಿಯ ನೋಡು ವಿಶ್ವ

೯೫೬ ಒಡಲು ಗಾಸಿಗೊಳಿಸಿ ಯೋಗಿಯೆನ್ನುತಿಹರು
ಮನದ ಕಲ್ಮಷವದು ಮಾಯಗೊಳದೆ;
ಹುತ್ತ ಮೇಲೆ ಹೊಡೆಯೆ, ಹಾವು ಸಾಯಬಹುದೆ? ವಿಶ್ವ

೯೫೭ ಭೋಗಿ ಎಂದೆ ಇರಲಿ; ಯೋಗಿಯಾಗಲಾರ,
ಯೋಗಿ ಎಂದೆ ಇರಲಿ; ಭೋಗಿಯಾಗ
ಮೂಢನೆಂದೆ ಇರಲಿ; ಮೋಕ್ಷಪರನು ಆಗ ವಿಶ್ವ

೯೫೮ ಅಂಗವೆಲ್ಲ ಸಡಲಿ, ಅಂತೆ ಹಲ್ಲು ಉದುರಿ,
ತನುವು ಮುಪ್ಪಿನಿಂದ ತೀವ್ರ ಒಣಗಿ
ಮುಪ್ಪು ಅಡರಿದರೂ ಮೋಹ ಬಿಡದು ಮತ್ತೆ ವಿಶ್ವ

೯೫೯ ಠಕ್ಕ ಯೋಗಿ ಎಷ್ಟು ಠಬರು ಚೇಷ್ಟೆ ಗೆಯ್ಯ,
ವಿವರ ಅರಿತ ಬಳಿಕ ವಾಕರಿಕೆಯು
ಪರವು ಶೂನ್ಯ; ನರಕ ಬಾಧೆ ಮಾತ್ರ ಸಿದ್ಧ ವಿಶ್ವ

೯೬೦ ಎಷ್ಟು ದಿನಗಳು ಬದುಕಲು ಏನು ಫಲವು?
ಹಿರಿಯ–ಕಿರಿಯರು ಕನಲಿದರು; ಹೆಸರೆ ಇಲ್ಲ
ಅಣ್ಣ ತಮ್ಮರು ಆಪ್ತರು ಅಂತೆ ನಡೆದರು ವಿಶ್ವ

೯೬೧ ಗುಣವಿಹೀನನನ್ನು ಗೃಹದಿ ಸೇರಿಸಿದೊಡೆ,
ಹಾನಿಯುಂಟು ಯಾವನಾದರೇನು?
ಹೊಟ್ಟೆ ಸೇರಿದ ನೊಣ ಹಾಗೆ ಹೀಗಳುಕದೆ? ವಿಶ್ವ

೯೬೨ ಮೊಟ್ಟೆ ಬಂದು ಒಟ್ಟು ಭೇಡಿಸುತ್ತಿಹ ತೆರ,
ವಿಧವನರಿಯದಿರುವ ವಿಕೃತ ಮತಿಗಳು;
ಜ್ಞಾನಿಯಾದವರನು ಜರಿಯುತಿರುವರಷ್ಟೆ ವಿಶ್ವ

೯೬೩ ಗತ ಕಾಲವೆಲ್ಲ ಕನಸಿನಂತೆ ಮಾತ್ರ,
ನಡೆದ ಕಾರ್ಯವನ್ನು ನಂಬಬೇಡ;
ಕ್ಷಣದೊಳಿರುವ ಬಾಳು ಸಂಸಾರ ವಿಭ್ರಾಂತಿ! ವಿಶ್ವ

೯೬೪ ಸ್ತನದ ಭಂಗಿ ಕಂಡ್ರು; ಸಾಧುಗಳು, ಮೂಢರು,
ತಾನು ಎಂತೊ ಅಂತೆ ಕಾಣುತಿಹನು
ಅದಕೆ ಎಷ್ಟು ದೂರವೊ, ತನಗೆ ಅದುವು ಅಷ್ಟೆ ವಿಶ್ವ

೯೬೫ ಹುಣಸೆ ಹಣ್ಣಿನಿಂದ ಹೋಗುತಿಹುದು ಕಿಲುಬು;
ಅಂತೆ ಯೋಗಿ ಜಗದಿ ಗಟ್ಟಿಯಿರುವ;
ಉಪ್ಪು ಪಾತ್ರೆಯಲ್ಲಿ ಊದಿ ತಾ ಕೆಡಲೇಕೆ? ವಿಶ್ವ

೯೬೬ –ಸೀ। ಕಮಲ ಭವಾಂಡವು; ಕಮಲ ಬೇರುಗಳೆನಿತೊ?
ಅದರ ಒಳಗೆ ಜಗತ್ರಯವದೆನಿತೊ?
ಅದರ ಏಳನೆ ಪಾಲು ಧಾರುಣಿ ಸ್ಥಲವೆಷ್ಟೊ?
ಅಲ್ಲಿ ಒಂಬತ್ತನೆ ಪಾಲು ಬಿಂದುವೆಷ್ಟೊ?
ಅದರೊಳು ಮೂರನೆ ಪಾಲು ಅವನೀ ಸ್ಥಳವೆಷ್ಟು?
ಆ ತುಂಡು ತುಂಡು ಭಾಷೆಗಳಮಿತವಯ್ಯ
ಅಷ್ಟು ಭಾಷೆಗಳೊಳಗೆ ಅನುವು ಮೀರುತದೆಷ್ಟೊ?
ಪಾಲು ವಿಸ್ತರಿಸಿದಂಥ ಭೂಮಿಯೆಷ್ಟೊ?
ತೇ। ಅಂಥ ಭೂಮಿಗಳ ಪಾಲಿಪ ಅವನಿ ನೃಪರು
ಘನರು, ಬಹಳಷ್ಟು ಇರುವುದನು ಕಡೆಗೆ ಅರಿತು,
ಓರ್ವನ ದಯೆ ಸಾಕಷ್ಟು ನಂಬಿ ಉಂಟು ಮನುಜ;
ವಿಭವವೇನಿಹುದು? ತಿಳಿಬೇಕು ಕೇಳು ವೇಮ

೯೬೭ ಉಳ್ಳ ತಾಣ ತೊರೆದು, ಊರು ಊರು ತಿರುಗಿ,
ಕಂಡನೇನು ನರನು? ಕೂಳಿಗಾಗಿ
ತನ್ನ ಒಳಗೆ ನೋಡೆ, ತಮವೆಲ್ಲ ಬಿಡುವುದು ವಿಶ್ವ

೯೬೮ **ಬಂಡೆ ರೂಪೊಳಿಸಿ, ಬಾಗುವರು ರಾಜರು;**
**ವರ್ಣ ಮೀರಿ ನಟನೆ ವೈಭವವದು;**
**ಕರ್ತನಾರು? ಎಂದು ಕಾಣರು ಮೂರ್ಖ ಜನ! ವಿಶ್ವ**

●

## ತ್ಯಾಗ

ವಿಷಯ ವಸ್ತುಗಳಿಗೆ ಅಂಟಿಕೊಳ್ಳುವುದೇ ಸಂಸಾರ, ಇಂದ್ರಿಯ ಭೋಗ ವಸ್ತುಗಳನ್ನು ತೊರೆಯುವುದೇ ತ್ಯಾಗ.

ಒಂದು ವಸ್ತುವು ತನಗೆ ಸೇರುತ್ತಿದ್ದರೆ, ತನ್ನ ಮನಸ್ಸಿನಲ್ಲಿ ಇರಿಸಿಕೊಂಡು ಅದನ್ನು ಬಿಡದಿದ್ದರೆ ಆ ಸಂಸ್ಕಾರವೇ ಮರುಹುಟ್ಟಿಗೆ ಕಾರಣವಾಗುತ್ತಿದೆ. ಅರ್ಥಾತ್ ಸಂಸಾರ ಬೀಜವಾಗುತ್ತದೆ.

ಅಹಮಹಮಿಕೆಯ ಮದದಿಂದ ಲೋಕ ಮಾಯೆಗಳನ್ನು ತಿಳಿಯದಾಗುತ್ತಾರೆ. ಮದದಿಂದ ತನ್ನನ್ನು ಮರೆಯದೆ, ಬುದ್ಧಿಗೇಡಿ ಕಾರ್ಯದಲ್ಲಿ ಕೆಡುತ್ತಾರೆ. ಬುದ್ಧಿವಂತನು ಇಹವನ್ನು ತ್ಯಾಗ ಮಾಡಿ ಪರವನ್ನು ಪಡೆಯುತ್ತಾನೆ.

ಈ ಸಾಧನೆಗಾಗಿ ಒಣಪೂಜೆ ಫಲ ನೀಡದು. ಶುಷ್ಕ ಮಾತುಗಳಿಗಿಂತ ನಿಧಾನ ಮತಿಯೇ ಮುಖ್ಯ. ಯಾವ ಕುಲವಾದರೇನು? ಅವನ ಗುಣಗಳಿಂದ ಅವನು ಸಾಧಿಸಬಲ್ಲನು. ಬಹಳ ಕಷ್ಟ ಪಡುತ್ತಾನೆ. ಆದರೆ, ತಾನು ಬ್ರಹ್ಮವನ್ನು ಅರಿತರೆ, ಇವರಾರೂ ತನಗೆ ಇಲ್ಲವೆಂಬುದು ಅರಿವಾಗುತ್ತದೆ.

ತಾವೇ ಒಲಿದು, ಇಲ್ಲದವರಿಗೆ ನೀಡಿದರೆ ತಮಗೆ ಅದರ ಫಲವೆಲ್ಲ ಸಿಕ್ಕುತ್ತದೆ. ಕೇಳಿದಾಗ ನೀಡಿದರೆ, ಕೇಳಿದಷ್ಟು ದೊರೆಯುತ್ತದೆ. ಕೇಳಿದವರಿಗೂ ನೀಡದವನಿಗೆ ಏನೂ ಸಿಕ್ಕದು.

ಭಿಕ್ಷೆಯಲ್ಲಿ ತ್ಯಾಗ ಬುದ್ಧಿ ಸೇರಿದೆ. ಅಂದ ಮೇಲೆ ಆ ಭಿಕ್ಷೆಯಲ್ಲಿಯೇ ಭಿಕ್ಷೆಯನ್ನಿತ್ತರೆ ತ್ಯಾಗ ಫಲಕ್ಕೆ ತ್ಯಾಗ ಫಲವು ಸೇರಿ ದ್ವಿಗುಣಿಸುತ್ತದೆ.

ಎಲ್ಲವನ್ನೂ ತೊರೆಯಬೇಕಾದರೆ, ಸರ್ವ ಕಾಮನೆಗಳನ್ನೂ ಗೆಲ್ಲಬೇಕು. ಅಂಥವನೇ ತತ್ತ್ವಗಳನ್ನು ಅರಿಯುತ್ತಾನೆ. ತ್ಯಾಗದಿಂದ ಭೋಗಿಸುವ ಕಲೆಯರಿತವನು ಬಾಳೆಯನ್ನು ನುಂಗುವವನು. ಅದನ್ನು ತೊರೆದು ವಿಷಯ ವಾಸನೆಯಲ್ಲಿ ನಿರತನಾದವನು ವಿಷ ನುಂಗುವವನಂತೆ. ಬಾಳೆ ನುಂಗುವವರು ವಿಷವನ್ನು ನುಂಗಬಹುದೇ?

ತ್ಯಾಗ ಮಾಡುವವನು ಮೊದಲು ಆಸೆಯನ್ನು ಗೆಲ್ಲಬೇಕು. ಇಂದ್ರಿಯ ನಿಗ್ರಹಿಸಿ, ಕೋಪವನ್ನು ಮೆಟ್ಟಬೇಕು. ಹೀಗೆ ಆಸೆ ಬಿಟ್ಟವನೇ ಯೋಗಿ ಎನಿಸುತ್ತಾನೆ.

೯೬೯ ಇದು ನನಗೆ ಬೇಡವೆನ್ನುತ,
ಅದ ಬಿಡದೆ ಮನದೊಳಿಪ್ಪ ವಸ್ತುವ ಭ್ರಮಿಪನ್
ಕದಲದದನೆ ಬಿಡದಿದ್ದರೆ,
ಅದುವೇ ಸಂಸಾರ ಬೀಜವೆಂಬರು, ವೇಮ

೯೭೦ ಮದದ ಕೈಲಿ ಲೋಕ ಮಾಯೆಗಳ ತಿಳಿಯರು
ಮದದ ಕೈಲಿ ತನ್ನ ಮರೆಯನೆಂದು;
ಬುದ್ಧಿಗೇಡಿ ಕಾರ್ಯ ಪರಿಯಲಿ ಕೆಡುತಿಹರು ವಿಶ್ವ

೯೭೧ ಇದು ಎನಗೆ ಸಾಕು ಎನಿಸಲ್,
ಕದಲದೆ ಮನದಿ ಸಕಲ ವಸ್ತುಗಳ ಭ್ರಮೆಯೋಳ್,
ಅದ ಮತ್ತೆ ತೊರೆಯದಿರಿಸಲ್,
ಅದುವೇ ಸಂಸಾರ ಬೀಜವಾದುದು, ವೇಮಾ

೯೭೨ ಒಣ ಪೂಜೆಗಿಂತ ನಿಧಾನ ಬುದ್ಧಿ ಮುಖ್ಯ
ಶುಷ್ಕ ಮಾತಿಗಿಂತ ದೃಢ ಮನಸು
ಕುಲಕ್ಕಿಂತ ಮೊದಲು ಮಿಗಿಲು ಗುಣವು ಮುಖ್ಯ ವಿಶ್ವ

೯೭೩ ತಾವೆ ಒಲಿದು ಕೊಡಲು ತಮಗೆ ಆದುವೆ ಉಂಟು;
ಕೇಳಲೀಯೆ ತಮಗೆ ಕೇಳಿದಷ್ಟು
ಕೇಳಲೀಯದಾತಗೆಂದು ಇಲ್ಲವೇನು ವಿಶ್ವ

೯೭೪ ಭಿಕ್ಷುಕಾದ ನರನು ಭಿಕ್ಷೆಯೆತ್ತಿದಂಥ
ಭಿಕ್ಷೆಯಲ್ಲಿ ತಾನು ಭಿಕ್ಷೆ ಕೊಡಲು
ಭಿಕ್ಷೆ ಭಿಕ್ಷೆಯೊಳಗೆ ಬಿದ್ದು ಸೇರುತಿಹುದು ವಿಶ್ವ

೯೭೫ ತತ್ತ್ವವರಿಯುವವನು ದೈವ ಸಮನಿಹನು
ಸರ್ವ ಕಾಮಗಳನು ಸಾವ ಹೊಡೆವ
ನುಂಗುವವನು ಬಾಳೆ, ನುಂಗಬಹುದೆ ವಿಷವ? ವಿಶ್ವ

೯೭೬ ಆಸೆಗಳನು ಕಡಿದು ಅಗ್ನಿಯನು ಆರಿಸಿ,
ಕಟ್ಟಿ ಬಿಗಿದು ಚಡ್ಡಿ, ಕೋಪ ತಗ್ಗಿ,
ಆಸೆ ಬಿಟ್ಟು ಇರುವ ಅವನೆ ಯೋಗಿ ನಿಷ್ಠ, ವಿಶ್ವ

೯೭೭ ವ್ಯಾಧಿ ಪೀಡಿತಾಗಿ, ವ್ಯಸನ ಸಂತಾಪದಿ,
ದುಃಖ ಸಂಭವದಲಿ, ತಗಲಿ ಭಯವು;
ಇಲ್ಲದವರಿಹರೇ? ಯಾವ ಕಾಲವಿರಲಿ? ವಿಶ್ವ

●●●

# ೫. ಧರ್ಮ ವರ್ಗ–ವಿಧಿ

## ವಿಧಿ

**ಮಡದಿ ಮಕ್ಕಳು ವಿತ್ತ ಮಾತೆಗಾತು ಮನುಜ;**
**ಕನಕ ಪಡೆಯಬಹುದೆ ಕಷ್ಟಪಡದೆ?**
**ತನಗೆ ಯಾರು ಇಲ್ಲ; ತಾನು ಬ್ರಹ್ಮವರಿಯೆ,**
**ವಿಶ್ವದಾಭಿರಾಮ ಕೇಳು ವೇಮ,**

## ಕರ್ಮ

ಹುಟ್ಟು ಸಾವುಗಳ ಮಧ್ಯೆ ನಮ್ಮ ಬದುಕು ಇದೆ. ಬಾಳ ಸಂಪುಟದ ಮೊದಲಿನ ಪುಟಗಳೂ ಹರಿದಿವೆ; ಕೊನೆಯ ಪುಟಗಳೂ ಹರಿದಿವೆ. ಹೀಗಾಗಿ ಹುಟ್ಟು ಸಾವುಗಳ ಗುಟ್ಟು ತಿಳಿಯದಂತಾಗಿದೆ. ಆದರೆ ಹುಟ್ಟಿದವನು ಸಾಯಲೇಬೇಕು ಮತ್ತು ಸತ್ತವನು ಹುಟ್ಟಲೇಬೇಕು. ಇಲ್ಲವೆ ಮೂಲ ಸೇರಬೇಕು; ಮೋಕ್ಷ ಪಡೆಯಬೇಕು. ಈ ಬಾಳ ಸಂಪುಟದ ಪುಟಗಳನ್ನು ತೆರೆದು ನೋಡಿದಾಗ, ಒಂದು ಕಾರ್ಯವಿದ್ದರೆ, ಅದರ ಹಿಂದೆ ಒಂದು ಕಾರಣವಿರುತ್ತದೆ, ಎಂದು ಅರಿವಾಗುತ್ತದೆ. ಈ ಕಾರಣವು ಕಾರ್ಯವೆನಿಸಿದರೆ, ಅದರ ಹಿಂದೆ ಮತ್ತೊಂದು ಮೂಲ ಕಾರಣವಿರುತ್ತದೆ. ಬೆಣ್ಣೆ ಕಾರ್ಯವಾದರೆ, ಮೊಸರು ಕಾರಣ; ಮೊಸರು ಕಾರ್ಯವಾದರೆ ಹಾಲು ಕಾರಣ. ಈ ರೀತಿ ನಮ್ಮ ಜನನ ಕಾರ್ಯವಾದರೆ, ಅದರ ಹಿಂದಿನ ಕಾರಣವಾವುದು? ನಮ್ಮ ಪೂರ್ವ ಸಂಸ್ಕಾರಗಳೆಂದರೆ ಏನು? ನಾವು ಮಾಡಿದ ಕರ್ಮಗಳ ಫಲವನ್ನು ಕೂಡಲೇ ಭೋಗಿಸಲು ಅವಕಾಶವಿಲ್ಲದಾಗ, ಅವು ಮನದಲ್ಲಿ ವಾಸನೆಯ ರೂಪದಲ್ಲಿ ಉಳಿದುಕೊಂಡಿರುತ್ತವೆ. ಅನುಕೂಲ ಸಮಯ ಬಂದಾಗ ವ್ಯಕ್ತವಾಗುತ್ತವೆ. ಇವು ವ್ಯಕ್ತವಾಗಲೇಬೇಕು. ಪ್ರತಿಯೊಂದು ಕ್ರಿಯೆಯು ಪ್ರತಿಕ್ರಿಯೆಯನ್ನು ಉಂಟು ಮಾಡುತ್ತದೆ. ಸುಖದ ಬೆನ್ನೇ ದುಃಖ ದುಃಖದ ಬೆನ್ನೇ ಸುಖ. ಈ ದ್ವಂದ್ವವು ವಿಧಿ ನಿಯಾಮಕ.

ಮಾನವನು ಪೂರ್ಣವಾಗಿ ಪರಿಸ್ಥಿತಿಯ ದಾಸನೇ? ಹಾಗೇನಿಲ್ಲ. ಅವನಲ್ಲಿ 'ಅಹಂಕಾರ' ಸಾಕಷ್ಟು ವಿಕಾಸವಾಗಿದೆ. ಈ 'ಅಹಂ' ಕರ್ತಾ ಆಗಿದೆ. ಹಾಗಾಗಿ ಅದು ಫಲದ ಭೋಕ್ತಾ ಸಹ ಆಗಿದೆ. ಆದರೆ ಎಲ್ಲವೂ 'ಅಹಂ'ದ ಇಚ್ಛೆಯಂತಾಗುವುದೇ? ಇಲ್ಲ. 'ಹರನ ಕರುಣೆಯಿರದೆ ಮರದೆಲೆಯೂ ಅಲುಗದು'. ವಿಧಿ ನಿಯಾಮಕನು ಪರಮೇಶ್ವರನು. ಬ್ರಹ್ಮನ ನಿಯಮವೊಂದಿದೆ. ಏನು ಮಾಡಿದರೆ, ಅದರ ಫಲವು

ಏನಾಗಬೇಕು? ಎಂದು. ಘಟನೆಗಳು ಈ ರೀತಿಯೇ ಘಟಿಸುತ್ತವೆ. ಆದರೆ, ಮಾನವನಿಗೆ ತನ್ನ ಇಚ್ಛಾ ಶಕ್ತಿಯಿದೆ, ಈ ಸ್ವ–ಇಚ್ಛೆಯು ದೈವೇಚ್ಛೆಯೊಂದಿಗೆ ಮೇಳೈಸಿದರೆ, ಕಾರ್ಯದ ಫಲವು ತನ್ನಿಚ್ಛೆಯಂತಾಗುತ್ತೆ. ಇಲ್ಲವಾದರೆ ಇಲ್ಲ. 'ವಿಧಿಯು ಬೆನ್ನಿಗಿರಲು ವರವೀವುದು ದೈವ; ಬ್ರಹ್ಮ ವಿಧಿಗೆ ಕರ್ತ; ಕರ್ಮಕೆ ತಾ ಕರ್ತ'. ಬಾಳಿನ ಸುಖ ದುಃಖಗಳಿಗೆ ತಾನೇ ಕಾರಣನು. ಫಲಾಸಕ್ತಿ ತೊರೆದು ಕರ್ಮ ಮಾಡುವುದೇ ತಾಪತ್ರಯಗಳಿಂದ ಪರಿಹಾರ ಪಡೆಯುವ ದಾರಿ.

೯೭೮ ಜನ್ಮ ಕಳೆದು ಬೇರೆ ಜನ್ಮವೆತ್ತಿ ಬರಲು,
ಕರ್ಮ ಧರ್ಮಗಳದು ಗಣನೆಯುಂಟು
ಕರ್ಮ ಧರ್ಮಗಳನು ಕಡೆಗಣಿಸಬಹುದೇ? ವಿಶ್ವ

೯೭೯ ಜನನ ಮರಣಕಾಲ ಸರಿ ಸ್ವತಂತ್ರನಿಹನೆ?
ತಂದು ಕೊಡನು, ಮುಂದೆ ತೆಗೆದುಕೊಳನು
ನಡುವೆ ಕರ್ತನೆನಲು ನಗುಪಾಟಲಲ್ಲವೆ? ವಿಶ್ವ

೯೮೦ ಕರ್ಮ ಗುಣಗಳೆಲ್ಲ ಕಡೆಗಣಿಸಿ, ನಡೆದರೆ,
ತತ್ತ್ವವೆಂತು ತನಗೆ ತಗಲಿ ಇಹುದು?
ಎಣ್ಣೆ ಇರದೆ ದೀಪ ಎಳ್ಳಿನಿಂದುರಿವುದೆ? ವಿಶ್ವ

೯೮೧ ವಿಧಿಯು ಬೆನ್ನಿಗಿರಲು ವರವೀವುದು ದೈವ;
ಅದುವೆ ಕರ್ಮದಿಂದ; ಅಲ್ಲ ವಿಧಿಯು
ಕರ್ತ ಅಜನು ವಿಧಿಗೆ; ಕರ್ಮಕೆ ತಾ ಕರ್ತ ವಿಶ್ವ

೯೮೨ ಆಗುತಿಪ್ಪ ಕಾರ್ಯ ಆಗದೆಂತು ಇಹವು?
ಆಗದಂಥ ಕಾರ್ಯ ಆಗವೆಂದು
ಮಹಿಮೆ ಬೇರೆಯುಂಟು; ಮನುಜರಲ್ಲಿ ಉಂಟೆ ವಿಶ್ವ

೯೮೩ ಮಡದಿ ಮಕ್ಕಳು ವಿತ್ತ ಮಾತೆಗಾತು ಮನುಜ;
ಕನಕ ಪಡೆಯಬಹುದೆ ಕಷ್ಟಪಡದೆ?
ತನಗೆ ಯಾರು ಇಲ್ಲ; ತಾನು ಬ್ರಹ್ಮವರಿಯೆ ವಿಶ್ವ

೯೮೪ ದಾನ ಧರ್ಮವೆಲ್ಲ, ದಯೆಯು, ಸತ್ಯ, ನೀತಿ,
ವಿನಯ, ಧೈರ್ಯ, ಶೀಲ ವಿತರಣಗಳು
ರಾಜ ಪಾಲಿಗಿಹವು; ರಾಜಯೋಗವಿದುವೆ; ವಿಶ್ವ

೯೮೫ ಕರ್ಮದಲ್ಲಿ ಹುಟ್ಟಿ ಕರ್ಮದಲ್ಲಿ ಸಿಲುಕಿ,
ಕರ್ಮ ಸಂಚಯವನು ಕಾಣಲಾರ
ಕರ್ಮ ಬಂಧವನ್ನು ಕೊನೆಗೊಳಿಸಲಾರ ವಿಶ್ವ

೯೮೬ ಧರ್ಮ ಕರ್ಮಗಳನು ತಪ್ಪದೆ ಮಾಡದಿರೆ,
ಕರ್ಮ ಜೀವಿ ಮೇಲು ಕಾಣಲಾರ
ನಿರ್ಮಲ ಹೃದಯದವ ನಿನ್ನ ರೂಪದೊಳಿಹ ವಿಶ್ವ

೯೮೭ ಕರ್ಮಾಕರ್ಮಕ್ಕೋಸುಗ
ನರ್ಮದಿ ಓರ್ವನಿರುವ ಒಳಗಾತ್ಮನೆ ಗುರುತೈ.
ಧರ್ಮಾಧರ್ಮಗಳನು ಆ
ನಿರ್ಮಲ ಮತಿಯಾದವನೇ ನಿಲಿಸುವ ವೇಮಾ

೯೮೮ ಕರ್ಮಾಕರ್ಮಗಳಳಿಯದ
ಮರ್ಮಂಗಳು ಇಂದ್ರಜಾಲ ಮಹಿಮೆಯ ವಿದ್ಯಂ
ಕರ್ಮದ ಮರ್ಮವು ಪ್ರಣವವು,
ನಿರ್ಮಲ ಮತಿಯರಿಯಬೇಕು., ನಿಜವದು, ವೇಮಾ

೯೮೯ ಕರ್ಮದ ನಿವೃತ್ತಿಯಾಗಲ್
ನಿರ್ಮಲವಾದ ಭವನವನು ಚೊಕ್ಕಟವರಿಯಲ್
ಕರ್ಮವು ತೀರುವ ವೇಳೆಗೆ,
ಧರ್ಮವೆ ನಿಜ ದೇವರದನು, ತಿಳಿವರು ವೇಮಾ

೯೯೦ ಪ್ರಾಣವಾತ್ಮವೆನಲು ಪ್ರಾಣಿ ಜೀವಿತಾಯ್ತು;
ಜೀವಿ ಪ್ರಾಣ ಮಾತ್ರ ಸೇರಿಯೊಂದೆ
ಕರ್ಮ ಬಂಧನಕ್ಕೆ ಕಟ್ಟು ಬೀಳುತಿಹರು ವಿಶ್ವ

**೯೯೧ ನರಜನ್ಮವ ತಾನೆತ್ತಿಯು,**
**ಪರಮಾತ್ಮನನರಿಯದಿರಲು, ಪಾಪಾತ್ಮನಲಾ!**
**ಬರಿ ದುರಿತ ಕರ್ಮ ಗೆಯ್ದೊಡೆ,**
**ಮರಳಿ ಅಧೋಗತಿ ಪಡೆವನು, ಅರಿಯೈ ವೇಮಾ**

**೯೯೨ ಕರ್ಮವು ಜ್ಞಾನಿಗೆ ದೂರವು;**
**ಕರ್ಮಗಳಿಗೆ ಜ್ಞಾನಿ ದೂರನಿಹ, ನಿಜವಿದು, ತಾ**
**ಕರ್ಮ ಜ್ಞಾನಗಳುಡುಗಿದ**
**ನಿರ್ಮಲನಿಗೆ ಉಂಟು ಮುಕ್ತಿ, ನಿಜವಿದು, ವೇಮಾ**

●

## ಕರ್ಮಫಲ

ಕರ್ಮಕ್ಕೆ ಸಮನಾಗಿ ಮತ್ತು ವಿರುದ್ಧ ದಿಕ್ಕಿನಲ್ಲಿ ಪ್ರತಿಕರ್ಮವಿರುತ್ತದೆ. ಇದು ನಿಸರ್ಗನಿಯಮ. ಮಾನಸಿಕ ಕ್ಷೇತ್ರದಲ್ಲಿ ಇದು ಜನ್ಮಾಂತರಕ್ಕೂ ವಿಸ್ತರಿಸುತ್ತದೆ. ಅದೇ ವಿಧಿ ನಿಯಮ.

ಗೆಯ್ದ ಕರ್ಮಗಳು ಲಿಂಗ ಶರೀರದಲ್ಲಿ ಕೂಡಿ ಸಂಚಿತ ಕರ್ಮಗಳಾಗುತ್ತವೆ. ಇವುಗಳ ಆವೇಗವು ಹೆಚ್ಚು ಕಡಿಮೆಯಿರುತ್ತದೆ. ಇದೇ ಜನ್ಮದಲ್ಲಿ ಫಲ ನೀಡುವ ಆವೇಗವುಳ್ಳ ಕರ್ಮಗಳು ಪ್ರಾರಬ್ಧ ಕರ್ಮಗಳು. ಈಗ ಫಲ ನೀಡುವ ಕರ್ಮವು ಪೂರ್ವಜನ್ಮ ಕೃತವಿರಬೇಕೆಂಬ ವಿಧಿಯಿಲ್ಲ. ಪ್ರಚಲಿತ ಜನ್ಮದಲ್ಲಿ ಬಾಲ್ಯದಲ್ಲಿ ಗೆಯ್ದ ಕರ್ಮಗಳು ಮುದಿತನದಲ್ಲಿ ಫಲ ನೀಡ ತೊಡಗಿ ಪೀಡಿಸುವುದುಂಟು.

ಅಂತೂ ಭವವು ಪೂರ್ವ ಕರ್ಮ ಫಲವೆಂದು ಸಿದ್ಧವಾಯಿತು. ಚಿಕ್ಕ ಕೂಸು ಇನ್ನೂ ಮೊಲೆ ಕುಡಿಯುವಾಗ ಒಮ್ಮೆಲೇ ಚೀರುತ್ತದೆ. ಏಕೆ? ಅದಕ್ಕೆ ಹಿಂದಿನ ಜನ್ಮದ ಘಟನೆ ನೆನಪಾಗುತ್ತದೆ.

ಒಮ್ಮೆ ಯಥಾರ್ಥ ಜ್ಞಾನವಾದರೆ ತೀರಿತು. ಜ್ಞಾನಿಗೆ ಕರ್ಮದ ಅಂಟು ಹತ್ತದು.

ಕರ್ಮಫಲವು ಕರ್ಮದ ದಿಶೆಯನ್ನು ಸೂಚಿಸುತ್ತದೆ. ಆದರೆ ಕರ್ಮ ನಡೆಯಲು ಪುರುಷ ಯತ್ನವು ಬೇಕೇಬೇಕು. ಕೈಕಟ್ಟಿ ಕುಳಿತರೆ ಕೆಲಸ ನಡೆಯದು. ಫಲವು ವಿಧಿ ನಿಯಮಾನುಸಾರ ಆಗುವುದರಿಂದ ಅತ್ತ ಅಸಕ್ತನಾಗದೆ ಕರ್ತವ್ಯವನ್ನು ಪರಿಪಾಲಿಸಬೇಕು.

೯೯೩ ಬೇಕು ಎನಲು ಬರದು; ಬೇಡವೆನಲು ಬಿಡದು
ಪೂರ್ವ ಕರ್ಮಕಂಟಿ ಫಲವು ಉಂಟು
ಹೃದಯಲ್ಲಿ ದುಃಖ ಪಡದಿರುವುದೆ ಧರ್ಮ ವಿಶ್ವ

೯೯೪ ಬರದುದ ಕೋರಲು ಬಾರದು;
ಬರುವುದ ಕೋರದಿರಲು ತಾನೇ ಬರುತಿಹುದೈ
ಬರಿ ಚಿಂತೆಯನತಿ ಗೆಯ್ದೊಡೆ,
ಸರಿಯಾಗುವುದೇ? ತಾನಾಗುತಿಹುದು ವೇಮಾ

೯೯೫ ಹಿಂದೆ ಆಗಿ ಹೋದುದು ಏನು?
ಮುಂದೊಮ್ಮೆ ಕೂಡ ಏನುಂಟು? ಮಹಿಯಲ್ಲಿ ತಾ–
ನಿಂದು ಆಗುವಂತಹದೇನು?
ಎಂದಾದರೇನಾದರುಂಟೆ/ ಜಗದಿ, ವೇಮಾ

೯೯೬ ಪೂರ್ವ ಜನ್ಮದಲ್ಲಿ ಪುಣ್ಯಮಾಡದಿಪ್ಪ
ಪಾಪಿ ಹೊನ್ನಿಗಾಶೆ ಪಡುವುದೆಲ್ಲ
ಬಿತ್ತಲು ಮರೆತವನು, ಬೆಳೆಯನಾಶಿಪಂತೆ ವಿಶ್ವ

೯೯೭ ತನ್ನ ಕರ್ಮದಿಂದ ತಾನು ಲೋಕದೊಳಗೆ
ತಾಯಿ ಗರ್ಭದಲ್ಲಿ ತಾನು ಹುಟ್ಟಿ,
ತನ್ನ ಮರೆತು ತಾನು ತನುವ ಕೆಡಿಸುತಿಹನು ವಿಶ್ವ

೯೯೮ ಭವವು ಪೂರ್ವ ಕರ್ಮ ಫಲವು; ಅನುಭವಿಸಲು
ಬಂದಿತೆಂದು, ಮನವ ಭದ್ರಗೊಳಿಸು
ಕಷ್ಟ ಸುಖಗಳೆಷ್ಟೊ? ಕಂಡು ತೊಲಗಬೇಡ ವಿಶ್ವ

೯೯೯ ಜನನವೆಂತು ಆಯ್ತು? ಜಾತಿ ಯಾವುದಾಯ್ತು?
ಜನನ–ಮರಣಗಳಿಗೆ ಜಾಡು ತಿಳಿಯೆ,
ಕೇಳಿ ಕೇಳಿ, ಇದನೆ ಹೇಳುವುದ ನೀನರಿ ವಿಶ್ವ

೧೦೦೦ ಜನ್ಮಗಳಿನ್ನೆಷ್ಟೊ? ಜನ್ಮವೆತ್ತುತಿಹರು
ಕರ್ಮ ಧರ್ಮಗಳಿಗೆ ಗಣನೆಯೆಷ್ಟೊ?
ಕರ್ಮ ಧರ್ಮಗಳನು ಕೊನೆಗಾಣಿಸರಲ್ಲ! ವಿಶ್ವ

೧೦೦೧ ಜನ್ಮ ಪೂರ್ವದಲ್ಲಿ ಜನರ ಕೇಳಿದಾಗ,
ಕರ್ಮ ಜೀವಿಯಾದ ಕಲಿಯುಗದಲಿ;
ಇಟ್ಟವರಿಗೆ ಸತತ ಹುಟ್ಟುತಿಹುದೆ ಸಾಕ್ಷಿ ವಿಶ್ವ

೧೦೦೨ ಬರುವುದೆ ಹೋಗುವುದು ಮತ್ತೆ
ಮರಣಿಸುವುದ ಕಂಡರಿಯರು ಸಹಜವು ಎನಿಸಲ್
ತಿರುಗುತ ಮನ ಬಂದಂತೆಯೆ,
ಉರಿಯಲಿ ಬಿದ್ದು ಮಿಡತೆ ಸಾಯುವ ತೆರ ವೇಮಾ

೧೦೦೩ ಮುಂದಿನ ಜ್ಞಾನವೆಲ್ಲ ಮೋಸವಾಗಿ, ಶಿಶುವು
ಕರ್ಮ ಬಂಧನದಲಿ ಕಾಣಲಾರ
ಜನನ ಮರಣಗಳಿಗೆ ಸಾದೃಶ್ಯಾಗಿ ಬಂತು
ಇಹದಲ್ಲಿಯೆ ಹುಟ್ಟು ಅರಿಯೊ ವೇಮ

೧೦೦೪ ಸ್ತನ ಕುಡಿವ ಶಿಶುವು ಸರಸ ನಿದ್ರಿಸುತಿರೆ,
ಸ್ವಪ್ನದಲ್ಲಿ ಸೇರಿ ಸರಕ್ಕನೇ
ನಕ್ಕು ಕಿರಿಚಿದಾಗ, ನಿಖಿಲ ಜಗದ ಜನರು,
ಅಚ್ಚರಿ ಬಡುತಿಹರು ಹುಚ್ಚು ವೇಮ

೧೦೦೫ ಪೃಥಿವಿಲಿ ಹುಟ್ಟಿ ಮೊಳಕೆ, ಪೃಥಿವಿಯೊಳಗೆ ಕಲೆತು,
ಮರಳಿ ಅದುವೆ ಹುಟ್ಟಿ ಮಗನು, ಗಂಡ
ಧರಣಿ ಜನರಿಗೆಲ್ಲ ತಾಯಿಯೆ ಹೆಂಡತಿಯು ವಿಶ್ವ

೧೦೦೬ ಪಿಂಡವಾಗಿ, ತಾಯಿ ಪಿರಿಗರ್ಭದಿ ಉಂಟು;
ಪೂರ್ವ ಕರ್ಮವೆಣಿಸಿ ಹೊರಳಿ ಅತ್ತು,
ಧರಣಿಲಿ ಹುಟ್ಟಿ, ಅದ ಮರೆತು ವರ್ತಿಸುವರು! ವಿಶ್ವ

— — — — — — — — — — — — — — — — — — — — — —

೧೦೦೭ ಜನ್ಮಗಳು; ಇನ್ನೆಷ್ಟು ಜನ್ಮಗಳನೆತ್ತುವುದೊ?
ಕರ್ಮ ಧರ್ಮಗಳ ಗಣನೆಯೆಷ್ಟೊ?
ಕರ್ಮ ಧರ್ಮಗಳನು ಕೊನೆಗೊಳಿಸಲಾರರು ವಿಶ್ವ

೧೦೦೮ ಎಂಥವನೋ ತಾನು? ಅರಿಯ ಪೂರ್ವ ಜನ್ಮ
ನೀಚ ಜೀವನದಲಿ ನೇಮವೇಕೆ?
ಅರಿವುದಯ್ಯ ಲೋಕ ಈಶ್ವರಮಯವೆಂದು ವಿಶ್ವ

೧೦೦೯ ಮಗುವಾಗಿರುವಾಗ ಮಾಡಿದ ಕರ್ಮಗಳು,
ಬಾಲ ಮುದಿಯರನ್ನು ಬಾಧಿಸುವವು
ಮಹಿಯಾಗಸ ನಡುವೆ ಮತಿಯ ನಿಲಿಸಿ ನೋಡು ವಿಶ್ವ

೧೦೧೦ ಕೆಡುಕನನ್ನು ಹೆಚ್ಚು ಕೆಡಿಸುತಿಹುದು ದೈವ;
ಅಡ್ಡಿ ಪಡಿಸುತಿಹುದು ಆಪದಿರಲು
ಕಡ್ಡಿ ಪೀಕು ಕಂಡು ರೆಡ್ಡಿ ತಾ ಮೆಚ್ಚುವನೆ? ವಿಶ್ವ

೧೦೧೧ ಕರ್ಮಗುಣಗಳೆಲ್ಲ ಕಡೆಗಣಿಸಿ ನಡೆದರೆ,
ತತ್ತ್ವಂತು ತನಗೆ ತಗಲಿ ಇಹುದು?
ಎಣ್ಣೆ ಇರದೆ ದೀಪ ಎಳ್ಳಿಂದ ಉರಿವುದೇ? ವಿಶ್ವ

೧೦೧೨ ಕರ್ಮ ಫಲಗಳೆಲ್ಲ ಕಪಟವೆಂದು ಕಂಡು,
ಧರ್ಮ ಫಲಗಳೆಲ್ಲ ತಗಲುತಿಹವು;
ಧರ್ಮ ಮರ್ಮಗಳನು ದಾಟುವುದೇ ಮುಕ್ತಿ ವಿಶ್ವ

೧೦೧೩ ವೀರರಾದೊಡಿಲ್ಲ; ವಿದ್ಯೆ ಕಲಿತೊಡಿಲ್ಲ
ಸತ್ಕುಲದಲು ಇಲ್ಲ; ಸಟೆಯೊಳಿಲ್ಲ
ಜನ್ಮ ಫಲವೆ ಹೊರತು ಜಪಿಸುವುದರೊಳಿಲ್ಲ ವಿಶ್ವ

೧೦೧೪ ಪ್ರಾಪ್ತಿ ಇರುವ ತಾಣ ಫಲವೀವುದು ದೈವ;
ಪ್ರಾಪ್ತಿ ಇರದ ತಾಣ ಫಲವು ಇಲ್ಲ
ಪ್ರಾಪ್ತಿ ಇರದೆ, ಹೊನ್ನು ಪರಮಾತ್ಮನೀವನೆ? ವಿಶ್ವ

— — — — — — — — — — — — — — — — — — — — — —

೧೦೧೫ ಮೃಗಗಳಿಗೆ, ನರರಿಗೆ ಮೇಲಾಗಿ, ಪಶುಗಳು,
ಉಳಲು, ತಿನಲು, ಪಾಲುಗೊಳಲು ಹುಟ್ಟಿ,
ಕಷ್ಟ ಪಡುತ ಇರಲು ಕರ್ಮವೀಡೇರದೇ? ವಿಶ್ವ

೧೦೧೬ ಫಲವಿರದ ಕಾರ್ಯ ಪ್ರಯತ್ನಿಸರು ಯಾರು;
ನುರಿತ ಬುದ್ಧಿ ಜನರು, ನಿಜವಿದಷ್ಟೆ?
ಫಲವು ಒಳ್ಳಿತಿರಲು ಪರದಡಿ ಮುದವುಂಟು ವಿಶ್ವ

೧೦೧೭ ಜ್ಞಾನಿಗೆ ಕರ್ಮವು ಏತಕೆ?
ಜ್ಞಾನಿಗೆ ಕರ್ಮವು ಉಂಟಾಗದಲ್ಲ ಕಾಣಾ!
ಜ್ಞಾನವೆ ಕರ್ಮವು ಆದೊಡೆ,
ಮಾನವನಿಗೆ ಕರ್ಮ ಮುಕ್ತಿ, ಮಹಿಯಲಿ, ವೇಮಾ!

೧೦೧೮ ತನ್ನ ಪ್ರಾಪ್ತಿ ತನಗಿರಲು,
ತನ್ನಯ ದುಃಖ ತನಗೆ ಹೊರತು ಅನ್ಯರಿಗಿಹುದೇ?
ತನ್ನೊಳಿತು ತನಗಿಹುದಲ್ತೆ?
ಅನ್ಯವನೆಣಿಸದೆ, ಅನುವಿಲಿ, ಸೇರೆಲೊ, ವೇಮಾ

೧೦೧೯ ಎಷ್ಟೊ ಫಲಗಳುಂಟು; ನಿನ್ನ ಫಲವೆ ಮೇಲು;
ಅಖಿಲ ಸುಖಗಳಲ್ಲಿ ಅಧಿಕವಿಹುದು;
ಕಂಡು ಕಾಣನಲ್ಲ! ಕಾಣಿಸುವುದು ಕರ್ಮ ವಿಶ್ವ

೧೦೨೦ ಒಬ್ಬನ ಕೀಳು ಬೇರೊಬ್ಬನಿಗೀಯನು
ಒಬ್ಬನ ಮೇಲು ಬೇರೊಬ್ಬಗೀಯ;
ಕೀಳು ಮೇಲೆನುವರು ಕಾಣರಿದರ ರೀತಿ; ವಿಶ್ವ

೧೦೨೧ ಪಾಪವೇನು ಅನ್ಯ ಲೋಕದ ಫಲವಲ್ಲ;
ತನ್ನ ಪಾಪ ಕರ್ಮಕಂಟಿ ಗೈವ,
ಕರ್ಮ ಶುದ್ಧಿಗಿಂತ ಪಾಪ ತೊರೆಯೆ ಲೇಸು ವಿಶ್ವ

೧೦೨೨ ಎಷ್ಟೊ ತಪವ ಗೆಯ್ಯೆ, ಎಷ್ಟೊ ವ್ರತವ ಮಾಡೆ,
ಎಷ್ಟೊ ಕಷ್ಟ ಪಡಲು ಏನು ಫಲವು?
ಕರ್ಮ ಫಲವೆ ಹೊರತು ಕಾಣಲಾರ ಮುಕ್ತಿ ವಿಶ್ವ

೧೦೨೩ ಶನಿಗೆ ಸಾಲದೆಂದು ಕೆಲವರು ಹೇಳುವರು
ಶನಿಗೆ ಸಾಲದದನೆ ಕಾಣರಲ್ಲ!
ಕರ್ಮ ಫಲವೆ ಮಿಗಿಲು, ಕಷ್ಟವೀಯುತಿಹುದು ವಿಶ್ವ

೧೦೨೪ ಗೂಬೆ ಹೊಕ್ಕ ಮನೆಯ ಹಾಳುಗೆಡವಿ,
ಹೊರಟು ಹೋಹರೆಷ್ಟು ಹುಚ್ಚರಿಹರು?
ಗೂಬೆ, ಗೃಹಗಳಲ್ಲ; ಕೂಡಿ ಬಿದ್ದ ಕರ್ಮ! ವಿಶ್ವ

೧೦೨೫ ಬಿಗಿದು ಹಿಡಿದ ನಾಲ್ಕು ಬಾನೊಳು ಮೆರೆವಂತೆ,
ಭಂಡ ಶುದ್ಧನಾಗಿ 'ದಂಡಿ'ಯಹನೆ?
ಹುಟ್ಟುವಲ್ಲಿ ಉಂಟು, ಪೂರ್ವ ಪುಣ್ಯವೆಲ್ಲ ವಿಶ್ವ

೧೦೨೬ ಶುದ್ಧ ನೀರು ಸುರಿಯೆ, ಮಲ್ಲಿಗೆ ಹೂವಾಯ್ತು
ಫಲವು ದೊರೆವುದೆಂತು ದುಡಿದ ಹೊರತು?
ತಿಂಡಿ ತಿನಿಸು ಬಹುದೆ ಅಡುಗೆ ಮಾಡದೆಂತು? ವಿಶ್ವ

೧೦೨೭ ತನ್ನ ಅಣ್ಣ ತಮ್ಮ ದಾನ ಗೆಯ್ದೊಡಾಗ,
ತನಗೆ ಪುಣ್ಯವೆಂದು ತಿಳಿಯಬೇಡ
ತನ್ನ ಕಾಲ ಕೊಯ್ಯೆ, ತಮ್ಮ ತಾನಳುವನೆ? ವಿಶ್ವ

೧೦೨೮ ಕರ್ಮ ಫಲಗಳ ಕಪಟವೆಂದು ಕಂಡು,
ಧರ್ಮ ಫಲಗಳೆಲ್ಲ ತಗಲುತಿಹವು
ಧರ್ಮ ಮರ್ಮಗಳನು ದಾಟುವುದೇ ಮುಕ್ತಿ ವಿಶ್ವ

೧೦೨೯ ತಾನು ಜನ್ಮ ವೆತ್ತಿ ದಾನ ಧರ್ಮ ಈಯ;
ಕರ್ಮ ಗತಿಯಲಿ ಯಮನು ಕಷ್ಟವೀವ
ಕರ್ಮ ಧರ್ಮಗಳಲಿ ಕಡೆಗಾಣುವ ಬ್ರಹ್ಮ ವಿಶ್ವ

೧೦೩೦ ಅಂಥ ಕಷ್ಟದ ಬದುಕು ಅಗ್ನಿ ಪಾಲೆ ಆಯ್ತು
ನಿರ್ದಯಾತ್ಮ ಬದುಕು ನೀರು ಗೂಡಿ,
ಕ್ರೂರ ಕರ್ಮಿ ಬದುಕು ಚೋರರ ಪಾಲಾಯ್ತು ವಿಶ್ವ

೧೦೩೧ ಬ್ರಾಹ್ಮಣಾದರೇನು? ಭಕ್ತನಾದರೇನು?
ಯತಿಯು ಆದರೇನು? ಇತರರೇನು?
ಯಾರಾದರೂ ಯಮ ತಾನು ಬೆನ್ನು ಬಿಡನು ವಿಶ್ವ

೧೦೩೨ ಪ್ರಳಯ ಕಾಲದಲ್ಲಿ ಪ್ರಮಥರ ಕೈಯಿಂದ
ಅಳಿದು ಹೋದರಲ್ಲ ಅಂದಿನವರು
ತಿಳಿಯಲಾರರಲ ದೇವರ! ದ್ವಿಜರೆಲ್ಲ. ವಿಶ್ವ

೧೦೩೩ ಆಗುವುದನರಿಯರು ಅಜ್ಞಾನಿ ಜೀವರು;
ಮೂಲವ ತಿಳಿಯದಂಥ ಮುಟ್ಟಿನಿಂದ
ಅನುದಿನವು ಸೃಜಿಸುತ, ಆತ್ಮ ತಿಳಿಯದಿಹರು
ಸತ್ತು ಹುಟ್ಟುತಿಹರು ಜಗದಿ ವೇಮ

೧೦೩೪ ಇದ್ದವನಂತೆ ಇರು; ಇಲ್ಲದವನಂತಿರು;
ಮತ್ತೆ ಇಲ್ಲದಿಹುದು ಮರಳಿ ಉಂಟು;
ಆಶೆ ಕೋರಿದಷ್ಟು ಅನುಗ್ರಹಿಸುವ ಶಿವ. ವಿಶ್ವ

೧೦೩೫ ಸ್ವಾತಿ ಮಿಂಚು, ನೋಡಿ, ಸಂತೋಷ ಪಡುವರು;
ಸ್ವಾತಿ ಮಿಂಚು ಇರದು ಸಫಲವಾಗಿ,
ಮಿಂಚು ಗುಡುಗು ಇರದೆ ಮೇಘ ಸುರಿಯದು ವಿಶ್ವ

●

## ವಿಧಿಯ ಕೈವಾಡ

ಪುರುಷ ಪ್ರಯತ್ನದಲ್ಲಿ ವಿಧಿಯ ಕೈವಾಡವೆಷ್ಟು? ಅದರ ಕಾರ್ಯ ವಿಧಾನವಾವುದು? ಎಂಬ ಪ್ರಶ್ನೆಯು ಎಂದಿನಿಂದಲೂ ಇದೆ. ಇಲ್ಲಿ ಯೋಗಿ ವೇಮನರು ಸಮಸ್ಯೆಯನ್ನು ವಿವರಿಸಿದ್ದಾರೆ.

ಕರ್ಮಕ್ಕೆ ತಕ್ಕ ಪ್ರತಿ ಕರ್ಮವಿದೆ. ಈ ಪ್ರತಿಫಲದ ಸ್ವರೂಪ, ಆವೇಗಗಳು ಒಂದು ನಿಯಮಾನುಸಾರ ಘಟಿಸುತ್ತವೆ. ಇದುವೇ ವಿಧಿ ನಿಯಮ ಇಲ್ಲವೆ ವಿಧಿ.

ಈ ವಿಧಿಯನ್ನು ಹೊಂದಿಸುವ ಶಕ್ತಿಯೇ ಇಲ್ಲಿ ಬ್ರಹ್ಮ. ಆದ್ದರಿಂದ 'ಬ್ರಹ್ಮ ವಿಧಿಗೆ ಕರ್ತ; ಕರ್ಮಕೆ ತಾನೆ ಕರ್ತ'. ತನ್ನ ಕರ್ಮಾನುಸಾರ ತಾನು ಫಲ ಭೋಗಿಸುತ್ತಾನಷ್ಟೇ. ಫಲವು ಯಾವ ಬಗೆಯಾಗಿರಬೇಕೆಂಬುದನ್ನು ಬ್ರಹ್ಮನು ವಿಧಿ ನಿಯಮಾನುಸಾರ ನಿರ್ಧರಿಸುವುದರಿಂದ ಮಾನವನು ಫಲದ ಅಪೇಕ್ಷೆಯನ್ನು ತೊರೆಯದೆ ಗತ್ಯಂತರವಿಲ್ಲ.

ತಾನು ಸೌಖ್ಯವನ್ನು ಕೋರಿದರೆ ಸುಖಿಯಾಗುತ್ತಾನೆ. ಆದರೆ ಶಿವನ ಕರುಣೆ ಇದ್ದರೆ ಮಾತ್ರ. ಹೀಗೆ, ತಾನು ಸುಖವಾಗಿದ್ದು ಸುಗುಣವಂತನೂ ಆಗಿದ್ದರೆ, ಪ್ರಕೃತಿಯನ್ನು ಮೋದಿಸಿದಾಗ ವಿಧಿಯು ಹುಟ್ಟಿಕೊಳ್ಳುವುದು ಇದನ್ನರಿಯಬೇಕು.

ಆಗುವ ಕಾರ್ಯ ಆಗಿಯೇ ಆಗುತ್ತದೆ. ಆಗದ ಕಾರ್ಯ ಎಂದೂ ಆಗದು. ಇದರ ಹಿಂದಿನ ಮಹಿಮೆ ವಿಧಿ ನಿಯಮದಲ್ಲಿದೆ. ಮನುಜರಲ್ಲಿ ಇಲ್ಲ. ತರುಣಿಗೆ ಶೃಂಗಾರಗಳಿದ್ದು ಗಂಡನ ಕೃಪೆ ಇಲ್ಲವಾದರೆ ಹೇಗೋ, ಹಾಗೆ ವಿಧಿಯು ಬೆನ್ನಿಗಿರದ ಪುರುಷ ಯತ್ನವಾಗುತ್ತದೆ.

ತನ್ನ ಪೂರ್ವ ಕರ್ಮದಿಂದ, ತನಗೆ ಭಾಗ್ಯವಿದ್ದರೆ, ಕಾರ್ಯ ಸಫಲ, ಇಲ್ಲವಾದರೆ ಇಲ್ಲ. ಭಾಗ್ಯಹೀನನಿಗೆ ಪರುಸವೇದಿ ದೊರೆತರೂ ಅದು ನಿಲ್ಲದು. ಈ ಭಾಗ್ಯ ಇಲ್ಲವೆ ವಿಧಿಯನ್ನು ಹಣೆಯ ಬರೆಹ ಎನ್ನುತ್ತೇವೆ. ಇದನ್ನು ಅಳಿಸಲು ಶಕ್ಯವೇ?

ವಿಧಿಯ ನಿಯಮ ತಿಳಿಯದೆ ತನ್ನ ಕರ್ಮದ ಪೂರ್ವಾಪರ ತಿಳಿಯದೆ, ಶಕುನ ಮತ್ತಿತರ ಮೂಢ ನಂಬುಗೆಗಳನ್ನು ಬೆಳೆಸಿಕೊಳ್ಳುವುದು ವ್ಯರ್ಥವಷ್ಟೇ.

**೧೦೩೬ ವಿಧಿಯು ಬೆನ್ನಿಗಿರಲು ವರವೀವುದು ದೈವ;**
**ಅದುವೆ ಕರ್ಮದಿಂದ; ಅಲ್ಲ ವಿಧಿಯು**
**ಕರ್ತ ಅಜನು ವಿಧಿಗೆ, ಕರ್ಮಕೆ ತಾ ಕರ್ತ ವಿಶ್ವ**

**೧೦೩೭ ವಿಧಿ ಕೃತಗಳಲ್ಲಿ ಸರ್ವವು**
**ವಿಧಿಗೇ ವಿಧಿ ಲೇಸಾಯಿತು ವಿಷ್ಣುವ ಕೊಲ್ಲಲ್**
**ವಿಧಿಯಭವ ರೂಪದಲ್ಲಿಯ**
**ವಿಧಿ ಬ್ರಹ್ಮವು ಕಾಣು; ತಿಳಿದು ಕೇಳೈ ವೇಮಾ**

**೧೦೩೮ ವಿಧಿ ಕೃತದೊಳಗಿದೆ ಸಕಲವು;**
**ವಿಧಿಗೇ ವಿಧಿ ಲೇಸಾಗಿಹ ವಿಷ್ಣುವ ನುತಿಸಲ್,**
**ವಿಧಿಯಾರಿಗಾದರು ಬಹುದು;**
**ವಿಧಿ ಬ್ರಹ್ಮವು; ತಿಳಿದು ತಿಳಿದು ಬೆಳಗೈ; ವೇಮಾ**

೧೦೩೯ ಸೌಖ್ಯವರಿಯುವಂತೆ ಸೌಖ್ಯವಾಗುತಿಹುದು
ಹರನ ಕೃಪೆಯಿಂ ಸೌಖ್ಯ ಹೊಂದಿ ಉಂಟು;
ಸುಖ ಅಸುಖಗಳಿಗೆ ಶೂಲಿ ಕಾರಣನಿಹ ವಿಶ್ವ

೧೦೪೦ ಸುಖಸುಖದಲಿ ತಾನು ಸುಗುಣನಾಗುತಿರೆ,
ಪ್ರಕೃತಿ ಮದುವೆ ಗೆಯ್ದು ಪರವ ಕೆಡಿಸಿ,
ವಿಧಿಗಳ ಹುಟ್ಟಿಸುವ ವಿಧಿಯ ತಾನು ಕಾಣ ವಿಶ್ವ

೧೦೪೧ ಹರಿವಿಧಿ ಕಾಣುತ ಕೇಳೆಯ?
ಹರನು ನಿಮಿತ್ತನಿರುವಲ್ಲಿ ನಲಿವುದ ಕೇಳೆಯ?
ಗುರಿಯಿರಿಸಿದೋದು ಕೇಳೆಯ?
ತರಹರಿಪ ಸಂಧಿ ಬಂದೊಡದೆ ದೈವ; ವೇಮಾ

೧೦೪೨ ಆಗುತಿಪ್ಪ ಕಾರ್ಯ ಆಗದೆಂತು ಇಹವು?
ಆಗದಂಥ ಕಾರ್ಯ ಆಗದೆಂದು
ಮಹಿಮೆ ಬೇರೆಯುಂಟು; ಮನುಜರೊಳಗೆ ಉಂಟೆ ವಿಶ್ವ

೧೦೪೩ ಬೇಡವೆನಲು ಬಿಡದು; ಬೇಕು ಎನಲು ಬರದು;
ತಾನು ಮಾಡಿದಂಥ ದಾನ ಫಲವು
ಹೃದಯದಲ್ಲಿ ದುಃಖ ಪಡದಿರುವುದೆ ಯೋಗ ವಿಶ್ವ

೧೦೪೪ ತನಗಾವಾಗ ಸುಭಿಕ್ಷವು?
ತನಗಾವಾಗ ಸಲೆ ಭಾಗ್ಯ ವರ್ಧಿಸುತಿಹುದೋ?
ಎನುತ ದೆಶೆಗಾಗಿ ಎಲ್ಲೆಡೆ
ಮನದಲ್ಲಿಯೆ ಮರುಗುತಿಹರು ಮನುಜರು ವೇಮಾ!

೧೦೪೫ ಕ್ಷಿತಿ ತರುಣಿಗೆ ತಕ್ಕ ಶೃಂಗಾರಗಳಿದ್ದು,
ಭರ್ತನ ಕೃಪೆಯಿರದ ಬಾಳಿನಂತೆ
ದೈವ ಕೃಪೆಯು ಇರದೆ ತಿಳಿವು ಕೈಗೂಡದು ವಿಶ್ವ

೧೦೪೬ ಅರಿತೊಡೆ ಸುಖ ಹೊಂದಿ, ದುಃಖವ ತಿಳಿಯದಿರಲು,
ವಿಧಿಯ ದೂರಲು ಫಲವೇನು? ವಿನತಿ ಮಾಡಿ,
ಬುದ್ಧಿಗೆ ಹೊಳೆಯೆ, ಪರಿಪೂರ್ತಿ ಹೊಂದಿರಯ್ಯ!
ಅಂತೆ ತೆಪ್ಪಗಿರಲುಬಹುದೆ? ಆಗ ವೇಮ

೧೦೪೭ ಲೋಭ ಮೋಹದಿಂದ ಲಾಭ ಪ್ರಾಪ್ತಿಯಿರದು
ನೆನೆದ ಕಾರ್ಯವೆಲ್ಲ ನೆರವೇರವು
ತಾವೊಂದು ಬಗೆದರೆ ದೈವದ ಬಗೆಯೊಂದು ವಿಶ್ವ

೧೦೪೮ ತನಗೆ ಭಾಗ್ಯವಿರಲು ದಕ್ಕುವುದಲ್ಲದಿರೆ,
ಇರುವ ಭಾಗ್ಯವೆಲ್ಲ ಇಲ್ಲವೆಂದು,
ನಂಬಿಕೊಂಡು ನೋಳ್ಪ, ನರನೆ ಆದ ಯೋಗಿ ವಿಶ್ವ

೧೦೪೯ ತನಗೆ ಪ್ರಾಪ್ತಿ ಇರದೆ ದಾತ ನೀಡನಲ್ಲ!
ಪರರ ದೂರುತಿಹುದು, ಬುದ್ಧಿಗೇಡು
ಧನ ಹೀನನಿಹಗೆ ತನ್ನ ಕಷ್ಟ ತೋರ್ಕು ವಿಶ್ವ

೧೦೫೦ ಎದುರು ಸಿರಿಯ ಕಂಡು, ಎಷ್ಟೊ ಅಳುವವರಿಗೆ,
ಭಾಗ್ಯವೆಂತು ಕೊಡುವ ಪರಮ ಗುರುವು?
ತನ್ನ ಪೂರ್ವ ಕರ್ಮ ದೈವವೇನರಿವುದೇ? ವಿಶ್ವ

೧೦೫೧ ಭಾಗ್ಯ ಹೀನನಿಹಗೆ ಪರುಸವೇದಿ ದೊರೆಯೆ,
ಅದುವೆ ನಿಲ್ಲದಾಗ ಕದಲದಂತೆ;
ಮಳೆಯ ಜೊತೆಗೆ ಬರುವ ಆಲಿಕಲ್ಲು ನಿಲುವವೆ? ವಿಶ್ವ

೧೦೫೨ ನೊಸಲು ಬರೆಯುವವನು ನೊಸಲು ಕಿರಿದು ಗೆಯ್ದ
ನೊಸಲಿಗಿಂತ ಮೇಲು, ನೊಸಲು ಬರೆಹ
ನೊಸಲ ಮೇಲೆ ಬರೆಹವನೊರೆಸಲು ಹೋಗುವುದೇ? ವಿಶ್ವ

೧೦೫೩ ಎಲೆ ಮೇಲಿನ ಬರೆಹ ಎಲ್ಲರಿಗೂ ತಿಳಿವುದು
ಕೈಯೊಳಗಿನ ಬರೆಹ ಕಾಣಬಹುದು
ತೊಗಲು ಹಿಂದಿನ ಬರೆಹ ದೊಡ್ಡವನು ಅರಿವನೆ? ವಿಶ್ವ

---

೧೦೫೪ ಧನವು ಇರದ ಬಡವ ತಂದೆ ಗರ್ಭದಲ್ಲಿ,
ಭಾಗ್ಯ ಪುರುಷನೋರ್ವ ಬೆಳೆಯೆ ಹುಟ್ಟಿ,
ಬಹಳ ಧನವಗೂಡಿ ಭದ್ರನಾಗಿರುತಿಪ್ಪ ವಿಶ್ವ

೧೦೫೫ ಶೇಖರಿಸಿದ ಧನಕೆ ಸತಿ–ಸುತಾದಿಯೆಲ್ಲ
ಆಶೆ ಪಡುವರಷ್ಟೆ; ಅದು ಬರಿ ಭ್ರಮೆಯು!
ಭಾಗ್ಯಹೀನರಿರಲು, ಫಲವು ಲಭ್ಯವೆಂತು? ವಿಶ್ವ

೧೦೫೬ ಕೇಡು ಬಂದಿತೆಂದುಕೆಟ್ಟದೆನುವ ದೈವ;
ಮೇಲು ಬಂದಿತೆಂಬ ಮೆಚ್ಚು ತನಗೆ,
ಕೇಡು ಮೇಲು ತಿಳಿಯೆ, ಗೈದ ಕರ್ಮವಷ್ಟೆ ವಿಶ್ವ

೧೦೫೭ ಮುದ್ರೆ ವೇಷ ಧರಿಸಿ, ಮಧ್ಯೆ ಇರಲಿ ಕಾಂತಿ;
ಎಂಜಿಲು ತಿನುವ ಪಂಗದಾಸನಿರಲಿ;
ಭಾಗ್ಯ ವಶತೆಯಿರದೆ ಬದುಕು ಇಲ್ಲವಲ್ಲ; ವಿಶ್ವ

೧೦೫೮ ಒಂದು ತೊಗಲು ತಂದು, ಒಪ್ಪ ಗೊಂಬೆ ಗೈದು,
ಆಡಿದಂತೆ ಮಾಡಿ, ಅತ್ತ ಒಗೆಯೆ,
ತನ್ನ ತಿರುಗಿಸುವವನ ತಾನೇಕೆ ಕಾಣನೊ? ವಿಶ್ವ

೧೦೫೯ ಗಂಧ ಕಡ್ಡಿಗೆಂತು ಕೂಡಿದುದು ವಾಸನೆ?
ಕನಕವು ತನಗೇನು ಕೆಡುಕು ಗೆಯ್ತು?
ಬ್ರಹ್ಮ ಚೇಷ್ಟೆಯೆಲ್ಲ ಬರಿಯ ಹಾಳು ಕೆಲಸ! ವಿಶ್ವ

೧೦೬೦ ವಿತ್ತ ಓರ್ವಗಿತ್ತು ವಿತರಣ ಗುಣವಿಹ
ಚಿತ್ತ ಓರ್ವಗಿತ್ತು, ಚೆಂದಗಡಿಪ,
ಬ್ರಹ್ಮ ಚೇಷ್ಟೆಯೆಲ್ಲ ಬರಿಯ ಹಾಳು ಕೆಲಸ ವಿಶ್ವ

೧೦೬೧ ಪುನುಗು ಬೆಕ್ಕಿಗೇಕೆ ಹುಟ್ಟಿಸಿದ ವಾಸನೆ?
ಅವನ ಮಹಿಮೆಯೆಷ್ಟು; ಅವನಿಯಲ್ಲಿ?
ಬ್ರಹ್ಮ ಚೇಷ್ಟೆಯೆಲ್ಲ ಹಾಳು ಕಾರ್ಯವಷ್ಟೆ ವಿಶ್ವ

— — — — — — — — — — — — — — — — — — — — —

೧೦೬೨ ಚಿಪ್ಪಿನಲ್ಲಿ ಬಿದ್ದ ಚಿಮುಕು ಮುತ್ತೆ ಆಯ್ತು
ನೀರಿನಲ್ಲಿ ಚಿಮುಕು ನೀರೆ ಆಯ್ತು
ಪ್ರಾಪ್ತಿಯಿರುವ ತಾಣ, ಫಲವೆಂತು ದೊರೆಯದು? ವಿಶ್ವ

೧೦೬೩ ವಿಪ್ರವರರು ಮುಹೂರ್ತ ವಿಭವವ ನಂಬುವರು
ದೊಡ್ಡ ಜನರ ಸೇರ್ಸಿ ಮದುವೆ ಮಾಡಿ,
ಬಳಿಕ ಮುಂಡೆಯಾಗೆ ಮುಹೂರ್ತ ನಿಜವೆಂತು? ವಿಶ್ವ

೧೦೬೪ ಶುಭದ ಶಕುನ ನಂಬಿ, ಶುಭ ಲಗ್ನವೆಂಬರು
ಒಬ್ಬರವಲೊಳಿಲ್ಲ, ಅಬ್ಬ ಜಗದಿ!
ಹಬ್ಬ ಹರುಷ ಜಗದಿ ಶಕುನದಲ್ಲಿಹವೇ? ವಿಶ್ವ

೧೦೬೫ ಈಯದವನ ಕೈಲಿ ಈಯ ಹಚ್ಚುವುದಲ!
ಈಯುವವನ ಕೈಲಿ ಈಯಗೊಡದು
ಕೊಡುವ ಕೊಳ್ಳುವುದಕೆ ಕರ್ತ ಈಶ್ವರಷ್ಟೆ. ವಿಶ್ವ

೧೦೬೬ ತನಗೆ ಪ್ರಾಪ್ತಿಯಿಲ್ಲ ದಾತರು ಕೊಡರೆಂದು,
ದೊಷ ಬುದ್ಧಿಯಿಂದ ದೂರಲೆಲ್ಲ;
ಮೂಗು ಡೊಂಕು ನೋಡಿ, ಮೂಗುತಿ ದೂರುವುದೆ? ವಿಶ್ವ

೧೦೬೭ ತಲೆ ತಾಕಿದೊಡನೆ ತಿಳಿವರು
ತಲೆ ಕೆಳಗೆ ಬೀಳಲಾಗ ತಿಳಿಯರು ಶಿವನಾ
ಹಲ ವಿಧದ ಲೀಲೆ ಸಹಜವು
ಸಲೆ ಶೈವವೆಂಬರು; ಏನು ಕರ್ಮವೊ ವೇಮಾ?

೧೦೬೮ ಹಲ್ಲಿ ನುಡಿಯೆ ಕೇಳಿ, ಪ್ರಜರತು ತಮ್ಮ ಕಾರ್ಯ
ಸಫಲವಾಗುವುದೆಂದು ಸಂತಸಿಪರು
ಘಟಿಸದಿರಲುಕಾರ್ಯ; ಕರ್ಮ ತಮ್ಮದೆನುವರು. ವಿಶ್ವ

೧೦೬೯ ತನ್ನ ಮನಸಿನಿಂದ ತರ್ಕಿಸಿ ಜ್ಯೋತಿಷ್ಯ,
ಎಷ್ಟು ಗೆಯ್ದೆನೆಂದು ಯೋಚಿಸುವುದು
ತನ್ನ ಅದೃಷ್ಟವನು ದೈವ ತಿಳಿಯದೇನು? ವಿಶ್ವ

**೧೦೭೦ ಕೆಡುಕನನ್ನು ಹೆಚ್ಚು ಕೆಡಿಸುತಿಹುದು ದೈವ,**
**ಅಡ್ಡ ಬರದು ಅವಗೆ, ಕಷ್ಟ ಬರಲು;**
**ಬೀಳು ಭೂಮಿಕಂಡು, ಭೂಪ ಮೆಚ್ಚುತಿಹನೆ? ವಿಶ್ವ**

**೧೦೭೧ ಕಾಲ ವಶದಿ ಸಿಲುಕಿ ಕರ್ಮ ಜೀವಿ ಗಣವು,**
**ಮತ್ತರಾಗಿ ಉಂಟು; ಮರೆತು ಬಿಟ್ಟು,**
**ಮತ್ತರಾದ ಜನರ ಮನಸು ಎಂಥ ಮನಸು? ವಿಶ್ವ**

**೧೦೭೨ ತವುಡು ತರಲು ಹೋಗೆ, ದಂಟು ಬುಟ್ಟಿಯೊಳಗೆ,**
**ಶ್ವಾನ ಕುಳಿತುಕೊಂಡ, ಸಾಮ್ಯವಾಯ್ತು**
**ವೈಶ್ಯವರನ ಸೊತ್ತು ವಸುಧೆ ನೀಚಗಾಯ್ತು ವಿಶ್ವ**

●

## ದೃಷ್ಟಾಂತಗಳು

ವಿಧಿ ನಿಯಮಕ್ಕೆ ದೃಷ್ಟಾಂತಗಳು:

ಮನುಷ್ಯ ಪುರುಷ ಯತ್ನದಿಂದ ಸಾಹಸಕ್ಕಿಳಿಯುತ್ತಾನೆ. ಆದರೆ, ಪ್ರಯತ್ನಕ್ಕೆ ಯಶ ಸಿಕ್ಕಲೂಬಹುದು; ಸಿಗದಿರಲೂಬಹುದು. ಇದರ ಕಾರಣವನ್ನು ಕಂಡು ಹಿಡಿಯುವಲ್ಲಿ ಸೋತು ಹೋದಾಗ, ಅವನು ಫಲ ನೀಡಿಕೆಯನ್ನು, ಕಾಣದ ಕೈಯಲ್ಲಿ ಇರಿಸುತ್ತಾನೆ. ಈ ಅದೃಷ್ಟವು ತನ್ನದೇ ಆದ ಸ್ಥಾನ ಹೊಂದಿದೆ.

ನಮ್ಮ ಪುರಾಣೇತಿಹಾಸಗಳಲ್ಲಿ ವಿಧಿಯ ಕೈವಾಡಕ್ಕೆ ವಿಪುಲ ದೃಷ್ಟಾಂತಗಳಿವೆ. ಅರ್ಜುನನು ಶಿವನೊಂದಿಗೆ ಹೋರಾಡಿ ಪಾಶುಪತವನ್ನೇನೋ ಪಡೆದ. ಆದರೆ, ಆ ಅಸ್ತ್ರಗಳಿಕೆಯಿಂದ ಹಗೆತನವನ್ನೇ ಅವನು ಜೀವನದಲ್ಲಿ ರೂಢಿಸಿಕೊಂಡ.

ಶಿವನು ಮಹಾದೇವನು. ಅವನ ಮಗ ಗಣಪತಿ; ಇನ್ನೊಬ್ಬ ಮನ್ಮಥ. ಇಂಥ ಮಕ್ಕಳನ್ನು ಸಹ ಉಳಿಸಿಕೊಳ್ಳದೆ ಹೋದ ಆತ. ದೈವ ಬಲದ ಮಹಿಮೆ ಅಷ್ಟು ಪ್ರಖರ. ಇನ್ನು ಬ್ರಹ್ಮನು ತನ್ನ ಐದನೆಯ ತಲೆಯನ್ನು ಶಿವನಿಂದಾಗಿ ಕಳೆದುಕೊಂಡ. ಅಂದ ಮೇಲೆ ಶಿವನ ಕರುಣೆ ಇಲ್ಲವಾದರೆ ಯಾವ ಗತಿಯಾದೀತು? ಕಾಣಿರಿ.

ಈಗ ಧರೆಯಲ್ಲಿ ಆರು ಜನ ಚಕ್ರವರ್ತಿಗಳೆಂದು ಹೆಸರಾಗಿದ್ದಾರೆ. ಅವರೆಂದರೆ, ಹರಿಶ್ಚಂದ್ರ, ನಳ, ಪುತ್ಸ, ಪುರೂರವ, ಸಗರ ಮತ್ತು ಕಾರ್ತವೀರ್ಯ. ಇವರು ಮಹಾವೀರರು; ಕೀರ್ತಿಶಾಲಿಗಳು ಚಕ್ರವರ್ತಿಗಳು. ಆದರೂ ಅವರ ಬಾಳಿನಲ್ಲಿ ಅದೃಷ್ಟದ ಕೈವಾಡ ಎಷ್ಟೆಂದು ಹೇಳಲಾಸಲ್ಲ. ಹರಿಶ್ಚಂದ್ರ ಹೆಂಡಿರುಮಕ್ಕಳನ್ನೂ ಮಾರಿಕೊಂಡು ಸ್ಮಶಾನ ಕಾಯ್ದನಲ್ಲವೇ? ನಳನು ರೂಪಗೇಡಿಯಾಗಿ ಅಡವಿ

ಪಾಲಾದ. ಇದೇ ರೀತಿ ಇತರರು ಒಂದಿಲ್ಲೊಂದು ಬಗೆಯಾಗಿ ವಿಧಿವಶರಾಗಿ ಅಸು ನೀಗಿದರು. ವೀರನಾದ ಕಾರ್ತವೀರ್ಯಾರ್ಜುನನು ಪರಶುರಾಮನಿಂದ ವಧಿಸಲ್ಪಟ್ಟನು.

ಇನ್ನು ಮಹಾರಾಜರಾಗಿ ಮೆರೆದ ಗಯ, ಅಂಬರೀಷ, ಶಶಿಬಿಂದು, ರುಚಿಕ, ಪೃಥು, ಮರುದ್ಧ್ವಜ, ಭರತ, ಸುಹೋತ್ರ, ಶ್ರೀರಾಮ, ದಿಲೀಪ, ಸಗರ, ಭಾರ್ಗವ, ಯಯಾತಿ, ಭಗೀರಥ, ಶಿಬಿ ಮತ್ತು ಮಾಂಧಾತ ಎನ್ನುವ ಹದಿನಾರು ಪ್ರಬಲ ರಾಜರು ಸಹ ವಿಧಿಯ ಕೈಯಲ್ಲಿ ಸಿಲುಕಿ ಮಡಿದರು. ಜಗತ್ತಿನಲ್ಲಿ ಎಲ್ಲವೂ ಆಶಾಶ್ವತವೆಂಬುದಕ್ಕೆ ಇವರ ಚರಿತ್ರೆಯು ಸ್ಪಷ್ಟ ನಿದರ್ಶನವಲ್ಲವೇ? ಇನ್ನಾದರೂ ಜನ ಕರ್ಮ ಗತಿಯನ್ನು ನಂಬಿ ಬಾಳಲು ಕಲಿಯಬೇಕು.

ರಾಮಾಯಣದ ನಾಯಕನಾದ ಶ್ರೀರಾಮನು ಮಾಯೆಯಿಂದ ಮೋಹಿತನಾಗಿ ಸ್ವರ್ಣ ಜಿಂಕೆಯನ್ನು ಬೆನ್ನಟ್ಟಿ, ತನ್ನ ಮಡದಿಯನ್ನು ಅಡವಿಯಲ್ಲಿ ಬಿಟ್ಟು ಹೊರಟನು, ರಾವಣನು ಅಪಹರಿಸಿದ. ಪಡಬಾರದ ಕಷ್ಟಬಟ್ಟನು.

ಇತ್ತ ಪ್ರಬಲವನಾದ ರಾವಣನ ರಾಜ್ಯವನ್ನು ಕ್ಷುಲ್ಲಕ ಕಪಿಗಳ ಸೇನೆಯು ಮುತ್ತಿ ಆಕ್ರಮಿಸಿದುದು ವಿಧಿಯ ಚೋದ್ಯವೇ ಸರಿ. ಇನ್ನೂ ಮೋಜೆಂದರೆ, ತನ್ನವರನ್ನು ತೊರೆದು, ನಿರ್ಗತಿಕನಾದ ವಿಭೀಷಣನಿಗೆ ಅಯಾಚಿತವಾಗಿ ರಾಜ್ಯಪಟ್ಟ ದೊರಕಿದುದು ವಿಧಿಯ ಚೋದ್ಯವೇ ಅಲ್ಲವೇ?

ಇನ್ನು ವಟಪತ್ರದಲ್ಲಿ ಮಲಗಬೇಕಾದ ಕೃಷ್ಣನೇ ಮಹಾ ಗಿರಿಯನ್ನು ಎತ್ತಿದ ಮಹಿಮೆ ಎಂಥದು? ದೈವವು ಬೆನ್ನಿಗಿರುವಾಗ ಯಾರೂ ನಿನ್ನನ್ನು ಸೋಲಿಸರೆಂಬುದು ಮಹಾಭಾರತ ಕಥೆಯ ಬೀಜ ಮಾತಲ್ಲವೇ?

**೧೦೭೩ ಕಾಲಕಂಠನೆದುರು ಘನಘೋರ ಕಾದಾಡಿ,**
**ಅರ್ಜುನನಿಗೆ ವಶವೆ ಆಯ್ತು ಫಲವು,**
**ಪಾಶುಪತವು ದೊರಕಿ ಹಗೆತನ ಕೃಷಿಯಾಯ್ತು, ವಿಶ್ವ**

**೧೦೭೪ ಬ್ರಹ್ಮನ ತಲೆ ಕಡಿದು ಪಾರುಗಾಣಿಸಿದೊಡೆ,**
**ತಡೆದು ರಕ್ಷಿಸಲಿಲ್ಲ, ತಾವು ಸುರರು,**
**ಶಿವನ ಕರುಣೆಯಿರದೆ ಕೆಟ್ಟು ಹೋಗದಿಹರೆ? ವಿಶ್ವ**

**೧೦೭೫ ಕನಕ ಗಿರಿಯು ತನ್ನ ಕೈಯೊಳಿಪ್ಪ ಅವನು**
**ಬೆಳ್ಳಿ ಬೆಟ್ಟದಲ್ಲಿ ಬಾಳುವವನು;**
**ಎತ್ತುತಿಹನು ಭಿಕ್ಷೆ; ಏನೆನ್ನಬಹುದಿದನು? ವಿಶ್ವ**

---

೧೦೭೬ ಧರೆ ಚಕ್ರವರ್ತಿಗಳಾರು;
ಮೆರೆವ ಹೆಸರಾಂತ, ರಾಜರುಗಳು ಹದಿನಾರ್ವರ್
ನೆರೆಯೋಧರು, ಮಹಾವೀರರು
ಚರಿಸಿದ ಪಥ ದುಃಖಮಯವರಸಿ ಕಾಣು ವೇಮಾ

೧೦೭೭ ಹೊಂದುತ ಧರೆಯೊಳಗೆ ಹಿಂದೆ ಪುರೂರವನು
ಧರ್ಮವೇ ಜಯವೆಂದು ಮೊಳಗಿ ಇದ್ದ;
ತನ್ನ ಕಾಲ ಗತಿಯ ತಾನು ಅರಿಯಲಿಲ್ಲ
ಮದನನ ಕೈಗೆ ಸಿಕ್ಕು, ಮರುಗುವ ವೇಮ

೧೦೭೮ ಸಗರ ಮಹಾರಾಜ ಚಕ್ರವರ್ತಿಯಾಗಿ,
ಪರರು ತನ್ನ ಪೊಗಳೆ, ಬಾಳಿ ಹೋದ
ಇಂತಿರೆ ವಿಧಿ, ಕೇಡು ಬಗೆಯಲೇನೊ? ವಿಶ್ವ

೧೦೭೯ ಸಗರನುರ್ವಿರಾಜ ಚಕ್ರವರ್ತಿಯಾಗಿ
ಪರರು ತನ್ನ ಪೊಗಳೆ, ಬಾಳಿ ಹೋದ
ಇಂತಿರೆ ವಿಧಿ, ಕೇಡು ಬಗೆಯಲೇನೊ? ವಿಶ್ವ

೧೦೮೦ ಪೊಡವಿ ಕರ್ಮ ವಶದಿ ಪುರುಕುತ್ಸು ರಾಜನು
ಧರ್ಮವನನುಸರಿಸುತ ಧಾತ್ರಿಯಾಳ್ವ,
ತನಗಾಗದ ವೇಳೆ, ತಾ ಪಟ್ಟ ಕಷ್ಟವ, ವಿಶ್ವ

೧೦೮೧ ಕಾರ್ತವೀರ್ಯನಂಥ ಮನುಜರಾರು ಇಲ್ಲ;
ಬಹಳ ಶೌರ್ಯದಿಂದ ಬೀಗುತ್ತಿದ್ದ;
ಪರಶುರಾಮನಿಂದ ಬಾಧೆ ಪಟ್ಟು ಸತ್ತ, ವಿಶ್ವ

೧೦೮೨ ಗಯನಂಬರೀಷ ನೃಪ ಘನ ಶಶಿಬಿಂದುವು,
ರುಚಿಕನು ಪೃಥುವು, ಮರುದ್ವತನು,
ಭರತ, ಸಹೋತ್ರಯರು, ಮೆರೆವ ಶ್ರೀರಾಮ ರಾಯ,
ಆ ದಿಲೀಪ, ಸಗರರು ಜಗದಿ ಮತ್ತೆ,
ಭಾರ್ಗವನು, ಯಯಾತಿ, ಮೆರೆದ ಭಗೀರಥ,

— — — — — — — — — — — — — — — — — — — — — —

ಸಲೆ ಶಶಿ, ಮಾಂಧಾತ ಎನುವರೊಪ್ಪ;
ಇಂಥ ಮಹಾಧಿಪತಿಗಳೇಳ್ವರು, ಬೆಂಬತ್ತಿಹರು,
ಹದಿನಾರ್ವರಧಿಪತಿಗಳು ಪ್ರಬಲರಿಹದಿ,

ತೇ। ಇಂಥ ನೃಪವರ್ಯರೆಷ್ಟೂ ಜನ ಸತ್ತು ಹೋದರು,
ನೋಡು; ನೋಡು; ಮಾಯೆ ಚೋದ್ಯವಲ್ತೆ?
ವಿಶ್ವದಲ್ಲಿ ಸರ್ವವು ಅಶಾಶ್ವತವಲ್ಲ!
ತಿಳಿಸಿದರೂ, ಕರ್ಮಗಳ ಕಾಣರಲ್ಲ ವೇಮ!

೧೦೮೩ ಅರಿಯೆ, ಕರ್ಮಗಳಲ್ಲಿ ಆ ಹರಿಶ್ಚಂದ್ರನು,
ಮಡದಿ, ಮಗನ ಸಹಿತ ಮಾರಿ ತನ್ನ,
ಮೊದಲು ಜಾತಿ ದೂರ ಮತ್ತೆ ಕೀಳು ಆದ, ವಿಶ್ವ

೧೦೮೪ ಅನೃತವಾಡದಿಪ್ಪ ಆ ಹರಿಶ್ಚಂದ್ರನು
ಮಡದಿ ಮಕ್ಕಳ ಕೂಡ ಮಾರಿ ತನ್ನ,
ಹೊಲೆಯರಡಿಯೆ ಬಾಳು ಹೊರೆದು ಜೀವಿಸಿದನು,

೧೦೮೫ ಕಾಡೊಳಲೆದು ಮತ್ತೆ ಭೂರಿ ಕಷ್ಟ ಸೋಸಿ,
ರಾಜ್ಯ ಸುಖ ಪಡೆಯಲಿಲ್ಲವೇ ನಳ?
ಕಷ್ಟ ನಷ್ಟ ಪಡದೆ ಸುಖವ ಹೊಂದಲಾರ, ವಿಶ್ವ

೧೦೮೬ ಕಾನನವನು ಸೇರಿ, ಕಡು ಶ್ರಮ ಹೊಂದಲು,
ಆ ನಳ ಪಡೆದ ರಾಜ್ಯ ಅಂತೆ ಮರಳಿ,
ಕಷ್ಟಗಳಿಗೆ ಮುನ್ನ ಕಾಣು ಸುಖಗಳುಂಟು,

೧೦೮೭ ನಳನು ದಮಯಂತಿಯ ನಲ್ಮೆಯಿಂದ ವರಸಿ,
ಪುಷ್ಕರನಗೆ ಸೋತು ಭೂಮಿ ತೊರೆದಂ,
ಭಾರ್ಯೆಯಿಂದ ತಾನು ಬಹಳ ಬಡವನಾಗಿ,
ಅಡವಿ ತಿರುಗಲಿಲ್ವೆ? ಆಗ ವೇಮ.

೧೮೮ ಕನಕ ಮೃಗವ ಹಿಡಿದು ಕಾದು ಕೊಲ್ಲರಾಗ,
ನರನು ರಾಜ ರಾಜ ನಂಬಿ ನೋಡೆ,
ತರವೆನಿಸದ ಕರ್ಮ ತಾನು ಸಾಧಿಸಲಿಲ್ಲ, ವಿಶ್ವ

೧೮೯ ಮಡದಿ ಅಡವಿ ಹೊಗಿಸಿ, ಮೃಗದ ಹಿಂದೆ ನಡೆದ
ರಾಮಚಂದ್ರಗಿಂತ ರಸಿಕನಾರು?
ಕೆಡುಕು ಕಾಲ ಬರಲು, ಕೇಡು ಬುದ್ಧಿ ಬಹುದು ವಿಶ್ವ

೧೯೦ ಮಡದಿಯಡವಿ ಹೊಗಿಸಿ ಮುನಿ–ಜಿಂಕೆ ಬೆಂಬತ್ತಿದ;
ರಾಮಚಂದ್ರಗಿಂತ ರಸಿಕನಾರು?
ಭಾಗ್ಯ ತೊಲಗುವ ಕಾಲ ಬುದ್ಧಿ ಅಂತಾವುದು ವಿಶ್ವ

೧೯೧ ದಶರಥನು ರಾಮಗೆ ಧರಣೀಶ ಪಟ್ಟವ,
ಕಟ್ಟ ಬಯಸಿ ತಾನೆ ಕಟ್ಟಿದ ಜಡೆ
ಬಯಕೆ ನಮ್ಮದಷ್ಟೆ; ಬೇರೆ ದೈವಲೀಲೆ! ವಿಶ್ವ

೧೯೨ ಕೈಕೆಯಿಂದಾಗಿ ರಾಮನು ಕಾಡು ಸೇರಿ,
ಸೀತೆ ಕಳೆದೊಡನೆ ದಶಕಂಠ ಸೊಕ್ಕಡಗಿಸಿ,
ತಿರುಗಿ ಪಟ್ಟಾಭಿಷಿಕ್ತನಾದ ತೇಜಿಸುತ್ತ;
ವಿಮಲ ರಾಜ ಯೋಗೀಂದ್ರ ವೇಮನಾರ್ಯ

೧೯೩ ಅಂಡಲೆಯುವ ಮನುಜ ಅತಿ ಧಾರ್ಮಿಕನೆಡೆಯ
ಸೇರಿ, ನೋಳ್ವ ತನ್ನ ಬಾಳ ಗತಿಯ;
ವಿಭೀಷಣ ರಾಮನ ಮೊರೆಯ ಹೊಕ್ಕ ತೆರದಿ ವಿಶ್ವ

೧೯೪ ಲಕ್ಷ್ಮಿ ನಲಿಯುತಿಪ್ಪ ಲಂಕಾಧಿಪನ ಪುರ,
ಕುಳ್ಳ ಕೋತಿ ಸೇನೆ ಕೊಳ್ಳೆಗೀಡು
ಸಿರಿಯು ಬಪ್ಪ ಕಾಲ, ಕಿರಿಯ ಘನನಪ್ಪನು ವಿಶ್ವ

೧೯೫ ಲಂಕೆ ಹೋಗುವಾಗ ಲಂಕಾಧಿಪ ರಾಜ್ಯ,
ಎಂಥದೊ ಕಪಿ ಸೇನೆ ಆಕ್ರಮಿಸಿತು
ಕೇಡುಗಾಲವಿರಲು ಕೆಡಿಸಲಲ್ಪ ಸಾಕು ವಿಶ್ವ

೧೯೬ ಕಾಲ ಗತಿ ಯಾರಿಗಾದರೂ
ಪಾಲಿಗೆ ಬಂದೇ ಬಪ್ಪುದು; ಸರಿವುದು ವಿರಳಂ;
ಮೇಲೆತ್ತಿ ಗಿರಿಯ, ಕೃಷ್ಣನು
ತೇಲನೆ ವಟ ಪತ್ರದಲ್ಲಿ, ತಿಳಿವುದು, ವೇಮಾ

೧೯೭ ಸರಿಕರಾರು ನಿನ್ನ ಸ್ವಾಧೀನಗೊಳಿಸರು
ದೈವವೊಂದು ನಿನಗೆ ತಪ್ಪದನಕ
ಭಾರತ ಕಥೆಯೊಳಗೆ ಪರಮಾರ್ಥವಿದುವೆ ವಿಶ್ವ

೧೯೮ ಹರಿಗೆ ದೊರಕಿತಲ್ಲ ಸಿರಿಯು ಅಗಲಷ್ಟೆ;
ದೊರಕಿತಲ್ಲ ವಿಷವು? ಹರಗೆ ಅರಿಯೊ,
ಯಾರಿಗೆಂತೂ ಏನೊ? ಯಾರು ಅರಿಯಬಹುದು? ವಿಶ್ವ

೧೯೯ ಕಾಲವಧಿಕವಿದ್ದು ಗತಿಸಿ ಹೋಗದಲ್ಲ!
ಧರ್ಮರಾಜ ದುಡಿದ ತುಚ್ಛ ತಾಣ
ಕಂಕಭಟ್ಟನೆಂದಕಟಕಟ! ಏನೆನಲಿ! ವಿಶ್ವ

೧೧೦೦ ಹಾಲಹಕ್ಕಿ ಶಕುನ ಫಲವೀವುದೆಂಬರು;
ಹಾಲಹಕ್ಕಿಯೆಷ್ಟು ಫಲವರಿವುದು?
ತನ್ನ ಮೇಲು–ಕೀಳು ತನ್ನಿಂದಲಪ್ಪವು ವಿಶ್ವ

●

## ಸಂಕೀರ್ಣ

ಇದೊಂದು ಸಂಕೀರ್ಣ ಪದ್ಯ ವಿಭಾಗವಾಗಿದೆ. ಧರ್ಮ ವಿಭಾಗದ ಸಿಂಹಾವಲೋಕನದಂತಿದೆ.

ಧರ್ಮಸಾಧನೆಗೆ ಮಾರ್ಗವೊಂದು ಅವಶ್ಯಕ,. ರಾಜಯೋಗವು ಇಂಥ ಸಮರ್ಪಕ ವಿಧಾನವೆಂದು ಸರ್ವಮಾನ್ಯವಾಗಿದೆ. ಧರ್ಮ ಸಾಧನೆಗೆ ತೊಡಗಿದವನು ತಟಸ್ಥನಾಗಿರಬೇಕು. ಭವಸಾಗರದ ದಂಡೆಯಲ್ಲಿ ನಿಂತು ಸಮಗ್ರ ನೋಟವನ್ನು ನೋಡಿ ಸಾಗಬೇಕು. ನಿರ್ಮಲ ಹೃದಯದ ಯೋಗಿಯು ಧರ್ಮ ಸತ್ಯಗಳನ್ನು ಅರಿಯಬಲ್ಲನು.

— — — — — — — — — — — — — — — — — — — — — —

ಮಹಾತ್ಮರು ಜನರೆದುರು ಆದರ್ಶ ನಿಲ್ಲಿಸಲು ಯತ್ನಿಸಿದ್ದಾರೆ. ಆದರೆ ಕ್ಷುದ್ರ ಬುದ್ಧಿಯ ಜನರು ಅವರ ಬೋಧೆಯನ್ನು ಅರಿಯುವಲ್ಲಿ ವಿಫಲರಾಗಿದ್ದಾರೆ. ಅವರ ಬಾಳನ್ನೇ ಟೀಕಿಸುತ್ತಾರೆ. ಸಿಂಹಕ್ಕೆ ನಾಯಿ ಒದರಿದಂತಿದು.

ಕಾರಣ, ಇದನ್ನರಿತು ಸಾಧು-ಸಜ್ಜನರನ್ನು ಗುರುತಿಸಿ ಅರಿಯಬೇಕು. ಗುರುವನ್ನು ಕಂಡು ದೀಕ್ಷೆ ಪಡೆಯಬೇಕು. ಯೌವನದಿಂದಲೂ ಶಿವ ಧ್ಯಾನದಲ್ಲಿ ಮಗ್ನರಾಗಬೇಕು. ಬಾಲ್ಯದಲ್ಲಿ ಈಶ್ವರ ಧ್ಯಾನದತ್ತ ಲಕ್ಷ್ಯ ಹಾಕದೆ, ಯೌವನದಲ್ಲಿ ನಿರ್ಲಕ್ಷಿಸಿದರೆ, ಮುಪ್ಪು ಸಹ ಅದೇ ಸಂಸ್ಕಾರ ಬಲದಿಂದ ಹಾಳಾಗುತ್ತದೆ. ಈ ವಿಭಾಗದಲ್ಲಿ ಗೃಹಸ್ಥ ಜೀವನಕ್ಕೆ ಸಂಬಂಧಿಸಿದ ಹಲವು ಪದ್ಯಗಳನ್ನು ಸಂಕಲಿಸಲಾಗಿದೆ. ಪ್ರಾಪಂಚಿಕ ಹಿತ ಸಂಬಂಧಗಳೊಂದಿಗೆ, ವ್ರತನೇಮ, ಮೂಢನಂಬುಗೆ ಮತ್ತು ಕಂದಾಚಾರಗಳನ್ನು ಕುರಿತು ಹಲವಾರು ಪದ್ಯಗಳ ಸಂಕಲನವಿಲ್ಲಿದೆ.

**೧೧೦೧. ರಾಜಯೋಗದಿಂದ ತೇಜ ಪಡೆವುದೆ ಮುಕ್ತಿ**
**ತೇಜ ಹೊಂದದಿರಲು ತಾ ದರಿದ್ರ**
**ಮರ್ಮವೆಷ್ಟು ಇರದಿರೆ, ಮಹಿಯಲಿ ಗುರುಗಾಣು ವಿಶ್ವ**

**೧೧೦೨ ಕ್ಷಿತಿಯನು ಪೋಷಿಸುತ, ಶೃತಿಗಳ ರಕ್ಷಿಸುತ,**
**ಗತಿಯಡಗಿಸಿ ಶುದ್ಧ ಗತಿಯ ವಹಿಸಿ,**
**ಮೃತಿಯ ಮೀರಿ ಸಕಲ ಮತಗಳ ಮನದಿರಿಸಿ**
**ಉಸುರುವವನೆ ರಾಜಯೋಗಿ ವೇಮ**

**೧೧೦೩ ದಡದ ಮೇಲಿರುವವನಿಡೀ ನೋಟವರಿವ**
**ಅದೇ ಪರಿಯಲಿಂದ ತಿಳಿಯುತೆಲ್ಲ,**
**ಲೋಕ ವಲಯಗಳೊಳು ಗೂಢವರಿಯಬೇಕು. ವಿಶ್ವ**

**೧೧೦೪ ಧರ್ಮ ಸತ್ಯಗಳನು ತಪ್ಪದೆ ಮಾಡದಿರಲು,**
**ಕರ್ಮ ಜೀವಿ ಮೇಲು ಕಾಣಲಾರ**
**ನಿರ್ಮಲ ಹೃದಯದವ ನಿನ್ನ ರೂಪದಿರುವ ವಿಶ್ವ**

**೧೧೦೫ ಧರ್ಮವರರೆನುತಿಪ್ಪ ಧರ್ಮ ರಾಜರಾದಿ**
**ನಿರ್ಮಲವಹ ಕೀರ್ತಿ ನಿಲ್ಲಿಸಿಹರು**
**ಧರ್ಮವೇ ರಾಜರಿಗೆ ತಾರಕ ಯೋಗವರು ವಿಶ್ವ**

೧೧೦೬ ಓರೆ ಕೋರೆಯರಿಯದೊಣಮೂಢ ಜನಗಳು,
ಎಂತೊ ಸಾಧು ಜನರ ಎಣಿಸುತಿಹುದು;
ನೋಡಿ ಸಿಂಹವನ್ನು ನಾಯಿ ಬೊಗಳಿದಂತೆ ವಿಶ್ವ

೧೧೦೭ ಸಾಧು ಸಜ್ಜನರನು ಚೊಕ್ಕ ಪೂಜಿಸುತ್ತ,
ಕರುಣೆ ಹೊಂದಿದೊಡೆನೆ ಸರಸವಾಯ್ತು;
ಸರಸತೆ ಬಿಡದಿದ್ದು ಸದ್ಗುರುವ ಬೆರೆಯಿರೊ ವಿಶ್ವ

೧೧೦೮ ನೆರೆಹೊರೆಯವರಲ್ಲಿ ನೆರೆಗೂಡಿ ಇರುತಿರೆ;
ತನಗೆ ತಾನೆ ಸೇರಿ, ತಿಳಿದು ನೋಡೆ,
ಧರ್ಮವಪ್ಪ ಅರಿವು ತನ್ನ ತಾ ತೋರುವುದು ವಿಶ್ವ

೧೧೦೯ ಧರ್ಮವೆನೆ ಕೇಳರು, ತಮ್ಮ ನಂಬಿ ಜನರು,
ಯಮನ ಭಟರು ಬರಲು, ಯಾತನೆಯದು
ಸಾಯುವಂತೆ ಜಡಿಯೆ, ಸರಿದುಕೊಳ್ಳಬಹರೆ? ವಿಶ್ವ

೧೧೧೦ ಇಂಥ ಯೌವನದಲ್ಲಿ ಈಶ್ವರ ಧ್ಯಾನವು,
ಕುದುರಿ ಗಯ್ಯಬೇಕು, ಕೊನೆ ವರೆಗೆ;
ಮಾಡದಿರುವ ಎಡೆಗೆ ಮಹಿ ಸೌಖ್ಯವಿಹುದೇ? ವಿಶ್ವ

೧೧೧೧ ಬಾಲ್ಯದಲ್ಲಿ ಶಿವನ ಪರಿಕಿಸಲಾರನು;
ಯೌವನದೊಳು ಸಹ ಅರಿಯಲಾರ
ಮುದಿ ವಯದಲಿ ಕೂಡ ಮೋಸವಾಯ್ತೆನುವರು ವಿಶ್ವ

೧೧೧೨ ವಿಪ್ರವರರುಗಳಲಿ, ವಿಬುಧ ಜನಗಳಲ್ಲಿ,
ನೀತಿ ಹೊಂದಿದವನೆ ನಿರ್ಮಲಹನು;
ಭಕ್ತಿ ಉಳ್ಳ ಅವನು ಪರಮಾರ್ಥ ಪರನಲ ವಿಶ್ವ

೧೧೧೩ ದಾನ ಧರ್ಮ ಗೆಯ್ಯೆ, ದಾರಿ ಸೇರಬಹುದು
ಮನಸು ನಂಬಿದೊಡನೆ ಮಾಯೆ ಮುಸುಕು
ಜ್ಞಾನ ಕಾಂತಿ ನಂಬೆ, ಜಡಿಯಬಹುದು ವೈರಿ ವಿಶ್ವ

೧೧೧೪ ಯಾವ ಮಹಾತ್ಮನಲಿ ಈ ಜಗವು ಹುಟ್ಟಿತೊ?
ಆ ಮಹಾತ್ಮನ ಭಜನೆ ಅನುವು ಹೆಚ್ಚಿ
ನಿಯಮ ನಿಷ್ಠೆಯರಿತು, ನೆಮ್ಮದಿ ಕಾಣುವರು ವಿಶ್ವ

೧೧೧೫ ಒಳಗೆ ದೃಢದಿ ನೋಡಿ, ಒಳ ವಿಕಾರವೆಲ್ಲ
ತೀರಿಸದೆ ಇರುವವ, ತಪಸಿಯಲ್ಲ
ಹೊರ ವಿಕಾರವೆಲ್ಲ ವಿಧಿ ಪಾಲು ಕೋರಿಕೆಯೆ? ವಿಶ್ವ

೧೧೧೬ ಭುಕ್ತಿಯು ಹೆಚ್ಚಲು ವಿಷಯಾ–
ಸಕ್ತತೆಯಿಂದ ತಿರುಗುತಿಹ, ತಾಪತ್ರಯಗಳೊಳ್,
ಭುಕ್ತಿಯಲಿ ಮುಕ್ತಿ ಲಭಿಸದು;
ಭಕ್ತಿಯಿರೆ ಮುಕ್ತಿ ಜೀವನಿಗೆ ಭದ್ರ ವೇಮಾ

೧೧೧೭ ಭಾರತ ಹೇಳುತಿಹ ಹಲವು ಧರ್ಮಗಳೊಳು
ಸತ್ಯ ನಿಷ್ಠೆಗೆ ಸಮ ಸತ್ಯವೊಂದೆ
ಭೂಮಿ ದಾನದಿಂದ ಮಿನ್ನ ಕಾಂತಿ ಬೆಳಕು ವಿಶ್ವ

೧೧೮ ಕಸವ ತಿಂಬವಂಗೆ ಘನ ಫಲದಲಿ ರುಚಿಯು
ಕಾಣಬಪ್ಪುದೇನು? ಇದುವೆ ಪರಿಯು
ಕೀಳು ವಿದ್ಯೆಯವಗೆ ಮೇಲು ಜ್ಞಾನ ಸೊನ್ನೆ ವಿಶ್ವ

೧೧೧೯ ರಾಜ ಯೋಗದಿಂದ ತೇಜ ಪಡೆವುದೆ ಮುಕ್ತಿ
ತೇಜ ಹೊಂದದಿರಲು ತಾ ದರಿದ್ರ
ಮರ್ಮವೆಷ್ಟು ಇರದಿರೆ, ಮಹಿಯಲಿ ಗುರುಗಾಣು ವಿಶ್ವ

೧೧೨೦ ಕತ್ತುರಿಯ ಪ್ರೀತಿ ಗಜರಾಜನಿಗೇಕೆ?
ಮದದ ಧಾರೆ ತನಗೆ ಮಧುರ ಹೊರತು
ಯೋಗಿಗೇಕೆ ರಂಭೆ ಯೋಗ ಹರ್ಷವೆಲ್ಲ? ವಿಶ್ವ

೧೧೨೧ ಖಣಿಯೊಳುದಿಪ ಲೋಹ ಗಣಗಳಲ್ಲಿ ಎಲ್ಲೆಡೆ,
ಕೆಲಸಕಿಹುದು ಒಂದು ಕಬ್ಬಿಣಷ್ಟೆ
ಅದು ಗೌಣವೆನಿಪುದು; ಅಧಿಕವಾಗಿ ದೊರೆಯೆ; ವಿಶ್ವ

೧೧೨೨ ಹೆಂಡ–ಮಡಿಕೆ ಮೈಗೆ ದಟ್ಟ ಬೂದಿ ಬಳಿಯೆ,
ಕೆಂಪು ವಾಸನೆಯದು ಅಡಗಬಹುದೆ?
ಅಂತೆ ಕತ್ತಿಗೆ ದಾರ ಬಿಗಿಯೆ ದ್ವಿಜನೆಂತು? ವಿಶ್ವ

೧೧೨೩ ವಾದ ಮಾಳ್ಪ, ನಿಂದ್ಯಗಾರರಾರೆ ಇರಲಿ;
ಕೂಡಬಾರದವರ, ಕೇಡು ತಿಳಿದು;
ಗಡಸುಗಾರ್ತಿಯರಿಯೆ, ಕವಣೆಗಲ್ಲಿ ನಂತೆ ವಿಶ್ವ

೧೧೨೪ ವಿದ್ಯೆ ಹೊಂದಿದರೂ ವಿನಯವಿಲ್ಲದಿರಲು,
ಮುತ್ತೈದೆಯ ಮೇಲೆ ಮಣ ಭಾರದ
ಸ್ವರ್ಣವಿದ್ದು, ಕಂಠ ಸೂತ್ರವಿಲ್ಲದಂತೆ ವಿಶ್ವ

೧೧೨೫ ಓದಿ ಓದಿ ಓದಿ ಸಾಯುವುದೇತಕ್ಕೆ?
ಸಾವು ಇರದ ಓದ ಓದನೇಕೆ?
ಓದದೆ ಜನ ಕೋಟಿ ಹೋದರಲ್ಲ ಸತ್ತು! ವಿಶ್ವ

೧೧೨೬ ತರದ ಓದನೋದೆ ತರ್ಕವಾದವಷ್ಟೆ
ದಿವ್ಯಜ್ಞಾನವಲ್ಲಿ ದೃಷ್ಟಿಗಿಲ್ಲ
ರೇಶಿಮೆಯ ಹುಳುವಿನ ರೀತಿ ಕೆಟ್ಟು ಹೋಹ ವಿಶ್ವ

೧೧೨೭ ಒಟ್ಟು ಶಾಸ್ತ್ರವೆಲ್ಲ ಓದಿ ಮತ್ತೆ ಬರೆದು,
ತಿಳಿಯುವವರು ಮರಣ ತಿಳಿಯದಿಹರು
ಮರಣವರಿಯದಿರಲು ಮರಳಿ ಓದು ಏಕೆ? ವಿಶ್ವ

೧೧೨೮ ಹತ್ತು ಜನರ ಮಾತು ಹಬ್ಬುತಿಹುದು ಜಗದಿ,
ಒಬ್ಬ ನುಡಿದ ಮಾತು ಹಬ್ಬದೆಂದು
ಸುಮ್ಮನಿರುವಾತಗೆ ಸಮಕಲ್ಲ ಊರಲಿ ವಿಶ್ವ

೧೧೨೯ ತಪ್ಪು ಆಯಿತೆಂದು ತಳಮಳಗೊಳ್ಳುತಿರೆ,
ಬಳಿಯೊಳಿರುವ ಲಕ್ಷ್ಮಿ ಮುಳುಗುತಿಹಳು
ಒಡೆದ ಗಡಿಗೆಯಲ್ಲಿ ಉಳಿಯದಂತೆ ನೀರು ವಿಶ್ವ

೧೧೩೦ ನಿಂತು ನೆಗೆಯುವವನು ನಿಜ ಲೋಕದೊಳಿಲ್ಲ
ಭಂಗಿ ಕುಡಿಯುವವನು ಬಲಿಷ್ಠನಲ್ಲ;
ಬಡವ ಯೋಗದಲ್ಲಿ ಬಯಕೆ ಬಯಲಾಗವು ವಿಶ್ವ

೧೧೩೧ ಶ್ರೀರಾಮ ಎಂಬ ಮಂತ್ರವೂ,
ತಾರಕವೆಂದರಿತು ಮನದಿ ಧ್ಯಾನಪರಿರಲ್
ಸಾರವ ಕುಡಿಯುತಿಹ ನರರು,
ಸೇರುವರು ಪರಮ ಪದವಿಯ, ಸನಿಹದಿ, ವೇಮಾ!

೧೧೩೨ ರಾಮ ವಿಭವ ಹುಟ್ಟಿ ರಘುಕುಲವು ಬೆಳೆಯಿತು
ಕೌರವರಸು ಹುಟ್ಟಿ ಕುಲದ ನಾಶ
ಯಾರು ಒಳಿತು ಕೆಡಕು ಎಣಿಸಿ ನೋಳ್ಪರು ತಿಳಿ ವಿಶ್ವ

೧೧೩೩ ನಂಬಿದಂತೆ ಉಂಟು ನೌಕೆ ಭೂತವೆನಲು,
ಹೊರಳಿಸುತಿರೆ ಪಟವ, ಹೋಯ್ತು ನೇರ;
ಈಜುವವನು ಇರಲು, ಏಕೆ ಹೋಗಲೀಯನು? ವಿಶ್ವ

೧೧೩೪ ಮಾತು ಮರೆಯು ಲಜ್ಜೆ ಮನುಜ ಲೋಕಕೆಲ್ಲ;
ಸೀರೆ ಮರೆಯು ಲಜ್ಜೆ ಹೇಳಲೇಕೆ?
ಬಾಹ್ಯ ಮನೆಯ ಲಜ್ಜೆ ಬಂಡ ಸಂಸಾರವು ವಿಶ್ವ

೧೧೩೫ ಆಶೆಯನು ಬಿಟುಗೊಟ್ಟು, ಅಗ್ನಿಯನಾರಿಸುತ,
ಗೋಟಿ ಬಿಗಿದು ಕಟ್ಟಿ, ಕೋಪವಡಗಿ,
ಗುಟ್ಟು ಮೀರುವಾತ ಗುರುವಿಗೂ ಗುರುವಿಹನು ವಿಶ್ವ

೧೧೩೬ ರೆಕ್ಕೆ ಇರದ ಪಕ್ಷಿ ರೆಂಬೆ ಮೇಲೆರುಗದು;
ಮೂಗು ಇರದ ಪಕ್ಷಿ ಕೂಳು ತಿನದು
ಮನೆಯೊಳಗಿನ ಪಕ್ಷಿ ಮತ್ತೆ ಹೊಡೆಯಬೇಡ ವಿಶ್ವ

---

೧೧೩೭ ಮದ್ದು ತಿನುವನಕ ಪಥ್ಯವು,
ಸುದ್ದಾಗಿರಬೇಕು ಪೊಡವಿಯ ಮೇಲೆ ತಾನೇ
ಮದ್ದು ತಿನುತ ಪಥ್ಯ ಬಿಡಲು,
ಸುದ್ದಾಗುವನೆ ವ್ಯಾಧಿ ಕಳೆದಿಳೆಯಲಿ ವೇಮಾ?

೧೧೩೮ ಪಿಂಡವಾಗಿ ತಾಯಿ ಪಿರಿಯ ಗರ್ಭದೊಳುಂಟು,
ಪೂರ್ವಕರ್ಮ ನೆನೆದು ಹೊರಳಿ ಅಳುವ;
ಧರೆಯೊಳುದಿಸಿ ಅದನೆ ಮರೆತು ವರ್ತಿಸುವನು ವಿಶ್ವ

೧೧೩೯ ಮಾಸಕೊಂದು ಬಾರಿ ಮರಳಿ ರಕ್ತ ಕಾರಿ,
ಉಷ್ಣವಾಗಲಾಗ ಉಬ್ಬು–ಕೀವು
ಉಳಿದ ಕಾಲದಲ್ಲಿ ಉಚ್ಚೆ ಕಾರುತಿಹುದು ವಿಶ್ವ

೧೧೪೦ ಮನುಜರು ಮನದಿಚ್ಛೆ ತಣಿಸೆ,
ವನಿತೆಯರ ಕೂಡಿ ಹಿಂದಿನ ಕರ್ಮದ ವಶದಿಂ–
ದೆನಿತೆನಿತೊ ಕೆಲಸ ಗೆಯ್ಯ ಲ–
ವನಿಯಲಿ ಹಾನಿಗೆ ಸಿಗುವರು, ಎಚ್ಚರ! ವೇಮಾ

೧೧೪೧ ಸತಿಯಲ್ಲೇ ಪತಿ ಪುಟ್ಟಿದ;
ಪತಿಯು ಸತಿಯಲಿ ಹುಟ್ಟಿದ ಪರಮಾರ್ಥಮಾ!
ಸತಿಪತಿಗಳೆಂಬವರಾರು?
ಮತಿಯಲಿ ತಲೆ ಹಾಕಿ ತಿಳಿಯೊ, ಮಹಿಯಲಿ, ವೇಮಾ

೧೧೪೨ ಕಾಯಬೇಕು ಧನವ, ಕಾಂತೆಯನ್ನು ಸತತ,
ಕಾಯಲಾರದವನು ಸಾಯುತಿಹನು
ಕಾಯುವವನಿರದಿರೆ, ಕೇಳಬೇಕೆ ಬದುಕು? ವಿಶ್ವ

೧೧೪೩ ಬೀದಿ ಬಸವಿಗಾಸೆ ಬೀದಿ ಕಾಮನ ಮೇಲೆ,
ಸರಸ ವಿಟನ ಸಂಗವೆಂತು ಸಹ್ಯ?
ಶಗಣಿ ತಿಂಬ ಹುಳುವು ಬೆಲ್ಲ ಸಿಹಿಯರಿವುದೆ? ವಿಶ್ವ

೧೧೪೪ ಎತ್ತಿಗಿಂತ ಕೋಣ, ಎಮ್ಮೆಯೆಂತು ಹೀನ?
ಕೆಂಪು ಇರದೆ ಹೋಯ್ತು; ಕ್ರಯದಮಟ್ಟ
ನೇರವರಿಯದವನ ನೆರೆ ಯೋಗಿಯೆನುವರೆ? ವಿಶ್ವ

೧೧೪೫ ಸವತಿ ತಾಯಿ ನೋಡು, ಸದಾ ದೋಷದೆಣಿಕೆ
ಸ್ವಂತ ತಾಯಿಯಂತೆ ಸಹಿಸಳೆಂದು
ವಿಧವನರಿತು ಒಳಗೆ ವಿಜ್ಞಾನ ಹೊಂದಿರಿ ವಿಶ್ವ

೧೧೪೬ ಉಚ್ಚೆ ಬರುತಿಹುದು ನಿಚ್ಚವು ಸರಿಗಾಣು;
ಮುದದಿಂದಲಿ ಮನದ ಮರ್ಮವರಿತು,
ಹೆಚ್ಚು ಕರ್ಮಗಳ ಇಚ್ಛೆ ಇಂತಲ್ಲವೆ? ವಿಶ್ವ

೧೧೪೭ ಗುಡಿಯ ದೇವರೆಂದು ಗುರುತು ನಿಲಿಸಿದವರು
ಹಿಡುಯ ಹಾರುವೆಂದು ಗೊಣಗಲೇಕೆ?
ಮೂಢ ಜನಕೆ ಮೊದಲು ಮಾರ್ಗ ತೋರಿರಯ್ಯ ವಿಶ್ವ

೧೧೪೮ ಹೃದಯದಲ್ಲಿ ಇರುವ ಈಶನನು ತಿಳಿಯದೆ,
ಶಿಲೆಗಳಿಗೆ ಮಣಿಯುವ ಜೀವಿಗಳೇ!
ಶಿಲೆಯೊಳೇನು ಉಂಟು? ಜೀವಿಯಲ್ಲಿ ಹೊರತು, ವಿಶ್ವ

೧೧೪೯ ಕಳ್ಳ ಗುರು ಕಟ್ಟುವನೆಲ್ಲ ಕರ್ಮಗಳನು
ಮಧ್ಯ ಗುರು ಕಟ್ಟುವ ಮಂತ್ರ-ತಂತ್ರ;
ಉತ್ತಮ ಕಟ್ಟುವನು ಯೋಗ ಸಾಮ್ರಾಜ್ಯವ ವಿಶ್ವ

೧೧೫೦ ರೂಪುಗೊಳಿಸೆ ಕಲ್ಲು, ರಾಜರು ಮಣಿಯುವರು
ವರ್ಣ ಬಳಿಯಲದಕೆ ವೈಭವವದು.
ಕರ್ತನಾವನೆಂದು ಕಾಣರು ಮೂರ್ಖ ಜನ ವಿಶ್ವ

೧೧೫೧ ಶಿಲೆ ಪ್ರತಿಮೆ ತಂದು ಸಮವು ರಾಜಗೆಂದು,
ಪೂಜೆ ಗೈವ ನರನು ಬುದ್ಧಿಗೇಡಿ;
ಭಾವದಲ್ಲಿ ಪರವ ಭಾವಿಸಿ ತಿಳಿಯನೇ? ವಿಶ್ವ

೧೧೫೨ ಪೂಜೆ ಮಾಡಿ ಮಾಡಿ, ಪೂಜಾರಿಯಾಗುವ;
ಪೂಜ್ಯ ವಸ್ತುವೆಂದು ಭೂಮಿಯಲ್ಲಿ
ಎಲ್ಲಿ ಪೂಜಿಸುವುದು? ಎಲ್ಲ ದಿಶೆಯಲಷ್ಟೆ ವಿಶ್ವ

೧೧೫೩ ಧರೆಯ ದೇವಾಲಯದಂಟು ಬಿಟ್ಟಿರುವವ,
ತನುವ ಗುಡಿಯ ಮಾಡಿ ತನ್ನ ನಿಲಿಸಿ,
ಲೋಕ ಬುದ್ಧಿ ಬಿಟ್ಟವಲೋಕಿಸು ತನ್ನೊಳಗೆ, ವಿಶ್ವ

೧೧೫೪ ತೊಗಲು ಹೊಟ್ಟೆಯಲ್ಲಿ ದೊಡ್ಡ ಅವನು ಇರಲು,
ಕಲ್ಲು ಗುಡಿಗಳಲ್ಲಿ ರಾಶಿಯೇಕೆ?
ಕಲ್ಲು ದೇವರೇನು ರಾಶಿಯ ನುಂಗುವನೆ? ವಿಶ್ವ

೧೧೫೫ ಶಿಲೆಯ ಬಸವನನ್ನು ಸಿಂಗರಿಸಿ ಮಣಿಯುತ,
ಜೀವಿ ಬಸವನನ್ನು ಜಜ್ಜುತಿಹರು
ಬಸವ ಭಕ್ತರೆಲ್ಲ ಪಾಪಿಗಳಾದರಲ ವಿಶ್ವ

೧೧೫೬ ತಿಳಿಯೆ, ಭಾಗವತರೆ, ತಿಳಿಯುವವರಿರಲ,
ಅಖಿಲರೆಂತಾಗುವರು ಅಕಟ ಜಗದಿ?
ಆದ ಅವನ ಕಾಣೆ, ಅವನೆ ಶಿವಯೋಗಿಯು ವಿಶ್ವ

೧೧೫೭ ಎಣಿಸುತೆಷ್ಟು ಪೂಜೆಯೆಷ್ಟು ಮಾಡಲೇನು?
ಭಕ್ತಿಯಿರದೆ ಪೂಜೆ ಫಲವು ಇಲ್ಲ
ಭಕ್ತಿಯಿರುವ ಪೂಜೆ ಬಹಳ ಕಾರಣವದು. ವಿಶ್ವ

೧೧೫೮ ಮುಳುಗಿ ಬ್ರಾಹ್ಮಣನವ ಮುಂದುಗಾಣದಾದ;
ತಿರುಗಿ ತಿರುಗಿ ಜೋಗಿ, ದಿಗಿಲುಗೊಂಡ;
ಕೂಗಿ ಕೂಗಿ ಹೊಲೆಯ ಕೀಳು ನಾಯಿಯಾದ; ವಿಶ್ವ

೧೧೫೯ ನಾಯಿ ಮುಟ್ಟಿದೊಡನೆ ಗಡಿಗೆ ಕೆಡುವುದಲ್ಲ;
ಕುಲಟೆ ಮುಟ್ಟಿದೊಡನೆ ಕುಲವೆ ಕೆಡುಗು
ಗುಣವು ಮುಟ್ಟಿದೊಡನೆ ಗುರುವೆ ದೋಚುವನಲ್ಲ ವಿಶ್ವ

೧೧೬೦ ಹೊಲೆಯ ಮುಟ್ಟಿದೆನುತ ಹೋಗಿ ನೀರ ಮುಳುಗು
ಹೊಲಸು ಕರ್ಮದಿಂದ ಹೊಲೆಯನಾದ
ಏಕೆ ತಿಳಿಯರಿದನು ಈ ನರ ಪಶುಗಳು? ವಿಶ್ವ

೧೧೬೧ ಎಂಜಿಲೆಷ್ಟು ಒಣಗಿ ಹಿತವೆಂದೆಣಿಸದೆ,
ಬಗ್ಗಿ ನಡೆವರೆಲ್ಲ ಭುವಿಯ ಜನರು
ಹಡೆದ ಎಂಜಿಲೆಷ್ಟು? ನೋಡುವೆಂಜಿಲಧಿಕ ವಿಶ್ವ

೧೧೬೨ ಊರ ಮಧ್ಯೆ ಭಾವಿ ಉದಕವನ್ನು ತಂದು,
ಪಾದ ತೀರ್ಥವೆಂದು ಭ್ರಮೆಯಗೊಳಿಸಿ,
ಪಾದ ತೀರ್ಥವೆನಲು ಫಲವು ಏನು ಉಂಟು? ವಿಶ್ವ

೧೧೬೩ ಗಡ ಮುಂಜೆ ಗೆಯ್ವ ವಿಪ್ರರು,
ಅಡಿಗಡಿಗೆ ಬ್ರಹ್ಮಚರ್ಯದ ಮಂತ್ರವ ಪಠಿಸಲ್
ಕಡೆಗೆ ಪ್ರಾರಬ್ಧ ಬಿಟ್ಟು,
ಮಿಡುಕುತ ದಡಗಾಣರಲ್ಲ, ಮಹಿಯಲಿ ವೇಮಾ

೧೧೬೪ ಖಂಡವು ಶ್ರಾದ್ಧ ದೇವನಿಗೆ ಕಾಲಿನಸ್ಥಿಗಳು ಭೂಮಿ ದೇವಿಗಂ
ಪಿಂಡವು ಆಯ್ತು; ಕಾಗೆಗಳಿಗೆ ಹೊಟ್ಟಿದ ವಸನೆವೆಲ್ಲ ಹೊಲತಿಗೇ
ಬಂಡು ಧನವೆಲ್ಲ ರಾಜರಿಗೆ ಮೇಲಾದ ಭಾರ್ಯೆ ಮಿಂಡ ಬೋರಗಂ
ಕಂಡರಿ ಪ್ರಾಣವೆಲ್ಲರಲ್ಲಿ ತುಂಬಿದೆ, ಪಾಪವಿಷ್ಟಿರಲು ವೇಮನಾ

೧೧೬೫ ತಿರುಗಲು ಆವಾವ ದೇಶ
ಅರಳದಿರಲು ತನ್ನ ಮನಸು, ಸಾರ್ಥಕವೇನೈ?
ಇರಲಿನಿತಾಧಾರವು ತಾ–
ನರಿಯುವೊಡೆ ಮನಸಿನ ಶುದ್ಧಿ ತತ್ತ್ವವು, ವೇಮಾ

೧೧೬೬ ದೇಶ ದೇಶಗಳನು ದಣಿವಿನಿಂದ ತಿರುಗೆ,
ಆತ್ಮದಲ್ಲಿ ಧ್ಯಾನ ಅಂಟಬಹುದೇ?
ಕಾಸು ಬಯಸಿ ತಿರುಗೆ, ಕಾಣಲಾರ ಮೋಕ್ಷ ವಿಶ್ವ

---

೧೧೬೭ ಕೊಂಕಣಕ್ಕೆ ಹೋದ ಸಿಂಹ ಸೊಣಗವಲ್ಲ
ಕಾಶಿ ಹೋದ ಹಂದಿ ಕರಿಯು ಅಲ್ಲ
ಬೇರೆ ಜಾತಿಯವನು ಬ್ರಾಹ್ಮಣನಾಗುವನೇ? ವಿಶ್ವ

೧೧೬೮ ಕಾಶಿಗೆ ಹಸಿಬೆಯೆಂದು ಕೊನೆಯ ಪಯಣ ಏಕೆ?
ಕಾಶಿ ತೀರ್ಥಕಾಗಿ ತ್ರಾಸು ಏಕೆ?
ದೋಷಕಾರಿಗೆಂತು ದೊರೆವುದು ಆ ಕಾಶಿ? ವಿಶ್ವ

೧೧೬೯ ಕಳ್ಳ ಯಾತ್ರೆ ಗೈದು ಗಂಟು ಬಿಚ್ಚಿ ನೋಳ್ಪ;
ಕೈಯ ಮುಗಿಯೇ ಮನದಿ ಕಾಲ ಸಿಗದು
ಸೊಣಗ ಮನೆಯ ಹೊಕ್ಕು, ಮಡಿಕೆ ಹುಡುಕುವಂತೆ ವಿಶ್ವ

೧೧೭೦ ಮದ್ದು ತಿನಲು ನೋವಡಗಿತು;
ಮದ್ದು ತಿನಲು ಸುಂದರಿಯು ಜಗದಲ್ಲಿ ಮೆರೆವಳ್;
ಮದ್ದು ತಿನಲು ರೋಗ ವಾಸಿ;
ಮದ್ದು ತಿನಲು ಉಂಟು ಪುಷ್ಟಿ, ಮಹಿಯಲಿ, ವೇಮಾ

೧೧೭೧ ಸುಖಸುಖದಿಂದ ನಾನು ಸುಗುಣನಾಗಿರುವಾಗ,
ನನ್ನ ಮದುವೆಯಾಗೆ ನಯದಿ ಹೇಳಿ,
ಆದನೆ ಕೂಡಿಸಿತು ವಿಧಿ ಅದನೇನುವುದು? ವಿಶ್ವ

೧೧೭೨ ಇಷ್ಟು ದಿನಗಳಿಂದ ಇನಿತು ಮೋಹ ಬೆಳೆದು,
ಅಕ್ಕರೆಯಾ ಬಳಗ, ಅಕ್ಕ, ತಂಗಿ,
ಭ್ರಾಂತಿಯಲ್ಲಿ ಸಿಲುಕಿ ಬಿದ್ದರು ತಾವುಗಳ ವಿಶ್ವ

೧೧೭೩ ಜೋರು ಪಾಪೆ ಗೊಂಬೆ, ಓರೆಯಿಪ್ಪ ನಡುವು
ಸೀರೆಯಿರದ ಸೂಳೆ, ಸಿಕ್ಕು ಚಂಡು,
ಸೇರದವನ ಮಹಿಮೆ ಆರು ಹೇಳಲಳವು? ವಿಶ್ವ

●●●

# ೬. ಅರ್ಥವರ್ಗ

## ರಾಜನೀತಿ

**ಕೊಲ್ಲಲರ್ಹನೆನಿಪ ಶತ್ರು ವಶವಾಗಲು,**
**ಮುಳ್ಳನಾಡಿಸದಿರು ಸಿಕ್ಕನೆಂದು;**
**ಒಳ್ಳೆಯದನೆ ಬಗೆದು ಹೋಗೆನಿಪುದೆ ಸಾವು**
**ವಿಶ್ವಧಾಭಿರಾಮ ಕೇಳು ವೇಮ.**

## (ಅ) ರಾಜ ನೀತಿ

### ರಾಜನ ಗುಣ

ಆಲಸಿಗಳು ಶ್ರೇಷ್ಠರಾಗಲಾರರು. ರಾಜರು ಧೈರ್ಯವನ್ನು ಹೊಂದಿ ಕಾರ್ಯ ತತ್ಪರರಾಗಿರುತ್ತಾರೆ. ರಾಜನು ಎಷ್ಟು ಶೂರನೋ ಅಷ್ಟೇ ಉದಾರಿ–ಯಾಗಿರಬೇಕು. ಕೊಲ್ಲಲು ಅರ್ಹನಾದ ವ್ಯಕ್ತಿಯು ಕೈವಶವಾದಾಗಲೂ ಕ್ಷಮಿಸುವ ಔದಾರ್ಯ ಹೊಂದಿರಬೇಕು. ರಾಜನು ನಿಗರ್ವಿಯಾಗಿರಬೇಕು. ಭೂ–ಗಗನ ಮಧ್ಯೆ ಪರಮಾತ್ಮನೇ ರಕ್ಷಿಸುವಾಗ, ತಾನು ಕೇವಲ ಉಪಕರಣ ಮಾತ್ರ, ಎಂಬ ಭಾವ ಮೂಡಬೇಕು.

ರಾಜನು ಮೃದು ಭಾಷಿಯಾಗಿರಬೇಕು. ರಸಿಕನೂ ಆಗಿರಬೇಕು. ಆದರೆ ಯುದ್ಧ ಕೋವಿದನಿರಬೇಕು. ರಣರಂಗದಲ್ಲಿ ನಿಪುಣನಾಗಿರಬೇಕು. ಕದನ ಭೀರುವನ್ನು ಕಂಡು ಯಮನು ನಗುವನಲ್ಲವೇ? ಏಕೆಂದರೆ, ಸಾವು ಪೂರ್ವ ನಿಶ್ಚಿತವಿರುತ್ತದೆ.

ರಾಜರ ಬಗೆಗೆ ಎಚ್ಚರ ವಹಿಸಬೇಕು. ಕೊಲ್ಲುವ ರಾಜನು ಬಹಳ ಕರುಣೆ ತೋರಿಸಿದಂತೆ ನಟಿಸುವುದೂ ಉಂಟು.

ರಾಜನು ಗಂಭೀರನಿರಬೇಕು. ಅವನೇ ಕೋತಿಯಂತಾದರೆ, ಅವನ ಮಂತ್ರಿ ಸೇನಾಧಿಪರ ಗತಿಯೇನು?

ಧರ್ಮ ಸೂತ್ರಾನುಸಾರ ಪ್ರಜೆಗಳು ತಪ್ಪು ಮಾಡಿದರೆ ಪ್ರಭುವಿಗೂ ದೋಷ ತಟ್ಟುತ್ತದೆ. ಪ್ರಭುವು ಒಳಿತು ಮಾಡಿದರೆ ಪ್ರಜೆಗಳಿಗೆ ಅರ್ಧ ಪುಣ್ಯವುಂಟು. ಅಂದ ಮೇಲೆ ಪ್ರಭುವು ತಪ್ಪು ಮಾಡಿದರೆ ಪ್ರಜೆಗಳಿಗೇಕೆ ದೋಷಬಾರದು? ರಾಜನು ತಪ್ಪನ್ನೇ ಮಾಡುವುದಿಲ್ಲ; ಎಂಬ ಗ್ರಹಿಕೆಯು ತಪ್ಪಾಗಿದೆ. ಆಳುವವರು ತಪ್ಪೆಸಗದಂತೆ ನೋಡಿಕೊಳ್ಳುವುದು ಪ್ರಜೆಗಳ ಕರ್ತವ್ಯವೇ ಸರಿ.

೧೧೭೪ ಆರ್ಯರಾದ ಘನರು ಕಾರ್ಯ ಹೀನರಲ್ಲ,
ಶೌರ್ಯ ಧೈರ್ಯಗಳನು ಖೇಶರಿಸುತ,
ಪೂರ್ಣ ಭಾವವಮರ ಹೊಂದುತಲಿಪ್ಪರು, ವಿಶ್ವ

೧೧೭೫ ಧರ್ಮವರಸುತಿಪ್ಪ ಧರ್ಮರಾಜರಾದಿ,
ನಿರ್ಮಲವಹ ಕ್ಷಮತೆ ನಿಲಿಸಿ ಇಹರು
ಧರ್ಮವೇ ನೃಪರಿಗೆ ತಾರಕವಾಗಿಹುದು ವಿಶ್ವ

೧೧೭೬ ಕೊಲ್ಲಲರ್ಹನೆನಿಪ ಶತ್ರು ವಶವಾಗಲು,
ಮುಳ್ಳನಾಡಿಸದಿರು ಸಿಕ್ಕನೆಂದು;
ಒಳ್ಳೆಯದನೆ ಬಗೆದು, ಹೋಗೆನುವುದೆ ಸಾವು ವಿಶ್ವ

೧೧೭೭ ಭೂಮಿ ಗಗನ ಮಧ್ಯೆ ಬಲ ಪಡೆದು ಜಗದಲಿ,
ರಕ್ಷೆ ಮಾಡುವಂಥ ರಾಜನಾರು?
ಮಹಿಪತಿಯೆಂಬ ಹೆಸರು ಮನುಜಗೆಂತು ಬಂತು? ವಿಶ್ವ

೧೧೭೮ ರಾಜ ಮಾತು ಎಣಿಸೆ ರಾರಾಜಿಪ ರೀತಿ;
ತಕ್ಕ ತನವು ತಾನೆ ದಿವ್ಯವಾಯ್ತು
ಅಂಥ ತಕ್ಕತನವ ಅರಿತುಕೊಳದ ಜನರು
ಆತು ಹುಟ್ಟಬೇಕು. ಅವನಿ ವೇಮ

೧೧೭೯ ರಾಜ ಮಾತು ತಾನೆ ರಸಿಕನಾಡಿದ ಮಾತು,
ಎಂಥ ವೃತ್ತಿ ಇರಲಿ, ಏರಬೇಡ
ಕೊಸರಿ ಜಿಗಿದರೇನು? ಗ್ರಹ ಸಮಾನನಲ್ಲ
ದೊಡ್ಡ ಸಣ್ಣ ಮೇಳದಿರವೆ ವೇಮ

೧೧೮೦ ಉಚಿತವಂತನಿರಲಿ, ಉದ್ಯೋಗಪರನಿರೆ,
ಸಾಗಿ ಹೋಗುತಿರುವ ಸಮಯದಲ್ಲಿ,
ಪರರಿಗೆ ಉಪಕರಿಸಿ ಪಾಲಿಸುತಿರಬೇಕು. ವಿಶ್ವ

— — — — — — — — — — — — — — — — — — — — —

೧೧೮೧ ಔಚಿತಿಯ ಕಾಣುವವನೆಂದಿಗೂ ಅರ್ಹನಿಹನು;
ಗೌರವವುಳ್ಳ ಪದವಿಯ ಕಾಣುತಿಹನು;
ಸರ್ವ ಜನರನು ಕಾಣುತ ಸಂತಸಿಪನು
ಬಹಳ ಕೀರ್ತಿಯನರ್ಜಿಸುತ ಬೆಳೆವ ವೇಮ

೧೧೮೨ ಘನನಾಗಿರೆ ದೊರೆಯು, ರಣ ರಂಗದ ಚಿಂತೆ;
ಪರಮ ಮುನಿಗೆ ಪರಮಾತ್ಮನ ಚಿಂತೆ
ನರನು ಅಲ್ಪನಿರಲು ನಾರಿ ಮೇಲೆ ಚಿಂತೆ ವಿಶ್ವ

೧೧೮೩ ಭೂಮಿ ತನ್ನದೆನಲು ಭೂಮಿ ನಗುವುದಲ್ಲ!
ದಾನ ಹೀನನ ಕಂಡು ಧನ ನಗುವುದು!
ಕದನ ಭೀರು ಕಂಡು ಕಾಲರಾಯ ನಗುವ,' ವಿಶ್ವ

೧೧೮೪ ಹೊಂಚು ಹಾಕಿ ಹಾವು ಹೆಡೆಯ ಮುಚ್ಚುತಿಹುದು;
ಕೆಡಿಸಲೆಣಿಸುತಿಹನು, ಗೆಳೆತನ ಗೆಯ್ವ
ಕೊಲುವ ಇಚ್ಛೆಯ ದೊರೆ ಸಲುಗೆ ನೀಡುತಿಪ್ಪ, ವಿಶ್ವ

೧೧೮೫ ಭೂಪತಿ ಕೃಪೆ ನಂಬಿ ಭೂಮಿ ಕೆಡಿಸುವವನು,
ಪ್ರಜೆಗಳುಸಿರು ಸೋಂಕಿ ಬಿದ್ದು ಹೋಹ
ಎಸೆದ ಚೆಂಡದೆಷ್ಟುಕಾಲ ನಿಲ್ಲಬಹುದು? ವಿಶ್ವ

೧೮೬ ರಾಜಸವನು ಕೋರಿ, ರಾಜ್ಯ ಭಾರದಲ್ಲಿ
ಕೆಡುವನು ಇಹ ಪರದಿ, ಕೆಚ್ಚು ಇರದೆ;
ನೀರ ಮೇಲೆ ಗುಂಡು ನಿಲ್ಲುವುದೆ ಮುಳುಗದೆ ವಿಶ್ವ

೧೧೮೭ ಮರ್ಮವರಿಯಲಿಲ್ಲ ಮನುಜರೆಲ್ಲ ಇಂತು,
ಮೂಳ ದಾಸ ಜನಕೆ ಮುಡಿಪನಿತ್ತು,
ಮಹಿಯ ಪೊರೆವ ಪರಿಯ ಮನುಜರರಿಯರಲ್ಲ! ವಿಶ್ವ

೧೧೮೮ ಪ್ರಭುವು ಕೋತಿಯೆನಿಸೆ, ಮಂತ್ರಿ ಹಂದಿಯೆನಿಪ;
ಯೋಧರೆಲ್ಲ ಪಕ್ಷಿ; ಸೇನೆ ಪಶುವು;
ಆನೆ–ಕುದುರೆ ತಾವು ಬೆಕ್ಕು ಇಲಿಗಳಂತೆ, ವಿಶ್ವ

೧೧೮೯ ರಾಜ ಪದವಿ ಹೊಂದಿ, ರಮಣಿ ಹೊಂದಲಾಸೆ
ಪಡುತಿಹಗೆ ಗುರುವಿನುಪದೇಶವೆ?
ವಿಟರನಾಶಿಸುವವಳು ವಿಭು ಭಕ್ತಿಯರಿವಳೆ? ವಿಶ್ವ

೧೧೯೦ ಅಧಿಕ ರಾಜನೊಬ್ಬ ಅಲ್ಪನ ಕೈ ಹಿಡಿಯೆ,
ಅವನ ನುಡಿಗೆ ಅವನಿ ಸೈಗುಡುವುದು,
ಹರದನೊಪ್ಪಿದೊಡನೆ ಕವಡೆ ನಾಣ್ಯವಹುದು ವಿಶ್ವ

೧೧೯೧ ಕೊಲುವ ರಾಜ ಬಹಳ ಕರುಣೆ ತೋರುತಿಪ್ಪ;
ಹಾಳು ಮಾಡಲೆಂದು ಹಗೆಯ ಮೈತ್ರಿ
ಕಾಲ ಸರ್ಪ ಹೊಂಚು ಹಾಕಿ ಅವಿತ ರೀತಿ ವಿಶ್ವ

೧೧೯೨ ದೂರುತಿರುವಂಥ ಪ್ರಭುವ
ಸೇರಲು ಬಾರದು; ನೆಪಗಳು ಶೀಘ್ರವೆ ಬಹವೈ!
ವಾರಿಧಿ ದಾಟಿದರೂ ಶನಿ–
ಮಾರಕನಹ, ಹಿಡಿದು ಕೊಲುವ, ಮಹಿಯಲಿ ವೇಮಾ

೧೧೯೩ ಮೊದಲು ನೋಡಿ, ನೋಡಿ, ತುದಿಗೆ ನೋಡದಿರಲು,
ನೋಟ ತಪ್ಪಿದೊಡನೆ ನಿಲ್ಲಬೇಡ
ತೊಲಗದಿರಲು ಅವನ ತೆಳಗಿನವನೆನುವರು ವಿಶ್ವ

೧೧೯೪ ಅಧಮನಿರಲಿ ಮನುಜ ಅರ್ಥವಂತನಿರಲಿ,
ಅವನ ಮಾತಿಗೆ ಬೆಲೆ ಅವನಿಯಲ್ಲಿ
ಗಜಪತಿ ಮನೆಯೊಳಿಹ, ಕವಡೆ ನಾಣ್ಯವಷ್ಟೆ? ವಿಶ್ವ

೧೧೯೫ ಎಷ್ಟೊ ಸೇವೆ ಗೈದು ಎಂಥ ಪಾಡು ಪಡಲು,
ರಾಜ ಮಂಡಲ ನಂಬಬಾರದಣ್ಣ;
ಹಾವಿನಾಟ ಬೇಡ, ಹತ್ತು ಸಾವಿರಾದರು ವಿಶ್ವ

೧೧೯೬ ಅರಿಯದವನ ಬಳಿಯೆ ಅನುಗಾಲ ದುಡಿಯಲು,
ಬದುಕು ಅಲ್ಲ; ಬರಿ ಭ್ರಾಂತಿಯಷ್ಟೆ,
ಗೊಡ್ಡು ಗೋವು ಹಾಲು ಕೋರಲೀಯಬಹುದೆ? ವಿಶ್ವ

೧೧೯೭ ಪ್ರಜೆಗಳರಿಯೆ ಬದುಕು ಪಟ್ಟಭದ್ರನಲ್ಲ;
ಮೇಲೆ ಕಿರೀಟವಿರೆ ಬ್ರಹ್ಮನಲ್ಲ,
ಬಾಗು ತಿಳಿದು ನುಡಿಯ; ಯೋಗೀಶ್ವರನವನು, ವಿಶ್ವ

೧೧೯೮ ಮಂಗ ಮರಿಯ ತಂದು ಮತ್ತೆ ಪಟ್ಟಗಟ್ಟಿ,
ಬೆಟ್ಟ ಮುಸುವ ಸೇರಿ ಬೇಡುವಂತೆ,
ನೀತಿ ಹೀನನ ಬಳಿ ನಿರ್ಭಾಗ್ಯರಿರುವರು, ವಿಶ್ವ

೧೧೯೯ ಪ್ರಜರು ಗೆಯ್ದ ತಪ್ಪು ಬ ಪ್ರಭುವಿಗೆ ಬರುವುದು;
ಪ್ರಭುವಿನೊಳಿತಿನೊಳಗೆ ಪ್ರಜೆಗೆ ಅರ್ಧ.
ಪ್ರಭುವು ಗೆಯ್ದ ತಪ್ಪು, ಪ್ರಜೆಗೆ ಬಾರದೇಕೆ? ವಿಶ್ವ

೧೨೦೦ ಪರಮ ಪದವಿ ಕೋರ್ವ ಭಕ್ತನು ನಿತ್ಯದಲಿ;
ರಾಜ ಕೋರುತಿಪ್ಪ ರಣ ಜನವನು
ಮೂರ್ಖ ಸತತ ಕೋರ್ವ ಮಹಿಳೆಯೊಡನೆ ಕೂಟ, ವಿಶ್ವ

೧೨೦೧ ಹೊರಳಿ ಹೊರಳಿ ಸುಳ್ಳು ಹೇಳಲರಮನೆಯಲಿ,
ಕ್ಷಣಕೆ ಕ್ಷಣಕೆ ಲಕ್ಷ್ಮಿ ಕ್ಷಯಿಸುತಿಹಳು
ಒಡೆದ ಮಡಿಕೆಯಿರಲು ಒಳಗೆ ಇಹುದೆ ನೀರು? ವಿಶ್ವ

೧೨೦೨ ಅರಿಯೆ, ಬಹಳ ಸುಳ್ಳು ಆಡುವರ ಮನೆಯಲಿ,
ತೊಲಗದೆಂತು ಲಕ್ಷ್ಮಿ ತಾನು ಇಹಳು?
ಒಡೆದ ಗಡಿಗೆ ನೀರು ಒಡನೆ ಸೋರದಿಹುದೆ ? ವಿಶ್ವ

೧೨೦೩ ಆಗೀಗ ಸುಳ್ಳಾಡಿ, ಅವನಿಪತಿ ಮನೆಯಲಿ,
ಬಾರಿ ಬಾರಿ ಲಕ್ಷ್ಮಿ ಬಿಟ್ಟು ಹೋಹಳು,
ಒಡೆದ ಮಡಿಕೆಯೊಳಗೆ ಹಿಡಿದಿಡಬಹುದೆ ನೀರು? ವಿಶ್ವ

೧೨೦೪ ತಪ್ಪನೆಣಿಸುವವರು ತಂಡೋಪ ತಂಡದಿ,
ಉರ್ವಿ ಜನರಗೆಲ್ಲ ಉಂಟು ತಪ್ಪು,
ತಪ್ಪನೆಣಿಸುವವರು ತಮ್ಮ ತಪ್ಪನರಿಯರು, ವಿಶ್ವ

೧೨೦೫ ಅಳಿಯಲಾಗ ಈಗ ಸುಳ್ಳನ ಮನೆಯೊಳಗೆ,
ತೊಲಗದೇಕೆ ಲಕ್ಷ್ಮಿ ವಿಶ್ರಮಿಪಳು?
ಒಡೆದ ಮಡಕೆ ನೀರು ಒಡನೆ ಹರಿವ ರೀತಿ ವಿಶ್ವ

೧೨೦೬ ಕುಲ ನೀರುಗಾಣಿಸಿ, ಗುರು ವಧೆಯನೆ ಬಯಸಿ,
ಕೂಗಿದಾನೆಯೆಂದು ಎಲ್ಲ ಸುಳ್ಳು,
ಹೆಸರು ಧರ್ಮರಾಜ, ಅದೆಂತು ಪಾವನವು? ವಿಶ್ವ

೧೨೦೭ ಮಾತನುಳಿಸಿಕೊಳದ ಮನುಜನೆ ಚಂಡಾಲ;
ಆಜ್ಞೆ ನಡೆಸದಂಥ ರಾಜ ಮುಂಡೆ,
ಮಹಿಮೆಯಿರದ ದೇವಿ, ಮಣ್ಣಿನ ಹುಲಿಯಂತೆ, ವಿಶ್ವ

೧೨೦೮ ತನ್ನ ಭ್ರಾತೃ ವರರು ಧರೆಯನಾಳುವಾಗ,
ತನಗೆ ಇರುವರೆನುವ ಬೆನ್ನ ಹಿಂದೆ,
ತನ್ನ ಕಾಲು ಕೊಯ್ಯೆ, ತಮ್ಮ ತಾನಳುವನೆ? ವಿಶ್ವ

೧೨೦೯ ರಾಜಗೀವ ರೀತಿ ರಂಕಗೀಯರಯ್ಯ,
ಗಣಿಕೆಗೀವ ರೀತಿ ಗರತಿಗಿಲ್ಲ,
ಸುರೆಗೆ ಈವ ರೀತಿ ಸುಧೆಗೆ ಈಯರಯ್ಯ, ವಿಶ್ವ

೧೨೧೦ ಪ್ರಭುವಿಗೀಯುವಂತೆ ಪಿರಿಯರಿಗೆ ಈಯರು,
ವನಿತೆಗೀಯುವಂತೆ ವಟುವಿಗೀಯರು,
ಸೆರೆಗೆ ಈಯುವಂತೆ ಸುಮತಿಗೀಯರಲ್ಲ!
ಮನಸು ಭದ್ರ ಪಡದು ಮಹಿಲಿ ವೇಮ.

೧೨೧೧ ಭೂಪತಿ ಕೃಪೆ ನಂಬಿ ಭೂಮಿ ಕೆಡಿಸುವವರು,
ಪ್ರಜರ ಉಸಿರು ತಾಕಿ ಪಡರೆ ಕೇಡು?
ಎಸೆದ ಚೆಂಡು ಮೇಲೆ ಎಷ್ಟು ಕಾಲ ಇಹುದು? ವಿಶ್ವ

೧೨೧೨ ಎಷ್ಟು ಸೇವೆ ಗೆಯ್ದು, ಏನು ಪಾಡು ಪಡಲು,
ಪ್ರಭು ಗಣವ ನಂಬ ಬೇಡಿರಣ್ಣ,
ಹಾವಿನೊಡನೆ ಸ್ನೇಹ ಹತ್ತು ಸಾವಿರಕ್ಕೂ ಬೇಡ, ವಿಶ್ವ

## ಕೇಳುವಿಕೆ–ತಿಳಿಯುವಿಕೆ

ಕಿವಿಗೆ ಆಹಾರವಾದ ಕೇಳಿ ಅರಿಯುವದು, ತುಂಬಾ ಶ್ರೇಷ್ಠ ಗುಣ. ಹೇಳುವುದನ್ನು ಕೇಳಿ, ಕಂಡು, ವಿವರವನ್ನು ಅರಿತು ಬಾಳುವ ಜನರೇ ನೀತಿಪರರು.

ಹಿಂದಿನ ಹಿರಿಯರ ಮಾತುಗಳನ್ನೇ ತಾಮ್ರಪಟಗಳಲ್ಲಿ, ಶಿಲಾಲಿಪಿಗಳಲ್ಲಿ ಬರೆದಾಗ ಅವುಗಳೇ ಪಾಲಿಸತಕ್ಕ ಶಾಸನಗಳೆನಿಸುವವಲ್ಲವೇ? ಶಾಸನಾತ್ ಇತಿ ಶಾಸನಂ. ಹಿತವಾದ ಮಾತು ಎಲ್ಲರಿಗೂ ರುಚಿಕರ, ಅತಿ–ಮಾತು ಕೇವಲ ಆಡಂಬರ, ಹಿತ ನುಡಿಯನ್ನು ಆಲಿಸಬೇಕು.

ಯಾವುದು ತಕ್ಕ ಕೆಲಸ; ಯಾವುದು ತಕ್ಕದ್ದಲ್ಲ; ಎಂದು ಹೇಳಿದರೂ ಕೇಳದವನು ಮೂರ್ಖ. ಋಷಿ–ಮುನಿಗಳು ತಿಳಿಸಿ ಹೇಳಿದ ಮಾತುಗಳನ್ನು ಕೇಳದೆ, ಮೀರಿ ನಿಂತಿರುವವರು ಭಂಡರೇ ಸರಿ. ಸರಿಯದ ಮಾತು ಕೇಳುವವನ ಸಂಗವನ್ನೆಂದೂ ತೊರೆಯಕೂಡದು.

ಚೆನ್ನಾಗಿ ಓದಬೇಕು. ಇಲ್ಲವೆ ಸರಿಯಾದುದನ್ನು ಕೇಳಬೇಕು. ಓದಿ, ಕೇಳಿ, ಅರ್ಥೈಸಿಕೊಂಡು ನಡೆದರೆ ಅದೇ ಮೇಲು.

**೧೨೧೩ ಕೇಳಲು ಬೇಕಾರು ಹೇಳೆ,**
**ಕೇಳಿದೊಡೆ ಗರ್ವ ಪಡದೆ ವಿವರಿಸಲು ಬೇಕೈ.**
**ಕೇಳೀಕ್ಷಿಸಿ ವಿವರ ತಿಳಿದು,**
**ಬಾಳುವ ಮನುಜರೆ ನೀತಿ ಪರರಿಹದಿ ವೇಮಾ**

**೧೨೧೪ ನೀ ಕೇಳು, ಹೇಳಲು; ಅದನೆ**
**ಪ್ರಾಕಟವಾಗಿಯೆ ಲೋಕದಿ ಪಾಲಿಸುತಿರಲಾ**
**ಪಾಕವು ಮನದೊಳಬಯಲಲಿ,**
**ಏಕಾಕೃತಿಯ ವಿರತವಾಗಿ ಕಂಡರಿ, ವೇಮಾ**

**೧೨೧೫ ಧಾರಾ ದತ್ತವಾದ ತಾಮ್ರ ಫಲಕಗಳು,**
**ಪಿರಿದು ಉಂಗುರಗಳ ಗುರುತು ಮಾಡಿ,**
**ಗಂಟು ಮೇಲೆ ಮುದ್ರೆ ಅಂಟಿಸುತಿರುವರು**
**ಅದುವೆ ಶಾಸನಾಯ್ತು; ಅವನಿಲಿ ವೇಮ**

**೧೨೧೬ ಅತಿ ಹಿತವಾದಂಥ ಆಡುತಿಪ್ಪ ನುಡಿಗೆ,**
**ಸಂತೋಷಿಪರೆಲ್ಲ ಸತ್ಪುರುಷರು;**
**ಅಧಿಕ ಭಾಷಣವಿರೆ ಆಯಾಸವದೆಲ್ಲ, ವಿಶ್ವ**

೧೨೧೭ ರೂಢಿಯಿರದ ಬಂಟತನವಲ್ಪನ ದಾರಿ;
ಒಡೆಯನ ನುಡಿಯರಿತು ನಡೆಯಲಾ;
ದೊಡ್ಡ ತೊಲೆಯ ಊರುಗೋಲು ಹಿಡಿದ ರೀತಿ; ವಿಶ್ವ

೧೨೧೮ ತಕ್ಕದಲ್ಲವೆಂದು ತಕ್ಕ ಮಾತು ನುಡಿಯೆ
ಕೇಳಿ ಕೆಡುವ ಮೂರ್ಖ ಕೊನೆಗೂ ನಿಜ;
ಮುನಿಯುಸುರಿದ ಧರ್ಮ ಮೀರಿ ನಿಂತರಲ್ಲ! ವಿಶ್ವ

೧೨೧೯ ಪರರ ಬೈದೊಡಷ್ಟು ಪಾಪ ಕರ್ಮವುಂಟು,
ಬಿಡದು ಎಂದಾದರು ಭೂಮಿಯಲ್ಲಿ,
ಪರನು ಪರನು ಅಲ್ಲ ಪರಮಾತ್ಮನಾಗುವ; ವಿಶ್ವ

೧೨೨೦ ಮಾತನಾಲಿಸದಿಹ ಮನುಜ ಮುನ್ನ ಮೂರ್ಖ,
ಮಾತನಾಲಿಸುತಿಹ ಮತ್ತೆ ಮಾನ್ಯ,
ಮಾತನಾಲಿಸುವನ ಸಂಗ ತೊರೆಯಬೇಡ, ವಿಶ್ವ

೧೨೨೧ ಕೇಳಿ ಬಂದ ಸುದ್ದಿ ಕೆಲವು ಕೇಳದಿದ್ದ
ಸುದ್ದಿ ಕೆಲವು ಇಹವು; ಏನೊ ಕೇಳ್ದ,
ಭೋ! ಕೇಳಿ ಪೇಳಿದೆ, ಎನ್ನುತಿಹ ಡಾಂಭಿಕ, ವಿಶ್ವ

೧೨೨೨ ಕೇಳಿದವನು ಯಾರೊ? ಕಂಡ ಅವನು ಯಾರೊ?
ಕೇಳಿ, ಕಂಡ, ಅವರ ವಿವರವೇನೊ?
ಅರಸಿ ಕಾಣಬೇಕು. ಅಂಬುಧಿಯನಾದರು.

●

## ಹಿರಿಯರ ಆಶ್ರಯ

ರಾಜನು, ಜಾಣರ, ಅನುಭವಿಗಳ ಸಲಹೆಯನ್ನು, ಆಯಾ ಸಮಸ್ಯೆಗಳನ್ನು ಕುರಿತು ಪಡೆಯಬೇಕು. ಇವರಿಗೆ ಮೊದಲು ಪುರೋಹಿತರೆನ್ನುತ್ತಿದ್ದರು. 'ಪುರಾಸಿ ಹಿತಂಕರೋತಿ' ಇತಿ ಪುರೋಹಿತಃ – ಅಂದರೆ ಹಿತ ವಚನವನ್ನು ಮುಖದೆದುರೇ ಹೇಳುವವನು ಪುರೋಹಿತನು.

— — — — — — — — — — — — — — — — — — — — — —

ನೆಲೆ ತಪ್ಪಿದ ವಿಭೀಷಣನು ಅತಿ ಧಾರ್ಮಿಕನಾದ ರಾಮನನ್ನು ಆಶ್ರಯಿಸಿ ತನ್ನ ದಾರಿ ಕಂಡುಕೊಂಡನು. ಧಾರ್ಮಿಕರಿಂದ ಸುಜ್ಞಾನ ಪಡೆದು, ಪಾಪ ನೀಗಬೇಕು. ಇಲ್ಲಿ ಬುಧರು ದೀಪವಾಗಿ ದಾರಿ ತೋರುತ್ತಾರೆ. ಮನಸ್ಸು ಕದಡಿದಾಗ ಸಾಧು ಸಂಗದಿಂದ ಶಾಂತಿ–ಪಡೆಯಬಹುದು. ಮಹಾ ಜನರ ಆಶ್ರಯವು ಕಾರ್ಯಸಿದ್ಧಿಗೂ ತಾರಕವಾಗಿದೆ. ಪಾರ್ಥನು ಶ್ರೀಕೃಷ್ಣನ ಆಶ್ರಯದಿಂದ ವಿಜಯ ಸಂಪಾದಿಸಲಿಲ್ಲವೇ?

ಋಷಿ–ಮುನಿಗಳು ಬಾಳಿನಲ್ಲಿ ಹೇಗೆ ಇರಬೇಕೆಂಬ ಬಗೆಗೆ ವಿವರವಾಗಿ ತಿಳಿಸಿದ್ದಾರೆ. ಹಾಗೆ ನಡೆಯಬೇಕು. ಅಂತೆ ನಡೆಯದವರು ಜಡಮತಿಗಳಷ್ಟೇ. ಕೇಡೇ ಅವರ ಗತಿ. ತನಗೆ ತಿಳಿಯದಿದ್ದರೇನಂತೆ? ಸಾಧು ಜನರು ಸರಿಯಾದುದನ್ನೇ ತಿಳಿಸಿ ಹೇಳುತ್ತಾರೆ. ಹಿರಿಯರ ಮಾತಿನಿಂದ ಜ್ಞಾನದ ಜ್ವಾಲೆಯು ಹೊತ್ತಿ ಉರಿಯದೇ?

**೧೨೨೩ ನೆರವು ತಪ್ಪಿದ ನರನತಿ ಧಾರ್ಮಿಕನ ಮನೆ**
**ಸೇರ ಬೇಕು; ಬದುಕೇ, ಶರಣನೀವ,**
**ಆ ವಿಭೀಷಣನಿಗೆ ಅಧಿಕಾರ ನೀಡನೆ?**
**ಮಹಿ ತಲದಲಿ ರಾಮ ಮೂರ್ತಿ ವೇಮ.**

**೧೨೨೪ ಸೂರೆಗೊಳ್ಳು ಸಿಗುವ ಸುಜ್ಞಾನವೆಲ್ಲವ,**
**ಪಾರು ಆಗು ಸಕಲ ಪಾಪದಿಂದ**
**ದಾರಿಯರಿಯೆ ಬುಧರು, ದೀಪವಾಗಿ ತೊಳಗು, ವಿಶ್ವ**

**೧೨೨೫ ಸಾಧು ಸಂಗ ಹೊಂದಿ ಶಾಂತಿ ಹೊಂದಬಹುದು,**
**ಶಾಂತವಾದ ಚಿತ್ತ ಶಕ್ಯವಹುದು,**
**ಶಕ್ಯವಾಗೆ ಮನಕೆ ಸಾಧ್ಯವಹುದು ಪರವು,**
**ಪರವ ಕಂಡ ಅವನೆ ಪಡೆವ ಶಿವ ತತ್ತ್ವವ,**

**೧೨೨೬ ವಿಜಯ ಪಾರ್ಥ ಬಿಲ್ಲು ಹಿಡಿದ ಕ್ಷಣವೆ ತಾನು**
**ಕುಜನರೆಲ್ಲರನ್ನು ಕೆಡವಿ ನಿಂತ.**
**ಭಜನೆ ಮಾಡುವವನು ವಿಜಯ ಪಡೆಯನೇನು? ವಿಶ್ವ**

**೧೨೨೭ ಕೊಂಡೆಯವನು ಖಳನಿಗೊಳ್ಳೆ ಗೆಳೆಯನೆನಿಪ,**
**ಭಂಡ ರಾಜಗಿಪ್ಪ ಹಾಳು ಮಂತ್ರಿ,**
**ಅಂಡಲೆವ ಮುಸುವಗೆ ಅಡವಿ ಮಂಗ ಗೆಳೆಯ, ವಿಶ್ವ**

೧೨೨೮ ಛಾಯೆಯಾವ ಮರವು ಸಾಧುಗಳ ಬೋಧೆ ತೆರ;
ವಿನಯದಿ ಬಳಿ ಸೇರಿ ವರಿಸಬಹುದು,
ಅತ್ತ ಇತ್ತ ಅಲೆಯೆ ಅದು ಹೋಹುವದಿಲ್ಲ, ವಿಶ್ವ

೧೨೨೯ ಋಷಿಯರಿಯದಂಥ ವಿಷಯವಿಲ್ಲ ಜಗದಿ,
ಅವರು ನುಡಿದುದೆಲ್ಲ ಅದು ಕ್ರಮವು,
ತಿಳಿಯದೆ ನಡೆವವರು ತಾವು ಜಡರು ಸತ್ಯ, ವಿಶ್ವ

೧೨೩೦ ಹಿರಿಯರ ನುಡಿಗಳನು ಹದುಳದಿಂದಾಲಿಸಿ,
ಅಂತೆ ನಡೆಯದಿರಲು ಅಲ್ಲ ಫಲವು,
ಕಂಡು ಹುಲಿಯ ನರಿಯು ಗಂಧ ಬಳಿದ ರೀತಿ, ವಿಶ್ವ

೧೨೩೧ ತಿಳಿಯದಿಷ್ಟ ಜನಕೆ ತಪ್ಪನೆಲ್ಲ ತಿಳಿಸಿ,
ಸರಿಯ ಹೇಳುತಿಹರು ಸಾಧು ಜನರು
ಒಪ್ಪದೆ ದುರ್ಜನರು ತಪ್ಪೆಂದೆಣಿಸುವರು, ವಿಶ್ವ

೧೨೩೨ ಸಾಧು ಜನರ ಸಂಗ ಸಾಕೆನಿಸದಿರಬೇಕು,
ಪ್ರಕೃತಿ ಬಿಡುವ ತನಕ ಫಲವು ಇಲ್ಲ,
ಬರಿದೆ ಹೀಚು ಕೊಯ್ಯೆ ಬೀಜವಿರಲಪ್ಪುದೆ? ವಿಶ್ವ

೧೨೩೩ ಉಸಿರು ಇರದ ತಿದಿಯ ಊದಲಲ್ಲದಷ್ಟು,
ಪಂಚ ಲೋಹವೆಲ್ಲ ಭಸ್ಮವಹವು
ಹಿರಿಯರುಸಿರಿಪ್ಪರು ಹಿರಿಯುರಿ ಹೊತ್ತಿಸರೆ? ವಿಶ್ವ

## ದುರ್ಜನ ಸಂಗ ತ್ಯಾಗ

ಮನುಷ್ಯನನ್ನು ಅವನ ಸಹವಾಸವೇ ತಿಳಿಸುತ್ತದೆ. ಕೆಲವರು ಪೂರ್ಣ ಕೆಡುವ ವರೆಗೂ ಕೆಟ್ಟ ಸಹವಾಸ ತೊರೆಯರು. ಅವರು ಧರ್ಮ, ನೀತಿ ಅರಿತು ತಮ್ಮನ್ನು ಸುಧಾರಿಸಿಕೊಳ್ಳುವುದಿಲ್ಲ. ಇವರು ಧರ್ಮ ಸಾಧ್ಯರಲ್ಲ; ದಂಡಸಾಧ್ಯರಷ್ಟೇ.

ಬಹಳ ಓದಿ, ಅಭ್ಯಾಸ ಮಾಡಿದರೇನು ಬಂತು? ತನ್ನ ಹೀನ ಗುಣ ತೊರೆಯದೆ ಘನತೆ ಪಡೆಯನು. ಕತ್ತೆ ಪರಿಮಳವನ್ನು ಹೊತ್ತ ರೀತಿಯಷ್ಟೇ.

ಮಾತಿನಲ್ಲಿ ಬೇರೆ, ಮನಸಿನಲ್ಲಿ ಬೇರೆ; ಮಠದಲ್ಲಿ ಬೇರೆ ಇರುವ ಒಡಕು ವೃತ್ತಿಯವನು ತನ್ನ ಚಿಂತೆಗಳಿಂದ ಮುಕ್ತಿ ಪಡೆಯನು. ಪೂರ್ಣತ್ವ ಸಾಧಿಸಿದ ಒಳ್ಳೇ ಜನರು ವಿರಳ. ಎಲ್ಲೆಡೆ ದುಷ್ಟರೇ ತುಂಬಿರುತ್ತಾರೆ. ಹೊನ್ನು ವಿರಳ; ಮಣ್ಣು ಮಾತ್ರ ವಿಫುಲ, ಕೀಳು ಮನುಜನಿಗೆ ಗುಣವು ಕೂಡಲೇ ಬಾರದು. ಹಾಲು ಸಕ್ಕರೆಯನ್ನು ಕೇರಿನಲ್ಲಿ ಹಾಕಿ ಕುದಿಸಿದರೆ ಅದಕ್ಕೆ ರುಚಿ ಬಂದೀತೇ?

ಕೇಡಿ ಮನುಷ್ಯನೊಂದಿಗೆ ಸೇರಿ ಕೆಲಸ ಮಾಡಕೂಡದು. ಹೆಂಡ ಮರದ ಕೆಳಗೆ ಹಾಲು ಕುಡಿದ ರೀತಿ, ಅಪವಾದಗಳು ತಪ್ಪವು.

ವೀರನಾದ ಬಂಟನು ಕೀಳು ಜನರನ್ನು ಸೇರಬಾರದು. ಒಂದು ವೇಳೆ ಹಾಗೆ ಸೇರಿದರೆ, ಅವನ ಬುದ್ಧಿ ಬದಲಾಗಿ ಕೋತಿಯಂತೆ ಚಂಚಲಮತಿಯಾಗುತ್ತಾನೆ. ಕೆಟ್ಟ ಜನರು ತಾವು ನೀಚ ಕಾರ್ಯ ಮಾಡುವುದಷ್ಟೇ ಅಲ್ಲ; ಅದನ್ನೇ ಒಳ್ಳೆಯ ಕಾರ್ಯವೆಂದು ಸಾಧಿಸಿ, ಸರಿ ಹೇಳುವವರನ್ನೇ ನಿಂದಿಸುತ್ತಾರೆ.

**೧೨೩೪ ದೂರ ದೃಷ್ಟಿ ಹೊಂದಿ ತೂಗಿ ಕಾಣರದನು,**
**ಪಾರುಪತ್ತೆಯರಿಯ ಪತನದನಕ,**
**ದಂಡ ಸಾಧ್ಯರರಿಯೆ, ಧರ್ಮ ಸಾಧ್ಯರಲ್ಲ, ವಿಶ್ವ**

**೧೨೩೫ ಉಪ್ಪು ಕಪ್ಪುರಗಳಿಗೊಂದೆ ಹೋಲಿಕೆಯಿದೆ,**
**ನೋಡೆ ನೋಡೆ ರುಚಿಯ ಮೂಲ ಬೇರೆ,**
**ಪುರುಷರೊಳಗೆ ಪುಣ್ಯ ಪುರುಷ ಬೇರೆ ಇಹರು, ವಿಶ್ವ**

**೧೨೩೬ ಮೂಢ ಮೆಚ್ಚುತಿಪ್ಪ ಮೂಢ ಮನುಜರನ್ನು,**
**ಮೂಢ ಮನಸಿನ ಪರಿ ಹಿತ ಲೋಭಿಗೆ,**
**ಹಂದಿ ಕೆಸರು ಮೆಚ್ಚಿತು ಪನ್ನೀರನು ಅಲ್ಲ, ವಿಶ್ವ**

**೧೨೩೭ ಹೀನರೆಷ್ಟು ವಿದ್ಯೆ ಹೊಂದಲಭ್ಯಸಿಸಲು,**
**ಘನರು ಅಲ್ಲ; ಹೀನ ಜನರು ಅಷ್ಟೆ**
**ಪರಿಮಳವನು ಕತ್ತೆ ಹೊತ್ತರೆಂತು ಘನವು? ವಿಶ್ವ**

**೧೨೩೮ ಮಾತಿನಲ್ಲಿ ಬೇರೆ, ಮನಸಿನಲ್ಲಿ ಬೇರೆ,**
**ಒಡಲು ಗುಣವು ಬೇರೆ, ಚಿಂತೆ ಬೇರೆ,**
**ಹೇಗೆ ಬಹುದು ಮುಕ್ತಿ? ಹೇಗೊ ತನ್ನ ರೀತಿ! ವಿಶ್ವ**

— — — — — — — — — — — — — — — — — — — — —

೧೨೩೯ ಇಲ್ಲ ಒಳ್ಳೆಯವರು ಇಳೆಯಲ್ಲಿ ಅರಸಲು,
ದುಷ್ಟರೆಷ್ಟೊ ಇಹರು ಧರಣಿಯಲ್ಲಿ,
ಹೊನ್ನು ಇಲ್ಲವಷ್ಟೆ, ಮಣ್ಣಿಗೇನು ಕೊರತೆ? ವಿಶ್ವ

೧೨೪೦ ಖಳರು ಬಯ್ದರೆಂದು ಕಳವಳ ಪಡಲೇಕೆ?
ಒರಟು ಬೈಗಳಿಂದ ಒಳಿತು ಕೆಡದು,
ಸಜ್ಜನರು ಬಯ್ಯಲು ತಾಪವುಂಟು ನೋಡು, ವಿಶ್ವ

೧೨೪೧ ತನ್ನ ಒಳಿತು ಕೋರಿ ಧರ್ಮ ಕರ್ಮ ತಿಳಿಸೆ,
ಮುನ್ನ ಜರಿದು ನುಡಿವ ದುರಿತ ಖಳನು.
ತಿನ್ನಲಿಡಲು ಗೂಳಿ ಕೊಂಬು ತಿವಿವ ಪರಿಯು ವಿಶ್ವ

೧೨೪೨ ಕ್ಷೀರ ಸಕ್ಕರೆಯನು ಕೇರು ಹಣ್ಣಿನಲ್ಲಿ,
ಹೆಚ್ಚು ಹಾಕಿ ಕುದಿಸೆ ರುಚಿಯೀವುದೆ?
ಕುಟಿಲ ಮನುಜನಲ್ಲಿ ಗುಣವು ಬರುವುದೆಂತು? ವಿಶ್ವ

೧೨೪೩ ಕಬ್ಬು ಸಿಹಿಯಿರದಿರೆ, ಕಡೆಗೆ ಒಗೆವರಷ್ಟೆ,
ಪರಮ ಗುಣಗಳಿರದ ಪಂಡಿತಂತೆ,
ದೂರು ಬಾರದಿಹವೆ, ದೋಷವಂಟಿ ಇರಲು? ವಿಶ್ವ

೧೨೪೪ ಸರಿಕರಲ್ಲದವರ ಸಂಗ ಸೇರೆ ಹೊಲ್ಲ;
ಜೊತೆಗೆ ಕೂಡಬೇಡ ಜಾಣ್ಮೆ ಗಾಣು,
ಕೂಡಿ ತಪ್ಪನೆಸಗೆ ಗುಣಗಳಲ್ಪವಹವು, ವಿಶ್ವ

೧೨೪೫ ತೊರೆಯಬೇಕೆಂಬನ ಜೊತೆಗೆ ಸೇರಲಾಗ,
ಬರಿದೆ ಬೀದಿ ಬೀದಿ ತಿರುಗುವವನು,
ಕಾರ್ಯ ಕರ್ಮವೆಲ್ಲ ಹಾಳು ಮಾತುತಿಪ್ಪ, ವಿಶ್ವ

೧೨೪೬ ಸಲ್ಲದವನ ಜೊತೆಗೆ ಸೇರಿ ಕೆಲಸ ಮಾಡೆ,
ಹಾನಿ ತಪ್ಪದಯ್ಯ ಯಾರಿಗೇನು?
ಹೆಂಡ ಮರದ ಕೆಳಗೆ ಹಾಲು ಕುಡಿದ ಚೆಂದ, ವಿಶ್ವ

೧೨೪೭ ಹೋಗಬೇಡ ನೀನು ಪಾಪಿ ಡಾಂಭಿಕನ ಬಳಿ,
ಮೋಸ ಗೆಯ್ವರಯ್ಯ ದೋಷವೆನದೆ;
ಕ್ರೂರ ಮೃಗದಂಥ ಕುಜನರ ನಂಬದಿರು, ವಿಶ್ವ

೧೨೪೮ ತನ್ನ ಒಡೆಯನೊಡನೆ, ಹರಿತಾಯುಧದೊಡನೆ,
ಉರಿವ ಬೆಂಕಿ, ಪರರ ನಾರಿಯೊಡನೆ,
ಗೇಲಿ ಮಾಡಲಾಗ ಕಾಲ ತೀರಿದಂತೆ, ವಿಶ್ವ

೧೨೪೯ ಕಾದಬಲ್ಲ ಯೋಧ ಕೀಳು ನರನ ಸೇರೆ,
ಬದಲುಗೊಂಡು ಬುದ್ಧಿ ಬರದು ಮರಳಿ,
ಮರ ಮರ ತಿರುಗುತಿಹ ಮಹಿಯ ಕೋತಿ ರೀತಿ, ವಿಶ್ವ

೧೨೫೦ ಸಾರ ವಿದ್ಯೆಯಲಿ ಸರಣಿ ತಿಳಿದುಕೊಳದೆ,
ದೂರುವವರ ಸೇರ್ವ ದುರ್ಜನಿಹನು,
ಪರವ ತಿಳಿಯದವನು ಭಾವಜ್ಞನೆಂತಾಗುವ? ವಿಶ್ವ

೧೨೫೧ ಪುರುಷರೆಷ್ಟೋ ರೀತಿ ಹುಟ್ಟುವರು ಮೊದಲಿಗೆ,
ಪಾಪ ಚಿಂತೆ ಮಾಡಿ, ಚಪಲರಾಗಿ,
ಮಹಿಯಲಿ ಕುಂಟ ನರಿ ಮಾಂಸ ತಿನ್ನುವಂತೆ ವಿಶ್ವ

೧೨೫೨ ಹೀನ ಮನುಜರೊಡನೆ ಸ್ನೇಹವಿರಿಸೆ ದೋಷ,
ಹಾನಿಯುಂಟು ಎಂಥ ಮೌನಿಯೇನು?
ಹೀನ ಸಂಗ ಬೇಡ ಕೆಟ್ಟು ಹೋಹೆ ನೋಡು, ವಿಶ್ವ

೧೨೫೩ ಜಟ್ಟಿ ಸಾಮು ಗೆಯ್ಯೆ ಜಗದಿ ಹೆಸರು ವಾಸಿ;
ದುಷ್ಟ ತಿಳಿವಿನಿಂದ ತೊಲಗಿ ತಿಳಿವು;
ಕಷ್ಟವೊಂದೆ ಹೊರತು, ಕಡೆಗಾಣಿಸದಲ್ಲ! ವಿಶ್ವ

೧೨೫೪ ಸ್ಥಿರತೆಯಿರದ ಕ್ಷುದ್ರ ಜೀವಿಗಳಲಿ ಸೇರಿ,
ಹೆಚ್ಚು ಕಡಿಮೆ ಎನುವ ಹೀನ ಮತಿಯು,
ಕತ್ತೆ ಮರಿಗಳಾಗಿ ಕೆಟ್ಟು ಹೋಹ ಪರಿಯು, ವಿಶ್ವ

**೧೨೫೫ ಬೇರು ಹುಳುವು ಹತ್ತಿ ವೃಕ್ಷ ಕೆಡಿಸುತಿಹುದು,**
**ಕೀಡೆ ಹುಳುವು ಹತ್ತಿ ಗಿಡವೆ ಹಾಳು,**
**ಕುತ್ಸಿತ ಜನರ ಸೇರಿ ಗುಣವಂತನೆ ಕೆಡುವ, ವಿಶ್ವ**

**೧೨೫೬ ಹೀನ ನರರ ಒಡನೆ, ಹೆಣ್ಣು ಮಕ್ಕಳೊಡನೆ,**
**ತರುಣಿ ಗುಂಪಿನೊಡನೆ, ದೊರೆಯ ಒಡನೆ,**
**ಪ್ರಾಜ್ಞ ಜನರ ಒಡನೆ ಪೇಳ ಬೇಡ ಮಾತು, ವಿಶ್ವ**

●

## ಸಜ್ಜನ ಸಂಗ

ಸಜ್ಜನರ ಸಂಗವು ಹೆಜ್ಜೇನು ಸವಿದಂತೆ. ಅದು ಎಷ್ಟಾದರೂ ಸರಿಯೇ. ಆದರೆ ಜನರೆಲ್ಲ ಸಜ್ಜನರೇನಲ್ಲ. ಉಪ್ಪು ಮತ್ತು ಕರ್ಪೂರಗಳು ನೋಡಲು ಒಂದೇ ಬಗೆಯಾಗಿ ಕಂಡರೂ, ಅವುಗಳ ಗುಣಗಳನ್ನು ಸಮೀಕ್ಷಿಸಿ ವೈವಿಧ್ಯವನ್ನು ಅರಿಯಬಹುದು. ಅದೇ ರೀತಿ, ಕುಜನರಿಂದ ಸುಜನರನ್ನು ಬೇರ್ಪಡಿಸಿ ಅರಿಯಬೇಕು. ಸಜ್ಜನನ ಮಾತು ಮಧುರ, ಕಾಡಿನಲ್ಲಿಯ ಕೋಗಿಲೆಯ ಇಂಚರದಂತೆ, ದುರ್ಜನನ ಮಾತು ಕರ್ಕಶ, ಕಾಡಿನ ಕಾಗೆಯ ನುಡಿಯಂತೆ.

ಸಜ್ಜನನು ಶಾಂತ ಸ್ವಭಾವಿಯು. ಸದ್ದುಗದ್ದಲವಿಲ್ಲದವನು. ದುರ್ಜನನ ಆಟಾಟೋಪ ಬಹಳ. ನಾಲೆಯ ನೀರು ಬಹಳ ಶಬ್ದ ಮಾಡುತ್ತದೆ. ಮಹಾಗಂಗೆ ಶಾಂತವಾಗಿ, ನಿಶ್ಶಬ್ದವಾಗಿ ಹರಿಯುತ್ತದೆ. ಮೆಣಸು ಮೇಲೆ ಕಪ್ಪಾಗಿದ್ದರೂ ಕಡಿದು ನೋಡಿದಾಗ ಖಾರವಿರುತ್ತದೆ. ಸಜ್ಜನನ ಒಳಿತು ಗುಣವು ಪ್ರಸಂಗ ಬಿದ್ದಾಗ ಅನುಭವಕ್ಕೆ ಬರುತ್ತದೆ.

ಜ್ಞಾನವಂತನನ್ನು ತನ್ನ ನೇತಾರನೆಂದು ತಿಳಿದು ಅನುಸರಿಸಬೇಕು. ಅವನಲ್ಲಿ ನಿಷ್ಠೆ ಹೊಂದಬೇಕು. ಜ್ಞಾನಿಯಿದ್ದರೆ, ಅದರಿಂದ ಲಾಭವಿಲ್ಲವೇನು ಮತ್ತೆ? ಗುಣವಂತನಿಗೆ ಜ್ಞಾನ ತಿಳಿಸಿದರೆ, ಅವನು ಅಧಿಕಾರದಿಂದ ಬೇಗ ಅರಿಯುತ್ತಾನೆ. ಗುಣವಿಹೀನನಿಗೆ ಎಷ್ಟು ಹೇಳಿದರೇನು?

ಸಜ್ಜನರ ಸಂಗವನ್ನು ಸದಾ ಮಾಡಬೇಕು. ಸಾಕೆನಿಸಬಾರದು. ಪಾಪ ನೀಗುವ ವರೆಗೂ ಸತ್ಸಂಗ ಬೇಕು. ಪಾಪಿಯೇ ಇದ್ದಲ್ಲಿ ಹೇಗೆ ಭಕ್ತಿ ನಿಂತೀತು?

**೧೨೫೭ ಉಪ್ಪು ಕಪ್ಪುರಗಳಿಗೆ ಒಂದೆ ಹೋಲಿಕೆಯಿದೆ,**
**ನೋಡೆ ನೋಡೆ, ರುಚಿಗಳ ಜಾಡು ಬೇರೆ,**
**ಪುರುಷರಲ್ಲಿ ಪುಣ್ಯ ಪುರುಷರು ಬೇರೆಯಷ್ಟ! ವಿಶ್ವ**

೧೨೫೮ ಕೋಗಿಲೆ ವನದಲ್ಲಿ 'ಕುಹೂ' ಹಾಡುವಂತೆ,
ನುರಿತ ಜನರ ಭಾವ ನಡೆಯು–ನುಡಿಯು,
ಕಾಗೆ ಕೂಗಿನಂತೆ ಕಲುಷಾತ್ಮನ ವಚನ, ವಿಶ್ವ

೧೨೫೯ ಗಂಗೆ ಹರಿಯುತಿಹುದು ಕದಲದ ತೆರದಲ್ಲಿ,
ರಾಡಿ ನಾಲೆ ನೀರಿಗುಂಟು ಶಬ್ದ,
ದಾನಿ ಸಹಿಸುವಂತೆ ಹೀನ ಸಹಿಸಲಾರ, ವಿಶ್ವ

೧೨೬೦ ಭೂಮಿಯಲ್ಲಿ ಪುಣ್ಯ ಪುರುಷರಿಲ್ಲದಿರಲು,
ಜಗವು ನಿಲುವುದೇಕೆ ದುಗುಡಗೊಳದೆ?
ದೊರಕಲಷ್ಟು ಗಡನೆ, ದೊಂಬರಾಟವೇನು, ವಿಶ್ವ

೧೨೬೧ ಪೂರ್ವ ವಾಸನೆಯಿಹ ಪುಣ್ಯಾತ್ಮನೈಸಿರಿ,
ಬುಗ್ಗೆ ಪುಟಿವ ರೀತಿ ಭೂರಿಡುವುದು!
ಎಷ್ಟು ಜನಕೆ ಕೊಡಲು ಎಂದಿನಂತಿರುವುದು, ವಿಶ್ವ

೧೨೬೨ ಜ್ಞಾತನಾದವನನು ನೇತೃವೆಂದು ತಿಳಿದು,
ನೀತಿಯರಿಯಬೇಕು ನಿಷ್ಠೆ ತಿಳಿದು,
ಜ್ಞಾನಿಯಿರಲು ಮತ್ತೆ ಲಾಭವೇನಿಲ್ಲವೆ? ವಿಶ್ವ

೧೨೬೩ ಪದಕದಲ್ಲಿ ಒಪ್ಪುತಿಪ್ಪ ರತ್ನ ಕೆಂಪು
ಕನಕ ಸೇರೆ ಮಿಗಿಲು ಕಾಂತಿಯಿಹುದು,
ಬೇರೆ ಲೋಹದೊಡನೆ ಬೆರೆಯೆ ಹೀನವಯ್ಯ, ವಿಶ್ವ

೧೨೬೪ ಮೆಣಸುಬೀಜ ನೋಡೆ ಮೇಲೆ ಕಪ್ಪು ಇಹುದು
ಕಡಿದು ನೋಡಲೊಳಗೆ ಕಡು ಚುರುಕದು
ಸಜ್ಜನಾಗಿರುವನ ಸಾರವಿಂತೆ ಉಂಟು. ವಿಶ್ವ

೧೨೬೫ ಕಸ್ತೂರಿಯನು ನೋಡೆ ಮೇಲೆ ಕಪ್ಪು ಇಹುದು,
ಸುತ್ತಲು ಘಮಘಮವದರ ಪರಿಮಳ,
ಗುರುತರವಾಗಿಹರ ಗುಣವು ಇಂಥ ರೀತಿ, ವಿಶ್ವ

೧೨೬೬ ಕಬ್ಬು ತೋಟದಲ್ಲಿ ಕಸದ ಹೊರೆಯು ಇರಲು,
ಕೊಂಚವಾದರದರ ಗುಣವು ಕೆಡದು,
ಅರಿತ ಜನರ ಜೊತೆಗೆ ಅರಿಯದವನಿಪ್ಪಂತೆ, ವಿಶ್ವ

೧೨೬೭ ಗುಣಿಗೆ ಜ್ಞಾನ ಮಹಿಮೆ ಕೊಂಚ ಹೇಳಿದರೂ,
ಗಿರಿಯೆ ಆಯ್ತು ಅವನ ಗುಣಗಳಿಂದ,
ಗುಣ ವಿಹೀನಗೆಂತು ಕುದುರುವುದಾ ರೀತಿ? ವಿಶ್ವ

೧೨೬೮ ಸಾಧು ಜನಗಳನ್ನು ಸ್ಥಿರವಾಗಿ ಪೂಜಿಸಿ,
ಕರುಣೆ ಹೊಂದಿದಾಗ ಸರಸವಾಯ್ತು,
ಅರಿವು ತಪ್ಪದೆ ನಿಲಿಸಿ ಸದ್ಗುರುವ ಕೂಡೆಲೊ, ವಿಶ್ವ

೧೨೬೯ ತಿಳಿಯದಿಪ್ಪ ಜನಕೆ ತಪ್ಪನೆಲ್ಲ ತಿಳಿಸಿ,
ಸರಿಯ ಹೇಳುತಿಹರು ಸಾಧು ಜನರು,
ಒದ್ದರೆ, ದುರ್ಜನರು ತಪ್ಪೆಂದೆಣಿಸುವರು, ವಿಶ್ವ

೧೨೭೦ ಮರವು ತಕ್ಕದಿರಲು ಮಹಾ ಹಿತದ ವಸ್ತು,
ಅದುವೆ ಮತ್ತೆ ಸರಿಯು ಅಲ್ಲದಿರಲು,
ದಹಿಸುತಿಹುದಲ್ಲವೆ? ದುಷ್ಕರ್ಮಿಗಳ ಪಾಡು! ವಿಶ್ವ

೧೨೭೧ ಶೀವಿ ಇಲ್ಲವೆಂದು ತಾವು ಮನದಿ ತಿಳಿದು,
ಜ್ಞಾನಿಯಾದಂಥ ಮನುಜರೆಲ್ಲ,
ಡಾಂಭಿಕರಿಗೆ ಮಣಿದು ಡೊಗ್ಗುತಿಹರು ಗಡನೆ, ವಿಶ್ವ

೧೨೭೨ ನೀಚ ಗುಣಗಳೆಲ್ಲ ನಿರ್ಮೂಲವಾಗುವವು,
ಗೊಡವೆಯಿಲ್ಲ ಸುಜನ ಗೋಷ್ಠಿಯಿಂದ,
ಗಂಧ ತೊಡೆಯೆ ದೇಹ ಕಂಪು ಅಡಗುವಂತೆ, ವಿಶ್ವ

೧೨೭೩ ಸಾಧು ಜನರನಂತೆ ಸಂತಾಪಗೊಳಿಸಲು,
ಕುಲ ವಿನಾಶ ಬಿಡದು ಕ್ರೂರ ಜನಕೆ,
ಸಾಧು ಜನರ ಪೂಜೆ ಸಾಯುಜ್ಯ ಕೊಡುವುದು, ವಿಶ್ವ

---

೧೨೭೪ ಕುಲದ ಒಳಗೆ ಓರ್ವ ಗುಣವಂತನಿರ್ದೊಡೆ,
ಕುಲವು ಶೋಭಿಸುವುದು ಗುಣಗಳಿಂದ,
ಕಾನನದಿ ಮೆರೆಯುವ ಗಂಧದ ಗಿಡದಂತೆ, ವಿಶ್ವ

೧೨೭೫ ಉರಗ ದಂತ ಪಂಕ್ತಿ ಭಯಂಕರವೆನಿಸದೆ?
ತಿಳಿಯೆ, ದುಷ್ಟ ಶಕ್ತಿ ಹುಟ್ಟಿಳಿಸಲು,
ದಂತ ಕೀಳೆ, ಕೆಡುಕು ಅಂಕೆ ಮೀರಲಳವೇ? ವಿಶ್ವ

೧೨೭೬ ಕತ್ತೆ ಹಾಲು ತಂದು, ಕಾಸಿ ಸಿಹಿ ಬೆರೆಸಲು,
ಭಕ್ಷ್ಯವೆಂತಪ್ಪುದು? ಅಂತ ಭ್ರಷ್ಟ–
ಗೆಷ್ಟು ಏನು ಹೇಳಿದರೂ ತಿಳಿಯಲಾರ ವಿಶ್ವ

೧೨೭೭ ಕೊಜ್ಜೆಯನೃತ ನುಡಿದ ನರಗೆ,
ಸಜ್ಜಾಗಿ ಬ್ರಹ್ಮವಿದ್ಯೆಯ ತಿಳಿಸುವುದೆಂತೋ?
ಮಜ್ಜಿಗೆ ಹಾಲಿನ ಕೂಡಿಕೆ,
ಮಜ್ಜಿಗೆಗೆ ಹೆಪ್ಪು ಹಾಕಿದ ಚೆಂದವು ವೇಮಾ

೧೨೭೮ ಕೆಡುಕರಲ್ಲಿ ಉಣಲು ಗುಣವಂತ ಕೆಡುವನು,
ಯಾರೆ ಇರಲಿ ಅವನ ಮೆಚ್ಚರಯ್ಯ,
ಕಾಷ್ಟ ಕಂಬಕೇನು ಕುದುರುವುದೆ ಜ್ಞಾನವು? ವಿಶ್ವ

●

## ಬಲದ ಅರಿವು

ಅರಸನ ಬಲವು ಆಡಳಿತ ವರ್ಗದ ಮತ್ತು ಪ್ರಜಾವರ್ಗದ ಒಗ್ಗಟ್ಟಿನಲ್ಲಿಯೇ ಅಡಗಿದೆ. ಒಡಕೇ ಸೋಲು, ಒಗ್ಗಟ್ಟೇ ಗೆಲುವು. ಚಿಕ್ಕ ಎಳೆಗಳನ್ನು ಹೆಣೆದು ಹಗ್ಗ ಮಾಡಿದರೆ, ಅದರ ಬಲವು ಅಷ್ಟಿಷ್ಟಲ್ಲ. ಹುಲ್ಲಿನ ಹಗ್ಗದಿಂದ ಆನೆಯನ್ನು ಕಟ್ಟಿ ಹಾಕಬಹುದು.

ಅರಸನು, ತನ್ನ ಬಲ, ತನ್ನ ಎದುರಾಳಿಯ ಬಲ ಹಾಗೂ ಇಬ್ಬಣಗಳ ಬೆಂಬಲಿಗರ ಬಲಗಳನ್ನು ಅಳೆದು ನೋಡಬೇಕು. ಇಲ್ಲದೆ, ಸುಮ್ಮನೆ ಧುಮ್ಮಿಕ್ಕಿದರೆ ಉರಿಯನ್ನು ಸುತ್ತಿ, ಸುಟ್ಟುಕೊಂಡ ಕರಡಿಯ ಗತಿಯಾಗುತ್ತದೆ. ಮೊದಲು ಸಾರಾಸಾರ ವಿಚಾರ ಮಾಡಬೇಕು. ಒಮ್ಮೆ ನಿರ್ಧರಿಸಿದ ಮೇಲೆ ಪರಬಲವನ್ನು ಕಂಡು ಓಡಿ ಹೋಗಬಾರದು; ಯಮನೇ ಕೋಪಗೊಂಡರೆ, ಎಲ್ಲಿ ಓಡಿ ಹೋದರೇನು?

ಭಟರನ್ನು ಆಯ್ಕೆ ಮಾಡುವಾಗಲೂ ಎಚ್ಚರ ವಹಿಸಬೇಕು. ಹೇಡಿಯನ್ನು ಹುರಿದುಂಬಿಸಿ, ರಣರಂಗಕ್ಕೆ ಕಳಿಸಿದರೆ, ಅವನು ಕಾದದೆ ಓಡಿ ಹೋಗುತ್ತಾನಷ್ಟೇ.

ತಾನು ಶಿಲೆಯಂತೆ ಗಟ್ಟಿಯಾಗಿರಬೇಕು. ಯಾವ ಗಡಿಗೆಯಿಂದ ಇಕ್ಕಿದರೂ, ಗಡಿಗೆ ಒಡೆದೀತೇ ಹೊರತು ಶಿಲೆಯು ಒಡೆಯದು, ಅದೇ ರೀತಿ ನಿರ್ಧಾರವು ದೃಢವಾಗಿರಬೇಕು.

೧೨೭೯ ಒಗ್ಗಟ್ಟದು ಮೊದಲು ಅತ್ಯವಶ್ಯವರಿಯೆ,
ಮುಗ್ಗರಿಸಲದಾಗ ವ್ಯರ್ಥವೆಲ್ಲ,
ಹಗ್ಗ ಗೈದ ಹುಲ್ಲು ಆನೆ ಕಟ್ಟದೇನು? ವಿಶ್ವ

೧೨೮೦ ಎದುರಾಳಿಯ ಬಲವು ಎಷ್ಟು ಎಂದೆಣಿಸದೆ,
ಎದುರಾಗುವ ಹಠದಿ ಎದುರಾಗಲು,
ಕರಡಿ ಉರಿಯ ಸುತ್ತಿ ಕುಣಿದು ಸುಟ್ಟ ರೀತಿ, ವಿಶ್ವ

೧೨೮೧ ಪರಬಲವ ನೋಡಿ, ಪ್ರಾಣ ರಕ್ಷೆಗೆಂದು,
ಹೊರಳಿ ಓಡುವವನು ಹೇಡಿ ನರನು,
ಯಮನು ಕುಪಿತನಿರಲು, ಎಡರು ಯಾವುದುಂಟು? ವಿಶ್ವ

೧೨೮೧ ಬಳಿಯಲಿಪ್ಪನನ್ನು ತಪ್ಪದ ದಕ್ಷನೆನ್ನು,
ದೂರವಿಹನ ದುಡುಕು ಹುಂಬನೆನ್ನು,
ಪಿಡಿದ ಕಾರ್ಯ ಮೊದಲು ಫಲಿಸುವ ಮಾರ್ಗ ಹಿಡಿ, ವಿಶ್ವ

೧೨೮೩ ವಿಜಯಿ ಪಾರ್ಥ ಬಿಲ್ಲು ಹಿಡಿದ ಕ್ಷಣವೆ ತಾನು,
ಕುಜನರೆಲ್ಲರನ್ನು ಕೆಡವಿ ನಿಂತ,
ಭಜನೆ ಮಾಡುವವನು ವಿಜಯ ಪಡೆಯನೇನು? ವಿಶ್ವ

೧೨೮೪ ಶಕ್ತಿಯುಳ್ಳ ಕಾರ್ಯ ಚೊಕ್ಕವಾಗಿ ಉಂಟು,
ಭಕ್ತಿಯುಳ್ಳ ಪೂಜೆ ಫಲವೀವುದು,
ಯುಕ್ತಿಯುಳ್ಳ ಮಾತು ಒಪ್ಪ ಭುವಿಯ ಮೇಲೆ, ವಿಶ್ವ

---

೧೨೮೫ ರೀತಿಯಿರದ ಕನ್ನೆಗಿತ್ತ ಶುಲ್ಕ ದಂಡ,
ಕಾದದ ಬಂಟನಿಗೆ ಕೂಳು ದಂಡ,
ಕೆಲಸಗೇಡಿ ದಾಸಿಗೀವ ಕಾಸು ದಂಡ, ವಿಶ್ವ

೧೨೮೬ ಒಡವೆ ಜೋಡಿಸದಿರೆ, ಒಡನೆ ಶೋಭೆ ಕೊಡದು,
ಹೊನ್ನು ಭೂಷಣೆಂದು ಜಗ ತಿಳಿದರು,
ಭಟರು ಬೆನ್ನಿಗಿರದೆ ಪ್ರಭುಗೆ ಶೋಭೆಯೆಂತು? ವಿಶ್ವ

೧೨೮೭ ಯೋದ ಬೊಗಳೆ ಹೊಲ್ಲ; ಯುದ್ಧ ಭೂಮಿಯಲ್ಲಿ.,
ಅಪದ್ಧ ನುಡಿವನೊಡನೆ ನಲುಮೆ ಹೊಲ್ಲ,
ಬೋಧಕಿಹನ ಜೊತೆಗೆ ವಾದ ಮಾಡೆ ಹೊಲ್ಲ, ವಿಶ್ವ

೧೨೮೮ ಹೇಡಿ ಹುರಿದುಂಬಿಸಿ ರಣ ರಂಗ ಕಳಿಸಲು,
ಓಡಿ ಹೋಗಿ ಕಾರ್ಯ ಭಂಗ ಗೈವ,
ಓಡಿ ಹೋಹ ಬಂಟ ಉಪಯೋಗಕೆ ಬಾರ, ವಿಶ್ವ

೧೨೮೯ ಗಡಿಗೆಯೊಡೆಯಲೊಡನೆ ಹೊಸದು ಬರುವುದಷ್ಟೆ,
ಪೊಡವಿಯೊಳಗೆ ಪಡೆಯ ಪೂರ್ವ ಸ್ಥಿತಿಯ,
ಅಡಿಗೆ ಬಿದ್ದ ತನುಜ ದಡವೆಟುಕಲು ಅರಿಯ, ವಿಶ್ವ

೧೨೯೦ ತಾವು ಬಲಯುತರಿರೆ ತಮಗೆ ತಾವೆ ಉಂಟು,
ಕೇಳಿದಾಗ ತಾವು ಕೀಳೆನಿಪರು,
ಎಂದೆ ಆಗಲೆನಲು, ಎಂದಿಗೂ ಆಗದು, ವಿಶ್ವ

೧೨೯೧ ಪೂರ್ಣವಾಗಿ ತನ್ನ ಭುಜ ಬಲವ ಕಾಣುತ,
ಭುವಿಯಲಿ ದುಷ್ಟ ಜೊತೆಗೆ ಬೇಡ ಜಗಳ,
ಹಾಳು ಗಡಿಗೆಗೆಸೆಯೆ ಸೀಳುವುದೆ ಆ ಶಿಲೆ? ವಿಶ್ವ

೧೨೯೨ ಬಂಡೆ ಮೇಲೆ ಇರುವ ಭಂಡ ಬಂಟನ ನೋಡು,
ಹಾವು ಕಡಿವುದೆಂಬು ಹಾರುತಿಹನು,
ಎರಗಿ ಹಾವು ಹರಿಯದು ಬಂಟನನ್ನು ಕಂಡು, ವಿಶ್ವ

---

**೧೨೯೩ ಭೂರಿಯಿಂದ ಕೊಯ್ಯೆ, ಸರಿಯೆ ಆಯ್ತು ನೋಡು;**
**ಅದರ ಹಿಡಿಯ ಕೊಯ್ಯೆ ಅಳವೆ ನಿನಗೆ?**
**ತಿಳಿವು ಇರದ ದೇಹ ಬಲವೇನು ಮಾಳ್ಪುದು? ವಿಶ್ವ**

●

## ಕಾಲ ಪರಿಜ್ಞಾನ

ಅನುಕೂಲಕರ ಸ್ಥಾನವನ್ನೂ ಮತ್ತು ಕಾಲವನ್ನೂ ನೋಡಿ ಎದುರಾಳಿಯನ್ನು ಎದುರಿಸಬೇಕು. ಒರತೆ ತೋಡಬೇಕಾದರೆ ನದಿಯ ತಳದಲ್ಲಿ ಅಂತರ್ಜಲವಿರುವಲ್ಲಿ ತೋಡಿದರೆ, ನೀರು ಬರುತ್ತದೆ. ಅದೇ, ಬಂಡೆಗಲ್ಲು ಇರುವಲ್ಲಿ ತೋಡಿದರೆ ಫಲವೇನು?

ಯಾವುದಕ್ಕೂ ಗಡಿಬಿಡಿಯು ಸಲ್ಲದು. ಕಸುಗಾಯಿ ಇರುವಾಗ ಕಹಿಯಾಗಿರುವ ಬುಡಮೆ ಕಾಯಿಯು, ಪಕ್ವವಾದಾಗ ಸಿಹಿಯಾಗುತ್ತದೆ. ಆದ್ದರಿಂದ ಪಕ್ವವಾಗುವ ವರೆಗೆ ಕಾಯಬೇಕು.

ಅನುಕೂಲ ಸ್ಥಾನವೂ ಅಷ್ಟೇ ಮಹತ್ವದ್ದು. ಸಿಂಹವೊಂದು ಪಂಜರದಲ್ಲಿ ಸಿಕ್ಕು ಬೀಳಲು, ಅದನ್ನು ಪಕ್ಕೆ ನಾಯಿ ಕೂಡ ಬಾಧಿಸುತ್ತದೆ.

ತನಗೆ ಸ್ಥಾನ ಮತ್ತು ಕಾಲಗಳು 'ಅನಾನುಕೂಲವಿದ್ದರೆ, ಆಗ ದೊಡ್ಡವನೆನಿಸಿಕೊಳ್ಳಲು ಮುಂದಾಗುವುದು ಲೇಸಲ್ಲ. ಕನ್ನಡಿಯಲ್ಲಿ ಆನೆಯು ಚಿಕ್ಕದಾಗಿ ಕಾಣುವುದು ತಾನೇ? ಅದರಿಂದ ಅದರ ಘನತೆಗೇನೂ ಕುಂದಿಲ್ಲ. ಮೊಸಳೆಯು ನೀರಿನಲ್ಲಿ ಆನೆಯಂಥ ಬೃಹತ್ ಪ್ರಾಣಿಯನ್ನೇ ಹಿಡಿಯುತ್ತದೆ. ಆದರೆ ನೀರಿನ ಹೊರಗೆ ನಾಯಿಯೊಂದು ಅದನ್ನು ಪೀಡಿಸುತ್ತದೆ. ಆದ್ದರಿಂದ ಅನುಕೂಲ ಸ್ಥಾನ ಮತ್ತು ಕಾಲಗಳೇ ಬಲಕ್ಕೆ ಪುಷ್ಟಿ ನೀಡುತ್ತವೆ.

**೧೨೯೪ ಬಂಡೆ ಮೇಲೆ ಒರತೆ ಪರಿಕಿಸಿ ತೋಡಲು,**
**ಕಷ್ಟ ಪಡುವುದಷ್ಟೆ, ಕಾಣನಾಶೆ,**
**ಕೆರೆಯ ಬಳಿಯ ಒರತೆ ಕುಲವನುದ್ಧರಿಪುದು, ವಿಶ್ವ**

**೧೨೯೫ ಮಾಡುವಂಥ ವೇಳೆ, ಮಾಡುವ ಕಾರ್ಯಗಳ,**
**ವೇಗದಿಂದ ಗೆಯ್ಯೆ, ವಿಷಮನೋಡು,**
**ಬುಡಮೆ ಕಾಯಿ ಕಹಿಯು, ಹಣ್ಣಾಗಲು ಸಿಹಿಯು, ವಿಶ್ವ**

---

೧೨೯೬ ಸಿಕ್ಕಿ ಬಿದ್ದ ವೇಳೆ ಸಿಂಹವಾದರೇನು?
ಪಕ್ಕೆ ನಾಯಿ ಕೂಡ ಬಾಧಿಸುವುದು,
ಬಲವಿರದ ಕಾಲದಿ ಪಂಥವೆಲ್ಲ ಹೊಲ್ಲ, ವಿಶ್ವ

೧೨೯೭ ಸಾಲವಿರುವ ವೇಳೆ, ಅರಸಿ ಬಂಧು ನೋಡು;
ಭಯದ ವೇಳೆ ನೋಡು, ಬಂಟ ಗುಣವ;
ಬಡವನಾದ ಬಳಿಕ,, ಮಡದಿ ಮತಿಯ ನೋಡು; ವಿಶ್ವ

೧೨೯೮ ವಾರಿ ಸುರಿಯದಿರಲು ಒಡನೆ ಬಂತು ಕ್ಷಾಮ;
ವಾರಿ ಸುರಿಯುತಿರಲು ಪರಮ ಕ್ಷೇಮ,
ಕ್ಷೇಮ ಕ್ಷಾಮವೆರಡು ಸರತಿಯಿಂ ಬಪ್ಪವು, ವಿಶ್ವ

೧೨೯೯ ಅಲಗಿನಿಂದ ಕೊಯ್ಯೆ ಅಹುದು ಒಪ್ಪವಾಯ್ತು,
ಅದರ ಹಿಡಿಯ ಕೊಯ್ಯೆ ಅಳವೆ ನಿನಗೆ?
ಬುದ್ಧಿಯಿಲ್ಲದನಕ ಬಲ ತನಗಿರಲೇನು? ವಿಶ್ವ

೧೩೦೦ ತಾವು ಇರುವ ಊರು ತೀರ ಬರ ಬೀಳಲು,
ಊರು ತೊರೆದು ಹೋಗರೆ ಬೇರೆ ಕಡೆಗೆ?
ಕೆರೆಯು ಬತ್ತಿದೊಡನೆ ಕೊಕ್ಕರೆಗಳುಳಿವವೆ? ವಿಶ್ವ

೧೩೦೧ ದೆಶೆಯು ಇರುವರೆಲ್ಲ ತಮ್ಮ ಬಂಧುವೆಂದ್ರು;
ದೆಶೆಯು ಇಲ್ಲದೆಂತು ತನಗೆ ಸಮರು?
ದೆಶೆಯೆನ್ನಲು ಧನದ ದೆಶೆಯೊಂದೇ ಒಪ್ಪ ವಿಶ್ವ

೧೩೦೨ ತಾಮಸದಿಂದ ಮಾಡೆ ತಕ್ಕದಿರದ ಕಾರ್ಯ,
ವೇಗದಿಂದ ಗೆಯ್ಯೆ ವಿಷವೆ ಆಯ್ತು;
ಹೀಚು ಗಾಯಿ ಕೊಯ್ಯೆ ಹಣ್ಣು ಆಗಬಹುದೆ? ವಿಶ್ವ

೧೩೦೩ ತಂತಾನೆ ಹಣ್ಣಾದ ತರುವಿನಲ್ಲಿ, ಕಾಯ
ಹರಿದು ತಿನಲು, ಬೇಗ ಹಣ್ಣಾಗುವುದೆ?
ಕೊರಡಿನಿಂದ ಹೊಡೆಯೆ ಕಸಿಯು ಹೋಗಬಹುದೆ? ವಿಶ್ವ

೧೩೦೪ ಸಮುದ್ರವ ನೋಡಲು ಸರಿ ಯಾವುದು ಇಲ್ಲ.
ಇಂಥ ಜಲಧಿ ನೀರು ಇಷ್ಟವಲ್ಲ.
ಇಷ್ಟವಿರದ ನೀರು ಏನು ಮಾಡಬೇಕು? ವಿಶ್ವ

೧೩೦೫ ಅಲ್ಪ ಬುದ್ಧಿಯವಗೆ ಅಧಿಕಾರವಿತ್ತೊಡೆ,
ದೊಡ್ಡ ಜನರನೆಲ್ಲ ದೂಡಿ ಬಿಡುವ.
ಕೆರಹ ಕಡಿವ ಸೊಣಗ ಕಬ್ಬು ಸಿಹಿಯರಿಯದು ವಿಶ್ವ

೧೩೦೬ ಹೊತ್ತು ಗೊತ್ತು ಇರದೆ, ಮಾತು ಮೊದಲು ಇತ್ತು,
ಆಗ ಈಗ ಎನುತ ಆಶೆ ನೀಡಿ,
ವೇಳೆ ಹೇಳಿ ಮತ್ತೆ ನಾಳೆ ನಾಳೆ ಎನುವ ವಿಶ್ವ

೧೩೦೭ ಬಾಲಕನಾಗಿ ಇರುವಾಗ,
ಸಾಲದಿರೆ, ಯೌವನದಲ್ಲಿ ಸಂಪದ ರೂಪಂ
ಮೇಳವಿಸಿ, ಮುದಿವಯದೊಳಾ
ವೇಳೆಗೆ, ದಡ ತೋರ್ಪ ಶಿವನ ಹುಡುಕೆಲೊ, ವೇಮಾ

೧೩೦೮ ಅನನುಕೂಲ ತಾಣ ಅಧಿಕನೆನಿಸೆ ಹೊಲ್ಲ;
ಕೊಂಚವಿಪ್ಪುದೆಲ್ಲ ಕೊರತೆಯಲ್ಲ.
ಗಿರಿಯು ಕನ್ನಡಿಯೊಳು ಕಿರಿದಾಗಿ ಕಾಣದೆ? ವಿಶ್ವ

●

## ಸ್ಥಲ ಪರಿಜ್ಞಾನ

ಕಾರ್ಯದಲ್ಲಿ ಯಶಸ್ಸು ಪಡೆಯಬೇಕಾದರೆ ಕಾರ್ಯ ಕೌಶಲವು ಅಗತ್ಯವಿರುವಂತೆ ಕಾಲ ಪರಿಜ್ಞಾನ ಮತ್ತು ಸ್ಥಲ ಪರಿಜ್ಞಾನಗಳೂ ಅಗತ್ಯ. ನಾವೆಯು ನೀರಿನಲ್ಲಿ ಚೆನ್ನಾಗಿ ನಡೆಯುತ್ತಿದೆ. ಆದರೆ, ಅದೇ ನಾವೆಯು ನೆಲದ ಮೇಲೆ ಮೂರು ಮಾರು ಕೂಡ ಚಲಿಸದು. ಸ್ಥಾನ ಬಲವೇ ಬಲವೆನಿಸುತ್ತದೆ. ನಾವೆಯ ಶಕ್ತಿಯನ್ನು ನೀರಿನಲ್ಲಿ ನೋಡಬಹುದಾದರೆ ಬಂಟನ ಶಕ್ತಿಯನ್ನು ಬಯಲಿನಲ್ಲಿ ಕಾಣಬಹುದು.

ತಾವಿರುವ ಕಡೆಗೆ ಸುಭಿಕ್ಷವಿಲ್ಲದೆ ಹೋದರೆ, ಅಡವಿಯ ಮೃಗಗಳೂ ಸಹ ಸುಭಿಕ್ಷವಿರುವ ತಾಣವನ್ನು ಹುಡುಕಿಕೊಂಡು ಹೋಗುತ್ತವೆ. ಅಂದ ಮೇಲೆ ಮಾನವರಿಗೆ ಇದನ್ನು ತಿಳಿಸಿಹೇಳಬೇಕೇ?

ಸರಿಯಾದ ಕಾರ್ಯವನ್ನು ಸರಿಯಾದ ತಾಣದಲ್ಲಿಯೇ ಮಾಡಬೇಕು. ಹಾಲನ್ನೇ ಕುಡಿದರೂ ಈಡಿಗರ ಮನೆಯಲ್ಲಿ ಕುಡಿಯಬಾರದು. ಜನರು ಆಡಿಕೊಳ್ಳುತ್ತಾರಲ್ಲವೇ?

ಮೊಸಳೆ ನೀರಿನಲ್ಲಿ ಆನೆಯನ್ನು ಹಿಡಿಯುತ್ತದೆ. ಹೊರಗೆ ಕ್ಷುದ್ರ ನಾಯಿಯೊಂದು ಅದನ್ನು ಪೀಡಿಸುತ್ತದೆ. ಅದೇ ರೀತಿ ನೀರಿನಲ್ಲಿ ಮೀನಿಗೆ ನನ್ನಿಯ ಚಿನ್ನಾಟ; ನೀರಿನ ಸಂಗ ತಪ್ಪಿದರೆ, ನೆಲದಲ್ಲಿ ಬರೀ ಪೀಕಲಾಟ.

ನೀರಿನಲ್ಲಿರುವಾಗ ಕಮಲಕ್ಕೆ ರವಿಯು ಮಿತ್ರನಂತೆ. ಆದರೆ ನೀರಿನಲ್ಲಿಲ್ಲದಿದ್ದರೆ, ಅದೇಕಮಲವು ರವಿ ರಶ್ಮಿಯಿಂದ ಬಾಡಿ ಕಮರುತ್ತದೆ. ಆದ್ದರಿಂದ ತಮ್ಮ ತಮ್ಮ ನೆಲೆಯು ತಪ್ಪದಂತಿರಬೇಕು.

**೧೩೦೯ ನೀರಿನೊಳಗೆ ನಾವೆ ನೀಟ ನಡೆಯುತಿಹುದು**
**ಬಯಲಲಿ ಮಾರೆ ಇರಲಿ, ಬರದು ಸಾಗಿ**
**ನೆಲೆಯು ತಪ್ಪಿದ ತಾಣ, ನಿಪುಣತೆ ನಿರುಪಯೋಗಿ ವಿಶ್ವ**

**೧೩೧೦ ನೀರ ಮೇಲೆ ನೋಡು ನಾವೆ ಬಲ್ಮೆಯನ್ನು**
**ಬಯಲಿನೊಳಗೆ ನೋಡು ಬಂಟ ಬಲ್ಮೆ**
**ನಾರಿ ಬಲ್ಮೆಯನ್ನು ನೋಡಲೆಲ್ಲಿಯೇನು? ವಿಶ್ವ**

**೧೩೧೧ ತಾನರಸಿ, ಸುಭಿಕ್ಷವಿರುವ**
**ಆ ನಾಡಿಗೆ ಹೋಗುತಿಹವು ಅಡವಿ ಮೃಗಂಗಳ್**
**ತಾನಿಪ್ಪೆಡೆ ಬೇಜಾರಿಕೆ;**
**ಮಾನವರಿಗೇನು ಹೇಳ್ವುದು, ಮಹಿಯಲಿ ವೇಮಾ**

**೧೩೧೨ ಹಾಲು ಈಡಿಗರಿಹ ಮನೆಯೊಳು ಕುಡಿದೊಡನೆ,**
**ಹಾಲು ಮದ್ಯವೆನುವರೆಲ್ಲ ಜನರು,**
**ನಿಲ್ಲ ಬಾರದೆಡೆಗೆ ನಿಲಲು ನಿಂದೆ ಬಹವು**

**೧೩೧೩ ನೀರೊಳಿದ್ದು ಮೊಸಳೆ ಆನೆ ಹಿಡಿಯುತಿಹುದು,**
**ಹೊರಗೆ ಶ್ವಾನವದನೆ ಕಾಡುತಿಹುದು,**
**ಬರಿ ಸ್ಥಾನ ಬಲ ಸ್ವಂತ ಬಲವದಲ್ಲ; ವಿಶ್ವ**

೧೩೧೪ ಉದಕದಲ್ಲಿ ಮೊಸಳೆ ಉಬ್ಬಿ ಆನೆ ಹಿಡಿವುದು;
ಮಾಯೆ! ಬಯಲೊಳಿಲ್ಲ ಮಾತ್ರ ಚಲನೆ
ಅರಿವು ಮರೆವು ತಿಳಿದು ಏಕವಾಗಿರುವಂತೆ ವಿಶ್ವ

೧೩೧೫ ಮೀನು ನೀರೊಳಿರಲು ನನ್ನಿಯ ಚಿನ್ನಾಟ!
ನೀರ ಹೊರಗೆ ಬರಲು ಒಡನೆ ಮರಣ
ಸಂಗ ತೊಲಗೆ ಸಕಲ ಜನರ ಗತಿಯೆ ಇಂತು ವಿಶ್ವ

೧೩೧೬ ತಾನು ವಾಸಿಸುತಿಹ ತಾಣ ತೊಂದರೆಯಿರೆ,
ಸೌಖ್ಯವಿಪ್ಪ ಎಡೆಗೆ ವಾಸ ಹೋಗು
ಕೊಳವು ಬತ್ತಲಾಗ, ಉಳಿವವೇ ಬಕಗಳು? ವಿಶ್ವ

೧೩೧೭ ತನಗಾವ ನಾಡು ಸುಭಿಕ್ಷವೋ,
ತನಗಾವ ಕಾಲ ಸೌಖ್ಯ ಕುದುರುವುದಾಗಳ್,
ತನಗಿರೆ ಧನ ದೆಶೆ ಎಲ್ಲೆಡೆ,
ಮನದಲಿ ಕಿರಿಕಿರಿಗೊಳ್ಳುವ; ಮನುಜನು ವೇಮಾ.

೧೩೧೮ ತಾಮಸಿರುವ ತಾಣ ತಂಗಲರ್ಹವಲ್ಲ;
ಸೌಖ್ಯಭೂಮಿಗಾಗ ಸರಿಯಬೇಕು.
ಕೆರೆಯು ಬತ್ತಿದಾಗ ಕೊಕ್ಕರೆಗಳುಳಿವವೆ? ವಿಶ್ವ

೧೩೧೯ ನೆಲೆಯು ತಪ್ಪಿದ ವೇಳೆ, ನಲುಮೆಯೆಲ್ಲ ತಪ್ಪಿ,
ಕಾಲವೊಂದು ರೀತಿ ಕಳೆಯಬೇಕು.
ವಿಜಯದನುವು ತಪ್ಪಿ ವಿರಾಟನ ಸ್ತುತಿಸನೆ? ವಿಶ್ವ

೧೩೨೦ ತೊರೆಯಬೇಕು ಊರ ವಿರಾಮವಿರದಾಗ;
ತೊರೆಯಬೇಕು ನಾರಿ ನಡೆತೆಯರಿತು.
ತೊರೆಯಬೇಕು ದೊರೆಯ ಉದಾರನಿರದಾಗ. ವಿಶ್ವ

●

## ಬಂಧುಗಳ ಆದರ

ಬಂಧುಗಳ ಆದರ–ಸತ್ಕಾರವು ತನ್ನ ಪುಣ್ಯದ ಫಲವೇ ಸರಿ. ಆದರೆ ಸಿರಿ ಸಂಪದಗಳ ಮಾಯೆಗೆ ಸಿಲುಕಿ ಜೀವಿಯು ತನ್ನ ಬಂಧು ಬಾಂಧವರನ್ನೇ ಮರೆಯುವ

ಇಲ್ಲವೆ ತೊರೆಯುವ ಪ್ರಸಂಗವಿಲ್ಲದೆ ಇಲ್ಲ. ಸಮುದ್ರದಲ್ಲಿ ಲಭ್ಯಳಾದ ಲಕ್ಷ್ಮಿಯ ಮಾಯೆಗೆ ಬಲಿಯಾದ ಶಾರ್ಙ್ಗರವನು ತನ್ನ ಬಾಂಧವರನ್ನು ತೊರೆದನಲ್ಲವೇ?

ಬಂಧು ಬಾಂಧವರಲ್ಲಿ ನೀತಿಯಿಂದ ನಡೆದುಕೊಳ್ಳಬೇಕು. ನೀತಿ ತಪ್ಪದೆ ನಡೆದುಕೊಂಡರೆ ಅವನ ಐಸಿರಿಯು ಕೊಟ್ಟಷ್ಟು ಹೆಚ್ಚುತ್ತದೆ.

ತಾಯಿ ಇರುವಾಗ ಮಗುವನ್ನು ಚೆನ್ನಾಗಿ ಪೋಷಿಸುವಳು. ಅವಳು ಸತ್ತು ಹೋದರೆ ಪೊರೆಯುವವರಾರು? ಕಾರಣ ಅನುಕೂಲವಿರುವ ಕಾಲದಲ್ಲಿಯೇ ಸತ್ಕೀರ್ತಿಯನ್ನು ಅರ್ಜಿಸಬೇಕು. ಗುರು ಹಿರಿಯರ, ಶಾಸ್ತ್ರಗಳ ಶುದ್ಧ ಜ್ಞಾನವಿರುವವನಿಗೆ ತಂದೆಯ ರಕ್ಷಣೆಯು ಎಂದಿಗೂ ತಪ್ಪದು.

೧೩೨೧ ಬಂಧು ಕೋಟಿ ತೊರೆದು ಬಯಲನೇ ತಿಳಿಯದೆ,
ಸಿಂಧು ಪುತ್ರಿ ಮಾಯೆಗೆ ಸಿಕ್ಕನಲ್ವೆ?
ಶಾರ್ಙ್ಗಪಾಡೆ ಇಂತು; ಜನರಿಗೆ ಶಕ್ಯವೇನು? ವಿಶ್ವ

೧೩೨೨ ಭಾವ ಬಂಧು ಸಂಬಂಧಿ ಮರ್ಯಾದೆಗಳೊಳು
ನೀತಿ ತಪ್ಪಿದಾಗ ತಾಪಕೇಡು,
ಬಿಡದೆಂದು ಬಪ್ಪುದು ತಪ್ಪದಯ್ಯ ನೋವು ವಿಶ್ವ

೧೩೨೩ ಪೂರ್ವ ವಾಸನೆಯಿಹ ಪುಣ್ಯಾತ್ಮನೈಸಿರಿ,
ಬುಗ್ಗೆ ಪುಟಿವ ರೀತಿ ಭೂರಿಡುವುದು,
ಎಷ್ಟೋ ಜನಕೆ ಕೊಡಲು ಎಂದಿನಂತಿರುವುದು ವಿಶ್ವ

೧೩೨೪ ಮಾತೆ ಬದುಕಿರಲ್ಕೆ ಮಗನ ಪೋಷಿಸುವಳು;
ಹೋಗಲವಳು ಸತ್ತು ಪೊರೆವರಾರು?
ಸತ್ಕಾಲ ಒದಗಲು ಸತ್ಕೀರ್ತಿಯರ್ಜಿಸು ವಿಶ್ವ

೧೩೨೫ ಕೊಡೆಯು ತಾನೀವುದು ಕಡು ಸುಖಕರ ನೆರಳು;
ಶಾಸ್ತ್ರವರಿಯೆ ತನಗೆ ಶುದ್ಧ ಜ್ಞಾನ,
ಇಪ್ಪವಂಗೆ ತಂದೆ, ತಪ್ಪದೆಂದು ರಕ್ಷೆ. ವಿಶ್ವ

೧೩೨೬ ಆಪತ್ತಿರುವಾಗ ನೋಡು; ಬಂಧು ಭಾವ;
ಭಯದ ವೇಳೆ ನೋಡು; ಬಂಟ ಗುಣವ,
ಬಡತನ ಬಂದಾಗ ಮಡದಿಯ ಗತಿ ನೋಡು, ವಿಶ್ವ

## ನ್ಯಾಯಾಡಳಿತ

ರಾಜನು ದೇಶವನ್ನೆಲ್ಲ ಕಾಪಾಡುವನು. ನೀತಿ ಧರ್ಮವು ಕೆಡದಂತೆ ಆಡಳಿತ ನಡೆಸುವವನಾದರೆ ಅರಸನನ್ನು ಆ ಧರ್ಮವೇ ಕಾಪಾಡುವುದು. 'ಧರ್ಮೋ ರಕ್ಷತಿ ರಕ್ಷಿತಃ'. ಎನ್ನುವ ನಾಣ್ಣುಡಿಯೂ ಇದೆ.

ಆದರೆ ಇದು ಕಲಿಯುಗ. ಎಲ್ಲೆಡೆ ಪಾಪವೇ ತುಂಬಿದೆ. ಘನತೆಗೆ ನೀಚತನವೆಂದೂ, ನೀಚತನಕ್ಕೆ ಘನತೆಯೆಂದೂ ಅಪಾರ್ಥ ಕಲ್ಪಿಸಿರುವ ಕಾಲವಿದು. ಈ ಕಾಲದಲ್ಲಿ ಜನರಲ್ಲಿ ಶ್ರದ್ಧಾ ಭಕ್ತಿಗಳಿರವು.

ನ್ಯಾಯ ಯಾವುದು? ಅನ್ಯಾಯ ಯಾವುದು? ಇದರ ತೀರ್ಪು ಧರ್ಮದರ್ಶನ ಮೇರೆಗೆ ಆಗಬೇಕು. ಹಾಗೆ ಮಾಡದಿದ್ದರೆ, ಪಾಪವನ್ನು ಸೋಸಬೇಕಾಗುತ್ತದೆ. ಧರ್ಮ ವಚನವನ್ನೇ ನುಡಿದರೆ ದೈವವು ನೆರವಾಗುತ್ತದೆ.

ಆದರೆ ಈಗ ಎಲ್ಲವೂ ತಿರುವು ಮುರುವಾಗಿದೆ. ನ್ಯಾಯ ಶಾಸ್ತ್ರವು ಅನ್ಯಾಯವನ್ನು ನುಡಿಯುತ್ತಿದೆ. ಧರ್ಮ ಸೂತ್ರಗಳು ಕಪಟಿಗಳ ಕೈಯಲ್ಲಿ ಮಾರ್ಪಟ್ಟು ದುರ್ಮತವನ್ನು ಬೋಧಿಸುತ್ತದೆ. ಇನ್ನು ಕರ್ಮ ಸಿದ್ಧಾಂತವನ್ನು ಸರಿಯಾಗಿ ವಿವರಿಸಬೇಕಾದ ಜ್ಯೋತಿಷಿಯು ಜನರನ್ನು ಹಣೆ ಜಜ್ಜಿಕೊಳ್ಳುವಂತೆ ಮಾಡಿ ಅವರ ನೀತಿಯನ್ನೇ ಕೆಡಿಸಿದ್ದಾರೆ.

**೧೩೨೭ ಕಲಿಯುಗ ಕಾಲದೊಳು ಘನತೆಗೆ ನೀಚತನ.**
**ಘನತೆ ನೀಚತನಕೆ ಕೊಟ್ಟ ಹೆಸರು.**
**ಶ್ರದ್ಧೆ ಭಕ್ತಿಯಳಿದು ಜನತೆ ಇಹುದಲ್ಲವೇ? ವಿಶ್ವ**

**೧೩೨೮ ನ್ಯಾಯ ತೀರ್ಪು ನೀಡುವಾಗ ಧರ್ಮ ತೊರೆಯೆ,**
**ಹೇಯನವನು; ಪಾಪ ಸೋಸಬೇಕು,**
**ಧರ್ಮ ವಚನ ನುಡಿಯೆ, ದೈವವವಗೆ ನೆರವು. ವಿಶ್ವ**

**೧೩೨೯ ನ್ಯಾಯ ಶಾಸ್ತ್ರ ಮತ್ತನ್ಯಾಯ ಗೈಯ್ಯುತಿಹುದು,**
**ಧರ್ಮಶಾಸ್ತ್ರ ದುರ್ಮತವ ನುಡಿವುದು,**
**ಜ್ಯೋತಿಷಿ ನುಡಿ ಜನರ ನೀತಿ ಕೆಡಿಸುತಿಹುದು, ವಿಶ್ವ**

●

## ಕ್ರೂರಾಡಳಿತ

ಅರಸನು ಧರ್ಮವಲ್ಲದ ಕಾರ್ಯಗಳನ್ನು ಮಾಡಕೂಡದು. ಬಹಳ ಜನರನ್ನು ಇರಿದು, ಬಡವರನ್ನು ಕೊಂದು, ಇದ್ದುಳ್ಳವರನ್ನು ಕೊಳ್ಳೆಹೊಡೆದು, ಹೊಟ್ಟೆ

ಹೊರೆಯುವಂಥವರನ್ನು ಯಮನು ಸಾಯಿಸದೆ ಬಿಡನು. ಅನೇಕ ಜನರು ಕ್ರೌರ್ಯದಲ್ಲಿ ಮೃಗಗಳಿಗಿಂತ ಹೆಚ್ಚಾಗಿರುತ್ತಾರೆ. ಮೃಗಗಳಿಗೆ ಒಂದೊಂದು ಒಳ್ಳೆಯ ಗುಣವಾದರೂ ಇರುತ್ತದೆ. ನಾಯಿಗೆ ನಂಬಿಗಸ್ಥತೆ ಇರುವಂತೆ. ಆದರೆ ಕ್ರೂರ ಮನುಷ್ಯನಿಗೆ ಯಾವ ಗುಣವೂ ಇರದು. ನೀಚ ಕಾರ್ಯ ಮಾಡುತ್ತ ಸಾಗಿದರೆ, ಅವನಿಗೆ ಪಾಪಭೀರುತ್ವವೇ ಅಳಿದು ಅವನು ಪಾಪಕೂಪದಲ್ಲಿ ಬೀಳುತ್ತಾನೆ.

ಬೇರೆಯವರನ್ನು ಮೋಸಗೊಳಿಸಿ, ಪರಧನವನ್ನು ಅರ್ಜಿಸಿದರೆ, ಹೊಟ್ಟೆ ಹೊರೆಯಬಹುದಷ್ಟೇ, ಆದರೆ ಪುಣ್ಯದ ಲೆಕ್ಕವಿಲ್ಲ ಅದು ಕೇವಲ ಸಾಲ ಮಾಡಿದಂತೆ. ಸಾಲ ಮಾಡಿದವನು ವೃದ್ಧಿಗೊಳ್ಳಬಹುದೇ?

ಕ್ರೂರ ಆಡಳಿತದಲ್ಲಿ, ಕಾಲುವೆಗಳಿಗೆ ಅಡ್ಡಗೋಡೆ ಕಟ್ಟಿ ನೀರನ್ನು ತಮ್ಮ ಜಮೀನಿಗೆ ಹೊರಳಿಸಿಕೊಳ್ಳುವ, ಸ್ಮಶಾನ ಭೂಮಿಯಂಥ ಸರ್ವೋಪಯೋಗಿ ಭೂಮಿಯನ್ನು ಉಳುವ, ನಡೆದಾಡುವ ಹಾದಿಗೆ ಮುಳ್ಳು ಚೆಲ್ಲುವ ಹಾಗೂ ಬೆಳೆದ ಪೈರನ್ನು ಕಡಿದೊಯ್ಯುವ ಪಾಪಿಗಳು ಇರುವರಲ್ಲವೇ? ಇಂಥ ಕ್ರೂರರು ಧನದ ಮದದಿಂದ ಕೊಬ್ಬಿ, ಕುಟಿಲ ಭಾವ ಹೊಂದುತ್ತಾರೆ. ಅವರಿಗೆ ಮದವೇರಿ, ಪ್ರಮತ್ತರಾಗಿ ನಡೆದು, ತಮಗಿರುವ ಮನ್ನಣೆಯನ್ನೇ ಕಳೆದುಕೊಳ್ಳುತ್ತಾರೆ. ಇವರು ಮದೋನ್ಮತ್ತರಾಗಿ, ಬಡಿಸಿದ ಊಟವನ್ನೇ ಬೀಸಾಡಿ ಒಗೆಯುತ್ತಾರೆ. ಕೊನೆಗೆ ಕೂಳಿಲ್ಲದ ಗತಿ ಇವರದಾಗುತ್ತದೆ. ಕೂಳಿಲ್ಲದೆ ಸತ್ತೂ ಹೋಗುತ್ತಾರೆ. ಯಾರಿಗೋ ದಕ್ಕಬೇಕಾದುದನ್ನು ಮತ್ತಾರೋ ದೋಚುತ್ತಾರೆ. ದೊಡ್ಡ ಮೀನಿಗೆ ಸಣ್ಣ ಮೀನು ತುತ್ತಾದಂತೆ.

**೧೩೩೦ ಬಹಳ ಜನರ ಇರಿದು, ಬಡವರನ್ನು ವಧಿಸಿ,**
**ಸುಲಿದು, ಕೊಳ್ಳೆ ಹೊಡೆದು, ಹೊಟ್ಟೆ ಹೊರೆವ,**
**ಎತ್ತ ಕಡೆಗೆ ಹೋದರೇನು? ಯಮನು ಬಿಡನು ವಿಶ್ವ**

**೧೩೩೧ ಮನದಿ ದಯವಿಲ್ಲದ, ಹೀನ ಹೊಲೆಯನ ಬಳಿ**
**ಕೂಡಿಕೊಂಡ ಜನಕೆ ಕೇಡು ನಿಜವು,**
**ದೊಡ್ಡತನವಿರದೊಡೆ, ಮಡ್ಡ ಮಂಕೆಂದಿಗು. ವಿಶ್ವ**

**೧೩೩೨ 'ಮೃಗವು ಮೃಗವು' ಎನುತ ಮೃಗಗಳ ದೂಷಿಪರು,**
**ಮೃಗಕಿಂತ ಕೇಡಿ ಮೂರ್ಖನಿಹನು,**
**ಮೃಗಕಿಪ್ಪ ಗುಣವು, ಮೂರ್ಖಗಿಲ್ಲವಲ್ಲ! ವಿಶ್ವ**

**೧೩೩೩ ಈಜುತ ಇರುವಾಗ ಆಳದೆಣಿಕೆಯೇನು?**
**ಪೂರ್ವ ದೋಷಿಗೆಂದು ಭಯವೆ ಇಲ್ಲ,**
**ಕೋತಿ ಕೊಂಬೆ ಏರಿ, ಕೊಸರಿ ಜಿಗಿಯುತಿಹುದು. ವಿಶ್ವ**

---

೧೩೩೪ ಮುಂಚಿನ ಗಾಯವು ಮಾಯಲು,
ಮದ್ದಾದರಿರುವುದು ಮತ್ತೆ ಮಹಿಯಲಿ ನೋಡಾ.
ನಿಂದೆಯ ಗಾಯವು ಮಾಯಲು,
ಮದ್ದೆಲ್ಲಿಯಾದರಿರುವುದೆ ಮಹಿಯಲಿ? ವೇಮಾ.

೧೩೩೫ ಪರರ ಮೋಸಗೊಳಿಸಿ ಪರಧನವನರ್ಜಿಸೆ,
ಉರವ ಹೊರೆವುದಷ್ಟೆ, ಇರದು ಲೆಕ್ಕ.
ಋಣವ ಗೆಯ್ವ, ಮನುಜ, ವೃದ್ಧಿ ಹೊಂದಬಹುದೆ? ವಿಶ್ವ

೧೩೩೬ ಕಾಲ್ವೆಯಡ್ಡ ಗಟ್ಟಿ, ಮಸಣ ಭೂಮಿ ಉತ್ತಿ,
ಮುನ್ನ ನಡೆವ ದಾರಿ ಮುಳ್ಳು ಚೆಲ್ಲಿ,
ಪೈರು ಕಡಿಯುವಂಥ ಪಾಪಿ ಇರುವರಲ್ತೆ? ವಿಶ್ವ

೧೩೩೭ ಧನದ ಮದದಿ ಕೊಬ್ಬಿ, ದೈವವನು ಅರಿಯರು,
ಕುಟಿಲ ಭಾವ ಹೊಂದಿ, ಕ್ರೂರ ಜನರು.
ಮದವು ಮೀರಿದಾಗ ಮನ್ನಣೆ ಇರದಾಯ್ತು, ವಿಶ್ವ

೧೩೩೮ ಅಷ್ಟಕಷ್ಟೆ ಬದುಕು, ಅಗ್ನಿ ಪಾಲು ಆಯ್ತು,
ನಿರ್ದಯಾತ್ಮ ಬದುಕು ನೀರ ಪಾಲು,
ಕ್ರೂರ ಕರ್ಮಿ ಬದುಕು ಕಳ್ಳ ಜನರ ಪಾಲು ವಿಶ್ವ

೧೩೩೯ ಎಷ್ಟು ಕಷ್ಟವುಂಟೊ ಅಷ್ಟು ಪಾಪ ಚಿಂತೆ,
ಚಿಂತೆಯಿಂದ ಬಹಳ ಕೀಳು ಮನಸು,
ಚಿಂತೆಯಿಲ್ಲದಿಹುದೆ ಕೆಡದ ಸೊತ್ತು ನೋಡು, ವಿಶ್ವ

೧೩೪೦ ಕೂಳು ಬಿಟ್ಟರು ಶತ ಕೋಟಿ ಹೆಡೆಗಳೆತ್ತಿ,
ಮತ್ತೆ ಮತ್ತೆ ಅದನೆ ಮಣ್ಣುಗುಡಿಸಿ,
ಕೊನೆಗೆ ಹೋಹ ವೇಳೆ, ಕೂಳಿಗು ಮೋಸಾಯ್ತು;
ಸತ್ತು ಹೋಗುತಿಹರು ಜವನ ಪಥಕೆ ವೇಮ

೧೩೪೧ ಯಾರ ಬಾಯ–ತುತ್ತು ಯಾರೊ ಭಕ್ಷಿಸುತಿಹರು
ಅವರ ಬಾಯಿ ಮೃತ್ಯು ವಿಧಿಗೆ ಈಡು
ಮೀನು ದೊಡ್ಡದಿರಲು ಮೀನು ಮರಿ ತಿನ್ನುವುದು
ಮನುಜ ಮೀನ ಪಿಂಡ ತಿನುವ ವೇಮಾ

# ಚಾಡಿಖೋರ

ಆಡಳಿತದಲ್ಲಿರುವವರು ತಮಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಬೇಹುಗಾರರಿಂದ ಮಾಹಿತಿ ಸಗ್ರಹಿಸುವುದು ರೂಢಿ. ಆದರೆ ಚಾಡಿಖೋರರು ಇದರ ದುರ್ಲಾಭ ಪಡೆದು ಅಧಿಕಾರ ಸಂಪನ್ನರ ಕಿವಿಯೂದುವ ಚಟ ಬೆಳೆಸಿಕೊಳ್ಳುತ್ತಾರೆ.

ಹಾವಿಗಿರುವ ಕೋರೆ ಹಲ್ಲು ಭಯ ಹುಟ್ಟಿಸುತ್ತದೆ. ಅದನ್ನು ಕಿತ್ತು ಹಾಕಿದರೆ, ಹಾವು ಹೆಚ್ಚು ದುಷ್ಟವಾಗದು. ಆ ರೀತಿ ಚಾಡಿಖೋರನ ಅಧಿಕಾರವನ್ನು ಕುಂಠಿತಗೊಳಿಸಿದರೆ, ಅವನು ಹೆಚ್ಚು ಅಪಾಯಕಾರಿಯಾಗನು.

ಚಾಡಿಖೋರನು, ಬಹಳ ಆತ್ಮೀಯನಂತೆ ತೋರುತ್ತಾನೆ. ಏಕಾಂತ ಸ್ಥಾನದಲ್ಲಿಯೂ ಸೇರುತ್ತಾನೆ. ಕಿವಿ ಕಚ್ಚಾಡುತ್ತಾನೆ. ಆದರೆ ಅವನ ವ್ಯಕ್ತಿತ್ವ ಕುರಿತು, ವೃತ್ತಿ ಕುರಿತು ಪ್ರೀತ್ಯಾದರಗಳು ಇರವು. ಅವನು ಸತ್ತರೆ, ಒಂದು ಪೀಡೆ ತೊಲಗಿತು; ಎಂದು ಬಗೆದು ಯಾರೂ ಅತ್ತ ಸುಳಿಯುವುದಿಲ್ಲ.

ಗುಪ್ತಚಾರನು ಸ್ನೇಹ ಬಯಸುತ್ತಾನೆ. ವಿನಯ ತೋರುತ್ತಾನೆ. ಹೆಣ್ಣಿನ ಸೊಗಸು ಸೂಚಿಸುತ್ತಾನೆ. ಏನೇ ಆದರೂ, ಅವನ ಸಹವಾಸ ಲೇಸಲ್ಲ. ಅವನನ್ನು ಎಂದೂ ಸೇರಕೂಡದು. ಚಾಡಿಖೋರನ ಮಾತನು ಚಾವಡಿಗೆ ಮಾತ್ರ ಮರ್ಯಾದಿತಗೊಳಿಸಬೇಕು. ರಾಜನ ಬಳಿಗೆ ಹೋಗುವವನು, ರಾಜ ಸಂಪರ್ಕವಿರುವವನು ಎಂದು ಹೇಳುವ, ದೊಡ್ಡಿಸ್ತನದ ಡೌಲಿನ ಚಾಡಿಖೋರನೇನು ದೊಡ್ಡವನಾಗನು.

**೧೩೪೨ ಫಣಿಗೆ ಕೋರೆ ಬರಲು ಭಯವೆನಿಸುವಂತೆ,**
**ವಿಚಿತ್ರ ಭಯ! ದುಷ್ಟ ವಿಭವಗಳಿಗೆ**
**ಕೋರೆ ಕೀಳೆ, ಹಾವು ಮೀರುವುದೆ ದುಷ್ಟತನ? ವಿಶ್ವ**

**೧೩೪೩ ಮರಣಿಸೆ ಕೊಂಡೆಯವ, ಮನೆತನಕ ಹೋಹರು**
**ಅಷ್ಟೊ ಇಷ್ಟು ಎಷ್ಟು ದುಃಖವಿಲ್ಲ.**
**ಗುಳ್ಳ ನರಿ ಸಾಯಲು ಕುರಿಯು ಅಳುವುದೇಕೆ? ವಿಶ್ವ**

**೧೩೪೪ ಸ್ನೇಹ ಬಯಸುತಿದ್ದು ವಿನಯ ಸೂಚಿಸುತಿಹ,**
**ಹೆಣ್ಣಿನಿಂಪು ತೋರ್ಪ ಗುಪ್ತಚಾರ**
**ಕೂಡ ಬಾರದವನನೆಂದೂ ಕೊನೆಯ ತನಕ, ವಿಶ್ವ**

---

೧೩೪೫ **ಚಾಡಿಯವನ ಮಾತು ಚಾವಡಿಯಲಿ ಲೇಸು;**
**ಬೇಟೆ ನಾಯಿ ವನದಿ ಬಹಳ ಲೇಸು**
**ವನಿತೆ ನೋಡಿದಾಗ ವಿದೂಷಕನು ಲೇಸು** ವಿಶ್ವ

೧೩೪೬ **ದೊಡ್ಡವನೆನ್ನುತ್ತ ದೊರೆಯ ಬಳಿಗೆ ಸೇರಿ,**
**ಚಾಡಿ ನುಡಿದ ಪಾಪಿ ಜಾತಿ ನರನು**
**ಚಾಡಿ ಹೇಳುವವನು ಸಾಯುಜ್ಯಪಡೆಯುವನೆ?** ವಿಶ್ವ

೧೩೪೭ **ಈ ಕಿವಿ ಕಚ್ಚುವರೆಲ್ಲರು,**
**ಆ ಕೊಂಡೆ ಮಾತು ಕೇಳ್ವರು; ಸದ್ವಾಕ್ಯಗಳಿಂ**
**ತಾಕಲು ನಾರಿಯ ಭಯವಿಹ**
**ಲೋಕದ ತೆರನಾಯಿತಯ್ಯ, ಅಖಿಲವು ವೇಮಾ**

●

## ಕರುಣೆಯ ದೃಷ್ಟಿ

ಕರುಣೆಯಿಂದಲೇ ಲೋಕ ವ್ಯವಹಾರವು ಮಧುರಕರವಾಗಿ ನಡೆಯುತ್ತಿದೆ. ಚಿಕ್ಕ ಇಣಚಿಯ ಕತೆಯು ಸುಂದರ ದೃಷ್ಟಾಂತವಾಗಿದೆ. ಇಣಚಿಯು ಸೇತು ಬಂಧನದ ಕಾಲಕ್ಕೆ ಅಲ್ಪ ಸೇವೆ ಮಾಡಿತು. ಶ್ರೀರಾಮಚಂದ್ರನು ಮೆಚ್ಚಿ ಅದರ ಬೆನ್ನು ತಟ್ಟಿದನಂತೆ. ಆ ಬೆರಳಿನ ಗುರುತುಗಳೇ ಇಣಚಿಯ ಬೆನ್ನ ಮೇಲಿನ ಮೂರು ಪಟ್ಟಿಗಳು.

ದೇವರು ಕರುಣಾಮಯನು. ತೊಂದರೆ ಬಂದಾಗ ಮಾನವನು ದೇವರನ್ನು ನೆನೆಯುತ್ತಾನೆ. ಸುಖ ಬಂದಾಗ ಮರೆಯುತ್ತಾನೆ. ಆದರೆ ಕರುಣಾಮಯಿ ದೇವರು ಸಂಕಟದಲ್ಲಿರುವವರನ್ನು ಪಾರು ಮಾಡಿಯೇ ಮಾಡುತ್ತಾನೆ.

ಜನರು, ತಮ್ಮ ಬಾಳಿನಲ್ಲಿ ಸತ್ಕರ್ಮದ ಕೊಂಬೆ ಹಿಡಿಯದೆ ನೆರವು ಕಳೆದುಕೊಳ್ಳುತ್ತಾರೆ. ತಮಗೆ ಅನುಕೂಲವಿರುವಾಗ ಕೊಟ್ಟು ಪುಣ್ಯ ಪಡೆಯರು. ಪ್ರತಿಯಾಗಿ ನಿಂದಿಸಿ ಹೊರದಬ್ಬುತ್ತಾರೆ. ಬೇಡಬಂದವನನ್ನು ಶಿವಸ್ವರೂಪವೆಂದು ಪೂಜಿಸಬೇಕಷ್ಟೇ.

ಜನರಿಗೆ ಕೇಡು ಮಾಡಿದಿದ್ದರೂ ಸಾಕು. ಬಹಳಷ್ಟು ನೀಡಿದ ಫಲವು ತನಗುಂಟು.

೧೩೪೮ **ಅಳಿಲು ರಾಮಗೆಷ್ಟು ಅಡಿಯಾಳಾಗಿದ್ದು,**
**ಅಳಿಲಿನಲಿ ರಾಮಗೆ ಆಯ್ತು ಪ್ರೀತಿ**
**ತನ್ನ ಕರದಿಂದವ ತಟ್ಟಲಿಲ್ಲವೆ ಬೆನ್ನು?** ವಿಶ್ವ

೧೩೪೯ ತ್ರಾಸು ಬರುವ ವೇಳೆ, ದೇವರನು ನೆನೆವನು;
ಕರುಣೆ ಕಾಣ; ವ್ಯರ್ಥ ಗಾಸಿ ಹೊರತು
ಸುಖವು ಬರುವ ವೇಳೆ ಸಲೆ ಕಾಣಲೊಲ್ಲನು ವಿಶ್ವ

೧೩೫೦ ಕನಕವಿದ್ದರೇನು ಕರುಣೆಯಿಲ್ಲದನಕ?
ಕನಕ ನಿಲುವುದೆಂತು ಕರ್ಮಿಗಳಿಗೆ?
ಹುಟ್ಟು ಮುಟ್ಟಿ ಜೇನು ಹುಳುವು ಹಾರದಿಹುದೆ? ವಿಶ್ವ

೧೩೫೧ ಹಿಡಿಯೆ ಕೊಂಬೆಯಿರದೆ ಹಲ ಪಾಡು ಪಡುವರು
ನೀಡಿ ಪೊರೆಯದಿದ್ದು ನಿಂದಿಸುವರು
ಮುಟ್ಟಿ ಶಿವನ ಪೂಜೆ ಮೊದಲು ಮಾಡರವರು ವಿಶ್ವ

೧೩೫೨ ಸಂಕಟ ಬಂದಾಗ ವೆಂಕಟರಮಣೆನುವ;
ಕರುಣೆ ಕಾಣ ವ್ಯರ್ಥ ಕಷ್ಟವಷ್ಟೆ
ಸುಖವು ಬರುವ ಕಾಲ ಸಮೀಕ್ಷಿಸಲೊಲ್ಲರು ವಿಶ್ವ

●

## ಸಾಮರ್ಥ್ಯ

ಸಾಮರ್ಥ್ಯವು ಒಬ್ಬನ ಮಾನಸಿಕ ಸಂಪತ್ತು. ಭಂಟನು ಧೀರನಾಗಿರಬೇಕು. ಎದುರು ಪಕ್ಷದ ದಳವನ್ನು ಕಂಡು ಅಧೀರನಾಗಬಾರದು. ರಣರಂಗದಿಂದ, ಹೆದರಿ ಕಾಲ್ತೆಗೆಯಕೂಡದು.

೧೩೫೩ ಪರದಳವನು ಕಂಡು, ಪ್ರಾಣ ಭೀತಿಯಿಂದ
ಹಾರಿ ಓಡುತಿಹನು ಊರ ತನಕ
ಯಮನು ಬಂದರಾಗ, ಅಡ್ಡ ಬರುವರಾರು? ವಿಶ್ವ

●

## ಆಪತ್ತಿನಲ್ಲಿ ಸ್ಥೈರ್ಯ

ಸಂಪತ್ತು ತನಗಿರುವಾಗ ಸರ್ವರೂ ಬಂಧುಗಳಂತೆಯೇ ನಟಿಸುವರು. ಅದೇ ಒಬ್ಬನು ಆಪತ್ತಿನಲ್ಲಿರುವಾಗ, ತನಗಾರು ಬಂಧುಗಳು? ಎಂಬುದನ್ನು ಪರೀಕ್ಷಿಸಿ ತಿಳಿಯಬಹುದು.

ಬೇರೆಯವರಿಗೆ ಬಂದ ಆಪತ್ತನ್ನು ತನ್ನದೆಂದೇ ಭಾವಿಸಿ, ಅವರಿಗೆ ನೆರವಾಗುವವನು ಲೋಕದಲ್ಲಿ ಮಾನ್ಯನಾಗುತ್ತಾನೆ. ಅವನೇ ಘನವಂತನೂ ಸರಿ.

ಆಪತ್ತಿನಲ್ಲಿರುವಾಗ ಕುಸಿದು ಕುಪ್ಪಳಿಸಬಾರದು. ಕುಸಿದವನು ಮೇಲೇಳುವುದು ಕಠಿಣ. ತೂತಾದ ಗಡಿಗೆಯ ತೂತಿಗೆ ಬಟ್ಟೆ ತುರುಕಿದರೆ, ಅದೇ ಕೆಲಸಕ್ಕೆ ಬರುತ್ತದೆ. ಆ ರೀತಿ ಆಪತ್ತಿರುವಾಗ ಸ್ವಲ್ಪ ಧೈರ್ಯ ತುಂಬಿಕೊಂಡು ಮುಂದುವರಿದರೆ ಆಪತ್ತೇ ಇಲ್ಲವಾಗುತ್ತದೆ.

**೧೩೫೫ ಆಪತ್ತಿರುವಾಗ ನೋಡು ಬಂಧು ಭಾವ,**
**ಭಯದ ವೇಳೆ ನೋಡು, ಬಂಟ ಗುಣವ;**
**ಬಡತನ ಬಂದಾಗ ಮಡದಿಯ ಗತಿ ನೋಡು ವಿಶ್ವ**

**೧೩೫೬ ಅನ್ಯರಿಗೆ ಬರುತಿಹ ಆಪದ ತನದೆಂದು,**
**ಅನ್ನುವವನು ಜಗದಿ ಮಾನ್ಯನಿಹನು**
**ಮಾನ್ಯರಿಪ್ಪರೊಳಗೆ ಮಹಿಪರಿರೆ ಲೇಸು**
**ಕಂಡರಿವನೆ ಜಗದಿ ಘನನು ವೇಮ**

**೧೩೫೭ ತೂತಾಗಲು ಗಡಿಗೆ ತುರುಕಬಹುದು ಬಟ್ಟೆ;**
**ಬಂತು ಕೆಲಸಕಾಗ ಬಹಳ ಚೊಕ್ಕ**
**ಕುಸಿದು ಬಿದ್ದನರನು ಕುದುರಿ ಸ್ಥೈರ್ಯ, ಏಳ ವಿಶ್ವ**

●●●

## ೭. ಅರ್ಥವರ್ಗ

**ಆಪ್ತಾಲೋಚನೆ**

**ಮಾತಿನೊಳಗೆ ಇಪ್ಪ ಮಹಿಮೆ ತಾ ತಿಳಿಯದೆ,**
**ಮಾತರಿಯದೆ ಸಿಕ್ಕ ಮಮತೆಯಲ್ಲಿ.**
**ಮಾತು ತಿಳಿದ ಅವನೆ ಮಹಿಮನಾದ ಯೋಗಿ.**
**ವಿಶ್ವದಾಭಿರಾಮ ಕೇಳು ವೇಮ.**

**ಅಪ್ತಾಲೋಚನೆ**

ಆದರೆ, ಜನರನ್ನು ಪೋಷಿಸದೆ, ತನ್ನೆಡೆಗೆ ಸೇರಿಸಿಕೊಂಡು, ಮುಕ್ತ ಮಾಡದವನ ಅಪ್ತಾಲೋಚನೆಯಿಂದೇನು ಫಲ? ಅಂಥವನ ನಿರ್ಣಯಗಳಿಂದೇನು ಫಲ?

ಆಳುವವನಿಗೆ ಧನವೂ ಬೇಕು. ಧೈರ್ಯವೂ ಬೇಕು. ಧೈರ್ಯವಿಲ್ಲದಿದ್ದರೆ, ಧನವನ್ನು ಸಂಚರಿಯಿಸಲಾರರು.

ಸುಳ್ಳು ಹೇಳುವವನನ್ನು ಹಳ್ಳಿಯ ಗೌಡನು ಚೆನ್ನಾಗಿ ತಿಳಿದಿದ್ದಾನೆ. ಸತ್ಯ ಹೇಳುವವನನ್ನು ಸ್ವಾಮಿಯು ಚೆನ್ನಾಗಿ ತಿಳಿದಿರುತ್ತಾನೆ.

**೧೩೫೮ ತೀರ್ಪು ನೀಡಲಾರದ ತೀರ್ಪುಗಾರನೇಕೆ?**
**ಸೇರಿಸಿ, ಬಿಡಿಸದವಗೆ ಕಲಿಸಲೇಕೆ?**
**ಪೋಷಿಸಲಾರದವನ ಬಂಡ ಬಡಾಯಿಯೇಕೆ? ವಿಶ್ವ**

**೧೩೫೯ ಧನವು ಇಲ್ಲದಿರಲು ಧೈರ್ಯ ನಿಲ್ಲದಯ್ಯ,**
**ಧೈರ್ಯ ಮುನ್ನ ಇರದೆ ಧನವು ಇಲ್ಲ**
**ಧನವು ಧೈರ್ಯವರಿಯೆ ದೊರೆಗೆ ಶೋಭೆಯಹುದು, ವಿಶ್ವ**

**೧೩೬೦ ಸುಳ್ಳು ನುಡಿಯುವವನ ಹಳ್ಳಿ ಗೌಡ ಬಲ್ಲ,**
**ಸತ್ಯ ನುಡಿಯುವವನ ಸ್ವಾಮಿ ಬಲ್ಲ,**
**ಮಿತಿಗೆಟ್ಟು ಭಕ್ಷಿಪನ ಸತಿಯು ಬಲ್ಲಳಲ್ಲ ವಿಶ್ವ**

**ಮಾತಿನ ಒಲುಮೆ**

'ಮಾತು ಬಲ್ಲವ ಮಾಣಿಕ ತಂದ; ಮಾತು ಬಾರದವ ಜಗಳ ತಂದ' ಎಂಬ ನಾಣ್ಣುಡಿಯಿದೆ. ತಪ್ಪು ಕಾರ್ಯ ಮಾಡುತ್ತ, ಮೋಸವೆಸಗುತ್ತ, ನಡೆದರೆ
— — — — — — — — — — — — — — — — — — — —

ತನ್ನ ವಶದಲ್ಲಿರುವ ಲಕ್ಷ್ಮಿ ತೊಲಗಿ ಹೋಗುತ್ತಾಳೆ. ಒಡೆದ ಗಡಿಗೆಯಲ್ಲಿ ನೀರು ನಿಲ್ಲದಲ್ಲವೇ? ಅರಿತು ಮಾತನಾಡಬೇಕು. ಆಗ ಅದಕ್ಕೆ ತೂಕ ಬರುತ್ತದೆ.

ಮಾತು ಹಿತಮಿತವಾಗಿದ್ದರೆ ಸತ್ಪುರುಷರು ಸಂತೋಷಿಸುತ್ತಾರೆ. ಅಧಿಕ ಭಾಷಣವಾದರೆ, ಆಯಾಸಕರವಷ್ಟೇ. ಅದರಿಂದಾವ ಪ್ರಯೋಜನವಾಗದು. ಮಾತಿನಿಂದ ಮೋಕ್ಷ, ಮಾತಿನಿಂದಲೇ ಘನತೆ, ಮಾತಿನಿಂದ ಐಶ್ವರ್ಯವುಂಟು.

ಓರ್ವ ಅರ್ಹ ವ್ಯಕ್ತಿಯು ಉಚಿತ ಮಾತನ್ನು ಆಡುತ್ತ, ಜನರಿಂದ ಗೌರವ ಪಡೆದು ಪೂಜ್ಯನೆನಿಸುತ್ತಾನೆ. ಅಲ್ಪ ಮನುಷ್ಯನು ಕೇವಲ ಆಡಂಬರದ ನುಡಿಯಾಡುತ್ತಾನೆ. ಒಳ್ಳೆಯವನಾದರೊ ಮಧುರ ಮಾತನ್ನಾಡಬೇಕು. ಕೇವಲ ಮಾತಿಗೆ ಮಾತು ಬಳಸುವುದು ಲೇಸಲ್ಲ.

ಮಾತು ಆಡುವಾಗ ಎಚ್ಚರಿಕೆಯಿಂದಿರಬೇಕು. ಆಡಿ ತಪ್ಪಿದರೆ ಸದಭಿಮಾನಹೀನನಾಗುತ್ತಾನೆ. ಅವನಿಗಾವ ವಿಶ್ವಾಸಾರ್ಹತೆಯೂ ಇರದು. ಅವನನ್ನು ಸೇರಿದರೂ, ಬೇಗ ತೊರೆದು ದೂರಾಗುವುದೇ ಲೇಸು.

**೧೩೬೧ ತಪ್ಪು ಹೇಳಿ ಹೇಳಿ, ತಾ ಮೋಸ ಮಾಡುತ,**
**ತೊಡೆಯೊಳಿರುವ ಲಕ್ಷ್ಮಿ ತೊಲಗುತಿಹಳು**
**ಒಡೆದ ಗಡಿಗೆ ನೀರು ಒಪ್ಪ ನಿಲ್ಲಬಹುದೆ? ವಿಶ್ವ**

**೧೩೬೨ ಅರಿತು ವಿಷಯ, ಮಾರು–ಆಡುತಿಹುದೆ ಯುಕ್ತ;**
**ಗಣನೆ ಹೆಚ್ಚಿದಂಥ ಘನನೆ ಆಗ,**
**ಗುಣವು ಇಲ್ಲದಿರಲು ಕುದುರುವುದೇ ಊಹೆ? ವಿಶ್ವ**

**೧೩೬೩ ಮಾತು ಮುನ್ನ ಅರಿತು ಮತ್ತೋರ್ವನ ನುಡಿಗೆ,**
**ಪ್ರತಿ ನುಡಿಯೆ ಅಮಿತ ಸಂತಸಕರ!**
**ಮನವರಿಯದೆ ಒಳಗೊಳಗೆ ತಳಮಳಿಸಲೇಕೆ? ವಿಶ್ವ**

**೧೩೬೪ ಅತಿ ಹಿತವಾದಂಥ ಆಡಿದಾ ಮಾತಿಗೆ**
**ಸಂತಸಿಸುವರೆಲ್ಲ ಸತ್ಪುರುಷರು,**
**ಅಧಿಕ ಭಾಷಣಾದಿ ಆಯಾಸಕರವಷ್ಟೆ, ವಿಶ್ವ**

**೧೩೬೫ ವಾಕ್ಕಿನಿಂದ ಉಂಟು ವರವಾದ ಮೋಕ್ಷವು;**
**ವಾಕ್ಕಿನಿಂದ ಉಂಟು ವರರ ಘನತೆ**
**ವಾಕ್ಕಿನಿಂದ ಉಂಟು ಮಿಕ್ಕಿದೈಶ್ವರ್ಯವು ವಿಶ್ವ**

---

೧೩೬೬ ಮಾತಿನೊಳಗೆ ಇಷ್ಟ ಮಹಿಮೆ ತಾ ತಿಳಿಯದೆ,
ಮಾತರಿಯದೆ ಸಿಕ್ಕ ಮಮತೆಯಲ್ಲಿ;
ಮಾತು ತಿಳಿದ ಅವನೆ ಮಹಿಮನಾದ ಯೋಗಿ, ವಿಶ್ವ

೧೩೬೭ ಅಂದವರಿತ ಮಾತು ಒಂದು ವಾಕ್ಯ ಸಾಕು
ಹೆಚ್ಚು ಏಕೆ? ವ್ಯರ್ಥ ಹಿಂದು ಮುಂದು,
ದಿಕ್ಕು ತಿಳಿದ ಮಣಿಹ ತಾನೊಂದೆ ಸಾಲದೆ? ವಿಶ್ವ

೧೩೬೮ ಉಚಿತವಾಡುತ ಇರುವಾತ ಅರ್ಹನಿರಲು,
ಗೌರವಾದಿಯ, ಪದವಿಯ ಕಾಣುತಿರುವ
ಸರ್ವ ಜನರಲಿ ಪೂಜಿತನಿಹ ಸಂತಸದಲಿ;
ಬಹಳ ಕೀರ್ತಿಯನು ಮಹಿಯಲಿ ಪಡೆವ ವೇಮ

೧೩೬೯ ಮಾತಿಗೆ ಸೈಗುಡಲು ಕಂಡು,
ಪೂರ್ತಿ ಮನದಿ ನಂಬಬೇಡ ಬೂಟಕ ಜನರೊಳ್,
ತಾ ತಿಳಿದು ತಾಣ ಪೂಜಿಸೆ,
ಆತನು ಕೋಟೀಶ್ವರ ತೇಜ ಆಂತಿಹ ವೇಮಾ

೧೩೭೦ ಮಾತನಾಡಲರಿತು ಮನಸು ಕರಗದಿರಲು,
ಪ್ರಿಯವ ಬೆಳೆಸಿ ಹೇಳಿ, ಪಡೆದುಕೊಂಡು,
ಓರ್ವನ ಕೈಸೊತ್ತು ಒರಗದೆ ಬರಬಹುದೆ? ವಿಶ್ವ

೧೩೭೧ ವಾದ ಬುದ್ಧಿಯಿಂದ ವಾದ ಮಾಡಬೇಡ
ಬರುವುದೇನದರಿಂ ಭೂಮಿಯಲ್ಲಿ?
ಕರ್ಮ ಮಾರ್ಗದಲ್ಲಿ ಕಡೆಗಾಣಲಾರರು ವಿಶ್ವ

೧೩೭೨ ನೂರು ಮಾತು ನುಡಿಯೆ, ಲೇಸು; ಬರೆಯೆ ಹೊಲ್ಲ,
ಬರೆದ ಸಾಕ್ಷಿ ವಚನ ಸ್ಥಿರಗೊಳಿಪ,
ಭೂರಿ ಕಷ್ಟ ಕಟ್ಟಿಕೊಂಡು ಮರುಗಲೇಕೆ? ವಿಶ್ವ

೧೩೭೩ ಆಡಬಹುದು ನೂರು, ಬೇಡ ಬರೆವುದೊಂದು,
ಬರೆವುದಕ್ಕೆ ಸಾಕ್ಷಿ ಬೇಕು ಎಂದು,
ಪಕ್ಕ ಬರೆಯದಿದ್ದ ಪಕ್ಷದಲ್ಲಿ ಆಗ,
ಬರೆದ ಸಾಕ್ಷಿಗೆ, ತಕ್ಕ ಬೆಲೆಯು ವೇಮ.

೧೩೭೪ ಮಾತು ಕೇಳಿ ಒಬ್ಬ ಹೌದು ಅಹುದು ಎನಲು,
ಕೆಲರು ಸಿದ್ಧ; ಅಲ್ಲವೆನಲು ಕ್ಷಣದಿ;
ಬೊಮ್ಮನೆದ್ದು ಬರದೆ, ದ್ವಂದ್ವ ಅಳಿಯಬಹುದೆ? ವಿಶ್ವ

೧೩೭೫ ಮಾತನಾಡಬಹುದು, ಮನಸು ನಿಲಿಸಲಾರ,
ಗಳಿಸಬಹುದು, ತನ್ನ ತಿಳಿಯಲಾರ,
ಚೂರಿ ಹಿಡಿಯಬಹುದು, ಶೂರನಾಗಲಾರ. ವಿಶ್ವ

೧೩೭೬ ಮಾತನಾಡಲರಿತು, ಮನಸು ಕರಗಿಸುತ್ತ,
ನಲುಮೆ ಒಲುಮೆ ಜನಕ ನುಡಿಯು ಇರದೆ,
ಓರ್ವನಿಂದ ಸೊತ್ತು ದೊರಕಿಸಬಹುದೇನು? ವಿಶ್ವ

೧೩೭೭ ಮಾತಿಗೆ ಮಾತಾಡಬಹುದು;
ಮಾತುಗಳಿಂದಾಗುತಿಹವು, ಮಣಿ ಮಂತ್ರಂಗಳ್,
ಮಾತನು ಹೊಂದಿಸಲರಿತೊಡೆ,
ಮಾತಿನೊಳೇ ಮುಕ್ತಿಯುಂಟು, ಮಹಿಯಲಿ, ವೇಮಾ

೧೩೭೮ ಬಾಯಿ ಬಡಿಯಲೊಬ್ಬ, ಭಂಡ ಪಂಡಿತೆಂದು,
ನ್ಯಾಯವಂತ ಸಾಧು ಸಂತ,
ನಾಯಿ ಬೊಗಳಲಾಗ ಕುದುರೆಗೇನು ಲೆಕ್ಕ? ವಿಶ್ವ

೧೩೭೯ ನುಡಿಗೆ ನುಡಿಯ ಮಥಿಸಬೇಡ ಮೂಢನಾಗಿ;
ನಡುವೆ ಬಾಯಿ ಹಾಕಿ ಕೇಳುವವನೆ!
ನುಡಿದುದೆಲ್ಲ ನುಡಿವಗೊಪ್ಪುವಂತೆ ಕೇಳು ವಿಶ್ವ

೧೩೮೦ ಅಹುದಲ್ಲೆನಲೊಬ್ಬ ಬೇಕು ಬೇಡವರಿತು,
ಇನ್ನೋರ್ವನೆದುರಾಗಿ, ಕೇಳುವನವ;
ನಿಲಿಸಿ ಕೇಳ್ವವನರಿತರು, ಕೇಳ್ವ ಚಪಲ ವಿಶ್ವ

೧೩೮೧ ಅಲ್ಪ ನುಡಿವ ಮಾತು ಅಸಡ್ಡೆಯಾದರೂ
ಅಧಿಕ ಸುಮ್ಮನಿರುವ, ಅದರಂತೆ
ಕಂಚು ಮೊಳಗುವಂತೆ ಕನಕ ಮೊಳಗುವುದೆ? ವಿಶ್ವ

೧೩೮೨ ಆಡಿ ತಪ್ಪುವವರು ಅಭಿಮಾನ ಹೀನರು,
ಗೋಳರಿಯುವವರು ಕೊಂಚವಿಹರು,
ಕೂಡಿ ಕೀಳು ಗೆಯ್ವ ಕ್ರೂರರು; ತಿಳಿದು ನೋಡು ವಿಶ್ವ

೧೩೮೩ ಬುಟ್ಟಿಯ ಕೇರಿದೊಡೆ ಇಷ್ಟಾದರೂ ಲಭ್ಯ,
ಪೊಳ್ಳು ಬೀಜ ಹೊಂದಿ ಭೂಮಿಯೊಳಗೆ;
ಆಡಿ ತಪ್ಪಿದ ಮಾತು ಅಂತ್ಯಕೂ ಹೀನವೆ, ವಿಶ್ವ

೧೩೮೪ ಭಾಷೆಯಾಡಗಲಿತು, ಬಹಳ ಮೋಸ ಮಾಡಿ,
ಕೂಳಿಗಾಗಿ ಜಗದಿ ಖಳನೆ ಆದ;
ದೋಷಕಾರಿ ನಿನಗೆ ದೊರಕುವುದೇ ಮೋಕ್ಷ? ವಿಶ್ವ

೧೩೮೫ ಠಕ್ಕ ಮಾತನಾಡಿ ಸಿಕ್ಕು ಕಷ್ಟದಲಿ
ನಿಜವನರಿತು ಕೊಳದೆ ನಿರ್ವಹಿಸಲು,
ಸಮನಾದ ಜ್ಞಾನದ ಸಾರ ತಿಳಿಯಲಾರ. ವಿಶ್ವ

೧೩೮೬ ಭಂಡ ನುಡಿಯಾಡುವ ಪರಮ ನೀಚ ನರಗೆ,
ದೊಡ್ಡ ಜನರ ಹಿರಿಮೆ ತಿಳಿವುದೆಂತು?
ಚಂದನದ ಘನತೆಯ ಹಂದಿಯರಿವುದೆಂತು? ವಿಶ್ವ

೧೩೮೭ ಮಾತಿನೊಳಿತಿನಿಂದ ಮನವು ರಂಜಿಸುವುದು,
ಕೊಂಚವೆಂದು ರಕ್ತಿ ಕೋರಬೇಡ,
ವಂಚನೋಕ್ತಿಯಿಂದ, ವೈಭವ ಹೊಂದುವನೆ? ವಿಶ್ವ

೧೩೮೮ ಮಾತು ನಿಲಿಸದಿರುವ ಮನುಜನೇ ಚಂಡಾಲ
ಆಜ್ಞೆ ಕೊಡದ ರಾಜ ಆಡು ಮುಂಡೆ;
ಮಹಿಮೆ ಇರದ ಮೂರ್ತಿ ಮಣ್ಣೆ ಆದ ಹುಲಿಯು. ವಿಶ್ವ

೧೩೮೯ ಬಿದ್ದಿಹ ಗಾಯವು ಮಾಯಲು,
ಮದ್ದು ಇಹುದು ಎಲ್ಲಾದರು, ಮಹಿಯಲಿ, ಕಾಣಾ
ಮೂದಲಿಕೆ ನುಡಿಯೆ ಮಾಯಲು,
ಮದ್ದಿಹುದೆ ಎಲ್ಲಾದರು? ಮಹಿಯಲಿ, ವೇಮಾ

೧೩೯೦ **ಪುಟ್ಟ ಮಾತನಾಡಿ ಪರಿತಪಿಸುವುದೇಕೆ?**
**ಕೆಟ್ಟ ಚರ್ಯೆ ತೊಡೆದು. ಗುರುವ ಬೇಡಿ,**
**ಅಡಿಗೆ ಬಿದ್ದು ಮಣಿದು; ಆಶೆಯ ತೊರೆದು ಬಿಡು.** ವಿಶ್ವ

೧೩೯೧ **ಆಡಿ ತಪ್ಪುವಾತ ಸದಭಿಮಾನಹೀನ**
**ಅರಿಯದಿರಲು ಕಷ್ಟ, ಅಲ್ಪನವನು,**
**ಕೂಡಿ ಬಿಟ್ಟು, ಕೇಡು ಬಗೆವ ಕ್ರೂರ ನೋಡು** ವಿಶ್ವ

●

## ಕಾರ್ಯ ವಿಧಾನ

ಕೆಲಸ ಮಾಡುವಾಗ ಒಗ್ಗಟ್ಟು ಇರಬೇಕು. ಒಂದು ಬೆರಳು ಕತ್ತರಿಸಿ ಹೋದರೂ ಕಷ್ಟ. ಅಂತೆಯೇ ನಂಬಿದವರಲ್ಲೊಬ್ಬನು ಕೈಬಿಟ್ಟರೆ ಸರಿಯಾಗದು.

ಹಿಡಿದ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಬೇಕು. ಕಾರ್ಯವಿಧಾನದಲ್ಲಿ ಚತುರತೆ ಬೇಕು. ಛೂರಿಯಿಂದ ಏನನ್ನಾದರೂ ಕೊಯ್ಯಬಹುದು. ಆದರೆ ಅದರ ಹಿಡಿಯನ್ನೇ ಕೊಯ್ಯಲಾಗದು, ಅದೇ ರೀತಿ, ಎದುರು ಪಕ್ಷದವರನ್ನು ಹಣಿಯಬಹುದು. ಆದರೆ ತಮ್ಮ ಬೆಂಬಲಿಗರನ್ನೇ ಹಣಿಯ ಹೋದರೆ ಹೇಗೆ?

ಕಾರ್ಯದಲ್ಲಿ ವಿಶೇಷ ಪರಿಶ್ರಮ ಬೇಕು. ಕಲ್ಲು ಕಲ್ಲು ತಿಕ್ಕಿದರೆ ನುಣ್ಣಗಾಗುವಂತೆ ನಿಖಿಲ ಕಾರ್ಯವು ಪರಿಶ್ರಮದಿಂದ ಸರಿಯೆನಿಸುತ್ತದೆ.

ಕೆಲವರು ಕಳ್ಳತನ ಮಾಡಿ, ಕುಟಿಲ ಕಾರ್ಯ ಮಾಡಿ ಆಗಲಿ ತನ್ನ ಒಡೆಯನೊಡನೆ ಹರಿತವಾದ ಆಯುಧದೊಡನೆ, ಉರಿವ ಬೆಂಕಿಯೊಡನೆ, ಪರರ ನಾರಿಯೊಡನೆ ಗೇಲಿ ಮಾಡಕೂಡದು. ಗೇಲಿ ಮಾಡಿದರೆ, ಕಾಲರಾಯನ ಕೈಗೆ ಬಲಿಯಾಗುತ್ತಾರೆ.

ಕಾರ್ಯವನ್ನು ಚೊಕ್ಕಟ್ಟಾಗಿ ಮಾಡಬೇಕು. ಸರಿಯಾಗಿ ಮಾಡದಿದ್ದರೆ ಬೇಯಿಸಲು ತಪ್ಪಿದ ಅಡುಗೆಯಂತೆ ವಿಷಮವಾಗುತ್ತದೆ. ಸರಿಯಾಗಿ ತಿಳಿದು ನೋಡಿದರೆ ಅದು ಹೇಯವೆನಿಸಿ ತಿನ್ನಲು ಯೋಗ್ಯವಾಗದು.

ಕಾರ್ಯ ವಿಧಾನದಲ್ಲಿ ಮನಸ್ಸನ್ನು ದುಗುಡಗೊಳಿಸಿ ಅದನ್ನು ನಿಗ್ರಹಿಸಿದರೆ ಬಂಟತನವೇನಲ್ಲ. ಮನ ಗೆದ್ದು ಮಾರು ಗೆಲ್ಲುವುದೇ ಲೇಸು.

ಜಾಣ ಜನರು, ಸಫಲವಾಗುವ ಕಾರ್ಯಕ್ಕೇ ಕೈ ಹಾಕುವರು. ಸತ್ಫಲವಿರುವಲ್ಲಿ ಇಹ ಪರಗಳಲ್ಲಿ ಒಳಿತೇ ಆಗುತ್ತದೆ.

— — — — — — — — — — — — — — — — — — — — — —

೧೩೯೨ ಐದು ಬೆರಳ ಶಕ್ತಿಯಿಂದ ಕೈಯ ಕಾರ್‍ಯ,
ಒಂದು ಕಳೆಯೆ ಹೊಂದಿಕೆ ಹಿಂಗುವುದು,
ನಂಬಿದವರೊಳೊಬ್ಬ ತೊರೆಯೆ ಕೇಡು ಕಣಾ! ವಿಶ್ವ

೧೩೯೩ ಶಕ್ತಿಯಿರುವ ಕಾರ್‍ಯ ಸರಿಯಾಗಿ ನಡೆವುದು,
ಭಕ್ತಿಯಿರುವ ಪೂಜೆ ಫಲವೀವುದು,
ಯುಕ್ತಿಯಿರುವ ಮಾತು ಯುಕ್ತವಿಹುದು ಜಗದಿ, ವಿಶ್ವ

೧೩೯೪ ಘೂರಿಯಿಂದ ಕೊಯ್ಯೆ, ಚೆನ್ನಾಯಿತೆಂದರೆ,
ಅದರ ಹಿಡಿಯ ಕೊಯ್ಯೆ ಅಳವೆ ನಿನಗೆ?
ತಿಳಿಯದಿರದೆ ಮಾಳ್ಪುದೇನು ದೇಹ ಬಲವು? ವಿಶ್ವ

೧೩೯೫ ಗಡಿಗೆ ಒಡೆಯಲಾಗ ಕೊಳ್ಳಬಹುದು ಹೊಸದು;
ಪೊಡವಿಯಲ್ಲಿ ಮತ್ತೆ ಪಡೆಯಬಹುದು;
ಮೂಲೆ ಹಿಡಿದ ನರನು ಮೇಲೇಳ್ವುದು ವಿರಳ! ವಿಶ್ವ

೧೩೯೬ ಎತ್ತಿಗಿಂತ, ಅರಿಯೆ, ಏನು ಕಡಿಮೆ ಕೋಣ?
ವಿವರವರಿತು ನೋಡೆ, ವೃತ್ತಿಯಲಿ.
ಕೌಶಲವಿರದವನ ಕಡು ಯೋಧನೆನುವರೆ? ವಿಶ್ವ

೧೩೯೭ ಕಲ್ಲು ಕಲ್ಲು ಕೂಡ್ಸಿ ಕಲ್ಲು ತಿಕ್ಕಿದಾಗ,
ನುಣ್ಣಗಾಗುವಂತೆ ನಿಖಿಲ ಕಾರ್‍ಯ
ಪಾಡು ಪಡಲು ಬಳಿಕ ಪರಿಪಾಡು ಆಗ್ವುದು ವಿಶ್ವ

೧೩೯೮ ಬಲವ ನೋಡಲೇಕೆ? ಬಲವಂತನಾಗನು,
ಕುಲವ ಕಂಡು ಮೆಚ್ಚೆ ಕುದುರದಲ್ಲ!
ಭೂಮಿ ತುಳಿದು ಅಂತೆ ಬಿಡಲು ಬೇಡ ಯತ್ನ. ವಿಶ್ವ

೧೩೯೯ ಕಳ್ಳ ತನದಿಂದಲಿ, ಕುಟಿಲವೆಷ್ಟೊ ಗೆಯ್ದು,
ಕಾಣಲಾರದಂಥ ಗುಮ್ಮವೆನುತ,
ತಾವು ಗೆಯ್ದ ಕಾರ್‍ಯಕೆ ತಗಲಿಕೊಂಡು ಇಹರು. ವಿಶ್ವ

೧೪೦೦ ತನ್ನ ಒಡೆಯನೊಡನೆ, ಹರಿತಾಯುಧದೊಡನೆ,
ಉರಿವ ಬೆಂಕಿ ಪರರ ನಾರಿಯೊಡನೆ,
ಗೇಲಿ ಮಾಡಲಾಗ ಕಾಲ ತೀರಿದಂತೆ. ವಿಶ್ವ

೧೪೦೧ ಬೇಯಿಸಲು ತಪ್ಪಿದರಡುಗೆ ವಿಷವದೆನಿಪುದಯ್ಯ
ಹೇಯವಯ್ಯ ನೋಡೆ, ಕಣ್ಣು ತೆರೆದು;
ಹೇಯವಿನಿತು ತಿನಲು ಪಾಯಕರ ನೋಡಾ, ವಿಶ್ವ

೧೪೦೨ ಹುಚ್ಚ ನರಗೆ, ಹೆಚ್ಚು ಪೀಡೆ ನೀಡ ಹೊಲ್ಲ,
ಹುಚ್ಚ ನರನ ಮಾತು ಕೇಳ ಹೊಲ್ಲ,
ಹುಚ್ಚ ನಾಯಿ ನೆಚ್ಚಿ ಬೇಟೆಯಾಡಬಹುದೆ? ವಿಶ್ವ

೧೪೦೩ ದ್ರೋಹ ಬುದ್ಧಿ ಇರಲು, ತುಡುಗುತನವಿರಲು,
ಸೋಗು ಇರಲು, ಮತ್ತೆ ಸಾಹಸಿರಲು;
ಸಂಪದಧಿಕವಾಗೆ ಸಾಧಿಸುವುದೆ ಒಪ್ಪ, ವಿಶ್ವ

೧೪೦೪ ಬಂಟ ತನವು ಅಲ್ಲ; ಬಲದಿಂದ ಕಟ್ಟಲು
ದಾರಿಗುಂಟ ಮನಸು ದುಗುಡಗೊಳಿಸಿ,
ಮನೆಯ ಗೆದ್ದು ಬಳಿಕ ಮಾರು ಗೆದಿಯಬೇಕು, ವಿಶ್ವ

೧೪೦೫ ಫಲವಿರದ ಕಾರ್ಯ ಪ್ರಯತ್ನಿಸರು ಯಾರು,
ನುರಿತ ಬುದ್ಧಿ ಜನರು ನಿಜವಿದಷ್ಟೇ?
ಫಲವು ಒಳ್ಳಿತಿರಲು ಪರದಡಿ ಮುದವುಂಟು, ವಿಶ್ವ

೧೪೦೬ ಸಾಗಿ ಹೋಗುತಿಹವು, ಸಕಲ ಕಾರ್ಯಗಳು,
ವ್ಯರ್ಥ ಉಸಿರು ಬಿಟ್ಟು ವರ್ತಿಸುವರು,
ಹೋಗುವವರ ಕೊನೆ ಆಗದೊಂದೆ ಸಾಕು.
ಧನವು ಎಷ್ಟಿರಲೇನು ಧರಣಿಲಿ ವೇಮ?

೧೪೦೭ ದಮ್ಮು ರೋಗ ಬರಲು ಚಡಪಡಿಸುವೆಮ್ಮೆಗೆ
ಗಾಳಿ ಬೀಸಿದೊಡನೆ ಬದುಕುತಿಹುದು,
ವಾತರೋಗದೆಮ್ಮೆ ಹಾಲು ಹೇಸಿಯಹುದೆ? ವಿಶ್ವ

## ಸಭಾ ಪರಿಜ್ಞಾನ

ಕೆಲಸದಲ್ಲಿ ಆಸಕ್ತಿ ಇದ್ದರೆ, ಅದು ಸಲೀಸಾಗಿ ನೆರವೇರುತ್ತದೆ. ಭಕ್ತಿ ಇದ್ದರೆ ಪೂಜೆ ಸರಿಯಾಗಿ ಸಾಗುತ್ತದೆ. ಅದೇ ರೀತಿ ಯುಕ್ತಿ ಇದ್ದ ಮಾತು ಜಗತ್ತಿನಲ್ಲಿ ಒಪ್ಪವೆನಿಸುತ್ತದೆ.

ತನಗೆ ವಿದ್ಯೆ ಇಲ್ಲವಾದರೆ, ಅಂಥವನು ರಾಜ ಸಭೆಯಲ್ಲಿ ಇದ್ದರೇನು? ಪಂಡಿತನೆನಿಸನಲ್ಲವೇ? ಕೊಳದಲ್ಲಿ ಇದ್ದ ಮಾತ್ರಕ್ಕೆ ಬಕವು ರಾಜಹಂಸವೆನಿಸೀತೇ?

ಬಾಯಲ್ಲಿ ಎಲೆ ಮೆಲ್ಲುವವನೇ ಇರಲಿ; ಒಂಟಿ ಗಾಲಿನವನೇ ಇರಲಿ; ಚತುರಮತಿಯಾಗಿದ್ದರೆ, ರಾಜ ಸಭೆಯಲ್ಲಿ ರಾರಾಜಿಸುತ್ತಾನೆ.

ದೇಶ ಮೆಚ್ಚಬೇಕಾದರೆ ಭಾಷೆಯಾಡಲೇ ಬೇಕು. ಆದರೆ ಪ್ರತಿಷ್ಠೆಯರಿತು ಭಾಷೆಯಾಡಬೇಕು. ಭಾಷೆಯ ಘನತೆಯನ್ನು ಅರಿತು ಈಶನೂ ಮೆಚ್ಚುತ್ತಾನೆ.

**೧೪೦೮ ಶಕ್ತಿ ಇರುವ ಕಾರ್ಯ ಚೊಕ್ಕ ನೆರವೇರುವುದು,**
**ಭಕ್ತಿ ಇರುವ ಪೂಜೆ ಫಲವೀವುದು,**
**ಯುಕ್ತಿ ಇರುವ ಮಾತು ಒಪ್ಪವಿಹುದು ಜಗದಿ. ವಿಶ್ವ**

**೧೪೦೯ ರಕ್ತಿ ಇರದ ಕಾರ್ಯ ರಮ್ಯವಾಗಿ ಇಹುದೆ?**
**ರಕ್ತಿ ಹೊಂದಿರುತಿರೆ ರಾಜಗೆ ಮೆಚ್ಚು.**
**ರಾಜ ರಕ್ತಿ ಸಂದು ರಮಣನು ಮೆಚ್ಚುವನು. ವಿಶ್ವ**

**೧೪೧೦ ವಿದ್ಯೆ ಇರದೆ ವಿಬುಧ ಸಭೆಗಳೊಳಿರಲೇನು?**
**ಪಂಡಿತ ತಾನೆಂತು? ತಿಳಿದು ನೋಡೆ,**
**ಕೊಳದಿ ಹಂಸ ಮತ್ತೆ ಬಕಗಳಿಪ್ಪ ರೀತಿ, ವಿಶ್ವ**

**೧೪೧೧ ಬಾಯೊಳೆಲೆಯ ಮೆಲುವ ಬಳಬಳ ಶಿರದವನು,**
**ಒಂಟಿಗಾಲಿನಾತ ಒಪ್ಪವಿಹನು,**
**ರಾಜ ಸಭೆಗಳೊಳಗೆ ರಾಜಿಸುತಿಹನಂತೆ, ವಿಶ್ವ**

**೧೪೧೨ ಭಾಷೆಯಾಡದಿರಲು ದೇಶ ಮೆಚ್ಚದಯ್ಯ,**
**ಭಾಷೆಯಾಡುವಾಗ ಪ್ರತಿಷ್ಠೆಯರಿತು**
**ಭಾಷೆ ಹಿರಿಮೆಯರಿದು, ಈಶನರಿಯಬೇಕು, ವಿಶ್ವ**

●●●

# ೮. ಅರ್ಥವರ್ಗ

## ರಾಜ್ಯ ವಿಭಾಗ

**ಹಾಯಾಗಿರಲು ಇಹದಿ ಹೇಮಕಾರಕ ವಿದ್ಯೆ**
**ಪರದಲ್ಲಿ ಸುಖಿಸಲು ಬ್ರಹ್ಮ ವಿದ್ಯೆ,**
**ಅನ್ಯ ವಿದ್ಯೆಯೆಲ್ಲ ಅಂತೆ ನಿಷ್ಫಲವದು,**
**ವಿಶ್ವದಾಭಿರಾಮ ಕೇಳು ವೇಮ.**

●

## ಧನ ಸಂಚಯ

ಗೃಹಸ್ಥನಾದವನಿಗೆ ಧನ ಸಂಚಯವು ಬೇಕೇ ಬೇಕು. ಈ ಎಲ್ಲ ಗುಣಗಳೂ ಕಾಂಚನವನ್ನೇ ಆಶ್ರಯಿಸುತ್ತವೆ ಎಂಬ ನಾಣ್ಣುಡಿಯೂ ಇದೆ. ಈ ಲೋಕದಲ್ಲಿ ಹಾಯಾಗಿ ಇರಬಲ್ಲವನೇ ಪರದಲ್ಲಿಯೂ ಸುಖ ಹೊಂದಿ ಇರಬಲ್ಲನು.

ಎಲ್ಲಿಯವರೆಗೆ ಐಹಿಕ ಬೇಡಿಕೆಗಳ ದಾಹ ಇದೆಯೋ ಅಲ್ಲಿಯ ವರೆಗೆ ಧನ ಸಂಚಯವು ಬೇಕೇ ಬೇಕು. ಚೆನ್ನಾಗಿ ಅಟ್ಟ ಅಡುಗೆ ಕಂಪಾಗಿ ಇರುತ್ತದೆ. ಹೊಟ್ಟೆ ತುಂಬಿದರೆ ಅದೇ ತಿಂಡಿ ಮೃತ್ಯುಕಾರಿಯಾಗುತ್ತದೆ. ಆ ರೀತಿ ಐಹಿಕ ಬೇಡಿಕೆ ತೀರಿದವನಿಗೆ ಧನ ಸಂಚಯವು ಓಕರಿಕೆ ತರಿಸುತ್ತದೆ.

ನರನು ಜನಿಸುವಾಗ ತಗೆದುಕೊಂಡು ಬರುವುದೇನು? ಸಾಯುವಾಗ ಹೊತ್ತುಕೊಂಡು ಒಯ್ಯುವದೇನು? ತಾನು ಮಾಡಿದ ಕರ್ಮಗಳ ಸಂಸ್ಕಾರಗಳ ಗಂಟನಲ್ಲವೇ? ಅಲ್ಲಿ ಧನಕ್ಕಾವ ಸ್ಥಾನವೂ ಇಲ್ಲ.

ಇಹದಲ್ಲಿ ಹಲವಾರು ಬಗೆಯಾಗಿ ಹಣ ಗಳಿಸುತ್ತಾನೆ ನಿಜ. ಅದಕ್ಕಾಗಿ ಮೋಸವಂಚನೆಗೂ ಇಳಿಯುತ್ತಾನೆ. ಕಳ್ಳತನ ಮಾಡಲೂ ಹೇಸುವುದಿಲ್ಲ. ಸಂಪತ್ತು ಗಳಿಸಿದರೆ ಸಾಕು, ಎಲ್ಲವೂ ಸಾಧ್ಯವಾದಂತೆನಿಸುತ್ತದೆ. ಧನ ಹೆಚ್ಚಾದಂತೆಲ್ಲ ಮದವೂ ಹೆಚ್ಚಾಗುತ್ತದೆ. ದುರ್ಗುಣಗಳು ಹೆಚ್ಚಾಗುತ್ತವೆ. ಧನ ಇಲ್ಲವಾಗಲು ಮದವು ಅಳಿಯುತ್ತದೆ. ದುರ್ಗುಣಗಳೂ ಅಳಿಯುತ್ತವೆ.

ಸಂಪದವು ಕಣ್ಣುಪರಿಯಂತೆ, ಮದಮೇಲಿಸಿ ಕಾಣಗೊಡದು. ಪರಿ ತೆಗೆದೊಡನೆ ಕಣ್ಣು ಸರಿಯಾಗಿ ಕಾಣುತ್ತವೆ. ಅದೇ ರೀತಿ ಸಂಪದ ತೀರಿದಾಗ

ಸರಿಯಾದ ದೃಷ್ಟಿ ಮರಳುತ್ತದೆ. ಹಾಗಾದರೆ, ಧನವು ಬೇಡವೇ? ಹಾಗೇನಿಲ್ಲ; ಧನವಿಲ್ಲದಿದ್ದರೆ, ಮಕ್ಕಳೇ ದೋಷ ಕಾಣುತ್ತಾರೆ. ಪತ್ನಿಯೂ ಹತ್ತಿರ ಬರಗೊಡಳು, ಧನವಿಲ್ಲವಾದರೆ ಬಾಳಿನಲ್ಲಿ ತಾಳಿಕೆ ಇಲ್ಲ. ಎಲ್ಲಿಯವರೆಗೆ ಈಷಣತ್ರಯಗಳಲ್ಲಿ ಮನವು ಆಸಕ್ತವಾಗಿರುವುದೋ, ಅಲ್ಲಿಯ ವರೆಗೂ ಧನವೂ ಬೇಕೆನಿಸುತ್ತದೆ.

೧೪೧೩ ಇಹದ ಒಳಗೆ ಸುಖವು ಇಂಪಾಗಿ ಇರದನಕ,
ಪರಮದಲ್ಲಿ ಸುಖವ ಪಡೆವುದೆಂತು?
ಧನವು ಇರದೆ ಸುಖವು ತನಗೆ ದೊರೆವುದೆಂತು? ವಿಶ್ವ

೧೪೧೪ ಅಡುಗೆ ಚೆನ್ನಾಗಿರೆ ಅಮೃತದಂತೆ ಅಹುದು,
ನೋಡಲಿಂಪು ಕಂಪು ಅಪ್ಪುವದುವೆ,
ಒಡಲು ತುಂಬಿ ಮೀರೆ ತಿಂಡಿ ಮೃತ್ಯುವಹುದು, ವಿಶ್ವ

೧೪೧೫ ಹಾಯಾಗಿರೆ ಇಹದಿ ಹೇಮಕಾರಕ ವಿದ್ಯೆ,
ಪರದಲ್ಲಿ ಸುಖಿಸಲು ಬ್ರಹ್ಮವಿದ್ಯೆ,
ಅನ್ಯ ವಿದ್ಯೆಯೆಲ್ಲ ಅಂತೆ ನಿಷ್ಫಲವ! ವಿಶ್ವ

೧೪೧೬ ಧನವು ಇರದೆ ಗುಣವು ತಕ್ಕದೆನಿಸದಲ್ಲ!
ಧನವು ಇರದೆ ಕೀರ್ತಿ ತೊಲಗಿ ಹೋಯ್ತು,
ಧನವು ಇರದೆ ಶುಚಿಯು ತಾನು ಹುಟ್ಟಿ ಬರದು ವಿಶ್ವ

೧೪೧೭ ತೇಟ ಓರೆಗಣ್ಣಲಿ ಸಂಪದ ಒಂದು ಬಾರಿ
ಕಂಡರಾಯ್ತು; ಕಾಮಿಸಿ ಕಾಂಕ್ಷೆ ಹೊಂದುವ,
ಕಾಣು ಅನ್ಯರ ಸತಿಯೆ ಕಾಣುವಂತೆ
ರಕ್ಷಣೆಯ ನೀಯುವುದು, ಎಲ್ಲರಿಗೂ ವೇಮ

೧೪೧೮ ಧನವೇ ಮೂಲವು ಜಗಕ್ಕೆ,
ಧನವೇ ಮೂಲವು ಸಕಲ ಧರಮಕ್ಕೆ ನೋಡಾ,
ಗುಣವೇ ಮೂಲವು ಸಿರಿಗದು,
ಮನವೇ ಮೂಲವು ಮುಕ್ತಿಯ ಮಹಿಮೆಗೆ ವೇಮಾ.

— — — — — — — — — — — — — — — — — — — — — —

೧೪೧೯ ಧ್ಯಾನ ಹಾಳಾಗಲು ತಾನು ಹೊಂದನೆ ಕೇಡು?
ಧ್ಯಾನ ಹೊಂದೆ ಹೋಯ್ತು ದಾರಿದ್ರ್ಯವು
ಧ್ಯಾನ ಹೊಂದದವರು ದಾಸಿಯ ನೆರಳಾಗಿ
ಗೋಳು ಪಡುವರು ಕೊನೆಗೆ ವೇಮ

೧೪೨೦ ಸತಿಗೆ ಪತಿಗೆ ತಕ್ಕ ಸಂಪದವೆ ಸಂಪದ,
ಸುತರ ಸಂಪದವದು, ಜಗದಿ ಮೇಲು,
ಸರನೆ ಮುದಿತನ ಬರೆ, ಸಂಪದವೆ ಸಂಪದವು, ವಿಶ್ವ

೧೪೨೧ ಏನು ಕೊಟ್ಟು ಬಂದೆ? ಏನು ಕೊಂಡೊಯ್ಯುವೆ?
ಜನಿಸುವಾಗ ನರನು ಸಾಯುವಾಗ,
ಧನವೆಲ್ಲಿ ಹೋಹುದೊ? ತಾನೆಲ್ಲಿ ಹೋಹನೊ? ವಿಶ್ವ

೧೪೨೨ ಇಟ್ಟು ಹೋಗುವವಗೆ ಒಟ್ಟು ಸೌಖ್ಯ ಹೆಚ್ಚು;
ಅಂಗನೆ ಸತ್ತ ರೀತಿ; ಅದುವೆ ಹೊರತು,
ಇರುವನಲ್ತೆ ಶಿವನು ಯೋಗಿಯಹನ ಬಳಿಗೆ? ವಿಶ್ವ

೧೪೨೩ ಧೈರ್ಯಯುತನಿಗಿತರ ಧನವಿರಲದುರುವನೆ?
ದಾನವೀಯಲಾಗ ತನಗೆ ಇಹುದು.
ನೆಲೆಯ ಮೀರಿ ಶ್ರಮವನಾರು ಮಾಡಬಹುದು? ವಿಶ್ವ

೧೪೨೪ ದೆಶೆಯು ಬಹಳೆನುವರು, ಧನವು ಇರುವುದೆನಲು;
ಕೂಳು, ನಿದ್ರೆಯಿರದೆ, ಕುಳಿತು ಬಿಟ್ಟು,
ಬಂದುದ ಇದ್ದು ಹೋಹ; ಬವಣೆ ಬಹಳವಿಹುದು, ವಿಶ್ವ

೧೪೨೫ ಕೆಡುಕು ಬುದ್ಧಿ ಇರಲಿ, ಕಳ್ಳತನವೆ ಇರಲಿ,
ಸಟೆಯೆ ಇರಲಿ, ಸಾಹಸಗಳೆ ಇರಲಿ,
ಸಂಪದವಧಿಕವಿರೆ, ಸಾಧಿಪ ಸಲೆಯೊಪ್ಪು, ವಿಶ್ವ

೧೪೨೬ ಧನವು ಇರುವ ನರನು ತಾ ಕಾಣ ಮದದಲಿ,
ಇಲ್ಲದವನು ಮೊದಲೆ ಇಟ್ಟೇಯಿಲ್ಲ
ಸಿರಿತನ ಬಡತನವು ಇರದ ಕಾಲವಿಹುದೆ? ವಿಶ್ವ

೧೪೨೭ ಧನ ಹೆಚ್ಚಲು ಮದ ಹೆಚ್ಚಿತು,
ಮದ ಹೆಚ್ಚಲು ದುರ್ಗುಣಗಳು ಮಾಣದೆಯಧಿಕಂ,
ಧನ ಉಡುಗಲು ಮದ ಉಡುಗಿತು,
ಮದ ಉಡುಗಲು ದುರ್ಗುಣಗಳು, ಮಾಯವು, ವೇಮಾ.

೧೪೨೮ ಕಣ್ಣು ಪರಿ ರೀತಿ ಸಂಪದ,
ಚಣ್ಣನೆ ಸರಿವುದು, ಕೆಲ ದಿನ ಕಾಣಿಸಿ ಬೆಳಕಂ
ಬಣ್ಣಿಸೆ ತಿಂಗಳು ನಿಶೆ ಸಮ,
ಅಣ್ಣ! ಶಿವಲಿಂಗ ಮಾಯೆ! ಅಖಿಲ ವೇಮಾ

೧೪೨೯ ಕೋಟೆಯ ಸಂಪಾದಿಸಿಯೂ,
ಊಟಕೆ ಸರಿಹೋಯ್ತು; ಬದುಕು, ಹಿಂಡಾಗಳಿವರ್
ಕಾಟದ ಸಂಸಾರವೇಕೆ?
ಬೇಟವು ನಿನ್ನೊಡೆ ಆದಂದೆ ಸುದಿನ ವೇಮಾ:

೧೪೩೦ ದೈವ ಕಂಟಕಾಯ್ತು, ಧನದಿ ಗರ್ವ ಹೊಂದಿ,
ಸಕಲ ಸಂಪದವನು ಸವೆಸಿ ಕೆಡಿಸಿ,
ಕಡೆಗೆ ತಾನು ಮೇಲು ಕಾಣದೆ ಸಾಯುವನು, ವಿಶ್ವ

೧೪೩೧ ಧನವಿರದಿರೆ ಸುತರು ತಪ್ಪನೆಣಿಸುತಿಹರು,
ಧನವಿರದಿರೆ ಪತ್ನಿ ತಟ್ಟಗೊಡಳು,
ಧನವಿರೆ ಯಾರಿಗೂ ತಾಳಿಕೆ ಬರಬಹುದು, ವಿಶ್ವ

೧೪೩೨ ದ್ರವ್ಯ ಹೀನನಾಗೆ, ಬಂಧು ವೈರಿಯಹರು,
ದ್ರವ್ಯ ಹೀನನಾಗೆ, ಪರವು ಸಿಗದು,
ದ್ರವ್ಯ ಹೀನನಾಗೆ ಪತ್ತು ತಪ್ಪದೇನು? ವಿಶ್ವ

೧೪೩೩ ಧನವು ಇಲ್ಲವೆನಲು, ದಾವಾನಲವಯ್ಯ;
ಕೆಡುವ ಮಿಥ್ಯವಾಡಲೇಕೆ? ಮನವು ಕಾಣದಿತ್ತ,
ಸೊತ್ತು ಬಡತನದಲಿ ಸೇರಿಯುಂಟು;
ನೀರು ಕಾಲುವೆಯಲಿ ಏರಿ ಇಳಿದ ರೀತಿ! ವಿಶ್ವ

---

೧೪೩೪ ಸಲ್ಲದವನ ಕೈಗೆ ಕಾಸುವೀಸು ಕೊಟ್ಟು,
ಅಲ್ಲಿ ನೋಡದಿಹುದು, ಹುಚ್ಚುತನವು.
ಕೋಳಿ ಹಿಡಿದ ಬೆಕ್ಕು, ಕೂಗಲೋಗೊಡುವುದೆ? ವಿಶ್ವ

೧೪೩೫ ಮನದಲಿ ಹಲ ಕಾಸು, ಮಡಗಿರುವದ ಕಂಡು,
ಕಡೆಗೆ ಎತ್ತದಿರನು ಕಷ್ಟ ಜೀವಿ,
ಕಾಸಿನಾಸೆಯಿಂದ ಕಡೆಗಾಣುವುದೆ ವಿರಳ! ವಿಶ್ವ

೧೪೩೬ ಪರರ ಮೋಸಗೊಳಿಸಿ, ಪರ ಧನವನಾಶಿಸಿ,
ಹೊಟ್ಟೆ ಹೊರೆಯುತಿಹುದು ಹೊಲ್ಲ ನೋಡು
ಋಣವ ಮಾಡೆ ಮನುಜ ವೃದ್ಧಿ ಹೊಂದಬಹುದೆ? ವಿಶ್ವ

೧೪೩೭ ಹಾಲಸಾಗರದೊಳು ಹಾಯಾಗಿರುವ ಹರಿ,
ಗೊಲ್ಲ ಕರೆದ ಹಾಲು ಕೋರುತಿಹನು,
ಎಲ್ಲರು ಪರಧನಕೆ ಕರವನೊಡ್ಡುತಿಹರು, ವಿಶ್ವ

೧೪೩೮ ಕಾಂಚನಾದಿ ಮೇಲೆ ಕಾಂಕ್ಷೆ ಮೋಹವೆಂದು,
ಬಿಡರು, ಮತ್ತೆ ಅಂಥ ಬುಧರು ಕೂಡ,
ಕಾಂಕ್ಷೆಯಿಲ್ಲದವರು ಕಾಣಬಾರರಲ್ಲ; ವಿಶ್ವ

೧೪೩೯ ಸ್ಪಷ್ಟವರಿಯದೆ ಸಕಲ ಸಂಪದ ಸ್ವಾರಸ್ಯ,
ವಂಚನೆಯಿಹ ಬಾಳು ಒಣಗಿ ಹೋಯ್ತು,
ಸಮವು ಇರದ ಬದುಕು, ಚೊಕ್ಕಟಾಗಿ ಇಹುದೆ? ವಿಶ್ವ

೧೪೪೦ ಅನ್ನ ಜೀರ್ಣಿಸದಗೆ ಅನ್ನ ನೀಡಲಾಗ,
ಬೀಸಿ ಒಗೆವನದರ ಫಲವು ಏನು?
ಧನಿಕಗಿತ್ತ ದಾನ ಅಂತೆ ಇಹುದು ನೋಡು. ವಿಶ್ವ

೧೪೪೧ ಗಣಿಯೊಳಗೆ ಹುಟ್ಟುವ ಲೋಹಗಣದೊಳೆಲ್ಲ,
ಗಣನೆಯತಿ ಕಬ್ಬಿಣ ಬಳಕೆಗೆಂದು,
ತೃಣವೆನಿಪುದದುವೆ ವಿಪುಲವಾಗಿ ದೊರೆಯೆ, ವಿಶ್ವ

**೧೪೪೨ ಹೊನ್ನ ಜಿಂಕೆ ಜಗದಿ ಇಹುದಿಲ್ಲವರಿಯದೆ,**
**ದಾರೆ ನುಡಿಯೆ, ನಡೆದ ದಾಶರಥಿಯು,**
**ದೇವನಾದರೇನು? ಧನದ ಮೋಹವಿರದೆ? ವಿಶ್ವ**

●

## ಧನದ ಮದ

ಅಷ್ಟಮದಗಳಲ್ಲಿ ಧನದ ಮದವು ತುಂಬಾ ಪ್ರಭಾವ ಪೂರ್ಣವಾದುದಾಗಿದೆ. ದೊಡ್ಡ ಮನೆ ಕಟ್ಟಿ, ಸುತ್ತಲೂ ಕಂಪೌಂಡ ಗೋಡೆ ಕಟ್ಟಿ, ಹೂವಿನ, ತೊಪ್ಪಲದ ಗಿಡಬಳ್ಳಿಗಳನ್ನು ಹಬ್ಬಿಸಿ ಬೀಗುವವನಿಗೆ ಮುಂದೆ ಸಾವು ಕಾಯ್ದಿದೆ, ಎಂಬುದರ ಪರಿವೆಯೇ ಇರದು. ಅವನಿಗೆ ಸಿರಿ ಸಂಪದದ ಭೋಗದಾಸೆಯೇ ಎದ್ದು ಕಾಣುವುದೇ ಹೊರತು ಮುರಹರನ ಧ್ಯಾನದತ್ತ ಲಕ್ಷ್ಯ ಹರಿಯದು.

ಧನದಿಂದ ಮತ್ತನಾದವನಿಗೆ ಕಣ್ಣಿದ್ದರೂ ಮದದಿಂದ ಸರಿತಪ್ಪು ಅರಿಯನು. ಕಿವಿಯಿದ್ದೂ ಕೇಳಲಾರನು. ಅವನು ಸನ್ನಿಪಾತ ರೋಗಿಯಂತೆ ಆಗುತ್ತಾನೆ.

ಸಿರಿವಂತ ಮನುಷ್ಯನು ಸಾಮಾನ್ಯ ಜನರೊಡನೆ ಸಖ್ಯ ಹೊಂದಲು ಹಿಂಜರಿಯುತ್ತಾನೆ. ತಾನು ಇತರರಿಗಿಂತ ಮೇಲು ಎಂದು ತಿಳಿದು ತಾರತಮ್ಯ ಮಾಡುವುದೇ ಪಾಮರನ ಗುಣವಲ್ಲವೇ? ತನಗಿಂತ ದೊಡ್ಡವರು ಏನೆಂದು ಕೊಂಡಾರು? ಎಂಬ ಅಳುಕು ಬೇಡವೇ? ಎಲ್ಲಕ್ಕಿಂತ ಮಿಗಿಲಾಗಿ ಈಶ್ವರನ ದೃಷ್ಟಿಯಲ್ಲಿ ತಾನೆಂಥ ಪಾಮರನು? ಎಂಬ ತಿಳಿವಳಿಕೆ ಮೂಡಬೇಡವೇ?

ಜನರ ಕಣ್ಣಲ್ಲಿ ಸಿರಿವಂತನೆಂದು ಕಾಣಿಸಿಕೊಳ್ಳಲು, ವೇಷಭೂಷಣ ಧರಿಸುತ್ತಾನೆ. ದೊಡ್ಡವರೊಂದಿಗೆ ಅಸಡ್ಡೆಯಿಂದ ವರ್ತಿಸುತ್ತಾನೆ. ಕೀಳು ನಾಯಿಗೆ ಮೇಲು ಕುಲದ ಅರಿವು ಬಾರದು. ಅದು ಎಂಥವರ ಮನೆಯಲ್ಲಿದ್ದರೂ ಹೇಸಿಗೆ ತಿನ್ನಲು ಹೋಗುವಂತೆ, ಧನಿಕನ ಮನಸ್ಸು.

ಎಲ್ಲರೂ ಧನವನ್ನೇ ನೋಡುತ್ತಾರೆ. ತಾಯಿಯ ಮಮತೆಯನ್ನು ಮರೆಯುತ್ತಾರೆ. ಧನವೇ ತಾಯಿ ತನಯರಲ್ಲಿ ತಂಟೆ ಹುಟ್ಟಿಸಲು ಕಾರಣವಾಗುತ್ತದೆ.

**೧೪೪೩ ಸುತ್ತು ಗೋಡೆ ಕಟ್ಟಿ, ಗಿಡಗಂಟಿಯ ಕೊಚ್ಚಿ,**
**ಅಂಥ ಇಂಥ ದೊಡ್ಡ ಮನೆಯ ಕಟ್ಟಿ,**
**ಅತಿ ಬೀಗುತಿರುವನ ಅರಿಯೆ ಮುಂದೇನೊ? ವಿಶ್ವ**

**೧೪೪೪ ಕಣ್ಣ ಸೊಕ್ಕಿನಲಿ ಕಾಣನು ಮರಣವನು,**
**ಮದವ ಹೊಂದಿ ತತ್ತ್ವ ಮಹಿಮೆ ಕಾಣ,**
**ಭೋಗದಾಸೆಯಿಂದ ಪುರಹರನ ಕಾಣರು; ವಿಶ್ವ**

೧೪೪೫ ಕನಕ ಉಳ್ಳ ನರನು ಕಾಣನು ಮದದಿಂದ,
ಇಲ್ಲದವಗೆ ಮೊದಲೆ ಈಯದಿರಲು,
ಕನಕವಿಲ್ಲದಿರುವ ಕಾಲ ಕೊಡಲು ಬಹುದೆ? ವಿಶ್ವ

೧೪೪೬ ಕಂಡು ಕಾಣಲಾರ, ತುಟಿ ಕದಲಿಸಲಾರ,
ಕೇಳಿ ಕೇಳದಂತಿಹ ವಿಸ್ಮಯದಿ!
ಸಂಪದವಿರುವವನ ಸನ್ನಿಪಾತಕವದು, ವಿಶ್ವ

೧೪೪೭ ತೋಳ್ಬಲವಿರೆ ಕಾಣಲಾರ ಮರಣ,
ತನುಮದದೊಳು ತಾನು ತತ್ತ್ವವರಿಯ,
ಭೋಗದಾಶೆಯಿಂದ ಪುಣ್ಯ ಕಾಣಲಾರ. ವಿಶ್ವ

೧೪೪೮ ಕನಕವಿಪ್ಪ ಕಾಲ ಕಠಿಣ ಭಾವ ತಾಳಿ,
ತಿಳಿಯಲಾರರು ಜನ ತಿಳಿವುಗೆಟ್ಟು.
ಕನಕ ಜೊನ್ನಿನಂತೆ ಕಾಣದಿರುವರಲ್ಲ: ವಿಶ್ವ

೧೪೪೯ ಧನದ ಮದವು ತುಂಬಿ ದೈವವನು ಕಾಣರು,
ಕುಟಿಲ ಭಾವವುಳ್ಳ ಕ್ರೂರ ಜನರು.
ಮದವು ಮೀರಿದಾಗ ಮನ್ನಣೆಯು ಉಳಿಯದು, ವಿಶ್ವ

೧೪೫೦ ಸಂತಸ ಧನಕಾಂಕ್ಷೆ ಸೇರಿ ತನ್ನನರಿಯೆ,
ಕಣ್ಣು ಕಾಣವಲ್ಲ ಗರ್ವದಲ್ಲಿ.
ಪುಟ್ಟಿ ಕೆಡುವನಂತೆ; ಬುದ್ಧಿ ಹೀನನವನು,
ಬೇಡ ಹೋಗೆ ಕಷ್ಟ ಬರಿದೆ ವೇಮ.

೧೪೫೧ ಕಣ್ಣಿದ್ದು ಕಾಣಲಾರದು,
ಕೇಳುತಿರಲು ಕೇಳಲಾರ ವಿಸ್ಮಯವಿದುವೇ!
ಕಂಡು ಕುರುಡ; ಕೇಳಿ ಕಿವುಡ; ಅಯ್ಯ
ಸಾಗಿದೆ. ಇದು ನಿಜವು, ಜಗದಲಿ, ವೇಮಾ.

೧೪೫೨ ಧನವು ಇರುವ ನರನು ಕಾಣ ಮದದಲಿ,
ಇಲ್ಲದವನು ಮೊದಲು ಇಟ್ಟೆ ಇಲ್ಲ.
ಸಿರಿತನ ಬಡತನವು ಇರದ ಕಾಲವಿಹುದೆ? ವಿಶ್ವ

೧೪೫೩ ನಯುನವಿದೆ ನೋಡಲಾರ ವಿ–
ಸ್ಮಯವದ! ಕಿವಿಯಿರಲು ಕೇಳಲಾರ, ಜಗದೋಳ್
ಬಯಸಲು ನೋಡೆ ಕುರುಡ,
ರಮಿಸಲು ಕೇಳೆ ಕಿವುಡ; ನಿಜವಿದು ಸಕಲ ವೇಮಾ

೧೪೫೪ ಶ್ರೀಮಂತರಾಗಿರುವವರು,
ಸಾಮಾನ್ಯ ಜನರೊಡನೆಂತು ಸಖ್ಯತೆ ನೋಳ್ಪರ್?
ಪಾಮರ ಗುಣವಾಗದೇನು,
ತಾ ಮೇಲೆಂದು ತಿಳಿಯುವುದು? ತಪ್ಪದು, ವೇಮಾ.

೧೪೫೫ ಎಣ್ಣೆಯಿಪ್ಪ ದೀಪ, ತೊಳಗಿ ಬೆಳಗುತಿಹುದು,
ಹೊನ್ನು ಉಳ್ಳವನ ವಿಚಾರ ಮಾನ್ಯ,
ಹೊನ್ನು ಇಲ್ಲದನ ಹೊಂಚು ತೀರಿ ಹೋಯ್ತು, ವಿಶ್ವ

೧೪೫೬ ಮಂದಿ ತನ್ನ ಕಂಡು, ಮೆಚ್ಚಲಾರರೆಂದು,
ಮುತ್ತು ಒಡವೆ ತೊಟ್ಟು, ಚೆಲುವು ಮೀರಿ
ಹೆರವರಿಚ್ಚೆ ತಣಿಸೆ ಹರುಷದುಬ್ಬುತಿಹನು! ವಿಶ್ವ

೧೪೫೭ ಚಂಚಲ ಮತಿಯಧಿಕ ಕಾಂಚನ ಪಡೆದೊಡನೆ,
ದೊಡ್ಡ ಜನಕಸಡ್ಡೆ ಮಾಳ್ಪ ಸತತ,
ಕೀಳು ಜಾತಿ ನಾಯಿ ಮೇಲು ಕುಲವರಿವುದೆ? ವಿಶ್ವ

೧೪೫೮ ಅರಿವು ಹೊಂದಿದವರು, ನೆರೆ ಯೋಧರಿಹರು,
ವಿದ್ಯೆಯಿಂದ ಸೊಕ್ಕಿ ಬೀಗುವವರು
ದುಡ್ಡು ಹೊಂದಿದವನ ದಾಸಿಯ ಮಕ್ಕಳೇ. ವಿಶ್ವ

೧೪೫೯ ತಾಯಿ, ತನಯರಲ್ಲಿ ತಂಟೆಹುಟ್ಟಿಸುವುದು,
ಧನವು ಸೌಖ್ಯದೊಡನೆ ಇರದೆನುವರು,
ಕನಕ ಗಳಿಕೆಯುಳಿದು ಕಾಲ ಕಳೆವುದೆಂತು? ವಿಶ್ವ

೧೪೬೦ ಕನಕ ಕಂಡು ಮತ್ತೆ ಮಿನ್ನ ಕಾಂತೆ ಕಂಡು,
ಹದುಳ ಹುಟ್ಟದಿಹುದೆ ಆರು ಏನು?
ಮಿರುಗು ಕಣ್ಣ ಹೆಣ್ಣು ತೊರೆವ ಅಣ್ಣರಾರು? ವಿಶ್ವ

**೧೪೬೧ ದುಡ್ಡು ಉಳ್ಳ ನರನ ಗಿಡ್ಡ ಹುಣ್ಣು ಕೂಡ,**
**ಪೊಡವಿಯೊಳಗೆ ದೊಡ್ಡ ಸುದ್ದಿಯಹುದು,**
**ಬಡವನ ಮನೆ ಮದುವೆ ಕೇಳರಾರು. ವಿಶ್ವ**

**೧೪೬೨ ದೆಶೆಯು ತಿರುಗಲವನ ಬಂಧು ತಮಗೆಂಬರು.**
**ದೆಶೆಗೆಡಲು ರಕ್ತದಿ ಅವನೆ ಕೀಳು,**
**ದೆಶೆ ತಿಳಿದೊಡೆ ಧನ ದೆಶೆಯೊಂದೆ ಕಾಣೆಭೋ. ವಿಶ್ವ**

**೧೪೬೩ ತಾಟನೋರ್ವ ಮಾಡಿ ತಕ್ಕ ಕೀರ್ತಿ ಗಳಿಸಿ,**
**ಪಲ್ಲಂಗನೊಬ್ಬ ಮಾಡಿ ಪತಿಯ ಕೂಡಿ,**
**ಸಕಲ ಸೃಷ್ಟಿ ಮಾಡಿ ಸೋವಿಯಾದನೀಶ, ವಿಶ್ವ**

●

## ವಿತರಣ

ಸಮಾಜ ಸ್ವಾಸ್ಥ್ಯಕ್ಕೆ ವಿತ್ತವಿರುವಲ್ಲಿ ವಿತರಣ ಗುಣವೂ ಅಗತ್ಯ. ಆದರೆ ವಿತರಣವು ಪಾತ್ರಾಪಾತ್ರತೆಯನ್ನು ನೋಡಿ ನಡೆಯಬೇಕು. ಶ್ರೀಮಂತನನ್ನೇ ಹುಡುಕಿ ಕನ್ನೆ ನೀಡಿದರೆ, ಹಾಲು ಉಕ್ಕಿ ಹರಿದಂತೆ ಸಂಪತ್ತು ಸೂರೆಯಾಗುವುದಷ್ಟೇ. ಧನವಿರುವವನಿಗೆ ಕನ್ನೆ ನೀಡಿ, ವರದಕ್ಷಿಣೆ ಇತ್ತರೆ, ಭಾವಿಯ ನೀರನ್ನು ಹೊಳೆಗೆ ಹರಿಬಿಟ್ಟಂತೆ. ಅದೆಲ್ಲ ವ್ಯರ್ಥ ಹೋಗುತ್ತದೆ.

ಆದ್ದರಿಂದ ಧನವನ್ನೂ, ದೊಡ್ಡಿಸ್ತಿಕೆಯನ್ನೂ ನೋಡಿ ಕನ್ನೆಯನ್ನಿತ್ತರೆ ಪುಣ್ಯ ಸಂಚಯವೇನೂ ಆಗದು. ಅದೇ ಬಡವನಾದ ಸದ್ಗುಣಿಯನ್ನು ನೋಡಿ ಕನ್ನೆ ಇತ್ತರೆ, ಅವರ ಬಾಳು ಸರಸವಾಗುತ್ತದೆ.

ವಿತರಣ ಗುಣವುಳ್ಳವನು ಸಾರಾಸಾರ ವಿಚಾರ ಮಾಡಿ, ತನ್ನ ಮತಿಗೆ ತಕ್ಕ ಚಾಲನೆ ಈಯುತ್ತಾನೆ. ಆಗ ಅವನ ನಿರ್ಣಯವು ಮಾನ್ಯವೆನಿಸುತ್ತದೆ. ತನ್ನ ವಿತರಣ ಗುಣದಿಂದ ಸಮಪಾಲು, ಸಮಬಾಳಿನ ಧ್ಯೇಯ ಸಾಧಿಸಿ ಆತ್ಮ ತತ್ತ್ವವನ್ನು ಎತ್ತಿ ಹಿಡಿಯುತ್ತಾನೆ. ಅವನಿಗೆ ಸಮತ್ತ್ವ ಕುರಿತು ಯಾವುದೇ ಸಂದೇಹಗಳು ಉಳಿಯವು.

**೧೪೬೪ ಹೊನ್ನು ಉಳ್ಳ ನರನ ಹುಡುಕಿ ನೀಡಿದೊಡನೆ,**
**ಬಾಳು ಉಕ್ಕಿ ಹಾಲು ಕುದಿಯುವಂತೆ,**
**ಒಳಗೆ ತೊಳಗಿ ಹೊನ್ನು ಒಟ್ಟು ಕುಂದದಯ್ಯ ವಿಶ್ವ**

೧೪೬೫ ಧನವಿರುವಾತಂಗೆ ಕನ್ನೆ ನೀಡುತಿಹುದು,
ಬಾವಿ ನೀರು ನದಿಗೆ ಬಿಟ್ಟ ರೀತಿ,
ನಿಂಬೆಗೆ ಜಲ ರಾಶಿ ನೀರು ಹಣಿಸಿದಂತೆ,
ಬಡವಗಿತ್ತ ಮದುವೆ ಪ್ರಬಲ ವೇಮ

೧೪೬೬ ಧನವ ಘನತೆ ನೋಡಿ, ಧನ್ಯಕಾಗಿ ಆಶಿಸಿ,
ಕನ್ನೆಯೀಯೆ ಪುಣ್ಯ ಗತಿಗಳಿರವು
ಬಡವನೆಂದೆನ್ನದೆ ಪುತ್ರಿಯನ್ನು ಕೊಡಲು,
ಹೇಳಲೇನು? ಪರಮ ಹರನು ವೇಮ

೧೪೬೭ ತನಗೆ ಬಂಧುವೆಂದು ಧನಿಕನ ಕರೆತಂದು,
ಧನದ ಮಹಿಮೆ ತೋರಿ ದಾಹವರಿತು,
ತನಯಳ ಸಿಂಗರಿಸಿ ದಕ್ಷಿಣೆಯೊಡನೀವ ವಿಶ್ವ

೧೪೬೮ ವಿತರಣ ಗುಣಿ ತಾನೆ ವಿಜ್ಞಾನ ತಪ ಮಾಡಿ,
ಮತಿಗೆ ಗತಿಯಂಟುತ ಮಾನ್ಯ ಬುದ್ಧಿ,
ಸತತವಾತ್ಮ ಕರ್ಮ ಸಂದೇಹಗಳು ತೊಲಗು, ವಿಶ್ವ

೧೪೬೯ ಕನಕ ಹೊಂದಿದವಗೆ ಕನ್ನಿಕೆ ಯೀವಾಗ
ಹರುಷಿಸುವರು ಮೂಢ ಹುಚ್ಚ ಜನರು,
ಪೂಜೆ ಫಲವು ಅಷ್ಟೆ; ಪ್ರಯತ್ನಿಸೀಯುವರೆ? ವಿಶ್ವ

೧೪೭೦ ಹದುಳವಿರದ ಹಬ್ಬ ಹಿಟ್ಟು ಮುದ್ದೆ ಕೇಡು;
ಭಕ್ತಿಯಿರದ ಪೂಜೆ, ಪತ್ರಿ ಕೇಡು;
ಪಾತ್ರವರಿಯದೀಯೆ, ಬಂಗಾರವೆ ಕೇಡು ವಿಶ್ವ

೧೪೭೧ ಕನಕವುಳ್ಳವನಿಗೆ ಕಾಣಿಕೆಯೀಯುವುದು,
ಬಾವಿ ನೀರು ನದಿಗೆ ಬಿಟ್ಟ ಹಾಗೆ,
ನಿಂಬೆಗೆ ಅತಿ ರಾಶಿ ನೀರು ಸುರುವಿದಂತೆ
ಬಡವಗೀಯೆ ಶೀಲ ಬಹಳ ವೇಮ

— — — — — — — — — — — — — — — — — — — — — —

**೧೪೭೨ ವಿತ್ತ ಓರ್ವಗಿತ್ತು ವಿತರಣ ಗುಣವನ್ನು,**
**ಮತ್ತೆ ಓರ್ವಗಿತ್ತು ಮಂದಿ ಕೆಡಿಪ;**
**ಬ್ರಹ್ಮ ಕೆಲಸವೆಲ್ಲ ಬರಿಯ ಹಾಳು ಕೆಲಸ ವಿಶ್ವ**

●

## ರಸವಾದ

'ರಸೋವೈಸಃ' ಎಂದು ಬ್ರಹ್ಮವನ್ನು ಉಪನಿಷತ್ತುಗಳಲ್ಲಿ ಬಣ್ಣಿಸಿದ್ದಾರೆ. ರಸವಾದವೆಂದರೆ ನಿಮ್ನ ಧಾತುಗಳನ್ನು ಮೇಲು ಧಾತುಗಳಾಗಿ ರೂಪಾಂತರಿಸುವಿಕೆ. ಅದರಲ್ಲೂ ಬಂಗಾರವಾಗಿ ರೂಪಾಂತರಿಸುವಿಕೆ.

ರಸವಾದವನ್ನು ಕೆಲವು ಯೋಗಿಗಳು ಕಾಯಕಲ್ಪಕ್ಕೆ ಜೋಡಿಸಿ ಅಭ್ಯಸಿಸುತ್ತಾರೆ. ದೇಹದ ಜರಾ-ಮರಣಗಳುಳ್ಳ ಜೀವಾಣುಗಳನ್ನು ಮೇಲು ಮನದ ಪ್ರಭಾವದಿಂದ ಅಮರಗೊಳಿಸುವುದು ಸಾಧ್ಯವೇ? ಎಂಬ ಸಂಶೋಧನೆಯದು. ಪಾಂಡಿಚೇರಿಯ ಅರವಿಂದ ಮಹರ್ಷಿಗಳು ಇಂಥ ಪ್ರಯೋಗದಲ್ಲಿ ವಿಶ್ವಾಸ ತಾಳಿದವರಲ್ಲೊಬ್ಬರು.

ವೇಮನ ಯೋಗಿಗಳು ಮತ್ತು ಕನ್ನಡದ ಸರ್ವಜ್ಞ ಕವಿವರ್ಯರು ರಸವಾದವನ್ನು ಬಂಗಾರ-ಬೆಳ್ಳಿ ತಯ್ಯಾರಿಕೆ ಕುರಿತು ಮಾತ್ರ ಜನರಿಗೆ ತಿಳಿಸಿದ್ದಾರೆ. ಕಾಯಕಲ್ಪವನ್ನು ಕುರಿತೂ ಪ್ರತ್ಯೇಕವಾಗಿ ಹೇಳಿದ್ದಾರೆ. ಅವರು ಸೂಕ್ಷ್ಮ ದೇಹದ ಇರವನ್ನೂ ನಂಬಿರುವರಾದರೂ ದೇಹ ತ್ಯಾಗದ ನಂತರ ಹೆಚ್ಚಿನ ಸಾಧನದ ಸಾಧ್ಯತೆಯನ್ನು ಅಲ್ಲಗಳೆಯುತ್ತಾರೆ. ಜೀವನ್ಮುಕ್ತಿಯೇ ಮುಕ್ತಿ. ವಿದೇಹ ಮುಕ್ತಿ ಎಂಬುದೆಲ್ಲ ಗೊಳ್ಳು ಹೇಳಿಕೆ, ಎಂದವರ ಮತ.

ಚೆನ್ನ ಸದಾಶಿವಯೋಗಿಗಳ 'ಶಿವಯೋಗ ಪ್ರದೀಪಿಕೆ' ಯನ್ನು ಆಧರಿಸಿ ಕನ್ನಡದಲ್ಲಿ 'ಪರಮಾರ್ಥ ಪ್ರಕಾಶಿಕೆ' ಎಂಬ ಯೋಗ ಗ್ರಂಥ ರಚಿಸಿರುವ 'ನಿಜಗುಣ ಯೋಗಿ' ಗಳು ಆ ಗ್ರಂಥದ ಪರಿಶಿಷ್ಟದಲ್ಲಿ 'ರಸಾಯನವಾದ' ಕುರಿತು ಪರಿಚಯಿಸಿದ್ದಾರೆ.

"ರಸಾಯನವಾದಿಗಳಿಗೆ ರಸಸಿದ್ಧರೆಂಬ ಹೆಸರೂ ರೂಢವಾಗಿದೆ. ಇವರು ಶಿವೋಪಾಸಕರು ಮತ್ತು ಹಠಯೋಗ ಪರಿಣಿತರು. ಮಾಧವಾಚಾರ್ಯರು ತಮ್ಮ 'ಸರ್ವ ದರ್ಶನ ಸಂಗ್ರಹ'ದಲ್ಲಿ ಈ ರಸೇಶ್ವರ ದರ್ಶನದ ಸಿದ್ಧಾಂತವನ್ನು ವಿಶದವಾಗಿ ವಿವರಿಸಿದ್ದಾರೆ. ರಸಾಯನವಾದಿಗಳು ಈ ಶರೀರವಿರುವಾಗಲೇ ಶಿವಜೀವೈಕ್ಯ ಸ್ಥಿತಿಯನ್ನು ಪಡೆಯಬೇಕೆನ್ನುತ್ತಾರೆ. ಜೀವನ್ಮುಕ್ತಿಯೇ ಅವರ ಪರಮಾರ್ಥ. ಅವರು ವಿದೇಹ ಕೈವಲ್ಯವನ್ನು ಒಪ್ಪುವುದಿಲ್ಲ. ಈ ಭೌತಿಕ ಶರೀರದ ಸ್ಥಿರತೆಯಲ್ಲಿಯೇ ಅವರಿಗೆ ಹೆಚ್ಚಿನ ಆಸ್ಥೆ. ಶರೀರವನ್ನು ರೋಗ, ಮುಪ್ಪುಗಳಿಂದ ಕೆಡದಂತೆ ಕಾಯ್ದುಕೊಳ್ಳಲು ಅನೇಕ ರಸೌಷಧಿಗಳನ್ನು ರಸಸಿದ್ಧರು ಕಂಡು ಹಿಡಿದಿರುವರು.

— — — — — — — — — — — — — — — — — — — — —

ಅವುಗಳಲ್ಲಿ ಪಾರಜವು ಶ್ರೇಷ್ಠವಾದ ರಸವಾಗಿದೆ. ಅದರ ಕ್ರಮಗತ ಸೇವನೆಯಿಂದ ಸಾಧಕನು ಪಿಂಡ ಸ್ಥೈರ್ಯವನ್ನು ಕಾಪಾಡಿಕೊಳ್ಳಬಲ್ಲನು.

**ಅಪರೇ ಮಹೇಶ್ವರಾ: ಪರಮೇಶ್ವರ ತಾದಾತ್ಮ್ಯವಾದಿನೋಽಪಿ,**
**ಪಿಂಡ ಸ್ಥೈರ್ಯ ಸರ್ವಾಭಿಮತಾ ಜೀವನ್ಮುಕ್ತಿ:**
**ಸ್ಯೆತ್ಸತೀತ್ಯಾಸ್ಥಾಯ ಪಿಂಡ ಸ್ಥೈರ್ಯೋಪಾಯಂ**
**ಪಾರಾದಾದಿ ಪದವೇದನೀಯಂ ರಸಮೇವ ಸಂಗಿರಂತೆ.**

ರಸವಾದ ಸಿದ್ಧಾಂತವು ನಿನ್ನೆ ಮೊನ್ನೆಯದಲ್ಲ. ಪ್ರಾಚೀನ ಕಾಲದಿಂದ ಪ್ರಚಲಿತವಿದೆ. ಬಲ್ಯ, ಖಿಲ್ವ ಮುಂತಾದ ಮುನಿಗಳು, ಸೋಮೇಶ್ವರಾದಿ ರಾಜರು, ಗೋವಿಂದ ನಾಯಕ, ಚರ್ವಟಿ. ಕಪಿಲ, ವ್ಯಾಲಿ, ಕಪಾಲಿ, ಕಂದಾಲಾಯನ ಮುಂತಾದ ರಸಸಿದ್ಧರು ಪ್ರಸಿದ್ಧರೆಂದು ತಿಳಿಯುತ್ತದೆ.

**೧೪೭೩ ಉಕ್ಕು ರಸವ ಬೆರಸಿ ಗರ್ವದಿ ಸಿಂಧೂರ**
**ಹರಿದಳದೊಡನುಜ್ಜಿ ಹ್ರಾಸಗೊಳಿಸದೆ,**
**ರಸವಾದವದುವೇ; ವಸುಧೆಯಲಿ ಗೆಯ್ಯರು, ವಿಶ್ವ**

**೧೪೭೪ ಉಪ್ಪು ಕಳ್ಳಿ ಹಾಲು ಊರೊಳಗಿರುವಾಗ,**
**ಕ್ಷಾಮ ಕ್ಷಾಮೆನುವರು 'ಕಾಪು' ಜನರು!**
**ಸತುವ ಮೇಳವಿಸುತ, ಸಾಧಿಸುತ ಕಾಣರೆ; ವಿಶ್ವ**

**೧೪೭೫ ಉಪ್ಪು ಹುಣಸೆಹಣ್ಣು ಊರಿನೊಳಗೆ ಇರಲು,**
**ಕ್ಷಾಮವೇಕೆ ಬಹುದು? ಕಾಪು ಜನರೆ!**
**ಹರಿದಳವರಿಯಿರೊ? ಹೆಚ್ಚು ಮಿಂಚರಿಯಿರೋ? ವಿಶ್ವ**

**೧೪೭೬ ಉಪ್ಪು ಹುಣಸೆ ಹಣ್ಣು ಊರೊಳಗಿರುವಾಗ,**
**ಕ್ಷಾಮವೆಲ್ಲಿ ಬಂತು 'ಕಾಪು' ಜನರೆ,?**
**ತಾಳಕವರಿಯರೇನು? ತವರವ ಅರಿಯರೇನು? ವಿಶ್ವ**

**೧೪೭೭ ಗಂಧಕವನು ತಂದು ಹೇಮ ಮಾಡಲರಿಯದೆ,**
**ಅಡುವ ನಿಪುಣತೆಯಿಂ, ಆಯ್ತು ಬೆಳ್ಳಿ,**
**ಸುಳ್ಳು ಅಲ್ಲ; ನಿಜವು, ಕರಕಂಠ ನಿನ್ನಾಣೆ, ವಿಶ್ವ**

೧೪೭೮ ಗಂಧಕ ಕಲ್ಲುಪ್ಪು ಕಾಸಿ ಹೊಲಸು ತೆಗೆದು,
ಹಾಲು ಕಳ್ಳಿದ್ದಲು ಹಾಕಿ ಅರ್ಥಕರ್ಥ,
ಅರೆದು ಮಾಡಲಾಗ ಆದವು ಹಲ ಬಾಣ, ವಿಶ್ವ

೧೪೭೯ ತಾಯಿ ಮೊಲೆಯ ಹಾಲು, ತನ್ನ ಬಳಿಯ ಹಾಲು,
ರುದ್ರ ವೀರ್ಯಗಳನು ಭದ್ರಗೊಳಿಸಿ,
ಅದನೆ ಭೂತಿ ಮಾಡಿ ಎರಚು ತಾಮ್ರ ಮೇಲೆ, ವಿಶ್ವ

೧೪೮೦ ತುಣುಕು ಪಕ್ವ ಕಾಯಿ ದೊಡ್ಡ ಹಾವಿನ ಪರಿ,
ಜೋಡಿಸಿಟ್ಟು ರಸವ ಸೋಂಕಿಸುತ್ತ,
ಒಂದು ವರುಷ ತಿನಲು ಉರ್ವಿ ಹೇಮ ತಾನೆ ವಿಶ್ವ

೧೪೮೧ ತುಲಸಿ ಕ್ಷಾರಗಳಲಿ, ತೂಬಿನ ನೀರನು,
ಹರಿಸಿ, ಅದರಲಿ ಕೆಟ್ಟ ಹಾಲು ಹಾಕಿ,
ಕರಗಿಸಿ, ತಾಮ್ರ ಮೇಲೆ ಕ್ರಮವಾಗಿ ಸುರಿಯಿರಿ ವಿಶ್ವ

೧೪೮೨ ನಿಂಬೆ ಹಣ್ಣು ಹುಟ್ಟೆ, ನೈಜ ರಸವು ಉಂಟು,
ಹೇಮಕಾಗಿ ಆಸೆ ಹೊಂದುತಿಹರು;
ಸತ್ವವ ಸ್ನೇಹ ಗೆಯ್ದು ಸಾಧಿಸಲಾರರೇಕೊ? ವಿಶ್ವ

೧೪೮೩ ನೀಲಿ, ಸತುವು ಎಕ್ಕಿ ಗಿಡವು
ಫಾಲಾಕ್ಷದ ರಸವುಗೂಡೆ ಭಸ್ಮವು ತಾನೈ;
ಗೋಳು ಧನಕಾಗಿ ಜಗದಲಿ,
ಕಾಳಾಸುರ ಹರನಾಣತಿ ಬೇಕೈ, ವೇಮಾ

೧೪೮೪ ಪಾದರಸವ ತಂದು ಪಾತ್ರೆಯೊಳಗೆ ಇರಿಸಿ,
ಬಹಳ ಕುದಿಸಿಯದನೆ ಬಿರಿಯಗೊಟ್ಟು,
ಬೆಳ್ಳಿ ಕರಗಿಸಿದರೆ ಬಣ್ಣ ಬಹುದೆನುವರು, ವಿಶ್ವ

೧೪೮೫ ಬಿಂದು ರಸವ ಮಾಡಿ, ಬಿಗಿ ಪಸರಿನೊಡನೆ
ಹಗಲು ರಾತ್ರಿ ಬಿಡದೆ ಮರ್ದಿಸುತ್ತ,
ಹಳೆಯ ಕುಳ್ಳು ಬಟ್ಟಿ ಪುಟವಿಟ್ಟು ನೋಡಿರೊ, ವಿಶ್ವ

೧೪೮೬ ಬೇವಿನೆಲೆಯ ತರಿದು ಬೆಳುದಿಂಗಳೊಳಿರಿಸಿ,
ಎಲೆಯ 'ಹಸಿರು' ಇಷ್ಟು ಅಮರವಾಯ್ತು,
ಮೋದ ಮುಗಿದ ಬಳಿಕ ಮತ್ತೆ ಹೇಮವಾಯ್ತು, ವಿಶ್ವ

೧೪೮೭ ಮನೆಯ ಹಿಂದೆ ಬಳ್ಳಿ, ಇಂಗಳೀಕವುಂಟು;
ಪಾದರಸವು ಉಂಟು, ಪೊನ್ನು ಇರದೆ?
ಸತುವು ಹೊಂದಿಸುತ್ತ ಸಾಧಿಸಬಹುದಲ್ಲ! ವಿಶ್ವ

೧೪೮೮ ಸಿಂಧೂರದ ಸ್ಥಿತಿಯ ಸಲೆಯರಿಯದ ಮನುಜ,
ಚಿತ್ರಗಳನು ಬರೆದು ಕೆಡಿಸುತಿಹನು,
ದೊಡ್ಡ ಕಳ್ಳಿಹಾಲು ತಾವು ಕುದಿಸಲರಿಯರು, ವಿಶ್ವ

೧೪೮೯ ಸುಣ್ಣವನು ತಿನ್ನುವವರಿಗೆ,
ಬಣ್ಣಿಸದಾ ಪರುಸವೇದಿ ಇಪ್ಪುದು ನೋಡಲ್,
ವರ್ಣವ ದಾಟಿದ ಸುಣ್ಣವು,
ಬೆಣ್ಣೆಯು, ಬ್ರಹ್ಮಾದಿಗಳಿಗೆ, ಹೊಳೆಯದು ವೇಮಾ

೧೪೯೦ ಹಾಲು ಹಾಕಿ ಕುದಿಸಿ ಹಾಗೆ ಇರುವ ತಗಡು,
ವೇಳೆಯರಿತು ಇಳಿಸೆ, ಬೆಳ್ಳಿಯಹುದು
ಸುಳ್ಳು ಅಲ್ಲ, ನಿಜವು ಶಿವನೆ ನಿನ್ನ ಆಣೆ ವಿಶ್ವ

೧೪೯೧ ಹಾವು, ಮೀನಿನೊಳಗೆ ಹೊಕ್ಕ ಕಪ್ಪೆ ಕಂಡು,
ಕ್ರಮದಿ ತೆಗೆದು ಅಗ್ನಿಗಿಟ್ಟು ಕಾಯ್ಸಿ,
ತಾಮ್ರ ಕರಗಗೊಡಲು ತಕ್ಕ ಹೇಮವಹುದು ವಿಶ್ವ

೧೪೯೨ ಹಿತ್ತಲ ಮನೆ ಬಳ್ಳಿ ಹಿರಿಯ ಸಿಂಧೂರವಿರೆ,
ಕಷ್ಟ ಪಡುವುದೇಕೆ ಕನಕಕಾಗಿ?
ಸತುವ ಮೇಳವಿಸುತ ಸಾಧಿಸಲಾರರೇ? ವಿಶ್ವ

●

## ಕಾಯಕಲ್ಪ ಮದ್ದು

ಕಲ್ಪಾಂತದ ವರೆಗೆ ಕಾಯವನ್ನು ಕಾಪಾಡಿಕೊಳ್ಳುವುದೇ ಕಾಯಕಲ್ಪವಾಗಿದೆ. ನಮ್ಮ ಭಾರತದಲ್ಲಿ, ಬಳಿಯ ತಿಬೇಟಿನಲ್ಲಿ, ಈ ಕಾಯಕಲ್ಪ ಸಾಧಿಸಿದ ಹಲವು

ಸಿದ್ಧರೂ ಇದ್ದಾರೆ. ಗದಗ ತಾಲೂಕಿನ ಹೊಸಳ್ಳಿಯಲ್ಲಿ ೭೭೦ ವರ್ಷ ಬಾಳಿದ ಬೂದಿಸ್ವಾಮಿಗಳ ಬಗ್ಗೆ ಕೇಳಿದ್ದೇವೆ. ೪೫೦ ವರ್ಷ ಬಾಳಿದ ಗಿರಿನಾರ ಪರ್ವತವಾಸಿ ಶಂಕರ ಗಿರಜಿ ಸ್ವಾಮಿಗಳನ್ನು ನೋಡಿದ್ದೇವೆ. ೧೬೫ ವರ್ಷ ಬಾಳಿದ ಬಳ್ಳಾರಿಯ ಅಲ್ಲಿಪುರಬಾಬಾರೊಂದಿಗೆ ವಿಶೇಷ ಸತ್ಸಂಗ ಹೊಂದಿದ್ದೇವೆ. ಇದೆಲ್ಲ ಹೇಗೆ ಸಾಧ್ಯ? ಇದರ ಹಿಂದೆ ಏನೋ ರಹಸ್ಯವಿದೆ. ರಸಸಿದ್ಧರು ಈ ವಿಷಯದಲ್ಲಿ ಕೆಲವು ಉಪಾಯಗಳನ್ನು ಸೂಚಿಸಿದ್ದಾರೆ.

ಈ ಭೂಮಿಯಲ್ಲಿ ಆಯುಸ್ಸು ಬರಬರುತ್ತ ಕ್ಷೀಣಿಸುವುದು ನೈಸರ್ಗಿಕ. ಅದೇ ಪ್ರಾಣಾಯಾಮದಿಂದ ಆಯುಸ್ಸು ವರ್ಧಿಸಲೂ ಬಹುದು. ಆಯುಸ್ಸು ಹೆಚ್ಚು ಮಾಡಿಕೊಳ್ಳುವ ಕಾಯಕಲ್ಪವನ್ನು ಕಂಡುಕೊಳ್ಳಬೇಕು.

ಉಕ್ಕು ಚೂರ್ಣವು ಶರೀರವು ಹಗುರವಾಗಿರಲು ಸಹಾಯಕ. ವ್ಯಾಧಿ ನಿವಾರಕವೂ ಕೂಡ. ಹೀಗೆ ಚೂರ್ಣವು ಆಯುರ್ವೇದದ ಸಿದ್ಧ ಪೋಷಕವಾಗಿದೆ.

ಅದೇ ರೀತಿ, ನಾಯಿ ಕಡಿತಕ್ಕೆ ಕೆಲವು ಉಪಾಯಗಳನ್ನು ಸೂಚಿಸಿದ್ದಾರೆ. ರೋಗ ನಿವಾರಣೆಗೂ ಆಯುರ್ವೇದೀಯ ವಿಧಾನಗಳನ್ನು ಸೂಚಿಸಿದ್ದಾರೆ.

**೧೪೯೩ ಆಯು ಕ್ಷೀಣಿಸುವುದು ಅವನಿಯಲಿ; ಮಾರುತ**
**ಪ್ರಿಯತೆಯಾದೊಡಾಗ ಬೆಳೆಯಬಹುದು;**
**ಕಾಯುವನು ಭರಿಸುವ ಕಲ್ಪವ ಕಾಣಿಭೋ. ವಿಶ್ವ**

**೧೪೯೪ ಉಕ್ಕು ಚೂರ್ಣ ತಿನಲು ಉಂಟು ಹಗುರವಾಗಿ,**
**ಉಕ್ಕು ಚೂರ್ಣ ತಿನಲು ಉಡುಗಿ ವ್ಯಾಧಿ,**
**ಉಕ್ಕು ಚೂರ್ಣಕಿಂತ ಉರ್ವಿಕಲ್ಪವೆ ಇಲ್ಲ. ವಿಶ್ವ**

**೧೪೯೫ ಉಕ್ಕು ಸುಧೆಯ ಮಾಡಿ, ಉಳಿಸಿ ತಿನ್ನುವವನು,**
**ಉಕ್ಕು ತಾನು ಸೇರಿ, ಉಂಟು ಜಗದಿ,**
**ಉಕ್ಕು ಸುಣ್ಣ ತಿನಲು, ಎಲ್ಲಿಯದೋ ಕಲ್ಪ? ವಿಶ್ವ**

**೧೪೯೬ ಉಕ್ಕು ಚೂರ್ಣ ತಿನಲು, ಉಡುಗುವದು ಕಷ್ಟವು,**
**ಉಕ್ಕು ಚೂರ್ಣ ತಿನಲು, ಉಡುಗಿತು ಕ್ಷಯ.**
**ಉಕ್ಕು ಚೂರ್ಣ ತಿನಲು, ಉಡುಗುವುದು ಕರ್ಮವು. ವಿಶ್ವ**

---

೧೪೯೭ ಉಕ್ಕು ತಿನ್ನುವವನೆ ಉರ್ವಿಯಲ್ಲಿ ಸಿದ್ಧ,
ಉಕ್ಕು ತಿನ್ನದವನು ಉಂಟೆ ಜಗದಿ?
ಉಕ್ಕು ಸುಧೆಗು ಮೇಲು ಉಂಟು ಮಿಗಿಲು ಕಲ್ಪ. ವಿಶ್ವ

೧೪೯೮ ಉಕ್ಕು ಶುದ್ಧಿ ಗೆಯ್ದು ಉಳಿಸಿ ತಿನ್ನುವವನು,
ಉಕ್ಕು ದಿಟವು ಅಂತೆ ಉಂಟು ಜಗದಿ,
ಉಕ್ಕು ಚೂರ್ಣ ತಿನಲು ಒಪ್ಪವಿಹುದು ಕಲ್ಪ, ವಿಶ್ವ

೧೪೯೯ ಉಕ್ಕು ಹಣ್ಣು ತಿನಲು ಉಂಟು ಚೊಕ್ಕಟಾಗಿ,
ಉಕ್ಕು ಹಣ್ಣು ತಿನಲು ಉಡುಗಿ ವ್ಯಾಧಿ,
ಉಕ್ಕು ಕೂಡದಿರಲು ಉರ್ವಿ ಮೇಲೆ ಕಲ್ಪ, ವಿಶ್ವ

೧೫೦೦ ವೇಮನ ಹೇಳಿದ ಕಲ್ಪವು
ಆ ಮಾನವನಿದ್ದರೂನು ಎದೆಯಲೂಹಿಸುತಾ,
ತಾಮಸವಾಗುವದೇತಕೆ?
ವೇಮನನೇ! ಸಿದ್ಧನರಿವ, ವಿಧವಿದು, ವೇಮಾ.

೧೫೦೧ ಮೇಕೆಗಳ ಹಿಂಡು ಹೋದರೆ,
ಪ್ರಕಟವಾಗೊಂದು ಕೋತಿ ಪರ್ಣವನೇರಲ್
ಆ ಕಪಿಗಳು ನೂರು ನಡೆಯೆ,
'ಕೊ ಕೊ' ಎನ್ನುತ ಕೊಂಕ ನರಿಯು ಕೂಗಿತು ವೇಮಾ

೧೫೦೨ ಕೃಷ್ಣ ಪರ್ವದಲ್ಲಿ ಕೃತ್ತಿಕರೈವರುಂಟು,
ಕೃತ್ತುರೈವರ ಹಿಡಿದು ಕೃಷ್ಣ ನುಂಗಿದ,
ವಿನುತ ಕೃಷ್ಣರೈವರ ವೇಮನ ನುಂಗಿದ, ವಿಶ್ವ

೧೫೦೩ ಕೊಯ್ದು ನಾಯಿ ಜಿಹ್ವೆ ಕೂಳು ಅಟ್ಟು ತಿನಲು,
ನರಿಯೆ ತಾನು ಆದ ನಿಮಿಷದಲ್ಲಿ,
ನರಿಯೆ ಆದ ಬಳಿಕ ಅರಿಯನಡವಿ ಸೇರೆ, ವಿಶ್ವ

೧೫೦೪ ರೋಗಿಯಾಗಿರುವವ ರೋಗಿಯರಿಯುತಿಹನು,
ರೋಗಿಯರಸಿ ನೋಡಿ, ರೂಢಿಗೊಂಡು,
ರೋಗಿಗೀಯುವಂಥ ತಾಮ್ರ ಬಂಗಾರವೈ ವಿಶ್ವ

**೧೫೦೫ ವಿಷದ ಬೇವಿನ ಮರವೆಷ್ಟು ಪ್ರಜೆಗಳಿಗೆ,**
**ಪ್ರಸ್ತುತ, ಮೂಲಿಕೆಗೆ ಪ್ರಯೋಜನವು!**
**ನಿರ್ದಯಾರ್ತನಾದ ನೀಚನಿಂದ ಏನು?** ವಿಶ್ವ

**೧೫೦೬ ಶ್ವಾನ ಕಡಿದೊಡಾಗ ಚೀರದಂತೆ ಹಿಡಿದು,**
**ಪಕ್ಕೆ ಮುರಿಯೆ ಹೊಡೆದು ಪವಡಿಸುತ್ತ,**
**ನಿಂಬೆ ಕಾಯಿ ತಂದು ನೆತ್ತಿಗೆ ತಿಕ್ಕಿದರೆ,**
**ಶ್ವಾನ ವಿಷವು ಇಳಿದು ಶಾಂತ ವೇಮ.**

**೧೫೦೭ ಶುದ್ಧರೆಲ್ಲ ಕೂಡಿ ಶೋಧಿಸಿ ಶೋಧಿಸುತ,**
**ಶುದ್ಧಿ ಗೆಯ್ದು ಉಕ್ಕು ಸುಣ್ಣ ಮಾಡಿ,**
**ಶುದ್ಧಿಗೆ ಪ್ರಥಮವು ಸುಣ್ಣವಲ್ಲವೇನು?** ವಿಶ್ವ

●

## ಹಗೆ–ಕೆಳೆ

ವೈರವನ್ನು ಬೆಳೆಸಿಕೊಂಡು ಹೋಗಲು ಜೀವನು ದೀರ್ಘವಾಗಿಲ್ಲ. ಮಾನವನು ಪರರನ್ನು ಕುರಿತು ಕರುಣೆಯ ದೃಷ್ಟಿ ಹೊಂದಿ, ಹಗೆತನವನ್ನು ಹಿಂಗಿಸಿಕೊಳ್ಳಬೇಕು.

ಹಗೆ ಉಡುಗಿದರೆ, ಕೋಪವು ಉಡುಗುತ್ತದೆ. ಕೋರಿಕೆಗಳು ಉಡುಗುತ್ತವೆ. ತ್ರಿಗುಣಗಳು ಉಡುಗಿದರೆ ಭೇದಗಳುಡುಗುತ್ತವೆ. ಹಾಗಾದರೆ ಮನವು ಮುಕ್ತವಾಗುತ್ತದೆ.

ಜಗತ್ತಿನಲ್ಲಿರುವವರು ಹೆಚ್ಚಿನ ಸ್ನೇಹವನ್ನು ಕೋರುತ್ತಾರೆ. ಈ ಸ್ನೇಹಕ್ಕಾಗಿ ಪರಮಾರ್ಥವನ್ನೂ ಮರೆತು ಹುಚ್ಚರಾಗುತ್ತಾರೆ. ಈ ಜಗದ ಆಕರ್ಷಣೆಯನ್ನು ಕಡಿದು ಹಾಕಿ ಮುಕ್ತನಾಗಲಾರೆಯಾ?

ಕಬ್ಬಿಣದ ತುಂಡು ಮುರಿದೊಡೆ, ಕಮ್ಮಾರನು ಅದನ್ನು ಕಾಯಿಸಿ ಬೆಸೆಯುತ್ತಾನೆ. ಆದರೆ ಮನಸ್ಸು ಮುರಿದೊಡನೆ ಹೇಗೆ ಅಂಟಿಸಬಹುದು? ಆದ್ದರಿಂದ ಮನಸ್ಸು ಕೆಡದಂತೆ ಇರಿಸಿಕೊಳ್ಳಬೇಕು. ಕುತ್ಸಿತ ಜನರ ಸಂಗ ತೊರೆಯಬೇಕು. ಬೇರಿಗೆ ಹುಳು ಹತ್ತಿ ವೃಕ್ಷವೇ ನಾಶವಾದಂತೆ, ಕುತ್ಸಿತ ಜನರು ಸೇರಿ, ಜೀವನವೇ ನಶಿಸುತ್ತದೆ.

**೧೫೦೮ ಕೊಲ್ಲ ಲರ್ಹ ವೈರಿ ಕೈವಶವಾದರೂನು**
**ಸಲ್ಲ; ಕೇಡು ಬಗೆಯೆ ಸಿಕ್ಕನೆಂದು,**
**ಹೆಚ್ಚು ಮೇಲು ಗೆಯ್ದು ಹೋಗೆನುವುದೆ ಸಾಕು,** ವಿಶ್ವ

೧೫೦೯ ಹಗೆಯುಡುಗಿತು ಉಡುಗೆ ಕೋಪ,
ಹಗೆಯುಡುಗಲು ಕೋರ್ಕೆಯುಡುಗಿ, ಪರಜನ್ಮಗಳ್
ತಗಲಿರದು, ಭೇದವುಡುಗಲು,
ತ್ರಿಗುಣಗಳುಡುಗಲು ಮುಕ್ತಿ ಸ್ಥಿರವೈ ವೇಮಾ

೧೫೧೦ ಹಗೆಯುಡುಗೆ ಆಶೆಯುಡುಗಿತು,
'ದಗೆ' ಯುಡುಗಲು, ಕೋರ್ಕೆಯುಡುಗು ಸಲೆ ಜನ್ಮಂಗಳಾ
ತಗಲುಡುಗೆ ಭೋಗವುಡುಗಿತು,
ತ್ರಿಗುಣಂಗಳು ಉಡುಗೆ, ಮುಕ್ತಿ ತೀವ್ರವು ವೇಮಾ

೧೫೧೧ ಉಚ್ಚ ಸ್ನೇಹ ಕೋರಿ, ಉಂಟು ಸಕಲ ಜಗವು;
ಹುಚ್ಚು ಹಿಡಿದು ತಿರುಗಿ ಪೆಚ್ಚರಾದ್ರು
ತುಚ್ಛ ಸುಖವು ಅದನು ತುಂಡು ಮಾಡೆಯೇನು? ವಿಶ್ವ

೧೫೧೨ ಮುರಿದೊಡನೆ ಲೋಹ ಎರಡು ಮೂರು ಬಾರಿ,
ಕಾಯಿಸಿ ಬೆಸೆಯುವನು ಕಮ್ಮಾರನು
ಮನಸು ಮುರಿದೊಡಾಗ ಮತ್ತೆ ಅಂಟಿಸಲಳವೆ? ವಿಶ್ವ

೧೫೧೩ ಬೇರಿಗೆ ಹುಳು ಹತ್ತಿ ಮರವೆ ಹಾಳಾಯ್ತು,
ಕಾಷ್ಟ ಹುಳುವು ಹತ್ತಿ ಗಿಡವೆ ಹಾಳು,
ಕುತ್ಸಿತ ಜನ ಸೇರಿ, ಸುಗುಣವಂತ ಕೆಡುವ, ವಿಶ್ವ

೧೫೧೪ ಖೂಳ ಖೂಳಗೆ ಮೆಚ್ಚು ಗುಣವಂತನ ನಿಂದಿಪ;
ಅಂಥ ಹೀನನ ಮೆಚ್ಚರೆಂಥವರೂ.
ಮರದ ತೊಲೆಗಳಿಗೆ ಮತ್ತೆ ತಿಳಿಯುವುದೇ? ವಿಶ್ವ

೧೫೧೫ ಅತ್ತಿ ಹಣ್ಣು ಹೊರಗೆ ಹೊನ್ನಿನಂತೆ ಇಹುದು
ಹೊಟ್ಟೆ ಬಿಚ್ಚಿ ನೋಡಲೆಲ್ಲ ಹುಳುವೆ
ಅಂಜುಗುಳಿಯ ಮನದ ಬಿಂಕವಿಂಥ ರೀತಿ! ವಿಶ್ವ

●

## ಕೆಟ್ಟ ಸ್ನೇಹ

ಒಬ್ಬನ ಗುಣವನ್ನೂ, ಕುಲೀನತೆಯನ್ನೂ, ಗುಣದೋಷಗಳನ್ನೂ ಪರೀಕ್ಷಿಸಿ ಸ್ನೇಹ ಮಾಡಬೇಕು. ಒಳ್ಳೆಯ ಬುದ್ಧಿ ಇರುವವನಿಗೆ ಸಲ್ಲದವನ ಸ್ನೇಹವೇಕೆ? ಕಾರ್ಯ ಸಾಧಕನಿಗೆ ಕಡುತರ ಹಠವೇಕೆ?

ಕುತ್ಸಿತರನ್ನು ಬಳಿಗೆ ಕರೆದುಕೊಳ್ಳಬಾರದು. ಹಾಗೆವಾಡಿದರೆ ಹಾನಿಯುಂಟಾಗುವದು. ನೊಣವು ಹೊಟ್ಟೆ ಸೇರಿದರೆ, ಕಷ್ಟ ಕೊಡಲಾರದೇ?

ಮೂರ್ಖನು ಮೂರ್ಖನೇ, ತಿಳಿಸಿ ಹೇಳಿದರೂ, ತಿಳಿದುಕೊಳ್ಳಬಾರದೆಂಬ ಹಠ ಅವನದು. ಬಾರಿ ಗಿಡವು ಜನ್ಮಾರಭ್ಯ ಮುಳ್ಳಿನ ಜೊತೆಗೆ ಹುಟ್ಟುವಂತೆ, ಇಂಥ ಮೂರ್ಖರಿಗೆ ದುರ್ಬುದ್ಧಿ ಮೊದಲಿನಿಂದಲೂ ಇರುವುದು. ಮೊಂಡ ಮನುಷ್ಯನಿಗೆ ಭಂಡ ಜನರೇ ಹಿತ ನುಡಿಯುವವರೆನಿಸುತ್ತಾರೆ. ಕರಿ ಮುಸುವನ ಮದುವೆಯಲ್ಲಿ ಕೋತಿಗಳು ಸೇರಿದಂತೆ. ಖೂಳ ರಾಜನಿಗೆ ಕೊಂಡೆಯವನೇ ದಳಪತಿಯಾದಂತೆ.

ಮೂಢನಿಗೆ ಮೂಢನೇ ಮೆಚ್ಚುಗೆಯಾಗುತ್ತಾನೆ. ಅದೇ ರೀತಿ, ಅಜ್ಞಾನಿಯು ಪಾಪಿಯನ್ನು ಮೆಚ್ಚುತ್ತಾನೆ. ಹಂದಿ ಕೆಸರನ್ನು ಮೆಚ್ಚುವುದೇ ಹೊರತು ಪನ್ನೀರನ್ನಲ್ಲ.

ಠಕ್ಕ ಜನರೊಂದಿಗೆ ಸೇರಿ ಆಟಾಟೋಪ ಮಾಡಿದರೆ, ಘನನು ನೀತಿಗೇಡಾಗುತ್ತಾನೆ. ಉಳ್ಳಿ ತೋಟದಲ್ಲಿಯ ಮಲ್ಲಿಗೆ ಲತೆಯ ಸುಗಂಧವು ಕೆಡುವಂತೆ ಘನನ ಸ್ಥಿತಿಗತಿಯಾಗುತ್ತದೆ.

**೧೫೧೬ ಸುಬುದ್ಧಿಯವಗೇಕೆ ಸಲ್ಲದವನ ಸಖ್ಯ.**
**ಕಾರ್ಯವಾದಿಗೇಕೆ ಕಡುತರ ಹಠ.**
**ಕುತ್ಸಿತನಿಗೇಕೆ ಗುರುದೇವತಾ ಭಕ್ತಿ? ವಿಶ್ವ**

**೧೫೧೭ ಹೀನ ಜಾತಿಯವಗೆ ನಿಲಲಿಂಬುಗೊಟ್ಟರೆ,**
**ಹಾನಿ ಬರುವುದೆಂಥವನೇ ಇರಲಿ;**
**ಹೊಟ್ಟೆ ಸೇರಿದ ನೊಣ ಹಾಗೆ ಹೀಗೆನಿಸದೆ? ವಿಶ್ವ**

**೧೫೧೮ ಮನದಲಿ ಕೃಪೆಯಿರದ, ಮಾದರವನ ಸುತರು,**
**ನಿಕಟ ಸೇರಿದಂತೆ ನಿಖಿಲ ಯೋಗ,**
**'ಪನಸ' ಮಗನು ಚೊಂಚ ಹುಡುಗಿ ಸೇರಿದಂತೆ. ವಿಶ್ವ**

೧೫೧೯ ಬಾರಿ ಗಿಡ ಮುಳ್ಳನು ಸೇರಿ ಹುಟ್ಟುತಿಹುದು,
ಊರಿದ ಬೀಜದಿಂದ ತೂರಿದಂತೆ,
ಮೂರ್ಖಗೆ ದುರ್ಬುದ್ಧಿ ಮೊದಲೆ ಹುಟ್ಟುತಿಹುದು, ವಿಶ್ವ

೧೫೨೦ ಕರಿಯ ಮುಸುವ ಮದುವೆ, ಕೋತಿಗಳ ನಿಬ್ಬಣ!
ಮೊಂಡನಿಗೆ ಹಿತರು ಭಂಡ ಜನರು.
ಖೂಳನಿರುವವನಿಗೆ ಕೊಂಡೆಯವ ದಳಪತಿ, ವಿಶ್ವ

೧೫೨೧ ಮೂಢ ಮೂಢಗೆ ಮೆಚ್ಚು, ಮತ್ತೆ ಅಜ್ಞಾನಿಯು
ಭಾವದಲಿ ಮೆಚ್ಚುವ ಪಾಪಿ ನರನ,
ಹಂದಿ ಕೆಸರ ಮೆಚ್ಚಿತು, ಪನ್ನೀರನು ಅಲ್ಲ, ವಿಶ್ವ

೧೫೨೨ ತನಗೊಲಿವಗೆ ತಾನೊಲಿವನು,
ತನಗೊಲಿಯದವಗೆ ತಾನೊಲಿಯದಿರುವ ಕಾಣಾ.
ತನಗಿಹ ಆಟಾಟೋಪವ,
ತನಗಿಹ ಮಾಯೆಯು ಬಾರದು ಕೆಲಸಕೆ ವೇಮಾ.

೧೫೨೩ ಠಕ್ಕರೊಡನೆ ಸೇರಿ ಠಬರು ಚೇಷ್ಟೆ ಗೆಯ್ಯೆ,
ನಿಜವಾಗಿಯೂ ಘನನು ನೀತಿಗೇಡು,
ಉಳ್ಳಿ ತೋಟದಲ್ಲಿ ಮಲ್ಲಿಗೆ ಲತೆಯಂತೆ, ವಿಶ್ವ

೧೫೨೪ ಎತ್ತ ಕಡೆ ಮನಸು ಹರಿವುದೊ,
ಅತ್ತ ಕಡೆ ಹರಿಯುತಿಹವು ಸಕಲೇಂದ್ರಿಯಗಳ್,
ಮತ್ತೆ ನಿನ್ನೆಡೆ ಮನ ಹರಿಯಲ್,
ಎತ್ತಲೂ ಹರಿಯವಿಂದ್ರಿಯಗಳು ವೇಮಾ.

೧೫೨೫ ಸ್ನೇಹ ಮೀರಿ ಮನದಿ ಚಿಂತೆಯ ಬಿಡುತಿದ್ದು,
ಚಿಕ್ಕ, ಹಿರಿಯರಾಗಿ ಬೆಳೆಯಬಹುದು.
ಮಣ್ಣು ಗಗನ ನಡುವೆ ಮನವ ನೊಲಿಸಿ ನೋಡು. ವಿಶ್ವ

೧೫೨೬ ಕೊಂಡೆಯವನು ಖಳನಿಗೊಳ್ಳೆ ಗೆಳೆಯನೆನಿಪ,
ಭಂಡ ರಾಜಗಿಪ್ಪ ಹಾಳು ಮಂತ್ರಿ,
ಅಂಡಲೆಯುವ ನರಗೆ ಅಡವಿ ಮಂಗ ಗೆಳೆಯ, ವಿಶ್ವ

## ದಡ್ಡತನ

ತನ್ನ ಒಳಿತನ್ನು ತಿಳಿಯದವನೇ ದಡ್ಡನು. ಅರಿತ ಮನುಷ್ಯನಿಗೆ ಹೊಸದೊಂದು ವಿಷಯವನ್ನು ತಿಳಿಸಿದರೆ ಅವನು ಸುಲಭವಾಗಿ ತಿಳಿಯುತ್ತಾನೆ. ಆದರೆ ದಡ್ಡನಿಗೆ ತಿಳಿಸಲು ಇಲ್ಲವೆ ಅವನನ್ನು ತಿದ್ದಲು ಯಾರು ಶಕ್ತರು?

ಜಾಲಿ ಗಿಡವು ಹುಟ್ಟಿದಂದಿನಿಂದ ಮುಳ್ಳು ಸೇರಿ ಹುಟ್ಟುವಂತೆ, ದಡ್ಡನು ಹುಟ್ಟಿದಾರಭ್ಯ ದಡ್ಡತನದೊಂದಿಗೇ ಹುಟ್ಟಿರುತ್ತಾನೆ. ತಿಳಿವಿಲ್ಲದ ಮೂಢನಿಗೆ ತಿಳಿಸುವುದೆಂತು? ನದಿಯ ಡೊಂಕು ತಿದ್ದುವ ಪ್ರಯತ್ನದಂತೆ ಅದೂ ಸಹ.

ಪೇಟ ಧರಿಸಿ, ನಿಲುವಂಗಿ ತೊಟ್ಟು, ಕಿವಿಯಲ್ಲಿ ಓಲೆಗಳನ್ನು ಇಟ್ಟುಕೊಂಡು ದೊಡ್ಡ ಮನುಷ್ಯನಂತೆ ತೋರಬಹುದು. ಆದರೆ ಬುದ್ಧಿ ಮಾತ್ರ ಶುದ್ಧ ಪಶುವಿನಂತೆ. ಅಂಥವನಿಗೆ ಯಾರು ತಿಳಿಸಿ ಹೇಳಬಲ್ಲರು?

ಓದಿದವನಿಗೆ ತಿಳಿಸಲು ಒಂದು ವರ್ಷವಾದರೂ ಸಾಕು. ಮೌನಿಯು ಒಂದೇ ಮಾಸದಲ್ಲಿ ಅರಿಯಬಹುದು. ಅದೇ ಮೂಢನಿಗೆ ತಿಳಿಸಲು ಮೂವತ್ತು ವರ್ಷದ ದೀರ್ಘ ಕಾಲವೂ ಸಾಲದು.

ದಡ್ಡನಾಗಿ ಹುಟ್ಟಿ, ದಡ್ಡನಾಗಿ ಬೆಳೆದು, ತನ್ನನ್ನು ತಿಳಿದುಕೊಳ್ಳದೆ ಸತ್ತು ಹೋಗುತ್ತಾನೆ. ಪಡುವಲ ಕಾಯಿಗೆ ಕಲ್ಲು ಕಟ್ಟಿದರೆ ನೀಟವಾದೀತು. ಆದರೆ ನಾಯಿ ಬಾಲಕ್ಕೆ ಕಲ್ಲು ಕಟ್ಟಿದರೆ ನೀಟವಾಗಬಹುದೇ?

**೧೫೨೭ ಅರಿತಿರುವಗೆ ತಿಳಿಸೆ ಆರಾದರು ಸಾಕು,**
**ತನಗೆ ಅಳವು ಅಲ್ಲ, ದುಷ್ಟಗರುಹೆ,**
**ಯಾವ ಡೊಂಕು ತಿದ್ದಲು ಯಾರು ಶಕ್ತರಿಹರು? ವಿಶ್ವ**

**೧೫೨೮ ಇರುವೆ ಕಡಿದೊಡಾಗ, ಅಷ್ಟು ನೋವೆನಿಪುದು,**
**ಇರುವೆಯೆಷ್ಟು, ಅದರ ಸೃಷ್ಟಿಯೆಷ್ಟು?**
**ಇರುವೆಯಂಥ ನರರ ಇಳೆಯೊಳರಿಯಬೇಕು, ವಿಶ್ವ**

**೧೫೨೯ ಜಾಲಿ ಗಿಡದ ಮುಳ್ಳು ಜೊತೆಗೆ ಹುಟ್ಟುತಿಹುದು,**
**ಬೀಜದಲ್ಲೆ ಇದ್ದು, ಬೆಳೆಯುವಂತೆ,**
**ಮೂರ್ಖನಿಗೆ ಬುದ್ಧಿ ಮೊದಲು ಹುಟ್ಟಿ ಇಹುದು, ವಿಶ್ವ**

**೧೫೩೦ ಅರಿಯುವವಗರುಹಲು ಆರೆ ಇರಲಿ ಸಾಕು,**
**ಅರುಹಲಾವ ಶಕ್ತರಾರು ಮೂಢಗೆ?**
**ನದಿಯ ಡೊಂಕು ತಿದ್ದೆ, ನರನು ಶಕ್ತನಿಹನೆ? ವಿಶ್ವ**

೧೫೩೧ ಶಿರದ ಮೇಲೆ ಪೇಟ, ಮೈಯೊಳು ನಿಲುವಂಗಿ,
ಬೊಜ್ಜು ಕಿವಿಯ ಓಲೆಯವನ ಕೇಳೆ,
ಶುದ್ಧ ಪಶುವಿನಂತೆ, ಬುದ್ಧಿಯೊಳು ತಿಳಿಯದೆ? ವಿಶ್ವ

೧೫೩೨ ಓದಿದವಗೆ ತಿಳಿಸೆ ಒಂದು ವರ್ಷ ಬೇಕು,
ಮೌನಿಗರುಹಬಹುದು, ಮಾಸದೊಳಗೆ,
ಮೂಢಗರುಹಲಳವೆ ಮೂವತ್ತು ವರುಷಕೂ? ವಿಶ್ವ

೧೫೩೩ ಹಾದರ ಮುಳ್ಳು ಭುವಿ ಹೇಗೊ ರಾತ್ರಿ ತುಳಿಯೆ,
ನಶಿಸದಷ್ಟು ಇಷ್ಟು ನೆತ್ತಿ ಚಿಗುರು,
ಮಂದಿ ಛೀಯೆನಲು ಮೂಢ ನಾಚುತಿಹನೇ? ವಿಶ್ವ

೧೫೩೪ ಇರುವೆ, ಶ್ರಮದ ಫಲಕೆ ಗೆದ್ದಲಂಟಿದಲ್ಲಿ,
ಹುತ್ತ ಬೆಳೆದು ಹಾವು ಬುಸ್ಸೆನುವುದು
ತನಯ ಕುರುಡನಿರಲು ತಿಳಿಯುತಿಹನೆ ಬಿಗಿಯ ವಿಶ್ವ

೧೫೩೫ ತಂದು ಇಲಿಯ ತೊಗಲು ತಟ್ಟಲೇನು ಎಷ್ಟು?
ಕಪ್ಪು ಕಪ್ಪೆ ಹೊರತು ಬಪ್ಪದು ಬಿಳಿ,
ಕಾಷ್ಠ ಬೊಂಬೆ ತಂದು, ಕುಟ್ಟಲು ಗುಣಿಯಹುದೆ? ವಿಶ್ವ

೧೫೩೬ ಪಡುವಲ ಕಾಯಿಯಡಿ ಕಲ್ಲು ಕಟ್ಟಲಾಗ,
ಡೊಂಕು ತೊರೆದು ಬೆಳೆಯುತಿಹುದು,
ನಾಯಿ ಬಾಲ ಕಟ್ಟಲೆಂತು ನೇರವಹುದು? ವಿಶ್ವ

೧೫೩೭ ಆತ್ಮವರಿಯದವಗೆ ಎಂಥ ಸ್ತುತಿಯೇನು?
ಅದನೆ ಮಚ್ಚುತಿಪ್ಪ; ಅಷ್ಟೆ ಪಾಡು
ಮೂಗಿರದವನು ಹಾಕೆ ಮೂಢ ಮೆಚ್ಚನೇನು? ವಿಶ್ವ

೧೫೩೮ ಮೊಂಡ ಜನರಿಗೇಕೆ ಮುಂಗೈ ಕಡಗಗಳು?
ಬಚ್ಚಬಾಯಿಗೇಕೆ ಕಾಷ್ಠ ದಂತ?
ಗಾರ್ದಭಕ್ಕೆ ಏಕೆ ಗಡ್ಡ ಮೀಸೆ ಹುಚ್ಚು? ವಿಶ್ವ

●

## ಹಗೆತನ

ಯಾರೊಂದಿಗೇ ಆಗಲಿ ಹಗೆತನವು ಕೇಡು ಉಂಟು ಮಾಡುತ್ತದೆ. ಭಾವನೆಯು ಮಧುರವಾಗಿರಬೇಕು. ಇರುವ ವೈರವನ್ನು ಹೂಳಬೇಕು.

ಆದರೆ ಇಹದಲ್ಲಿ ಸಂಪತ್ತೇ ಎಲ್ಲವನ್ನೂ ನಿರ್ಧರಿಸುತ್ತಿದೆ. ಸಂಪತ್ತು ಇಲ್ಲವಾದರೆ ಸೋದರರೇ ಹಗೆಗಳಾಗುತ್ತಾರೆ. ಸಂಪತ್ತು ಇರದಿದ್ದರೆ ಶ್ರೇಯವಿಲ್ಲ.

ವೈರದಿಂದ ಬೆನ್ನು ಹತ್ತಿದ ಹಾವು, ಖಂಡ ಸಕ್ಕರೆ ಕಲಿಸಿದ ಹಾಲನ್ನಿಟ್ಟರೂ ಅತ್ತ ಗಮನ ನೀಡಿ ಕಚ್ಚುವುದನ್ನು ಬಿಡದು. ಕಪಟಿಯ ಹಗೆಯನ್ನು ಕಂಡೇ ಅರಿಯಬೇಕು.

ನಿನ್ನಲ್ಲಿ ನೊಣದ ತಲೆಯಲ್ಲಿರುವಷ್ಟು ವಿಷ ಅರ್ಥಾತ್ ದ್ವೇಷ ಭಾವನೆಯೂ ಇರಕೂಡದು. ಇನ್ನು ಚೇಳಿನ ಬಾಲದಲ್ಲಿಯ ಮತ್ತು ಹಾವಿನ ಹಲ್ಲಿನಲ್ಲಿಯ ವಿಷದಂಥ ದ್ವೇಷವಂತೂ ಇರಲೇ ಕೂಡದು.

**೧೫೪೯ ಸಂಪದವಿಲ್ಲದಿರೆ ಸೋದರರೆ ಹಗೆಗಳು,**
**ಸಂಪದವಿಲ್ಲದಿರೆ ಶ್ರೇಯವಿಲ್ಲ,**
**ಸಂಪದವಿಲ್ಲದಿರೆ ಸಕಲ ತತ್ತ್ವ ಹಾಳು, ವಿಶ್ವ**

**೧೫೫೦ ಖಂಡ ಸಕ್ಕರೆಯನು ಕರೆಸಿ ಹಾಲನಿಡಲು,**
**ಬೆಂಬತ್ತಿಹ ಹಾವು ಬಿಡದು ತನ್ನ,**
**ಕಪಟವುಳ್ಳವನನು ಕಂಡು ಅರಿಯಬೇಕು. ವಿಶ್ವ**

**೧೫೫೧ ನೊಣದ ತಲೆ ವಿಷವು ನಿನ್ನೊಳಿರಲು ಹೊಲ್ಲ,**
**ಚೇಳು ಬಾಲದ ವಿಷ ಹೇಳಲೇನು?**
**ಹಾವಿನ ಹಲ್ಲು ವಿಷ ಹಿಡಿದು ಸಾಯಿಸುವುದು. ವಿಶ್ವ**

●

## ಜೂಜು, ಮದ್ಯಪಾನ

ಜೂಜು ಮದ್ಯಪಾನಗಳು ಒಂದರ ಬೆನ್ನಿಗಂಟಿ ಒಂದು ಬರುತ್ತವೆ. ಎಲ್ಲ ಧಾರ್ಮಿಕ ದೇಶಿಕರೂ ತಮ್ಮ ನೀತಿಬೋಧೆಯ ಮೂಲಕ ಈ ಎರಡು ದುಶ್ಚಟಗಳನ್ನು ತ್ಯಜಿಸುವಂತೆ ಬೋಧಿಸಿದ್ದಾರೆ.

ಜೂಜಿನಲ್ಲಿ ಮನುಷ್ಯನು ತನ್ನ ವಿವೇಕವನ್ನು ಕಳೆದುಕೊಂಡು ಹಲವಾರು ಕಷ್ಟ ಕೋಟಲೆಗಳಿಗೆ ಬಲಿಯಾಗುತ್ತಾನೆ. ಕಾಲ ಮತ್ತು ದೇಶಮಾನಕ್ಕನುಸರಿಸಿ,

ಜೂಜಾಟದಲ್ಲಿ ರೂಪಭೇದಗಳಾಗಬಹುದು. ಆದರೆ ಉರುಳುವ ದಾಳವನ್ನು ಲೆಕ್ಕ ಹಾಕಿ, ಹಣ ಒಡ್ಡಿದರೆ, ಕೊನೆಗೊಮ್ಮೆ ಕೈಕಾಸು ಕಳೆದುಕೊಂಡು ಹುಚ್ಚನಂತಾಗುತ್ತಾನೆ. ನಮ್ಮೆದುರು ಅನೇಕ ದೃಷ್ಟಾಂತದ ಕತೆಗಳಿವೆ. ಧರ್ಮರಾಜನು ಜಾಜಾಡಿ ರಾಜ್ಯವನ್ನೂ, ಬಂಧುಗಳನ್ನೂ, ಕೊನೆಗೆ ತನ್ನ ಹೆಂಡತಿಯನ್ನೂ ಕಳೆದುಕೊಂಡು ಅಡವಿ ಪಾಲಾದನು. ಇದರಿಂದ ಜನರು ಪಾಠ ಕಲಿಯಬೇಕು.

ಮದ್ಯಪಾನ ಮಾಡಿದವನು ಯಾವುದನ್ನೂ ಬಚ್ಚಿಟ್ಟುಕೊಳ್ಳಲಾರನು. ಅವನು ಸಾಮಾನ್ಯ ಸ್ಥಿತಿಯಲ್ಲಿ ನುಂಗಿಕೊಂಡ ವೇದನೆಗಳು ಸಹ ಮತ್ತೇರಿದಾಗ ಪ್ರಕಟಗೊಳ್ಳುತ್ತವೆ. ಒಳ್ಳೆಯದಕ್ಕೆ ವ್ಯಯಿಸುವುದಿಲ್ಲ. ಅವರು ವಿವೇಕ ಬುದ್ಧಿ ನೀಗಿಕೊಂಡು, ಹೆಂಡಕ್ಕೆ ನೀಡುವರೇ ಹೊರತು ಹಾಲಿಗಾಗಿ ವ್ಯಯಿಸರು. ಶೆರೆ ಕುಡಿದು, ಮತ್ತನಾಗಿ ದೊಡ್ಡ ಜನರ ಮಧ್ಯೆ ಮಾನ ಮರ್ಯಾದೆ ಕಳೆದುಕೊಂಡು ತಿರುಗುತ್ತಾನೆ. ಮತ್ತು ಏರಿದಾಗ ಜನರ ಮಧ್ಯೆ ಇರುವುದನ್ನಾದರೂ ಬಿಡಬೇಕು. ಇಷ್ಟಾದರೂ ಸಮಯ ಪ್ರಜ್ಞೆ ಇರಿಸಿಕೊಂಡರೆ ಕ್ಷೇಮ.

**೧೫೪೨ ಅನನುಕೂಲ ತಾಣ ಅಲ್ಲದ ಜೂಜಾಟ,**
**ಆಡಿ, ಕೂಡಿ, ಸೋತು, ಆಡವಿ ಹೊಕ್ಕ;**
**ಘನನ ಜಾಡು ನೋಡಿ ಬಿಡದೆ ಇರಲು ಮೌಢ್ಯ** ವಿಶ್ವ.

**೧೫೪೩ ಕಣಿಯ ಸಾರುವಯ್ಯ ಕನಸು, ನಿದ್ರೆ, ಕೋರ್ಕೆ**
**ಮುದದಿ ಶಕುನಗಳನು ಮಾರ್ನುಡಿದರು,**
**ಪಶ್ನೆ ಪದಿ ಸಾಸಿರ, ಪರಿಕಿಸಿ ನೋಡಿದೊಡೆ,**
**ಆದುವೆಷ್ಟೊ? ಹೋದುವೆಷ್ಟೊ? ವೇಮ**

**೧೫೪೪ ಕಳ್ಳು ಕುಡಿಯುವವನು ಕಳ್ಳ ಕುಡುಕನಲ್ಲ,**
**ಸುಳ್ಳು ನುಡಿಯುವವನೆ ಕಳ್ಳ ಕುಡುಕ,**
**ನಿಜವ ನುಡಿಯದವನೆ ನೀಚ ಚಂಡಾಲನು,** ವಿಶ್ವ

**೧೫೪೫ ಹೆಂಡಕೀಯುವಂತೆ ಹಾಲಿಗೀಯರಯ್ಯ!**
**ಹುಂಜಕೀಯುವಂತೆ ಗುರುವಿಗಿಲ್ಲ,**
**ರಂಡೆಗೀಯುವಂತೆ ಪುಣ್ಯಕೀಯರಯ್ಯ!** ವಿಶ್ವ

**೧೫೪೬ ಮದ್ಯ ಕುಡಿದು ಮತ್ತೆ ದೊಡ್ಡ ಜನರ ಮಧ್ಯೆ,**
**ಬಟ್ಟೆ ಕಳಚಿ ತಿರುಗುವಂಥ ದುಷ್ಟ,**
**ಎಲ್ಲ ಹೋದ ಮೇಲೆ ಹರಕು ವಸ್ತ್ರ ಹೊದೆವ** ವಿಶ್ವ

**೧೫೪೭ ಮತ್ತು ಏರಿದ ವೇಳೆ, ಮತ್ತೆ ಬಳಿಗಿರಬೇಡ,**
**ಅನುವು ತಪ್ಪಿ ಮಾತು ಆಡಬೇಡ,**
**ಸಮಯನರಿತಿರುವವ ಸರಸನೆನಿಪನಲ್ತೆ? ವಿಶ್ವ**

●

## ಹಿರಿಯರಿಗೆ ಗೌರವ

ತನಗಿಂತ ಹಿರಿಯರಾದವರನ್ನು ಮನ್ನಿಸಬೇಕು. ವಯೋವೃದ್ಧರಂತೆಯೇ ಜ್ಞಾನವೃದ್ಧರೂ ಮರ್ಯಾದೆಗೆ ತಕ್ಕವರು. ಅವರಿಗೆ ತಕ್ಕ ಗೌರವಾದರಗಳನ್ನು ಸಲ್ಲಿಸಲೇಬೇಕು.

ತತ್ತಿ ಬಂದು ಮರಿಗೆ ಪಾಠ ಹೇಳಿದ ರೀತಿ, ಜ್ಞಾನಿಗಳೆದುರು ಅಲ್ಪಜ್ಞರು ವರ್ತಿಸಬಾರದು. ಜ್ಞಾನಿಗಳು ತಿಳಿದೂ, ತಿಳಿಯದವರಂತೆ ಮೌನಿಗಳಾಗಿ ವರ್ತಿಸುತ್ತಾರೆ. ಅವರ ಮೌನದ ಹಿಂದಿನ ಘನತೆಯನ್ನೂ, ಆಳ ಅನುಭವವನ್ನೂ ಅರಿತು ವರ್ತಿಸಬೇಕು.

**೧೫೪೮ ತತ್ತಿ ಬಂದು ಮರಿಯ ಗೋಳು ಹೊಯ್ದ ರೀತಿ,**
**ವಿಧವ ಕಂಡರಿಯದ ವಿಕೃತ ಮತಿಗಳು,**
**ಜ್ಞಾನಿಯಾದವರನು ಜರೆಯುತಿಹುದು ನೋಡು ವಿಶ್ವ**

●●●

# ೯. ಅರ್ಥವರ್ಗ

## ಅನುಬಂಧ

**ಯಾವ ಕುಲವು ನಿನಗೆ? ಯಾವ ಮತವು ಮತ್ತೆ?**
**ಪೂರ್ಣಗೊಂಡ ಹೃದಯ ಪಕ್ವವರಿತು,**
**ಆದರಿಸುವ ಮನುಜ ಅಂತ್ಯವ ತಿಳಿಯುವನು.**
**ವಿಶ್ವದಾಭಿರಾಮ ಕೇಳು ವೇಮ**

●

## ಕುಲದ ಹಿರಿಮೆ
## ಅ. ಜನ್ಮ

ಜೀವಿಯು ತನ್ನ ಪೂರ್ವ ಸಂಸ್ಕಾರಾನುಸಾರ, ಆಯಾ ಯೋನಿಗಳಲ್ಲಿ ಜನಿಸುವುದುಂಟು, ಅವರವರ ಕರ್ಮ ಸಂಸಾರಾನುಸಾರ ಆಯಾ ಕರ್ಮದಲ್ಲಿ ನಿರತರಾಗುತ್ತಾರೆ. ಆಯಾ ಕರ್ಮದ ಉದ್ಯೋಗಿಗಳ ಅಭ್ಯುದಯಕ್ಕಾಗಿ ಆಯಾ ಕುಲ ಇಲ್ಲವೆ ಜನ ಗೋಷ್ಠಿಗಳು ನಡೆಯುತ್ತವೆ. ನಡೆಯಬೇಕು. ಆದರೆ ಜನ್ಮದಿಂದ ಜಾತಿಯ ಭೇದ ಕಲ್ಪಿಸುವುದು ಅವಿವೇಕ.

ತನ್ನ ಕರ್ಮಾನುಸಾರ ಕುಲವನ್ನು ಆಯ್ದುಕೊಳ್ಳಬೇಕು. ತನ್ನ ವಿಚಾರಾನುಸಾರ ಮತವನ್ನು ಆಯ್ದುಕೊಳ್ಳಬೇಕು. ಹೀಗೆ ಮಾಡುವ ಮುನ್ನ ಅವನಿಗೆ ಲೋಕಾನುಭವ ಬೇಕು. ಅವನು ಗೃಹಸ್ಥ ಧರ್ಮದಲ್ಲಿ ಪಾದ ಊರಿ ನಿಂತಿರಬೇಕು.

ಜನರು ಜಾತಿಗತ ಮತದಲ್ಲಿ ಬದ್ಧರಾಗಿ ಹೊರಬೀಳಲಾರದೆ ಬಹಳ ಕೆಡುತ್ತಾರೆ. ಜಗತ್ತು ಹೇಗೆ ಹುಟ್ಟಿತು? ಅಲ್ಲಿ ಜಾತಿಯ ಭೇದ ಕಲ್ಪನೆ ಯಾರಿಂದ ಉಂಟಾಯಿತು? ಜಪ–ನಿಷ್ಠೆ ಎಂತು? ನಾನರಿಯೆನು. ಇವುಗಳ ಜನನ ಮತ್ತು ನಾಶಗಳ ಮಧ್ಯೆಯ ಸಂಧಿಯನ್ನು ಅರಿತುಕೋ.

ಜಾತನಾದವನು ಯಾವ ಸಂಸ್ಕಾರ ಹೊಂದಿ ಹುಟ್ಟುತ್ತಾನೆ? ಅವನು ಯಾವ ಸಂಸ್ಕಾರಗಳನ್ನು ಪೋಷಿಸಿಕೊಂಡು ಬೆಳೆಯುತ್ತಾನೆ. ಯಾವುದು ಮುಖ್ಯ? ಯಾವುದು ಅಮುಖ್ಯ? ಎಂದು ತಿಳಿಯಬೇಕು. ಇದರ ಅರಿವು ಉಳ್ಳವನೇ ಅಧಿಕ ಕುಲಜನಲ್ಲವೇ?

ಯಾರ ಹುಟ್ಟು ಹೇಗೆ? ಯಾವ ಸಂಸ್ಕಾರಗಳು ಅವರವರ ಹುಟ್ಟಿಗೆ ಕಾರಣ? ಎಂಬುದನ್ನು ತಿಳಿಯದೆ ತಿರುಗಿದರೇನು ಫಲ? ಇಂಥ ಅರಿವು ಹೊಂದಿದವನಿಗೆ ಯಾವ ಜಾತಿಭೇದವಿದ್ದೀತು?

— — — — — — — — — — — — — — — — — — — — — —

ಬಂಗಾರವು ಲೋಹಗಳಲ್ಲಿ ಶ್ರೇಷ್ಠವಾಗಿದೆ. ಲೌಕಿಕ ವ್ಯವಹಾರದಲ್ಲಿ ಬಂಗಾರ ಹೊಂದಿದವನಿಗೆ ಮೇಲ್ಮೆಯುಂಟು. ಅಂದ ಮೇಲೆ ಸ್ವರ್ಣಕಾರನ ಜಾತಿಗಿಂತ ಶ್ರೇಷ್ಠ ಜಾತಿಯೆಂಬುದಿಲ್ಲ, ಎನ್ನಬಹುದಲ್ಲವೇ?

ಎಲ್ಲರೂ ಜನಿಸುವುದು ಯೋನಿಯಲ್ಲಿ. ಅಂಥವನು ಉತ್ತಮ ಜನಕುಲವನ್ನು ಸೇರಿಕೊಂಡಿರಲು ಬ್ರಹ್ಮವನ್ನರಿತವರೊಡನೆ ಬಾಳಬೇಕು. ಬ್ರಹ್ಮ ಕುಲಜನಾಗಬೇಕು. ಬ್ರಹ್ಮವನ್ನರಿಯಬೇಕು. ಬ್ರಹ್ಮವನ್ನರಿಯದೆ ಸತ್ತು ಹುಟ್ಟಿದರೆ ಫಲವೇನು?

ಯೋನಿಯನ್ನು ಮೆಚ್ಚಿ, ಭೋಗಕ್ಕಾಗಿ ರತಿಸುಖ ಪಡೆಯುವಾಗ ಹುಟ್ಟಿದ ಈ ಜಗದಲ್ಲಿ ಜನನ ನಿಮಿತ್ತ ಯಾರು ಶ್ರೇಷ್ಠರು? ಯಾರು ಕನಿಷ್ಠರು? ಇದನ್ನೆಲ್ಲ ಮನದಲ್ಲಿ ಮಥಿಸದೆ ಇರುವುದೇ ಅಚ್ಚರಿದಾಯಕವಲ್ಲವೇ?

**೧೫೪೯ ಜಾತಿ ಬೇರೆ ಇಲ್ಲ, ಜನ್ಮ ಕ್ರಮವ ಹಿಡಿದು,**
**ನೆಮ್ಮದಿಯಲಿ ಅಭವನ ನಿಲಿಸಿ ಇರಲು,**
**ಅಖಿಲ ಜನರ ಮಧ್ಯೆ ಅವನೆ ಘನನು ಅಯ್ಯ. ವಿಶ್ವ**

**೧೫೫೦ ಜಾತಿ–ಮತದಲ್ಲಿ ಜನತೆಯೆಲ್ಲ ಬದ್ಧ,**
**ಭಾವ ಪರಮನಲ್ಲಿ ಬುರುಗು ಹಾಲು,**
**ಸತ್ತು ಸತ್ತು ಹುಟ್ಟುತಿಹರು ಜಡಮತಿಗಳು, ವಿಶ್ವ**

**೧೫೫೧ ಯಾವ ಕುಲವು ನಿನಗೆ ಯಾವ ಮತವು ಮತ್ತೆ?**
**ಪೂರ್ಣಗೊಂಡ ಹೃದಯ ಪಕ್ವವರಿತು,**
**ಆದರಿಸುವ ಮನುಜ ಅಂತ್ಯವ ತಿಳಿಯುವನು, ವಿಶ್ವ**

**೧೫೫೨ ಜಾತಿ ನಾನರಿಯೆ; ಜಗವ ನಾನರಿಯೆ;**
**ಜಪವ ನಿಷ್ಠೆಯರಿಯೆ, ಸತ್ಯವಿದುವೆ,**
**ಇಷ್ಟು ಹುಟ್ಟಿತೆಲ್ಲಿ? ನೀನದರ ಸಂಧಿಯರಿ, ವಿಶ್ವ**

**೧೫೫೩ ಜಾತಿಯಲ್ಲಿ ಯಾವ ಜಾತಿ ಮುಖ್ಯ ನೋಡು,**
**ತಿಳಿದುಕೊಳದೆ ತಿರುಗುತಿದ್ದರೇನು?**
**ತಿಳಿವು ಉಳ್ಳ ಮನುಜ ತಾನಾವ ಜಾತಿಯವ? ವಿಶ್ವ**

**೧೫೫೪ ಜಾತಿಗಳಲಿ ಮೇಲು ಜಾತಿಯಾವುದಿಹುದು?**
**ಅರಿವು ಇರದೆ ತಿರುಗೆ, ಏನು ಫಲವು?**
**ಅರಿವು ಇರುವ ಅವನು ಅಧಿಕ ಕುಲಜನಿಹನು ವಿಶ್ವ**

---

೧೫೫೫ ಜಾತಿ ಭೇದವೆಣಿಸಿ ಜನ್ಮಗಳ ತಿಳಿಯದೆ,
ಮುಕ್ತಿಗಾಣಲಾರರು ಮೂರ್ಖ ಜನರು,
ಜಾತಿಯೆಣಿಕೆ ಏಕೆ? ಜನ್ಮಗಳ ತಿಳಿವುದು, ವಿಶ್ವ

೧೫೫೬ ಯೋನಿಯಲ್ಲಿ ಹುಟ್ಟಿ ಉತ್ತಮ ಕುಲಜನಿರೆ,
ಬ್ರಹ್ಮ ಕುಲದ ಒಳಗೆ ಬದುಕಬೇಕು,
ಬ್ರಹ್ಮವರಿಯದಿರಲು ಬಿದ್ದು ಸತ್ತ ರೀತಿ. ವಿಶ್ವ

೧೫೫೭ ಉಚ್ಚೆಗೆ ಸರಿಯಾಗಿ ಹುಟ್ಟಿ,
ಇಚ್ಛಾನುಕೂಲಿಸಿ ಜಗದೊಳೆಲ್ಲಾದರಿರಲ್,
ಅಚ್ಚ ಕುಲಜನಾವನಿಪ್ಪ?
ತುಚ್ಚವಹ ಕರ್ಮವಾಯ್ತು! ಕೇಳಾ ವೇಮಾ

೧೫೫೮ ಕಚ್ಚೆಯು ಕಾಮವು ಆಡಲು,
ತಚ್ಚಂಗದಿ ಜಗ ಹುಟ್ಟಿತು; ತಾತರ ದಿನದೋಳ್
ಹೆಚ್ಚಿನ ಕುಲಜನು ಯಾವನು?
ಸಚ್ಚರಿತರು ಸರ್ವರೆಂದು ಸಾರೆಲೋ ವೇಮಾ

೧೫೫೯ ಉಚ್ಚೆಯೊಳುದಿಸಿದ ತನುವಿದು,
ಕೊಚ್ಚಿ ತೊರೆದು ಕುಲವ, ಮತ್ತೆ ವಿಜ್ಞಾನದೋಳ್,
ಕುಚ್ಚಿತವ ತೊರೆದು, ಸತ್ತ್ವವ;
ಅಚ್ಚೊತ್ತಿ ನಿಲ್ಲಿಸುವವನೆ ಅಧಿಕನು, ವೇಮಾ

೧೫೬೦ ಉಚ್ಚೆಯೊಳಗೆ ಕಾಮ ಮೆಚ್ಚುಗೆಯಿಂ ಕದಲೆ,
ಉತ್ಸುಕತೆಯ ಮಾಡಿ, ಉರ್ವಿ ಇಹುದು,
ಇಲ್ಲಿ ಕುಲಜರಾರು ಇಲ್ಲವಲ್ಲ ಮತ್ತೆ? ವಿಶ್ವ

೧೫೬೧ ಉಚ್ಚಿಗೆ ದಾರಿಯಹ ತಾಣ,
ಕಚ್ಚಾಡಲು, ಜಗ ಹುಟ್ಟಿತು, ತಾತ ಸಮಯದೋಳ್,
ಹೆಚ್ಚಿನ ಕುಲಜರು ಆರೈ?
ಮೆಚ್ಚುತ ಮನದಲಿ ತಿಳಿವುದೆ, ಮಾನ್ಯತೆ ವೇಮಾ.

---

**೧೫೬೨ ಬಾಯಿ ಯೋನಿಯವನ ಬಣ್ಣಿಸುವುದು ದೋಷ,**
**ಹೃದಯ ಯೋನಿಯವನ ಎಣಿಪುದಂತೆ,**
**ಮುಕುಟ ಯೋನಿಯವನ ಮತ್ತೆ ಎಣಿಸೆ ಪಾಪ, ವಿಶ್ವ**

**೧೫೬೩ ಉಚ್ಚಿಗೆ ಪಥವಹ ತಾಣದಿ**
**ಹೆಚ್ಚು ಮಥಿಸೆ ಜಗ ಹುಟ್ಟಿತು ತಾತರ ದಿನದೋಳ್**
**ಹೆಚ್ಚಿನ ಕುಲಜರು ಯಾರೈ?**
**ಅಚ್ಚೆಯಲಿ ಮನದಿ ಹೋರದಿರೆ ಮಾನ್ಯ ವೇಮಾ**

●

## (ಆ) ಚತುರ್ವರ್ಣ

ಸಮಾಜವು ಚತುರ್ವರ್ಣೀಯವಿದೆ. ಬ್ರಹ್ಮ, ನೃಪತಿ, ವೈಶ್ಯ ಮತ್ತು ಶೂದ್ರರು ಈ ವರ್ಣ ಪದ್ಧತಿಯ ಅಂಗವಾಗಿದ್ದಾರೆ. ಶಾಸ್ತ್ರೀಯವಾಗಿ ಅವರವರ ಗುಣ ಮತ್ತು ಕರ್ಮಗಳಿಗನುಸರಿಸಿ, ಆಯಾ ವರ್ಣಗಳ ನಿರ್ಧಾರವಾಗುತ್ತದೆ.

ಅನುಭಾವಿಗಳು ಹೇಳುವಂತೆ ಯಾವೊಬ್ಬ ವ್ಯಕ್ತಿಯನ್ನು ನೋಡಿದಾಗ, ಅವನ ವರ್ಣವು ಕಾಣಬರುತ್ತದೆ. ಒಬ್ಬ ವ್ಯಕ್ತಿಯ ಸುತ್ತಲೂ ಬಿಳಿಯ ವರ್ಣದ ಕಿರಣಗಳಿದ್ದರೆ, ಅವನು ಸಾತ್ವಿಕನು. ಮತ್ತು ಬ್ರಹ್ಮ ಕುಲಜನು. ಕೆಂಪು ವರ್ಣದ ಕಿರಣಗಳಿದ್ದರೆ, ಅವನು ರಾಜಸಿಕನು ಮತ್ತು ಕ್ಷಾತ್ರ ಕುಲಜನು. ಅವನ ಸುತ್ತು ಹಳದಿ ಕಿರಣಗಳಿದ್ದರೆ ಅವನು ಮಿಶ್ರ ವರ್ಣದ ವೈಶ್ಯನು. ಆದರೆ ಯಾರ ವರ್ಣ ಕಿರಣಗಳು ಕಪ್ಪಾಗಿವೆಯೋ ಅವನು ಶೂದ್ರನು. ಮೇಲಿನ ಮೂವರ ಸೇವೆ ಮಾಡಿ, ಶುದ್ಧಿ ಮಾಡಿಕೊಂಡು ಮೇಲೇರಬೇಕು, ಅವನು.

ಆದರೆ ಈ ಬಗೆಯ ವರ್ಣ ವಿಭಜನೆಯಿಂದ ಸಮಾಜದಲ್ಲಿ ಕರ್ಮ ವಿಭಜನೆಯು ನಡೆಯಬೇಕೇ ಹೊರತು, ಆಯಾ ಜನ ಜಾತಿಯನ್ನು ಅನುಸರಿಸಿ ಅಲ್ಲ. ಗುಣ, ಕರ್ಮ ಅನುಸರಿಸಿ ವರ್ಣ ವಿಭಜನೆ ನಡೆಯಬೇಕು.

**೧೫೬೪ ಬ್ರಹ್ಮ, ನೃಪತಿ ವೈಶ್ಯ ಪತಿಗಳು, ಶೂದ್ರರು.**
**ಬ್ರಹ್ಮ, ವಿಷ್ಣು, ಹರರು ಪರರೆ ಇಹರು.**
**ಬ್ರಹ್ಮವನು ತಿಳಿದೊಡೆ, ಬಹು ರೂಪವಿಂತಿದೆ, ವಿಶ್ವ**

**೧೫೬೫ ಬ್ರಹ್ಮ ನೃಪತಿ ವೈಶ್ಯ ಪತಿಗಳು ಶೂದ್ರರು,**
**ಬ್ರಹ್ಮ, ವಿಷ್ಣು, ಹರರು, ಪಶುಗಳೆನಲು,**
**ಬ್ರಹ್ಮ ತಿಳಿಯದಿರಲು, ಬಹಳ ರೂಪವಿಂತು! ವಿಶ್ವ**

— — — — — — — — — — — — — — — — — — — — —

**೧೫೬೬ ಬ್ರಹ್ಮ, ರಾಜ, ವೈಶ್ಯ ಪತಿ ಶೂದ್ರರು ಮತ್ತೆ,**
**ಬ್ರಹ್ಮ, ವಿಷ್ಣು, ನೃಪತಿ ಪಶುಗಳೆಲ್ಲ,**
**ಬ್ರಹ್ಮವೆಂದರಿಯದೆ, ಬಹಳ ರೂಪವಿಂತು ವಿಶ್ವ**

●

## (ಇ) ವರ್ಣ – ಜಾತಿ

ಕುಟಿಲ ಮತಿಗಳು ವರ್ಣಕ್ಕೂ ಜಾತಿಗೂ ಗಂಟು ಹಾಕಿದ್ದಾರೆ. ಹುಟ್ಟಿನಿಂದ, ರಕ್ತ ಸಂಬಂಧದಿಂದ ವರ್ಣವನ್ನು ನಿರ್ಣಯಿಸುವ ಪರಿಪಾಠವು ಸಾವಿರಾರು ವರ್ಷಗಳಿಂದ ನಡೆದು ಬಂದಿದ್ದು, ಈ ತಪ್ಪು ಗ್ರಹಿಕೆಯೇ ಎಲ್ಲರ ತಲೆಯಲ್ಲಿ ಕುಳಿತಿದೆ.

ಹುಟ್ಟಿದ ಜಾತಿಯು ಸ್ತ್ರೀ ಇರಬಹುದು; ಪುರುಷನಿರಬಹುದು. ಅದೇಕೆ ನಪುಂಸಕನಾದರೂ ಇರಬಹುದು. ಅತಿ ಹೆಚ್ಚೆಂದರೆ, ಹುಟ್ಟಿದ ಜಾತಿ ಆರ್ಯನೆನಿಸಬಹುದು. ದ್ರಾವಿಡನೆನಿಸಬಹುದು; ಮಂಗೋಲಿಯನೆನಿಸಬಹುದು; ಆಸ್ಟ್ರಿಕ್ ನೆನಿಸಬಹುದು. ಅವರವರ ಕಪಾಲ, ಮೂಗು, ಕೂದಲುಗಳ ಗುಣಧರ್ಮಗಳಿಂದ ಆಯಾ ಮಾನವ ಜಾತಿಗಳನ್ನು ಗುರುತಿಸಬಹುದು.

ಜಾತಿ ಧರ್ಮಗಳೇಕೆ? ನೀತಿ ಧರ್ಮಗಳೇಕೆ? ಚರ್ಮ ಭೇದಗಳನ್ನೂ ಮತ್ತು ಆಯಾ ಕರ್ಮಗಳನ್ನೂ ದೇವರು ಚಿತ್ತ ಶುದ್ಧಿಗಾಗಿ ಹುಟ್ಟಿಸಿದನೇ? ತಥ್ಯವಿಷ್ಟೆ. ಕನ್ನೆ ವರರು ಸೇರಿ ಸಂಭೋಗಿಸಿದಾಗ ಪಿಂಡ ಉತ್ಪತ್ತಿಯಾಗುತ್ತದೆ. ಈ ರೀತಿ, ಇರುವಾಗ ಗುಡ್ಡದ (ಗೋತ್ರ) ವಾಸಿಗಳಿಗೊಂದು ಕುಲ; ಪ್ರವರ (ದಿನ್ನೆ) ವಾಸಿಗಳಿಗೊಂದು ಕೋಮು ಎಂದು ಮಾಡುತ್ತ, ಅವರಲ್ಲಿ ಮೇಲು ಕೀಳುಗಳನ್ನೂ ಕಲ್ಪಿಸುವ ಕುಟಿಲತೆ ಏಕೆ?

ಹಾಗೆ ನೋಡಿದರೆ, ಸ್ತ್ರೀಯರಿಗೆ ವೈದಿಕ ಬ್ರಾಹ್ಮಣರು ಮಂತ್ರ ದೀಕ್ಷೆ ಪಡೆಯುವ ಅಧಿಕಾರವನ್ನು ನೀಡಿಲ್ಲ. ಹೀಗಾಗಿ ಅವರು ದ್ವಿಜರಾಗದೆ, ಶೂದ್ರರಾಗಿ ಉಳಿದಿರುತ್ತಾರೆ. ಆದ್ದರಿಂದ, ತನ್ನ ತಂದೆ ತಾಯಿ, ತನ್ನ ತಾಯಿಯ ತಾಯಿ, ತನ್ನ ಕಕ್ಕಿ, ತನ್ನ ಹಡೆದ ಇವರೆಲ್ಲರೂ ಶೂದ್ರರಾಗಿರಲು ತಾನೆಂತು ಬ್ರಾಹ್ಮಣನಾಗಬಲ್ಲನು? ಅಂದ ಮೇಲೆ ವೇದಾಧ್ಯಯನದ ಹಾಗೂ ವೈದಿಕ ದೀಕ್ಷೆ ನಿರಾಕರಿಸಿದ ಕಾರಣಕ್ಕಾಗಿ ಜನರ ಬಹ್ವಂಶವನ್ನು ಶೂದ್ರರಾಗಿರಿಸಿದ ಹಲವು ಕುಟಿಲ ವಿಪ್ರರು ಬ್ರಹ್ಮ ಸಾಕ್ಷಾತ್ಕಾರ ಪಡೆಯದೆ ಬ್ರಾಹ್ಮಣರೆಂತಾಗುವರು? ಈ ಕುಟಿಲ ವಿಪ್ರರು ಇತರರಿಗಾಗಿ 'ಭಾಗವತ' ಧರ್ಮವನ್ನು ಪ್ರಸಾರ ಮಾಡಿದ್ದು, ತಾತ್ಕಾಲಿಕವಾಗಿ ಅವರ ಔದಾರ್ಯವೆಂದೇ ಪರಿಗಣಿತವಾಯಿತು.

— — — — — — — — — — — — — — — — — — — — — —

ಇದನ್ನೆಲ್ಲ ಅರಿಯದೆ, ತಾನು ಹುಟ್ಟಿನಿಂದ ಹೆಚ್ಚಿನ ಕುಲದವನೆಂದು ಬೀಗಿ ಭ್ರಮಿಸಿದರೆ, ತನ್ನ ಸ್ವಾರ್ಥಕ್ಕಾಗಿ ಕುಟಿಲೋಪಾಯವನ್ನು ಅನುಸರಿಸಿದಂತೆ. ಮುಸುರೆ ಭಾಂಡೆಗೆ ಮುಕುರುವ ನೊಣದ ಬಾಳು ಅವನದಾಗುವುದು.

೧೫೬೭ ಜಾತಿ ಭೇದಗಳು, ನೀತಿ ಭೇದಗಳನು,
ಚರ್ಮ ಭೇದಗಳನು, ಕರ್ಮಗಳನು,
ಚಿತ್ತ ಶುದ್ಧಿಗಾಗಿ ಸೃಷ್ಟಿಸಿಹುದೆ ದೈವ? ವಿಶ್ವ

೧೫೬೮ ಕೋಲು, ಹೆಸರು, ಪ್ರೀತಿ ಗಟ್ಟಿ ಹೇಳಬೇಡ
ಕಾಣಬರದೆ ಇರುವ ಕನಕ ಸಿರಿಯು?
ಜಂಗಮನಿಹ ಜಾತಿ ಕಾಣಬಾರದೇನು? ವಿಶ್ವ

೧೫೬೯ ಕನ್ನೆ ಜೊತೆಗೆ ವರನು ಕಾಮಿಸಿ ಕೂಡಿದೊಡೆ,
ಒಂದು ವೇಳೆ ಪಿಂಡ ಉದ್ಭವಿಸುತ,
ಅಲ್ಲಿ ಕುಲಜನಾರು? ಅರಿಯೆ ಹೀನರಾರು? ವಿಶ್ವ

೧೫೭೦ ಬೀತು ಹೋಯಿತು ಕುಲ; ಬಿರುದು ನುಂಗಿತು ಕುಲ;
ಅಖಿಲ ಜೀವಿಗಳನು ರಕ್ಷಿಸಿತು ಕುಲ,
ಯಾವ ಕುಲದವನಿರಲಿ, ಇಹಪರಾದಿಯಲ್ಲಿ
ಹಿಡಿತ ಹೊಂದಿದವನು ಹೊಳೆವ ವೇಮ

೧೫೭೧ ಪ್ರವರವಿರುವ ಹೆಸರು ಬೆಳಗುತಿದ್ದರೇನು?
ಅದರೊಳಗೆ ತಗ್ಗಿ, ಅರಿವು ನಿಮಗೆ,
ನಿಜವು ತಿಳಿಯೆ ನೀವು ಸತ್ಯ ಪೂಜ್ಯರಾಗಿ,
ಇಪ್ಪರೆನುವರಿಹದಿ ಒಪ್ಪ ವೇಮ

೧೫೭೨ ಉಚ್ಚೆಯೊಳಗೆ ಹುಟ್ಟಿ, ಉಚ್ಚೆಯೊಳಗೆ ಬೆಳೆದು,
ಉಚ್ಚೆಗಾಸೆ ಪಡಲು ಉಚಿತವಹುದೆ?
ಉಚ್ಚೆಗೆ ಹೇಸುವವನೆ ಉತ್ತಮ ಯೋಗಿಯೈ ವಿಶ್ವ

೧೫೭೩ ಶ್ರೇಷ್ಠ ಕುಲಜನಿರಲು, ಶಿರ ಸಮ ಸಿರಿಯಿಡಲು,
ಭಾಗ್ಯ ಪುರುಷನೆಂತು ಕೈ ಹಚ್ಚುವ?
ಪರಮಸಾಧ್ವಿ ಪರಸ್ಪರ್ಶವರಿಯಳಯ್ಯ ವಿಶ್ವ

೧೫೭೪ ಅಭಿಜಾತ್ಯನೆಂದು ಆಯುಷ್ಯದ ತನಕ
ತಿರುಗುತಿಪ್ಪ ಭ್ರಮಿಸಿ ತಾನರಿಯದೆ;
ಮುಸುರೆ ಭಾಂಡೆಯನ್ನು ಮುತ್ತುವ ನೊಣದಂತೆ ವಿಶ್ವ

೧೫೭೫ ತಾಯಿ–ಹಡೆದ ತಾಯಿ, ತನ್ನ ತಾಯಿ, ಕಕ್ಕಿ,
ತಂದೆ–ಹಡೆದ ತಾಯಿ, ತಾತ–ತಾಯಿ,
ಎಲ್ಲ ಶೂದ್ರರಿರಲು, ಎಂತು ಬ್ರಾಹ್ಮಣನಿಹ? ವಿಶ್ವ

೧೫೭೬ ಭುವಿ ಕುಲವೊಂದರಲಿ ಹುಟ್ಟಿ,
ಭುವಿ ಸುರ ಕುಲದಲ್ಲಿ ಬೆಳೆದು, ಭುವಿ ಸುರ ಕುಲದೋಳ್
ಅವಿರಳ ಛೀ ಛೀ ಎನ್ನುತ,
ಶಿವಕುಲದಲಿ ತಿರುಗುವವನು, ಸಿದ್ಧನು, ವೇಮಾ.

೧೫೭೭ ಬಿಂದು ರಕ್ತದಿಂದ ಬೆರೆತ ದೇಹಕಿಪ್ಪ,
ಚಂದವರಿಯ; ದ್ವಿಜ ಶಬ್ದ ಬಿಡದೆ,
ಸಂದಲೇನವಗೆ; ತಪ್ಪವು ಮೃತ್ಯು ನರಕ ವಿಶ್ವ

೧೫೭೮ ದ್ವಿಜ ಕುಲದಲ್ಲಿಯೆ, ತೇಜಿಸುತ್ತ ಜನಿಸಿ,
ತಾನು ದಾಟ; ಪರರ ದಾಟಗೊಡದ,
ಅವನು ಇದ್ದರಿಲ್ಲದಿದ್ದರೂನು ಒಂದೆ, ವಿಶ್ವ

## ಈ. ವರ್ಣ–ಗುಣ–ಕರ್ಮ

ಶ್ರೀಮದ್ಭಗವದ್ಗೀತೆಯಲ್ಲಿ, 'ಚಾತರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ". ಎಂದರೆ, "ಆಯಾ ವ್ಯಕ್ತಿಗಳ ಗುಣ ಕರ್ಮಗಳಿಗನುಸಾರವಾಗಿ ಸಮಾಜದಲ್ಲಿ ನಾಲ್ಕು ವರ್ಣಗಳನ್ನು ನಾನು (ಪರಮಾತ್ಮನು) ಸೃಜಿಸಿದ್ದೇನೆ." ಪರಮಾತ್ಮ ಎಂಬ ಒಂದೇ ಗಿಡದ ಮೇಲೆ ಹಲವು ಹೂವು ಮಟ್ಟದಲ್ಲಿ, ಹಲವು ಮಿಡಿಗಾಯಿ ಮಟ್ಟದಲ್ಲಿ, ಹಲವು ಪಾಡುಗಾಯಿ ಮಟ್ಟದಲ್ಲಿ ಬೆಳೆದು, ಮಾಗಿ ಕೊನೆಗೆ ಹಣ್ಣುಗಳಾಗುತ್ತವೆ. ಈ ಹಣ್ಣುಗಳನ್ನು ಆಸ್ವಾದಿಸುವವರ ವರ್ಗವಾವುದೆಂಬುದನ್ನು ತಿಳಿಯಬೇಕು. ಕರ್ಮಫಲಗಳನ್ನು ಆಸ್ವಾದಿಸುವವರ ವರ್ಣವೇ ಅವರವರ ಗುರುತು.

ಸನಕ ಸನಂದಾದಿ ಮನುಕುಲದ ಮೂಲ ಪುರುಷರು ಸಕಲ ಜಾತಿವರ್ಗದ ಜನರಿಗೆ ಆಧಾರವಾಗಿದ್ದಾರೆ; ಆದರೆ ಅಂಥ ಸರ್ವ ಸಮತೆಯ ಸರ್ವ ಮಾನ್ಯ ಮೂಲ ಪುರುಷರು ಎಲ್ಲಿಯೂ ಕಾಣಬರುವುದಿಲ್ಲ.

ಆತ್ಮ ಶುದ್ಧಿ ಹೊಂದಿ ಒಬ್ಬನು ಬ್ರಾಹ್ಮಣನೆನಿಸಬೇಕು. ಆಗ ಅವನಿಗೆ ನಮಿಸಿದರೆ, ಅವನು ಹರಕೆ ಈಯುತ್ತಾನೆ. ಹಾಗಿಲ್ಲದಿದ್ದರೆ ಎಲ್ಲ ಪ್ರಸ್ತುತಿಯೂ ಕಂಠಶೋಷವಾಗುತ್ತದೆ.

ಋಷಿ ಕುಲದಲ್ಲಿ ಹುಟ್ಟಿದವರು, ತಮ್ಮ ತಮ್ಮ ಕುಲ ಗೋತ್ರ (ಪರ್ವತ)ಗಳ ಸಂಪ್ರದಾಯ ಪಾಲಿಸಿಕೊಂಡು ಬರಬಹುದು. ಆದರೆ, ತಾವು ಬ್ರಹ್ಮ ಕುಲದವರಾಗದೆ ಬ್ರಾಹ್ಮಣ ಎಂತಾಗುವರು? ಬರೀ ಬ್ರಾಹ್ಮಣನೆಂದುಕೊಂಡರೆ ಏನು? ದಿಂಬಿಗೆರಗಿ ಕುಳಿತರೆ ಬ್ರಾಹ್ಮಣನಾಗಬಹುದೇ? ಹೀನ ಕೆಲಸ ಮಾಡಿದರೆ, ಮೋಸ ವಂಚನೆ ಮಾಡಿದರೆ ಹೇಗೆ ಬ್ರಾಹ್ಮಣನಾದಾನು? ಅವನನ್ನು ಏಕೆ ಗೌರವಿಸಬೇಕು? ಕುಲವು ಲೆಕ್ಕಕ್ಕಿರದು ಗುಣವೇ ಗಣನೀಯ.

ಯಾರನ್ನೇ, ಆಗಲಿ ಅವರವರ ಘನತೆಗಾಗಿ ಮನ್ನಿಸುತ್ತಾರೆ. ಅವರವರ ರಕ್ತ ಸಂಬಂಧಗಳಿಂದಲ್ಲ. ವಾಸುದೇವ ಕೃಷ್ಣನು ಶ್ರೇಷ್ಠನೆನ್ನದೆ ವಸುದೇವನನ್ನು ಸ್ಮರಿಸಬಹುದೇ?

ಚಂದನ ಗಿಡವಿರುವ ವನವು ಸುಗಂಧಭರಿತವಾಗುವಂತೆ ಸದ್ಗುಣಿಯಿಂದ ಕುಲಕ್ಕೆ ಶೋಭೆಯುಂಟು.

ಹೆಣ್ಣುಮಕ್ಕಳಿಗೆ ಧರ್ಮದೀಕ್ಷೆಯೇಕೆ ಬೇಡ? ಅವಳಿಗೇನು ಶುದ್ಧಾಂತ ರಂಗವಿರದೇನು? ಅವಳೂ ಸಾಧನ ಮಾಡಬಲ್ಲಳು. ಬ್ರಹ್ಮ ಪದವಿ ಹೊಂದಿ ಬ್ರಾಹ್ಮಣಳಾಗಬಲ್ಲಳು.

ಜನರನ್ನು ಶೂದ್ರರೆಂದು, ಸ್ತ್ರೀಯರೆಂದು ಅತಿಶೂದ್ರ ಇಲ್ಲವೆ ಹೊಲೆ ಮಾದಿಗರೆಂದು ವಂಚಿಸುವುದು ಬೇಡ. ಹೊಲೆಯರೆಂದು ಜನರನ್ನು ಕರೆಯುವ, ಮಾತು ಬದಲಿಸುವವನೇ ಹೊಲೆಯನೆನಿಸುತ್ತಾನೆ.

ಹೆಚ್ಚಿನ ಕ್ರಮಬದ್ಧ ಸಾಧನೆ ಇಲ್ಲದ ಹೀನ ಜಾತಿಯವನು ತಾನು ಪರಮ ವೈಷ್ಣವ ಇಲ್ಲವೆ 'ಭಾಗವತ' ಎಂದು ಕೊಂಡರೆ, ದ್ವಿಜರಿಗಿಂತ ಹೆಚ್ಚಿನವನಾಗುವನೇನು? ಸೆರೆಯ ಗೊಬ್ಬಿಗೆ ಗಂಧ ಬಳಿದರೆ ಅದೇನು ಅಮೃತವಾಗುವುದೇ?

ಯಜ್ಞದ ಒಂದು ಕ್ರಮದಲ್ಲಿ ಯೋನಿಯನ್ನು ತೊಳೆದು ಆ ನೀರು ಕುಡಿದರೆ, ಬ್ರಾಹ್ಮಣನೆನಿಸುತ್ತಾನೆ. ಎಂಬ ಗ್ರಹಿಕೆಯಿದೆ. ಬ್ರಹ್ಮವರಿಯದೆ ಹೇಗೆ ಬ್ರಾಹ್ಮಣನಾಗಬಲ್ಲನು?

**೧೫೭೯ ಹುಟ್ಟಿ ಮರದ ಮೇಲೆ, ಹೆಚ್ಚು ಆಗಿ ಕಾಯಿ**
**ತಾನೆ ಕಾಂತಿ ಹೊಂದಿ ತಕ್ಕ ಹಣ್ಣು;**
**ಹಣ್ಣು ತಿನ್ನುವವರ ವರ್ಣವನ್ನು ತಿಳಿಯಿರೊ ವಿಶ್ವ**

— — — — — — — — — — — — — — — — — — — — — —

೧೫೮೦ ಅಖಿಲ ಜಾತಿಗಳಿಗೆ ಆಧಾರವಾದಂಥ,
ಮಹಿಮ ಸನಕರಾದಿ ಮಾನ್ಯ ಋಷಿಗಳು,
ಎನಿತೊ ಜನ್ಮಗಳಲಿ ಎಲ್ಲಿಯೂ ಕಾಣರು ವಿಶ್ವ

೧೫೮೧ ಆತ್ಮ ಶುದ್ಧಿ ಹೊಂದಿ, ಅಧಿಕರೆಂದು ಹೇಳ್ವರು;
ಧೀರ ವೃತ್ತಿ ಹೊಂದಿ, ತಿರುಗದಿಹರು
ರೂಪ ಕುದುರಿ ಕ್ರಮದಿ ರೂಢಿಯಿಂ ಮಗ್ನರು ವಿಶ್ವ

೧೫೮೨ ಬೊಮ್ಮಣಂಗೆ ನಮಿಸಲವನು ಹರಕೆಯೀವ;
ಆತ್ಮ ಶುದ್ಧಿ ಹೊಂದಿ ಆತನಿರಲು,
ಎಲ್ಲ ಸಫಲವಲ್ಲದಿರಲು ಕಂಠ ಶೋಷ! ವಿಶ್ವ

೧೫೮೩ ಋಷಿ ಕುಲದಲಿ ತಾವು ರೂಢಿಯಿಂದ ಜನಿಸಿ,
ಕುಲವ, ಗೋತ್ರಗಳನು ಕಾಯ್ದು ವಂಶ,.
ಬ್ರಹ್ಮ ಕುಲವಾಗದೆ, ಬ್ರಾಹ್ಮಣೆಂತಾಗುವ? ವಿಶ್ವ

೧೫೮೪ ಬ್ರಾಹ್ಮಣೆನುತಿಹರು; ಬ್ರಹ್ಮ ತನವೆ ಇರದೆ,
ಬ್ರಾಹ್ಮಣನದು ಹೇಗೊ? ಬ್ರಾಹ್ಮಣೆನುತ,
ಬೊಂಬೆಯಂತೆ ತಾನು ದಿಂಬಿಗೊರಗಿ ಕುಳಿತ ವಿಶ್ವ

೧೫೮೫ ಹಲವು ಹೀನ ಕಾರ್ಯ ಮಾಡಿ ಬ್ರಾಹ್ಮಣೆಂದು,
ಗಳಪಿದೊಡನೆ ಗೌರವಿಸಬಪ್ಪುದೆ?
ಕುಲವು ಲೆಕ್ಕಕುಂಟೆ? ಗುಣದ ಗಣನೆ ಲೇಸು ವಿಶ್ವ

೧೫೮೬ ಮೇಲು ಘನತೆಗಾಗಿ ಮನ್ನಿಸುವರೆ ಹೊರತು;
ಸಣ್ಣ ದೊಡ್ಡ ತನದ ಎಣಿಕೆ ಬೇಡ.
ವಾಸುದೇವನೆನದೆ ವಸುದೇವನೆಂಬರೆ? ವಿಶ್ವ

೧೫೮೭ ಕುಲದೊಳೊಬ್ಬ ಗುಣವಂತನಾಗಲು,
ಕುಲಕೆ ಶೋಭೆಯವನ ಗುಣಗಳಿಂದ
ಕಳೆಗಟ್ಟಿತು ವನ, ಗಂಧದ ಗಿಡದಿಂದ, ವಿಶ್ವ

೧೫೮೮ ಶೂದ್ರ ಯುವತಿ ಸುತಗಿದೆ, ಶುದ್ಧಾಂತರಂಗ;
ವೇದ ವೇದ್ಯ ಮೂಲವರಿಯಲಾಗ,
ಬೊಮ್ಮ ಪದವಿ ಹೊಂದಿ ಬ್ರಾಹ್ಮಣನಾಗನೇ? ವಿಶ್ವ

೧೫೮೯ ಉದ್ಧರಿಸುತ ಇಹನು, ಉತ್ತಮನಿರೆ, ಕುಲವ,
ಮಧ್ಯಮನಿಹ ಅದರ ಮಾಟ ಕಾಣ,
ಅಧಮನಿಪ್ಪ ಅವನು ಅಡಗಿಸುವನೊಮ್ಮೆಲೆ. ವಿಶ್ವ

೧೫೯೦ ಜಾತಿಯವರು ಎಲ್ಲ ಜಾತಿ ವಿದ್ಯೆಯರಿತು,
ಜಾಣರಾಗಿ ಹೆಚ್ಚಿ, ಜಗದ ಒಳಗೆ,
ಬ್ರಾಹ್ಮಣೆನ್ನುವವರು ಬ್ರಹ್ಮವನೆ ಅರಿಯರು, ವಿಶ್ವ

೧೫೯೧ ಹೊಲೆಯ ಹೊಲೆಯನಲ್ಲ ಜಗದಿ ಜನುಮದಿಂದ,
ಮಾತು ಬದಲಿಸುವನೆ ಹೊಲೆಯನೆಂದ,
ಹೊಲೆಯರೆಂದು ನರರ ಕರೆಯುವವನೆ ಹೊಲೆಯ, ವಿಶ್ವ

೧೫೯೨ ಮಾದಿಗ ಎನಬೇಡ, ಮತ್ತೆ ಗುಣವಿರುತಿದೆ,
ಮಾದಿಗಳೆನೆ ವಸಿಷ್ಟ ಮಡದಿ ಬರಳೆ?
ಮಾದಿಗ ಗುಣವಿರಲು, ಮತ್ತೆ ದ್ವಿಜನು ಎಂತು? ವಿಶ್ವ

೧೫೯೩ ಪರ ಧನವ ಪಡೆಯೆ ಪ್ರಾಣವನೀಯುವನು,
ಸತ್ಯವಿನಿತು ಇರದೆ ಜಾರನಾಗಿ,
ದ್ವಿಜರು ಎಂದುಸುರುವ, ತೇಜವಿನಿತು ಇಲ್ಲ, ವಿಶ್ವ

೧೫೯೪ ಜಪವ, ಬಾಹ್ಯ ಪೂಜೆ ಸಾಕಷ್ಟು ಮಾಡಿಯೂ
ಕಪಟವ ಬಿಡದಿರಲು ಕಷ್ಟ ಜನಕೆ,
ಮುಕ್ತಿ ಪಡೆದುಕೊಳದೆ ಮುಳುಗಿದರು ತಮದೊಳು, ವಿಶ್ವ

೧೫೯೫ ಬ್ರಾಹ್ಮಣನು ಎನುವರು, ಬ್ರಹ್ಮತ್ವ ಮನದಿಲ್ಲ,
ಬ್ರಾಹ್ಮವದುವು ಏಕೆ? ಬ್ರಾಹ್ಮಣಂತೆ!
ಬೊಂಬೆಯಂತೆ ತಾನು ದಿಂಬು ಮೇಲೆ ಕುಳಿತ. ವಿಶ್ವ

೧೫೯೬ ಬ್ರಹ್ಮ ತಲೆಯ ಹೊಡೆಯೆ, ಪಾರುಗಾಣುವ ತಾಣ,
ಅಡ್ಡವಾಗಿ ಬಂದ್ರ ಅಖಿಲ ಸುರರು,
ಶಿವನ ಕರುಣೆಯಿರದ ಶುಂಭಗಾವ ದಿಕ್ಕು? ವಿಶ್ವ

೧೫೯೭ ಶ್ರೇಷ್ಠ ಕುಲಜನಿರಲು, ಶಿರ ಸಮ ಸಿರಿಯಿಡಲು,
ಭಾಗ್ಯ ಪುರುಷನೆಂತು ಕೈ ಹಚ್ಚುವ?
ಪರಮ ಸಾಧ್ವಿ ಪರ ಸ್ಪರ್ಶವರಿಯಳಯ್ಯ! ವಿಶ್ವ

೧೫೯೮ ದಾಸನೆನಲೇಸು ಸಾವಿರ ಸಲವೋರ್ವನ
ಜಂಗಮನೆನಲೇಸು ಲಿಂಗವಿರಲು,
ಬ್ರಾಹ್ಮಣನೆನಬೇಡ ದಶ ಸಹಸ್ರಕೊಬ್ಬನ ವಿಶ್ವ

೧೫೯೯ ದ್ವಿಜ ಕುಲದೊಳು ತೇಜವಂತನಾಗಿ ಜನಿಸಿ
ತಾನು ದಾಟ ಅನ್ಯರ ದಾಟಿಸನು,
ಅವನಿದ್ದರು ಒಂದೆ, ಇರದಿದ್ದರು ಒಂದೆ, ವಿಶ್ವ

೧೬೦೦ ಪ್ರಳಯ ಕಾಲದಲ್ಲಿ ಪ್ರಮಥರ ಕಾರ್ಯವು,
ಅಳಿದು ಹೋಗದೇನು? ಆಗ ಜನರು,
ತಿಳಿಯಲಾರದಿಹರು, ದೇವ ದ್ವಿಜರೆಲ್ಲ, ವಿಶ್ವ

೧೬೦೧ ಮಾತು ಎಲ್ಲ ತಗಲು, ಮನಸು ಬರೀ ಕಳ್ಳ
ಇಂಥವಗೇಕೆ ಪ್ರಾಣ? ಇನ್ನು ಬದುಕು?
ಮಾತು ಸತ್ಯವಿರಲು ಮತ್ತೆ ಶತಾಯುಷಿಯು, ವಿಶ್ವ

೧೬೦೨ ಅನೃತ ನುಡಿವವನಿಳೆಯಕ್ಕಸಾಲಿ ಕಳ್ಳ,
ಅವನ ಮಾತು ಎಂತೊ? ಅವನು ಕಳ್ಳ,
ಮಣ್ಣು ಹೊನ್ನು ಮಾಡಿ, ಮತ್ತೆ ಹಿಡಿದುಕೊಳ್ಳುವ, ವಿಶ್ವ

೧೬೦೩ ಯೋನಿ ತೊಳೆದ ನೀರು ಒನಪಿನಿಂದ ಕುಡಿದು,
ಅಂತೆ ಬ್ರಹ್ಮ ಮತವು ಅಂದರೇನು?
ಬ್ರಹ್ಮ ನಿಷ್ಠೆಯಿಂದ ಬ್ರಾಹ್ಮಣಾಗಬೇಕು ವಿಶ್ವ

## ಉ) ಮೇಲು–ಕೀಳು ಧನ–ಅಧಿಕಾರ

ಸಮಾಜದಲ್ಲಿ ಕೆಲವರನ್ನು ಮೇಲಿನವರೆಂದೂ ಬೇರೆ ಕೆಲವರನ್ನು ಕೆಳಗಿನವರೆಂದೂ ಪರಿಗಣಿಸಲಾಗುತ್ತದೆ. ಈ ತಾರತಮ್ಯ ಗಣನೆಗೆ ಇರುವ ಅಳತೆಗೋಲಾವುದು?

ಒಂದನೆಯದಾಗಿ, ವೇಷ–ಭೂಷಣಗಳು. ಮಾಸಿದ ತಲೆಯವನು, ಮಲಿನ ವಸ್ತ್ರದವನು, ಒಡಲು ಜಿಡ್ಡಿನವನು ಶ್ರೇಷ್ಠ ಕುಲದಲ್ಲಿ ಜನಿಸಿದ್ದರೂ ಶ್ರೇಷ್ಠನೆನಿಸನು. ಕುಲದ ಮೇಲ್ಮೆಯನ್ನು ಮುಂದುಮಾಡದೆ, ಗೋತ್ರ ಮೇಲ್ಮೆಯನ್ನು ಮುಂದೆ ಮಾಡಿ ತಾವು ಹೆಚ್ಚಿನವರೆಂದು ಜಂಭ ಕೊಚ್ಚುವವರೆಲ್ಲರೂ ಶ್ರೀಮಂತರ ಅಡುಗೆ ಮಾಡುವ ಸ್ತ್ರೀಯರ ಮಕ್ಕಳಷ್ಟೇ. ಇದರಿಂದ ಸ್ಪಷ್ಟವಾಗಿ ತಿಳಿಯುವದೇನೆಂದರೆ, ಕುಲವು ಯಾವುದಾದರೂ, ವ್ಯಕ್ತಿಯ ಶ್ರೀಮಂತಿಕೆ ಗಣ್ಯವೆನಿಸುತ್ತದೆ. ಕನಕವಿಲ್ಲದವನ ಕುಲವೂ ಕೀಳೆನಿಸುವುದು. ಅಂದ ಮೇಲೆ ಕುಲಕ್ಕಿಂತ ಕನಕದ ಗಣನೆಯೇ ಮೇಲೆನಿಸುತ್ತದೆ.

ಆದ್ದರಿಂದ ಮೇಲು–ಕೀಳೆಂಬ ತಾರತಮ್ಯ ಭಾವನೆಯು ಸಲ್ಲದು. ಜಾಣನು ಸರ್ವರನ್ನು ಸಮಭಾವದಿಂದ ನೋಡುತ್ತಾನೆ.

ಹವಳದ ಓಲೆ, ಸ್ವರ್ಣದ ಹೂವು ಧರಿಸಿದ್ದರೆ, ಹೀನ ಕುಲದಲ್ಲಿ ಜನಿಸಿದ್ದರೂ ಮೇಲಿನವನಾಗಿ ಕಾಣುವರು. ಅವನು ಪಶುಪ್ರಾಯ ಬುದ್ಧಿಯವನನಿದ್ದರೂ ಸರಿಯೇ. ದೇಹಕ್ಕಾಗಿ ಮನುಷ್ಯನು ಏನೇನೋ ಮಾಡುತ್ತಾನೆ. ಕೂಳಿನಲ್ಲಿ ಭೇದ, ಕುಲದಲ್ಲಿ ಭೇದ ಮಾಡುತ್ತ ಮನುಷ್ಯನು ಕಷ್ಟ ಪಡುತ್ತಿದ್ದಾನೆ. ನೈಜವೆಂದರೆ ಜಾತಿಯಲ್ಲಿ ಮೇಲು ಕೀಳೆಂಬುದಿಲ್ಲ. ಎಲ್ಲರೂ ಸಮಾನರು. ಇದನ್ನು ಅರಿತ ಮನುಜನ ಕುಲವೇ ಮೇಲು.

ವೇಷ ಭೂಷಣಗಳು ಚೆನ್ನಾಗಿರಲು ಹೆಚ್ಚಿನ ಮಾನವುಂಟು. ಬಂಗಾರ ಹೊಂದಿದ್ದರೂ ಮಾನವುಂಟು. ಉಭಯತಾಪಿ ಇರದವನನನ್ನು ಹೊಲೆಯನೆಂದೇ ಕಾಣುವರು. ಏಕೆಂದರೆ ಹೇಮವೇ ಸಕಲ ಭೋಗಗಳಿಗೆ ಮೂಲವೆನಿಸುವುದಲ್ಲವೇ?

ಗುಣದಿಂದ ಹೀನನಾದವನಿಗೆ ಇರಲಿಕ್ಕೆ ಇಂಬುಗೊಟ್ಟರೆ, ಅದರಿಂದ ಯಾರಿಗೇ ಆಗಲಿ ಹಾನಿ ಬಪ್ಪುದು.

ಇದನ್ನೆಲ್ಲ ತಿಳಿಯಬೇಕು. ತಾನು ಯಾರು? ಎಂಬುದನ್ನು ತಿಳಿಯಬೇಕು. ತನ್ನ ಗುಣ–ಕರ್ಮಗಳೇ ತನ್ನ ಇರವಿಗೆ ಕಾರಣವೆಂಬುದನ್ನು ತಿಳಿಯಬೇಕು.

**೧೬೦೪ ಮಾಸಿದ ತಲೆಯೊಡನೆ, ಮಲಿನ ವಸ್ತ್ರದೊಡನೆ,**
**ಒಡಲು ಜಿಡ್ಡಿನೊಡನೆ ಪೊಡವಿಯೊಳಿರೆ,**
**ಆಗ್ರ ಜನ್ಮವಿರಲಿ ಅಂತೆ ಹೋಗೆನುವರು,** ವಿಶ್ವ

— — — — — — — — — — — — — — — — — — — — —

೧೬೦೫ ಕುಲದ ಮೇಲ್ಮೆಯುಳ್ಳ, ಗೋತ್ರ ಮೇಲ್ಮೆಯುಳ್ಳ,
ಜಾಣ್ಮೆಯಿಂದ ಜಂಭ ಪಡುವ ಜನರು,
ಐಶ್ವರ್ಯವಂತರ ಅಡುಗೆಯವನ ಸುತರೆ, ವಿಶ್ವ

೧೬೦೬ ಕುಲವು ಇಲ್ಲದವನು ಕನಕದಿಂದ ಮೇಲು
ಕನಕವಿಲ್ಲದವನ ಕುಲವು ಕೀಳು,
ಕುಲಕಿಂತ ಮಿಗಿಲು ಕನಕ ಮುಖ್ಯವಿಹುದು. ವಿಶ್ವ

೧೬೦೭ ಉಚ್ಚ ನೀಚವೆನದೆ ಉಂಟು ಮನದಿ ಸತತ;
ತೊಡಕು ಇರದ ತಿಳಿವು ತಿಳಿದು ಬೆಳಗಿ,
ನೇರ ನೋಳ್ಪುದೆಲ್ಲ ನೆರೆ ಜಾಣ ವಿದ್ಯೆಯು, ವಿಶ್ವ

೧೬೦೮ ಹರಳು ಸರವು, ಹೊನ್ನು ಹುಟ್ಟಿಸುವ ವಿದ್ಯೆಯು,
ಕಾಯ ಪುಷ್ಟಿ ವಿಪುಲ ಕೂಡಿ ಇರಲು,
ಕುಲವು ಯಾವುದಿರಲಿ, ಘನನೆಂದು ಕರೆವರು, ವಿಶ್ವ

೧೬೦೯ ಹವಳ ಓಲೆ, ಸ್ವರ್ಣ ಹೂವು ಆದಿಯಿರಲು,
ಸಂಪದ ಇರುವವನ, ಜಗದ ಒಳಗೆ,
ಹೀನ ಕುಲಜನಿರಲಿ, ಹೆಚ್ಚಿನವನೆನುವರು, ವಿಶ್ವ

೧೬೧೦ ತಲೆಯ ಪೇಟ, ಬೊಜ್ಜು ದೇಹ, ಪೀತಾಂಬರ,
ಕರ್ಣದೋಲೆಯವನ ಕಡೆಗೆ ಹೋಗೆ,
ಶುದ್ಧ ಪಶುವು ಅಷ್ಟೆ, ಬುದ್ಧಿಯಲ್ಲಿ ಅರಿಯೆ, ವಿಶ್ವ

೧೬೧೧ ಮುತ್ತು ಕರ್ಣದೋಲೆ, ಮತ್ತುಡಿಗೆ ತಾಂಬುಲ,
ಕಾಯ ಪುಷ್ಟಿ ಒಡೆದು ಕಾಣಲಾಗ,
ಕೆಳಗು–ಜಾತಿಯೇನು? ಒಳಗೆ ಬಾಯೆನುವರು, ವಿಶ್ವ

೧೬೧೨ ಮೇಲು ಕೀಳು ಎನಲು, ಮತ್ತೆ ಯಾರಿಗೇನು?
ತನುವು ನಿತ್ಯವಿಹುದೆ? ತಥ್ಯವರಿಯೆ,
ಅರಿತು ಅರಯದಿಹರು ಏನು ಎನ್ನಬಹುದು? ವಿಶ್ವ

---

೧೬೧೩ ಕುಲವ ಕೈಲಿ ಹಿಡಿದು ಗುಂಪೆ ಹಾಕಲೇಕೆ?
ಮಡಿಯ ಗೆಯ್ದ ಜಾಗ ಬೀಜ,
ಏಕೆ ಕುಲವು ಇನ್ನು? ಎತ್ತಣ ದ್ವಿಜನಯ್ಯ? ವಿಶ್ವ

೧೬೧೪ ಕೂಳಿನಿಂದಲೇನು? ಕುಲದಿಂದಲಿನ್ನೇನು?
ಭೂಮಿಯಿಂದಲೇನು? ದೇಹಕಾಗಿ.
ನರ ಪಡುವೀ ಪಾಡು, ನಗುಪಾಟ್ಲು ನೋಡಾ! ವಿಶ್ವ

೧೬೧೫ ಬರಿದೆ ಹೋಯ್ತು ಕುಲವು, ಬಿರುದು ನುಂಗಿ ಕುಲವು
ಎಲ್ಲ ಜೀವರನುಭವಿಪರು ಕುಲವ,
ಇಂಥ ಕುಲವ ಸತತ, ಇಹಪರಂಗಳಲಿ,
ಹಿಡಿದುಕೊಂಡ ಜನಕೆ ಹಿರಿಮೆ ವೇಮ,

೧೬೧೬ ಇಷ್ಟು ಜಾತಿಗಳಲಿ 'ನಾನು' ಜಾತಿ ಮುಖ್ಯ,
ತಿಳಿವು ಉಳ್ಳ ಜನರು ತಾವು ಹೆಚ್ಚು,
ತಿಳಿವು ಇಲ್ಲದವರು ಯಾವ ಜಾತಿಯಿರಲಿ,
ಹೀನ ಜಾತಿಯೆಣಿಕೆ ತಿಳಿಯೊ ವೇಮಾ

೧೬೧೭ ಜಾತಿಯೊಳಗೆ ಮೇಲು–ಜಾತಿ ಕೀಳು ಎಲ್ಲಿ?
ನಿಜವರಿಯದೆ ತಿರುಗಲೇನು ಫಲವು?
ಇದನರಿತ ಮನುಜನ ಕುಲವೆ ಮಿಗಿಲು ಕಣಾ! ವಿಶ್ವ

೧೬೧೮ ಸ್ಥಿರತೆಯಿರದ ಕ್ಷುದ್ರ ಪರದ–ಕೂಟ ಗೆಯ್ದು,
ಹೆಚ್ಚು–ಕಡಿಮೆ ಎಂದು, ಹೀನ ಮತರು,
ಕತ್ತೆಯ ಮರಿ ಎಂದು ಗಕ್ಕನೆ ಕೆಡುತಿಹರು ವಿಶ್ವ

೧೬೧೯ ಮೈಲಿ ಬಟ್ಟೆಯಿಂದ ಮಾಸಿದ ತಲೆಯಿಂದ,
ಒಡಲು ಹೊಲಸಿನಿಂದ ಒಡಗೂಡಿರೆ,
ಅಧಿಕ ಕುಲಜರಿರಲಿ, ಅತ್ತಿತ್ತ ಕರೆಯರು, ವಿಶ್ವ

೧೬೨೦ ಕನಕ ಕೈಯೊಳಿರಲು ಕಾಮನಂತೆ ಮಾನ,
ಇಲ್ಲವಾಗಲೇನು ಇಲ್ಲವಿಲ್ಲ!
ಮದನನಂಥ ಮನುಜನಾಗ ಹೊಲೆಯನಂತೆ. ವಿಶ್ವ

೧೬೨೧ ದೆಶೆಯು ಇರುವರೆಲ್ಲ ತಮ್ಮ ಬಂಧುವಯ್ಯ!
ದೆಶೆಯು ಇಲ್ಲದಿರಲು ಅಷ್ಟಕಷ್ಟೆ,
ದೆಶೆಯು ಎಂದೊಡೆ ಧನ ದೆಶೆಯು ಒಂದೆ ದೆಶೆಯು, ವಿಶ್ವ

೧೬೨೨ ಪತಂಗ ಇತರ ಜಂತು ವಿತತಿಗಿಂತ ಮೇಲು
ಎಂತು? ರೆಕ್ಕೆ ಇದ್ದು ಎರಗದಿರಲು?
ವ್ಯರ್ಥ ಯೋಗಿ ಇಂಥ ವೈಖರಿಯವನತ್ತಿ! ವಿಶ್ವ

೧೬೨೩ ಹೇಮವಿರಲು ಸಕಲ ಕೋಮುಗಳಲಿ ಮಿಗಿಲು,
ಹೇಮ ಭೋಗ ಭಾಗ್ಯಕೆಲ್ಲ ನೆಲೆಯು,
ಹೇಮವಿಲ್ಲದವನ ಕೋಮು ಎಂಥ ಕೋಮು? ವಿಶ್ವ

೧೬೨೪ ಹೊನ್ನು ಮತ್ತು ರತ್ನ, ಹೂಗಳಾದಿಯಾಗಿ
ಸಂಪದವಿರುವವನು ಜಗದ ಒಳಗೆ,
ಹೀನ ಕುಲಜನಿರಲಿ ಹೇಗೊ, ಏನೊ, ಇರಲಿ,
ಬನ್ನಿ ಬನ್ನೆನುವರು ಭುವಿಲಿ ವೇಮ

೧೬೨೫ ಬರಿಯ ದೊಡ್ಡಿಸ್ತಿಕೆಯ, ಬಿಡುವ ವಿಧವರಿಯದ
ನರನೆ ಹೊರತು; ಮನುಜನೆನಿಸಿ ಹುಟ್ಟಿ,
ಕೀಳು–ಮೇಲರಿಯದೆ, ಕೆಳಗೆ ಬಿದ್ದ ನೋಡು, ವಿಶ್ವ

೧೬೨೬ ಗುರುವಿನ ವಿಧಿಗಳಿಂದ ಕುಲವೆ ಹಾಳಾಯ್ತು;
ಸ್ತ್ರೀಯ ನಡತೆಯಿಂದ ಸಿಗ್ಗು ಹೋಯ್ತು,
ಮಲಿನ ಗುಂಡಿಯಿಂದ ಮಹಿಯೆ ಕೆಟ್ಟು ಹೋಯ್ತು, ವಿಶ್ವ

೧೬೨೭ ಹೀನ ಜಾತಿಯವಗೆ ನಿಲಲಿಂಬುಗೊಟ್ಟರೆ,
ಹಾನಿ ಬರುವುದೆಂಥವನೇ ಇರಲಿ,
ಹೊಟ್ಟೆ ಸೇರಿದ ನೊಣ, ಹಾಗೆ ಹೀಗೆನಿಸದೆ? ವಿಶ್ವ

೧೬೨೮ ತನ್ನ ತಾ ತಿಳಿಯನು, ತಾನಾರಿಗು ತಿಳಿಸ,
ವ್ಯರ್ಥ ಸುತ್ತಿ ತಿರುಗೆ, ಪಶುವಿನ ಮಗ,
ಕಾಸಿಗಾಗಿಯಷ್ಟೆ? ಕರ್ಮ ಕಟ್ಟುತಿಹುದು, ವಿಶ್ವ

**೧೬೨೯ ನಮಃ ಶಿವಾಯೆನ್ನಬಹುದು, ನಾರಾಯಣೆನಬಹುದು,**
**ಮೇಲಿನವರ ಕಂಡು ಮೆಚ್ಚಬಹುದು,**
**ಕವಡಿ ಕಾಸು ತೆಗೆದು ಗಡನೆ ಈಯಲಾರ, ವಿಶ್ವ**

**೧೬೩೦ ಕಟ್ಟಿಗೆ ಹೆಸರು, ಪೆಂಡಿ ಕಟ್ಟಿ ಹೇಳೆ ಸಲ್ಲ,**
**ಕಾಣಲಿಲ್ಲ ಒಳಗೆ ಕಲಿತನವನು.**
**ಜಂಗಮಾದ ಬಳಿಕ ಜಾತಿಯೆಣಿಸಬೇಡ, ವಿಶ್ವ**

●

## (ಊ) ಬ್ರಹ್ಮ–ಕ್ಷತ್ರಿಯ

ಬ್ರಹ್ಮ, ಕ್ಷತ್ರ, ವೈಶ್ಯ ಮತ್ತು ಶೂದ್ರಗಳೆಂಬ ಚತುರ್ವರ್ಣೀಯ ಸಮಾಜ ವ್ಯವಸ್ಥೆಯಲ್ಲಿ ಬ್ರಹ್ಮ ಮತ್ತು ಕ್ಷತ್ರ ವರ್ಣಗಳು ಒಂದಕ್ಕೊಂದು ಪೋಷಕವಾಗಿ ನಿಂತಿರುತ್ತವೆ.

ತನ್ನ ಬ್ರಹ್ಮ ಜ್ಞಾನದಿಂದ ಒಬ್ಬನು ಬ್ರಾಹ್ಮಣನಾಗಿದ್ದರೆ, ಮತ್ತು ಅವನು ಪರಮಾರ್ಥದ ಆಚೆಯ ದಡಕ್ಕೆ ತಲುಪಿಸುವ ಜ್ಞಾನವನ್ನು ತಿಳಿಸುವವನಿದ್ದರೆ, ಅವನಿಗೆ ಸಕಲ ಭಾಗ್ಯ ಒದಗಿಸಲೂ ಲೇಸು, ಗೌರವಾದರಗಳನ್ನು ಸಲ್ಲಿಸಲೂ ಲೇಸು. ಒಂದು ವೇಳೆ, ಆ ಬ್ರಾಹ್ಮಣನು ಆತ್ಮ ಶುದ್ಧಿ ಹೊಂದದಿದ್ದರೆ, ಎಲ್ಲವೂ ಕಂಠ ಶೋಷವಷ್ಟೇ.

ಬ್ರಹ್ಮ ಜ್ಞಾನದ ಸಂಸ್ಕಾರ ಹೊಂದಿ ದ್ವಿಜನಾಗಿದ್ದರೆ ಅಂದರೆ ಎರಡನೆಯ ಜನ್ಮ ಪಡೆದವನಂತೆ ಆಗಿದ್ದರೆ,

**ಜನ್ಮನಾ ಜಾಯತೇ ಶೂದ್ರಃ**
**ಸಂಸ್ಕಾರಾತ್ ದ್ವಿಜ ಉಚ್ಚತೇ**
**ವೇದ ಪಾಠಾತ್ ವಿಪ್ರಃ ಭವೇತ್**
**ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ**

ಅವನನ್ನು ಮನ್ನಿಸಬೇಕು. ಅವನಿಗೆ ಖೇದಕರವಾಗುವ ಏನನ್ನೂ ಮಾಡಬಾರದು. ಬ್ರಹ್ಮವೇತ್ತನನ್ನು ಮಾತ್ರ ಬ್ರಾಹ್ಮಣನೆನ್ನಬಹುದು. ಬರೀ ದಿಂಬಿಗೊರಗಿ ಕುಳಿತರೆ, ಬ್ರಾಹ್ಮಣನೆಂತಾಗಬಲ್ಲ? ಬ್ರಹ್ಮವೇತ್ತನಲದಿದ್ದರೆ, ಜನ್ಮದಿಂದ ಇಲ್ಲವೆ ಜಾತಿಯಿಂದ ಬ್ರಾಹ್ಮಣನಾದವನಿಗೆ ನೀಡಲು ಫಲವು ಉಂಟು, ಎಂದು ಹಲವರು ಹೇಳುತ್ತಾರೆ. ಹಸಿದ ನಾಯಿಗೆ ನೀಡಲು ಫಲವೇನಿಲ್ಲವೇ?

'ಜನ್ಮನಾ ಜಾಯತೇ ಶೂದ್ರಃ' ಎಂದು ಎಲ್ಲರೂ ಅವನಿ ಶೂದ್ರರೇ ಎಂದು ತಿಳಿಯಲಾರರೇಕೋ? ಮೊದಲು ತಾರುಣ್ಯದಲ್ಲಿ ಸತಿಯ ಮೇಲೆ

— — — — — — — — — — — — — — — — — — — — — —

ಮನಸ್ಸಾಗುತ್ತದೆ. ಮುಂದೆ ಪರಮಾರ್ಥದತ್ತ ಮನ ಹರಿದು ಪೂಜೆಗೆ ತೊಡಗಿ ದ್ವಿಜರಾಗುವವರೇ ಕೋಟಿಗಟ್ಟಳೆ ಜನರು.

ಹಿರಿಯರ ದೃಷ್ಟಾಂತಗಳನ್ನೇ ನೋಡಿರಿ. ವಸಿಷ್ಠ ಮಹರ್ಷಿಯು ಶ್ರೀ ರಾಮಚಂದ್ರನ ಗುರು. ಅವನ ತಾಯಿ ರಂಭೆ ವೇಶ್ಯೆ. ಅವನ ಹೆಂಡತಿಯಾದ ಅರುಂಧತಿಯು ಓರ್ವ ಮಾದಿಗ ಕನ್ಯೆ. ಆದರೆ ತನ್ನ ಕಠೋರ ತಪಸ್ಸಿನಿಂದ ವಸಿಷ್ಠನು ಮಹಾದ್ವಿಜ ಶ್ರೇಷ್ಠನಾದನು. ಮಾತಂಗ ಋಷಿಯ ಮರಿಮಕ್ಕಳಾದ ಈ ಧರೆಯ ವಿಪ್ರರಿಂದ ಈ ಧರೆಯು ಕೆಟ್ಟಿದೆಯಲ್ಲವೇ? ಜಾತಿ ಭೇದ ಬಿತ್ತುವ ಕುಟಿಲ ಓದನ್ನೂ ಓದಿ, ಕುಲದಿಂದ, ಬಲದಿಂದ ಇಲ್ಲಿ ಗರ್ವವುಂಟಾಗಿದೆಯೇನೋ? ಬ್ರಾಹ್ಮಣ ಎಂಬ ಜಾತಿ ಪ್ರತಿಷ್ಠೆಯಿಂದ ಗರ್ವ ಪಡುವರೇ ಹೊರತು, ಅಂತ ಜ್ಞಾನಪ್ರಸಾರದ ಕಾರ್ಯ ಮಾಡರು. ಕುಲಕ್ಕಾವ ಲೆಖ್ಖವಿದೆ? ಗುಣದ ಗಣನೆಯೇ ಲೇಸು; ತಾನೇ?

'ವೇದ ಪಾಠಾತ್ ವಿಪ್ರಃ'. ಆದ್ದರಿಂದ ಋಗ್ಯಜಸ್ಸುಗಳನ್ನು ಅರಿತು ಆ ಯೋಗ್ಯತೆಯಿಂದ ವಿಪ್ರನಾಗಬೇಕು. ಹಾಗೆ ಮಾಡಲಿಲ್ಲವಾದರೆ ಪತಿ ಸೇವೆ ಮಾಡುವ ಯೋಗ್ಯತೆ ಇಲ್ಲದ್ದರಿಂದ ಪರಪುರುಷನಿಗೆ ಒಲಿದ ರೀತಿಯಾದೀತು.

ಕಲಿ ಕಾಲ ಬಂದಿದೆ ಎಂದು ದೂರುವುದೇಕೆ? ಸತ್ಯವೆಂದರೆ ದ್ವಿಜರು ಕೆಟ್ಟು ಸಮಾಜಕ್ಕೆ ಮಾರ್ಗದರ್ಶನ ಮಾಡುವವರು ಇಲ್ಲವಾಗಿದ್ದಾರೆ. ಆದ್ದರಿಂದ ಕೊರಳ ದಾರ ಕಟ್ಟಿ ದ್ವಿಜನೆಂದುಕೊಂಡರೆ, ಸೆರೆ ಗೊಬ್ಬಿಗೆ ಬೂದಿ ಬಳಿದು ಪೂಜಿಸಿದಂತೆ.

**೧೬೩೧ ಬ್ರಾಹ್ಮಣರಿಗೆ ಸಕಲ ಭಾಗ್ಯ ನೀಡಬಹುದು,**
**ಗೌರವವೀಯಬಹುದು, ಕೂಡಬಹುದು,**
**ಜ್ಞಾನ ತಿಳಿಸಿ ಜನರ ಸೇರಿಸಲು ಆ ದಡಕೆ, ವಿಶ್ವ**

**೧೬೩೨ ಬ್ರಾಹ್ಮಣನಿಗೆ ನಮಿಸೆ, ಬಹಳ ಹರಸುತಿರುವ**
**ಆತ್ಮ ಶುದ್ಧಿ ಹೊಂದಿ ಆತನಿರಲು,**
**ಹೊಂದದಿರಲು ಅವನು, ಹಾಳು ಕಂಠ ಶೋಷ, ವಿಶ್ವ**

**೧೬೩೩ ದ್ವಿಜರ ಖೇದ ಪಡಿಸಿ ತೊಡಗಲು ನಿಂದೆಯಲಿ,**
**ಸಾವು ಹೊಂದಿ ತಾನು ಸಂಕಟ ಪಡುವ,**
**ಹಿಡಿವ ಯಮನ ದಾರಿ, ಕಡೆಯ ಸೇರಲಾರ, ವಿಶ್ವ**

೧೬೩೪ ಬ್ರಾಹ್ಮಣೆಂದುಕೊಳುವ, ಬ್ರಹ್ಮತ್ವ ಮನದಿಲ್ಲ,
ಬ್ರಾಹ್ಮ್ಯವು ಅದು ಏಕೆ? ಬ್ರಾಹ್ಮಣಾಗೆ
ಬೊಮ್ಮನಂತೆ ತಾನು ಕಟ್ಟೆ ಏರಿ ಕುಳಿತ, ವಿಶ್ವ

೧೬೩೫ ಬ್ರಹ್ಮಘನತೆ ಕೇಡು, ಬ್ರಾಹ್ಮಣರಾ ದೊಡ್ಡ
ಬ್ರಹ್ಮನಿಂದ ಹುಟ್ಟಿ ಬೆಳೆದರೆನಲು,
ಬ್ರಹ್ಮವೇತ್ತಬೇಕು, ಬ್ರಾಹ್ಮಣನೆನಿಸುವೊಡೆ, ವಿಶ್ವ

೧೬೩೬ ಬ್ರಾಹ್ಮಣರಿಗೆ ಕೊಡಲು ಫಲವು ಉಂಟೆನುವರು,
ನಾಯಿಗಳಿಗೆ ಇಡಲು, ನಷ್ಟವೇನು?
ಇಲ್ಲಿ ಅಲ್ಲಿ ಶಿವನು ಏಕವಾಗಿ ಉಂಟು; ವಿಶ್ವ

೧೬೩೭ ಕುಟಿಲವಹ ಋಷಿ ಕುಲದಲ್ಲಿ,
ಪಟುತರದಿಂ ಹುಟ್ಟಿದಂಥ ಬ್ರಾಹ್ಮಣ ಜನರೇ,
ಕುಟಿಲವನೆ ಕಾಣಲಾರದೆ,
ಘಟಿಪುದೆ ಬ್ರಹ್ಮಕುಲವೆಂಬುದೊಪ್ಪವೆ, ವೇಮಾ?

೧೬೩೮ ಅವನಿ ಶೂದ್ರರೆಂದು ಅರಿಯರು ಮೊದಲಿಗೆ
ಮನಸು ಸತಿಯ ಮೇಲೆ ಮರುಳು ಆಗಿ,
ಕಡೆಗೆ ಪೂಜಿಪ ದ್ವಿಜರು ಕೋಟ್ಯಾನು ಕೋಟಿ ವಿಶ್ವ

೧೬೩೯ ತನ್ನ ತಾಯಿ ವೇಶ್ಯೆ, ಮಡದಿ ಮಾದಿಗ ಕನ್ಯೆ
ಇರುವ ವಸಿಷ್ಠಮುನಿ ಗುರು ಶ್ರೀಪತಿಗೆ
ಅರಿತೊಡೆ, ತಪದಿಂದ ದ್ವಿಜ, ಜಾತಿಯೆಲ್ಲಿ? ವಿಶ್ವ

೧೬೪೦ ಮಾತಂಗ ಮುನಿ ಮರಿ ಮಕ್ಕು,
ಭೂತಲದಿ ಬ್ರಾಹ್ಮಣರಾಗಿ ಮೆರೆವ, ನಾನಾ
ಜಾತಿಲಿ ಜನಿಸಿದ ವಿಪ್ರರ
ಖ್ಯಾತಿಯ ಈ ಧರೆ ಕೆಟ್ಟಿದೆಯಲ್ಲವೆ? ವೇಮಾ

೧೬೪೧ ಕುಲದಿಂದ ಸ್ವಲ್ಪು, ಬಲದಿಂದ ಸ್ವಲ್ಪು,
ಹನೆಲದಿಂದ ಸ್ವಲ್ಪು, ಗರ್ವವುಂಟು
ಕುಲಟೆಯೋದು ಓದಿ, ಕುಲಟೆಯನ್ನೆ ಬಿಡರು ವಿಶ್ವ

೧೬೪೨ ಬ್ರಾಹ್ಮಣ ಜನ, ದೊಡ್ಡ ಪ್ರತಿಷ್ಠೆ ಕಾಣುವರೆ,
ಹೊರತು, ಕಾರ್ಯ ಮಾಡೆ ಹಿಂಜರಿವರು,
ಕುಲದ ಲೆಕ್ಕವೇನು? ಗುಣವೆ ಪ್ರಧಾನವು, ವಿಶ್ವ

೧೬೪೩ ವಿಪ್ರವರರು ಎಂದು ವೇದ ಓದುತಿಪ್ಪ,
ಪ್ರಾಕೃತರನು ಕಂಡು ಹಾಸ್ಯ ಗೈವ,
ಧರಣಿ ಸುರರಿಗಿಂತ ದಾಸರ ಮತ ಒಪ್ಪ, ವಿಶ್ವ

೧೬೪೪ ಋಗ್ಯಜುಸ್ಸನರಿತು, ಯೋಗ್ಯತೆಯರಿಯದಾಗ,
ವಿಪ್ರನಾದರೆಂತು ವಿಹಿತವಹುದು?
ಗಂಡನಿರಲು ಅನ್ಯಗೊಲಿವ ಪತ್ನಿಯಂತೆ; ವಿಶ್ವ

೧೬೪೫ ದ್ವಿಜ ವರರು ಕೆಟ್ಟು ದಿಕ್ಕುಗಾಣದು ಭೂಮಿ,
ಮನುಜರೆಲ್ಲ ಕೆಟ್ಟರೆನುವುದೇಕೆ?
ಕಾಲು ಗತಿಗಳು ಬದಲು ಕಲಿಯ ಧರ್ಮವು ಬದಲು, ವಿಶ್ವ

೧೬೪೬ ಓದಿದವನಿಗಿಂತ ಒಗೆವ ಅಗಸ ಮೇಲು,
ಕುಲದ ದೇವಿಗಿಂತ ಕುಕ್ಕರ ಮೇಲು,
ಸರ್ವಸುರರಿಗಿಂತ ಜಾರ ಭಾಮೆ ಮೇಲು, ವಿಶ್ವ

೧೬೪೭ ಸೆರೆ-ಗಡಿಗೆಗೆ ಬೂದಿ ಸಲೆ ಬಡಿದೊಡೆ ಏನು?
ಅಲ್ಲಿ ಒಳಗೆ ಕಂಪು ಅಡಗದಂತೆ,
ಕೊರಳು ದಾರ ಬಿಗಿಯೆ, ಮೆರೆವ ದ್ವಿಜನಹುದೆ? ವಿಶ್ವ

೧೬೪೮ ಬ್ರಹ್ಮವೇತ್ತರೆಂದು ಬಿಮ್ಮದಿಂದಿಪ್ಪರು,
ಬ್ರಹ್ಮವೇನೊ? ಅದರ ಭಾವವೇನೊ?
ಬಿಳಿಪೊ? ಕೆಂಪೊ ಕಪ್ಪೊ? ತಿಳಿದಿದ್ದರೆ ಹೇಳು, ವಿಶ್ವ

೧೬೪೯ ಓದಿದಾತಗಿಂತ ಒಗೆವ ಅಗಸ ಮೇಲು,
ಮನೆಯ ದೇವಿಗಿಂತ ಮಹಿಷ ಮೇಲು,
ಬ್ರಾಹ್ಮಣಾರ್ಯಗಿಂತ ಬಡವ ಹೊಲೆಯ ಮೇಲು, ವಿಶ್ವ

೧೬೫೦ ಉಚ್ಚೆಯಲಿ ಪುಟ್ಟಿದ ತನುವು
ಹೆಚ್ಚೇನು? ಕೊಂಚವೇನು? ಸರಿಯಾಗಿ ತಿಳಿಯಲ್;
ಮಚ್ಚರವ ತೊಡೆದು, ಸತ್ಯವ
ಅಚ್ಚೊತ್ತಿದಂತೆ ನಿಲಿಸದವ ಬ್ರಹ್ಮ, ವೇಮಾ

೧೬೫೧ "ಶೂದ್ರತನ ಹೋಯಿತು; ಶೂದ್ರನು ನಾನಲ್ಲ,
ದ್ವಿಜನು ನಾನು" ಎನಲು ಮೌಢ್ಯವಷ್ಟೆ!
ಹೋಲಿಕೆಯಿರಲು ಹಿತ್ತಾಳಿ ಸ್ವರ್ಣ ಸಮವೆ? ವಿಶ್ವ
೧೬೫೨ ಬರಿ ಸೊಣಗನುಗಿದ ಬೊಮ್ಮಣ,
ನರಿ ಪೂಜಿಸುತಿಹನಲ್ಲವೆ? ನಾಕೇಶನಿಗೇ
ಸರಿಯಹುದು ಜೀವ ಹತ್ಯವು,
ಪರಿಪರಿಯಲಿ ಮಾಡಿ ತಮದಿ ಬಿದ್ದರು ವೇಮಾ.

೧೬೫೩ ಆರ್ತ ವಿದ್ಯೆಯೆಲ್ಲ ಅಪಕೀರ್ತಿ ಪಾಲಾಯ್ತು,
ವಾರ್ತೆ ಹಬ್ಬಿತೆಂಥವರಾಗಿರಲಿ,
ಆರ್ತ ವಿದ್ಯೆಯೆಲ್ಲ ಧೂರ್ತರ ಪಾಲಾಯ್ತು, ವಿಶ್ವ

●

## (೩) ವೈಶ್ಯ

ಚಾತುರ್ವರ್ಣೀಯ ಸಮಾಜ ವ್ಯವಸ್ಥೆಯಲ್ಲಿ ಹಳದಿ ವರ್ಣ ಅಂದರೆ ಕೆಂಪು ಮತ್ತು ಕಪ್ಪು ವರ್ಣಗಳ ಮಿಶ್ರ ವರ್ಣದ ವಿಕಿರಣಗಳನ್ನು ಸಿಡಿಸುವವರೇ ವೈಶ್ಯ, ಮಾಲಿನ ಸಾಗಾಣಿಕೆ ಹಾಗೂ ಅರ್ಥ ವ್ಯವಸ್ಥೆಯಲ್ಲಿ ಇವರ ಪಾಲು ಹೆಚ್ಚು. ಆಕಳನ್ನು ಹಿಂದಿನ ಕಾಲದಲ್ಲಿ, ಸಂಪತ್ತಿನ ರೂಪದಲ್ಲಿ ವ್ಯವಹರಿಸಲಾಗುತ್ತಿತ್ತು. ಹಾಗಾಗಿ ಐಹಿಕ ಜೀವನದಲ್ಲಿ ಗೋ ಸಂಪತ್ತು ಅಗತ್ಯವಿತ್ತು. ಪರಮಾರ್ಥದಲ್ಲಿ ಬ್ರಹ್ಮಜ್ಞಾನವೇ ಸಂಪತ್ತಾಗಿತ್ತು. ಅಂತೂ ಪೂರ್ಣ ಜೀವನಕ್ಕಾಗಿ 'ಗೋ ಬ್ರಾಹ್ಮಣೇಭ್ಯೋ ಶುಭಮಸ್ತು ನಿತ್ಯಂ' ಎಂಬುದು ಮಂತ್ರವೆನಿಸಿತ್ತು.

ಗೋವು ಸಂರಕ್ಷಣೆ, ಕೃಷಿ ವ್ಯಾಪಾರಗಳು ವೈಶ್ಯವರ್ಣೀಯರ ಕರ್ಮಗಳಾಗಿದ್ದವು. ಆದರೆ ಕಾಲ ಪ್ರಭಾವದಲ್ಲಿ ವೈಶ್ಯ ಎಂಬ ಹೆಸರು ಹೊತ್ತವನು ಕಳ್ಳ ವ್ಯಾಪಾರ ಮಾಡುವುದು, ಸುಳ್ಳು ಹೇಳುವುದನ್ನೇ ವೃತ್ತಿಯಾಗಿಸಿಕೊಂಡು ಬಂದನು.

ಕೋಮಟಿ ಜನರು ತುಂಬಾ ಚುರುಕು ಬುದ್ಧಿಯವರೇನೋ ಸರಿ. ಆದರೆ ಅವರಿಗೆ ಲೋಭಿ ಗುಣ ಅಂಟಿಕೊಂಡಿರುತ್ತದೆ. ಹಾಗಾಗಿ ಅವರು ಉದಾರ

ದಾನಿಗಳಾಗರು. ವಿಶಾಲಮತಿಗಳಾಗರು. ಬ್ರಹ್ಮ ಸಾಧಕರಾಗರು. ಹುಲಿಯು ಸ್ವತಂತ್ರವಾಗಿ ಅಡವಿಯಲ್ಲಿದ್ದರೆ ಅದಕ್ಕೆ ಇರಬೇಕಾದ ಮರ್ಯಾದೆಯುಂಟು. ಅದೇ ಹುಲಿಯು ಎಲ್ಲರಿಗೆ ಡೊಗ್ಗಿ ನಮಸ್ಕರಿಸುವ ದಾಸರವನ ವಶದಲ್ಲಿದ್ದರೆ ಅದರ ಘನತೆಯೇ ಹಾಳಾಗುತ್ತದೆ.

ಲೋಭಿಯಾದ ಕೋಮಟಿಯ ಆಸೆಗೆ ಮಿತಿಯೇ ಇಲ್ಲ. ಸ್ವಲ್ಪ ಉತ್ಪ್ರೇಕ್ಷಿಸಿ ಹೇಳುವುದಾದರೆ, ಬೆಟ್ಟವನ್ನೇ ತೋರಿಸಿ ಅದನ್ನು ಸರಕಿನ ರಾಶಿ ಎನ್ನುತ್ತಾನೆ. ಬೆಳದಿಂಗಳನ್ನೇ ತೋರಿ, ಅದನ್ನು ಸುವಾಸನೆ ಬೆರೆಸಿದ ಪನ್ನೀರೆಂದು ನುಡಿವನು. ಹೀಗೆ ಹಣ ಗಳಿಕೆಯ ಏಕಮೇವ ಗುರಿಯಿರಿಸಿಕೊಂಡ ಈ ಕೋಮಟಿ ಜನರು ವಿಶ್ವಾಸಘಾತಕರಾಗಿರುತ್ತಾರೆ.

ಕೋಮಟಿಯ ಆಶೆಗೆ ಮಿತಿ ಮೇರೆಗಳೇ ಇಲ್ಲ.

**೧೬೫೪ ವೈಶ್ಯನೆಂಬ ಹೆಸರು ಹೊತ್ತು ಬಾಳುತಿಪ್ಪ,**
**ಅವನಿಗಿಂತ ಮಿಕ್ಕ ಕಳ್ಳನಿಲ್ಲ.**
**ವಸುಧೆಯೊಳವನ ಮೋಸವೆನಿತು? ಪೇಳಲಾರೆ, ವಿಶ್ವ**

**೧೬೫೫ ಕೋಮಟಿ ಆಶೆಬಟ್ಟು, ಗುಡ್ಡ ರಾಶಿಯೆನುವ,**
**ಚಂದನ ರಸವೆನುವ ಚಂದ್ರ ಕಳೆಯ.**
**ಆಶೆ ಮಿತಿ ಮೀರಲು, ಗತಿಯ ಕಾಣರಾರು, ವಿಶ್ವ**

**೧೬೫೬ ಗುರಿಗೆ ಬರರು ಕೋಮಟಿ ನಿಷ್ಕರು,**
**ಲೋಭಿ ತನದಿಂದ ಒಳಗೆ ಹೆಣಗಿ,**
**ಹುಲಿಯು ದಾಸರವನ ಬಳಿಯಿರುವ ಚೆಂದ, ವಿಶ್ವ**

**೧೬೫೭ ತೌಡಿಗಾಗಿ ತಿರುಗಲವನ ಅಕ್ಕಿ ಪಾತ್ರೆ,**
**ನಾಯಿ ತಿಂದು ಬರಿದು ಮಾಡುತಿಹುದು,**
**ಅಂತೆ ವೈಶ್ಯನಾಸ್ತಿ ಜಗದಿ ನೀಚಗಾಯ್ತು, ವಿಶ್ವ**

**೧೬೫೮ ಕೋಮಟಿಯವನ ನಿಷ್ಠೆ ಗುರಿಗೆ ಬಾರದೆಂದಿಗು,**
**ಲೋಭ ಗುಣ ಮೂಲಕ ಲೋಲುತೊಳಗೆ,**
**ಹುಲಿಯು ದಾಸನೆಡೆಗೆ ಹೋಗುವಂಥ ಚೆಂದ, ವಿಶ್ವ**

೧೬೫೯ ವಿಶ್ವಾಸಘಾತಕರಾದ
ವೈಶ್ಯರು ಮೇಣ್ ತಮ್ಮದೆಂದು ಪಾಲನು ನುಡಿವರ್.
ಸಸ್ಯಾದಿ ಲಾಭಗೋಸುಗ
ವಿಶ್ವದಲಿ ಕಳ್ಳರಾಗುತ ವಾಸಿಪರು ವೇಮಾ.

೧೬೬೦ ಹೇಮ ಗಳಿಕೆ ನಿಯಮಾಗಿ,
ಕಾಮಕೊಳಗಾಗಿ, ಜಗದಲಿ ಸುಳ್ಳಾಡುತಿರಲ್,
ನೇಮವೆ ಆಗಿ ನುಡಿಯುತಿಹ,
ಕೋಮಟಿಗಳನಿಬರಿಪ್ಪರು ಲೋಕದಿ ವೇಮಾ.

೧೬೬೧ ಕೋಮಟಿಯವನ ಆಸೆ ಗಿರಿಯ ಮಳೆಯ ರೀತಿ,
ಸುಂದರವಿಹ ಶೋಭೆ ಚಂದ್ರ ಕಲೆಗಳು,
ಆಶೆಗೆ ಮಿತಿಯಿಲ್ಲ ಎಲ್ಲಿಯು ಗತಿಯಿಲ್ಲ. ವಿಶ್ವ

●

## (೩೩) ಶೂದ್ರ

ಚತುರ್ವರ್ಣೀಯ ಸಮಾಜ ವ್ಯವಸ್ಥೆಯಲ್ಲಿ ಕೊನೆಯ ವರ್ಣವೇ ಶೂದ್ರವರ್ಣ; ಕಪ್ಪು ವರ್ಣವಿದ್ದು. ಅಜ್ಞಾನ ಆಲಸ್ಯಗಳು ಇದರ ಲಕ್ಷಣಗಳು.

'ಶೋಚತಿ ಇತಿ ಶೂದ್ರಃ' ಎಂದು ಅರ್ಥ ವಿವರಣೆ ಇದೆ. ತನ್ನ ಅಜ್ಞಾನದಿಂದ ದುಃಖಪಡುವುದೇ ಇವನ ಬಾಳು. ತನ್ನ ಅಜ್ಞಾನದಿಂದಾಗಿ ಇವನು ಇನ್ನಿತರ ತ್ರೈವರ್ಣಿಕರ ಸೇವೆ ಮಾಡುವಲ್ಲಿಯೇ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ. ಮೊದಲು ಸಮಾಜವು ತ್ರೈವರ್ಣಿಕವಾಗಿತ್ತು ಮುಂದೆ ಸೇವಕ ವರ್ಗವನ್ನು ಸೇರಿ ಚತುರ್ವರ್ಣಿಯವಾಗಿಸಲಾಯಿತು.

'ಜನ್ಮನಾ ಜಾಯತೇ ಶೂದ್ರಃ'. ಇಂಥ ಶೂದ್ರನಾಗಿ ಜನಿಸಿದ ದುಷ್ಕರ್ಮಿ ವ್ಯಾಧನಾದ ವಾಲ್ಮೀಕಿ ಮಹರ್ಷಿ ನಾರದರಿಂದ 'ರಾಮ' ಮಂತ್ರದ ದೀಕ್ಷೆ ಪಡೆದು ಬ್ರಾಹ್ಮಣನಾದ. ರಾಮಾಯಣ ಕರ್ತೃವಾದ. ಈ ದೃಷ್ಟಾಂತದಿಂದ, ಮೊದಲು ಧರೆಯಲ್ಲಿ ಶೂದ್ರರಾಗಿ ಜನಿಸುವ ಕೋಟ್ಯಾಂತರ ಜನರು ಪರಮಾತ್ಮನನ್ನು ಭಜಿಸಿ ದ್ವಿಜರಾಗುತ್ತಾರೆ.

ಕೆಲವರು ಇನ್ನೊಂದು ರೀತಿ, ಶೂದ್ರರಾಗಿ ಹುಟ್ಟುತ್ತಾರೆ. ಆದರೆ ತಾವು ಶ್ರೇಷ್ಠರೆಂದು ತೋರಿಸಿಕೊಳ್ಳಲು ಶೂದ್ರರನ್ನೇ ನಿಂದಿಸುತ್ತಾರೆ. ತಮ್ಮನ್ನು ದ್ವಿಜರೆಂದು ಪ್ರಚುರಪಡಿಸುವರು. ಆದರೆ ಸಾಧನೆಯಿಂದ ಮನಸ್ಸು ನಿಲ್ಲಿಸದಿದ್ದರೆ, ಅವನೆಂತು ದ್ವಜನಾದಾನು? "ಸಂಸ್ಕಾರಾತ್ ದ್ವಿಜ ಉಚ್ಯತೇ" ಎಂದಿದೆ ತಾನೇ?

ಹಾಗೆ ನೋಡಿದರೆ, ಅಜ್ಜನನ್ನು ಹಡೆದವಳು, ತನ್ನ ತಂದೆಯನ್ನು ಹಡೆದವಳು, ತನ್ನನ್ನು ಹಡೆದವಳು, ತನ್ನ ತಾಯಿಯನ್ನು ಹಡೆದವಳು ಹೀಗೆ ಎಲ್ಲರೂ ಸಂಸ್ಕಾರದ ಅಧಿಕಾರವಿಲ್ಲದ ಶೂದ್ರರಾಗಿರುವಾಗ ತಾನೆಂತು ದ್ವಿಜನಾಗಬಲ್ಲ?

ಜನರಿಗೆ ಸಂಸ್ಕಾರ–ದೀಕ್ಷೆ ನೀಡಿ, ಹುಟ್ಟಿನಿಂದ ಶೂದ್ರರಾದವರನ್ನು ದ್ವಿಜರನ್ನಾಗಿಸಬೇಕೇ ಹೊರತು, ಎಲ್ಲರನ್ನೂ 'ಶೂದ್ರ, ಶೂದ್ರ' ಎಂದು ತನ್ನ ಸುತ್ತು ಶೂದ್ರ–ಗುಂಪು ಬೆಳೆಸಿದರೆ, ತಾನು ದ್ವಿಜನಾಗುವುದು ಹೇಗೆ ಸಾಧ್ಯ?

೧೬೬೨ ರಾಮ ನಾಮ ಪಠನ ಗೈದು ವಾಲ್ಮೀಕಿ
ಜಗದಿ ಬೇಡ, ಬ್ರಾಹ್ಮಣ ತಾನಾದ.
ಕುಲವು ಘನವು ಅಲ್ಲ, ಗುಣವೆ ಘನವೆನ್ನಿರೊ, ವಿಶ್ವ

೧೬೬೩ ಧರೆಯ ಶೂದ್ರನಾದುದರಿಯರು, ಮೊದಲಿಗೇ
ಮನಸು 'ಅವನ' ಮೇಲೆ ಮರಳಿ ತಿರುಗಿ,
ಭಜಿಸೆ, ದ್ವಿಜರಾಗರೆ? ಬಹಳ ಕೋಟಿಗಟ್ಲೆ? ವಿಶ್ವ

೧೬೬೪ ಶೂದ್ರರಲ್ಲಿ ಹುಟ್ಟಿ, ಶೂದ್ರರನು ನಿಂದಿಸಿ,
ದ್ವಿಜನು ಎಂಬ ಹೆಸರು ನಿಜವ ಮಾಡಿ,
ಮನಸು ನಿಲಿಸದಿರಲು, ಮನದಿ ಅಧಿಕ ಶೂದ್ರ ವಿಶ್ವ

೧೬೬೫ ಶೂದ್ರರೆಂದುಕೊಂಡು ಶೂದ್ರರ ಹೊರದೂಡಿ,
ಹೊಲೆಯಗಿಂತ ಗಂಡ ಹೊಲೆಯನಿದ್ದು,
ದ್ವಿಜನೆಂದುಕೊಳಲು ದ್ವಿಜನಾಗಬಲ್ಲನೆ? ವಿಶ್ವ

೧೬೬೬ ತಾತ ಹೆತ್ತ ತಾಯಿ ತನ್ನ ತಂದೆಯ ತಾಯಿ.
ತನ್ನ ಹೆತ್ತ ತಾಯಿ, ತಾಯಿ–ತಾಯಿ;
ತಾಯಿ ಶೂದ್ರಳಿರಲು ತಾನೆಂತು ಬೊಮ್ಮಣ? ವಿಶ್ವ

೧೬೬೭ ಶೂದ್ರ ಶೂದ್ರರೆನುತ ಶೂದ್ರರ ಬಯ್ದಾಡಿ,
ಶೂದ್ರ ಕುಲವು ತನ್ನ ಸುತ್ತಲಿರುವ,
ಮನಸು ಶುದ್ಧಿಯಿರದೆ ಮತ್ತೆ ದ್ವಿಜನು ಎಂತು? ವಿಶ್ವ

— — — — — — — — — — — — — — — — — — — — —

**೧೬೬೮ ಶೂದ್ರರೆನುತ ಕಂಡು, ಶೂದ್ರರ ಹೊರದಬ್ಬಿ,**
**ಮಾದಿಗರಿಗಿಂತ ಕಡು ಮಾದಿಗಾದ;**
**ದ್ವಿಜನು ಎನ್ನುತಿರಲು ದ್ವಿಜತ್ವ ಹೊಂದುವನೆ? ವಿಶ್ವ**

●

## (ಎ) ಅತಿಶೂದ್ರ

ಆರ್ಯರ ಸಮಾಜ ವ್ಯವಸ್ಥೆಯು ಚತುರ್ವರ್ಣೀಯವಾಗಿತ್ತು. ಆದರೆ ಬರು ಬರುತ್ತ ಈ ವ್ಯವಸ್ಥೆಯು ಕುಲಗೆಟ್ಟು, ವರ್ಣಾತ್ಮಕವಾಗದೆ ಜಾತೀಯವಾಯಿತು. ಯಾವನೋ ತಂದೆ ಬ್ರಹ್ಮಜ್ಞಾನಿಯಾಗಿದ್ದರೆ, ಅವನ ಸಂತತಿಯವರು ಭ್ರಷ್ಟರಾಗಿದ್ದರೂ, ನೀತಿಗೇಡಿಗಳಾಗಿದ್ದರೂ ಬ್ರಾಹ್ಮಣರೆಂದು ಕರೆದುಕೊಂಡರು. ಇಂಥ ಸನ್ನಿವೇಶದಲ್ಲಿ, ಇಲ್ಲಿಯ ಆದಿವಾಸಿಗಳು ಆರ್ಯರ ಅವಕೃಪೆಗೆ ಗುರಿಯಾದರು. ಆ ಆದಿವಾಸಿಗಳು ತಮ್ಮ ಸಂಪ್ರದಾಯಗಳಿಗೆ ಕಟ್ಟುಬಿದ್ದರು. ಹೀಗಾಗಿ ವ್ಯರ್ಥ ಆಡಂಬರದ ಯಜ್ಞ ಪೂಜೆಗಳಿಗೆ ಇವರು ವಿರೋಧ ವ್ಯಕ್ತಮಾಡಿದರು. ಇವರನ್ನು ದಾಸರೆಂದೂ, ದಸ್ಯುಗಳೆಂದೂ ಕರೆದು ಆರ್ಯರು ಮೂದಲಿಸುತ್ತಿದ್ದರು. ಮತ್ತು ಇವರನ್ನು ನಾಶಮಾಡಲು ತಮ್ಮ ದೇವತೆಗಳಲ್ಲಿ ಪ್ರಾರ್ಥಿಸುತ್ತಿದ್ದರು.

ಆರ್ಯರು ಆದಿವಾಸಿ ಜನರಿಂದ ದೂರವಿರುತ್ತಿದ್ದರು. ಜಾತಿಗತವಾಗಿದ್ದ ಚತುರ್ವರ್ಣೀಯ ವ್ಯವಸ್ಥೆಯನ್ನೊಪ್ಪದ ಆದಿವಾಸಿಗಳು ಆರ್ಯರ ವಸತಿಗಳ ಕೊನೆಯ ಸೆರಗಿನ ಆಚೆಗೆ ಇರಬೇಕಾಯಿತು. ಹೀಗಾಗಿ ಅವರು 'ಅಂತೇ ವಾಸಿ' ಗಳೆನ್ನಿಸಿದರು. ಅವರು ಜಾತಿಗತವಾಗಿ ಅಂತ್ಯಜರೆನಿಸಿದರು. ಸಮಾಜದಲ್ಲಿ ತಮಗೆ ಹೇಸುಗೆ ತರಿಸುವ ಹೆಣ್ಣುಮಕ್ಕಳ ರಜಸ್ರವಕ್ಕೆ ಮುಟ್ಟಬಾರದು 'ಹೊಲೆ' ಎನ್ನುತ್ತಿದ್ದರು. ಹಾಗಾಗಿ ಈ ಅಂತ್ಯಜರನ್ನು ಹೊಲೆಯರೆಂದು ಕರೆದರು. ಅವರಿಗೆ ಆಸ್ತಿ ಹೊಂದುವ ಹಕ್ಕನ್ನು ನಿರಾಕರಿಸಲಾಯಿತು. ಅವರು ಬಡವರಾದರು. ಬಡತನದಿಂದಾಗಿ ಸಮಾಜದಲ್ಲಿ ನಗಣ್ಯರಾದರು. ಆದ್ದರಿಂದ ವೇಮನ ಯೋಗಿ ಹೀಗೆ ಕೇಳುತ್ತಾರೆ.

'ಹೊಲೆಯರನ್ನೇಕೆ ಮಹಿಯಲ್ಲಿ ನಿಂದಿಪರೋ? ಅವರ ಒಡಲಲ್ಲಿ ಹರಿಯುವ ರಕ್ತ ಮಾಂಸಗಳು ಒಂದೇ ಪ್ರಕಾರದವಾಗಿಲ್ಲವೇ? ಅವನಲ್ಲಿ ಸುಳಿಯುವ ಆತ್ಮಕ್ಕೆ ಜಾತಿ ಭೇದವುಂಟೆ? ಸುಸಂಸ್ಕಾರವೆಂದರೇನು? ಯಾರು ಸಾಧನ ಬಲದಿಂದ ಮನಸ್ಸನ್ನು ನಿಲ್ಲಿಸಬಲ್ಲರೋ ಅವರೇ ಸುಸಂಸ್ಕಾರಿಗಳು. ಅಂದ ಮೇಲೆ ಮನಸು ನಿಲಿಸದ, ವಿಷಯಾಸಕ್ತರೇ ಮುಟ್ಟಬಾರದ ಹೊಲೆಯರಷ್ಟೇ? ಮಾದರವನನ್ನು ಏಕೆ ನಿಂದಿಸುವರೋ ನಾವರಿಯೆವು? ಓಲೆಗರಿಗಳನ್ನು ಓದುವವರ ಬರೆದವರ, ಕಾರಣಕರ್ತರ ಕುಲವಾವುದು? ಅವರು ಮಾದಿಗರಲ್ಲವೇ? ವಶಿಷ್ಠನ ಜಾತಿಯಾವುದು? ಮಾನ್ಯ ಗುಣಗಳಿಂದ ತಾನೆ ಮರ್ಯಾದೆ ಬರುವುದು? ತಿಳಿದು ನೋಡಿದರೆ, ಮಾತು ಬದಲಿಸುವವನೇ ಹೇಸುಗೆ ಪಡಬೇಕಾದ ಹೊಲೆಯ ಮಾದಿಗನು. ಋಷಿ

ಮುನಿಗಳು ಹೇಳಿದ ಗುಣಗತ ವಿಭಜನೆಯನ್ನು ಜಾತಿಗತ ವಿಭಜನೆಯಾಗಿ ಪ್ರತಿಪಾದಿಸಿ ಮಾತು ಬದಲಿಸಿದವನೇ ಮಾದಿಗನು.

ಪರಾಶರರು ಹೊಲೆಯಳಲ್ಲಿ ಹುಟ್ಟಿದರು ತಾನೇ? ವ್ಯಾಸರು ಅಂಬಿಗ ಕನ್ನೆಯಲ್ಲಿ ವಿವಾಹಪೂರ್ವ ಜನಿಸಿದರು. ಹೀಗಾಗಿ ಅವರು ಮಾದಿಗರೆನಿಸಬೇಕಿತ್ತು. ಆದರೆ ಅವರ ಅನಂತರದ ಸಾಧನ ಬಲದಿಮದ ಅವರು ಬ್ರಾಹ್ಮಣರೆನಿಸಿದರು.

ಮಾದಿಗ ಕೆಲಸಗಳನ್ನು ಮನದಲ್ಲಿ ಗ್ರಹಿಸಿ ಯಾರೊಬ್ಬನನ್ನು ಹೊಲೆಯ ಮಾದಿಗ ಎನ್ನುವುದಾದರೆ, ಜ್ಞಾನ ಪ್ರಸಾರದ ಕಾರ್ಯದಲ್ಲಿ ಮಗ್ನರಾಗದೆ ಯಾವೊಬ್ಬನು ಹೇಗೆ ದ್ವಿಜನೆನಿಸುತ್ತಾನೆ?

೧೬೬೯ ಹೊಲೆಯನನ್ನು ಏಕೆ ಇಳೆಯಲಿ ನಿಂದಿಪರೊ?
ಒಡಲು ರಕ್ತ ಮಾಂಸ ಒಂದೆ ಇರವೆ?
ಅವನ ಒಳಗೆ ಸುಳಿವ 'ಅವನ' ಕುಲವದೇನು? ವಿಶ್ವ

೧೬೭೦ ಮಾದರವನೆ ಇರಲಿ, ಮತ್ತೆ ಆತ್ಮ ಮೇಲೆ
ಮನಸು ನಿಲಿಸಿದೊಡನೆ ಮಾದಿಗಲ್ಲ,
ಮನಸು ನಿಲಿಸದವನೆ, ಮಹಿಯ ಮೇಲೆ ಹೊಲೆಯ, ವಿಶ್ವ

೧೬೭೧ ನೋಡಿ ಮಾದರವನ ನಿಂದಿಸುತಿಹರೇಕೆ?
ಯೋಗ್ಯವಿರದ ಮಾತು ಯಾಕೆ ನುಡಿವೆ?
ಅವನ ಒಳಗೆ ನುಡಿವ 'ಅವನ' ಕುಲವದೇನು? ವಿಶ್ವ

೧೬೭೨ ನೋಡಿ ಮಾದರವನ ನಿಂದಿಸುತಿಹರೇಕೊ?
ತುಚ್ಛ ಮಾತು ನುಡಿವ ದಂಭವೇಕೊ?
ನೋಡು ತಾಳಿಪತ್ರಿ ನುಡಿವನ ಕುಲವೇನು? ವಿಶ್ವ

೧೬೭೩ ಮಾದಿಗರನು ಏಕೆ ಮತ್ತೆ ನಿಂದಿಸುವಿರಿ?
ತೊಗಲು ಮಾಂಸಗಳನು ತುದಿಗು ತಿನದೆ,
ಕೊಬ್ಬು ತಿನ್ನುವವರ ಕುಲವನೆ ನೋಡಿರೋ? ವಿಶ್ವ

೧೬೭೪ ನೋಡಿ ಮಾದರವನ ನಿಂದಿಸುವುದು ಏಕೆ?
ಪಾಡು ಇರದ ಮಾತು ಆಡುವರಲ್ಲ!
ಅವನೊಳಿಹುದು 'ಶಬ್ಧ' ಅದರ ಕುಲವದೇನು? ವಿಶ್ವ

೧೬೭೫ ಮಾತು ಬೆದರಿಕೆಲ್ಲ ಮನಸಿನಲ್ಲಿ ಹಿಡಿದು,
ಮಾದಿಗರ ತೆಗಳುವವ ಮಾದಿಗನೇ,
ಮಾನ್ಯ ಗುಣವು ಇರದೆ, ಮರ್ಯಾದೆಯೆಂತಹುದು? ವಿಶ್ವ

೧೬೭೬ ಮಾದಿಗ ಮಾದಿಗಲ್ಲ ಮಹಿಯೊಳಾವ ಕಾಲ.
ಮಾತು ಬದಲಿಸುವವನೆ ಮಾದಿಗಷ್ಟೆ,
ಅವನ ಮಾದಿಗೆನುವ ಇವನೆ ಹಿರಿ ಮಾದಿಗ, ವಿಶ್ವ

೧೬೭೭ ಕಡು ದೊಡ್ಡಪರಾಶರತಾ,
ಕೆಡು–ಹೊಲೆಯರವಳ ಒಡಲಲ್ಲಿ ಜನಿಸಿದ ತೆರಂ,
ನಡೆ ದೊಡ್ಡ ವ್ಯಾಸಂಬಿಗ
ಳೊಡಲಲಿ ಜನಿಸಿದ, ಪರಿಯೊಳಗಿಪ್ಪುದು ವೇಮಾ!

೧೬೭೮ ಮಾತಂಗ ಮುನಿಯ ಸಂತತಿ,
ಭೂತಲದಿ ಬ್ರಾಹ್ಮಣರ್ಗೆ ಸರಿಸಮ, ನಾನಾ
ಜಾತಿಗಳುದಿತವು, ಇವರೇ
ಖ್ಯಾತರು, ಈ ಧರಣಿ ಕೆಟ್ಟಿತಲ್ಲವೆ? ವೇಮಾ

೧೬೭೯ ತನ್ನ ತಾಯಿ ಸೂಳೆ, ತನ್ನ ಸತಿ ಮಾದಿಗೆ
ವರ ರಾಮನ ಗುರುವು ವಶಿಷ್ಠನರಿಯೆ;
ತಪದಿಂದ ದ್ವಿಜನು, ತರ್ಕಿಸೆ ಕುಲವೆಂತು? ವಿಶ್ವ

೧೬೮೦ ಮಾದಿಗನೆನಬೇಡ ವರಗುಣವುಳ್ಳವನ,
ಮಾದಿಗಳು ವಶಿಷ್ಠ ಮುನಿಯ ಪತ್ನಿ;
ಮಾದಿಗ; ಗುಣ ಹೊಂದಿ ವರ ದ್ವಿಜನಾದನು! ವಿಶ್ವ

೧೬೮೧ ಮಾದಿಗ ಎನಬೇಡ; ಮತ್ತೆ ವಶಿಷ್ಠನಿಗೆ,
ಮಾದಿಗ ಪ್ರಿಯವೆಂತು ಮಡದಿಯಾಯ್ತು?
ಮಾದಿಗ ಗುಣವಿರಲು ಮಹಿಯೊಳೆಂತು ದ್ವಿಜನು? ವಿಶ್ವ

೧೬೮೨ ಕೌಂಡಿನ್ಯನು ಮುಂಡೆ ಮಗನು,
ಮಾಂಡವ್ಯನು ಕಪ್ಪೆ ಮಗನು, ಮಹಿಯಲಿ ಜನನಂ;
ಚಂಡಾಲಿ, ಮಾತಂಗ ಮುನಿಯ
ಪಿಂಡವೆ ಆಗಿಹುದಲ್ಲವೆ? ಪೃಥಿವಿಲಿ ವೇಮಾ.

೧೬೮೩ ಹೊರಗೆ ವಾಸಿಸುವರು ಹುಚ್ಚು ಕುಲದ ಜನರು,
'ಆಯ್ತಾ ಹೋಯ್ತಾ' ಕೆಲಸ ಆಯ್ತೆನುವರು,
ತಾವು ಕಾಣದಂಥ ದೊಡ್ಡ ಘನರೆ ಇರಲಿ, ವಿಶ್ವ

೧೬೮೪ ಹೊಲೆಯನ ಮೇಲು ಗುಣ ಒಳಿತು ಆಗಿ ಇಹುದು,
ಹೊಲೆಯ ಕೂಳು ತಿನುವ ಮನುಜನಷ್ಟೆ,
ಗುಣವು ಮೇಲು ಅಷ್ಟೆ; ಕುಲಕೆ ಯಾವ ಮೇಲ್ಮೆ? ವಿಶ್ವ

೧೬೮೫ ಜಾಡ 'ಸಾಲೆ' ಹೊಲೆಯ ಜಾತಿಯ ಜನರೆಲ್ಲ,
ನೇಯುವವರು ಎಂದು ನೆಲದ ಮೇಲೆ,
ಹೇಳಿಕೊಂಡರೇನು? ಹಿರಿಮೆ ಬಂದಿತೇನು? ವಿಶ್ವ

೧೬೮೬ ಮಾದಿಗೆ ಮಾಡುವುದನು ಮನಸಿನಲ್ಲಿ ಹಿಡಿದು,
ಮಾದಿಗರನು ತೆಗಳಿ ಮಾದಿಗ ಸದಾ,
ಒಳ್ಳೆ ಗುಣವು ಇರದೆ ಇಳೆಯಲಿ ದ್ವಿಜನೆಂತು? ವಿಶ್ವ

●

## (ಏ) ಯಾಗ – ಪುರೋಹಿತರು

ಯಜನ ಎಂದರೆ ಸೇವೆ. ದೇವತೆಗಳಿಗೆ ಅರ್ಪಿತ ಭಾವದಿಂದ ಸೇವೆ ಸಲ್ಲಿಸುವುದೇ ಯಜ್ಞವಾಗಿದೆ. ಸೋಮಯಾಗವೂ ಇಂಥದೊಂದು. ಇದರಲ್ಲಿ ಸೋಮರಸಪಾನವೂ ಇದೆ. ಸ್ತ್ರೀ ಸಂಗವೂ ಇದೆ. ಉಪನಿಷತ್ತುಗಳಲ್ಲಿ ಚಿತ್ರಿತವಾದ ಯಜ್ಞಗಳ ಮಂತ್ರಾರ್ಥಗಳತ್ತ ಸ್ವಲ್ಪ ಕಣ್ಣು ಹಾಯಿಸುವಾಃ

"ಅಗ್ನಿಯ ಹಿಂದೆ, ಚರ್ಮದ ಮೇಲಾಗಲಿ, ನೆಲದ ಮೇಲಾಗಲಿ, ವಾಙ್ಮನಸ್ಸುಗಳನ್ನು ಸಂಯಮಿಸಿ ಮಲಗುತ್ತಾನೆ. ಅವನು ಸ್ವಪ್ನದಲ್ಲಿ ಸ್ತ್ರೀಯನ್ನು ನೋಡಿದರೆ, ಕರ್ಮವು ಸಮೃದ್ಧವಾಯಿತು; ಎಂದು ತಿಳಿದುಕೊಳ್ಳಬೇಕು" (ಛಾಂದೋಗ್ಯ–೫–೨–೮)

"ಸ್ತ್ರೀಯೇ ಅಗ್ನಿಯು. ಅವಳ ಉಪಸ್ಥವೇ ಸಮಿತ್ತು (ಹುಲ್ಲು) ಲೋಮಗಳೇ ಹೊಗೆ. ಯೋನಿಯೇ ಜ್ವಾಲೆ. ಅಭಿನಂದವೇ ಕೆಂಡ. ಈ ಅಗ್ನಿಯಲ್ಲಿ ದೇವತೆಗಳು ರೇತಸ್ಸನ್ನು ಹೋಮ ಮಾಡುತ್ತಾರೆ. ಆ ಆಹುತಿಯಿಂದ ಪುರುಷನು ಹುಟ್ಟುತ್ತಾನೆ." (ಬೃಹದಾರಣ್ಯಕ ಉಪ–೬–೨–೨೩)

"ನನಗೆ ಪಂಡಿತನೂ, ವಿಖ್ಯಾತನೂ ವಿದ್ವತ್ಸಭೆಗಳಿಗೆ ಹೋಗುವವನೂ ರಮಣೀಯವಾದ ಮಾತನಾಡುವವನೂ, ಎಲ್ಲ ವೇದಗಳನ್ನು ಅರಿತಿರುವವನೂ
— — — — — — — — — — — — — — — — — — — — —

ಆದ ಪುತ್ರನು ಹುಟ್ಟಬೇಕು; ಪೂರ್ಣಾಯಸ್ಸನ್ನು ಪಡೆಯಬೇಕು ಎಂದು ಯಾವನು ಬಯಸುವನೋ, ಅವನು ಮಾಂಸಾನ್ನವನ್ನು ಹೋರಿಯ ಮಾಂಸದ ಇಲ್ಲವೆ ಎತ್ತಿನ ಮಾಂಸದ ಅನ್ನವನ್ನು ಮಾಡಿಸಿ, ಅದನ್ನು ತುಪ್ಪದೊಂದಿಗೆ ತನ್ನ ಪತ್ನಿಯ ಜೊತೆಗೆ ತಿನ್ನಬೇಕು. ಆಗ ಅವರಿಬ್ಬರೂ ಅಂಥಹ ಪುತ್ರನನ್ನು ಪಡೆಯಲು ಸಮರ್ಥರಾಗುವರು (ಬೃಹದಾರಣ್ಯಕ ಉಪ)

ಈ ಯಜ್ಞಮಂತ್ರಗಳ ಹಿನ್ನೆಲೆಯಲ್ಲಿ ವೇಮನ ಯೋಗಿಗಳ ಟೀಕೆಯನ್ನು ಅರ್ಥೈಸಿಕೊಳ್ಳಬೇಕು.

ಮಾಂಸವನ್ನು ಪಾಕ ಮಾಡಿ ತಿನ್ನುವ ಸೋಮಯಾಜಿಯು ತನ್ನನ್ನು ದ್ವಿಜನೆಂದು ಕರೆದುಕೊಳ್ಳುವದು ಎಷ್ಟು ಸರಿಯಾದೀತು? ಕೇವಲ ಕಾಗೆಯ ಹಾಗೆ, ಕಾಲಿದ್ದೂ 'ಕಾವ್ ಕಾವ್' ಎಂದು ವೇದಮಂತ್ರಗಳನ್ನು ಕೂಗಿದರೇನು ಬಂತು? ಇಂದಿನ ವಿಪ್ರರಿಗಿಂತಲೂ, ಬಾಹ್ಯ ಶೌಚವನ್ನಾದರೂ ಕಳೆಯುವ ಒಗೆವ ಅಗಸನೇ ಮೇಲಲ್ಲವೇ?

ಎಲ್ಲ ಜಾತಿಗಳಲ್ಲಿ ತಾವೇ ಶ್ರೇಷ್ಠರು ಎಂದುಕೊಳ್ಳುವ ಜಾತೀಯ ವಿಪ್ರರು ಯಜ್ಞ–ಪಶುವನ್ನು ಕೊಂದು, ಬೇಯಿಸಿ, ಮಣ್ಣಿನ ತಟ್ಟೆಯಲ್ಲಿರಿಸಿ ತಿನ್ನುತ್ತಾರೆ.

ಹುಲ್ಲು ಮೇಯುವ ಪಶುಗಳನ್ನು ತಿನ್ನುವ ಮನುಜರನ್ನು ಈ ಜಗತ್ತಿನಲ್ಲಿ ವಿಪ್ರರು ಮಾದಿಗರೆನ್ನುತ್ತಾರೆ. ಆದರೆ, ಮನುಷ್ಯರ ಮಲವನ್ನೇ ತಿನ್ನುವ ಪಶುಗಳನ್ನು ತಿಂದು ಉಪಜೀವಿಸುವವರನ್ನು ಯಾವ ಕುಲದವರೆಂದು ಕರೆಯೋಣ? ಕೆಲವು ಬ್ರಾಹ್ಮಣರು ಮರಿಗೋಳಿಗಳನ್ನು ತಿನ್ನುತ್ತಾರಲ್ಲ?

ಬರೀ ಓದಿಕೊಂಡರೇನು ಫಲ? ಓದುವಾಗ ಒಳ್ಳೇ ಗುಣವಂತನಿರಬಹುದು. ಆದರೆ, ಆಚಾರದಲ್ಲಿ ತರದಿದ್ದರೆ, ವಿಚಾರಕ್ಕೇನು ಬೆಲೆ? ಕಪ್ಪೆಯು ಹುಳು ಹಿಡಿಯಲೆಂದು ಯೋಚಿಸಿ ಕಮಲಪುಷ್ಪದ ಮೇಲೆ ಕುಳಿತರೇನು ಲಾಭ? ಇನ್ನು ಆಚಾರ ವಿಧಿಗಳೂ ಸಹ, ಗುರಿ ತಲುಪುವಂತಿರಬೇಕು. ಪರಮನನ್ನು ಕಾಣದವನು ಸಂಧ್ಯ ಪೂಜೆ ಮಾಡಿದರೇನು? ಜಪತಪ ಮಾಡಿದರೇನು? ವೇದ ಶಾಸ್ತ್ರ ಓದಿದರೇನು? ಬ್ರಹ್ಮ ಜ್ಞಾನವಾಗದೆ ಅವನೆಂತು ಬ್ರಾಹ್ಮಣನಾಗಬಲ್ಲ? ನೀರು ಮುಳುಗಿದರೆ ಅಂತಃಶೌಚವಾದೀತೇ? ದೇಶ ಸುತ್ತಿದರೆ ಮನಸ್ಸು ಶುದ್ಧವಾದೀತೇ? ಇನ್ನು ಕೂಗಿ ಕೂಗಿ ವೇದ ಮಂತ್ರ ಪಠಿಸಿದರೆ, ಅವನು ಕೂಗುವ ನಾಯಿಯಾಗಬಹುದೇ ಹೊರತು, ಬ್ರಹ್ಮಜ್ಞಾನ ಹೊಂದಿ ಬ್ರಾಹ್ಮಣನಾಗನು.

ವಟುಗಳನ್ನು ಕರೆತಂದು ಮುಂಜಿವೆ ಮಾಡುತ್ತೇವೆಂದು ಆಡಂಬರದ ಸಮಾರಂಭ ಮಾಡುವರು. ಹಾಗೆ ಮಾಡಿದರೆ ಆ ಹುಡುಗನ ಮನಸ್ಸು ಶುದ್ಧವಾಗಿ ಅವನು ಆಧ್ಯಾತ್ಮಿಕ ಲೋಕಾನುಭವ ಪಡೆಯುವ ಮರುಜನ್ಮ ಪಡೆದು 'ದ್ವಿಜ'

ನಾಗುವನೇ? ಎಲ್ಲವೂ ಬರೀ ಸುಗ್ರಾಸ ಭೋಜನಕ್ಕಾಗಿ ಮಾತ್ರ. ಮುಸುರೆ ತಿನ್ನುವ ಕಾಗೆಯು 'ಕಾವ್, ಕಾವ್' ಎಂದು ಒದರಿದಂತೆ.

ಸ್ಮಾರ್ತ ಕರ್ಮಗಳು ಹಲವು, ಶ್ರೌತ ಕರ್ಮಗಳು ಹಲವು; ಪ್ರೇತ ಕರ್ಮಗಳು ಹಲವು ಇವೆ. ಪ್ರೀತಿಯಿಂದ ಮಾಡುವವರ ಕೂಡ ವಿಪ್ರನು ಮಾಡಿಸುತ್ತಾನೆ. ಈ ಮರ್ತ್ಯ ಲೋದಲ್ಲಿ ಅರ್ಚಕರು ತಮ್ಮನ್ನೇ ತಾವು ತಿಳಿಯದೆ ಬಾಳುತ್ತಿದ್ದಾರೆ. "ಶ್ರದ್ಧಾವಾನ್ ಲಭತೇ" ಅಂದರೆ ಶ್ರದ್ಧೆಯು ಮಾತ್ರ ಯಾರನ್ನೆ ಆಗಲಿ ದಡಕ್ಕೆ ತಲುಪಿಸಬಲ್ಲದೇ ಹೊರತು, ಡಾಂಭಿಕ ವಿಧಿ ವಿಧಾನಗಳಲ್ಲ.

**೧೬೮೭ ಸೋಮಯಾಜಿಯೆಂದು ಸೊಂಪಿನ ವೇಷದವ,**
**ಕೆಟ್ಟ ಮಾಂಸ ಪಾಕ ಮಾಡಿ ತಿನುವ;**
**ಮತ್ತೆ ದ್ವಿಜನೆಂದು ಕೂಗಲೆಂತು ಮೆರೆವ? ವಿಶ್ವ**

**೧೬೮೮ ಕಟ್ಟಿ ಮೇಕೆ ಗಟ್ಟಿ ಕೊರಳು ಮೊಲೆಯ ಕುಡಿಯೆ,**
**ಹಸಿವೆ ಹಿಂಗಬಹುದೆ? ಆಶೆಯಷ್ಟೆ;**
**ಲೋಭಿಯನ್ನು ಕೇಳೆ, ಲಾಭವಾಗಬಹುದೆ? ವಿಶ್ವ**

**೧೬೮೯ 'ಕಾವು' 'ಕಾವು' ಎನುತ ಕಾಲು ಇದ್ದು, ಉಲಿವ**
**ಕಾಗೆ ರೀತಿ ನುಡಿದು ಕಾಣರಲ್ಲ!**
**ಬ್ರಾಹ್ಮಣಾಗಿರುವರು, ಬ್ರಹ್ಮವನೆ ಅರಿಯರು! ವಿಶ್ವ**

**೧೬೯೦ ಓದಿದಾತಗಿಂತ, ಒಗೆವ ಅಗಸ ಮೇಲು;**
**ಮನೆಯ ದೇವಗಿಂತ ಮಹಿಷ ಮೇಲು,**
**ಸಕಲ ಸುರರಿಗಿಂತ ಜಾರಕಾಂತೆ ಮೇಲು, ವಿಶ್ವ**

**೧೬೯೧ ಅಖಿಲ ಜಾತಿಗಳಲಿ ಅಧಿಕರೆಂದು ಕೊಳುತ,**
**ಯಜ್ಞ ಪಶುವ ಕೊಂದು ಅಗ್ನಿಗಿಟ್ಟು,**
**ಮಣ್ಣು ತಟ್ಟೆಯಲಿರಿಸಿ ಮಾಂಸವನು ತಿನುವರು, ವಿಶ್ವ**

**೧೬೯೨ ಪಲ್ಯ ಗಡ್ಡೆ ತಿನುವ ಪಶುಗಳನ್ನು ಕಡಿದು,**
**ಮನುಜರುಣಲು ಜಗದಿ ಮಾದಿಗರಲ!**
**ಮಂದಿ ಮಲವ ತಿನುವ, ಹಂದಿ ಕೋಳಿ ಭುಜಿಪ,**
**ಜನರ ಕುಲವದೇನೊ? ಜಗದಿ ವೇಮ.**

— — — — — — — — — — — — — — — — — — — —

೧೯೩ ಕಸವ ಮೇವ ಪಶುವ ತಿನ್ನುವಾತನನ್ನು,
ಹೊಲೆಯರೆನುವರೇಕೊ ಜಗದಿ ಜನರು?
ಮರಿಗೋಳಿ ತಿನ್ನುವವ, ಬ್ರಾಹ್ಮಣ ತಾನೆಂತು? ವಿಶ್ವ

೧೯೪ ಈ ಕಪಟ ನಾಟಕದಲ್ಲಿ
ಈ ಕಪಟ ಓದನೆಲ್ಲವನಿಂಪಾಗರಿವ್ರೋಲ್,
ಆ ಪತಾತ್ಮನು ಮಾಳ್ಪನೊ
ಆ ಕಪಟಾತ್ಮನಿಗೆ ಮಣಿದತೆರ ವೇಮಾ

೧೯೫ ಅರಿವುಗೇಡಿಯವನು ಅಖಿಲ ಓದುತಿಪ್ಪ,
ಓದುವಂಥ ವೇಳೆ ಒಳ್ಳೆ ಗುಣಿಯು,
ಕಮಲವೇರಿ ಕಪ್ಪೆ ಕುಳಿತುಕೊಳ್ಳದೇನು? ವಿಶ್ವ

೧೯೬ ಸಂಧ್ಯಪೂಜೆಯೇಕೆ? ಜಪವ ಮಾಡಲೇಕೆ?
ವೇದ ಶಾಸ್ತ್ರಗಳಲಿ ಬೀಳಲೇಕೆ?
ಪರಮ ಕಾಣದವನು ಬ್ರಾಹ್ಮಣನೇ ಅಲ್ಲ ವಿಶ್ವ

೧೯೭ ಮುಣುಗಿ ಬ್ರಾಹ್ಮಣನವ ಮುಂದುಗಾಣದೆ ಹೋದ,
ತಿರುಗಿ, ತಿರುಗಿ, ಜೋಗಿ, ದಿಕ್ಕುಗೆಟ್ಟ,
ಕೂಗಿ, ಕೂಗಿ, ವಾದಿ ಕೆಟ್ಟ ನಾಯಿಯಾದ, ವಿಶ್ವ

೧೯೮ ಕಿರಿಯ ದ್ವಿಜರಿಗೆಲ್ಲ ಕಡುಮುಖ್ಯವೆಂದರು,
ಮುಂಜಿ ಮಾಳ್ಪೆವೆಂದು ಒದರುತಿಹರು,
ಮುಸುರೆ ಕುಡಿದು ಕಾಗೆ ಕರ‍್ರು ಕರ‍್ರು ಎಂದು, ವಿಶ್ವ

೧೯೯ ಸ್ಮಾರ್ತ ಕರ್ಮಗಳನು, ಶ್ರೌತ ಕರ್ಮಗಳನು,
ಪ್ರೇತ ಕರ್ಮಗಳನು, ಪ್ರೀತಿಯಿಂದ
ಮಾಡುವವರ ಕೂಡ ಮಾಡಿಸುವನು ವಿಪ್ರ, ವಿಶ್ವ

೨೦೦ ತೊತ್ತು ತೊತ್ತೆ ಹೊರತು ದೊರೆಸಾನಿಯಲ್ಲ,
ಸಾಧುಗೊಳಿಸಲದಕೆ ಸಿಗದು ಫಲವು.
ಸತ್ತ ಕೂಳು ಕದಿವನೆತ್ತ ಮೇಲನರಿವ, ವಿಶ್ವ

೧೭೦೧ ಮರ್ತ್ಯದಲಿ ಅರ್ಚಕರೆನಲು,
ಮರ್ತ್ಯರು, ತಮ್ಮನೆ ತಿಳಿಯದೆ ಮನಸೀ ಅಲೆವರ್,
ವ್ಯರ್ಥವು ವಿಪ್ರರು ಪೇಳ್ವುದು,
ಶ್ರದ್ಧೆಯಲ್ಲವೆ? ಯಾರಿಗಿರಲಿ, ಚರಿತವು, ವೇಮಾ.

●

## (ಐ) ಶೀಲವಂತಿಕೆ – ಮುಟ್ಟು

ಧರ್ಮದ ಗ್ರಹಿಕೆಯು ಭ್ರಷ್ಟವಾದಂತೆಲ್ಲ, ಗುಣ–ಗಣನೆಯು ಗೌಣವಾಗಿ ಕರ್ಮ, ಕಂದಾಚಾರಗಳ ಪ್ರದರ್ಶನವೇ ಪ್ರಮುಖವೆನಿಸಿತು. ಕೆಲವು ಜನರು ಅಸ್ಪೃಶ್ಯರೆನಿಸಿದರು. ಅವರು ಕೀಳು ಕೆಲಸದ ಹೊಲೆಯರೆನಿಸಿದರು.

ಯಾರು ಯಾರನ್ನು ಮುಟ್ಟಬೇಕು? ಯಾರು ಯಾರಲ್ಲಿ ಊಟ ಮಾಡಬೇಕು? ಯಾರು ಯಾರಿಂದ ಎಷ್ಟು ಅಂತರದ ಮೇಲೆ ನಿಲ್ಲಬೇಕು? ಹೀಗೆ ಹಲವಾರು ಕಟ್ಟು ಪಾಡುಗಳು ಬಂದವು. ಎಲ್ಲಕ್ಕಿಂತ ಪ್ರಬಲವಾಗಿ ಇರುವುದೇ ಬಾಯಿಯೆಂಜಲು.

ರೋಗ ಗ್ರಸ್ತ ತಾಯಿ ಮಗುವಿಗೆ ಹಾಲೂಡಿದರೆ, ಉಣಬಡಿಸಿದರೆ ಆಕ್ಷೇಪವಿಲ್ಲ. ಪ್ರಿಯತಮೆ ಪ್ರಿಯಕರನಿಗೆ ಕದ್ದುಮುಚ್ಚಿ ಇತ್ತ ಮುತ್ತು ಎಂಜಿಲಲ್ಲ. ಗುರು–ಶಿಷ್ಯರ ಪರಸ್ಪರ ವಿಶ್ವಾಸ ಭಕ್ತಿಗಳಿಂದ ಕೈ ತುತ್ತು ತಿನ್ನಿಸುವುದೂ ಎಂಜಲಲ್ಲ. ಆದರೆ ಒಬ್ಬ ಶೂದ್ರನು ಮಾಡಿದ ಅಡುಗೆಯನ್ನು ಬ್ರಾಹ್ಮಣನೆಂದುಕೊಳ್ಳುವವನೊಬ್ಬ ಉಂಡರೆ ಅದು ಎಂಜಿಲು. ಒಬ್ಬ ಅತಿ ಶೂದ್ರನ ನೆರಳು ಮಡಿವಂತ ಹಾರುವನ ಮೇಲೆ ಬಿದ್ದರೂ ಅದು ಎಂಜಿಲು.

ಈ ಗ್ರಹಿಕೆಯ ಹಿನ್ನೆಲೆಯಲ್ಲಿ ವೇಮನ ಯೋಗಿಗಳ ವಿಚಾರಗಳನ್ನು ಮೆಲುಕು ಹಾಕೋಣ.

ವೇದವನ್ನು ಬಾಯಿಯಿಂದ ಓದಬೇಕು ತಾನ್ನೋ? ತಿಳಿದು ನೋಡಿದರೆ, ಬಾಯಿ ಚಪ್ಪರಿಸಿ ಪಾಠ ಮಾಡಿದ ವೇದಗಳ ಓದು ಎಂಜಿಲದ ಫಲವಲ್ಲವೇ? ಯಾವುದೇ ಮಂತ್ರವಿರಲಿ; ಪಾಠ ಮಾಡುವಾಗ ಎಂಜಿಲಾಗದೇನು? ಎಂಜಿಲಾಗುವುದೆಂದು ಈ ಭೂಮಿಯನ್ನೇ ತೊರೆಯಬಹುದೇ?

ಒಬ್ಬ ಮಹಾತ್ಮನ 'ಎಂಜಿಲೆನಿಸಿದ ಮಂತ್ರವು ಭೂಮಿಯನ್ನೇ ಬೆಳಗಿತಲ್ಲವೇ? ಅನೇಕ ವಾಸನೆಗಳು ಮಾನವನಲ್ಲಿವೆ. ವಾಸನೆಯೆಂದರೆ ಮನದಲ್ಲಿ ಮೆಲುಕಾಡಿಸುವುದು ತಾನೇ. ದೇವರಿಗೆ ಸಂತೋಷಗೊಳಿಸುವ ಸಾದ ಅರ್ಥಾತ್ ಪ್ರಸಾದವು ಬಹು ಜನರ ವಾಸನೆಯ ಫಲ ತಾನೇ. ಅಂಥ ಎಂಜಿಲು ಪ್ರಸಾದವನ್ನು ನೈವೇದ್ಯ ಮಾಡಿದ ದೇವರ ಮೂರ್ತಿಗೆ ಮಣಿಯುವುದು ಎಷ್ಟು ಸಮಂಜಸ?

— — — — — — — — — — — — — — — — — — — — — —

ನಾವು ಎಷ್ಟು ಪ್ರಸ್ತ ಸಮಾರಂಭಗಳನ್ನು ಮಾಡಿದರೇನು? ಉದರದಲ್ಲಿ ಹೊಲಸು ಉಂಟು; ಉಂಡ ಬಾಯಿ ಎಂಜಲಾಗುತ್ತದೆ. ಅಂದ ಮೇಲೆ ಬ್ರಹ್ಮ ಪ್ರಾಪ್ತಿ ಸಾಧ್ಯವೇ? ಸತ್ಯವನ್ನರಿಯದೆ ಸಾಕ್ಷಾತ್ಕಾರವಾಗಬಹುದೇ?

೧೭೦೨ ಎಂಜಿಲೆಂಜಿಲೆನುತ, ನಿಮ್ಮ ಬಾಯಿಯಿಂದ,
ವೇದಗಳನೋದುವ ವಿಭ್ರಮಿತರೆ!
ಅರಿತು ನೋಡಲದುನೆ ಎಂಜಿಲಾಗದೇನು? ವಿಶ್ವ

೧೭೦೩ ಎಂಥ ಮಂತ್ರವಿರಲಿ; ಎಂಜಿಲಾಗದೇನು?
ಇರದು ಮಾತು ವಶವು ಬ್ರಹ್ಮನಿರಲಿ.
ಎಂಜಿಲೆಂಜಿಲೆಂದು ಇಳೆಯ ತೊರೆಯಬಹುದೆ? ವಿಶ್ವ

೧೭೦೪ ಓರ್ವರೆಂಜಿಲು ಬಾಯಲಿ ಒಪ್ಪ ನುಡಿಯೆ,
ತಾರಕ ಬ್ರಹ್ಮವಿಳೆಯಲಿ ತೊಳಗಿತಷ್ಟೆ,
ಎನಿಬರೊ ಪುನರಪಿ ಅದನ್ನೆ ಎಂಜಿಲೆನರೆ?
ಎಂಜಿಲೆಂಜಿಲು, ಎನಲೇಕೆ ಇನ್ನು, ವೇಮ?

೧೭೦೫ ಒಬ್ಬನೆಂಜಿಲರಿಯೆ, ಒಪ್ಪವಾಗಿ ಮಥಿಸೆ,
ಬ್ರಹ್ಮದೆಂಜಿಲಾಯ್ತು ಬಹು ಗತಿಯಲಿ,
ಇಷ್ಟು ಜನರು ಮಥಿಸೆ, ನಿನ್ನ ಬಾಯಾಗದೆ? ವಿಶ್ವ

೧೭೦೬ ಆ ದೇವರಿಗೂ ಎಂಜಿಲು,
ಸಾದವೆ ನೈವೇದ್ಯವಾಯ್ತು, ಬಹು ವಾಸನೆಯಿಂ.
ಪಾದಗಳ ಮೇಲೆ ಬೀಳುತ,
ಏದುತ, ಶಿರ ಮಣಿವುದೆಂಥ ಮುಕ್ತಿಯೊ ವೇಮಾ?

೧೭೦೭ ವಿಶ್ವಕರ್ಮ ಸುತರು ವಿವಿಧ ದೇವತೆಗಳು,
ಕಾಣದೆ ತಿರುಗುವರು, ಕಷ್ಟದಿ ಜನ,
ಅಂಥವರೆಂಜಿಲನು ಅಖಿಲರು ತಿನ್ನುವರು, ವಿಶ್ವ

೧೭೦೮ ಉದರದಲ್ಲಿ ಹೊಲಸು, ಉಂಡ ಬಾಯೆಂಜಿಲು,
ಕಡೆಗೆ ವಶವೆ? ಬ್ರಹ್ಮ ಕಂದರಿರಲು.
ಸತ್ಯವಿಷ್ಟು ಇರದೆ, ಸಿದ್ಧಿಯೆಂತು ಜಗದಿ? ವಿಶ್ವ

— — — — — — — — — — — — — — — — — — — — —

೧೭೦೯ ಎಂಥ ಕ್ಷಾಮವಿರಲಿ ಎಂಜಲನ್ನವನ್ನು,
ಪರರಿಗಿಡುವ ಧರ್ಮ, ಪರರನರಿಯೆ,
ಎಂಜಲಾದ ಕಡ್ಡಿ ನೆಕ್ಕುವಂಥ,
ಶ್ವಾನವಾಗಿ ಜನಿಪ, ಸತ್ಯ ವೇಮ.

೧೭೧೦ ಎಲ್ಲ ನಾಯಿಗಳೆಂಜಿಲು ಈಗ ತಿಳಿದೆ,
ಹೆಣ್ಣು ನಾಯಿಗಳೆಂಜಿಲು ಹೊಂದಿಯಾಯ್ತು,
ಕೆಡಿಸಿದೆಂಜಿಲು ಅಂತ್ಯಕೆ ಶ್ರೇಷ್ಠವಾಯ್ತು,
ನಿಷ್ಠೆಯಿರುವವರ ಎಂಜಿಲೇ ಹೆಚ್ಚು ವೇಮ.

೧೭೧೧ ಬಿಳಿಯ ನಾಯಿಗಳೆಂಜಿಲು ಬಹಳವಾಯ್ತು,
ಪಕ್ಕ ವೇಶ್ಯೆಯರೆಂಜಿಲು ಪ್ರಾಪ್ತವಾಯ್ತು,
ಭ್ರಷ್ಟರೆಂಜಿಲು ಅಂತ್ಯಕೆ ಶ್ರೇಷ್ಠವಾಯ್ತು,
ನಿಷ್ಠೆಯಿರುವವರ ಎಂಜಿಲೆ ನಿಂದ್ಯ ವೇಮಾ.

●

## (೭) ವಸುಧೈವ ಕುಟುಂಬಕಂ

ಧರ್ಮಬೊಧಕರಲ್ಲಿ ಎರಡು ವಿಧ. ಹಲವರು ಜಾತಿಪರಿಗಣನೆಯನ್ನು ಆಧರಿಸಿ, ಸಮಾಜವನ್ನು ಶ್ರೇಣೀಕರಿಸುತ್ತಾರೆ. ಬೇರೆ ಹಲವರು ಜಾತಿಯನ್ನು ಪರಿಗಣಿಸದೆ ವಸುಧೈವ ಕುಟುಂಬಕಂ ತತ್ತ್ವವನ್ನು ಬೊಧಿಸುತ್ತಾರೆ. ಭಾರತೀಯರಲ್ಲಿ ಜಾತಿ ನಿರಪೇಕ್ಷರಾದ ಈ ಮಹಾತ್ಮರು ಶಿವನೇ ತಂದೆಯೆಂದೂ, ಪಾರ್ವತಿಯನ್ನೇ ತಾಯಿಯೆಂದೂ ಬಗೆದು ಜಗದ ಜನರನ್ನೆಲ್ಲ ಪ್ರಮಥಗಣವೆಂದು ಪರಿಗಣಿಸುತ್ತಾರೆ. ವೇಮನರು ಈ ವರ್ಗದವರು.

ಬ್ರಹ್ಮಾಂಡದ ಎಲ್ಲ ಕುಲಗಳೂ ಕೂಡಿಯೇ ಹುಟ್ಟಿವೆ. ಅಂದ ಮೇಲೆ ಮಾನವರೆಲ್ಲ ಅಣ್ಣ ತಮ್ಮಂದಿರೇ ಸರಿ ಅಂದ ಮೇಲೆ ಉರ್ವಿವಾಸಿಗೆಲ್ಲ ಸಮಾನ ಪ್ರೀತಿಯಿಂದ ಉಣಬಡಿಸಿ ಅವರ ಶಿರದ ಮೇಲೆ ಆಶೀರ್ವಾದದ ಹಸ್ತವಿರಿಸಿ ಸಮಪಾಲು ಭೋಗಿಸಲು ತಿಳಿಹೇಳು.

ಎಲ್ಲರೂ ಮೇಲು-ಕೀಳು ಭೇದ ಮರೆಯಬೇಕು. ಎಲ್ಲರ ಸಮಾನ ಅಭ್ಯುದಯವಾಗಲೆಂದು ಆಶಯ ಹೊಂದಬೇಕು. ವೈರವನ್ನು ಹೂಳಿ, ಸಮತೆಯಿಂದ ಬಾಳಬೇಕು. ಒಂದು ಜನಕುಲ ಹೆಚ್ಚಿನದು; ಇನ್ನೊಂದು ಕಡಿಮೆಯದು, ಎಂಬ ಮೇಲು ಕೀಳಿನ ಭಾವನೆಗೆ ಇಂಬಿಲ್ಲ. ಎಲ್ಲ ಕುಲಗಳೂ ಸಾನುಜಾತವಾಗಿವೆ.

೧೭೧೨ ವರಬ್ರಹ್ಮಾಂಡದಿ ಪರಿಕಿಸಿ ನೋಡಿದೊಡೆ,
ಕುಲಗಳೆಲ್ಲ ಕೂಡಿ ಪುಟ್ಟಿದವೈ,
ಎಲ್ಲರೊಂದಾಗಲಣ್ಣ ತಮ್ಮಂದಿರಲ್ಲವೆ? ವಿಶ್ವ

೧೭೧೩ ಉರ್ವಿವಾಸಿಗೆಲ್ಲ ಒಂದೆ ತಾಟವಿಟ್ಟು,
ಸ್ನೇಹವರಳಿಸಿ, ಕುಲ ಭಾವವಳಿಸಿ,
ಶಿರದ ಮೇಲೆ ಕರವಿಟ್ಟು ಉಣ ಹೇಳಿರೊ ವಿಶ್ವ

೧೭೧೪ ಸರ್ವೋದಯದಿ ಸರ್ವರೊಂದೆಯಾಗಿ ಬಾಳಿ,
ಸನುತ ಗೆಯ್ಮೆಯಿಂದ ವೈರ ಹೂಳಿ,
ನಿಲಲು, ಮೇಲು ಕೀಳು ಬುಡಮೇಲು ಕೇಳಿ, ವಿಶ್ವ

೧೭೪೫ ಕುಲದ ಮೇಲು ಕೀಳು ಗೊಡವೆಯಿಂದಲೇನು?
ಸಾನುಜಾತ ಸಕಲ ಕುಲಗಳೆಲ್ಲ,
ಮೇಲು ಕೀಳು ಮಾತು ತಿಳಿದೊಡೆಲ್ಲಿ ಬಂತು? ವಿಶ್ವ

●

## (ಓ) ಸ್ವಂತ ನಡತೆ

ಒಳ್ಳೆಯ ವಿಚಾರ ಮಾಡಬೇಕು. ಅದಕ್ಕನುಗುಣವಾದ ಒಳ್ಳೆಯ ನಡತೆಯೂ ಬೇಕು.

ಪರರ ಆಸ್ತಿಯನ್ನು ಎಂದೂ ಅಪಹರಿಸಬಾರದು. ಪ್ರತಿಯಾಗಿ ಪರರ ಆಸ್ತಿಯನ್ನು ಸ್ವಂತ ಆಸ್ತಿಯೆಂಬಂತೆ ಸಂರಕ್ಷಿಸಬೇಕು. ಇನ್ನು ಪರರ ಚಿತ್ತವರಿತು ಪಾಲನೆ ಮಾಡಿದರೆ ಅವರ ಸದಾಶಯದಿಂದ ಸ್ವಂತ ಆಸ್ತಿಯು ಇಮ್ಮಡಿಸುತ್ತದೆ.

ನೀತಿಯಿಂದ ನಡೆಯಬೇಕು. ನೀತಿಯೇ ಜ್ಯೋತಿಯಾಗಿ ಮಾರ್ಗ ತೋರಬೇಕು. ಹಾಗೆ ಮಾಡದಿದ್ದರೆ ಮನವು ನಿರ್ಮಲವಾಗದು. ಇನ್ನು ಮನೋಶುದ್ಧಿಯಾಗದೆ, ಪರಮ ಪದವು ಲಭಿಸದು. ಬಹಳವಾದರೆ ಒಬ್ಬನು ಧನವಂತನಿರಬಹುದು. ಆದರೆ ಅವನಿಗೆ ಮನವು ನಿರ್ಮಲವಿರದೆ, ದೈವ ಫಲವು ಹೇಗೆ ದೊರೆಯಬಹುದು?

ಸುಳ್ಳು ಆಡಬಾರದು. ನುಡಿಯು ಶುದ್ಧವಿರದಿದ್ದರೆ ಅವನು ನೀಚ ಚಾಂಡಾಲನೇ ಸರಿ. ಹಣೆಯಲ್ಲಿ ಪಟ್ಟೆ ನಾಮ ಬಳೆದು ಭಕ್ತನಂತೆ ತೋರಬಹುದು. ಆದರೆ ಸಿಕ್ಕದ್ದನ್ನೆಲ್ಲ ಕಬಳಿಸಲು ಹೇಳಬಹುದು. ಬಟ್ಟೆಯ ಹೊಲಸನ್ನು ಕಳೆಯುವ ಮಡಿವಾಳನು ಕಲ್ಲಿಗೆ ಒಗೆಯುವನಲ್ಲವೇ? ಆ ರೀತಿ, ಬುದ್ಧಿ ಹೇಳುವವನು ಗುದ್ದಿ ಹೇಳಿದರೂ ಸರಿಯೇ.

— — — — — — — — — — — — — — — — — — — — — —

ಸುಳ್ಳಾಡುವದಕ್ಕಿಂತಲೂ ಕೀಳು ಕೆಲಸ ಇನ್ನೊಂದಿಲ್ಲ. ಸುಳ್ಳು ಹೇಳುತ್ತ ತನ್ನನ್ನು ತಾನು ದ್ವಿಜನೆಂದುಕೊಂಡರೆ, ಅವನು ತಲೆತಿರುಕನೇ ಸರಿ.

ನಿನಗೆ ಅನಾನುಕೂಲ ತಾಣಗಳಲ್ಲಿ ಅಲ್ಪನೆಂದುಕೊಳ್ಳಲು ಮುಜುಗರ ಬೇಡ. ಕನ್ನಡಿಯಲ್ಲಿ ಕರಿಯು ಕಿರಿದಾಗಿ ಕಂಡರೇನಂತೆ?

ಬೇರೆಯವರ ತಪ್ಪನ್ನೆಣಿಸುವ ಮುನ್ನ, ಸ್ವಂತದ ದೋಷಗಳನ್ನು ಸರಿಪಡಿಸಿಕೊಳ್ಳಬೇಕು.

೧೭೧೬ ಪರರ ಚಿತ್ತವರಿತು ಪಾಲನ ಮಾಡಿದರೆ,
ನಿನ್ನ ಸ್ವಂತ ಆಸ್ತಿ ಇಮ್ಮಡಿಪುದು,
ಅವನಿಲಿ ಪರ ಆಸ್ತಿ ಅಪಹರಿಸ ಕೂಡದು, ವಿಶ್ವ

೧೭೧೭ ನೀತಿ ಜ್ಯೋತಿಯಿರದೆ, ನಿರ್ಮಲವೆಂತಹುದು?
ಪರಮ ಪದವು ಎಂತು? ಎಲ್ಲಿ ಇಹುದು?
ಧನ ತನಗಿರಲೇನು? ದೈವ ಫಲ ದೊರೆವುದೆ? ವಿಶ್ವ

೧೭೧೮ ನುಡಿಯು ಶುದ್ಧವಿರದೆ, ನೀಚ ಚಂಡಾಲನು,
ಪ್ರೇಮ ಶುದ್ಧಿಯಿರದೆ, ಪಾತ್ರನೆಂತು?
ತೋರಲು ಹಣೆ ಭಕ್ತ; ತೋಳ ಬಾಯಿಯವನು, ವಿಶ್ವ

೧೭೧೯ ಮಡಿವಾಳನು ಒಗೆದು, ಮತ್ತೆ ಬೇಸರಿಯದೆ,
ಮೈಲಿ ತೊಳೆದು, ಬಟ್ಟೆ ಮಡಿ ಮಾಡುವ
ಬುದ್ಧಿ ಹೇಳುವವನು, ಗುದ್ದಿ ಹೇಳಲೇನು? ವಿಶ್ವ

೧೭೨೦ ಸುಳ್ಳು ನುಡಿವದಕಿಂತ ಕೀಳು ಮತ್ತೆ ಇಲ್ಲ,
ಕಷ್ಟವೆಂದೂ, ಕೀಳುಗೊಳಿಸುತಿಹುದು,
ದ್ವಿಜನೆನಲು, ಅರಿಯೆ ತಲೆ ತಿರುಕತನವಲ ವಿಶ್ವ

೧೭೨೧ ಅಲ್ಲದೆಡೆಗಳಲ್ಲಿ ಅಧಿಕನೆನಿಸೆ ಹೊಲ್ಲ.
ಅಲ್ಪನೆಂದುಕೊಳಲು ಚಿಂತೆ ಬೇಡ.
ಅಲ್ಪವಾಗಿ ಕಾಣದೆ ಗಿರಿ ಕನ್ನಡಿಯೊಳು? ವಿಶ್ವ

೧೭೨೨ ಬೆಳಿಗೆ ನಿಲುವ ತನಕ ಪರಿಪಾಟಲರಿಯನು,
ಘನತೆಗೊಪ್ಪ ಮನುಜನೆನುತ ಹುಟ್ಟಿ,
ಕೀಳು ಮೇಲರಿಯನು, ಕೆಳಗೆ ನೋಡುತಿರಲು ವಿಶ್ವ

೧೭೨೩ ಪರರ ದತ್ತವಿಂತು ಪಾಲನವ ಗೆಯ್ದರೆ,
ಇಳೆಯಲಿ ಸ್ವದತ್ತ ಬೆಳೆಯುತಿಹುದು,
ಅವನಿಯಲಿ ಪರದತ್ತ ಅಪಹರಿಸಲು, ಸ್ವ–
ದತ್ತವು ನಿಷ್ಫಲವು, ಧರಣಿಲಿ, ವೇಮ.

೧೭೨೪ ಕಲೆಯು ಬಿದ್ದ ಹಣ್ಣು ಸಲೆಯಲ್ಲವೆನುವರು,
ಅಂಥ ಕಲೆಯು ತಮ್ಮಲಿ ಅರಿಯದಿಹರು,
ತಮ್ಮನೆಣಿಸುವವರು ತಮ್ಮ ಕಲೆ ಕಾಣರು, ವಿಶ್ವ

೧೭೨೫ ತಮಗೆ ಗೆಯ್ದ ದೊಡ್ಡ ತಪ್ಪುಗಳಿರುವಾಗ,
ಹೆರರ ತಪ್ಪಿನೆಣಿಕೆ ಹೊಲ್ಲವೆಂದಿಗು,
ಚಕ್ಕುಲಿಯನು ನೋಡಿ ಜಂತಿಕೆಯಾಯ್ದ ತೆರ, ವಿಶ್ವ
(ಜಂತಿಕೆ – ಚಕ್ಕುಲಿ ಹಾಗೆ ಕಾಣುವ ಒಂದು ತಿಂಡಿ)

೧೭೨೬ ದೋಷ ರಾಶಿ ಹುಟ್ಟಿ ದೋಷವನು ತಿಳಿಯದೆ,
ದೂಷಣೆಯ ಮಾಳ್ಪ ದುಷ್ಟ ಜನರು,
ನರಕ ಕೂಪದಲ್ಲಿ ನೆಲೆಸುತಿಪ್ಪರಯ್ಯ, ವಿಶ್ವ

೧೭೨೭ ತಪ್ಪನೆಣಿಸುತಿಹರು ತಂಡೋಪ ತಂಡದಿ,
ಉರ್ವಿ ಜನತೆಗೆಲ್ಲ ಉಂಟು ತಪ್ಪು,
ತಪ್ಪನೆಣಿಸುವವರು ತಮ್ಮ ತಪ್ಪರಿಯರು, ವಿಶ್ವ

೧೭೨೮ ಮಾತನಾಡಬಹುದು, ಮನವ ನಿಲಿಸಲಿಲ್ಲ,
ತಿಳಿಸಬಹುದು, ತನ್ನ ತಿಳಿಯಲಾರ,
ಚೂರಿ ಹಿಡಿಯಬಹುದು ಶೂರನಾಗಲಿಲ್ಲ, ವಿಶ್ವ

೧೭೨೯ ತನ್ನ ಮನದಿ ಕಪಟವಿರಲು,
ತನ್ನಂತೆಯೆ ಕಪಟವುಂಟು, ಸಲೆ ಜೀವರಿಗೇ,
ತನ್ನ ಮನದಿ ಕಪಟಿರದಿರೆ,
ತನ್ನೊಡನಾರೂ ಕಪಟವ ತೋರರು ವೇಮಾ.

— — — — — — — — — — — — — — — — — — — — — —

೧೭೩೦ ತನ್ನೊಳೆನಿತೊ ಅಧಿಕ ತಪ್ಪು ತಡೆಗಟ್ಟಲು,
ಅನ್ಯರ ತಪ್ಪೆಣಿಸುತಿಹನೆ ಮೂಢ,
ಚಕ್ಕುಲಿಯ ಕಂಡು ಜಂತಿಕಿ ನಕ್ಕ ಚೆಂದ, ವಿಶ್ವ
ಜಂತಿಕಿ – ಚಕ್ಕುಲಿಯಂತೆ ಕಾಣುವ ಇನ್ನೊಂದು ತಿಂಡಿ

೧೭೩೧ ಒಳ್ಳೆ ರುಚಿಯ ಕೋರಿ, ಒಳ್ಳೆ ಲಲನೆ ಕೋರಿ,
ಮನುಜಗೆಂಥ ಕೆಟ್ಟ ಮನಸು ನೋಡು,
ಅಲ್ಪವಿದ್ದರೂನು ಏನಾದರು ಬಿಡನು. ವಿಶ್ವ

೧೭೩೨ ತನ್ನ ಗುಣವು, ತನಗೆ ಉಂಟು,
ಅನ್ಯರ ಗುಣ ಮನದಲಿ ಪರಿಶೀಲಿಸಿ ಎಣಿಸಲ್,
ತನ್ನ ಗುಣವ ತಾನರಿಯದೆ,
ಅನ್ಯರ ನಿಂದಿಸುವಾತ ಭ್ರಷ್ಟನು ವೇಮಾ.

೧೭೩೩ ಪರರ ವಿತ್ತದಲಿ ಭ್ರಾಂತಿಗೊಳ್ಳದಂಥ,
ಪುರುಷನವನಿಯಲ್ಲಿ ಪುಣ್ಯ ಮೂರ್ತಿ,
ಪರರ ವಿತ್ತವರಿಯೆ, ಪಾಪ ಸಂಚಿತಾಯ್ತು, ವಿಶ್ವ

೧೭೩೪ ಶುಷ್ಕ ಬುದ್ಧಿಯಿಂದ ಶೂಶ್ರುಷೆಯನೊಲ್ಲ,
ನಿಷ್ಠೆ ಹಿಡಿಯಲೇನು ನಿಜವರಿವನೆ?
ಕಷ್ಟವಾದ ವಿದ್ಯೆ ಖಳನಿಗವಗತವೆ? ವಿಶ್ವ

೧೭೩೫ ಮೊದಲಕ್ರಿಯೆ ತಪ್ಪಿ ಮೋಸವನೆ ಕಾಣುತ,
ಹೊಟ್ಟೆಗಾಗಿ ಮನಸು ಹೊಂದಿಸಿಹನು,
ಬೀದಿ ನಾಯಿ ರೀತಿ ಬೆಳೆವ ಮನುಜನಷ್ಟೆ, ವಿಶ್ವ

೧೭೩೬– ಪರರ ಸೊತ್ತು ಕೈಲಿ ಪಿಡಿದು ವಿಪುಲವಾಗಿ,
ಸ್ವಂತದಿನಿತು ಇರದಿರೆ ಜಾರನವನು,
ದ್ವಿಜನೆಂದುಕೊಳುವ, ತೇಜವಿನಿತು ಇಲ್ಲ. ವಿಶ್ವ

●

## (ಔ) ಸಾಲ – ಶೂಲ

'ಹಾಸುಗೆ ಇದ್ದಷ್ಟು ಕಾಲು ಚಾಚು' ಎಂಬ ಜಾಣ ನುಡಿಯಿದೆ. ತನಗೆ ಬರುವ ಆದಾಯ ನೋಡಿಕೊಂಡು ತನ್ನ ವೆಚ್ಚದ ಇತಿಮಿತಿಗಳನ್ನು ನಿರ್ಧರಿಸುವುದೇ ಮರ್ಯಾದೆಯ ಬಾಳೆನಿಸುತ್ತದೆ.

ಇಲ್ಲವಾದರೆ, ಆದಾಯಕ್ಕಿಂತ ವೆಚ್ಚವು ಅಧಿಕವಾಗಿ ಸಾಲ, ಕೈಗಡ, ಅಡವು ಇತ್ಯಾದಿ ಒಂದೊಂದೇ ಮಿತಿಗೆಟ್ಟ ವೆಚ್ಚದ ಉಪಾಯಗಳನ್ನು ಅನುಸರಿಸಬೇಕಾಗುತ್ತದೆ. ಆದರೆ, ಸಾಲ ನೀಡುವವನು ಬೆಡಗಿನ ದೇವತೆಯಂತೆ ಕಾಣಬರುತ್ತಾನೆ. ಅದೇ, ಕೊಟ್ಟ ಸಾಲವನ್ನು ಮರಳಿ ಪಡೆಯುವಾಗ ಯಮಧರ್ಮರಾಯನಂತೆ ಭಯಂಕರನಾಗಿ ಕಾಣುತ್ತಾನೆ. ಆದ್ದರಿಂದ ಸಾಲ ಮಾಡದೆ, ತನ್ನ ವ್ಯಯ ಆಯಗಳನ್ನು ಮೇಳವಿಸಿದರೆ ಅವನೇ ಸಂಪನ್ನನು.

ಸಾಲ ಕೊಟ್ಟವನು ಮರಳಿಸಲು ಕೇಳಿದಾಗ, ನೀನು ಕೊಟ್ಟೇ ಇಲ್ಲವೆಂದು ಸಾಧಿಸುವ ಭಂಡತನವು ಬಹು ದಿನ ಕೆಲಸಕ್ಕೆ ಬಾರದು. ಆದ್ದರಿಂದ ಹರಿಹರನೆಂಬ ಆಢ್ಯತೆಯಿಂದ ಮೆರೆಯುವವರಿಗೂ ಸಾಲ ನೀಡುವುದ ಸರಿಯಲ್ಲ.

ಆದ್ದರಿಂದ ವೆಚ್ಚಕ್ಕೆ ಮಿತಿ ಹೇರಲು ಮೊದಲಿನಿಂದಲೂ ಎಚ್ಚರ ವಹಿಸಬೇಕು. ಏಕೆಂದರೆ ಹೆಚ್ಚು ಭೋಗಲಾಲಸೆಯಿಂದ ವಿತ್ತ ಹಾನಿಯಾಗುತ್ತದೆ.

ಅತಿ ಭೋಗಕ್ಕಾಗಿಯೇ ಅತಿ ಶ್ರಮಿಸಿ, ಕೊನೆಗೆ ತುಚ್ಛ ಜನರು ತಿರಿಪೆ ಎತ್ತಲೂ ಹೇಸರು. ಅವರ ಬಾಳು ಕ್ಷುದ್ರ ಹುಳುವಿನ ಬಾಳಿನಂತೆ.

ಬೇರೆಯವರು ಅಡವಿಟ್ಟ ಬಟ್ಟೆ ಬರೆಗಳನ್ನಾಗಲಿ, ಆಭರಣಗಳನ್ನಾಗಲಿ ಎಂದೂ ಬಳಸಬಾರದು, ತನಗೆ ಕೊಟ್ಟಿದ್ದನ್ನು ಮತ್ತು ಪರರಿಗೆ ಕೊಟ್ಟಿದ್ದನ್ನು ಕಾಣದೆ ಅನುಭವಿಸುವುದೆಂದರೆ, ಬಂದು ಕೂಡಿದವಳನ್ನು ನಂಬಿದ ದಾಸಿ ಮಗನಂತೆ.

**೧೭೩೭ ಸಾಲ ನೀಡುವಾತ ಬೆಡಗಿನಧಿದೇವತೆ!**
**ಕೇಳುವಾಗ ತಿರುಗಿ ಕಾಲರಾಯ!**
**ಸಾಲ ಮಾಡಿ ತಿರುಗಿ ಸಲ್ಲಿಸದಗೆ, ನೋಡು** ವಿಶ್ವ

**೧೭೩೮ ಸಾಲವಿಲ್ಲದವನ ಸಂಪನ್ನತೆ ಹೆಚ್ಚು,**
**ತಪ್ಪು ಇಲ್ಲದವನು ಧರೆಯೊಳಿಲ್ಲ.**
**ಹಿರಿಮೆ ಇರದ ಬುದ್ಧಿ ಕಿರಿದಾಗಿ ಹೋಹುದು,** ವಿಶ್ವ

**೧೭೩೯ ಸಾಲ ಕೊಟ್ಟ ಹಣವ ಸರಸದಿಂದ ಕೇಳೆ,**
**ಎಂದು ಕೊಟ್ಟಿಯೆಂದು ಎಗರಿ ಬಿದ್ದು,**
**ತಪ್ಪನೊಪ್ಪು ಮಾಡೆ ತಾನೆ ಸರಿಯೆನಿಪುದೆ?** ವಿಶ್ವ

೧೭೪೦ ಸಾಲ ಗೈದು ಮತ್ತೆ ಸುತನ ಹೀನಗೊಳಿಸಿ,
ಲೋಲು ಹೊಡೆವ ತಂದೆ, ದೊಡ್ಡ ವೈರಿ,
ಅಂತೆ ಇಪ್ಪಳಯ್ಯ ಅಂಕೆ ತಪ್ಪಿದ ಸತಿ, ವಿಶ್ವ

೧೭೪೧ ಸಾಲವೀಯ ಹೊಲ್ಲ; ಹರಿಹರಾದರೇನು?
ಮಳ್ಳನ ಜೊತೆ ಮೈತ್ರಿ ಮೊದಲೆ ಹೊಲ್ಲ.
ಸುಳ್ಳು ನುಡಿಯೆ ಹೊಲ್ಲ, ಅಡವು ಇಡಲು ಹೊಲ್ಲ, ವಿಶ್ವ

೧೭೪೨ ಅಧಿಕ ಭುಕ್ತಿಯಿಂದ ಮೊದಲು ವಿತ್ತ–ಹಾನಿ,
ಕಡದ ಸೊತ್ತಿನಿಂದ ಕೊಂಚ ಹಾನಿ,
ಮೊದಲ ಪಕ್ಷದಿಂದ ಮೂಲ ಕರ್ತಗೆ ಹಾನಿ, ವಿಶ್ವ

೧೭೪೩ ಋಣವು ತೀರದಿರಲು ಅಪೂರ್ಣತೆಯೇಕೆ?
ಕೋರ್ಕೆ ತೀರದಿರಲು ಸಡಗರೇಕೆ?
ವಿಷವು ಹೋಗದಿರಲು ' ಬೇರೆ' ಬಳ್ಳಿಯೇಕೆ? ವಿಶ್ವ

೧೭೪೪ ಅತಿ ಶ್ರಮ ಗೆಯ್ದು, ಮರಳಿ ಇರುತ,
ತಿರಿಪೆ ಎತ್ತುವ ಕಟುಕ ತುಚ್ಛ ಜನರು,
ಅವನಿಲಿ ಮಣ್ಣು ತಿನುವ ಅಲ್ಪ ಹುಳುವು ಕಣಾ! ವಿಶ್ವ

೧೭೪೫ ಬಟ್ಟೆ ವಸ್ತ್ರಗಳನು, ಬೆಳಗುವಾಭರಣವ,
ಒತ್ತೆ ಇರಿಸಿದೆಲ್ಲ ಒಡವೆ ವಸ್ತು
ಅನುಭವಿಸಕೂಡದು, ಆತನಾವನಿರಲಿ, ವಿಶ್ವ

೧೭೪೬ ತನ್ನ ದತ್ತಿಯು, ಪರ–ದತ್ತವೊಂದೆ ಹೊರತು,
ಕಾಣದನುಭವಿಪುದು ಕಡು ವಿಚಿತ್ರ!
ಕೂಡಿದವಳ ನಂಬಿ ಕುಳಿತ ದಾಸಿ ಮಗನು, ವಿಶ್ವ

●

## (೫೦) ವೇಷ – ಭೂಷಣ, ಮತಾಚಾರ

'ಉದರ ನಿಮಿತ್ತಂ ಬಹುಕೃತ ವೇಷಂ' ಎಂದು ಭಗವಾನ ಶಂಕರಾಚಾರ್ಯರು ವಂಚಕರ ಸೋಗಿನ ಹಿಂದಿನ ಇಂಗಿತವನ್ನು ಬಯಲು ಮಾಡಿದ್ದಾರೆ.

---

ಬಹು ಮೂಲ್ಯದ ಹರಳು, ರತ್ನ ಖಚಿತ ಕರ್ಣ ಕುಂಡಲಿಗಳನ್ನು ಧರಿಸಿದವನನ್ನು ಕಂಡರೆ, ಅವನಾವ ಕುಲದವನಾಗಿದ್ದರೂ ಹದುಳವಿರಲಿ, ಒಳಗೆ ಬನ್ನಿ, ಎನ್ನುವರು. ಏನೇ ಇರಲಿ; ವೇಷಧಾರಿಗಳಲ್ಲಿ ವಿಶ್ವಾಸವಿಡಲು ಸರಿಯಲ್ಲ. ಹಿಂದೆ ಸನ್ಯಾಸಿಗಳ್ಳನಾದ ರಾವಣನು ಮಾಡಿದ ಮಹಾಪಾತಕದ ನೆನಪಿದೆಯಷ್ಟೇ.

ವೈಷ್ಣವ ಎಂಬ ಹೆಸರು ಹೊತ್ತು, ಅವರು ಮಾಡುತ್ತಿರುವ ವ್ಯಭಿಚಾರ ಅನಾಚಾರಗಳ ಸರಮಾಲೆಯೇ ಇದೆ. ಅಂಥ ದುಷ್ಟರಿಗೆ ಮೋಕ್ಷ ದೊರಕಬಹುದೇ? 'ಪಲ್ಲಾಂಡು ಪಲ್ಲಾಂಡು' ಎಂದು ಸ್ತುತಿಸಿ ಹಾಡಿ, ವೈಷ್ಣವನನ್ನೂ ದ್ವಿಜ ಶ್ರೇಷ್ಠನೆಂದು ಹಾಡಿ ಹೊಗಳುತ್ತಾರೆ. ಸಾವ ಕಾಲಕ್ಕೆ ದ್ವಿಜನೆಂದು ಸಾಧಿಸುತ್ತ ಬಂದಿದ್ದಾನೆ. ಮನಸ್ಸು ಬದಲಾಗಿಲ್ಲ.

ರೇಶ್ಮೆ ಬಟ್ಟೆಯುಟ್ಟು, ನಾಮದ ಪಟ್ಟಿ ಬಳಿದುಕೊಂಡು ತಾನು ವೈಷ್ಣವನೆಂಬ ಭ್ರಾಂತಿಯಲ್ಲಿದ್ದಾನೆ. ಗೊಬ್ಬಿಯಷ್ಟು ಸೇಂದಿಯನ್ನು, ಯಜ್ಞಯಾಗದ ಹೆಸರಿನಲ್ಲಿ ಕುಡಿದು ಲೋಕವನ್ನೇ ಕೆಡಿಸುತ್ತಾನೆ. ಇಂಥ ಸಿರಿವಂತ ವೇಷಧಾರಿಗೆ ಎಲ್ಲರೂ ನಮಿಸುತ್ತಾರೆ. ಅವನ ನೆಂಟಸ್ತಿಕೆಯನ್ನು ಎಲ್ಲರೂ ಹೇಳಿಕೊಳ್ಳುತ್ತಾರೆ.

**೧೭೪೭ ಹರಳು, ಕುಂಡಲಿರಲು, ಹುಟ್ಟುವವು ಹೋಗುವವು,**
**ಕಾಯ ಪುಷ್ಟಿ ಬಹಳ ಗಳಿಸಿ ಇರಲು,**
**ಹೀನ ಜಾತಿ ಇರಲಿ, "ಹದುಳ! ಬನ್ನಿ!" ಎನುವರು. ವಿಶ್ವ**

**೧೭೪೮ ವೇಷಧಾರಿಗಳಲಿ ವಿಶ್ವಾಸವಿಡಹೊಲ್ಲ;**
**ವೇಷ ದೋಷ ಪೂರ್ಣ ಲೋಕದೊಳಗೆ,**
**ವೇಷ ರಟ್ಟು ಆಯ್ತು, ರಾವಣನದು ಮೊದಲು, ವಿಶ್ವ**

**೧೭೪೯ ಬಟ್ಟೆ ರೇಶ್ಮೆಯುಟ್ಟು, ಪಟ್ಟಿ ನಾಮವಿಟ್ಟು,**
**ಒಟ್ಟು ಭ್ರಾಂತಿ ತಾನೆ ವೈಷ್ಣವೆಂದು,**
**ಕಂಠಪೂರ್ತಿ ಕುಡುಕ, ಲೋಕ ಕೆಡಿಸುತಿಹನು, ವಿಶ್ವ**

**೧೭೫೦ ವೈಷ್ಣರೆಂದು ವ್ಯರ್ಥ ವಾರ್ತೆ ಮಾತ್ರ ಹೊರತು,**
**ಭ್ರಷ್ಟರಿವರಿಗಿಂತ ಬೇರೆಯಿಲ್ಲ,**
**ದುಷ್ಟ ನರರಿಗೆಲ್ಲ ದೊರಕುವುದೇ ಮೋಕ್ಷವು? ವಿಶ್ವ**

**೧೭೫೧ ಇಚ್ಚೆ ಬಂದ ನರನ ಹೆಚ್ಚು ವೈಷ್ಣವೆಂದು,**
**ದ್ವಿಜರಿಗಿಂತ ದೊಡ್ಡ ತೀರ್ಥರೆಂದು,**
**ಎಲ್ಲರು 'ಪಲ್ಲಾಂಡು ಪಲ್ಲಾಂಡು' ಹಾಡರೆ? ವಿಶ್ವ**

೧೭೫೨ ವೇಷ ಚೊಕ್ಕ ಹಾಕಿ, ವಿಕೃತ ಮತಿ, ಶೂದ್ರತ್ವ
ತನಗೆ ಇಲ್ಲವೆನುವ, ಧರಣಿ–ದ್ವಿಜನು;
ಅಬ್ಬ! ಸಾವ ವೇಳೆ, ಅಡಗುವದು ದ್ವಿಜತ್ವ ವಿಶ್ವ

೧೭೫೩ ಪಟ್ಟೆ ರೇಶ್ಮೆಯುಟ್ಟು, ಪಟ್ಟೆ ನಾಮವಿಟ್ಟು,
ವ್ಯರ್ಥ ಭ್ರಾಂತಿ ಹೊಂದಿ ವೈಷ್ಣವೆಂದು
ಗೊಬ್ಬಿ ಸೇಂದಿ ಕುಡಿದು ಕೆಡಿಸನೇ ಲೋಕವ? ವಿಶ್ವ

೧೭೫೪ ರೇಶ್ಮೆ ಪಾವಡ ಸುತ್ತಿ, ರೇಶ್ಮೆ ಧೋತ್ರ ಉಟ್ಟು,
ಸೃಷ್ಟಿ ವೈಷ್ಣವೆಂದು ಸೊಕ್ಕು ಪಡುವ,
ಚಿಹ್ನೆ ಇಷ್ಟೆ ಹೊರತು, ಶ್ರೀ ವೈಷ್ಣವಾವುದು? ವಿಶ್ವ

೧೭೫೫ ರೇಶ್ಮೆ ಸೀರೆ ಕಟ್ಟಿ, ರಂಜಿಪ ತಿರುನಾಮ
ಸೃಷ್ಟಿ ವೈಷ್ಣವನಿಗೆ ಶಿಖೆಯು ಮೇಲೆ
ಚಿಹ್ನೆ ಎಷ್ಟೊ ಮಾಡಿ, ಚೋಗ ವೈಷ್ಣವ ನಿಂತು ವಿಶ್ವ

೧೭೫೬ ಪೇಟ ಶಲ್ಯ ಮೇಲೆ, ಕೆಳಗೆ ಬೊಜ್ಜು ಹೊಟ್ಟೆ,
ಕರ್ಣ ಕುಂಡಲಾದಿ ಕೈಯುಂಗುರ
ಹೊಂದಿದವಗೆ ಮತ್ತೆ ಬಂಧುಗಳು ನಮಿಪರು, ವಿಶ್ವ

೧೭೫೭ ಪೇಟ ನಿಲುವಂಗಿಯು, ರವಿಕೆಯು ಕಂಠಿಸರ,
ಉಂಗುರ ನೆರೆ ಬೊಜ್ಜು ಉಳ್ಳ ಹೊಟ್ಟೆ.,
ಇರುವಂಥ ಮನುಜಗೆ ಇಹರೆಲ್ಲ ನೆಂಟರೆ ವಿಶ್ವ

೧೭೫೮ ಮೈಲಿ ಬಟ್ಟೆಯಿಂದ, ಮಾಸಿದ ತಲೆಯಿಂದ,
ಒಡಲು ಹೊಲಸಿನಿಂದ ಇರಲು ಆಗ,
ಅಧಿಕ ಕುಲಜನಿರಲಿ; ಅಲ್ಲಲ್ಲಿ ಕರೆಯರು, ವಿಶ್ವ

●

## (ಅ) ಮುಟ್ಟು – ಮಡಿ

ಕೆಲವು ಜನರು ಹೀನಕರ್ಮ ಮಾಡುವರೆಂದು ತಿಳಿದು ಅವರ ಸಂಪರ್ಕವೂ ಸಹ ಪಾಪಕರ, ಎಂಬ ಗ್ರಹಿಕೆಯು ಶೀಲವಂತಿಕೆಯ ನೆಪದಲ್ಲಿ ವಿಕಾರಾಳ ರೂಪ ತಾಳಿ ನಿಂತಿದೆ.

ಹೊಲೆಯನನ್ನು ಮುಟ್ಟಿದರೆ, ಶುದ್ಧ ಜಲದಲ್ಲಿ ಸ್ನಾನ ಮಾಡಿದರೆ ತೀರಿತು; ತುರುಕನನ್ನು ಮುಟ್ಟಿದರೆ, ದೇಹವನ್ನು ಕೊಡವಿಕೊಂಡರೆ ತೀರಿತು. ಇನ್ನು ತನ್ನ ಧರ್ಮ ಸತ್ಯಗಳನ್ನು ಬಚ್ಚಿಟ್ಟು ಜನರಿಗೆ ಮಿಥ್ಯಾಚಾರ ಬೋಧಿಸುವ ಧರ್ಮಗಳ್ಳ ವಿಪ್ರನನ್ನು ಮುಟ್ಟಿದರೆ, ತೀರಿತು. ಅದು ಸಾಯುವ ವರೆಗೂ ಹೋಗದು. ಏಕೆಂದರೆ ಅವನು ಮನದಲ್ಲಿ ಮೂಡಿಸಿದ ಸಂಸ್ಕಾರಗಳು ಲಿಂಗದೇಹದಲ್ಲಿಯೂ ನುಸುಳಿಕೊಂಡು ಹೋಗುತ್ತವೆ.

ಮನುಷ್ಯನಲ್ಲಿ ಕಪಟ ವೃತ್ತಿಗಳು ಒಡಲಲ್ಲಿ ತುಂಬಿಕೊಂಡಿದ್ದರೆ, ನೀರು ಮುಳುಗಿದರೇನು? ನಿಧಿಯನ್ನು ಹೂಳಿದರೇನು? ದೇವತೆಗಳಿಗೆ ಮಣಿದರೇನು? ಫಲವು ಬಾರದು. 'ಮುಟ್ಟೇರಿ?' ತಿಳಿದಿದೆಯೇ? ಮುಟ್ಟೇರಿ' ಎಂದು ಹಾರುವವರಿಗೆ ತಮ್ಮ ಡಾಂಭಿಕತೆಯ ಇಂಗಿತವಾದರೂ. ಮಾನವ ದೇಹದಲ್ಲಿ ಒಂಭತ್ತು ತೂತುಗಳಿವೆ. ಈ ನವಬಿಲದಲ್ಲಿ ಒಸರುವ ವಿಸರ್ಜನವು ಹೊಲೆತನದ್ದೇ.

ಮಾದಿಗನನನ್ನು 'ಮುಟ್ಟಿದರೆ' ನೀರು ಮುಳುಗುತ್ತಾರೆ. ಆದರೆ ಶವ–ಸಂಸ್ಕಾರಕ್ಕೆ ಮಸಣದಲ್ಲಿ ಮಾದಿಗನೇ ಬೇಕು. ಮೊದಲಿನ ಅಂಟು ಈಗ ಹೋಗುವುದೇ?

ಮುಟ್ಟಾದ ವಸ್ತ್ರಗಳು ಅಗಸನ ಪಾಲಾಯ್ತು. ದೇಹದ ಎಂಜಿಲಾದ ಕೂದಲು ಕ್ಷೌರಿಕನಿಗಾಯ್ತು. ಇನ್ನು ಕೊನೆಗೆ ಗುಡಿಯಲ್ಲಿ ವಿಶ್ವಕರ್ಮನಿಗೆ ಕಾಣಿಕೆ ಸೇರಿತು.

ಎಲ್ಲರೂ ಹುಟ್ಟುವುದು 'ಮುಟ್ಟು' ಆಗುವ ಜಾಗದಲ್ಲಿಯೇ. ಬೆಳೆಯುವುದೂ ಮುಟ್ಟಿನಲ್ಲಿಯೇ, ಅಂದ ಮೇಲೆ ನೀರಿಗೆ ತೀರ್ಥವೆಂದು ಕರೆದು, ಆ ನೀರಿನಲ್ಲಿ ಮುಳುಗಿದರೆ ಮುಟ್ಟು ಹೋಗುವುದೇನು?

ಓರ್ವ, ಸತ್ತ ದನದ ಚರ್ಮ ಸುಲಿಯುವ ಕರ್ಮದಿಂದಾಗಿ ಮಾದಿಗನೆನಿಸುತ್ತಾನೆ. ಅವನನ್ನು ಮುಟ್ಟಿದರೆ, ಆಗುವ 'ಮುಟ್ಟು' ನೀರು ಮುಳುಗಿದರೆ ಹೋಗುತ್ತದೆಯೇ? ಜನರು ಇದನ್ನೆಲ್ಲ ಏಕೆ ತಿಳಿಯಲಾರರು?

ಮೈಲಿ ಮೈಲಿ ಎಂದು ನೀರು ಮುಳುಗಲೇಕೆ? ಮೈಲಿಗೆಯ ತಾಣದಲ್ಲಿಯೇ ಮನುಷ್ಯನು ಹುಟ್ಟುವನಲ್ಲವೇ?

**೧೭೫೯ ಹೊಲೆಯರವನ ಮುಟ್ಟು ಹೊಯ್ತು ಶುದ್ಧ ಜಲದಿ;**
**ತುರುಕರವನ ಮುಟ್ಟು ತನುವ ಕೊಡವೆ.**
**ಚೋರನಿಹನ ಮುಟ್ಟು ಸತ್ತರೆ ಹೋಗುವುದೆ? ವಿಶ್ವ**

**೧೭೬೦ ಮಾದರವನ ಮುಟ್ಟೆ ಮತ್ತ ನೀರು ಮುಳುಗು;**
**ಮನುಜ ಕರ್ಮದಿಂದ ಮಾದಿಗಾದ;**
**ಏಕೆ ತಿಳಿಯದಿಹರು? ಇದೇ ಇಳೆಯ ಮೋಸ! ವಿಶ್ವ**

೧೭೬೧ ನೀರು ಮುಳುಗಲೇಕೆ? ನಿಧಿಯ ಹೂಳಲೇಕೆ!
ಮತ್ತೆ ದೇವತೆಗಳಿಗೆ ಮಣಿಯಲೇಕೆ?
ಕಪಟ ಕಲ್ಮಷಗಳು ಕೂಡಿ ಒಡಲೊಳಿರಲು, ವಿಶ್ವ

೧೭೬೨ ಮುಟ್ಟು ಮುಟ್ಟು ಎನುತ ಮುಟ್ಟಬೇಡೆನುವರು,
ಮುಟ್ಟಿಗೆ ಪಥವೇನು? ಮೂಲವೇನು?
ನವ ಬಿಲದಲಿ ಹೊಲೆಯ ನರರೆಲ್ಲರಿಗೂ
ಹುಟ್ಟಿನಲಿ ಹುಟ್ಟಿತು ಮುಟ್ಟು ವೇಮಾ

೧೭೬೩ ಹೊಲೆಯನ ಮುಟ್ಟಿದೊಡನೆ ನೀರೊಳು ಮುಳುಗುವಿರಿ
ಮನುಜ ಪೂರ್ವ ಕರ್ಮದಿಂದ ಹೊಲೆಯ!
ಏಕೆ ತಿಳಿಯಲೊಲ್ಲರೀ ನರ ಪಶುಗಳಿದ! ವಿಶ್ವ

೧೭೬೪ ಮಾದಿಗನ ಸ್ಪರ್ಶ; ನೀರು ಮುಳುಗುತಿಹನು,
ಮಸಣಕೊಯ್ಯೆ ಸುಡಲು ಮಾದಿಗನೇ.
ಆಗ ಅಂಟುವಂಟು ಈಗ ಎಲ್ಲಿ ಹೋಯ್ತೊ? ವಿಶ್ವ

೧೭೬೫ ಮುಟ್ಟು ಅಗಸರವಗೆ, ಮುಂಚೆ ನಾವಿದನಿಗೆ,
ಕೇಶ ತೋರಿ, ದೇವಿ ಗುಡಿಯ ಸೇರು,
ಕಾಣಿಕೆ ಸೇರಿತಲ ಕಡೆಗೆ ವಿಶ್ವಕರ್ಮಗೆ, ವಿಶ್ವ

೧೭೬೬ ಮುಟ್ಟು ಅಗಸಗಾಯ್ತು; ಮುದ್ದೆ ಕುಂಬಾರನಿಗೆ,
ನೋಡಲೆಂಜಿಲೆಲ್ಲ ನಾವಿದನಿಗೆ,
ಕಾಣಿಕೆ ಸೇರಿತ್ತು, ಕಡೆಗೆ ವಿಶ್ವಕರ್ಮಗೆ, ವಿಶ್ವ

೧೭೬೭ ಮುಟ್ಟಿನೊಳಗೆ ಹುಟ್ಟಿ, ಮುಟ್ಟಿನೊಳಗೆ ಬೆಳೆದು,
ವ್ಯರ್ಥ ತೀರ್ಥ ಗೆಯ್ಯುವವರೆ ಒಟ್ಟು,
ಮುಟ್ಟು ನೀರಿನೊಳಗೆ ಮುಳುಗೆ ಹೋಗುವುದೇ? ವಿಶ್ವ

೧೭೬೮ ಮುಟ್ಟಿನೊಳಗೆ ಹುಟ್ಟಿ ಮೂರು ಮೂರ್ತಿಗಳಾ
ಮುಟ್ಟು ರಕ್ತವಾಯ್ತು ಮೊದಲ ಪ್ರಕೃತಿ;
ಮುಟ್ಟಿನೊಳಿಹ ಗುಟ್ಟು ಮೂಲ ಗುರುವು ಅರಿವ. ವಿಶ್ವ

**೧೭೬೯ 'ಮುಟ್ಟು' 'ಮುಟ್ಟು' ಎಂದು, ಮೂಲೆ ಹಿಡಿವುದೇಕೆ?**
**ಮುಟ್ಟಿನೊಳಗೆ ಹುಟ್ಟಿ, ಮೂಢ ಜನರು,**
**'ಮುಟ್ಟು' ಗುಟ್ಟು ತಿಳಿದು, ಮುಂಚೆ ಮೌನ ತಳೆದ ವಿಶ್ವ**

**೧೭೭೦ ಮೈಲಿ ಮೈಲಿ ಎಂದು ಮತ್ತೆ ಜಲ ಮುಳುಗರೆ?**
**ಮೈಲಿಯೊಳಗೆ ತನುವು ಮಹಿಯೊಳಾಯ್ತು,**
**ಮೈಲಿಯಿರುವ ಜಾಗ ಮನುಜ ಹುಟ್ಟುತಿಹನು, ವಿಶ್ವ**

**೧೭೭೧ ಅನ್ನಕಂಟದಿರಲು, ಆತ್ಮಕೆ ಅಂಟುವುದು,**
**ಆತ್ಮದೊಡನೆ ಬೆರೆಯೆ, ಅನ್ನದಂಟು,**
**ಆತ್ಮ ಶುದ್ಧಿಯನ್ನ; ಅನ್ನ ಶುದ್ಧಿಯಾತ್ಮ, ವಿಶ್ವ**

**೧೭೭೨ ಹೊಲಸು ನವಬಿಲದಲ್ಲಿ ಹೊರಹೊರಡುತ್ತಲಿರೆ,**
**ಪರಮ ಪಾವನೆಂದು ಪೇಳಲೆಂತು?**
**ತೊಗಲು ಬೊಂಬೆಯಾಟ, ತಿಳಿಯದಲ್ಲ ಮರ್ಮ. ವಿಶ್ವ**

●

## ಹಿರಿಮೆ

ಎಲ್ಲವನ್ನು ಸಹಿಸಿಕೊಂಡು ತಾಳ್ಮೆಯಿಂದ ನಡೆಯುವುದು ಹಿರಿಮೆಯಾಗಿದೆ. ಗಂಗೆಯು ವಿಶಾಲವಾಗಿ ಶಾಂತವಾಗಿರುತ್ತದೆ. ಚಿಕ್ಕ ಕಾಲುವೆಯೊಂದು ಜೋರಾಗಿ ಶಬ್ದ ಮಾಡುತ್ತದೆ. ದಾತ ಸಹಿಸುವಂತೆ ಅಧಮನು ಸಹಿಸಲಾರನು.

ಔದಾರ್ಯವು ಹಿರಿಮೆಯ ಲಕ್ಷಣ. ಔದಾರ್ಯವು ವರ್ಧಿಸುತ್ತದೆ. ಒಂದಕ್ಕೆ ಇನ್ನೊಂದು ಕೂಡಿಸಿದಂತೆ.

ಆಗಬೇಕಾದ ಹಿಂದಿನ ಕಾರ್ಯಗಳು ಆಗದಿರುವುದೆಂತು? ಆಗಬಾರದ ಕೆಲಸಗಳು ಎಂದೂ ಆಗವು. ಇದರ ಹಿರಿಮೆಯು ಬೇರೆಯೇ ಇದೆ. ಮನದಿ ಕೋರಿಕೆಗಳ ಆಚೆ ಇದೆ.

ತಾನು ಸರಿಯಾಗಿರುವುದೇ ಹಿರಿಮೆಯಲ್ಲ. ಆದರೆ ಇತರರನ್ನು ಕೈ ಹಿಡಿದು ಶಿಕ್ಷಿಸಿ ಹಾದಿಗೆ ಹಚ್ಚುವುದು ಹಿರಿಮೆಯಾಗಿದೆ. ಅಂಥವನು ಶಿವಸನ್ನಧಿಯ ಪುಣ್ಯ ಲೋಕವನ್ನು ಪಡೆಯುವನು.

ಢೋಂಗಿ ಹಿರಿಮೆ ತೋರುವ ಜನರೂ ಸಾಕಷ್ಟು ಉಂಟು. ಆಯಾ ಜನರ ಥಳಕು ಬೆಳಕನ್ನು ಕಂಡು, ಐಹಿಕ ಜನರು ಅಂಥವರ ಮಾತಿಗೆ 'ಹೌದು' ಅಲ್ಲವೆಂದು ಕೌಲೆತ್ತಿನಂತೆ ಗೋಣು ಹಾಕುತ್ತಾರಷ್ಟೇ? ಆದರೆ ದಾನ ಧರ್ಮ ಮಾಡಲು ಸತ್ಕಾರ್ಯ ಮಾಡಲು, ಇಂದು, ನಾಳೆ ಎನ್ನುತ್ತಾ ಮುಂದೆ ತಳ್ಳಿ ಕೊನೆಗೆ ಇಲ್ಲವೆನ್ನುತ್ತಾರೆ.

ಸದ್ಗುರುವಿನ ಹಿರಿಮೆಯು ಅವನ ಢೋಂಗಿ ಮಾತಿನಲ್ಲಿರದು. ಅದರಿಂದ ಮೋಕ್ಷ ಪ್ರಾಪ್ತಿಯಂತೂ ಆಗದು. ಕೂಗಿನಿಂದ ಆಗುವುದಾದರೂ ಏನು?

ಕಲಿಯುಗದಂಥ ತರ್ಕ, ಸಿದ್ಧಾಂತ ಯುಗದಲ್ಲಿ ಜನಿಸಿದರೂ ಅತಾರ್ಕಿಕವಾದ ಉಗ್ರ ತಪಸ್ಸು ಮಾಡಿ ದೇಹವನ್ನು ಬಡವ ಮಾಡುವುದು ಸಮ್ಮತವಲ್ಲ. ಇಹದಲ್ಲಿ ಬಾಳುತ್ತಿರುವ ದಿಕ್ಕಿಲ್ಲದ ಎಷ್ಟೋ ಜನ ದೀನರಿಗೆ ಮಾನ್ಯತೆಯುಂಟು. ಇನ್ನು ಪರದಲ್ಲಿ ವಿಹರಿಸುವವರ ಸೌಖ್ಯವನ್ನು ಎಷ್ಟೆಂದು ವರ್ಣಿಸುವುದು.?

ಗುರುವಿನ ಹಿರಿಮೆಯು ಜನರ ಮನಸ್ಸನ್ನು ತಿದ್ದುವಲ್ಲಿಯೇ ಅಡಗಿದೆ. ಅಂಥ ಇಂಥ ಕೆಲಸಗಳನ್ನು ಯಾರಾಗಲಿ ಮಾಡಬಹುದು. ಮರದ ಡೊಂಕನ್ನು ತಿದ್ದಬಹುದು. ಕಲ್ಲಿನ ಓರೆಕೋರೆಗಳನ್ನು ತಿದ್ದಬಹುದು. ಆದರೆ ಮನಸ್ಸನ್ನು ಸರಿಗೊಳಿಸುವುದು ಕಷ್ಟಕರ.

**೧೭೭೩ ಗಂಗೆ ಹರಿಯುತಿಹುದು, ಕದಲದ ಗತಿಯಲ್ಲಿ,**
**ಚಿಕ್ಕ ನಾಲೆ ಹರಿವುದು ಜೋರಿನಿಂದ**
**ದಾತ ನೀಡುವಂತೆ ಅಧಮ ಸಹಿಸುವನೆ? ವಿಶ್ವ**

**೧೭೭೪ ಮರೆವೇನೊ ಎನುತ ಮನದಿ ಜನರು ಸತತ,**
**ಪ್ರೀತಿ ಗೆಯ್ವುದೇಕೊ ಎಷ್ಟೆ ಇರಲಿ,**
**ಮರಳಿ ಮೇಲು ಗೆಯ್ದು ಮರ್ಯಾದೆ ಕಾಣುವರು, ವಿಶ್ವ**

**೧೭೭೫ ಒಂದರಡಿಯಲೊಂದನಿಟ್ಟು ಬಂದ ಲಬ್ಧ**
**ಒಂದಕ್ಕೊಂದು ಗುಣಿಸೆ, ಸಾಲು ಮುಂದು,**
**ಅಂದವಿದುವೆ ನೋಡು, ಔದಾರ್ಯದ ಫಲವು, ವಿಶ್ವ**

**೧೭೭೬ ಆಗುವ ಕೆಲಸವೆಲ್ಲ ಆಗದೆಂತಿರುವವು?**
**ಆಗದ ಕೆಲಸಗಳು ಆಗವು ಜಗದಿ,**
**ಮಹಿಮೆ ಬೇರೆಯುಂಟು, ಮನದೊಳಗೆ ಇಹುದೆ? ವಿಶ್ವ**

**೧೭೭೭ ಕೆಡುವ ಮಾನವರನು ಕೈ ಹಿಡಿದು ರಕ್ಷಿಸಿ,**
**ಕಡೆಗೆ ತಲುಪಿಸುವವ ಘನನು ಅರಿಯೆ;**
**ಕಡೆಗೆ ಪುಣ್ಯವಪ್ಪ ಘನ ಶಿವ ಸನ್ನಿಧಿಯ**
**ಲಿರುವ ತಪ್ಪದಂತೆ ನಿರುತ ವೇಮ.**

---

೧೭೭೮ ಥಳುಕು–ಬೆಳಕು ಕಂಡು, ಧರಣಿಯ ಜನರೆಲ್ಲ,
'ಹೌದು' 'ಅಲ್ಲ' ಎಂದು ಹಿರಿಮೆ ತೋರಿ,
'ಇಂದು' 'ನಾಳೆ' ಎನುತ 'ಇಲ್ಲ' ಎನ್ನುತಿಹರು, ವಿಶ್ವ

೧೭೭೯ ಢೋಂಗಿ ಮಾತನಾಡೆ, ದೊರಕಬಹುದೆ ಮೋಕ್ಷ?
ಆಗು ಹೋಗದಂಥ ಕೂಗು ಹೊಲ್ಲ,
ಸದ್ಗುರುವಿನ ಚಿಹ್ನೆಯಲ್ಲ; ದುರ್ಗುಣಿಯದು ವಿಶ್ವ

೧೭೮೦ ಕಲಿಯುಗದೊಳು ಹುಟ್ಟಿ, ಕಡೆಯ ಗುರಿ ತಲುಪದೆ,
ಒಡಲು ಬಡವ ಮಾಡಿ, ಉಗ್ರ ತಪವ,
ತಾವುಗೆಯ್ದರೆಷ್ಟು? ತತ್ತ್ವ ಕಾಣಬಹುದೆ? ವಿಶ್ವ

೧೭೮೧ ದಿಕ್ಕುಗೇಡಿ ರೋಗಿ, ದೀನತೆಯೊಂದಿಗಿರುವ
ಪುರುಷ ಇಹದ ಒಳಗೆ ಪೂಜ್ಯನಹನು,
ಪರದೊಳಗಿರುವನ ಭಾಗ್ಯವೇನೆನುವೆನು? ವಿಶ್ವ

೧೭೮೨ ನಿಕ್ಕಿಯಾದ ಒಳ್ಳೆ ನೀಲ ಒಂದೆ ಸಾಕು.
ಥಳಕು ಬೆಳಕಿನ ಶಿಲೆ ತಟ್ಟೆಯೇಕೆ?
ಓದಲರ್ಹ ಪದ್ಯ ಒಂದಾದರೆ ಸಾಕು. ವಿಶ್ವ

೧೭೮೩ ಮರವ ತಿದ್ದಬಹುದು ಮತ್ತೆ ಡೊಂಕು ಇರದೆ,
ತಿದ್ದಬಹುದು ಕಲ್ಲು ತಪ್ಪು ತೊಡೆದು,
ಮನಸು ತಿದ್ದಲಾರ, ಮಹಿಯಲ್ಲಿ ಯಾರು? ವಿಶ್ವ

●

## ಸದ್ಭಾವನೆ

ಇತರರ ಕೆಡುಕನ್ನು ಎತ್ತಿ ಆಡದಿರುವುದೇ ಸದ್ಭಾವವೆನಿಸುತ್ತದೆ. ಆದ ಪೆಟ್ಟನ್ನು ಗುಣಪಡಿಸಲು ಜಗತ್ತಿನಲ್ಲಿ ಪರಿಣಾಮಕಾರಕ ಔಷಧಿ ಇರುತ್ತದೆ. ಆದರೆ ನಿಂದೆಯ ಮಾತಿನ ಪೆಟ್ಟನ್ನು ಗುಣ ಪಡಿಸುವುದು ಹೇಗೆ ಸಾಧ್ಯ?

ಸದ್ಭಾವನೆ ಪ್ರಬಲವಾಗಬೇಕಾದರೆ, ಪಾಪ ಸಂಗತಿಯನ್ನು ಮರೆತುಬಿಡಬೇಕು. ಯುದ್ಧವನ್ನೂ ಮರೆಯಬೇಕು. ಇದಲ್ಲದೆ ಪರರ ದೋಷಗಳನ್ನೂ ಮರೆಯಬೇಕು. ಆದರೆ, ಪರರು ತನಗೆ ಮಾಡಿದ ಮೇಲ್ಮೆಯನ್ನು ಮಾತ್ರ ಮರೆಯದಿರಬೇಕು.

ಶಾಂತಿಯ ಕಾಲದಲ್ಲಿ ಎಲ್ಲವೂ ಸಂತೋಷಕರವಾಗಿಯೇ ಇರುತ್ತದೆ. ಸತ್ಯಮೇವ ಜಯತೇ, ಎನ್ನುವ ಮಾರ್ಗವನ್ನು ಧರ್ಮರಾಯನು ಎತ್ತಿ ಹಿಡಿದು ಕೊನೆಗೆ ಜಯವನ್ನೇ ಸಾಧಿಸಿದನು.

ನಮ್ಮ ಜಾತಿ, ಕುಲ, ಗೋತ್ರಗಳಾಗಲಿ, ಸಿರಿ ಸಂಪದಗಳಾಗಲಿ ನಮ್ಮ ಜೊತೆಗೆ ಬರಲಾರವು. ಆದರೆ ಸತ್ಯ ಸದ್ಭಾವನೆಗಳು ಮಾತ್ರ ನಮ್ಮ ಜೊತೆಗೆ ಇರುತ್ತವೆ.

ಪರರನ್ನು ನಿಂದಿಸುವ ಮತ್ತು ಪರರನ್ನು ತನ್ನವರೆಂದು ಬಗೆಯುವ ಉಭಯತಾಪಿ ಮಾರ್ಗಗಳಲ್ಲಿ ಸ್ಥಿರವಾವುದು? ಅಸ್ಥಿರವಾವುದು? ಸಾಮಾನ್ಯ ಮಾನವ ತಿಳಿಯದಿರುವನು. ಕಪೋಲ ಕಲ್ಪಿತ ವಿಚಾರಗಳನ್ನು ತೊರೆಯಬೇಕು. ಹೊಳೆಯುವ ಗಗನವನ್ನು ಕೈಯಲ್ಲಿ ಹಿಡಿಯಬಹುದೇ? ಅದಾಗದು. ಆ ಹುಚ್ಚನ್ನು ಬಿಡಬೇಕು. ಸದ್ಭಾವನೆಯು ಮುಂದುವರಿಯಬೇಕಾದರೆ, ಪರವಂಚನೆಯನ್ನು ನೋಡಿ ಸುಮ್ಮನಿರಕೂಡದು. ಗುರುನಿಂದೆಯನ್ನು ಕೇಳಿ ಸಹಿಸಲಾಗದು. ಅದನ್ನು ಪರರಿಗಂತೂ ಹೇಳಲೇ ಕೂಡದು. ಧರೆಯಲ್ಲಿ ಸದ್ಭಾವನೆ ಹೊಂದದವರಿಂದ ಆಗುವ ಮಾನಹಾನಿಯನ್ನು ಸಹಿಸುವುದು ಶಕ್ಯವೇ?

**೧೭೮೪ ಮೊದಲಿನ ಪೆಟ್ಟನು ಕಳೆಯಲು,**
**ಅಂದವಿಹ ಮದ್ದಿಹುದು, ಸನ್ನುತ ಭೂಮಿಯೊಳಗಾ-**
**ನಿಂದೆಯ ನುಡಿಗಳ ಕಳೆಯಲು,**
**ಎಂದೆಂದಿಗು ಮದ್ದು ಇರದು, ಮಹಿಯಲಿ, ವೇಮಾ**

**೧೭೮೫ ಮರೆಬೇಕು ಪಾಪ ಸಂಗತಿ,**
**ಮರೆಯುತಿರಬೇಕು ಯುದ್ಧವನು ಮತ್ತೆ ಮಹಿಯೋಳ್,**
**ಮರೆಬೇಕು ಪರರ ದೋಷವ,**
**ಮರೆಯದಿರಬೇಕು ಮೇಲನು, ಮಹಿಯಲಿ ವೇಮ.**

**೧೭೮೬ ಶಾಂತಿಯಲಿ ಸಕಲ ಕಾರ್ಯವು,**
**ಸಂತೋಷಕರವು; ಸತ್ಯವೆ ಜಯವೈ ಎನುವಾ**
**ಪಂಥವ ನಿಲಿಸಿದ ಧರ್ಮಜ**
**ನೆಂತೋ ಯತ್ನಿಸಿ, ಕೊನೆಯಲಿ ಜಯಿಸಿದ, ವೇಮಾ.**

— — — — — — — — — — — — — — — — — — — — — —

೧೭೮೭ ತನ್ನ ಕುಲ ಗೋತ್ರ ಆಕೃತಿ,
ತನ್ನ ಸಿರಿ ಸಂಪದಿರಲಿರದಿರಲೇನಯ್ಯಾ?
ತನ್ನ ಜೊತೆ ಬರವು ನಿಜವಿದು,
ತನ್ನಯ ಸತ್ಯ ಜೊತೆಗಿಹುದು, ತನ್ನೊಳು ವೇಮಾ.

೧೭೮೮ ರಾಜ ಮಾತಿನಂತೆ ರಸಿಕನಾಡಬೇಕು.
ಎಷ್ಟೊ ಕಷ್ಟ ಇರಲಿ ಎಗರಬೇಡ,
ಕೊಸರಿ ಎಗರಲೇನು? ಗ್ರಹ ಸಮಾನನಲ್ಲ,
ದೊಡ್ಡದು ಕೊಂಚವೇನು? ದೊರಕಿಸು ವೇಮ,

೧೭೮೯ ಪರರ ನಿಂದೆ ಮಾಳ್ಪ ಪರರು ನನ್ನವರೆಂದು
ಸ್ಥಿರವಸ್ಥಿರವನು ತಿಳಿಯಲಿಲ್ಲ,
ಹೊಳೆವ ಗಗನ ಕೈಲಿ ಹಿಡಿವೆನನಲು,
ಹಿಡಿಯಲಾರೆ, ಬಿಟ್ಟು ಬಿಡೆಲೋ ವೇಮ.

೧೭೯೦ ಪರವಂಚನೆ ನೋಡೆ ಹೊಲ್ಲ,
ಗುರುನಿಂದೆಯ ಕೇಳೆ ಹೊಲ್ಲದ ಕಂಡು ಕೇಳಲ್,
ಪರಗರುಹೆ ಹೊಲ್ಲ, ಘನಮತಿ
ಧರೆಯಲಿ ಸಹಿಸಲಳವೆ ಮಾನ ಹಾನಿಯ ವೇಮಾ?

●

## ಸದ್ಗುಣ ಸಂಪಾದನೆ

ಒಳ್ಳೆಯ ನಡತೆ, ಉಪಕಾರ ಬುದ್ಧಿ ಇವುಗಳಿಂದ ಇತರರಿಗೆ ಪ್ರಯೋಜನವಾಗುವಂತೆ ಬಾಳುವ ಸಾರ್ಥಕ ಜೀವಿಗಳ ಗುಣವನ್ನು ಇಡೀ ಲೋಕವೇ ಕೊಂಡಾಡುತ್ತದೆ.

ಒಳ್ಳೆಯ ಲೋಕದಲ್ಲಿ ಮಾಡಬೇಕಾದ ಕಾರ್ಯವು ಬೇಕಾದಷ್ಟಿದೆ. ಒಳಿತನ್ನೇ ಬೆಳೆಸುವ ಇವನೆಂದೂ ಕೆಟ್ಟ ಜನರಿಗಂತೂ ರಕ್ಷೆ ಕೊಡುವುದಿಲ್ಲ. ತಾನು ನಂಬಿದ ಒಳ್ಳೆಯ ಜೀವನವನ್ನು ನಡೆಸಲಾಗದಿದ್ದರೆ ಅಂಥ ಬಾಳಿನಿಂದೇನು ಪ್ರಯೋಜನ?

ಮಾನವನ ಮೂಲ ಗುರಿಯು ಮನಸ್ಸನ್ನು ನಿಲ್ಲಿಸುವುದೇ ಆಗಿದೆ. ಇಲ್ಲದ ಚಿಂತೆ ಹಚ್ಚಿಕೊಂಡು ಮನವನ್ನು ಕೊರಗಿಸುವುದೇಕೆ? ಶಿವನೇ ಭರ್ತನೂ ಆಗಿದ್ದಾನೆ.

ಮಾನವನು ಮೂರ್ಖನಾದರೆ ಮೃಗಕ್ಕಿಂತ ಕಡೆಯಾಗುತ್ತಾನೆ. ತಿಳಿವಳಿಕೆಯಿಲ್ಲದೆ ತಾಮಸ ಗುಣದಿಂದ ಜಿಗಿದಾಡಕೂಡದು. ಮದದಿಂದ ಹಾರಾಡಿದರೆ,

ಎಲ್ಲವೂ ವಿಷಮವಾಗುತ್ತದೆ. ಕಸುಗಾಯಿಯನ್ನು ತಂದು ಇಟ್ಟರೆ ಅದು ಮಾಗುವುದೇ? ಪಾಡು ಆದಾಗ ಮಾತ್ರ ಮಾಗಿ ಹಣ್ಣಾಗಬಹುದು. ಗೂಗೆಯಂತೆ ಗುಡ್ಡಿ ತಿರುಗಿಸಿದರೆ ಅವನು ಯೋಗಿಯಾಗಬಹುದೆ? ಲೋಭಿ, ಮೋಹ ತೊರೆದಾಗ ಮಾತ್ರ ಲಾಭವಾಗಬಹುದು. ತುಂಟ ಸ್ವಭಾವವುಳ್ಳವನು ಭಿಕ್ಷೆ ಎತ್ತಿದರೇನು? ಅವನು ಸನ್ಯಾಸಿಯಾಗಬಹುದೇ?

ನಮ್ಮ ನಡತೆಯು ನಮ್ಮಲ್ಲಿ ಒಂದಾಗಿರಬೇಕು. ತೀರ ಸಹಜವಾಗಿರಬೇಕು. ಕಲಿಕಿ ನಡತೆಯಾಗಿದ್ದರೆ ನಡವಳಿಯಲ್ಲಿ ತಪ್ಪಾಗಲೂಬಹುದು.

ಭಂಗಿ ಕುಡಿಯುವವನು ಸ್ಮೃತಿ ತಪ್ಪಬಹುದೇ ಹೊರತು, ಭಾವಸಮಾಧಿಯನ್ನು ಹೊಂದಲಾರನು. ಮಸ್ತ ಶಿವಸ್ಥಿತಿಗೇರಿದವನೆಂದೂ ನಿಂದೆಗೆ ತೊಡಗನು. ಸೆರೆಸಿಂದಿಗಳ ಚಟದವನು ತನ್ನ ಪೂರ್ವದ ವಿಚಾರಗಳಿಗೆ ಈಡಾಗಿ ಹಳೆಯ ದ್ವೇಷ ಉಲ್ಬಣಿಸಿ ನಿಂದೆಗಿಳಿಯುತ್ತಾನೆ. ಅವರ ಲಿಂಗಾನುಭವವು ಗಾಂಜಿ ಸೇದುವವರ ಬೂಟಾಟಿಕೆಯಲ್ಲಿ ಪರ್ಯವಸಾನವಾಗಿದೆ.

ಲೋಕದ ಜನರು ವಿಚಿತ್ರ ಸ್ವಭಾವದವರು, ಜನರ ಹಿತಾಹಿತಗಳನ್ನು ಅರಿಯದವರು ಉರಿಬಿಸಿಲಲ್ಲಿ ಬೇಕಾದ ಹಾಗೆ ತಿರುಗಾಡುತ್ತಾರೆ. ಅದೇ ತಂಪೆರೆಯುವ ತುಂತುರು ಮಳೆ ಸುರಿಯತೊಡಗಿದರೂ ಓಡಿ ಹೋಗುತ್ತಾರೆ.

**೧೭೯೧ ಮಾಡಿಮುಗಿಸೆ ತನಗೆ ಮಾಡಲಾರದಷ್ಟು,**
**ಕೆಟ್ಟ ಜನಕೆ ರಕ್ಷೆ ಕೊಡನು ಅವನು,**
**ತನ್ನದು ನಡೆಯದೇ? ತನ್ನ ಬದುಕು ಏಕೆ? ವಿಶ್ವ**

**೧೭೯೨ ಎಲ್ಲಿ ಇಂದು ನಿನ್ನೆ ಎಂತಾದರು ಇರಲಿ,**
**ಮನಸು ನಿಲಿಸುವವನು ಮಹಿಮನಹನು,**
**ಶಿವನೆ ಭರ್ತ ಕರ್ತ ಚಿಂತಿಸುವುದು ಏಕೆ? ವಿಶ್ವ**

**೧೭೯೩ ಸುರಿದು ಹಾಲು ಬೇವಿಗೆ ಸಾವಿರ ವರ್ಷ ಬೆಳೆಸೆ,**
**ಕಹಿಯು ಹೋಗಿ ಸಿಹಿಯು ಬಹುದೆ?**
**ದುರುಳ, ಗುಣವ ತೊರೆದು ತಾನಾಗ ಉಚಿತಜ್ಞ, ವಿಶ್ವ**

**೧೭೯೪ ಮೃಗವು ಮೃಗವೆನಿಪುದು, ಮೃಗವ ದೂಷಿಸುವುದು,**
**ಮೃಗಕ್ಕಿಂತ ಮಂದ ಮೂರ್ಖನಹನು,**
**ಮೃಗದಂತಹ ಗುಣವು ಮೂರ್ಖನಿಹಗೆ ಇಲ್ಲ, ವಿಶ್ವ**

---

೧೭೯೫ ತಾಮಸ ಗುಣದಿಂದ ಮಾಡಬೇಡ ಕಾರ್ಯ.
ಮದದಿ ಜಿಗಿದಾಡಲು ವಿಷಮ ನೋಡು,
ಕಸುಗಾಯಿಯ ತಂದು ಇರಿಸೆ, ಮಾಗುವುದೇ? ವಿಶ್ವ

೧೭೯೬ ಗೂಗೆಯಂತೆ ಗುಡ್ಡಿ ತಿರುಗಿಸೆ, ಗುಣವು ಇಲ್ಲ;
ಲೋಭ ಮೋಹವ ತೊರೆದಾಗ, ಲಾಭವಹುದು,
ತುಂಟನು ಭಿಕ್ಷೆಯೆತ್ತಲು ತೀರದೆಂದು,
'ದಾಬು' ಮಾಡಲು ಲಕ್ಷ್ಯವಡಗಿತು, ವೇಮಾ.

೧೭೯೭ ಕಲಿತ ನಡತೆಯಿರಲು ಕಡೆಗೆ ತಪ್ಪಬಹುದು,
ಸಹನೆ–ನಡತೆಯಿರಲು ಸಹ್ಯವಿರದು,
ಕಲೆತ ನಡತೆಯಿರಲು ಕೂಡಲಿಕ್ಕೆ ಬಿಡದು, ವಿಶ್ವ

೧೭೯೮ ಭಂಗಿ ಕುಡಿಯುವವನು ಭಾವ ಹೊಂದಲಾರ,
ನಿಂದೆಗಿಳಿವ; ನಿಶೆಯ ನಿಲಿಸಲಾರ,
ಲಿಂಗವಮರ, ಗಾಂಜ ಲೀಲೆಯ ಚೆಂದಾಯ್ತು! ವಿಶ್ವ

೧೭೯೯ ಸುರಿವ ಮಳೆಗೆ ಅಂಜಿ ಓಡಿ ಹೋಗುತಿಹರು,
ಉರಿವ ಬಿಸಿಲೊಳಿಹರು ಮೊಂಡರಾಗಿ,
ಧರೆಯ ನರರು ಒಳಿತನೇಕೆ ಬಯಸದಿಹರು? ವಿಶ್ವ

೧೮೦೦ ನರಿಯ ವಿನಯ ಮತ್ತೆ ನಯವಾಗಿಹ ಮಾತು,
ಕೊನೆಗೆ ಧನವ ಪಡೆಯೆ ಗೆಯ್ವ ಮಣಿತ,
ನಾಯಿ ಬಲೆಯ ಮುಂದೆ ಕೂಳು ಚೆಲ್ಲಿದಂತೆ, ವಿಶ್ವ

●

## ನೆರವಿಗೆ ಬಾರದ ಸಿರಿ

ಸಂಪತ್ತು ಯಾರಿಗೂ ಸ್ಥಿರವಲ್ಲ ಕನ್ನೆಯ ಎದೆಯು ಸ್ಫುಟಗೊಂಡು ವಯಸ್ಸಾದಂತೆಲ್ಲ ಜೋತು ಬೀಳುವಂತೆ ಸಂಪತ್ತು ಬಂದು ಹೋಗುವದು. ಬೆಳುದಿಂಗಳನ್ನೂ, ಇರುಳನ್ನೂ ಸಮವಾಗಿ ನೋಡುವವನಿಗೆ, ಎಲ್ಲವೂ ಮಾಯೆ ಎನಿಸುವುದು.

ಸಂಪತ್ತಿನಲ್ಲಿಯೇ ಸುಖವಿಲ್ಲ. ಸಂಪತ್ತಿನಿಂದ ಚಿಂತೆ ಹೆಚ್ಚಾಗುತ್ತದೆ. ಅದರಿಂದ ಮನುಷ್ಯನು ಸೊರಗುತ್ತಾನೆ. ಚಿಂತೆ ಇಲ್ಲದಿಹುದೇ ನಿಜವಾದ ಸಂಪತ್ತಾಗಿದೆ.

ಒಬ್ಬನು ಕನಸಿನಲ್ಲಿ ಸಂಪತ್ತನ್ನು ಕಾಣುತ್ತಾನೆ. ಆದರೆ ಎಚ್ಚರಾದಾಗ ಅದನ್ನು ಕಾಣುವುದಿಲ್ಲ. ಇದ್ದು ಇಲ್ಲವಾಗುವ ಸಂಪತ್ತನ್ನು ಸಹ ಕನಸಿನಂತೆ ತಿಳಿ.

ಲೋಕದ ದೃಷ್ಟಿಯಿಂದ ದೊಡ್ಡ ಮನೆ ಕಟ್ಟಿ, ಸುತ್ತಲೂ ಗಿಡಬಳ್ಳಿ ನೆಟ್ಟು ಮೆರೆದರೆ, ಗರ್ವ ಪಟ್ಟರೆ ಅದೇನು ಶಾಶ್ವತವೇ? ದೇವರು ತನ್ನ ವಿಧಿನಿಯಮದಂತೆ ಫಲ ನೀಡುವನಲ್ಲವೇ? ಆದ್ದರಿಂದ ತನಗೆ ಇರುವಾಗ ಇಲ್ಲದವರಿಗೆ ಕರೆದು ನೀಡಬೇಕು. ಹಾಗೆ ಮಾಡದಿದ್ದರೆ ತನಗೆ ತಿರಿಪೆಯೂ ಸಹ ಸಿಕ್ಕದು.

ದಾನ ಧರ್ಮ ಮಾಡಿ ಇರುವ ಧನವನ್ನು ವಿನಿಯೋಗಿಸಬೇಕು. ಇರದ ಕಾಲದಲ್ಲಿ ಕೊಡಲಿಕ್ಕೇನುಂಟು?

ತನ್ನದು, ಪರರದು ಎಂದು ಭಿನ್ನ ಭಾವ ತಾಳಿ, ಬೇರೆಯವರಿಗೆ ಕೊಡದೆ, ಬ್ರಹ್ಮಪಟ್ಟವನ್ನು ಪಡೆಯಲಾರದವರಿಗೆ ಮುಕ್ತಿಗೇಡಷ್ಟೇ ಸರಿ.

**೧೮೦೧ ಕನ್ನೆಯೆದೆ ರೀತಿ, ಸಂಪದ**
**ಇನ್ನು ಕೆಲ ಕಾಲ ಫಲವನು ತೋರುತ, ಸರ್ರನೆ, ಇಳಿವೋಲ್**
**ಚೊನ್ನೆಯು ಕತ್ತಲು ಸರಿಯಿರೆ,**
**ಅಬಬಾ! ಶಿವಲಿಂಗ ಮಾಯೆ ಅಖಿಲವು ವೇಮಾ**

**೧೮೦೨ ಎಷ್ಟು ಸಂಪದವೋ, ಅಷ್ಟು ಕಷ್ಟ ಚಿಂತೆ,**
**ಚಿಂತೆಯಿಂದ ಮಿಗಿಲು ಸೊರಗಿ ದೇಹ,**
**ಚಿಂತೆಯಿರದೆ ಇರುವ, ಕೆಡದ ಸಂಪದ ಕಾಣು. ವಿಶ್ವ**

**೧೮೦೩ ಗೋವು ಕರೆದ ಹಾಲು ಗುಟುಕು ಮಾತ್ರ ಸಾಕು,**
**ಕತ್ತೆ ಹಾಲು ಏಕೆ ಗಡಿಗೆ ತುಂಬ?**
**ಭಕ್ತಿಯುಳ್ಳ ಕೂಳು, ಹಿಡಿಯೆ ಇರಲು ಸಾಕು, ವಿಶ್ವ**

**೧೮೦೪ ಕನಸಿನಲಿ ಸಂಪದವೆಲ್ಲ**
**ಕನವರಿಪ! ಕಾಣನೇಕೆ ತಾನು ಎಚ್ಚರಿಯಲ್?**
**ನೆನೆ; ಭೋಗ ಭಾಗ್ಯ ಗುಣಗಳು**
**ಕನಸಿನ ರೀತಿಯಿದು, ನಂಬೆ ಘನವದು, ವೇಮಾ**

**೧೮೦೫ ಗಿಡ ಬಳ್ಳಿ, ಗೋಡೆ ಸುತ್ತು ಕಟ್ಟಿ,**
**ಅಂತೆ ಗೂಡು ಅಗಲ ಮನೆಯ ಕಟ್ಟಿ,**
**ಮಹಾ ಗರ್ವಿಪ ನರ ಮೇಲು ಕೇಡರಿಯದೆ, ವಿಶ್ವ**

೧೮೦೬ ಇದ್ದು ನೀಡದಿರಲು ಇದ್ದ ಜೀವಿಗೆಲ್ಲ,
ದೊರಕದವಗೆ ತಿರಿಪೆ ದೀನ ಜನರೆ!
ತಿಳಿದು ಕಂಡುಕೊಳಿರಿ, ದೃಷ್ಟಾಂತವಿದು ನಿಮಗೆ, ವಿಶ್ವ

೧೮೦೭ ಕನಕ ಪಡೆದ ನರನು ಕಾಣನು ಮದದಿಂದ,
ಇಲ್ಲದಾಗ ಮೊದಲೆ ಇಲ್ಲ ಕೊಡಲು,
ಕನಕವಿಲ್ಲದಾಗ ಕಾಲ ನಡೆಯಬಹುದೆ? ವಿಶ್ವ

೧೮೦೮ ನನ್ನ ನಿನ್ನದೆನುತ ಅನುಕೂಲದಿ ಆಡಿ,
ಇಲ್ಲ ಇಲ್ಲವೆನುತ ಇಟ್ಟು ತುಳಿದು,
ಪಟ್ಟ ಪಡೆವ ಯುಕ್ತಿ ಪಡೆಯಲಾರದವಗೆ,
ವಿಷಮ ಜನಕೆ ಮುಕ್ತಿಗೇಡು ವೇಮ

●

## ಒಕ್ಕಲಿಗ – ಕಾಪು

ಕಾಪು (ಒಕ್ಕಲಿಗ) ಜನರು ಮೃದು ಸ್ವಭಾವಿಗಳು. ಕುಲಕರ್ಣಿಯು ಬಿರುಸಾಗಿದ್ದರೆ, ಕಾಪುಗಳು ಬಾಗಿ ನಡೆಯುತ್ತಾರೆ. ಅವನು ನಿಷ್ಠುರನಾಗಿದ್ದರೆ, 'ಎಪ್ಪಾ! ನಾವು ಮಕ್ಕಳಿದ್ದಂತೆ. ನಮ್ಮನ್ನು ಉಳಿಸು' ಎಂದು ಬೇಡುವರು ಆದರೆ ತಮ್ಮ ಹಕ್ಕು ಚಲಾಯಿಸಲಾರರು.

ಇವರು ಪರರಿಗಾಗಿ ಭೂಮಿಯನ್ನು ಉತ್ತಿ, ಬಿತ್ತುತ್ತಾರೆ, ದೊರೆಗೆ ವಶರಾಗಿರುತ್ತಾರೆ. ಹಾಲಿನಂಥ ಕುಲದ ಕಾಪು ಜನರು ತೆರಿಗೆಯನ್ನು ಭರಿಸುತ್ತಾರೆ.

ತುರುಕರು ಈ ದೇಶದ ಅಧಿಪತಿಗಳಾಗಿ ಬಂದರು. ದೊರೆಗಳಾಗಿ ಆಳಿದರು. ಕೊನೆಗೆ ರೈತಬಂಧುವಾಗಿ ತಳವೂರಿದರು.

೧೮೦೯ ಕರಣಿಕ ಧನಿಕರಲು, ಕಾಪುರೆಲ್ಲ ಕೂಡಿ,
ಬಾಗುತಿಹರು, ಮನಸು ಬಂದ ಹಾಗೆ,
ನಿಷ್ಠುರ ಕರಣಿಕಿರಲು, ನಿನ್ನ ಮಕ್ಕಳೆನುವರು, ವಿಶ್ವ

೧೮೧೦ ಪರರಿಗಾಗಿ ಭೂಮಿ ಉತ್ತಿ ಬಿತ್ತಿ ಬೆಳೆದು,
ಅವನಿ ಪತಿಗೆ ವಶ್ಯ ಆಗಿ ಇಹನು.
ಹಾಲಿನಂಥ ಕುಲಜನವನು ಕಾಪು ಅರಿಯೆ, ವಿಶ್ವ

— — — — — — — — — — — — — — — — — — —

೧೮೧೧ ಬೆಳೆವ ಮಾನಗಳಿಗೆ, ಬೈಗುಳದ ಮಾಲೆಗೆ,
'ಕಾಪು' ಜನಗಳಗಳಿಗೆ ಖಡ್ಗದಂತೆ.
ಮಾರು ಮಾನೆಯ ಮೇಲೆ ಮೂರು ಜಗಗಳೆನಲು, ವಿಶ್ವ

೧೮೧೨ ಶೇಖ ಸಯ್ಯದ ಮೊಗಲ, ಶೋಭಿತ ಪಠಾಣರು,
ತುರುಕರು ದೊರೆತನವ ತಾವು ಮಾಡಿ,
ಬರು ಬರುತ ರೈತ ಬಂಧುವಾದ ಪೂಜ್ಯ, ವಿಶ್ವ

●

## ಬಡತನ

ಬಡತನದಲ್ಲಿರುವ ದೋಷವೇನೆಂಬುದು ಆ ದೇವರಿಗೇ ಗೊತ್ತು. ಬಡವನನ್ನು ನೋಡುವವನು ಬಿಡದೆ ಶಿವನೆಂದೇ ಕಾಣುವನಲ್ಲವೇ?

ತಾನು ಬಡವನೆಂದು ನೊಂದುಕೊಳ್ಳದೆ, ಕಚ್ಚ ಅಕ್ಕಿ, ಹಾಗೂ ಬೇಳೆ ಮನೆಯಲ್ಲಿ ಇದ್ದರೆ, ಅವನ್ನು ಕುಚ್ಚಿಕೊಂಡು ತಿಂದರಾಯಿತಲ್ಲವೇ? ಬಡವನಿಗೆ ಬಡಕೊಂಡ ರೋಗವು ಭೂತಬಾಧೆಯಂತಿದೆ. ಹೀಗಾಗಿ ತನ್ನ ಬಡತನದ ಮಾನಸಿಕ ಚಿಂತೆಗೆ ನಿವಾರಣೋಪಾಯ ಕಾಣಸಿಗದು. ಇದ್ದುಳ್ಳವರ ರೋಗವೆಂದರೆ, ಅನ್ಯ ಸೌಖ್ಯವನ್ನು ಕಾಣುವುದೇ ಆಗಿದೆ. ಉಪ್ಪು ಅಲ್ಪವಿದ್ದರೇನು? ಅದರ ರುಚಿಯು ಅತಿಶಯ. ನಮ್ಮಲ್ಲಿ ಹೆಚ್ಚು ಭಾಗ್ಯವಿದ್ದರೇನು? ಅದರ ಉಪಭೋಗವೇ ಲೆಕ್ಕಕ್ಕುಂಟು ಅಲ್ಲವೇ?

ಎಷ್ಟೋ ಜನರು ತಮ್ಮಲ್ಲಿದ್ದುದನ್ನು ತಿನ್ನದೆ ಕೊರಗುತ್ತಾರೆ. ಉಡದೆ, ತೊಡದೆ ಸಾಗುತ್ತಾನೆ. ಭೋಗಭಾಗ್ಯದ ಮಧ್ಯೆ ಅವನಿದ್ದರೂ ಸತ್ತಂತೆ ಸಾಗುತ್ತಾರೆ. ಹಸಿಯ ಗಡಿಗೆಯಲ್ಲಿ ನೀರು ಹಾಕಿದರೆ ನಿಲ್ಲದಂತೆ, ಸರಿಯಾಗಿ ದುಡಿದು, ಉಪಜೀವನದ ಮಾರ್ಗ ಕಂಡುಕೊಳ್ಳದವನ ವಿದ್ಯೆಯು ಸಹ ಅವನಲ್ಲಿ ನಿಲ್ಲಲಾರದು. ಆದ್ದರಿಂದ, ವಿದ್ಯೆಯೂ ಬೇಕು. ಜೊತೆಗೆ ವಿತ್ತವೂ ಬೇಕು. ಅವರು ಮೂಢರಿರಲಿ, ಮೂಕರಿರಲಿ, ಯಾರೇ ಇರಲಿ, ಈ ಮಾತು ಅನ್ವಯಿಸುವುದು.

ಹಣವಿಲ್ಲದಿದ್ದರೆ, ತಾಯಿ, ಹೆಂಡತಿ ಹೃದಯ ಬಳಗದವರೆಲ್ಲ ಶತ್ರುವಾಗುವರು. ಹಣವು ಕೈಯಲ್ಲಿರುವ ಕಾಲದಲ್ಲಿಯೇ ತಕ್ಕಡಿ ತೂಗುವುದು. ವ್ಯವಹಾರ ಕುದುರುವುದು. ಏನೂ ಇರದೆ ಏನು ಮಾಡಿದರೇನು? ಕನಕವಿರುವ ಮನುಜನೇ ಕಾಮ. ಅವನೇ ಸೋಮ. ಅವನು ತೇಜದಿಂದ ಮೆರೆಯುತ್ತಾನೆ. ವಿತ್ತವಿಲ್ಲದವನು ಏನು ಮಾಡಿದರೇನು? ವ್ಯರ್ಥವಾಗುವುದು.

ಇರುವಾಗಲೂ ಒಂದೇ ರೀತಿ, ಇಲ್ಲದಿರುವಾಗಲೂ ಒಂದೇ ರೀತಿ ಬಾಳಬೇಕು. ಆಗ ದೇವರು ಬೇಡಿಕೆಗಳನ್ನು ತಾನೇ ಪೂರೈಸುತ್ತಾನೆ.

ಐಹಿಕ ಜೀವನದಲ್ಲಿ, ಇರುಕಿನಲ್ಲಿ ಸಿಲುಕಿ ಬಳಲುವ ಬಡವನು ಎಲ್ಲವನ್ನೂ ತ್ಯಾಗ ಮಾಡಿ ಪಡೆಯಬಹುದಾದ ಪರಮ ಪದವಿಯನ್ನು ಹೇಗೆ ಪಡೆಯಬಲ್ಲನು?

ಬಡವರಿಗೆ ನೀಡಿ ರಕ್ಷಿಸುವವನು ಮಾತ್ರ ನೆರೆದಾತನೇ ಹೊರತು, ಧನಿಕರಿಗೆ ಈಯುವವನಲ್ಲ. ಜಡವನಿಗೆ ನೀಡುವವನನ್ನೇ ಧರೆಯೆಲ್ಲ ಮೆಚ್ಚುತ್ತದೆ.

ಏನೇ ಆಗಲಿ, ಬಿಟ್ಟಿ ಕೆಲಸ ಮಾಡುವುದು ಲೇಸಲ್ಲ. ಬಡತನದ ಮುಂದುವರಿಕೆಗೆ ಇದೊಂದು ಹಾದಿಯಾಗಿದೆ.

ಬಡವನು ತನ್ನ ಮಗಳನ್ನು ಸಿರಿವಂತರಿಗೆ ಕೊಡುತ್ತಾನೆ. ಅವರಿಂದ ಹಣವನ್ನು ಆಶಿಸುತ್ತಾನೆ. ಆದರೆ ಪೂರ್ವ ಗತಿಗಳೇನಿವೆಯೊ? ಆದರೆ ಬಡವನಿಗೆ ಕನ್ಯಾದಾನ ಮಾಡುವವನು, ಅವನ ಗುಣಕರ್ಮಗಳನ್ನು ನೋಡಿಯೇ ಹಾಗೆ ಮಾಡುತ್ತಾನೆ. ಹೀಗಾಗಿ ಅವನು ಗುಣವಂತನಿಗೆ ಕನ್ಯಾದಾನ ಮಾಡಿದರೆ, ಅವನಿಗೆ ಪುಣ್ಯವೇ ಬರುತ್ತದೆ. ಇದುವೇ ವೇದಾಂತ ರಹಸ್ಯವೂ ಆಗಿದೆ.

ತಮ್ಮ ಸುತ್ತ ಮುತ್ತಿನವರು ಸಿರಿವಂತರಾಗಿರುವುದನ್ನು ಕಂಡು ಸಂಕಟ ಪಡುತ್ತಾರೆ. ಆದರೆ ಧರ್ಮಜೀವನ ನಡೆಸಿರೆಂದು ಹೇಳಿದರೆ, ತೊಂದರೆ ಪಡುತ್ತಾರೆ. ಧರ್ಮಜೀವನ ನಡೆಸದೆ, ಸಂಪತ್ತು ಬರುವುದೆಂತು? ಈಗ ಸಂಪತ್ತು ಹೊಂದಿದವರು, ಕಠಿಣ ಚಿತ್ತ ತಾಳಿ ಈದ ಹುಲಿಯಂತೆ ಎಲ್ಲವನ್ನೂ ಕಬಳಿಸುವವರಾಗುತ್ತಾರೆ. ಇಂಥವರಿಗೆ ಸಂಪತ್ತು ಪ್ರಾಪ್ತವಾಗುವುದೆಂತು?

ಇರುವಾಗ ಮಿತವ್ಯಯದಿಂದ ಧರ್ಮಜೀವನ ಬಾಳಬೇಕು. ಏಕೆಂದರೆ ದುಂದು ವೆಚ್ಚ ಮಾಡಿ ಎಲ್ಲ ಕಳೆದುಕೊಂಡರೆ ಅವನನ್ನು ಯಾರೂ ಲೆಕ್ಕಿಸಲಾರರು. ಹಣವಿದ್ದವನೇ ಕಾಮನು, ಸೋಮನು. ಹಣ ಕಳೆದುಕೊಂಡರೆ ಹುಚ್ಚ ಪೆದ್ದನಾಗುತ್ತಾನೆ. ಗೊಡ್ಡು ಸನ್ಯಾಸಿಯಾಗುತ್ತಾನೆ. ಆದ್ದರಿಂದ ಪ್ರತಿಯೊಬ್ಬನೂ ತಾಯಿ ತಂದೆಯಂದಿರ ಗಳಿಕೆಯ ಮೇಲೆ ಉಪಜೀವಿಸದೆ, ಸ್ವಂತ ಕಷ್ಟಪಟ್ಟು ದುಡಿದು ಉಣ್ಣಬೇಕು.

**೧೮೧೩ ಬಡವಗಿರುವಂಥ ದೋಷವು**
**ಪೊವಿಯೊಳೇನೊ? ಆ ಈಶ್ವರ ತಾನರಿವನ್,**
**ಬಡವನ ನೋಡುವನಾವನೂ**
**ಬಿಡದೆ ಶವವೆಂದು ಕಾಣುವನಲ್ಲವೆ? ವೇಮಾ**

**೧೮೧೪ ಕಚ್ಚ ಅಕ್ಕಿ, ಬೇಳೆ, ಗೃಹದಲ್ಲಿ ಇರುತಿರೆ,**
**ಕೂಳು ಅಟ್ಟು ತಿನಲು ಕಷ್ಟವೇನು?**
**ಹೊಟ್ಟೆ ತುಂಬಲಿಕ್ಕೆ ಕಷ್ಟ ಪಡದಿರಲೆಂತು? ವಿಶ್ವ**

೧೮೧೫ ಬಡವ ಮನುಜ – ಬಾಧೆ ಭೂತವಿಪ್ಪ ರೀತಿ,
ಬಾಧೆ ಕಂಡು ಕಳೆಯೆ ಮಾರ್ಗವಿಲ್ಲ,
"ಉಳ್ಳ ಜನರ ಬಾಧೆ ಕಣ್ಣು ಸಹಿಸದಲ್ಲ?"
ಏನು ಮಾಡಬಹುದು ಇದಕೆ? ವೇಮ.

೧೮೧೬ ಕಣ್ಣು ಇಲ್ಲದವನು, ಕಾಲು ಇಲ್ಲದವನು,
ಉಭಯರು ಒಡಗೂಡಿ ಉಂಟು, ಅಂತೆ.
ಬಡವ ಬಡವನೊಡನೆ ಬೆರೆತು ಇರುವ ನೋಡು. ವಿಶ್ವ

೧೮೧೭ ಆರಿ ಕ್ಷಾಮ ಡಾಮರಗಳು ಕರ ಕಷ್ಟವೆಂಬುದಾಯುವಿರಲ್
ಗರಿಮೆಯ ಜೀವ ರಾಶಿಗೆ ಗಟ್ಟಿಯಾಗುಂಟೆ ಆಯುವು ತಾ?
ಮರಳಿ ವಕವಕವೆನಲೇಕೆ? ಧರೆಯೊಳಿಲ್ಲೆನಲೇಕೆ? ಮೂಢರೆ,
ಅರಿಯೆ ದಯಾಳುವಾದ ಪರಮಾತ್ಮ ನೋರ್ವನೆ ದಿಕ್ಕು, ವೇಮನಾ.

೧೮೧೮ ಉಪ್ಪದೆಷ್ಟು ಲಾಭಕರವೆನಿಸುತಿಪ್ಪುದು?
ಅಲ್ಪವಾದರೇನು ರುಚಿಯೀವುದು,
ಭೋಗ ಭಾಗ್ಯವೇಕೆ? ಉಪಭೋಗವೇ ಲೆಕ್ಕ. ವಿಶ್ವ

೧೮೧೯ ಕೂಳು ಉಣ್ಣಲಿಲ್ಲ; ಕೂಡಿ ಹಾಕಲಿಲ್ಲ;
ಉಟ್ಟು ಬಿಡಲು ಇಲ್ಲ, ಒಟ್ಟಲಿಲ್ಲ,
ಸಾಗುತಿಹನು ನಡುವೆ ಸತ್ತಂತೆ ಇದ್ದರೂ, ವಿಶ್ವ

೧೮೨೦ ಕೂಳು ಇನಿತು ಇರದೆ, ಕಡುತರ ಕಷ್ಟವಿರೆ,
ನಿಲುವುದೆ ವಿದ್ಯೆ ಅನುಕೂಲವಿರದೆ?
ಹಸಿಯ ಘಟದಿ ನೀರು ಹಾಕಿದರೆ ನಿಲುವುದೆ? ವಿಶ್ವ

೧೮೨೧ ವಿದ್ಯೆಯಿಲ್ಲದಿರಲು, ವಿತ್ತವಿಲ್ಲದಿರಲು,
ಮೂಢನಿರಲಿ ಕೊನೆಗೆ ಮೂಕನಿರಲಿ,
ಇಷ್ಟ ಬಂಧುವಿರಲಿ ಕಷ್ಟವಾಗುತಿಹುದು, ವಿಶ್ವ

೧೮೨೨ ವಿತ್ತಹೀನನಾದ ಕಾಲದಲ್ಲಿ, ತನಯ
ಹೆತ್ತಾಕೆ, ಹೆಂಡತಿ, ಹೃದಯ ಬಳಗ,
ಶತ್ರುವಾಗುತಿಹರು, ಸತ್ಯವಿದು ನೋಡಾ. ವಿಶ್ವ

೧೮೨೩ ಅನಿತನಿತು ದೂರಕ್ಕೆ ಕಡವು,
ಮನೆಯ ವಸತಿ, ಕೆರೆ ನದಿಗಳು ಕರ್ಮಗಳಂತೇ.
ತಾನೆಲ್ಲಿಯು ತಿರುಗುತಿರಲು,
ಅನುಸರಿಸಿ ಬಹವು ವೇಮನ ಜೊತೆಯಲಿ ನಿರುತಂ

೧೮೨೪ ಏನು ಇಲ್ಲದಾತ, ಏನು ಗೆಯ್ದೊಡೇನು?
ಕೈಗೆ ಸಿಗದು ಫಲವು, ಕಾಸು ಕೂಡ,
ಕನಕವಿರುವ ಕಾಲ ತಕ್ಕಡಿ ತೂಗುವುದು, ವಿಶ್ವ

೧೮೨೫ ಕನಕವುಳ್ಳ ಮನುಜ ಕಾಮ ಮತ್ತೆ ಸೋಮ.
ಮಿಗಿಲು ತೇಜದಿಂದ ಮೆರೆಯುತಿಹನು.
ವಿತ್ತ ಹೀನನಾಗೆ, ವ್ಯರ್ಥ ಹೋಹುದೆಲ್ಲ! ವಿಶ್ವ

೧೮೨೬ ಬಡವನನರಿಯದಂಥ ಒಡೆತನವದು ಏಕೆ?
ಪೋಷಿಸದಿರೆ, ಬಂಧು ಭಾವವೇಕೆ?
ವ್ಯಾದಿ ತಿಳಿಯದಿಪ್ಪ ವೈದ್ಯ ಮತ್ತೆ ಏಕೆ? ವಿಶ್ವ

೧೮೨೭ ಕೂಳು ಕುಡಿಯಲಿರದೆ ಕೂಡಿಸಿಡದೆ ಇರಲು,
ಇಡಲು, ಉಡಲು ಇರದೆ, ಇರದೆ ಗಳಿಕೆ,
ನಡೆಯೆ ಸಾಗದಿರಲು, ನಡೆವ ಹೆಣವೆನುವರು, ವಿಶ್ವ

೧೮೨೮ ಕೂಳಿಗಾಗಿ ನರನು ಕಳವಳ ಪಡುತಿಹನು,
ಹೊಟ್ಟೆಗಾಗಿ ಹೊಗುವ ಗಹನಗಳಿಗೆ,
ಹೊಟ್ಟೆಗೆಂತಾದರು ಗಿಟ್ಟುವುದು ಭುಕ್ತಿಯು, ವಿಶ್ವ

೧೮೨೯ ಕೂಳು ಉಣಲು ಕೊಟ್ಟು, ಕೂರ್ಮೆಯಿಂದ ಗಂಜಿ
ಕುಡಿಯುವಂಥ ದೈವ ಕೂಡಿ ಬರದೆ,
ಬಡವರಾದವರಿಗೆ ಕೊಡುವರು ಮದುವೆ ಮಾಡಿ, ವಿಶ್ವ
(ಕೂರ್ಮೆ– ಪ್ರೀತಿ, ನಲ್ಮೆ, ಸ್ನೇಹ.)

೧೮೩೦ ಇದ್ದವನಂತೆ ಇರು, ಇಲ್ಲದವನಂತಿರು,
ಮತ್ತೆ ಇಲ್ಲದಿಹುದು; ಮರಳಿ ಉಂಟು,
ಆಶೆ ಕೋರಿದಷ್ಟು ಅನುಗ್ರಹಿಸುವ ಶಿವ. ವಿಶ್ವ

೧೮೩೧ ಪರಿಕಿಸಿ ಇದುವರೆಗೆ ಪಟ್ಟ ಪಾಡನರಿಯ,
ಘನತೆಗೊಪ್ಪುವ ನರನೆನಿಸಿ ಹುಟ್ಟಿ,
ಕೀಳು ಮೇಲರಿಯದೆ ಕುಸಿಯುತಿರುವ ಚಿತ್ರ, ವಿಶ್ವ

೧೮೩೨ ಇಹದಲ್ಲಿಯೆ ಬಹಳ ಇರುಕಿನಲಿ ಬಳಲಿದ,
ಬಡವ ಹೊಂದಲಾರ ಪರಮ ಪದವಿ,
ಬಡವ ಪಡೆಯಬಹುದೆ, ಪೃಥ್ವಿಯೊಳಿಹ ಭಾಗ್ಯ? ವಿಶ್ವ

೧೮೩೩ ನೆರೆ ಬಡವರ ರಕ್ಷಿಸುವವ
ಸರಸನು, ನೆರದಾತ; ಹೊರತು ಸಂಪನ್ನರ ತಾ
ಭರಿಸುವವನು ದಾತನೇನು?
ಧರೆ ಮೆಚ್ಚುವುದಾತನನ್ನು ಅರಿಯೈ ವೇಮಾ.

೧೮೩೪ ಕೂಳಿಗೂ ಗತಿಯಿರದೆ, ಕುಳಿತುಕೊಂಡಿರುವಗೆ;
ನಾಡಿನಾಗು ಹೋಗಿನಾಶೆಯುಂಟೆ?
ಅನ್ನದ ಮದದಿಂದ ಇನ್ನು ಮದಗಳೆಲ್ಲ, ವಿಶ್ವ

೧೮೩೫ ಪಟ್ಟು ಬಿಡಲು ಹೊಲ್ಲ, ಹತ್ತು ಲಕ್ಷ ಕೊಡಲು,
ಕೊಟ್ಟು ಹೇಳೆ ಹೊಲ್ಲ; ಬಡವನಿಹಗೆ,
ಬಿಟ್ಟಿ ಕೆಲಸ ಮಾಡೆ ಹೊಲ್ಲ ಯಾರಡಿಯೂ, ವಿಶ್ವ

೧೮೩೬ ಕಂಡು ಸಂಪದ ಬಲ ಕನಕವನಾಶಿಸುತ,
ಕನ್ನೆಯೀಯೆ, ಪೂರ್ವಗತಿಗಳೆಂತೊ?
ಬಡವನನುವು ಮೀರಿ ಬಾಲೆಯೀಯುತಿಹನು, ವಿಶ್ವ

೧೮೩೭ ಬಡವಗೆ ಕನ್ಯಾ ದಾನವ,
ಕಡು ಹರ್ಷದಿಂದ ಗೆಯ್ಯುವ ಪುರುಷನು ಕೊನೆಯೋಳ್,
ಸಾಧಿಸುವ ಪುಣ್ಯ ಲೋಕವ,
ವೇದಾಂತ ರಹಸ್ಯವಿದನು ವೇಮ ಕೇಳಾ

೧೮೩೮ ನೆರೆಹೊರೆಯುವರುಂಟು, ನೋಡಿ ಸಂಪದವನು,
ತಮಗೆ ಇಲ್ಲವೆನಲು ಧರ್ಮವೇನು?
ಧರ್ಮ ನಡೆಸಿರೆನಲು ತೊಂದರೆ ಪಡುವರಲ ವಿಶ್ವ

೧೮೩೯ ಹೊಟ್ಟೆಗೆ ಕೂಳು ಇರದೆ, ಹೊಟ್ಟೆ ಡೊಳ್ಳು ಆಯ್ತು,
ಮಮತೆ ಮಾನ ಉಳಿಸನೆ ಮಾನವ ತಾ?
ಅದಕೆ ಧನವ ಗಳಿಸಿ ಆದನವನು ಜ್ಞಾನಿ, ವಿಶ್ವ

೧೮೪೦ ಇರದ ಕಾಲದಲ್ಲಿ, ಕಿರಿಯ ಮನಸು ಹೊಂದಿ,
ಈದ ಹುಲಿಯ ರೀತಿ ಅರಿಯದಿಹನು,
ಕಠಿಣ ಬುದ್ಧಿಯುದಿಸೆ, ಕನಕವೆಂತು ಬಹುದು? ವಿಶ್ವ

೧೮೪೧ ಪ್ರಭುವಿಗೀವ ರೀತಿ ಬಡವರಿಗೀಯರಲ!
ವನಿತೆಗೀವ ರೀತಿ ವಟುವಿಗಿಲ್ಲ,
ಸುರೆಗೆ ಈವ ರೀತಿ, ಸುಮತಿಗೀಯರಲ್ಲ! ವಿಶ್ವ

೧೮೪೨ ಎಲ್ಲ ಕಳಕೊಂಡವ ಎಲ್ಲೂ ಲೆಕ್ಕಕಿಲ್ಲ,
ಇಂದು ಅಂದು ಅಂತೆ ಏನು ಬಂತು?
ಮಂದ ಮತಿಯಾಗದೆ, ಮಹಿಮೆ ಹೊಂದಿ ಬಾಳು, ವಿಶ್ವ

೧೮೪೩ ಅನ್ನ ಜೀರ್ಣಸದಗೆ ಅನ್ನವನು ನೀಡಲು
ಹಾಳು ಅಷ್ಟೆ; ಅದರ ಫಲಿತವೇನು?
ಧನಿಕರಿಗೀಯುತಿಹ ದಾನಗಳೂ ಅಂತೆ, ವಿಶ್ವ

೧೮೪೪ ಒಡಲು ಬಡವ ಮಾಡಿ ಯೋಗಿಯೆಂದುಕೊಂಡು,
ಮನಸು ಕಲ್ಮಷಗಳ ಮಾಣರಲ್ಲ!
ಹುತ್ತ ಮೇಲೆ ಹೊಡೆಯೆ, ಹಾವು ಸಾಯಬಹುದೆ? ವಿಶ್ವ

೧೮೪೫ ಹಸಿಯಲು ನಶಿಸುವವು ಆಚಾರ ವಿಧಿಯೆಲ್ಲ;
ನಿಶೆಯೊಳು ನಶಿಸುವುದು ಚಿತ್ತ ಶುದ್ಧಿ.
ಗರ್ಭ ಧರಿಸೆ ಇಲ್ಲ, ಗರ್ವ ಗಡಸು ಎಲ್ಲ. ವಿಶ್ವ

೧೮೪೬ ಒಳಿತಾಕಳ ಹಾಲು ಚಮಚೆಯಷ್ಟು ಸಾಕು.
ಗಡಗಿ ತುಂಬಲೇನು ಕತ್ತೆ ಹಾಲು?
ಭಕ್ತಿಯುಕ್ತ ಕೂಳು ಮುಷ್ಟಿಯಷ್ಟೆ ಸಾಕು, ವಿಶ್ವ

೧೮೪೭ ದಾತನಿರಲು ಕರೆದು ದಾನ ಕೊಡುವ ಮೊದಲು,
ತನಗೆ ಇರದೆ ತಾನು ಕೊಡುವನೇನು?
ಜಲವು ತೃಷೆಗೆ ಮದ್ದು, ಮಲೆತರೆ ತೃಷೆ ಕಳೆವುದೆ? ವಿಶ್ವ

೧೮೪೮ ಹಸುವು ಈಯೆ ಕರುವ, ಹಾಲು ಹಿಂಡುವಾಗ,
ಹುಲ್ಲು ಹೆಚ್ಚು ಇಡುವ; ಪಾಲಿಸುವವ,
ಬರಿದು ಕೆಚ್ಚಲಾಗೆ, ಬಿಡುವ ಮೊದಲ ರೀತಿ, ವಿಶ್ವ

೧೮೪೯ ಕನಕವಿರಲು ಅವನೆ ಕಾಮ ಮತ್ತೆ ಭೀಮ;
ಮಿಗಿಲು ತೇಜದಿಂದ ಮೆರೆಯುತಿಪ್ಪ
ಹೇಮ ಹೀನ ತಾನು ಹುಚ್ಚು ಪೆದ್ದ ನೋಡು ವಿಶ್ವ

೧೮೫೦ ಸಿರಿಯಿರುವ ಮನುಜರು ಕಾಮರು, ಸೋಮರೈ;
ಮಿಗಿಲು ತೇಜದಲ್ಲಿ ಮೆರೆಯುತಿಹರು!
ವಿತ್ತ ಹೀನನಿರಲು ವ್ಯರ್ಥ ಸನ್ಯಾಸಿಯು! ವಿಶ್ವ

೧೮೫೧ ಕನಕ ಕೈಯೊಳಿರಲು ಕಾಮನಂತೆ ಮಾನ;
ಇಲ್ಲವಾಗಲೇನು ಇಲ್ಲವಿಲ್ಲ!
ಮದನನಂಥ ಮನುಜನಾಗ ಹೊಲೆಯನಂತೆ, ವಿಶ್ವ

೧೮೫೨ ಮಣ್ಣು ತಿನ್ನಿರೆನಲು ಮೀರಿ ಕೋಪ ಜನಕೆ,
ಮಣ್ಣೊಳಿರುವ ಮೇಲ್ಮೆ ಮರೆವರೇಕೆ?
ನೀರೊಳಗಿನ ಮೇಲ್ಮೆ ನಿಖಿಲವಾಗಿ ಉಂಟು, ವಿಶ್ವ

೧೮೫೩ ಮುಂಡೆ ನೋಡಿದೊಡನೆ ಮನದಿ ದಿಗಿಲುಗೊಳುವ;
ಮುಂಡೆ ಕೂಳು ತಿನದೆ ಮುಕ್ತಿಯಿಲ್ಲ.
ಮುಂಡೆ ಕೂಳಿಗೆಲ್ಲ ಮೂಲವಲ್ಲವೇನು? ವಿಶ್ವ

೧೮೫೪ ಹೇಮವಿರುವ ಇವನು ಕಾಮನು, ಸೋಮನು;
ದಿನಕರನಾಗುವನು ತೇಜದಲ್ಲಿ,
ಹೊನ್ನು ಇಲ್ಲದವನು ಹುಚ್ಚನ ತಮ್ಮನಲ್ಲ! ವಿಶ್ವ

**೧೮೫೫ ಎಣ್ಣೆ ಇರುವ ದೀಪ, ಸುಣ್ಣಗೆ ಬೆಳಗುವುದು,**
**ಧನವ ಹೊಂದಿದವನ ತಿಳಿವು ಹೊಳಪು,**
**ಧನವೆ ಇಲ್ಲದವನ ತಿಳಿವು ತೀರಿತಲ್ಲ! ವಿಶ್ವ**

**೧೮೫೬ ಹುಲ್ಲು ಪಶುವಿಗಾಯ್ತು, ಹಾವಿಗಾಯ್ತು ಗಾಳಿ,**
**ಮಣ್ಣನೆರೆ ಹುಳಕಿತ್ತು ಮರೆತ ರೀತಿ,**
**ಅಂತೆ ಜಗದ ಜನಕೆ ಅನ್ನವಾಯಿತಷ್ಟೆ, ವಿಶ್ವ**

**೧೮೫೭ ಬೆವರು ಸುರಿಯುವಂತೆ, ಬಹಳ ಕಷ್ಟಪಟ್ಟು,**
**ದುಡಿಮೆ ಗೆಯ್ದು ಕೂಳು ತಿನ್ನಬೇಕು,**
**ತಾಯಿ ತಂದೆ ಗಳಿಕೆ ತಾನು ತಿನಲು ಹೊಲ್ಲ. ವಿಶ್ವ**

●

## ಕೀಳುತನ

ಸಮಾಜದಲ್ಲಿ ಒಳ್ಳೆಯವರ ಗುಣಶೀಲಗಳು ಒಂದು ಮಟ್ಟದಲ್ಲಿರುತ್ತವೆ. ಆ ಮಟ್ಟಕ್ಕಿಂತ ಕೆಳಮಟ್ಟದ ಗುಣಗಳನ್ನು ಕೀಳುಮಟ್ಟದವರೆಂದು ವರ್ಗೀಕರಿಸುತ್ತೇವೆ.

ಅನುಕೂಲ ಹೊಂದದ ಸೇವಕನು, ಅಲ್ಪನಾಗಿದ್ದರೆ, ಅವನು ಕೃತಘ್ನನಾಗುತ್ತಾನೆ. ಎದುರು ಮಾತನಾಡುತ್ತಾನೆ. ತೊಲೆ ಇಲ್ಲವೆ ಹಲಗೆಯನ್ನು ಊರುಗೋಲೆಂದು ಹಿಡಿದಂತಾಗುತ್ತದೆ.

ಧನಿಕನಾಗಿದ್ದು, ಧರ್ಮಕಂಟಕನಾದವನು, ಸಂಪತ್ತಿನಲ್ಲಿ ಹೊರಳಾಡಿದರೂ ಮೇಲ್ಮೆ ಪಡೆಯದೆ ಹೋಗುತ್ತಾನೆ.

ನಾಯಿಯು ತಾನು ತಿರುಗುವ ತಾಣದಲ್ಲಿ, ಆಗೀಗ ಹೊಂಚು ಹಾಕಿ ಕಚ್ಚುತಿಹುದು. ಇಂಥ ನಾಯಿಯ ಗುಣವು ಮಾನವನಿಗಿದ್ದರೆ ಅದು ಕೀಳು. ಅದು ಹೋಗುವುದು ಕಠಿಣ.

ಪರಮ ನೀಚನಾದವನು ಭಂಡ ಮಾತನ್ನಾಡಿ ದೊಡ್ಡವನೆನ್ನಿಸಿಕೊಳ್ಳಲು ಹೆಣಗಾಡಿದರೆ ಅವನಿಗೆ ದೊಡ್ಡಸ್ತನವು ಬರಲಾರದು. ಚಂದನದ ಘನತೆಯನ್ನು ಹಂದಿಯು ತಿಳಿಯದು. ಅದೇ ರೀತಿ, ಭಂಡನು ದೊಡ್ಡವರ ಗುಣಗಳನ್ನು ಅರಿಯನು. ಪಾಪಿ ಇರುವವನಿಗೆ ಪರಮಾರ್ಥ ತತ್ತ್ವವೇಕೆ?

ಏನ್ ಕೇನ್ ಮಾರ್ಗೇಣ, ಜನರನ್ನು ವಂಚಿಸಿ ಹೊಟ್ಟೆ ಹೊರೆಯುವುದು ತರವಲ್ಲ. ಪರರ ಋಣದಲ್ಲಿ ಸಿಲುಕಿದವನಿಗೆ ಗೌರವವೆಲ್ಲಿದೆ?

— — — — — — — — — — — — — — — — — — — — —

ಇಂಥ ನೀಚನಿಗೆ ಧನವೇ ಮುಖ್ಯ. ಅವನು ದೋಷಕಾರಿಯನ್ನೂ, ದೂಷಿಸುವವರನ್ನೂ ಹಗೆತನವಿರುವವರನ್ನೂ, ವೇದಬಾಹ್ಯರನ್ನೂ, ಅವರು ಧನಿಕರಾಗಿದ್ದರೆ ತನಗೆ ಬೇಕಾದವರೆಂದು ಬಗೆಯುವನು.

ಈಜು ಬಲ್ಲವನಿಗೆ ಆಳದ ಭಯವಿಲ್ಲದಿರುವಂತೆ ಕಡು ಪಾಪಿಗೆ ಇತರರ ಭಯವಿಲ್ಲ. ಕೊಂಬೆಯೇರಿದ ಮಂಗವು ಕುಣಿದು ಕುಪ್ಪಳಿಸುವಂತೆ ಇವನೂ ಒಂದು ದಿನ ಪತನ ಹೊಂದುವನು. ಇಂಥವನದು ಸಡಿಲು ಶೀಲ. ಒಟ್ಟಾಗಿ ಒಮ್ಮೆ ಕಷ್ಟ ಬಂದರೆ, ಹೀನ ಕೆಲಸದಲ್ಲಿ ಸಹಕರಿಸುತ್ತಾನೆ. ಅದರಿಂದ, ಅವನಿಗೆ ಫಲವಂತೂ ಸಿಕ್ಕದು. ಪ್ರತಿಯಾಗಿ ಇರುವ ಘನತೆಯೂ ಹಾಳಾಗುತ್ತದೆ.

ಕಬ್ಬಿನಲ್ಲಿರುವ ಕೆಟ್ಟ ಗುಣಗಳನ್ನು ನಿವಾರಿಸದೆ, ಅದನ್ನು ತಿನ್ನಬಾರದು. ಅದೇ ರೀತಿ ಅಂತಃಪುರದ ದ್ರೋಹಿಯನ್ನು ನಿವಾರಿಸದೆ ಅಲ್ಲಿ ಸುಖದಿಂದ ಇರಲಾಗದು.

ಕೆಟ್ಟ ಮನುಷ್ಯನ ಸ್ವಭಾವವು ನಾಯಿ ಬಾಲದಂತೆ ನೇರವಲ್ಲದ್ದು. ಅದನ್ನು ನೇರ ಮಾಡಲಾರೆವು. ಗೊಟ್ಟದಲ್ಲಿ ಇರಿಸಿದ ಕೆಲ ಹೊತ್ತು ತಾತ್ಕಾಲಿಕವಾಗಿ ನೇರವಾಗಬಹುದು. ಅದೇ ರೀತಿ, ದುರುಳನ ಶೀಲ. ಬೇವಿನ ನೇರಕ್ಕೆ ಹಾಲನೆರೆಯಲು ಅದು ತನ್ನ ಕಹಿ ರುಚಿಯನ್ನು ತೊರೆದು ಸಿಹಿಯಾಗಬಲ್ಲದೇ?

ಬೇರೆಯವರನ್ನು ಪೀಡಿಸುವವರನ್ನು ಪೀಡಿಸುತ ಮತ್ತೋರ್ವನಿರುತ್ತಾನೆ. ಜೋತಾಡುವ ಚೇಳನ್ನು ನಾಯಿಯು ಕಂಡು ಹಲ್ಲು ಕಿರಿದು ಹಿಡಿಯ ಹೋದರೆ, ಅದು ತನ್ನ ಕೊಂಡಿಯಿಂದ ಕಚ್ಚದಿದ್ದೀತೇ? ಕೇಡಿತನಕ್ಕೆ ಅಲ್ಲಲ್ಲಿ ಶಿಕ್ಷೆ ಇದ್ದೇ ಇರುತ್ತದೆ. ಜೇನು ನೊಣವು ಪರರಿಗೀಯಬೇಕಾದ ಜೇನನ್ನು ತಾನೇ ಸವಿಯಲು ಹೋದರೆ ಅದರಲ್ಲಿ ಸಿಕ್ಕು ಸಾಯುತ್ತದೆ. ಕೇಡಿ ಮನುಷ್ಯನಿಗೆ ಅವನ ಕಾಮಾಸಕ್ತಿಯೇ ಮರಣ ತರುತ್ತದೆ.

ಭಾಗ್ಯ ಹೆಚ್ಚಿದಷ್ಟು ಕಷ್ಟದ ಚಿಂತೆಯೂ ಹೆಚ್ಚುತ್ತದೆ. ಚಿಂತೆಯಿಂದ ಮನಸ್ಸು ಮ್ಲಾನವಾಗುತ್ತದೆ. ಚಿಂತೆ ಇಲ್ಲದಿರುವುದೇ ಕೆಡದ ಸಂಪದವಾಗಿದೆ.

**೧೮೩೮ ಅನುವು ಇರದ ಬಂಟ ಅಲ್ಪನಾಗಿರುತಿರೆ,**
**ತಿರುಗಿ ಬೀಳುವನವ ಮಾರು ನುಡಿವ,**
**ತೊಲೆ, ಹಲಗೆಯ ಕೋಲು ದೊರಕಿದಂಥ ರೀತಿ, ವಿಶ್ವ**

**೧೮೩೯ ಧರ್ಮ ಕಂಟಕನವ ಧನದಿ ಗರ್ವ ತಾಳಿ,**
**ಸಕಲ ಸಂಪದದಲಿ ಸುತ್ತಿ ಹೊರಳಿ,**
**ಕಡೆಗೆ, ತಾನು ಮೇಲ್ಮೆ ಕಾಣದೆ ಕೆಡುತಿಹನು, ವಿಶ್ವ**

೧೮೬೦ ತಾನಲೆಯುವ ಎಡೆಯೆ ಆಗೀಗ ತಿರುಗುವ,
ಜನರ, ಹೊಂಚು ಹಾಕಿ, ಕಚ್ಚುತಿಹುದು,
ಶ್ವಾನ ಬುಧ್ಧಿಯಂಥ ಗುಣ ಬದಲುವುದೆಂತು? ವಿಶ್ವ

೧೮೬೧ ಭಂಡ ಮಾತನಾಡೆ, ಪರಮ ನೀಚನವನು,
ದೊಡ್ಡ ಜನರ ಮೇಲು ತಾನರಿವನೆ?
ಚಂದನಕಿಹ ಘನತೆ ಹಂದಿಯೇನರಿವುದೆ? ವಿಶ್ವ

೧೮೬೨ ಪಾಪಿಯಿರುವಗೇಕೆ ಪರ ಸಮೃಧ್ಧಿಯರಿಯೆ?
ಪಾಪಿಯಿರುವಗೇಕೆ ಭಕ್ತಿ ಪಥವು?
ಪಾಪಿಯಿರುವಗೇಕೆ ಪರಮಾರ್ಥ ತತ್ತ್ವವು? ವಿಶ್ವ

೧೮೬೩ ಈಜುವವನಿಗಾಳ ಎಷ್ಟಿರಲೇನೆಣಿಕೆ?
ಸಾವಿಗಿಂತ ಕೀಳು ಜಗದೊಳಿಲ್ಲ,
ಗೋಟಿ ಧಾರಿಗಿಂತ ಕಡು ದರಿದ್ರನಿಲ್ಲ, ವಿಶ್ವ

೧೮೬೪ ಪರರ ಮೋಸ ಗೈದು ಭೂರಿ ಕಾಸು ಗಳಿಸಿ,
ಹೊರೆಯಲುದರವನ್ನು, ತರವಲ್ಲವೊ,
ಪರರ ಋಣದಿ ಸಿಕ್ಕ ನರಗಿಲ್ಲ ಗೌರವ? ವಿಶ್ವ

೧೮೬೫ ದೋಷಕಾರಿಯಿರಲಿ, ದೂಷಿಸುವವನಿರಲಿ,
ಹಗೆಯೆ ಇರಲಿ ವೇದ ಬಾಹ್ಯನಿರಲಿ,
ಧನಿಕರೆಲ್ಲರನ್ನು ತನಗಿಂಪು ಎನುವನು, ವಿಶ್ವ

೧೮೬೬ ಉರಿವ ಅಗ್ನಿ ಜೊತೆಗೆ, ಕಿರಿಯ ನರನ ಜೊತೆಗೆ,
ಪರ ನಾರಿಯ ಜೊತೆಗೆ, ಪತಿತೆ ಜೊತೆಗೆ,
ಸರಸದಾಟವೆಲ್ಲ ಮರಣ ಕಾರಣವೇ, ವಿಶ್ವ

೧೮೬೭ ಈಜು ಬಲ್ಲವಂಗೆ ಆಳದ ಭಯವೆಲ್ಲಿ?
ಭೂರಿ ಪಾಪಿಗಿತರ ಭಯವು ಎಲ್ಲಿ?
ಕೊಂಬೆಯೇರಿದ ಕಪಿ ಕುಣಿದು ಕೆಳಗುರುಳದೆ? ವಿಶ್ವ

೧೮೬೮ ಒಟ್ಟುಗೂಡಿ ಕಷ್ಟವೊಮ್ಮೆ ಬಂದರಾಗ,
ಹೀನ ಕೆಲಸದಲ್ಲಿ ಸಹಕರಿಸುವ;
ಇರುವ ಘನತೆ ಹಾಳು, ಬರುವ ಫಲವು ಚೂರು, ವಿಶ್ವ

೧೮೬೯ ಕಬ್ಬಿನೊಳಗೆ ಇಪ್ಪ ಕೆಟ್ಟ ಗುಣಗಳನ್ನು,
ತೆಗೆದು ಹಾಕದಿರಲು ತಿನ್ನಬಹುದೆ?
ಅಂತಃಪುರದ ದ್ರೋಹಿ ಅಂತೆ ಇರುವ ತಾನು? ವಿಶ್ವ

೧೮೭೦ ಓರ್ವನ ಬಾಯಿ ಬಡಿದು, ಓರ್ವ ಭಕ್ಷಿಸುತಿಹನು,
ಅವನ ಬಾಯಿಗೆ ದೈವ ಅಂತೆ ಮಾಳ್ಕು,
ಮೀನು ಮರಿಯನೆಲ್ಲ ಮೀನು ತಿನ್ನುತಿಹವು,
ಜನರು ಮೀನು ತಿನ್ನುತಿಹರು ವೇಮ.

೧೮೭೧ ಹತ್ತು ಸಂಗತಿಗಳ ಹತ್ತು ಬಾರಿ ಗೆಯ್ಯೆ,
ತಪ್ಪು ದಾರಿ ಹಿಡಿವ, ದಾರ್ಢ್ಯ ಮೊಳೆವುದು,
ಕೂಡದೇಕೆ ಅಂಥ ಕುದುರುವಿಕೆ ಒಳಿತಿಗೆ? ವಿಶ್ವ

೧೮೭೨ ಗೊಟ್ಟದಲ್ಲಿ ಇರಿಸೆ, ಆಗ ನಾಯಿ ಬಾಲ,
ನೆಟ್ಟಗಿಪ್ಪುದು ಕೊಂಚ ಕಾಲ,
ಕೆಟ್ಟ ನರನಿಗೆಷ್ಟು ಹೇಳೆ, ಕೆಡುಕು ಬಿಡನು, ವಿಶ್ವ

೧೮೭೩ ಗ್ರಹಿಕೆ ತೊರೆತವಧಿಕ, ಕೂಡಿದೊಡೆ ಭಾಗ್ಯಗಳು,
ದೊಡ್ಡವರಿದ್ದರೂ ದೂರುತಿಹನು,
ಅಲ್ಪ ಜಾತಿ ದುಷ್ಟ ಅಧಿಕರನೇನರಿವ? ವಿಶ್ವ

೧೮೭೪ ಜೋತಾಡುತಿಹ ಚೇಳ, ಶ್ವಾನ ತಾನು ಕಂಡು,
'ಹಲ್ಲು ಕಡಿದು' ಅದನು ಹಿಡಿಯ ಹೋಗೆ,
ಮೂಗು ಕೊಂಡೆಯಿಂದ ಮತ್ತೆ ತಿವಿಯದೇನು? ವಿಶ್ವ

೧೮೭೫ ನೊಣಕೆ ಜೇನು ರುಚಿಯ ಇಂಪು ಸವಿಯೆ ಮರಣ,
ಕೇಡಿ ನರಗೆ ಕಾಮ ಸುಖವೆ ಮರಣ,
ತ್ಯಾಗ ಹೀನ ನರಗೆ ದಾನ ಕೇಳೆ ಮರಣ, ವಿಶ್ವ

— — — — — — — — — — — — — — — — — — — — —

೧೮೭೬ ಕೂದಲಗ್ನಿ ಸುಡಲು ಕರಿಯ ಇದ್ದಿಲಲ್ಲ,
ಉದಕದಲ್ಲಿ ಕೊರತೆ ಎಣಿಸಬೇಡ,
ಉಪ್ಪು ಕಲಸೆ ಬೇಳೆ ಕುದಿಯುತ್ತಿಲ್ಲವಲ್ಲ! ವಿಶ್ವ

೧೮೭೭ ಸುಳ್ಳು ನುಡಿಯುವವನ ಹಳ್ಳಿ ಗೌಡ ಬಲ್ಲ,
ಸತ್ಯ ನುಡಿಯುವವನ ಸ್ವಾಮಿ ಬಲ್ಲ,
ಮಿತಿಗೆಟ್ಟು ಭಕ್ಷಿಪನ ಸತಿಯು ಬಲ್ಲಳಲ್ಲ! ವಿಶ್ವ

೧೮೭೮ ಹಾನಿಯಿಂದ ಆಯ್ತು, ಅಧಿಕ ದುಃಖವೆಲ್ಲ,
ಹಾನಿಯಿಂದ ತಪ್ಪಿ ಹೋಯ್ತು, ಸುಖವು,
ಹಾನಿಯಿಂದ ಕೊಂಚ ಹಳವಂಡವೆ ಆಯ್ತು, ವಿಶ್ವ

೧೮೭೯ ಪುಟ್ಟಿ ಫಲವು ಇಲ್ಲ, ಪುರಷಾಧಮರಿಹದಿ,
ಹುಟ್ಟಲೇನು ಇಲ್ಲ; ಹೊರಡಲೇನು?
ಹುತ್ತದಲಿ ಗೆದ್ದಲು ಹುಟ್ಟದೇ? ಸಾಯವೆ? ವಿಶ್ವ

೧೮೮೦ ದೊಡ್ಡವರೆಂದು ಹಾದಿಯೊಳು ಮುಳ್ಳು ಚೆಲ್ಲಿ?
ಅಡ್ಡವಿದ್ದು ಜನರು ಸುತ್ತುಗಟ್ಟಿ,
ದೋಚುತಿಹರು; ಕೃತ್ಯ ದೋಷ ಹೋಹುದೆಂತು? ವಿಶ್ವ

೧೮೮೧ ಸುಡುಗಾಡನು ಉಳುವ, ಸರುವು ಅಡ್ಡವಿರಲು,
ಮುಳ್ಳು ಕಂಟಿ ಚೆಲ್ಲಿ, ಮಾರ್ಗ ಕಟ್ಟಿ,
ಸುಲಿಗೆ ಗೆಯ್ವ ಬಹಳ; ಸೇರನು ಧರ್ಮ ಪಥ, ವಿಶ್ವ

೧೮೮೨ ಮೊದಲು ನೋಡಿ, ನೋಡಿ ತುದಿಗೆ ನೋಡದಿರಲು,
ನೋಟ ತಪ್ಪಿದೊಡನೆ ನಡೆವುದು ಮರೆಗೆ,
ಮರೆಗೆ ಸರಿಯದಿರಲು ಜರಿದು ಕಾಣುತಿಹರು, ವಿಶ್ವ

೧೮೮೩ ಮೊದಲು ನೋಡಿ ನೋಡಿ, ತುದಿಗೆ ನೋಡದಿರಲು,
ನೋಟ ತಪ್ಪಿದೊಡನೆ ತೊಲಗಬೇಡ
ಹೋಗದಿರುವವನನು ಹೀನನಾಗಿ ನೋಳ್ವರು ವಿಶ್ವ

---

೧೮೮೪ ಪರರ ಆಸ್ತಿಯಲ್ಲಿ ಭ್ರಾಂತಿಯಿಲ್ಲದಂಥ,
ಪುರುಷನವನಿಯಲ್ಲಿ ಪುಣ್ಯ ಮೂರ್ತಿ!
ಪರರ ಆಸ್ತಿಯಾಗೆ ಪಾಪ ಚಿಂತೆಯಹುದು, ವಿಶ್ವ

೧೮೮೫ ಭೋಗದಾಶೆಯಿಂದ, ಪರಿಜ್ಞಾನವಿರದೆ,
ದ್ರೋಹ ಬುದ್ಧಿ ತಳೆದು ದೂರುತಿದ್ದು,
ಸಾಹಸ ಪಡುವವನು ಸರ್ವದಾ ಕೆಡುವನು, ವಿಶ್ವ

೧೮೮೬ ಇರುವೆ ಹೋಗುವಂಥ ಇಕ್ಕಟ್ಟಡವಿಯೊಳು,
ದುರ್ಜನನಾವ ತೆರ ದೂರ ನಡೆವ?
ಅಂತಾಗದೆ ದೂರ ನಾಮ ನಿಲ್ಲುವುದೇ? ವಿಶ್ವ

೧೮೮೭ ಬಾಲ ಪ್ರಾಯದೊಳು ಭ್ರಮೆಯನಡಗಿಸದೆ,
ಮೇಲು ಹೊಂದರೆಂದು, ಮುಂದೆ ಮತ್ತೆ,
ಕೀಳು ತಿಳಿದು ಮನಸು ಎಳೆಯದಂತೆ ಬಾಳು, ವಿಶ್ವ

೧೮೮೮ ಅನ್ನದ ಮದದಿಂದ ನಾರಿ ಪುರುಷರೆಲ್ಲ,
ಮುನ್ನ ಉದ್ರಿಕ್ತರು ಕಾಮನಾಟ!
ಅನ್ನ ಹಿಂಗಲಾಗ, ಮದನನೆಲ್ಲಿ ಹೋದ? ವಿಶ್ವ

೧೮೮೯ ಹೊಲೆಯ ಕನ್ನೆಯರಿಗೆ ಚೆಲುವ ರೂಪವಿರಲು,
ಮುಟ್ಟುವನೆ ತ್ರಿಶಂಕು? ಹಿಡಿಯನವನು
ಹೀನ ಕಾರ್ಯ ಗೆಯ್ಯೆ, ಘನನು ಆಶಿಪನೇ? ವಿಶ್ವ

೧೮೯೦ ಪರಧನ ಪಡೆಯಲು ಆಸೆಪಡುತಿಪ್ಪನು,
ಸತ್ಯವಂತನಲ್ಲ, ಕೀಳು ಜಾರ,
ತೇಜ ಹೀನನೆಂತು ಆಗತಿಪ್ಪ ದ್ವಿಜನು? ವಿಶ್ವ

೧೮೯೧ ಎಷ್ಟು ಭಾಗ್ಯವುಂಟೊ, ಅಷ್ಟು ಕಷ್ಟ– ಚಿಂತೆ,
ಚಿಂತೆಯಿಂದ ಮನಸು ಸಪ್ಪೆ ಹೊಲಸು,
ಚಿಂತೆ ಇಲ್ಲದಿಹುದೆ, ಕೆಡದ ಸಂಪದವದು, ವಿಶ್ವ

●●●

# ೧೦ ಕಾಮ ವರ್ಗ

## ಕಾಮ

**ಈಜುವವನು ಆಳ ಎಣಿಸುತಿಹುದು ಸಲ್ಲ.**
**ಸಾವಿಗಿಂತ ಕೀಳು ಜಗದೊಳಿಲ್ಲ.**
**ಕಚ್ಚೆ ಕಳೆವಕಿಂತ ಕೀಳು ಮತ್ತೆ ಇಲ್ಲ.**
**ವಿಶ್ವದಾಭಿರಾಮ ಕೇಳು ವೇಮ.**

●

## ಕಾಮಾಸಕ್ತಿ

ಕಾಮವು ಮಾನವನಲ್ಲಿಯ ಹುಟ್ಟು ಗುಣ ವಯಸ್ಸಿಗೆ ತಕ್ಕಂತೆ ಕೆಲವೊಂದು ಗ್ರಂಥಿ–ಉಪಗ್ರಂಥಿಗಳಲ್ಲಿ ಒಸರುವ ಗ್ರಂಥಿರಸವೇ ಕಾಮೋದ್ರೇಕಕ್ಕೆ ಮೂಲ. ಇದನ್ನು ಇನ್ನಿತರ ಇಂದ್ರಿಯ ವ್ಯಾಪಾರಗಳೊಂದಿಗೆ ನಿಗ್ರಹದಲ್ಲಿರಿಸಬೇಕು. ಬ್ರಹ್ಮ ಭಾವದಿಂದ ಬಾಳಲು ಆತಂಕಪಡಿಸದಂತೆ ಇರಿಸಬೇಕು. ಗೃಹಸ್ಥನು ಏಕಪತ್ನಿ ವ್ರತಸ್ಥನಾಗಿರಬೇಕು. ಯೋಗಿಯು ನೈಷ್ಠಿಕ ಬ್ರಹ್ಮಚಾರಿಯಾಗಿರಬೇಕು.

ನದಿಯ ದಡದಲ್ಲಿ ಗಿಡ ನೆಟ್ಟರೆ ಅದರ ನೆರಳು ನೀರಿನ ಮೇಲೆ ಬೀಳುತ್ತದೆ. ಆ ನೆರಳಲ್ಲಿ ವಿಶ್ರಾಂತಿ ಪಡೆಯಬೇಕೆಂದರೆ ಕೈಗೂಡದು. ಅದೇ ರೀತಿ, ಹೆಣ್ಣು ನೋಡಿ, ಅವಳಲ್ಲಿ ಮನವಿರಿಸಿ ಸೇರಿ ಸಿಕ್ಕು ಬೀಳುವವನ ಬಾಳೂ ಕೆಡುತ್ತದೆ.

ಸ್ತ್ರೀಯ ಮುಖವನ್ನು ನೋಡಿ ತನ್ನ ಮನಸ್ಸನ್ನು ದೃಢಗೊಳಿಸದ ಮಾನವನು ಕೆಡುವುದು ಸಹಜವಾಗಿದೆ. ಏರಿಯ ಮೇಲೆ ಬೆಳೆದ ಗಿಡವು ಗಾಳಿಗೆ ಸದಾ ಅಲುಗುವಂತೆ ನಾರಿಯಲ್ಲಿ ಇಟ್ಟ ಚಿತ್ತವೂ ಅಲುಗುತ್ತದೆ. ಸ್ತ್ರೀಲೋಲನಾಗಿ, ಕೆಲದಿನ ಮೋಜು ಮಾಡಿದರೆ, ಕಾಲಾನಂತರದಲ್ಲಿ ಕೆಡುವುದು ಸಹಜವಾಗಿದೆ.

ಸ್ತ್ರೀಯಳು ಬಂದು ಸೇರಿದರೆ ಆನಂದ ಕೇಳಿಯೇ ಸರಿ. ಸ್ತ್ರೀ ಇರದ ತಾಣವು ಹಾಳು ಸುರಿಯುತ್ತದೆ. ಹೀಗೆ ಪುರುಷ ಸ್ತ್ರೀಯಿಲ್ಲದೆ ಸ್ವತಂತ್ರನಾಗಿ ಸುಖವಾಗಿ ಇರಲಾರದವನಾಗಿ ಕೊರಗುತ್ತಾನೆ. ಆದರೆ, ಕಚ್ಚೆ ಕಳೆದು ಶೀಲ ಗೆಡುವುದು ಮಾತ್ರ ಕೀಳು ಕೆಲಸ, ಸಾವಿಗಿಂತಲೂ ಕೇಡಾದುದು.

ಆದರೆ, ಹುಚ್ಚು ಪೆದ್ದನೇ ಇರಲಿ, ಹುಟ್ಟು ಬಡವನಿರಲಿ, ಕುಷ್ಠ ರೋಗಿಯಿರಲಿ, ಕುಂಟನೇ ಇರಲಿ; ಭಾಮೆಯನ್ನು ನೋಡಿದೊಡನೆ ಕಾಮಾಸಕ್ತಿಯು ಹುಟ್ಟುತ್ತದೆ. ಕಟ್ಟಿಗೆಯ ತೂತಿನಲ್ಲಿ ಕಟ್ಟಿಗೆಯನ್ನು ತಿರುಗಿಸಿದರೂ ಸಹ ಅಗ್ನಿ ಹುಟ್ಟುತ್ತದೆ. ಅಂದ

— — — — — — — — — — — — — — — — — — — — — —

ಮೇಲೆ ಜನನೇಂದ್ರಿಯ ಘರ್ಷಣೆಯಿಂದ ಕಾಮಾಗ್ನಿ ಜನಿಸದೆ? ಆದರೆ ಜಗದೊಳಗಿನ ಜನರು ಯಾರಿಗೂ ತಿಳಿಯದಂತೆ ಕಾಮ ಕ್ರೀಡೆಯಲ್ಲಿ ರಮಿಸಬಯಸುತ್ತಾರೆ. ಆದರೆ ಅದರ ಫಲವು ಬಂದೇ ತೀರುವುದಲ್ಲವೇ?

ನಮಗೆ ವಿದಿತವಿರುವ ಅನೇಕ ಕಾಮ ಕೇಳಿಗಳ ಪ್ರಸಂಗದಲ್ಲಿ ತಂದೆ–ಮಗಳೊಂದಿಗೆ, ತಾಯಿ ಮಗನೊಂದಿಗೆ, ಕಾಮ ಕ್ರೀಡೆಗಿಳಿಯುವ ಪ್ರಸಂಗಗಳಿವೆ. ಹೀಗೆ ಪುತ್ರ ವಾತ್ಸಲ್ಯದ ಪವಿತ್ರ ಸಂಬಂಧಕ್ಕಿಂತ ಕಾಮ ಸಂಬಂಧವೇ ಮೇಲುಗೈ ಪಡೆಯುತ್ತದೆ. ಜಗತ್ತಿನ ಹಲವು ಜನಾಂಗಗಳಲ್ಲಿ ರಾಜ–ಭೋಗಕ್ಕಾಗಿ ತಾಯಿಯನ್ನೇ ಮದುವೆಯಾಗುವ ಸಂಪ್ರದಾಯಗಳಿವೆ. ಆದ್ದರಿಂದ ಕಾಮಕ್ರೀಡೆ ಕುರಿತು ಮೈತುಂಬ ಎಚ್ಚರಬೇಕು.

ಯೌವನದಲ್ಲಿ ಎಲ್ಲವೂ ಅಂದಚೆಂದವಾಗಿರುತ್ತದೆ. ಏಕೆಂದರೆ ಆಗ ಒಳಿತು ಕೆಡುಕಿನ ಅರಿವೇ ಇರದು. ಹೀಗೆ ಯೌವನದ ದೀರ್ಘ ಕಾಲವು ನಶಿಸಿ ಹೋಗುತ್ತದೆ.

ನಮ್ಮ ಚಪಲ ಕಣ್ಣಿಗೆ ಕಾಣಬರುವ ಕಾಮೋದ್ರೇಕದ ಸೊಬಗು–ಸೌಂದರ್ಯಗಳೆಲ್ಲ ಕ್ಷಣಿಕವಾದವುಗಳು. ಅಂದ ಮೇಲೆ, ಈ ಬಾಹ್ಯ ರೂಪಗಳ ಬೆನ್ನು ಹತ್ತುವುದೇಕೆ? ಹೊಲತಿ ಕನ್ನೆಗಿರುವ ರೂಪಿಗೆ ಹರಿಶ್ಚಂದ್ರನು ಮೋಹಗೊಂಡನೇ?

ಸ್ತ್ರೀಯ ಸ್ತನಗಳನ್ನು ಬಾಲ್ಯದಲ್ಲಿ ಚಪ್ಪರಿಸಲಿಲ್ಲವೆ? ಅವುಗಳಿಗಾಗಿ ದೊಡ್ಡವನಾದ ಬಳಿಕ ಕಾಮೋದ್ರಿಕ್ತನಾಗುವುದೇಕೆ?

**೧೮೯೩ ನಾರಿ ನೋಡಿ ತಾನು ಚಿತ್ತವಿರಿಸಿ, ಮತ್ತೆ,**
**ಸೇರಿ ಕೊಳೆವ ನರನ ನಾಶ ಸತ್ಯ,**
**ನದಿಯ ದಡದಿ ನೆಟ್ಟ ಗಿಡದ ಬಾಳಿನಂತೆ** ವಿಶ್ವ

**೧೮೯೪ ಸ್ತ್ರೀಯ ಮುಖವ ನೋಡಿ, ದೃಢವಾಗಿ,**
**ಚಿತ್ತ ಬದಲಿಸದ ಮನುಜ ಕೆಡುವುದು ನಿಜ,**
**ಏರಿಗಿರುವ ಗಿಡವು ಎಂದಿಗು ಅಲುಗದು** ವಿಶ್ವ

**೧೮೯೫ ಸ್ತ್ರೀಯ ಮಾಯೆ ಕೈಗೆ ಸಿಕ್ಕು, ತಾ ಕೆಲ ದಿನ**
**ತಗು ಬಯಸಿದಂತೆ ತಗಲಿಕೊಂಡ,**
**ಲೋಲನಾಗಿ ತುದಿಗೆ ಕಾಲನಿಂದ ಕೆಡುವ** ವಿಶ್ವ

— — — — — — — — — — — — — — — — — — — — — —

೧೮೯೬ ಸ್ತ್ರೀಯು ಬಂದುಗೂಡೆ, ಕೇಳಿಯಾಟವಾಟ,
ಸ್ತ್ರೀಯು ಇರದ ಬೀಡು ಹಾಳು ಗೂಡು,
ಸ್ತ್ರೀಯ ವಶದಿ ಗಂಡು ಗೋಳುಗರೆವ ನೋಡು ವಿಶ್ವ

೧೮೯೭ ಸ್ವಂತ ಮಗನೆ ಇರಲಿ, ಸೊಗಸುಗಾರನಿರಲಿ,
ಸ್ತ್ರೀ ಜಾತಿಯಾಶಿಪುದು ಸೃಷ್ಟಿಯಲ್ಲಿ,
ಕಾಮ ಹೆಚ್ಚು ಅಷ್ಟೆ; ಕುವರ ಹೆಚ್ಚು ಅಲ್ಲ ವಿಶ್ವ

೧೮೯೮ ಕೂಳಿಗು ಎರವಾಗಿ, ಕುಳಿತುಕೊಂಡ ಜನರು,
ತರುಣಿ ಕಂಡು ಮತ್ತೆ ತಗಲಿ ಮೋಹ,
ದೀಪಕಂಡ ಹುಳುವು ದಹಿಸುತಿಪ್ಪ ರೀತಿ ವಿಶ್ವ

೧೮೯೯ ಕಾಂತೆ ಕುಲಜೆಯಿರಲಿ, ಕೀಳು ಕುಲಜೆಯಿರಲಿ,
ಕೇಡಿ ವಿಟನು ಕೂಡುತಿಹ ಭ್ರಮಿಸಿ,
ಕುರುಡು ನಾಯಿ ಮಾಂಸಕೆಳಸಿ ಕಚ್ಚುವಂತೆ ವಿಶ್ವ

೧೯೦೦ ಈಜುವವನು ಆಳ ಎಣಿಸುತಿಹದು ಸಲ್ಲ,
ಸಾವಿಗಿಂತ ಕೀಳು ಜಗದೊಳಿಲ್ಲ,
ಕಚ್ಚೆ ಕಳೆವಕಿಂತ ಕೀಳು ಮತ್ತೆ ಇಲ್ಲ ವಿಶ್ವ

೧೯೦೧ ಹುಚ್ಚು ಪೆದ್ದನೇನು? ಹುಟ್ಟು ಬಡವನೇನು?
ಕುಷ್ಟ ರೋಗಿಯೇನು? ಕುಂಟನೇನು?
ಭಾಮೆ ಕಾಣಲಾಗ, ಕಾಮ ಮುತ್ತುತಿಹುದು ವಿಶ್ವ

೧೯೦೨ ವಿಕೃತ ಮತಿಯೆ ಇರಲಿ, ವೇಷಧಾರಿಯಿರಲಿ,
ರೋಗಿಯಿರಲಿ; ಪರಮ ಯೋಗಿಯಿರಲಿ;
ಸ್ತ್ರೀಯ ಕಂಡ ಒಡನೆ ಚಿತ್ತ ರಂಜಿಸುವುದು ವಿಶ್ವ

೧೯೦೩ ಒಪ್ಪ ಕರಗಿ ಬಂತು ಕನಕಕಿರುವ ಬಣ್ಣ,
ಅಪ್ಪಿ ಅಪ್ಪಿ ಬಂತು, ಸತಿಯ ಪ್ರೀತಿ,
ಮುಪ್ಪು ಅಡರಿ ಹುಟ್ಟುತಿಹುದು ಮೋಹ ಲೋಭ ವಿಶ್ವ

೧೯೦೪ ಪುಡಕಲದಗ್ನಿಯು ಜನಿಪುದು,
ಒಡನೆಯ ಕಟ್ಟಿಗೆ ತೂತೊಳು ಕಟ್ಟಿಗೆ ತಿರುಗಲ್,
ಬಿಡದಲೆ ವನಿತೆಯ ಕೂಟವ,
ಅಡಗಿಸಬೇಕೆನುತಿಪ್ಪರು ಮಹಿಯಲಿ ವೇಮಾ ವಿಶ್ವ

೧೯೦೫ ಒಲವು ತೀರಿದೊಡನೆ, ವನಜಾಕ್ಷಿಯಧರವು,
ನುಗ್ಗಿ ಹಣ್ಣ ಬೀಜ, ಮುಪ್ಪಿ ರಸವು,
ಹುಣಸೆ ಹಣ್ಣು ಗೇರು ರಸ ಸಮಾನವಿಹದು ವಿಶ್ವ

೧೯೦೬ ಅಂಗವೆಲ್ಲ ಸಡಲಿ ಅಂತೆ ಹಲ್ಲು ಹೋಗಿ,
ತನುವು ಮುಪ್ಪಿನಿಂದ ತೀರ ಒಣಗಿ,
ಮುಪ್ಪು ಅಪ್ಪಿದರೂ ಮೋಹ ಬಿಡನು ಭೋಗಿ ವಿಶ್ವ

೧೯೦೭ ಇಂದ್ರಿಯ ಭ್ರಾಂತಿಯಿಂ ಸತ್ತರೆಲ್ಲ ಜನರು,
ಸುಂದರಾಂಗರ ವರ್ಣಿಸುತ, ಕುಂದಿ ಮೋಹ,
ಹೊಂದಿ ಕಷ್ಟಕರ ವಸ್ತುವ, ಹರುಷಿಸುವರು !
ವಿಪುಲ ಗುಣರಾಜ ! ಯೋಗೀಂದ್ರ ವೇಮನಾರ್ಯ !

೧೯೦೮ ಅಮ್ಮ ನಿಲ್ಲದಿರಲು ಅನ್ನಕಾಯ್ತು ಬಾಧೆ,
ಅಪ್ಪನಿಲ್ಲದಿರಲು ಸಾಲ ಬಾಧೆ,
ಅರ್ಧಾಂಗಿಯಿರದ ಬಾಧೆ ಅಷ್ಟಿಷ್ಟು ಅಲ್ಲವು ! ವಿಶ್ವ

೧೯೦೯ ಕಾಂತೆ ಮೇಲೆ ಆಶೆ, ಕನಕನ ಮೇಲಾಶೆ,
ಇಲ್ಲದವನು ಜಗದಿ ಇಲ್ಲದವನು,
ಹೇಳಲೇಕೆ ಸುದ್ದಿ? ಹೊಳೆಯದೆ ಕಂಡೊಡನೆ ವಿಶ್ವ

೧೯೧೦ ನಾರಿಯೊಡನೆ ಬೆರೆತ ನೋಟ ಆಟ ಹೊಲ್ಲ,
ಪಂಚ ಭೂತದೊಡನೆ ಹೆಣಗೆ ಹೊಲ್ಲ,
ಮೂರು ಭಾವಿಯೊಳಗೆ ಮುಳುಗಿ ತೇಲೆ ಹೊಲ್ಲ ವಿಶ್ವ

೧೯೧೧ ಯೌವನದೊಳು ನೋಡೆ, ಎಷ್ಟು ಅರಿವೆ ಇಲ್ಲ,
ಯೌವನವದೆಂದೂ ಎಷ್ಟೊ ಹೆಚ್ಚು,
ಯೌವನದೊಳು ತನಗೆ ಎಲ್ಲ ಅಂದ ಚೆಂದ ! ವಿಶ್ವ

---

೧೯೧೨ ಕಾಂತೆಯಂಗ ಕಂಡು ಕಸಿವಿಸಿಗೊಳುವನು !
ಅಂತರಾಳ ಕಿಲುಬು ಕಾಣಲಾರ,
ಇಂಥ ಮಲವುದಿಸುವ ದೇಹವೇತಕಯ್ಯ ? ವಿಶ್ವ

೧೯೧೩ ಸ್ತ್ರೀಯ ಮಾಯೆ ಕೈಗೆ ಸಿಕ್ಕು ಕೆಲವು ಕಾಲ,
ಗತಿಸಿದಾಗ ಮಮತೆ ಕೊನರಿತಷ್ಟೆ
'ತಗಲು' ಬಿಡುವ ಅವನು, ತಾನೆ ಆದಿ ಮೂಲ ವಿಶ್ವ

೧೯೧೪ ವಿಟನು ಹೇಸಿಕೊಂಡು ವನಿತೆ ಬಿಟ್ಟ ಬಳಿಕ,
ಎಲ್ಲಿ ಇಹುದು ಲಜ್ಜೆ, ಎಣಿಸಲೇಕೆ?
ಉಂಡು ಒಗೆದ ಎಲೆಯು ಕಂಡಲ್ಲಿ ಉರುಳದೆ? ವಿಶ್ವ

೧೯೧೫ ಜಾಣರಾದವರು ಚಪಲ ಕಣ್ಣಿಗೆ ಒಲಿದು,
ಕಾಮವರಿಸಿ ಕಂಡು ಭ್ರಮಿಸಲೇಕೆ?
ಬಾಹ್ಯ ರೂಪವೆಲ್ಲ ಪರಕಿಸುವುದು ಏಕೆ? ವಿಶ್ವ

೧೯೧೬ ವಿಟನು ಹಿಡಿದು ಹೇಸಿ ಬಿಟ್ಟಿರುವ ಗಣಿಕೆಗೆ,
ಬಡವನೋರ್ವ ಸೇರ್ವ ಪ್ರೀತಿಯಿಂದ,
ನೆಗೆದ ಎಂಜಲೆಲೆಲಯ ನಾಯಿ ನೆಕ್ಕದೇನು? ವಿಶ್ವ

೧೯೧೭ ಹೊಲತಿ ಕನ್ನೆಗೊಳ್ಳೆ ರೂಪು ಇದ್ದರೇನು?
ತ್ರಿಶಂಕು ಸುತ ಹರಿಶ್ಚಂದ್ರ ಮೆಚ್ಚ?
ಹೀನ ಕಾರ್ಯ ಮಾಡೆ, ಘನನಿಗಾಸೆಯೇಕೆ? ವಿಶ್ವ

೧೯೧೮ ಇಹ ಪರಗಳಲ್ಲಿ ಇನಿಯಳ ಮೇಲಾಸೆ,
ಸಹಜ ವೃತ್ತಿ ಉದಿಸಿ ಸಾಯುತಿಹರು,
ರಹಿತ ಅಮರ ಭಕ್ತಿ ರಾರಾಜಿಸರಲ್ಲ ! ವಿಶ್ವ

೧೯೧೯ ಯೌವನದಲಿ ನೋಡೆ, ಅದರ ಅರಿವೆ ಇರದು,
ಯೌವನವದು ಎಷ್ಟು ಅಧಿಕವಹುದು!
ಯೌವನ ತನಗೆ ಸಿಗದೆ, ಮುಳುಗಿಸುತ್ತಿರುವುದು ವಿಶ್ವ

೧೯೨೦ ಹುಚ್ಚು ಹಿಡಿದಿರುವವ ಹೆಚ್ಚು ವಿನಯಶಾಲಿ,
ಮೂಳ ರಂಡೆ ಮುಸುಕು ಮೇಲೆ ಇಹುದು,
ಕೆಟ್ಟು ಹೋದ ಮೂಳಗೆಷ್ಟು ಆಚಾರವು? ವಿಶ್ವ

೧೯೨೧ ಧರೆ ಹುಟ್ಟಿದ ರೋಗಿಯಾಗಿ,
ಪರಮನಿಚ್ಚೆ ತೊರೆದು ಹೆಣ್ಣಿನ ಆಸೆಗೆ ತಾ,
ತಿರುಗುತ ಆಶಿಸಿ ಧನವಂ
ಮರಳಿ ಗಳಿಸುವನು ಕೊನೆಯಲಿ ಮರಣವ ವೇಮಾ ವಿಶ್ವ

೧೯೨೨ ಯೋನಿ ಬಂಧುವಾಗಿಯುಂಟು, ಜನ್ಮ ಹೊಂದಿ,
ಹಾನಿ ಹೆಚ್ಚು ಆಗಿ, ಹೀನನಾದ,
ಮತ್ತೆ ಆ ಮಹಿಮೆಯ ಮೊದಲ-ತುದಿ ತಿಳಿಯದು ವಿಶ್ವ

೧೯೨೩ ಸ್ತ್ರೀ ಮೇಳಕೆ ಭಾರಿ ಧನವ ಸುರಿವ ಜನರು,
ಪುರುಷ ಮೇಳಕಿನಿತು ಕೈ ನೀಡರು,
ಹುಣ್ಣ ಬಯಸುವ ನೊಣ ಹೂವಿಗೆ ಹಾರುವುದೆ? ವಿಶ್ವ

೧೯೨೪ ಮುಖವ ನೋಡಿದೊಡನೆ ಮೋಹ ಘನವಾಯಿತು,
ಧನವ ನೋಡಿದೊಡನೆ ತಗಲಿ ಮನಸು,
ಅಡಿಗೆ ಬೀಳಲಾಗ ಅಂಗಾಂಗ ಮುರಿವವು ವಿಶ್ವ

೧೯೨೫ ಬಾಲ್ಯದಲಿ ನೀನು ಬಹಳ ವಿಧದಿ ಹಿಡಿದು,
ಸವಿದು ಚಪ್ಪರಿಸಿದ ಸ್ತನಕ್ಕಾಗಿ,
ಮೋಹವಿನಿತು ಏಕೆ? ಮೂಢಾತ್ಮ! ತಿಳಿದುಕೊ ವಿಶ್ವ

೧೯೨೬ ಬಿಡದಿರೆ ಮಾಯಾ ತಮವನು,
ಕಡೆಗೆ ಹಸನದಿಹ, ಜನನಿಸೆ ಕಡು ವಿಚಿತ್ರವಿದ್ಯೆ;
ಪೊಡುವಿಲಿ ಹುಟ್ಟುತ, ಸಾಯುತ,
ದಡ ಸೇರುವುದನು ಕಾಣರು, ದುರ್ಜನ, ವೇಮಾ

೧೯೨೭ ದಂಡಿ ಕಲೆತಾಲಿಸಿ ಬಿಡಲ್,
ಕಂಡು ಕಲೆತು ಕಾಂತೆಗೂಡಿ, ಕಲೆಯುತ ತೊರೆಯಲ್,
ಕಂಡು ಕಲೆತು ಪ್ರೇಮ ಹೋಯಿತು;
ಕಂಡರಿತ ಪ್ರೇಮವಾವುದು? ಕಾಣಾ ವೇಮಾ,

೧೯೨೮ ಪಟ್ಟಣವಾಸಿಯಿಹ ಪತಿಗೆ ಮತ್ತೆ ಸತಿಗೆ
ಮೋಹ ಹೆಚ್ಚು; ಅದರ ಊಹೆ ಹೆಚ್ಚು;
ಮುಕ್ತಿಮಾರ್ಗ ಪಡೆವ, ಯುಕ್ತಿ ತಿಳಿಯರವರು ವಿಶ್ವ

೨೯೨೮ ಕಾಮುಕರಾದವರು, ಧನಕಾಂಕ್ಷೆ ಹೊಂದಿರುವರು,
ಭುವಿ ಪಾಲನೆ ಗೆಯ್ಯದವರು ಮೂರ್ಖರೈ;
ಮತ್ತೆ ಮುಕ್ತಿ ಕಾಣವದೆಷ್ಟು ಜನುಮದೊಳ
ವೇಮನ ವಾಕ್ಯ ಒಂದನು ಆಲಿಸೆ ದೋಷದ ದಾರಿ ಹಿಡಿದು ಸಾಗರೈ
ವಿಶ್ವ

೧೯೩೦ ಎಂಥವನಿಗಾದರು, ಅಂಟುತಿಹುದು ಮೋಹ,
ಹುಟ್ಟಿದ್ದೆಲ್ಲ ಮೋಹ, ಹೂಳಿ, ತುಳಿದು,
ಗಟ್ಟಿಯಾಗಿ ನೋಡೆ, ಗುರುತಿಸುವ ಬ್ರಹ್ಮ ವಿಶ್ವ

೧೯೩೧ ಪಟ್ಟಣದೊಳಿರುವ ಪ್ರೌಢಾಂಗನೆ ಕುಲವು,
ಬಡ ಗ್ರಾಮದಲ್ಲಿ ಬಾಳುತಿಹರೆ?
ಸುಖಿಗೆ ಪರದ ದಾರಿ ಶೋಭಿಸಲಾರದಲ್ಲ ! ವಿಶ್ವ

೧೯೩೨ ವೇಷ ಮುಖದ ದಕ್ಷ ಮಿಕ್ಕುಳಿದವರಿಗಿಂತ,
ಶಿವನ ದೂಷಿಸಲೈ ಶೂನ್ಯ ಲಜ್ಜೆ,
ಕಾಮುಕರನು ಕಂಡು ಕಾಮುಕತೆ ಕಲಿಯರೆ? ವಿಶ್ವ

●

## ಸಂಸಾರ ಕಲಹ

'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಎಂದು ಕನ್ನಡ ಜಾನಪದ ಕವಿತೆ ಉಲಿಯುತ್ತಿದೆ. ವೇಮನರು ತಮ್ಮ ಹೆಚ್ಚು ವಾಸ್ತವಿಕ ದೃಷ್ಟಿಕೋನದಿಂದ ಸಂಸಾರವನ್ನು ವಿಮರ್ಶಿಸಿದ್ದಾರೆ. ಕೆರವಿನೊಳಗಿನ ಕಲ್ಲು; ಕಿವಿಯ ಕಡಿಜೀರಿಗೆ, ಕಣ್ಣೊಳಗಿನ ಕಸಿರು, ಕಾಲ ಮುಳ್ಳು, ಗೃಹದೊಳಗಿನ ಕಲಹ ಎಷ್ಟೆಂದು ಲೆಕ್ಕ ಹಾಕಬಹುದೇ? ಎಂದಿದ್ದಾರೆ ಅವರು.

ಮಾಡಿಕೊಂಡ ಹೆಂಡತಿಯೊಡನೆ ಕೂಡಿಕೊಂಡು ಬಾಳುವೆ ಸಾಗಿಸಬೇಕು. ಅವಳನ್ನು ತೊರೆದರೆ ಕಾಮನ ಬಿಲ್ಲು ನಾಟಿ, ಕಾಮಾಸಕ್ತಿ ಹೆಚ್ಚಿ, ಭೂಗಗನ ಮಧ್ಯೆ ಮಿಡುಕಬೇಕಾಗುತ್ತದೆ.

ಹೆಂಡತಿ ಸಾನುಕೂಲಳಾಗಿದ್ದರೆ ಒಳಿತು. ಅವಳೊಂದು ವೇಳೆ ಮಾತು ಕೇಳದವಳಾಗಿದ್ದರೆ ಹೆಡೆ ತೆರೆದ ಸರ್ಪ ಗೃಹಕ್ಕೆ ಬಡಿದಂತೆ. ತನಗೆ ಅನುಕೂಲವಾಗದವಳು ರಾಕ್ಷಸಿಯಂತಾಗುತ್ತಾಳೆ.

ಇರುವಷ್ಟು ದಿನ ಚೆನ್ನಾಗಿರಬೇಕು. ಉಭಯತರಲ್ಲಿ ಮನಸ್ತಾಪವಾಗಿ ಒಂದುಗೂಡದಷ್ಟು ಸಹಬಾಳುವೆ ಸಹ್ಯವಾಗದಾಗ ತೊರೆಯಲೂ ಸಿದ್ಧವಿರಬೇಕು. ಸತಿಯು ಸಹ ಸಿಡುಕ ಗಂಡನ ಜೊತೆಗ ವಿಷಮ ಸಂಸಾರ ನಡೆಸುವುದು ಲೇಸಲ್ಲ. ಪರಸ್ಪರ ತಿಳಿವಳಿಕೆ ಮುಖ್ಯ.

ಕೂಲಿ ಕುಂಬಳಿ ಮಾಡಿ ಹಣ ತಂದರೆ ಲೇಸು, ಇಲ್ಲವಾದರೆ ಸತಿಯು ನಿಂದಿಸುವಳು. ಯಾರನ್ನೂ ಒತ್ತಾಯದಿಂದ ಮದುವೆಗೆ ಒಪ್ಪಿಸಕೂಡದು. ಹಾಗೆ ಮಾಡಿದರೆ ಕೋಳಿ ಪಂದ್ಯ ನೋಡಿ ಮೋಜು ಮಾಡಿದಂತೆ, ಲಗ್ನ ಮಾಡಿದವರಿಗೆ ಆಗಬಹುದಷ್ಟೇ.

ಗಂಡುಬೀರಿಯಾದವಳು ಪತಿಯನ್ನು ಬಯ್ಯುತ್ತ ಬೀದಿಗೋಡುತ್ತಾಳೆ. ಮತ್ತೆ ಪ್ರಸಂಗ ನೋಡಿ ಪತಿಯ ತಲೆಗೆ ಮದ್ದು ಸವರುತ್ತಾಳೆ. ಇಂಥ ಸತಿಯೊಂದಿಗೆ ಹೇಗೆ ಬಾಳುವೆ ಮಾಡುವುದು? ಒಳ್ಳೆಯ ಮಡದಿ ಗಂಡನ ಪ್ರೀತಿಗಳಿಸುತ್ತಾಳೆ. ವಿಭುವಿನ ಶ್ರೇಷ್ಠ ಗುಣವನ್ನು ವೇಶ್ಯೆಯು ಅರಿಯಬಹುದೇ?

**೧೯೩೩ ಗೋಸುಂಬೆ 'ಪಿಚ್ಚಿ' ಕುಸುಮ ಕಸಗಳನು**
**ಸೇರಿಸಿ ಅರೆದು, ಮಡದಿ ಚೆಲುವೆಯಾಗಿ,**
**ವಶ್ಯಗೊಳಿಸಿ ವರಿಸಿ ಹಿಡಿಯುತಿಹಳು,**
**ರೋಗವಂಟಿ ಸಾವುದು ರೂಢಿ ವೇಮ**

**೧೯೩೪ ಕೆರವಿನೊಳಗೆ ಕಲ್ಲು; ಕಿವಿಯೊಳಗಿನ ಜಿರಲೆ,**
**ಕಣ್ಣೊಳಗಿನ ಕಸಿರು, ಕಾಲ ಮುಳ್ಳು,**
**ಗೃಹದ ಕಲಹವೆಷ್ಟು ಗಣನೆ ಗೈಯಬಹುದೆ? ವಿಶ್ವ**

**೧೯೩೫ ಮದನ ಬಿಲ್ಲಿನಂಬು ಬಡಿದು ಘಾಸಿಗೊಂಡು,**
**ಪೃಥ್ವಿಯಾಗಸ ಮಧ್ಯೆ ಮಿಡುಕಬಹುದೇ?**
**ಮದುವೆ ಹೆಂಡತಿಯನು ಬಿಟ್ಟು ಇರುವುದೆಂತು? ವಿಶ್ವ**

**೧೯೩೬ ಲಗ್ನವಾಗಿ ತನ್ನ ಲೋಕದೊಳಗೆ ಉಂಟು,**
**ದಾರ ಕಟ್ಟಿ ಅಂತೆ ದೋಷ ಕಂಡು,**
**ನಾರಿಯ ಅಡಿಯಲ್ಲಿ ನಡುಗುವರು ವಿಶ್ವ**

**೧೯೩೭ ಮಾತು ಕೇಳದ ಸತಿ, ಮನೆಯವನಿಗೆ ಮೃತ್ಯು,**
**ಹೆಡೆಯ ತೆರೆದ ಸರ್ಪ ಬಡಿದ ಗೃಹವು,**
**ತನಗೆ ಆಗದವಳು, ಇರುವುದೇಕಯ್ಯೆ; ವಿಶ್ವ**

೧೯೩೮ ನಾರಿ ನಾಥನ ಮಾತಿಗಡ್ಡ ನುಡಿಯುತಿರೆ,
ಜಾರಿನಿಯಲ್ಲ; ಬರೆದ ಹಣೆಯ ಬರಹ !
ಮಡದಿ ಸಂಗಕ್ಕಿಂತ ಅಡವಿ ವಾಸ ಲೇಸು ವಿಶ್ವ

೧೦೩೯ ವಿಕೃತ ಮತಿಗೆ ಏಕೆ, ವೇದ ಶಾಸ್ತ್ರಂಗಳು?
ಮುದ್ದುಗುವರಿಗೇಕೆ, ಮುದುಕ ಗಂಡ?
ಸಿಡುಕ ಗಂಡನ ಮನೆ, ಸಂಸಾರವೇತಕೆ? ವಿಶ್ವ

೧೦೪೦ ಎಷ್ಟು ಬೈದೊಡೇನು? ಹುಟ್ಟು ಗುಣವಳಿಯದು;
ನೇರ ಮಾಡಬಹುದೆ, ನಾಯಿ ಬಾಲ?
ಕೆಟ್ಟ ನಾರಿ–ಪತಿಗೆ ಮಾರುವ ಬುಟ್ಟಿ ಗತಿ! ವಿಶ್ವ

೧೦೪೧ ಕೂಲಿ ಕುಂಬಳಿ ಮಾಡಿ ಗುಲಾಮನಾಗಿ ದುಡಿದು,
ಮಡದಿಗೀಯೆ ಗಳಿಕೆ, ಮೆಚ್ಚುತಿಹಳು,
ಅಲ್ಲದಂಥ ಪತಿಗೆ ಸಲ್ಲುತಿಹದು ನಿಂದೆ ವಿಶ್ವ

೧೦೪೨ ಮಾತಿಗಳುವ ಹೆಣ್ಣು ಗಂಡಗೆ ಯಮ ದೂತೆ,
ದಾರಿ ನೋಡಿ ವಿಟನ, ತಿಳಿದು ದುಃಖ,
ಅಂಥ ಹೆಣ್ಣು ತೊರೆದು ಅಡವಿ ವಾಸ ಮೇಲು ವಿಶ್ವ

೧೦೪೩ ಒಪ್ಪಿ ಕೊಳದ ಮದುವೆ ಒತ್ತಾಯಿಸೆ ಸಲ್ಲ;
ಕೋಳಿ ಪಂದ್ಯ ಕಾಣು, ಕೇಡು ನಡೆಸೆ,
ಹೊಡೆದು ಹೊಡೆದು ಮತ್ತೆ ಹೊಲ್ಲಿ ಬಯ್ಯುತಿಹುದು ವಿಶ್ವ

೧೯೪೪ ವಾದ ನಿಂದೆ; ಗಂಡನೇನು ಮಿಂಡನೇನು?
ಕೂಡಬಾರದೆನಲು ಕೇಡಿಯಾಕೆ,
ಗಡಸುಗಾರ್ತಿ ಅರಿಯೆ, ಒಗೆದ ಕವಣೆ ಗಲ್ಲು ! ವಿಶ್ವ

೧೯೪೫ ಬೀದಿಗೋಡಿ ಬಯ್ಯ–ಬೇಡನೆನಲು ಮತ್ತೆ
ಪತಿಯನೆತ್ತಿ ಬಡಿದು ಹಚ್ಚೆ ಮದ್ದು,
ಇಂಥ ಸತಿಯ ಜೊತೆಗೆ ಎಂತು ಬಾಳಬಹುದು? ವಿಶ್ವ

೧೯೪೬ ಹದವರಿಯುವ ಸತಿಯು ಅನುವೊಲಿವನರಿವಳ್,
ಮುದವ ಗೂಡಿ, ಪತಿಯ ಮೋಹವರಿವಳು,
ವಿಭುವಿನ ಶ್ರೇಷ್ಠ ಗುಣ ವೇಶ್ಯೆ ತಾನರಿವಳೇ? ವಿಶ್ವ

೧೯೪೭ ಎನಿತೊ ಗುಣಂಗಳನು ಎಷ್ಟೊ ಹೇಳೆ ಬಿಡಳು,
ನೇರ ಮಾಡಬಹುದೆ ನಾಯ ಬಾಲ?
ಗಂಡು ಬೀರಿ ಪತಿಯ ಮಾರುವಳು ಬುಟ್ಟಿಯಲಿ ವಿಶ್ವ

೧೯೪೮ ತಾಯಿ–ತಂದೆಯೊಡನೆ ತಂಟೆ ಗೆಯ್ಯೆ ಕೇಡು,
ಪರರ ಭಾಮೆ ಕೈಯ ಪಿಡಿಯೆ ಕೇಡು,
ದೊಡ್ಡ ಜನರ ನಿಂದೆ, ದೊಡ್ಡದಾದ ಕೇಡು ವಿಶ್ವ

೧೯೪೯ ರೂಪು ಗೇಡಿ ವನಿತೆ ರೂಢಿಯ ಪತಿವ್ರತೆ,
ಸೊಬಗು ಇಲ್ಲದವನು ಸಮರ ಬಂಟ,
ತಿಳಿಯಬಹುದು ಎಂತು, ದೇವರ ಬಂಟರನು? ವಿಶ್ವ

೧೯೫೦ ಜಿಹ್ವೆ ರುಚಿಯ ಕೋರ್ವ ಜೀವಿಸುತ ಇರುವನಕ;
ಸತಿಯು, ಪತಿಯು ಕೋರ್ವರು ಸುತರ, ಧನವ;
ಅಗ್ನಿಹೋತ್ರಿ ನೋಡು ಅಖಿಲವ ಕೋರುವನು ವಿಶ್ವ

೧೯೫೧ ಹಿಡಿತಂದ ಕೋತಿಗೆ ಹೊಸ ಬಟ್ಟೆಯುಡಿಸಲು,
ಅಡವಿ ಕೋತಿ ಕುಲವೆ ಅದಕೆ ಶರಣು,
ನೀತಿ ಹೀನರ ಬಳಿ ನಿರ್ಭಾಗ್ಯನಿಹ ಪರಿ ವಿಶ್ವ

೧೯೫೨ ಸತಿಯ ಮಾಯೆ ತಿಳಿದು, ಸೈರಿಸಲಾರದಾ
ಮಹಾ ಹೊಟ್ಟೆ ಗಣಪ ಮದುವೆ ಮರೆತ,
ಮತ್ತೆ, ಹುಟ್ಟಿದೊಡನೆ ಚಡ್ಡಿ ತೊಟ್ಟ ಹನುಮ ವಿಶ್ವ

೧೯೫೩ ಸತಿಯ ಕಂಡು ಕಂಡು, ಸೌಖ್ಯಕೋರುತಿಹರು,
ಗತಿಯ ಕಾಣಲಾರ; ಕರ್ಮ ಜೀವಿ !
ಗತಿಗಳ ಸತಿಯಿಂದ ಕಾಣಲಾರರಯ್ಯ ವಿಶ್ವ

೧೯೫೪ ತ್ವಚೆಯು ದೇಹದಿಂದ ತೊಲಗದಿರುವ ತನಕ,
ಗಂಡ ಹೆಂಡಿರೊಲುಮೆ ಕುದುರುತಿಹುದು,
ಘಟವ ಬಿಡಲು ಜೀವಿ, ಗಂಟು ಬಿಚ್ಚುತಿಹುದು ವಿಶ್ವ

೧೯೫೫ ನಾರಿ ಕಂಡು ನರನು ಸೌಖ್ಯ ತೋರುತಿಹನು
ದಾರಿ ಕಾಣಲಾರ; ನಿಜ ಕರ್ಮದಿ,
ನಾರಿ ಸೇರಿ ದಾರಿಗಾಣದಾದನಯ್ಯ ! ವಿಶ್ವ

೧೯೫೬ ಇದ್ದರೂ, ಸುಖಲೋಲ ! ಇರುವ ಕೊಂಚ ಕಾಲ,
ಇದ್ದು, ಇದ್ದು, ಇದ್ದು ಇಲ್ಲದಾಗ,
ಇರಲು ಭೀತಿಗೊಂಡು, ಮನೆಗಳ್ಳರ ಹಿಡಿದು,
ಚೆಂಡಾಡುತ ಕಾಪು ಸೇರು ವೇಮ

೧೯೫೭ ವ್ಯಥೆಯು ತೀರಿದವನು, ವೇದಾಂತ ವೇದ್ಯನು,
ರತಿಯನಾಳುವವನು ರಾವಣನೆನಿಪ,
ಸತಿಯನಾಳುವವನು ಸಂಸಾರಿ ಯೋಗಿಯು ವಿಶ್ವ

●

## ದಾಂಪತ್ಯದಲ್ಲಿ ವಿರಸ

ಗಂಡ ಹೆಂಡಿರಲ್ಲಿ ಮನಸ್ತಾಪವಾಗುವುದಕ್ಕೆ ಅನೇಕ ಕಾರಣಗಳುಂಟು. ಜಾರ ಪತಿಯಾಗಿ ತಪ್ಪನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ತನ್ನ ಸಹಜ ಗುಣವನ್ನು ಬಿಡುವುದಿಲ್ಲ. ನಾಯಿಗೆ ಹೊಟ್ಟೆ ತುಂಬ ತಿನ್ನಲಿಕ್ಕಿದ್ದರೂ ಅದು ಹೇಸಿಗೆಗೆ ಎಳಸುವುದಲ್ಲವೇ ?

ನಾರಿಯು ಕಾಮಲೀಲೆಯಲ್ಲಿ ವಶವಾಗುವ ವರೆಗೆ ಮಾತ್ರ ವೈರವಿರುತ್ತದೆ. ಕಾರಣ, ಅವಳನ್ನು ವಶಪಡಿಸಿಕೊಳ್ಳುವ ತನಕ ತಾಳ್ಮೆಯಿರಲಿ, ಅವಸರಪಟ್ಟರೆ ಕಾರ್ಯದಲ್ಲಿ ಯಶವನ್ನು ಕೆಡಿಸಿಕೊಳ್ಳಬೇಕಾಗುತ್ತದೆ.

ಮದುವೆ ಮಾಡಿಕೊಂಡರೆ ಹೊಣೆಗಾರಿಕೆ ತೀರಲಿಲ್ಲ. ಹೆಣ್ಣಿನ ಚಿತ್ತವು ಚಂಚಲ. ಅವಳನ್ನು ಚೆನ್ನಾಗಿ ಪಾಲಿಸಬೇಕು. ಇಲ್ಲವಾದರೆ ಬಳ್ಳಿಯು ಬೇಲಿ ದಾಟಿ ಹಬ್ಬುವಂತೆ ಹೆಣ್ಣು ಹೊರಬೀಸಿಗೆ ಇಳಿಯಬಹುದು.

ಹೆಣ್ಣಿನ ಹರೆಯದ ಉಬ್ಬರ, ಹಿರಿಯ ಸೊಬಗೆಲ್ಲ ಗಂಡಿನ ಕೃಪೆಯಿದ್ದರೆ ಮಾತ್ರ ಸಾರ್ಥಕ. ಇಲ್ಲವಾದರೆ ವ್ಯರ್ಥವಷ್ಟೇ. ದೇವರ ಕರುಣೆಯೊಂದಿಲ್ಲದಿದ್ದರೆ, ಹೆಚ್ಚಿನ ಜಾಣತನವು ವ್ಯರ್ಥವಾದಂತೆ.

ನಾರಿ ಗಂಡುಬೀರಿಯಾದರೆ ಹಾದಿಗುಂಟ ಪತಿಯನ್ನು ನಿಂದಿಸುತ್ತಾಳೆ. ಮೇಲೆ ತೋರಿಕೆಗೆ ಮುಸುಕು ಹಾಕುತ್ತಾಳೆ. ಇಂಥವಳಿಂದ ಮರ್ಯಾದೆಯು ಕಾಸಿಗೆ ಪಂಥೇರಾಗುತ್ತದೆ.

ತಾಯಿಯು ದೋಷಪೂರಿತಳಿದ್ದರೆ, ಆ ಕುರಿತು ಚಿಂತೆ ಮಾಡುವುದೊಂದೇ ಮಾರ್ಗವಾಗುತ್ತದೆ. ಏಕೆಂದರೆ ತಾಯಿಯನ್ನು ತೊರೆಯಲು ಬಾರದು. ಆದರೆ ಹೆಂಡತಿಯು ದೋಷಪೂರ್ಣಳಾದರೆ, ಅವಳನ್ನು ಬಿಡಬಹುದಾಗಿದೆ.

ಪತಿಗೆ ಎದುರು ನುಡಿಯುವವಳು ನಾಯಿಯಂತೆ. ಆದರೆ, ಎರಡನೇ ಪತ್ನಿಗೆ ಹೋಗುವವನು ಗೂಳಿಯಂತೆ. ಹಂದಿ ಹಂದಿ ಕೂಡಿ ಸಂಸಾರದ ಕೆಸರಲ್ಲಿ ಬೀಳುತ್ತವೆ.

ಪ್ರಸ್ತುತ ಭೋಗಸುಖ ಪಡದೆ, ಮನಸಿನಲ್ಲಿಯೇ ಮಲ್ಲಿಗೆ ತೋಟ ಮಾಡಿ, ಬಾಲೆಯನ್ನು ಕೂಡುವೆನೆಂದು ಬಗೆದರೆ ಕಾಲವು ನಿಲ್ಲುವುದಿಲ್ಲ. ತನ್ನ ಭಾವದಲ್ಲಿ ಪತಿಯನ್ನು ಪರಮಾತ್ಮನೆಂದು ಗ್ರಹಿಸುವ ಸತಿಯು ಪರಮ ಗತಿ ಹೊಂದುವಳು. ಆದರೆ ಪತಿಯನ್ನು ದೂರುವಂಥ ಪತ್ನಿಗೆ ದುರ್ಗತಿಯು ಉಂಟಾಗುವುದು.

**೧೯೫೮ ಪತಿಯ ತಪ್ಪು ಕಂಡು, ಮನದೊಳಿಟ್ಟುಕೊಂಡು,**
**ಸಹಜ ಗುಣವ ಬಿಡಳು ; ಜಾರ ಹೆಣ್ಣು,**
**ಹಿಟ್ಟು ತಿಂದ ನಾಯಿ ಹೇಸಿಗೆಗಾಶಿಸದೆ ?** ವಿಶ್ವ

**೧೯೫೯ ವಶವಾಗದ ನಾರಿ ವೈರವೆಷ್ಟು ನುಡಿಯೆ ?**
**ಯಶವ ಕೆಡಿಸಲನುವು ನೀಡಬೇಡ,**
**ಕೊಸರಿ ಕೊಳುವುದೆಲ್ಲ ಆಸೆ ಹಿಂಗುವ ತನಕ,** ವಿಶ್ವ

**೧೯೬೦ ಹಿಡಿದು ಕೈಯನೊಪ್ಪಿ, ಪಾಲಿಸದೆ ಇದ್ದರೆ,**
**ಬೇಲಿ ದಾಟಿ ಬಳ್ಳಿ ಪೋಗುತಿಹುದು,**
**ಅಂಗನೆಯರ ಚಿತ್ತ ಆ ರೀತಿ ಇರುವುದು,** ವಿಶ್ವ

**೧೯೬೧ ಹೆಣ್ಣಿನ ಹಿರಿ ಸೊಬಗು ಹರೆಯದುಬ್ಬರವೆಲ್ಲ,**
**ವಿಭುವಿನ ಕೃಪೆಯಿರದೆ ವ್ಯರ್ಥವಾಯ್ತು,**
**ನಿನ್ನ ಕರುಣೆಯಿರದೆ ಮಿನ್ನ ಜಾಣ್ಮೆ ವ್ಯರ್ಥ,** ವಿಶ್ವ

**೧೯೬೨ ಹಾದಿಗುಂಟ ಹೊಲಸು ನಿಂದೆ ಬೇಡವೆನಲು,**
**ಮೊದಲು ಪತಿಯ ನಿಂದೆ ; ಮುಸುಕು ಬೇರೆ !**
**ಗಂಡು ಬೀರಿಯ ಗಂಡ ಕಾಸಿಗೆ ಪಂಥೇರು,** ವಿಶ್ವ

೧೯೬೩ ಮಾನ ಧನವ ಬಿಡದೆ, ಮತ್ತೆ ಪುಣ್ಯವಂತೆ,
ವನಿತೆ ಪತಿ ಪೂಜಿಪ ಭಕ್ತಿವಂತೆ,
ತನ್ನೊಳಗೆ ಮೆಚ್ಚುವ ; ಅವಳೊಳ ಗುಣವರಿದು, ವಿಶ್ವ

೧೯೬೪ ಕಾಸು ಕಂಡು ಪತಿಯ ಕಾಮಿಸಿ ಕಾಣುವಳು,
ತ್ರಾಸು ತೊಂದರೆಯಿರೆ, ಕಾಸು ತೀರೆ,
ಅಸುವಿರುವವ ಮೃತ್ಯು ವಶವಾದ ರೀತಿ ! ವಿಶ್ವ

೧೯೬೫ ಹೊರಬೀಸಿನಾಕೆ 'ಪೀರುತಿ'
ದೊರೆಯದು, ದೊರೆತೊಡದೆ ಮತ್ತೆ ಕಡೆಗಾಣಿಸದೈ,
ನರರತಿ ನಡೆಯುವ ಪಥದಲಿ
ಸ್ಫುರಿಸದು ಕಸ, ಸ್ಫುರಿಸಿದೊಡನೆ ಹೋಗದು ವೇಮಾ,

೧೯೬೬ ಪೂರ್ವ ಗೆಯ್ದ ವೃತ್ತಿ ಪೂರ್ತಿಯಾಗಿ ಬಿಟ್ಟು,
ಹೊಸತು ವೃತ್ತಿ ಹಿಡಿಯೆ, ಹಸಿದಿಹ ಕರು,
ಹಡೆದ ತಾಯಿ ತೊರೆದು ಕೊಡುವ ಕಷ್ಟದಂತೆ,
ಬೇರೆ ಕಾಂತೆಯರ ಪೋಷಿಪುದಂತೆ ವೇಮ,

೧೯೬೭ ತನ್ನ ಜನನಿ ಲೋಪವರಿತು,
ಮನುಜನು ಚಿಂತಿಸುವ ಸತತ ಮಾನಸದೊಳಗೆ,
ತನ್ನ ಸತಿಯ ಲೋಪವರಿಯೆ,
ಘನನಾದರೂ ಆತ ಬಿಡುವನಲ್ಲವೆ ? ವೇಮಾ,

೧೯೬೮ ಪತಿಗೆ ಎದುರು ನುಡಿವ ಪತ್ನಿ ತಾನೆ ಶುನಕ,
ದ್ವಿತೀಯ ಸತಿಗೆ ಗೂಳಿ, ತಾನೆ ಪತಿಯು,
ಹಂದಿ ಹಂದಿಗೂಡಿ ಹೋಗಿ ಕೆಸರಲಿ ಪತಿತ, ವಿಶ್ವ

೧೯೬೯ ಮನಸಿನಲ್ಲಿ ಒಳ್ಳೆ ಮಲ್ಲಿಗೆ ಹೂ ಮಂಟಪ !
ಭಾವಿ ತೋಟ ಮಾಡಿ, ಬಾಲೆ ಕೂಡಿ,
ಭೋಗಿಸುವೆನೆನ್ನಲು, ಬರಿದೆ ಕಾಲ ಹೋಯ್ತು, ವಿಶ್ವ

೧೯೭೦ ಪತಿಯು ಭಾವದಲ್ಲಿ ಪರಮಾತ್ಮನೆಂದೆಣಿಪ,
ಪತ್ನಿಗಿರುವ ಗತಿಯು ಪರಮವೆಂದು,
ಪತಿಯ ದೂರುವಂಥ ಪತ್ನಿಗೆ ದುರ್ಗತಿಯು, ವಿಶ್ವ

೧೯೭೧ ಗಾರ್ದಭ ಮೈತುಂಬ ಗಂಧ ಬಳಿಯಲೇನು ?
ಅದರ ಪರಿವೆಯಿಲ್ಲ ಒದೆವುದೊಂದೆ,
ಇದುವೆ ತೆರಹ, ಜೋಡಿಯೆನಿಸದವಳ ಬಯಕೆ, ವಿಶ್ವ

೧೯೭೨ ಕಣ್ಣಿನ ಉರಿಯಿಂದ ಕಾಮನನ್ನು ವಹಿಸಿ,
ಕಾಮದಿಂದ ಮತ್ತೆ ಗೌರಿ ಕೂಡಿ,
ಅಂಥ ಶಿವನಾದರು ಅಂಟಿರದಷ್ಟೆ ಕರ್ಮ, ವಿಶ್ವ

೧೯೭೩ ಮಾತು ಕೇಳದ ಸತಿ, ತಾ ಮೃತ್ಯು ದೇವತೆ,
ಫಣಿ ಹೊತ್ತ ನಾಗಿಣಿ ಗೃಹ ಪಿಶಾಚಿ,
ತನಗೊಲಿಯದ ಮಡದಿ ಕಡು ರಕ್ಕಸಿ ಜಗದಿ, ವಿಶ್ವ

೧೯೭೪ ಹಲವು ಬಣ್ಣ ಕಂಡು, ಮನದಿ ದ್ವೇಷ ತಳೆದು,
ಒಳಗೆ ಗೋಣಗೆ ಹಿತವೆ ಹೇಳಿರಯ್ಯ ?
ದಹಿಪ ಅಗ್ನಿಕಾಷ್ಟದೊಳಗಡಗಿಪ್ಪುದೈ, ವಿಶ್ವ

೧೯೭೫ ತರುಣಿ ಸೊಗಸುಗಾರ್ತಿ ; ತನಯ–ಕುಲವ ಕಂಡು,
ಮುರುಕ ತುಂಬಿ ಮನವು ಹರಿಯುತಿಹುದು,
ಪಾಪ ಮಾಡಲೆಳಿಪ, ಮನವ ಮೆಟ್ಟಲಾರ ! ವಿಶ್ವ

೧೯೭೬– ಅರಿಯೆ, ಲಜ್ಜೆ ಕಾಣು ಅಖಿಲರಲ್ಲಿ ಉಂಟು,
ಲಜ್ಜೆ ಇಲ್ಲದವನು ಲಾಲಿತಹನೆ ?
ಲಜ್ಜೆಯುಳ್ಳ ಅವಗೆ ಲಾಭವೇನಿಲ್ಲವೆ ? ವಿಶ್ವ

●

## ಚೋರತನ–ಜಾರತನ

ತನ್ನ ಪಾತಿವ್ರತ್ಯದ ಶೀಲದಿಂದ ಜಾರುವುದೇ ಹೆಣ್ಣಿನ ಜಾರತನವಾಗಿದೆ. ಜಾರ ಹೆಣ್ಣು ಕಳ್ಳತನದಿಂದ ತನ್ನೆಲ್ಲ ವ್ಯಾಪಾರಗಳನ್ನು ನಡೆಸುತ್ತಾಳೆ. ಬಹಿರಂಗವಾಗಿ ನಡೆಸಿದರೆ, ಆಗ ಅವಳಿಗೆ ಸೂಳೆ ಎನ್ನುತ್ತಾರೆ. ಹೀಗಾಗಿ ಜಾರೆಯ ಅವಸ್ಥೆಯಲ್ಲಿರುವ

ಶೀಲಗೇಡಿತನದಲ್ಲಿ ಜಾರತ್ವದೊಂದಿಗೆ ಚೋರತ್ವವೂ ಜೊತೆಯಾಗಿರುತ್ತದೆ. ಲೋಕದಲ್ಲಿ ಚೋರ–ಜಾರೆಯರು ತುಂಬಿಕೊಂಡಿದ್ದಾರೆ. ಜಾರಿಣಿಗೆ ಯಾವಾಗಲೂ ತನ್ನ ಒಳಗುಟ್ಟು ಬಯಲಾದೀತೆಂಬ ಶಂಕೆ ಇದ್ದೇ ಇರುತ್ತದೆ. ಕಳ್ಳನಿಗೆ ಬೆಳದಿಂಗಳು ಆಗಿ ಬಾರದಂತೆ.

ಇಂಥ ಜಾರತನದ ವಿಷಯದಲ್ಲಿ ನಾರಿಯು ಹೇಳಿದ ಏನನ್ನೂ ನಂಬಕೂಡದು. ನಂಬಿದರೆ ಅವಳು ಪತಿಯನ್ನು ಹಾದಿ ತಪ್ಪಿಸಿ ಅಡವಿಪಾಲು ಮಾಡುವಳು.

ನಾರಿಯೂ ಸುಳ್ಳು ಹೇಳುತ್ತಾಳೆ. ಪುರುಷನೂ ಜಾರತನದ ವಿಷಯದಲ್ಲಿ ಸುಳ್ಳು ಹೇಳುತ್ತಾನೆ. ಆದರೆ ಇವುಗಳಲ್ಲಿ ತಾರತಮ್ಯವಿದೆ. ಪುರುಷನು ಹೇಳಿದ ಸುಳ್ಳನ್ನು ಸುಲಭವಾಗಿ ಬಯಲು ಮಾಡಬಹುದು. ಅದು ಬರಿಯ ತಡಿಕೆ ಇದ್ದಂತೆ. ನಾರಿ ನುಡಿದ ಸುಳ್ಳು, ಅನೇಕ ಸತ್ಯವನು ಮರೆ ಮಾಡುವ, ಅರಿವಿನೆದುರಿನ ಅಡ್ಡಗೋಡೆಯಂತಾಗುತ್ತದೆ. ಹೀಗಾಗಿ ಪತ್ನಿಯು ಜೊತೆಗಿದ್ದು, ಜಾಣಳಾಗಿದ್ದಷ್ಟು ಪತಿಗೆ ಪೇಚಾಟವೇ ಗತಿಯಾಗುತ್ತದೆ. ನಾರಿಯನ್ನು ಕುರಿತು ಸತ್ಯ ತಿಳಿಯಲು ಪುರುಷನಿಗೆ ಮಾರ್ಗವೇ ಸಿಕ್ಕದಂತಿದೆ.

ಕೋಗಿಲೆಯು ತನ್ನ ಮೊಟ್ಟೆಯನ್ನು ಕಾಗೆಯ ಗೂಡಿನಲ್ಲಿ ಹಾಕಿ ಹೋಗುತ್ತದೆ. ಕಾಗೆಯು ಆ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿ ಮಾಡುತ್ತದೆ. ಮೊಟ್ಟೆ ಮರಿಯಾದಾಗ ಕಾಗೆಗೆ ಕೋಗಿಲೆಯ ಮೋಸದ ಅರಿವಾಗುತ್ತದೆ. ಅದೇ ರೀತಿ ಜಾರ ಹೆಣ್ಣಿನ ಗರ್ಭದಲ್ಲಿ ಬೇರೊಬ್ಬನ ಬಿಂದು ಬಿದ್ದು ಅವಳು ಗರ್ಭ ಧರಿಸಿ ಪ್ರಸೂತಿಯಾದಾಗ ಪ್ರಸೂತ ಶಿಶುವನ್ನು ಕಂಡು ಕಾಗೆಯಂತೆ ಮೋಸ ತಿಳಿಯುತ್ತದೆ.

ಕುಂತಿಯ ಜೀವನವನ್ನೇ ನೋಡಿರಿ. ತನ್ನ ಎಳೆಯ ಹರೆಯದ ಕಾಲಕ್ಕೆ ಅವಳು ಕರ್ಣನಿಗೆ ಜನ್ಮವಿತ್ತಳು. ರತಿ ಕ್ರೀಡೆಯಿಲ್ಲದೆ ಆದ ಈ ಪ್ರಸೂತಿಯು ವಿಚಿತ್ರವೇ ಸರಿ. ಆ ಶಿಶುವನ್ನು ಲೋಕಾಪವಾದಕ್ಕೆ ಹೆದರಿ ಬಿಸುಟಿದಳು. ನದೀ ಪಾಲಾದ ಶಿಶುವನ್ನು ಯಾರೋ ಪರಿಪೋಷಿಸಿದರು ಕಾಗೆಯಂತೆ.

ಜಾರತನದ ಸಂದೇಹ ಬಂದಾಗ ಸ್ತ್ರೀಯ ಹಾವ ಭಾವಗಳನ್ನು ಗಮನಿಸಬೇಕು. ಆಗೀಗ ಕಿಟಕಿಯಿಂದ ಇಣುಕಿ ಹೊರನೋಡುವುದು ಅವಳಿಗೆ ಸರಿಯಲ್ಲ. ಹೀಗೆ ಮುಂದುವರಿದರೆ ಕೊನೆಗೊಮ್ಮೆ ಕೇಡು ತಪ್ಪಿದ್ದಲ್ಲ.

ಜಾರತನವು ನಾರಿಗಂಟಿದ ದುಶ್ಚಟ. ಪತಿದೇವನು ಕಾಮನಂತೆ ಸುರೂಪಿಯಾಗಿದ್ದರೂ ಅವಳು ತನ್ನ ಹೊರಬೀಸಿನ ನಡೆವಳಿಯನ್ನು ಚೋರತನದಿಂದ ಮುಂದುವರಿಸುತ್ತಾಳೆ. ಹೀಗಾಗಿ ಯೋಗ ಪುರುಷನು ಈಶ್ವರನಲ್ಲಿ ತೋರಬೇಕಾದ ಸದ್ಭಕ್ತಿಯನ್ನು ಐಹಿಕ ವಿಷಯಾಸಕ್ತಿಯಲ್ಲಿ ತೊಡಗಿಸಿದರೆ ಅದೇ ಗತಿಯಾಗುತ್ತದೆ. ಹೀಗೆ ವಿಟನಿಗಂಟಿದ ಹೆಣ್ಣನ್ನು ತೊರೆಯುವುದೇ ಮೇಲು.

ಭೂಮಿಯ ಜನರು ಸ್ತ್ರೀಯ ಮೇಲಿನ ಮೋಹದಿಂದ, ಕೊನೆಗೂ ಹಾದಿ ತಪ್ಪಿ ಈಶ್ವರ ಸಾನ್ನಿಧ್ಯದಿಂದ ವಂಚಿತರಾಗುತ್ತಾರೆ.

**೧೯೭೭ ಚೋರತನ ಜಾರತ್ವ ಜಗದಿ ತುಂಬಿ ಇಹವು,**
**ಜಾರಿಣಿಗೆ ಏನಿನಿತು ಶಂಕೆ ಇಹುದು,**
**ಕಳ್ಳಗೆ ಬೆಳದಿಂಗಳು ಕೂಡಿಬಾರದಲ್ಲ !, ವಿಶ್ವ**

**೧೯೭೮ ನಾರಿ ನುಡಿದ ನುಡಿಯನಿನಿತೆ ಆದರೂನು,**
**ನಂಬಬಾರದೆಂಥ ನಾರಿಯಿರಲಿ ;**
**ಅಲ್ಲವೆಂದು ನಂಬೆ, ಅಡವಿಗಟ್ಟುತಿಹಳು !, ವಿಶ್ವ**

**೧೯೭೯ ಗಣಿಕೆ ನುಡಿದ ಸುಳ್ಳು ಗೋಡೆ ನಿಲಿಸಿದಂತೆ,**
**ಪುರುಷವರನ ಸುಳ್ಳು ಬರಿಯ ತಡಿಕೆ ;**
**ಪತ್ನಿ ಜಾಣ್ಮೆ ಪತಿಗೆ ಪೇಚಾಟವಪ್ಪುದು, ವಿಶ್ವ**

**೧೯೮೦ ನಾವೆ ಸತ್ಯವೆಲ್ಲ ನಡು ನೀರಿನಲ್ಲಿಯೆ,**
**ಬಂಡಿ ಸತ್ಯವೆಲ್ಲ ಬಯಲಿನಲ್ಲಿ**
**ನಾರಿ ಸತ್ಯವರಿಯೆ ದಾರಿ ಎಲ್ಲು ಇಲ್ಲ, ವಿಶ್ವ**

**೧೯೮೧ ನಾರಿ ನುಡಿದ ಮಾತು ನೋಡು ಅಡ್ಡಗೋಡೆ,**
**ಪುರುಷ ವರನ ಮಾತು ಬರಿಯ ತಟ್ಟಿ,**
**ಸ್ತ್ರೀಯು ಚತುರೆ; ಪತಿಯ 'ಛೀಥೂ' ನೋಡಿರೋ, ವಿಶ್ವ**

**೧೯೮೨ ಕಾಗೆ ಗೂಡಿನೊಳು ಕೋಗಿಲೆ ಮೊಟ್ಟೆಯಿರಿಸಿ,**
**ಕಾಸಿ ಮರಿಯ ಮಾಳ್ಪ ಗುಟ್ಟು ಅರಿಯೆ,**
**ಆಗ ತಿಳಿವುದಯ್ಯ ನಾರಿ ಮಾಳ್ಪ ಮೋಸ, ವಿಶ್ವ**

**೧೯೮೩ ಹುಡುಗಿ ಎಳೆ ಪ್ರಾಯದಲ್ಲಿ,**
**ಹಡೆದಳು ಪತಿಯಿರದೆ ಸುತನ, ಕಡು ಚಿತ್ರವಿದ್ಯೆ !**
**ಕಡೆಗು ರತಿ ಕ್ರೀಡೆಯಿರದೆ,**
**ಪೊಡವಿಯೊಳಾರು ಪೊರೆದರೆದೆಯುಣಿಸದ ವೇಮಾ,**

— — — — — — — — — — — — — — — — — — — — — —

೧೯೮೪ ನುಡಿನುಡಿಗೆ ಗಾಡಿ ಮೋಡಿಯ
ನಡೆಯವರ ನಂಬಬೇಡ ಪರಿಪೂರ್ಣ, ಮನದೊಳ್,
ಎಡೆಯರಿತು ಪೂಜೆ ಗೆಯ್ದೊಡೆ,
ಪಡೆಯುವೆ, ಕೋಟೀಶ್ವರ ತೇಜ ಗುರಿಯು, ವೇಮಾ,

೧೯೮೫ ಕಿಟಕಿಯಿಂದ ಬೀದಿ ಕಡೆಗೆ ಇಣುಕಿಣುಕಿ,
ನೋಡಲೆಂದು ಬಿಡಲು ಹೊಲ್ಲ; ಕೇಳದಾಕೆ,
ನೋಡುತಿರಲು, ಕೇಡು ಬಪ್ಪುದಾಗ ನೋಡು ,ವಿಶ್ವ

೧೯೮೬ ಮದನನಂಥ ಪತಿ, ಮುದದ ಬಾಳಿರಲೇನು?
ನೀತಿಗೇಡಿ, ಜಾತಿ ಗುಣ ತೊರೆವಳೆ?
ಹಾಲು ಕುಡಿವ ನಾಯಿ, ಹೊಲಸಿಗೆ ಹೋಗದೇ?, ವಿಶ್ವ

೧೯೮೭ ಪರ ಸುಖದಲಿ ಸತಿಯು ಬಹಳ ಕಾಲ ಕಳೆಯೆ,
ಹೆಂಡತಿ ಎಂದವಳ ಹೇಳೆ ಹೊಲ್ಲ ;
ಕೀಳು ತಿಳಿಯದಿರಲು, ಕಾಲನೆ ಯಮ ದೂತ, ವಿಶ್ವ

೧೯೮೮ ಜಾರ ಪುರುಷವಲ್ಲಿ ಸದ್ಭಕ್ತಿ ಸಲಿಸುತ,
ಪತಿಗೆ ನಿತ್ಯವಾಗಿ ಪ್ರೀತಿ ಭಂಗಿ,
ಪರವ ಪಡೆಯೆ ಯೋಗಿ, ಪಡುವ ದೇಹ ಕಷ್ಟ, ವಿಶ್ವ

೧೯೮೯ ಮನೆಯ, ಪತಿಯ ಕಂಡು, ಮನೆಯಾಕೆ ದುಃಖಿಪಳು,
ಹಿಂದೆ ವಿಟನಿಗಂಟೆ ಹೆಚ್ಚು ಕಷ್ಟ,
ತುಂಟ ಹೆಣ್ಣು ಇರಲು, ತೊಲಗಿಸುವುದೆ ಮೇಲು, ವಿಶ್ವ

೧೯೯೦ ತೊಲೆಯಲಿ ತೂತುಗಳಿದ್ದೊಡೆ,
ಇಳೆಯಲಿ ಕೇಡಾಗುವುದತಿ ಸಹಜವು ನೋಡಾ,
ಬಳಿಯ ತೊರೆಯೆ, ಲೋಲಾಕ್ಷಿಯ,
ಇಳೆಯಲಿ ಮೇಲ್ಮೆಯುತ ಬಾಳು, ಸಾಧ್ಯವು ವೇಮಾ,

೧೯೯೧ ಕಾಂತೆಯಾಕೃತಿ ಮೇಲಾಸೆಗೆದುರು ನೋಡಿ,
ಚಿಂತೆಯೊಳು ಪ್ರಾಣಗಳನು ಸಿಗಿಸಿ ಬಿಟ್ಟು,
ಅಂತ್ಯ ಕಂಡುಕೊಳದೆ, ಅವನಿಯೊಳಗಿಹರು
ಕಾಮುಕರ ಗತಿ ಈ ರೀತಿಯಷ್ಟೆ ವೇಮ

# ಜಾರೆಯರು

ಹೆಣ್ಣು ಧರ್ಮನಡೆಯಲ್ಲಿ ಜಾರಿ ಎಡವಬಹುದಾದ, ಹಾದಿ ತಪ್ಪಿ, ತಪ್ಪು ಹಾದಿ ಹಿಡಿಯಬಹುದಾದ ಪ್ರಸಂಗಗಳನೇಕ. ದುಡಿದು ಪೋಷಿಸಲಾರದ ಪುರುಷನ ಹೊಣೆಗೇಡಿತನದಿಂದಾಗಲಿ, ಇಲ್ಲವೆ ತನ್ನ ಅಂಕೆಗೆ ಮೀರಿದ ಒತ್ತಡದಿಂದಾಗಲಿ, ಇಲ್ಲವೆ ಸ್ವಂತ ಮಾನಸ ಚಪಲದಿಂದಾಗಲಿ, ಹೊಸ್ತಿಲು ದಾಟಿದ ವಿವಾಹಿತ ಹೆಣ್ಣಿನ ಹಲವು ಮುಖಗಳನ್ನು ವೇಮನ ಯೋಗಿಗಳ ಹಲವು ಪದ್ಯಗಳ ಮೂಲಕ ತಿಳಿಯಬಹುದು.

ಜಾರ ಹೆಣ್ಣು ತನ್ನ ಮಾರ್ದವತೆಯನ್ನು ಅಂದರೆ ಪ್ರಾಣಪ್ರಿಯತೆಯನ್ನು ಪರ ಪುರುಷನ ಮೇಲಿರಿಸಿ, ತನ್ನ ಪತಿಯನ್ನು ಮರುಳುಗೊಳಿಸಿ ಸಟೆಯ ನಟನೆ ಮಾಡುತ್ತಾಳೆ. ಅದೇ ಯೋಗಿಯು, ಆತ್ಮವನ್ನೇ ತನ್ನ ಗಂಡವನನ್ನಾಗಿ ಭಾವಿಸಬೇಕಿತ್ತು. ಆದರೆ ಸಂಸಾರವೆಂಬ ಮಿಂಡನಲ್ಲಿ ರತನಾಗಿ ಕೆಡುತ್ತಾನೆ.

ಹೆಣ್ಣಿನ ಸ್ವಭಾವವು ಚಂಚಲ. ಹಿತ್ತಲದಲ್ಲಿ ಬೇಲಿಗುಂಟ ಬಳ್ಳಿ ಬೆಳೆಸಿದರೆ, ಅದು ಬೀದಿಯತ್ತ ಕುಡಿ ಬಿಡುತ್ತದೆ. ಅದೇ ರೀತಿ, ಜಾರ ಸ್ತ್ರೀ ತನ್ನ ಮರ್ಯಾದೆಯ ಹದ್ದು ಮೀರಿ ಬೀದಿ ಕಾಮಣ್ಣಗಳತ್ತ ನಿಟ್ಟಿಸುತ್ತಾಳೆ.

ಜಾರಿಣಿಯು ಎಂದೂ ಜಗಳವಾಡುವುದಿಲ್ಲ. ಮೇಲೆ, ತನ್ನ ಗಂಡನ ಬಗ್ಗೆ ಮಮತೆ ತಾಳಿ ಇನಿಮಾತನಾಡುತ್ತಾಳೆ. ಹೀಗೆ ಶೀಲಗೆಟ್ಟ ಗಯ್ಯಾಳಿಯವಳು.

ವಿಟನನ್ನು ಸೇರಬಯಸಿ ಮನಸ್ಸನ್ನು ಸತತ ಬೀದಿಯಲ್ಲಿ ಇರಿಸುವ ಗಣಿಕೆಯಂತೆಯೇ, ಪರವನ್ನು ಬಯಸಿದಾಗ, ಎಲ್ಲ ಗುಣಗಳನ್ನು ಮರೆತು, ಅಂದರೆ ಜ್ಞಾನ ಸಂಗ, ಕರ್ಮಸಂಗ, ಆಲಸ್ಯ ಸಂಗ ತೊರೆದು ತ್ರಿಗುಣಾತೀತದತ್ತ ತದೇಕ ಚಿತ್ತವಿರಿಸಬೇಕು. ಮೋಹಕ ಯುವತಿಯು ವಿಟನ ಮೋಹ ಪಾಶದಲ್ಲಿ ಸಿಲುಕುತ್ತಾಳೆ. ಅವಳಿಗೆ ಮುದುಕ ಗಂಡನಿಂದೇನಾಗಬೇಕು? ಅದೇ ರೀತಿ, ಐಹಿಕ ಭೋಗದಾಸೆಗೆ ಬಲಿಯಾದ ಮೂಢರಿಗೆ ಹೆಚ್ಚಿನ ಶಾಸ್ತ್ರಗಳೇಕೆ ?

ವಿಷಯ ದೂರವಾಗಿರುವುದು ಇಂದ್ರಿಯ ನಿಗ್ರಹಕ್ಕೆ ಹಾದಿಯಾಗುತ್ತದೆ. ಇಲ್ಲವಾದರೆ, ಸಂಗ ಬೆಳೆದು, ಮೋಹಕ್ಕೆ ಹಾದಿಯಾಗುತ್ತದೆ. ಚೊಕ್ಕವಾದವನನ್ನು ಅಕ್ಕರೆಯಿಂದ ನೋಡ ತೊಡಗಿದರೆ, ತನ್ನ ಗಂಡನೇ ತಕ್ಕವನಲ್ಲ ಎನ್ನಿಸುತ್ತಾನೆ. ಹೀಗಾಗುವುದು ಜಾರ ಬುದ್ಧಿ ಇರುವವರಲ್ಲಿ ಮಾತ್ರ. ಒರೆಗೆ ಹಚ್ಚಿ ನೋಡಬಲ್ಲ ವಿವೇಕ ಉಳ್ಳವರಲ್ಲಿ ಅಲ್ಲ.

ಏನೇ ಆಗಲಿ, ಪರಪುರುಷ ಗಮನವು ಪ್ರತ್ಯಕ್ಷ ನರಕವಿದ್ದಂತೆ. ಗಂಡನಿಗೆ ಗೊತ್ತಾದರಂತೂ ಮರಣವೇ ಗತಿ, ರಾಜ ದರಬಾರಿಗೆ ತಿಳಿದರೂ ಕಠಿಣ. ಮೇಲಾಗಿ, ಎಲ್ಲ ಬಗೆಯ ನಿಂದೆಗಳಿಗೆ ಅದು ಆಲಯವಾಗುತ್ತದೆ.

ಜಾರೆಯ ಸ್ವಭಾವವು ದುರತಿಕ್ರಮವಾಗಿದೆ. ಅವಳ ಹುಟ್ಟು ಗುಣವು ಅಳಿಯದು, ಅವಳ ಗಂಡನ ಮರ್ಯಾದೆಯೂ ಹಾಳಾಗುತ್ತದೆ.

ಆಕಾಶವನ್ನು ಹಿಡಿಯಬಹುದು. ಆನೆಯನ್ನು ಮಣಿಸಬಹುದು. ಆದರೆ ವ್ಯಭಿಚಾರಿ ಜಾರೆಯ ನಿಗ್ರಹವು ತುಂಬಾ ಕಷ್ಟಕರ.

ಹೆಣ್ಣು ಗಯ್ಯಾಳಿಯಾದರೆ, ಹಾದಿಗುಂಟ ಪತಿಯನ್ನು ನಿಂದಿಸುತ್ತಾಳೆ. ಜಾರೆಗೆ ಸಾಧು ಪುರುಷನ ಒಳ್ಳೆ ನಡುವಳಿಕೆಯು ಅರ್ಥವಾಗದು. ಅದೇ ರೀತಿ, ಬ್ರಹ್ಮ ನಿಷ್ಠೆಯನ್ನು ಮೂಳ ಪ್ರಾಕೃತನು ಅರಿಯಲಾರನು.

ವಿಟನು ಬಳಸಿ ಬಿಟ್ಟುಹೊದ ಬಳಿಕ ಜಾರೆಯು ಬಡ ಗಂಡನನ್ನು ಕಾಮಿಸುವಳು. ನಾಯಿ ತಿಪ್ಪೆಯಲ್ಲಿ ಚೆಲ್ಲಿದ ಕೆರಹನ್ನು ಕಡಿಯುವ ರೀತಿಯಿದು.

ನಾರಿಯ ರೂಪ ಕಂಡು ಮರುಳಾಗಬಾರದು. ನಾರಿಗೆ ಗುಣವೇ ಮುಖ್ಯ. ಜಾರೆಗೇನು ರೂಪವಿರುವುದಿಲ್ಲವೇ? ನಾರಿಗೆ ಒರೆಯೆ ಗುಣವಾಗಿದೆ.

೧೯೯೨ ಪರ ಪುರುಷನ ಮೇಲೆ ಪ್ರಾಣವನ್ನು ನಿಲಿಸಿ,
ಪತಿಯ ಸೇವಿಸುವಳು ಮರುಳುಗೊಳಿಸಿ,
ಅಂಥ ರೀತಿ, ಯೋಗಿ ಆತ್ಮ ಭಾವಿಸುವನು, ವಿಶ್ವ

೧೯೯೩ ಹಿತ್ತಲ ಗಿಡ ನೆಟ್ಟು, ಪರಿಕಿಸುತ ಇದ್ದೊಡೆ,
ಬೇಲಿ ದಾಟಿ ಬಳ್ಳಿ ಬಯಲ ಹೊಕ್ಕಿತ್ತು,
ಅಂಗನೆಯರ ಗುಣವು ಅಂತೆ ಆಗುತಿಹುದು, ವಿಶ್ವ

೧೯೯೪ ಜನಾನಾದೊಳಿರುವ ಸ್ತ್ರೀಯರು ಬೀದಿಯತ್ತ
ಕಣ್ಣೋಡಿಸೆ ಹೊಲ್ಲ ; ಕಾಣು ಬಳಿಕ,
ಮಾಡುತಿರಲು ಅಂತೆ, ಕೇಡು ಘಟಿಸದೇನು ? ವಿಶ್ವ

೧೯೯೫ ಜಗಳವಾಡಳಯ್ಯ, ಜಾರಿಣಿ ತಾನೆಂದು,
ಮಾಯ ಮಾಡಿ ಪತಿಯ, ಮಮತೆ ಹೊಂದಿ,
ನುಡಿಯುತಿಹಳು ಮತ್ತೆ ನಿತ್ಯವು ಗಯ್ಯಾಳಿ, ವಿಶ್ವ

೧೯೯೬ ವಿಟಗೂಡಲಾಶಿಸಿ, ಬೀದಿಯೊಳಿರಿಸಿ ಮನ,
ಗಣಿಕೆ ರೀತಿ ; ಪರದ ಗಮನ ಬಯಸೆ,
ಗುಣಗಳೆಲ್ಲ ಮರೆತು, ಗುರುತು ಕಂಡು ನೋಡು, ವಿಶ್ವ

೧೯೯೭ ಹೆಣ್ಣು ಗುಂಗು ಇರಲು ಪ್ರಿಯರು ಗುಂಗಿನವರು ;
ಸರಸ ವಿಟರನೇಕೆ ಸುಮ್ಮತಿಪಳು,
ಶಗಣಿ ತಿನುವ ಹುಳಕೆ ಸೇರದು ಬೆಲ್ಲದ ರುಚಿ, ವಿಶ್ವ

೧೯೯೮ ಮುದ್ದು ಯುವತಿಗೇಕೆ ಮುದುಕ ಗಂಡ ? ಮನದಿ
ವಶಕೆ ಬರಳು, ವಿಟನ ಬಲೆಗೆ ಸಿಕ್ಕು,
ಹುಚ್ಚು ಮೂಢ ಜನಕೆ ಹೆಚ್ಚು ಶಾಸ್ತ್ರವೇಕೆ ? ವಿಶ್ವ

೧೯೯೯ ಚೊಕ್ಕವಾಗಿರುವನ ಅಕ್ಕರೆಯಿಂದ ನೋಡೆ,
ತಕ್ಕನಲ್ಲವೆನಿಪ ತನ್ನ ಗಂಡ,
ಜಾರ ಬುದ್ಧಿಯಷ್ಟೆ ; ಒರೆಯ ಬುದ್ಧಿಯಲ್ಲ, ವಿಶ್ವ

೨೦೦೦ ಮದನನಂಥ ಪತಿ, ಮುದದ ಬಾಳಿರಲೇನು
ನೀತಿಗೇಡಿ ಜಾತಿ ಗುಣ, ತೊರೆವಳೆ ?
ಹಾಲು ಕುಡಿದ ನಾಯಿ, ಹೊಲಸಿಗೆ ಹೋಗದೇ, ವಿಶ್ವ

೨೦೦೧ ವರನು ಚೊಕ್ಕಟವಿರೆ, ವಜ್ರ ಮೊನೆಯಾಗಿರೆ,
ತೊಳಗುತ ಬೆಳಗುತಿಹ ತತ್ತ್ವವಿರಲು,
ಪರ ಪುರುಷರ ಆಸೆ ನೃತ್ಯಗಾತಿಗಿಹುದು, ವಿಶ್ವ

೨೦೦೨ ಜಾರನಲ್ಲಿ ಪ್ರೇಮ, ಜಲಜಾಕ್ಷಿಯಿಡುವಳು,
ಥೇಟವಾಗಿ ಮನದಿ ತೀವ್ರ ಹುಟ್ಟಿ,
ಗುರುವ ಕೋರಿ ಹೊಂದಿ, ಕೂಡುತಿಹುದೆ ಮುಕ್ತಿ, ವಿಶ್ವ

೨೦೦೩ ಪುರುಷನರಿಯೆ ಮರಣ, ಅರಸನರಿಯೆ ಕಠಿಣ;
ಸಕಲ ನಿಂದೆಗಳಿಗೆ ಒಂದೆ ನೆಲೆಯು ;
ಪರ ಪುರುಷ ಗಮನವು ಪ್ರತ್ಯಕ್ಷ ನರಕವು, ವಿಶ್ವ

೨೦೦೪ ಎಷ್ಟು ಗೈದೊಡೇನು? ಹುಟ್ಟು ಗುಣವಳಿಯದು,
ನೇರ ಮಾಡಬಹುದೆ ನಾಯಿ ಬಾಲ ?
ಕೆಟ್ಟ ನಾರಿ ಪತಿಗೆ ಮಾರುವ ಬುಟ್ಟಿ ಗತಿ ! ವಿಶ್ವ

---

೨೦೦೫ ಚಿಲಿ ಪಿಲಿ ಮಾತಾಡುವಂಥ
ಕುಲಟೆಯನು ನಂಬಲುಬೇಡ ; ಡಾಂಭಿಕಳಪ್ಪ,
ತಿಳಿವಿಲಿ ಅವಮಾನಿಸುವಳು,
ತೊಲಗುವದು ಮೊದಲ ಪ್ರೀತಿಯು, ತೋರದೆ ವೇಮಾ,

೨೦೦೬ ನಭವಾದರು ಹೊಂದಬಹುದು.
ಇಭವನು ನಿಗ್ರಹಿಸಬಹುದು ಸುಲಭದಿ ಕಾಣಾ,
ವ್ಯಭಿಚಾರಿಯ ಮನ ನಿಲಿಸಲು,
ಪ್ರಭುವಿಗು ಅಸಾಧ್ಯವಾಗಿಹ ಚಾಳಿಯು ವೇಮಾ,
ಇಭ–ಆನೆ

೨೦೦೭ ಹಾದಿಗುಂಟ ಹೊಲಸು ನಿಂದ ಬೇಡವೆನಲು,
ಮೊದಲು ಪತಿಯ ನಿಂದೆ, ಮುಸುಕು ಬೇರೆ,
ಗಂಡು–ಬೀರಿ ಗಂಡ ಕಾಸಿಗೆ ಪಂಭೇರು, ವಿಶ್ವ

೨೦೦೮ ಸಹಜ ಗುಣವು ಬಿಡದು, ಜಾರಿಣಿಗೆ ಸತತವು,
ತನಯ ಪತಿಯ ಬಿಟ್ಟು, ತಪ್ಪಿ ದಾರಿ,
ಗೃಹವ ಬಿಡುತ ಸಕಲ ತಳಮಳಗೊಳಿಸುವರು,

೨೦೦೯ ತರುಣಿ, ಅಣ್ಣನ ಕಂಡು, ತನಯನನ್ನು ಕಂಡು,
ಮರುಳು–ಕಳೆಯು ಮಿಕ್ಕಿ ಮನ ಹರಿವುದು,
ಪಾಪ ಜಾತಿ ಮನಸು ಹಿಡಿತಕೆ ಬಾರದದು. ವಿಶ್ವ

೨೦೧೦ ಮದ್ದು ಹಾಕಿ ಪತಿಗೆ ಮರೆಸಿ, ವಿಟನ ಬೆರೆವ,
ಸುಂದರಾಂಗಿ ಕೆಟ್ಟ ಸುದತಿ ನೋಡು,
ಹಂದಿಗೆ ಕೆಸರು ಮೆಚ್ಚು ಪನ್ನೀರ ಮೆಚ್ಚದು, ವಿಶ್ವ

೨೦೧೧ ಗುರುತು ತಿಥಿಗಳಿಂದ ಕುಲವು ಕೆಟ್ಟು ಹೋಯ್ತು,
ಲಲನೆ ನಡತೆಯಿಂದ ಲಜ್ಜೆಗೇಡು,
ತಗ್ಗು ಗುಂಡಿಗಳಿಂದ ಧರೆಯು ಕೆಟ್ಟು ಹೋಯ್ತು, ವಿಶ್ವ

೨೦೧೨ ಸಾಧು ಚರಿತೆಯುಳ್ಳ ಸತಿ ಸತ್ಪ್ರವರ್ತನ
ಜಾರೆಯೇನರಿವಳು, ಸಾಧು ಜನರ ?
ಬ್ರಹ್ಮ ನಿಷ್ಠೆ, ಮೂಳ ಪ್ರಾಕೃತನರಿವನೇ ? ವಿಶ್ವ

೨೦೧೩ ವಿಟನು ಬಳಸಿಕೊಂಡು ಬಿಟ್ಟು ಹೋದ ಬಳಿಕ,
ಬಡ ಗಂಡನ ಕಂಡು ಪ್ರೇಮಿಸುವಳು
ತಿಪ್ಪೆಯೊಳಗೆ ಕೆರಹ ತಿನ್ನುವಂತೆ ಸೊಣಗ, ವಿಶ್ವ

೧೦೧೪ ಬಳಿಯೊಳುಣಿಸಬಹುದು, ಪುತ್ರ ವಯಸ್ಕನಿರೆ,
ತೊತ್ತುಕುವರಗೆಂಜಿಲು ಎತ್ತಿ ಹಾಕಿ,
ಕೀಳು ನರನ ಸಂಗ ಕಾಣರಿಂಥ ರೀತಿ ! ವಿಶ್ವ

೧೦೧೫ ಗುಣವು ತೀರಿತಲ್ಲ ! ಕುಲವು ನಾಶವಾಯ್ತು,
ಲಲನೆ ನಡತೆಯಿಂದ ಲಜ್ಜೆ ಹೋಯ್ತು,
ಜವುಳು ಭೂಮಿಯಿಂದ ಜಲವು ಕೆಟ್ಟು ಹೋಯ್ತು, ವಿಶ್ವ

೧೦೧೬ ನಾರಿಯಂದ ಕಂಡು, ಮರುಳನಾಗಬೇಡ,
ನಾರಿಗೆಂದೆಂದೂ ಒಳಿತು ಗುಣವು ;
ಜಾರೆಗೇನು ರೂಪು ತಾನು ಇರದಿಹುದೇ ? ವಿಶ್ವ

●

## ಜಾರ ಪುರುಷರು

ಪುರುಷರು ತಮ್ಮ ಕಾಮ ಕೇಳಿಯನ್ನು ಹೆಂಡತಿಗೆ ಮರ್ಯಾದೆ-ಗೊಳಿಸುವದೇ ಗೃಹಸ್ಥ ಧರ್ಮವಾಗಿದೆ. ಆದರೆ ಅನೇಕರು ಸತ್ಪಥದಿಂದ ಜಾರಿ ಪರಸ್ತ್ರೀ ಗಮನ ಮಾಡುವ ಉದಾಹರಣೆಗಳು ಎಂದಿನಿಂದ ಕೇಳಿಬರುತ್ತಿವೆ. ಇಂತಹ ಸಡಿಲುಗಚ್ಚೆಯವರು ಸಾಮಾಜಿಕ ಸ್ವಾಸ್ಥ್ಯವನ್ನು, ಕೌಟುಂಬಿಕ ಶಾಂತಿಯನ್ನೂ ಹಾಗೂ ವೈಯಕ್ತಿಕ ಶ್ರೇಯಸ್ಸನ್ನೂ ನೆನೆದು, ಇಂಥ ಹಾದಿಯಿಂದ ದೂರವಾಗದಿದ್ದರೆ ಕೇಡು.

ಅರೆ ಮುಚ್ಚಿದ ಅವಯವಗಳು ಕುತೂಹಲ ಕೆರಳಿಸಿದರೆ ಪೂರ್ಣ ಬಿಚ್ಚಿದ ಅಂಗಾಂಗಗಳು ಹೇಸಿಗೆ ತರಿಸುತ್ತವೆ. ಕಾರಣ ಋಷಿಮುನಿಗಳಿಗೆ, ಅವಧೂತರಿಗೆ, ಮತ್ತು ಯೋಗ ಸಾಧಕರಿಗೆ ಅಂಗಾಂಗಗಳ ವಿವರ ಬಣ್ಣಿಸಿ, ಅವುಗಳ ರೂಪವನ್ನು ಬಣ್ಣಿಸುತ್ತಾರೆ.

ತನ್ನ ಹೆಂಡತಿಯು ಪತಿವ್ರತಸ್ಥೆಯಾದ ಭಾರ್ಯೆಯಾಗಿದ್ದರೂ ಸುಶೀಲೆಯಾಗಿದ್ದರೂ ಜಾರ ಪುರುಷನು ತನ್ನ ಹಾದಿ ಬಿಡನು. ಹೊಲಗೇರಿಯ ನಾಯಿ ಹೊಲಸಿಗಾಗಿ ತಿರುಗುವ ರೀತಿ ಅದು.

— — — — — — — — — — — — — — — — — — — — — —

ತರುಣಿಯು ಸೊಗಸುಗಾರ್ತಿಯಾಗಿದ್ದರೆ, ಅವಳ ಮಗನೇ ಇರಲಿ, ಅಣ್ಣ ತಮ್ಮಂದಿರೇ ಇರಲಿ, ಅವರ ಮನಸ್ಸು ಮರುಳಾಗಿ ಅತ್ತ ಹರಿಯುವುದು. ಚಂಚಲ ಮನಸ್ಸು ಪಾಪ ಜಾತಿಯದು. ಅದನ್ನು ನಿಗ್ರಹಿಸುವುದು ಕಷ್ಟಕರ.

ಹೆಂಡತಿಯ ಒನಪನ್ನು ಅವಳನ್ನು ಮೋಹಿಸಿದವನಷ್ಟೇ ಅರಿಯುವನು. ಅದರಿಂದ ಮೋಹಾನ್ವಿತನಾಗಿ ಮೂಢನೂ ಆಗುವನು. ಆದರೆ, ಇದನ್ನೆಲ್ಲ ಜಾರ ಪುರುಷನೆಂತು ಅರಿಯುವನು ?

ಹೆಂಡತಿಯೂ ಹಾದಿ ತಪ್ಪಬಹುದು. ಆದರೆ ಅದನ್ನು ಕುರಿತು ತನ್ನ ಸರಿಕನೊಬ್ಬನು, ತಿಳಿಸಿ ಹೇಳಿದಾಗಲೂ ಸಹ ತಿಳಿಯಲಾರದವನು ಮನುಷ್ಯನೇ ಅಲ್ಲ.

ಮಾನವನಿಗೆ ತನ್ನ ಅಂಗಭಾವವಿರುವವರೆಗೂ ಅದು ಪ್ರತ್ಯಕ್ಷ ನರಕದ ಆಲಯವೆಂದು ತಿಳಿಯುತ್ತದೆ. ಅದೊಂದು ಹೇಸಿಕೆಯ ತಡಿಕೆ. ಹೀಗಿದ್ದ ಮೇಲೆ ಪರಸ್ತ್ರೀ ಗಮನ ಮಾಡುವುದು ಪ್ರತ್ಯಕ್ಷ ನರಕ ಕೂಪಕ್ಕಿಳಿದಂತೆ.

ಹೆಣ್ಣಿನ ಅಧರಗಳ ಮುತ್ತಿಗಾಗಿ ಆಸಿಸುವ ಜಾರ ಪುರುಷನು ಜೇನು ನೊಣವು ಜೇನಿಗಾಗಿ ಆಸಿಸಿ ಅದರಲ್ಲಿಯೇ ಸಿಕ್ಕು ಬಿದ್ದು ಸತ್ತಂತೆ.

ಪರನಾರಿಯ ಸಂಗವನ್ನು ಕೋರಿ ಹಾರೈಸಿದರೆ, ಮಾಡಿದ, ಪುಣ್ಯವೆಲ್ಲ ಹಾಳಾಗುತ್ತದೆ. ಬೆಂಕಿಯ ಬಳಿಗಿಟ್ಟರೆ ಬೆಣ್ಣೆಯು ಕರಗಿ ರೂಪಗೆಡುವದಿಲ್ಲವೇ ? ಆ ರೀತಿ ಇದು.

ಸ್ತ್ರೀಯರನ್ನು ಹಿಡಿದು ಸೆಳೆದುಕೊಳ್ಳಲು ಕೇಶಗಳು ಸಾಧನ. ಆದರೆ ಕೇಶಗಳನ್ನು ಬೋಳಿಸಿದ ಮುಂಡೆಯನ್ನು ಹಿಡಿದು ಸೆಳೆಯಲು ಅವಳ ಮೂಗೇ ಸಾಧನ. ಮುಂಡೆಯು ತನ್ನ ತಾಯಿ, ಸೋದರಿಯಂತಿದ್ದರೂ ಸಹ ನರನು ಅರಿವು ಗೆಟ್ಟು ವರ್ತಿಸುತ್ತಾನೆ. ಮೂಢರು ಮುಂಡೆಯರ ಗೋಷ್ಠಿಯಲ್ಲಿ ಸೇರಿ, ತೇಲುತ್ತ ಮುಳುಗುತ್ತ ಇರುವರು. ಅವರು ಸಾಯುವ ವರೆಗೆ ಅಂದರೆ ಪಿಂಡಾಂಡವು ಅಳಿಯುವ ವರೆಗೆ ಇದೇ ಗತಿ.

**೨೦೧೭ ಭಾರ್ಯೆ ರಂಭೆಯಿರಲು, ಸುಶೀಲವತಿಯಿರಲು,**
**ಜಾರ ಪುರುಷನೆಂತು ಜಾಡು ಬಿಡುವ ?**
**ಹೊಲಗೇರಿಯ ನಾಯಿ ತಿರುಗುತಿರುವ ರೀತಿ,** **ವಿಶ್ವ**

**೨೦೧೮ ತರುಣಿ ಸೊಗಸು ! ಅಣ್ಣ ತನಯರನ್ನು ಕಾಣೆ,**
**ಮರುಳು ಕಳೆಯು ಮಿಂಚಿ ಮನ ಹರಿವುದು ;**
**ಪಾಪ ಜಾತಿ ಮನಸು ಪಿಡಿಯಲಾಗದಯ್ಯ,** **ವಿಶ್ವ**

೨೦೧೯ ಒಡ್ಡಿದ ಸತಿಯೊನಪರಿವನೆ ?
ಮೌಢ್ಯದಿ ಬಿದ್ದನವ ಹೊರತು, ಜಾರನೆನಿಪನೇ ?
ಅಡ್ಡಾತಿಡ್ಡ ಅಲೆಯುತಿರೆ,
ಕೊಡ್ಡವರಿಯಬಲ್ಲದೆ ಹಾಲ ಸವಿಯ, ವೇಮಾ ?

೨೦೨೦ ತನ್ನ ಸತಿಯ ತಾನೆ ತಪ್ಪು ಹಾದಿ ಹಿಡಿಸಿ,
ಸರಿಕ ಪುರುಷ ಮತ್ತೆ ಸರಿಯ ತಿಳಿಸೆ,
ಅರಿಯದಂಥ ಪುರುಷ, ಅಲ್ಲ ನರ ಮಾತ್ರನು, ವಿಶ್ವ

೨೦೨೧ ಅಂಗ ಭಾವವೆಲ್ಲ ಅರಿತು ನೋಡಲಾಗ,
ಅಖಿಲ ಹೇಯಗಳಿಗೆ ಆಲಯವದು,
ಅನ್ಯ ಲಲನೆ ಸಂಗ ಅದು ಪ್ರತ್ಯಕ್ಷ ನರಕ, ವಿಶ್ವ

೨೦೨೨ ಎಳೆಯ ಎದೆಯು ಇರಲು, ಎಲ್ಲ ಭೂಮಿ ಬೆಲೆಯು,
ಕನ್ನೆ ಎದೆಯು ಇರಲು, ಕೋಟಿ ಬೆಲೆಯು,
ತಟುಕ ಎದೆಯು ಇರಲು ಶಕ್ಯ ಮಡದಿಯಲ್ಲ, ವಿಶ್ವ

೨೦೨೩ ಹೀನ ಪಾಪಿ ನರನು, ಅನ್ಯ ಸತಿ ಕೋರಲು,
ಮೀನು ಜಿಹ್ವೆ ರುಚಿಗೆ ಸಿಲುಕಿದಂತೆ,
ಜೇನು ರುಚಿಗೆ ಬಿದ್ದು ನೊಣವು ಸಾಯದೇನು ? ವಿಶ್ವ

೨೦೨೪ ಪರ ನಾರಿಯ ಸಂಗ ಕೋರಿ ಹಾರೈಸಲು,
ಬರಿದೆ, ಕೋಟಿ ಪೂಜೆ ಸರಿಯುತಿಹುದು,
ಉರಿಯ ತಾಪದಿಂದ ಬೆಣ್ಣೆ ರೂಪುಗೆಡದೆ ? ವಿಶ್ವ

೨೦೨೫ ಏಕ ತರುಣಿಯಲ್ಲಿ ಭ್ರಮಿಸದೆ,
ಸುಕುಮಾರದ್ದಿ ತರ ರುಚಿಯ ನೋಡಲು ಬೇಕೆ
ಸಕಲ ವನಗಳಲಿ ತುಂಬಿಯು
ಮಕರಂದವ ಹೀರಿದಂತೆ ಮಹಿಯಲಿ ವೇಮಾ,

೨೦೨೬ ಮನೆಯ ಮಡದಿ ಬಿಟ್ಟು ಜಾರಕಾಂತೆಯೊಡನೆ,
ಬೆನ್ನು ಹತ್ತಿ ತಿರುಗುತಿಪ್ಪ ಹುಚ್ಚ !
ತೆನೆಯ ಪೈರು ಬಿಟ್ಟು, ಕರಿಕೆ ಕೀಳುವಂತೆ, ವಿಶ್ವ

೨೦೨೭ ಸ್ತನಗಳು ಪರ ಸತಿಗೊಪ್ಪಿರೆ,
ಸ್ತನಗಳ ಮೇಲ್ವಾಪೆ ಗಟ್ಟಿಗೊಳ್ಳುವ ಮೊದಲೇ
ಸ್ತನಗಳ ಕಾಣದಿರು, ಕುಡಿದ
ಸ್ತನಗಳ ಯೋಚನೆ ಕೂಡದು, ಸತ್ಯವು ವೇಮಾ

೨೦೨೮ ಪರ ನಾರಿ ಪ್ರೀತಿಯು,
ಸ್ಫುರಿಸದು; ಮತ್ತೆ ಸ್ಫುರಿಸಲು ಕಡೆಗಾಣಿಸವ್ಯೆ,
ನರರನಿಬರು ನಡು–ಕೆಡುವರು,
ಬರಿ ಮೋಹ ಮೊಳೆವುದು, ಮೊಳೆಯ ಬೆಳೆಯದು ವೇಮಾ

೨೦೨೯ ಪರ ಯುವತಿ ರತಿಯ ಪ್ರಯತ್ನಿಸಿ ಕೋರಲು,
ಕೋಟಿ ಪೂಜೆಯೆಲ್ಲ ಕೇಡು ಆಯ್ತು,
ಕಾವಿನ ಬಳಿ ಬೆಣ್ಣೆ ಕೆಡದೆ ತಾಪದಿಂದ ? ವಿಶ್ವ

೨೦೩೦ ರಮಣಿ ನಗುತ ಇಹಳು, ರಮಣನುಂಟು ಅಳುತ ;
ರಮಣಿ ಗೆಯ್ಯುತಿಹಳು ರಂಡೆತನ ;
ರಂಡೆ ನೋಡುತಿರಲು ಪರಮವಾದ ತತ್ತ್ವ ವಿಶ್ವ

ಪ್ರಕೃತಿ ಪುರುಷರ ಕ್ರೀಡೆಯೇ ಜೀವನ. ಪುರುಷನನ್ನು ಪ್ರಕೃತಿಯು ತನ್ನ ತ್ರಿಗುಣಗಳ ಬಂಧದಿಂದ ಗೋಳಾಡಿಸುತ್ತಾಳೆ. ಪುರುಷನಿಗೆ ಪ್ರಕೃತಿಯು ಅಧೀನವಾಗಿರುವವರೆಗೆ ಪುರುಷನಿಗೆ ಪೇಚಾಟಗಳಿಲ್ಲ. ಯಾವಾಗ ಪ್ರಕೃತಿಯು ಪುರುಷನನ್ನು ಲೆಕ್ಕಿಸದೆ, ಪ್ರಕೃತಿಯ ತ್ರಿಗುಣಗಳ ಆಟಕ್ಕೆ ಈಡು ಮಾಡುವಳೋ ಆಗ ಅವಳ ಅಭಿಚಾರ, ಇಲ್ಲವೆ ವ್ಯಭಿಚಾರ ಇಲ್ಲವೆ ರಂಡೆತನದ ರಂಭಾಟ ನಡೆಯುತ್ತದೆ. ಪ್ರಕೃತಿಯಲ್ಲಿ ರಮಣನಾದ ಪುರುಷನು ಅವಳ ರಂಡೆತನವನ್ನು ಅರಿತೊಡನೆ, ಅವನು ಪರಮ ತತ್ತ್ವವನ್ನು ತಲುಪುತ್ತಾನೆ; ಗುಣಾತೀತನಾಗುತ್ತಾನೆ.

೨೦೩೧ ಮೂಗು ಹಿಡಿದು ಎಳೆದು, ಮುಂಡೆಯ ಕೈ ಹಿಡಿದು,
ಅರಿವುಗೆಟ್ಟು ನರನು ಅಲೆಯುತಿರುವ,
ಎಲ್ಲಿ ತಾಯಿ ತಂದೆ ಇಲ್ಲವೆ ತನಗೇನು ? ವಿಶ್ವ

೨೦೩೨– ಮುಂಡೆಯರ ಗೋಷ್ಠಿ ಮುಳುಗುತ ತೇಲುತ,
ಬಿಡಲೊಲ್ಲರು ನೋಡು ; ಕಡು ಮೂಢರು,
ಅಂಡವಗಲಿದ ಬಳಿಕ ಅಖಿಲವು ಹೋಗುವುದು, ವಿಶ್ವ

# ವೇಶ್ಯೆಯರು

ಭಾರತದಲ್ಲಿ ವೇಶ್ಯಾ ಗೃಹ ಪದ್ಧತಿಯು ತೀರ ಹಳೆಯದು. ಈ ಪದ್ಧತಿಯನ್ನು ವೇಶ್ಯೆ ಕುಟುಂಬ ಪದ್ಧತಿಯೆಂದು ಸರಿಯಾಗಿ ಹೇಳಬಹುದಾಗಿದೆ. ಹೀಗೆ ಕೆಲವೊಂದು ವರ್ಗದ ಕುಟುಂಬದಲ್ಲಿ ಸ್ತ್ರೀಯರಿಗೆ ನೃತ್ಯ ಹಾಗೂ ಸಂಗೀತ ಕಲೆಗಳಲ್ಲಿ ತರಬೇತಿ ನೀಡುತ್ತಿದ್ದರು. ಅವರು ಅವಿವಾಹಿತರಾಗಿರುತ್ತಿದ್ದರು.

ವೇಶ್ಯೆಯರ ಜೀವನ ಕುರಿತು ಭಗವಾನ ಶ್ರೀಕೃಷ್ಣನು ತನ್ನ ಅಂತಿಮ ಸಂದೇಶವಾದ ಉದ್ಧವ ಗೀತೆಯಲ್ಲಿ ವಿವರವಾಗಿ ತಿಳಿಸಿದ್ದಾನೆ. ಮಹಾಯೋಗಿ ವೇಮನರು ಸಹ ವೇಶ್ಯೆಯರ ನಡತೆ, ಮಾನಸಿಕ ಕೋರಿಕೆ, ಆಶೆ, ನಿರಾಶೆ, ಮೋಜು, ಮಾನವತೆಗಳ ಬಾಳನ್ನು ವಿವರಿಸಿದ್ದಾರೆ. ಸಮಾಜವು ವೇಶ್ಯಾವಾಟಿಕೆಯ ಹುದುಲಿನಲ್ಲಿ ಬಿದ್ದು ಹಾಳಾಗದಿರಲೆಂಬ ಘನ ಉದ್ದೇಶವಿಲ್ಲಿದೆ.

ಬೀದಿ ಬಸವಿಯಾದವಳಿಗೆ ಮದುವೆಯ ಸಂಬಂಧದಿಂದ ಏನಾಗಬೇಕಾಗಿದೆ? ವೇಶ್ಯೆಯು ಒಡಲು ಬೆಳೆಸಿ, ಉಬ್ಬಸ ಪಡುತ್ತ ವಿಟನ ಮೇಲೆ ಬೀಳುತ್ತಾಳೆ. ಅವಳ ಒಡಲು ಸಂಬಂಧವು ಇಷ್ಟೇ.

ಸೂಳೆಯು ಒಂದು ರಾತ್ರಿ ಬಹು ಜನರ ಜೊತೆ ರತಿ ಸುಖ ನಡೆಸುವುದುಂಟು. ಒಬ್ಬನು ಭೋಗಿಸಿ ಹಿಪ್ಪೆ ಮಾಡಿದವಳನ್ನು ಇನ್ನೊಬ್ಬನು ಭೋಗಿಸುವುದೆಂದರೆ ಉಂಡು ಚೆಲ್ಲಿದ ಪತ್ರೋಳಿಯನ್ನು ನಾಯಿ ನೆಕ್ಕಿದಂತೆ.

ಸಭಾ ಮಧ್ಯೆ ಮಗ್ನನಾಗಿರುವಾಗ ಸಹ ವೇಶ್ಯೆ ಸನ್ನೆ ಮಾಡಿ ಕರೆಯುತ್ತಾಳೆ. ಆದ್ದರಿಂದ ಹೆಣ್ಣಿನ ಮೇಲಿನಾಶೆಯು ಹುಟ್ಟುತ್ತದೆ. ಆದರೆ, ಜಾಣನು ತನ್ನೆದುರಿನ ಹೊಣೆಗಾರಿಕೆಯಿಂದ ಭ್ರಮಿಸದಿರಬೇಕು. ಡೊಂಬರ ಜಾತಿಯ ಸೂಳೆಯೊಂದಿಗೆ ಕೂಡುವುದು ದೋಷಕರವಾಗಿದೆ. ಆದರೆ ಪಾಪಿ ಮನಸು, ಅವಳ ಬಾಗುವ ದೇಹ ಕಂಡು ಆಕರ್ಷಿತವಾಗುತ್ತದೆ. ಆದರೆ ಅವಳು ಯಾವಾಗಲೂ ಆಟದ ವ್ಯಾಯಾಮದಲ್ಲಿ ನಿರತಳಾಗಿರುತ್ತಾಳೆ. ಅಂದ ಮೇಲೆ ಯಾವಾಗ ಸೇರಬೇಕು?

ಗಣಿಕೆಯು ಗಣಿಕೆಯಷ್ಟೇ ಎಳಿದಾಟ, ಗುಣಗಾನಗಳೆಲ್ಲ ಅವಳ ತಾಯಿಯ ಜೊತೆಗೆ ನಡೆಯುತ್ತದೆ. ಆದರೆ ರತಿ ಕ್ರೀಡೆ ಸರಿಯಾಗದು. ಕಾರಣ ತಾಯಿಯಿರುವ ಸೂಳೆಯನ್ನು ಸೇರಕೂಡದು.

ವೇಶ್ಯೆಯರು ವಿಶ್ವಾಸ ಘಾತ ಮಾಡುವರು. ಹಣವನ್ನು ಸೆಳೆಯುತ್ತಾರೆ. ಹಣವಂತ ಪುರುಷನಾದರೆ, ಮೈ ನೀಡಿ ರತಿಸುವಳು. ಹಣ ವಿಹೀನನಾದರೆ, ಹಣ ಬಂತು, ಎಂದು ಬೇಜಾರು ಪಡುವರು. ಸೂಳೆ ಹಣ ಸೆಳೆವ ವಿಧಗಳು ಹಲವಾರು. ಅವಳ ಗಾಡಿ ಮೋಡಿಯೆಲ್ಲ ಹಣ ದೋಚುವ ಉಪಾಯಗಳೇ ಸರಿ. ಹೊಟ್ಟೆ ತುಂಬುವಷ್ಟು ತೌಡು ಇಟ್ಟರೂ ಸಹ, ಎಮ್ಮೆಯು ಕೆಚ್ಚಲು ಮುಟ್ಟಿದೊಡನೆ ಒದೆಯುತ್ತದೆ. ಅಂದ ಮೇಲೆ ಸೂಳೆಯು ತನ್ನ ಮರ್ಮಾಂಗಗಳನ್ನು ತಟ್ಟಲು ಒಪ್ಪುವಳೇ?

— — — — — — — — — — — — — — — — — — — —

ಜನರ ಸ್ವಭಾವವೇ ವಿಚಿತ್ರ. ಪರಮಾನಂದಕ್ಕೆ ದಾರಿ ತೋರುವ ಗುರುವಿಗೆ ಹಿಡಿ ಸೊಪ್ಪನ್ನು ಕೊಡದವರೂ ಸಹ, ವೇಶ್ಯೆಗೆ ಅಪಾರ ಹಣವನ್ನು ಧಾರೆಯೆರೆಯುತ್ತಾರೆ.

ಸೂಳೆಯರೊಂದಿಗೆ ರಕ್ತ ಸಂಬಂಧದ ಕಟ್ಟು ಪಾಡುಗಳೇ ಇಲ್ಲ. ತನ್ನ ಸೂಳೆಯ ಅಕ್ಕನೊಂದಿಗೆ ಮಲಗಬಹುದು. ಇನ್ನು ಓರ್ವ ಸೂಳೆಗೆ ಹಲವಾರು ಜನರು ವಿಟರಾಗಿರಬಹುದು. ಇವರೆಲ್ಲ ಸೋದರರಂತೆ.

೨೦೩೩ ಬೀದಿ ಬಸವಿಗೇಕೆ ? ಒಡಲು ಸಂಬಂಧವು ?
ಚಾಡಿ ನುಡಿವಗೇಕೆ ಜಾಡದರಿವು ?
ಮೂಢ ಮತಿಗೆ ಏಕೆ, ಜ್ಞಾನದಾನಂದವು ? ವಿಶ್ವ

೨೦೩೪ ಒಡಲು ಉಬ್ಬಿ ಸೂಳೆ, ಉಬ್ಬುಸ ಹೋಗುತಿರೆ,
ಓರ್ವ ವಿಟನ ಮೇಲೆ ಒರಗುತಿಹುದು,
ಹೆಗ್ಗಣ ಮೈಮೇಲೆ ಆಲಿ ಕಲ್ಲಿನಂತೆ, ವೇಶ್ಯೆ

೨೦೩೫ ಒಬ್ಬ ಹಿಪ್ಪೆ ಮಾಡಿ ಒಲ್ಲದೆ ಬಿಟ್ಟಿರುವ,
ಹಿಪ್ಪೆಯಾದವಳನು ಹೋಹ ವಿಟನು,
ಚೆಲ್ಲಿದೂಟದೆಲೆಯ ಶ್ವಾನ ನೆಕ್ಕದೇನು ? ವಿಶ್ವ

೨೦೩೬ ವಿಟ ಬಳಸಿದ ಬಳಿಕ ತೊರೆದುಳಿಬಿಟ್ಟವಳು,
ಬಡ ಗಂಡನ ಬಯಸಿ ಬಳಿಸಾರಳೆ ?
ತಿಪ್ಪೆ ಗುಂಡಿ ಕೆರಹ ಸೊಣಗ ಕಚ್ಚುವಂತೆ, ವಿಶ್ವ

೨೦೩೭ ಸಭೆಯ ಮಧ್ಯೆ ವೇಶ್ಯೆ ಸನ್ನೆ ಮಾಡುತಿರಲು,
ಹೆಣ್ಣು ಮೇಲಣಾಸೆ ಹತ್ತುತಿಹುದು,
ಮನದಿ ಭ್ರಮಿಸದೆಂದು, ಮತ್ತೆ ಎದುರು ನೋಡು ವಿಶ್ವ

೨೦೩೮ ಡೊಂಬರ ಸೂಳೆ ಜೊತೆ ಕೂಡುವುದು ದೋಷವು,
ಪಾಪಿಯಾದ ಮನಸು ಹಿಡಿಯಲಾರ,
ಅವಳ ಕಡೆಗೆ ಹೋಗೆ ಆರಂಭಿಸುವುದೆಂತು ? ವಿಶ್ವ

---

೨೦೩೯ ಗಣಿಕೆ ಗಣಿಕೆಯಷ್ಟೆ, ಗುಣಗಾನ ಎಳೆದಾಟ,
ಲಂಚೆ ತಾಯಿಗೆ ಹೋಯ್ತು, ಲಜ್ಜೆ ತೊಳೆದು,
ತಾಯಿಯಿರಲು ಸೂಳೆ ತಗಲುವುದು ದೋಷ ವಿಶ್ವ

೨೦೪೦ ವಿಶ್ವಾಸ ಘಾತಕತೆಯಿಂದ,
ವೇಶ್ಯೆಯರು ನಾವೆನುತ ಸಾವಿರ ನಾಣ್ಯಂ,
ಶಾಶ್ವತ ಲಾಭವ ಹೊಂದುತ,
ವಿಶ್ವದೊಳಗೆ ಭ್ರಷ್ಟರೆಂಬ ಬಾಳುವೆ, ವೇಮಾ

೨೦೪೧ ಗಳಿಕೆಯಿರುವ ಪುರುಷನಿರಲು,
ಒಳಗಾಗುತ ಮೈ ಬಾಗಿಸಿ ರತಿಪರು ಧರೆಯೋಳ್
ಗಳಿಕೆಯಿರದ ಪುರುಷನಿರಲು,
ಬಳಿಸಾರಿತು ಹೆಣವೆನುವರು ಹೆಂಗಳು ವೇಮಾ

೨೦೪೨ ವಾರಕಾಂತೆ ಕೊನೆಗೆ ಒಲಿದು ಬರುವದೆಲ್ಲ,
ಗಳಿಸಿದಂಥ ಧನವ ಕಸಿದು ಕೊಳಲು,
ಗಣಿಕೆ ಬಂದ ಬಳಿಕ ಗೃಹಕೆ ಮರುಳುವಳೇ ? ವಿಶ್ವ

೨೦೪೩ ಕುಲಟೆ ಲಲನೆ ತಾನು, ಒಲಿವ ಮೂಲವೇನು?
ಕಲೆತು ಕನಕ ಕೊಚ್ಚಿಕೊಳ್ಳಲಷ್ಟೆ ?
ಛಲದ ಮಾರಿ ಬಂದು ಬರಿದೆ ಹೋಹಳೆಂತು ? ವಿಶ್ವ

೨೦೪೪ ವಾರಕಾಂತೆಯೆಲ್ಲ ವಂಚಿಸಲು, ಬರುವಳು,
ಹೊಂದಿ, ಕೂಡಿ, ಧನವ ಪಡೆದುಕೊಳಳೆ ?
ಮಾತು ರೂಢಿಯಾಯ್ತು, ಮನುಜರೆಲ್ಲ ಬಹರು, ವಿಶ್ವ

೨೦೪೫ ಪದವಿಯುಳ್ಳ ಸೂಳೆ ಮೇಲಾಸೆ ಕುದುರಲು,
ಬಡವನಿರಲು ಮಾತು ಪ್ರಿಯವೆನಿಪುದು ;
ಮುದ್ದು ಯುವತಿ ಗಂಡ ಮುದುಕಿಯ ಮೆಚ್ಚುವನೆ ? ವಿಶ್ವ

೨೦೪೬ ಒನಪು ಜನಕೆ ತೋರಿ ಒಡನೆ ಮರೆಸಿ ಬಿಟ್ಟು,
ಕೈಯ ಕಾಸನೆಲ್ಲ ಕೈಗೆ ಕೊಂಡು,
ವಶ ಪಡಿಸಿಕೊಳ್ಳುವರು ವಸುಧೆಯ ಗಣಿಕೆಯರು, ವಿಶ್ವ

೨೦೪೭ ಹೊಟ್ಟೆ ತುಂಬ ತೌಡು ಬುಟ್ಟಿಯೊಳಗಿಟ್ಟರೂ,
ಎದೆಯ ಹಿಡಿಯಲೀಗ ಒದೆವುದೆಮ್ಮೆ,
ವಾರಕಾಂತೆಯೆಂತು ಒಲಿವಳು ಸುಮ್ಮನೇ ? ವಿಶ್ವ

೨೦೪೮ ಕೂಲಿನಾಲಿ ಮಾಡಿ, ಗುಲಾಮನಾಗಿ ದುಡಿದು,
ಕಾಸು ಕೊಡಲು 'ಬೇಶೆ'ನುವಳು ನಾರಿ,
ಇಲ್ಲದಿರಲು ನಲ್ಲಗೆಷ್ಟೊ ನೂರು ಮಾತು ವಿಶ್ವ

೨೦೪೯ ಹೂವು ಮೊಲೆಗಳಿರಲು ಹೆಚ್ಚು ಹಣವೀವರು ;
ಕಾಣೆ, ಮೂಡುವ ಮೊಲೆಗೆ ಕೋಟಿಯೀವ,
ಜೋತಾಡುವ ಮೊಲೆಯು, ಬೇತಾಳಕು ಬೇಡ ವಿಶ್ವ

೨೦೫೦ ಗುರುವಿಗೆ ಹಿಡಿಸೊಪ್ಪು ನೀಡಲಾರರಯ್ಯ !
ಅರಿಯೆ ! ವೇಶ್ಯೆಗೀವರರ್ಥವೆಲ್ಲ !!
ಗುರುವು ವೇಶ್ಯೆಗಿಂತ ಗುಣ ಹೀನನಾದನೆ ? ವಿಶ್ವ

೨೦೫೧ ನಡೆಯುಳ್ಳ ಗಣಿಕೆಗೆ ನಗೆಯ ಮೇಲ್ಮೆ ಗೊತ್ತು,
ವಿಟನ ಕಿವಿ ಮಾತಿಂ ವಿವರವರಿವಳು,
ಬಾಣಂತಿ ಸೇವಕಿಯ ಪ್ರೇಮ ಕೋರಬೇಡ, ವಿಶ್ವ

೨೦೫೨ ಡೊಂಬರವನ ಸೂಳೆ, ತಗಲಿಕೊಳಲು ದೋಷ,
ಪಾಪ ಜಾತಿ ಮನಸಿನ ಪಾಡು ಆಯ್ತು ;
ಇವನು, ಆಗಲಿ ಹೋಗೆ, ಬೇಡಿ ಆಳುವನಲ್ಲ ! ವಿಶ್ವ

೨೦೫೩ ನಿಶೆಯಲುಟ್ಟು ಸೀರೆ, ನಾಚುಗೆಯನರಿವಳು,
ಹಗಲು ಸೀರೆ ಬಿಟ್ಟು ಹೆಚ್ಚು ಕೆಲಸ,
ಕುಟಿಲೆಯಲ್ಲ ಇವಳು ಕೈಲಿಹ ಒರೆಕತ್ತಿ, ವಿಶ್ವ

೨೦೫೪ ಈಜಲು ಬಲ್ಲ ಕಾಲ ಆಳವೆನ್ನಿಸುವುದೆ ?
ಭಾರಿ ಸೂಳೆಗಂತೆ ಭಯವೆ ಇಲ್ಲ,
ಕೋತಿ ಕೊಂಬೆಯೇರಿ ಕುಪ್ಪಿಸಿ ದಾಟದೇ ? ವಿಶ್ವ

೨೦೫೫ ಲಂಜೆಯಕ್ಕನನ್ನು ಲಾಲಿಸಿ ಮುದ್ದಾಡುವ,
ಮಿಂಡನರಿಯೆ ಲಂಜೆ ಮೇಲೆ ಪ್ರೀತ ;
ಆಟಗಾತಿ ಬಳಿಗೆ ಅಖಿಲರು ಬಂಧುಗಳೆ ! ವಿಶ್ವ

೨೦೫೬ ತೂಕದಿ ಕೆಡುಹುವ ಸೂಳೆಯು,
ತಾಕುವ ಸುಂದರ ಗತಿಯೋಳ್ ರೂಪ ಪರಕಿಸಲ್,
ಷೋಡಶ ಭಾರಾದಿಕ್ಯನ,
ವಾರಕೆ ಒಂದು ದಿಶೆಯಲ್ಲಿ ವಾಲುಗು ವೇಮಾ

೨೦೫೭ ಕುಣಿಯಲರಿತ ನಾರಿ ಕೂಟ ಬೇಟವರಿತು,
ಮುದದಿ ಕೂಡಿ ಪತಿಯ ಮೋಹವರಿವಳು,
ವಿಭುವಿನ ವರ ಗುಣವ, ವೇಶ್ಯೆ ತಾನರಿವಳೆ ? ವಿಶ್ವ

೨೦೫೮ ಒಯ್ಯಾರಿ ಎದೆ ತೋರಿ, ಒಡನೆ ಒಲಿಸಿಕೊಂಡು,
ಕೈಯ ಕಾಸನೆಲ್ಲ ಕಿತ್ತುಕೊಳುವಳು,
ಅವನ ಕೈಗೆ ಕತ್ತಿ ಅಂಟಿದಂತೆ ಲಲನೆ ! ವಿಶ್ವ

●

## ವಿಟ ಪುರುಷರು

ಇಂದ್ರಿಯ ನಿಗ್ರಹವಿಲ್ಲದೆ ಕಾಮಾಸಕ್ತನಾಗಿ ಸಿಕ್ಕ ಸಿಕ್ಕ ಲಲನೆಯರ ಬೆನ್ನು ಹತ್ತಿ ತಿರುಗುವವನೇ ವಿಟ ಪುರುಷನು. ಒಬ್ಬನು ಗೃಹಸ್ಥನಾಗಿರಬಹುದು. ಇಲ್ಲವೆ ಪರಿಸ್ಥಿತಿಗೆ ಅನುಕೂಲಿಸಿ ಸನ್ಯಾಸಿಯಾಗಿರಬಹುದು. ಗೃಹಸ್ಥನಾಗಿ ವೈರಾಗ್ಯ ತಾಳುವವನು ಸನ್ಯಾಸಿಗಿಂತಲೂ ಮೇಲೆಂದು ಬಗೆಯುವ ವಿಚಾರ ಪ್ರಣಾಲಿಗೆ ಸೇರಿದವರು ವೇಮನರು. ಆದರೂ ಯೋಗಿಯಾದವನು ತನ್ನ ನಾಲಗೆಯ ಮತ್ತು ನಯನಗಳ ಚಪಲವನ್ನು ನಿಗ್ರಹಿಸುವಂತೆ ಲೈಂಗಿಕ ಕ್ರೀಡೆಯ ಚಪಲವನ್ನೂ ಹದ್ದುಬಸ್ತಿಯಲ್ಲಿ ಇಟ್ಟುಕೊಳ್ಳಬೇಕೆಂದು ಪುನಃ ಪುನಃ ಎಚ್ಚರಿಸುತ್ತಾರೆ. ತಾಯಿಯ ಆಕರ್ಷಣೆಯು ವಾತ್ಸಲ್ಯವೆನಿಸಿದರೆ ದೇವರ ಆಕರ್ಷಣೆಯು ಪ್ರೇಮವೆನಿಸುತ್ತದೆ. ಪ್ರೇಮವು ಮೋಹಯುತವಾದಾಗ ಕಾಮವೆನಿಸಿದಂತೆ, ಇಲ್ಲವೆ ಸೆರೆ ಕುಡಿದಂತೆ ಆಗುತ್ತದೆ. ಆಗ ಸ್ತ್ರೀ ರತಿಯಂತೆ ಭಾಸವಾಗುತ್ತಾಳೆ. ಏಕೆಂದರೆ ನಿಶೆ ಏರಿರುತ್ತದೆ. ಇದು ಮೋಹದ ಒಂದು ರೂಪ. ಈ ಮೋಹಕ್ಕೆ ಯೋಗಿಗಳೂ, ಮುನಿಗಳೂ ಬಲಿಯಾಗಿದ್ದಾರೆ. ವಿಶ್ವಾಮಿತ್ರನು ಮೇನಕೆಗೆ ಮಾರುಹೋದ. ಇಂದ್ರ ಕಾಮಿಯಾಗಿ ಅಹಲ್ಯೆಯ ಸಂಗ ಮಾಡಿದ. ಆದ್ದರಿಂದ ಈ ಲೈಂಗಿಕ ಮೋಹ ಕುರಿತು ತುಂಬಾ ಎಚ್ಚರಿಕೆಯಿಂದ ಇರಬೇಕು.

ಸ್ತ್ರೀಯ ಸ್ಫುಟವಾದ ಸ್ತನಗಳೂ, ಉಬ್ಬಿದ ಪೀಠ, ಹೊಳೆಯುವ ಕಣ್ಣು, ಮೋಹಕ ಕೇಶರಾಶಿ, ಹೀಗೆ ಎಲ್ಲವೂ ಆಕರ್ಷಕ, ಕಾಮೋದ್ರೇಕಾರಕ. ಸ್ತ್ರೀಯ ಸುಖವು ಕ್ಷಣಿಕವಾದರೂ ಅವಳಲ್ಲಿ ಮನಸ್ಸಿಟ್ಟವರಿಗೆ ಕೇಡು ಕಟ್ಟಿಟ್ಟ ಬುತ್ತಿ. ನದಿ ದಡದ ಗಿಡವು ಎಂದಾದರೂ ಬೀಳಬಹುದು. ಅಂತೆಯೇ ಸ್ತ್ರೀ ಸುಖಸೌಖ್ಯ. ಆದ್ದರಿಂದ ಸುಕುಮಾರರು ಸುಖಲೋಲರಾಗಿ ಸಿಲುಕಿಕೊಳ್ಳದೆ, ಅಷ್ಟರ ಮಟ್ಟಿಗೆ ರುಚಿ ಕಂಡು ದೂರಾಗಬೇಕು. ವನಗಳಲ್ಲಿ ತುಂಬಿಯು ಮಕರಂದ ಹೀರಿದರೂ ಒಂದೇ ಕಡೆಗೆ ಕುಳ್ಳಿರುವುದಿಲ್ಲ. ಜನರೆಲ್ಲ ಮೈಥುನದಿಂದ ಹುಟ್ಟಿದ್ದಾರೆ. ನಿಜ ಅವರಿಗೆ ಅಲ್ಲಿ ಗತಿಯಿರುವುದೂ ಸಹಜ. ಹೀಗೆ ಚೆಲುವೆಯ ಒನಪಿನಲ್ಲಿ ಸಿಕ್ಕು ಕಡೆಗೆ ಜೇನು ನೊಣದ ಗತಿ ಹೊಂದುತ್ತಾನೆ. ಕೆಂಬಣ್ಣದ ಚೆಲುವೆಯನ್ನು ದೂರದಿಂದ ನೋಡಿದರೂ ಅವಳಿಂದ ಆಕರ್ಷಿತನಾಗುತ್ತಾನೆ. ಮೋಹ ಹುಟ್ಟುತ್ತದೆ. ಮಂಕಾಗುತ್ತ ಅವಳೊಮ್ಮೆ ಹಲ್ಲು ತೆಗೆದು ನಕ್ಕರಂತೂ ಮುಗಿದೇ ಹೋಯಿತು. ಕೆಂಭೂತದಂತೆ ಬಡಿದುಕೊಳ್ಳುತ್ತಾಳೆ.

ಹುಡುಗಿಯರ ಮೊಲೆಗಳನ್ನು ಹೂವು ದಂಡೆಯೆಂದು ಬಣ್ಣಿಸುತ್ತಾರೆ. ಅವುಗಳು ಬರಿಯ ಮಾಂಸ ಖಂಡವಷ್ಟೇ. ಅದೇಕೆ ಹುಚ್ಚರಾಗಿ ಹೊಗಳುವರೋ?

ಪುರುಷರೆಲ್ಲರೂ ಕನಕವನ್ನೂ, ಕಾಂತೆಯನ್ನೂ ಬಯಸುವವರೇ. ತೋಯಜಾಕ್ಷಿಯನ್ನು ತೊರೆವ ಅಣ್ಣಗಳಾರು ?

ಉರುವಲನ್ನು ಒಡೆದು ಸೀಳಬೇಕು. ಅದು ಕೊಳೆಯದಂತಿದ್ದರೆ, ಅದರಿಂದ ಬೇಗನೆ ಬೆಂಕಿಯು ಜನಿಸುತ್ತದೆ. ಅದೇ ರೀತಿ, ಬಿಟ್ಟೂ ಬಿಡದೆ ಸ್ತ್ರೀಯನ್ನು ಪ್ರೀತಿಸಿದರೆ, ಅವಳನ್ನು ತೊರೆದಾಗ ವಿರಹಾಗ್ನಿ ಜನಿಸುತ್ತದೆ. ವಿಟನ ದೃಷ್ಟಿ ಅಷ್ಟು ವಿಭ್ರಮಕರವಾಗಿದೆ. ಆ ದೃಷ್ಟಿಯೇ ಕುಂಟಲಗಿತ್ತಿಯಾಗಿ ಕಾರ್ಯ ಮಾಡುತ್ತದೆ.

ಡಾಂಭಿಕ ಜನರು ಧರ್ಮದ ಹೆಸರಿನಲ್ಲಿ ಮೋಸ ಮಾಡುತ್ತಾರೆ. ಅವರ ಸುತ್ತು ಸುಳಿಯಬೇಡ. ನಿನ್ನನ್ನವರು ಮೋಸಗೊಳಿಸುವುದು ನಿಶ್ಚಿತ. ಅವರು ಕ್ರೂರ ಮೃಗಗಳಂತೆ. ಅವಿತು ಕೊಲ್ಲುವರು. ಅವರಿಂದ ದೂರಿರುವುದೇ ಲೇಸು.

**೨೦೫೯ ಹೆಣ್ಣು ಹುಡುಗಿ ಮೇಲೆ ಹೆಚ್ಚು ಆಸೆ ಬೆಳೆಸಿ,**
**ಚಿಂತೆಯಲ್ಲಿ ಬಿದ್ದು ಸಿಕ್ಕು ಬಳಲಿ,**
**ಅಂತ್ಯ ಕಾಣಲಿಲ್ಲ ; ಅಂಥ ಹಾಳು ಕೆಲಸ ! ವಿಶ್ವ**

**೨೦೬೦ ಸ್ತ್ರೀಯ ಸುಖವ ಕಂಡು, ಚಿತ್ತ ನಿಲಿಸದಿರಲು,**
**ಅಂಥ ನರರಿಗೆಲ್ಲ ಆಯ್ತು ಕೇಡು,**
**ನದಿ ದಡದ ಗಿಡವು ನಿಲ್ಲದು ಚಲಿಸದಂತೆ, ವಿಶ್ವ**

— — — — — — — — — — — — — — — — — — — — — —

೨೦೬೧ ಸುಖಲೋಲನಾಗಿ ಭ್ರಮಿಸದೆ,
ಸುಕುಮಾರನೆಲ್ಲ ರುಚಿಗಳ ನೋಡಲು ಬೇಕೈ,
ಸಕಲ ವನಗಳಲಿ ತುಂಬಿಯು,
ಮಕರಂದವ ಹೀರುವಂತೆ, ಮಹಿಯಲಿ, ವೇಮಾ

೨೦೬೨ ಮೈಥುನದಲಿ ಹುಟ್ಟಿ ಮಾನವರೆಲ್ಲರೂ
ತಿರುಗುತಿರುವರಾಗ ತೆರಪಿಲ್ಲದೆ ;
ಎದರೊಳಗೆ ಹುಟ್ಟೋ ಅದರೊಳಗೇ ಗತಿಯು, ವಿಶ್ವ

೨೦೬೩ ಕೆಲ ದಿನ ಬದುಕನು ನಡೆಸುತ,
ಚೆಲುವೆಯೊನಪಲಿ ಸಿಲುಕಿ ಕಾಮಾತುರನೈ,
ಖಳ ತಾ ಸತ್ತವನಂತಿಹ,
ಹುಲು ನೊಣ ತೆರ ತನ್ನನರಿಯದೆ ಹೋಗುವ ವೇಮಾ

೨೦೬೪ ಕೆಂಪು ವರ್ಣದವಳ ಕಡು ತೀರ ನೋಡಲು,
ಮೋಹ ಹುಟ್ಟಿ ಬಹಳ ಮಂಕು ಹಿಡಿದು,
ಹಲ್ಲು ತೆರೆದರಾಗೆ ಹಿಡಿದ ಕೆಂಭೂತವು ! ವಿಶ್ವ

೨೦೬೫ ಹುಡುಗಿ ಮೊಲೆಗಳೆಲ್ಲ ಹೂವು ದಂಡೆಯೆಂದು,
ಹೊಗಳುತಿಹರು ಜಗದಿ ಹುಚ್ಚರಾಗಿ;
ಮಾಂಸಖಂಡದೊಳಗೆ ಮತ್ತೆ ಇರುವುದೇನು ? ವಿಶ್ವ

೨೦೬೬ ಆಹಾ ! ಅಂಗನೆಯರ, ಆ ಬ್ರಹ್ಮ ಸೃಜಿಸಿದನು,
ಪುರುಷ ಪಾಲಿಗೆ ಹಿರಿ ಭೂತದಂತೆ,
ಅವಳ ಬಲೆಗೆ ಸಿಗದ ಅವನ ನೋಡಬಹುದೆ ? ವಿಶ್ವ

೨೦೬೭ ಕಡು ವಿಚಿತ್ರವರಿಯೆ ಕಾಮ ನಿಯಂತ್ರಣವು !
ಹೂವು ತನುವು ಚುಕ್ಕಿ ಬೊಟ್ಟೆಗಿಂತ,
ಕಾಂಚಿ ಬೆಳಕು ಕಂಡು ಕಡು ಕೊಬ್ಬು ಹುಟ್ಟದೆ ?
ಕಾಂಚಿ–ನಡುಪಟ್ಟಿ – ಉಡ್ಯಾಣ ವಿಶ್ವ

೨೦೬೮ ಕಡು ವಿಚಿತ್ರ ಅರಿಯೆ, ಕಾಮ ಗೈವ ಯಂತ್ರ !
ಚೆಲುವೆ ನಾರಿ ಚಿಕ್ಕ ಬೊಟ್ಟು ಕಂಡು,
ಗಾಡಿ ಮೋಡಿ ನೋಡಿ, ಕಡು ಮೋಹ ಮೂಡದೆ ? ವಿಶ್ವ

೨೦೬೯ ಸ್ತ್ರೀಯ ಮೊಲೆ ಹೂವು, ದಂಡೆಗೆ ಹೋಲಿಸುವ
ಹಾಳು ಮೂಳನರಂಥ ಹಂದಿ ಮಗನು,
ಮೊಲೆಯು ಹೂವಿಗೆಂತು, ಮತ್ತೆ ಸಮವು ಹೇಳು ? ವಿಶ್ವ

೨೦೭೦ ದೊಡ್ಡ ಕುಂಡಿ ಕಂಡು ದೇಹ ಮೊಲೆಯ ಕಂಡು,
ಹೇಳಿದಂಥ ಸ್ಥಳದ ಹೊಳಹು ಕಂಡು,
ಮುಪ್ಪುರಿಗೊಳುತಿಹುದು ಮುಕುರಿದಂಥ ಮೋಹ, ವಿಶ್ವ

೨೦೭೧ ಮಾನಿನೀ ಮನೋಜ ಮದಿರಾನಂದೈಕ,
ಲೋಲನೊಲ್ವನೂರ್ಧ್ವ ಲೋಕ ಸುಖವ ;
ಮಾದರವನ ನಾಯಿ ಮತ್ತೆ ಅನ್ನ ತಿನದು, ವಿಶ್ವ

೨೦೭೨ ಮುದಿತ ಒನಪು ಕಂಡು, ಮೋಹಿಸುವರೆಲ್ಲರು,
ಜೊತೆಗೆ ಸೇರಿಕೊಳಲು ಜಾರಿ ಮನಸು,
ವಿಚಿತ್ರ ಭ್ರಮೆ ಗುಣವು ! ಕಾಂತೆ ಕಂಡೊಡೆ ಸಾಕು, ವಿಶ್ವ

೨೦೭೩ ಲಲನೆ ಕಣ್ಣು, ಮೊಲೆಯ ಲೇಸು ನೋಡಲೆಷ್ಟು ?
ಮೋಸ ಪಡುವ ಬುದ್ಧಿ ಮೋಸ ಹೋಗಿ,
ಕಣಜದೊಳಿರುವುದನು ಕಾಣಲಾರರಯ್ಯ ! ವಿಶ್ವ

೨೦೭೪ ಒಡಲ ಮೆರುಗು ಕಂಡು, ನಡುವಿನ ಸೊಬಗು,
ಡೊಂಕ ಹೆಳಲು ಕಂಡು, ವನಿತೆ ಕಂಡು,
ವಿಟರು ಹೊಟ್ಟೆಯೊಳಗೆ ವ್ಯಥೆಯ ಹೊಂದದಿಹರೆ ? ವಿಶ್ವ

೨೦೭೫ ಎಲ್ಲೆ ಇರಲಿ, ಯೋನಿಗೆ ಎರಗುವ ಜನಂಗಳು,
ತಾಟಿನತ್ತ ಬೆಕ್ಕು ತಾಕುವಂತೆ ;
ಪಂಚ ಬಾಣನ ಬಿಲ್ಲು ದಾಸಿ ಮಕ್ಕಳೆಲ್ಲ, ವಿಶ್ವ

— — — — — — — — — — — — — — — — — — — — —

೨೦೭೬ ಕನಕ ಹೊಂದಿದೊಳ್ಳೆ ಕಾಂತೆಯನು ಕುರಿತು,
ಒಲುಮೆಯುಂಟು ಎಂಥವನೇ ಇರಲಿ,
ತೋಯಜಾಕ್ಷಿ ಬಿಡುವ ದೊರೆಗಳಾರು ಇಲ್ಲ ವಿಶ್ವ

೨೦೭೭ ಕನಕವೆನಲು, ಒಳ್ಳೆ ಕಾಂತೆ ಎನಲು, ಮತ್ತೆ
ಬಯಸುತಿರುವರೆಂಥ ಪುರುಷರಿರಲಿ !
ತೋಯಜಾಕ್ಷಿ ಬಿಡುವ ದೊರೆಗಳಾರು ಇಲ್ಲ ವಿಶ್ವ

೨೦೭೮ ಊರು ಊರು ಅಲೆವ ಉದ್ಯೋಗ ಧಾರಿಯು,
ಓಣಿ ಓಣಿ ಅಲೆವ ವನಿತೆಗಾಗಿ
ಎಲ್ಲಿ ಎಲ್ಲೊ ಅಲೆದು ಎಲ್ಲಿ ಏನು ಕಂಡ ? ವಿಶ್ವ

೨೦೭೯ ಈಚಲು ಬೀಜವನು ಇಳೆಯೊಳಗರಿತರೂ
ಆಶಿಪರು ಮೂರ್ಖಜನ ಅದನೆ ಮತ್ತೆ,
ತೋಯಜಾಕ್ಷಿ ಕಂಡು ತೊಲಗದೆ ವಶವಿಹುದೆ ?

೨೦೮೦ ಹರೆಯದವಳ ಕಂಡು ಹಲುಬುವ ಕಾಮುಕ,
ಬೀಳುವ ಬೆಂಕಿಯಲಿ ಭೂಮಿ ಮೇಲೆ,
ಮೂಡಿ ನಿತ್ಯ ಪ್ರೀತಿ ಮೋಹ ಹೆಚ್ಚುತಿಹುದು, ವಿಶ್ವ

೨೦೮೧ ಕನಕ ಕಂಡು ಮತ್ತೆ ಮಿನ್ನ ಕಾಂತೆ ಕಂಡು,
ಹದುಳ ಹುಟ್ಟದಿಹುದೆ ? ಯಾರು ಏನು ?
ಮೆರುಗು ಕಣ್ಣ ಹೆಣ್ಣು ತೊರೆವ ಅಣ್ಣರಾರು ? ವಿಶ್ವ

೨೦೮೨ ಕನ್ಯೆ ಇಹಳ ಮೈಯ್ಯು ಕಸ್ತೂರಿ ವಾಸನೆಯು,
ಮುದುಕಿ ಇಹಳ ಮೈಯ್ಯು ಮಲದ ಕಂಪು,
ವಯದ ಮಹಿಳೆ ಮೈಯ್ಯ ವರ್ಣಿಸಲು ಶಕ್ಯವೇ ? ವಿಶ್ವ

೨೦೮೩ ಕಮಲ ನಯನೆ ಕಂಡು ಕನದೊಡನೆ ಕಂಡು,
ದಿಮ್ಮೆನುವುದು ಬೇಗ ತಿಳಿವಿಗೆಲ್ಲ,
ಮನುಜರೆಲ್ಲ ಮಹಿಮಯೆಂತರಿವರು ? ಕಾಣು, ವಿಶ್ವ

೨೦೮೪ ರತಿಯಿರದೆ ಮುದುಕಿಯಂಗನೆ,
ರತಿಯಿರುತಿರೆ ಮುದಿತನ ನನ್ನರತೆಯು ಮಿಕ್ಕುಂ
ಸತತವು ಭ್ರಾಂತಿಲಿ ಗೆಯ್ಯಲು,
ರತಿಯಿಂ ಮುದಿತನ ನರನಿಗೆ ರಯಿಯಲಿ ವೇಮಾ,

೨೦೮೫ ಸುಗುಡಿ ಇರುವಳು ತೆಲಗನಿಗೊಳಗಾಗಲು,
ಭುಜಗಳ ನೋಡುತ ಬೋರ್ಲು ಬೀಳ್ವ
ಬುಡಮೇಲು ಬೀಳಲು ಬಲು ಬಾರಿ ಹೋಗುವ, ವಿಶ್ವ

೨೦೮೬ ತೊಲೆಗಳು ಸೀಳಿರುತಿದ್ದರೆ,
ಇಳೆಯೊಳು ಕೇಡಾಗಬಹುದು, ನಿಶ್ಚಯ, ಕಣಾ,
ಸುಳಿಯುವ ಕಣ್ಣವಳ ತೊರೆಯೆ,
ಇಳೆಯೊಳು ಮೇಲ್ಕಂಡು ಬದುಕ ಬಲ್ಲರು ವೇಮಾ

೨೦೮೭ ಉರುವಲು ಸೀಳಿ ಕೊಳೆಯದಿರೆ,
ಉರುವಲದಿ ಒಡನೆ ಬೆಂಕಿಯು ಹುಟ್ಟುವ ತೆರದೋಳ್,
ತೊರೆಯದೆ ವನಿತೆಯ ಪ್ರೀತಿಸೆ,
ವಿರಹಾಗ್ನಿ ಹುಟ್ಟುವುದೊಡನೆ ತ್ವರಿತದಿ ವೇಮಾ

೨೦೮೮ ಮನಸಿನಲ್ಲಿ ಮಿನ್ನ ಮಲ್ಲಿಗೆಯ ಮಂಟಪ
ಭಾವಿ ತೋಟ ಮಾಡಿ ಬಾಲೆ ಕೂಡಿ,
ಭೋಗಿಯಾಗುವೆಂಬ ಬಯಕೆ ; ಕಾಲ ಹೋಯ್ತು, ವಿಶ್ವ

೨೦೮೯ ಜೇನು ಕಲ್ಲುಸಕ್ಕರೆ, ಮಾವಿನ ಸಿಹಿ ಹಣ್ಣು,
ತಿನ್ನದಿರಲು ಸವಿಯೆಂತು ತಿಳಿವುದು ?
ಕಣ್ಣು ಕಂಡೊಡೆ ಸಿಹಿ ಕರ ಕಾಮಿನಿಯಧರ ! ವಿಶ್ವ

೨೦೯೦ ಹಲಸಿನ ತೊಳೆಗಿಂತ ಹರಳು ಸಕ್ಕರೆಗಿಂತ,
ಮಧು ಪಿಯೂಷ, ಮಧುರ ಗಿಣ್ಣಕಿಂತ,
ಕಬ್ಬಿನ ರಸಕಿಂತ ಪ್ರೇಯಸಿ ಮಾತು ಸಿಹಿ, ವಿಶ್ವ

೨೯೧ ಸಿಹಿದೊಳಗತಿ ಸಿಹಿಯು, ಅರಿತೊಡನೆ–ಪ್ರಾಣ,
ಪ್ರಾಣಕಿಂತ ಬಹಳ ಹಣವೆ ಸಿಹಿಯು,
ಹಣಕಿಂತ ಮಿಗಿಲು, ತರುಣಿ ಮಾತಿನ ಸಿಹಿ, ವಿಶ್ವ

೨೯೨ ಇರಲೆಷ್ಟೊ ಕಾಲ ಜಗದಲಿ,
ತರುಣಿಯರ ಒನಪಿಗೆ ಸಿಲುಕಿ ಕಾಮಾತುರನೈ,
ಇರುವನು ; ಸತ್ತೊಡೆ ಓರ್ವನೆ,
ಅರಿಯೆ ತನ್ನ, ನೊಣವು ಸಾವ ತೆರನದು ವೇಮಾ

೨೯೩ ಯೋನಿ ಬಲೆಯ ಮಾಡಿ, ಒಡಲು ಡಂಬು ಮಾಡಿ,
ನಾಲಗೆ ಚಾಚಿ ಕೆನ್ನೆ ಕಡಿವೆನೆನುವ,
ವಿವರವರಿತು ಕಾಣೆ ವಿಟನೆ ದ್ವಿಪಾದಿಯಹ, ವಿಶ್ವ

೨೯೪ ಅಧರ ಸುಧೆಯ ಕಂಡು ಅಖಿಲವನು ಮರೆವರು,
ತರುಣಿ ರೂಪ ಕಂಡು ತನ್ನ ಮರೆವ,
ಮಾತುಗಳನಾಲಿಸಿ ಮರೆಯುವನು ಯೋಗವ, ವಿಶ್ವ

೨೯೫ ತರುಣಿ ಸೊಗಸು ಗಾತಿ ತನಯ–ಕುಲವ ಕಂಡು,
ಮರುಕ ತುಂಬಿ ಮನವು ಹರಿಯುತಿಹುದು,
ಪಾಪ ಮಾಡಲೆಳಿಪ ; ಮನವ ಮೆಟ್ಟಲಾರ, ವಿಶ್ವ

೨೯೬ ಅಂಗನೆ ಎದೆ ಕಂಡು, ಅಷ್ಟು ಇಷ್ಟು ನೋಡೆ,
ಮೋಹ ಹೊಂದಿ, ಬುದ್ಧಿ ಮೋಸ ಹೋಯ್ತು,
ಹೆಣ್ಣು ಒಲ್ಲದವನು ಕಾಣಬಾರನಲ್ಲ ? ವಿಶ್ವ

೨೯೭ ಋತುಗಳನುಸರಿಸಿದ ಸ್ಥಿತಿ ಕಾಲದಲಿ ಲೇಸು,
ಗತಿಯ ಹಿಡಿಯೆ ಮನುಜ ಮತಿಯು ಲೇಸು,
ಸ್ವೇಚ್ಛೆ ಗಿಳಿದ ಲಲನೆ ಚೆಲ್ಲಾಟವೆ ಲೇಸು, ವಿಶ್ವ

೨೯೮ ಪಶುಗಳ ಮಾಂಸವ ಹಾಕುತ,
ದೆಶೆಯಿಹ ಸುಲತಾನ, ಮುಸಲಮಾನರ ಗೈದನೇ ?
ಶಶಿಮುಖಿಯರಧರ ಮಾಂಸವ,
ಕುಸುಮಾಸ್ತ್ರನು ಇರಿಸಿ ಕಡಿಪ ಕುಲವನು ವೇಮಾ,

೨೦೯೯ ವನಿತೆ ಕಣ್ಣು, ಎದೆಯು, ಎನಿತೊ ಲೇಸು ಕಂಡು,
ಮೋಹಗೊಳುವ ಬುದ್ಧಿ ಮೋಸವಾಯ್ತು !
ಕೆಳಮನೆಯೊಳಗಿಹನ ಕಾಣದಂತೆ ಆಯ್ತು, ವಿಶ್ವ

೨೧೦೦ ರೂಪ, ನಡಿಗೆ ನೋಡಿ, ತಾಪ ಹುಟ್ಟುತಿಹುದು,
ಅಂಕುರಿಸಿತು ಭ್ರಾಂತಿ ಅಷ್ಟರಲ್ಲಿ,
ಬುದ್ಧಿ ಮರಳದಿರಲು ರದ್ದಿಯಾಗಿ ಹೋಹ, ವಿಶ್ವ

೨೧೦೧ ವಾತದ ಗುಣದಿಂದ ವಕವಕೆನುವ ಮನುಜ
ಲೊಟ್ಟೆ ಕಣ್ಣಿನವಳ ಲೋಲತೆಗೇ,
ಹುಟ್ಟಿ ಜಗದಿ ನಿಂತು, ಹೊರಳಿ, ಉದ್ಭವಿಸುವ, ವಿಶ್ವ

೨೧೦೨ ಕರಗಿ ಕರಗಿ ಹುಟ್ಟಿತು, ಕನಕತಿರುವ ಕಾಂತಿ,
ಸೇರಿ ಸೇರಿ ಹುಟ್ಟಿತು ಸತಿಯ ಪ್ರೇಮ,
ಲಲನೆ ಲಲನೆಯಿಂದ ಲೋಭ ಮೋಹಂಗಳು, ವಿಶ್ವ

೨೧೦೩ ವಾಂತಿ ಹುಟ್ಟಿದಾಗ, ವಾಕರಿಕೆ ಉಣ್ಣಲು,
ನಾರಿ ಕಾಣಲಾಗ, ನೀತಿಗೇಡು
ಕೇಡು ಗಾಲ ಬರಲು, ಆಡಿದ ನುಡಿ ಕೇಡು,

೨೧೦೪ ಕನ್ನೆ ಯುವತಿ ಕಂಡು ಕದಲದಂತೆ ಇದ್ದು,
ಆಸೆ ಬಟ್ಟು ಒಂದು ಮೂಸೆಯಲ್ಲಿ,
ಕರಗಿಸಿಟ್ಟು ಅದನು ಕೊನೆಗೊಳಿಸಿ ಬಿಡು, ವಿಶ್ವ

೨೧೦೫ ತರುಣಿ ಯಣ್ಣ ತನ್ನ, ತನಯನ ನೋಡಿದೊಡನೆ,
ಮರುಕ ಕಳೆಯು ಮೀರಿ ಮನ ಹರಿವುದು,
ಪಾಪಿ ಜಾತಿ ಮನಸು ಹಿಡಿಯೆ ಬಾರದುಂಟು, ವಿಶ್ವ

೨೧೦೬ ಸೀರೆಯುಟ್ಟು ರಾತ್ರಿ ಸಿಗ್ಗು ಹೊಂದಿಯುಂಟು,
ಹಗಲು ಸೀರೆ ಕಳಚಿ, ಹಣವ ಕೋರೆ,
ಸ್ತ್ರೀಯೆ ಅಲ್ಲ ; ಭರದ ಚೂಪಾದ ಕತ್ತರಿ, ವಿಶ್ವ

೨೧೦೭ ಲಲನೆಯೆನುತ ನರರು, ಲಜ್ಜೆಯೆನಿತು ಇರದೆ,
ಪರರ ಸೊತ್ತನೆಲ್ಲವ ಪರಿಹರಿಸುತ,
ವೇಷ ಭಾಷೆಯಿಂದ ಮೋಸ ಗೆಯ್ಯುತಿಹರು,
ಗ್ರಾಸ ಭಾಷೆಯಿಂದ ಮೋಸ ಗೆಯ್ಯುತಿಹರು,
ಗ್ರಾಸ–ಪೋಷಣಾದಿಗಾಗಿ ವೇಮ

೨೧೦೮ ಮೋಸಗಾರ ಕೊನೆಗೆ ಮೂಳ ರಂಡೆ ಸೇರ್ರೈ,
ಇನ್ನು ಹೇಳಲೇಕೆ ? ಇತರ ಘನರ,
ಮಂಕು ಕಾರ್ಯ ಗೆಯ್ಯೆ ಮರ್ಯಾದೆಗೇಡಯ್ಯ, ವಿಶ್ವ

೨೧೦೯ ಒಲವು ಇದ್ದರಾಗ ವನಜಾಕ್ಷಿಯಧರಗಳು,
ಸಕ್ಕರೆಯ ಸಮೂಹ ಜೇನು–ಹಾಲು,
ಚೊಕ್ಕ ಫಲ ರಸಗಳ ಸೀಕರಣೆ ಸಮವೈ, ವಿಶ್ವ

೨೧೧೦ ಕನ್ನೆ ಮೇಲೆ ಆಶೆ, ಕನಕದ ಮೇಲಾಶೆ,
ಇಲ್ಲದವನೆ ಜಗದಿ ಇಲ್ಲದಾತ,
ಹೊಂದಿರುವಂಥವನು ಹೊರಗೆ ತೋರನಯ್ಯ, ವಿಶ್ವ

೨೧೧೧ ಕೆಂಪು ಇರುವ ಮುಖವ ಕಾಣಲಾವ ಕಾಲ,
ಬ್ರಹ್ಮನಿದ್ದರೂನು ದಿಮ್ಮೆನುವುದು ;
ಇವಳು ನಕ್ಕರಾಗ, ಅವಗೆ ಭೂತ ಗ್ರಹಣ ! ವಿಶ್ವ

೨೧೧೨ ಕಮಲ ನಯನ ಕಂಡು, ಕನಕದೊಡವೆ ಕಂಡು,
ದಿಮ್ಮೆಕುವುದು ಬೇಗ ತಿಳಿವಿಗೆಲ್ಲ !
ಮನುಜರೆಲ್ಲ ತತ್ತ್ವ ಮಹಿಮೆಯೆಂತರಿವರು ? ವಿಶ್ವ

೨೧೧೩ ಚೆಲುವೆ ಕಾಣುವ ತರುಣರಿಗಾ ಲಕ್ಷ್ಯದ,
ಭ್ರಮೆ ಘಟಿಸುವುದು, ತಿರುಗುವ ಪಾಪಿ, ಕೊನೆಗೆ,
ಕ್ರಮವಾಗಿ ಯಮ ಭಟ ಕೋಟಿಗಾಸಿಸುವುದು,
ತವಕದಿಂ ಪೂರ್ವ ದುಸ್ಥಿತಿ ತಿಳಿಯೊ, ವೇಮ,

೨೧೧೪ ಕೂಳಿಗು ಗತಿಯಿರದೆ ಕುಳಿತುಕೊಂಡಿರುವಗೆ
ಆಟಗಾತಿ ಮೇಲೆ ಆಸೆಯಿಹುದೆ ?
ಅನ್ನದ ಮದದಿಂದ ಅನ್ಯ ಮದಗಳೆಲ್ಲ, ವಿಶ್ವ

೨೧೧೫ ಋತುವನನುಸರಿಸುತ ಸ್ಥಿತಿ ಕಾಲಗಳೊಪ್ಪು,
ಗತಿಯು ನಿಂತ ಮನುಜ ಮತಿಯು ಒಪ್ಪು
ಸ್ವೇಚ್ಛೆಗಿಳಿದ ಯುವತಿ ಚೆಲ್ಲಾಟವೆ ಒಪ್ಪು ವಿಶ್ವ

೨೧೧೬ ವಿಟನ ದೃಷ್ಟಿಪಥದಿ ಎಷ್ಟೊ ವಿಭ್ರಮಕರ !
ಸಾಟಿಯಿರದ ಸುರತಿ ಸರಸದಾಟ !!
ನೋಟದೊಳಿಹ ಮಾಟ ತಾನೆ ಕುಂಟಲಗಿತ್ತಿ ವಿಶ್ವ

೨೧೧೭ ಎಲ್ಲ ಹುಣ್ಣು ಹುಟ್ಟಿ, ಎಲ್ಲ ಚಿಂತೆ ಸೋಸಿ
ಖಲ್ಲ ವಿಟನು ಮತ್ತೆ ನಲ್ಲೆ ನೋಳ್ಪ,
ಹಲ್ಲು ಬಿದ್ದ ನಾಯಿ ಎಲುಬು ಕಚ್ಚುವಂತೆ, ವಿಶ್ವ

೨೧೧೮ ವಿಟನು ಕಂಡ ಒಲವು ವಿಶದವಾಗಿ ಉಂಟು,
ಸ್ತ್ರೀಯ ನೋಟಗಳಿಗೆ ಸಾಟಿಯುಂಟೆ ?
ಕಣ್ಣೊಳಗಿನ ಗುಡ್ಡೆ, ಕುಂಟಲಗಿತ್ತಿಯೈ ವಿಶ್ವ

೨೧೧೯ ಧರೆ ಹುಟ್ಟಿ, ಭೋಗಕಾಯಿತು,
ಪರಮನಲಿ ಇಚ್ಛೆ ಬಿಟ್ಟು ಮದನಿಕೆ ಬಯಸಿ ನೀ,
ತಿರುಗಿ ಬಳಲುತಿರೆ ದ್ರವ್ಯವ
ಮರಳಿ ಗಳಿಸುತಿರೆ ಕಡೆಗೆ ಮರಣವೆ, ವೇಮಾ !,

೨೧೨೦ ರತಿಯಿರದಿರೆ ಮುದಿಯಂಗನೆ,
ರತಿಯಿರೆ ಮುದಿತನ ನಶ್ವರವೆನಿಪುದು ಧರೆಯೊಳ್,
ಸತತ ಭ್ರಾಂತಿಲಿ ಗೆಯ್ಯುವ,
ತತಿ ರತಿಯಿಂದ ಸಂತಯಿಪ ನರನು, ತಥ್ಯವು ವೇಮಾ

೨೧೨೧ ಹಸಿವೆಯಿಂದ ಬಂತು, ಹಂತ ಪರದೇಶಿಗೆ,
ಹಿಡಿಯ ತುಂಬ ಅನ್ನ ಕೊಡಲು ಇಲ್ಲ,
ಸೂಳೆ–ಮಗನು ಮತ್ತೆ ಸೂಳೆಗಾಗಿ ಕೊಡುವ, ವಿಶ್ವ

— — — — — — — — — — — — — — — — — — — — — —

೨೧೨೨ ಮಧು ರಸವನು ಕೋರಿ ಮಕ್ಷಿಕಗಳು ಸೇರಿ,
ಬಯಸಿ, ಬಿಟ್ಟು ಬರದೆ, ಬಂತು ನಾಶ,
ಮುಳುಗಿ ಪಾರುಗಾಣ, ಮೋಹ ರಾಶಿಯಲ್ಲಿ, ವಿಶ್ವ

೨೧೨೩ ಇಚ್ಛೆ ಬಂದ ಮಾತು, ಇಂದು ಕಮಲ ನೇತ್ರೆ,
ಮಚ್ಚರಾದಿ, ಮಹಾ ಮಾನ್ಯರೆಲ್ಲ,
ತುಚ್ಛೆ ಗುಣವ ಬಿಡದೆ, ದೂರುತಿರುವರಯ್ಯ, ವಿಶ್ವ

೨೧೨೪ ಕನ್ನೆಯನವಲೋಕಿಸುತ್ತ,
ಚನ್ನೆ ಎದೆಯ ಮೇಲೆ ದೃಷ್ಟಿ ಸಹಜವು ಇಳೆಯೋಳ್,
ಕಣ್ಣಿಗೆ ಇಂಪಿಹ ದೃಷ್ಟಿಯು,
ತನ್ನನರಿಯೆ ಮುಕ್ತಿಗಿರವು ಆಯಿತು ವೇಮಾ,

೨೧೨೫ ಮುಖವ ನೋಡಿದೊಡನೆ, ಮೋಹ ಘನವಾಯಿತು
ಧನವ ನೋಡಿದೊಡನೆ ತಗಲಿ ಮನಸು,
ಅಡಿಗೆ ಬೀಳಲಾಗ, ಅಂಗಾಂಗ ಮುರಿವವು ವಿಶ್ವ

೨೧೨೬ ಅನ್ನಕಿನಿತು ಗತಿಗಾಣದೆ ಕುಳಿತ ನರನು,
ಕನ್ನೆ ಕಂಡು ಮೋಹದಿ ಸಿಲುಕುವನು,
ಧಗಿಸುವಗ್ನಿ ಕಂಡ ಪತಂಗದಂತಯ್ಯ, ವಿಶ್ವ

೨೧೨೭ ಅಡಗಿ ಇರುವ ಸರ್ವ ಅಂತರಂಗವನ್ನು
ನಂದಿಸುತ್ತ ನೋಡಿ ಹೊಂದಲಿಲ್ಲ,
ಸುಂದರವಾಗಿ ಹೆಣ್ಣ ಸುತ್ತು ತಿರುಗುತಿಹರು, ವಿಶ್ವ

೨೧೨೮ ಸಿಹಿಯೊಳಗತಿ ಸಿಹಿಯು ಅರಿತೊಡನೆ ಪ್ರಾಣ,
ಪ್ರಾಣಕಿಂತ ಬಹಳ ಹಣವೆ ಸಿಹಿಯು,
ಹಣಕಿಂತ ಮಿಗಿಲು ತರುಣಿ ಮಾತಿನ ಸಿಹಿ, ವಿಶ್ವ

೨೧೨೯ ಹಾವಿಗಿಂತ ಹೆಚ್ಚು ಪಾಪಿ ಜೀವಿಯಿಲ್ಲ,
ಅಂಥ ಹಾವು ನುಡಿಯೆ ಆಲಿಸುವುದು,
ಇಳೆಯಲ್ಲಿ ಮೋಹಿಗೆ ತಿಳಿಸಲಾರು ಶಕ್ತ ? ವಿಶ್ವ

೨೧೩೦ ಶುದ್ಧ ದೃಷ್ಟಿಯುಳ್ಳ ಶುಕ್ರನಂಥವ ಸಹ,
ಹಿಡಿತವಿರದೆ, ಮನಸು ಹದ್ದು ಮೀರಿ
ಕಣ್ಣು ಹೋಗಿ, ಕೊನೆಗೆ ಕಾಗೆಯಂತೆ ಆದ, ವಿಶ್ವ

೨೧೩೧ ಇದ್ದು ತಿನಲಾರದ, ಇರುಕಿನೊಳಿಹ ರೋಗಿ,
ಅಬಲೆಯರನು ಹೊಂದೆ, ಆಶಿಸುವನೆ ?
ಅನ್ನ ಮದದ ಜೊತೆಗೆ ಅಖಿಲ ಮದಗಳುಂಟು, ವಿಶ್ವ

೨೧೩೨ ಊಟವುಂಡುಮತ್ತೆ ವಿರಾಮದಿಂದಿರಲು,
ಮಾಟಗಾತಿ ಕಂಡು ಮನಸು ನೆಡದೆ ?
ಊಟದನ್ನ ರಸವು ಅಂಗಕತಿ ಮದಕರ, ವಿಶ್ವ

೨೧೩೩ ಮರುಳನಾದ ನರನು ಮೆರುಗಿನವಳ ಕಂಡು,
ಜ್ವರೋನ್ಮಾದ ಜನಿಸಿ ಮರುಳುಗೊಳುವ !
ತೆರೆದು ಹಲ್ಲು ನಗಲು, ನಾರಿ ಪೆಡಂಭೂತ ! ವಿಶ್ವ

೨೧೩೪ ಕಾಂತೆ ಮೇಲೆ ಆಸೆ, ಕನಕದ ಮೇಲಾಸೆ,
ಇಲ್ಲದವನು ಜಗದಿ ಇಲ್ಲದವನು,
ಹೇಳಲೇಕೆ ಸುದ್ದಿ ? ಹೊಳೆಯದೆ ಕಂಡೊಡನೆ ? ವಿಶ್ವ

೨೧೩೫ ತನ್ನ ತನುವಿಗೆಂದು ತರುಣಿ ಭ್ರಮೆಗೆ ಸಿಕ್ಕು,
ಸೊರಗಿ ಹೋದ ನರನು ಚಿಂತೆಯಿಂದ,
ಕಡೆಯ ದಾಟನಕಟಾ ; ಕೇಡು ಸಂಸಾರಿಯು ; ವಿಶ್ವ

೨೧೩೬ ದಿನದ ಮೂರು ಹೊತ್ತು ತಿಂದು ಮಲಗುತಿರುವ,
ಸೊಗಸು ಸ್ತನದವಳ ಸೊಂಪಿನಿಂದ,
ನಂಬಿಕೊಂಡು, ಧನವ ಕೆಡಿಸಬೇಡವೆಂದು, ವಿಶ್ವ

೨೧೩೭ ಈ ಲೋಕ ಮರ್ತ್ಯರೆಲ್ಲರು,
ಸ್ತ್ರೀ ಲೋಲತ–ಮಗ್ನರಾಗಿ ಸಿಕ್ಕಿದರಕಟಾ,
ಕಾಲನ ಮನದೊಳಗೆಣಿಸರು,
ಮೇಲಹ ಪುರುಷಾರ್ಥ ಮಹಿಮೆ ಮೆಚ್ಚಿಲೋ ವೇಮಾ

೨೧೩೮ ಅಂಗನೆಯರು ಕಾಣೆ, ಅಷ್ಟಿಷ್ಟು ಎನಬೇಡ ;
ಅಗ್ನಿಗರಗು ಕರಗಿದಂಥ ರೀತಿ,
ಮುಗ್ಧ ಮೋಹ ನೆಗೆದು, ಮೂಳ್ಪುದಚ್ಚರಿಯನು ! ವಿಶ್ವ

೨೧೩೯ ಸ್ತ್ರೀಯ ನೋಡಿದೊಡನೆ, ಸ್ತನಗಳ ಮೇಲಾಸೆ
ಉಡುಗದಿರುವ ಮನುಜ, ಉಪಚರಿಸುತ
ನಷ್ಟ ಕಷ್ಟ ಹೊಂದಿ, ನೆಲ ಹಿಡಿದು ಸಾವನು, ವಿಶ್ವ

೨೧೪೦ ಅಂಗನೆ ನೋಡುತಿರಲು, ಅಷ್ಟಿಷ್ಟು ಎನಬೇಡ ;
ಕಾಲ ವಹ್ನಿಗರಗು ಕರಗುವಂತೆ,
ಒಟ್ಟು ಮೋಹವಿಂತು ರಟ್ಟಾಗಿ ಹೋಗದೆ ? ವಿಶ್ವ

೨೧೪೧ ಹೆಣ್ಣಿನಿಂದ ಆಯ್ತು ; ಹೊಳೆವ ಪ್ರಪಂಚೆಲ್ಲ,
ಹೆಣ್ಣಿನಿಂದ ಆಯ್ತು ; ಪರವಿಹಗಳು,
ಹೆಣ್ಣಿಗಾಶಿಸಿದರು ಬ್ರಹ್ಮಾದಿ ಸುರರೆಲ್ಲ ! ವಿಶ್ವ

೨೧೪೨ ಅಧಿಕವಾದ ಯಜ್ಞ ಅಲ್ಪನು ತಾ ಗೆಯ್ಯೆ,
ಮಾನ್ಯ ಶಾಸ್ತ್ರವಾದಿ ಮಾನಗೇಡು,
ಕೂಳು ತಿನುವ ನಾಯಿ ಗಡಿಗೆ ಒಯ್ಯದು ತಾನು, ವಿಶ್ವ

●

## ದೇವ ದಾಸಿಯರು

ವೇಶ್ಯಾ ಗೃಹ ಪದ್ಧತಿಯು ಭಾರತದಲ್ಲಿ ರಾಜಮಾನ್ಯ ವ್ಯವಸ್ಥೆಯಾಗಿತ್ತು. ಪಟ್ಟಣವಾಸಿಗಳಾದ ಇವರಿಗೆ ಕೆಲವೊಂದು ಸ್ಥಾನಮಾನಗಳೂ ಇದ್ದವು. ಪಾಶ್ಚಾತ್ಯ ದೇಶಗಳ ವೇಶ್ಯಾ ವಾಟಿಕೆಗಳು ಇವುಗಳ ಸ್ಥಾನವನ್ನು ಕಳೆದೆರಡು ಶತಮಾನಗಳಿಂದ ಆಕ್ರಮಿಸಿದವು.

ವೇಶ್ಯಾ ಗೃಹ ಪದ್ಧತಿಯು ಪ್ರಚಲಿತವಿರುವಾಗ ಕೆಲವು ಜಾತಿಯ ಸ್ತ್ರೀಯರು ಹಿಂದು ಮಂದಿರಗಳಲ್ಲಿ ಪೂಜಾ ದೇವತೆಗಳೆದುರು ಹಾಡುತ್ತಿದ್ದರು. ಮತ್ತು ನರ್ತಿಸುತ್ತಿದ್ದರು. ಇಂಥವರನ್ನು ಸಾಮಾನ್ಯ ವೇಶ್ಯೆಯರೆಂದು ನೋಡುತ್ತಿರಲಿಲ್ಲ. ಅವರು ವಿಶೇಷ ಸಾಮಾಜಿಕ ಅಂತಸ್ತುಗಳಿಗಾಗಿ ಮತ್ತು ತಮ್ಮ ಧರ್ಮನಿಷ್ಠೆಗಾಗಿ ಖ್ಯಾತರಾಗಿದ್ದರು.

ಇಂಥ ಬಾಳು ನಡೆಸಲು ತಾವು ದೇವ ನಿಯಾಮಕರೆಂದು ಅವರ ಭಾವನೆಯಾಗಿತ್ತು. ಅವರಿಗೆ ಅವರವೇ ಆದ ಜಾತಿ ಸಂಪ್ರದಾಯಗಳಿದ್ದವು. ಅವರಲ್ಲಿ

ಮದುವೆಯಿಲ್ಲವಾದುದರಿಂದ ಮಾತ್ರ ಪ್ರಧಾನ ವ್ಯವಸ್ಥೆಯಿತ್ತು. ಈ ದೇವದಾಸಿಯರು ಬಟ್ಟೆ ಬಿಚ್ಚಿದ ಮಾಟಗಾತಿಯರಿರಲಿಲ್ಲ. ಸಿಕ್ಕವರನ್ನು ಬರಮಾಡಿಕೊಳ್ಳುವ ಬೀದಿ ಬಸವಿಯರೂ ಆಗಿರಲಿಲ್ಲ.

ವೇಮನರು ಅವರನ್ನು ಕುರಿತು ಬರೆದ ನಾಲ್ಕಾರು ಪದ್ಯಗಳನ್ನು ನೋಡುವಾ ; ತವುಡೇ ಆಗಲೊಲ್ಲದೇಕೆ ? ಸಕ್ಕರೆಯನ್ನು ಕಲೆಸಿ ತಿನ್ನುವುದಾದರೆ ಅದೇ ಲೇಸೆನಿಸುವದು. ಅದೇ ರೀತಿ, ಮೋಹವೆಂಬ ಸಕ್ಕರೆ ಬೆರೆತಾಗ ತೌಡು–ಪ್ರಾಯವಾದ ದೇವದಾಸಿಯೇ ತಕ್ಕವಳಾಗುವಳು. ಈ ಮಹಿಯಲ್ಲಿ ಚೊಕ್ಕ ಚೆಲುವೆಯೆನ್ನಿಸುವಳು ; ದಿವ್ಯ ಭಾಮೆಯೆನ್ನಿಸುವಳು.

ಹಣವನ್ನೇ ಎದುರಿಟ್ಟುಕೊಂಡು ನೋಡುವುದು ಸರಿಯಲ್ಲ. ವಿವರವನ್ನರಿತು ತಿಳಿದು ವಿಟನನ್ನು ವರಿಸಬಹುದು. ದೇವದಾಸಿಯಾದ ಗಣಿಕೆಯ ಮೇಲೆ ತಾನು ಕಣ್ಣಿಟ್ಟು ಕೆಡಿಸುವುದು ಸರಿಯಲ್ಲ.

ಗುಡಿಯ ಸೇವೆಯಲ್ಲಿರುವ ದಾಸಿಯ ಸಂಗ ಮಾಡಿದರೆ ದೋಷ ಬರುವದು. ವೇಶ್ಯೆಯ ಸಂಗಕ್ಕಿಳಿದರೆ, ಎಲ್ಲವೂ ಬಯಲಾಗಿ ಮರ್ಯಾದೆಗೆ ಕೇಡಾಗುತ್ತದೆ. ಇನ್ನು ಜಾರೆಯು ಅವಳ ಗಂಡನ ಕೈಯಲ್ಲಿ ಸಾವನ್ನಪ್ಪಬೇಕಾಗುತ್ತದೆ. ತನ್ನಲ್ಲಿ ಅನುರಕ್ತಳಾದ ದಾಸಿಯ ಕೈಯಲ್ಲಿ ಸಿಕ್ಕು ಹೊರಬರಲು ಮಿಡುಕಾಡುತ್ತಿರುವ ನರನಿಗೆ ಅವಳಿಂದ ಬಿಡುಗಡೆ ಆಗುವುದೆಂತು? ಒಮ್ಮೆ ಧೈರ್ಯ ಮಾಡಿ ಕೊಸರಿ ಹೊರಬೀಳಬೇಕು.

ದೇವದಾಸಿಯ ಕೂಡ ಸೇರಿದರೆ, ತನ್ನ ಒಳ್ಳೆಯ ಹೆಸರನ್ನೇ ದಂಡವಾಗಿ ಕೊಡಬೇಕಾಗುವುದು. ಕಳವಿನಿಂದ ವ್ಯವಹರಿಸುವ ರಂಡೆಯೊಂದಿಗೆ ಸೇರಿದರೆ, ಹೆಚ್ಚು ನಿಂದೆಗೀಡು. ಇನ್ನು ಸೇವಕರ ಮಡದಿಯನ್ನು, ತಳವಾರಳವಳನ್ನು ಸೇರಿದರೆ ಗಟ್ಟಿಮುಟ್ಟಾದ ತಳವಾರನು ಬಡಿದೇ ಕೊಲ್ಲಬಹುದು.

೨೧೪೩ **ಸಕ್ಕರಿಯ ಕಲಿಸಿ ತಿನ್ನಲು,**
**ಮುಕ್ಕುವ ತವುಡೆ ಇರಲಿ, ಲೇಸು, ಮೋಹ ಕುದುರಲ್**
**ತಕ್ಕವಳು ; ದಾಸಿಯೆ ಇರಲಿ,**
**ಚೊಕ್ಕ ಚೆಲುವೆ, ದಿವ್ಯ ಭಾಮೆ ; ಮಹಿಯಲಿ ವೇಮಾ**

೨೧೪೪ **ನಾಣ್ಯವಿರಲು ಕೆಡುಗು, ನಯವನರಿತು ತಿರುಗು,**
**ವಿಟನ ರಮಿಸಬಹುದು, ವಿವರವರಿತು,**
**ದಾಸಿಯಾದ ಗಣಿಕೆಯ ತಾ ಕಣ್ಣಿಡಲು ಹೊಲ್ಲ,** **ವಿಶ್ವ**

— — — — — — — — — — — — — — — — — — — — —

೨೧೪೫ ದಾಸಿ ಸಂಗ ಮಾಡೆ ದೋಷ ದೋಷ ನೋಡು,
ವೇಶ್ಯೆ ಸಂಗ ಮಾಡೆ, ಲಜ್ಜೆಗೇಡು,
ಜಾರೆ ಸಂಗ ಮಾಡೆ, ಮತ್ತೆ ಸಾವಿಗೀಡು, ವಿಶ್ವ

೨೧೪೬ ತನ್ನ ರಕ್ತಿಯೆಂಬ ದಾಸಿ ಕೈಗೆ ಸಿಕ್ಕು,
ಮಿಕ್ಕಿ ಹೊರಗೆ ಬರದೆ ಮಿಡುಕುತಿರುವ,
ನರನಿಗೆಲ್ಲಿ ಮುಕ್ತಿ ದೊರೆಯುವುದು ಹೇಳಿರಿ, ವಿಶ್ವ

೨೧೪೭ ದಾಸಿಯೊಡನೆ ಕೂಡೆ ದಂಡ ಹೆಸರು ಮೂಟೆ,
ಕಳ್ಳ ರಂಡೆ ಕೂಡೆ, ಹೆಚ್ಚು ನಿಂದೆ,
ತಳವಾರಳ ಕೂಡೆ ತಲೆ ದಂಡವೆ ಕಾಣು, ವಿಶ್ವ

●

## ಸಾಧನೆ ಮತ್ತು ಕಾಮ

ವೇಮನ ಯೋಗಿಗಳ ಪದ್ಯಗಳು ಯೋಗ ಸಾಧಕರೆದುರು ಹಿಡಿದ ಆದರ್ಶ ಅರ್ಥಾತ್ ಕನ್ನಡಿಯಂತಿವೆ. ತಮ್ಮ ಮನಸ್ಸಿನಲ್ಲಿ ಸಾಧು ಸನ್ಯಾಸಿಗಳಾದವರು ಕನವರಿಸುವ ವಿಚಾರಗಳನ್ನು ಯೋಗಿವರ್ಯರು ಮನಸ್ಸಿಗೆ ನಾಟುವಂತೆ ಚಿತ್ರಿಸುತ್ತಾರೆ. ಕಾಮ ವಿಷಯಗಳನ್ನು ಬಚ್ಚಿಡುವ ಕಾಲವೊಂದಿತ್ತು. ಆದರೆ ಅವನ್ನೆಲ್ಲ ಬಿಚ್ಚು ಮಾತಿನಲ್ಲಿ ಚರ್ಚಿಸುವ ಮೂಲಕ ಕಾಮ ನಿಗ್ರಹವು ಸಾಧ್ಯವೆಂಬ ಸಿದ್ಧಾಂತವು ಆಧುನಿಕ ಮಾನಸ ಶಾಸ್ತ್ರಜ್ಞರಲ್ಲಿ ಪ್ರಬಲಿಸುತ್ತದೆ. ವೇಮನರು ಈ ವಿಚಾರ ಪ್ರಣಾಲಿಯ ಹರಿಕಾರರು.

ತಮ್ಮ ಏರು ಜವ್ವನದಲ್ಲಿ ಕಾಲು ಜಾರಿ ಜಾರೆಯೊಬ್ಬಳ ಸಂಗದಲ್ಲಿ ಯೋಗಿವರ್ಯರು, ತಮ್ಮ ಸಾಧನಾರಂಭಕ್ಕಿಂತ ಮುನ್ನ, ಸಿಲುಕಿದ್ದರೆಂಬ ಪಿಸುಮಾತು ವಿಮರ್ಶಕರಲ್ಲಿ ಕೇಳಿಬರುತ್ತಿದೆ. ಆದರೆ ಪೂರ್ವಾಶ್ರಮದ ಸಂಸ್ಕಾರಗಳು ಸಾಧನಾ ಸಿದ್ಧಿಯ ನಂತರ ಸುಟ್ಟ ಹಗ್ಗದಂತೆ ಮಾತ್ರ. ವ್ರಜ ಕೃಷ್ಣನು ಗೋಪಿಕೆಯರೊಂದಿಗೆ ರತಿಕ್ರೀಡೆಯಾಡಿದ ಬಗೆಗೆ ಭಾಗವತದ ಪುಟಪುಟಗಳಲ್ಲಿ ಬಣ್ಣಿಸಲಾಗಿದೆ. ಆದರೆ, ಅವನೇ ಪಾರ್ಥಸಾರಥಿಯ ಪಾತ್ರದಲ್ಲಿ ಧರ್ಮಯುದ್ಧದ ಕೇಂದ್ರಬಿಂದುವಾಗಿ, ಉದ್ದೀಪ್ತ ಪುರುಷನಾಗಿ ಕಂಗೊಳಿಸುತ್ತಾನೆ. ಹೀಗೆ ಪೂರ್ವದ ಕಾಮಿಯು ಪುರುಷೋತ್ತಮನೆನಿಸಿ ಮೆರೆಯುತ್ತಾನೆ. ಇನ್ನು ಕಾಮಿಯಲ್ಲದವರೆಲ್ಲ ಗಣಪತಿಯಾಗುವುದಿಲ್ಲ ತಾನೇ ?

ನಮ್ಮ ಪುರಾಣಗಳಲ್ಲಿ ಇಂದ್ರ, ಶಿವ, ಮತ್ತೆ ಬ್ರಹ್ಮರನ್ನು ಕಾಮಿಗಳೆಂದು ಚಿತ್ರಿಸಿದ್ದನ್ನು ಮತ್ತು ತಮ್ಮ ಕಾಮ ಕ್ರೀಡೆಗಾಗಿ ಶಾಪಗ್ರಸ್ತರಾದುದನ್ನು ಚಿತ್ರಿಸಿವೆ.

ಹೀಗೆ, ಕಾಮವು ಇಷ್ಟೊಂದು ಪ್ರಬಲ ಪ್ರಭಾವ ಬೀರಲು ಕಾರಣವೇನಿರಬಹುದು ? ಹೆಣ್ಣಿನ ರೂಪವೇ ಇದಕ್ಕೆಲ್ಲ ಕಾರಣ. ಅವಳ ಕುಚ,

ಕುಂಭಗಳು, ನುಡಿಯಬಾರದ ಮರ್ಮಸ್ಥಲಗಳು ಕಾಮ ಪ್ರಚೋದಕವಾಗಿದ್ದು, ಮುನಿಗಳೂ ಕೂಡ ಎಡವಿದ ದೃಷ್ಟಾಂತಗಳು ನಮ್ಮ ಕಣ್ಮುಂದೆ ಇವೆ. ವಿಶ್ವಾಮಿತ್ರ ಮೇನಕೆಯ ಕಾಮಾಸಕ್ತಿ, ಪರಾಶರ–ಮತ್ಸ್ಯಗಂಧಿಯರ ರತಿಕ್ರೀಡೆಗಳು ಯಾರಿಗೆ ತಿಳಿದಿಲ್ಲ ?

ಮತಧರ್ಮಗಳ ಸೂತ್ರಗಳಲ್ಲಿ ನೈಷ್ಠಿಕ ಬ್ರಹ್ಮಚರ್ಯದ ಮಾತೂ ಬರುತ್ತದೆ. ಆದರೆ ಮಧುರ ಅಧರ ನೋಡಿ, ಮಹಿಳೆಯ ರೂಪವನ್ನು ನೋಡಿ ಎಲ್ಲ ಯೋಗವನ್ನೂ ಮರೆತು ಕಾಮಕ್ರೀಡೆಗಳಲ್ಲಿ ತೊಡಗುವವರು ಸಾಕಷ್ಟು ಮಂದಿ.

ಪುರುಷ ಚಿಹ್ನೆಗಳನ್ನು ಕಂಡು ಸ್ತ್ರೀ ಭ್ರಮಿತಳಾಗುವಳು. ಆದರೆ ಪುರುಷನು ಅಸಹ್ಯನಾಗಿ ಹುಟ್ಟುವನಷ್ಟೇ. ಶಿವನು ಪುರುಷನಾದರೂ ಸ್ತ್ರೀಗೆ ವಶವಾಗುವದಿಲ್ಲ. ಆ ರೀತಿ ಯೋಗ ಸಾಧಕನು ತನ್ನ ಆದರ್ಶವನ್ನು ಶಿವನಲ್ಲಿ ಕಾಣಬೇಕು. ಎಲ್ಲಿಯವರೆಗೆ ಮನಸ್ಸು ಸುಂದರಿಯರಲ್ಲಿ ಆಸಕ್ತವಾಗುವುದೋ, ಆಗ ರಾಮ ಮಂತ್ರವು ಹಿಡಿಸದು.

ಭಗ ಎಂದರೆ ಶ್ರೀ, ಧೀ ಇತ್ಯಾದಿ ಷಡ್ಗುಣಗಳು. ಭಗ ಎಂದರೆ ಸ್ತ್ರೀಯ ಜನನೇಂದ್ರಿಯವೂ ಹೌದು. ಇಲ್ಲಿ ಶ್ಲೇಷಾಲಂಕಾರವಿದೆ. ಭಗವುಳ್ಳವನು ಭಗವಂತ. ಭಗವನ್ನು ಕೋರುವವರೇ ಎಲ್ಲರೂ. ಭಗ ಕೋರುವವರು ಯಾರು ಇಲ್ಲ ?

ಎಂಥ ಯೋಗಿಯಾಗಿರಲಿ, ಸ್ತ್ರೀಯ ರೂಪಾಲಂಕಾರಗಳನ್ನು ಕಂಡು ಕಾಲು  ಜಾರುತ್ತಾನೆ. ಹಾಗೆ ಕಾಲು ಜಾರಿ ಬೀಳದ ಅಪರೂಪದ ಯೋಗಸಾಧಕನೇ ಯೋಗಪುರುಷನಾಗಿ ಕಂಗೊಳಿಸುತ್ತಾನೆ.

ನಮ್ಮ ಮನಸ್ಸು ಸರಿಪಡಿಸಿಕೊಳ್ಳಬೇಕು. ತಂದೆ ಮಗ ಇಬ್ಬರೂ ಸ್ತ್ರೀಯ ಎಡಬಲದಲ್ಲಿ ಮಲಗಿ ಅವಳ ಮೊಲೆಗಳನ್ನು ನೋಡುತ್ತಾರೆ. ಮಗು ಅವಳ ಮೊಲೆಗಳನ್ನು, ಹಾಲನ್ನೀಯುವ ಪೋಷಕ ಕಾರಣವೆಂದು ಕಾಣುತ್ತದೆ. ತಂದೆಯು ಅವೇ ಕುಚಗಳಲ್ಲಿ ಕಾಮ ಪ್ರಚೋದಕ ವಸ್ತು ಕಾಣುತ್ತಾನೆ. ಹೀಗೆ ಜಗತ್ತಿನ ಯಾವುದೇ ವಸ್ತುವನ್ನು ಸರಿಯಾಗಿ ನೋಡುವ ದೃಷ್ಟಿ ಬೆಳೆಸಿಕೊಳ್ಳಬೇಕು.

**೨೧೪೮ ಕಾಮಿಯಾದ ನರನು ಘನನು ಆಗನೇನು ?**
**ಕಾಮಿಯಲ್ತೆ ? ಕೃಷ್ಣ ಸ್ವಾಮಿ ಮುನ್ನ ;**
**ಕಾಮಿಯಿರದ ಜನರು ಗಣಪತಿಯಾಗರೇಕೆ ? ವಿಶ್ವ**

**೨೧೪೯ ಇಂದ್ರನಾದ ಕಾಮಿ, ಹೀನನಾಗಿ ಹೋದ ;**
**ಮಾರನಾದ ಕಾಮಿ, ಮೈಯ ಮರೆತ ;**
**ಬ್ರಹ್ಮನಾದ ಕಾಮಿ, ಬಹಳ ಲಜ್ಜೆಗೆಟ್ಟ, ವಿಶ್ವ**

೨೧೫೦ ಈಶ್ವರನಿಗೆ ಇದುವೆ ಇನಿತಾದರು ದೋಷ,
ಬ್ರಹ್ಮ ನಿಗೊದಗಿದ ಪಾಡು ದೋಷ,
ವಿಷ್ಣು ದೇವಗಿದುವೆ ವಿಪರೀತದ ದೋಷ, ವಿಶ್ವ

೨೧೫೧ ಮತದ, ದಾರಿ ಮರೆತು, ಮಧುರ ಅಧರ ಕಂಡು,
ಮಹಿಳೆ ರೂಪ ನೋಡಿ, ಮನಸು ಮರೆತು,
ಉರವ ನೋಡಿ ಸರ್ವ ಯೋಗವನೆ ಮರೆವರು ! ವಿಶ್ವ

೨೧೫೨ ಕಂಡು ಹೇಳಲು ಸೊಗಸು ! ಕುಚಕುಂಭಗಳನೆಲ್ಲ,
ನುಡಿಯಬರದ ತಾಣ ನೋಡಿ ಬಳಿಗೆ,
ಮುಪ್ಪುರಿಗೊಳ್ಳುವುದು, ಮುನಿಗೆ ಕೂಡ ಮೋಹ, ವಿಶ್ವ

೨೧೫೩ ಮಂತ್ರವೆಲ್ಲ ಮರೆತು, ಮಧುರ ಅಧರ ಕೋರಿ,
ಬಹಳ ನೀತಿಗೆಟ್ಟು ಬಿಂಕ ಬಿಡನು,
ಯುವತಿ ಕಂಡು ಪರಮ ಯೋಗವನೆ ಮರೆವರು, ವಿಶ್ವ

೨೧೫೪ ನಾರಿರೂಪ ಕಂಡು, ಸಿರಿಯ ಸೊಬಗ ಸವಿದು,
ಸಾರವಿಷ್ಟ ರಸದ ಮಹಿಮೆ ಕೇಳೆ,
ಆರ್ಯನಾದರೇನು, ಆಶೆ ಉದಿಸದಿಹುದೆ ? ವಿಶ್ವ

೨೧೫೫ ನಾರಿ ಪಾಪ ಜಾತಿ ನಿಖಿಲ ವಸ್ತುಗಿಂತ,
ಆಶೆಯಿಂದ ಯತಿಯು ಮೋಸಗೊಳನೆ ?
ನೋಡಿ ಬಿಡುವ ಅವರು, ನೋಡು ಶುದ್ಧಾತ್ಮರು, ವಿಶ್ವ

೨೧೫೬ ಪುರುಷ ಚಿಹ್ನೆ ನೋಡಿ ಹುಟ್ಟಿತು ಸ್ತ್ರೀಗೆ ಭ್ರಮೆ,
ಪುರುಷನಸಹ್ಯವಾಗಿ ಹುಟ್ಟುವನಲ !
ಶಿವನು ಪುರುಷನಿರಲು ಸ್ತ್ರೀಗೆ ಸಿಕ್ಕುವನೇ ? ವಿಶ್ವ

೨೧೫೭ ಸೋಮ ಮುಖಿಯರೊಡನೆ ಸುಖಿಸುವವನಿಗೆಂತು ?
ರಾಮ ಮಂತ್ರ ಜಪವು ರುಚಿಸಬಹುದು ?
ಪಾಮರತ್ವ ಅವನು ಬಿಡನು ಎಂದಿಗೂನು, ವಿಶ್ವ

೨೧೫೮ ಭಗವ ಕೋರುವಂಥ ಪಲವರು ಕಾಣುವರು,
ಭಗವ ಕೋರದವರು ಜಗದೊಳಿಲ್ಲ,
ಭಗವನುಳ್ಳ ಅವನು ಭಗವಂತನಾಗುವ, ವಿಶ್ವ

೨೧೫೯ ಅಬಬ ! ಲಲನೆ ಕಣ್ಣು, ಅತಿ ವಿಚಿತ್ರ ಮೊಲೆಗಳು !
ಚಿಂತೆ ಕವಿಯದವನೆ ಅಂತೆ ತೊಡೆದು,
ಸರಸ ಪಡುವ ಅವನೆ ಸರ್ವದಾ ಯೋಗಿಯು, ವಿಶ್ವ

೨೧೬೦ ಅಧರ ಸುಧೆಯ ಕಂಡು, ಅಖಿಲವನು ಮರೆವನು,
ತರುಣಿ ರೂಪು ಕಂಡು, ತನ್ನ ಮರೆವ,
ಮಾತುಗಳನಾಲಿಸಿ, ಮರೆಯುವನು ಯೋಗವ, ವಿಶ್ವ

೨೧೬೧ ತೊಡೆಯ ಮೆರುಗು ಕಂಡು, ದೊಡ್ಡ ಸ್ತನವ ಕಂಡು,
ವೇಶ್ಯೆ ಕಂಡು, ಅವಳ ವರ್ಣ ಕಂಡು,
ಅಯ್ಯರಿಗೆಂದೇನು ಆಶೆಗಳುದಿಸವೇ ? ವಿಶ್ವ

೨೧೬೨ ತ್ಯಾಜ್ಯಳೆನಿಪಳನ್ನು ತೊರೆದು ಬಿಡದ ನರನು,
ಕೆಡುವ ತನಕ ಕೆಟ್ಟು ಗುಡಿಸಲೊಳಿರಲು,
ಭಾಗವತ ಪದವಿಯ ಪಡೆಯನವನು ನೋಡು, ವಿಶ್ವ

೨೧೬೩ ಮರುಳಾದೊಡೇನು ? ಮಾರು ವೇಷಿಯೇನು ?
ರೋಗಿಯೇನು ? ಪರಮ ಯೋಗಿಯೇನು ?
ನಾರಿ ನೋಡಿದೊಡನೆ ಚಿತ್ತ ಕದಡದೇನು ? ವಿಶ್ವ

೨೧೬೪ ವನದೊಳಗೆ ತಿರುಗುವ ವರ ಮೌನಿಯಾದರು
ಮನಸು ಕುದುರುತಿಹುದು ಮಮತೆಯಿಂದ,
ಕೆಡುವನೆಂಬ ಮೂರ್ಖ ಕೆಡುವುದೇನು ಲೆಕ್ಕ ? ವಿಶ್ವ

೨೧೬೫ ಸ್ತ್ರೀಯ ಯೋನಿ ಹಾದರ, ಸಮೀಕ್ಷಿಸಿ ನೋಡಲು,
ಕೋಟಿ ಪೂಜೆಯೆಲ್ಲ ಕೆಟ್ಟು ಹೋಗಿ,
ಸೆಕೆಯ ಬಳಿಗೆ ಇರಲು ವಿಕರಿಸದೆ ತಾಪವು ? ವಿಶ್ವ

೨೧೬೬ ಎಂಥ ಯೋಗಿಯೇನು ? ಎಳಸಿ ಮನ್ಮಥ ಸ್ಥಿತಿ,
ಸವಿಯ ಬಲ್ಲೆನೆಂದು, ಸೃಷ್ಟಿ ಆಣೆ,
ಯೋಗವೆಲ್ಲ ಮರೆತು ಜೋಗಿ ಪಾಡು ಪಡುವ, ವಿಶ್ವ

೨೧೬೭ ಬಾರು ಮಾಡಿ ಜಡೆಯ ಭಸ್ಮಾಂಗ ಲೇಪಿಸಲು,
ಮದನನು ಮುದದಿಂದ ಮರುಕಳಿಸಲು,
ಅರಿವೆ ಕಳಚಿ ಹೋಗಿ ಅಂಗ ಉಬ್ಬದಿಹುದೆ ? ವಿಶ್ವ

೨೧೬೮ ಕಾವಿ ಬಟ್ಟೆಯುಟ್ಟು, ಘನ ಯೋಗಿಯ ರೀತಿ ;
ಅಲೆದು ಸಂಜೆಯಾಗೆ, ಅರಿವು ಬಿಟ್ಟು,
ಬೆನ್ನು ಹತ್ತಿ ತಿರುಗೆ, ಭಂಡ ಸನ್ಯಾಸಿಯು, ವಿಶ್ವ

೨೧೬೯ ಕಾಮ ಮೋಹಗಳನು ಕೂಡಿ ಇರುವ ನರನು
ದೇವ ಇಷ್ಟ ಗುರುವ ತಿಳಿಯಲಾರ,
ಇಷ್ಟು ಅರಿಯುವವನೆ ಇಳೆಯಲಿ ಸಜ್ಜನನು, ವಿಶ್ವ

೨೧೭೦ ಹೊನ್ನು ನೋಡಿದೊಡನೆ, ಹೆಣ್ಣು ನೋಡಿದೊಡನೆ
ಚಿತ್ತದಲಿ ಚಿಂತೆ ಹತ್ತದಿರಲು
ಅವನೆ ಪರಮಯೋಗಿ ; ಅವನಿಯಲಿ ಬಣ್ಣಿಸು, ವಿಶ್ವ

೨೧೭೧ ಪಂಕಜಾಕ್ಷಿ ನೋಡೆ, ಪೊನ್ನಿನೊಡವೆ ನೋಡೆ,
ದಿಗಿಲುಗೊಳುವ ಯೋಗಿ ನಂಬಬೇಡ,
ಮನಸು ನಿಲಿಸಿದವನೆ ಮಹಿಯೊಳೊಪ್ಪ ಯೋಗಿ, ವಿಶ್ವ

೨೧೭೨ ಕಚ್ಚೆ ಮೇಲೆ ಆಸೆ ; ಕನಕ ಮೇಲೆ ಆಸೆ,
ಇಲ್ಲದವನು ಜಗದಿ ಇಲ್ಲದವನು,
ಇರುವಂಥವನು ಇಳೆಯಲಿ ಕಾಣನಲ್ಲ ? ವಿಶ್ವ

೨೧೭೩ ಸ್ತನಗಳ ಭಂಗಿ ಕಂಡು ಸಾಧುಗಳು, ಮೂಢರು,
ತಾವು ಎಂತೊ ಅಂತೆ ಕಾಣುತಿಹರು,
ಅದೆ ಎಷ್ಟು ದೂರವೊ, ತನಗೆ ಅದುವು ಅಷ್ಟೆ, ವಿಶ್ವ

೨೧೭೫ ಪತಿ ಸುತರಿಬ್ಬರು ಕೂಡಿಯೆ,
ಸತಿಯೆಡಬಲ ಮಲಗಲ್, ಸತತ ಸ್ತನಗಳನೇ
ಪತಿ ನೋಳ್ಪ ಮಾಂಸ ಮುದ್ದೆಯ,
ಸುತನದರಲಿ ಹಾಲು, ಹದುಳವ, ಸತ್ಯವು ವೇಮಾ,

೨೧೭೫ ಸ್ತ್ರೀಯ ವ್ರತವ ಕೆಡಿಸಿ ಶಿಷ್ಯರಿಗೂ ಶಿಷ್ಯ,
ಆಗೆ ನೇಮವೆಲ್ಲ ಅಡವಿ ಪಾಲು,
ವಿಶ್ವಕರ್ಮ ಕುಲವ ಅವನು ಹೊಗುವನೇಕೆ ? ವಿಶ್ವ

೨೧೭೬ ಹಾಲು, ಮೊಸರು ತುಪ್ಪ ಹೆಚ್ಚು ಅನ್ನ ಉಂಡು
ಸ್ತ್ರೀಯ ಕಾಣದವನು ಶೀಲವಂತ,
ಓರ್ವನಿಪ್ಪ ಅವನೆ ಉತ್ತಮ ಶಿವನಯ್ಯ, ವಿಶ್ವ

೨೧೭೭ ಸ್ತ್ರೀಯರ ಸುಖ ಕೋರಿ, ಚಿತ್ತವನು ನಿಲಿಸದ
ಕಾಪುರುಷನು ಬಹಳ ಕೆಡುವ, ನಿಜವು,
ಕೆರೆ ಕಟ್ಟೆಯ ಗಿಡಕೆ ಕಡೆತನಕ ಚಲನೆಯೆ, ವಿಶ್ವ

೨೧೭೮ ಮನಸು ನಡುಗಳೆರಡಕ್ಕೂ
ಘನವಾದಿನಿತಾದರೂ ತಿಳಿಯಬೇಕು ಕಾಣಾ,
ತನು ಮುಚ್ಚಿ ತೆರೆಯೆ ಕೊನೆಯಲಿ,
ಘನವಾಗಿ ವಿಹರಿಸುವ ಮನ ಕಾಣರು, ವೇಮಾ

●●●

# ೧೧. ಸಂಕೀರ್ಣ ವಿಭಾಗ

**ಮತವು ವೇಷಧಾರಿ ಮಹಿಯಲಿ ಸಹಸ್ರಾರು,**
**ಮೂಢ ಜನರು ಯತ್ನಿಸುವರು, ಜಗದಿ.**
**ಕೊಕ್ಕರೆ ಹಿಂಡಾಗಿ ಪೈರುಗಳ ಕೆಡಿಸುವಂತೆ.**
**ವಿಶ್ವದಾಭಿರಾಮ ಕೇಳು ವೇಮ.**

●

## ಸಂಕೀರ್ಣ

ಧರ್ಮ, ಅರ್ಥ ಮತ್ತು ಕಾಮ ವರ್ಗಗಳಲ್ಲಿ ಸೇರಿಸಿದ ಪದ್ಯಗಳಲ್ಲದೆ ಹಲವು ಹೆಚ್ಚುವರಿ ಪದ್ಯಗಳಿದ್ದು, ಅವು ತುಂಬಾ ಮಹತ್ವದವಾಗಿರುವುದರಿಂದ ಸಂಕೀರ್ಣ ವಿಭಾಗದಲ್ಲಿ ಸೇರಿಸಿದ್ದೇವೆ.

ಪದ್ಯಗಳ ಅರ್ಥವು ಸ್ವಯಂ ಸ್ಪಷ್ಟವಾಗಿರುವುದರಿಂದ ಅವುಗಳ ಭಾವಾರ್ಥವನ್ನು ಕೊಟ್ಟಿಲ್ಲ.

**೨೧೭೯ ಸಕಲ ವಸ್ತುಗಳಲಿ, ಸಂತತ ತನುಗಳಲಿ,**
**ಉಸಿರಿಗೆಲ್ಲಿ ? ಪಂಚ ಭೂತಗಳಲಿ,**
**ಅವವುಗಳಿಂದಲಿ ಅಂದ ಭೂಷಣ ಮಾಡು, ವಿಶ್ವ**

**೨೧೮೦ ಅಲ್ಲಿ ಇಲ್ಲಿ ಹುಡುಕಿ, ಅನುಭವವ ಹೊಂದದೆ,**
**ಕೆಲವು ಅಯ್ಯರಾಗ ಕೊಕ್ಕರೆ ತೆರ,**
**ಮೂರ್ಖ ತಪವ ಮಾಡಿ, ಮೆರೆಯುವುದು ಸರಿಯೆ ? ವಿಶ್ವ**

**೨೧೮೧ ಬಳಿಗೆ ಲಿಂಗವಿದ್ದು, ತಿಳಿಯದಿದ್ದು ಅದನೆ,**
**ಪರ್ವತಕ್ಕೆ ಹೋಹ ಪೆದ್ದ ದಾಸ,**
**ಮುಕ್ತಿಗಾಣಲಾರ ಮೂಢಾತ್ಮನು ಅಷ್ಟೆ, ವಿಶ್ವ**

**೨೧೮೨ ಹತ್ತು ಸಾಸಿರ ಸೇರಿ ಹುಚ್ಚು ನಾಯಿಯಂತೆ,**
**ಅರ್ಥಹೀನ ವೇದ ಅರಚುತಿಹರು,**
**ಕಂಠ ಶೋಷಣಷ್ಟೆ, ಕಾಣರಾವ ಫಲವ ! ವಿಶ್ವ**

---

೨೧೮೩ ಮತವು, ವೇಷಧಾರಿ ಮಹಿಯಲಿ ಸಹಸ್ರಾರು,
ಮೂಢ ಜನರ ಸೇರಿಸೆ ಯತ್ನಿಸುವರು,
ಕೊಕ್ಕರೆ ಹಿಂಡಾಗಿ ಕುಕ್ಕವೆ ಪೈರುಗಳನು ? ವಿಶ್ವ

೨೧೮೪ ಭಾಗವತರು ಎನುತ ಬರಲು ಯಾರೆ ಏನೊ,
ಅವರ ಸರಣಿಯಿಂದ ಅರಿಯಲಾರ,
ಆಡಿ ಪಾಡುವವರು ಅರಿಯೆ, ಭಾಗವತರೆ ? ವಿಶ್ವ

೨೧೮೫ ಹೆಸರು ಸೋಮಯಾಜಿ ಹಿರಿ ಸಿಂಹ ಬಲದವ,
ಕ್ರೂರ ಟಗರು ಹಿಡಿದು ಕತ್ತು ಮುರಿವ,
ಹೊರತು ಕ್ರತುವಿನಿಂದ ಹೊಂದಲಾರ ಮೋಕ್ಷ, ವಿಶ್ವ

೨೧೮೬ ಪರಮ ಯೋಗಿಯೆನಲು ಪರವ ಸೇರಲಾರ,
ಮಾಯ ಜನರಿಗೆಂತು ಮೇಲ್ಮೆಯುಂಟು ?
ವೇಷಗಳನು ತೊರೆದು ವಿಹರಿಸಿದೊಡೆ ಮುಕ್ತಿ, ವಿಶ್ವ

೨೧೮೭ ಪೊಳೆವ ಪ್ರತಿಮೆಗಳಿಗೆ ಪ್ರಾಣ ಪ್ರತಿಷ್ಠಿಸಿ,
ಪ್ರಾಣದುಂಬೆ ಪ್ರತಿಮೆ ಬಾಯಿ ಬಿಡದು,
ಮೊದಲಿನವನ ಸೃಷ್ಟಿ ಮೂರ್ತಿವಂತವಿಹುದು, ವಿಶ್ವ

೨೧೮೮ ಕಳ್ಳ ಮಂತ್ರಗಳಲಿ ಕುದುರಬಹುದೆ ಮೋಕ್ಷ ?
ಕೈಲಾಗದ ಕಾರ್ಯ ಕೈಕೊಳದಿರು,
ಗುರುವೆನಬಹುದೇನು ? ಗುಣವಿಹೀನನನ್ನು, ವಿಶ್ವ

೨೧೮೯ ತನುವಿನಲ್ಲಿ ಅಗ್ನಿ ತೊಳಗಿ ಬೆಳಗುವಾಗ,
ಸುಟ್ಟುಕೊಳುವುದೇನು ? ಕರ್ಮವಷ್ಟೆ,
ಸುಟ್ಟುಕೊಂಡು ಬಳಿಕ ಸುಘನ ತಾನಪ್ಪನು, ವಿಶ್ವ

೨೧೯೦ ಪಾಪಿ ಡಾಂಭಿಕರ ಬಳಿಗೆ ಸುಳಿಯಬೇಡ,
ಮೋಸಗೊಳಿಸುತಿಹರು, ದೋಷದಿಂದ,
ಕ್ರೂರ ಮೃಗಗಳಂಥ ಕೆಡುಕರ ನಂಬಬೇಡ, ವಿಶ್ವ

೨೧೯೧ ಗಿಳಿಯ ಬಾಯಿ ಬಡಿದು, ಕಾಮನ ಕತ್ತು ಹಿಸುಕಿ
ಕಚ್ಚೆ ಹಾಕಿ ಬಿಗಿದು ಕಟ್ಟಿಕೊಳಲು,
ಮನಸು ವಶವಹುದೆ ? ಮಹಿಯಲೇನು ಪಾಪ ? ವಿಶ್ವ

೨೧೯೨ ಏನೇ ಇದ್ದರು ಪರತತ್ತ್ವ ಅರಿಯದಿದ್ದು,
ಸೋಮಯಾಜಿಗಳು ಪಶುವ ಸಿಂಗರಿಸುತ,
ಸಾಮ ಗಾನವನೋದುವರು ಸಾವ ವೇಳೆ ;
ಬಾಧಕವಾಗದೆ, ದುರ್ಗುಣ ಪಂಕ್ತಿ ವೇಮಾ ?

೨೧೯೩ ಊರೂರು ಹಳ್ಳಿಯ ಬಿಡದೆ,
ದೂರದಡವಿಗಳಲಿ ಸಂಚರಿಪರೈತಂದರ್,
ಬೇರನು, ಕಾಂಡವ, ತಿನುವರು,
ಸೇರುವರಿಂತವರು ಮೋಕ್ಷ ಪದವಿಯ ವೇಮಾ ?

೨೧೯೪ ಊರ ಹಂದಿಯರಿಯದು ಉತ್ತಮ ವಸ್ತುಗಳ,
ಹೊಲಸು ನರಕವೆಲ್ಲ ಹೊಂದಿತಷ್ಟೆ,
ಸಾಧ್ವಿ ಮಹಿಮೆ ಇರವ, ಸ್ವೈರಿಣಿಯರಿವಳೇ ? ವಿಶ್ವ

೨೧೯೫ ಉಪವಾಸವಿರುವಗೆ ಊರ ಹಂದಿಯ ಜನ್ಮ,
ತಪಸಿಯಾಗೆ ದರಿದ್ರ ತನವು ಬಂತು,
ಶಿಲೆಗೆ ಮಣಿಯಬಹುದೆ ? ಜೀವವುಳ್ಳ ಬ್ರಹ್ಮ ? ವಿಶ್ವ

೨೧೯೬ ಆ ಚರಾಚರದಲಿ ಅಂಗಗಳ, ಲಿಂಗಗಳ,
ಸರಣಿ ತಿಳಿಯದಂಥ ಶೈವವೇಕೆ ?
ಅಷ್ಟ ತನುಮಯನಿಪ್ಪ ಆ ಹರನ ತಿಳಿಯರಲ್ಲ, ವಿಶ್ವ

೨೧೯೭ ಅಕ್ಷರಾಳಿ ಹಿಂದೆ, ಅಡವಿ ವಾಸ ಹಿಂದೆ,
ಗುಡ್ಡಗಳಲಿ ಗೋಳುಗರೆವುದೇಕೆ ?
ಇರುವ ಹೃದಯದಲ್ಲಿ, ಅರಿಯರೇಕೊ ಶಿವನ ? ವಿಶ್ವ

೨೧೯೮ ಹಸಿವೆ ತೊಲಗಿಸುವುದು ಆಚಾರ ವಿಧವೆಲ್ಲ,
ಕತ್ತಲೆ ತೊಲಗಿಸುವುದು ಚಿತ್ತ ಶುದ್ಧಿ,
ಹಡೆಯಲು ತೊಲಗುವುದು, ಹಿಂದಿನ ಮೈ ಬಿಗಿತ, ವಿಶ್ವ

೨೧೯೯ ಸೋಮಯಾಜಿ ಎನುತ ಸೊಂಪು ಶಾಲು ಹೊದೆದು,
ಮಕರ ಕುಂಡಲಗಳ ಮನವಾರೆ,
ತಾನು ಧರಿಸೆ ತನಗೆ ತಾನಾವ ಲಾಭವು ? ವಿಶ್ವ

೨೨೦೦ ಬೂದಿ ಬಳಿದು ನೀವು ಪ್ರೇತ ಭೂತಗಳನು
ಬಿಡಿಸಿ ಓಡಿಸುವೆವೆನೆ ಪೆಚ್ಚು ತನವು,
ನಿನ್ನ ಕಂಡು, ಭೀತಿ ನಿಲದೆ, ಓಡುತಿಹುದೆ ? ವಿಶ್ವ

೨೨೦೧ ಶ್ರೀ ಮದುಮಾಪತಿಯಾದ
ಸ್ವಾಮಿಗೆ ದಾಸನು ಎಂದುಸುರಿ ಜಗವು ಹೊಗಳಲ್ ;
ವೇಮನನೆಂಬಾ ಧೀರನು
ನೇಮದಿ ಹೇಳಿದನು ಇಂತು, ನಿಜವಿದು, ವೇಮಾ.

೨೨೦೨ ಶ್ರೀ ಎನೆ ಮಂಗಳ ದೇವತೆ,
ಶ್ರೀ ಎನ್ನಲು ವಿಷ್ಣು ಪತ್ನಿ ಸಿರಿ ಸಂಪದಗಳ್
ಶ್ರೀ ಯೆಂಬ ಮೂಲ ಶಕ್ತಿಯ
ಶ್ರೀ ಎಂದು ವರ್ಣಿಸುವುದೆಂದು ಸ್ಥಿರಮತಿ ವೇಮಾ.

೨೨೦೩ ಶ್ರೀ ಮೂಲ ಶಕ್ತಿಯಾಗಿರೆ,
ಆ ಮೂರ್ತಿಗಳೆಲ್ಲರು ತಾಯಾದಳು ಆಗಳ್
ಧೀ ಮೂರ್ತಿಯರಿತು ನೋಡಲು,
ಈ ಮೂರ್ತಿಗೆ ಸಾಟಿ ಇಲ್ಲ, ನಿಜವಿದು, ವೇಮಾ

೨೨೦೪ ಶ್ರೀ ಕರ ಬ್ರಹ್ಮಾಕಾರವ,
ಪ್ರಕಟವಾಗಿ ಮನದಿ ಸೇರಿ ಪ್ರಣವಾಕೃತಿಯಿಂ,
ಸೋಕಿ ಕುಣಿಯುವ ಜ್ಞಪ್ತಿಯಲಿ
ಪಾಕವ ಕಾಣುತ ದಾಟುವ ಭಕ್ತ ವೇಮಾ,

೨೨೦೫ ಊರು ಬಿಡದೆ ಇರುವ ಉತ್ತಮ ಶಿವಯೋಗಿ,
ಹೋರಿ, ನೋಡಿ ಮನದಿ ಪೂರ್ಣ ಸುಖವ ;
ದಾರಿಯಲ್ಲಿ ನರಿಯು ಆರಂಭಿಸಿ ಹೋಹುದೆ ? ವಿಶ್ವ

— — — — — — — — — — — — — — — — — — — — —

೨೨೦೬ ಈಜಿ ದಾಟಬಲ್ಲ ಯಾವ ಜಲಧಿಯಿರಲಿ,
ಸಾಧು ವೃತ್ತಿಯಿಂದ ಸಮಯದಲ್ಲಿ,
ಭದ್ರ ಪಡಿಸಿ ಮನಸು ಪರಿಪೂರ್ಣವ ಹೊಂದು, ವಿಶ್ವ

೨೨೦೭ ಕಲ್ಲು ಇದ್ದಲುಸುಕು, ಕಬ್ಬಿಣ, ಬಂಗಾರ
ಕಸರು ಕಡ್ಡಿಯಂತೆ ಕಾಣುವವನು,
ಪರಮ ಪದವ ನೋಳ್ಪ ಪರಿಣಾಮ ಕ್ರಮದಿ, ವಿಶ್ವ

೨೨೦೮ ಉತ್ತಮ ಶಿವಯೋಗಿ ಊಹಿಸಿ ಮನದಿ ಮಿಂಚಿ,
ಸತ್ತ್ವವನ್ನು ಹೊಂದಿ, ಸರಿಯದಿದ್ದು,
ಬಾಳುವ ಶಕ್ತಿ ಮರೆತು ಪೂರ್ಣಭಾವದಲ್ಲಿ, ವಿಶ್ವ

೨೨೦೯ ಉದ್ಧರಿಸುತ ಇಪ್ಪ ಉತ್ತಮನು ಕುಲವ,
ಮಧ್ಯಮನಿಹಗದರ ಪರಿವೆಯಿಲ್ಲ,
ಅಧಮನಿರಲು ಕುಲವ ಅಡಿಗೆ ತಳ್ಳುತಿಹನು, ವಿಶ್ವ

೨೨೧೦ ಮಠದ ಒಳಗೆ ಇರುವ ಮತವನೆಲ್ಲ ಕೊಚ್ಚಿ,
ಘಟದ ಒಳಗೆ ಇರುವ ಘನನ ತಿಳಿದು,
ಘನತೆ ನಿಲ್ಲಿಸುವವ ಘನ ತತ್ತ್ವ ಯೋಗಿಯು, ವಿಶ್ವ

೨೨೧೧ ಸುಖಿಸುವ ಮನದಲಿ ನೋಡದೆ,
ವಿಕಸಿಪ ಅರಿವು ಮೀರು ದದ್ದುಳಿತಕೆ ಸಿಗದಾ
ಒಂದು ಜಾಡ ಮರೆತಿರುವವನೆ,
ಸುಖಿಸುವ ಪರತತ್ತ್ವದಲ್ಲಿ, ಬೆಳಗುತ, ವೇಮಾ

೨೨೧೨ ವೀರರಿದ್ದರೂನು, ವಿಬುಧರ ಗುಣ ಬರವು,
ಓದಿನಿಂದ ಬರವು ಅನೃತದಿಂದ,
ಜನ್ಮ ಪಾಕದಲ್ಲಿ ಸಫಲತೆಯು ನರರಿಗೆ, ವಿಶ್ವ

೨೨೧೩ ಮುನ್ನ ನಿನ್ನ ಹಡೆದ ಮುಖ್ಯರಾರೊ, ಅವರ
ಸನ್ನುತಿಸು; ಆ ಬಳಿಕ, ಸಂತತಿಯನು,
ಜ್ಞಾನ ದಾತನ ಪೂಜಿಪ ಘನತೆಯಿಂದ ವಿಬುಧ, ವಿಶ್ವ

---

೨೨೧೪ ಯಾತ್ರೆಯಲ್ಲಿ ಫಲ ಹೊಂದುತ, ಸೂಕ್ಷ್ಮ ಹೊಂದಿ,
ಪರಮ ಹಂಸನು ಸಂಗಡಿಸಿ ಪ್ರಬಲನುಂಟು,
ಪರವ ಕೋರುವ ಪ್ರಾಜ್ಞರಿವರ ಅರಿಯೊ ವೇಮ,

೨೨೧೫ ತಪ್ಪು–ಒಪ್ಪು ತಿಳಿದು, ದೈವ ಸಂಕೀರ್ತನ
ಮಾಡುವವರು, ಹರಿಗೆ ಮಾಡಿ ಸೇವೆ,
ನೀತಿಯರಿಯದವರ ನಿಂದಿಸಲು ಬಾರದು, ವಿಶ್ವ

೨೨೧೬ ಕತ್ತೆ ಮೈಗೆ ತುಂಬ ಗಂಧವನ್ನು ಬಳಿಯೆ,
ಬೂದಿಯಲ್ಲಿ ಮತ್ತೆ ಬಿದ್ದುರುಳದೆ ?
ಮಡ್ಡ ನರನ ಸೊಗಸು ಮಾದರಿಯದು ನೋಡು, ವಿಶ್ವ

೨೨೧೭ ಗಂಗಾಧರನೇ ದೈವವು,
ಸಂಗೀತವೆ ಕಿವಿಗೆ ಇಂಪು ಸರ್ವಜ್ಞರಿಗಾ,
ಬಂಗಾರವೆ ಉಪಭೋಗವು,
ಅಂಗಜನೇ ಮೃತ್ಯು ಹೇತು, ಅರಿತೊಡೆ, ವೇಮಾ

೨೨೧೮ ಕಾಶಿಯಾತ್ರೆ ಗೆಯ್ದು, ಕಷ್ಟ ಪಡುವುದಷ್ಟೆ,
ಮೋಸವಾಯ್ತು ತಾನೆ ಮುಕ್ತಿಯಿಲ್ಲ,
ಪಾಶವುಡುಗಿದ ಕಾರ್ಯ ಫಲವೇ ಆ ಕಾಶಿಯು, ವಿಶ್ವ

೨೨೧೯ ಕಾಶಿಯಾತ್ರೆಗೆಯ್ದು, ಗಂಗೆ ಸ್ನಾನ ಮಾಡಿ,
ಕಷ್ಟವಷ್ಟೆ, ಮುಕ್ತಿ ಕಾಣಲಾರ,
ಎಮ್ಮೆ ತಿರುಗುತಿಹುದು ಎನಿತೊ ಕೋಣ ಹಿಂದೆ, ವಿಶ್ವ

೨೨೨೦ ಹೊಲಸೆ ಆದ ಮಲವು ಹೊಟ್ಟೆಯೊಳಗೆ ಇರಲು,
ಅದರಕಿಂತ ಕೇಡೆ ಅನ್ನ ರಸವು ?
ಉಪಮೆಗಾಣದ ಜನ ಉಪವಾಸವಿರುವರು, ವಿಶ್ವ

೨೨೨೧ ಏನು ಓದಲೇನು ಅರಿವು ಇಲ್ಲದಿರಲು ?
ಓದಿನಲ್ಲಿ ಪರಮ ಸೌಖ್ಯವುಂಟೆ ?
ಮಾನಸೈಕ್ಯದಲ್ಲಿ ಮತ್ತೆ ಇಹುದು ಮುಕ್ತಿ ವಿಶ್ವ

೨೨೨೨ ಹೊಟ್ಟೆಯೊಳಗೆ ಮಲವ ಹೊಂದಿ ಕಷ್ಟವುಂಟು ;
ಅನ್ನವೇನು ಕೀಳು ? ಅನುತ ತಿಳಿದು,
ಉಪಮೆಯರಿತ ಮನುಜ ಉಪವಾಸವಿರುವನು, ವಿಶ್ವ

೨೨೨೩ ಕೊಲಲು ಬರದು ಹಸಿವೆಯನ್ನು ;
ಎಲೆಗಳ ತಿಂದಡವಿಯೊಳು ಅಲೆದಾಡುತಿರಲ್,
ನೆಲೆ ಸಿಗದು ಕತ್ತಲು ಕೋಣೆ,
ನಿಲಿಸಿ ಮನದಿ ಏಕಾಕೃತಿ, ಅರಿವುದು ವೇಮಾ,

೨೨೨೪ ಅನ್ನ ಅಮೃತವಿಹುದು ; ಮುಸುರೆ ಎನುತ
ಬಿಡುತಿರುವರು, ತಿಳಿವು ಇರದೆ ದ್ವಿಜರು,
ಅನ್ನ ಅಮೃತವಿದುವೆ, ಹರಿಹರ ಬ್ರಹ್ಮರು,
ಮುಸುರೆ ಎನ್ನುವವನೆ ಮುಸುರೆ ವೇಮ,

೨೨೨೫ ಅನ್ನದಾನಗಳಿಗೆ ಅಧಿಕ ಸಂಪದುಂಟು,
ಅಮರ ಲೋಕ ಪೂಜ್ಯನಾದ ಮಿಕ್ಕಿ,
ಅನ್ನವಹುದು ಬ್ರಹ್ಮ, ಅದನೆ ಕಾಣಲಾರ, ವಿಶ್ವ

೨೨೨೬ ಅಡಿಗಡಿಗೆ ಮಣಿವುದೇತಕೆ
ಗುಡಿಯೊಳಗಿಹ ಕಠಿಣ ಶಿಲೆಗಳ ಗುಣ ಬದಲುವುದೆ ?
ಗುಡಿ ದೇಹವಾತ್ಮ ದೇವರು,
ಕೆಡು ಶಿಲೆಗೆ ವ್ಯರ್ಥ ಪೂಜೆ ಮಾಡದಿರು, ವೇಮಾ,

೨೨೨೭ ಓದಿನಲ್ಲೂ ಇಲ್ಲ, ಶಾಸ್ತ್ರದಲ್ಲು ಇಲ್ಲ,
ವೇದದಲ್ಲು ಇಲ್ಲ, ವಾದದಲ್ಲು,
ಬಯಲೊಳುಂಟು ಮುಕ್ತಿ, ಪರಿಕಿಸಿ ನೋಡಿಕೋ, ವಿಶ್ವ

೨೨೨೮ ಬರು ಹೋಗಗಳಿರದ ಭವ್ಯ ಬೀದಿಯಲ್ಲಿ
ಏಕ ರೂಪವರಿವ ಆಯ್ಕೆ ವಿರಳ,
ಸೋಂಕಿ ಸೋಂಕಿ ಮಾಯೆ ಸೊಕ್ಕುತಿರುವರಷ್ಟೆ, ವಿಶ್ವ

— — — — — — — — — — — — — — — — — — — — — —

೨೨೨೯ ಉಡುಗದೆ ಕ್ರತುಗಳು, ತಪಗಳು,
ಅಡವಿಯ, ತೀರ್ಥಗಳ ತಿರುಗಿ, ಕೂಡಲೆ ಧರೆಯೋಳ್,
ಒಡಲೊಳು ಕಾಣಿಸುತಿರುವನು ;
ಕಡು ಧೀರನು ಗುರುವು ಹೇಳುವುದಿದನು ವೇಮಾ,

೨೨೩೦ ಪಾದದಲಿ ನಡೆಯುತ ನರನು
ಈ ಧರೆ ಸುತ್ತುವುದು ತಾ ನಿಲಲಾಗ ತನಗೇ–
–ನಾದರು ಹಾನಿ ಬರುವೊಡೆ,
ಸಾಧನವಾದ ಪದಕೆ ನಡೆಯಾಯಿತು ವೇಮಾ !

೨೨೩೧ ಗಂಡನಾದರೇನು ? ಮರ್ಯಾದೆಯಯರಿದಿರೆ,
ಅರಿಯೆ, ಅವನನೇಕೆ, ಗೌರವಿಪರು ?
ಊರ ಬೊಗಳು–ನಾಯಿ ಅರಿವುದೇನು ಯೋಗಿ ? ವಿಶ್ವ

೨೨೩೨ ತಾಯಿ ತಂದೆ ಸಾಯೆ, ತಾನು ಮಡದಿಗೂಡಿ,
ಸದನ ಕಟ್ಟಿಕೊಂಡು ಸುಖದೊಳಿಲ್ಲ,
ಕೊರತೆ ಹೆಚ್ಚಿ, ಕಳ್ಳ ಕೂಳು ಕೇಳುವಂತೆ, ವಿಶ್ವ

೨೨೩೩ ವ್ರತವನಾಚರಿಸಲು ಒಟ್ಟು ಕಷ್ಟವಷ್ಟೆ,
ಬದುಕು ಮೀರಿ ಆಶೆ ಪಡಲು ಇಲ್ಲ,
ಹೊಂದಿ ವ್ರತವ, ಗುರುವ, ದುಡುಕಲಾರರಲ್ಲ ! ವಿಶ್ವ

೨೨೩೪ ಭಗವಂತನಾದ ದೇವನು,
ಜಗದೊಳಗೆ ತನ್ನೊಳಗೆ ಸಲಹೆ ಜಾಲವ ತೋರ್ಪನ್,
ಮಿಗೆ ರೀತಿ ಅದನೆ ಸಕಲವ
ಅಗಣಿತೆನಿಸಿ ಬೆಳಗುತಿರುವ ಅನುದಿನ ವೇಮಾ !

೨೨೩೫ ಪತಿಯ ಮಾತನು ಮೀರದ ಪತ್ನಿ ನೋಡೆ,
ಜಗದ ಒಳಗನಿಬರೆಂದೆಣಿಸೆ ಸಾಲರಾರು ?
ಮುಕುತಿ ಅಂಗೈ ಮೇಲುಂಟು, ಮುದಿತ ಸತತ,
ಭರ್ತೃ ವಿಶ್ವಾಸ ಒಂದೇ ಬದುಕು ವೇಮ.

— — — — — — — — — — — — — — — — — — — — —

೨೨೩೬ ತಾಯಿ–ತಂದೆ ಬಿಟ್ಟು, ತನ್ನ ಮಡದಿಗೂಡಿ,
ಸದನಕಂಟಿ ಇರಲು, ಸಕಲ ಪಡೆಯ,
ಕಳ್ಳ ಜೈಲೊಳಿದ್ದು ಕೋರುತಿರುವ ಚೆಂದ, ವಿಶ್ವ

೨೨೩೭ ತಾಯಿ ಗರ್ಭದಲ್ಲಿ ತಾನು ಜನಿಸಿದ್ದರು,
ತನ್ನ ಭೋಗ–ಸತಿಗೆ ತಾನೆ ಹುಟ್ಟಿ,
ತಾಯಿಯಿಬ್ಬರಿಹರು, ತಾನು ಒಬ್ಬನಯ್ಯ, ವಿಶ್ವ

೨೨೩೮ ಕನ್ನೆಯ ಎಳೆ ಹರೆಯದೊಳು,
ಇನಿಯನಿರದೆ ತನಯ ಜನನ ಕಡು ಚಿತ್ರವಿದಂ,
ಇನಿತಾದರು ರತಿಯರಿಯದೆ,
ಸ್ತನ ಕುಡಿಯದೆ ಬೆಳೆಯಿತಲ್ಲ ಜಗವಿದು ವೇಮಾ,

೨೨೩೯ ವೇದ ಮೂಲವೆಲ್ಲ ವಿಶ್ವಕರ್ಮನೆಂದು,
ವೇದಗಳನು ನುಡಿವ ವಿಧವ ತಿಳಿದು,
ನಂಬದಿರುವ ಅವರು ನರಕದಿ ಬೀಳರೆ ? ವಿಶ್ವ

೨೨೪೦ ಬಾಲ್ಯದಲ್ಲಿ ಶಿವನ ಪರಿಕಿಸಲಾರರಲ !
ಯೌವನದಲ್ಲಿ ಸಹ ಅರಿಯದಿರಲು !
ಮುಪ್ಪಿನಲ್ಲಿ ಕೂಡ ಮೋಸವ ಹೊಂದಿದರು, ವಿಶ್ವ

೨೨೪೧ ಪೃಥಿವಿಯೊಳುದಿಸಿ ಮಗು ಪೃಥಿವಿಯೊಳು ಬೆರೆಯಿತು ;
ಮರಳಿ ಅದುವೆ ಹುಟ್ಟಿ, ಮಗನು ಪತಿಯು,
ಧರಣಿ ಜನರಿಗೆಲ್ಲ ತಾಯಿಯೈ ಸತಿಯು, ವಿಶ್ವ

೨೨೪೨ ಬರುವುದು ಹೋಗುವುದು ಮತ್ತೆ
ಮರಣಿಸುವದು ಕಾಣಲಾರ ; ಸಹಜವೆನುತ್ತಾ
ಬರಿದೆ ಇರುವ ತಿರುಗಾಟವು,
ಉರಿಯೊಳು ಬೀಳುವ ಪತಂಗದ ರೀತಿ ವೇಮಾ !

೨೨೪೩ ಕಾಲ ಚಕ್ರವರಿಯದಿದು ಎಂದಿಗೂನು,
ಸಂಧ್ಯ ಜಪವ ಮಾಡೆ ಜಾಣರೇನೊ ?
ಸಂಧ್ಯ ಜಪವ ಮಾಡೆ ಜಾಡು ಎಂತಿರುವುದು ? ವಿಶ್ವ

— — — — — — — — — — — — — — — — — — — — — —

೨೨೪೪ ಭಾರ್ಯೆ ತನ್ನ ಒಡಲ ಪಾಲಿನ ಸಂಕೋಲೆ,
ಚಿಕ್ಕ ಮಕ್ಕಳೆಲ್ಲ ಚುಚ್ಚು ಮೊಳೆಯು ;
ಸಂಸ್ಕೃತಿಯೆನೆ ನೋಡು ಸೆರೆಮನೆಯಾ ಕೊಟ್ಟಿಗೆ, ವಿಶ್ವ

೨೨೪೫ ಘಟವಿದರಲ್ಲಿಯೆ ನೋಡುತ,
ಘಟವಾವುದಾದರಿಷ್ಟೇ ಎಂದರಿ ಮನದೋಳ್,
ಘಟವೊಂದರ ಮೇಲೆ ವಾಂಛೆ,
ಘಟಿಸಲು ತೃಣವೆಂದರಿವುದೆ, ಮುಖ್ಯವು ವೇಮಾ.

೨೨೪೬ ಸಾವಿರಾರು, ಜಗದಿ, ಸಲೆ ವೇಷಧಾರಿಗಳು !
ಕೀಳು ಆದರೂ, ಕೂಳು ಫಲಕ್ಕಾಗಿ,
ಮೇಲು ಅಲ್ಲ, ಇರಲು ಮಹಿ–ಗಗನಕೆ ಅಂಟಿ, ವಿಶ್ವ

೨೨೪೭ ವ್ಯಾಧಿ ಪೀಡಿತಾಗಿ, ವ್ಯಸನ ಸಂತಾಪದಿ,
ದುಃಖ ಸಂಭವದಲಿ, ತಗಲಿ ಭಯವು ;
ಇಲ್ಲದವರಿಹರೇ ? ಯಾವ ಕಾಲವಿರಲಿ ? ವಿಶ್ವ

೨೨೪೮ ದಾನ ಧರ್ಮಗಳನು ದೂಡಿ ನಾಳೆ ನಾಳೆ,
ಕಾಲ ಕಳೆಯುತಿಹರು ಕೇಡಿ ಜನರು,
ತಾನು ಏನಾಗುವ ? ತನ್ನ ಬದುಕು ಏನೊ ? ವಿಶ್ವ

೨೨೪೯ ಮುಳುಗಿ ಮುಳುಗಿ ಮುಳುಗಿ ಮುದ್ದೆ ಮುದ್ದೆಯಾದ,
ಸೊರಗಿ ಬಳಲಿ ಬಳಲಿ ಸಣ್ಣವಾದ,
ತಿರುಗಿ ತಿರುಗಿ ತಿರುಗಿ ತಿರುಕನಾಗಿ ಹೋದ, ವಿಶ್ವ

೨೨೫೦ ವಿಪ್ರವರರು ಮುಹೂರ್ತ ವಿಭವವ ನಂಬುವರು,
ದೊಡ್ಡ ಜನರ ಕುರಿತು ಮದುವೆ ಗೆಯ್ಯೆ,
ಬಳಿಕ ಮುಂಡೆಯಾಗೆ ಮುಹೂರ್ತ ನಿಜವೆಂತು ? ವಿಶ್ವ

೨೨೫೧ ಇಷ್ಟ ಲಿಂಗವೇನು ಇಳೆಯ ಶಿಲೆ ಲಿಂಗವೆ ?
ನಿಷ್ಠೆ ಮೀರಿ, ಕತ್ತು ಬಿಗಿದು ಕಟ್ಟಿ,
ಕಷ್ಟ ಪಡುವ ಹೊರತು ಕಳೆಯಲಾರ ದೈವ, ವಿಶ್ವ

೨೨೫೨ ಉಪಮೆ ತೋಚದಂಥ ಉಪವಾಸವು ಹೊಲ್ಲ,
ತಪವ ಗೆಯ್ಯುತಿರಲು ತಗುಲಲಾರ,
ಜಪದ ಒಳಗೆ ಗುರು ವಚನವ ಮೀರಬೇಡ, ವಿಶ್ವ

೨೨೫೩ ನರಿಯ ಬಾಯಿ ಖಂಡ ; ನದಿಯ ಒಳಗೆ ಮೀನು,
ಹುಚ್ಚು ಹತ್ತಿ, ಬಿಡಲು ಹಿಡಿದ ಮಾಂಸ,
ಹದ್ದು ಹರ್ಷ ಪಟ್ಟು ಹೋಯ್ತು ಎತ್ತಿಕೊಂಡು, ವಿಶ್ವ

೨೨೫೪ ಮನೆಮನೆಯೊಳಗಿಪ್ಪ ಮಹೇಶ್ವರನನರಿಯದೆ,
ಆಂತು ಕಾಣಲಾರ ಅಡವಿಯಲ್ಲು,
ಇದ್ದು ಕೋರೆ, ದೈವ ಇಂಬುಗೊಡದು ಅವಗೆ, ವಿಶ್ವ

೨೨೫೫ ಮಾಂಸ ಖಂಡ ಮದದಿ ಮರಣವನೆ ಕಾಣನು,
ಮದದಿ ಕೊಬ್ಬಿ, ತತ್ತ್ವ ಮಹಿಮೆಯರಿಯ,
ಭೋಗದಾಸೆಯಿಂದ ಪುರಹರನ ಕಾಣನು, ವಿಶ್ವ

೨೨೫೬ ಸಂಧ್ಯ, ವಾರವೇಕೆ ? ಜಪವ ಮಾಡಲೇಕೆ ?
ವೇದ ಶಾಸ್ತ್ರಗಳನು ಓದಲೇಕೆ ?
ಪರವ ಕಾಣುವವನು ಬ್ರಾಹ್ಮಣನೆ ಅಲ್ಲವೆ ? ವಿಶ್ವ

೨೨೫೭ ಮನೆಯ ಪತಿಯ ನೋಡಿ, ಮನೆ ಮಡದಿಗೆ ದುಃಖ,
ಬೆನ್ನು ಹತ್ತೆ ವಿಟನು ಬಹಳ ಪೇಚು,
ತುಂಟೆ ಇರುವವಳನು ತೊಲಗಿಸುವುದೆ ಮೇಲು, ವಿಶ್ವ

೨೨೫೮ ಹಸನು ಜಳಕ ಮಾಡಿ, ಹಾಕಿ ಪಟ್ಟೆ ನಾಮ,
ನೀರು–ಕಾವಿ ಪಂಜೆ ನಿರಿಗೆ ಕಟ್ಟಿ,
ವೇಶ್ಯೆ ಹೆಣ್ಣು ನೋಡೆ, ವ್ರತವೆಲ್ಲ ಮರೆವರು, ವಿಶ್ವ

೨೨೫೯ ಮರುಳನಾದೊಡೇನು ? ಮಾರು ವೇಷಿಯೇನು ?
ರೋಗಿಯೇನು ? ಪರಮ ಯೋಗಿಯೇನು ?
ನಾರಿ ನೋಡಿದೊಡನೆ ಚಿತ್ತ ಕದಡದೇನು ? ವಿಶ್ವ

**೨೨೬೦ ನೇಮದಿ ಕೂಡಿದ ದ್ರವ್ಯವು,**
**ಕಾಮಾದಿಗಾಯ್ತು ; ಭುವಿಯಲಿ ಅನೃತವನಾಡಲ್,**
**ನೇಮದಲಿ ಮಾತಿರುತಿರಲು,**
**ಕೋಮಟಿ ಲೋಕದಿ ಬಹುಜನರಾದರು ವೇಮಾ.**

●●●

# ೧೨. ಮೋಕ್ಷ ವರ್ಗ

## ಅಧಿಕಾರ ಲಕ್ಷಣ

**ಹಾಲು ನೀರು ಕ್ರಮದಿ ಹಂಸ ಅರಿಯುತಿಹುದು ;**
**ನೀರು ಹಾಲು ಕ್ರಮವು ನವಿಲಿಗೇಕೆ ?**
**ಅಜ್ಞನಿರುವ ಅವನು ಆ ಶಿವನನರಿವನೆ ?**
**ವಿಶ್ವದಾಭಿರಾಮ ಕೇಳು ವೇಮ.**

●●●

## ಅಧಿಕಾರ ಲಕ್ಷಣ

ಸಾಂಪ್ರದಾಯಿಕ ಪ್ರಕರಣ ಗ್ರಂಥಗಳಲ್ಲಿ ಪ್ರತಿಪಾದಕ, ಪ್ರತಿಪಾದ್ಯ, ಅಧಿಕಾರಿಗಳನ್ನು ಕುರಿತು ಹೇಳುತ್ತಾರೆ. ಇಲ್ಲಿ ಪರಮಾತ್ಮನೇ ಪ್ರತಿಪಾದಕ. "ನುಡಿಯೆಂಬೆನೋ ದೇವ; ನುಡಿಯಲೊಲ್ಲಯೇಕೆ? ನುಡಿಯೆನ್ನನೇ ಕುರಿತು ಪ್ರಬಲ ವಾಕ್ಯ ನುಡಿಯಯ್ಯ, ನಿನ್ನ ಧ್ವನಿ ನಾನು ಅರಿವೆ" ಎಂದು ಅರ್ಪಿತ ಭಾವದಿಂದ ಕೇಳುತ್ತಾರೆ. ಮೋಕ್ಷವೇ ಪ್ರತಿಪಾದ್ಯ. ಇನ್ನು ಯೋಗ ಸಾಧಕನೇ ಅಧಿಕಾರಿ.

ಯೋಗ ಸಾಧಕನು ಗೃಹಸ್ಥನಾಗಿರಬಹುದು; ಸನ್ಯಾಸಿಯಾಗಿರಬಹುದು. ಜೀವನದ ಪುರುಷಾರ್ಥಗಳಾದ ಧರ್ಮ, ಅರ್ಥ ಮತ್ತು ಕಾಮಗಳನ್ನೂ ಮತ್ತು ಮೋಕ್ಷವೆಂಬ ಅಪವರ್ಗವನ್ನೂ ಮನದಲ್ಲಿ ತಿಳಿಯಬೇಕು. ನಿರ್ಮಲ ಮತಿಯಲ್ಲಿ ಇವು ಹೊಳೆಯುತ್ತವೆ. ಕರ್ಮಿಗಳಿಗೆ ಮುಕ್ತಿ ದೊರೆಯದು. ಕಳ್ಳ ಗುರು ಕರ್ಮಗಳನ್ನು ಕಟ್ಟಿ ಅದರಲ್ಲಿ ಸಿಲುಕಿಸುತ್ತಾನೆ. ಮೋಕ್ಷ ಗುರು ಯೋಗವನ್ನು ಬೋಧಿಸಿ ಮುಕ್ತ ಮಾಡುತ್ತಾನೆ.

ಚಿತ್ತಶುದ್ಧವಾದ ಬಳಿಕ ಶಿವನ ಪೂಜೆಗೆ ತೊಡಗಬಹುದು. ಆತ್ಮಶುದ್ಧವಾಗದ ಆಚಾರದಿಂದೇನು ? ದೇಹದ ಸೊಬಗಿನಿಂದ ದಿವ್ಯ ಬೋಧೆಯನ್ನು ಪಡೆಯಲಾರೆವು. ಶುಚಿಯಾದ ಮನಸ್ಸು ಬೇಕು. ವಿಧಾನವು ಅವಗತವಾದೊಡನೆ ವೇದಾಂತವನ್ನು ಅರಿಯಿರಿ.

ಅವರಿವರು ಆದಿ ಕಾರಣನಾದ ಬ್ರಹ್ಮವನ್ನರಿಯರು, ಅಲ್ಪನು ಅದನ್ನು ತಪ್ಪಾಗಿ ಗ್ರಹಿಸಬಹುದು. ಚೆಲ್ಲಾಪಿಲ್ಲಿಯಾಗಿಸುವ ನಾಯಿಯು ಜೋಡಿಸಿಡುವ ಕಲೆಯನ್ನು ತಿಳಿದಿರುವುದೇ? ವಿಭಾಜಕ ವೃತ್ತಿಯವನು ಸಂಯೋಜಕ ವೃತ್ತಿ ಹೊಂದನು.

---

ಒಬ್ಬನು ಇನ್ನೊಬ್ಬನಿಗೆ ತಿಳಿಸುವುದು ಕಷ್ಟಸಾಧ್ಯ. ಪ್ರತಿಯೊಬ್ಬನು ತಾನೇ ಅರಿತುಕೊಳ್ಳುತ್ತಾನೆ. ಇನ್ನೊಬ್ಬನು ಅವನಿಗೆ ನೆರವಾಗಬಹುದಷ್ಟೇ. ಅಂದ ಮೇಲೆ ಈ ಭೂಮಿಯಲ್ಲಿ ಮೂಢನಿಗೆ ಯಾರೂ ತಿಳಿಸಲಾರರು. ಹೊಳೆಯ ಡೊಂಕು ಹರಿತದಂತೆ ಮೂರ್ಖನ ಬುದ್ಧಿಯ ಓಘ. ಅದು ಸರಿದಾರಿ ಹಿಡಿಯಲಾರದು.

ಸದ್ಗುಣಗಳ ಖಣಿಯಂತಿರುವ ಜನರು ಜ್ಞಾನವನ್ನು ಗ್ರಹಿಸಿ, ಜೀವನಕ್ಕೆ ಹೊಂದಿಸಿಕೊಳ್ಳುವರು. ಅವರೇ ಮುಕ್ತಿಗೆ ಅರ್ಹರಾಗಿದ್ದಾರೆ.

ಸಮುದ್ರಕ್ಕೆ ಸಾವಿರ ಹೊನಲುಗಳಿಂದ ಸಿಹಿ ನೀರು ಬಂದು ಸೇರುತ್ತದೆ. ಸಮುದ್ರದ ಸಿಹಿ ನೀರನ್ನು ಮರಳಿ ತಿರುಗಿಸಬಹುದೇ ? ಅದೇ ರೀತಿ, ಸುಜ್ಞಾನವನ್ನು ಕೊರಡಿಗೆ ಸಾಸಿರ ವಿಧದಲ್ಲಿ ಹೇಗೆ ತಿಳಿಸಿಕೊಡಬಹುದು ?

ಹಾಲನ್ನುನೀರಿನಿಂದ ಬೇರ್ಪಡಿಸುವ ಕ್ರಮವು ಹಂಸಕ್ಕೆ ವೇದ್ಯ. ಅದು ನವಿಲಿಗೆ ತಿಳಿಯದು. ಅದೇ ರೀತಿ, ಅಜ್ಞನು, ಅಧಿಕಾರಿಯಲ್ಲದವನು, ಶಿವನನ್ನು ತಿಳಿಯಲಾರನು.

ಹೆಡ್ಡನಿಗೆ ತಿಳಿಸಲು ಒಂದು ವರುಷ ಸಾಕು. ಮೂಢನು ಅರಿಯಲು ಮೂವತ್ತು ವರ್ಷವಾದರೂ ಸಾಲದು. ಬಹಳ ವರ್ಷ ದೇಹ ಹೊತ್ತು ತಿರುಗಿದರೇನು ಫಲ ? ಯತಿಗಳ ಜನ್ಮಗಳೆಷ್ಟು ? ಆತ್ಮವರಿಯಬೇಕು. ಬರೀ ಬಾಹ್ಯ ಆಚಾರಗಳಿಂದ ಏನು ಫಲ ? ನಾಯಿ ಏಕಾಂತ, ಬಕದ ಧ್ಯಾನ, ಕತ್ತೆಯ ರಾಗ, ಕಪ್ಪೆಯ ಜಳಕಗಳಿಂದ ಜ್ಞಾನ ಬರಬಲ್ಲದೇ ?

ತನ್ನೊಳಗಿನ ಶತ್ರು ಮಿತ್ರರನ್ನು ಅರಿಯಬೇಕು. ಅರಿಷಡ್ವರ್ಗಗಳನ್ನು ನಿಗ್ರಹಿಸಬೇಕು. ಸದಾಚಾರ, ಸತ್ಸಂಗಗಳನ್ನು ಬೆಳೆಸಿಕೊಳ್ಳಬೇಕು.

ಮಾನವನು ತಾನು ಹುಟ್ಟಿದ ಗುರಿಯನ್ನು ಅರಿತು ಸಾಧಿಸಬೇಕು. ಹುಟ್ಟನ್ನೇ ಅರಿಯದವನು ಪುರುಷಾಧಮನು. ಅವನು ಹುಟ್ಟಿದರೂ ಅಷ್ಟೇ. ಹುಟ್ಟದಿದ್ದರೂ ಅಷ್ಟೇ. ಗೆದ್ದಲು ಹುಟ್ಟಿ ಸತ್ತಂತೆ.

ಬಾಲ್ಯಾರಭ್ಯ ಭಕ್ತಿ ಹೊಂದಿ ಬಾಳಬೇಕು. ಇಲ್ಲವಾದರೆ, ಯೌವನದಲ್ಲಿ ಹರನನ್ನು ಯೋಚಿಸಲಾರರು. ಕೊನೆಗೆ ಮುಪ್ಪಿನಲ್ಲಿ ಆ ಕುರಿತು ಏನನ್ನೂ ಹೇಳದೇ ಮರಣಿಸಬಹುದು.

ಸಾಧನವು ತ್ರಿಕರಣಪೂರ್ವಕ ನಡೆಯಬೇಕು. ಮಾತಿನಂತೆ ಮನವಿರಬೇಕು; ಮನಸ್ಸು ಹೃದಯದ ಭಾವಕ್ಕೆ ಅನುಗುಣವಾಗಿರಬೇಕು. ಕಾಯಾ, ವಾಚಾ, ಮನಸಾ ಏಕವಾಗಿದ್ದರೆ ಕಾರ್ಯಸಿದ್ಧಿ.

ಜಗತ್ತಿನಲ್ಲಿ ವಿವಿಧ ಬಗೆಯ ಜನರು ತುಂಬಿರುತ್ತಾರೆ. ತತ್ತ್ವಹೀನರು ಎಲ್ಲೆಲ್ಲಿಯೂ ಕಾಣಸಿಗುವರು. ತತ್ತ್ವ ತಿಳಿದವರು ತೀರ ವಿರಳ.

೨೨೬೧ ಧರ್ಮಾರ್ಥ ಕಾಮ ಮೋಕ್ಷವ,
ಉರ್ಮೆಯಲಿ ಮನದಿ ತಿಳಿದೊಡೆ ಆಮೋದಂ,
ನಿರ್ಮಲ ಗತಿ ಕಾಣಬೇಕು.
ಕರ್ಮಿಗಳಿಗಿರದು ಮುಕ್ತಿಯು, ಅಲ್ಲವೆ, ವೇಮಾ ?

೨೨೬೨ ಆತ್ಮ ಶುದ್ಧಿಯಿರದೆ ಆಚಾರವದು ಏಕೆ ?
ಮಡಿಕೆ ಶುದ್ಧಿಯಿರದೆ ಅಡುಗೆಯೇಕೆ ?
ಚಿತ್ತ ಶುದ್ಧಿಯಿರದೆ ಶಿವನ ಪೂಜೆಯೇಕೆ ? ವಿಶ್ವ

೨೨೬೩ ಯಾರಿಗೆ ಗೊತ್ತುಂಟು ಇಂಪಾದ ವಸ್ತುವು ?
ದೇಹವೇನರಿವುದು ದಿವ್ಯ ಬೋಧೆ ?
ವಿಧವು ತಿಳಿಯೆ ಕೋರಿ, ವೇದಾಂತವರಿಯರಿ, ವಿಶ್ವ

೨೨೬೪ ಆದಿ ಕಾರಣವನು ಅಲ್ಪನರಿವನೆಂತು ?
ಹೇಳಲಾರನವನು ತಪ್ಪು ತಿಳಿದು.
ಚೆಲ್ಲಲರಿತ ನಾಯಿ ಜೋಡಿಸಿಡದು ಪಾತ್ರೆ ವಿಶ್ವ

೨೨೬೫ ತಿಳಿದವಂಗೆ ತಿಳಿಸಲಾರು ಆದರೇನು ?
ಇಳೆಯೊಳಾರು ಮೂಢಗರುಹಬಹುದು ?
ಹೊಳೆಯ ಡೊಂಕು ತಿದ್ದಲಾರು ಶಕ್ತರಿಹರು ? ವಿಶ್ವ

೨೨೬೬ ಏ ಜನರು ಗುಣದ ಸಂಕುಲ,
ಈ ಜಗದಲಿ ಗ್ರಹಿಸಿ ಕಲಿತು ಹೊಂದಿಕೊಳುವಾ,
ಆ ಜನರೆ ಮುಕ್ತಿಗರ್ಹರು,
ರಾಜಿಪ ಪರಿಪೂರ್ಣ ಹೃದಯ ರಂಜಕ ವೇಮಾ
ಏ = ಯಾವ

೨೨೬೭ ಸಾಸಿರ ಗತಿಯಲಿ ಜಲ ನಿಧಿ
ಯಾ ಸಿಹಿಯನಿಶಂ ಎಲ್ಲೆಡೆ ಮರಳಿಸಲಳವೇ ?
ತಾ ಸುಜ್ಞನವ, ಕೊರಡಿಗೆ
ಸಾಸಿರ ವಿಧದಲಿ ತಿಳಿಸೆ, ವ್ಯರ್ಥವು, ವೇಮಾ

೨೨೬೮ ಹಾಲು ನೀರು ಕ್ರಮವ ಹಂಸ ಅರಿಯುತಿಹುದು,
ನೀರು ಹಾಲ ಕ್ರಮವು ನವಿಲಿಗೇಕೆ ?
ಅಜ್ಞನಿರುವ ಅವನು ಆ ಶಿವನನರಿವನೆ ? ವಿಶ್ವ

೨೨೬೯ ನಾಯಿಗೇನು ಗೊತ್ತು ಗುರು ಲಿಂಗ ಜಂಗಮ ?
ಕಾಲು ಖಂಡ ಕಚ್ಚಿ ಎಳೆವುದೊಂದೆ.
ಸಂತೆ ತಿನಿಸಿನಾಕೆ ಸಂತನನೆಂತು ಬಲ್ಲಳು ? ವಿಶ್ವ

೨೨೭೦ ಹೆಡ್ಡನಿಗೆ ತಿಳಿಸಲು ಒಂದು ವರುಷ ಸಾಕು,
ಗುಡ್ಡದೊಳಿಹ ಮೌನಿಯರಿಯೆ ಮಾಸ
ಮೂಢನರಿಯಲು ಮೂವತ್ತು ವರುಷ ಬೇಕು, ವಿಶ್ವ

೨೨೭೧ ಹೆಚ್ಚು ವರುಷ ಇದ್ದು, ಹಾಳು ಆಯ್ತು ಬಾಳು,
ತನುವು ಸತ್ಯವಲ್ಲ ತಥ್ಯವರಿಯೊ,
ಅರಿತೂ ತಿರುಗುವಗೆ ಅರುಹಲೆಂತು ? ಮೂರ್ಖ, ವಿಶ್ವ

೨೨೭೨ ಅನುವು ಮೀರಿ ಕಾಣು ಯತಿಗಳ ಜನ್ಮಗಳ,
ಎಣಿಸಿ ಹೇಳೂ, ಎಂಥವರೇ ಇರಲಿ,
ಅಲ್ಲಿ ಇಲ್ಲಿಗನುವು ಅತಿಶಯಾಗಬಹುದು, ವಿಶ್ವ

೨೨೭೩ ಗಡ ಮುಂಜಿ ಗೆಯ್ವ ವಿಪ್ರರು,
ಅಡಿಗಡಿಗೆ ಬ್ರಹ್ಮಚರ್ಯದ ಮಂತ್ರವ ಪಠಿಸಲ್,
ಕಡೆಗೆ ಪ್ರಾರಬ್ಧ ಬಿಟ್ಟು,
ಮಿಡುಕುತ ದಡಗಾಣರಲ್ಲ, ಮಹಿಯಲಿ, ವೇಮಾ

೨೨೭೪ ಪಾಪ ಪುಣ್ಯಗಳನು ಪಶುಪಾಲನರಿವನೆ ?
ಅವನಿ ಪರಮ ಯೋಗಿ ಅರಿಯುತಿಹನು,
ಗುಣವನರಿಯದೆಂತು ಕೂಡಿಸುವುದು ಧಾತು ? ವಿಶ್ವ

೨೨೭೫ ನಾಯಿ ಏಕಾಂತವು, ನೋಡು ಬಕ ಧ್ಯಾನ,
ಕತ್ತೆರಾಗದೆಣಿಕೆ, ಕಪ್ಪೆ ಜಳಕ ;
ಆತ್ಮವರಿವ ಭಾವ ಅರಿಯರೇಕೊ ಮನದಿ ? ವಿಶ್ವ

೨೨೭೬ ತನ್ನ ಮನೆಯ ಒಳಗೆ, ತನ್ನ ಶತ್ರು ಮಿತ್ರ,
ತಿಳಿಯಲಾರದವನ ತಿಳಿವದೇಕೆ ?
ತಿಳಿದಿಹ ಮನುಜನಿಗೆ ದಿವ್ಯಾಮೃತವಯ್ಯ, ವಿಶ್ವ

೨೨೭೭ ಬಂಡೆ ಮೇಲೆ ಒರತೆ ಬಗೆದು ಬಹಳ ತೆಗೆಯೆ,
ಆಯ್ತುಹೆಚ್ಚು ಕಷ್ಟ, ಆಸೆಯಿಲ್ಲ,
ಕೆರೆ ತಳದ ಒರತೆ ಕುಲವನುದ್ಧರಿಪುದು, ವಿಶ್ವ

೨೨೭೮ ನಾಯಿಯೇನರಿವುದು ಗುರು ಲಿಂಗ ದೇವರ ?
ಗಂಡು ನರಿಯರಿವುದೆ ಒಂದು ಹೊತ್ತು ?
ಗಡಸು ನರನು ಮತ್ತೆ ಮೋಕ್ಷ ಹೊಂದಬಹುದೆ ? ವಿಶ್ವ

೨೨೭೯ ಮೇಕೆ ಏನರಿವುದು ಮೇಲಾದ ವಸ್ತುವ ?
ದೇಹವೇನರಿವುದು ದಿವ್ಯ ಬೋಧ ?
ಹಿತವನರಿತು ನೀವು ವೇದಾಂತವರಿಯಿರಿ, ವಿಶ್ವ

೨೨೮೦ ಹಂದಿ ಏನರಿವುದು, ಪನ್ನೀರ ವಾಸನೆ ?
ಕತ್ತೆ ಏನರಿವುದು, ಗುರುವಿನ ಬೋಧೆ ?
ಮದಗಜೇನರಿವುದು, ಮತ್ತೆ ಒಳಿತು–ಕೆಡುಕು ? ವಿಶ್ವ

೨೨೮೧ ಗಾರ್ದಬೇನರಿವುದು ಗಂಧದ ವಾಸನೆಯ ?
ಸೊಣಗವೇನರಿವುದು ಸರಿಯೊ–ತಪ್ಪೊ ?
ಅಲ್ಪನೇನರಿವನು ಹರನೊಲಿವ ವಿರಕ್ತಿ ? ವಿಶ್ವ

೨೨೮೨ ಗಾರ್ದಭ ಮೈತುಂಬ ಗಂಧ ಬಳಿದೊಡೇನು ?
ಬೂದಿ ಕಣದಿ ಬಿದ್ದು ಉರುಳದಿಹುದೆ ?
ಅಡ್ಡಮೋರೆಯವಗೆ ಸೊಗಸು ಡೌಲು ಹೊಲ್ಲ, ವಿಶ್ವ

೨೨೮೩ ಇಳೆಯೊಳು ಮಡ್ಡನಿಗೆ ವೈದ್ಯ ಕಾರ್ಯವೇಕೆ ?
ಅಂಧಕಂಗೆ ಏಕೆ ಕ್ರಮದ ಓಟ ?
ಗಿಡ್ಡನಿಗೇಕೆ ಬಿಡು ? ಜೇಕು ಹಾರುವಾಟ ? ವಿಶ್ವ

---

೨೨೮೪ ನಾಯಿಗೇನು ಗೊತ್ತು ಗುರು ಲಿಂಗ ಜಂಗಮ ?
ಕಾಲು ಖಂಡ ಕಚ್ಚಿ ಎಳೆವುದೊಂದೆ,
ಸಂತೆ ತಿನಿಸಿನಾಕೆ ಸಂತನನು ಅರಿವಳೆ ? ವಿಶ್ವ

೨೨೮೫ ಹೆಡ್ಡನಿಹಗೆ ಗುರು ತೋರಿಸಿ ಹೇಳಿದರೂ,
ತಿಳಿಯಬಹುದೆ ಆತ್ಮ ? ತಿಳಿವು ಇರದೆ,
ಹೀನ ಮಗನು ತಂದೆ ಹೇಳಲು ಕೇಳುವನೆ ? ವಿಶ್ವ

೨೨೮೬ ದೀಪವಿರದಂಥ ಮನೆಯಲಿ,
ರೂಪವನು ತಿಳೀಯಲಾರರು, ರೂಢಿಯು ತಮದೋಳ್,
ದೀಪವಹ ತಿಳಿವು ಹೊಂದಿಯು
ಪಾಪಗಳ ಹೊಲಸು ಹಾದಿಲಿ ಬೀಳ್ವರು ವೇಮಾ.

೨೨೮೭ ಹುಟ್ಟು ತಿಳಿಯದವನು ಪುರುಷಾಧಮ ಜಗದಿ,
ಹುಟ್ಟಲೇಕೆ ಮತ್ತೆ ಹೊರಡಲೇಕೆ ?
ಹುತ್ತದೊಳು ಗೆದ್ದಲು ಹುಟ್ಟವೆ ? ಸಾಯವೆ ? ವಿಶ್ವ

೨೨೮೮ ಮನಸು ನಿಲಿಸದಂಥ ಮಾಯೆ–ವಿರಕ್ತ ಜನ,
ಮನಸಿಗಿಚ್ಛೆಯೋರ್ವ ಮಹಿಳೆ ಮೇಲೆ
ನಿರರ್ಥಕ ಜನ್ಮದ ನಿಮ್ಮ ಬದುಕು ಏಕೆ ? ವಿಶ್ವ

೨೨೮೯ ಸೊಬಗು ಇಲ್ಲದವನು ಸಂಕಟಪಡನೇನು ?
ನಿಕ್ಕಯಾದ ಜ್ಞಾನ ನಿಂತು ಕೊಳಲು,
ಎಷ್ಟು ಆಪತ್ತುಗಳು ಆವಾಗ ಈವಾಗ ? ವಿಶ್ವ

೨೨೯೦ ಬಂಡೆ ಮೇಲೆಯೊರತೆ ತೋಡುತಿದ್ದರೇನು ?
ಶ್ರಮವೆ ಹೆಚ್ಚು ಆಶೆ ಕೈಗೂಡದು,
ಕೆರೆಯ ತಳದಿ ಒರತೆ ಕುಲವನುದ್ಧರಿಪುದು. ವಿಶ್ವ

೨೨೯೧ ಪರದೇಶಿಯಾಗಿದ್ದು ಪ್ರಜರಿಗೇನೆನಲೇನು ?
ಅವರ ಬಾಯಿಗೆ ಕೇಡು ಅಪ್ಪುದಷ್ಟೆ,
ಶೈಲ ಚಂದ್ರನ ಕಂಡು ಶ್ವಾನ ಬೊಗಳಿದ ರೀತಿ, ವಿಶ್ವ

೨೪೯೨ ಬೇನೆ ಕಂಡರಿಯದೆ ಮದ್ದು ಕೊಡುವುದೇಕೆ ?
ಮನದಿಷ್ಟವರಿಯದೆ ಕೋರಲೇಕೆ ?
ಮನದ ಮರ್ಮ ಕಾಣ ; ಜಾಣನೆನಿಸಲೇಕೆ ! ವಿಶ್ವ

೨೪೯೩ ಬಾಲ್ಯದೊಳು ಸ್ವಾಮಿ ಭಕ್ತಿಯಿಲ್ಲದಿರಲು,
ಯೌವನದೊಳು ಹರನ ಯೋಚಿಸರಲ !
ವಾರ್ಧಿಕ್ಯ ಹೊಂದಲು ವರ್ಣಿಸದೆ ಇರುವರು, ವಿಶ್ವ

೨೪೯೪ ಪುರುಷನೆಪ್ಪೊ ಬಾರಿ ಪುಟ್ಟಿದಂದಿನಿಂದ,
ಪಾಪ ಚಿಂತೆ ಗೈವ ಪಾಮರಾಗಿ,
ಮನದಿ ಕುಂಟ ನಾಯಿ ಮಾಂಸ ತಿಂದ ರೀತಿ, ವಿಶ್ವ

೨೪೯೫ ಅಂತರಂಗದಲ್ಲಿ ಅಪರಾಧವ ಗೈದು,
ಒಳ್ಳೆಯವನ ರೀತಿ ಉಂಟು ಮನುಜ,
ಇತರರಿಯದಿರಲು ಈಶ್ವರನರಿಯನೇ ? ವಿಶ್ವ

೨೪೯೬ ಕೇಳಿದ, ಕಂಡುದ, ಕೋರುವ,
ಕಂಡಾ ಕಾಂತೆಯ ಗೂಳಿ ತೆರ ಕೂಡೆ ಕೋರ್ಪಂ,
ಕಾಣುತ ಪ್ರೇಮದಿ ಹೊರಳುವ,
ಘನತರ ಮೋಹವದು ಕೇಡು ; ಕಾಣಾ ವೇಮಾ.

೨೪೯೭ ತಾಮಸದ ಕಾರ್ಯವು ವಿಷಮವಾರಿಗೇನು ?
ತಾಮಸ ಗುಣವಳಿಯೆ ಸಲೆ ಸುಜನರು,
ತಾಮಸ ನಂಬುವವರು ಧರೆಯ ಮೂಢರಷ್ಟೆ. ವಿಶ್ವ

೨೪೯೮ ಆದಿ ತುದಿಯರಿಯದೆ ಅಲ್ಪನಾದ ದಿನಕೆ,
ಬುದ್ಧಿ ಬದಲುಗೊಂಡು ಬಹಳ ಅಲೆತ,
ತರುವ, ತರುವ, ತಿರುಗು–ತಿರುವ ಕೋತಿಯಂತೆ, ವಿಶ್ವ

೨೪೯೯ ಬಂಡ ನಾಯಿಗೇಕೆ ಬಂಗಾರ ಸಂಕೋಲೆ ?
ವಿಧವೆ ಹೆಣ್ಣಿಗೇಕೆ ಬೆಳ್ಳಿ ಗೊಣಸು ?
ಮೂಳ ಮುಂಡೆಗೇಕೆ ಮುಂಗೈ ಕಡಗಗಳು ? ವಿಶ್ವ

೨೩೦೦ ಆತ್ಮವರಿಯದೆ ನುತಿಸಿ ಅಷ್ಟಿಷ್ಟು ಮಾಡಲು,
ಅಂಥವನ ಮೆಚ್ಚುವವ ವ್ಯರ್ಥ ನರನು.
ಮೂಗಿರದ ಹೆಣ್ಣನು ಮೂಢ ಮೆಚ್ಚುವನೇ ? ವಿಶ್ವ

೨೩೦೧ ಅರಿವುಗೇಡಿ ಜೀವಿ ಆವಲ್ಲಿದ್ದರೇನು ?
ಅರಿವು ಮರೆತ ಜೀವಿ, ಎಗರಿ ಬರುವ,
ಪಟ್ಟು ಸಿಕ್ಕ ಬಳಿಕ ಪರಮಾತ್ಮನಾತನೆ, ವಿಶ್ವ

೨೩೦೨ ಅಂಗಜ್ಞಾನವಹೀನ ದಾತನಹನೇ? ಐದಾರು ನೀರ್ನಾಲೆಗಳ್,
ಗಂಗಾ ನರ್ಮದ ಸಿಂಧು ಗೌತಮಿಗಳೇ ? ಗಂಗೆತ್ತಿಗಾಭರ್ಣದಿಂ,
ಶೃಂಗಾರಾಗಿರೆ, ಶಂಭು ತೇಜಿಯಹುದೇ ? ಕ್ಷೀರಾಬ್ಧಿಯೋಳಿರ್ದಡೇಂ?
ಕೊಂಗದ್ದೇಳಲು ರಾಜಹಂಸವಹುದೇ ? ಗೋರಾಜ ವೇಮಾಹ್ವಯಾಃ

೨೩೦೩ ಆಚೆಯನು ಅರಿಯದ ಅಜ್ಞಾನಿ ಜೀವಿಗಳು,
ಮೂಲವನರಿಯದ ಮುಟ್ಟನಿಂದ,
ಅನುದಿನ ಸೃಜಿಸುವರು ಆತ್ಮ ತಿಳಿಯದಿದು, ವಿಶ್ವ

೨೩೦೪ ಡೊಂಕ ಕಾಷ್ಟ ಸುಟ್ಟು, ಡೊಂಕು ತಿದ್ದಬಹುದು,
ಗುಡ್ಡವೆಲ್ಲ ಹಿಟ್ಟು ಗೆಯ್ಯಬಹುದು,
ಕಲುಷ ಚಿತ್ತ ಮನಸು ಕರಗಿಸಲಾಗುವುದೆ ? ವಿಶ್ವ

೨೩೦೫ ಒಡ್ಡಗೆ ಗುರು ತೋರಿ, ಒಪ್ಪ ಹೇಳಿದರೂನು,
ತಿಳಿದುಕೊಳ್ಳನಾತ್ಮ, ತಿಳಿವು ಇರದೆ,
ಹಾಳು ಮಗನು, ತಂದೆ ಹೇಳಲು ಕೇಳುವನೆ ? ವಿಶ್ವ

೨೩೦೬ ಅತಿ ನಿದ್ರಾವಂತರಿಗು–
ನ್ನತ ಪಾನಿಗೆ, ಉಪವಾಸಿಗತಿ ಕೋಪಿಗಳಿಗುಂ.
ಧೃತಿ ಹೀನನಿಗಪಕಾರಿಗೆ
ಜೊತೆಗಿರದೀ ಬ್ರಹ್ಮ ವಿದ್ಯೆ, ಸಾರ್‍ೈ, ವೇಮಾ

೨೩೦೭ ತುಡುಗಗಳ್ಳರಿಗೆ ಸಿಗದೆ ಹೋದಂಥ ತೆರನೆ ಆಯ್ತು,
ಬಾಯಿ ಗುಣಿಸುತಿಹ ಮಂತ್ರವು ಬಹಳ ನೀಟ,
ಮಾತಿನಲ್ಲಿಯೇ ಪರಮಾತ್ಮ ಮರುಕಗೊಳನು,
ಚಿತ್ತದಲಿ ಸ್ವಸ್ಥೆಯು ಇರದಿರೆ ಕೇಡು ವೇಮ.

೨೩೦೮ ಫಲಕ ಎಡ ಕೈಲಿ, ಪಿಡಿದು ಖಡ್ಗ ಬಲದಿ,
ಬಂಟತನವು ಅಲ್ಲ ಪ್ರತಿಭೆ ಇರದೆ,
ಬೀದಿ ಹಿಡಿದು ತಿರುಗೆ ಬಸವಿ ಪುರುಷನಹಳೆ ? ವಿಶ್ವ

೨೩೦೯ ಮೊಂಡ ಜನರಿಗೇಕೆ ಮುಂಗೈ ಕಡಗಗಳು ?
ಬಚ್ಚ ಬಾಯಿಗೇಕೆ ಕಾಷ್ಟ ದಂತ ?
ಗಾರ್ದಭಕ್ಕೆ ಏಕೆ ಗಡ್ಡ ಮೀಸೆ ಹುಚ್ಚು ? ವಿಶ್ವ

೨೩೧೦ ವಂಚನ ಮನದೊಳಿರುವರಿಗೆ,
ಸಂಚಿತ ಕರ್ಮಗಳು ಬಿಡದೆ, ಸಂದೇಹವಿರಲ್,
ಪಂಚೇಂದ್ರಿಯ ಲೋಲ ಜನಕೆ,
ಸಂಚಿತವಹ ಆತ್ಮವಿದ್ಯೆ ಸೇರದು ವೇಮಾ.

೨೩೧೧ ಪ್ರಾಣ ಬಂಧಗಳನು ಪಂಟ ಕಾಪು ಅರಿವನೆ ?
ಅರಿವು ಉಳ್ಳ ಜ್ಞಾನಿ ಅರಿವ ಹೊರತು,
ಮುದ್ರೆಯೊಳಗೆ ಇಲ್ಲ ಮೂಲದಲ್ಲಿ ಹೊರತು, ವಿಶ್ವ

೨೩೧೨ ಬಂಗಿ ಕುಡಿದು ತಿರುಗೆ, ಬಕ ಧ್ಯಾನವಿರಲು,
ಸಂಗ್ರಹಿಸಲು ಅರ ಚಂದ್ರ ಕಳೆಯ,
ಇಳಿದು ಮನದಾಳಕೆ, ಇಣುಕು ; ಗಗನದಿಹುದು, ವಿಶ್ವ

೨೩೧೩ ಬಂಡ ಹೆಣ್ಣಿಗೇಕೆ ? ಬಂಗಾರ ನಡು ಪಟ್ಟಿ ?
ವಿಧವೆ ಹೆಣ್ಣಿಗೇಕೆ ? ಬೆಳ್ಳಿ ಸರವು ?
ಕಳ್ಳ ಮುಂಡೆಗೇಕೆ ? ಒಳ್ಳೆ ಮುಂಗೈ ಕಡಗ ? ವಿಶ್ವ

೨೩೧೪ ಹೊಟ್ಟೆಗಿರದ ಕಾಲ ಕಷ್ಟ ಪಟ್ಟರೇನು ?
ಪಡೆದ ವಿದ್ಯೆ ನಿಲದೆ ಪೋಗದೇನು ?
ಹಸಿಯ ಮಡಿಕೆ, ನೀರು ಹಾಕಲುಳಿಯಬಹುದೆ ? ವಿಶ್ವ

೨೩೧೫ ದೊಡ್ಡ ಕಲ್ಲು ಗುಂಡು, ಒಡೆದು ಹಾಕಬಹುದು.
ಗುಡ್ಡವನ್ನೆ ಹುಡಿಯಾಗಿಸಬಹುದು,
ಕಠಿಣ ಚಿತ್ತ ಮನಸು ಕರಗಿಸಲಾರುಂಟು ? ವಿಶ್ವ

— — — — — — — — — — — — — — — — — — — — — —

೨೩೧೬ ಕುಂಬಾರನಲಿ ಜ್ಞಾನವ,
ತುಂಬಿ ತಿಳಿಸಲೇನು ? ತಿಳಿಯನೆಂದೂ ನೋಡಾ !
ಶುಂಭನವ ಬೊಮ್ಮ ತಾನಿಹೆ–
ನೆಂಬ ಮದ ಹೊಂದಿ ಕೆಡುವ, ಸುಧಾರಿಸ ವೇಮಾ

೨೩೧೭ ಇಷ್ಟು ಸುಳಿವು ಇರದೆ, ಎಷ್ಟು ಜನರಿರಲೇನು ?
ಗುಟ್ಟರಿಯದೆ ಶಿವನ ಮುಟ್ಟುತಿಹರೆ ?
ಹೊಟ್ಟೆ ಜೀವಿ ಸತ್ತು ಹೋಗಿ ತಾನುಬ್ಬುವನೆ ? ವಿಶ್ವ

೨೩೧೮ ಈದ ವ್ಯಾಘ್ರವನು ಅರಿಯಬಹುದು ಹಿಡಿದು ;
ಮನಗಾಣಲು ಬಹುದು, ಮರ್ಮವರಸಿ,
ತಾಕನವನು ಮತ್ತೆ ತಗಲಲೆಂತು ಸಾಧ್ಯ ? ವಿಶ್ವ

೨೩೧೯ ಮಾತನಾಡೆ ಬೇರೆ, ಮನದ ಕೋರ್ಕೆ ಬೇರೆ,
ಒಡಲು ಗುಣವು ಬೇರೆ, ಯೋಚನೆ ಬೇರೆ,
ಎಂತು ಬಹುದು ಮುಕ್ತಿ, ಇಂತು ನಡೆತೆ ಇರಲು ? ವಿಶ್ವ

೨೩೨೦ ಈಜರಿಯದ ಮನುಜ ಏಳುವ ಮುಳುಗುತಿಹ,
ಈಚೆ ದಡವೆಟುಕನು ಈಜ ಹೋಗಿ,
ಪ್ರಜ್ಞೆಯಿಲ್ಲದಾತ ಪರಲೋಕ ಮುಟ್ಟನು, ವಿಶ್ವ

೨೩೨೧ ಕಾಲವು ತನಗಿದೆ ಅತಿಶಯ,
ಕಾಲವು ಇಹುದೆನುತ ಇರುವ ಕಾಲದ ಒಳಗೇ,
ಖೂಳನು ತಾ ತಿಳಿಯ ತನ್ನ,
ಬೀಳುವನು ದುಗುಡ ಹೊಂದುತ, ಬೇಗನೆ ವೇಮಾ,

೨೩೨೨ ಪೆದ್ದ ಮಡ್ಡಗೇಕೆ ವೇದ ಶಾಸ್ತ್ರಂಗಳು ?
ಮುಗ್ಧ ಮಡದಿಗೇಕೆ ಮುದಿಯ ಗಂಡ ?
ತಂಗಳುಳಿಯದ ಮನೆ ಸಂಸಾರವದೇಕೆ ? ವಿಶ್ವ

೨೩೨೩ ತತ್ತ್ವಹೀನ ನರರು ತುಂಬಿಹರು ಜಗದೊಳು,
ತತ್ತ್ವತಿಳಿದ ನರರು ತುಂಬಲಿಲ್ಲ,
ಕಂಡ ಜಾಣ ನರರು ಕಣ್ಣಿಗೇ ಬೀಳರು, ವಿಶ್ವ

— — — — — — — — — — — — — — — — — — — — — —

೨೩೨೪ ಸುರರು ಮೌನವಿಹರು ಸರಿಯಾಗಿ ನಡೆವರು,
ಧರ್ಮ ಮಾರ್ಗವೊಂದೆ ತಾರಕವದು,
ಅಂತೆ ಅಲ್ಲದವರು, ಅಸುರರಾಗಿ ಕೆಡುಗು, ವಿಶ್ವ

೨೩೨೫ ಹಯವು ಗುರುವೆನಿಸದೆ ? ಅಖಿಲ ತಾನೆನಿಸನೆ ?
ಅನುಭವಿಸರು ಏಕೆ ಹರನ ಕೂಡಿ ?
ಯತಿಯು ಆದ ಮೇಲೆ ಅಂಧಕಾರವೇಕೆ ? ವಿಶ್ವ

೨೩೨೬ ಸಾವು ಬರುವ ಕಾಲ ಸನ್ಯಾಸ ಸ್ವೀಕರಿಸೆ,
ಕಡೆಗೆ ಮೊದಲ ಕುಲವು ಕೆಡುವುದಲ್ತೆ ?
ಪಾಪವಷ್ಟೆ ಬೇರೆ, ಫಲವು ಇರದೆ ಹೋಯ್ತು, ವಿಶ್ವ

೨೩೨೭ ಗಿಡ್ಡ ಹುಡುಗ ಬಲಿತು ಗಗನಕೆ ಎಗರಿದರೆ,
ಗಿಡದ ತುದಿಯ ಹಣ್ಣು ಕೈಗೆಟುಕುವುದೆ ?
ಪುಸ್ತಕಗಳನೋದೆ ಹೊಂದುವನೇ ಮೋಕ್ಷ ? ವಿಶ್ವ

●●●

# ೧೩. ಮೋಕ್ಷ ವರ್ಗ

## ಮನೋಶುದ್ಧಿ

ಆಶೆಗಿಂತ ದುಃಖ ಅತಿಶಯವಾಗಿಲ್ಲ.
ಸಮೀಕ್ಷಿಸದೆ ಇರಲು ಸುಖವೆ ಇಲ್ಲ.
ಮನಸು ನಿಲಿಸದಿರಲು ಮತ್ತೆ ಮುಕ್ತಿಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

●

## ಮನೋಶುದ್ಧಿ

ಮನಸ್ಸಿಗೆ ವಿಷಯಗಳೇ ಆಹಾರ. ವಿಷಯ ವಿದೂರವಾಗುವುದೇ ಮನೋಶುದ್ಧಿ, ಶುದ್ಧಿ ಎಂದರೆ ಶೋಧಿಸುವುದು ಅರ್ಥಾತ್ ಸಾಣಿಸುವುದು. ಅಗತ್ಯ ವಿಷಯಗಳನ್ನು ಹೊರತು ಉಳಿದವುಗಳನ್ನು ಮನದಲ್ಲಿ ಹಿಡಿಯದಿರುವುದೇ ಮನೋಶುದ್ಧಿ. ಆದ್ದರಿಂದಲೇ –

**'ಮನ ಏವ ಮನುಷ್ಯಾಣಾಂ ಕಾರಣಂ. ಬಂಧ ಮೋಕ್ಷಯೋ :**
**ವಿಷಯಾಸಕ್ತ : ಉದ್ಧ ಉಚ್ಯತೇ ನಿರ್ವಿಷಯಂ ವಿಮುಕ್ತ ಚ'**

ಅಂದರೆ ಮನುಷ್ಯನ ಬಂಧ ಮತ್ತು ಮೋಕ್ಷಕ್ಕೆ ಮನಸ್ಸೇ ಕಾರಣವು. ವಿಷಯಗಳಲ್ಲಿ ಆಸಕ್ತವಾಗುವುದೇ ಬದ್ಧತೆಯು. ವಿಷಯ ದೂರನಾಗುವುದೇ ವಿಮುಕ್ತತೆಯು. ಪಂಚ ಇಂದ್ರಿಯಗಳಿಗೆ ಸಂಬಂಧಿಸಿದಂತೆ, ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೇ ಪಂಚ ವಿಷಯಗಳೆಂದು ಕ್ರೋಢೀಕರಿಸಬಹುದು.

ಈಗ ಸಾಧಕನೆದುರು ಯಾವುದು ಅವಶ್ಯಕ ? ಮತ್ತಾವುದು ಅನಾವಶ್ಯಕ? ಎಂಬದನ್ನು ವಿಂಗಡಿಸಿ ತಿಳಿಸುವ ಅಗತ್ಯವಿದೆ. ಈ ವಿಂಗಡಣೆ ಮಾಡುವ ವೃತ್ತಿಯೇ ವಿವೇಕ. ಅವಿದ್ಯೆಯು ಮುಸುಕಿದೆ. ಅಡವಿಯಂತೆ ಗಡುಚಿಕಿದೆ. ಸಾಧಕನು ವಿವೇಕವೆಂಬ ಕೊಡಲಿಯಿಂದ ಅವಿದ್ಯೆಯೆಂಬ ಅಡವಿ ಕಡಿಯಬೇಕು. ತಿಳಿವು ಎಂಬ ದೀಪ ಹಿಡಿದು ಮುಕ್ತಿಯ ಮಾರ್ಗ ಶೋಧಿಸಬೇಕು.

ಅವಿದ್ಯೆ ಇಲ್ಲವೆ ಅಜ್ಞಾನವೆಂಬ ಶೂದ್ರತ್ವವನ್ನು ಸುಜ್ಞಾನವೆಂಬ ಬ್ರಹ್ಮದರಿವಿನಿಂದ ಹೋಗಲಾಡಿಸಬೇಕು, ಶೂದ್ರನಾಗಿದ್ದ ವಾಲ್ಮೀಕಿ ಬ್ರಹ್ಮಪದವಿ ಪಡೆಯಲಿಲ್ಲವೇ ?

— — — — — — — — — — — — — — — — — — — — —

ತ್ರಿಕರಣಪೂರ್ವಕ ಮುಂದುವರಿಯಬೇಕು. ಮಾತಿನಲ್ಲೊಂದು, ಮನಸ್ಸಿನಲ್ಲೊಂದು, ಕಾಯದಲ್ಲೊಂದು ಬಗೆಯಾಗಿ ನಡೆದರೆ, ಮುಕ್ತಿ ಸಿಗದು. ಕಾಯಾ, ವಾಚಾ ಮತ್ತು ಮನಸಾ ಪರಿಶುದ್ಧನಾಗಬೇಕು.

ಭವವನ್ನು ಇಲ್ಲವಾಗಿಸಿದರೆ ಅಭವ ಸ್ಥಿತಿಯು ಲಭ್ಯ. ಅಭವ ಸ್ಥಿತಿಯನ್ನು ತಲುಪಲು ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಆರು ವೃತ್ತಿಗಳೇ ವೈರಿಗಳಂತಿವೆ. ಇವನ್ನೇ ಅರಿಷಡ್ವರ್ಗಗಳೆಂದು ಕರೆದಿದ್ದಾರೆ. ಅಭವನ ಅನುಭವವಾದಲ್ಲಿ ಇವು ಇಲ್ಲವಾಗಿ ಸಾಧಕರಿಗೆ ಸಂಶಯ ನಿವಾರಣೆಯಾಗುತ್ತದೆ. ದೀಪವು ಸ್ವಲ್ಪ ಬೆಳಗಿದರೆ ಸಾಕು; ಕತ್ತಲು ಕಾಲು ಕೀಳುತ್ತದೆ. ಅದೇ ರೀತಿ ಸ್ವಲ್ಪ ಅಭವ ಸ್ಥಿತಿಯ ಅರಿವಾದರೂ ಸಾಕು, ಅರಿಷಡ್ವರ್ಗಗಳು ನಿಲ್ಲವು.

ಭವಸಾಗರದಲ್ಲಿ ಈಜಲು ಬಾರದ ಬಹು ಜನರು ಆಳಕ್ಕಿಳಿದಿದ್ದಾರೆ. ಕ್ವಚಿತ್ತಾಗಿ ಹಲವರು ಈಜು ಕಲಿತಿದ್ದಾರೆ. ಅವರ ಒಳದನಿ ಮಾರ್ಗದರ್ಶಕವಾಗಿದೆ. ಅದಕ್ಕೆ ವಂದಿಸಿ ಕೃತಜ್ಞರಾಗಬೇಕು.

ಅಜ್ಞಾನವೆಂಬ ಕತ್ತಲಲ್ಲಿಯೇ ಹುಟ್ಟಿ, ಅಜ್ಞಾನವೆಂಬ ಕತ್ತಲಲ್ಲಿಯೇ ಬೆಳೆದು, ಆ ಕತ್ತಲಿನ ನೆರಳಲ್ಲಿ ಸಿಲುಕುವುದೇಕೆ ? ಆ ಕತ್ತಲನ್ನು ಅರಿತರೆ ಸೃಷ್ಟಿಯು ಕಾಣಬರದೇನು ?

ನಮ್ಮ ಅರಿವಿನ ಅವಸ್ಥೆಗಳು ನಾಲ್ಕು. ಜಾಗ್ರತ, ಸ್ವಪ್ನ, ಸುಷುಪ್ತಿ ಮತ್ತು ತುರೀಯ ಎಂದು. ಇವು ನಮಗೆ ತಿಳಿಯದಂತೆಯೇ ಬರುತ್ತವೆ. ಹೀಗಾಗಿ ಅವುಗಳನ್ನು ಒಂದು ದೃಷ್ಟಿಯಲ್ಲಿ ಕಳ್ಳರೆನ್ನಬಹುದು. ಜ್ಞಾನ ಸಾಧಕನು ಇವುಗಳನ್ನು ಸರಿಯಾಗಿ ಗುರುತಿಸುತ್ತಾನೆ. ಇವು ನಾಲ್ಕು ಅವಸ್ಥೆಗಳಿಗೆ ಮೀರಿದ ತುರಿಯಾತೀತ ಆವಸ್ಥೆಯಲ್ಲಿ ಉಳಿಯುತ್ತಾನೆ. ಅಲ್ಲಿಯೇ ಆತ್ಮ ಸುಖವಿದೆ. ಈ ನಾಲ್ಕು ಕಳ್ಳ ಅವಸ್ಥೆಗಳಲ್ಲಿ ನಾಲ್ಕನೆಯದಾದ, ಅವಸ್ಥೆಯ ಪ್ರಜ್ಞೆಯನ್ನು ದಾಟಿ, ತುರೀಯಾತೀತದಲ್ಲಿ ನೆಲೆಗೊಳ್ಳಬೇಕು.

ನಾಲ್ಕು ಅವಸ್ಥೆಗಳನ್ನು ದಾಟಿ, ಸುಖೇಚ್ಛೆ, ಆತ್ಮವಿಚಾರ, ನಿಸ್ಸಂಗ ವಾಸನಾಕ್ಷಯ, ಆನಂದಿನಿ, ತೂರ್ಯ ಮತ್ತು ತುರ್ಯಾತೀತ ಎಂಬ ಸಪ್ತಮೆಟ್ಟಲುಗಳನ್ನೇರಿ ಸತ್ವ, ರಜಸ್ಸು ಮತ್ತು ತಮಸ್ಸುಗಳ ಮೂರು ಮನೆಗಲ್ಲಿ ವರಿಸಲು ಮನವು ಮುಕ್ತವಾಗಬಲ್ಲುದೇ ? ಇಲ್ಲ. ದೇಹದ ಮೇಲೆ ಹಣೆಗೆ ಬೊಟ್ಟು ಇಟ್ಟು, ಬೂದಿ ಬಳಿದು ಭೂಪ್ರಜರಿಗೆ ಆಮೋದ-ಪ್ರಮೋದ ಒದಗಿಸಬಹುದೇ ಹೊರತು ಹೆಚ್ಚಿಗೇನನ್ನೂ ಸಾಧಿಸಲಾಗದು.

ಜನರೆಲ್ಲ ಅರಿಷಡ್ವರ್ಗಗಳಲ್ಲಿ ಸಿಲುಕಿ ತತ್ತ್ವವನ್ನು ತಿಳಿಯಲಿಲ್ಲ. ಕಾರಣ ಕಾಮ, ಕ್ರೋಧಾದಿ ಆರನ್ನೂ ನಾಶ ಮಾಡಿ, ಹರನ ಮೇಲೆ ಧ್ಯಾನಿಸಬೇಕು. ಈ ಗತಿಯಲ್ಲಿಯೇ ಮುಂದುವರಿದು ಹರನೊಂದಿಗೆ ಒಂದಾಗಬೇಕು.

— — — — — — — — — — — — — — — — — — — — — —

ಆಶೆಯು ಅತ್ಯಂತ ದುಃಖಕರ. ಅದನ್ನು ತೊರೆಯಬೇಕು ? ಹೇಗೆ ? ಮನಸ್ಸನ್ನು ನಿಲ್ಲಿಸಬೇಕು. ಆಗ ಮಾತ್ರ ಬಿಡುಗಡೆ ಸಾಧ್ಯ. ಚಪಲ ಚಿತ್ತವನ್ನು ಜಯಿಸಿ ಮುಂದಾಗಬೇಕು. ಮನದ ಕಪಟವನ್ನು ತೊರೆದು ಸರಳತೆಯನ್ನು ರೂಢಿಸಿಕೊಂಡು ಮುಂದುವರಿಯಬೇಕು. ದಾರೇಷಣ, ವಿತ್ತೇಷಣ ಮತ್ತು ಪುತ್ರೇಷಣಗಳಿಂದ ಮಾನವನು ಮೋಸಗೊಳ್ಳಬಹುದು. ಇವುಗಳಿಗೆ ಒಳಗಾಗದೆ ಚಿದ್‌ಬಯಲಲ್ಲಿ ಸೇರಿ ಮುಂದಾಗಬೇಕು.

ವಿದ್ಯಾ ಮಾರ್ಗಕ್ಕೆ ಶತ್ರು ವೃತ್ತಿಗಳಾವವು ? ಮಿತ್ರ ವೃತ್ತಿಗಳಾವವು ? ವಿವೇಚನೆಯಿಂದ ವಿಶ್ಲೇಷಿಸಿ ಅರಿಷಡ್ವರ್ಗಗಳನ್ನೂ, ಸಪ್ತವ್ಯಸನಗಳನ್ನು ತೊರೆದು ಸಾಧನ ಚತುಷ್ಟಯಗಳನ್ನು ರೂಢಿಸಿಕೊಂಡು ಪಿಂಡವಿರುವಾಗಲೇ ಪೂರ್ಣ ಜ್ಯೋತಿಯನ್ನು ಕಾಣಬೇಕು.

ವಿಷಯಗಳಲ್ಲಿ ಹೊರಳಾಡದೆ, ಅವುಗಳನ್ನು ವಿಷವೆಂದು ತಿಳಿದು ಸುಖ ಮಾಯೆಯಲ್ಲಿ ಸಿಲುಕಿಕೊಳ್ಳದವನೇ ತಿಳಿದವನು.

ವಿಷಯ ವ್ಯಾಮೋಹವು ತೀರದೆ ಇರುವುದೇ ದಾಹವು. ಅದರಿಂದಲೇ ದೇಹಿ ತಲ್ಲಣಪಡುವನು. ಆದ್ದರಿಂದ ಕಲಹಗಳಿಗೆ ಇಂಬುಗೊಡದೆ, ದೇಹದಲ್ಲಿರುವ ಶಿವನನ್ನು ತಿಳಿಯಬೇಕು. ಮೋಹವು ಹುಟ್ಟುವುದು ಸ್ವಾಭಾವಿಕ. ಹುಟ್ಟಿದ ವಿಷಯ ಮೋಹವನ್ನು ಮೆಟ್ಟಿ ನಿಂತು ನೋಡಿದರೆ ಬ್ರಹ್ಮವು ಅನುಭವ ವೇದ್ಯವಾಗುವುದು. ಮನಸಿನಲ್ಲಿ ಇರುವ ಮಮತೆಯನ್ನು ತೊರೆದು ಘಟವನ್ನು ನಿಲ್ಲಿಸುವವನೇ ಘನತರ ಯೋಗಿ.

ಬ್ರಹ್ಮವು ಬಯಲಿನಲ್ಲಿಯ ಬಯಲು ಇದ್ದಂತೆ. ಅದು ವಿಷಯಗಳಲ್ಲಿಲ್ಲ. ದೇಹಕ್ಕೆ ಸಂಬಂಧಿಸಿದ ವಿಷಯುವ್ಯಾಮೋಹವನ್ನು ತೊರೆಯುಬೇಕು. ದೇಹಾಭಿಮಾನವನ್ನು ತೊರೆಯಬೇಕು. 'ಸೋಹಂ' ಅಂದರೆ ಸಃ ಅಹಂ ಎಂಬುದನ್ನು ಅರಿಯಬೇಕು.

ಅಂತರಾತ್ಮನನ್ನು ಗುರುತಿಸಿ, ಆಶೆಯನ್ನು ಅಡಗಿಸಿ, ಹಲವು ವಿಚಿತ್ರಗಳನ್ನು ಕಂಡು ಭ್ರಮಿಸುತ್ತಾನೆ. ಉನ್ಮತ್ತನಾಗುತ್ತಾನೆ. ಈ ಅವಸ್ಥೆಯನ್ನು ಸಾಹಸದಿಂದ ದಾಟಿ, ಯೋಗಿಯೆನಿಸುತ್ತಾನೆ.

ಜಾಣನು ಇಂಥ ಸಿದ್ಧಿ ಪವಾಡಗಳಿಂದ ಭ್ರಮಿತನಾಗುವುದಿಲ್ಲ. ಪಕ್ವ ಫಲ ಬಯಸುವವನು, ಕಸುಗಾಯಿ ಹರಿಯಲು ಹೋಗನು. ಮನಸ್ಸೇ ಭುಕ್ತಿಗೂ ಕಾರಣ; ಮನಸ್ಸೇ ಮುಕ್ತಿಗೂ ಕಾರಣ. ನಿನ್ನನ್ನು ನೀನರಿಯಬೇಕಾದರೆ ಸಂಕಲ್ಪಗಳನ್ನು ತೊರೆಯಬೇಕು.

— — — — — — — — — — — — — — — — — — — — — —

೨೩೨೮ ಕೇಳು ವಿವೇಕೆಂಬ ಕೊಡಲಿ ಕೈಲಿ ಹಿಡಿದು,
ಘನ ಅವಿದ್ಯೆಯೆಂಬ ಅಡವಿ ತರಿದು,
ತಿಳಿವು ಎಂಬ ಒಪ್ಪ ದೀಪ ಕೈಲಿ ಹಿಡಿದು,
ಮುಕ್ತಿಗಾಣಬಹುದು, ಚೊಕ್ಕ ವೇಮ.

೨೩೨೯ ಅಜ್ಞಾನವೆ ಶೂದ್ರತ್ವವು ;
ಸುಜ್ಞಾನವೆ ಬ್ರಹ್ಮವೆನುವ ಶ್ರುತಿಗಳ ಕೇಳಾ,
ಅಜ್ಞಾನ ಹಿಂಗಿ, ವಾಲ್ಮೀಕಿ
ಸುಜ್ಞಾನವೆಂಬ ಬ್ರಹ್ಮವ ಹೊಂದಿದ ವೇಮಾ

೨೩೩೦ ಅಜ್ಞಾನವೆಂಬಡವಿಯಲಿ,
ಸುಜ್ಞಾನವೆಂಬ ಖಡ್ಗ ಹಿಡಿದು ಕಡಿದೊಡೆ ಆ ಅಜ್ಞಾನವಾತ್ಮವರಿವುದೆ,
ಸುಜ್ಞಾನದ ದಿವ್ಯ ಪದವಿ ನೋಡಾ, ವೇಮಾ.

೨೩೩೧ ಮಾತನಾಲ್ಪನೊಂದು, ಮನಸಿನೊಳಗೆ ಒಂದು,
ಒಡಲು ಗುಣವದೊಂದು, ನಡತೆಯೊಂದು,
ಎಂತು ಬಹುದು ಮುಕ್ತಿ ? ಇಂತು ಇರಲು ತಾನು, ವಿಶ್ವ

೨೩೩೨ ಅಭವನನುಭವದಲಿ ಆರ್ವರರಿಗಳು ಸತ್ತು,
ಸಂಶಯಗಳು ಇರವು ಸಾಧಕರಿಗೆ,
ಕೊಂಚ ದೀಪ ಮಿನುಗೆ, ಕತ್ತಲು ಹೋಗದೇ ? ವಿಶ್ವ

೨೩೩೩ ಈಜನರಿಯದವರೆಲ್ಲರು,
ತೇಜದಿ ಆಳಕಿಳಿದು ತಾವ್ ಬಾವಿ ಬಿದ್ದಿಹರು,
ಈಜಲರಿತಿಹೆನು ನಿನ್ನೊಳು
ಓಜದಿ ದನಿ ಪುನರಪಿ ಕಂಡು ವಂದಿಸು ವೇಮಾ.

೨೩೩೪ ಕತ್ತಲು ಮನೆ ಹುಟ್ಟಿ, ಕತ್ತಲಲಿ ಬೆಳೆಯುತ,
ಕತ್ತಲ ನೆರಳಿನಲಿ ಸಿಗುವನೇಕೆ ?
ಕತ್ತಲರಿಯೆ ಸೃಷ್ಟಿ ಕಾಣಬಾರದೇನು ? ವಿಶ್ವ

೨೩೩೫ ನಾಲ್ವರು ಕಳ್ಳರ ಹಿಡಿಯುತ,
ತಲೆ ಹೊಡೆಯದಿರುವ ಅಂಥಹ ತಾಮಸಿಗೇಕೈ ?
ಇಳೆಯೊಳು ಜ್ಞಾನಬಹುದು ? ನಿ–
ಶ್ಚಲ ಪಾವನವಾತ್ಮ ಸುಖವು, ಸತ್ತ್ವವು? ವೇಮಾ.

೨೩೩೬ ನಾಲ್ವರು ಕಳ್ಳರ ಕೂಟವು
ಖೂಳ ತಲೆಗಡುಕನೋರ್ವನ ತಪ್ಪಿಸಿಕೊಳ್ಳುತಾ,
ಬಾಳುತ ವಿಶ್ವದೊಳಿಹರ್ಗೆ
ವಾಲುತ ಶೋಧಿಸಿರಿ; ಫಲವೆಂಬರು ವೇಮಾ.

೨೩೩೭ ಗಟ್ಟಿಗ ನಾಲ್ವರ ಏಳ್ವರ ಬಂಡವ ಕೊಚ್ಚುತ ತಿಳಿವು ಇಲ್ಲದೆ,
ಕೊಟ್ಟೇಟು ಮೂರು ಮನೆಯವರಿಗೆ ವರಿಸಲು ಮುಕ್ತಿಯು ದೊರಕಬಲ್ಲುದೇ?
ಬೊಟ್ಟು ಹಣೆಯಲಿರಿಸಿ ಭುಜಕೆ, ದೇಹಕೆ ಬೂದಿ ಬಳಿಯುತಿರುವುದೆಲ್ಲ,
ಒಟ್ಟು ಚಿಹ್ನೆಗಳು; ಭೂ ಪ್ರಜರಿಗೆ ಒಪ್ಪಮೋದ ವೇಮನೃಪಾಲ ಶೇಖರಾ.

೨೩೩೮ ಪಂಚ ಶತ್ರುವ ಕೊಚ್ಚಿ ಪಂಚ ಬಾಣವ ಗೆಲಿದು,
ಪಂಚ ವರ್ಗಗಳನು ಪಠಣ ಮಾಡಿ,
ಪಂಚ ಮುಖವ ಹೊಂದೆ, ಭವ ಸಂಜ್ಞೆಯುಳ್ಳವನು
ಪಂಚ ಸೇರುವವನೆ ಬ್ರಹ್ಮ ವೇಮ.

೨೩೩೯ ಅರಿತೊಡೆ ಕಳ್ಳರ ಹಿಡಿಯುತ,
ಮರಣ ವಶ ಪಡಿಸಿ ಓರ್ವನ ಮುನ್ನಿಸಿದಾಗಳ್,
ಗುರಿಯನರಿತಂಥ ಸುಜನರ
ಅರಿಯುವಗುಂಟು ನಿತ್ಯ ಪದವಿದುವೆ ವೇಮಾ.

೨೩೪೦ ಅರಿಷಡ್ವರ್ಗಂಗಳಿಂದ,
ನರರೆಲ್ಲರು ಸಿಕ್ಕು ಸೊರಗಿ ನಯಗತಿ ತೊರೆದರ್,
ಅರಿಯದೆ ಹೋದರು, ತತ್ತ್ವವ,
ಅರಿತುಕೊಳರವರಿನಿತು ಆದರೂನು ವೇಮಾ.

೨೩೪೧ ಆರುಗಳನು ಕೊಂದು, ಹರನ ಮೇಲೆ ಧ್ಯಾನ
ನಿಲಿಸಿ, ನಿಶ್ಚಲವಿರೆ ನಿಕಟವಾತ್ಮ,
ಅವನೊಳೊಂದು ಗೆಯ್ಯೆ, ಆತನಪ್ಪಯೋಗಿ, ವಿಶ್ವ

೨೩೪೨ ಆರುಗಳನು ಕಡಿದು ಹರಿಯ ಮೇಲೆ ಧ್ಯಾನ,
ನಿಲಿಸೆ, ವಿನುತ ಆತ್ಮ ನಿಶ್ಚಯವದು.
ಗತಿಯ ತಿಳಿಯುತಿಹನು ಘನತೆಯುಳ್ಳ ಯೋಗಿ, ವಿಶ್ವ

೨೩೪೩ ಅಭವನನುಭವದಲಿ ಆರು ಅರಿಗಳ ನಿಲಿಸಿ,
ಸಂಶಯಗಳು ಇರವು, ಸಾಧು ಕುಲಕೆ,
ಬಳಿಗೆ ದೀಪವಿರದೆ, ಅಳಿಯಬಹುದೆ ಕತ್ತಲು ? ವಿಶ್ವ

೨೩೪೪ ಕನಸು ನಿಜ ರೂಪಾಗಿ ಕಂಡು ಆ ಸಂಘದವ,
ನರ ಅಚ್ಚರಿ ಪಡುವ ನಿದ್ರೆಯೊಳಗೆ !
ಹಗಲು ಆದ ಬಳಿಕ, ಹೋಗುವುದು ಸುಳ್ಳಾಗಿ, ವಿಶ್ವ

೨೩೪೫ ಇರುವವನೆ ಸುಶೀಲ ; ಇರುವನು ಕೆಲ ಕಾಲ,
ಇದ್ದು, ಇದ್ದು, ಇದ್ದು, ಇರಲಾರದೆ,
ದಾರಿ ತಿಳಿದು ಮನೆಗಳ್ಳರ ಹಿಡಿದು,
ಚೆಂಡಾಡುತ ಠಾವು ಸೇರು ವೇಮ.

೨೩೪೬ ಆಶೆ ಬಿಡದೆ ಇರಲು ಪಾಶ ಮುಕ್ತನಲ್ಲ,
ಮುಕ್ತನಾದರೂನು ಮುನಿಯು ಅಲ್ಲ,
ಮುನಿಯು ಆದರೂನು ಮೋಹವ ಬಿಡಲಿಲ್ಲ, ವಿಶ್ವ

೨೩೪೭ ಆಶೆಗಿಂತ ದುಃಖ ಅತಿಶಯವಾಗಿಲ್ಲ,
ಸಮೀಕ್ಷಿಸದೆ ಇರಲು ಸುಖವೆ ಇಲ್ಲ,
ಮನಸು ನಿಲಿಸದಿರಲು ಮತ್ತೆ ಮುಕ್ತಿಯಿಲ್ಲ, ವಿಶ್ವ

೨೩೪೮ ಕಟ್ಟಿ ಹಾಕಿ ಕೋರ್ಕೆ, ಮನ ನಿಲಿಸಿ ನೋಡಲು,
ಗುಟ್ಟು ಮೀರಿಯದರ ಗುಣವು ಸಿಗಲು,
ಅತ್ತ ಇತ್ತ ಚದುರದಂತಿರುವುದೆ ತತ್ತ್ವ, ವಿಶ್ವ

೨೩೪೯ ಚಿತ್ತ ಕುದುರೆ ಏರಿ ಶಿಕ್ಷಿಸುದ ಕಲಿಯದೆ,
ತತ್ತರ ಪಡುತಿರಲು, ತನಗೆ ಹಾನಿ,
ವಾರಾಣಸಿ ತನಗೆ ವಿಗತ ಆಶೆಯಷ್ಟೆ, ವಿಶ್ವ

೨೩೫೦ ಚಪಲ ಚಿತ್ತ ವೃತ್ತಿ ಜಯ ಹೊಂದೆ ಗಮನಿಸಿ,
ನಿಪುಣನಾಗಿ ಯೋಗ ನಿಯತಿ ಮೀರಿ,
ತಪವ ಗೆಯ್ಯುವವನು, ತತ್ತ್ವಾಧಿಕಾಗಿಹನು, ವಿಶ್ವ

೨೩೫೧ ತನ್ನ ಮನದಿರಲು ಕಪಟವು,
ತನ್ನ ತೆರ ಕಪಟವುಂಟು ಸಲೆ ಜೀವರೊಳಗುಂ,
ತನ್ನ ಮನ ಕಪಟ ಬಿಟ್ಟೊಡೆ,
ತನಗಾವ ಕಪಟಗಳಿಲ್ಲ ಧರೆಯಲಿ, ವೇಮಾ.

೨೩೫೨ ಈಷಣತ್ರಯಗಳ ದೂರಗೊಳಿಸದಿದ್ದು,
ಮೋಹ ರಾಶಿಯಲ್ಲಿ ಮುಳುಗುತಿಪ್ಪ,
ಜನರಿಗೆಂತು ಮೋಕ್ಷ ಸೌಖ್ಯ ಸಿಕ್ಕಬಹುದು ? ವಿಶ್ವ

೨೩೫೩ ಈಷಣಾದಿಗಳಲೆಲ್ಲ
ಮೋಸ ಹೋಗದಿದ್ದು, ಮನದಿ ಗಾಸಿ ಪಡದೆ,
ರೋಸಿ ಬಯಲಿನಲ್ಲಿ ಸೇರುವುದೇ ವಾಸಿ,
ಇಂತಾದವನಿಳೆಯಲಿ ಇರುವ ಖ್ಯಾತ ವೇಮ.

೨೩೫೪ ಉದಕದಲ್ಲಿ ಪಾಚಿ ಉಂಟು ನೋಡಿರಯ್ಯ,
ಮನದೊಳಿರುವ ಮಾಯೆ ಮುಚ್ಚಿ ಇಹುದು,
ಸದನದಲ್ಲಿ ಬ್ರಹ್ಮ ಸಾಕ್ಷಿಯೆಂದು ಎಣಿಸು, ವಿಶ್ವ

೨೩೫೫ ಶತ್ರುಕುಲವನರಸಿ, ಸರಸರನೆ ಖಂಡಿಸಿ,
ಮಿತ್ರವರ್ಗಗಳನು ಮೇಲು ಗೆಯ್ದು,
ಪೂರ್ಣ ಬೆಳಕು ಕಂಡು ಪಿಂಡ ಮಧ್ಯದಲ್ಲಿ,
ಅರ್ಥಿ ನಿಲಿಸುವವನು ಹರನು ವೇಮ.

೨೩೫೬ ಪಂಚ ಶತ್ರುವ ಕೊಚ್ಚಿ, ಪಂಚ ಬಾಣವ ಗೆದ್ದು,
ಪಂಚ ವರ್ಗಗಳನು ಪತಣ ಮಾಡಿ,
ಪಂಚ ಮುಖವ ಹೊಂದಿ ಭವ ಸಂಜ್ಞೆಯುಳ್ಳವನ
ಪಂಚ ಸೇರುವವನೆ ಬ್ರಹ್ಮ ವೇಮ.
ಪಂಚ : ಬಳಿ

— — — — — — — — — — — — — — — — — — — — — —

೨೩೫೭ ಮರ್ಮವಿದನು ಅಷ್ಟೆ ; ಮರ್ಮ ಕಾಣಲಾರ,
ಕರ್ಮ ಜೀವಿಯಷ್ಟೆ, ಕಾಣಲಾರ,
ನೀರಿಗಿಳಿಯದಾಳ ನಿಜವ ತಿಳಿಯುವನೇ ? ವಿಶ್ವ

೨೩೫೮ ತಮದಲಿ ಸಾಯುವ ಮನುಜನು,
ಮಮತೆಯಲಿ ತಾನು ಹುಟ್ಟುವ ಸಾಯಲು ಎಂದೇ,
ಶ್ರಮ ವಹಿಸಿ ಗುರುವ ಬೇಡಲು,
ಭ್ರಮ ಮೂಲದೀ ಜಗ ಸೆಲೆ ಬಯಲಾಯ್ತು ವೇಮಾ.

೨೩೫೯ ವಿಷಯದಲಿ ಹೊರಳಿ ಹೇಸದೆ,
ವಿಷವಂಟಿ ಗಟ್ಟಿ, ವೀಕ್ಷಿಸು ವಿಧ ವಿಧ ಧರೆಯೋಳ್,
ವಿಷ ಸಮ ಮಾಯಾ ಸುಖವನು,
ವಿಷಯಗಳಲಿ ಕೂಡದಿಹನೆ ವೇತ್ತನು ವೇಮಾ.

೨೩೬೦ ವಿಷಯಗಳರಸುವ ಒಡೆಯನು,
ವಿಷಯೇಂದ್ರಿಯ ವರ ದಳ ಬೆಳಗದೆ ಮತ್ತಾ
ವಿಷಮಾರಿ ಷಟ್ಕವನು, ದು–
ರ್ವಿಷಯದಲಿ ಸಿಕ್ಕಿಕೊಳ್ಳದೆ ವೇಮನನರಿವನ್,

೨೩೬೧ ದೇಹಾಭಿಮಾನವಿದ್ದೊಡೆ,
ಮೋಹಾದಿ ಜನನ ವಾರಿಧಿಯಲಿ ಮುಳುಗುತಿಹರ್,
ನೀಹಾರಿಸಿ ವಿಷಯ ಭಾವ
ಊಹಾದಿಗಳು ತೊಲಗಿ ಎಚ್ಚರಗೊಳ್ಳು ವೇಮ.

೨೩೬೨ ಮೋಹವು ತೀರದೆ ಇಹುದೇ ?
ದಾಹವದು ದೇಹವೆಲ್ಲವ ತಲ್ಲಣ ಪಡುತಾ,
ಗೇಹದೊಡನೆ ಹೋರಾಡದೆ,
ದೇಹದಲಿ ಇರುವ ಶಿವನನು ತಿಳಿಯೈ ವೇಮಾ.

೨೩೬೩ ಕದಲುವ ಜೀವಿಗಳೆಲ್ಲರು
ತುದಿಗಾಣಲು ಒಳ್ಳೆಯ ರುಚಿಗಳ ತ್ಯಜಿಸದಿರಲ್,
ಕದಲದ ಈ ಜೀವಂಗಳು
ಬದಲದೆ ಗರ್ವಂಗಳಡಗಿ, ಹೊಂದಿಕೊ, ವೇಮಾ.

---

೨೩೬೪ ಎಂಥವನಿರಲೇನು ? ಎಷ್ಟೊ ಮೋಹ ಜನನ !
ಹುಟ್ಟಿದ ಮೋಹವೆಲ್ಲ ಮೆಟ್ಟಿ ನಿಂತು,
ಗಟ್ಟಿಯಾಗಿ ನೋಡು ಕಾಣಿಸುವುದು ಬ್ರಹ್ಮ, ವಿಶ್ವ

೨೩೬೫ ಕಲ್ಮಷಗಳು ಸೋಂಕಿ ಕಾಣರಾವುದನ್ನು,
ರೂಪ ವಿಪುಲವಾಯ್ತು ರೂಢಿಯಿಂದ,
ತಾಮಸ ಉಡುಗಿದಾಗ ತಕ್ಕ ಜ್ಞಾನ ಲಭ್ಯ, ವಿಶ್ವ

೨೩೬೬ ಆಶೆಯೆನಲು ಉಬ್ಬಿ, ಅಂದದಿ ಪರೀಕ್ಷಿಸಿ,
ಪಾರು ಆಗಬಹುದು, ಪರವು ಇಲ್ಲ,
ಸಿಕ್ಕು, ತಿಂಡಿ ಕೋರಿ, ಸಾವ ಹೆಗ್ಗಣಂತೆ, ವಿಶ್ವ

೨೩೬೭ ಚಿತ್ತವೆಂಬ ಬೇರು ಶಿಥಿಲವಾಗಲಾಗ,
ಶಕ್ತಿಯೆಂಬ ಮರವು ಸೊಟ್ಟವಾಯ್ತು,
ಕೋರ್ಕೆಯೆಂಬ ದೊಡ್ಡ ಶಾಖೆಗಳುದಿಸವೇ ? ವಿಶ್ವ

೨೩೬೮ ಚಿತ್ತಶುದ್ಧಿ ಹೊಂದಿ ಗೈದ ಪುಣ್ಯ ಕಾರ್ಯ,
ಕೊಂಚವಾದರೇನು ಕ್ಷುಲ್ಲಕಲ್ಲ,
ಆಲದ ಮರವೆಷ್ಟು ? ಅದರ ಬೀಜವೆಷ್ಟು ? ವಿಶ್ವ

೨೩೬೯ ಸೌತೆ ಮುಳ್ಳಿನಂಥ ಚತುರ್ಯದೊಳಾತ್ಮನ,
ಕಂಡು ಆಶೆಗಳನು ಕೊಚ್ಚಿ ಹಾಕಿ,
ವಾಸನೆಯುಡುಗಿರುವವನೆ ಹೋಗು ಬ್ರಹ್ಮ, ವಿಶ್ವ

೨೩೭೦ ದಾನ ಕೊಡುವಕಿಂತ ಧ್ಯಾನ ಮತ್ತೆ ಮೇಲು,
ಧ್ಯಾನ ಮಾಳ್ಪಕಿಂತ ತಿಳಿವು ಮೇಲು,
ತಿಳಿವಿಗಿಂತ ಆಸೆ ತೊರೆಯುತಿಹುದೆ ಮೇಲು, ವಿಶ್ವ

೨೩೭೧ ಅದುಮಿ ಮನಸು ನಿಲಿಸಿ ಆನಂದ ಕೇಳಿಯಲಿ,
ಬ್ರಹ್ಮಮಯದ ಮುಕ್ತಿ ಪಡೆಯೆ ಕೋರಿ,
ಜಿಹ್ವೆ ರುಚಿಗಳಿಂದ ಜೀವಿ ಕೆಡುವುನಲ್ಲ ! ವಿಶ್ವ

---

೨೩೭೨ ಮನಸಿನೊಳಗೆ ಇಪ್ಪ ಮಮತೆಯನ್ನು ಕಡಿದು,
ದೃಢವ ಗೈದು ಮನಸು ಥೇಟು ಮಾಡಿ,
ಘಟವ ನಿಲಿಸುವವನು ಘನತರನಹ ಯೋಗಿ, ವಿಶ್ವ

೨೩೭೩ ಪಾಶಗಳಲಿ ಸೇರಿ ಪಾಪ ! ದೇಹಕೆಲ್ಲ,
ಹಾನಿ ಬರುತಿರುವುದು ಹೊಳೆಯಲದುವೆ,
ಜ್ಞಾನ ದೀಪದಿಂದ ಸಾಗು ಹಾಕಬೇಕು, ವಿಶ್ವ

೨೩೭೪ ಬಯಲಿನಲ್ಲಿ ಬಯಲು ಪರೀಕ್ಷಿಸಿ ನೋಡಲು,
ಬಯಲು ರೂಪ ಕಂಡು ಪ್ರೀತಿ ಕುದುರಿ,
ಮಲಿನ ದೇಹ ಮೇಲೆ ಮೋಹ ತೊರೆಯನೇಕೆ ? ವಿಶ್ವ

೨೩೭೫ ದೇಹಾಭಿಮಾನವಿರುತಿರೆ,
ಮೋಹಾದಿಯ ಬಿಡುವುದೆಂತು ಮುನಿಗಳೆ ಇರಲುಂ ?
ಸಾಹಸದಿಂದದ ಬಿಡುತಿರೆ,
ಸೋಹಮ್ಮೆಂಬುದನರಿಯುವೆ ಕಾಣಾ ವೇಮಾ.

೨೩೭೬ ಸಮವೆ ಆದ ದೃಷ್ಟಿ ಸರಿಯಾಗಿ ಮನದಿರಿಸಿ,
ಬಾಹ್ಯ ರುಚಿಯ ತೊರೆದು ಭದ್ರವಾಗಿ,
ಪರವು ನೋಡು ; ಬಟ್ಟ ಬಯಲು ಅದುವೆ ಬ್ರಹ್ಮ, ವಿಶ್ವ

೨೩೭೭ ಸುಖಗಳೆಲ್ಲ ತಿಳಿದು ಸಲೆ ಕಾಣಲು ದುಃಖ ;
ಪಾಪ ಪೂರ್ವಕವಿದೆ, ಪುಣ್ಯವೆಲ್ಲ ?
ಕಳ್ಳ ಕೋರಿಕೆ ವಿಧ ಕೊರತೆಗಳಿರುವವಲ ! ವಿಶ್ವ

೨೩೭೮ ಸುಖಾಸುಖಗಳಲಿ ತಾ ಸುಗುಣನಾಗಿಯುಂಟು,
ಪ್ರಕೃತಿ ಲಗ್ನವಾಗಿ ಪರಮ ಕೆಡುವ,
ವಿಧಗಳ ಹುಟ್ಟಿಸುವ ವಿಧಿಯ ತಾನು ಕಾಣ, ವಿಶ್ವ

೨೩೭೯ ಸಿಡಿಲನು ಅಂಗೈಲಿ ಹಿಡಿದುಕೊಂಡು ಒಳಗೆ
ಕಲ್ಮಷಗಳನೆಲ್ಲ ಕಡೆಗೆ ಹಾಕಿ,
ಉಳಿದ ಕೈಗಳಿಂದ ಕಲಿ ಜನರ ಸೇವಿಸಿ,
ಕರ್ಮ ಕರ್ತನನರಿ, ಅಲ್ಲವೆ ವೇಮ ?

೨೩೮೦ ಅಂತರಾತ್ಮನ ಗುರುತಿಸಿ, ಆಶೆ ಉಡುಗಿ,
ಚಿಂತೆಗಳ ತುಳಿದು ಮನದಲ್ಲಿ ಸಿದ್ಧನಾದ,
ಹಲ ವಿಚಿತ್ರ ಆಣೆ, ಭ್ರಮೆಯಂಟಿ ಹುಚ್ಚನಂತೆ,
ಸಂದಿ ಗೊಂದಿಯಲಿ ಪೂರ್ಣತೆ ಹೊಂದು ವೇಮ.

೨೩೮೧ ಅಂಜನವನು ಹಚ್ಚಿ, ಆತ್ಮದೊಳಿಹ ದ್ರವ್ಯ,
ಕಾಣದಿದ್ದು, ಘನತೆ ಕಡೆಗೆ ಅರಿತು,
ಆಶೆ ತೊಡೆದ ಮನುಜ, ಅವನೆ ಪರಮ ಯೋಗಿ, ವಿಶ್ವ

೨೩೮೨ ಪತನಗೊಳ್ಳುತಿರುವ ಪಕ್ವ ಫಲಗಳನ್ನು,
ಹಿಡಿದು ತಿನ್ನುವವನು, ಹಸಿರು ಕಾಯ್ಗೆ,
ಆಸೆ ಪಡುವ ರೀತಿ, ಐಹಿಕವು ಇಪ್ಪುದು, ವಿಶ್ವ

೨೩೮೩ ಸೋಸಿ ಸುಖ ದುಃಖವ ಸೇರಿ, ಒಳಗೆ ಮೀರಿ,
ತಾನು ತಾನಹ ತತ್ತ್ವತಾಕಿ ತಾಕಿ,
ಇಂತಿರದೆ ಇದ್ದೊಡೆ, ಎಂತು ಕಡೆಗಾಣುವ ? ವಿಶ್ವ

೨೩೮೪ ಕಲಕಿದಂಥ ಮನದಿ ಕುದುರಿದ ಗುಣಗಳನು,
ತೊಡೆದು ಕಡಿದು ಬೇಗ ತವಕ ಹಿಂಗಿ,
ಸತತವಾಗಿ ಬುದ್ಧಿ ಶುದ್ಧವಿಡಲು ಮುಕ್ತಿ, ವಿಶ್ವ

೨೩೮೫ ಯಜ್ಞಕ್ರತುವನು ಗೆಯ್ಯಲು ಆಗುವುದೇನು ?
ಸಂಜ್ಞಮನದಲ್ಲಿ ಹೆಣಗುವುದು ಸಾಧು ವೃತ್ತಿ,
ಮನಸು ಮಗ್ನತೆಯ ಹೊಂದುವುದೆ ಮನನ ವೃತ್ತಿ, ವಿಶ್ವ

೨೩೮೬ ಗೆಯ್ದಿಹ ಸಂಕಲ್ಪಗಳನು,
ನೀತಿಲಿ ವರಿಸಿದ ಮೇಲಾ ನಿರ್ಮಲ ಪದವೈ,
ಪ್ರೀತಿಯ ಹೊಂದುತ ನಡೆವರು,
ಭೂತಲದಲ್ಲಿ ಪರಮಯೋಗ ಪುರುಷರು ವೇಮಾ.

೨೩೮೭ ಇರುವೆ ಕಡಿದೊಡಾಗ ಇಷ್ಟು ನೋವೆನಿಪುದು,
ಎಷ್ಟು ಇರುವೆ ? ಅದರ ಸೃಷ್ಟಿಯೆಂತು ?
ಇರುವೆಯಂಥವನನು ಸೃಷ್ಟಿಯೊಳಗರಿವುದು, ವಿಶ್ವ

೨೩೮೮ ವಂಚನೆ ಗೆಯ್ಯುವ ತಿಳಿವನು,
ಮಿಂಚಿದ ಪರತತ್ತ್ವ ಹೊಂದಿ ಮೇಲ್ಮೆಯ ಪಡೆದಾ
ಸಂಚನು ಕಂಡು ಕೊಂಡು, ಪಡೆ,
ಸಂಚಾರವಿಲ್ಲದ ಬಯಲ, ಸರ್ರನೆ, ವೇಮಾ.

೨೩೮೯ ಬದ್ಧ, ಮುಕ್ತರು ಉಭಯರು ಭದ್ರವಾಗಿ,
ಕೋರ್ಕೆ ಬಾರದ ಮನದಲ್ಲಿ ಕೋರ್ಕೆಯಡಗಿ,
ಮಾಳ್ಪಶ್ರಮವೆಲ್ಲ ಬಯಲಲ್ಲಿ ಮುಟ್ಟಿ, ಮಿಂಚಿ,
ಇಷ್ಟವದ ಕೂಡು, ನಿನಗೇನು ಬೇಕು ವೇಮ ?

೨೩೯೦ ಹಯವು ಬೆದರಿ ಹಾರುವಂತೆ,
ರಯದಿಂದ ಹಾರುವ ಮನ ಪ್ರತಿಕೂಲವಾಗಳ್,
ನಯವೋ, ಭಯವೋ, ನೋಡುತ,
ಪಯಣವ ಸಾಗಿಸಲೀಯದೆ, ಹಿಡಿದಿರು, ವೇಮಾ.

೨೩೯೧ ತಮಗೆ ಸಮರು ಎಂದರು ದೈವಜ್ಞರಿಹ ಜನರ ;
ಇರುವ ಗೂಢ ಭಾವ ಅರಿಯಲಿಲ್ಲ !
ಇಂಥ ಮಾಯದಿ ಬೀಳೆ, ಎಂತು ತಿಳಿವುದು ಮಾಯೆ ? ವಿಶ್ವ

೨೩೯೨ ದೇಹ ಸಂಕಟದಲಿ ದಂಡಿಸಿ, ದೂರ ಮಾಡಿ,
ಮೋಹ ದೃಷ್ಟಿ ತೊರೆದು, ಮೂಲವರಿತು,
ಊಹೆಯೊಂದನಿರಿಸಿ, ಬಾಣ ಬಿಟ್ಟು,
ಸ್ನೇಹವರಿಯೆ ಯೋಗ ಸಿದ್ಧಿ ವೇಮ.

೨೩೯೩ ಸೊಪ್ಪು ಅಡುವ ಮುನ್ನ ಸೇರಿದ ಕಸವೆಲ್ಲ,
ಅರಿತುಕೊಂಡು ಮುಂಚೆ ಆರಿಸುತಿರು,
ತಾಣ ತಪ್ಪಿದ ಬಳಿಕ ಧರ್ಮವು ಹುಟ್ಟುವುದೆ ? ವಿಶ್ವ

೨೩೯೪ ಪಡೆದು ಚಿತ್ತ ಶುದ್ಧಿ ಪುಣ್ಯ ಕಾರ್ಯ ಗೆಯ್ಯೆ,
ಕೊಂಚವಾದರೇನು ಕೀಳು ಅಲ್ಲ,
ಮರದ ಬೀಜ ಗಾತ್ರ ಮತ್ತೆ ಇರುವುದೆಷ್ಟು ? ವಿಶ್ವ

೨೩೯೫ ಮನದಿ ಹುಟ್ಟುತಿಹವು, ಮತ್ತೆ ಕೋರಿಕೆಗಳು ;
ಕೋರಿಕೆಯಲಿ ಮುಕ್ತಿ ಕುದರದಲ್ಲ !
ಮನವು ಬ್ರಹ್ಮವೆಂದು ಮನವ ತಿಳಿದುಕೊಳರು, ವಿಶ್ವ

೨೩೯೬ ಭೂ ಗಗನಂಗಳ ಒಳಗೇ
ತಾಗಿದ ತೆರನಾಯ್ತು ಕಾಣು ; ತಗಲದೆ ಇರುವಂ,
ಬೇಗನೆ ಮನದಲಿ ತೋರ್ಪುದು,
ನೀಗದೆ ತಾ ತುಂಬಿ ಇಹುದು, ನಿಪುಣತೆ, ವೇಮಾ.

೨೩೯೭ ನರಕವೆಲ್ಲಿಯೆನುತ ನೀತಿ ತಪ್ಪಿದ ಜನರು,
ಮಾಯ ಸಂಸಾರದಲಿ ಮುಳುಗಿ ಇಹರು,
ಮನಸು ನಿರ್ಮಲವಾಗೆ ಮಾಯೆಯಿಂದ ಏನು ? ವಿಶ್ವ

೨೩೯೮ ಮನಸೇ ಲೋಕಾಲೋಕವು,
ಮನಸೇ ತೋರಿದೊಡೆ ಮೆಚ್ಚು, ಮಾಯೆಯು ಕಾಣಾ,
ಮನಸೇ ಮುಕ್ತಿಗೆ, ಭುಕ್ತಿಗೆ,
ಮನವನು ಬಿಡುತಿಹುದೆ ಮೇಲು, ಮರೆಗಿರು, ವೇಮಾ.

೨೩೯೯ ನಿನ ನೀನರಿವುದಕಾಗಿಯೆ,
ಮನದಲಿ ಸಂಕಲ್ಪಗಳನು ಮಾಣಲು ಬೇಕೈ,
ಅನುಮಾನ ರಹಿತವಹ ಗುರಿ
ವಿನಯವ ಕೂಡಿ ಗುರು ಸೇರಿ, ಹುಡುಕೆಲೊ ವೇಮಾ.

೨೪೦೦ ಹುಣಸೆ ಬಳಿಗೆ ಉಂಟು, ಹೂ ದಂಡೆ ಸೇವಂತಿ,
ಕಾಂತೆ ಕಂಡು ಹೊಳೆಯೆ ಅಂತುಕೊಳುವ ;
ಆರು ಇರದ ತಾಣ ಆನಂದ ಕೇಳಿಯೈ, ವಿಶ್ವ

೨೪೦೧ ಲಾಲನೆ ಗೆಯ್ಯದೆ, ಮಾನಸ
ಜಾಲದೊಳಗೆ ತಗಲಬೇಡ, ಚಪಲತೆಯಿಂದಾ,
ಕಾಲನು ಜೊತೆಗೆ ತರುವುದನು–
ಕೂಲಿಸಿ ಮಾನಸದಲ್ಲಿಯೆ ಕಾಂತಿಸು ವೇಮಾ.

---

೨೪೦೨ ವಿಷಯದಲಿ ಹೊರಳಿ, ಹೇಸದೆ
ವಿಷವಂಟಿದ ಗತಿಯ ನೋಳ್ಪ ವಿಧದಲಿ ಧರೆಯೋಳ್,
ವಿಷಸಮ ಮಾಯಾ ಸುಖವದು,
ವಿಷಯಗಳಲಿ ಸೇರಿಕೊಳರು ವೇತ್ತರು ವೇಮಾ.

೨೪೦೩ ವಿಷಯವ ಘರ್ಷಿಸಿ ಗ್ರಹಿಸರು,
ವಿಷಯೇಂದ್ರಿಯ ಪರದಲವನು ಹೊಡೆದೋಡಿಸಿ, ತಾ
ವಿಷಮಾರಿ ಷಟ್ಕವನು, ದು–
ರ್ವಿಷಯಗಳನು ಹೊಂದದಿದ್ದು, ವೇಮನನರಿವನ್.

೨೪೦೪ ವಿಷಯದಲಿ ಹೊರಳಿ ಹೊಂದದೆ,
ವಿಷಯಕೆ ಅಂಟದ ಮಹಾತ್ಮ ವಿಧದಲಿ ಧರೆಯೋಳ್,
ವಿಷ ಸಂಸಾರವು ಎನ್ನುತ,
ವಿಷಯಗಳೆಲ್ಲವ ಗೆಲುವುದ ವೇಮನನರಿವನ್.

೨೪೦೫ ವಿಷಯವ ತಾಕುತ ಪಡೆಯಲು,
ವಿಷಯೇಂದ್ರಿಯ ಪರ ವಶವಹ, ವಿಧದಲಿ ಮತ್ತಾ
ವಿಷಯಾರಿ ವರ್ಗಗಳ ಷ–
ಡ್ವಿಷಯಗಳಲಿ ಹೊರಳದಿಹುದ ವೇಮನನರಿವನ್.

೨೪೦೬ ವಿಮಲಾಂತರಂಗದಲ್ಲಿಯೆ
ಸಮ ಗತಿಯಲಿ ನಿಷ್ಠೆಗೂಡಿ ಸತ್ಯವ ಕಾಣಲ್,
ಯಮನ ಹೊಲಸು ಸಂಚಿತಂಗಳ
ಕ್ರಮದಿ ತೆಗೆಯೆ, ಸತ್ಯವಾಂತುವ, ಕಟ್ಟಳೆ, ವೇಮಾ.

೨೪೦೭ ಮನಸೇ ಎಳೆ ಹರೆಯವಾಯ್ತು,
ಮನಸೇ ಮತ್ತಾ ಜೀವನ ಮನುಜರೆಲ್ಲರಿಗುಂ.
ಮನಸಿಗೆ ಮನಸೇ ಸಾಕ್ಷಿಯು,
ಮನಸಿಗಿರದಾ ಮುದಿತನವು, ಮಹಿಯಲಿ, ವೇಮಾ.

೨೪೦೮ ಜಲದಗ್ನಿಯುರಿಸುವ ಜಗದೀಶನೊಪ್ಪವಿಹ,
ನೀರು ತೊಡುವ ಚೊಂಬು ನೀವು ಆಗಿ,
ನೀರಗೊಡವೆ ತೊರೆಯೆ ನಿಕ್ಕಿ ಭದ್ರರಯ್ಯ ! ವಿಶ್ವ

೨೪೦೯ ವಿಷಯಗಳು ತೆರೆಗಳ ರೀತಿ ;
ವಿಷಯಗಳಿಗಂಟದ ಮಹಾತ್ಮ ವಿಧದಿ ಧರೆಯೋಳ್,
ವಿಷ ಸಂಸಾರವು ಎಲ್ಲವು,
ವಿಷಯಗಳೆಲ್ಲವನು ಗೆದ್ದು ವೇಮನನರಿವಂ.

೨೪೧೦ ಹಚ್ಚ ಹಾಲು, ಲಿಂಬೆ ಹುಳಿಯ ಹಿಂಡಿ ಕಾಯ್ಸೆ,
ಸರಿಯೆ ಆಗಿ ಹೋಯ್ತು ಸಿಹಿಯ ತೊರೆದು,
ಮನಸು ಚಪಲವಿರಲು ಮಾರ್ಗ ಕೆಡುತಲಿಹುದು, ವಿಶ್ವ

೨೪೧೧ ಸಾಹಸದಿಂದಿರಲಿ ; ಸತ್ಯದಿಂದಾಗಲಿ ;
ಮೋಹ ಬದ್ಧಿ ತೊರೆದು ಮುಕ್ತಿ ತಿಳಿದು,
ಭಾವಿಸಿ ಮನದಿ ಗುರು ; ಬ್ರಹ್ಮನ ಅನುಭವಿಸು, ವಿಶ್ವ

೨೪೧೨ ಆತ್ಮ ಶುದ್ಧಿಯಿರದ ಆಚಾರವದೇಕೆ ?
ಮಡಿಕೆ ಶುದ್ಧಿಯಿರದ ಅಡುಗೆಯೇಕೆ ?
ಚಿತ್ತ ಶುದ್ಧಿಯಿರದ ಶಿವನ ಪೂಜೆಯೇಕೆ ? ವಿಶ್ವ

೨೪೧೩ ಛಾಯೆಯಲ್ಲಿ ಛಾಯೆ ಚೊಕ್ಕಾಗಿ ಗುರುತಿಸಿ,
ಕೊಯ್ಯಬೇಕು ಭ್ರಮೆಯ, ಕೊಂಕು ಇರದೆ,
ಮಾಯೆ ಮಾಯೆ ಹೌದು ಮಹಿ ತತ್ತ್ವವೆನುವರು, ವಿಶ್ವ

೨೪೧೪ ಕಲ್ಲುಕಲ್ಲಿನೊಡನೆ ಕೂಡಿ ತಿಕ್ಕೆ ತಿಕ್ಕೆ,
ನುಣ್ಣಗಾದ ರೀತಿ, ನಿಖಿಲ ಕಾರ್ಯ,
ಶ್ರಮವ ಮಾಡಿದಷ್ಟು ಸಂಪೂರ್ಣವೆನಿಪವು, ವಿಶ್ವ

೨೪೧೫ ಇನಿ ನುಡಿ ಅಗ್ರಜರಾಲಿಸಿ
ಮನ ನಿಲಿಸಬೇಕು ಪೂರ್ಣವ ಹೊಂದುತ ಮನದೋಳ್
ಇನಿತಿರೆ ಕೋರಿಕೆ ರೂಢಿಪ,
ಮನುಜನೆ ಪರಿಪೂರ್ಣನಹನು, ಮಹಿಯಲಿ, ವೇಮಾ.

೨೪೧೬ ದಾನ ಧರ್ಮ ಗೆಯ್ಯೆ, ದಿನವ ನೂಕಿ ನೂಕಿ,
ಕಾಲ ವ್ಯಯಿಸುವರು ಕೆಡುಕ ಜನರು,
ತಾನು ಏನಾಗುವ ? ತನ್ನ ಬದುಕದೇನೊ ? ವಿಶ್ವ

೨೪೧೭ ನಿತ್ಯವಿಹುದೇನು ? ಒಡೆಯರು
ನಿತ್ಯವು ದುಃಖ ಪಡುತಿಹರು, ನಿರುತದಿ ಧರೆಯೋಳ್,
ನಿತ್ಯಾನಂದದ ಪದವಿಗೆ,
ನಿತ್ಯವು ದುಃಖ ಪಡಲೇಬೇಕೆಂದರಿ, ವೇಮಾ.

೨೪೧೮ ಸೂಕ್ಷ್ಮ ರೂಪವರಿತು ಸುಖ ಹೊಂದಲಾರದೆ,
ಬಹು ಬಲದಿಂದೋದಿ ಬಲ್ಲ ನರನು,
ಸಾವ ಕೇಡನರಿವ ಸರಿಯ ಓದನೇಕೆ ? ವಿಶ್ವ

೨೪೧೯ ಹುಟ್ಟಿ, ಸತ್ತು ನರನು ಪೂರ್ವವನ್ನರಿಯದೆ,
ಬಟ್ಟ ಬಯಲೊಳಿದ್ದು ಭ್ರಮಿಸಿ ಇರುವ,
ತಿಳಿವು ತೊರೆದು ಭೂಮಿ ತಿರುಗುತಿರುವನೇಕೆ? ವಿಶ್ವ

೨೪೨೦ ಕಳವಳವನು ಬಿಟ್ಟು, ನಿಲ್ಲಲರಿತ ಅವನು,
ತೊಡರಿ ಬಯಲು ತಲುಪಿ ತೋಪಗೊಂಡು,
ಅಕ್ಷಯವನು ಹೊಂದಿ, ಅತಿಶಯಾಗಿ ಉಂಟು, ವಿಶ್ವ

೨೪೨೧ ಕೊಡದಪ್ಪು ಹಾಲೊಳು ಕೊಂಚ ಹೆಪ್ಪು ಹಾಕೆ,
ಘಮಘಮ ವಾಸನೆಯು ಕುದುರುತಿಹುದು,
ಹೆಪ್ಪು ಹಾಕದಿರಲು ಹೋಗುತಿಹುದು ಕೆಟ್ಟು, ವಿಶ್ವ

೨೪೨೨ ನವನೀತ ಕಾಯಿಸಿ ನೆರಳಿನಲ್ಲಿರಿಸಲು,
ಮತ್ತೆ ಗಟ್ಟಿಯಾದ ಮೊಸರಿನಂತೆ,
ಹೋರಿ ಹೋರಿ ಮನಸು, ಹೋಗದಂತೆ ಕಟ್ಟು, ವಿಶ್ವ

೨೪೨೩ ಕಿಲುಬುಗಟ್ಟಿದ ತಾಮ್ರಕುಂಟು ಪರದಿ ಬೆಲೆಯು,
ಕಿಲುಬಗಟ್ಟೆ ತಾಮ್ರಕಿಲ್ಲ ಬೆಲೆಯು,
ಹುಳಿಯು ಇರದೆ ತಾಮ್ರ ಕಿಲುಬು ಹೋಹುದೆಂತು ? ವಿಶ್ವ

೨೪೨೪ ಪೈರು ನೆಡುವ ರೈತ ಫಲವ ಪಡೆಯುತಿಹನು,
ಪೈರು ನೆಡದವನಿಗೆ ಫಲವು ಎಂತು ?
ಪೈರು ನೆಡುತಿರಲತಿ ಸೌಖ್ಯ ಸೊಗಸು ಕಣಾ, ವಿಶ್ವ

●●●

# ೧೪. ಮೋಕ್ಷ ಮಾರ್ಗ

## ಗುರು–ದೀಕ್ಷೆ

**ಗುರು ಹೇಳಿದ ವಿದ್ಯೆ ಗುರುವಿಗೇ ತಿಳಿವುದು,**
**ಗುರು ಹೇಳುವ ವಿದ್ಯೆ ಗುರುವು ಅರಿವ,**
**ಗುರುವಿನ ಮಹಿಮೆ ಪರಮ ಗುರುವಿಗೇ ತಿಳಿವುದು,**
**ವಿಶ್ವದಾಭಿರಾಮ ಕೇಳು ವೇಮ.**

●

## ಗುರು–ದೀಕ್ಷೆ

ಗುರು ಎಂಬುದು ಸಂಸ್ಕೃತ ಶಬ್ದ. 'ಗು' ಎಂದು ಅಂಧಕಾರ; 'ರು' ಎಂದರೆ ನಿವಾರಕ. ಅಂಧಕಾರ ನಿವಾರಕನೇ ಗುರು.

ಹರನ ತೋರುವವನೇ ಗುರು. ಅವನೇ ಕಿಂಕರನನ್ನು ಹುಡುಕಿ ಬ್ರಹ್ಮಲೋಕವನ್ನು ಪ್ರತ್ಯಕ್ಷಿಸುವನು. ವಿಶಾಲ ದೃಷ್ಟಿಯಿಂದ ನೋಡಿದರೆ, ಆ ಪರಮಾತ್ಮನೇ ಗುರುವಾಗಿದ್ದು ಸಕಲ ಜೀವರು ಶಿಷ್ಯರೇ ಆಗಿದ್ದಾರೆ.

ಗುರುವು ಹೇಳುವ ವಿದ್ಯೆ ನಮ್ಮೊಳಗಿರುವ ಗುರುವಿಗೇ ತಿಳಿಯುತ್ತದೆ. ಗುರುವಿನ ಮಹಿಮೆಯೂ ಗುರುವಿಗೆ ತಿಳಿಯುತ್ತದೆ. ಗುರುವು ಅರಿವಿನ ಸ್ವರೂಪನೇ ಆಗಿದ್ದಾನೆ. ಕಣ್ಣು ತೆರೆಯುವ ದಿನದಿಂದಲೂ ಆ ಅರಿವು ಗುರುವಾಗಿರುತ್ತದೆ.

ಗುರುತು ಕಂಡು ಹೇಳುವ ಗುರುವು ಇದ್ದೇ ಇದ್ದಾನೆ. ಆದರೆ ಹೇಳಿದುದನ್ನು ಅರಿಯುವ ಶಿಷ್ಯರೇ ವಿರಳ. ಗುರು–ಶಿಷ್ಯರೆಂಬ ಕಾಯ ಭೇದ ಮಾಡುವವರಿಗೆ ಇದರ ಮರ್ಮವೇ ತಿಳಿಯದು. ಅವರು ಗಾಣದ ಕುರುಡೆತ್ತಿನಂತೆ ಇದ್ದಲ್ಲಿಯೇ ಸುತ್ತುತ್ತಾರೆ.

ಅರಿವೇ ಗುರುವೆಂದು ಅರಿವನ್ನು ಹಿಗ್ಗಿಸಿಕೊಳ್ಳದೆ, ಗುರುವು ಬಂದಾಗ ಅರಿಯುವೆನೆಂದು ದಿನ ನೂಕುವುದು ವ್ಯರ್ಥ. ಗುರುವು ಬರುವ ಕಾಲಕ್ಕೆ ದೇಹವೇ ಕಾಲವಶವಾಗುತ್ತದೆ.

ಕೈ ಹಿಡಿದು ಶಿಕ್ಷಿಸಿ ಪರಮ ಪದವನ್ನು ತೋರುವ ಗುರುವನ್ನು ಬೇಡಿ, ಅಪರೋಕ್ಷಾನುಭೂತಿ ಹೊಂದಬೇಕು.

---

ಜ್ಞಾನವೇ ಗುರುವು. ಜ್ಞಾನ ಹೀನತೆಯೇ ಬುದ್ಧಿ. ಆತ್ಮಜ್ಞಾನ ಬುದ್ಧಿ ವಾದಗಳ ಸಂಧಿಯಲ್ಲಿ ಮನಸ್ಸು ದಿಮ್ಮೆನ್ನುವುದು. ಈ ದಿಮ್ಮೆನ್ನುವುದನ್ನರಿಯಲು ಎರಡೂ ಅದೇ ರೂಪಗಳಾಗುತ್ತವೆ. ಜಗತ್ತಿನಲ್ಲಿ ಗುರುವಾಗುವವನು ಉದಯಿಸಿದರೆ, ಜಗದೊಳಿರುವ ಜನರು ಶರಣೆನ್ನುತ್ತಾರೆ. ಜಗವನ್ನರಿತು, ಮಣಿದು ಕಾಣಲು, ಗುರುವು ನಿಗಮ ಆಗಮಗಳಲ್ಲಿ ತಿಳಿಸಿದ ನಿರ್ವಿಕಾರ ನಿಪುಣನೆನಿಸುತ್ತಾನೆ.

ಆದ್ಯಂತವೇ ಗುರುವು, ಮನದ ಆದಿಯೂ ಗುರು. ಮನದ ಅಂತ್ಯವೂ ಗುರು. ಗುರು–ಶಿಷ್ಯರೆಂದರೆ ಬೊಡ್ಡೆ ಟೊಂಗೆಗಳಂತೆ. ಧ್ಯಾನದಿಂದ, ಈ ರಹಸ್ಯವನ್ನರಿಯಬಹುದು. ಜಗದಲ್ಲಿ ಉದಿಸಿದ ಗುರುವಿಗೆ, 'ತಿಳಿಸು ಅಪ್ಪಾ' ಎಂದು ಬೇಡಿಕೊಂಡರಾಯಿತು. ಅವನು ಏನಾದರೂ ಮಾರ್ಗ ತೋರುತ್ತಾನೆ. ಗುರುವಿನ ಒಲುಮೆಯನ್ನು ಪಡೆದು, ನಿಟಿಲ ದುರ್ಗದಲ್ಲಿ ಧ್ಯಾನ ಮೂಲಕ ಕಂಡು, ಕೃಪಾ ಕಟಾಕ್ಷದಿಂದ, ಆತ್ಮ ರೂಪವನ್ನು ಕಾಣಬಹುದು. ಗುರು ಸೇವೆ ಮಾಡಬೇಕು. ಸ್ಥಿರಭಾವ ಹೊಂದಬೇಕು.

ಆತ್ಮವನ್ನೇ ಲಕ್ಷ್ಯವಿರಿಸಿಕೊಂಡು, ಮಂತ್ರವೆಂಬ ಬಾಣ ಹೂಡಿ, ಹೆದೆಯೇರಿಸು. ಮಂತ್ರ ಚೈತನ್ಯದಿಂದ ಬಾಣವು ಲಕ್ಷ್ಯದಲ್ಲಿ ಸೇರಲಿ.

ಗುರು–ಪರಂಪರೆಯ ಆತ್ಮಧ್ಯಾನದ ಈ ವಿದ್ಯೆಯ ಕೀಲವನ್ನು ಅರಿತು ಪರಮ ಪರಿಪೂರ್ಣತೆಯಲ್ಲಿ ಪರವಶನಿದ್ದರೆ, ನಿರುಪಮ ಆನಂದ ಸುಖ ಕೇಳಿಯುಂಟು.

ಆತ್ಮವಸ್ತುವನ್ನು ಹೃದಯ ಸ್ಥಾನದಲ್ಲಿಯೇ ಅರಸಬೇಕು. ಬೇರೆ ಕಡೆಗೆ ಅರಸಿದರೆ ಅದೆಂತು ದೊರೆಯಬಲ್ಲದು? ಭವ ಸಾಗರವು ಅಪಾರ. ಅದನ್ನು ಈಜಿ ದಾಟಬೇಕು. ಗುರು ಚಕ್ರದಲ್ಲಿ ಧ್ಯಾನಿಸಿ, ತನ್ಮಯತೆ ಹೊಂದಿ, ಮನದ ಸ್ಥಿರತೆಯನ್ನು ಕಾಣುವುದೇ ಮೇಲು.

ದೃಷ್ಟಿಯು ಪರಿಪೂರ್ಣವಾಗಬೇಕು, ಶುದ್ಧವಾಗಬೇಕು; ಸುಸ್ಥಿರವಾಗಬೇಕು. ಆಗ ನಿರ್ಗುಣವನ್ನು ಧ್ಯಾನಿಸಿ, ಗದ್ದುಗೆ ಏರಿ ಬ್ರಹ್ಮವನ್ನು ಕಾಣಬಹುದು ಗುರುವನ್ನು ಸೇರಿ ಅರಿಯಬೇಕು.

ಬರೀ ಹುಟ್ಟು ಸಾವಿನಿಂದೇನು ? ಅದೆಲ್ಲ ಕೇವಲ ಬೂಟಾಟಿಕೆಯೇ ಸರಿ. ಬರೀ ಹಣಗಳಿಸಿ ಬದುಕು ಸಾಗಿಸುವುದು ಬರೀ ನಾಟಕ. ಕಾರಣ, ಪರತತ್ತ್ವದಲ್ಲಿ ಸೇರಿ ಮೋಹದ ಪರದೆಯನ್ನು ಹರಿದೊಗೆಯಬೇಕು.

ಕರ್ಮ ಫಲವು ಬೇರಯೊಬ್ಬರು ಕಟ್ಟಿಕೊಟ್ಟ ಬುತ್ತಿಯಂತಲ್ಲ. ಪರವನ್ನು ಮುಟ್ಟಿ ದಾಟಿದ ಸಾಧನ ಸಿದ್ಧವನ್ನು ಸೇರಿ, ರಹಸ್ಯವನ್ನು ರಟ್ಟು ಮಾಡಬೇಕು.

ಗುರುವಿನಿಂದ ದೀಕ್ಷೆ ಪಡೆಯಬೇಕು. ಮಂತ್ರವೇ ಸದ್ಗುರು ಚಿಂತನೆಯಾಗುತ್ತದೆ. ಇನ್ನಷ್ಟು ಆಳಕ್ಕಿಳಿದರೆ ಮಂತ್ರಾರ್ಥಕ್ಕಿಳಿಯುತ್ತೇವೆ. ಅಲ್ಲಿ ಸದ್ಗುರುವಿನ ರೂಪವು ಅಳಿಯುತ್ತದೆ. ಆಗ ತನ್ನಲ್ಲಿ ತಾನು ಮಗ್ನನಾಗಿ, ಮಂತ್ರ ಮೀರಿದ ಸದ್ಗುರುವನ್ನು ಚಿದ್ ಬಯಲಲ್ಲಿ ಅರಿಯಬೇಕು.

ಸಾವಿರ ಯಜ್ಞಗಳನ್ನು ಮಾಡಿದರೇನು ? ಮನಸ್ಸಿನಲ್ಲಿ ಗುರು ಭಕ್ತಿಯು ತಪ್ಪದಂತಿರುವುದೇ ಮುಕ್ತಿಗೆ ಹಾದಿಯಾಗಿದೆ.

ದೇಹ ಮತ್ತು ಆತ್ಮಗಳು ಬೇರೆ ಬೇರೆ ಎಂದು ತಿಳಿಯಬೇಕು. ಇಲ್ಲವಾದರೆ ದೇಹಾಭಿಮಾನ ಹೊಂದಿ, ಅಜ್ಞಾನವೆಂಬ ನಿದ್ರೆಯಲ್ಲಿ ಮುಳುಗಿ ಹೋಗಬಹುದು. ಸಾಹಸದಿಂದ ಗುರುವಿನ ಭಕ್ತಿ ಸಲ್ಲಿಸಿ ಮಾತುಗಳ ಹಿಂದಿನ ಮಥಿತಾರ್ಥವನ್ನು ತಿಳಿಯಬೇಕು.

ಯೋಗ ಸಾಧಕನು ರಾಗ ವೈಷಮ್ಯಗಳ ರಕ್ತಿಯನ್ನು ತ್ಯಜಿಸಿ, ಬೇಗ ಗುರು ಭಕ್ತಿ ತಾಳಿ ಮುಂದುವರಿದರೆ ಶೀಘ್ರ ಯಶಸ್ಸು ಸಿಕ್ಕುವುದು.

ಗುರು ಚಕ್ರದಲ್ಲಿ ಲಕ್ಷ್ಯವಿರಿಸಿ, ಅಜಪಾದಿ ಕ್ರಿಯೆಗಳನ್ನು ಮೀರಿ ವೇದಾಂತ ರಹಸ್ಯದ ಸಂಧಿಯಲ್ಲಿ ಇಣಿಕೆ ಹಾಕಿ ಮುಂದುವರಿಯಬೇಕು.

ಚಿತ್ತವನ್ನು ಸುಟ್ಟುಹಾಕಬೇಕು. ಅರಿವನ್ನು ನುಗಿಸಿ, ಇಂಪಾದ ಗುರು ಶಕ್ತಿಯನ್ನು ಚಿದ್ ಬಯಲಲ್ಲಿ ಸೇರಿಸಿ, ದ್ವಂದ್ವಗಳನ್ನು ತೊಡೆಯುವವನೇ ಜಾಣನು.

ತಿಳಿಸುವವನು ಯಾರು ? ತಿಳಿಯುವವನು ಯಾರು. ಜಲದ ಭಾಂಡೆಯಲ್ಲಿ ಸೂರ್ಯ ಬಿಂಬ ಕಂಡಂತೆ ಆತ್ಮ ಗೋಚರಿಸುವುದು. ಗುಟ್ಟು, ಅರಿತ ಮೇಲೆ ಬಟ್ಟ ಬಯಲಾಗುವುದು.

ಗುರುವು ಸ್ಪರ್ಶ ಮಣಿಯಂತೆ, ಶಿಷ್ಯನು ಕಬ್ಬಿಣ ತುಂಡಿನಂತೆ, ಸ್ಪರ್ಶಮಣಿಯನ್ನು ಸೋಂಕಿ ಕಬ್ಬಿಣವು ಬಂಗಾರವಾಗುವಂತೆ ಗುರುವಿನ ಸಂಗದಲ್ಲಿ ಶಿಷ್ಯನು ಗುರುವೇ ಆಗುತ್ತಾನೆ.

ಸದ್ಗುರುವು ಸದ್ಗತಿಯನ್ನು ಪಡೆಯುವಂತೆ ಮಾಡುತ್ತಾನೆ. ಅವನೇ ದೈವ. ವೇದಾಂತ ಸಾರವನ್ನು ಸಂವಾದ ಮೂಲಕ ನೀಡಬಲ್ಲ ಗುರುವನ್ನು ಬೇಡಿ, ಸಾಧನ ಮೂಲಕ ಮುಕ್ತಿ ಪಡೆಯಬೇಕು.

ಜ್ಞಾನವು ಚರ್ಚೆಗೆ ಮೀರಿದ ಸಂಗತಿ. ಅದನ್ನು ಪಡೆದು ಮೂರ್ಛೆ ಹೋದವನಂತಿರಬೇಕು. ಗುರುವೇ ದಡ ತಲುಪಿಸುತ್ತಾನೆ.

೨೪೨೫ ಗುರುವೆ ತಾನಾಗುವ, ಹರನ ತೋರುವವನು,
ಬ್ರಹ್ಮಲೋಕವನೆ ಪ್ರತ್ಯಕ್ಷಿಸುವ,
ಕಿಂಕರನ ಶೋಧಿಸಿ ಕತ್ತಲೆಯ ತೊಡೆವನು, ವಿಶ್ವ

೨೪೨೬ ಗುರುವೆನಲಾ ಪರಮಾತ್ಮನು;
ಪರಿಕಿಸಿ ನೋಡಲು, ಶಿಷ್ಯರೆನೆ ಸಕಲ ಜೀವರ್,
ಗುರು ಶಿಷ್ಯ ಜೀವ ಸಂಪದ,
ಗುರುತರಮಾಗಿ ಬೆರೆತೊಡಾತನೆ ಗುರು ವೇಮಾ.

೨೪೨೭ ಗುರು ಹೇಳಿದ ವಿದ್ಯೆ ಗುರುವಿಗೇ ತಿಳಿವುದು,
ಗುರು ಹೇಳುವ ವಿದ್ಯೆ ಗುರುವು ಅರಿವ,
ಗುರುವಿನ ಮಹಿಮೆ ಪರಮ ಗುರುವಿಗೇ ತಿಳಿವುದು, ವಿಶ್ವ

೨೪೨೮ ಬೆನ್ನಿಗಂಟಿ ಇರುವ, ಕಣ್ಣು ಬಿಡುವ ದಿನವು,
ಚಿಕ್ಕ ವಯಸಿನಿಂದ ಸ್ನೇಹ ತೋರ್ಪ,
ಅಣ್ಣ ತಮ್ಮರಿಗೂ ಆಪ್ತನಾಗಿ ಇರುವ, ವಿಶ್ವ

೨೪೨೯ ಗುರುತು ಕಂಡು ಹೇಳೆ ಗುರುವು ಯಾವನಿಲ್ಲ,
ಗುರುತನರಿಯೆ ಶಿಷ್ಯವರನು ಇಲ್ಲ,
ಗುರು ಶಿಷ್ಯರೆನಲು ಕುರುಡೆತ್ತು ಅಲ್ಲವೆ ? ವಿಶ್ವ

೨೪೩೦ ಗುರು ದೊರೆಯಲಾಗ ಗುರುತನರಿವೆನೆಂದು,
ಕಾಲವೆಲ್ಲ ವ್ಯರ್ಥ ಕಳೆಯುತಿಹುದು,
ಗುರುವು ದೊರೆವ ವೇಳೆ ಗತಿಸುತಿಹುದು ದೇಹ, ವಿಶ್ವ

೨೪೩೧ ದಿನಗಳ ಸುಮ್ಮನೆ ಕಳೆಯದೆ,
ಘನ ಗುರು ಬೋಧಾನುಸಾರ ಆತ್ಮವ ಕಾಣಲ್,
ತನ ತಾನರಿಯದೆ ಇದ್ದೊಡೆ,
ಹೆಣಗಲು ಮನದಿ ನಿನಗೆ ಅತಿ ಹಾನಿಯು ವೇಮಾ.

೨೪೩೨ ಕೇಡು ಗುಣಗಳೆಲ್ಲ ಕೈ ಹಿಡಿದು ಶಿಕ್ಷಿಸಿ,
ಪರಮ ಪದವಿ ಸಿದ್ಧ ಪ್ರಾಪ್ತಿ ಕಾಣು,
ಅಂಥ ಗುರುವ ಬೇಡಿ ಅಪರೋಕ್ಷವ ಹೊಂದು, ವಿಶ್ವ

೨೪೩೩ ಜ್ಞಾನವೆನಲು ಗುರುವು; ಜ್ಞಾನಹೀನ ಬುದ್ಧಿ;
ಉಭಯ ಸಂಧಿ ದಿಮ್ಮು ಉಂಟು ಆಗ,
ದಿಮ್ಮೆನವುದನರಿಯೆ ತದ್ರೂಪಗಳೆರಡು, ವಿಶ್ವ

೨೪೩೪ ಜಗದಲಿ ಗುರು ಉದಯಿಸಿದರೆ,
ಜಗದೊಳಿರುವ ಜನರು ಶರಣು ಶರಣೆನ್ನುತಿಹರ್,
ಜಗವರಿತು, ಮಣಿದು ಕಾಣಲು,
ನಿಗಮಾಗಮ ನಿರ್ವಿಕಾರ ನಿಪುಣನು ವೇಮಾ.

೨೪೩೫ ಗುರುವೆನ್ನಲು ಆದ್ಯಂತವು,
ಗುರು ಶಿಷ್ಯರೆನ್ನಲು ಸಕಲ ಕೊಂಬೆಗಳಷ್ಟೇ...
ಗುರುವನು ಅರಿಯಲು ಬಲ್ಲರು,
ಧರೆಯೊಳಗಿನ ಮನುಜರೆಲ್ಲ, ಧ್ಯಾನಿಸೆ, ವೇಮಾ.

೨೪೩೬ 'ತಿಳಿಸು ಅಯ್ಯ' ಎಂದು, 'ದೇವರು ನೀ' ವೆಂದು,
ಬೆನ್ನು ಬಿದ್ದ ಜನರ ಬವಣೆ ನೀಗೆ,
ಯಾವನಿರಲಿ ಹೇಳ್ವ, ಏನಾದರೊಂದನು, ವಿಶ್ವ

೨೪೩೭ ಎಡೆಬಿಡದೆ ಗುರುವನು ಬೇಡಿ ಬೇಸರಿಯದೆ,
ಸ್ಥಿರತೆಯಿಂದ ಪೂಜೆ ಸಲಿಸಿ ಸಲಿಸಿ,
ಪರವ ಕಾಣುವವನು ಪರಿಪೂರ್ಣ ಯೋಗಿಯು, ವಿಶ್ವ

೨೪೩೮ ಗುರುವಿನೊಲುಮೆ ಪಡೆದು, ಕಂಡು ನಿಟಿಲ ದುರ್ಗದಿ,
ಕಣ್ಣು ನೋಡಿ ಮರೆಗೆ ಕಡೆಯ ನೋಟ,
ತಾಕಿ ಆತ್ಮ ರೂಪ ತಟ್ಟನೆ ನೋಡಿಕೋ, ವಿಶ್ವ

೨೪೩೯ ಗುರುವು ಬರುತಲಿರಲು, ಕುಳಿತು ಏಳದಿರುವ,
ತುಂಟಗೆಂತು ದೊರೆಯುತಿಹುದು ಮುಕ್ತಿ ?
ಪತಿಯ ಲೆಕ್ಕಕಿಡದ ಸತಿಗೆ ಅಂಥ ಗತಿಯು, ವಿಶ್ವ

೨೪೪೦ ಸೇವೆ ಗೆಯ್ದು ಗುರುವ, ಸ್ಥಿರ ಭಾವ ಹೊಂದಿ,
ದಾರಿಗಂಟಿ, ಜ್ಞಪ್ತಿ ತೊಲಗದನಕ,
ಭಾವದಲ್ಲಿ ಪರವ ಪರಿಕಿಸಿ ಕಾಣುವರೆ ? ವಿಶ್ವ

೨೪೪೧ ಊಳಿಗವನು ಮಾಡಿ, ಉಬ್ಬಿಸಿ ಗುರುವನ್ನು,
ಕೂಡಿ ಹೊಂದಬೇಕು, ಕೋರ್ಕೆಯಡಗಿ,
ಬೇಡಿ ಪರಮ ಪದವಿ, ಬೆಳಗುತ ನೋಡಿರೋ, ವಿಶ್ವ

೨೪೪೨ ಸೋತು ಹೋಗಿ, ಗುರುವ ಸಲೆ ಹಿಡಿದು ಬಿಡದಿರೆ,
ಚಿಕ್ಕ ಬಲಗೂಡಿಸಿ, ಚಿಂತೆ ಬಿಟ್ಟು,
ಕುದುರಿದವನೆ ಮುಕ್ತಿ ಕಂಡವನು ಕಾಣಾ, ವಿಶ್ವ

೨೪೪೩ ತಡವ ಮಾಡದೆ ಗುರು ಸೇವೆ, ದಾನ ಮಾಡಿ,
ಯೋಗ ಯೋಗಾಂಗಗಳ ಕಲಿತ ಯೋಗಿಯಾಗಿ,
ಆಶೆಗಳ ತ್ಯಜಿಸಿದರಾಗದೆ ಅಚಲ ತಪವು ?
ಸಿದ್ಧಿ ಹೊಂದುವನು ಮುಕ್ತಿ ಸೇರ್ವ ವೇಮ.

೨೪೪೪ ಹೆದೆಯೇರಿಸಿ ರೂಪವ ಹಿಡಿದು, ಗ್ರಹಿಸಿ,
ನಿತ್ಯ ಬಿಡದೆ, ನಿಜವೆಂದು ನಂಬಿ, ಮುಟ್ಟಿ,
ಚೊಕ್ಕ ನಿರುಕಿಸು ಪೂರ್ಣದಲಿ, ಸಿಕ್ಕಲೆಂದು,
ಕುದುರುವುದುಪಾಯ ; ಬೇಡಲು ಗುರುವ ವೇಮ.

೨೪೪೫ ಉಬ್ಬಿ ಗುರುವ ಬೇಡಿ, ಉಳಿಸಿ ನಂಬುಗೆಯನು,
ಮಿಥ್ಯೆ ನುಡಿಯ ಬೇಡ, ತತ್ತರಿಸುತ ;
ನಿಶ್ಚಯಿಸಿ ಮನದಲ್ಲಿ ನಿರ್ವಣ್ಣತನ ಕಾಣು. ವಿಶ್ವ

೨೪೪೬ ಗುರು ಪರಂಪರೆಯೀ ವಿದ್ಯೆ ಗೂಢವರಿತು,
ಪರಮ ಪರಿಪೂರ್ಣತೆಯಲ್ಲಿ ಪರವಶನಿರೆ,
ನಿರುಪಮಾನಂದ ಸುಖ ಕೇಳಿ ಪಡೆಯಬೇಕು.
ಪರಶಿವನ ರೀತಿ ಭಾಸಿಸಬೇಕು ವೇಮ.

೨೪೪೭ ಗುರುವಿನೊಡನೆ ಹೊಂದಿ ಕೂಡಿಕೊಳ್ಳುವವನು
ಬ್ರಹ್ಮಕಂಟಿ ಬೆರೆತು ಬೆಳಗುತಿಹನು,
ಗೌಪ್ಯ ತಿಳಿದೊಡಾಗ ಗುಟ್ಟು ರಟ್ಟೆ ಆಯ್ತು, ವಿಶ್ವ

೨೪೪೮ ಗುರುವನು ನಿಂದಿಸುತ ಗುಟ್ಟನರಿಯದವನು,
ಯಮನ ಬಾಧೆ ಪಡುವ ಕ್ರಮದಿ ಮುಂದೆ,
ಜೇನಿನೊಳಗೆ ನೊಣವು ಸಾವ ರೀತಿಯಾಯ್ತು. ವಿಶ್ವ

೨೪೪೯ ನೋಡುವ ವರೆಗೇ ಸಾಧನ
ನೋಡುತ, ಮನದಲ್ಲಿ ತೋಚಿ, ಸುಲಭವೆಯಾಗಳ್
ಗೂಢವು ತೋಚಿದ ಮರ್ಮವ,
ಜಾಡರಿತದ ನೀನೆಂದರಿ, ಗುರು ಸೇರಿ, ವೇಮಾ.

೨೪೫೦ ಓದು ಬಾರದಿರಲು ಏಕೆ ಸಾಮಾನ್ಯತೆ ?
ಬುದ್ಧಿ ಕುದುರದಿರಲು ಪೊಂದಲೇಕೆ ?
ಗುರು ಸೇವಿಸೆ ಮುಕ್ತಿ ಕರತಲಾಮಲಕವು, ವಿಶ್ವ

೨೪೫೧ ತಳವಾರನೆ ಇರಲಿ ಎಂದಿಗೂ ಧರ್ಮ ಒಪ್ಪ,
ಸ್ವಾಮಿಯಾಣತಿ ಗೆಯ್ಯುತ ಸಲೆಯರಿಯುವ,
ಗುರುವಿನ ಹಿತ ಬೋಧೆ ಮೀರುವ ಕೇಡಿ ಶಿಷ್ಯ,
ಗಾಯ್ತು, ನರಕ ಕೂಪವಾಶ್ರಯ, ಕಾಣು ವೇಮ.

೨೪೫೨ ಒಲಿಸಿ ಒಲಿಸಿ ಗುರುವ ಒಪ್ಪವಾಗೊಪ್ಪಿಸಿ,
ಮನದಿ ನಿಲಿಸಿ, ಜಾತಿ ಮಮತೆ ತೊರೆದು,
ಸಾಗುತಿಪ್ಪ ಅವನು ಸತತ ಒಂದೇ ರೀತಿ. ವಿಶ್ವ

೨೪೫೩ ತೇಟ: ಬಿನ್ನವಿಸುತಲಿ ಸದ್ಗುರುವ ಬೇಡುತಿರುವ,
ಮುನ್ನ ಭ್ರಮರ ಕೀಟ ನ್ಯಾಯ ಮತ್ತೆ ಉಂಟು,
ವರಿಸಿ ನೆನೆಯುತಿರೆ, ಅವನನೀ ವಸುಧೆಯಲ್ಲಿ,
ಸಾಧು ಸನ್ಮಾರ್ಗ ಅದುವಹುದು, ಜಗದಿ, ವೇಮ.

೨೪೫೪ ತೇಟ : ಅಂಥ ಸದ್ಬೋಧ ಮರ್ಮವ ಅರಿಯಬೇಕು,
ಮನಸಿನೊಳು ಕಲ್ಮಷಗಳನು ಮಾಣಬೇಕು ;
ಶೀಘ್ರ ಕಾಲದಲ್ಲಿ ಆತ್ಮ ಸಿದ್ಧಿಯಹುದು,
ವಿಮಲ ಗುಣ ರಾಜೇಂದ್ರ ವೇಮನಾರ್ಯ.

೨೪೫೫ ಪರಪುಟ್ಟನು, ಕಾಗೆ ಪಾಲಿಸಿದ ಪಿಕದಂತೆ,
ದಾರಿ ತೋರಬೇಕು ತತ್ತ್ವಜ್ಞನೋರ್ವ,
ಪೂರ್ವ ಜನ್ಮ ಫಲವ ಪಡೆವನಷ್ಟೆ, ಕೊನೆಗೆ, ವಿಶ್ವ

೨೪೫೬ ಈಜಬಹುದು ಹಳ್ಳ ಇನಿತು ಬಾಧೆಯಿರದೆ,
ಆದಿ ಗುರುವು ಇರದೆ, ಅಂಟಲಾರ,
ಜೊಳ್ಳು ಆಡಲೇಕೆ ? ಚೊಕ್ಕ ಮನದಿ ನೋಡು, ವಿಶ್ವ

೨೪೫೭ ಪರದೇಶಿಕ ಚರಣಂಗಳ
ಉರದಲಿ ಧರಿಸುತ ಮಿಗಿಲು ಉತ್ಸಾಹದೊಡಾ
ಗುರುವರನ ಬೇಡಿ, ಕೊನೆಯಲಿ
ಪರಿಪೂರ್ಣವ ಹಲುಬಿ ಕಾಣು ಭದ್ರತೆ ; ವೇಮಾ.

೨೪೫೮ ಸಾದೃಶ ಪಡೆದವನು ಸುಮ್ಮನಿರಕೂಡದು,
ಗುರುವಿನೊಡನೆ ಸೇರಿ ಕೂಡಬೇಕು,
ಗುರುವು ನುಡಿದ ರೀತಿ ಗುರಿ ಮೀರಕೂಡದು, ವಿಶ್ವ

೨೪೫೯ ಗುರುವೆನಲು ಧೇನುವು ; ಚೊಕ್ಕಟ
ವರಶಿಷ್ಯನು ವತ್ಸನಾಗಿ ವರ್ತಿಸುತಿಪ್ಪನ್,
ಕರುಣೆಯುದಿಸಿದೊಡನೀವನು
ನಿರುಪಮ ಲಕ್ಷ್ಯಾಮೃತವನು, ನಿಜವಿದು ವೇಮಾ.

೨೪೬೦ ನಿತ್ಯಾನಂದ ವಿವೇಕವು,
ಸತ್ಯವನು ತಿಳಿದಿದ್ದೊಡೆ, ಶಕ್ಯವಿರುವುದೇಂ?
ಮುತ್ತಿಗೆ ಸಮ ಗುರು ವರ್ಮವ,
ಭೃತ್ಯನಿರುತ ಮನದರಿವುದು, ಪೆಂಪಿಲಿ, ವೇಮಾ.

೨೪೬೧ ಕೋರಿ ಮನದಿ ಸೇವೆ, ಗೆಯ್ಯೆ ಗುರುವ ಮೇಲು,
ಕಾರಣದಲಿ ತಿಳಿವು ಗಗನ ವಿದ್ಯೆ,
ದೂರ ದೃಷ್ಟಿ ನಿಲಿಸಿ, ತೊಡಗುವುದೆ ಮೋಕ್ಷವು. ವಿಶ್ವ

೨೪೬೨ ಗುರುವ ಸೇವೆ ಗೆಯ್ದು, ಗುರಿಯೊಡನೆ ಭುಜಿಸಲು,
ಅಂತೆ ನಡೆವ ನರರು ಆಸೆ ತೀರಿ,
ಬಹಳ ನುಡಿವರಷ್ಟೆ ಭಾವವನೆ ಕಾಣರು, ವಿಶ್ವ

೨೪೬೩ ಉತ್ತಮೋತ್ತಮನಿಹ ತತ್ತ್ವಜ್ಞನಿಳೆಯಲಿ,
ಮಹಿಮೆ ತೋರುವವನು ಮಧ್ಯಮನಿಹ,
ವೇಷಧಾರಿ ಉದರ ಪೋಷಕನಧಮನು ! ವಿಶ್ವ

೨೪೬೪ ಮದದೊಳಿಂದ ಉಂಟು, ಮಾತಿಗೆ ಮರು ಮಾತು,
ವ್ಯರ್ಥ ಸುದ್ದಿ ಹರಡಿ ವಂಚಿಸುತ್ತ,
ಕಾಸು ದೋಚುವವನ, ಕಷ್ಟ, ಗುರುವೆನಲು, ವಿಶ್ವ

೨೪೬೫ ದೇಹವಾತ್ಮ ರೂಪ ತಿಳಿಸಿ ಬಿಚ್ಚಿ ಹೇಳಿ,
ಅವನಿ ನೋಟ ನೋಡಿಸುವವನೆ ಗುರು,
ಭ್ರಮರ ತನ್ನ ರೂಪ ಕೀಟಕಿತ್ತ ರೀತಿ, ವಿಶ್ವ

೨೪೬೬ ಶುದ್ಧ ಪರಿಪೂರ್ಣ ದೃಷ್ಟಿಯಲಿ ಸುಸ್ಥಿರಾಗಿ,
ಇದ್ದು ನಿರ್ಗುಣ ಹೊಂದುತ ನಿರ್ಮಲಾಗಿ,
ಗದ್ದುಗೆಯನೇರಿ ಬ್ರಹ್ಮವನು ಕಾಣಬಹುದು,
ಸುದ್ದಿಯೇತಕೆ ? ಗುರು ಸೇರಿ ಶ್ರಮಿಸು ವೇಮ,

೨೪೬೭ ಕುರಿ ಹತ್ತು ಸಾವಿರ ಕೂಡಿರುವ ಸ್ಥಳದಿ,
ಅದರ ಮರಿ ತಾಯಿಯ ಅರಿಯುತಿಹುದು,
ಪರಮ ಯೋಗಿಯರಿತು ಭಕ್ತ ತಾನೆ ಬರುವ, ವಿಶ್ವ

೨೪೬೮ ಕಾಣದು, ಆ ಪರ ತತ್ತ್ವವು,
ಮೇಣಾಲಿಸದಿರು ; ಗುರು ನಿಂದೆ ಕೇಳಿ ಕಾಣಲ್,
ಜಾಣ–ಗತಿಯಲಿಯುಬಾರದು,
ಕಾಣೆರೋ, ಮನಕೊಪ್ಪದ ಮಾನ ಹಾನಿ ವೇಮಾ,

೨೪೬೯ ಗುರಿಗಾಣದಿದ್ದು, ಮರ್ತ್ಯರು
ಪರಿಚಿತ ಶಾಸ್ತ್ರಗಳ ವಾದ ಪದ್ಧತಿಗಿಳಿವರ್,
ಗುರುವು ಜ್ಯೋತಿಯನೀವನು,
ಅರಿಯುವನವ ದಡ ; ಯೋಗಿಯು ಧರೆಯಲಿ ವೇಮಾ,

೨೪೭೦ ಉಸಿರು ಹೋಹ ಉಪದೇಶವ ಹೊಂದು ಮುನ್ನ,
ರೂಪು ಹೋಹುದಿದುವೆ ಸತ್ಯ ರೂಢಿ ;
ಬೊಮ್ಮನೇನು ವಡವಾಗ್ನಿ ಭುಂಜಿಪನೇ ? ವಿಶ್ವ

೨೪೭೧ ಹಾಲುಗೂಡಿ ನೀರು ಹಾಲಾಗಿ ಬೆಳಗಿತು,
ಮಹಾ ಗುರುವಿನಿಂದ ಮಹಾಜ್ಞಾನಿ,
ಸಾಧು ಸುಜ್ಞಾನಿ ಸಂಗವಿಂತಿಪ್ಪುದು, ವಿಶ್ವ

೨೪೭೨ ಛಾತ್ರ ಧರ್ಮವರಿತು ಚೊಕ್ಕ ಭಕ್ತಿಯಿಂದ,
ಗುರುವ ಸೇವೆ-ಗೆಯ್ದು ಕುದುರಿದೊಡನೆ,
ಎಲ್ಲ ಮರ್ಮಗಳನು ಎಸೆದು ಹೋಗುತಿಹನು, ವಿಶ್ವ

೨೪೭೩ ಗುರುವ, ಪರಮ ಗುರುವ, ಗುರುತನೇ ಅರಿಯದೆ,
ಗುರುವು ಎಂದು ತಿಳಿಯೆ, ಕುರುಡು ರೀತಿ,
ಗುರುವಿಗೆ ಗುರುವಾದ ಘನ ಪ್ರಾಣೇಶನು, ವಿಶ್ವ

೨೪೭೪ ಕಾಗುಣಿತ ಬೋಧಿಪ, ಗುರುವು ಅಲ್ಲವಲ್ಲ,
ಶಾಸ್ತ್ರ ಪಾಠ ಓದಿಸುವವನು ಅಲ್ಲ,
ಮುಕ್ತಿದಾರಿ ತೋರುತಿಪ್ಪನೆ ಗುರು ಮೂಲ, ವಿಶ್ವ

೨೪೭೫ ಕಳ್ಳ ಗುರು ಕಟ್ಟುವನೆಲ್ಲ ಕರ್ಮಗಳನು,
ಮಧ್ಯಮನು ಕಟ್ಟುವ ಮಂತ್ರಚಯವ,
ಉತ್ತಮನು ಕಟ್ಟುವ ಯೋಗ ಸಾಮ್ರಾಜ್ಯವ, ವಿಶ್ವ

೨೪೭೬ ಅರಿಯೆ, ದೋಚುತಿದ್ದು ಗುರುವು ತಾನು ಎಂದು,
ತಿರುಗುವವನು ತನ್ನ ತಿಳಿಯಲಾರ,
ಕೆಲಸಕೆ ಬಾರದಂತ ಕೀಳು ಮೂಳನಪ್ಪ, ವಿಶ್ವ

೨೪೭೭ ಮಠದೊಳಗಿಹ ಯೋಗಿ, ಮಾಯೆಯಲ್ಲ ಕೊಚ್ಚಿ,
ಘಟದೊಳಗೆ ಇರುವ ಘನವ ತಿಳಿದು,
ಮಾತು ಮಾತಿಗೆ ಗುರುವ ಮರೆಯದೆ ತಿಳಿಯಿರೋ, ವಿಶ್ವ

೨೪೭೮ ತಿಳಿದು ತಿಳಿದು ಕೂಲಿ ತಕ್ಕ ಗೆಯ್ಯದೀಯರು,
ದಾಹ ತೀರಲೀವ ತರುಣಿ ರೊಕ್ಕ,
ಮುಕ್ತಿ ಈಯದ ಗುರು ಮತ್ತೆ ಕಳ್ಳ ಮಗನು, ವಿಶ್ವ

೨೪೭೯ ಮೋದಗಳ ಗುರುವಿನ ಮುಖ್ಯ ಕರುಣೆಯಿಂದ,
ನವ ರಂಧ್ರ ಕಾಯವ ನೋಡಿ, ತ್ಯಜಿಸಿ,
ಸರ್ವ ಜೀವನಾದ, ಸರ್ಪವು ತಾನಾದ, ವಿಶ್ವ

— — — — — — — — — — — — — — — — — — — — — —

೨೪೮೦ ತಾನು ವಿಮಲನಿರಲು, ತನ್ನ ಗುಣಗಳೆಲ್ಲ
ಶಿವಗರ್ಪಿಸದ ಗುರು ಸೋಗಿನ ಗುರು,
ಕುರುಡ ಕುದುರೆಯೇರಿ ಗುಡಿಯ ತಿರುಗಿದಂತೆ, ವಿಶ್ವ

೨೪೮೧ ಗಾಳಿ ಗಾಳಿ ಬೆರೆತು, ಗಗನ ಗಗನ ಬೆರೆತು,
ಮಣ್ಣು ಮಣ್ಣು, ಮತ್ತೆ ಬೆಂಕಿ ಬೆಂಕಿ,
ನೀರು ನೀರು ಬೆರೆತು ನಿರ್ಮಲವಾಗಿಹುದು, ವಿಶ್ವ

೨೪೮೨ ನೋಟ ದೀಪ ಮಾಡಿ, ಸೂಕ್ಷ್ಮ ಬತ್ತಿ ಮಾಡಿ,
ಚಿತ್ತವೆಂಬ ದೀಪ ಹೊತ್ತಿಸುತ್ತ,
ಪಾಪವೆಂಬ ತಿಮಿರ ಪಾರುಗಾಣಿಸದಿರೆ,
ಪಾಪ ಜಾತಿ ಗುರುವು, ಪಶುವು, ವೇಮ.

೨೪೮೩ ಗುರು ಚರಣವ ಹಿಡಿದ ನಾಯಿ ಅರಚುವುದೇ ?
ಗುರು ಚರಣವ ತೊರೆದು ನಾಯಿಯರಚು ;
ನಾಯಿಗಿರುವ ಗುಣವು ಗುರುವಿಗಿಲ್ಲವೇಕೊ ? ವಿಶ್ವ

೨೪೮೪ ಕಾಗೆಯಿರುವ ಗೂಡು ಕೋಗಿಲೆ ಹೊಕ್ಕಂತೆ,
ಭ್ರಮರ ತನ್ನ ರೂಪ, ಕೀಟವಿಪ್ಪ ರೀತಿ,
ಕೊಡದೆ ಸತ್ಯಮುಕ್ತಿ ಕೆಡಿಪನೇನು ಗುರುವು ? ವಿಶ್ವ

೨೪೮೫ ಕಾಗೆ ಗೂಡಿನಲ್ಲಿ ಕೋಗಿಲೆ ಇರುವಂತೆ,
ಭ್ರಮರವಪ್ಪ ಹುಳದ ಬದುಕಿನಂತೆ ;
ಗುರು ಧ್ಯಾನದ ಬಳಿಕ ಗುರುವೆ ತಾನಾಗುವ, ವಿಶ್ವ

೨೪೮೬ ದೇಶ ವೇಷಗಳನು ಬೇಶಿ ನೋಡಿದೊಡನೆ
ದೇಹನಾತ್ಮದಗಂಟು ಅಡಗಿ, ಬೆರೆತು ;
ವೇಷವರಿಸಿ ನೋಡೆ, ಹೊಟ್ಟೆ ಹೊರೆಯಲಷ್ಟೆ, ವಿಶ್ವ

೨೪೮೭ ಬಳಿ ಸಾರಿ, ಸಾಗರ ಗಮನ ಬಗೆದು ಮನದಿ
ಈಜಿ ದಾಟುತ, ಗುರು ಶಕ್ತಿ ನಿಬಿಡವಾಗಿ,
ಜಪವ ಮಾಡುತ ತನ್ಮಯ ಜಾಡು–ಗಾಣು;
ವಿಮಲ ಗುಣರಾಜ ಯೋಗೀಂದ್ರ ವೇಮನಾರ್ಯ,

೨೪೮೮ ನರರು ಈ ಪೊಡವಿಯಲಿ ನಿಂದೆ ಮಾಡಲೇನು ?
ಒಳ್ಳೆಯವನ ಮೇಲ್ಮೆ ಎಣಿಸಲೇನು ?
ಗುರುವನು ಒಪ್ಪಿಸುತ ಗುರಿ ತಪ್ಪಕೂಡದು, ವಿಶ್ವ

೨೪೮೯ ಈಜಬಹುದು ನೇರ ಏನೇ ಬಾಧೆಯಿರಲಿ,
ಆದಿ ಗುರುವು ಇರದೆ ಅಂಟರಲ್ಲ !
ಕಣಿಯ ಹೇಳಲೇನು ? ಕಾಣು ಮನದಿ ಚೊಕ್ಕ, ವಿಶ್ವ

೨೪೯೦ ಮಿಥ್ಯ ತಿಳಿವಿನಿಂದ ಮೋಕ್ಷ ದೊರಕಬಹುದೆ ?
ಕೈಲಾಗದ ಕೆಲಸ ಗೆಯ್ಯಬೇಡ,
ಗುರುವು ಎನ್ನಬೇಡ ಗುಣಹೀನನಾಗಿರೆ, ವಿಶ್ವ

೨೪೯೧ ಸುಳ್ಳು ಮಾತನಾಡೆ ಸಿಕ್ಕುವುದೇ ಮೋಕ್ಷ ?
ಕೈಲಾಗದ ಕೆಲಸ ಕೊಡದೆಂದು,
ಗುರು ಗಣನೆ ಬೇಡ ಗುಣ ಹೀನನಾಗಿರೆ, ವಿಶ್ವ

೨೪೯೨ ಅರಿಯೆ, ದೋಚುವವನು ಗುರುವು ತಾನೆಂದು,
ತಿರುಗುವವನು ತನ್ನ ತಿಳಿಯಲಾರ,
ಮಾತು ಬೊಗಳೆ ಅಷ್ಟೆ ; ಮೂಳ ದಾಸನ ಮಗ, ವಿಶ್ವ

೨೪೯೩ ತಿಳಿದು ಬರದ ಮಾಯೆ, ತಿಳಿಯಲಾರದ ಮಾಯೆ,
ತಿಳಿದು ತಿಳಿಯದಿರುವ ತಿಳಿವು ಮಾಯೆ,
ಗುಣಗಳೆಲ್ಲ ಮಾಯೆ ಗುರುವೊಬ್ಬ ಹಿರಿ ಮಾಯೆ ! ವಿಶ್ವ

೨೪೯೪ ಶಿಷ್ಯ ವರ್ಗಕೆಲ್ಲ ಶಿವ ಪೂಜೆ ಕಲಿಸದೆ,
ಸಲ್ಲದ ಮತವೆಲ್ಲ ಸೇರಿಸುತಿಹ,
ಗುರುವಿನ ತಿಳಿವರಿಯೆ, ಕುರುಡಾಕಳ ಕರುವಲ, ವಿಶ್ವ

೨೪೯೫ ನರನೇ ಪರಮಾತ್ಮ, ಗುರುವ ಸೇರಿದಾಗ,
ಹಸ್ತದಲ್ಲೆ ಮೋಕ್ಷ ಆಗ ನೋಡು,
ಕಡು ಸಂಪದಗಳಲಿ ಗರ್ವ ಪಡುವ ಜೀವಿ,
ಪರಮವರಿಯಲಾರ ಯಮನ ಪಾಲು ವೇಮ.

---

೨೪೯೬ ಕಸ್ತೂರಿಯನು ನೋಡೆ, ಕಪ್ಪು ಕಾಂತಿಯಹುದು,
ಪರಿಮಳಿಸಲೆಂಥ ಪರಿಮಳವದು !
ಗುರುವು ಆಗಿರುವನ ಗುಣಗಳಿರುತೆನಲ ! ವಿಶ್ವ

೨೪೯೭ ಆರ್ಯರಾದ ಜನರು ಅನುಭವವ ರೂಢಿಸಿ,
ತಿಳಿದು ಹೇಳುತಿಹರು ತೇಟವಾಗಿ,
ಗುರುತುಗಾಣದವನು ಗುರಿಯ ತಿಳಿಸಬಹುದೇ? ವಿಶ್ವ

೨೪೯೮ ಗುರು ಬೃಹಸ್ಪತಿಯು ಸಹಜ ಗುಣವ ಮೀರಿ,
ಚಂದಮಾಮಗಿತ್ತ ಶಾಪ ತಾಪ,
ಗುರುವು ಕೋಪ ತೋರಬಾರದಯ್ಯ ಎಂದೂ, ವಿಶ್ವ

೨೪೯೯ ಒಡವೆಯಿಪ್ಪ ತಾಣ ಒಪ್ಪ ಅರಸೆ ಲಭ್ಯ,
ಒಡೆವೆಯಿರದ ತಾಣ ಹುಡುಕಲೇಕೆ ?
ಅಂಜನಾದಿ ಇರದೆ ಆ ಒಡವೆ ಸಿಕ್ಕದು, ವಿಶ್ವ

೨೫೦೦ ಬ್ರಹ್ಮಾಂಡವೆನ್ನಲು ಪಟ್ಟಣವು ಒಳಗೇ,
ಬ್ರಹ್ಮವರಿಯದಿರಲು ಬ್ರಾಹ್ಮಣನೆಂತು ?
ತನ್ನ ಮನವರಿತೊಡೆ ತಾನೆ ಹೋಗು ಬ್ರಹ್ಮ, ವಿಶ್ವ

೨೫೦೧ ನೀವು ಇರುವ ಜಾಗೆ ನೆಲೆಯ ತಿಳಿಯುವವನು,
ವಸುಧೆಯಲ್ಲಿ ಹಾದಿ ವಿಮುಖನಿರದೆ,
ಕಾಲು ಕದಲದಿನ್ನು ಗಕ್ಕನೆ ಸೇರಿಕೋ, ವಿಶ್ವ

೨೫೦೨ ಬ್ರಹ್ಮನಿರುವ ತಾಣ ಪರೀಕ್ಷಿಸಿ ತಿಳಿಯದೆ,
ಎಲ್ಲೊ ಅರಸೆ, ಬ್ರಹ್ಮ ಎಂತು ಸಿಗುವ ?
ಅಂಜನಿರದೆ ಯಾವ ಒಡವೆ ದೊರಕಬಹುದು ? ವಿಶ್ವ

೨೫೦೩ ಬಳಿ ಸಾರಿ, ಸಾಗರ ಗಮನ ಬಗೆದು ಮನದಿ,
ಈಜಿ ದಾಟುತ ಗುರು ಶಕ್ತಿ ನೇರಗಂಡು,
ಜಪವ ಮಾಡುತ ತನ್ಮಯ ಜಾಡುಗಾಣು,
ಮಾನಸವ ಸ್ಥಿರಗೊಳಿಸುವುದೆ ಮೇಲು ವೇಮ,

೨೫೦೪ ಈ ಕಪಟ ನಾಟಕವನ್ನು,
ಈ ಕಪಟ ಓದು, ಎಲ್ಲವು ಇಂಪಾಗಿರಲು,
ಎ ಕಪಟಾತ್ಮನು ಗೆಯ್ದನೊ ?
ಆ ಕಪಟಾತ್ಮನಿಗೆ ಮಣಿದು ತಣಿವುದು ವೇಮ,

೨೫೦೫ ತಂತ್ರ ಮಂತ್ರಗಳನು, ತಾರಕವನು ಹೊಂದಿ,
ಯಂತ್ರ ಬಲದಿ ಗುರುವಿನ ಮಂತ್ರ ಗೆಯ್ದು,
ಚಿಂತನದೊಳಿರೆ ಸತತ ಚಿನ್ಮಯ ತಲುಪುವನು, ವಿಶ್ವ

೨೫೦೬ ವ್ಯಾಧಿ ಬಂದ ಕಾಲ ವೈದ್ಯನಿತ್ತ ಮದ್ದು,
ತಿನ್ನದಿರಲು ವಾಸಿಯಾಗದೆಂದು,
ಅಂತೆ ದೀಪ ಉರಿಯೆ ಕತ್ತಲು ಸರಿಯದೇನು ? ವಿಶ್ವ

೨೫೦೭ ಅನುತನುತಿರೆ ರಾಗ ಅತಿಶಯ ಇಂಪಾಯ್ತು,
ಬಹಳ ಬಾರಿ ತಿನಲು ಬೇವು ಸಿಹಿಯು,
ಸಾಧನದಿಂ ಕಾರ್ಯ ಸಿದ್ಧಿಯಹುದು ಜಗದಿ, ವಿಶ್ವ

೨೫೦೮ ಎಷ್ಟೊ ವೇಷಗಳಿಗೆ ಅರಿವೆ ಮೂಲವಿಹುದು,
ಯಮನ ಗೆಲ್ಲಬೇಕು ಸಮಯವರಿತು,
ಕಳ್ಳ ವಾಸ ಹೊರತು ಕಂಡುಕೊಳನು ಸೌಖ್ಯ, ವಿಶ್ವ

೨೫೦೯ ಅಹಂ ಮೀರಲಾರ ಅತುಲ ಜನ್ಮಗಳಲಿ,
ಅರಸಿ ಹೇಳಿರಯ್ಯ ಯಾರೆ ಇರಲಿ !
ಅಲ್ಲಿ ಇಲ್ಲಿ ಅನುವು ಅತಿಶಯವಾಗಿ ಉಂಟು, ವಿಶ್ವ

೨೫೧೦ ಗುರುವು ಪರಮ ಗುರುವಿನ ಗುರುತಪ್ಪು ತಿಳಿಯದೆ,
ಗುರುವು ತಾನು ಉಂಟು, ಕುರುಡನಂತೆ,
ಗುರುವಿಗೂ ಗುರುವಿಹ ಗುರುವು ಪ್ರಾಣೇಶನು, ವಿಶ್ವ

೨೫೧೧ ಈ ಲೋಕ ಚಿಹ್ನೆಯೆಲ್ಲವು,
ಮೇಲ್ಮೆಯ ಗುರುಶಕ್ತಿ ಕೂಡಿ ಗಗನವ ತಲುಪರ್,
ಕಾಲನೆದುರಾಗಲು ಮತ್ತೆ,
ಸಾಲವೆ ಜನ್ಮಂಗಳೆಂದು ಘೋಷಿಸು ವೇಮಾ.

೨೫೧೨ ಶುದ್ಧ ಪರಿಪೂರ್ಣ ದೃಷ್ಟಿಯಲಿ ಸುಸ್ಥಿರಾಗಿ,
ಇದ್ದು ನಿರ್ಗುಣ ಹೊಂದುತ ನಿರ್ಮಲಾಗಿ,
ಗದ್ದುಗೆಯನೇರಿ ಬ್ರಹ್ಮವನು ಕಾಣಬಹುದು ;
ಸುದ್ದಿಯೇತಕೆ ? ಗುರು ಸೇರಿ ಶ್ರಮಿಸು ವೇಮ.

೨೫೧೩ ಬೂಟಕವು ಹುಟ್ಟಿ ಸಾವುದು ಭೂಮಿಯಲ್ಲಿ,
ನಾಟಕವಯ್ಯ ಬದುಕುವುದು, ನಾಣ್ಯದಿಂದ,
ಕೂಟವನುವರಿವ ಗುರಿ ಸೇರಿ ಕಾಣಬೇಕು,
ದಾಟಿ, ಪರದೆ ಹರಿ, ಪರತತ್ತ್ವದಲ್ಲಿ ವೇಮ,

೨೫೧೪ ಅರಸಿ ನೋಡಿದೊಡನೆ ಅಖಿಲ ಲೋಕಂಗಳು,
ತನುವಿನಲ್ಲಿ ಉಂಟು, ತಿಳಿದು ಕಾಣು,
ಮನಸಿನಲ್ಲಿಹ ಗುರು ಮತ್ತೆ ಮುಟ್ಟಿ ಕಾಣು, ವಿಶ್ವ

೨೫೧೫ ಕಟ್ಟಿಕೊಟ್ಟರೆ ಸಿಕ್ಕದು ಕರ್ಮ ಫಲವು,
ಮುಟ್ಟಿ ದಾಟಿದ ಮನುಜನ, ಮುಖ್ಯವಾಗಿ,
ಗುಟ್ಟನು ತಿಳಿಸುವಾತನ ಕೂಡಬೇಕು,
ರಟ್ಟು ಆದೊಡೆ ಕೇಳೆಲೊ ಜಗದಿ ವೇಮ,

೨೫೧೬ ಅಕ್ಷರಾತ್ಮಕದಲಿ ಅಮೃತ ಪಾನಗಳಿಗೆ,
ರಕ್ಷಕತ್ವಗಳಿಗೆ ರಾಜ ಹಂಸ,
ದೀಕ್ಷೆಯೊಳಗೆ ದೀಕ್ಷೆ, ತಿಳಿದು ಅಂಟಿ ನೋಡಿ, ವಿಶ್ವ

೨೫೧೭ ಮಂತ್ರವು ಸದ್ಗುರು ಚಿಂತನ,
ಮಂತ್ರಾರ್ಥವು ಅವನ ವಿನಾಶ, ಮನ್ಮಯನಿರುತಾ
ಮಂತ್ರಾಧಿಕನಿಹ ಸದ್ಗುರು,
ಮಂತ್ರದ ಮೂಲಕ ಕಂಡು ಬಯಲನರಿ ವೇಮಾ,

೨೫೧೮ ಸಾವಿರ ಕ್ರತುಗಳ ಮಾಡೆ ಸಲ್ಲ ಸಂತಸ ಮೀರಿ,
ಮಾಳ್ಪ ಕ್ರಿಯೆಯೆಲ್ಲ ಗುರುಭಕ್ತಿ, ಮನಸಿನಲ್ಲಿ
ತಪ್ಪದಿಪ್ಪುದೆ ಮುಕ್ತಿಗೆ ಒಪ್ಪ ಹಾದಿ,
ಆಯ್ತು ನ್ಯಾಯ ಮಾರ್ಗ ಇದುವೇ ಅವನಿಲಿ, ವೇಮ,

೨೫೧೯ ಊರ್ಜಿತಾನಂದ ಪರಿಪೂರ್ಣ ಯುಕ್ತಿಯಲ್ಲಿ,
ಸ್ವಾರ್ಜಿತವಾದ ಗುರುಭಕ್ತಿ ಸಮನಿಸುತ್ತ,
ದುರ್ಜಯವಾದುದ ತೊಲಗಿಸೆ, ತೊಲಗಬಹುದೆ ?
ಅರ್ಜಿಸಬೇಕು ಮುಕ್ತಿಯ, ಅರಿಯೊ, ವೇಮ,

೨೫೨೦ ಅತ್ತ ಇತ್ತ ನೋಡೆ ಅಂಟಿತು ಗುರುಭಕ್ತಿ,
ಪ್ರಚುರಗೊಂಡು, ಆತ್ಮ ಬಯಲು ಮಾಡಿ,
ರುಚಿಕರಾಗಿ ಸುಜನರಚಲರಾಗಿ ತೋರ್ಕು, ವಿಶ್ವ

೨೫೨೧ ಸಾಹಸದಿಂದಿರಲಿ, ಸತ್ಯದಿಂದ ಇರಲಿ,
ಮೋಹ ಬುದ್ಧಿ ತೊರೆದು, ಮುಕ್ತಿಯರಿತು,
ಸೇರಿಸಿ ಮನದಿ ಗುರುವ ಶೀಘ್ರವಾಗಿ ಇಹುದು, ವಿಶ್ವ

೨೫೨೨ ತಾವು ಮಾಡಿದ – ಪಾಪಗಳು ತೊಲಗಲೆಂದು
ಹುಟ್ಟಿ ಸಾವರು ಮತ್ತೆ ಹುಟ್ಟುತಿಹರು,
ಗುರುವ ಸೇರುತ ಬೇಡಿ ತಾ ಕೋರುತಿದ್ದು,
ಹುಟ್ಟು–ದುಃಖವು ಕೊನೆಗಳಿದು ಹೋಯ್ತು ವೇಮ,

೨೫೨೩ ದೇಹ ಆತ್ಮಗಳು ಬೇರೆಂದು ತಿಳಿಯದಿರಲು,
ಮೋಹದಲಿ ಸಿಲುಕಿ ನಿದ್ರೆಯೊಳು ಮುಳುಗದಿಹನೆ ?
ಸಾಹಸದಿಂದ ಗುರು ಭಕ್ತಿ ಸಲಿಸಿರೆ ಲೇಸು,
ಬಿಡಿಸಿ ಮಾತುಗಳ ತಿಳಿವುದು ಬೇಗ ವೇಮ.

೨೫೨೪ ದಿವ್ಯ ಪರತತ್ತ್ವದಲಿ ಜ್ಞಪ್ತಿ ಧೀಯೊಳುದಿಸಿ,
ಮರಳಿ ಪುಟ್ಟಲು, ಗುರು ಭಕ್ತಿ ಮಹಿಮೆಯಿಂದ,
ಅಕ್ಷಯಾತ್ಮಕ ಪರನಾಗಿ ಅಮಲನಾದ ;
ಯಾವ ಮಲಿನ ಮಾತಿಗಂಟ ಎಂದ ವೇಮ,

೨೫೨೫ ನಿಂದಿಸುತ ಭ್ರಮೆ ಹೊಂದದೆ,
ಅಂದದಿ ಮನದಲ್ಲಿ ಸೇರಿ, ನಯದಿಂದಲಿ ತಾ
ಚೆಂದದರಿತು ಗುರು ರಹಸ್ಯ,
ಸಂದೇಹವಿರದೆ ಪೂರ್ಣನೆ ಆಗಿರು ವೇಮಾ,

೨೫೨೬ ಪಿಡಿದ ಕೊಂಬೆ ಬಿಡದೆ, ಪಡದೆ ಕಳವಳವನು,
ಗುರುವನಿಂತು ಬೇಡಿ, ಗುಟ್ಟನರಿತು,
ನಿಟ್ಟ ನಿಲುವ ಕಂಡು, ನಿರ್ಗುಣತ್ವ ಹೊಂದು, ವಿಶ್ವ

೨೫೨೭ ಹರುಷ ಭೋಗವ, ಭಾಗ್ಯಗಳ ಹೊಂದಬಹುದು,
ರಾಗ–ವೈಷಮ್ಯಗಳೆರಡನ್ನೂ ಕಡಿದು
ವೇಗದಿಂದ ಮನದಿ ಗುರು ಭಕ್ತಿ ಬೀಗುತಿರಲು,
ಯೋಗಿವರರಿಗೆ ಸಮನಾದ ಯಶವು ವೇಮ !

೨೫೨೮ ದಿವ್ಯವಾದಂಥ ಪರ ಶಿವ ತೇಜ ಹೊಂದಿ,
ಭವ್ಯವಹ ಯುಕ್ತಿ ಮನದಲ್ಲಿ ಭದ್ರ ಪಡಿಸಿ,
ಸೇವ್ಯನಾಗಿರುತಿರಲು ಮುಕ್ತಿ ಸ್ಥಿರವು ಕಾಣು ;
ಕಾವ್ಯದಲಿ ಇರದು ಗುರು ಬೋಧೆ, ಕಾಣು ವೇಮ,

೨೫೨೯ ದುರಿತಗಳನೆಲ್ಲ ಖಂಡಿಸುತ ಗುರುವ ಸೇರಿ,
ಪರಮ ನಿರ್ಗುಣ ಮನನವನು ಪೂರ್ತಿಗೊಳಿಸಿ,
ಗುರು ತರಂಗಗಳ ಗುಣಗಳ ಗಳಿಸಿಕೊಂಡು,
ಪರಶಿವನೆಂದು ಭಾವಿಸು ಪೊಡವಿ ವೇಮ,

೨೫೩೦ ನಾಟುತ ಗುರುವರ ಮಂತ್ರವ,
ನೀಟದಿ ಮನದಲ್ಲಿ ಸೇರಿಸಿ ಧೀರನೆನಿಸುತಾ
ದಾಟು ಸ್ವರೂಪ ಧಾಮಕೆ,
ಕೋಟಿಗೆ ಬೆಂಬತ್ತಲೇನು ಕುದುರದು ವೇಮ,

೨೫೩೧ ನಿಜ ಗುರು ಲಕ್ಷ್ಯವನಿರಿಸುತ,
ಅಜಪಾದಿ ಕ್ರಿಯೆಯ ಮೀರಿ, ಅಳಲನು ಪಡದೇ,
ನಿಜ ನಿರ್ಮಲಾನಂದದಿ,
ಸುಜನನೆಣಿಸೆ ತರವು, ಸರಳದಿ, ವೇಮಾ,

೨೫೩೨ ಚಿಮ್ಮಿನುಗಿಸಿ ಅರಿವ, ಚಿತ್ತವನು ಅಗ್ನಿಗಿಟ್ಟು,
ಕಣ್ಣಿಗಿಂಪಾದ ಗುರು ಶಕ್ತಿ ಗಗನ ಸೇರಿಸಿ,
ದ್ವಂದ್ವ ತೊಡೆಯಲು ಘನನವನು ತಾನು ಜಾಣ,
ಬಂಟ ತನ್ನ ಮನದಿ ಪರಮನಲಿ ಬಯಸು ವೇಮ,

೨೫೩೩ ಸಾಧನೆಗಳಿರದೆ ಸಿದ್ಧಿಸದಾವುದು
ಬೋಧೆಯಿರದೆ ವಿದ್ಯೆ ಬಾರದೆಂದು,
ದೃಢವಾಗಿ ಮನದೊಳು ತಾಳಿ ಭಾವ, ನೋಡು, ವಿಶ್ವ

೨೫೩೪ ತಿಳಿಸುವವನು ಯಾರೊ ? ತಿಳಿಯುವವನು ಯಾರೊ ?
ಗುಟ್ಟು ಅರಿತ ಮೇಲೆ ಬಟ್ಟ ಬಯಲು,
ಜಲದ ಭಾಂಡೆಯಲ್ಲಿ ಸೂರ್ಯ ಬಿಂಬದಂತೆ, ವಿಶ್ವ

೨೫೩೫ ಹಾಲು ಕುಡಿದೊಡಾಗ ಪ್ರಾಣ ರಕ್ಷಿಸುವುದು ;
ಹಾಲು ಕುಡಿಯದಿರಲು ಬಳಲಿಕಾಯ್ತು,
ಹಾಲಿನಿಂದ ಮುಕ್ತಿ ಫಲವ ಹೊಂದದಿಹರೆ ?
ಬಹಳ ರೋಗ ಪಡುವ ಭುವಿಲಿ ವೇಮ,

೨೫೩೬ ತಾಯಿ ತಂದೆ ತಿಳಿಯೆ ತನಗೆ ಮೊದಲು ಗುರುವು,
ಪಾರ್ವತಿ ಭವರೆಲ್ಲ ಪರಮ ಗುರುವು,
ಕೂಲಿ ಕೊಳ್ಳುವವನ ಗುರುವೆನಲು ದ್ರೋಹ, ವಿಶ್ವ

೨೫೩೭ ಧರೆಯ ಜನರಿಗೆಲ್ಲ ಸರಿಯಾಗಿ ತಿಳಿಸುವೆ,
ಒಪ್ಪುವ ಹರನರಿಯುವ ಉಪಾಯವನು,
ಮನಸು ಚದುರದಂತೆ ಮಹಿಮೆಯಿಂದ ಕಾಣು, ವಿಶ್ವ

೨೫೩೮ ನೋಡಲೇಕೆ ವೇದ ? ಮಾಡಲೇಕೆ ವಾದ ?
ಅದುವೆ ತತ್ತ್ವ ; ತಿರುಗೆ ಆತ್ಮದೊಳಗೆ,
ಗೂಡು ಕಟ್ಟಿಯುಂಟು, ಗುರುವೊಬ್ಬನರಿವನು ! ವಿಶ್ವ

೨೫೩೯ ಗುರುವು ಇರದೆ ವಿದ್ಯೆ ಗುರುತಾಗಿ ದೊರಕದು,
ದೊರೆಯು ಇರದೆ ಧರೆಗೆ ತೃಪ್ತಿಯಿಲ್ಲ,
ಗುರುವು ವಿದ್ಯೆಯಿರದೆ ಗುರುತರ ದ್ವಿಜನೆಂತು ? ವಿಶ್ವ

೨೫೪೦ ಕೆಡುಕು ಗುಣಗಳೆಲ್ಲ ಕೈ ಹಿಡಿದು ಶಿಕ್ಷಿಸಿ,
ಪರಮ ಪದವಿಯನ್ನು ಪ್ರತ್ಯಕ್ಷಿಸುವ,
ಅಂಥ ಗುರುವ ಬೇಡಿ, ಅಪರೋಕ್ಷವ ಹೊಂದು, ವಿಶ್ವ

೨೫೪೧ ಗುರುವಿಲ್ಲದೆ ವಿದ್ಯೆ ಗುರುತಾಗಿ ಸಿಗದು,
ದೊರೆಯಿಲ್ಲದೆ ಧರೆಯು ತೃಪ್ತಿ ಪಡದು,
ಗುರುತರ ದ್ವಿಜನೆಂತು ? ಗುರು ವಿದ್ಯೆ ಹೊರತು ? ವಿಶ್ವ

೨೫೪೨ ಗುರುವಿನ ಶಿಕ್ಷೆಯಿರದೆ, ಗುರುತು ದೊರೆವುದೆಂತು ?
ಆಜನೆ ಇರಲಿ ; ಅವನ ಅಪ್ಪನಿರಲಿ,
ಬೀಗದ ಕೈ ಇರದೆ ಬೀಗ ತೆರೆವುದೆಂತು ? ವಿಶ್ವ

೨೫೪೩ ಮುಕ್ತಿಗಾಣದಂಥ ಮೂರ್ಖ ಜನರಿಗೆಲ್ಲ,
ಬಟ್ಟ ಬಯಲು ಮಾಡಿ ಪರಮ ತಾಣ,
ದಾರಿ ತೋರ್ಪ ಬುಧರು ದೈವ ತಾನೆನಿಸರೆ ? ವಿಶ್ವ

೨೫೪೪ ಇಹದೊಳಗೆ ಗುರುವಿಗೆ ಈ ದೇಹವ ನೀಡೆ,
ಪರವ ನೋಡಿ, ಗುರುತು ಹಿಡಿದು ಕೊಡುವ,
ಸ್ಥಿರವಾಗಿಸಿ ಬುದ್ಧಿ ಚಲಿಸದಂತೆ ನೋಡು, ವಿಶ್ವ

೨೫೪೫ ಪರುಷಸೋಂಕೆ ಬಂಗಾರವಾದಂತೆ,
ಕಪ್ಪುರವು ಜ್ಯೋತಿ ಕೂಡಿದಂತೆ,
ಪುಷ್ಪದಲ್ಲಿ ಗಂಧ ಬೆರೆತ ಹಾಗೆ ಮುಕ್ತಿ, ವಿಶ್ವ

೨೫೪೬ ಸೋಂಕಿ ಪರುಷ ಸ್ವರ್ಣವಾದ ಕಬ್ಬಿಣದಂತೆ,
ಕಪ್ಪುರದಿ ಜ್ಯೋತಿ ಕಲೆಯುವಂತೆ,
ಹೂವಿನೊಳು ವಾಸನೆ ಹೊಂದಿಕೊಂಡಂತೆ, ವಿಶ್ವ

೨೫೪೭ ಗುರುವು ಕಶಕ ಬೀಜ ಕುಂಭದಂತೆ ದೇಹ,
ಆತ್ಮಕಲುಷ ರಾಡಿ, ಆಳಕಿಳಿಯೆ,
ತಿಳಿದು ವಿಂಗಡಿಸಲು ದಿವ್ಯಾಮೃತದುದಯ ! ವಿಶ್ವ

೨೫೪೮ ಲೋಕಗಳಿಗೆ ಗುರುವು, ಲೋಗರಿಗೂ ಗುರುವು,
ಅದನೆ ತಿಳಿಯೆ, ಮೋಕ್ಷ ಆಯ್ತು ಪ್ರಾಪ್ತಿ,
ಗುರುವನರಿಯದಿರಲು ನರಕ ಕೂಪಕಿಳಿವ, ವಿಶ್ವ

೨೫೪೯ ವಾಕ್ಕಿನಲ್ಲಿ ಗುರುವು, ವಾಕ್ಯತ್ವವು ಗುರುವು,
ಕತ್ತಲಲ್ಲಿ ಗುರುವು, ಸಿಕ್ಕು ಇರುವ,
ಅಖಿಲಕೆಲ್ಲ ಗುರುವು ಆಧಾರವಾಗಿಪ್ಪ, ವಿಶ್ವ

೨೫೫೦ ವಕ್ಷದೊಳು ಗುರುವ ವೀಕ್ಷಿಸು ಸರಿಯಾಗಿ,
ರಕ್ಷಕನವನೆನುವುದೆ ರಾಜ ಮಾರ್ಗ,
ಅಕ್ಷಮೂಲ ಜಪವು ಅವನಿಗಳ್ಗರ ಪರಿ, ವಿಶ್ವ

೨೫೫೧ ಸದ್ಗುರು ಸುಜ್ಞಾನದಲ್ಲಿ,
ಸದ್ಗತಿ ದೀಪ್ತಿಸುವೊಡೆ ಸಾಕಷ್ಟು ಪಠಿಸಲಾ,
ಸದ್ಗತಿ ಪಡೆವಂತೆ ಮಾಳ್ಪ,
ಸದ್ಗುರುವೆ ದೇವರೆಂಬುದ ಕಾಣಾ ವೇಮಾ,

೨೫೫೨ ಹುಟ್ಟಿದೊಡನೆ ನಾಭಿ ಪಟ್ಟಿ ಕೊಯ್ಯುತಿರಲು
ಆಗ ಗುರು ಮುದ್ರೆಯಾಣತಿ ಪಡೆ,
ಮುದ್ರೆ ಇಲ್ಲದವರು ಮೂಜಗದೊಳಗಾರು ? ವಿಶ್ವ

೨೫೫೩ ಉಪಮೆಯಿಂದ ಗುರುವ ತಪದಲ್ಲಿ ಕಾಣದೆ,
ಜಪವ ಗೆಯ್ಯುವವನು, ಚಪಲನಾದ,
ನೆಪ ಹೇಳದೆ ಮಿಂಚಿ ನೋಡಿರರಿತುಕೊಂಡು, ವಿಶ್ವ

೨೫೫೪ ವ್ಯಾಪಿಸಿ ಇರುತಿಹ ಲೋಕವ
ಪ್ರಾಪ್ತಿಸದೆ, ಗುರುವ ಬೇಡುತ ಬಹು ತಂತ್ರಗಳಿಂದ,
ಕೃಪೆ ಹೊಂದಿ ಮನ ನಿಲಿಸುತಿರು,
ರೂಪವು ಬಟ್ಟ ಬಯಲಾಯ್ತು, ರೂಢವು ವೇಮಾ,

೨೫೫೫ ವಿಶ್ವ ಕರ್ಮ ಗುರುವು ವಿಶ್ವವಖಿಲಕೆಲ್ಲ,
ಪ್ರಣವ ಮಂತ್ರವೊಂದೆ ಪರಮ ಗುರುವು,
ಕರ್ಮಕಾಗ ಗುರುವು ಗಾಯತ್ರಿ ಮಂತ್ರವೇ, ವಿಶ್ವ

೨೫೫೬ ಮೋಹ ಜಲಧಿಯಲ್ಲಿ ಮುಳುಗಿ ಸಾಯುವ ಹೊರತು,
ಹರಿ ಪರಾಯಣತ್ವ ಹೊಂದಲಿಲ್ಲ,
ಮುಟ್ಟಿ ಗುರು ಪಾದವ ಮೂಲ ಹೊಂದಬೇಕು, ವಿಶ್ವ

— — — — — — — — — — — — — — — — — — — — — —

೨೫೫೭ ಊರು, ಕಾಡು, ತಿರುಗಿ ಇರುವುದನು ಕಾಣದೆ,
ಹೋರಿ ಗುರು ಕಾಣದೆ ಹೊಂದಿ ಕೊಳದ,
ಗೊಂದಲವನು ಕಾಣು ಗಡಬಡಿಸಲೇಕೆ ? ವಿಶ್ವ

೨೫೫೮ ಗುಹೆಗಳು ಹದಿಸಾಸಿರ ಹೊಗಲು ಗುಣವಳಿಯದು,
ನಿಯತ ಗುರುಭಕ್ತಿಯು ಬೇಕು, ನಿಖಿಲ ಕಲಿತು,
ಮಹಿಯಲಿ ಪರತತ್ತ್ವ ಭಾವವು ಮಧುರವಿಹುದು,
ಅದನು ಸಾಧಿಸುವುದಕೆ, ಮತ್ತೆ ಹೆಣಗು ವೇಮ,

೨೫೫೯ ಒಪ್ಪಗಾಣು ಮುಕ್ತಿ ಒಡನೆ ಪಡೆಯಬಹುದು,
ಯೋಗಿಯಲ್ಲವೆ ಗುರು ? ಹೋಗಿ ನಮಿಸಿ,
ನಿಖಿಲ ಬುದ್ಧಿಯದುಮಿ ವಿಲಯ ಹೊಂದೆ ಲೇಸು, ವಿಶ್ವ

೨೫೬೦ ನರನು ಪರಮಾತ್ಮ, ಗುರುವ ಸೇರಿದಾಗ,
ಹಸ್ತದಲ್ಲಿ ಮೋಕ್ಷ ಒಡನೆ ತೋರ್ಪ,
ಪರಮನನರಿಯದಿರೆ, ಪಾಲು ಯಮಗೆ ವೇಮ,

೨೫೬೧ ವೇದಾಂತ ಸಾರ ಗುಣ ಸಂ–
ವಾದಿತನಹ ಗುರುವ ಬೇಡಿ ಪರಿಪೂರ್ಣನು ತಾ,
ಮೋದದಲಿ ಗುರಿಯನಿರಿಸುತ,
ಸಾಧನದಲಿ ಮುಕ್ತಿಯುಂಟು; ಸತ್ಯವು ವೇಮಾ,

೨೫೬೨ ಗುಟ್ಟು ಗುರು ಭಕ್ತಿಯೊಳು ಮುಟ್ಟಿ, ಗರ್ವ ಪಡದೆ,
ಜೆಟ್ಟಿಯಂತೆ ಹೋರಿ, ಒಳ ಮರ್ಮ ಶ್ರೇಷ್ಠವೆನುತ,
ತಟ್ಟನೆ ಕಂಡು ಮೀರಿ ನಡೆ ; ಆಣೆ ಮರೆಯೆ
ಗಿಟ್ಟುವುದೇನು ಹರಟೆಯಿಂದ ಗಳಿಕೆ ? ವೇಮ,

೨೫೬೩ ಗುರೂಪದೇಶ ಯುಕ್ತಿಗಳ ಕೂಡಿ, ಮೀರಿ,
ಮರೆಯದಂತಿರೆ, ನಿಜವಾಗಿ ಮಹಿಮನಪ್ಪ,
ಸಾಧಿಸುತಿರುವನು ಶಿವಯೋಗಿ ಸಿದ್ಧಿಯಿಂದ,
ಪರವ ಸಾಧಿಸುವುದಾತಗೇರ್ಪಾಟು ವೇಮ,

೨೫೬೪ ಸೀಸಃ ಗುರುಬೋಧೆ ತಿಳಿಯದ ಕುಟಿಲ ಶಾಸ್ತ್ರಂಗಳ,
ಪರಿಕಿಸಿದೊಡೆ ಏನು ಫಲವು ಉಂಟು ?
ಆತ್ಮೈಕ್ಯವರಿಯದೆ ಅಖಿಲ ಯೋಗಗಳು,
ಸಾಧಿಸುವ ಫಲವೇನು ಸತ್ಯವಾಗಿ ?
ತನ್ಮಯತ್ವವನು ತಾನರಿಯದೆ ನರನು
ಸೇವೆ ಗೆಯ್ದೊಡೆ ಏನು ಸಿದ್ಧಿ ಉಂಟೆ ?
ತಮ್ಮ ಕುಂದನರಿಯದೆ ತಾನೊಂದು ಬಹಳ
ಓದಿದ ಫಲವೇನು ಒಪ್ಪವಾಗಿ ?
ತೇಟ : ನುಡಿವ ಸದ್ಗುರು ಬೋಧೆ ನಿತ್ಯವರಿತು,
ಮರೆಯದಿರುವಂಥವರು ಮಾಯವಾಗಿ
ಅಂಟರೆನ್ನುತಿಹರು ; ಅಂದವಾಗಿ,
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ,

೨೫೬೫ ಉಚಿತಾಹಾರಗಳಿಂದಲಿ
ಉಚಿತ ಬುದ್ಧಿ ಸ್ಥಿರತೆಯ ಹೊಂದಿದ ತೆರದಿಂ,
ಉಚಿತ ಗುರು ಬೋಧೆ ಪಡೆಯುತ,
ಸುಚರಿತನಾಗಿ ಪರವ ಕಾಣಬೇಕೈ ವೇಮಾ,

೨೫೬೬ ಯಾರಿರಲಜ್ಞಾನ ತಿಮಿರವ ನೀಗಿಸುತ್ತ,
ಜ್ಞಾನ ಜೊನ್ನೆಯನೊಪ್ಪವಾಗಿ ಮಾಡುತಿರಲು,
ಚಂದ್ರ ತೆರ ಗುರು ಬಳಿ ಸಾಧನದಲಿ ತಾನು
ಕೂಡಿ ಇದ್ದೊಡೆ, ತೀರುವುದು ಕೋರ್ಕೆ, ವೇಮ !

೨೫೬೭ ಕಪಟವುಡಿಗಿ ಗುರುವಿಗೊಪ್ಪ ಪಥವ ಹಿಡಿದು,
ಉಪಮೆಯೊಡನೆ ಭಕ್ತಿ ಉಂಟು ಮಾಡಿ,
ತಪವರಿತೊಡಾಗ ಧನ್ಯತೆಯುಂಟಾಯ್ತು, ವಿಶ್ವ

೨೫೬೮ ಯಾವುದಿರಲಿ ಪಾಪ ಜವದಿ
ಹೋದುದು ಗುರುವರ್ಮದಿಂದ ಬ್ರಹ್ಮಜನ್ಮತತಿಂ
ಓವಿಯಡಗಿ ತೋರಿಕೆಗಳ್
ಕಾವವನೆ ; ಮನದಲಿ ಬೆಳಗುವ ಘನವ ವೇಮಾ,

— — — — — — — — — — — — — — — — — — — — — —

೨೫೬೯ ಉತ್ತಮ ಜ್ಞಾನ ನಿಲಯದಂತೆ ಉಪಮೆಯಿಂದ,
ಭಕ್ತಿ ಸಾಧಿಸುತ ಪೂರ್ಣತೆ ಪಡೆಯಬಹುದು,
ಮುಕ್ತಿಗನುಗುಣ ಗುರುವಾಜ್ಞೆ ಮೊದಲಿಗಯ್ಯ !
ಅದು ಲಭಿಸಿದೊಡೆ, ಲಭ್ಯ ಅಖಿಲ ವೇಮ,

೨೫೭೦ ಪರಮಾತ್ಮನ ವಿವರಿಸಲ್ಕೆ,
ವಿರಳವು ! ಅಣುರೇಣುವಿನಲಿ ಅತಿಸೂಕ್ಷ್ಮಗತಿಂ,
ಪರಿಕಿಸುವನೆಲ್ಲ ರೂಪವ
ಗುರುವೇ ತಾ ಬೆಳಗುತಿರುವ ಗುರುತನು ವೇಮ,

೨೫೭೧ ಇಹದಲಿ ಎನಿತೆನಿತೊ ಇರುಸು–ಮುರುಸು ಇರಲು,
ಪರಮ ಸಾಧನಕ್ಕೆ ಪಥವು ಅಲ್ಲ,
ಗುರುವ ಯುಕ್ತಿ ಮೀರಿ, ಗುರುತಿಸಿ ಕಾಣಿರೋ, ವಿಶ್ವ

೨೫೭೨ ಇತರಾಪೇಕ್ಷೆಗಳಳಿದೊಡೆ,
ಸತತ ಗುರು ಭಕ್ತಿ ಯುಕ್ತಿಗಳ ಸಾರ ಕಾಣಲ್,
ಗತಿಯು ಬ್ರಹ್ಮಾನಂದಕೆ
ಮತಿಗಿಂಪಾಗಿ ದೊರೆಯುವುದು, ಮಹಿಯಲಿ, ವೇಮಾ,

೨೫೭೩ ಜನ್ಮ ಸಾಫಲ್ಯವನು ಕೋರಿ, ಜಯವ ಹೊಂದಿ,
ತನ್ಮಯತೆಯೊಳಿರೆ, ಗುರು ಸೇರಿ ತಿಳಿವು ನಿಲಿಸಿ,
ಮನ್ಮಯಾನಂದ ಪರಿಪೂರ್ತಿ ಮರೆಯ ಸೇರಿ,
ಚಿನ್ಮಯಾಕೃತಿ ಕಾಣುವುದೆ ಚೊಕ್ಕ ವೇಮ,

೨೫೭೪ ತೃಪ್ತಿ ತುಂಬಿ ಗುರುವ ಧ್ಯಾನಿಸಿ ಮನದೊಳಗೆ,
ತನುವ ಮರೆತು, ಗುರುವ ತಲುಪಿದಾಗ,
ತೊಳಗುತಿಹುದು ಬ್ರಹ್ಮ ತತ್ತ್ವವೆನುವರದನ, ವಿಶ್ವ

೨೫೭೫ ಚರ್ಚೆ ಮೀರಿದ ಜ್ಞಾನವನು ಸಂರಕ್ಷಿಸುತ,
ಮೂರ್ಛೆ ಹೊಂದಿದ ರೀತಿಯಿರೆ ಮುಕ್ತಿಯುಂಟು,
ಕುರಿತು ಮೆಚ್ಚಲು ಗುರಿದಾಟಿ ಕೋವಿದಾದ,
ಗುರು ದಡ ಸೇರಿಸಲು ತೀರಿತು, ಕಾಣು ವೇಮ,

೨೫೭೬ ಅಳವಿಗೆಟುಕದ ಪದ ಆ ಬ್ರಹ್ಮವೆಂದರು,
ಹೊಂದಲಾರರೆಂದು ಅಂದರಿಹದಿ,
ಗುರು ಕರುಣೆ ಹೊಂದಲು ಕೂಡಿಬಾರದೇನು ? ವಿಶ್ವ

೨೫೭೭ ಪರಮ ಗುರುವರ ಮಂತ್ರಸಿದ್ಧಿಯ ಪಾಲುಗೊಳ್ಳುತ ಅಪ್ಪರೈ,
ಉರದೊಳಗೆ ಗುರಿ ಬಯಲು ತಾಕುತ ಒಲಿದು ಹತ್ತಿ ಹೊಂದುತಾ,
ಕರತಲಾಮಲಕವದು ಬ್ರಹ್ಮವು; ತೂರಿ ಬಪ್ಪದು ಪ್ರಜ್ಞೆಯೋಳ್,
ಸ್ಥಿರವು ವೇಮನ ಸೇರು, ಪದವಿಯ ಸಾಹಸದಿ ಮನದಿರಿಸಿಕೋ.

●●●

# ೧೫. ಮೋಕ್ಷ ಮಾರ್ಗ

## ತತ್ತ್ವ ನಿರ್ಣಯ

**ತನುವು ತನುವು ಎನುತ ತಪಿಸುತಿಪ್ಪ ಜನರ !**
**ತನುವಸ್ಥಿರವೆಂದು ತಿಳಿಯರೇಕೆ ?**
**ತನುವು ಕಾಣಬರದೆ ತಿಳಿಯುವುದೆ ಮೋಕ್ಷ ?**
**ವಿಶ್ವದಾಭಿರಾಮ ಕೇಳು ವೇಮ.**

●

## ತತ್ತ್ವನಿರ್ಣಯ (೧)

ತತ್+ತ್ವ=ತತ್ತ್ವ. ಇಹ ಪರಗಳಲ್ಲಿ ಬಾಳು ಸಾಗಿಸಬೇಕಾದ ಮಾನವನು ತತ್ (ಅದು) ದಿಂದ ಅವಿರ್ಭವಿಸಿ, ಇದಂ (ಇದು) ಗೆ ಅಂಟಿದ್ದಾನೆ. ತತ್ತ್ವ ಸಂಧಾನವೇ ತತ್ತ್ವ ಜ್ಞಾನ – ತತ್ತ್ವಜ್ಞಾನದ ಮೂಲಕ ತನ್ನನ್ನು ತಾನು ತಿಳಿಯಬಲ್ಲನು.

ಜೀವಿಯು ೮೪ ಲಕ್ಷ ಯೋನಿಗಳಲ್ಲಿ ಹಾಯ್ದು ಕೊನೆಗೆ ನರಜನ್ಮ ಪಡೆಯುತ್ತಾನೆಂದು ಹೇಳುತ್ತಾರೆ. ಈ ನರ ಜನ್ಮವು ಪರಮಾತ್ಮನನ್ನು ಸೇರಲು ಮಧ್ಯಂತರ ಪಟ್ಟಣವಾಗಿದೆ. ಈ ಜನ್ಮದಲ್ಲಿಯೂ ಪರಮಾತ್ಮನನ್ನು ಸೇರಲು ಯತ್ನಿಸದೆ, ದುರಿತ ಕರ್ಮಗಳಲ್ಲಿ ನಿರತನಾದರೆ, ಅವನು ಅಧೋಗತಿಗಿಳಿಯುತ್ತಾನೆ.

ಪ್ರಾತಃಸಂಧ್ಯೆ, ಮಧ್ಯೆ ಸಂಧ್ಯೆ ಮತ್ತು ಸಾಯಂ ಸಂಧ್ಯೆಗಳಲ್ಲಿ ಪರಮಾತ್ಮನ ಧ್ಯಾನದಲ್ಲಿ ನಿರತನಾಗಬೇಕು. ಮನವು ಕಾಲಚಕ್ರದಂತೆ ತಿರುಗುತ್ತಿರುತ್ತದೆ. ಈ ತಿರುಗುವ ಮನವನ್ನು ನಿಲ್ಲಿಸಬೇಕು – ಕಾಲ ಪ್ರಜ್ಞೆಯನ್ನು ಮೀರಬೇಕು.

ಕಾಲವು ಮಾನಸಿಕವೂ ಆಗಿದೆ; ಭೌತಿಕವೂ ಆಗಿದೆ. ಎರಡು ಘಟನೆಗಳ ಮಧ್ಯಂತರ ಕಾಲಾವಧಿಯ ಮಾನಸಿಕ ಕಲ್ಪನೆಯು ಮಾನಸಿಕ ಕಾಲವಾಗಿದೆ. ಇನ್ನು ಗಡಿಯಾರದ ಮುಳ್ಳಿನ ಮೂಲಕ ಗುರುತಿಸುವ ದಿನ–ರಾತ್ರಿ, ದಿನ ಮಾಸಗಳು ಭೌತಿಕ ಕಾಲವೆನಿಸುತ್ತವೆ. ಅಂತೂ ಕಾಲವಿದೆ, ಹುಟ್ಟು ಸಾವು ಇದೆ. ಹುಟ್ಟು ಸಾವುಗಳ ಮಧ್ಯೆ ಬಾಳಿನಲ್ಲಿ ಪರಮಾತ್ಮನನ್ನು ಅರಿಯಬೇಕು. ಅದುವೇ ನಮ್ಮ ಲಕ್ಷ್ಯವಾಗಬೇಕು.

ನಮ್ಮೆದುರು ಭವಸಾಗರವಂತೂ ಇದೆ. ಅದೇ ಕಾಲ ಮುಂದಿನ ಹಳ್ಳ, ಸತ್ತ್ವ, ರಜಸ್ಸು ಮತ್ತು ತಮಸ್ಸುಗಳ ಪ್ರತಿನಿಧಿಗಳಾದ ಬ್ರಹ್ಮ, ವಿಷ್ಣು ಮತ್ತು ರುದ್ರರು

— — — — — — — — — — — — — — — — — — — — —

ಇದನ್ನು ಈಜಲಾರದೆ ಮುಳುಗಿರುವರು. ಅಂದ ಮೇಲೆ ಮನುಷ್ಯನು ಈಸುತ್ತೇನೆಂದರೆ, ನಗುಪಾಟಲಾದೀತು. ಆದ್ದರಿಂದ ತ್ರಿಗುಣಗಳಲ್ಲಿ ಸಿಲುಕದ, ಪರಮಾತ್ಮನ ಕರುಣೆಯಿಂದ ನರನು ಪಾರುಗಾಣಬಹುದು.

ಜನರು ಹುಟ್ಟಿ, ಸಾಯುತ್ತಾರೆ, ಇದು ವ್ಯಕ್ತ ಸ್ಥಿತಿ. ಇದರಾಚೆಗೆ ಅವ್ಯಕ್ತವಾವ ಸುಷುಪ್ತಿ ಸ್ಥಿತಿಯೂ ಉಂಟು. ಜನನ, ಮರಣಗಳು ಇಳೆಯಲ್ಲಿ ಹೋಗಿ ಬರುವ ಜಂಗಮಗಳಂತೆ ಜನನಿ ಜನಕರು ಜಲಧಿಯಂತೆ. ಸಮುದ್ರದ ನೀರು ಉಗಿಯಾಗಿ ಮರಳಿ ಮಳೆಯಾಗಿ ಹಿಂತಿರುಗುವುದಿಲ್ಲವೇ? ಹಾಗೆ.

ಜನನ ಮರಣಗಳು ವಿಧಿವಶವಾಗಿವೆ. ಮಾನವನು ಇಲ್ಲಿ ಸ್ವತಂತ್ರನಾಗಿಲ್ಲ. ತನುವು ಕ್ಷಣಭಂಗುರವಾದದ್ದು. ತನುವಿನಲ್ಲಿ ಸ್ಥಿರವಾದದ್ದು ಆತ್ಮವೊಂದೇ. ಭೌತಿಕ ದೇಹಕ್ಕೆ ನಾಶವುಂಟು. ಆದ್ದರಿಂದ ಸ್ಥಿರವಾವುದು ? ಅಸ್ಥಿರವಾವುದು? ಎಂಬುದನ್ನೆಲ್ಲ ವಿವೇಚಿಸಿ ನೋಡಬೇಕು. ಈ ವಿವೇಚನೆಯಿಂದ ಆತ್ಮ ನಿಷ್ಠನಾಗಿ ಬಾಳುವವನು ಪರಮಾತ್ಮನೇ ಸರಿ.

ಹುಟ್ಟು–ಸಾವುಗಳ ಸಂಸಾರದಲ್ಲಿ ತಿರುಗುವ ಜೀವಿಯು ಮರಳಿ, ಮರಳಿ ಹುಟ್ಟುತ್ತಾನೆ. ಯಾವಾಗ ಸಾಧನೆಯ ಕೊನೆಯ ಮೆಟ್ಟಲು ಮುಟ್ಟಿ ಅರಿವು ಮರೆವುಗಳು ಏಕೀಭವಿಸಿದಾಗ ಬ್ರಹ್ಮವನ್ನು ಅರಿಯುತ್ತಾನೆ.

ದೇಹವು ಅರಿವಿನಲ್ಲಿಯೇ ಉದಿಸಿದೆ. ಆದರೆ ಅದು ಬರಿಯ ಹೊಲಸಿನಲ್ಲಿ ಕೊಳೆಯುತ್ತಿದೆ. ತನುವಿನ ಮೂಲಕ ಬಾಳಿ ಅರಿವನ್ನು ಕೂಡಿದರೆ, ಬೇರೆ ತನು ಬಾರವು. ಜನನ, ಮರಣಾದಿ ಅವಸ್ಥೆಗಳ ಜಾಡನ್ನು ತಿಳಿದು, ತನ್ನನ್ನು ಕುರಿತು ತಾನೇ ಮರುಕಪಟ್ಟು, ತತ್‌ಮಯ ಆಕೃತಿ ಹೊಂದುವುದೇ "ತತ್" ಪದವಾಗಿದೆ. ತತ್ತ್ವದರ್ಶನವಾಗಿದೆ.

ಸದಾ ಅರಿವು ಹೊಂದಿರಬೇಕು. ಇಹ–ಪರಗಳ ಅಂತರ ಉಳಿಯದು, ಪ್ರಳಯವಿದ್ದರೂ ಪ್ರಾಣ ಹಾನಿಯಾಗದು; ಪ್ರಳಯವಿರಲು ಪರಮಾತ್ಮನನ್ನು ಸೇರುವನು.

ಸಾಯುವವರನ್ನು ಕಂಡು ಸಾವು ನಿಶ್ಚಯವೆಂದು ತಿಳಿಯಬೇಕು. ಜಾತಸ್ಯ ಹಿ ಧ್ರುವಂ ಮೃತ್ಯು; ಈ ಅರಿವನ್ನು ಹೊಂದಿ ಬೆದರದಿದ್ದರೆ, ಮುಕ್ತಿ ಹೊಂದುವನು. ಮಣ್ಣು ಗಡಿಗಿಯಂತ ಈ ಶರೀರವು ಸಾಯುತ್ತಿದೆ. ಇನ್ನೊಂದು ಹುಟ್ಟುತ್ತದೆ. ಆದರೆ ಆತ್ಮವು ಸಾಯದು. ಘಟಗಳೆಷ್ಟೇ ಆದರೂ ಅವುಗಳಲ್ಲಿ ಪ್ರತಿಬಿಂಬಿಸುವ ಗಗನವು ಒಂದೇ ಅಲ್ಲವೇ?

ಪರಮ ಜ್ಞಾನ ಭಾವವನ್ನು ಪಡೆದುಕೊಳ್ಳದೆ ಮಮತೆಯ ಕಾರಣ, ನನ್ನದೆಂಬ ಮಮತೆಯಿಂದ ಮನಸ್ಸನ್ನು ಅಳಿಸಲಿಲ್ಲ. ಆದರೆ ಬರೀ ಕರ್ಮಗಳನ್ನೇ ಮಾಡಿ ಅವುಗಳ ಸಂಸ್ಕಾರಗಳ ಫಲ ಭೋಗಕ್ಕಾಗಿ ಜನ್ಮಗಳನ್ನು ಪಡೆಯುತ್ತಾನೆ.

೨೫೭೮ ನರಜನ್ಮವ ತಾನೆತ್ತಿಯು
ಪರಮಾತ್ಮನರಿಯದಿರಲು ಪಾಪಾತ್ಮನಲಾ,
ಬರಿ ದುರಿತ ಕರ್ಮ ಗೆಯ್ದೊಡೆ,
ಮರಳಿ ಅಧೋಗತಿ ಪಡೆವನು ಅರಿಯೈ ವೇಮಾ,

೨೫೭೯ ಎಂಭತ್ತು ನಾಲ್ಕು ಲಕ್ಷ
ಎಂಬಂಥ ಜೀವರಾಶಿಗಳಖಿಲವು ಕಡೆಗು
ಸಂಭವಿಸುವ ವಿಧವಿಳೆಯೋಳ್,
ಕೊಂಬೂದಿ ಹೇಳುತಿಪ್ಪನು ವೇಮನ ಕಾಣಾ,

೨೫೮೦ ಸೀಸಃ ಯಮನ ಆಜ್ಞೆಯಿಂದ ಅಧಿಕರೆನಿಸುವರು
ಚಂದ್ರ ಕಾಂತವ ಸೇರಿ ಜನದಿ ಮರಳಿ
ಮೇಘದೊಡನೆ ಬಂದು ಯೋಗದೊಡನೆ ವೃಷ್ಠಿ
ಬಿಂದು ಚೇತನಕೆ ಪೃಥಿವಿ ಗುರಿಯು;
ಸಸ್ಯಾದಿಗಳಿಗೆ ನೀಡಿ ಸಾರವನು ತಿಂದು
ಇಂದ್ರಿಯಂಗಳಿಂದ ಅಧಿಕವಾಗಿ,
ತಿಂಗಳು ಋತುಮಯಾಗಿ ನಿಲಿಸಿ ಯೋನಿಯಲ್ಲಿ
ಮುದ್ದೆಗಟ್ಟಿತು ಮಾಂಸ ಮಜ್ಜು ಗೂಡಿ

ತೇಟ ಪ್ರಾಣಿ ಈ ರೀತ ಮಾಸ ಮಾಸಕು ಪ್ರಬಲವಾಗಿ
ಮೂತ್ರ ಮಲಗಳು ಕೆಲ ದಿನ ಮುಳುಗಿಯುಂಟು,
ಹೊರಗೆ ಬಹು ದುಃಖ ಸಂಸಾರ ಪುಟ್ಟಿ ಕಷ್ಟ
ಜನನ ಮರಣಗಳ ಎಣಿಸಲಳವೇ ವೇಮ ?

೨೫೮೧ ಹೊತ್ತು ಮೂಡುವ ಸಂಧಿ, ಹೊತ್ತು ನಿಲುವ ಸಂಧಿ,
ಹೊತ್ತು ಮುಳುಗುವ ಸಂಧಿ, ಹೊಂದಿ ನೋಡಿ,
ಹೊತ್ತನರಿಯುವವನೆ ಉತ್ತಮಾದ ಯೋಗಿ, ವಿಶ್ವ

೨೫೮೨ ಕಾಲ ಚಕ್ರವೆಲ್ಲ, ಕನವರಿಪ ಮನಸೆಲ್ಲ,
ಸಾಗಿ ತಿರುಗುತಿಹುದು ಸಂಚರಿಸುತ ;
ಚಕ್ರ ಗತಿಯ ಬಿಟ್ಟು ಸ್ತಂಭಿಸು ಮನ ಸದ್ದು, ವಿಶ್ವ

— — — — — — — — — — — — — — — — — — — —

೨೫೮೩ ನರನೆ ಇರಲಿ, ಬೇಡ, ನಾರಾಯಣನಿರಲಿ,
ತತ್ತ್ವಬದ್ಧನಿರಲಿ, ಧರಣಿಯರಿಯೆ,
ಮರಣ ಉಂಟು ಎಂದು, ಮನದಿ ನಂಬಬೇಕು, ವಿಶ್ವ

೨೫೮೪ ಜನನವು ಶಾಶ್ವತವೆಂಬುದ
ನೆನೆವರನಿಳೆಯೊಳಗೆ ಮೋಕ್ಷ ಕಾಂಕ್ಷಿಯೆನಲು ಸೈ,
ಧನವದುಶಾಶ್ವತವೆನ್ನುತ,
ಜನನವು ನಶ್ವರವೆಂಬುದ ಸಾರ್ರೈ ವೇಮಾ,

೨೫೮೫ ಬಾಲ ಪ್ರಾಯದಲ್ಲಿ ಕಾಮವನು ಬಿಡಲು ಇಲ್ಲ,
ಪ್ರೌಢ ವಯಸ್ಸಿಗದನೆ ಕಾಮವನು ಬಿಡಲು ಇಲ್ಲ,
ಮುದುಕನಾದಡೆ ಚಿಂತೆಯಲಿ ಮುಕ್ತಿ ಇಲ್ಲ,
ಸತ್ತು ಸಾಧಿಸುವರೇನೊ ಜಗದಿ ವೇಮ,

೨೫೮೬ ಕಾಲವು ಬರಲೆಂದು ಕಾಯ್ದು,
ಮೇಲಾಗಲು ತಾನೊಂದು ತೆರದಿ ಮಿತಿ ಮೀರಲ್,
ಕಾಲವೆದುರಿಸುವ ಜ್ಞಪ್ತಿಲಿ,
ಲೋಲಾಡದೆ ಶಿವನ ಗೂಡಿ, ವರ್ಧಿಸು ವೇಮಾ,

೨೫೮೭ ಕಾಲವ ತಿಳಿಯದೆ ಸೊಂಪಿಲಿ
ಕಾಲವೆ ಇಲ್ಲವೆನುತ, ಇರುವ ಕಾಲದೊಳಗೇ
ಖೂಳನು ತನ್ನನೆ ತಿಳಿಯನು
ಬೀಳುವ ಮುಂಜಾವಿನಲ್ಲಿ ತಟ್ಟನೆ ವೇಮಾ,

೨೫೮೮ ಮರಣವೆನುತ ಬೆದರಿ ಮನದಿ ಕನಲಲೇಕೆ ?
ಮುನ್ನ ಕಳೆದ ವರುಷ ನಿನ್ನೆ ಮೊನ್ನೆ,
ತನುವು ತೊರೆದ ಅವರು ತನಗಿಂತ ಕಡಿಮೆಯೇ ? ವಿಶ್ವ

೨೫೮೯ ಜನನ ಮರಣಗಳಿಗೆ ಸಲೆ ಸ್ವತಂತ್ರನಲ್ಲ,
ಮೊದಲು ಕರ್ತನಲ್ಲ, ತುದಿಗು ಅಲ್ಲ,
ನಡುವೆ ಕರ್ತನೆನಲು ನಗೆಪಾಟಲಲ್ಲವೇ ? ವಿಶ್ವ

೨೫೯೦ ಜನನವೆನಿತೊ ಉಂಟು, ಜಾತಿ ಯಾವುದೇನೋ ?
ಜನನ ಮರಣ ಕುರಿತು ಜಾಡನರಿತು,
ಕೇಳಿ ಕೇಳುತಿದನು ವಿವರಿಸಿ ಕಾಣರು, ವಿಶ್ವ

೨೫೯೧ ಆಯು ಉಂಟು ಅಷ್ಟೆ ; ಅವನಿಗೆ ಬರು–ಹೋಹ,
ಪ್ರಿಯ ಹುಟ್ಟಲಾಗ ಬದುಕಬಹುದು,
ಕಾಯ ನಿಲಿಸಿಕೊಂಡು ಕಲ್ಪವ ಕಾಣಿಭೋ ! ವಿಶ್ವ

೨೫೯೨ ಕಲ್ಪವೆನಲು ಆಯ್ತು, ಕಾರಣ ಬೀಜ ತಾ,
ಕಲ್ಪವೆನಲು ಶಿವನ ಕಲ್ಪಿತವದು,
ಅಲ್ಪನೇನು ಅರಿವ ಆನಂದ ಭೋಗವ ? ವಿಶ್ವ

೨೫೯೩ ಆಯು ಸುಧೆಯಕಿಂತ, ಅತಿಶಯವಾದಂಥ,
ಕಲ್ಪವರಿಯುವವನು ಕಾರಣಹನು,
ಆಯು ಸೊನ್ನೆಯ ದಿನ ಅಂಧಕಾರ ಹೋಯ್ತು, ವಿಶ್ವ

೨೫೯೪ ಕಾಲು ಮುಂದೆ ಹಳ್ಳ ಕಡೆಗೆ ಈಜದಿರಲು,
ಮೂವರೀಜುವವರು ಮುಳುಗಿರುವರು,
ನರನು ಈಜುವೆನೆನೆ ನಗುಪಾಟಲಲ್ಲವೆ ? ವಿಶ್ವ

೨೫೯೫ ಕಾಲು ಮುಂದೆ ಹಳ್ಳ ಕಡೆಗೆ ದಾಟನೀಜಿ
ಮೂವರೀಜುವವರು ಮುಳುಗಿ ಇಹರು,
ಅನ್ಯರೀಜುವವರೆ ಆಗದೆ ನಗೆಪಾಟ್ಲು ? ವಿಶ್ವ

೨೫೯೬ ಜನ್ಮ ಮರಣ ಸಷುಪ್ತಿಯು ಜಗದೊಳೆಲ್ಲ,
ಜರುಗುತಿರುವ ಕಾಲ ನರನಿಗೆ ಜಂಗಮೆಂದು,
ಅದನೆ ತಿಳಿದುಕೊಳ್ಳರೀ ಅಜ್ಞರಪ್ಪ,
ಭೂ ಪ್ರಜರು ; ಬುದ್ಧಿಯಿಲ್ಲದೆ ಹೋಯ್ತು ವೇಮ,

೨೫೯೭ ತನುವು ತನುವು ಎನುತ ತಪಿಸುತಿಪ್ಪ ಜನರೆ !
ತನುವಸ್ಥಿರವೆಂದು ತಿಳಿಯರೇಕೆ ?
ತನುವು ಕಾಣಬರದೆ, ತಿಳಿಯುವುದೆ ಮೋಕ್ಷ ? ವಿಶ್ವ

೨೫೯೮ ಜನನ–ಮರಣಗಳಲ್ಲಿ, ಸ್ವಪ್ನ ಸುಷುಪ್ತಿಗಳಲಿ ;
ಜಗವನೆಲ್ಲ ತುಂಬಿ, ಜನರು ಉಂಟು,
ಅವನಿಯಲ್ಲಿ ಜನರು ಅರಿಯಲಾರರಯ್ಯ, ವಿಶ್ವ

೨೫೯೯ ಜನನ ಮರಣ ಇಳೆಯ ಜಂಗಮಗಳು ನೋಡು,
ಜನನಿ–ಜನಕ ಇಳೆಯ ಜಲಧಿ ರೀತಿ,
ವಿನುತಿ ಗೈದು ಗುರುವ ಬೆನ್ನಿಗಂಟಿ ನೋಡು, ವಿಶ್ವ

೨೬೦೦ ಜನ್ಮ ರಕ್ಷಕ ಲಯವು ಸಲ್ಲುವುದಿಹಕೆಲ್ಲ,
ಕರ್ತರೆಂದು ವಿಶ್ವ ಕರ್ಮರೆಂದರು,
ಹುಟ್ಟಿ ಬೆಳೆದು ಸತ್ತು ಹೋದರಲ್ಲವೇನೊ ? ವಿಶ್ವ

೨೬೦೧ ಕಳೆದ ದಿನ ನೆನೆವುದು ಕನಸಿನರ್ಥವಷ್ಟೇ,
ನಡೆವ ಕಾಲವೆಷ್ಟು ? ನಂಬಬೇಡ,
ಕ್ಷಣದೊಳಗಿನ ಬದುಕು, ಸಂಸಾರ ಭ್ರಾಂತಿ ! ವಿಶ್ವ

೨೬೦೨ ಜೀವಿಯೊಳಗಿರುವ ಸ್ಥಿರವನ್ನು ಕಾಣದೆ,
ತಿರುಗುತಿಹನಸ್ಥಿರ ತೆರನ ನಂಬಿ,
ಸ್ಥಿರವಸ್ಥಿರವನು ತಿಳಿಯೆ, ಜೀವಿ ಮುಕ್ತ, ವಿಶ್ವ

೨೬೦೩ ತನುವು ಅಸ್ಥಿರವೆಂದು, ಧನವು ಅಸ್ಥಿರವೆಂದು,
ತಿಳಿವು ಹೊಂದಿ ತನ್ನ ತಿಳಿದುಕೊಂಡು,
ಪಾತ್ರನಪ್ಪ ಯೋಗಿ ಪರಮಾತ್ಮನೇ ಕಾಣು, ವಿಶ್ವ

೨೬೦೪ ವೇಳೆ ಎಷ್ಟೆ ಇರಲಿ, ವಿವೇಕವಿರದ ಜೀವಿ,
ಸತ್ತು ಹುಟ್ಟುತಿರುವ ಸಹಜವಾಗಿ,
ಅರಿವು ಮರೆವು ಕಾವ ಅರಿಯೆ ಬ್ರಹ್ಮನಾದ, ವಿಶ್ವ

೨೬೦೫ ತಿರುಗಿ ತಿರುಗಿ ನರನು ಮರಳಿ ಬರುವನಲ್ಲ !
ಆಗ ಕೂಡ ಎಷ್ಟು ಆಶೆಯಿಲ್ಲ !
ಅಂತರಾತ್ಮ ನಿಲುವು, ಅವನೆ ಅರಿ ಬ್ರಹ್ಮ, ವಿಶ್ವ

೨೬೦೬ ಎಷ್ಟೋ ಕಾಲ ಮುನ್ನ, ಅರಿವು ಇರದ ಜೀವಿ,
ಸತ್ತು ಹುಟ್ಟುತಿಹನು ಸಹಜವಾಗಿ,
ಅರಿವು ಮರೆವು ಆಗಿ ಅರಿಯನೇ ಬ್ರಹ್ಮವ ? ವಿಶ್ವ

೨೬೦೭ ಇರುವ ಹಾಗೆ ಇಹುದು ಇರದ ಹಾಗೆ ಇಹುದು,
ಮತ್ತೆ ಇರದೆ ಹೋಯ್ತು ; ಮರಳಿ ಬಂತು,
ಕನಕವೆಲ್ಲಿ ? ನೋಡೆ, ಗಾರುಡಿಯಂತಿರುವುದು, ವಿಶ್ವ

೨೬೦೮ ಎನಿತೊ ತನುವು ಇರಲಿ, ಎಡಚಾಗನು ಮೃತ್ಯು,
ಮೃತ್ಯುಗೆಲ್ಲದಿರಲು ಮತ್ತೆ ಅರಿಯ,
ಕಳ್ಳ ರೀತಿ ಇರಲು ಕಾಣಬಹುದೆ ಮೋಕ್ಷ ? ವಿಶ್ವ

೨೬೦೯ ಅರಿವಿನೊಳುದಿಸಿವೆ ತನುಗಳು,
ಬರಿ ಹೊಲಸಿನಲಿ ಕೊಳೆಯುವವು ಸಹಿಸುತಲದನೇ,
ಅರಿವಿಹ ತನುವನು ಹೊಂದಿರೆ,
ಮರುಜನ್ಮ ಬರುವುದು ಎಂತು ? ಮಹಿಯಲಿ ? ವೇಮಾ.

೨೬೧೦ ಜನ್ಮ ಮರಣಾದ್ಯವಸ್ಥೆಯ ಜಾಡು ಮೀರಿ,
ಮನ್ಮಯವಹ ಪರಿಪೂರ್ತಿ ಮರುಕ ಸೇರಿ,
ತನ್ಮಯಾಕೃತಿ ಹೊಂದುವುದೆ ತತ್ವದವೈ,
ನಿರ್ವಿಕಾರನಿಗೆ ಇದು ಉಂಟು, ನೆಲದಿ ವೇಮ.

೨೬೧೧ ನಿಹತಿ ಹುಟ್ಟುಗಳಿಗೆ ನೆಲೆಯು ಇಹವೆಂದರು,
ಕುಹರ ಲೋಕದಲ್ಲಿ ಕೌತುಕೆಲ್ಲಿ ?
ದಹರದಲ್ಲಿ ನೋಡೆ ತೆಗಲುತಿಹುದು ತತ್ತ್ವ, ವಿಶ್ವ

೨೬೧೨ ಇರಲು ನಿರುತ ಅರಿವು ಇಹ ಪರಗಳಿಲ್ಲ,
ಪ್ರಾಣ ಹಾನಿಯಿಲ್ಲ ಪ್ರಳಯದಲ್ಲಿ,
ಪ್ರಳಯ ಕಾಲವಿರಲು ಪರಮಾತ್ಮನ ಕಲೆವ, ವಿಶ್ವ

೨೬೧೩ ಮರಣ ಕಾಲದಲ್ಲಿ ಮನಸು ನಿಲಿಪ ಜ್ಞಾನಿ,
ಪರಮ ಪ್ರತಿಭೆಯಿಂದ ಪಟ್ಟು ಬಿಡನು ;
ಬಳಿಕ ಕೋರಿಕೆಗಳಿಗೆ ಅಳುತಿಹನು ಅಜ್ಞಾನಿ, ವಿಶ್ವ

೨೬೧೪ ಅರಿವುಗೇಡಿ ಜೀವಿ ಅನಿತು ಕಾಲವಿರಲು,
ಸತ್ತು ಹುಟ್ಟುತಿಹನು ಸಹಜವಾಗಿ,
ಅರಿವು ಮರೆವು ತಾಣ ಅರಿಯುವುದೇ ಬ್ರಹ್ಮ, ವಿಶ್ವ

೨೬೧೫ ವಾರಿಧಿಯಲಿ ಹುಟ್ಟಿ, ವಶವೆ ಆಗಬಹುದು,
ಪೂರ್ಣ ದೃಷ್ಟಿಯಲ್ಲಿ ಪ್ರಯತ್ನಿಸುತ ;
ಆಗಲು ಕೆಲಸದರಿವು ಆಗಲಾರ ಬುಧನು, ವಿಶ್ವ

೨೬೧೬ ಹುಟ್ಟುವವರು ಯಾರೊ ? ಹುಟ್ಟದವರು ಯಾರೊ ?
ಹುಟ್ಟಿ ಸಾಯುವಂಥ ಪುರುಷರಾರೊ ?
ಹುಟ್ಟಿ ಹುಟ್ಟದಂಥ ಬೋಧೆಯ ಕಾಣಿರೋ ! ವಿಶ್ವ

೨೬೧೭ ಸಾಯದಿರುವರಾರೊ ? ಸತ್ತವರಿನ್ನಾರೋ ?
ಕಾಣುವವರು ಯಾರೋ ? ಕಾಣದವರು ?
ಇರುವ, ಸತ್ತ ಕಂಡ ಒಬ್ಬನ ನೋಡಿರೋ, ವಿಶ್ವ

೨೬೧೮ ಮರಣವು ಹತ್ತಿರದಲ್ಲಿದೆ,
ಸ್ಥಿರ ಬುದ್ಧಿಯಲಿ ಪರಮ ಕಾಣೆ, ಲಭ್ಯ ಮೋಕ್ಷಂ
ಅರಿವುದು ಪುರದಲಿ ಮಿಂಚಲು
ಪರಮಾರ್ಥವೆ, ಬಟ್ಟ ಬಯಲು, ಮುನ್ನವೆ, ವೇಮಾ.

೨೬೧೯ ಸಾವರು ಎಲ್ಲರು ಜನಕುಲ,
ಸಾವಪ್ಪಿದವರ ಪುಣ್ಯ ಕಥೆಗಳನು ಸರ್ವಂ,
ನೀವ್ಕೇಳಿ ಕಂಡು, ಮನನಿಸಿ,
ದೇವರಿಗು ತಿಳಿಯದು ಅಂತ್ಯವು, ತಿಳಿಯೈ ವೇಮಾ.

೨೬೨೦ ಸಾಯುವವರ ಕಂಡು ಸಾಯದೆ ಹುಟ್ಟದೇ,
ತತ್ತ್ವವೆಲ್ಲ ಆತ್ಮ ತಿಳಿದುಕೊಂಡು,
ಅರಸಿ ನೋಡಿದಂಥ ಅವನೆ ಹೋಗು ಸುಜನ, ವಿಶ್ವ

೨೬೨೧ ಸತ್ತವರನು ಕಂಡು, ಸಾವು ನಿಶ್ಚಯೆಂದು,
ತತ್ತ್ವ ಮೇಳದಾತ್ಮವುಸರಿ ಹೊಂದಿ,
ಅದರಿ ಬೆದರದಿರಲು, ಆಯ್ತು ಹೋಗು ಮುಕ್ತಿ, ವಿಶ್ವ

೨೬೨೨ ಅನುಭವ ಕೇಳಿಯ ಒಳಗೇ
ತನುವುಗಳು ಮೂರಡಗಿ, ಒಳ ತಥ್ಯವ ಕಾಣಾ,
ಜನನಾಂತರ ಅಮರುತಿರಲು,
ಅನುವಿನಲಿ ಬ್ರಹ್ಮವ ಮನದಲಿ ಕಾಣಿರೋ ವೇಮಾ.

೨೬೨೩ ಸುಪ್ತಿ ಜಾಗರಗಳ ಸಾಲಲಿ ತಾನುಂಟು,
ಹೊತ್ತು ನಿಂತ ಮಾಯೆ ಕಾಣಲಾರ,
ದಿಟ ಸಟೆಗಳೆರಡನು ತಾನು ಸಲೆಗಾಣದೆ,
ಗಡನೆ ಕೆಟ್ಟು ಹೋಹ; ಗುಣವು ವೇಮ.

೨೬೨೪ ನರನು ಜಾಗರದಲಿ ನಟನೆ ಮಾಡುತಿರುವ,
ನರಗಿಳೆಯಲಿ ಜಾಗರ ವಿರಳ ಕಾಣು,
ನರನು ಜಾಗೃತನಿರೆ, ಧರಣಿಯಲಿ ಪರಮಾತ್ಮ, ವಿಶ್ವ

೨೬೨೫ ಸಕಲ ಶಾಸ್ತ್ರಗಳನು ಸಲೆ ಪಠಿಸಿ ಬರೆದೂ,
ತಿಳಿದು ಕೊಳರು, ಸಾವು ತಿಳಿಯಲಿಲ್ಲ !
ಸಾವು ತಿಳಿಯದಿರಲು ಸತತ ಓದು ಏಕೆ ? ವಿಶ್ವ

೨೬೨೬ ಮಣ್ಣು ಗಡಿಗೆಯಂಥ ಮಾಯದೀ ಶರೀರ,
ಸಾವುದೇನೆ ಇರಲಿ, ಸಾಯದಾತ್ಮ ;
ಘಟಗಳೆಷ್ಟೆ ಇರಲಿ, ಗಗನ ಒಂದಲ್ಲವೇ ? ವಿಶ್ವ

೨೬೨೭ ಎಲ್ಲಿಂದ ಬರುವುದು ? ಎಲ್ಲಿಗೆ ಹೋಗುವುದು ?
ನಿದ್ರೆ ರೀತಿ, ಮಿನ್ನ ಅರಿತು ಕೊಳಲು
ಆತ್ಮನ ಬರು ಹೋಗು, ಅವನೆ ಶಿವಯೋಗಿಯು, ವಿಶ್ವ

೨೬೨೮ ಜ್ಞಾನ ಭಾವ ಪರಮ ಕಂಡುಕೊಳ್ಳದಿದ್ದು,
ಮನಸು ಅಳಿಸಲಿಲ್ಲ, ಮಮತೆ ತಗಲಿ,
ಕರ್ಮ ಮಾಡಿ ಜನ್ಮಗಳನು ಪಡೆವನಿಹದಿ, ವಿಶ್ವ

೨೬೨೯ ಜೀವವೆಲ್ಲಿ ಇಹುದೊ ? ಭಾವವಲ್ಲಿ ಇಹುದು,
ಕಾಯ ಪುರದಲ್ಲಿಯೆ ಕೂಡಿ ಉಂಟು,
ತೊಳಗುತಿರುವೆರಡು ಸ್ಥಳಗಳರಿಯರೇಕೊ ? ವಿಶ್ವ

೨೬೩೦ ಜಾಗ್ರತೆನಲು ಏನು ? ಜನ್ಮವೆನಲು ಏನು ?
ಜನ್ಮಗಳನು ಅರಿಯೆ, ಜಾಗ್ರತಾಯ್ತು,
ಜನ್ಮ–ಜಾಗ್ರತಗಳ ಸಾಧಿಸಿದೊಡೆ ಮುಕ್ತಿ. ವಿಶ್ವ

೨೬೩೧ ಸುಪ್ತಿ–ಜಾಗರಗಳ ನಿದ್ರೆ ಜಾಡ್ಯವುಂಟು,
ಮುತ್ತಿದಂಥ ಮಾಯೆ ಮತ್ತೆ ಕಾಣ,
ಸುಳ್ಳು ಸತ್ಯಗಳ ಸಲೆ ಕಾಣದಿರುವ,
ಗಡನೆ ಕೆಟ್ಟು ಹೋಹ ಗುಣವು ವೇಮಾ.

೨೬೩೨ ಹರಣ ಸೇರುತಿಹುದು ಇರುವ ದೇಹಗಳಿಗೆ,
ಹಾನಿಯಿರದೆ ಉಂಟೆ ? ಅರಿಯದಿರುವ,
ಪ್ರಾಣ ಹೋಗೆ ದೇಹ ಪ್ರಯೋಜನಕೆ ಬರದು, ವಿಶ್ವ

೨೬೩೩ ಹುಟ್ಟಿನೊಳಗೆ ಜೇನು ಹುಟ್ಟುತಿರುವ ರೀತಿ,
ಶಿಲೆಗಳಿಂದ ಮಣಿಯು ಹುಟ್ಟಿದಂತೆ,
ಕಾಷ್ಟದೊಳಗೆ ಅಗ್ನಿ ಹುಟ್ಟಿದಂಥ ವಿಧದಿ,
ಹುಟ್ಟಿ ಮೆಟ್ಟಬೇಕು, ಪೃಥಿವಿ, ವೇಮ,

೨೬೩೪ ನೀ ಸಾಯಲು ಜೊತೆಗೆ ಮತ್ತೆ
ತಾ ಸಾಯುವ ಆಗ ಪಂಚ ತತ್ತ್ವಗಳೊಂದೇ,
ಆ ಸ್ವರೂಪದಲ್ಲಿಯೇ,
ತಾ ಸ್ಥಿತನಿಪ್ಪ, ಜಿತನಾಗಿ, ತಥ್ಯವು, ವೇಮಾ,

೨೬೩೫ ಹುಟ್ಟುವುದಕೆ ಮೋದ, ಹೊರಡುವುದಕೆ ಖೇದ;
ಅಖಿಲರರಿವರಂಥ ಅಲ್ಪ ವಿದ್ಯೆ,
ಸಾಯುವವ, ಹುಟ್ಟುವ, ಶೀಘ್ರ, ಅಳುವೆಯೇನು? ವಿಶ್ವ

೨೬೩೬ ಸತ್ತೆ ಸತ್ತೆಯೆಂದು ಸಾವಿಗಂಜಿ ಕೇಡು,
ದೀನ ಜನರ ಹುಚ್ಚು ತಿಳಿಸೆ ಕಠಿಣ,
ಮೃತ್ಯು ಬಂಧವುಂಟು ಮತ್ತೆ ಪ್ರಾಣಿಗೆಲ್ಲ, ವಿಶ್ವ

---

೨೬೩೭ ಜನನ ಮರಣವೆಲ್ಲ ಸ್ವಪ್ನ ನಿದ್ರೆಯಂತೆ,
ಭೂಮಿ ಮೇಲೆ ತೋರ್ಪ ಬಿಸಿಲು–ಗುದುರೆ,
ನರನು ಜಗಕಂಟಲು, ನಗುಪಾಟಲಲ್ಲವೆ ? ವಿಶ್ವ

೨೬೩೮ ಇಂಥ ಪದ್ಯ ಪಂಚಕೈಷ್ಯವ ತಿಳಿದೊಡೆ,
ಇಟ್ಟು ಹುಟ್ಟಿ ಕಟ್ಟಿ ಇಳೆಯ ಬದುಕು,
ಸತ್ತು ಸಿದ್ಧರಾಗುತ ಸರ್ವಜ್ಞರಾಗಿ ನಿಂತು ;
ಎಲ್ಲ ಮಹಿಮೆ ನಿನಗೆ ಸಲ್ಲಿಕೆ ವೇಮ,

೨೬೩೯ ಅರುಣನುದಯ ಸಂಖ್ಯೆ, ಅಸ್ತಮಾನ ಸಂಖ್ಯೆ
ಜನನ ಮರಣ ಸಂಖ್ಯೆ, ಜಾತಿ ಸಂಖ್ಯೆ,
ತಿಳಿದು ಯೋಗಿಯಿದನೆ ಧೀರನಾಗಿರುವನು, ವಿಶ್ವ

೨೬೪೦ ಸಾಯುವವರ ಕಂಡು ಸಾವು ನಿಶ್ಚಿತೆಂದು,
ತತ್ತ್ವವೆಲ್ಲ ಆತ್ಮ ; ತಿಳಿದುಕೊಂಡು ;
ಬೆದರಿ–ಅದರದಂತೆ ಬಾಳುವವನೆ ಭಕ್ತ, ವಿಶ್ವ

೨೬೪೧ ಬರುವು–ಹೋಗು ಅಡಗಿ ಪಿಡಿದು ರಾಜಮಾರ್ಗ,
ಸ್ವರ್ಗವೆಂಬ ಗುರುತು ಮಾರ್ಗವರಿತು,
ಸೋಂಕಿ ಮೀರೆ, ಬಯಲು ಸೂತ್ರವಲ್ಲವೇನು ? ವಿಶ್ವ

೨೬೪೨ ಜೀವವಿಪ್ಪ ತಾಣ ಸ್ಥಿರವಾಗಿ ತಿಳಿಯದೆ,
ತಿರುಗುವಸ್ಥಿರವಿಹ ದೇಹದಲ್ಲಿ,
ತಿರುಗಲೇಕೆ ಎಂದು ತಿಳಿಯನಜ್ಞಾನಿ ತಾ, ವಿಶ್ವ

೨೬೪೩ ನಿಹತಿ ಹುಟ್ಟುಗಳಿಗೆ ನೆಲವಿಹುದೆಂಬರು,
ಕುಹರ ಲೋಕದಲ್ಲಿ, ಕಂಠವೆಲ್ಲಿ ?
ದಹರದಲ್ಲಿ ನೋಡೆ ತಗಲಬಹುದು ತತ್ತ್ವ, ವಿಶ್ವ

೨೬೪೪ ಕನ್ನೆ ವರರು ಸೇರಿ ಕೂಡಿಕೊಳ್ಳಲೊಮ್ಮೆ,
ಉಚ್ಚಿಯಲ್ಲಿ ಪಿಂಡ ಉದ್ಭವಿಸಿತು,
ಹೆಚ್ಚು ಕುಲಜನಾರು ? ಹೀನನಾವನುಂಟು ? ವಿಶ್ವ

೨೬೪೫ ವರನ ಬಿಂದುವಿಂಗೆ ವನಿತೆ ಗರ್ಭಧಾರಣೆ,
ಕಲ್ಲುಪ್ಪಿನಿಂದಲಿ ರಸದ ಉದಯ,
ಬುದ್ಧಿ ತಿಳಿದು ಇರಲು ಭುವನ ತಿಳಿವುದಲ್ತೆ, ವಿಶ್ವ

೨೬೪೬ ಅಂಡದೊಳಗೆ ಆಕಾಶವು
ಕಂಡೊಡೆ ಇಹುದೊಪ್ಪವಾಗಿ ವಿಸ್ಫುಟ ತಾನೇ,
ಉಂಟಖಿಲವನು ತಿಳಿದೊಡೆ,
ಅಂಟದೆ ಎಲ್ಲವ ಕಾಣುತ ಮಿಂಚಿರೊ ವೇಮಾ,

೨೬೪೭ ಅನ್ನ ರಸದಿಂದಲಿ ಆಯ್ತು ಬಿಂದು ರಸವು,
ಬಿಂದು ರಸದಿಂದಲಿ ಬೀಜವಾಯ್ತು,
ಬಿಂದು ಬೀಜಗಳನು ಬೇಧಿಸಿ ನೋಡಿರೋ, ವಿಶ್ವ

೨೬೪೮ ಪಿಂಡ ಅಂಡದಲ್ಲಿ ಬೆಳೆದು ಇರವಂತಹ,
ತಂದೆ ಬಿಂದು, ನಾದ ಅಂದಗೂಡಿ,
ಅಂಡವಾಗಿ ನಿಲಲು ಅದನೆ ಗರ್ಭವೆಂದರು,
ಅವನಿ ಜನರು ಆಗ, ಅರಿಯೊ, ವೇಮಾ,

೨೬೪೯ ಪಿಂಡವೆ ಆಗಿ ಉದರದಿದ್ದು –
ಕೊಂಡುದ, ಕೆಲವು ದಿನವಾದ ಬಳಿಕುರ್ವಿ ನೆಲೆಯ್ಯೆ,
ಪಿಂಡವೆ ಜನಿಸುತ್ತಿರುವುದು ;
ಪಿಂಡವೆ ಆ ಪ್ರಾಣ ರಕ್ಷೆ, ಪೃಥಿವಿಲಿ, ವೇಮಾ !

೨೬೫೦ ತಂದೆ ತಾಯಿಯು ಸೇರಿ ತನುರತಿ ಗೆಯ್ಯುತಾ
ರಾಗ ಕುಮರುತಿಹುದು ರಮ್ಯವಾಗಿ,
ಐದು ದಿನ ಕಳೆಯಲದು ಆಮ್ಲದ ದಧಿಯಲಿ
ಬೆರೆಸಿ ಕಲಿಸಿದಂತೆ ಬೆಳಗುತಿಹುದು,
ಹತ್ತು ವಾರಗಳಲಿ ಮತ್ತೆ ಅಂಡವೇ ಆಯ್ತು,
ಹದಿನೈದರಲ್ಲಿಯೆ ಹೊದರು ತುಂಬಿ,
ತಿಂಗಳೊಂದಕ್ಕೆ ಶಿರಸು ತಾನೇ ಮೂಡುತಿಹುದು,
ಪಾದ ಕರಂಗಳೆರಡು ಪದ್ಧತಿಯಲಿ,
ಮೂರು ತಿಂಗಳಿಗೆ ಇನಿತು, ಮತ್ತೆ ನಾಲ್ಕರಲ್ಲಿ

ನಡುವು ಪಾರ್ಶ್ವಗಳು ಮೂಡುತಿಹವು,
ಆರಕ್ಕೆ ನೇತ್ರಗಳು ಅರಳುತಿಹವು,
ಏಳು ತಿಂಗಳಿಗೆ ಜೀವ ಎದ್ದು ಪ್ರಭವಿಸುವುದು,
ಎಂಟು ತಿಂಗಳಿಗೆ ಜ್ಞಾನ ಅಂಟುತಿಹುದು,
ಒಂಭತ್ತು ಮಾಸದಲ್ಲಿ ತಕ್ಕ ಧ್ಯಾನ ಉದಿಸಿ
ತೊಲಗದೆ, ಹತ್ತು ತಿಂಗಳಲ್ಲಿ ತನ್ನ ಪೂರ್ವ
ದುಃಖದಲ್ಲಿ ಪಿಂಡ ಪರಿಪೂರ್ಣನಾಗಿ ಜಗದಿ
ಪುಟ್ಟುತಿಹನು ತಾನು ಬುದ್ಧಿ ಮರೆತು,
ಮಂಚದಲಿ ಬಿದ್ದು ತನ್ನ ಮೂತ್ರ ಮಲಗಳಲ್ಲಿ
ಹೊರಳಾಡುತ್ತಿದ್ದು ಮಾಯಾವಿ ಹುಟ್ಟುತಿಹಗೆ
ಗತಿಗಳ ಹೊಂದಿಹ ಅವರಿಗೆ ಕರುಣೆದೋರಿ,
ವ್ಯಥೆಗಳ ತೀರಿಸುವ ವೇಮನ ವಿಶ್ವದಲ್ಲಿ,

೨೬೫೧ ಒಂಭತ್ತು ದ್ವಾರದ ತನು
ವೆಂಬುದು ನಿಮ್ಮಯ ಸೊತ್ತು, ಕುಲ ಪೇಳಲೇಕೈ ?
ನಂಬದಿರು ದೇಹ ನಾನೆನು –
ತಿಂಬು ಗೊಡುತರಿ ಬ್ರಹ್ಮವೆ ಅಹಮೆನೆ ವೇಮಾ,

೨೬೫೨ ಇಹವ ತೊರೆಯ ಫಲವು ಇಂಪು ಉಂಟು ಎಂದು,
ಮಹಿಯಲಿ ನುಡಿವವರ ಮತವು ಸುಳ್ಳು ;
ಇಹದ ಒಳಗೆ ಪರವು ಇಹುದು ; ಹೊಂದಿ ಕಾಣು, ವಿಶ್ವ

೨೬೫೩ ಅಂಡದಲ್ಲಿ ಹುಟ್ಟಿ ಅರಳಿದ ಪ್ರಾಣಿ ಕೆಲವು,
ಬುದ್ಬುದದಿ ಹುಟ್ಟಿವೆ ಹುಳುಗಳೆಲ್ಲ,
ಸ್ವೇದದಲ್ಲಿ ಹುಟ್ಟಿದ ಜೀವಿಗಳಿವೆ ಕೆಲವು, ವಿಶ್ವ

೨೬೫೪ ತಾನು ಹುಟ್ಟಿದ ನೆಲೆ, ತನ್ನ ನೋಡ ಬಯಸಿ,
ತಾನು ಬುದ್ಧಿ ; ತಿರುಗುವ ಧರಣಿಯಲ್ಲಿ ;
ತಾನು ಹುಟ್ಟಿದ ನೆಲೆ ತತ್ತ್ವ ತಿಳಿಯಬೇಕು. ವಿಶ್ವ

೨೬೫೫ ತಣಿದು ಪಿಂಡದಲ್ಲಿ ತಗಲಿದ ಮಾನವನು,
ಹುಟ್ಟಲಾರದವನು ಪೊಡವಿಯಲ್ಲಿ
ಅಂಥ ಹುಟ್ಟಿನವನು ಅವನಿಯೊಳಗೆ ಇಲ್ಲ, ವಿಶ್ವ

೨೬೫೬ ತನು ಸಂರಕ್ಷಣಕಾಗಿಯೆ
ಮನದಲಿ ಕಾರ್ಯಗಳ ಮಾಡಿ, ಮನ ತತ್ತ್ವಗಳಂ,
ದಿನ ದಿನ ತಿರುಗುತ ತಿರುಗುತ,
ತನುವಿನಲಿ ಕಾಣಲು ಆತ್ಮ ತಥ್ಯವು ವೇಮಾ,

೨೬೫೭ ಭೂಮಿಯಲ್ಲಿ ಜನನ ಭೂ ಭಾರವೆಲ್ಲವು,
ತನುವಿನಲ್ಲಿ ಜನನ ತತ್ತ್ವವೆಲ್ಲ,
ಶ್ರಮದಲ್ಲಿ ಜನಿಸಿ ಸರ್ವವು ತಾನಾದ, ವಿಶ್ವ

೨೬೫೮ ಬಿಸಿಲುಗುದುರೆಯ ರೀತಿಯಲಿ ಬಂತು ಜಗವು;
ಉಂಟು ಪರಮಾತ್ಮನಲ್ಲಿಯೆ ಉಬ್ಬಿ ಬಹಳ,
ಮನದೊಳಗೆ ಶೋಧಿಸಿ ನೆಗೆಯಬೇಕು,
ಮಿಥ್ಯೆ ನಂಬದೆ ನೀನದನೆ ಮೀರು ವೇಮನ

೨೬೫೯ ಜೊಳ್ಳು ಹೊಂದಬೇಡ, ಜವವ ಮೀರಿ ಕಾಣು,
ಆದಿ ಮೂಲವಾದ ಆತ್ಮವರಿವ ;
ಹೋರಿ, ಸೇರಿ ಹೊಂದಿ, ಪೂರ್ಣ ಪಡೆದುಕೊಳಿರೊ, ವಿಶ್ವ

●

## ತತ್ತ್ವ ನಿರ್ಣಯ (೨)

ಜಗತ್ತು ಬಿಸಿಲುಗುದುರೆಯಂತೆ ಇದೆ – ಪರಮಾತ್ಮನೇ ಸತ್ಯ. ಸತ್ಯವಲ್ಲದ್ದನ್ನು ನೀನು ನಂಬದೆ, ಅದನ್ನು ಮೀರಿ ಹೋಗಬೇಕು.

ಕಟ್ಟ ಕಡೆಗೆ ಎಲ್ಲವೂ ಬಟ್ಟಬಯಲಾಗುತ್ತದೆ. ಆ ಬಯಲನ್ನು ಮನದಲ್ಲಿ ಅರಿಯುವುದೇ ಮುಕ್ತಿಯಾಗಿದೆ. ಆದಿ ಮೂಲವೇನು ? ಎಲ್ಲದಕ್ಕೂ ಆಧಾರವಾವುದು? ಆ ಆದಿಯಲ್ಲಿ ತೊರೆಯದಿರುವುದೇ ಅಭವ ಸ್ಥಿತಿ. ಆದಿಯನ್ನು ತಲುಪದೆ, ಅರ್ಧಮರ್ಧ ತಿಳಿದು, ವಿಚಿತ್ರ ಕಂಡು ಕಣಿ ಹೇಳುವುದು ತರವಲ್ಲ.

ತಾತ್ತ್ವಿಕವಾಗಿ ತಾಯಿ ತಂದೆ ಯಾರು ? ಯೋನಿ–ಲಿಂಗಗಳಿಂದ ಹುಟ್ಟುವ ಜನರು ಮೂಲ ತತ್ತ್ವವನ್ನೆ ಅರಿಯರು. ಸಂರಕ್ಷಿಸುವ ವಿಷ್ಣುವೇ ತಾಯಿ; ಶಿಕ್ಷಿಸುವ ರುದ್ರನೇ ತಂದೆ.

ಸೃಷ್ಟಿ ಕಲ್ಪನೆಯಲ್ಲಿ ಉತ್ಪತ್ತಿಗೆ ಅಧಿದೈವವು ಬ್ರಹ್ಮ; ರಕ್ಷಣಕ್ಕೆ ಅಧಿದೈವ ವಿಷ್ಣು; ಲಯಕ್ಕೆ ಅಧಿದೈವ ರುದ್ರ. ಈ ಬಗೆ ಮಾಯಾಶಕ್ತಿಯು ಆಟ ನಡೆಸಿದೆ. ಮೂಲ ಅಮೂರ್ತ ಬ್ರಹ್ಮನಿಗೆ ಇವರು ಮೂವರು ಮೂರ್ತಿ ರೂಪರು. ಹುಟ್ಟು, ಸ್ಥಿತಿ, ಮತ್ತು ಲಯಗಳಿಂದ ಕಾಲವನ್ನು ಪೋಷಿಸುತ್ತಿರುತ್ತಾರೆ.

ಓಂ, ಅ+ಉ+ಮ. ಏಕಾಕ್ಷರವೇ ಸತ್ತ್ವಗುಣ; ಬಿಳಿವರ್ಣೀಯ. ಏಕಾಕ್ಷರವೇ ರಜೋಗಣ; ಕೆಂಪು ವರ್ಣೀಯ. ಏಕಾಕ್ಷರವನ್ನು ದಾಟಿದ ಗುಣಾತೀತದಲ್ಲಿ ಬೇರೇನೂ ಇರದು.

ಕರ್ಮಗತಿಯು ಹುಟ್ಟು-ಸಾವುಗಳಿಗೆ ಮೂಲ ಕಾರಣವೆಂಬುದನ್ನು ನಾವು ಅರಿತೆವು. ಪ್ರಾರಬ್ಧ ಕರ್ಮವು ಫಲ ನೀಡಲು ಜನ್ಮ ತಳೆಯುತ್ತೇವೆ, ಎಂಬುದನ್ನೂ ಅರಿತೆವು. ಈಗ ಚಾಲಿತ ಜನನವೆಂತಾಗುವುದು ? ಎಂಬುದನ್ನು ತಿಳಿಯುವಾ.

ವರನ ಬಿಂದು ವನಿತೆಯ ಗರ್ಭಧಾರಣೆಗೆ ಕಾರಣವಾಗುತ್ತದೆ. ಕಲ್ಲುಪ್ಪಿನಂಥಹ ರಸವು ಉದಿಸುತ್ತಿದೆ. ಇದು ಅನ್ನದ ರಸ ತಾನೇ ? ಇದರಿಂದ ಬಿಂದು ರಸ. ಅದರಿಂದ ಬೀಜ. ತಂದೆಯ ಬಿಂದುವು ಪಿಂಡದಲ್ಲಿ ಅಂಡವಾಗಿ ಬೆಳೆದಾಗ ಅವನಿ ಜನರು ಗರ್ಭವೆಂದು ಕರೆಯುತ್ತಾರೆ.

ಹೊಟ್ಟೆಯಲ್ಲಿ ಪಿಂಡವಾಗಿ ಇದ್ದು ಕೆಲ ದಿನಗಳ ನಂತರ ಪಿಂಡವೇ ಪೃಥಿವಿಯ ಮೇಲೆ ಜನಿಸುತ್ತದೆ. ಅದರ ಪ್ರಾಣ ರಕ್ಷಣೆಗೆಯ್ಯಬೇಕು. ಒಂಭತ್ತು ದ್ವಾರದ ಈ ದೇಹವು ನಿಮ್ಮದಾಗಿದೆ. ಅದರ ಕುಲವಾವುದು ? ಅದು ಬ್ರಹ್ಮಕುಲಕ್ಕೆ ಸೇರಿದೆ. ಬ್ರಹ್ಮವೇ ನೀನು. ದೇಹವಲ್ಲ; ಎಂಬುದನ್ನು ಅರಿ.

ವಿದೇಹ ಮುಕ್ತಿಯ ಮಾತೆಲ್ಲ ಸುಳ್ಳು. ಇಹದಲ್ಲಿಯೇ ಪರವು – ಜೀವಿಗಳ ಜನನವು ಹಲವು ಯೋನಿಗಳಲ್ಲಿ ಆಗುತ್ತದೆ. ಅಂಡಜಗಳು ಕೆಲವು; ಸ್ವೇದಜಗಳು ಕೆಲವು. ಜರಾಯುಜಗಳು ಕೆಲವು; ಇನ್ನು ಅನಗ್ರಸರ ಜೀವಿಗಳು ಉದ್ಭಿಜಗಳಾಗಿವೆ.

ತಾನು ಹುಟ್ಟಿದ ನೆಲೆಯಲ್ಲಿ ತನ್ನನ್ನು ನೋಡಬಯಸಿ, ಬುದ್ಧಿವಂತನು ಧರಣಿಯಲ್ಲಿ ತಿರುಗುತ್ತಾನೆ. ತಾನು ಹುಟ್ಟಿದ ನೆಲೆಯಲ್ಲಿ, ತತ್ತ್ವವನ್ನು ಅರಿಯಬೇಕು. ಮಾನವನು ಪಿಂಡದಲ್ಲಿ ತಗಲಿಕೊಂಡಿದ್ದಾನಷ್ಟೇ. ಅವನು ತತ್ತ್ವವನ್ನು ಅರಿತು ಕೊಂಡರೆ, ಪೊಡವಿಯಲ್ಲಿ ಹುಟ್ಟಬಾರದ ಅಜಾತವೆನಿಸುತ್ತಾನೆ. ಹೀಗೆ ಸ್ವರೂಪ ಜ್ಞಾನ ಮಾಡಿಕೊಂಡವರು ಭೂಮಿಯಲ್ಲಿ ಸಿಕ್ಕುವುದು ದುರ್ಲಭ.

ಪುರುಷ-ಪ್ರಕೃತಿ, ಶಿವ-ಜೀವ, ವಿದ್ಯೆ-ಅವಿದ್ಯೆ ಎಂಬೀ ಎರಡರ ಜೊತೆಯೊಳಗೆ ದ್ವೈತವನ್ನು ಮೀರಿದ ಏಕದ ಎಣಿಕೆಯಲ್ಲಿ, ಬ್ರುಕುಟೀ ಸ್ಥಲದಿಂದ ಗುಡ್ಡವೇರಿ ಸಹಸ್ರಾರ ತಲುಪಬೇಕು.

ಓಂ ನಮಃ ಶಿವಾಯ ಎಂಬ ಷಡಕ್ಷರ ಸಾಧನೆಯಿಂದ ಮನದಲ್ಲಿ ನಿರ್ವಾಣ ಪದವು ಬೆಳಗುವುದು. ಅಲ್ಲಿಂದ ಬಯಲು ಸೇರಿದರೆ, ನಿತ್ಯವಾದ ಪರಮಾನಂದ ಮೂರ್ತಿಯು ಕಾಣಬಹುದು.

ಆದ್ಯಂತಗಳಿಲ್ಲದ ಪರಮನು ಕೇವಲ ಅನುಭವ ಗಮ್ಯನು. ವಾದ ಭೇದಗಳು ಅಡಗಿ ಅದನ್ನು ವರಿಸುವವನೇ ಶಿವಯೋಗಿ.

— — — — — — — — — — — — — — — — — — — — — —

ಮನಸ್ಸು ಉದಿಸುವ ಪೂರ್ವಸ್ಥಿತಿಯೇ ಆದಿ. ಆದಿಯಲ್ಲಿ ಸರ್ವವೂ ತಾನೇ ತಾನಾಗಿರುತ್ತಾನೆ. ಆದರೆ ಆದಿಯನ್ನು ನೋಡುವುದು ಯಾರಿಗೆ ಶಕ್ಯ ? ಆತ್ಮದರ್ಶನವೇ ಆದಿಯ ಮುಕ್ತಿ ಮಾರ್ಗವಾಗಿದೆ. ಆದಿಯಲ್ಲಿ ಮನ ನಿಲ್ಲಿಸಿ ಆದಿಯನ್ನು ತೊರೆಯದಿದ್ದರೆ, ಅವನೇ ಅಭವನಾಗುತ್ತಾನೆ.

ರಜಸ್ಸು ಮತ್ತು ಸತ್ತ್ವ ಸಂಗವನ್ನೂ ತೊರೆದು, ಅರ್ಥಾತ್ ಹರಿಹರಾದಿಗಳಲ್ಲಿ ಆಸೆ ಉಡುಗಿ, ತ್ರಿಗುಣಾತೀತನಾಗಿ, ಶಾಂತ ಬುದ್ಧಿಯಿಂದ ಸುಖವನ್ನು ಪಡೆಯಬೇಕು. ತ್ರಿಗುಣಗಳ ಪ್ರಾತಿನಿಧಿಕರಾದ ಅಜ, ಹರಿ ಮತ್ತು ಹರರು ಸೃಷ್ಟಿ, ಸ್ಥಿತಿ ಮತ್ತು ಲಯಗಳ ಕಾರಣ ಕರ್ತರಾಗಿದ್ದಾರೆ. ಈ ಮೂರು ಗುಣಗಳಲ್ಲಿ ಯಾವುದು ಅಧಿಕ? ಮೂವರಿಗೂ ಎಟುಕದಂಥ ನಿರ್ಗುಣನಾದ ಪರಬ್ರಹ್ಮನೊಬ್ಬನುಂಟು; ಈ ಪರಬ್ರಹ್ಮವನ್ನು ಸ್ತುತಿಸಬೇಕು.

ಮೂರನ್ನು ಗ್ರಹಿಸಿ ಮತ್ತು ಮೂರನ್ನು ವಿಸರ್ಜಿಸಿ ಅಂದರೆ, ಸತ್, ಚಿತ್, ಮತ್ತು ಆನಂದ ಅರ್ಥಾತ್ ಸಚ್ಚಿದಾನಂದವನ್ನು ಗ್ರಹಿಸಿ, ತಮಸ್ಸು, ರಜಸ್ಸು ಮತ್ತು ಸತ್ತ್ವ ಗುಣಗಳೆಂಬ ಮೂರನ್ನು ವಿಸರ್ಜಿಸಿ, ದಾರೇಷಣ, ವಿತ್ತೇಷಣ ಮತ್ತು ಪುತ್ರೇಷಣಗಳೆಂಬ ಮೂರನ್ನು, ಜಾಗೃತ, ಸ್ವಪ್ನ ಮತ್ತು ಸುಷುಪ್ತಿಗಳೆಂಬ ಮೂರನ್ನು, ಮೀರಿ ಇಚ್ಛಾ, ಜ್ಞಾನ, ಕ್ರಿಯೆಗಳೆಂಬ ಶಕ್ತಿತ್ರಯಗಳೂ, ನಾದ, ಬಿಂದು ಮತ್ತು ಕಳೆಗಳೆಂಬ ತತ್ತ್ವ ಮೂಟೆಯೂ ಪರತತ್ತ್ವವೆನಿಸುತ್ತವೆ.

ಶಿವನ ಮುಖಗಳು ತಾತ್ತ್ವಿಕವಾಗಿ ಐದು. ಸದ್ಯೋಜಾತ ವಾಮದೇವ, ಅಘೋರ, ತತ್ಪುರುಷ ಈಶಾನ – ಈ ಪಂಚ ಮುಖಗಳಿಂದ ಪಂಚಾಕ್ಷರಿಯು ಅಂದರೆ ನ, ಮಃ, ಶಿ, ವಾ, ಯ ಜನಿಸಿತು. ಈ ಪಂಚ ವರ್ಣಗಳನ್ನು ಪಠಣ ಮಾಡಿ ಮುಕ್ತಿ ಪಡೆಯಬೇಕು. ಈ ಐದು ಮುಖಗಳಿಂದ ಅಂದರೆ ಸದ್ಯೋಜಾತ ಮುಖದಿಂದ ಭೂಮಿ ಹುಟ್ಟಿತು. ವಾಮದೇವ ಮುಖದಿಂದ ನೀರು, ಅಘೋರ ಮುಖದಿಂದ ಅಗ್ನಿ, ತತ್ಪುರುಷ ಮುಖದಿಂದ ವಾಯು ಹಾಗೂ ಈಶಾನ ಮುಖದಿಂದ ಆಕಾಶ ಹೀಗೆ ಪಂಚ ಮಹಾಭೂತಗಳು ಹುಟ್ಟಿದವು. ಇವುಗಳಿಂದ ತ್ರಿಭುವನವು ವ್ಯಾಪಿಸಿಕೊಂಡಿದೆ.

**೨೬೬೦ ಬಯಲಲಿ ಸರ್ವವು ಹುಟ್ಟಿತು,**
**ಬಯಲಲ್ಲಿಯೇ ಲೀನವಹುದು ಆ ಬ್ರಹ್ಮವೆನಲ್,**
**ಬಯಲನು ಮನದೊಳು ತಿಳಿವೊಡೆ,**
**ಬಯಲಿನಲಿ ಮುಕ್ತಿಯು ಬಟ್ಟ ಬಯಲ್ಕೈ ವೇಮಾ,**

— — — — — — — — — — — — — — — — — — — — —

೨೬೬೧ ಬಯಲಾದುದು ಎಷ್ಟೆಂದೆನೆ,
ಬಯಲಿಗೆ, ಬ್ರಹ್ಮಾಂಡಗಳಿಗೆ, ಹಿಡಿಸುವಷ್ಟಿಹುದೈ,
ವೇಗದಲಿ ರವಿಯಷ್ಟೆಂದೆನೆ,
ಭಯ ಪಡುವರವನ ನೋಡಲು, ಬಯಲಲಿ, ವೇಮಾ,

೨೬೬೨ ಬೈಲಲಿ ಬಂಧವ ಬೆರೆಸದೆ,
ಪಾಲಿಪ ಪರಮಾತ್ಮನಿಗೇ ವಾಂಛಿತನಪ್ಪಂ,
ಬೈಲಲಿ ಬಂಧವ ಬೆರೆಸಿರೆ,
ಕೈಲಾಸವ ಸೇರಿ ಮುಕ್ತಿ ನೋಳ್ಪರು ವೇಮಾ,

೨೬೬೩ ಬಯಲಿನೊಳಗೆ ಬಯಲು ಪರೀಕ್ಷಿಸಿ ನೋಡಲು,
ಬಯಲು ರೂಪ ಕಂಡು ಪ್ರೀತಿ ಹೊಂದಿ,
ಮಲಿನ ದೇಹದಲ್ಲಿ ಮೋಹ ತೊರೆಯರಲ್ಲ ! ವಿಶ್ವ

೨೬೬೪ ಆದಿಯೊಂದು ತಿಳಿದು ಆದಿಯಲಿ ಮನನಿಲಿಸಿ,
ಆದಿ ತೊರೆಯದಿರಲು ಅಭವನಾದ,
ಆದಿ ತೊರೆಯುವವನು ಅಂಧನ ರೀತಿಯೈ, ವಿಶ್ವ

೨೬೬೫ ಆದಿ ಮೂಲವೇನು ? ಆವುದು ಆಧಾರ ?
ಹೇಳೆ ಹೊಲ್ಲ ಕಣಿಯ, ಹುಡುಕಿ ಸುದ್ದಿ ;
ಜೊತೆಯು ಇರದೆ ಒಳಗೆ ಸರಿಗಾಣು ತುಲ್ಯವ; ವಿಶ್ವ

೨೬೬೬ ವಿಶ್ವಕರ್ಮ ಸೃಷ್ಟಿ ವಿವರವಾಗಿ ಗೆಯ್ಯೆ,
ವಿಶ್ವವೆಲ್ಲ ತೃಪ್ತವಾಗಿ ಉಂಟು,
ವಿಶ್ವಕರ್ಮನಲ್ತೆ ? ವಿಮಲ ವಿರಾಟಾದ ! ವಿಶ್ವ

೨೬೬೭ ವಿಶ್ವಕರ್ಮ ಬೀಜ, ವಿಶ್ವದೊಳಗೆ ಮತ್ತೆ,
ಪ್ರಾಣಿಯೆಂಬ ಬಳ್ಳಿ ಪೊಳೆಯುತಿಹುದು,
ಸಾಲು ಬಳ್ಳಿಗಳಳಿಯೆ, ಮೂಲ ಸಾಯದಲ್ಲ ! ವಿಶ್ವ

೨೬೬೮ ಅವನಿಲೋರ್ವ ಮಗುವು ಅವನ ಪಿತಗೆ ಹುಟ್ಟಿ,
ಅಂತೆಯೇ ಜಗಗಳು ಅಗಣಿತಾಗಿ,
ತಾಯಿಯಿಂದ ಬೆಳಿಗೆ ಧಾತ್ರಿ ಹಾಗಿಲ್ಲವೇ ? ವಿಶ್ವ

೨೬೬೯ ತಾಯಿ ತಂದೆಯೆನುವ ತತ್ತ್ವವನು ತಿಳಿಯರು,
ಯೋನಿ ಲಿಂಗಗಳಲಿ ಉದ್ಭವಿಸುತ,
ವಿಷ್ಣುವರಿಯೆ ತಾಯಿ, ವಿನುತ ರುದ್ರನು ತಂದೆ, ವಿಶ್ವ

೨೬೭೦ ತಾಯಿಯೊಬ್ಬಳು ಜಗದಿ ತಂದೆಯೊಬ್ಬನಿಹನು,
ಎಲ್ಲ ಲೋಕಗಳಲಿ ಎಣಿಸಿ ನೋಡೆ,
ಸುಳ್ಳು ಅಲ್ಲ ; ಗೌರಿ ಕರಕಂಠರೆ ಕಾಣು, ವಿಶ್ವ

೨೬೭೧ ಅವನಿಯೊಳೊಬ್ಬ ಸುತ ಅರಿಯೆ ಹುಟ್ಟಿನ ಪಿತ ;
ಅಂತೆ ಆಳ್ದ ಜಗವ ಅಗಣಿತವಿದ,
ತಾಯಿಯಿರದ ಹುಟ್ಟು, ಧಾತ್ರಿಯೊಳು ಶಕ್ಯವೆ ? ವಿಶ್ವ

೨೬೭೨ ಆದಿಗಾರೊ ಹುಟ್ಟಿ ಅವನಿಯ ದೊರೆಯಹರು,
ಅವರೆ ಬ್ರಹ್ಮ ವಿಷ್ಣು ಪರಶಿವರಲ,
ಕಾಣು ಮಾಯ ಶಕ್ತಿ ಘನ ತೇಜವೆನುವರು, ವಿಶ್ವ

೨೬೭೩ ಮೂಲ ಬ್ರಹ್ಮನಿಗೆ ಮೂವರು ಮೂರ್ತಿಗಳು,
ಹುಟ್ಟಿ ಕಾಲವೆಲ್ಲ ಪೋಷಿಸುತ್ತ,
ಸತ್ತು ಹುಟ್ಟುತಿಹರು ಜಗದಿ ಮಾಯೆಯಿಂದ, ವಿಶ್ವ

೨೬೭೪ ಅಲ್ಲಿ ಇಲ್ಲಿ ಎನದೆ ಅಖಿಲವ ಪರಿಕಿಸಲು,
ವಿಷ್ಣು ಚರಿಸುತಿಹನು ವಿದಿತವಷ್ಟೆ,
ಚಕ್ರಿ ತಿರುಗುವ ಭೂ ಚಕ್ರದೊಳಗೆ ಮತ್ತೆ, ವಿಶ್ವ

೨೬೭೫ ಈಶನಿಗೆ ಈಯಲು ಇನಿತಾದರು ದೋಷ,
ಬ್ರಹ್ಮಗೇನೊ ತಕ್ಕ ಭೂರಿ ದೋಷ !
ವಿಷ್ಣು ದೇವನಿಗಿದು ವಿಪರೀತವಿಹ ದೋಷ, ವಿಶ್ವ

೨೬೭೬ ಕೆಂಪು ವರ್ಣದೊಳಗೆ ನೋಡಿ ಏಕಾಕ್ಷರಿಯ
ಬಿಳಿಯ ವರ್ಣದೊಳಗೆ ಬೆಳಗುತಿದ್ದು,
ಕಪ್ಪು ವರ್ಣದಿಂದ ಗಡನೆ ನಟಿಸಿ ನೋಡು, ವಿಶ್ವ

೨೬೭೭ ಏಕಾಕ್ಷರವೆ ಬ್ರಹ್ಮವೇಕಾಕ್ಷರ ವಿಷ್ಣು,
ಏಕಾಕ್ಷರಂ ಶಿವನು, ಎಣಿಸಿ ನೋಡೆ,
ಏಕಾಕ್ಷರವ ದಾಟಿ, ಏನು ಇಲ್ಲ ಮತ್ತೆ, ವಿಶ್ವ

೨೬೭೮ ಅಕ್ಷರ ಪದಕೆ ದಶ ಸಾವಿ–
ರಕ್ಷರಗಳನರಿವುದೇಕೆ ಸಲೆ 'ಶಿವ' ಎರಡೇ
ಅಕ್ಷರದಿ ದುರಿತವಡಗುವುದು,
ತತ್‌ಕ್ಷಣವೆ ಪದವಿಯುಂಟು, ತಥ್ಯವು, ವೇಮಾ,

೨೬೭೯ ಮೊದಲ ಬ್ರಹ್ಮ ; ಮನುವು ಮೊನೆಯ;ಎರಡುಮಯನು,
ಮೂರು ತ್ವಷ್ಟ್ಯ ಶಿಲ್ಪಿ ಮೊನೆಯ ನಾಲ್ಕು
ವಿಶ್ವಕರ್ಮ ; ಹಬ್ಬಿ ವಿಶ್ವಜ್ಞನೈದರಲಿ, ವಿಶ್ವ

೨೬೮೦ ಚಕ ಚಕ ಒಂದೆರಡೆನ್ನುತ–
ಪ್ರಕಟಿತವಹ ಲೆಕ್ಕವಿಟ್ಟು ಏರುತ ಸಾಗಲ್,
ನಿಕರವಹ ಅರಿವು ದಾಟುತ,
ಸಕಲೇಶನ ಕಾಣಲದುವೆ ಸರಸವು ವೇಮಾ,

೨೬೮೧ ಎರಡು ಎರಡು ಎರಡು ಎರಡೆರಡರ ಒಳಗೆ
ಎರಡು ಮೀರಿದಂಥ ಎಣಿಕೆಯೊಳಿಹ,
ಗುಡ್ಡವೇರಲಿಕ್ಕೆ ಗುರುತು ತಿಳಿಯಲಳವೆ ? ವಿಶ್ವ

೨೬೮೨ ಎರಡು ಎರಡು ಎರಡು ಎರಡು ಎರಡು ಬಿಟ್ಟು,
ಎರಡರಾಚೆಯಿರುವದೆಂಥ ಲೆಕ್ಕ ?
ಘಟದ ಒಳಗೆ ನೋಡಿ ಗುಣ ಸುಖದಿ ಇಹನು, ವಿಶ್ವ

೨೬೮೩ ಆದಿ, ತುದಿಯು ಇಲ್ಲ, ಅನುಭವ ಗಮ್ಯವದು,
ವೇದ ತುಲ್ಯನಾಗಿ ವಿರಾಜಿಪನು,
ವಾದ ಭೇದ ಉಡುಗಿ ವರಿಸುವ ಶಿವಯೋಗಿ, ವಿಶ್ವ

೨೬೮೪ ಆದಿ ನೋಡುತಿರಲು, ಅಖಿಲವು ತಾನುಂಟು,
ಆದಿ ನೋಡಲಾರಿಗಳವು ಇರದು,
ಆದಿ ಮುಕ್ತಿ ಮಾರ್ಗ ಆತ್ಮದೊಳಗೆ ಉಂಟು, ವಿಶ್ವ

೨೬೮೫ ಆದಿ ಏಕವರಿತು ಆದಿಲಿ ಮಾನ ನಿಲಿಸಿ,
ಆದಿ ತೊರೆಯದಿರಲು ಅಭವನುಂಟು ;
ಆದಿ ತೊರೆಯುವವನು ಅಂಧಕನ ತೆರನಿಹ, ವಿಶ್ವ

೨೬೮೬ ಎರಡು ಮೂರಕ್ಷರ ಸಾಧನ ;
ಪರನಹ ನಿರ್ವಾತ ದೀಪ ಪದ್ಧತಿ ಮನದೋಳ್,
ಗುರು ದಾಟಿ ಬಯಲು ಸೇರಲು,
ನಿರುಪಮ ಸಾನಂದ ಮೂರ್ತಿ, ನಿತ್ಯನು ವೇಮಾ !

೨೬೮೭ ಇಷ್ಟು ಚಿಂತೆಯೇಕೆ ? ಏಕಾಂತ ಬುದ್ಧಿಯಿಂ,
ಹರಿಹರಾದಿಗಳಲಿ, ಆಶೆ ಉಡುಗಿ,
ಶಾಂತ ಬುದ್ಧಿ ಹೊಂದಿ, ಸಂಪಾದಿಸು ಸುಖವ, ವಿಶ್ವ

೨೬೮೮ ಹರಿವಿಧಿ ಸುರ ಮುನಿಯಾದಿಗೆ
ನಿರುತದಿ ಸಿಕ್ಕು, ಜನಿಸಿದ ಬಳಿಕ ಮೇಲ್ಮೈ ಕೆಡುತಾ,
ಜರೆ ಮರಣಗಳನು ಹೊಂದುತ,
ಸರಣಿಯ ವರ್ತನೆ ಮಾಯಾ ವಾಸನೆ ವೇಮಾ.

೨೬೮೯ ಅಖಿಲ ಜೀವಿಗಳನು ಅಜನೆ ಹುಟ್ಟಿಸಿದನು,
ವಿಷ್ಣು ಅವುಗಳನ್ನು ವೃದ್ಧಿಗೊಳಿಪ,
ಶಿವನು ಸಕಲರನ್ನು ಶಿಕ್ಷಿಸುತ್ತಲಿಹನು, ವಿಶ್ವ

೨೬೯೦ ತ್ರಿಜಗಂಗಳ ನಿರ್ಮಿಸುತ್ತ,
ತ್ರಿಜಗಗಳಲಿ ಭುಕ್ತಿ ಮುಕ್ತಿ ತೀರಿಸಿ ನಡೆವನ್,
ಅಜ ಹರಿ ರುದ್ರರು ತಾನೇ,
ಭುಜಿಸುತಿರಲು ವಿಶ್ವಕರ್ಮ ಬ್ರಹ್ಮವು ವೇಮಾ.

೨೬೯೧ ಪ್ರಣವ ಮಂತ್ರ ಮಹಿಮೆ ಭಾವಿಸಲು ಲಿಂಗವು,
ಮೂರು ಮೂರ್ತಿಗಳಲಿ ಮನಸು ಇರಿಸಿ,
ಅವನ ನರಿತುಕೊಳಲು ಅನ್ಯರಿಗೆ ಶಕ್ಯವೆ ? ವಿಶ್ವ

— — — — — — — — — — — — — — — — — — — — — —

೨೬೯೨ ಮೂವರೊಳಗೆ ಹೆಚ್ಚು ಮುನ್ನ ಕಾಣಲಿಲ್ಲ,
ನರಕಗಳಿಗೆ ಹೋಹ ನರರು ಉಂಟು,
ಮೂವರಿಗೆಟುಕದಂಥ ಮೂಲ ಮೂರ್ತಿಯೋರ್ವ, ವಿಶ್ವ

೨೬೯೩ ಮೂವರನ್ನು ಅರಿತು, ಮೂಲವನ್ನು ಅರಿತು,
ಮೂವರ ಮೇಲೊಬ್ಬರ ಮುನ್ನ ಅರಿತು,
ಪರಮ ಜಿಹ್ವೆಯಿಂದ ಪ್ರಸ್ತುತಿ ಗೆಯ್ಯಿರೋ, ವಿಶ್ವ

೨೬೯೪ ಮೂವರಾರು ಎನಲು ಮೂವರೊಳಗೆ ಇಹರು,
ಮೂವರನರಿಯರಲ ಮೂಢ ಜನರು !
ಮೂಲವು ಮೂವರಿಗೆ ಮುಖ್ಯವಾಗಿ ಉಂಟು, ವಿಶ್ವ

೨೬೯೫ ಮೂರು ಲೋಕಗಳಲಿ ಮನವನೊಂದು ಮಾಡಿ,
ಆರು ಲೋಕಗಳನು ಹೊಂದಿಸಿಟ್ಟು,
ಸ್ಥಿರವಾಗಿರುವಂಥ ಶಿವಮೂರ್ತಿಯೆ ಗುರುವು, ವಿಶ್ವ

೨೬೯೬ ಬ್ರಹ್ಮ ಕೊಂದು ವಿಷ್ಣು ಭಾಗದೊಳಗೆ ಬೆರೆಸಿ,
ವಿಷ್ಣು ಕೊಂದು ಶಿವನ ಒಳಗೆ ಬೆರೆಸಿ,
ಶಿವನ ಕೊಂದು ತಾನು ಶಿವಯೋಗಿಯಾದನು, ವಿಶ್ವ

೨೬೯೭ ಮೂರು ಗುಣಗಳೊಂದೆ ಮೊದಲಿಗೇ ಇರುವವು,
ಸೇರಿ ಮೂಲವಿಡಿವ ಜ್ಞಾನವಿರದೆ,
ಭ್ರಮೆಗೆ ಸಿಕ್ಕ ಕರ್ಮಿ ಬಲು ಹುಚ್ಚನಾಗನೆ ? ವಿಶ್ವ

೨೬೯೮ ಮೂರುಗಳ ಗ್ರಹಿಸಿ, ಮೂರನ್ನು ವಿಸರ್ಜಿಸಿ,
ಮೂರು ಮೂರು ಮೂಟೆ ಮೂಟೆ ರೋಸಿ,
ಮೂರು ಮೂರು ಮೂರು ಮೂಟೆಯೇ ತತ್ತ್ವವು, ವಿಶ್ವ

೨೬೯೯ ಕಮಲ ಭವನು ಗೆಯ್ದು ಕಡು ಸೃಷ್ಟಿಯೆನುವರು,
ಹರಿ ಪಾಲಿಪ; ಕೊಲುವ ಹರನೆನುವರು,
ಮೂರ್ತಿಗಳಿಷ್ಟಿರಲು ಮೂಲ ಒಂದೆ ಅಲ್ತೆ ? ವಿಶ್ವ

೨೭೦೦ ಮೂರು ಗುಣಗಳಲ್ಲಿ ಮುಖ್ಯವಾದ ಗುಣವ,
ತಿಳಿಯಲಾರದವನು ತೊಳಗಲೆಂತು ?
ಭ್ರಮೆಗೆ ಸಿಲುಕುವವನೆ ಬಲು ಹುಚ್ಚನಾಗುವ, ವಿಶ್ವ

೨೭೦೧ ಹಲವು ಕರ್‍ರಗುಂಟು, ಹಲವು ಕೆಂಪಗುಂಟು,
ಹಲವು ಬೆಳ್ಳಗುಂಟು, ಜಲ ನೈದಿಲೆ,
ಒಂದೆ ರೀತಿಯಿರದ ಒಪ್ಪ ಕಾರಣವೇನು ? ವಿಶ್ವ

೨೭೦೨ ವಿಷ್ಣುವಿಂಗೆ ದೋಷ, ವೃಷಭಾಂಕಗೆ ದೋಷ,
ಬ್ರಹ್ಮನಿಗೆ ದೋಷ ಬಹಳ ಕಾಣು !
ವೇಮನಗೊಂದು ದೋಷ, ಬಡಿಸೆ ಶಿವನು ಹೇಳು. ವಿಶ್ವ

೨೭೦೩ ಹರಿ ವಿಧಿ, ಸುರಮುನಿಗಳಾದಿ,
ಮೆರೆದರು ಜನ್ಮಿಸಿದ ಬಳಿಕ
ಓರೆ ಹೊಂದಿ ಮರಣ ಹೊಂದುತ,
ಇರುತಿಹ ಪರಿಯದುವೆ ಕರ್ಮ ವಾಸನೆ ವೇಮಾ !

೨೭೦೪ ಇಷ್ಟು ದುಗುಡವೇಕೆ ? ಏಕಾಂತ ಮತಿಯಿಂದ,
ಹರಿ ಹರಾದಿಗಳಲಿ ಆಶಯುಡಿಗಿ
ಶಾಂತ ಬುದ್ಧಿ ಇರಲು ಸಲೆಗೂಡುವುದು ಸುಖ, ವಿಶ್ವ

೨೭೦೫ ಹರಿ ಹರಾದಿಗಳಲಿ ಹರಿದು ಹಾಕಿ ಆಶೆ,
ಶಾಂತ ಬುದ್ಧಿಗೂಡಿ, ಸಗುಣದಲ್ಲಿ,
ಚಿಂತೆ ತೊಡೆದು, ಬಳಿಕ ಚಿನ್ಮಯವನು ಹೊಂದು, ವಿಶ್ವ

೨೭೦೬– ಅರಿಹ ಮೂರಿಹ ಕಿಂಡಿಯ
ಆರೈಸಿ ಮುಚ್ಚುವನಲಿ ತೇಜ ಹೊಳೆವುದೈ,
ಚಾರು ಮತಿವಂತ ಪುರುಷನು
ಸೇರುವ ಮೋಕ್ಷದ ಹಾದಿಯ, ಸಿದ್ಧವು ವೇಮಾ,

೨೭೦೭ ಐದು ಮನಸು ತಗಲಿ, ಐದು ಮನೆಯೊಳಡಗಿ,
ಐದು ವ್ಯಾಪ್ತಿಗಳನು ಮಣಿಸಲಾರ,
ಐದು ಅಕ್ಷರಗಳನು ಅರಸಿ ಜಪಿಸುತಿರೋ, ವಿಶ್ವ

೨೭೦೮ ಪಂಚ ಶತ್ರು ಕೊಂದು, ಪಂಚ ಬಾಣನ ಗೆಲಿದು,
ಪಂಚ ವರ್ಣಗಳನು ಪಠಣ ಮಾಡಿ,
ಪಂಚ ಮುಖವುಳ್ಳ ಭವ ಸಂಜ್ಞಿರುವನ
* ಪಂಚ ಸೇರುವವನು ಪೊಳೆವ ವೇಮ,
* ಪಂಚ = ಪಕ್ಕ; ಬಳಿ

೨೭೦೯ ಪಂಚ ಮುಖಗಳಲ್ಲಿ ಪಂಚಾಕ್ಷರಿ ಜನಿಸಿತು,
ಪಂಚ ವರ್ಣಗಳಲಿ ಪ್ರಬಲ ಜಗವು,
ಪಂಚ ಮುಖನ ಮೀರಿ ಪ್ರಸ್ತುತಿ ಗೆಯ್ಯಿರೋ, ವಿಶ್ವ

೨೭೧೦ ಪಂಚಾಕ್ಷರಿ ಬೀಜಂಗಳ
ಅಂಚಿತವಾಗಿ ಅರಿಯುವವ ಅಖಿಲಜ್ಞನಿಹನೈ,
ವಂಚನವರಿಯದ ಕುವಲಯ,
ಸಂಚಾರ ಮಾಳ್ಪ ಆತನು ಶಂಭುವು ವೇಮಾ,
೧. ಅಂಚಿತ – ಸ್ಪಷ್ಟವಾಗಿ, ಹೊಳೆಯುವ
೨. ಕುವಲಯ – ಭೂಮಿ

೨೭೧೧ ಐದು ಅಕ್ಷರಗಳ ಅಂಗವನು ತಿಳಿದೊಡೆ,
ಐದರಲ್ಲಿ ಮುಕ್ತಿ ಅಂದವುಂಟು,
ಐದರೊಳಗೆ ಇಪ್ಪ ಅವನೆ ಹೋಗು ಬ್ರಹ್ಮ, ವಿಶ್ವ

೨೭೧೨ ಐದು ವರ್ಣಗಳಲಿ ಅಖಿಲವನು ತಿಳಿದೊಡೆ,
ಐದರಲ್ಲಿ ಮುಕ್ತಿ ಅಂಟಿ ಇಹುದು,
ಐದರೊಳಗೆ ಇರಲು ಅವನೆ ಹೋಗಖಿಲವು, ವಿಶ್ವ

೨೭೧೩ ಐದು ಅಕ್ಷರಗಳ ಅಂಗಗಳನು ತಿಳಿದು,
ಐದರಲ್ಲಿ ಮುಕ್ತಿ ಅಮರ ಉಂಟು,
ಐದರೊಳಗೆ ಇರುವ ಅವನನು ತಿಳಿದುಕೋ ! ವಿಶ್ವ

೨೭೧೪ ಪಂಚವರ್ಣವರಿಯೆ, ಪರಮನನ್ನು ಅರಿವ,
ಪರಮನರಿಯೆ ನಿತ್ಯ ಪ್ರಜ್ವಲಿಪನು,
ಪ್ರಜ್ವಲಿಸುವ ಅವನೆ ಪರಮಾತ್ಮನಪ್ಪನು, ವಿಶ್ವ

---

೨೭೧೫ ಐದು ವರ್ಣಗಳು ಆನಂದವರಿತೊಡೆ,
ಅಲ್ಲಿ ಹೊಂದಿ ಮುಕ್ತಿ ಅರಳುತಿಹನು,
ಐದರೊಳಗೆ ತಿಳಿಯೆ, ಅದುವೆ ಹೋಗು ಬ್ರಹ್ಮ, ವಿಶ್ವ

೨೭೧೬ ಐದು ಮನಸಿಗೆ ತಗಲಿ, ಐದನೂ ತಾ ಹಿಡಿದು,
ಐದರ ವ್ಯಾಪ್ತಿಯ ಅರಿಯಲಾರ,
ಐದು ಅಕ್ಷರಗಳ ಆಯ್ದು ಜಪಿಸಬೇಕು, ವಿಶ್ವ

೨೭೧೭ ಏಳು, ಐದು, ಆರು, ಎಂಟು, ಒಂಭತ್ತು,
ಯಾವ ಕಟ್ಟು ಉಂಟೋ ? ಎಂತೊ ತಿರುಗಿ,
ಬಾಡಿ ಬಾಡಿದಂತೆ ಬಾಡದಿಹುದಾವುದೊ ? ವಿಶ್ವ

೨೭೧೮ ಏಳು ಎರಡು ತಿನಲು ಇಳೆಯಲಿ ನಿಲುವನು,
ಏಳು ಮೂರು ತಿನಲು, ಇಳೆ ಬೆಳಗಿತು,
ಏಳು ನರನು ತಿಳಿದು, ಯೋಗಿಯಾಗಬೇಕು, ವಿಶ್ವ

೨೭೧೯ ಏಳು ಐದು ಆರು ಎಂಟು ಮತ್ತೆ ಒಂದು,
ನಾವೆಯೊಳಗೆ ಇದ್ದು, ನೀಗಿ ಮರೆಯ,
ನಾವೆ ಹತ್ತಿ ತಿರುಗಿ, ನೋಡಲದುವೆ ತತ್ತ್ವ ವಿಶ್ವ

೨೭೨೦ ಐದು ಐದು ಆರು ಎಂಟು ಮತ್ತೆ ಒಂದು,
ನಾವಿಯೊಳಗೆ ಉಂಟು ನಡುವೆ ಕಂಭ,
ತಿರುಗೆ ನಾವನೇರಿ ತಾನೆ ತತ್ತ್ವಕೊಡೆಯ, ವಿಶ್ವ

೨೭೨೧ ಪಂಚ ಶತ್ರುವರಿತು, ಪಂಚ ಶರನಗೆಲಿದು,
ಪಂಚ ವರ್ಣಗಳನು ಪಠಣ ಮಾಡಿ,
ಪಂಚ ಮುಖವು ಆಗಿ, ಭವ–ಸಂಜಯುಳ್ಳವನ
ಬಳಿಗೆ ಸೇರುವವನೆ ಬ್ರಹ್ಮ ವೇಮ,

೨೭೨೨ ಆರುಗಳನು ಕಡಿದು ಹರಿಯ ಮೇಲೆ ಧ್ಯಾನ,
ನಿಲಿಪಿ ನಿಶ್ಚಯದಿಂದ ನೆಗೆದು ಆತ್ಮ
ಗತಿಯನರಿಯುತಿಹನು ಘನನೆ ಆದ ಯೋಗಿ, ವಿಶ್ವ

— — — — — — — — — — — — — — — — — — — — — —

೨೭೨೩  ಆರು ಮೂರು ಕಟ್ಟಿ ಆಳಲು ಹೊಂದದಿರುತ,
ಹೋರಿ ಗುಣವ ಮೆಟ್ಟಿ ಹೆಚ್ಚು ದೃಢವಿ,
ತೇರು ಶಿಖರ ಹತ್ತಿ ತಿಳಿವು ತಲುಪಿ ಕಾಣು,                    ವಿಶ್ವ

೨೭೨೪  ಆರುಗಳನು ಸೇರೆ, ಅತ್ಯಂತ ದುಃಖವು,
ಏಳುಗಳನು ಕೂಡೆ ಎಷ್ಟೆ ಅಳಲು,
ಬೇಗವಿದರ ಸಂಗ ಬಿಡುವುದೆ ಯೋಗವದು,                    ವಿಶ್ವ

೨೭೨೫  ಏಳು ಅಕ್ಷರಗಳಲಿ ಆನಂದ ಹೊಂದುತ,
ಅಲ್ಲಿ ಇಲ್ಲಿ ಮುಕ್ತಿ ಅರಳಿ ಉಂಟು,
ಅಲ್ಲಿ ಇಲ್ಲಿ ತಿಳಿಯೆ, ಅವನೆ ಹೋಗು ಬ್ರಹ್ಮ,                    ವಿಶ್ವ

೨೭೨೬  ಏಳು ಮಾರ್ಗಗಳನು ಏಕಾಂತದಲಿ ಸೇರಿ,
ಆಡಿ, ಪಾಡಿ ಮುಕ್ತಿ ಕೂಡಿ ಬೇಡಿ,
ಜಾಡಿನೊಳಗೆ ಬಯಲು ಸಾಧಿಸಿ ಕಾಣಿರೋ,                    ವಿಶ್ವ

೨೭೨೭  ಈಶ್ವರನ ತಿಳಿಯಲು ಏಳು ಪಾಲು ಗೈಯ್ದು,
ತನ್ನ ಮೂರ್ತಿಯಲ್ಲಿ ಧಾರೆಯೆರೆದು,
ನಿತ್ಯ ಕರ್ಮಗಳನು ನಿಲಿಸುವ ನೆರೆ ಯೋಗಿ,                    ವಿಶ್ವ

೨೭೨೮  ಅಚರ ಚರ ಸಮೂಹ ಅಂಗ ಲಿಂಗಗಳಿಸಿ
ಸರಣಿ ತಿಳಿಯದಂಥ ಶೈವವೇಕೆ ?
ಅಷ್ಟ ತನುವೊಳೊಪ್ಪ ಹರನನರಿಯರಲ್ಲ ?                    ವಿಶ್ವ

೨೭೨೯  ಎಂಟು ಅಕ್ಷರಗಳಲಿ ಏರ್ಪಡುವುದನರಿತು,
ಕೇಳಿ ಕಂಡು ಬರದೆ, ಕುಳಿತಿರುವನು,
ತನುವ ಮರೆತು ತಿಳಿಯೆ, ತತ್ತ್ವಜ್ಞನಾಗುವ,                    ವಿಶ್ವ

೨೭೩೦  ಎಂಟು ಅಕ್ಷರಗಳ ಏರ್ಪಡಿಸಿ ಅರಿಯುತ
ಕೇಳಿ ಕಾಣದಿದ್ದು ಬೆಳಗುವವನು,
ತನುವ ಮರೆತು ತಿಳಿಯೆ ತತ್ತ್ವಾತ್ಮನಹನಲ !                    ವಿಶ್ವ

೨೭೩೧ ಐದು ಐದು ಎಂಟು ಆರು ಎಲ್ಲ ಒಂದೆ,
ಹಡಗದಲ್ಲಿ ಉಂಟು ಅಡಗಿ ಆಚೆ,
ಹಡಗವೇರಿ ನಡೆವ ಒಡೆಯನಯ್ಯ ತತ್ತ್ವ, ವಿಶ್ವ

೨೭೩೨ ಏಳು, ಐದು, ಆರು, ಎಂಟು ಒಂಭತ್ತು,
ಎಷ್ಟೋ ಕಟ್ಟು ಇಹವು, ಎಂಥ ತಿರುಗು ?
ಪಾಡು ಪಡುವಕಿಂತ ಪಾಡು ಆದುದೇನು ? ವಿಶ್ವ

೨೭೩೩ ಒಂದನೊಳಗೆ ಹೊಡೆದು, ಒಂದನೊಳಗೆ ಇರಿಸಿ,
ಒಂದನೊಳಗೆ ನೋಡು ಒಂದೇ ನೋಟ ;
ಒಂದರಲ್ಲಿ ನೋಡೆ, ಒಪ್ಪ ಮುಕ್ತಿಯುದಯ, ವಿಶ್ವ

೨೭೩೪ ಎರಡು ದಶವಾರನೆ ತತ್ತ್ವವ
ಅರಿಯುತ, ಜೀವಾತ್ಮ ನೆಲೆಯೊಳಾ ಪರಮಾತ್ಮನ್,
ಇರವನು ಹೊಂದುತ ಗುರು ಪದ
ಪರಿಯುತ ಗುರುವೆಂದೆಣಿಸುತ ಇಪ್ಪುದು ವೇಮಾ,

೨೭೩೫ ಷೋಡಶಾಕ್ಷರಗಳ ಶೋಧಿಸಿ ಮನದೆಣಿಸಿ,
ಗೂಢ ಭಾವ ಹೊಂದಿ, ಗಟ್ಟಿ ಹಿಡಿದು,
ಹೊಳೆವಚ್ಚರಿ ಮುಕ್ತಿ ಹೊಂದಿ, ಗಗನ ನೋಡು, ವಿಶ್ವ

೨೭೩೬ ಮೂವತ್ತೆರಡಕ್ಷರಗಳು
ಓದಿ ತಿಳಿಯುತಿರೆ ಮುಪ್ಪರಿಗೊಂಡಿಹ ಮೂಲಂ,
ತೀವ್ರವೆ ಕಡೆಗಾಗು ವನವ
ಒಪ್ಪ ನುಡಿವೆ ; ಮಹಿಮೆ ನಿನಗೆ ತಪ್ಪದು ವೇಮಾ.

●

## ತತ್ತ್ವ ನಿರ್ಣಯ (೩)

ಪ್ರಕೃತಿಯು ತ್ರಿಗುಣಾತ್ಮಕವಾದುದು. ಪುರುಷನ ಮೇಲೆ ಪ್ರಕೃತಿಯ ಪ್ರಭಾವವು ಎಷ್ಟು ಹೆಚ್ಚಾಗಿರುವುದೋ ಅಷ್ಟು ಪುರುಷನು ಗುಣಾನ್ವಿತನಾಗುವನು.

ಪುರುಷನ ಮೇಲೆ ಪ್ರಕೃತಿಯ ಸತ್ತ್ವಗುಣದ ಪ್ರಭಾವವು ಅಧಿಕವಾದಾಗ ಮಹತ್ ಇಲ್ಲವೆ ಬುದ್ಧಿ ತತ್ತ್ವವು ವ್ಯಕ್ತವಾಗುತ್ತದೆ. ಇದು ಅಸ್ತಿತ್ವ ಪ್ರಜ್ಞೆಯಾಗಿದೆ.

— — — — — — — — — — — — — — — — — — — — — —

ಮಹತ್‌ದ ಮೇಲೆ ರಜೋಗುಣದ ಪ್ರಭಾವ ಹೆಚ್ಚಾದಾಗ, ಅಹಂ ತತ್ತ್ವವು ವ್ಯಕ್ತವಾಗುತ್ತದೆ. ಇಲ್ಲಿ ಸ್ವಾಮಿತ್ವಾಭಿಮಾನ ಮತ್ತು ಕರ್ತೃತ್ವಾಭಿಮಾನಗಳಿರುತ್ತವೆ. ಇನ್ನು ಅಹಂ ತತ್ತ್ವದ ಮೇಲೆ ತಮೋಗುಣದ ಪ್ರಭಾವವು ಹೆಚ್ಚಾದಾಗ, ಚಿತ್ತ ತತ್ತ್ವವು ವ್ಯಕ್ತವಾಗುತ್ತದೆ. ಚಿತ್ತ, ಅಹಂ ಮತ್ತು ಮಹತ್ ತತ್ತ್ವಸಂಕುಲದ ಸಾಮೂಹಿಕ ಹೆಸರೇ ಮನಸ್. ಹೀಗೆ ಮನಸ್ಸಿನಲ್ಲಿಯೇ ಬುದ್ಧಿ, ಅಹಂಕಾರ ಮತ್ತು ಚಿತ್ತಗಳು ತೋರುತ್ತವೆ.

ಚಿತ್ತದ ಮೇಲೆ ತಮೋಗುಣದ ಅಧಿಕ ಪ್ರಭಾವದಿಂದ ಆಕಾಶ, ವಾಯು, ಅಗ್ನಿ, ಅಪ್ ಮತ್ತು ಪೃಥಿವೀ ತತ್ತ್ವಗಳು ಕ್ರಮವಾಗಿ ವ್ಯಕ್ತವಾಗುತ್ತವೆ.

ಬಾಹ್ಯ ಜಗತ್ತಿನ ಸೃಷ್ಟಿಯ ಕ್ರಮವರಿತೆವು. ಈ ಬಾಹ್ಯ ಜಗತ್ (ಗಚ್ಛತಿ ಇತಿ ಜಗತ್) ಚಿತ್ತ ವೃತ್ತಿಗಳು ಇಂದ್ರಿಯಗಳ ಮೂಲಕ ಬಾಹ್ಯ ವಿಷಯಗಳಿಗೆ ತಾಕಿ, ಪ್ರತಿಫಲಿತವಾಗಿ ಇಲ್ಲವೆ ಪರಾವರ್ತಿತವಾಗಿ ಮರಳಿ ಚಿತ್ರದಲ್ಲಿ ತದಾಕಾರ ಮಾನಸ ಜಗತ್ ಉಂಟಾಗುತ್ತದೆ. ಕೆಲವೊಮ್ಮೆ ಸ್ವಪ್ನಚಿತ್ತದಲ್ಲಿಯಂತೆ, ಪೂರ್ವ ಸಂಸ್ಕಾರಗಳೇ ಸಂವೇದನೆಯನ್ನು ಉಂಟು ಮಾಡಬಹುದು.

ಪಂಚ ಮಹಾಭೂತಗಳಿಗೆ ಮೀರಿದ ಮೂಲಶಕ್ತಿಯೊಂದಿದೆ. ಅದನ್ನು ಹೊಂದಿದರೆ, ಎಲ್ಲವನ್ನೂ ಬೆಳಗಿಸುವ ಜ್ಯೋತಿಯೇ ತಾನೆಂಬುದು ವೇದ್ಯವಾಗುವುದು. ತಾನೇ ಈ ಎಲ್ಲ ಜಗಗಳನ್ನು ಹೆಣೆದಿರುವುದು ಸುಸ್ಪಷ್ಟವಾಗುತ್ತದೆ.

ಸೂಚನೆ: ಮುಂದೆ ಕೂಟ ವೇದಾಂತ ಪದ್ಯಗಳಿವೆ. ಇವುಗಳಿಗೆ ಪ್ರತಿ ಪದ್ಯಕ್ಕೂ ವಿವರವಾದ ಟೀಕೆ ಟಿಪ್ಪಣಿಗಳ ಅಗತ್ಯವಿದೆ. ಆದರೆ ಪ್ರಸ್ತುತ ಗ್ರಂಥದ ಸಂಯೋಜನೆಯ ವ್ಯಾಪ್ತಿಗೆ ಅದೆಲ್ಲ ಹೊರತಾಗಿದೆ. ಕಾರಣ, ಜಿಜ್ಞಾಸು ಓದುಗರ ಲಕ್ಷ್ಯವನ್ನು ನಾವು ಈ ಮುನ್ನ ಪ್ರಕಟಿಸಿದ "ಅವರಿವರು ಕಂಡಂತೆ ವೇಮನ" ಪುಸ್ತಕದ "ಸಾಲುಗಳ ನಡುವಿನ ಓದು" ಅಧ್ಯಾಯದತ್ತ ಸೆಳೆಯಬಯಸುತ್ತೇವೆ.

**೨೭೩೭ ಮನದಲ್ಲಿ ಬುದ್ಧಿಯು ಮತ್ತಾ**
**ಘನತರಹಂಕಾರವ ಕಾಣುತ, ಗಡಬಡಿಸುತಾ,**
**ಕೊನರಿದ, ಅಂತಃಕರಣವು**
**ಎನಲಾ ಮುತ್ತಾಯ್ತು, ಅದನೆ ಅರಿವುದು ವೇಮಾ,**

**೨೭೩೮ ಮನದಲಿ ಬುದ್ಧಿಯು ತೋಚಿತು ;**
**ಮನದಲಹಂಕಾರವಿರುವುದು ಮನದಲಿ ಚಿತ್ತಂ,**
**ಹೆಣೆಯುತ ನಾಲ್ಕೂ ವಿಧಗಳ**
**ಎಣಿಸುತ ತನ್ನ ತನುವ ತಿಳಿಯಲಾರ ವೇಮಾ,**

— — — — — — — — — — — — — — — — — — — — — —

೨೭೩೯ ಮನಸನು, ಬುದ್ಧಿಯ ಮರೆಯುತ,
ಘನವದ ಅಹಮನು ಕಂಡುಕೊಳ್ಳಬೇಕು ಶೀಘ್ರಂ,
ಮಿನುಗುವ ಅಂತಃಕರಣಂ–
ದೆನಿಸುವ ಮುಖ್ಯವಿಹ ಇದನೆ, ಅರಿವುದು, ವೇಮಾ,

೨೭೪೦ ಚಿತ್ತವ, ಬುದ್ಧಿಯ ಮರೆಯುತ,
ಹತ್ತಿದಹಂಕಾರಗಳನು, ಆತ್ಮದ ಒಳಗೇ
ಮೊತ್ತವ ಗೆಯ್ಯಲು ಅರಿಯದ
ಮತ್ತರಿಗೆ ಮುಕ್ತಿಯಿಲ್ಲವು, ಮಹಿಯಲಿ, ವೇಮಾ,

೨೭೪೧ ಪಂಚ ಮಹಾಭೂತವಾಗಿ,
ಪಂಚ ಶರೀರಗಳಾಗಿ, ಬ್ರಹ್ಮಾಂಡದೊಳಾ
ಪಂಚಾವಸ್ಥೆಗಳ ದಾಟಿ,
ಸಂಚರಿಸದೆ ಪರಿಪೂರ್ತಿಯ ಹೊಂದುವ, ವೇಮಾ !

೨೭೪೨ ಪಂಚಭೂತ ಮತ್ತು ಪರಮ ಇಂದ್ರಿಯಗಳು,
ಸಂಚರಿಸುತ ಇರಲು ಜಗತ್ ಉಂಟು,
ಸಂಚರಿಸದೆ ಇರಲು ಜಗವೆಂತಾಗುವುದು ? ವಿಶ್ವ

೨೭೪೩ ಭೂತಂಗಳೈದು ಇರೆ, ನಿ–
ರ್ಣೀತವಹ ಸುರರೊಳಗೆ ಇನ ಚಂದ್ರರು ಎಂ–
ಬಾ ತೆರನಿಹ ಲೋಕಗಳಲಿ,
ಸ್ಯೂತವಹ ಪ್ರಕೃತಿ ಬ್ರಹ್ಮ, ಸೂಚ್ಯವು ವೇಮಾ,

೨೭೪೪ ಭೂತಗಳಿಂ ಮೇಲೆ ಕಾಣೆ,
ಖ್ಯಾತವಿಹ ಮೂಲ ಶಕ್ತಿಯಹುದೊಂದು, ಹೊಂದಲ್,
ಜ್ಯೋತಿಯ ಒಳ ಹೊರ ತಾನೇ
ಸ್ಯೂತಿಸಿದ ಜಗಗಳೆಲ್ಲ, ಸ್ಪಷ್ಟವು ವೇಮಾ,
ಸ್ಯೂತ – ಹೆಣೆದ, ಸಂಬಂಧಿಸಿದ

೨೭೪೫ ಭೂತಗಳೈದಾಗಿರುತಿರೆ,
ಖ್ಯಾತವು ಓರ್ವನೆ ದೇಹಿ ಇರುತಿಪ್ಪ ಭುವಿಯೋಳ್,
ಅಂತರ್ಯ ತತ್ತ್ವವರಿಯದೆ,
ಸೋತೆಂದಿಗು ಬಾವಿ ಬೀಳುತಿಪ್ಪರು ; ಸಲೆಯರಿ ವೇಮಾ,

— — — — — — — — — — — — — — — — — — — — — —

೨೭೪೬ ಪಂಚ ಭೂತಗಳನು ಪರಿಗಣಿಸಿ ಮನದಲಿ,
ಮಿಂಚಿ ಹೊಂದಬೇಕು ಮೃತ್ಯುಂಜಯನ
ಅಲ್ಲಿ ತಿಳಿಯುವನೆ ಅಖಿಲಜ್ಞನಹ ಯೋಗಿ, ವಿಶ್ವ

೨೭೪೭ ಪಂಚ ತತ್ತ್ವಗಳಿಗೆ ಬ್ರಹ್ಮಗೊಂದು ದೋಷ,
ಅವರ ತಂದೆ ನೆತ್ತಿ ಒಗೆದ ದೋಷ,
ಅಂತರಂಗವೆಲ್ಲ ಆದಿಶಕ್ತಿಯರಿವಳು, ವಿಶ್ವ

೨೭೪೮ ಸಕಲ ವಸ್ತುಗಳಲಿ, ಸಂತಸ ತನುಗಳಲಿ,
ಉಸಿರಿಗೆಲ್ಲಿ ಪಂಚಭೂತಗಳಲಿ,
ಅವವುಗಳಿಂದಲಿ ಅಂದ ಭೂಷಣ ಮಾಡು, ವಿಶ್ವ

೨೭೪೯ ತತ್ತಿಯೊಳಗೆ ಆಕಾಶವು;
ಮತ್ತದನು ನೋಡೆ ನೋಡಲು, ಒಪ್ಪ, ವಿನೋದಂ,
ಸತ್ತೆಯ ಸಕಲವನರಿತೊಡೆ,
ಉತ್ಕಟವೆಂತೋ ನೋಡಲು, ಮೇಲ್ಮೆಯು, ವೇಮಾ,

೨೭೫೦ ಮನಸು ಅನಲಗಳೆರಡರಲಿ,
ಘನವನು ಇನಿತಾದರರಿಯಲು ಬೇಕು, ನೋಡಾ !
ಎನಿತೊ ನಯನ ಮುಚ್ಚಿ ತೆರೆಯೆ,
ಘನವದ, ವಿವರಿಸುವ ಮನಸು, ಕಾಣರು, ವೇಮಾ,

೨೭೫೧ ಮಣ್ಣು ಗಗನ ಕೂಡಿ, ಮಹಿ ಮೇಲೊಂದು ಕೋಟೆ,
ಕೊಂಬು ಹೊಂದಿರುವುದು, ಕೊನೆಯ ಮೀರಿ,
ದೀಪವಿರದ ಬೆಳಕು ತೇಜಿಸುತ್ತ ಉಂಟು, ವಿಶ್ವ

೨೭೫೨ ಅನಿಲದಲಿ ಚಲಿಸುವಂಥಹ
ಅನಲದಲಿ ಸಲಿಲವಾಯಿತು, ಆಕಾಶದೊಳೇ
ಜನನವು ತಾ ಕಾಣುತಲಿದೆ,
ಜನಕನು ಇರದಂಥ ಮಾಯೆ ಚರಿತವು ವೇಮಾ,

೨೭೫೩ ಅನಿಲದೊಳಗೆ ಜನಿಸುತಿಪ್ಪ,
ಅನಲದಲಿ ಸಲಿಲವಾಯಿತು ಆಗಸದೊಳಗಂ,
ಜನಿಸುತಲಿಪ್ಪವು ಕಾಣಾ,
ಜನಕನೆ ಇರದಂತಾಗಿಹ ಚರಿತೆಯ ವೇಮಾ,

೨೭೫೪ ವಾಯುವೆನುವಾ ಅಪಾನವು,
ಮಾಯದೆ ಆ ದಾರಿಯಲ್ಲಿ ಮಲವರ್ಜನ ತಾ,
ಗೆಯ್ಯದೆ ಇರುತಿರಲೆಂದಿಗು
ನ್ಯಾಯವು ನೇಹದಿ ವೀಕ್ಷಿಸೆ, ನಿಪುಣತೆ, ವೇಮಾ,

೨೭೫೫ ವಾಯುನಲ್ಲಿ ಹುಟ್ಟಿ ವಾಯುನಲ್ಲಿ ಬೆಳೆದು,
ವಾಯುವಲ್ಲೆ ಮೇಲು ಸರಣಿ ತಿಳಿಯ,
ವಾಯುನಲ್ಲಿ ಪ್ರಾಣ ವಾಯುವೇ ತತ್ತ್ವವು ವಿಶ್ವ

೨೭೫೬ ಇರುವವು ಗಾಳಿ ನಭಂಗಳು,
ಇರುವುದು ಭೂಮಿಯಲಿ ನೀರು, ಇರುತಿಹ ಪರಿಯೋಳ್,
ದರಿ ದಡಗಳು ; ಬೇರೊಂದಾ –
ಗಿರುವುದು ಕೊಳ್ಳವು ; ತೇಜವಿಹುದೆಲ್ಲೆಡೆ ವೇಮ,

೨೭೫೭ ಆಕಾಶದಲ್ಲಿ ವಾಯುವು
ಸೋಂಕಿ, ಮರದೊಳಗ್ನಿಯಂತೆ, ಮಾನಸದಲಿ ತಾ
ನೇಕಾಕಾರನು ; ಜಗದಲಿ
ತಾ ಕಾಣುವನಂತೆ ಬೆಳಗಿ ತಾನೇ ವೇಮಾ !

೨೭೫೮ ವಾಯುವು ಬಯಲೊಳು ಹುಟ್ಟಿರೆ,
ವಾಯುವೆ ಬಯಲಲ್ಲಿ ಅಡಗಿ ಬರುತಲಿ ಇರಲಾ
ವಾಯುವನೆ ಹಿಡಿದು ಕುಂಭಕ
ವಾಯುವಿನೊಳಗೆ ಕಲೆಯುವವ, ವಶ್ಯನು ವೇಮಾ,

೨೭೫೯ ಅನಲ ಕೊಂಚವಿರಲಿ, ಕನಲಿ ಇರುಸುವುದಷ್ಟೆ,
ಮ್ಲಾನತೆ ಇರದ ಅರಿವು ಮನಕೆ ಬಿಡದು,
ತನುವು ಮರೆಯುವವನೆ ತತ್ತ್ವಜ್ಞನಹ ಕಾಣು, ವಿಶ್ವ

೨೭೬೦ ಉಳ್ಳುದನ್ನೆ ಅರಿತು ಊಹೆಯನು ವರ್ಧಿಸಿ,
ಮಣ್ಣು ಗಗನ ಮಧ್ಯೆ ಮತ್ತೆ ಇಲ್ಲ,
ಅರಿಯುವವನೆ ಪರಮನರಿತವನು ಆಗುವ, ವಿಶ್ವ

೨೭೬೧ ಪ್ರಾಣವಾಯ್ತು ಗಾಳಿ, ಬ್ರಹ್ಮಾಂಡವಿದು ದೇಹ,
ಮಿತ್ರ, ಚಂದ್ರ ಶಿಖೆಯು ನೇತ್ರ ಚಯವು,
ಮತ್ತೆ ದೇವನಿನ್ನು ಮಹಿಮ ಮೇಲೆ ಇಹನೆ ? ವಿಶ್ವ

೨೭೬೨ ಜೀವಾಧಾರವು ನೀರೇ ;
ಜೀವಾಧಾರವು ಗಾಳಿಯು ಹೊಳೆಯುತಲಿರಲಾ,
ಜೀವಿಗೆ ಬೇಕೊಂದೇ ತೆರ
ಈ ವಸ್ತು ಕೋರಲು, ಲಭ್ಯವಿಳೆಯಲಿ, ವೇಮಾ,

೨೭೬೩ ಉದಕದೊಳಗೆ ತತ್ತ್ವವನ್ನು,
ಮುದದಿ ಹುಡುಕಿ ತಾನಾಗುತ ತಿಳಿವನು ಮನದೋಳ್,
ಉದಕ ತೆರ ತಾ ತತ್ತ್ವವು,
ಅದನರಿಯುವವನು ತತ್ತ್ವಮಯನಪ್ಪ ವೇಮಾ,

೨೭೬೪ ಪೃಥಿವಿಗುದಕ ಸುರಿಯೆ, ಪೃಥಿವಿ ಮೇಲೆ ಮೊಳಕೆ,
ಮೊಳಕೆ ಪೃಥಿವಿಗಿಳಿಯೆ, ತಂದೆ ಮಗನು,
ಧರಣಿ ಜನರಿಗೆಲ್ಲ ತಾಯಿಯೇ ಹೆಂಡತಿಯು, ವಿಶ್ವ

೨೭೬೫ ನೀರು ಮೊದಲು ಹಾಕೆ ನೀರೆ ಮೊಳಕೆಯಾಯ್ತು
ಮೊಳಕೆ ವಿಶ್ವವಾಯ್ತು, ಮತ್ತೆ ಬೆಳೆದು,
ನೀರು ವಿಶ್ವವಾದುದ ನೆರೆಗಂಡು ತಿಳಿದುಕೊ, ವಿಶ್ವ

೨೭೬೬ ಮಣ್ಣಿನೊಳಗೆ ಹುಟ್ಟಿ, ಮಣ್ಣಿನೊಳಗೆ ಬೆಳೆದು,
ಮಣ್ಣು ಕಂಡು ನರರು ಮಗ್ನರಾದರು
ಮಣ್ಣು ಮಣ್ಣು ಸೇರೆ, ಮನವ ನಿಲಿಸನೇಕೆ ? ವಿಶ್ವ

೨೭೬೭ ಭೂದೇವಿಯೆನಲು ಮೃತ್ತಿಕ,
ಭೂ ದೇವತೆಗಳು ಕ್ರಮದಿಂ ಪುಟ್ಟಿದವೆನಿತೋ ?
ಆ ದೇವತೆಗಳಿಗೆ ಗೊತ್ತು ;
ಆದಿಯನಾವನರರಿಯರೆನುವರು ವೇಮಾ,

೨೭೬೮ ಮಣ್ಣು ತಿನುವುದೆನಲು, ಮುಸುಗುಡುವ ಜನರೇ !
ಮಣ್ಣೊಳಗಿನ ಮೇಲ್ಮೆ ಮರೆವುದೇಕೆ ?
ನೀರಿನೊಳಗಿನ ಮೇಲ್ಮೆ ನಿಖಿಲವಾಗಿ ಉಂಟು ವಿಶ್ವ

೨೭೬೯ ಮೃತ್ತಿಕೆಯೇ ತನುವೆನುವುದು,
ಮೃತ್ತಿಕೆ ದಳವೆತ್ತಿ ನಿಲುವ ಮುನ್ನಿನ ತರುಗಳ್,
ಮೃತ್ತಿಕ ಮೂಲವು ಮೂರಕೆ,
ಮತ್ತೀ ತೆರನರಿಯರು, ಧರೆ ಮಹಿಮರು, ವೇಮಾ,

೨೭೭೦ ಪಾದ ಪಾಯುಗಳನು, ಪರಮ ದೇಹ ಹೊತ್ತು,
ದೇಹಿ ಜೀವಗಳನು ತಿಳಿಯೆ ಹೊರುವ,
ಧರಣಿಯೊಳಿವೆರಡನು ತಾನೇಕೆ ಹೊರುವನೊ ? ವಿಶ್ವ

೨೭೭೧ ಇಳೆಯು ಗಗನ ಮಧ್ಯೆ ಇರುವ ಜನರು ಎಷ್ಟೊ ?
ತಿಳಿಸಲಾರ ಇರಲಿ, ತರವೆ ಅದನು ?
ಬದುಕುವವರು ಸತ್ತು ಬೀಳುವವರೆ ಕಾಣು, ವಿಶ್ವ

೨೭೭೨ ನೀರು ಕ್ಷಾರವಾಯ್ತು ಕ್ಷಾರವು ನೀರಾಯ್ತು,
ಕ್ಷಾರವಾದ ನೀರು ಕ್ಷಾರವಾಯ್ತು,
ಕ್ಷಾರದಲ್ಲಿ ನೀರು ಕಡು ರಮ್ಯವಿಪ್ಪುದು ! ವಿಶ್ವ

೨೭೭೩ ತನ್ನ ತಾ ಹುಡುಕಲು, ತಾನೆ ಹೋಗು ಜೀವ,
ತತ್ತ್ವವರಸಿ ನೋಡೆ ತಾನೆ ಆತ್ಮ,
ಮಣ್ಣು ಗಗನವಿಲ್ಲ ಮಾಯೆಯೆನುವುದಿಲ್ಲ, ವಿಶ್ವ

೨೭೭೪ ವಾಯುನಲ್ಲಿ ಹುಟ್ಟಿ, ವಾಯುನಲ್ಲಿ ಬೆಳೆದು,
ವಾಯುನಲ್ಲಿ ಮೇಲು ಕ್ರಮವನರಿತು,
ವಾಯುವಿನಲಿ ಪ್ರಾಣ ವಾಯು ತತ್ತ್ವವಹುದು, ವಿಶ್ವ

೨೭೭೫ ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ,
ಫಲವು, ಹೂವು ಮೊದಲ ಪ್ರತಿಭೆಯಿಲ್ಲ
ಸ್ವಾದವಿಲ್ಲ ನೋಡೆ, ಸೇವಿಸಲು ಒಳ್ಳಿತು,
ಇದರ ಭಾವವೇನು ? ತಿಳಿಸು ವೇಮ,

— — — — — — — — — — — — — — — — — — — — — —

೨೭೭೬ ಮೊದಲು ಸುರಿದ ನೀರು ಮುನ್ನ ಬೀಜ ತಲುಪಿ,
ಮೊದಲ ಬೀಜ ರಾಶಿ ಮೊಳಕೆಯಾಯ್ತು,
ಮೊಳಕೆಯೊಡೆದು ಬೆಳೆದು ಬೆಳಗಿತು ವೃಕ್ಷವಾಗಿ, ವಿಶ್ವ

೨೭೭೭ ಗಿಡದ ಮೊದಲ ಹಾಲು ಶಿವನ ಕಣ್ಣು ತೆರೆಸಿ,
ಗಿಡವು ಮೊದಲು ಚಿಗುರಿ ಶಿವನನೊಲಿಸಿ
ಮರದ ಹಾಗೆ ಇರುವ ಮರಣ ಇರುವುದೆಲ್ಲಿ ? ವಿಶ್ವ

೨೭೭೮ ಬೀಜವಿಲ್ಲದಂಥ ವೃಕ್ಷವೊಂದು ಹುಟ್ಟಿ,
ಫಲವು ಹೂವು ಮೊದಲ ಪತ್ನಿ ಇಲ್ಲ,
ಸ್ವಾದವಿಲ್ಲ ನೋಡು ಊಟ–ಪಾಟ ಕಡಿಮೆ,
ಇದರ ಭಾವವೇನು ಆರುಹು ವೇಮ,

೨೭೭೯ ಮರವು ಮೊದಲೆ ಇಲ್ಲ ; ಮೆರೆವ ಕೊಂಬೆ ನಾಲ್ಕು,
ಬಟ್ಟ ಬಯಲು ಮರವು ಫಲವು ಉಂಟು,
ಜನರೆ ಇಲ್ಲ ತಿನಲು ಸಿಹಿಯಾಗಿದೆ ಬಹಳ ! ವಿಶ್ವ

೨೭೮೦ ವೃಕ್ಷದಲ್ಲಿ ಹುಟ್ಟಿ ವಿಪುಲವಾಗಿ ಕಾಯಿ,
ತನ್ನ ಕಾಂತಿಯೊಡನೆ ತೊಳಗಿ ಹಣ್ಣು,
ಹಣ್ಣು ತಿಂದು ಕಾಯಿ ವರ್ಗವನು ತಿಳಿಯಿರೋ, ವಿಶ್ವ

೨೭೮೧ ಗಿಡದೊಳಗೆ ಬೀಜ ಹುಟ್ಟಿತು ;
ಗಿಡ ಬೀಜದಲಿ ಜನಿಪ ನೇಹ ಸುವಿಖ್ಯಾತಂ,
ಗಿಡವು, ಬೀಜವು ಎರಡೂ,
ಒಡನೆ ಜನಿಪುದರಿಯೆ, ಕೀರ್ತಿ ಭುವಿಯಲಿ, ವೇಮಾ

೨೭೮೨ ವೃಕ್ಷ ಹುಟ್ಟುವ ನೆಲೆ ವಿಪುಲವಾಗಿ ಕಾಯಿ,
ಕತ್ತಿಯಿಂದ ಜಗದಿ, ಕೊಚ್ಚಿದಂತೆ,
ಹಣ್ಣು ಉಣದ ಕಾಯಿ ವರ್ಗವನು ಅರಿಯರಿ, ವಿಶ್ವ

೨೭೮೩ ವೃಕ್ಷದಲ್ಲಿ ಹುಟ್ಟಿ, ವಿಪುಲವಾಯ್ತು ಕಾಯಿ,
ಪರಮ ಕಾಂತಿಯುಕ್ತ ಪಕ್ವ ಹಣ್ಣು,
ಹಣ್ಣು ತಿನುತ ಕಾಯಿ ಬಣ್ಣ ತಿಳಿದುಕೊಳಿರಿ, ವಿಶ್ವ

೨೭೮೪ ಎಲೆಯ ಅಡಿಗೆ ಇಹವು ಎಲ್ಲ ಅನ್ಯ ಲೋಕ,
ಬೊಡ್ಡೆ ಕಾಣಲಿಲ್ಲ ; ಬ್ರಹ್ಮನಿರಲಿ,
ಬೊಡ್ಡೆ ಕಂಡ ಬಳಿಕ, ಬಣ್ಣಿಸಲ್ಕೆ ಸಾಧ್ಯೆ ! ವಿಶ್ವ

೨೭೮೫ ಎಲೆಯ ಹಿಂದೆಯಷ್ಟೆ ಅಖಿಲ ಲೋಕವುಂಟು,
ಕೊಂಬೆ ಕಾಣಲಾರ ಬ್ರಹ್ಮನಿರಲು,
ಕೊಂಬೆ ಕಂಡುಬರಲು ಕೊಂಡಾಡದಿರುವರೆ ? ವಿಶ್ವ

೨೭೮೬ ಮೊದಲ ತರುವಿನಲ್ಲಿ ಮೂರು ಕೊಂಬೆ ಹುಟ್ಟಿ,
ಚಿಗುರು ಒಡೆದು ಬೆಳೆದು ಎಲೆಗಳಾಗಿ,
ಹೂವು, ಮಿಡಿಯು, ಹಣ್ಣು, ಭುವನವ ತುಂಬಿದೆ, ವಿಶ್ವ

೨೭೮೭ ಎಲೆಯು ಇರದ ಕೊಂಬೆ, ಎಲ್ಲ ಗಗನ ತುಂಬಿ,
ತರುವಿನಾದಿ ತುದಿಯು ಧರೆಯೊಳಿಲ್ಲ,
ಏಕವಾದ ಫಲವೆ ಎಲ್ಲ ತುಂಬಿ ಉಂಟು,

೨೭೮೮ ಎಲೆಯ ಕಾಣಬಹುದು ಹರಿಹರಾದಿಯೆಲ್ಲ,
ಕೊಂಬೆ ಕಾಣಲಿಲ್ಲ ಕೋರಿ ನೋಡೆ,
ಕೊಂಬೆ ಕಾಣಬರಲು ಕೊಂಡಾಡುತಲಿಹರು, ವಿಶ್ವ

೨೭೮೯ ಎಲೆಯ ಸೊಬಗಿನಲುಂಟು ಎಲ್ಲ ಲೋಕಂಗಳು,
ಕೊಂಬೆ ಕಾಣಲಿಲ್ಲ, ಬ್ರಹ್ಮ ಕೂಡ,
ಕೊಂಬೆ ಕಾಣಬರಲು ಕೊಂಡಾಡುತಲಿಹರು, ವಿಶ್ವ

೨೭೯೦ ಹುಣಸೆ ಮರವ ನೋಡಿ, ಹುಣಸೆ ಹೂವ ನೋಡಿ,
ನಿಂಬೆ ಹಣ್ಣು ಹಣ್ಣು ನಿಮಿಷದಲ್ಲಿ,
ಕಾಂತಿ ಕೆಡುವ ಮುನ್ನ ಕದಲದದನೆ ತಿನ್ನು, ವಿಶ್ವ

೨೭೯೧ ಮೊಸರಿನಲ್ಲಿ ತುಪ್ಪ, ಮರದ ಒಳಗೆ ಅಗ್ನಿ,
ಸರ್ವ ಸುಮಗಳಲ್ಲಿ ಸೌರಭಗಳು,
ಎಳ್ಳಿನಲ್ಲಿ ಎಣ್ಣೆಯಂತೆ ಶೋಭಿಪುದಾತ್ಮ, ವಿಶ್ವ

೨೭೯೨ ಮರದಲ್ಲಿ ಅಗ್ನಿಯು ಮತ್ತಡಗಿರಬಹುದು,
ಅಗ್ನಿಯಲ್ಲಿ ಮರವು ಅಡಗಬಹುದೆ ?
ಮರದಿ ಬೆಂಕಿಯಂತೆ ಮಾನ ಸಂಸಾರಿಗೆ, ವಿಶ್ವ

೨೭೯೩ ಹಸು ಕೆಚ್ಚಲು ಹಿಂಡಿ, ಹಾಲು ಕಾಯಿಸಿಟ್ಟು,
ಹೆಪ್ಪುಗಟ್ಟಿ ಮೊಸರು, ಹೆಸರು ಬಂತು,
ನವನೀತವಿಪ್ಪಂತೆ ನಮ್ಮೊಳುಂಟು ಪರವು, ವಿಶ್ವ

೨೭೯೪ ಮರದ ಒಳಗೆ ಅಗ್ನಿ, ಮರವು ಇರುವುದಿಲ್ಲ,
ಇರಲು ಅಗ್ನಿ, ಮರವು ಇರುವುದಿಲ್ಲ,
ಮರದ ಒಳಗೆ ಅಗ್ನಿ ಮರ್ಯಾದೆ ಸಂಸಾರಿಗೆ, ವಿಶ್ವ

೨೭೯೫ ಮರದ ಒಳಗೆ ಅಗ್ನಿ ಮತ್ತೆ ಇರಲುಬಹುದು,
ಅಗ್ನಿಯುಳ್ಳ ಮರಕೆ ಅಳವು ಇಲ್ಲ,
ಮರದ ಒಳಗಿನಗ್ನಿ ಮರ್ಯಾದೆ ಸಂಸಾರಿಗೆ, ವಿಶ್ವ

೨೭೯೬ ಮರದಲಿ ಹುಟ್ಟುವುದನಲ,
ಮರವನರಿತೊಡೆಯನಲವಿಹುದು ಮನುಜನೊಳಗೇ,
ಮರದಲ್ಲಿ ಅನಲದ ರೀತಿಯೆ,
ಇರುಳಡಗಿದ ಯೋಗಿ ಆರು ಕಾಣು ವೇಮಾ,

೨೭೯೭ ಮರದಲಿ ಬೆಂಕಿಯು ಜನಿಪುದು,
ಮರವರಿವುದೇನು ಬೆಂಕಿಯ ? ಮನುಜರೊಳಿಪ್ಪಾ
ಮರದೊಳಿಹ ಅನಲ ಕ್ರಿಯೆ, ಕಾ–
ತರವಡಗಿದ ಯೋಗಿಯನ್ನೆ ಕಾಣರು ವೇಮಾ,

೨೭೯೮ ಮರಕೆ ಬೆಂಕಿ ಹಚ್ಚಿ ಮಹಿಯೊಳೋರ್ವ ಜಾಣ,
ಹೆಣಗುತಲೆಯುತಿಹನು ಹೊಂದಿಕೊಳುತ ;
ಸುಟ್ಟು ಹೋದ ಮರವು ಸಲೆ ರಮ್ಯವಿಪ್ಪುದು, ವಿಶ್ವ

೨೭೯೯ ವಹ್ನಿ ಲೋಹಗಳಲಿ, ವೃಕ್ಷ ಶಿಲೆಯಲ್ಲಿ,
ಪಟವು ಗೋಡೆಗಳಲಿ, ಪೊಳೆವ ಉಸುಕು,
ತರುವಿಗಂಟಿದಂತೆ ದೇಹದಲ್ಲಿ ಜೀವಿ, ವಿಶ್ವ

೨೮೦೦ ಧಾನ್ಯದಲ್ಲಿ ಹುಟ್ಟುತಿಹುದು ಅನ್ನವೆಲ್ಲ,
ಮರದಲ್ಲಿ ಫಲವು ಮಡಗಿರುವುದು,
ಸೊಡರು ಗಾಳಿ ಹಿಡಿದು, ಶೋಧಿಸಲು ಮುಕ್ತಿಯು, ವಿಶ್ವ

೨೮೦೧ ಮೊದಲು ಪೊಯ್ದ ನೀರು ಮತ್ತೆ ಬೀಜ ಸೇರಿ,
ಮೊದಲು ಹರಿದು ಬೇಗ ಮೊಳಕೆ ಎತ್ತಿ,
ಮೊಳಕೆ ನೆಲದಿ ಬೆಳೆದು ಮೆರೆಯುವ ಮರವಾಯ್ತು ವಿಶ್ವ

೨೮೦೨ ತತ್ತ್ವವರಿಯುವವನು ದೈವವರಿಯುತಿಹನು,
ಸರ್ವ ಸಾರಗಳನು ಸದೆ ಬಡೆಯುವ,
ನುಂಗುವವನು ಬಾಳೆ, ನುಂಗಬಹುದೆ ವಿಷವ ? ವಿಶ್ವ

೨೮೦೩ ಅಣುವಿನಲ್ಲಿ ಉಂಟು ಅಖಿಲ ಜಗತ್ ಎಲ್ಲ,
ಅಣುವು ತನ್ನೊಳಗೆ ಅಡಗಿಯುಂಟು,
ಮನಸು ನಿಲಿಪ ನರನು, ಮತ್ತೆ ಮುಕ್ತಿ ಪಡೆವ, ವಿಶ್ವ

೨೮೦೪ ಸ್ಥೂಲ ಕಣ್ಣು ಗುಡ್ಡೆ, ಸೂಕ್ಷ್ಮ ಕಣ್ಣು ಪಾಪೆ,
ಕಣ್ಣು ಪಾಪೆಯುಂಟು ಕಾರಣಾಗಿ,
ಕಾರಣದಲಿ ಬ್ರಹ್ಮ ಕಳೆಯನರಿಯಬೇಕು, ವಿಶ್ವ

೨೮೦೫ ಸ್ಥೂಲವೆನಲು ಗುಡ್ಡೆ, ಸೂಕ್ಷ್ಮವೆನಲು ಪಾಪೆ,
ಪಾಪೆಯೊಳಗೆ ಜ್ಯೋತಿ ಪರಮ ಪದವು,
ನಾಳೆ, ನಾಡಿದಿರಲಿ, ನಿನ್ನ ಮನದಿ ನೋಡು, ವಿಶ್ವ

೨೮೦೬ ಸೂಕ್ಷ್ಮ ರೂಪ ಹೊಂದಿ ಸೂಕ್ಷ್ಮ ರೂಪವೆನಲು,
ಸ್ಥೂಲ ರೂಪ ಹೊಂದಿ ಸ್ಥೂಲ ರೂಪವೆನಲು,
ಮಾತು ಒಂದೆ ಇದ್ದು ಮರ್ಮ ತಿಳಿಯಿರಯ್ಯ ? ವಿಶ್ವ

೨೮೦೭ ಅಷ್ಟ ತನುವುಗಳಿಗೆ ಆದಿ ತುಂಬಿಕೊಂಡ,
ಆದಿ ಶಕ್ತಿಗೂಡಿ ಅಭವನಾದ,
ಭಯವು ಇಲ್ಲದಿಹನು ಬ್ರಹ್ಮಜ್ಞನಹ ಯೋಗಿ, ವಿಶ್ವ

**೨೮೦೮ ತನುವಿನೊಳಗೆ ಆತ್ಮ ತತ್ತ್ವವನು ಅರಿಯದೆ,**
**ಬೇರೆ ಇರುವುದೆಂದು ಹುಡುಕಲಾಗ,**
**ಭಾನುವಿರಲು ದೀಪ ಬೆಳಗಿ ಹುಡುಕಬಹುದೆ ? ವಿಶ್ವ**

●●●

# ೧೬. ಮೋಕ್ಷ ಮಾರ್ಗ

## ಜೀವ ಶಿವೈಕ್ಯ

**ತಾನೆ ತಾನು ಎಂಬ ತತ್ತ್ವ ಸಂಕುಲದೊಳು,**
**ಅನ್ಯವರಿಯುತಿಪ್ಪ ; ಅಪ್ಪನಾಣೆ,**
**ತಾನು ತಾನೆ ಇರಲು, ತಲ್ಲಣವು ಏತಕೆ ?**
**ವಿಶ್ವದಾಭಿರಾಮ ಕೇಳು ವೇಮ.**

●

## ಜೀವ ಶಿವೈಕ್ಯ

ತಾನು ಯಾರು ? ತನ್ನ ಅರಿವು ಪಡೆಯುವುದು ಹೇಗೆ ? ತನಗೂ ಶಿವನಿಗೂ ಭೇದವುಂಟೇ ?

ತತ್+ತ್ವ ಅಂದರೆ 'ಅದು' ಅರ್ಥಾತ್ ಶಿವ. ತಿಳಿವು ಇರುವ ವರೆಗೆ ತತ್ತ್ವ ಭೇದಗಳುಂಟು. ತಿಳಿವು ದಾಟಿ ಹೋದ ಮೇಲೆ, ಎಲ್ಲವೂ ತಾನೇ ತಾನಾಗುವನು. ತನ್ನಲ್ಲಿಯೇ ಸರ್ವವೂ ಇದೆ. ತನುವು ತಾನೆಂಬುದನ್ನೂ ದಾಟಿ, ತಾರಕವಾದ ಆತ್ಮವೇ ತಾನೆಂದು ತಿಳಿದು ಪರಿಣಮಿಸಿದಾಗ ಮುಕ್ತಿಯುಂಟು. ತನ್ನನ್ನೇ ಅರಸಿ ತಿಳಿಯದೆ, ಧರೆಯನ್ನು ಸುತ್ತಿ ಅರಸುವವನು ಗಾಣದ ಎತ್ತಿನಂತೆ, ಇದ್ದಲ್ಲಿಯೇ ಇರುತ್ತಾನೆ.

ತಾನೇ ಪರಮಾತ್ಮನಿದ್ದಾನೆ. ತಾನು ನಿಪುಣನಾಗಿ ಇದ್ದರೂ, ತನ್ನನ್ನು ತಾನೇ ತಪ್ಪಿಸಿಕೊಳ್ಳುತ್ತಿದ್ದಾನೆ. ಹೀಗೆ ಇದೆಲ್ಲವೂ ಬ್ರಹ್ಮವೆಂದು ತಿಳಿದು, ಅಂತರ್ಯದ ಗುಟ್ಟು ಬಯಲಾಗಿ ಮನವು ಮರ್ಮವನ್ನು ಕಾಣಲು, ಅಂಥ ಇಂಥ ವಿಚಿತ್ರಗಳು ಅಳಿದು ಚಿಂತೆಯು ದೂರಾಗುತ್ತದೆ.

ಶಿವನಲ್ಲಿ ಒಂದಾಗುವ ಸೂತ್ರ ಒಂದಿದೆ. ಅದೆಂದರೆ ಶಿವನು ಈ ಘಟದಲ್ಲಿ ಸೇರಿ ಇರುವಾಗಲೂ, ಘಟ–ಪಟಗಳಿಗೆ ಸಿಕ್ಕದೆ ತಾನು ಘನವಾಗಿ ಆಟವಾಡುತ್ತಾನೆ. ಆ ಸೂತ್ರ ಹಿಡಿದು ತಾನೂ ಶಿವನಾಗಬೇಕು.

ನಿಮಗೆ ಗೊತ್ತಿರುವ ಲೋಕಗಳೇ ನಿಮ್ಮ ಅನುಭವಕ್ಕೆ ಬರುತ್ತವೆ. ನೀವು ಮರೆತರೆ, ಅವುಗಳೆಲ್ಲ ಇಲ್ಲದಾಗುವವು. ಆದರೆ, 'ನಾನು' ಎಂಬ ತಿಳಿವು ಉಳಿಯುತ್ತದೆ. ಅದುವೇ ಪರಮಾರ್ಥವಾಗಿದೆ. ಸರ್ವವೂ ತನ್ನಲ್ಲಿಯೇ ಇದೆ ದೇವರನ್ನು ಹೃದಯದಲ್ಲಿಯೇ ಅರಸಿ ಕಾಣಬೇಕು. ಇತರತ್ರ ಅರಸುವುದೆಂದರೆ, ಆಡು ಬಗಲೊಳಗಿಟ್ಟುಕೊಂಡು ಅದನ್ನು ಬೇರೆಡೆ ಹುಡುಕಿದ ಕುರುಬನ ಮೌಢ್ಯದಂತಾಗುತ್ತದೆ.

ನಿನ್ನ ಅಲೆದಾಟವನ್ನು, ಮನಸ್ಸಿನ ಹರಿದಾಟವನ್ನು ನಿಲ್ಲಿಸಿದರೆ ಎಲ್ಲವೂ ನಿಲ್ಲುವುದು. ಎಲ್ಲವೂ ಬಿಸಿಲುಗುದುರೆಯಂತೆ ತೋರುವುದು. ನೀನು ನಿಶ್ಚಲವಾಗಿ ಇರುವೆ. ನಿಖಿಲವೂ ಮಾಯೆಯಾಗಿ ತೋರುತ್ತದೆ. ಸರ್ವ ತಾನೇ ಇದನ್ನರಿತು ತಾನು ಪರಿಣಮಿಸಿದರೆ, ಮಾನವನಿಗೆ ಮುಕ್ತಿ ಲಭ್ಯ.

ಇನ್ನು ಶೈವಾಗಮ ಭಾಷೆಯಲ್ಲಿ ಹೇಳುವುದಾದರೆ, ಲಿಂಗವೇ ಪರಮಶಿವನು. ಅಂಗವೇ ಜೀವನು. ಜೀವಿಯು ತನ್ನ ಕಾಮಿಕ, ಆಣವಿಕ ಮತ್ತು ಮಾಯಿಕ ಮಲಗಳಿಂದ ಸ್ವಚ್ಛನಾದರೆ, ಶಿವನನ್ನು ಸೇರುತ್ತಾನೆ. ಹೀಗೆ ಎರಡು ರೀತಿ ಹೇಳಬಹುದು. ಲಿಂಗದಲ್ಲಿ ನೋಡಿದರೆ ಲೀನವಾಗಿ ಶಿವನುಂಟು. ಅಂಗದಲ್ಲಿ ನೋಡಿದರೆ ಅಂಟಿಕೊಂಡು ಉಂಟು, ಲಿಂಗ ಭಾವವನ್ನೇ ಅರಿತು ಲೀನವಾಗಿರಬೇಕು ? ಲಿಂಗ-ಅಂಗಗಳಲ್ಲಿ ಇರುವ ಲೀಲೆ ತಿಳಿಯುವವರೆಗೆ ಮನಸ್ಸು ಲಿಂಗದಲ್ಲಿ ಸೇರಲು ಮರಳುತ್ತದೆ. ನಿಜವಾಗಿ ನೋಡಿದರೆ, ಎಲ್ಲಿ ಮನಸ್ಸು ನಿಲ್ಲುವುದೋ ಅಲ್ಲಿಯೇ ಲಿಂಗವಿರುತ್ತದೆ. ಆದ್ದರಿಂದ ನಿಮಿಷವಾದರೂ ಸರಿಯೇ; ಮನವನ್ನು ನಿಲ್ಲಿಸಿ, ಕಾಮಿಕ, ಆಣವಿಕ ಮತ್ತು ಮಾಯಿಕ ಮಲಗಳನ್ನು ಇಲ್ಲವಾಗಿಸಿ, ಲಿಂಗ ಜೀವೇಶ್ವರರನ್ನು ಕಂಡು ಭಂಗ ಪಡದೆ, ಪರಮನನ್ನು ಪೂಜಿಸಿ ಪೂರ್ಣ ಪದವಿ ಪಡೆಯಬೇಕು.

ಜೀವೇಶ್ವರರ ಮಹಿಮೆಯಿಂದಲೇ ಮಾಯಾ ವಿದ್ಯೆಯು ಹುಟ್ಟುತ್ತದೆ. ವಿಚಿತ್ರ ಸಿದ್ಧಿಗಳು ಘಟಿಸುತ್ತವೆ. ಅತ್ತ ಲಕ್ಷ್ಯ ನೀಡದೆ, ಅವುಗಳ ರಹಸ್ಯಗಳನ್ನು ಅರಿಯದೇ ಮುಂದೆ ಸಾಗಬೇಕು. ಮಾಯೆಯೆಂದರೇನು ? ಹಗ್ಗವೊಂದು ಬಿದ್ದಿದೆ. ಕತ್ತಲಲ್ಲಿ ಹಾವು ಎಂದು ಭ್ರಮಿಸುತ್ತಾನೆ ; ಅದು ಹಗ್ಗವೇ ಎಂದು ಕೊಂಡರೆ, ಹಾವಿನ ಭಯ ಇಲ್ಲವಾಗುತ್ತದೆ. ಹಾವಿನ ಭಯವೇ ಮಾಯೆ. ಜಗತ್ತು ಹಾವಾಗಿ ತೋರುತ್ತದೆ. ದುಃಖಮಯವಾಗಿದೆ. ಇಲ್ಲ; ಇಲ್ಲ; ಇದು ಬ್ರಹ್ಮಮಯವೇ. ಬ್ರಹ್ಮವೇ ಎಂದು ತಿಳಿದಾಗ ದುಃಖ ನೀಗಿ ಆನಂದ ಪ್ರಾಪ್ತವಾಗುತ್ತದೆ. 'ಆನಂದಂ ಬ್ರಹ್ಮ ಇತ್ಯಾಹುಃ'

ಗಂಗಾ ನದಿಯ ನೀರು ಹರಿದು ಜಲಧಿಯನ್ನು ಸೇರುವಂತೆ, ಮನದಲ್ಲಿ ತತ್ತ್ವಬುದ್ಧಿ ಉದಿಸಿದವನು ಕೊನೆಯ ಘನವಾದ ಪದವಿ ಸೇರುತ್ತಾನೆ.

ಜೀವಿಯಲ್ಲಿ ಸ್ಥಿರವಾದ ಶಿವತ್ವವನ್ನು ಕಾಣದೆ ಕೇವಲ ಅಸ್ಥಿರವನ್ನು ನಂಬಿ ಜೀವಿಯು ಮುನ್ನಡೆದಿದ್ದಾನೆ. ಸ್ಥಿರವಾದುದನ್ನು ಗ್ರಹಿಸಿ, ಅಸ್ಥಿರವಾದುದನ್ನು ತೊರೆದು ಸಾಗುವುದೇ ಜೀವಿಗೆ ಮುಕ್ತಿಯಾಗಿದೆ.

ಜೀವ ಸಂಜ್ಞೆಯು ಜೀವ ತತ್ತ್ವದ ಸಂಚಯದಲ್ಲಿಯೇ ಇದೆ. ಜೀವನು ಗುರುವನ್ನು ಸೇರಿ, ಸರಿಯಾಗಿ ಅರಿತು, ತನ್ನನ್ನು ನಿಲ್ಲಿಸಿದರೆ, ತಾನೇ ತಾನಾಗಿ ಉಳಿಯುವನು. ಜೀವವೂ ಮತ್ತು ಜೀವಭಾವವೂ ಎಲ್ಲಿ ಇವೆಯೆಂದು ವಿಚಾರಿಸಿದರೆ,

— — — — — — — — — — — — — — — — — — — — — —

ಆ ತ್ರಿಗುಣಮಯಿ ದೇಹದಲ್ಲಿಯೇ ಎಂದು ತಿಳಿದುಬರುತ್ತದೆ. ಕಾರಣ, ದೇಹಭಾವ ತೊರೆದು, ಪರಮಧಾಮದಲ್ಲಿ ಸತ್ಯವನ್ನು ಅರಿಯಬಹುದಾಗಿದೆ. ಜೀವವನ್ನು ಅರಿಯುವವರೆಗೂ ದೇವರು ಬೇರೆಂಬ ಭ್ರಮೆಯು ಹಿಂಗಲಾರದು. ನರನು ದೇವನನ್ನು ಅರಿತು, ಜೀವ ಭಾವದ ಜನನ ಮತ್ತು ಅಭಾವಗಳನ್ನು ವಿವರಿಸಬಲ್ಲನಾದರೆ, ಮುಕ್ತಿಯು ಬಟ್ಟಬಯಲಾಗುತ್ತದೆ.

ಶಿವನೇ ಎಲ್ಲೆಡೆಗೆ ಇರುವನು. ಇಳೆಯಲ್ಲಿ ತುಂಬಿರುವನು. ಸೃಷ್ಟಿಯಲ್ಲಿ ತುಂಬಿರುವನು. ಜೀವನೇ ಶಿವನಾಗಿರುವನು. ಹೀಗಿರುವಾಗ, ಶಿವನು ಬೇರೆಯೆಂದು ಹುಡುಕುವದು ಆಶ್ಚರ್ಯವಲ್ಲವೇ?

ಜೀವಿಯು ಸತ್ಯವನ್ನು ಅರಿಯದೆ, ಸತ್ಯವು ಅನ್ಯತ್ರ ಇದೆಯೆಂದು ಭ್ರಮಿತನಾಗಿದ್ದಾನೆ. ಜೀವಿಯು ಜೀವಭಾವವಿರುವ ವರೆಗೆ ಜೀವಿಯೇ ಸರಿ. ಅರಿವಿನ ಸೂಕ್ಷ್ಮ ರೂಪಾದ ಚಿನ್ಮಾತ್ರವು ಮಾತ್ರ ಬಯಲಾಗಿದೆ.

ಜೀವ ಭಾವವನ್ನು ಅರಿತುಕೊಂಡರೆ, ಮತಿ ಭ್ರಮಣೆಯಾಗದು, ದೈವವನ್ನು ಅರಿತು ಬಿಟ್ಟರೆ ತನ್ನ ಮತಿಯು ನಿಶ್ಚಿತವಾಗುವುದು, ಅಷ್ಟಾದರೆ ತೀರಿತು, ಜೀವಭಾವವು ನಶಿಸುತ್ತದೆ. ತೇಜವು ಉದಿಸಿದಾಗ, ತಿಮಿರವು ನಿಲ್ಲದಲ್ಲವೇ?

ಜೀವನು ಅಕ್ಕಸಾಲಿಗನಂತೆ. ಅವನು ಯಾವ ಆಭರಣವನ್ನು ಸಿದ್ಧಪಡಿಸಬೇಕಾಗಿದೆಯೋ ಅದರ ಭಾವವನ್ನು ಗ್ರಹಿಸಿರುತ್ತಾನೆ. ತನ್ನ ತಿದಿಯೂದಿ, ಗಾಳಿಯೂದಿ ಸ್ವರ್ಣ ಕರಗಿಸಿ ರೂಪುಗೊಡುತ್ತಾನೆ. ಅದೇ ರೀತಿ, ಜೀವನು ಪರಶಿವ ಭಾವ ತಾಳಿ, ತನ್ನ ಪರಿಸರವನ್ನು ರೂಪಿಸುತ್ತಾನೆ. ಅವನು ಉಸಿರಾಡಿಸುವ ಗಾಳಿಯೇ ಈ ವಸುಧೆಯಲ್ಲಿ ಸೃಷ್ಟಿಕರ್ತನಾದ ಬ್ರಹ್ಮನಲ್ಲವೇ?

ಭೂಮಿಯಲ್ಲಿ ಜನರಿಗಾಗಲಿ, ವಡವಾಗ್ನಿಗಾಗಲಿ, ದ್ವೀಪಗಳಿಗೇ ಆಗಲಿ, ಸ್ಥೂಲ ಲೋಕದಲ್ಲಿ ಸೂರ್ಯನ ಸಂಬಂಧವಾದರೆ, ಎಲ್ಲವೂ ಜಡಸ್ಫೋಟವಾಗಿ ಪ್ರಳಯವಾಗುತ್ತದೆ. ಆದರೆ ಸೂಕ್ಷ್ಮ ಲೋಕದಲ್ಲಿ ಸೂರ್ಯನ ಸಂಬಂಧವಿಲ್ಲದೆ ಇವಾವುಗಳೂ ತಿಳಿಯಲಾರವು. ಅದೇ ರೀತಿ, ಜೀವನು ಜಡದೃಷ್ಟಿಯಿಂದ ದೇವನನ್ನು ಅರಿಯಲಾರನು. ಅವನನ್ನು ಸೂಕ್ಷ್ಮಾತಿಸೂಕ್ಷ್ಮ ಲೋಕದಲ್ಲಿ ಅನುಭವಿಸಬೇಕು.

ಈ ಜಗತ್ತು ಭಗವಂತನ ಪ್ರತಿಬಿಂಬವೇ ಆಗಿದೆ. ಅನೇಕ ಮಾಯಾಲೋಕಗಳಿವೆ. ಜೀವಾದಿಗಳು ಭೋಕ್ತೃಗಳಾಗಿದ್ದು ಲೋಕಗಳೆಲ್ಲ ಭೋಜ್ಯಗಳಾಗಿವೆ. ಇದೇ ಭಗವಂತನ ಸೃಷ್ಟಿ. ಇದನ್ನರಿತು ಭೋಗದಲ್ಲಿ ಭಗವಂತನಿಲ್ಲ; ತ್ಯಾಗದಲ್ಲಿ ಮಾತ್ರ ಅವನನ್ನು ಅನುಭವಿಸಬಹುದು ; ಎಂದು ಖಚಿತಪಡಿಸಿಕೊಂಡು,

— — — — — — — — — — — — — — — — — — — — — —

ಅನಾತ್ಮವನ್ನು ತೊರೆದು ಆತ್ಮದೃಷ್ಟಿ ಹೊಂದಬೇಕು. ಆಗ ಆತ್ಮನೇ ನೀನು ಎಂಬ ಸತ್ಯವು ಮನದಟ್ಟಾಗುವುದು. ಹೀಗೆ ಆತ್ಮ ಬುದ್ಧಿಯಿಂದ ಅಖಿಲ ತಾನಾಗುತ್ತಾನೆ. ಅದೇ ಜೀವ ಬುದ್ಧಿಯಿರದ ಕಿಂಚಿಜ್ಞತ್ವದ ಜೀವನಾಗುತ್ತಾನೆ. ಆದ್ದರಿಂದ, ಜೀವನೆಂಬ ಭ್ರಮೆಯನ್ನು ತೊರೆದು, ತಾನು ಆತ್ಮನೆಂದು ಗಟ್ಟಿಯಾಗಿ ಗ್ರಹಿಸಬೇಕು.

ಜೀವಿಯು ಶಾಶ್ವತ ರೂಪವನ್ನು, ಭಾವದಲ್ಲಿ ನಿಲ್ಲಿಸಿ ಅಂತರ್ಮುಖಿಯಾದಾಗ, ಕೇವಲ ನಿರ್ಗುಣ ಪ್ರಾಪ್ತವಾಗತುತ್ತದೆ. ಆಗ ಅನಾವಶ್ಯಕವಾದುದನ್ನು ಕೊಚ್ಚಿ ಹಾಕಬೇಕು.

ಇನ್ನೊಂದು ದೃಷ್ಟಾಂತ ನೋಡೋಣ. ನೀರು ಮತ್ತು ಉಪ್ಪು ಒಂದೇ, ಉಪ್ಪು ನೀರಿನಿಂದಲೇ ಲವಣ ಹೊಂದಿರುತ್ತದೆ. ಮರಳಿ ಆ ಉಪ್ಪು ಕರಗಿ ನೀರೇ ಆಗುತ್ತದೆ. ಅದೇ ರೀತಿ, ಶಿವ ಜೀವರು ಭೂಮಿಯಲ್ಲಿರುತ್ತಾರೆ. ಶಿವನೆಂಬ ಜಲಧಿಯಿಂದ ಜೀವನೆಂಬ ಲವಣ ಹುಟ್ಟಿ ಮರಳಿ ನೀರಿನಲ್ಲಿ ಕೂಡಿ ನೀರೇ ಆಗುವಂತೆ ಮುಕ್ತಿಯಿದೆ.

ಜೀವನೇ ಶಿವನು. ಅಂದ ಮೇಲೆ ಜೀವಿಯು ಜೀವಿಯನ್ನು ಕೊಂದರೆ, ಶಿವನ ಕೊಲೆಯೇ ಆದಂತೆ. ಇದನ್ನೆಲ್ಲ ಭಾವದಲ್ಲಿ ತಿಳಿದು ಕಾಣಬೇಕಿದೆ.

ತನುವೆಂಬ ಮನೆಯನ್ನು ತೊರೆದು, ಮನಸ್ಸು ಮೌನವಾಗಿ, ಜೀವವು ಉಡುಗುವ ವೇಳೆಗಾದರೂ ಶಿವನನ್ನು ಅರಿಯಬೇಕು. ಮನಸ್ಸನ್ನು ಪುಸಲಾಯಿಸಿ, ಮಾಯೆಯಲ್ಲಿ ಹೊರಳುವ ಜನರಿಗೆ ಪರವು ಸಿಕ್ಕದು ; ದಕ್ಕದು.

'ತತ್ತ್ವಮಸಿ' ಎಂಬುದು ಸಾಮವೇದಲ್ಲಿ ಕಂಡು ಬರುವ ಮಹಾವಾಕ್ಯ. ತತ್ ಅಂದರೆ ಪ್ರತ್ಯಕ್ಷ ಆತ್ಮನೇ. ತ್ವಂ ಎಂದರೆ ಜೀವಬ್ರಹ್ಮನು. 'ಅಸಿ' ಪದದಲ್ಲಿ ಲಕ್ಷ್ಯದೊಂದಿಗೆ ಜೀವನು ಐಕ್ಯನಾಗುವ ಸಂಕೇತವಿದೆ. ಹೀಗೆ 'ಸಃ ಅಹಂ' ಅಂದರೆ ಅವನೇ ನಾನು ಎಂಬ ಸೋಹಂ ಏರ್ಪಡುತ್ತದೆ.

ಎಲ್ಲಿ ತಿಳಿವು ಮರೆವುಗಳಿಲ್ಲವೋ, ಆ ಸ್ಥಿತಿ ತಾಕಿ, ಬ್ರಹ್ಮದಲ್ಲಿ ಸೇರಿ ತೊಡಗಿದ್ದರೆ ಆ ತತ್ ಪದವೇ ತನಗುಂಟು. ಅದುವೇ ಜ್ಞಾನ ಸ್ಥಿತಿ.

ಜಿವೇಶ್ವರ ಐಕ್ಯವಾಗುವುದೇ ಅಮಲವಾದ, ಅವ್ಯಯವಾದ 'ಅಸಿ' ಪದವು. ಅದು ಅವಿರತವಾಗಿರುತ್ತದೆ; ಪರಿಪೂರ್ಣವಾಗಿರುತ್ತದೆ, ಅಮರವಾಗಿರುತ್ತದೆ. 'ಅಸಿ' ಪದದಲ್ಲಿ ಬುದ್ಧಿಯು ಏಕವಾಗಿರುತ್ತದೆ. ಪರಮ ಚಿನ್ಮಯದಲ್ಲಿ ಕೂಟ ಏರ್ಪಡುತ್ತದೆ. ಸಿದ್ಧಿಯ ಆಟ ಪಾಟಗಳು ನಿಲ್ಲುತ್ತವೆ.

— — — — — — — — — — — — — — — — — — — — — —

೨೮೯ ತತ್ತ್ವ ಚಿರವಪ್ಪ ತಾಣದೊಳಗರಸಲು,
ತಾನು ತತ್ತ್ವವಾದ, ತತ್ತ್ವಯೋಗಿ,
ತಿಳಿವು ಎಲ್ಲ ಉಡುಗೆ, ತಾನೆ ಹೋಗು ತತ್ತ್ವ ವಿಶ್ವ

೨೮೧೦ ತನ್ನಯ ಒಳಗೇ ಸಕಲವು,
ತನುವೇ ತಾನೆಂದು ಅರಿತು ತಾರಕವಾತ್ಮಂ,
ತಾನೇಯೆಂದು ಪರಿಣಮಿಸಿರ್ಪ,
ಮನುಜರ್ಗೆ ಮುಕ್ತಿಯುಂಟೈ, ಮಹಿಯಲಿ, ವೇಮಾ,

೨೮೧೧ ತನ್ನೊಳು ಸರ್ವವಿರುತಿರೆ,
ತನ್ನೊಳು ಸಲೆಯರಸಲಿಲ್ಲ, ಧರೆಯರಸುವ ಈ
ಮನುಜರು ಗಾಣದ ಎತ್ತು,
ಎನಿತು ಶಕ್ಯವದನೆ ತಿಳಿಸಲು ? ಧರೆಯೊಳು, ವೇಮಾ,

೨೮೧೨ ತಾನೆ ತಾನು ಎಂಬ ತತ್ತ್ವ ಸಂಕುಲದೊಳು,
ಅನ್ಯವರಿಯುತಿಪ್ಪ; ಅಪ್ಪನಾಣೆ,
ತಾನು ತಾನೆ ಇರಲು, ತಲ್ಲಣವು ಏತಕೆ ? ವಿಶ್ವ

೨೮೧೩ ತಾನು ನಾನು ಎನುವ ತತ್ತ್ವ ಬೇಧವನ್ನು
ಬಿಟ್ಟು, ಕಡು ವಿವೇಕ ಕುದುರಿ ಮಹಿಮೆ,
ಸುಮ್ಮನಿರುವಾತನು ಉತ್ತಮೋತ್ತಮನು, ವಿಶ್ವ

೨೮೧೪ ತಾನು ಸಕಲವಿರಲು, ತನ್ನೊಳಗೆ ಸಕಲವು,
ತನ್ನ ಒಳಗೆ ಬೆಳಗಿ ತಾನೆ ತಿಂದು,
ಇಂಥ ಮಾನವನಿಗೆ ಇಹುದು ಒಪ್ಪ ಮುಕ್ತಿ, ವಿಶ್ವ

೨೮೧೫ ಸಕಲವಿರುತ ತಾ ಹುಟ್ಟಿದೆ,
ಸಕಲವು ಒಂದೇ ಅಲ್ತೇ ? ಸರ್ವವು ತಾನೇ,
ವಿಕಟವಿದ್ಯೆ ತಿಂದಳಿವುದು ;
ಅಕಟಾ ! ಆ ವಸ್ತುವ ನೀನೆಂಬರು ? ವೇಮಾ,

— — — — — — — — — — — — — — — — — — — — — —

೨೮೧೬ ತಾನೇ ನಿಪುಣಾಗಿ ಇರಲು,
ತಾಣವಹ ತನ್ನ ತಾನೇ ತಪ್ಪಿಸಿಕೊಳುವನ್,
ತಾನೆನಿತು ವಿಧದಲಿ ಮತ್ತೆ
ತಾನೇ ಪರಮಾತ್ಮನೆನುತ ತಿಳಿಯೈ ವೇಮಾ,

೨೮೧೭ ತಾನಿಹುದರಿತು ಮನದೋರ್ವ
ತಾನಾದುದೆಲ್ಲ ತನ್ಮಯ ತಾನೇ ಎನುತಾ,
ತಾನರಿತು ಪರಿಣಮಿಸಿದೊಡೆ,
ಮಾನವರಿಗೆ ಮುಕ್ತಿಯುಂಟು, ಮಹಿಯಲಿ ವೇಮಾ,

೨೮೧೮ ತಾನೊಪ್ಪ ಜಾಣನಾದರು,
ತಾಮಸದಲಿ ತನ್ನ ತಾನೇ ತಪ್ಪಿಸಿಕೊಳ್ಳಲ್,
ತಾನೆನಿತೋ ವಿಧವಾಗಲಿ,
ತಾನೇ ಪರಮಾತ್ಮನೆನುವುದನರಿವುದು ವೇಮಾ,

೨೮೧೯ ಇಂತೆಲ್ಲವು ಬ್ರಹ್ಮವೆಂದು,
ಅಂತರ್ಯ ಗುಟ್ಟಳಿದು ಮನ ಮರ್ಮವ ಕಾಣಲ್
ಅಂತಿಂಥ ವಿಚಿತ್ರವಳಿದು
ಚಿಂತೆಯ ಬಿಡುವಂಥ ಸುಜನ ಸಿದ್ಧನು ವೇಮಾ,

೨೮೨೦ ಈ ಘನ ಸೂತ್ರವನರಿವುದು,
ಈ ಘಟದಲಿ ಶಿವನು ಸೇರಿ ಇರುತಿರುವಾಗಳ್,
ಈ ಘಟ ಪಟಗಳಿಗೆ ಸಿಗದೆ,
ತಾ ಘನವಾಗಿಯೆ ಆಡುವ ತಥ್ಯವು ವೇಮಾ,

೨೮೨೧ ಚಿತ್ತವುಳ್ಳ ಯೋಗಿ ಶಿವನ ಹಾಗೆ ಉಂಟು,
ಮಿಥ್ಯಯೋಗಿಯುಂಟು, ಮಿಡತೆಯಂತೆ,
ನಿತ್ಯನಾದ ಯೋಗಿ ನಿನ್ನ ರೀತಿ ಇರುವ, ವಿಶ್ವ

೨೮೨೨ ನೀವು ಅರಿತಿಹ ಲೋಕಗಳು ನಿಮಗೆ ತೋರ್ಕು,
ನೀವು ಮರೆತೊಡೆ, ಜೊತೆ ಜೊತೆಗೆ ನಿಖಿಲವೆಲ್ಲ,
ನಾನೆನುವ ತಿಳಿವು ಬಿಡಲಾರನಾ ಯೋಗಿಯು
ತಾನೆ ಪರಮಾರ್ಥವನವನು ತಿಳಿವ ವೇಮ,

೨೮೨೩ ಏಕ ಸಮತೆಯಲ್ಲಿ ಅರಿವು ಮೂಡಿದ ಯೋಗಿ,
ಪರರನರಿತು ನೋಡಿ, ಭಾವದಲ್ಲಿ,
ನಾಶವಿರದೆ ಮಿಂಚಿ ನಿಖಿಲ ತಾನೆ ಆದ, ವಿಶ್ವ

೨೮೨೪ ಆಡು ಬಗಲೊಳಿಟ್ಟು ಅಲೆಯುತಿರುವ ಗೊಲ್ಲ,
ಹುಡುಕುವಂತೆ ಭ್ರಮಿಸಿ ಹೃದಯದಲ್ಲಿ,
ದೈವವರಿಯದೆ ಪರ ದೈವವನೆ ನೆನೆವುದು, ವಿಶ್ವ

೨೮೨೫ ನೀನು ನಿಂತುಕೊಳುವೆ ನಿಖಿಲವೂ ನಿಲ್ಲುವುದು,
ಬಿಸಿಲುಗುದುರೆಯಂತೆ ಬಂದೆ ನಿಲುವು,
ನೀನು ನಿಶ್ಚಯನಿಹೆ ನಿಖಿಲವೂ ಮಾಯೆಯೆ, ವಿಶ್ವ

೨೮೨೬ ತಾನಾದುದನರಿತು ಸರ್ವ
ತಾನಾಗುವುದ ತಿಳಿದೆಲ್ಲ ತತ್ತ್ವವು ತಾನೇ,
ತಾನರಿತು ಪರಿಣಮಿಸದಿರೆ,
ಮಾನವಗೆ ಮುಕ್ತಿ ಇಲ್ಲವು, ಮಹಿಯಲಿ ವೇಮಾ,

೨೮೨೭ ಲಿಂಗವು ಪರಮಶಿವನು, ಅಂಗವು ಜೀವನಿಹ,
ಜೀವಿ ಸ್ವಚ್ಛವಾಗೆ ಸೇರ್ವ ಶಿವನ ;
ಎರಡು ತೆರದಲುಂಟು, ಯಾವ ಕಡೆಗೆ ಬ್ರಹ್ಮ, ವಿಶ್ವ

೨೮೨೮ ಲಿಂಗದಲ್ಲಿ ನೋಡೆ, ಲೀನವಾಗಿ ಉಂಟು,
ಅಂಗದಲ್ಲಿ ಲಿಂಗ ಅಮರಿಯುಂಟು,
ಲಿಂಗಭಾವವರಿತು ಲೀನವಾಗಿರರೇ ? ವಿಶ್ವ

೨೮೨೯ ಲಿಂಗ ಅಂಗಗಳಲಿ, ಲೀಲೆ ತಿಳಿಯುವನಕ,
ಮನಸು ಲಿಂಗದಲ್ಲಿ ಮರಳುತಿಹುದು,
ಮನಸು ನಿಲಿಸಿದ್ದಲ್ಲೆ ಮತ್ತೆ ಲಿಂಗವಿಹುದು, ವಿಶ್ವ

೨೮೩೦ ನಿಮಿಷವಾದರೂ ಮನ ನಿಲಿಸಿ ನಿರ್ಮಲಾಗಿ,
ಲಿಂಗ ಜೀವೇಶ್ವರ ಕಂಡು ಭಂಗ ಪಡದೆ,
ಪೂಜಿಸಿ ಮನದಲ್ಲಿ, ಸೇರುವುದು ಪೂರ್ಣ ಪದವಿ,
ಪರಮನ ಕೋರುತ ಇದ ಮಾಡಿ ಬೆಳಗು ವೇಮ !

---

೨೮೩೧ ಮಾಯಾ ವಿದ್ಯೆಯ ನೋಡದೆ,
ಮಾಯೆಗಳಿರುತಿರೆ, ಅರಿವಿನ ಮರ್ಮವರಿಯದೇ,
ಮಾಯಾ ವಿದ್ಯಾ ಜಾಲದ
ಛಾಯೆಯೆ, ಜೀವೇಶ್ವರರಿಗೆ ಜಾತವು ವೇಮಾ,

೨೮೩೨ ಹಗ್ಗ ಹಾವು ಎಂದು ಹೆದರುತಿಹನು ಕಂಡು,
ತಿಳಿಯೆ ಹಗ್ಗವೆಂದು ತೀರಿತು ಭಯ,
ಭಯವು ತೀರಿದೊಡನೆ ಬ್ರಹ್ಮ ತಾನೆ ನೋಡು, ವಿಶ್ವ

೨೮೩೩ ನದಿಯುದಕವು ಚಲಿಸುವಂತೆ,
ಮುದದಿ ಮನದಲಿ ತತ್ತ್ವ ಬುದ್ಧಿ ಮಗ್ನನು ಸಕಲಂ
ತುದಿ ಪದವಿಯಲ್ಲಿ ಘನನಿಹ,
ಉದಧಿ ಪ್ರವೇಶಿಸುವ ಗಂಗೆಯಂತೆ ವೇಮಾ,

೨೮೩೪ ಜೀವಿಯೊಳಗೆ ಇಪ್ಪ ಸ್ಥಿರವನೆ ಕಾಣದೆ,
ತಿರುಗುವ ಸ್ಥಿರವ ತಾನು ನಂಬಿ,
ಸ್ಥಿರವನಸ್ಥಿರವನು ತಿಳಿಯೆ ಜೀವಿಗೆ ಮುಕ್ತಿ, ವಿಶ್ವ

೨೮೩೫ ಜೀವ ಸಂಜ್ಞೆಯಿಹುದು ಜೀವ ತತ್ತ್ವಚಯವು,
ಜೀವ ವರನ ಗುರುವ ಚೆಂದಗೊಳಿಸಿ,
ತನ್ನ ನಿಲಿಸುವವನು ತಾನೆ ತಾನಾಗಿಹ, ವಿಶ್ವ

೨೮೩೬ ಜೀವವೆಲ್ಲಿ ಉಂಟು ? ಭಾವವೆಲ್ಲಿ ಉಂಟು ?
ಕೀಳು ಪುರವು ಎಲ್ಲಿ ಕಲೆತು ಉಂಟು ?
ಒಪ್ಪವಿಪ್ಪ ತಾಣ ಏಕೆ ಅರಿತುಕೊಳರು ? ವಿಶ್ವ

೨೮೩೭ ಜೀವವನರಿಯುವ ವರೆಗೂ
ದೇವನ ಭ್ರಮೆ ಹಿಂಗದು, ನರ ದೇವನನರಿಯಲ್,
ಜೀವವನು ವಿವರಿಸುತಿದ್ದು,
ಭಾವಿಸಿದೊಡೆ ಮುಕ್ತಿ ಬಟ್ಟೆ ಬಯಲೈ ವೇಮಾ,

---

೨೮೩೮ ಜೀವವಿಳೆಯ ತುಂಬಿ, ಸೃಷ್ಟಿಯೊಳಗೆ ತುಂಬಿ,
ಶಿವನ ಹುಡುಕ ಹೋಹ ಜೀವನಹಹ !
ಜೀವನೆ ಶಿವನಿಹ, ಚಿಹ್ನವನು ತಿಳಿಯದೆ, ವಿಶ್ವ

೨೮೩೯ ಜೀವಿಯಲ್ಲಿ ಭ್ರಮೆಯು ಸೇರಿಕೊಂಡು ಉಂಟು,
ಜೀವ ಭ್ರಮೆಗಳಲಿ ಸಿಕ್ಕನೆಂದೂ
ಜೀವಿ ಜೀವಿಯಿದ್ದು, ಚಿನ್ಮಾತ್ರವದು ಬಯಲು, ವಿಶ್ವ

೨೮೪೦ ಜೀವ ಭಾವವರಿಯೆ, ಕೆಡದೆಂದಿಗು ಮತಿ,
ದೈವವನು ಅರಿಯೆ, ತನಗೆ ಬುದ್ಧಿ,
ತೇಜ ಉದಿಸಿದಾಗ, ತಿಮಿರ ನಿಲ್ಲುವುದೇ ? ವಿಶ್ವ

೨೮೪೧ ಜೀವವನು ತಿಳಿದೊಡೆ ಚಂಚಲ ಮನದಳಿವು,
ದೈವವ ಕಂಡಾಗ ತಗಲಿ ಬುದ್ಧಿ,
ದೀಪ್ತ ಭಾನು ಕಾಣೆ ತಿಮಿರ ನಿಲ್ಲಬಹುದೆ ? ವಿಶ್ವ

೨೮೪೨ ಜೀವನಕ್ಕಸಾಲಿ ಜಗದೊಳಗೆ ತಿಳಿಯಲು,
ಭಾವವಪ್ಪ ತಾನೆ ಪರಮ ಶಿವನು,
ವಾಯುವೆನಲು ಅವನು ವಸುಧೆ ಬ್ರಹ್ಮನಲ್ತೆ ? ವಿಶ್ವ

೨೮೪೩ ಪೊಡವಿಯೊಳಗಿರುವ ಜೀವರು,
ವಡವಾಗ್ನಿ, ದ್ವೀಪಗಳಿಗೆ ಇನ ಸಂಬಂಧಂ
ಜಡದಲಿ ಕೂಡಿದೊಡಾಗಳೆ,
ನಡೆಯದು, ಪ್ರಳಯಗಳಿಗದೆ ವಿಧವೈ ವೇಮಾ,

೨೮೪೪ ಭಗವಂತ ಪ್ರತಿಬಿಂಬಂ
ಜಗದೀಶನು ಬೆರೆತು ಮಾಯವಹ ಲೋಕಂಗಳಂ,
ಮಿಗೆ ಭೋಜ್ಯವಾದ ಜೀವಾ–
ದಿಗಳೇ ಭೋಕ್ತರು, ವಿದ್ಯೆಯೊಡಗೂಡಿ, ವೇಮಾ,

೨೮೪೫ ಆತ್ಮದಲ್ಲೆ ದೃಷ್ಟಿ ಅನುವಿನಿಂದ ಕುದುರಿ,
ನಿಶ್ಚಲಾಗಿ ದೃಷ್ಟಿ ನಿಲಿಸಿದಾಗ,
'ಅವನು' ನೀನೆ ಕಣಾ, ಅನುಮಾನವೇತಕೆ ? ವಿಶ್ವ

೨೮೪೬ ಆತ್ಮ ಬುದ್ಧಿಯಿಂದ ಅಖಿಲವು ತಾನಾದ,
ಜೀವ ಬುದ್ಧಿಯಿಂದ ಜೀವನಾದ,
ಮೋಹ ಬುದ್ಧಿ ಲಯಿಸಿ ಮೊದಲನೆ ಕಂಡುಕೊ, ವಿಶ್ವ

೨೮೪೭ ಜೀವ ಭಾವವರಿಯೆ, ಮತಿಯು ಕೆಡದೆಂದೂ,
ದೈವವನು, ತಿಳಿಯಲು ತನಗೆ ಬುದ್ಧಿ,
ತೇಜ ಉದಿಸಿದಾಗ ತಿಮಿರ ನಿಲ್ಲದಲ್ಲ ! ವಿಶ್ವ

೨೮೪೮ ಜೀವನ ತಿಳಿದರೆ, ತನುವೇ
ದೇವನು ಭ್ರಮೆ ಕಳೆದು ನರನೆ ದೇವನು, ನೆನೆವೋಲ್,
ಜೀವನು ಎನುವುದ ವಿವರಿಸಿ,
ಭಾವಿಪುದೆ ಮುಕ್ತಿಯು, ಬಟ್ಟ ಬಯಲೈ, ವೇಮಾ,

೨೮೪೯ ವಾಟ ಹುಡುಕಿ ಕಾಣ, ವೇದಾಂತ ವೇದ್ಯನ,
ತತ್ತ್ವವೇತ್ತನಾ ಧರಣಿಯಲ್ಲಿ,
ಆತನಿರಲು ಮತ್ತೆ ಅನ್ಯ ಕಾಣಬಹುದೆ ? ವಿಶ್ವ

೨೮೫೦ ಜೀವ್ದ ಶಾಶ್ವತ ರೂಪವ ;
ಭಾವದಲಿ ನಿಲಿಸುತ ಅಂತರ್ಮುಖಿಯಿರಲಾಗಳ್,
ಕೇವಲ ನಿರ್ಗುಣವದಾಯ್ತು ;
ಕಾವರವನು ಕಡೆಗೆ ಕೊಚ್ಚಿ ಕಾಣ್ಮೈ ವೇಮಾ,

೨೮೫೧ ನೀರಿನಲಿ ಹುಟ್ಟಿತು ಕ್ಷಾರವು,
ಕ್ಷಾರವು ನೀರಾಯ್ತು, ನೀರು ಕ್ಷಾರವು ಒಂದೇ,
ಈ ರೀತಿ ಶಿವನು ಜೀವನು
ಧಾರುಣಿಯಲಿಹುದ, ಮನದಲಿ ಅರಿಯೈ, ವೇಮಾ,

೨೮೫೨ ಜೀವಿ ಜೀವಿ ಕೊಲಲು, ಶಿವನ ಕೊಲೆಯೆ ಆಯ್ತು,
ಜೀವನರಸಿ ತಿಳಿಯೆ, ಶಿವನೆ ಅಲ್ತೆ ?
ಭಾವದಲ್ಲಿ ಬೇಗ ಪರಿಕಿಸಿ ನೋಡಿರೋ, ವಿಶ್ವ

— — — — — — — — — — — — — — — — — — — — — —

೨೮೫೩ ಇರುಳು–ಹಗಲು ಕಾಲ ಏಕವಾಗಿ ಇದ್ದು,
ನೀರು ಗಡಿಗೆ ತುಂಬಿ ನಿಂತಿಹಂತೆ,
ತಾವು ಪರಮಾತ್ಮ ತತ್ತ್ವ ತಿಳಿಯರಲ್ಲ ! ವಿಶ್ವ

೨೮೫೪ ಈ ತನುವಿನಲ್ಲಿ ನೋಡಲು,
ಆ ತನುವಿದಿಷ್ಟೆ ಎನ್ನುತ ಪ್ರತಿಭಾಸವಾಗಳ್,
ಅತುಮದಿ ಒಳಗೆ ನೋಡುತ,
ಆತುರದಿ ತಪಸಿಗಳೋಪ್ಪವಿಪ್ಪರು, ವೇಮಾ,

೨೮೫೫ ತನ್ನ ಒಳಗೆ ಸಕಲವನ್ನು,
ತನುವೇ ತಾನಾಗುತರಿತು, ತಾರಕವಾತ್ಮಂ,
ತನುವೆಂದು ಪರಿಣಮಿಸುವೊಡೆ,
ಮನುಜರಿಗೆ ಮುಕ್ತಿಯು ಉಂಟು ; ಮಹಿಯಲಿ, ವೇಮಾ,

೨೮೫೬ ತನ್ನೊಳಿರುವ ಜೀವ ತತ್ತ್ವ ತಿಳಿಯದಿರಲು,
ಹೊರಗೆ ಎಂದು ತಿಳಿದು, ಹುಡುಕುತಿಹುದು;
ಭಾನುವರಿಯೆ, ದೀಪ ಪಿಡಿದ ರೀತಿಯಾಯ್ತು ! ವಿಶ್ವ

೨೮೫೭ ತನುವೆಂಬ ಮನೆಯಲಿ ತನ್ನ ಶತ್ರು ಮಿತ್ರ,
ತಿಳಿಯಲಾರದವನ ತಿಳಿವದೇಕೆ ?
ತಿಳಿದಿಹ ಮನುಜನಿಗೆ ದಿವ್ಯಾಮೃತವು ನೋಡು, ವಿಶ್ವ

೨೮೫೮ ಜೀವದಲ್ಲಿ ಆತ್ಮ ಸ್ಥಿರತೆಯನು ಕಾಣದೆ,
ತಿರುಗುವನಸ್ಥಿರದ ಗುರಿಯ ನಂಬಿ,
ಸ್ಥಿರವನಸ್ಥಿರ ತಿಳಿಯೆ, ಜೀವಗಿಹುದು ಮುಕ್ತಿ, ವಿಶ್ವ

೨೮೫೯ ಸೀ॥ ತಮ್ಮ ಯೋಚನೆಗಳಲಿ ತತ್ತ್ವಶಿಖಾಮಣಿ
ತಿಳಿಯುವವರೆಲ್ಲ ತತ್ತ್ವವಿದರು,
ಘನವದ್ದ ನಿಬಿಡಾಂಧಕಾರದಲಿ
ಜ್ಯೋತಿಯನುವಿಂದ ಕಂಡ ಅವನೆ ಯೋಗಿ,
ಶಿವನೊಳಗೆ ಜೀವನನು, ಜೀವನೊಳಗೆ ಶಿವನಿಪ್ಪ,
ಅರಿಯುವವನೆ ಯೋಗ ದೃಕ್ಕುಂ,
ಸಾಂಖ್ಯ ಯೋಗದಲ್ಲಿ ಸರ್ವವೂ ಶಿವನೆಂದು
ನಿಶ್ಚಯಿಸುತಿರುವವನೆ ನಿರ್ಮಲಿಹನು,

— — — — — — — — — — — — — — — — — — — — —

೨೮೬೦ ಇಂಥ ಜಾಡ ಗಾಣಲು ಅವರೆಷ್ಟಿರರೇನು ?
ಸ್ಥಿರವಾಗಿ ಶಿವ ಗ್ರಹಿಸಬಹುದೆ ?
ನಿಜ ಕೋರಿಕೆಯೊಳಗೆ ತತ್ತ್ವಶಿಖಾಮಣಿ ತಾನೊಬ್ಬನೇ? ವಿಶ್ವ

೨೮೬೧ ಮನೆಯ ಬಿಟ್ಟುಗೊಟ್ಟು, ಮೌನವಾಗಿ ಮನಸು,
ಜೀವವುಡುಗುವ ವೇಳೆ ಶಿವನನರಿಯೊ,
ಮನಸು ಸೇವಿಸುತ್ತ, ಮಾಯೆಯಲಿ ಹೊರಳುವ,
ಪಾಪಿ ಜನರಿಗೆಲ್ಲಿ ಪರವು ವೇಮ ?

೨೮೬೨ ತನು ಸಂರಕ್ಷಣೆಗಾಗಿಯೆ,
ಮನದಲಿ ಕಾರ್ಯಬಿಡುವೆನೆಂಬ ತತ್ತ್ವದಿಂದಾ,
ದಿನದಿನವು ತಿರುಗಿ ತಿರುಗಿಯು,
ತನು ಕಂಡುಕೊಂಡ ಆತ್ಮವೇ ತಥ್ಯವು ವೇಮಾ,

೨೮೬೩ ತನುವ ತೊರೆದು ಪುನರಪಿ ತನುವ ಮರೆತು,
ತಾನು ತಾನು ಎಂಬ ತಿಳಿವು ಮರೆತು,
ಉಳ್ಳ ಆತನಾದ ಉತ್ತಮ ತರ ಯೋಗಿ, ವಿಶ್ವ

೨೮೬೪ ಕೇವಲಾಂತರಾತ್ಮ ಜೀವ ನಿಜವಿದೆಂದು,
ವ್ಯರ್ಥವಾದ ಮಾಡುವವರ ತುಳಿದು,
ತುಳಿದು, ಹಿಡಿದು ಜಿಹ್ವೆ ತುದಿಗೊಯ್ಯೆ, ಪಾಪವೇ? ವಿಶ್ವ

೨೮೬೫ ದೂರ ಯೋಚನೆಗೂ ದೂರವಿಹುದು ದೈವ,
ತನುವು ದೂರವಾಗೆ, ತಗುಲಿತಾಗ,
ಜೀವಿ ದೂರ ಗೆಯ್ಯೆ ದೇವ ತಾನಾಗುವ, ವಿಶ್ವ

೨೮೬೬ ಮೋಡವಡ್ಡ ಬರಲು, ಮಂದ ಸೂರ್ಯಕಾಂತಿ,
ಚಿತ್ತವಡ್ಡ ಬರಲು ಸ್ಥಿರತೆ ಹಾಳು,
ಮರೆವು ಅಡ್ಡ ಬರಲು ಮಹಿಮೆಯೇ ಕೆಡುವುದು, ವಿಶ್ವ

೨೮೬೭ ನೀರೊಳು ಹುಟ್ಟುವುದು ಉಪ್ಪು,
ಕ್ಷಾರವು ನೀರಾಯ್ತು, ನೀರು ಕ್ಷಾರಗಳೊಂದೇ !
ಈ ರೀತಿ ಶಿವನು ಜೀವರು
ಬೇರಲ್ಲ; ಮನದಿ ಅರಿತಿರು, ಭುವಿಯಲಿ ವೇಮಾ,

೨೮೬೮ ಎಲ್ಲ ಲೋಕಗಳಲಿ ಯಾವ ವಸ್ತುವಿದೆಯೊ ?
ಸುತ–ಮಾತೆ ನಂಟಿಗೆ ಸಾಟಿಯಹುದು,
ಸ್ಥಿರವಾದ ಸಮುದ್ರ ಸ್ಥಿತಿಯಿರುವುದು ನೋಡು, ವಿಶ್ವ

೨೮೬೯ ಅವನು ಅವನು ಅಲ್ಲ, ಅವನ ಒಳಗೆ ಉಂಟು ;
ಅವನೆ ಅವನು, ಅವನು ಅವನು ಅಲ್ಲ,
ಅವನು ಅವನ ಬೆರೆಯೆ, ಅವನೆ ಹೋಗು ಬ್ರಹ್ಮ ವಿಶ್ವ

ಟೀಕೆ: ಅವನು = ಪರಮಾತ್ಮ ; ಅವನು – ಜೀವಾತ್ಮ
ಜೀವನು ಪರಮನೇನೂ ಅಲ್ಲ ; ಜೀವನು ಪರಮನೊಳಗೇ
ಇರುವನು, ಲಕ್ಷ್ಯಾರ್ಥದಲ್ಲಿ ಜೀವಾತ್ಮನೇ ಪರಮಾತ್ಮನಾಗಿದ್ದಾನೆ.

೨೮೭೦ ಜೀವಿ ಕೊಲ್ಲಲೆಲ್ಲ ಶಿವನು ಭಕ್ತಿ ದೂರ,
ಜೀವಿಯರಸಿ ನೋಡೆ ಶಿವನಲ್ಲವೆ ?
'ಜೀವಿಯೇ ಶಿವ' ನೆಂಬ ನುಡಿಯೆ ಸಿದ್ಧಾಂತವು, ವಿಶ್ವ

೨೮೭೧ ಅವನು ಅವನೆ ಎನಲು ಅವನಿಗೇನು ಕೇಡು ?
ಅವನು ಇರುವ ದೇವ ಆಗಿ ನಿರುತ,
ಅವನ ಹೊರತು ಅದುವೆ ; ಅವನದೇನು ತಪ್ಪು ? ವಿಶ್ವ

೨೮೭೨ ತತ್ವದವೆನ್ನಲು ಪ್ರತ್ಯಗಾತ್ಮ ಕಾಣು,
ತ್ವಂ ಪದವೆ ಬ್ರಹ್ಮ ರೂಪವಲ್ತೆ ?
ಆಸಿ ಪದದಲಿ ಲಕ್ಷ್ಯ, ಐಕ್ಯವಾಗಿರುವುದು,
ಸೋಹಮೇರ್ಪಡುವುದು ಸಲೆಯರಿ ವೇಮ,

೨೮೭೩ ತಿಳಿವು ಮರೆವುಗಳಿಲ್ಲದಲ್ಲಿ ತಾಕಿ ಆಗ,
ತಾನು ಬ್ರಹ್ಮದೊಳು ಸೇರುತ ತೊಲಗದಿದ್ದು,
ತತ್ ಪದದೊಳಗೆ ಸಂಧಿಸಲು ತಾನೆ ಬ್ರಹ್ಮ
ಜ್ಞಾನದಿಂದ ದೊರೆಯುವುದು ಘನತೆ ವೇಮ !

— — — — — — — — — — — — — — — — — — — — — —

೨೮೭೪ ಅಮಲ ಅವ್ಯಯ ಚಿಂತನವು 'ಅಸಿ' ಪದವು,
ಕೋರಿ, ಜೀವೇಶ್ವರೈಕ್ಯವ ಕೂಡಿಕೊಳಲು,
ಅವಿರತಾಗಿಹುದು, ಪರಿಪೂರ್ಣ ಅಮರವಯ್ಯ,
ಬರಿಯ ವಾದದಲಿ ಸಿಕ್ಕದಲ್ಲ ; ಬರಿದೆ ವೇಮ !

೨೮೭೫ ಅಸಿ ಪದಾಂತದಲ್ಲಿ ಬುದ್ಧಿ ಏಕವಿದ್ದು,
ಕೂಟ ಪರ ಚಿನ್ಮಯದಿ ಸಿದ್ಧವಾಗಿ,
ಆಟ ಪಾಟವಡಗಿದಾಗ ಮುಕ್ತಿ ;
ವಿಮಲ ಗುಣರಾಜ ಯೋಗೀಂದ್ರ ವೇಮನಾರ್ಯ

●●●

# ೧೭. ಮೋಕ್ಷ ಮಾರ್ಗ

## ನಿಜ ಬೋಧೆ

**ನೀವು ಕೇಳಿದ ಒಂದ, ನಿಲಿಸಿಕೊಳ್ಳಲಿಲ್ಲ ;**
**ನಿಲುವು ಬಿಸಿಲುಗುದುರೆ ಜಲದ ಹಾಗೆ ;**
**ನೀನು ನಿನ್ನರಿವುದೆ ನಿಶ್ಚಯವಾಯ್ತಲ :**
**ವಿಶ್ವದಾಭಿರಾಮ ಕೇಳು ವೇಮ.**

●●●

## ನಿಜ ಬೋಧೆ

ನಾನಾರು ? ಎಂದು ಅರಿಯುವುದೇ ನಿಜವಾದ ಆಧ್ಯಾತ್ಮ ದೇಹವು ಜಡವಾಗಿದೆ. ದೇಹವು ನನ್ನದೆನ್ನುತ್ತೇವೆ. ಹಾಗಾದರೆ 'ನನ್ನದೆನ್ನುವ' ನಾನು ಯಾರು?

ನನ್ನದೆನ್ನುವ ಎಲ್ಲವನ್ನೂ ಅಲ್ಲಗೊಳಿಸಿದರೆ ನಾನಾರೆಂಬುದು ತಿಳಿಯಬಹುದು. ಕಾಮ ದೇಹವಲ್ಲ ; ಇಂದ್ರಿಯಗಳಲ್ಲ; ಮನವಲ್ಲ, ಬುದ್ಧಿಯಲ್ಲ ; ಇವುಗಳಾಚೆಯ ಬಯಲೇ ತಾವೆನ್ನುತ್ತ, ಅನುಮಾನವೇನೂ ಇರದ, ಅಚಲನಾಗಿ ಇದ್ದರೆ, ಮನವು ಆನಂದರೂಪವಾಗಿ ಉಳಿಯುತ್ತದೆ.

ತಾನು ಮತ್ತು ತನ್ನ ದೇಹವೆಂಬ ದ್ವಯವನ್ನೇ ನುಡಿಯುವ ಮನವರಿಯದೆ ದೇಹಾಭಿಮಾನದ ಮೋಹರಾಶಿಯಲ್ಲಿ ಬೀಳುತ್ತಾರೆ. ಇವರು ಮೋಹ ಬಂಧನದಿಂದ ಬಿಡುಗಡೆ ಹೊಂದುವುದೆಂತು ?

ನಾನು ದೇಹವಂತೂ ಅಲ್ಲ, ಆದರೆ ತನ್ನನ್ನು ಮನಸ್ಸಿನಿಂದ ಅರಿಯಲೆಳಸುವ ಮಾನವರಿಗೆ ಸ್ವಾನುಭವ ಸಿದ್ಧಿದೊರಕದು. ತಾನು ಪರಮಾತ್ಮನಲ್ಲದೆ ಬೇರೇನಲ್ಲ.

ನಿನ್ನನ್ನು ನೀನು ಅರಿಯಬೇಕಾದರೆ, ಮೊದಲು ಮನಸ್ಸಿನ ಸಂಕಲ್ಪಗಳನ್ನು ಇಲ್ಲವಾಗಿಸಬೇಕು. ಸಂಕಲ್ಪ ರಹಿತವಾಗಿ, ನಿಸ್ಸಂದೇಹವಾಗಿ ಗುರಿಯನ್ನು ತಲುಪುವ ನಿಶ್ಚಯವಿದ್ದರೆ, ಗುರುವನ್ನು ಕೇಳಿ ದಾರಿ ಹುಡುಕು.

ತನ್ನನ್ನು ತಾನು ಅರಿತರೆ ಸರ್ವವೂ ತಾನೇ ತಾನಾಗುವನು. ಎಲ್ಲ ತತ್ತ್ವಾಳಿಯೂ ತಾನೇ. ಹೀಗೆ ತತ್+ತ್ವ=ತತ್ತ್ವವೆಂದು ತಿಳಿಯದೆ ಮಾಯೆಯೇ ತತ್ತ್ವವೆಂದು ಭ್ರಮಿಸುತ್ತಾನೆ. ಧರ್ಮ–ಕರ್ಮಗಳ ರೇಶ್ಮೆಗೂಡನ್ನು ಕಳಚಿದರೆ ಆ

ಉಳಿಮೆಯೇ ನಾನೆಂಬ ತತ್ತ್ವವೆನಿಸುವುದು. ನಾನಿಲ್ಲದ ತನುವನ್ನು ತೊರೆದರೆ ಆಗ ತಾನೇ ತಾನಾಗುವನಲ್ಲವೇ?

ನಾನು ಎನ್ನುತಿಹುದೇ ನೀನು ಎನ್ನಬಹುದು. ನಿಷ್ಠೆ ತಿಳಿದ ಬಳಿಕ ನಾನೇ ನೀನು ; ನೀನೇ ನಾನು. ಮಾನವನು ಆತನನ್ನು ಕಾಣಲು ತತ್ತ್ವವು ಚೆನ್ನಾಗಿ ಗೋಚರಿಸುತ್ತದೆ. ಆದರೆ ತನ್ನನ್ನು ನೋಡಿದರೆ ಮಾಯೆ ತಗಲುತ್ತದೆ. ಆದ್ದರಿಂದ ಆತ್ಮವನ್ನು ಅರಿತ ಮೇಲೆ ತಾನಾರೆಂಬುದನ್ನು ಅರಿಯುತ್ತಾನೆ. ಆದರೆ ಸೋಜಿಗವೆಂದರೆ, ಆತ್ಮವನ್ನು ನೋಡುತ್ತಿದ್ದರೆ ತನ್ನನ್ನೇ ಮರೆಯುತ್ತಾನೆ. ಆದರೆ ತನ್ನತ್ತ ನೋಡುತ್ತಿದ್ದರೆ, ಆತ್ಮವನ್ನೇ ಮರೆಯುತ್ತಾನೆ. ಆದ್ದರಿಂದ, ಆತ್ಮನಿಷ್ಠೆ ಹೊಂದಿ ತನ್ನನ್ನು ಅರಿಯಬೇಕು.

ಆತ್ಮ ಬೋಧೆ ಇಲ್ಲವೆ ನಿಜಬೋಧೆಯು ಅನ್ಯರಿಂದಾಗದು. ಎಲ್ಲಿ ಅನ್ಯವಿಲ್ಲವೋ, ಅಲ್ಲಿ ನಿಜ ಬೋಧೆಯುಂಟು.

ಲೋಕವೆಲ್ಲವೂ ಮಾಯೆ. ಈ ಮಾಯೆಯ ಮರ್ಮವನ್ನು ತಿಳಿಯಲು ಜನ್ಮವೇ ದಿವ್ಯ ಮಾಯೆಯೆನಿಸುತ್ತದೆ. ಮನದಲ್ಲಿ ಆತ್ಮಾನುಸಂಧಾನವನ್ನು ನಡೆಸಿ, 'ನೇತಿ' ನೇತಿ ಎಂದು ಮನಸ್ಸಿಗೆ ತೋಚಿದುದನ್ನೆಲ್ಲ ಅಲ್ಲಗಳೆಯಬೇಕು. ಅನಂತರ ಒಳಗಣ್ಣು ತೆರೆದು ಆತ್ಮವನ್ನು ತಿಳಿಯಬಹುದು. ತಾವು ಇರದ ಜಾಗೆಯಲ್ಲಿಯೇ ಆತ್ಮನು ತಾನುಂಟು; ಆದರೆ ತಾವು ಇರುವ ಜಾಗೆಯಲ್ಲಿ ಆತ್ಮನು ಇರನು. ತಾವು ತಾನಾಗಿ ಇರಲು ತತ್ತ್ವ ತಿಳಿಯುವನು.

ಅಖಿಲವನ್ನು ನೋಡಿದರೆ, ಎಲ್ಲೆಲ್ಲೂ ಆತ್ಮನೇ ಕಾಣಬರುತ್ತಾನೆ. ಅಖಿಲವನ್ನು ತುಂಬಿರುತ್ತಾನೆ. ಆತ್ಮವನ್ನು ನೋಡುವ ನೋಟವು ಬೇರೆಯೇ ಆಗಿದೆ. ಒಳನೋಟದಿಂದ ವೀಕ್ಷಿಸಿ, ನೋಡುವವನು ಬೇರಾಗದೆ, ನೋಟವೇ ಆಗುತ್ತಾನೆ.

ಇಂಥ ಆತ್ಮವನ್ನು ತನ್ನೊಳಗೆ ಹುಡುಕದೆ, ಧರೆಯಲ್ಲಿ ಅರಸುವವರು ಸಾರಿಗೆ ಸುತ್ತುತ್ತಾರೆ. ತನ್ನ ಅಂತರಂಗವನ್ನು ನೋಡಿ ತಿಳಿದರೆ, ಅವನೇ ಹರನು. ಅವನೇ ಗುರುವು. ಅವನೇ ಆರ್ಯ ಶ್ರೇಷ್ಠನು, ಹೆಚ್ಚೇನು ? ಅವನೇ ಶಿವಯೋಗಿ. ಇರುವ ತಥ್ಯವೆಂದರೆ, ಪೂರ್ಣ ಸತ್ಯವು ನಿನ್ನೊಳಗೇ ಇದೆ. ಮಿಥ್ಯವಾದುದನ್ನು ಅರಿತರೆ, ಆತ್ಮನು ಮಿತ್ರನಾಗುವನು.

ಒಂದು ಬಾರಿ ಅರಿತುಕೊಂಡರೆ ಆ ಇದೆಲ್ಲ ಪರಬ್ರಹ್ಮವೇ ಎಂದು ತಿಳಿಯುತ್ತದೆ. ಆ ಅರಿವೇ ತಾನಾಗುತ್ತಾನೆ. ಮನಸು ನಿಲ್ಲಿಸಿದವನು ಸರ್ವಸಮತೆಯಲಿ ಅನುಭವವನ್ನೇ ಕೋರಿ ಅಚಲನಾಗುತ್ತಾನೆ. ವೇದಾಂತ ವೇದ್ಯನನ್ನ ತಿಳಿಯುತ್ತಾನೆ. ತಾನು ತನ್ನನ್ನು ತಿಳಿದರೆ ತೀರಿತು. ತಾನೇ ಶಿವನು ಮನಸ್ಸಿನಲ್ಲಿರುವ ಮಹಿಮೆಯನ್ನರಿಯುವವನೇ ಯೋಗಿ.

— — — — — — — — — — — — — — — — — — — — — —

ಕುದುರೆಗೆ ತಕ್ಕ ಸವಾರನಿದ್ದರೆ, ಅದನ್ನೇರಿ ನಡೆಸುತ್ತಾನೆ. ಆಗ ಕುದುರೆಯು ಗುಣ ಹೊಂದಿ ಸರಿದಾರಿಯಲ್ಲಿ ನಡೆಯುತ್ತದೆ. ಆದರೆ ಕುದುರೆಯು ಸ್ವಯಂ ತನ್ನ ಗುಣವನ್ನು ಏಕೆ ಅರಿಯದು ? ಆತ್ಮನುಸಂಧಾನವು ಸ್ವಯಂ ಸ್ಫೂರ್ತಿಯಿಂದ ಆಗಬೇಕು.

೨೮೭೬ **ನಾನಾರೆಂಬುದ ನರಿಯದೆ,**
**ಮಾನಸದಿ ; ಜಗದೊಳು ಮನುಜನಿರುತಿಹನಕಟಾ !**
**ಕಾಣನು ತನ್ನಯ ಸಕಲವ,**
**ಮಾಣದೆ, ಕಂಡರಿವನೆಂತು ಮಹಿಯಲಿ ವೇಮಾ ?**

೨೮೭೭ **ನಾನಾರೆನಲಾರಂಭಿಸಿ,**
**ಮಾನಸದಲಿ ತಾನು ತಿಳಿಯನು ಮನುಜನಕಟಾ !**
**ಕಾಣುತ, ಕಾಣದೆ ಇರುವುದು,**
**ಮಾಣುತ ಕಂಡು ಕೇಳಬೇಕು, ಮಹಿಯಲಿ ವೇಮಾ,**

೨೮೭೮ **ತನ ತಾನೇ ಬಯಲೆನ್ನುತ,**
**ಅನುಮಾನವಿರದೆ ತಾನೆ ಅಚಲನಾಗಿ ಇರಲ್,**
**ವಿನಯ ವಿಧೇಯತೆಯಗೂಡಿ,**
**ಮನವೇ ಆನಂದ ರೂಪ ಮಯವೈ ವೇಮಾ !**

೨೮೭೯ **ನೀವು ಕೇಳಿದ ಒಂದ, ನಿಲಿಸಿಕೊಳ್ಳಲಿಲ್ಲ ;**
**ನಿಲುವು ಬಿಸಿಲುಗುದುರೆ, ಜಲದ ಹಾಗೆ ;**
**ನೀನು ನಿನ್ನರಿವುದೆ ನಿಶ್ಚಯವಾಯ್ತಲ !** **ವಿಶ್ವ**

೨೮೮೦ **ತಾನು ತನುವು ; ಎಂದು, ದ್ವಯವನೆ ನುಡಿಯುವ,**
**ಮೋಹ ರಾಶಿಯಲ್ಲಿ ಮುಳುಗಿ ಇರುವ,**
**ಜನರಿಗೆಂತು ಮೋಕ್ಷ ಸಂಗ ಸಿದ್ಧಿಸುವುದು ?** **ವಿಶ್ವ**

೨೮೮೧ **ತನುವು ಶೋಧ ಮಾಡಿ, ದೈವ ಮುಖ್ಯ ಮಾಡಿ,**
**ಮುನ್ನ ಕರ್ಮಗಳನು ಮೂಲೆಗಿರಿಸಿ,**
**ಮನವ ನಿಜವ ಮಾಡಿ, ಮಮತೆಯೆಲ್ಲ ಅಳಿಸಿ,**
**ಮನಸು ನಿಲಿಸುವವನು ಮೋಕ್ಷಿ ವೇಮ.**

— — — — — — — — — — — — — — — — — — — — — —

೨೮೮೨ ಸೀಸಃ ತನ್ನ ತಿಳಿವಿನೊಳಗೆ ತತ್ತ್ವ ಶಿಖಾಮಣಿ
ತಿಳಿದಿಹ ಜನರೆಲ್ಲ ತತ್ತ್ವವಿದರು !
ಘನವಹ ನಿಬಿಡಾಂಧಕಾರವನ್ನು
ಜ್ಯೋತಿಯ ಅನುವಿನಲಿ ನೋಡಿದವನೇ ಯೋಗಿ,
ಶಿವನಲಿ ಜೀವನು ; ಜೀವನಲಿ ಶಿವನಿಪ್ಪ,
ತಿಳಿದವನೇ ಯೋಗಿ ದೃಕ್,
ಸಾಂಖ್ಯಯೋಗದಲ್ಲಿ ಸರ್ವವೂ ಶಿವನೆಂದು
ನಿಶ್ಚಯಿಸಿದವನೇ ನಿರ್ಮಲನು,
ಇಂಥ ಜಾಡ ಗಾಣಲು ಎಷ್ಟು ಜನರಿರಲೇನು ?
ಸ್ಥಿರವಾಗಿ ಶಿವನ ಗ್ರಹಿಸಬಹುದೆ ?
ಒಡಲು ಪ್ರಾಣ ತೊರೆದು ಹೋಹ, ತಾನೊಬ್ಬನೆ ? ವಿಶ್ವ

೨೮೮೩ ತಾನು ತಾನೆ ಇರಲು ತತ್ತ್ವಾಳಿಯಲ್ಲಿ
ಅನ್ಯವರಿಯಬೇಡ ಅಪ್ಪನಾಣೆ !
ತಾನು ತಾನೆ ಇರಲು ತಲ್ಲಣಿಸುವುದೇಕೆ ? ವಿಶ್ವ

೨೮೮೪ ನಾನೆನಲು ದೇಹವಲ್ಲವು ;
ಮಾನಸದಲಿ ಅರಿಯುತಿಪ್ಪ ಮನುಜ ಕುಲಕ್ಕುಂ
ಸ್ವಾನುಭವ ಸಿದ್ಧಿ ದೊರಕದು ;
ತಾನಿಹ ಪರಮಾತ್ಮನರಿಯೆ ತರವೇ ವೇಮಾ ?

೨೮೮೫ ನಿನ್ನನ್ನು ನೀನರಿಯಲೆಣಿಸೆ,
ಮನದಲಿ ಸಂಕಲ್ಪಗಳನು ಮಾಣಲೆಬೇಕೈ,
ಅನುಮಾನ ರಹಿತವಿಹ ಗುರಿ,
ತನಗಿರೆ ಗುರುವ ಪಿಡಿದಾಲಿಸಿ ಹುಡುಕು ವೇಮಾ,

೨೮೮೬ ತಾನೆನುವುದು ಯಾರು ? ತನ್ನವರಿಹರಾರು ?
ತಿಳಿದು ತಿಳಿಯದಿಹರು ತುಚ್ಛ ಜನರು,
ತಿಳಿಯಲಾಗ ರೇಶ್ಮೆ ಹುಳದ ನೀತಿ ಕಾಣಾ, ವಿಶ್ವ

೨೮೮೭ ತಾನಾಗುವ ಅರಿತು ಸರ್ವವು,
ತಾನಾಗುವ ತಿಳಿದು ಎಲ್ಲ ತತ್ತ್ವ ತಾನೇ,
ತಾನರಿತು ಪರಿಣಮಿಸದೆ,
ಮಾನವನಿಗೆ ಮುಕ್ತಿ ಇಲ್ಲ, ಮಹಿಯಲಿ, ವೇಮಾ,

೨೮೮೮ ತಾನೇ ತತ್ತ್ವವೆಂದು ತನ್ನನರಿಯದಿದ್ದು,
ಮಾಯೆ ತತ್ತ್ವವೆಂದು ಮರುಗುತಿಹನು,
ಧರ್ಮ ಕರ್ಮಗಳನು ತೆಗೆದೊಗೆಯೆ ತತ್ತ್ವ, ವಿಶ್ವ

೨೮೮೯ ತನ್ನ ನಿಜ ರೂಪ ನೋಡಲ್,
ತನ್ನದು ಮಾಯೆಯು ; ಸಿದ್ಧರಿರೆ ತಪದ ಮಾಯಂ,
ತಾನೆನಿತು, ಘನನೆ ಆದರು,
ತನ್ನ ಸ್ವರೂಪವ ಕಾಣಬಹುದೇ ವೇಮಾ ?

೨೮೯೦ ತನ್ನನರಿಯುವವನು ತಾನೆ ತಾನಾಗಿಹ,
ತನ್ನನರಿಯುವವನು ತಾನೆ ತಾನು,
ತನುವು ಇಲ್ಲದವನು ತಾನೆ ತಾನಲ್ಲವೆ ? ವಿಶ್ವ

೨೮೯೧ ತನ್ನನರಸಿ ನೋಡೆ, ತಾನೆ ಹೋಗು ಬ್ರಹ್ಮ,
ತತ್ತ್ವವರಸಿ ನೋಡೆ, ತಾನೆ ಆತ್ಮ,
ಮಣ್ಣು ಗಗನವಿಲ್ಲ ; ಮಾಯವಿಲ್ಲವಯ್ಯ ವಿಶ್ವ

೨೮೯೨ ತಾನೆ ಸಕಲವಿದ್ದು, ತನ್ನೊಳು ಸಕಲವಿದೆ,
ತನ್ನೊಳು ಬೆಳಗುವುದ ತಾನು ಅರಿತು,
ಇರುವ ಮಾನವರಿಗೆ ಇಂಪಾಗಿಹುದು ಮುಕ್ತಿ, ವಿಶ್ವ

೨೮೯೩ ಸೀಸಃ ಧರೆಯೊಳು ಓದು ಎಲ್ಲ, ಪರಮಾತ್ಮನೊಳು ಆತ್ಮ
ಐಕ್ಯಗೊಳದಿರೆ, ಬ್ರಹ್ಮನಿಗೂ ದೋಷ,
ಪಂಚ ಭೂತ ವಿಶೇಷ ಪ್ರಕೃತಿಯಲಿ ತಲೆ ಹಾಕಿ,
ನಿಲುಗಡೆಯರಿಯದವನ ನೆತ್ತಿ ದೋಷ,
ಪಂಚವಿಂಶತಿ ತತ್ತ್ವ ಪದ್ಧತಿ ಇಲ್ಲದೆ,
ವೇದಾಂತಿ ನಾನೆನುವಾತಗೊಂದು ದೋಷ,
ಅಂತರಂಗದ ಒಳಗೆ ಅನುಕೂಲವರಿಯದೆ
ಯೋಗಿ ನಾನೆನುವಾತಗೊಂದು ದೋಷ,

ತೇಟ: ತಾನು ತಾನಾದ ತತ್ತ್ವಗಳಿಗೆ ಅಂಟಿಕೊಂಡು,
ಹೊರಗೆ ಒಳ ಒಂದಾಗಿ ತಿಳಿದು ತಿಳಿದು,
ಬ್ರಹ್ಮವೇದಗಳು ಗೊತ್ತಿರದ ಪಾಮರಗು,
ಹಿಂದೆ ಒಂದು ದೋಷ, ಹೌದಲ್ಲೊ, ಕೇಳು ವೇಮ.

೨೮೯೪ ನಾನು ಎನ್ನುತಿಹುದು, ನೀನು ಎನ್ನಬಹುದು,
ನೀನು ನಾನು ಎನುವ ನಿಷ್ಠೆಯರಿತು,
ನಾನು ನೀನೆ, ನೀನೆ ನಾನು, ಎನ್ನಬಹುದು, ವಿಶ್ವ

೨೮೯೫ ನಿನ್ನ ನೋಡುತಿರಲು ನೆಲೆಗಂಡಿತು ತತ್ತ್ವ,
ತನ್ನ ನೋಡುತಿರೆ, ತಗಲಿತು ಮಾಯೆ,
ನಿನ್ನನರಿತ ಬಳಿಕ, ತನ್ನ ತಾನರಿವನು, ವಿಶ್ವ

೨೮೯೬ ನಿನ್ನ ನೋಡುತಿರಲು, ತನ್ನ ತಾನೆ ಮರೆವ,
ತನ್ನ ನೋಡುತಿರಲು, ನಿನ್ನ ಮರೆವ,
ನಿನ್ನ ತನ್ನನರಿಯೆ, ನರಗೆ ವಿಧವಾವುದು ? ವಿಶ್ವ

೨೮೯೭ ನೀನಾಡಲು ನಾನಾಡುವೆ,
ನೀ ನಿದ್ದರೆ ನಾನಿಹೆ, ನಿಷ್ಕಳಂಕವಿರುತಾ,
ನೀನು ತಿಳಿವಂತೆ ತಿಳಿವೆನು,
ನೀ ನಕ್ಕರೆ ನಾ ನಗುವೆನು, ನಿಜವಿದು, ವೇಮಾ,

೨೮೯೮ ಸರ್ವವು ತಾನೆಂದರಿತಿಹ,
ನಿರ್ವಾಣಿಗಲ್ಲದೆ ಮುಕ್ತಿ ಅನ್ಯಗೆ ವಶವೇ ?
ಉರ್ವಿಯಖಿಲ ತಾ ತಿರುಗಲು,
ಪರ್ವತ, ಗುಹೆ, ಜಲಧಿಗಳಲಿ, ಪಡೆಯನು ವೇಮಾ,

೨೮೯೯ ತನ್ನನು ತಾ ತಿಳಿಯೆ ತತ್ತ್ವ,
ತನಗನ್ಯರು ಬೋಧೆ ಗೆಯ್ಯೆ ಧರೆಯಲಿ ಇಹರೇ ?
ತನ್ನನು ತಾ ತಿಳಿಯದೆ ಇರೆ,
ತನಗಾರು ತಿಳಿಸಲಾರರು, ತಥ್ಯವು, ವೇಮಾ,

೨೯೦೦ ಯಾರು ಯಾರೆನ್ನದೆ ನಿನ್ನ ನೀನರಿತೊಡೆ,
ತಾನು ಯಾರೆಂಬುದ ತಿಳಿಯದ ಮಾನವರು,
ಅಡಿಗೆ ಇರುವಾಗ ಲಕ್ಷ್ಯವನು ಅಮರಗೊಳಿಸಿ,
ಅಲ್ಪ ತಿಳಿಯಲು ಸಾಲದೆ ? ಈ ಅಚ್ಚರಿ ! ವೇಮ,

೨೯೦೧ ಧ್ಯಾನದಿಂದ ಉಂಟು, ತಾರಕ ಬ್ರಹ್ಮವು,
ಧ್ಯಾನಿಸಿ ನೋಡೆ ತಾ ತತ್ತ್ವವಿಹನು,
ಧ್ಯಾನದಲ್ಲಿ ಧ್ಯಾನ ತನ್ನ ತಾನು ಅರಿವ, ವಿಶ್ವ

೨೯೦೨ ಮಾಯೆ ಲೋಕವೆನುವ ಮರ್ಮವನು ತಿಳಿಯದೆ,
ಮಾಯೆಗೆ ಸಿಲುಕಿ ಪೂರ ಮಾಯವಾದ,
ಮಾಯೆಯರಿಯೆ, ದಿವ್ಯ ಮಾಯೆಯಲ್ತೆ ಜನ್ಮ ? ವಿಶ್ವ

೨೯೦೩ ಲೋಕಿಸುತಿರೆ ಒಳಗೆ ಲೋಕಾಭಿರಾಮನು,
ಬಾಹ್ಯ ನೋಡಿ ನೋಡಿ ಬಂಧನಾಯ್ತು,
ತನ್ನ ತಾನು ನೋಡೆ, ತಾರಕ ಬ್ರಹ್ಮವು, ವಿಶ್ವ

೨೯೦೪ ಅಣುವಿನಲ್ಲಿ ಉಂಟು ಅಖಿಲ ಜಗಂಗಳು,
ಅಣುವು ತನ್ನ ಒಳಗೆ ಅಡಗಿ ಉಂಟು,
ಮನಸು ನಿಲಿಪ ನರನು ಮತ್ತೆ ಮುಕ್ತಿ ಪಡೆವ, ವಿಶ್ವ

೨೯೦೫ ಆವುದಾವುದೆಂದು ಮನದಲಿ ಅರುಹಿ ಸಾಧಿಸಿ,
ಅಲ್ಲ ಅಲ್ಲವೆಂದು ಪರಿಕಿಸಿ ಅಕ್ಷಿ ತೆರೆದು,
ಆದಿ ಮೂಲವ ಕಾಣುವನು ಆತ್ಮವೇತ್ತ ;
ಆತನೇ ಪರಮಾನಂದ ಅಂತಿಹ ವೇಮ,

೨೯೦೬ ದೈವಮತಿಯ ನರರು, ತಮ್ಮ ತರಹವೆಂದು,
ಅರಸೆ ಗೂಢ ತತ್ತ್ವ, ಅರಿಯದಿಹರು,
ಇಂಥ ಮಾಯೆ ಬಡಿಯೆ ಎಂತು ಮರ್ಮ ತಿಳಿವ ? ವಿಶ್ವ

೨೯೦೭ ಯಾರಿಗಾರು ಇಹರು ? ಇನ್ನಾರು ಇಪ್ಪರು ?
ಅವನ ಕೋರಿ ಹಂಸ ಅಂಟಿ ನೂಕಿ,
ಶಿವನ ರೂಪವಾಂತು ಸೇವಿಸೆ ದೊರಕುವುದು, ವಿಶ್ವ

೨೯೦೮ ತಾವು ಇರದ ಜಾಗೆ ತಾವು ತಾನೆ ಉಂಟು,
ತಾವು ಇರುವ ಜಾಗೆ ತಾನು ಇಲ್ಲ,
ತಾವು ತಾನೆ ಇರಲು ತತ್ತ್ವ ತಿಳಿಯನೇ ? ವಿಶ್ವ

೨೯೦೯ ತಾಣ ತಪ್ಪದಂತೆ ತನ್ನ ಮನವ ನಿಲಿಸಿ,
ತಾಣ ಸೇರುವಂಥ ತಂತ್ರ ಹುಡುಕಿ,
ತಾನು ತಾಣ ಸೇರಿ ತಾಣವೇಕವಾದ,
ತಾನೆ ತಾನೆ ಆಗಿ ತಿರುಗು ವೇಮ,

೨೯೧೦ ಅಲ್ಲಿ ಇಲ್ಲಿ ಉಂಟು ಅಖಿಲವನು ನೋಡಲು,
ನಿರುತ ತಾನೆ ತುಂಬಿ ಇರುತಲಿಹನು,
ಅವನ ಪೂಜೆ ಫಲವ ಆಂತಬೇಕು ಅಯ್ಯ, ವಿಶ್ವ

೨೯೧೧ ಯಾರಿಗು ದಕ್ಕದ ಚಿನ್ಮಯ
ದಾರಿಯ ಅನುವೀವ ಅರಿವು ತನ್ನೊಳು ತಾನೇ,
ಹೋರುತ ಏರಾಡುತಿಹನು,
ಬಾರಿಗೆ ಬಾರಿಗೆ ಸಮನಿಸಿ ನೋಡೆಲೊ ವೇಮಾ,

೨೯೧೨ ತಾನೊಂದು ಮಾತ ತಿಳಿಸುವೆ ;
ತಾನಂಟದೆ ಸರ್ವ ತಾಣಗಳಲ್ಲಿ ತಾನ್ಯೆ,
ತಾನರಿತು ಪರಿಣಮಿಸಿದೊಡೆ,
ಮಾನವನಿಗೆ ಮುಕ್ತಿಯುಂಟು, ಮಹಿಯಲಿ, ವೇಮಾ,

೨೯೧೩ ನೋಡುವವರಿಗೆಲ್ಲ ನೋಟ ಬೇರೆಯುಂಟು,
ನೋಟ ನೋಡಿ ತಿಳಿಯೆ, ನೋಡುವವರು,
ನೋಡಿ ತಾವು ನೋಟ, ನೋಟ ತಾವಾದರು, ವಿಶ್ವ

೨೯೧೪ ತನ್ನೊಳು ಸರ್ವವು ಇರುತಿರೆ,
ತನ್ನೊಳಗೆ ಹುಡುಕದಿದ್ದು, ಧರೆಯರಸುವ ಈ
ತನುಗಳು ಸಾರಿಗೆ ಎತ್ತಲ !
ಮನದಲಿ ತಿಳಿಯುವರೆ ವಶವು, ಮಹಿಯಲಿ ವೇಮಾ,

೨೯೧೫ ತಾನೇ ಸುಜ್ಞಾನಿಯಾಗಿರೆ,
ತಾನೇಕದಿ ತಾನೆ ತನ್ನ ತಪ್ಪಿಸಿಕೊಳುವಂ,
ತಾನೇ ಅಖಿಲ ವಿಧಿಗಳಲಿ,
ತಾನೇ ಪರಮಾತ್ಮನೆಂದು ತಿಳಿಸೆಲೊ ವೇಮಾ,

— — — — — — — — — — — — — — — — — — — — —

೨೯೧೬ ಒಳಗೆ ನೋಡೆ ನೋಡೆ, ಒಪ್ಪ ಲೋಕ ಪ್ರೀತಿ,
ಬಯಲು ನೋಡೆ ನೋಡೆ, ಬಂಧನಾಯ್ತು,
ತನ್ನ ನೋಡೆ ನೋಡೆ, ತಾರಕ ಬ್ರಹ್ಮನೈ, ವಿಶ್ವ

೨೯೧೭ ಅಂತರಂಗವರಿಯೆ, ಅಹುದು ಹರನು ಗುರುವು,
ಅಂತರಂಗವರಿಯೆ, ಅರೈನೆನಿಪ,
ಅಂತರಂಗ ತಿಳಿಯೆ ಅವನು ಶಿವಯೋಗಿ, ವಿಶ್ವ

೨೯೧೮ ತಥ್ಯವಿಷ್ಟೆ ಪೂರ್ಣ ತತ್ತ್ವ ನಿನ್ನೊಳಿಹುದು,
ಮಿಥ್ಯವರಿಯಲಾಗ ಮಿತ್ರನಹುದು,
ಸತ್ಯ ನಿತ್ಯ ಕರ್ಮ, ಸಾಕ್ಷಿ ಬ್ರಹ್ಮನೊಬ್ಬ, ವಿಶ್ವ

೨೯೧೯ ಜೀವನೆಂದು ನೀವು ಸಿಕ್ಕು ತೊಳಲುತಿಹಿರಿ,
ವಾಯುವಾಗಸಗಳು ವಹ್ನಿ ಕೂಡಿ,
ದೇಹಿ ಎಂದುಕೊಳುತ ದೇಹ ಸೇರಿ ಇಹವು, ವಿಶ್ವ

೨೯೨೦ ಬ್ರಹ್ಮವೆನಲು ಬೇರೆ ಪರದೇಶದೊಳಿಲ್ಲ,
ಬ್ರಹ್ಮವೆನಲು ತಾನೆ ಬಟ್ಟ ಬಯಲು,
ತನ್ನ ತಾನರಿಯಲು, ತಾನೆ ಹೋಗು ಬ್ರಹ್ಮ, ವಿಶ್ವ

೨೯೨೧ ಅರಿತೊಡೆ ಆ ಇದು ವರ ಪರಬ್ರಹ್ಮವೇ,
ತಾನೆಂದರಿತಿಹ ತಿಳಿವು ಬಿಡನು,
ನಿರತವಾತ್ಮವ ನುತಿಸಿ, ನಿರ್ಗುಣ ಪದವ ಹೊಂದಿ,
ನಿಶ್ಚಲ ಬ್ರಹ್ಮನಿದ್ದು ನಿಯತಿ ಬಿಡನು.

೨೯೨೨ ಬೆಣ್ಣೆ ಕೈಯೊಳಿದ್ದು, ಬಣ್ಣ ವಿವರ ತಿಳಿಯೆ,
ತುಪ್ಪವನ್ನು ಕೋರುತಿಹನೆ ಭಂಗಿ,
ತಾನು ದೈವವಾಗಿ ದೈವವನೆ ನೆನೆವುದು, ವಿಶ್ವ

೨೯೨೩ ಅಣುವಿನಲ್ಲಿ ಉಂಟು, ಅಖಿಲ ಜಗವು ಎಲ್ಲ,
ಅಣುವು ತನ್ನ ಒಳಗೆ ಅಡಗಿ ಉಂಟು,
ಮನಸು ನಿಲಿಪ ನರನು ಮತ್ತೆ ಮುಕ್ತಿ ಪಡೆವ, ವಿಶ್ವ

೨೯೨೪  ಅಂಡದಲ್ಲಿ ಉಂಟು ಅಖಿಲವಪ್ಪ ಜನರು,
ಎಲ್ಲಿ ಇಲ್ಲ ? ಎಂದು ಅರಿಯದವನು,
ಅವನ ಪೂಜೆ ಫಲವ ಆಂತುವ ಶಿವಯೋಗಿ,  ವಿಶ್ವ

೨೯೨೫  ಮನಸು ನಿಲಿಸಿದಾತನು ಮತ್ತೆ ಸರ್ವ ಸಮತೆಯಲಿ,
ಅನುಭವವನೇ ಕೋರಿ ಅಚಲನಾದ,
ನಿಗಮಾಂತ ವೇದ್ಯನೈ, ನಿತ್ಯ ಪ್ರಕಾಶನೈ,
ಪರಮ ಪೂರ್ಣವ ಕೋರ್ವ ಪಟ್ಟು ಬಿಡನು,

೨೯೨೬  ಮನಸಿನಲ್ಲಿರುತಿಹ ಮಹಿಮೆಯನು ಅರಿಯಲು,
ಅವನಿ ಜನ ನುಡಿವರು ಅವನೆ ಯೋಗಿ,
ನೀನು ನಿನ್ನನರಿಯೆ, ನೀನೆ ಹೋಗು ಶಿವನು,  ವಿಶ್ವ

೨೯೨೭  ಶಿವ ಮತದಲಿ ಇರಲಿ ; ವಿವರಿಸುವವನು ಗುರುವು,
ಹರಿಮತದಲಿ ಇರಲಿ, ಅರಿವ ಗುರುವು,
ಗುರುವು ಅರಿಯದಿರಲು ಗುಣಹೀನನರಿವನೆ ?  ವಿಶ್ವ

೨೯೨೮  ಅರಿಯೆ, ಹಸ್ತದಲ್ಲಿ ಅಭಯ ಹಸ್ತ ನೀಡಿ,
ದರ್ಪಣದೊಳಗೆ ಇರಲಿ, ತನ್ನ ಕಂಡು
ಮಂಗಳವ ಮಾಳ್ಪನು ಮಂಗಳವಿಹೀನನು,  ವಿಶ್ವ

೨೯೨೯  ಕುದುರೆ ಹತ್ತಿ ಒಳ್ಳೆ ಗುರುತು ತೋರ್ಪನಿರಲು,
ಕುದುರೆ ಜಗದಿ ಇಹುದು ಗುಣವ ಹೊಂದು,
ಕುದುರೆ ತನ್ನೊಳಿರುವ ಗುಣವನರಿಯದೇಕೊ ?  ವಿಶ್ವ

೨೯೩೦  ಹಗಲು ಇರುಳು ಮರೆತು, ಭಾವವನ್ನೇ ಮರೆತಾ
ತಾನು ನಾನು ಎನುವ, ತಿಳಿವು ಮರೆತು
ಉಳ್ಳ ಮನುಜನೆ ತಿಳಿ, ಉತ್ತಮ ಯೋಗಿಯವ,  ವಿಶ್ವ

೨೯೩೧  ಒಳಗೆ ಬಯಲು ಮಾಡಿ ಒಟ್ಟು ಲೋಕವಳಿಸಿ,
ಕುಲವ ಕೊಚ್ಚಿ ಹಾಕಿ, ಗುಣವ ತೊರೆದು,
ಚಿಂತೆಯೊಳಗೆ ಚಿಂತೆ, ಸೇರುತಿಹನು ಯೋಗಿ,  ವಿಶ್ವ

●●●

# ೧೮. ಮೋಕ್ಷ ವರ್ಗ

## ಹಠಯೋಗ

**ಚೊಕ್ಕವಾಗಿ ಮನದಿ ಸಾಧಿಸಿ ನೋಡುತಿರು,**
**ನೋಡಿ ನಿಕ್ಕಿ, ಅರಿವು ನೇರ ಮೀರಿ,**
**ಮೂಗು ತುದಿಯ ನೋಟ ಮುದವ ಹೊಂದಿ ಕಾಣು,**
**ವಿಶ್ವದಾಭಿರಾಮ ಕೇಳು ವೇಮ.**

●

## ಹಠಯೋಗ

### ೧. ನಾಡಿ

ಯೋಗಗಳಲ್ಲಿ ಮುಖ್ಯವಾದವುಗಳೆರಡು. ಒಂದನೆಯದು ಹಠಯೋಗ. ಎರಡನೆಯದು ರಾಜಯೋಗ. 'ಹ' ಕಾರವು ಸೂರ್ಯ ಸ್ವರ ; 'ಟ' ಕಾರವು ಚಂದ್ರ ಸ್ವರ. ಇವೆರಡರ ಏಕೀಕರಣವೇ ಹಟಯೋಗ.

ಹಟಯೋಗವನ್ನು ಬ್ರಹ್ಮಚರ್ಯಾದಿ ಆಶ್ರಮ ಪಾಲನೆ ಹಾಗೂ ಕರ್ಮಾನುಷ್ಠಾನ ಮೂಲಕ ಸಾಧಿಸಬೇಕಾಗುವುದರಿಂದ ಇದನ್ನು 'ಪಿಪೀಲಿಕಾ' ಅಂದರೆ ಇರುವೆಯ ಮಾರ್ಗವೆನ್ನುತ್ತಾರೆ. ಅದೇ ರಾಜಯೋಗಕ್ಕೆ ಆಶ್ರಮಾದಿ ನಿಬಂಧನೆಗಳೂ ಇಲ್ಲ. ಕರ್ಮ ಬಂಧನಗಳೂ ಇಲ್ಲ. ಆದ್ದರಿಂದ ಇದನ್ನು ಹಾರುವ ಹಕ್ಕಿಯ ಅಂದರೆ ವಿಹಂಗಮ ಮಾರ್ಗವೆನ್ನುತ್ತಾರೆ. ಹಟಯೋಗದಲ್ಲಿ ವಾಯುವಿನ ಚಲನೆಯತ್ತ ವಿಶೇಷ ಒತ್ತು ನೀಡುತ್ತಿದ್ದರೆ, ರಾಜಯೋಗದಲ್ಲಿ  ದೃಷ್ಟಿ ಚಲನೆಯತ್ತ ವಿಶೇಷ ಒತ್ತು ಇರುತ್ತದೆ.

ಪರಮ ಶಿವನ ಮೇಲೆ ಧ್ಯಾನಿಸುತ್ತ ಪ್ರಾಣ ರಕ್ಷಣೆ ಮಾಡಿಕೊಳ್ಳಬೇಕು. ಹೀಗೆ ಮಾಡದೆ, ಭೂಮಿಯಲ್ಲಿ ಹುಟ್ಟಿ ಸಾಯುವುದು ವ್ಯರ್ಥ. ಪ್ರಾಣಾಯಾಮಕ್ಕಾಗಿ ಸಿದ್ಧ ಮಂತ್ರವೊಂದು ಬೇಕು. ಪಂಚಾಕ್ಷರಿಯು ಅಂಥ ಮಂತ್ರವಾಗಿದೆ. ಮಂತ್ರ ಚೈತನ್ಯದಿಂದ ಸಂಚಿತ ಕರ್ಮವು ಉಡುಗುವುದಲ್ಲದೆ ಪರಮ ಜ್ಞಾನವೂ ಮಿಂಚುತ್ತದೆ.

ಅದೇ ರೀತಿ ದ್ವಾದಶಾಕ್ಷಾರೀ ಮಂತ್ರವಾದ 'ಶ್ರೀ ರಾಮ ಜೈ ರಾಮ ಜೈ ಜೈ ಶ್ರೀ ರಾಮ, ಓಂ' ಸಹ ಸಿದ್ಧಮಂತ್ರವೇ ಆಗಿದೆ. ಇದರ ಪಠಣದಿಂದ ಆರುಷ ಪದದಿಂದ ಆರೂಢ ಪದವಿಯನ್ನು ತಲುಪಬಹುದಾಗಿದೆ.

---

ಶರೀರದಲ್ಲಿ ೭೨ ಸಾವಿರ ನಾಡಿಗಳಿವೆಯೆಂದು ಹೇಳುತ್ತಾರೆ. ಅವುಗಳಲ್ಲಿ ಹತ್ತು ನಾಡಿಗಳು ಮುಖ್ಯವಾಗಿದ್ದು, ಮತ್ತವುಗಳಲ್ಲಿ ಇಡಾ, ಪಿಂಗಳಾ ಮತ್ತು ಸುಷುಮ್ನಾ ನಾಡಿಗಳು ಅತಿಮುಖ್ಯವಾಗಿವೆ. ಇಡಾ ನಾಡಿಯು ನಾಸಿಕದ ಎಡಕ್ಕೂ ಪಿಂಗಳಾ ನಾಡಿಯು ಅದರ ಬಲಕ್ಕೂ ಇವೆ. ಅವುಗಳ ನಡುವೆ ಸುಷುಮ್ನಾ' ನಾಡಿಯಿದೆ. ಪ್ರಾಣದ ಪೂರಕ, ಕುಂಭಕ, ರೇಚಕ ಕ್ರಿಯೆಗಳನ್ನು ಕ್ರಮವಾಗಿ ನಡೆಸಿ, ನಾಸಿಕದ ತುದಿಯ ಮೇಲೆ ದೃಷ್ಟಿಯನ್ನು ನಿಲ್ಲಿಸಬೇಕು.

ಮನವು ತುಂಬಾ ಚಪಲ ಸ್ವಭಾವದ್ದು. ಅತ್ತಿತ್ತ ಹರಿದಾಡುತ್ತದೆ. ಸಾಧನೆಯ ಮೂಲಕ ಅದನ್ನು ನಿಲ್ಲಿಸಿ, ಭೃಕುಟಿಯ ಬಿಲ ಸೇರಬೇಕು. ಮುಂದೆ ವಿಷಯಗಳಲ್ಲಿ ಶಕ್ತಿ ತೊಲಗಿ, ಮಂತ್ರ ಜಪವು ಅಜಪಾಜಪವಾಗಬೇಕು. ಹೀಗೆ ಮನಸ್ಸನ್ನು ನಿಲ್ಲಿಸಿ, ಇಡಾ, ಪಿಂಗಳಾಗಳ ಮೂಲಕ ಪೂರಕ ರೇಚಕಗಳನ್ನು ಸಾಧಿಸುತ್ತ ಸುಷುಮ್ನೆಯ ಮೂಲಕ ಕುಂಭಕ ಸಾಧಿಸಿ, ಭೃಕುಟಿಯಲ್ಲಿ ಸೂರ್ಯ, ಚಂದ್ರ ಮತ್ತು ಹರರ ನಗರವನ್ನು ಅನುಭವಿಸಬೇಕು.

ಇಡಾ ನಾಡಿಯೇ ಗಂಗೆ ಪಿಂಗಳಾ ನಾಡಿಯೇ ಯಮುನೆ. ನಡುವೆ ಸುಷುಮ್ನೆಯೇ ಸರಸ್ವತಿ. ಇವಳೇ ಹಿರಣ್ಮಯಿ. ಅವಳೊಂದಿಗೆ ಸ್ನೇಹ ಪಡೆದರೆ ಭಂಗವೇ ಇರದ ಮುಕ್ತಿಯು ಸುನಿಶ್ಚಿತ.

ರೇಚಕ, ಪೂರಕ ಮತ್ತು ಕುಂಭಕ ಕ್ರಿಯೆಗಳು ರಾಜಯೋಗದ ಸುಸ್ಥಿತಿಗಳೇ ಆಗಿವೆ. ದೃಷ್ಟಿಯನ್ನು ಅಂತರ್ಮುಖಿ ಮಾಡಿ, ಅಲ್ಲಿ ಆದ ಬ್ರಹ್ಮಾನುಭೂತಿಯನ್ನು ಬಣ್ಣಿಸಬಾರದು.

ರೇಚಕ, ಪೂರಕ ಮಾಡುತ್ತ ಅಂತಃಕುಂಭಕ ಮಾಡಿ, ಕ್ರಮದಿಂದ ಉಸಿರು ಬಿಡುತ್ತ ಚಿದ್ಬಯಲಲ್ಲಿ ಆತ್ಮನನ್ನು ಕಾಣಬೇಕು.

ಚಂದ್ರ–ಸೂರ್ಯಗತಿಯಲ್ಲಿ ವೇಗದಿಂದ, ಉಸಿರಾಡಿಸಿ ಬ್ರಹ್ಮರಂಧ್ರದಲ್ಲಿ ಸೇರಿ, ಅಲ್ಲಿ ಬಹುವರ್ಣಗಳನ್ನು ಕಾಣುತ್ತ ಕೊನೆಗೆ ಚಂದ್ರಕಳೆಯ ತಂಪಿನಲ್ಲಿ ನೆಲೆಸು.

ಮನಸ್ಸು ನಿಂತರೆ ಶ್ವಾಸೋಚ್ಛ್ವಾಸವೂ ಮಂದವಾಗುತ್ತದೆ. ಪ್ರಾಣಾಯಾಮದಿಂದ ಮನಸ್ಸು ನಿಲ್ಲುತ್ತದೆ. ಈ ಪಾರಸ್ಪರಿಕ ಸಂಬಂಧವನ್ನು ಅರಿತು ಕಣ್ಣು ಪಿಳುಕಿಸದೆ ಅನಿಮಿಷ ನೇತ್ರವಾಗಿ ಘನವಾದುದನ್ನು ಮನಗಾಣಬೇಕು.

ಪ್ರಾಣಲಿಂಗವೆಂದು ಕೊರಳಲ್ಲಿ ಕಟ್ಟಿದ ಕಲ್ಲು ಹರಳನ್ನು ಗ್ರಹಿಸಿ ಪೂಜಿಸುವುದೇಕೆ ? ಲಿಂಗವೇನು ಕಳವು ಮಾಡಿತೇ ? ಆನಂದವೇ ಪ್ರಾಣಾಯಾಮದಿಂದಾಗುವ ಫಲ. ಅದೇ ಪ್ರಾಣಲಿಂಗದ ಇರವಿನ ಸಾಕ್ಷಿ.

ಪ್ರಾಣವಾಯುವು ದೇಹದಲ್ಲಿ ಸುಳಿದಾಡುವ ವಾಯುವೇ ಆಗಿದೆ. ಒಳಗಿನ ಪಂಚವಾಯುಗಳೊಂದಿಗೆ ಹೊರಗಿನ ಪಂಚವಾಯುಗಳು ಸಂಯೋಜಿತವಾಗಿದೆ.

ಕುಂಭಕ ಸ್ಥಿತಿಯಲ್ಲಿ ಚಿದ್ಬಯಲಿನ ಉನ್ನತ ಸ್ಥಿತಿಯನ್ನು ಕಂಡ ಬಳಿಕ, ದುರಿತಗಳೆಲ್ಲವೂ ತೊಲಗುವವು. ಆಗ ತ್ರಿಗುಣಪುರದಾಚೆಗೆ ನಿರ್ಗುಣದಲ್ಲಿ ನೋಡಬೇಕು. ಆತ್ಮನನ್ನು ಕಾಣಬೇಕು.

**೨೯೩೨ ಗಾಳಿ ಸ್ಥಿರತೆಗಂಡು, ಗಗನದುನ್ನತಿ ಕಂಡು,**
**ದುರಿತ ಕಾಣ ಬಂದು ತೊಲಗುತಿಹವು,**
**ಪುರದ ಮೇಲೆ ನಿಂತು ಬಹಳ ಹೆಣಗಿ ನೋಡು, ವಿಶ್ವ**

**೨೯೩೩ ಪ್ರಾಣ ರಕ್ಷಣೆಗಿಹದಿ, ಪರಮ ಶಿವನ ಮೇಲೆ**
**ಧ್ಯಾನವಮರಿಕೊಳದೆ ತಗಲಿ ನರನು,**
**ಪುಟ್ಟಿ ಸಾಯುತಿಹನು, ಪೊಡವಿಲಿ ಹಲಬಾರಿ,**
**ಗೆದ್ದಲಂತೆ ಕಡೆಗೆ ಕೆಡುವ ವೇಮ,**

**೨೯೩೪ ಪಂಚಾಕ್ಷರಿ ಜಪ ಹೊಂದಲು,**
**ಸಂಚಿತ ಕರ್ಮಗಳು ನೀಗಿ ಸಾಕಲ್ಯದಿ ತಾ,**
**ಮಿಂಚಿತು ಪರಮ ಜ್ಞಾನವು,**
**ಕೊಂಚವಿಲ್ಲದಳಿಯಿತು ಭ್ರಮೆ ಮನದಿ ವೇಮಾ,**

**೨೯೩೫ ಆರೆರಡಕ್ಷರ ಮಂತ್ರವ,**
**ಹೋರಾಡದೆ ಪಠಣಗೆಯ್ದು ಸಲೆ ಹೊಂದಿಡೊಡಾ–**
**ಸಾರವೆ ಶರೀರ ಮೂಲವು,**
**ಆರೂಢ ತಪವದು ಕಣಾ ಅವನಿಲಿ ವೇಮಾ,**

**೨೯೩೬ ನಾಡೀ ಚಕ್ರವ ನೋಡಲ್,**
**ನಾಡಿಗಳಿವೆ ದಶ ಮುಖ್ಯವು ; ಅವುಗಳ ಒಳಗೇ**
**ಕೂಡಿವೆ ನಾಸಿಕದೆಡ ಬಲ**
**ಜೋಡಿಯು ಇಡ ಪಿಂಗಳೆಂಬವುಗಳಿಗೆ ವೇಮಾ,**

**೨೯೩೭ ಚೊಕ್ಕವಾಗಿ ಮನದಿ ಸಾಧಿಸಿ ನೋಡುತಿರು,**
**ನೋಡಿ ನಿಕ್ಕಿ ಅರಿವು ನೇರ ಮೀರಿ,**
**ಮೂಗು ತುದಿಯ ನೋಟ ಮುದವ ಹೊಂದಿ ಕಾಣು, ವಿಶ್ವ**

೨೯೩೮ ಚಪಲ ಚಿತ್ತ ವೃತ್ತಿ ಸಾಧಿಸಿ ನಿಲ್ಲಿಸಲು,
ತ್ರಿಪುಟಿ ಬಿಲವ ಸೇರಿ, ತೊಲಗಿ ರಕ್ತಿ,
ಜಪದೊಳಗಿನ ಜಪವು ಜಯಶೀಲತೆ ಮೀರು, ವಿಶ್ವ

೨೯೩೯ ನಾಸಿಕಾಗ್ರದಲ್ಲಿ ನೋಟ ನೆಟ್ಟು ಇರಲು,
ಬುದ್ಧಿ ನೂಕುತ, ಗುರು ಶಕ್ತಿ ಹೊಂದಿದಾಗ,
ಮುದ್ದುಕುಲುಕುವ ತನ್ನ ಆತ್ಮ ಮೂಲವಹುದು,
ಅದರ ಪರಿಪೂರ್ಣತೆಗೆ ಪಥವೆ ಆಯ್ತು, ವೇಮಾ,

೨೯೪೦ ನಾಸಿಕಾಗ್ರದಲ್ಲಿ ನಯದಿ ಗುರಿಯ ನಿಲಿಸಿ,
ನಾಸಿಯಾಗಿ ನೋಡೆ, ದಶ್ಯವಹುದು,
ಕಾಶಿ ಕಂಚಿ ಕಾಣೆ, ಕಷ್ಟ ಪಡುವುದೇಕೆ ? ವಿಶ್ವ

೨೯೪೧ ನಾಸಿಕದಲಿ ದೃಷ್ಟಿ ನಯದಿಡುವ ಯೋಗಿಗೆ,
ಭಿನ್ನ ವರ್ಣವೇಕೆ ಭೂಮಿಯಲ್ಲಿ ?
ಕಾಶಿ ನಾಥನವನೆ ಗಣನೆ ಮಾಡಿ ನೋಡು, ವಿಶ್ವ

೨೯೪೨ ಇಡ ಪಿಂಗಳ ನಾಡಿಗಳಿಗೆ
ನಡುವೆ ಸುಷುಮ್ನೆಯು ಬೆಳಗುತ ಅಲೆದಾಡುತಿರಲ್
ಕಡು ದುಸ್ತರ ಮನದಿ ಕಾಣೆ,
ನಡುವೆಯೆ ಇನ ಚಂದ್ರ ಹರರ ನಗರವು ವೇಮಾ,

೨೯೪೩ ಗಂಗಾ–ಯಮುನೆಯರ ನಡುವೆ,
ಬಂಗಾರದ ಬೊಂಬೆಯಂಥ ಬಾಲಿಕೆಯಿರುವಳ್,
ಸಂಗಡ ಗೆಳೆತನ ಗೆಯ್ಯಲು,
ಭಂಗವು ಇರದಂಥ ಮುಕ್ತಿಯಾಯಿತು ವೇಮಾ,

೨೯೪೪ ರೇಚಕ, ಪೂರಕ, ಕುಂಭಕ
ಸೂಚಕವಹ ರಾಜಯೋಗ ಸುಸ್ಥಿತಿ ಮತಿ ತಾ
ಲೋಚನ ಒಳಮುಖ ಗೈಯ್ಯಲು,
ವಾಚಾ ಬ್ರಹ್ಮವ ನುಡಿಯಲು ಬಾರದು ವೇಮಾ,

— — — — — — — — — — — — — — — — — — — — — —

೨೯೪೫ ಘನ ಚಿದಾಕಾಶವಾದಂಥ ಗತಿಯನರಿತು,
ಅನಿಲ ರೇಚಕ ಪೂರಕವ ಅನುವಿನಿಂದ,
ಕ್ರಮದಲಿ ಸೆಳೆದು ಕುಂಭಿಸಿ ಪಾಡು ಪಡಲು
ಮಾಡುವುದರ ಸುಜ್ಞಾನ, ಮರೆಯದೆ ವೇಮ,

೨೯೪೬ ನೋಟ ನಿಲಿಸಲಾವುದಿದೆಯೊ,
ನೋಟವವನೆ ಹಿಡಿದು ಅಹುದಲ್ಲೇನದೇ,
ಥೇಟದಿ ರೇಚಕ ಪೂರಕ
ಮಾಟದಿ ಕುಂಭಕ ಮಾಡಿ ಬಯಲನರಿ ವೇಮಾ,

೨೯೪೭ ಉಜ್ವಲವಾದ ಪರಿಪೂರ್ಣ, ಉಪಲಬ್ದಿಸೆ,
ಕುಂಭಗತ ದೀಪ ಶೋಭಿಪುದು ಕುಂಭ ಲೀಲೆ !
ಕುಂಭಕದಲಿ ಮನ ಸೇರಿಸಿ ಕೂಡಬೇಕು,
ಹೊರತು, ಗಾಂಭೀರ್ಯ ತಾಳಿದರೆ ಹೊಂದ ವೇಮಾ,

೨೯೪೮ ಒಳಗೆಳೆದು ಬಿಡುತ ಉಸಿರನು
ಒಳಗೆ ನಿಲಿಸಿ ನೋಡಿ ಕ್ರಮದಿ ಬಿಡುತಿರಲಾಗಳ್,
ತಿಳಿಯುತಲೋರ್ವನ ಬಯಲಲಿ
ಸುಳಿದು ನಿರುಕಿಸುತ ನಿನ್ನನೆ ಕಂಡರಿ ವೇಮಾ,

೨೯೪೯ ಮುರಿಗೆಯ ಹಂಸವ ಮನದಲಿ,
ಭರಭರ ಕುಂಭಿಸುತ, ಬೆಚ್ಚಿ ಬೀಳದೆ ಹಿಡಿಯಲ್,
ಸ್ಥಿರ ಭಾವ ಸಿದ್ಧಿ ಪಡೆಯುತ,
ಪರಿಪೂರ್ಣ ಸಮಾಗಮದಲಿ ಪಡೆಯ್ಯೆ ವೇಮಾ

೨೯೫೦ ಚಂದ್ರ ಸೂರ್ಯ ಗತಿಯ ಚರ್ಚಿಸಿ ವೇಗದಿಂ,
ರಂಧ್ರದಲ್ಲಿ ಸೇರಿ, ರಂಗು ಮಿಕ್ಕಿ,
ಚಂದ್ರ ತಾರೆ ಸೇರಿ ಚೈತನ್ಯ ಹೊಂದಿರೊ, ವಿಶ್ವ

೨೯೫೧ ಚಂದ್ರ ಸೂರ್ಯಾಗ್ನಿಗಳೇರ್ಪಟ್ಟ ಚಂದ್ರ ಶಾಲೆ
ಸೇರಿ, ಪರಶಿವನಾತ್ಮದೊಳು ಚಿಂತನ ಗೆಯ್ದು,
ಚಿನ್ಮಯಾನಂದದಲಿ ಸೇರಿ ತನ್ಮಯಾಗೆ,
ಮುಕ್ತಿ ಮೂಲವಿದೇ ಜನ್ಮಗಳಿಗೆ ; ವೇಮ !

೨೯೫೨ ದಾರಿ ಮೂಗು ಛಾಯೆ ತಂದುಕೊಂಡ ಮೇಲೆ,
ಅಲ್ಲಿ ಕಾಣುವುದನು ಅರಿಯಲಾರ ;
ಅರಸಿ ನೋಡೆ ಬಯಲು ಅಲ್ಲವೇನು ಮುಕ್ತಿ ? ವಿಶ್ವ

೨೯೫೩ ಮುಕ್ತಿ ಯಾರ ಸೊತ್ತು ? ಮೂಗು ಮೇಲೆ ನೋಡು,
ಭಕ್ತಿ ಯಾರ ಸೊತ್ತು ? ಭಜನೆ ಮಾಡು –
ಶಕ್ತಿ ಯಾರ ಸೊತ್ತು ? ಯುಕ್ತಿಯಿಂದ ಸಾಧಿಸು, ವಿಶ್ವ

೨೯೫೪ ಪಾದವನೂರಿ ಗುರು ಗುಟ್ಟು,
ಚಂದಿರ ಕಳೆಗಂಟಿ ಗುರುಗೆ ಹಗಲಿರುಳೆನದೇ,
ಸಾಧನ ಪೂರಕ, ಕುಂಭಕ,
ವೇದಿಕೆಯೊಳಾತ್ಮ ಬಯಲೇ ಬೆಳಗಿತು ವೇಮಾ,

೨೯೫೫ ಚಂದ್ರ ಛಾಯೆ ಇರಿಸಿ, ಚೊಕ್ಕ ರವಿಯ ಮೇಲೆ
ಇದ್ದು ನೋಡಿ, ಕೊರತೆ ಇಲ್ಲವೆನಿಸಿ,
ಜೊನ್ನೆ ನಿಕಟವಾಗಿ ಶೋಭಿಪುದೆ ಮುಕ್ತಿ, ವಿಶ್ವ

೨೯೫೬ ಉಳ್ಳದ್ದನೆ ಕಂಡು, ಉಸಿರು ಬಿಗಿ ಹಿಡಿದು,
ಕಣ್ಣು ಮುಚ್ಚಿ ಏನು ಕಾಣಲಾರೆ,
ಕೇಳಿ ತಿಳಿದ ಅರಿವು ವಿಜ್ಞಾನವೆಂದರಿ, ವಿಶ್ವ

೨೯೫೭ ಶ್ವಾಸವೆಳೆದು ಬಿಡುವ ಸಾಧನೆಯ ತಿಳಿದರೆ,
ಮೋಸಗೊಳದೆ ಮುಕ್ತಿ ಮುಟ್ಟುತಿಹನು,
ಗುಣ ದೋಷಗಳಿಂದ ಗಾಸಿಪಡದೆ ಹೋಹ, ವಿಶ್ವ

೨೯೫೮ ಒಡಲಿನೊಳಗೆ ಎಳೆದು, ಒಡನೆ ಕಣ್ಣು ಮುಚ್ಚಿ,
ಬಿರ್‍ರನೆ ಬೀಗಿರುವ ಭಂಡ ಯೋಗಿ,
ಯಮನ ಪಾಲಿನ ಕುರಿ, ಏನು ಮಾಡುವನವ ? ವಿಶ್ವ

೨೯೫೯ ಮನಸೂ ಅನಲವು ಎರಡಕು
ಘನವಿಹುದು ಕೊಂಚ ತಿಳಿಯಲು ಬೇಕದ ನೋಡಾ,
ಅನಿಮಿಷ ದೃಷ್ಟಿಯಲೊಳಗೀ
ಘನವಾಗಿ ವಿಹರಿಸುತ ಮನಗಾಣರು ವೇಮಾ,

**೨೯೬೦ ಪ್ರಾಣ ಲಿಂಗವೆನಲು ಪ್ರಾರ್ಥಿಸಿ, ಕೀರ್ತಿಸುತ,**
**ಕಟ್ಟಿ ಹಾಕಲೇಕೆ ಕಳವು ಗೆಯ್ತೆ ?**
**ಅಖಿಲ ಜನರಿಗೆಲ್ಲ ಆನಂದವೇ ಸಾಕ್ಷಿ, ವಿಶ್ವ**

**೨೯೬೧ ಪ್ರಾಣವಾತ್ಮವೆನಲು ಪ್ರಾಣಿ ಜೀವಿತಾಯ್ತು,**
**ಜೀವಿ, ಪ್ರಾಣವಾತ್ಮ ಸೇರಿ ಒಂದೆ,**
**ಕರ್ಮ ಬಂಧಗಳಲಿ, ಕಟ್ಟಿ ಇರುವುದಷ್ಟೆ, ವಿಶ್ವ**

●

## ೨. ಚಕ್ರ-ದೇವತೆ

**ಚಕ್ರಗಳು :**

ದೇಹದಲ್ಲಿ ಮೇರು ದಂಡದ ಗುಂಟ ನಾಡಿಗ್ರಂಥಿ ಮತ್ತು ಉಪಗ್ರಂಥಿಗಳನ್ನು ಯೋಗಿಗಳು ಗ್ರಹಿಸಿದ್ದಾರೆ. ಈ ನಾಡಿ ಗ್ರಂಥಿಗಳಿಗೆ ಯೋಗ ಭಾಷೆಯಲ್ಲಿ ಚಕ್ರಗಳೆನ್ನುತ್ತಾರೆ. ಮತ್ತು ಅವು ಪ್ರಭಾವಿಸುವ ಪ್ರದೇಶಕ್ಕೆ ಮಂಡಲವೆನ್ನುತ್ತಾರೆ. ಈ ಚಕ್ರಸ್ಥಾನಗಳು ಮುಖ್ಯವಾಗಿ ಇಡಾ, ಪಿಂಗಳಾ ಮತ್ತು ಸುಷುಮ್ನಾ ನಾಡಿಗಳು ಒಂದನ್ನೊಂದು ದಾಟುವ ಕತ್ತರಿಯಲ್ಲಿ ಇರುವವೆಂದು ಗುರುತಿಸಲಾಗಿದೆ. ಇವು ಭೌತಿಕವಲ್ಲವೆಂಬುದನ್ನು ನೆನಪಿಡಬೇಕು.

ಇಡಾ ನಾಡಿಯು ನಾಸಿಕದ ಎಡ ಹೊರಳೆಯಿಂದ ಆರಂಭಿಸಿ, ನಾಡಿ ಪ್ರವಾಹವನ್ನು ಮೇರುದಂಡದ ತೀರ ಕೆಳ ತುದಿಯಲ್ಲಿರುವ ಮೂಲಾಧಾರ ಗ್ರಂಥಿಗೆ ಕಳಿಸುತ್ತದೆ. ಅಲ್ಲಿ ಸ್ವಲ್ಪ ಕಾಲ ಹಿಡಿದು, ಪಿಂಗಳಾ ಮೂಲಕ ನಾಡಿ ಪ್ರವಾಹವನ್ನು ಸೆಳೆದು ಮೂಗಿನ ಹೊರಳೆಯಿಂದ ನೀವು ಹೊರಹಾಕುತ್ತೀರಿ. ಈ ಶ್ವಾಸ-ಉಚ್ಛ್ವಾಸದೊಂದಿಗೆ ಮಂತ್ರದ ಮಾತ್ರೆಗಳನ್ನು ಮೇಳವಿಸಿ, ಪ್ರಾಣಾಯಾಮವನ್ನು ಮಾಡಬೇಕು. ಮತ್ತು ಮಂತ್ರಧ್ಯಾನಕ್ಕೆ ಚಕ್ರಗಳನ್ನು ವ್ಯಾಸವಾಗಿ ಗ್ರಹಿಸಿ, ಧಾರಣವನ್ನು ಅಭ್ಯಸಿಸಬೇಕು. ಈ ಚಕ್ರಗಳೆಂದರೆ, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಮತ್ತು ಸಹಸ್ರಾರ. ಇವುಗಳ ಸ್ಥಾನಗಳು, ಗುದ್ಯ, ಗುಹ್ಯ, ನಾಭಿ, ಹೃದಯ, ಕಂಠ, ಭ್ರು ಮಧ್ಯೆ ಮತ್ತು ಶಿರದಲ್ಲಿಯ ಪದ್ಮ, ಇಲ್ಲಿಯ ದೇವತೆಗಳು ಕ್ರಮವಾಗಿ ವಿಘ್ನೇಶ್ವರ, ಬ್ರಹ್ಮ, ಹರಿ, ರುದ್ರ, ಜೀವ ಮತ್ತು ಅಗ್ನಿ.

ಸುಷುಮ್ನೆಯು ಅಡಿಯಲ್ಲಿ ಸುತ್ತಿಕೊಂಡ ಹಾವಿನಂತಿದ್ದು, ಜಾಗೃತವಾದೊಡನೆ, ಬಿಚ್ಚಿಕೊಂಡು ಮೇಲು ಮೇಲಕ್ಕೆ ಹರಿಯುವುದರಿಂದ ಈ ಯೋಗಕ್ಕೆ ಕುಂಡಲಿನೀ ಯೋಗವೆಂದೂ ಹೆಸರು. ಇಲ್ಲಿ ಸುಷುಮ್ನೆಯ ಮೂಲಕ ಹರಿಯುವ ಯೋಗಶಕ್ತಿಯು ತ್ರಿಪುಟಿಗೆ ತಲುಪಿದರೆ, ಬಾಲೆಯೊಂದಿಗೆ ರಮಿಸಿದ ಆನಂದ ಯೋಗಿಗಾಗುವುದು.

— — — — — — — — — — — — — — — — — — —

ಈ ಚಕ್ರಗಳು ಕ್ರಮವಾಗಿ ಅರಳುತ್ತಿವೆಯೆಂಬುದು ಸಾಧಕನಿಗೆ ಆಗುವ ಅನುಭವ. ಈ ಆರು ಚಕ್ರಗಳಿಗೆ ಆಧಾರವಾದಂಥ, ಹಡಗಿನ ನಿಶಾನೆಯ ಕಂಭದಂತೆ ಸುಷುಮ್ನಾ ಇದೆ. ಆಜ್ಞಾ ಚಕ್ರದ ವರೆಗಿನ ಆರು ಚಕ್ರಗಳ ಮೇಲೆ ಒಂದು ಮೂಲ ಶಕ್ತಿಯಿದೆ. ಅಲ್ಲಿಯೇ ಪರಿಪೂರ್ಣ ಬ್ರಹ್ಮರೂಪವನ್ನು ಕಾಣಬಹುದು.

ಸುಷುಮ್ನೆಗುಂಟ ವಿರುವ ಶಕ್ತಿಯೊಂದಿಗೆ ಜ್ಞಪ್ತಿಯನ್ನು ಉಳಿಸಿಕೊಂಡು ಯೋಗಶಕ್ತಿಯೊಂದಿಗೆ 'ಕೂಡಿ, ಆಡಿ, ಹಾಡಿ, ಕೋರ್ಕೆ ತೀರಿದ' ನಂತರ ಈ ದೇಹದ ಮಳಿಗೆಯನ್ನು ದಾಟಿ ಹೋದರೆ, ಅನಂತದ ಅನುಭವವಾಗುವುದು.

ಕುಂಡಲಿನೀ ಶಕ್ತಿಯನ್ನು ಅರಿತು ಅನುಭವಿಸಿದವನು, ದಿವ್ಯಾನುಭವವನ್ನು ಪಡೆಯುವನು. ಅವನು ಆ ಪರ ಲೋಕದಲ್ಲಿ ಜನಿಸಿದ ದ್ವಿಜನೇ ಸರಿ.

ಅದ್ಭುತವಾದ ಬ್ರಹ್ಮಾನುಭೂತಿಯಿಂದ, ಚದುರಿದ ಕಳೆ ಹೊಂದಿ, ಬೆದರಿದ ಯುವತಿಯಂತೆ, ಹಾವ ಭಾವ ತೋರುವ, ಕುಂಡಲಿನೀ ಶಕ್ತಿಯನ್ನು ಇಹದಲ್ಲಿ ಮುಕ್ತಿ ಕಾಂತೆಯೆನ್ನುತ್ತಾರೆ.

ಕ್ರಮೇಣ, ಒಂದೊಂದೇ ಊರ್ಧ್ವ ಚಕ್ರದಲ್ಲಿ ನ್ಯಾಸವಿರಿಸಿ, ಮಂತ್ರ ಧ್ಯಾನ ಮಾಡಿ ಮುಂದುವರಿಯಬೇಕು. ಸಹಸ್ರಾರ ಚಕ್ರದಲ್ಲಿ ಅಧೋಭಾಗವೇ ಗುರುಚಕ್ರ; ಮೇಲು ಭಾಗವೇ ಸಹಸ್ರಾರ. ಗುರುಚಕ್ರದಲ್ಲಿ ನ್ಯಾಸವನ್ನು ಮುಂದುವರಿಸಬೇಕು.

೨೯೬೨ **ಕುಂಡಲಿ ಯೋಗವ ತಿಳಿದೊಡೆ,**
**ಬಂಡವಲವು ಯೋಗಿಗೇಕೆ ಬಾರೆಯ ಹೊಂದಲ್ ;**
**ಖಂಡುಗ ಹೊಂದನೆ ಆತನು ?**
**ಉಂಡಾಡುವ ಮುಕ್ತಿಕಾಂತೆ ಕಂಡೊಡೆ ವೇಮಾ,**

೨೯೬೩ **ಕುದುರುತ ಗುದ ಗುಹ್ಯಗಳು,**
**ಮೃದು ನಾಭಿಯು, ಹೃದಯ ರಂಗ ಮೇಳದ ಪರನೈ,**
**ಹದದಿಂದ ಬ್ರಹ್ಮರಂಧ್ರವ,**
**ಮುದದಿಂ ಮನದೊಳರಿಯುವಾತ, ಪೂರ್ಣನು ವೇಮಾ,**

೨೯೬೪ **ಮೊದಲು ಮೂಲಾಧಾರವಿಹುದು ವಿಘ್ನೇಶ್ವರಂ**
**ಆ ತಾಣ ದೇವಾಳಿ ಅರಳುತಿಹುದು,**
**ಅದರ ಮೇಲೆ ಮತ್ತೆರಡಂಗುಳಂತರ ದಾಟಿ,**
**ಸ್ವಾದಿಷ್ಠ ಚಕ್ರವದು ಇಹುದು ಬ್ರಹ್ಮ,**
**ಇದರಿಂದ ಎಂಟು ದೇಹಾಂಗುಳಂತರ**

ಮಣಿಪೂರ ಚಕ್ರವೈ ; ಅರೆಯುವ ಹರಿ
ಬಳಿಕ ದಶಾಂಗುಳ ದೂರ, ಅನಾಹತ
ಒಪ್ಪ ರುದ್ರನಿಹನು ಚೊಕ್ಕವಾಗಿ

ಲೇಟ : ಹನ್ನೆರಡು ಅಂಗುಳಂತರ ಮೇಲೆ, ವಿಶುದ್ಧ ;
ಅಲ್ಲಿ ಜೀವನು ; ಹೊಂದುತಾ ಅರಳುತಿಹನು,
ಹೊಳೆವ ಮಹಿಮಾತ್ಮನಗ್ನಿಯೈ ಬೆಳಗುತಿಹನು,
ಇಷ್ಟು ಜಾಡನು ತಿಳಿವುದೆ "ಅರಿವು" ವೇಮ.

೨೯೬೫ ಆಧಾರವೆಂಬವುಗಳಾರು
ಮೋದದಿ ಅರಳುತಿಹವು ; ಮುಖ್ಯವಾಗಿಹುದನೇ
ಇಲ್ಲವೆನಲೇಕೆ, ತಿಳಿಯದೆ ?
ಸಾಧಕನಾಗುತ ಕಂಡುಕೊ, ಸಾಧಿಸಿ ವೇಮಾ.

೨೯೬೬ ಆರು ಆರು ಗಳಿಗೆ ಆಧಾರವನು ಗೆಯ್ದು,
ಒಂಟಿ ಕಂಬ ಸಿಡಿಯ ಒಲಿದು ನಿಲಿಸಿ,
ಮನೆಯ ಒಬ್ಬ ಗಂಡ ಮತ್ತೆ ಆಯ್ದು ಕೊಳ್ಳಿರಿ ವಿಶ್ವ

೨೯೬೭ ಆರು, ತೊಲೆಗೆ ತಾನು ಆಧಾರ ವಿಹಪರಿ
ಒಂದು ಕಂಭ ಗೃಹದಿ, ಒಪ್ಪನಿಲಿಸಿ
ಒಬ್ಬ ಕರ್ತ, ಮನೆಯ ಒಡೆತನ ವಹಿಸುವನು ವಿಶ್ವದ

೨೯೬೮ ಪುರದಲಿ ಆರರ ಮೇಲಕೆ
ಪುರದಲ್ಲಿ ಒಂದು ಮೂಲ ಶಕುತಿಯಿದೆ ಕಾಣಾ,
ಉರದಲಿ ಗುರಿಗಂಡೊಡನೆಯೆ,
ಪರಿಪೂರ್ಣ ಬ್ರಹ್ಮ ರೂಪ ಬಯಲಾಯ್ತು ವೇಮಾ,

೨೯೬೯ ಒಂಟಿ ಮಹಡಿಯೊಳಗೆ ಒಪ್ಪವಾಗಿ ನೋಡೆ,
ಮಣ್ಣು ಗಗನ ಮಧ್ಯೆ ಮಹಿಮೆಯಿಹುದು,
ಕಣ್ಣು ಜ್ಯೋತಿ ಮಿಕ್ಕಿ ಕಲೆಯೆ, ಏರಿತು ಹಂಸ, ವಿಶ್ವ

೨೯೭೦ ಒಂಟಿ ಕಂಬದಲ್ಲಿ ಒಪ್ಪ ಅಂಕಣವಿದೆ,
ಆರು ಅಂಕಣಗಳ ಅಮರ ನಿಲಿಸಿ,
ಆಚೆಗಿನ್ನು ನೋಡೆ ಅಮರವಾದ ತತ್ತ್ವ, ವಿಶ್ವ

— — — — — — — — — — — — — — — — — — — —

೨೯೭೧ ಅಂಟಿ ಅಂಟದಿದ್ದು, ಅಮಲದ ತೆರನಾಗಿ,
ಆಗಸ ನೆಲ ನಡುವೆ ಅಲೆಯುವವನು,
ಒಂಟಿ ಕಂಭದಲ್ಲಿ ಒಂದುಗೂಡಿ ಕಾಣು, ವಿಶ್ವ

೨೯೭೨ ಒಂಟಿ ಕಂಬದಲ್ಲಿ ಒಪ್ಪ ನೋಳ್ಪ ಜ್ಞಪ್ತಿ,
ಕೂಡಿ, ಆಡಿ, ಹಾಡಿ ಕೋರ್ಕೆ ತೀರಿ,
ಮಳಿಗೆ ದಾಟಿ ನೋಡೆ, ಮಿತಿಯು ಮೀರಿ ಉಂಟು, ವಿಶ್ವ

೨೯೭೩ ಒಂಟಿ ಕಂಬದಲ್ಲಿ ಒಪ್ಪ ಅಂಕಣವಿಹುದು,
ಆರು ಅಂಕಣಗಳ ಅಂದ ನಿಲಿಸಿ,
ಆಚೆ ನೇರ ನೋಡೆ, ಅಂಟುವ ತತ್ತ್ವವನು, ವಿಶ್ವ

೨೯೭೪ ಷಟ್‌ಚಕ್ರಗಳಿಂದಾಚೆಗೆ,
ಷಟ್ಟಂತೆ ಬಿಡುತಿಹ ಮುಕ್ತಿ, ಷಡ್ಗುಣ ನಿಧಿಯೈ ;
ಷಡ್ಭಾಯೆಗಳು ಹೊಂದುತ,
ಷಟ್ಚಕ್ರಗಳಾಗಿ ಹೊಳೆವ ಷಟ್ಕವು ವೇಮಾ !

೨೯೭೫ ಷಡರವಿಂದಗಳನು ಸಾಧ್ಯವಾಗಿ ಮಾಡಿ,
ಕುಂಡಲಿನಿಯ ಕಂಡು, ಕುದುರಿ, ಹುಡುಕಿ,
ಮನಸು ನಿಲಿಸುವವನ ಮತ್ತೆ ದ್ವಿಜನೆನ್ನು, ವಿಶ್ವ

೨೯೭೬ ಐದು ಚಕ್ರಗಳನ್ನು ಆದಿಗೆ ಬಿಟುಗೊಟ್ಟು,
ಐದು ಚಕ್ರಗಳ ಆಚೆಗರಿಯೆ,
ಐದು ಚಕ್ರಗಳೂ ಅಡಗಿ ಬಯಲು ತೋರ್ಕು, ವಿಶ್ವ

೨೯೭೭ ಅಖಿಲ ಕಟ್ಟಿ ಹಾಕಿ, ಆಧಾರ ಚಕ್ರದಿ
ಪ್ರಾಣವಾಯುವಲ್ಲೆ ಭದ್ರ ಪಡಿಸಿ,
ಎಡೆಬಿಡದೆ ಇರುವ ಇಳೆ ಯೋಗ್ಯನಿಹ ಯೋಗಿ, ವಿಶ್ವ

೨೯೭೮ ಬೆದರಿದಾಗ ಒಳಗೆ ಚದರಿದ ಕಳೆಯಿಂದ
ಆಧಾರದಿ ನಿಂತು ಆಡುತಿಹಳು,
ಮಹಿಯೊಳವಳ ಹೆಸರು ಮುಕ್ತಿಕಾಂತೆಯಯ್ಯ, ವಿಶ್ವ

---

೨೯೭೯ ಮೂಲ ಚಕ್ರದಂತೆ ಮೊದಲು ಗಟ್ಟಿ ಹಿಡಿದು,
ಶೋಧ ಗೆಯ್ದು ಶಕ್ತಿ, ಸಾಗು ತಿಳಿದು,
ಭೇದ ತಿಳಿದು ಮನಸು ಭೇದಿಸಿದೊಡೆ ಮುಕ್ತ,
ಸಾಧಕನಹ ಯೋಗಿ ಸರಣಿ ವೇಮ,

೨೯೮೦ ಅರಸಿ ಕಟ್ಟಿ ಹಾಕಿ, ಆಧಾರ ಚಕ್ರವ,
ಪ್ರಾಣ ವಾಯು ನಿಲಿಸಿ ಪೂರ್ಣ ಬೆರೆತು,
ಯಾವಾಗಲು ಜಗದಿ ಯೋಗ್ಯನಾದ ಯೋಗಿ, ವಿಶ್ವ

೨೯೮೧ ಸರತಿಯಿಂದ ಹೊಂದಿ ಸ್ವಾದಿಷ್ಠ ಚಕ್ರವ,
ಪ್ರಾಣ ಪವನಗಳನು ಬಂದು ಮಾಡಿ,
ಬಿಡದೆ ಇರುವ ಅವನೆ ವೇದಾಂತ ವೇತ್ತನು, ವಿಶ್ವ

೨೯೮೨ ಅಷ್ಟದಳದಲ್ಲಿ ಆತ್ಮನನು ಸೇವಿಸಿ,
ನಿಷ್ಠೆ ಹೊಂದಿ ಮಿಗಿಲು ನೆನೆದು ತಿಳಿದು,
ದೃಷ್ಟಿಯೊಳಗೆ ದೃಷ್ಟಿ ತತ್ತರಿಸದೆ ನೋಡು, ವಿಶ್ವ

೨೯೮೩ ಹೃದಯದೊಳಿರುತಿಪ್ಪ ಈಶನನು ತಿಳಿಯದೆ,
ಧರಣಿ ಶಿಲೆಗೆ ನಮಿಪ ಜೀವಿಗಳೇ !
ಕಲ್ಲಿನೊಳೇನುಂಟು ? ಜೀವದೊಳಿಹುದೆಲ್ಲ ! ವಿಶ್ವ

೨೯೮೪ ಅಷ್ಟದಳಂಗಳಿಗೆ ಆಧಾರವಾದಂಥ,
ಆದಿ ದೇವನೊಬ್ಬ ಅಖಿಲ ಜಗಕೆ,
ತ್ರಯವ ದಾಟಿದವನೆ ತಾನೆ ಹೋಗು ಬ್ರಹ್ಮ, ವಿಶ್ವ

೨೯೮೫ ಕೂಡಿ ಹಿಡಿದು ಹಂಸ ಕಳೆಗಂಟಿ ಗಮನಿಸಿ,
ಸದಯ ಹೃದಯದಲ್ಲಿ ಸಂಪಾದಿಸು,
ವಿದಿತವಾದ ಬಯಲು ಬೆನ್ನಿಗಂಟಿಯುಂಟು, ವಿಶ್ವ

೨೯೮೬ ಭದ್ರಗೊಳಿಸಿ ಹೃದಯದಲ್ಲಿ,
ಸಾಧಾರಣ ವೃತ್ತಿ ಕಳೆದು ಸನ್ನುತಿಯನು ; ಜೀ–
ವಾಧಾರ ಚಕ್ರದಲ್ಲಿಯೆ
ಮೋದದಲಿ ವಿಘ್ನ ಪತಿಗೇ ಮಣಿವುದು ವೇಮಾ !

— — — — — — — — — — — — — — — — — — — — — —

೨೯೮೭ ಪಾದವನೂರಿ ಹೃದಯದಲಿ,
ಸಾಧಾರಣ ವೃತ್ತಿಯಡಗಿ ಸನ್ನುತಿಸುತ, ಜೀ–
ವಾಧಾರ ಚಕ್ರದಲ್ಲಿಯೆ
ಮೋದಿಸುತಿಹ, ವಿಘ್ನಪತಿಗೆ ಮಣಿಯೈ ವೇಮಾ ,

೨೯೮೮ ಅಗ್ನಿ ಕುಂಡದಲ್ಲಿ ಅನುಕೂಲದಿ ಘಟಿಸಿ,
ಅವನಿ ನೀರು ಅಕ್ಕಿ ಅಲ್ಲಿ ಹಾಕಿ,
ಆಗ ಪಚನಗೊಳಲು ಅರ್ಪಿಸುವುದು ಹರಗೆ, ವಿಶ್ವ

೨೯೮೯ ಅಗ್ನಿ ಚಕ್ರವೆನಲು ಆ ಕರ್ಣಲಿಂಗವು,
ಅಗ್ನಿ ಕುಂಡದಲ್ಲಿ ಅಂಟಿ ಬೆರೆಸೆರು,
ಭವನ ಧ್ಯಾನ ಗೆಯ್ಯೆ, ಬಂತು ಮುಕ್ತಿ ಪಥವು ! ವಿಶ್ವ

೨೯೯೦ ಹಣೆಯ ಕೋಟೆಯಲ್ಲಿ ಇಪ್ಪ ನಿಜವನರಿತು,
ಪಟುತರದಿಂದ ಮನ ನಿಲಿಪ ಪ್ರಬಲ ಯೋಗಿ
ಅಂಟಿ ಮುಟ್ಟುವ ನಿರ್ಗುಣವ, ಅಂತೆ ಮನವ
ತೊಡೆದು ಹಾಕಿದಾಗ ತಿಳಿಯುಪಾಯ ವೇಮ,

೨೯೯೧ ಅರ್ಧ ಅಂಕಣದಲಿ ಆಧಾರವಾದಂಥ,
ಒಂದೆ ಮಳಿಗೆ ಕಂಭ ಒಪ್ಪ ನಿಲಿಸಿ,
ಮನೆಗೆ ಒಬ್ಬ ಗಂಡ ಮನೆಯ ಸತಿಯರೇಳು, ವಿಶ್ವ

೨೯೯೨ ಏಕ ಚಕ್ರಧರನೆ ಎಲ್ಲ ಲೋಕಗಳನು,
ಪಾಕವರಿತು ಆಳ್ವ ಪ್ರಭುವು ಅಲ್ತೆ ?
ಬರುಹೋಹುದು ಅಡಗಿ ಬೆಳಗುವುದು ಮನದಲಿ, ವಿಶ್ವ

●

## ೩. ಹಠಯೋಗ ವಿಮರ್ಶೆ

**ಹಠಯೋಗ ವಿಮರ್ಶೆ:**

ವೇಮನರು ರಸಿಕ ಕವಿಗಳೂ ಅಹುದು. ಅನುಭಾವ ಸಿದ್ಧಯೋಗಿಗಳೂ ಅಹುದು. ಅವರದು ರಾಜಯೋಗ. ರಾಜಯೋಗಕ್ಕೂ ಇನ್ನಿತರ ಲಯ, ಮಂತ್ರ ಮತ್ತು ಹಠಯೋಗಗಳಿಗೆ ಸಾಮಾನ್ಯವಾದ ವಿಷಯಗಳನ್ನು ಅವರು ಪ್ರಸ್ತಾಪ

ಮಾಡಿರುವುದರಿಂದ ಅವುಗಳನ್ನು ಪ್ರತ್ಯೇಕಿಸಲಾಗಿದೆಯಷ್ಟೇ. ಕುಂಡಲಿನೀ ಯೋಗವು ತಾಂತ್ರಿಕ ಪ್ರಕ್ರಿಯೆಯೇ ಆಗಿದೆ. ವೀರಶೈವ ಶರಣರೂ ಸಹ ಅದರ ಮುಖ್ಯಾಂಶಗಳನ್ನು ಅಂಗೀಕರಿಸಿದ್ದಾರೆ.

ಹಠಯೋಗದಲ್ಲಿ ವಿವಿಧ ಆಸನಗಳ ಅಭ್ಯಾಸ, ಕ್ಲಿಷ್ಟ ಪ್ರಾಣಾಯಾಮ ವಿಧಾನಗಳು ಸಮಾವೇಶವಾಗುತ್ತದೆ. ಅಂಥ ಕ್ಲಿಷ್ಟ ಪ್ರಕ್ರಿಯೆಗಳು ಅಭ್ಯಾಸಿಗಳಿಗೆ ತುಂಬಾ ಕಷ್ಟಕರ. ಸರಿಯಾದ ಮಾರ್ಗದರ್ಶನದ ಅಭಾವದಲ್ಲಿ ತುಂಬಾ ಅಪಾಯಕರ ಸಹ.

ತೈಲ ಬಳಿದುಕೊಂಡು ಸಾಮು ಮಾಡಿದರೆ ದೇಹ ಶಕ್ತಿಯು ಹೆಚ್ಚಾಗಬಹುದು. ಜ್ಞಾನವೇನೂ ಪ್ರಾಪ್ತವಾಗದು. ಕ್ಲಿಷ್ಟ ಆಸನಗಳನ್ನು ಅಭ್ಯಸಿಸಿ ಅಂಗಗಳನ್ನು ಬಿಗಿ ಹಿಡಿದು ಮಾಡುವ ಯೋಗವೆಲ್ಲ ಜಟ್ಟಿಯ ಕಸರತ್ತಿನಂತೆಯೇ ಹೊರತು ಬೇರೇನಲ್ಲ. ಕಾಲು–ಕೈಗಳನ್ನು ಮಣಿಸಿ, ಗಾಳಿ ಹಿಡಿದು, ಒರಗಿಕೊಂಡಿರಲಿ, ನಿಂತೇ ಇರಲಿ, ಮಾಡುವ ಆಸನಾಭ್ಯಾಸವು ಮನದ ಉದ್ದೀಪನಕ್ಕೆ ಅಗತ್ಯ ಅಲ್ಲ; ಪೂರಕವೂ ಅಲ್ಲ.

ಸರಿಯಾದ ಆಸನಗಳನ್ನು ಗುರುವಿನಿಂದ ತಿಳಿದು ಅಭ್ಯಸಿಸಿ ಮನಸು ನಿಲಿಸುವವನೇ ದ್ವಿಜನು. ಅವನು ಯೋಗಲೋಕದಲ್ಲಿ ಪುನಃ ಜನಿಸಿದವನು. ಅದನ್ನು ಬಿಟ್ಟು, ಮಲ–ಮೂತ್ರಗಳನ್ನು ತಡೆದು, ಕಾಪಾಲಿಕ ಯೋಗಿಯೆಂದು ತಲೆಬುರುಡೆ ಹಿಡಿದು ಭುವಿಯಲ್ಲಿ ತಿರುಗಿದರೆ ಫಲವೇನು ? ಭೃಕುಟೀ ಸ್ಥಲದಲ್ಲಿ ಧ್ಯಾನಿಸಿ ತನ್ನನ್ನು ತಾನು ಕಾಣುವುದೇ ಯೋಗಿಯ ಧರ್ಮವಾಗಿದೆ.

ಪ್ರಾಪಂಚಿಕ ವಿಷಯಗಳನ್ನು ತ್ಯಾಗ ಮಾಡಿ ತನ್ನನ್ನು ತಿಳಿಯುವುದೇ ಉತ್ತಮ ಯೋಗವಾಗಿದೆ. ಮನದ ಮೂಲಕ ತತ್ತ್ವ ಚಿಂತನೆ ಮಾಡಿ ತಿಳಿಯುವುದೇ ಮಧ್ಯಮವಾಗಿದೆ. ಇನ್ನು ಆಸನಾದಿ ಅಧಮ ಯೋಗವಾಗಿದೆ. ಬ್ರಹ್ಮ–ಜ್ಞಾನವೇನೂ ತಪ–ದಂಡನೆಗಳಿಂದ ಸಾಧ್ಯವಾಗದು. ದೇಹ ದಂಡನೆಯಿಂದ ತಿಳಿಯಲು ಆರೂ ಶಕ್ತರಲ್ಲ. ಉಸುಕಿನಲ್ಲಿ ಭಾವಿ ತೋಡಿದರೆ ನೀರು ಸಿಕ್ಕಬಹುದೇ ? ನಿಯಮಿತವಾಗಿ ಆಸನ ಗೆಯ್ದು, ಚಿತ್ತವನ್ನು ನಿಲ್ಲಿಸಿ, ತಾಮಸದ ನಿದ್ರೆಯನ್ನು ತೊಡೆದು ನೂಕಬೇಕು. ಆಗ ನಿರ್ಭಯತೆ ಮೂಡಿ ಮುನ್ನಡೆಯಬಹುದು.

ಸಿದ್ಧಾಸನವನ್ನು ಅಭ್ಯಾಸ ಮಾಡಿ, ಭೃಕುಟೀ ಸ್ಥಲದಲ್ಲಿ ನ್ಯಾಸವಿರಿಸಿ, ಮನ ನಿಲ್ಲಿಸಿದರೆ, ಯೋಗ ಫಲವು ಸಿದ್ಧಿಸಬಹುದು.

**೨೯೯೩ ಅಷ್ಟಾಂಗ ಯೋಗ ಸಾಧನ**
**ಕಷ್ಟಗಳ ಸಹಿಸನು, ಕಾಣಲಾರನು ಅಲ್ಲೇಂ ?**
**ಚೇಷ್ಟೆಯ ಬಿಡುವುದು ಜೀವಿಗೆ,**
**ಕಷ್ಟವಹುದು, ಹುಟ್ಟಿ–ಸಾವ ಗತಿಯದು ವೇಮಾ,**

೨೯೯೪ ತೈಲ ಬಳಿದುಕೊಳಲು ತ್ವಚೆಗೆ ಮೆರುಗು ಉಂಟು,
ಸಾಮು ಗೆಯ್ಯೆ, ದೇಹ ಶಕ್ತಿ ಯಧಿಕ ;
ಜ್ಞಾನ ಮಾರ್ಗವರಿಯೆ, ಜನ್ಮ ಕಡೆಗಾಣುವುದು, ವಿಶ್ವ

೨೯೯೫ ಆಸನಾದಿಗಳಿಂದ ಅಂಗಗಳನು ಬಿಗಿದು,
ಒಡಲು ಹೊರೆಯುವವನ ಯೋಗವೆಲ್ಲ,
ಜಟ್ಟಿ ಸಾಮಿಗಿಂತ ಜಿನುಗು ಕಡಿಮೆಯಲ್ಲ, ವಿಶ್ವ

೨೯೯೬ ಕಾಲು ಕೈಯ್ಯ ಮಣಿಸಿ, ಗಾಳಿ ತುಂಬಿ ಹಿಡಿದು,
ನೆಲಕೆ ಬಿದ್ದು ಕೆಲರು, ನಿಂತು ಕೆಲರು,
ಆಸನಮುಖ ವಿದ್ಯೆ ಅಭ್ಯಾಸ ವಿದ್ಯೆಯೆ, ವಿಶ್ವ

೨೯೯೭ ಆಸನಗಳರಿಯದೆ, ಆ ಮರ್ಮ ಕರ್ಮಗಳ
ಗುರುವಿನಿಂದ ತಿಳಿದು-ಕೊಳ್ಳದಿದ್ದು,
ಮನಸು ನಿಲಿಸದವನು ಮಹಿಯಲಿ ದ್ವಿಜನೆಂತು ? ವಿಶ್ವ

೨೯೯೮ ಮಲಮೂತ್ರಂಗಳ ನಿಲ್ಲಿಸಿ,
ತಲೆಬುರುಡೆಯ ಯೋಗಿಯೆಂದು ಧಾರುಣಿ ತಿರುಗಲ್,
ಫಲವೇನಿಪ್ಪುದು ? ಭೃಕುಟೀ-
ಸ್ಥಲದಲ್ಲಿ ತನ್ನ ಕಾಂಬುದೆ, ಧರ್ಮವು, ವೇಮಾ,

೨೯೯೯ ಉರ್ವಿ ತ್ಯಜಿಸಿ ತಿಳಿಯೆ, ಉತ್ತಮ ಯೋಗವೈ,
ಮನದಿ ತಿಳಿಯುತಿರಲು ಮಧ್ಯಮವದು,
ಆಸನಾದಿ ವಿಧಿಯು ಅಧಮ ಯೋಗವಯ್ಯ, ವಿಶ್ವ

೩೦೦೦ ತಪವಶವಾಗಿಲ್ಲ ತತ್ತ್ವವು, ಬ್ರಹ್ಮವು,
ತಿಳಿಯಲಾರ ಬ್ರಹ್ಮದೇವನಿರಲು,
ಉಸುಕಿನಲ್ಲಿ ಭಾವಿ ತೋಡಲಾರಿಗಳವು ? ವಿಶ್ವ

೩೦೦೧ ಏನು ಆಗದಿಹುದ ಅರಿಯುತಿಹುದೆ ಲಕ್ಷ್ಯ,
ಸಾಮು ಗೆಯ್ದು, ಅಂತೆ ಸಾಧ್ಯಗೊಳಿಸಿ,
ನಿಯಮ ನಿಷ್ಠೆ ಬಿಟ್ಟು ನಿರ್ಣಯ ಹೊಂದಿರೋ ವಿಶ್ವ

— — — — — — — — — — — — — — — — — — — —

೩೦೦೨ ನಿಯಮಿತಾಸನಗಳು, ನಿಲಿಸಿದಂಥ ಚಿತ್ತ,
ತಾಮಸಾದಿ ನಿದ್ರೆ ತೊಲಗಿ ನೂಕು,
ನಿದ್ರೆ ತೊಲಗಿದಾಗ ನಿರ್ಭೀತಿಯುದಿಪುದು, ವಿಶ್ವ

೩೦೦೩ ಸರಿಯಾಗಿಹ ಸಿದ್ಧಾಸನ
ಚಿರವಿಳೆಯಲಿ ಚರಣ ನಿಲಿಸಿ, ಚೌಕವೆನುವುದಂ,
ಅರಿಯುತ ಕಲೆ–ಬಂಧಗಳನು
ತ್ವರೆಯಿಂದಾ ಮುಕ್ತಿ ಕಾಂತೆ ಬೇಡೆಲೊ ! ವೇಮಾ.

೩೦೦೪ ನಾಸಿಕದ ನಡುವೆ ನೆರೆ ನೋಳ್ಪ ಯೋಗಿಗೆ,
ವರ್ಣಭೇದವಿಲ್ಲ ವಸುಧೆಯಲ್ಲಿ,
ಕಾಶಿನಾಥನಿರಲಿ ಕಾಣುತಿಹನೆ ಯೋಗಿ ? ವಿಶ್ವ

೩೦೦೫ ಹಠದಿ ಸಾಧಿಸುತ, ಘಟದಲಿ ಹರ್ಷವುದಿಸೆ,
ಪಠನದೇರ್ಪಾಟು ಗೆಯ್ವುದೆ ಬಹಳ ಯೋಗ್ಯ,
ನಿಟಿಲ ದುರ್ಗವ ಸೇರುವುದೆ ನಿತ್ಯ ಸುಖವು,
ಪಟುತೆಯಿರುವಂಥ ಲಕ್ಷ್ಯವದು ಪ್ರಾಪ್ತ ವೇಮ,

೩೦೦೬ ವಿಕಟತೆಯ ಬಿಟ್ಟು, ಭೃಕುಟೀ
ನಿಕಟತೆಯಲಿ ಮುಕ್ತಿ ಕಾಂತೆಯೆತ್ತಿಡುವವ ತಾ
ನೇಕಂ ಸಮರತಿ, ಉಪರತಿ,
ಪ್ರಕಟಗೊಳಿಸುತಿರುವಂಥ ಪ್ರಭುವೈ ವೇಮಾ !

೩೦೦೭ ವಾಮ ಪಾದದಲ್ಲಿ ಒಡನೆ ಗುಹ್ಯವೊತ್ತಿ,
ಗುಹ್ಯವ ಜಪವ ಗುದದಿ ಹೊಗಿಸಿ,
ಮನದ ಗುಹೆಯ ಒಳಗೆ ಮರಳಿಸಿ ವೀಕ್ಷಿಸರು, ವಿಶ್ವ

●

## ೪. ನಿಮ್ನ ಸಿದ್ಧಿ

**ನಿಮ್ನ ಸಿದ್ಧಿಗಳು:**

ಯೋಗ ಸಾಧನೆಯಲ್ಲಿ ಸಿದ್ಧಿಗಳು ಲಭ್ಯವಾಗುವುದು ಸಹಜ. ಈ ಸಿದ್ಧಿಗಳೆಂದರೆ ಉನ್ನತ ಮನದ ಶಕ್ತಿಯನ್ನು ನಿಮ್ನ ಸ್ತರದಲ್ಲಿ ಪ್ರಯೋಗಿಸಿದಾಗ

— — — — — — — — — — — — — — — — — — — — — —

ಘಟಿಸುವ ಅಸಾಮಾನ್ಯ ಘಟನೆಗಳೇ ಆಗಿವೆ. ಸಾಧನೆಯಿಂದ ಮನವನ್ನು ಉಚ್ಚ ಸ್ತರಕ್ಕೆ ಏರಿಸಿದಾಗ ಅದನ್ನು ನಿಮ್ನ ವಿಷಯಗಳತ್ತ ಹರಿಬಿಡುವುದು ಭ್ರಷ್ಟತೆಯೇ ಸರಿ. ಆದರೆ ಯೋಗಿಯು ಸಂಕಲ್ಪ ಮಾಡದೇ ಅವನಿಗೆ ಸಂಬಂಧಿಸಿ ಘಟಿಸುವ ಕೃತಿಗಳು ಯೋಗ ಮಹಿಮೆಗಳಾಗಿವೆ.

ಮನದ ಶಕ್ತಿ ಪ್ರದರ್ಶನದ ಹುಚ್ಚಿನಿಂದ ಪುರುಷರು ಕೆಡುತ್ತಾರೆ. ಮುಕ್ತಿಯ ಮಹಿಮೆಯನ್ನು ಕಾಣದಾಗುತ್ತಾರೆ. ಆದಿ ಶಕ್ತಿಯೂ ಸಹ ಸೃಷ್ಟಿಯ ವೈಭವ ಪ್ರಕಟಿಸುವ ಚಪಲದಿಂದ ಶಿವನಿಂದ ದೂರವಾಗಿ ಅನ್ಯಾಯವನ್ನೇ ಮಾಡಿದಳಲ್ಲವೇ?

ಮನದ ಇಷ್ಟಾರ್ಥಗಳ ಪೂರೈಕೆಗಾಗಿ ಬೇಡುವವರು ಯಂತ್ರ ತಂತ್ರ ವಿದ್ಯೆಗಳ ಸಾಧಕರು. ಮಂತ್ರ ವಿದ್ಯೆಗಂಟಿದರೆ ಅದೇನು ಮಹಿಮೆಯೇ ? ಇಂಥ ಬಾಹ್ಯ ಮಹಿಮೆಗೆ ತಲೆಹಾಕದೆ, ಒಳಗೆ ಬೆಳದಿಂಗಳ ತನಿರಸವನ್ನು ಪಡೆಯಲು ಮುಂದಾಗಬೇಕು.

ಮನಸ್ಸು ಆನಂದಿತವಾಗಿದ್ದರೆ, ನಂದಿ ಏರಿದ ಶಿವನಂತೆ, ಆಗ ಇಂದ್ರನ ಲೋಕವೇ ಇರಲಿ, ಚಂದ್ರಕಳೆಯ ಲೋಕವೇ ಇರಲಿ, ಕಾಣಬಹುದು.

ಈ ಲೋಕಗಳೆಲ್ಲವೂ ಮೂಡಿ ಅಡಗುವ ಇಂದ್ರಜಾಲದಂತೆ. ತನ್ನ ಚಿದಾಕಾಶದಲ್ಲಿ ಸ್ವರೂಪವನ್ನು ಕಂಡು ಅರಿವನ್ನು ಮರೆತು ಮುಂದಾಗಬೇಕು.

ಅರಿವು ಮರದಂತೆ, ಈ ತನುವು ಅದರ ನೆರಳಿನಂತೆ, ಅಖಿಲ ವಸ್ತುಗಳು, ಭೋಗ ಭಾಗ್ಯಗಳು ನೆರಳಿನಂತೆ. ಮನುಷ್ಯನು ಆತ್ಮದ ಅರಿವನ್ನು ಹೊಂದದೆ ನೆರಳ ಜೊತೆಗೆ ತಿರುಗುತ್ತಾನೆ.

ಈ ಜಗತ್ತಿನ ಭ್ರಾಂತಿಗಳೆಲ್ಲ ಇಂದ್ರಜಾಲದಂತೆ. ಇದನ್ನು ಅರಿತು ಅಂತರ್ಯದಲ್ಲಿ ಭೃಕುಟಿಯಲ್ಲಿ ಚಂದ್ರಕಳೆಯನ್ನು ಅನುಭವಿಸಿ, ಅದನ್ನು ದಾಟಿ ಬ್ರಹ್ಮರಂಧ್ರದಲ್ಲಿ ಸೇರಿ, ದೇವೇಂದ್ರ ಪದವಿಯನ್ನು ಕಾಣಬೇಕು.

ಆದಿಯಲ್ಲಿ ಯಾರು ಹುಟ್ಟಿದರು ? ಎಂದು ತಿಳಿಯಬಯಸಿ, ಅದನ್ನು ನಡುವೆಯೇ ತೊರೆದು ಜ್ಯೋತಿಷಿಯಾಗಿ, ಭೂತ–ಭವಿಷ್ಯ ಹೇಳಲು ಮನೋಶಕ್ತಿಯನ್ನು ಬಳಸಿದರೆ, ಅದರಲ್ಲಾವ ಸುಖವಿದ್ದೀತು ? ಆದಿ ಶಕ್ತಿಯೆಂದರೆ ಚಿದ್‌ಬಯಲೇ ಆಗಿದೆ.

ಶಿವಯೋಗಿಗೆ ದೇಹದ ಗುಣಗಳೆಲ್ಲ ತಿಳಿದಿವೆ. ಆದರೂ ಸಹ ಮೋಹ ಪರವಶನಾಗಿ ಇಂದ್ರಜಾಲದಲ್ಲಿ ಏಕೆ ಸಿಲುಕುವನೋ, ಕಾಣೆ.

ಉತ್ತಮೋತ್ತಮವಾದ ಉಚಿತ ತಿಳಿವಳಿಕೆಯವನೇ ಮೇಲು. ಮಹಿಮೆ ತೋರುವ ತಾಂತ್ರಿಕನು ಮಧ್ಯಮನು. ಇನ್ನು ಕೇವಲ ವೇಷ ಹಾಕಿ ಮೋಸ ಮಾಡುವವನಂತೂ ಅಧಮನೇ ಸರಿ.

— — — — — — — — — — — — — — — — — — — — — —

ಇಂದ್ರಲೋಕ, ಚಂದ್ರಲೋಕ, ಇಂದ್ರ ಜಾಲವೆನ್ನುವುದೆಲ್ಲ ಒಂದೇ. ಉನ್ನತ ಮನವನ್ನು ನಿಮ್ನ ಸ್ತರದಲ್ಲಿ ಬಳಸುವದು. ಕಲಿಯುಗದಲ್ಲಿ ಜನರಿಗೆ ಐಹಿಕ ಸುಖ ಭೋಗದ ಭ್ರಾಂತಿ ತಗಲಿ, ಇದೆಲ್ಲವನ್ನು ಅರಿಯದಾಗಿದ್ದಾರೆ.

೩೦೦೮ ಶಕ್ತಿ ಮಹಿಮೆ ಸೋಂಕಿ, ಕೆಡುತಿಹರು ಪುರುಷರು,
ಮುಕ್ತಿ ಮಹಿಮೆ ತೊರೆದು ಮೂಢರಾಗಿ,
ಆದಿಶಕ್ತಿ ಕೂಡ ಅನ್ಯಾಯದಿ ಹೋದಳು, ವಿಶ್ವ

೩೦೦೯ ಯಂತ್ರ ತಂತ್ರ ವಿದ್ಯೆಯ ಯಾಚಕ ಜನ ಗಣವು
ಮಂತ್ರ ವಿದ್ಯೆಗಂಟೆ ಮಹಿಮೆಯೇನು ?
ಬೆಳದಿಂಗಳು ಬಯಲ ಒಳಗೆ ಹರಡಬೇಕು, ವಿಶ್ವ

೩೦೧೦ ಇಂದ್ರ ಲೋಕವಿರಲಿ, ಚಂದ್ರ ಲೋಕವಿರಲಿ,
ಅಲ್ಲಿ ನೋಡಬಹುದು ಅಂದವಾಗಿ,
ನಂದಿ ಮೇಲೆ ಏರಿ ನಯವಾಗಿ ನೋಡಿಕೊ, ವಿಶ್ವ

೩೦೧೧ ಅಬಬ ! ಇಂದ್ರ ಜಾಲ ಆಯ್ತು ಲೋಕಾದಿಗಳು,
ಮಿಂಚಿ ಒಂದನೊಂದು ಗಗನದಲ್ಲಿ,
ತನ್ನ ತಾನೆ ನೋಡೆ, ತಿಳಿವನು ಮರೆಯುವನು, ವಿಶ್ವ

೩೦೧೨ ಅಡಿಗಡಿಗೆ ವಿಚಿತ್ರ ! ಅಖಿಲ ವಸ್ತುಗಳತಿ
ಭೋಗ ಭಾಗ್ಯಗಳಲಿ ಬಿದ್ದು ಉರುಳಿ,
ತಾನೆ ತಿರುಗುತಿರುವ ತನ್ನ ನೆರಳ ಜೊತೆಗೆ, ವಿಶ್ವ

೩೦೧೩ ಇಂದ್ರ ಜಾಲದಂಥ ಈ ಜಗದ್ಭ್ರಾಂತಿಗಳು !
ಚಂದ್ರ ಕಳೆಯ ದಾಟಿ ಸಖ್ಯ ಪಡೆದು,
ರಂಧ್ರದಲ್ಲಿ ಸೇರಿ, ರಹಿ ಮಿಕ್ಕಿ ಕಾಣು, ದೇ–
ವೇಂದ್ರ ಪೂರ್ಣ ಪದವಿ, ಬಿಡದೆ ವೇಮ.

೩೦೧೪ ಆದಿಗಾರೋ ಹುಟ್ಟಿ ಅದನೆ ತಿಳಿಯ ಬಯಸಿ,
ಜ್ಯೋತಿಷಿಯಾದ ಬಳಿಕ ಸುಖವು ಇಲ್ಲ,
ಆದಿ ಶಕ್ತಿಯೆನಲು ಅದುವೆ ಬಯಲು ನಂಬು, ವಿಶ್ವ

೩೦೧೫ ತನ್ನ ಮನಸಿನಿಂದ ತರ್ಕಿಸಿ ಜ್ಯೋತಿಷ,
ಏನು ಮಾಡುವುದೆಂದು ಎಣಿಸಿ ನೋಳ್ಪ,
ತನ್ನ ಅದೃಷ್ಟವನು ದೈವ ತಿಳಿಯುತಿಹುದು, ವಿಶ್ವ

೩೦೧೬ ದೇಹ ಗುಣವನೆಲ್ಲ ತಿಳಿದಿಹ ಶಿವಯೋಗಿ,
ಮೋಹದಲ್ಲಿ ಸಿಕ್ಕು ಮೋಸ ಹೋಹ,
ಇಂದ್ರ ಜಾಲದಲ್ಲಿ ಏಕೆ ಸಿಕ್ಕುತಿಹರೊ ? ವಿಶ್ವ

೩೦೧೭ ಹುಣಸೆ ಮರದ ತುದಿಗೆ ಹೆಣ್ಣು ಕರೆದು ಸೇರೆ,
ಕೌತುಕ ಕಂಡು ಕೆಲಸ ಕೈ ಬಿಡದಿರು,
ಪಂಥ ಕಟ್ಟಿ ಅದನು ಪಿಡಿಯುವುದೇ ಮೇಲು. ವಿಶ್ವ

೩೦೧೮ ಉತ್ತಮೋತ್ತಮನಿಹ ಉಚಿತಜ್ಞನು ಇಳೆಯಲ್ಲಿ,
ಮಹಿಮೆ ತೋರುವವನು ಮಧ್ಯಮನಿಹ,
ವೇಷಧಾರಿಯುದರ ಪೋಷಿಸುವವನಧಮ, ವಿಶ್ವ

೩೦೧೯ ಇಂದ್ರ ಲೋಕವೆನಲು ಇಂದ್ರ ಜಾಲವೆನಲು,
ಇಂದ್ರ ಪದವಿಯೆನಲು ಇಷ್ಟು ಒಂದೆ,
ಕಲಿಯುಗದೊಳು ಜನರು ಕಾಣರು ಭ್ರಮೆಯೊಳು, ವಿಶ್ವ

●

## ೫. ಮುದ್ರೆಗಳು

**ಮುದ್ರೆಗಳು :**

ಯೋಗಸಾಧನೆಯಲ್ಲಿ ಮುದ್ರೆಗಳು ಆಸನದಂತಿವೆ. ಅವು ಭಾವಪೂರ್ಣವಾಗಿವೆ. ಮುದ್ರೆಗಳ ವಿಧಿ ನಿಷೇಧಗಳು ಆಸನದಂತೆ ಇವೆಯಾದರೂ ಮೂಗಿನ ಹೊರಳೆಯ ನಿಬಂಧನೆಯಿಲ್ಲ. ಮುದ್ರೆಗಳ ಸಂಖ್ಯೆಯು ಅಜಸ್ರ. ಆದರೆ ಶಾಂಭವಿ, ಷಣ್ಮುಖೀ ಮತ್ತು ಖೇಚರೀ ಮುದ್ರೆಗಳನ್ನು ವೇಮನ ಯೋಗಿಗಳು ಪ್ರಸ್ತಾಪಿಸಿದ್ದಾರೆ. ಆದರೆ ಮೂಲ ಧ್ಯಾನ ನಿಷ್ಠೆ ತೊರೆದು ಕೇವಲ ಶಾರೀರಿಕ ಕ್ರಿಯೆಯಲ್ಲಿ ನಿರತವಾಗುವುದು ಸರಿಯಲ್ಲ.

ಮುದ್ರೆಯಿಂದ ಲಕ್ಷ್ಯ ವಸ್ತುವನ್ನು ಗ್ರಹಿಸಿ ಮೂಲವನ್ನು ತಿಳಿಯಲು ಮುಂದಾಗಬೇಕು. ವಿಶ್ವಕರ್ಮವನ್ನು ಗ್ರಹಿಸಿದ ಬಳಿಕ ಬಿಡಲಾಗದು. ವಿಶ್ವಕರ್ಮವನ್ನು ನಿಂದಿಸುವವರು ಹುಚ್ಚರಷ್ಟೇ.

ಹಲವು ಯೋಗ ಸಾಧಕರು ಮುದ್ರೆಗಳಲ್ಲಿಯೇ ಹಲವನ್ನು ಆಯ್ದುಕೊಂಡು ಮೆರೆಯುತ್ತಾರೆ. ಆದರೆ, ಅವರು ಮುದ್ರಾಭ್ಯಾಸದ ಮೂಲ ಇಂಗಿತವಾದ ಮನಸ್ಸನ್ನೇ ಬೆಳಗಲಾರರು. ಹೀಗೆ ಮಾಡಿದರೆ ಮುದ್ರಾಭ್ಯಾಸವೊಂದು ಹುಚ್ಚು ಚೇಷ್ಠೆಯಾಗುವುದಷ್ಟೇ.

ನಾಸಿಕದ ಮೇಲೆ ಕಣ್ಣು ದೃಷ್ಟಿಯಿರಿಸಿ, ಅನಿಮಿಷವಾಗಿ ಗುಡ್ಡೆಯನ್ನು ಒಳಗೆ ತಿರುಗಿಸಿ, ವಿವರವನ್ನು ಕಾಣುವುದು ಶಾಂಭವೀ ಮುದ್ರೆಯ ಪ್ರಕ್ರಿಯೆಯಾಗಿದೆ. ಶಾಂಭವೀ ಮುದ್ರೆಯಲ್ಲಿ ಉಳಿದು, ಶಶಿ ಬಿಂಬಗಳನ್ನು ಅರಿಯಬೇಕು. ಅದರೊಳಗೆ ಛಾಯೆಯು ತಿಳಿಯುತ್ತದೆ. ತಂಪಾದ ಛಾಯೆಯ ಅನುಭೂತಿಯಾದರೆ ತೀರಿತು. ಮನಸ್ಸಿನ ಸಂಕಲ್ಪಗಳು ಈಡೇರುತ್ತವೆ. ಕಾಮಧೇನುವೇ ಕೈವಶವಾದಂತೆ.

ಇನ್ನು ಷಣ್ಮುಖೀ ಮುದ್ರೆಯ ಪ್ರಕ್ರಿಯೆಯಲ್ಲಿ ಕಿವಿಯ ಎರಡು ರಂಧ್ರಗಳು, ಮೂಗಿನ ಎರಡು ರಂಧ್ರಗಳು ಹಾಗೂ ಕಣ್ಣಿನ ಎರಡು ರಂಧ್ರಗಳನ್ನು ಬಿಗಿ ಹಿಡಿದು ಪ್ರಾಣವಾಯುವನ್ನು ಬಾಹ್ಯ ಕುಂಭಕದಲ್ಲಿ ಬಂಧಿಸುವುದೇ ಷಣ್ಮುಖೀ ಮುದ್ರೆಯಾಗಿದೆ. ಈ ಷಣ್ಮುಖೀ ಮುದ್ರಾಭ್ಯಾಸದಿಂದ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರಗಳೆಂಬ ಷಡ್ವರ್ಗಗಳು ಹೋಗುವವು. ಈ ಷಡ್ವರ್ಗಗಳ ಜೊತೆಗೆ ಶೈವ, ವೈಷ್ಣವ, ಶಾಕ್ತ, ಸೌರ, ಕೌಮಾರ ಮತ್ತು ಗಾಣಪತ್ಯಗಳೆಂಬ ಕಲ್ಪಿತ ದೇವತಾಧಾರಿತ ಮತಗಳೂ ಇಲ್ಲವಾಗುವವು. ಹೀಗೆ ತಪ್ಪು ಹಾದಿ ಹಿಡಿಯದೆ, ಒಪ್ಪವಾಗಿ ಮುನ್ನಡೆಯಬಹುದು. ಷಣ್ಮುಖೀ ಮುದ್ರೆಯಲ್ಲಿ ಇರುವಾಗ ತೆರೆಗಣ್ಣಿನಿಂದ ಸರಿಯಾಗಿ ಒಳವೀಕ್ಷಿಸಿ, ಆಂತರ್ಯದತ್ತ ತಿರುಗುವವನೇ ಬುದ್ಧಿಯ ಮೇಲೆ ಜಯ ಸಾಧಿಸಿದವನು. ಬರೀ ಕಣ್ಣು ಮುಚ್ಚಿದರೆ ಡಾಂಭಿಕನಾಗಬಹುದು.

ಬರೀ ಕಣ್ಣು, ಮೂಗು ಮತ್ತು ಕಿವಿಗಳನ್ನು ಮುಚ್ಚುವುದೇಕೆಂದು ಅರಿಯಬೇಕು. ಆಗ ನಿಶ್ಚಿತವಾಗಿಯೂ ಪ್ರಣವವು ಜ್ಞಪ್ತಿ ಮೀರಿ, ಘನಚಿದಾನಂದ ಪ್ರಜ್ಞೆಯಲ್ಲಿ ಕೇಳಿಸುತ್ತದೆ. ಹೀಗಾಗಲು, ಮನಸ್ಸನ್ನು ನಿಲ್ಲಿಸುವುದೇ ಕೊಂಡಿಯಾಗಿದೆ.

ವಾಯುಗಳನ್ನು ಬಾಹ್ಯ ಕುಂಭಕದಲ್ಲಿರಿಸಿ, ನರ ರಂಧ್ರಗಳ ವಿವರಗಳ ಮರ್ಮವನ್ನು ಮನಸ್ಸಿನಿಂದ ಅರಿತು, ಆತ್ಮಲಿಂಗ ಪೂಜೆಗೆ ತೊಡಗಿದರೆ ಮುಕ್ತಿ ಲಭ್ಯವಾಗುತ್ತದೆ.

ಇನ್ನು ಕಿರುನಾಲಗೆಯನ್ನು ಸ್ವಲ್ಪ ಸ್ವಲ್ಪ ಕೊಯ್ಯುತ್ತ ಖೇಚರೀ ಮುದ್ರೆಯ ಅಭ್ಯಾಸ ಮಾಡಬೇಕು. ಅದರಿಂದೇನಾಗುತ್ತದೆ ? ಎಂದು ಒಣ ವಾದ ಹೂಡದೆ ಅಭ್ಯಾಸ ಮುಂದುವರಿಸಿದವರು ಮಾಯೆಯನ್ನು ಗೆಲ್ಲುವರು.

**೩೦೨೦ ಮುದ್ರೆಯಿಂದ ಹಿಡಿದು ಮೊದಲ ತಿಳಿಯಲಿಲ್ಲ,**
**ವಿಶ್ವಕರ್ಮ ಹಿಡಿದು ಬಿಡಲಾರನು,**
**ವಿಶ್ವ ಕರ್ಮನ ತೆಗಳೆ, ವಿಕೃತ ಮತಿಯು ಅಷ್ಟೆ, ವಿಶ್ವ**

೩೦೨೧ ಮುದ್ರೆಯೆಲ್ಲ ಸೋಸಿ ಮುದದಿ ಮೆರೆವರಬಬ !
ಭದ್ರವಾದ ಮನಸು ಬೆಳಗದಿದ್ದು,
ವಿಕೃತ ಚೇಷ್ಟೆಯಾಯ್ತು ವಿವರಿಸಲು ಮುದ್ರೆಯು ! ವಿಶ್ವ

೩೦೨೨ ಮುದ್ರಾಭ್ಯಾಸತೆಯೂ ಗುರು
ಭದ್ರ ಮತಿಯಿಂದ ಕಾಣೆ ಭ್ರಮೆಯದಗುವುದೈ ;
ಸದ್ರೂಪ ಕಳೆಯು ಮಿಂಚಲು,
ಚಿದ್ರೂಪವೆ ನಿರ್ಗುಣದಾ ಚಿಂತನ ವೇಮಾ,

೩೦೨೩ ್ವರಿಯೆ, ಕಣ್ಣು ದೃಷ್ಟಿ ಗುರಿಯು ಮೂಗು ಮೇಲೆ,
ರೆಪ್ಪೆ ಬಡಿಯದೆ ಗುಡ್ಡೆ ಒಪ್ಪ ತಿರುಗಿ,
ವಿವರವರಿಯೆ ಶಾಂಭವೀ ಮುದ್ರೆಯದೆ ಅಂದ್ರು, ವಿಶ್ವ

೩೦೨೪ ಶಾಂಭವೀ ಮುದ್ರೆಯಲಿ, ಶಶಿ ಬಿಂಬಗಳ ತಿಳಿವು,
ಶಶಿ ಬಿಂಬಗಳ ಒಳಗೆ ಛಾಯೆ ತಿಳಿವು,
ಛಾಯೆ ತಿಳಿದೊಡಾಗ ಚೊಕ್ಕ ಕಾಮಧೇನು, ವಿಶ್ವ

೩೦೨೫ ಷಣ್ಮುಖೀ ಮುದ್ರೆಯಲಿ, ಷಡ್ವರ್ಗ ಹೋಗುವವು,
ಷಡ್ವರ್ಗಗಳ ಜೊತೆಗೆ ಷಣ್ಮತಗಳು,
ತಪ್ಪು ದಾರಿ ಹೋಗದೆ, ಒಪ್ಪವಾಗಿರುತಿರು, ವಿಶ್ವ

೩೦೨೬ ಮೂಗು ಕಣ್ಣುಗಳ ಕಿವಿಗಂಟಿ ಮುಚ್ಚಲೇಕೆ ?
ತಿಳಿದು, ತೆರಗಣ್ಣಿನೊಳಗೆ ತೇಟ ಪಡಿಸಿ,
ತಿರುಗಲರಿತವನೆ ತಾ ಹೋಗುದೀ ಜಿತನವ,
ಬರಿದೆ ಮುಚ್ಚುತಿರೆ, ಡಂಭವದು ಅಲ್ವೆ ವೇಮ ?

೩೦೨೭ ಮಮತೆಯುಡುಗಲಿಕ್ಕೆ ಮಹಿಲಿ ಮುದ್ರೆ ಕಲಿತು,
ಮೂಗು, ಕಣ್ಣು, ಕಿವಿಯ ಮುಚ್ಚಿ ಬಾಯಿ,
ಏಕ ಚಿತ್ತದಿಂದ ಯಾರು ಕಾಣುತಿಹರು ? ವಿಶ್ವ

೩೦೨೮ ಕರ್ಣಗಳ, ಮೂಗು, ಕಿವಿಗಳ ಕಟ್ಟಲೇಕೆ ?
ನಿರ್ಣಯವಾದ ಪ್ರಣವವು ನೆನಕೆ ದಾಟಿ,
ಘನ ಚಿದಾನಂದ ಪ್ರಜ್ಞೆಯಲಿ ಕೇಳಿಸುವದು,
ಮನಸು ನಿಲಿಸಿದ ಮಾತ್ರವೇ, ಕೊಂಡಿ ವೇಮಾ ;

೩೦೨೯ ವಿವರ ನವಕವೆಲ್ಲ, ವಾಯುಗಳ ಹೊರ ಮುಚ್ಚಿ,
ಮನಸಿನಿಂದ ಬೆರೆಸಿ, ಮರ್ಮವರಿತು,
ಆತ್ಮಲಿಂಗ ಪೂಜೆ ಅಂಟಿದಾಗ ಮುಕ್ತಿ,
ನವಕ – ಒಂಭತ್ತರ ಗುಂಪು – ನವರಂಧ್ರಗಳು ವಿಶ್ವ

೩೦೩೦ ಖೇಚರೀ ಮುದ್ರೆಗೆ ಕೀಲು ತಿಳಿಯದಿದ್ದು,
ಪಾದ ಮಾಡದಂಥವರುಗಳೆಲ್ಲ,
ತುಳಿದು ಜಿಹ್ವೆ ಹಿಡಿದು ತುದಿಯ ಕೊಯ್ಯಬೇಕು, ವಿಶ್ವ

೩೦೩೧ ಖೇಚರಿಯ ಮುದ್ರೆ ಕೀಲು ತಿಳಿದುಕೊಂಡು,
ವಾದ ಮಾಡದಂಥವರುಗಳೆಲ್ಲ ;
ಮಾಯೆ ಗೆಲ್ಲುವವರು, ಮಹಿ ಮೇಲೆ ಧನ್ಯರು ! ವಿಶ್ವ

೩೦೩೨ ಮಿಂಚು ಮುದ್ರೆ ನೋಡೆ, ಮೇಲು ಆಯ್ತೊ ಕೆಳಗೊ ?
ಮಿಂಚು ಮುದ್ರೆಯೊಳಗೆ ಮೇಲ್ಮೆಯರಸಿ,
ಮೇಲ್ಮೆಯನುಭವಿಸುತ ಮಹಿಮನಾಗಿ ಬೆಳಗು, ವಿಶ್ವ

೩೦೩೩ ಅನ್ನ ಊಟ ಮಾಡಿ, ಆಗ ಕಣ್ಣುಮುಚ್ಚಿ,
ಬಿರ್ರನೆ ಬೀಗುವವನು ಭಂಡ ಯೋಗಿ !
ಹಿಂಡಿನಲ್ಲಿ ಹೋತು ಹೊರ ಮೆಚ್ಚುಕೆಗಷ್ಟೆ, ವಿಶ್ವ

●

## ೬. ಕುಂಭಕ ಯೋಗ

**ಕುಂಭಕಯೋಗ :**

ಷಣ್ಮುಖೀ ಮುದ್ರೆಯಿಂದ ಕಿವಿಯ ರಂಧ್ರಗಳೆರಡು, ಮೂಗಿನ ರಂಧ್ರಗಳೆರಡು ಹಾಗೂ ಕಣ್ಣಿನ ರಂಧ್ರಗಳೆರಡನ್ನು ಬಿಗಿ ಹಿಡಿದು ಪ್ರಾಣ ವಾಯುವನ್ನು ಆರು ಬೆರಳ ದೂರದಲ್ಲಿ ಸಡಿಲುಗೊಳ್ಳದಂತೆ ಬಂಧಿಸಿ, ಕುಂಭಕ ಮಾಡಿದರೆ, ಯೋಗಿಯು ಮಾಯಪರನಾಗಿ ಕಂಗೊಳಿಸುವನು.

ಭೂಮಿ, ಜಲ, ಅಗ್ನಿ, ವಾಯು, ಮತ್ತು ಆಕಾಶಗಳೆಂಬ ಪಂಚ ತತ್ತ್ವಗಳನ್ನು ದಾಟಿ, ಪೂರಕ ಮತ್ತು ರೇಚಕಗಳ ಮಿತಿಯನ್ನು ಅರಿತು, ವಾಯು ಸಂಚಾರವು ನಿಲ್ಲುವಂತೆ ಕುಂಭಕ ಮಾಡಿ ಆತ್ಮವನ್ನು ಸೇರಬೇಕು. ಇದುವೇ ಯೌಗಿಕ ಮಹಿಮೆಯಾಗಿದೆ.

— — — — — — — — — — — — — — — — — — — —

**೩೦೩೪ ಚೊಕ್ಕವಾಗಿ ಮನದಿ ಚರ್ಚಿಸಿ ನೋಡುತಿರಲಿ,**
**ಮೂಗು ತುದಿಯ ಮೀರಿ ಮೋದದಲ್ಲಿ,**
**ದೃಕ್ಕು ಬ್ರಹ್ಮವೆಂದು ಮಣಿಯುವುದೆ ಮುಕ್ತಿ, ವಿಶ್ವ**

**೩೦೩೫ ಪಂಚ ತತ್ತ್ವಾದಿ ನಿರ್ಣಯ ಬಿಟ್ಟುಗೊಟ್ಟು,**
**ಮಿಂಚಿ ರೇಚಕ ಪೂರಕ ಮಿತಿಯನರಿತು,**
**ಸಂಚಲಿಸದೆ ಕುಂಭಿಸುತ ಸೇರಬೇಕು,**
**ಮತ್ತೆ ತಕ್ಕುವದು ಯೌಗಿಕ ಮಹಿಮೆ ವೇಮಾ,**

**೩೦೩೬ ನೋಟ ನಿಲಿಸದಾವುದಿದೆಯೊ,**
**ನೋಟವದನೆ ಹಿಡಿದು ಅಹುದಲ್ಲೆನದೇ,**
**ಥೇಟದಿ ರೇಚಕ ಪೂರಕ**
**ಮಾಟದಿ ಕುಂಭಕ ಮಾಡಿ ಬಯಲನರಿ ವೇಮಾ,**

●

## ೭. ಗುಣಾತೀತ ಭಾವ

**ಗುಣಾತೀತ ಭಾವ:**

ಯೋಗ ಸಾಧಕರೇ ಆಗಲಿ, ತತ್ತ್ವ ಚಿಂತಕರೇ ಆಗಲಿ, ಲಕ್ಷ್ಯ ವಸ್ತುವಿನ ಗ್ರಹಿಕೆಯಿಂದ ಮುಂದುವರಿಯುತ್ತಾರೆ. ಹಲವರು ನಿರ್ಗುಣವನ್ನು ಲಕ್ಷ್ಯವಾಗಿರಸಿಕೊಂಡರೆ, ಬೇರೆ ಹಲವರು ಸಗುಣವನ್ನೇ ಲಕ್ಷ್ಯವಾಗಿರಿಸಿಕೊಳ್ಳುತ್ತಾರೆ. ಸುಗುಣ ಉಪಾಸಕರಲ್ಲಿ ಕೆಲವರು ಮೂರ್ತಿ ಕಲ್ಪನೆಗೂ ಇಂಬುಗೊಡುತ್ತಾರೆ.

ನಿರ್ಗುಣ ಉಪಾಸಕರು, ಸಗುಣವನ್ನು ಮಧ್ಯಂತರ ಸ್ಥಿತಿಯೆಂದೂ, ಮೂರ್ತಿಪೂಜೆಯು ಅಧಮಾಧಮ ಸಾಧನೆಯೆಂದೂ ಪ್ರತಿಪಾದಿಸುತ್ತಾರೆ. ಸಗುಣೋಪಾಸಕರು, ನಿರ್ಗುಣವು ಅವಾಸ್ತವವೆಂದೂ, ಪ್ರತ್ಯಕ್ಷ ಪ್ರಮಾಣಕ್ಕೆ ಹೊರತಾದುದೆಂದೂ ಪ್ರತಿಪಾದಿಸುತ್ತಾರೆ. ಮೂರ್ತಿ ಪೂಜೆಯನ್ನು ಶ್ರೇಷ್ಠವೆಂದು ಯಾರೂ ಹೇಳಿಲ್ಲವಾದರೂ, ಮೂಢ ಜನಸ್ತೋಮಕ್ಕೆ ಅಗತ್ಯವೆಂದು ಗ್ರಹಿಸಿ ಮುಂದುವರಿದ ಸಾಧಕರು ಸಹ ಇತರರಲ್ಲಿ ಭೇದ ಬುದ್ಧಿ ಹುಟ್ಟಿಸಬಾರದೆಂದು ಮೂರ್ತಿ ಪೂಜೆಗೆ ಅಂಟಿಕೊಳ್ಳುತ್ತಾರೆ. ಮೂಲತಃ ವೇಮನ ಯೋಗಿಗಳು ನಿರ್ಗುಣೋಪಾಸಕರು. ಪೂಜೆಯ ಕಡು ವಿರೋಧಿಗಳು. ಈ ಹಿನ್ನೆಲೆಯಲ್ಲಿ ಅವರ ಪದ್ಯಗಳನ್ನು ಅರ್ಥ ಮಾಡಿಕೊಳ್ಳುವಾ:

ಮಾನವನು ಬಂದದ್ದು ಎಲ್ಲಿಂದ ? ಹೋಗಬೇಕಾದದ್ದು ಎಲ್ಲಿಗೆ ? ನಡುವಿನ ಈ ಬಾಳೆಲ್ಲ ಬರೀ ನಿದ್ರೆಯಂತೆ. ನಿದ್ರೆಯ ಪೂರ್ವ ಸ್ಥಿತಿ ಮತ್ತು

ನಿದ್ರಾನಂತರದ ಸ್ಥಿತಿಗಳಾವವೆಂಬುದನ್ನು ನಿದ್ರಾವಸ್ಥೆಯಲ್ಲಿ ಮಾನವನು ಅರಿಯುವುದಿಲ್ಲ. ಅದೇ ರೀತಿ ಜನ್ಮದ ಪೂರ್ವ ಸ್ಥಿತಿ ಮತ್ತು ಮರಣಾನಂತರದ ಸ್ಥಿತಿಗಳನ್ನು ಸಹ ಅವನು ಅರಿಯನು. ಆದರೆ ನಿದ್ರೆಯಿಂದ ಎಚ್ಚತ್ತರೆ, ಆ ಅರಿವಿನ ಸ್ಥಿತಿಯನ್ನು ತಲುಪಿ ಅಲ್ಲಿ ಅರಿತುಕೊಳ್ಳುವನು.

ತಮಸ್ಸು, ರಜಸ್ಸು ಮತ್ತು ಸತ್ತ್ವಗಳೆಂಬ ಪ್ರಕೃತಿಯ ಮೂರು ಗುಣಗಳಿಗೆ ಬ್ರಹ್ಮ, ವಿಷ್ಣು, ಮತ್ತು ಶಿವರೆಂದು ಸಂಕೇತಿಸಲಾಗಿದೆ. ಈ ತ್ರಿಗುಣಗಳನ್ನು ನಿಲ್ಲಿಸಿದ ಪರಮ ಯೋಗಿಯು ನಿರ್ಗುಣ ಬ್ರಹ್ಮವಾಗುತ್ತಾನೆ. ಅವನು ಭಾವಾತೀತನಾಗುತ್ತಾನೆ. ಆದ್ದರಿಂದ ತಮೋಗುಣದ ಪ್ರತಿನಿಧಿಯಾದ ಬ್ರಹ್ಮನನ್ನು ಕೊಂದು ರಜೋಗುಣ ಪ್ರತಿನಿಧಿಯಾದ ವಿಷ್ಣುವಿನಲ್ಲಿ ಬೆರಬೇಕು. ಅನಂತರ ರಜೋಗುಣ ಪ್ರತಿನಿಧಿಯಾದ ವಿಷ್ಣುವನ್ನು ಕೊಂದು, ಸತ್ತ್ವ ಗುಣ ಪ್ರತಿನಿಧಿಯಾದ ಶಿವನಲ್ಲಿ ಬೆರೆಸಬೇಕು. ಕೊನೆಗೆ ಸತ್ತ್ವಗುಣ ಪ್ರತಿನಿಧಿಯಾದ ಶಿವನನ್ನು ಕೊಂದರೆ, ತ್ರಿಗುಣಾತೀತನಾಗಿ ಶಿವಯೋಗಿಯೆನಿಸುತ್ತಾನೆ.

ಈ ವಿಶ್ಲೇಷಣೆಯ ಮೇರೆಗೆ ರುದ್ರನು ಅಂದರೆ ಸತ್ತ್ವಗುಣವು ಬ್ರಹ್ಮ ಮತ್ತು ವಿಷ್ಣುರಿಗಿಂತ ಅಂದರೆ ತಮಸ್ಸು ಮತ್ತು ರಜಸ್ಸುಗಳಿಗಿಂತ ಶ್ರೇಷ್ಠವಾಗಿದೆ. ಅದು ತುದಿಯಲ್ಲಿಯ ಶಿಖೆಯೇ ಆಗಿದೆ. ಈ ಭೂಮಿಯ ಜನರು ಇದನ್ನು ತಿಳಿಯದೆ, ರುದ್ರ ನಿಂದೆ ಮಾಡಿ ರೂಢಿ ತಪ್ಪುತ್ತಾರೆ.

ಇನ್ನು ಸಗುಣವೆಂದರೆ, ಭವದ ದೃಷ್ಟಿಯಿಂದ ಸೂರ್ಯ, ಚಂದ್ರ ಮತ್ತು ಅಗ್ನಿಗಳೇ ತ್ರಿನೇತ್ರನಾದ, ಅಂತರಿಕ್ಷವೇ ದೇಹವಾದ ಸಗುಣಬ್ರಹ್ಮವಾಗಿದೆ. ಇಹಕ್ಕೂ ಪರಕ್ಕೂ ಮಹಾ ನಿಯಂತ್ರಕನು ಓರ್ವನೇ ಆಗಿದ್ದಾನೆ. ಅವನನ್ನು ತಲುಪದಿದ್ದರೆ ಬಾಳಿನಿಂದೇನು ಫಲ ? 'ಸಗುಣ ನಿರ್ಗುಣಗಳಲಿ ಸಾಧಿಸಿ ನೋಡಬೇಕು.' ಇದೆಲ್ಲವೂ ಶಿವನ ಲೀಲೆಯೇ. ಅದರಲ್ಲಿ ಆನಂದಿಸಬೇಕು, ವಿನೋದಿಸಬೇಕು. ಸಕಾಲವಿರಲಿ, ಅಕಾಲವಿರಲಿ, ಶಿವನಿಗಂಟಿ ನಡೆದರೆ ಮನಸ್ಸು ಬಿಡುಗಡೆ ಪಡೆಯುತ್ತದೆ. ಕ್ಲೇಶಗಳಿಂದ ಮುಕ್ತವಾಗುತ್ತದೆ.

ಎರಡು ಘಟನೆಗಳ ಮಧ್ಯಂತರದ ಅವಧಿಯ ಮಾನಸಿಕ ಕಲ್ಪನೆಯೇ ಕಾಲವೆನಿಸುತ್ತದೆ. ಮಾನಸಿಕ ಕಲ್ಪನೆಯ ಪೂರ್ವಾವಸ್ಥೆಯು ಆದಿ ಕಾಲವಾಗಿದೆ. ಇದು ಅನಂತರವೂ ಆಗಿದೆ. ಈ ಸ್ಥಿತಿಗಂಟಿ, ಅಲ್ಲಿಂದ ದೂರಾಗದೆ, ಜ್ಞಾನಸಂಗವನ್ನು ಹೊಂದದೆ, ಮತಿಯ ಜಾಡ್ಯವನ್ನು ಬಿಟ್ಟು ಮುಂದೆ ನಡೆದರೆ, ಅಂಥ ಘನ ಮಹಿಮರಿಗೆ ನಿಶ್ಚಯವಾಗಿಯೂ ಮುಕ್ತಿ ಲಭ್ಯವಾಗುತ್ತದೆ.

'ಲೀಯತೇ ಯಸ್ಮಿನ್, ಗಮ್ಯತೇಯಸ್ಮಾತ್ ತಲ್ಲಿಂಗಂ.' ಯಾವುದರಲ್ಲಿ ಸರ್ವವೂ ಲೀನವಾಗುವದೋ, ಯಾವುದರಿಂದ ಸರ್ವವೂ ಹೊರಹೊಮ್ಮುವುದೋ, ಅದುವೇ ಲಿಂಗವೆನಿಸುತ್ತದೆ. ಬ್ರಹ್ಮವೆಂದರೆ ಇದುವೇ. ಏಕೆಂದರೆ ಬ್ರಹ್ಮದಿಂದಲೇ

ಎಲ್ಲವೂ ಉದ್ಭವಿಸಿ ಕೊನೆಗೆ ಬ್ರಹ್ಮದಲ್ಲಿಯೇ ಲಯಿಸುತ್ತದೆ. ಆದರೆ ಲೋಕದ ಜನರು ಬ್ರಹ್ಮಭೂತಿ ಇಲ್ಲವೆ ಲಿಂಗೈಕ್ಯದ ವಿಧದಲ್ಲಿ ಏಕರೂಪತೆಯನ್ನು ಅರಿಯದೆ ಕೆಡುತ್ತಾರೆ.

ಪರ ಮತ್ತು ಅಪರವೆಂಬ ಕುದುರೆಗಳೆರಡು. ಪರವು ನಿಃಶ್ರೇಯಸ್ಸಿಗೂ ಅಪರವು ಅಭ್ಯುದಯಕ್ಕೂ ಹಾದಿಯಾಗುತ್ತವೆ. ಈ ಎರಡು ಕುದುರೆಗಳನ್ನು ಹೂಡಿದ ಜೀವನ ರಥವನ್ನೇರಿ ಇಹ ಪರಗಳೆಂಬ ದ್ವಯದ ಭಾವನೆಯನ್ನು ತೊರೆದು ಏಕೋ ಭಾವದಿಂದಿದ್ದು, ಜಯ ಹೊಂದಬೇಕು.

ಸತ್ಸಂಕಲ್ಪದ ಬೀಜ ಬಿತ್ತಬೇಕು. ಬೀಜವೇ ಅಂಕುರಿಸಿ, ಬೆಳೆದು ಮರವಾಗುತ್ತದೆ. ತಿಳಿದು, ತಿಳಿದು, ತಿಳಿಯುವವನೇ ಜೀವನಾಗುತ್ತಾನೆ.

ಜಡವಾದುದನ್ನು ಕಡಿಯಬಹುದು, ಒಡೆಯಬಹುದು. ಅದನ್ನು ಮುಟ್ಟಬಹುದು. ಆದರೆ ಮೂಲ ವಸ್ತುವು ಸೂಕ್ಷ್ಮಾತಿಸೂಕ್ಷ್ಮವಾಗಿರುತ್ತದೆ. ಅದನ್ನು ಹಿಡಿಯುವುದೆಂತು ಸಾಧ್ಯ ? ಅದರ ಗ್ರಹಿಕೆ ಅಸಾಧ್ಯ. ಅದ್ವೈ ಭಾವಾತೀತ. ಆದರೆ ಸಾಧನೆಯಲ್ಲಿ ದಾರ್ಢ್ಯ ಬೇಕು. ಆಗ ಮಾತ್ರ ಮೂಲ ವಸ್ತುವಿನ ಪ್ರಾಪ್ತಿಯಾಗಬಹುದು.

ಮಾಯೆಯು ದ್ವಿವಿಧ. ಒಂದನೆಯದು ವಿದ್ಯಾಮಾಯೆ. ಎರಡನೆಯದು ಅವಿದ್ಯಾ ಮಾಯೆ. 'ಸಾ ವಿದ್ಯಾ ಯಾ ವಿಮುಕ್ತಯೇ.' ಯಾವುದು ಬಿಡುಗಡೆಗೊಳಿಸುವುದೋ ಅದೇ ವಿದ್ಯೆ. ಇಂಥ ವಿದ್ಯಾ ಮಾಯೆಯ ಜೊತೆಗೆ ನ್ಯಾಯಯುತ ಜೀವನ ನಡೆಸಿ, ನಾಕವನ್ನು ಅರಿಯುತ್ತಾನೆ. ಈ ಮಾಯೆಯ ಪ್ರಭಾವವೂ ಅಳಿದ ಮೇಲೆ ಬ್ರಹ್ಮೈಕ್ಯವನ್ನು ಹೊಂದುತ್ತಾನೆ.

ಜನನ–ಮರಣ ಚಕ್ರದ ಬಾಧೆ ತೀರಿದರೆ, ಸಂಸ್ಕಾರಗಳು ಉಂಟಾಗವು. ಇಂಥ ಸಂಸ್ಕಾರ ದೂರ ಸ್ಥಿತಿಯಲ್ಲಿ ಚಂದ್ರ ಕಳೆಯು ಹೊಳೆಯುತ್ತದೆ. ಆಗ ಪೀನಿಯಲ್ ಗ್ರಂಥಿಯಿಂದ ಕಾಲಮೇಘವು ಜಿನುಗು ಹನಿಸಿದಂತಾಗುತ್ತದೆ. ಇಲ್ಲಿ ನಿನ್ನ ಹಣೆ ಬರೆಹವನ್ನು ಕಂಡುಕೋ, ಏಕೆಂದರೆ ಇದು ಘಟಿಸಲು ದೈವೀ ಕೃಪೆಯು ಬೇಕು.

ಕಲುಷ ದೂರನಾಗಿ, ತಾಮಸವೆಲ್ಲವೂ ಅಡಗಿದಾಗ ಜ್ಞಾನ ಜ್ಯೋತಿ ಬೆಳಗುತ್ತದೆ. ಇಹ ಪರದ ಸೌಖ್ಯಕ್ಕಾಗಿ ಪರಿತಪಿಸಬೇಡ. ಹೃದಯದ ಗವಿಯ ಒಳಹೊರ ಬಯಲಲ್ಲಿ ಮಹದಾಕಾಶವನ್ನು ಸೇರಬೇಕು.

ಚಿನ್ಮಯಾನಂದ ಪುರವನ್ನು ಸೇರಿ, ತತ್ತ್ವವೇತ್ತನು ಪರಶಿವನಲ್ಲಿ ತನ್ಮಯನಾಗುತ್ತಾನೆ. ಅಲ್ಲಿ ತಾನೇ ತಾನಾದ ಸ್ವರಾಟನಾಗಿ ರಾಜ್ಯವಾಳುತ್ತಾನೆ. ಅದು ಅಮರ ಸ್ಥಿತಿಯಾಗಿದೆ.

೩೦೩೭ ಎಲ್ಲಿಂದ ಬಂದನು ? ಎಲ್ಲಿ ತಾ ಹೋಗುವ ?
ನಿದ್ರೆಯಂತೆ ; ಅರಿತು ನಿಲ್ಲಬಹುದೆ ?
ಅಚಲವಾದ ವ್ಯಕ್ತಿ, ಅಲ್ಲಿ ಾಂತುಕೊಳುವ, ವಿಶ್ವ

೩೦೩೮ ಬ್ರಹ್ಮ ವಿಷ್ಣು, ಶಿವರ ಭಾಗಗಳನು ನಿಲಿಸಿ,
ಪರಮ ಯೋಗಿಯಿರಲಿ ಬ್ರಹ್ಮವಾದ,
ಬ್ರಹ್ಮವಾದವನು ಭಾವಿಸಲು ಶಕ್ಯವೆ ? ವಿಶ್ವ

೩೦೩೯ ಬ್ರಹ್ಮ ಕೊಂದು ವಿಷ್ಣು ಭಾಗದಲ್ಲಿ ಬೆರೆಸಿ,
ವಿಷ್ಣು ಕೊಂದು ಶಿವನಲಿ ಒಪ್ಪ ಬೆರೆಸಿ,
ಶಿವನ ಕೊಂದು ಬಳಿಕ ಶಿವಯೋಗಿಯಾದನು, ವಿಶ್ವ

೩೦೪೦ ಬ್ರಹ್ಮ ವಿಷ್ಣುಗಳಿಗೆ ಪರತರಾದ ರುದ್ರ,
ಶಿಖೆಯು ಆದ ; ಸರಿಯೆ, ಸೃಷ್ಟಿ ಜನರು,
ರುದ್ರ ನಿಂದೆ ಗೆಯ್ದು, ರೂಢಿ ತಪ್ಪಿದರಲ ! ವಿಶ್ವ

೩೦೪೧ ಭಾನು ಸೋಮ ವಹ್ನಿ ಭವ ಲೋಚನನ ಮನದಿ,
ತಲುಪದಿರಲು ಫಲವು ತನಗೆ ಇಲ್ಲ,
ಇಹ ಪರಗಳಿಗೆಲ್ಲ ಮಹೇಶ್ವರ ತಾನುಂಟು, ವಿಶ್ವ

೩೦೪೨ ಲೀಲಾನಂದ ವಿನೋದವು,
ಲೋಲಾಡುವ ಮತಿ ಜಾಡ್ಯದಿ ಸಾಕೆನಿಸದಿರಲ್
ಕಾಲಾ ಕಾಲಗಳಲ್ಲಿಯು
ಮೇಲಾದ ಶಿವಗಂಟೆ ಮುಕ್ತಿ, ಮುನ್ನಡೆ, ವೇಮಾ.

೩೦೪೩ ಕಡೆಯಿರದ ಆದಿ ಕಾಲವ
ಬಿಡದಿರುತಿದ್ದು, ಸಲೆ ಜ್ಞಾನವರಿಯದೆ ಇರಲುಂ,
ಬಿಡುತಲಿ ಜಡ ಮತಿಗಳ, ಮುಂದೆ
ನಡೆಯೆ, ಘನರಿಗೆ ಮುಕ್ತಿ ನಿಶ್ಚಿತ ವೇಮಾ,

೩೦೪೪ ಭಾವಿಸಲು ಲಿಂಗವಿಪ್ಪುದು,
ಭಾವಿಸಿದೊಡೆ ಲೋಕದಲಿ ಬ್ರಹ್ಮವು ಅದುವೇ,
ತಾವಾಚರಿಪ ವಿಧವರಿಯದೆ,
ಈ ವಿಧದ ನರರು ಕೆಡುವರು, ಇಳೆಯಲಿ, ವೇಮಾ.

೩೦೪೫ ಹಯಗಳ, ದ್ವಯಗಳ ಹಿಡಿದು ನೀನಂಕುರಿಸುತ,
ದ್ವಯ ವಿನಾಶಕವದ ಬಯಲು ತಲುಪಲೆಳಸಿ,
ಜಯವ ಹೊಂದಲು ಮನದಿರಿಸಿ ಜಾಣನಾಗು,
ಭಯ ನಯಂಗಳ ಪಡೆವುದೆ ಪ್ರಜ್ಞೆ ವೇಮ.

೩೦೪೬ ಬಿತ್ತಿ, ಬಿತ್ತಿ ಕಾಣು ; ಬೀಜ ತೋರುತಿಹುದು ;
ಬಿತ್ತಿದುದೆ ಪ್ರಬಲ ವೃಕ್ಷವಾಯ್ತು ;
ತಿಳಿದು ತಿಳಿಯುವವನು ದೇವನಂತಾಗುವ, ವಿಶ್ವ

೩೦೪೭ ಕಡಿಯುವಂಥದನ್ನು ಕೈಲಿ ಹಿಡಿದಾಡುವ,
ಮೂಲ ವಸ್ತುವೆಂತು ಮತ್ತೆ ಹಿಡಿವ ?
ಇಂದು ಅದರ ಪ್ರಾಪ್ತಿ ಇಲ್ಲದಿರಲು ದಾರ್ಢ್ಯ, ವಿಶ್ವ

೩೦೪೮ ಮಾಯಾ ವಿದ್ಯೆಗಳಿರೆ ಜೊತೆ,
ನ್ಯಾಯದ ಮೂಲಕ ಗುರುತರಿತು ನಾಕವರಿವಂ,
ಮಾಯಾ ವಿದ್ಯೆಗಳಡಗಲು,
ಹಾಯಾಗಿ ಬ್ರಹ್ಮೈಕ್ಯವ ಹೊಂದಿರು, ವೇಮಾ,

೩೦೪೯ ಬಲ್ಲವರಾಗಿಹರು, ಇಲ್ಲಿ ಅಲ್ಲಿ ಎನದೆ,
ಸರುವ ತಾಣದಲ್ಲಿ ಹರನ ಹಾಗೆ,
ತಿಳಿಯುವವರಿಗೆಲ್ಲ ದೇವನೆ ಕಾಣಿಸುವ, ವಿಶ್ವ

೩೦೫೦ ಯಮನ ಬಾಧೆ ತೀರೆ, ಒಡನೆಯೆ ದೂರಾಗಿ,
ಸಮತೆ ಚಂದ್ರ ಕಳೆಯಲಿ, ಸರ್ರನೆ ಜೀವಿ
ಕ್ರಮವ ಕಂಡು ಸೇರಿ, ಕಾಲ ಮೇಘವು ತುಂಬಿ,
ಜಿನುಗೆ, ಕಾಣು ಬರೆಹ ಜಗದಿ ವೇಮ.

೩೦೫೧ ತಿಳಿದು ಆತ್ಮದಲ್ಲಿ ದೇದೀಪ್ಯ ಮಾನವಿರೆ,
ತೇಜದಲ್ಲಿ ಶಿವನ ಭೇಟ ಹೊಂದಿ,
ಮನಸು ಶಿವನೊಳಿರಿಸಿ ಮಗ್ನನಾಗಿರಯ್ಯ, ವಿಶ್ವ

೩೦೫೨ ಕಲುಷ ಒಂದಿನಿತೂ ಕಾಣಿಸದೆಂದಿಗೂ,
ನೋಡಲಾರೆ, ಇರಲಿ ನಯವ ಮೀರಿ,
ತಾಮಸವಡಗಿಸಲು ತಾ ಬೆಳಗಿತು ಜ್ಞಾನ, ವಿಶ್ವ

೩೦೫೩ ಇಹ ಪರ ಸೌಖ್ಯವನೊಲ್ಲದೆ,
ದಹರದಲಿ ಗುರಿಯಿರಿಸಿ ದತ್ತವಾದೊಡಾಗಳ್,
ಕುಹರದೊಳಹೊರಗು ಬಯಲಲಿ,
ಮಹದಾಕಾಶದಲಿ ಸೇರಿ, ಮಹಿಯಲಿ, ವೇಮಾ.

೩೦೫೪ ಚಿನ್ಮಯಾನಂದ ಪುರಿ ನಡು ಸೀಮೆ ಸೇರಿ,
ತನ್ಮಯನಾಗಿಯೆ ಪರಶಿವ ತತ್ತ್ವವೇತ್ತ,
ಮನ್ಮಯವಾದ ರಾಜ್ಯವನು ಮುದದಿ ಆಳ್ವ,
ಜನ್ಮರಾಹಿತ್ಯದಲ್ಲಿಯೂ ಸತ್ಯ ವೇಮ.

೩೦೫೫ ನಿತ್ಯ ಸತ್ಯ ವ್ರತಾಚಾರ ನಿಪುಣನಾಗಿ,
ಪರಮ ಧರ್ಮಾರ್ಥಗಳನೆಲ್ಲ ಪಿಡಿದು ನೋಡಿ,
ಸಿದ್ಧಿ ಹೊಂದಲು ಪರಿಪೂರ್ಣ ಚಿಂತನ ಮಾಡಿ –
ದಾಗ ಆನಂದವಮಿತವಹುದಯ್ಯ ವೇಮ.

●

## ೮. ಊರ್ಧ್ವ ಗತಿ

**ಊರ್ಧ್ವ ಗತಿ :**

ಯೋಗದಲ್ಲಿ ಮನಸ್ಸನ್ನು ಸೂಕ್ಷ್ಮದಿಂದ ಸೂಕ್ಷ್ಮತರಕ್ಕೆ ಒಯ್ಯುವ ಸಾಧನೆ ಇರುತ್ತದೆ. ಮನದ ಸ್ಥೂಲತೆಯೆಂದರೆ ಮನನ ಮಾಡುವ ವಿಷಯಗಳ ಸ್ಥೂಲತೆ. ಅದೇ ಮನದ ಸೂಕ್ಷ್ಮತೆಯೆಂದರೆ ಚಿಂತನದ ವಿಷಯಗಳ ಸೂಕ್ಷ್ಮತೆಯಾಗಿದೆ.

ಜನರು ಏನೇ ಹೇಳಲಿ, ಆಗಿ ಹೋದ ಅನುಭವವೇ ಇರಲಿ, ಆಗದಂಥ ಭಾವವೇ ಇರಲಿ, ಯೌಗಿಕ ಸಾನುಕೂಲವಾದ ಊಹೆಯನ್ನು ಮಾಡಿ ಮುಂದುವರಿಯಬೇಕು. ಮನಸ್ಸಿಗೆ ಸರಿಯಾದ ಸಂಕಲ್ಪಬೇಕು. ಅದರಿಂದ ಚಿಂತನದ ಗತಿಯೇ ಬದಲಾಗುತ್ತದೆ. ಗಡಿಗೆ ಹಾಲಿನಲ್ಲಿ ಕಾಸಿನಷ್ಟೇ ಇರಲಿ, ಸಕಾಲದಲ್ಲಿ ಹೆಪ್ಪು ಹಾಕಿದರೆ, ಘಮಘಮಿಸುವ ತುಪ್ಪವಾಗುವುದಷ್ಟೇ. ಸತ್ಸಂಕಲ್ಪ ಮಾಡದಿದ್ದರೆ, ಅಂದರೆ ಹೆಪ್ಪು ಹಾಕದಿದ್ದರೆ, ಅದೇ ಹಾಲು ಹೊಲಸು–ಹುಳಕ್ಕೆ ಜನ್ಮಭೂಮಿಯಾಗುತ್ತದೆ.

ಹಲವರು ಶೀಘ್ರ ಲಾಭಕ್ಕೆ ಮನದ ಶಕ್ತಿಯನ್ನು ದುರ್ಬಳಕೆ ಮಾಡುತ್ತಾರೆ. ಮಂತ್ರ ವಿದ್ಯೆಯಲ್ಲಿ ಮನ ತೊಡಗಿಸಿ, ಮಹಿಮೆ ತೋರಬಯಸುತ್ತಾರೆ. ಇದೆಲ್ಲ ಬರಿಯ ಮಾಯಾ ವಿದ್ಯೆ. ಈ ಜಗತ್ತಿನಲ್ಲಿ ಸೃಷ್ಟಿಯಾಗುವುದೆಲ್ಲವೂ ಬ್ರಹ್ಮಸೃಷ್ಟಿಯೇ ಆಗಿದೆ. ಮತ್ತರಾದವರು, ಮಾಯಾವಿದ್ಯೆಯ ಹೂರಣವನ್ನು ತಿಳಿಯದ ಜನರೆದುರು ಬೂಟಾಟಿಕೆ ತೋರುತ್ತಾರೆ.

— — — — — — — — — — — — — — — — — — — — — —

ಆದ್ದರಿಂದ, ಆತ್ಮದಲ್ಲಿ ಬೆಳಕು ಕಾಣಬೇಕು. ಅದುವೇ ಲಿಂಗ ದರ್ಶನ. ಇದಕ್ಕೆ ಅರಿವೇ ಸಾಧನೆ. ಎಲ್ಲವನ್ನೂ ತ್ಯಜಿಸಿ, ಆತ್ಮದರ್ಶನದತ್ತ ಸಾಗುವವನಿಗೆ ಸಾಹಸ ಬುದ್ಧಿ, ತಾಳ್ಮೆ, ಧೈರ್ಯಗಳು ಬೇಕು. ಇಲ್ಲವಾದರೆ ಜ್ಯೋತಿ ದರ್ಶನವಾಗದು.

ತಿಳಿವನ್ನು ಆತ್ಮಮುಖವಾಗಿ ಹರಿಬಿಡಬಹುದು, ವಿಷಯಮುಖವಾಗಿಯೂ ಹರಿಬಿಡಬಹುದು. ಮಧ್ಯದಲ್ಲಿ ತಿರುಗುವ ಕೀಲು (Hinge) ಇರುವ ಕದದಂತೆ, ತಿಳಿವನ್ನು ಅಂತರ್ಮುಖವಾಗಿ ಚೊಕ್ಕ ಹಿಡಿದು, ಬುದ್ಧಿಯಿಂದ ಕೀಲು ಬಳಸುವ ಮರ್ಮವನ್ನು ಅರಿಯಬೇಕು.

ಈ ಭವ ಸಾಗರದಲ್ಲಿ ಈಜುವುದನ್ನು ಕೆಲವರು ಕಲಿತಿರಬಹುದು. ಆದರೆ ಅಂಥವರು ಸಹ, ಆಳ ಬಾವಿಯಲ್ಲಿ ಬೀಳಬಹುದೇ ? ಸಂಸಾರದ ಕ್ಲಿಷ್ಟ ಪ್ರಸಂಗಗಳಲ್ಲಿ ಸಿಲುಕಿ ಹಾಕಿಕೊಳ್ಳಬಹುದೇ ? ಇನ್ನು, ಕೆಲವರು ಈಜು ಕಲಿತಿರಬಹುದು; ಅಂದರೆ ಯೋಗ ಸಾಧಕರಾಗಿರಬಹುದು. ಆದರೆ ಭವಸಾಗರದಲ್ಲಿ ಕೈ ಜಾಲಾಡಿಸದಿದ್ದರೆ, ಅಂದರೆ ಯೋಗ ಬಲದಿಂದ ಸಂಸಾರ ಮೋಹವನ್ನು ತೊರೆಯದಿದ್ದರೆ, ಹೇಗೆ ಪಾರುಗಾಣಬಹುದು ?

ಸಂಸಾರದ ಬರಸಿಡಿಲು ಬಡಿದ ತಾಣದಲ್ಲಿ 'ದಡ ದಡ' ಎನ್ನುವುದು. ಸಿಡಿಲು ಬಡಿದ ಘಟವು ಅಂದರೆ ದೇಹವು ಕುಸಿದು ಬೀಳುತ್ತದೆ. ಸಿಡಿಲು ಬಡಿದವನು ಪ್ರಾಣವಿಲ್ಲದ ಪ್ರೇತವೇ ಆಗುತ್ತಾನೆ.

ಬರೀ ನಿರ್ಗುಣೋಪಾಸನೆಯ ಬಡಬಡಿಕೆಯು ಸಲ್ಲದು. ಸರಿಯಾಗಿ ತತ್ತ್ವಗಳನ್ನು ಅಂತರಂಗದಲ್ಲಿ ಮನನ ಮಾಡಿ ತಿಳಿಯಬೇಕು. ಆಗ ಚಿದ್‌ಬಯಲನ್ನು ಸೇರಿ ವಿಭವ ಹೊಂದಬಹುದು.

ಆದರೆ ಬರೀ ಸಾಧು ವೇಷ-ಧರಿಸಿದರೇನು ? ಯೋಗಿಯಾಗಬಲ್ಲನೇ? ವೇಷಕ್ಕೆ ತಿಳಿವು ಮೂಲವಾಗಬೇಕು. ತ್ಯಾಗ ಭಾವನೆಯ ಸಂಕೇತವಾಗಿ ವೇಷ-ಭೂಷಣಗಳು ಬದಲಾಗಬಹುದಷ್ಟೇ. ಮುಖ್ಯವಾದುದೆಂದರೆ, ಸಂಸಾರವೆಂದರೆ ಜನನ-ಮರಣಗಳ ಸುತ್ತುವರಿಕೆ ತಾನೇ ? ಮರಣದ ಭಯವನ್ನು ಜಯಿಸಬೇಕು. ಇಲ್ಲವಾದರೆ, ತ್ಯಾಗ ಸೂಚಕ ವೇಷ ಹಾಕುವುದು ಕೇವಲ ಕಳ್ಳತನವೆನಿಸುತ್ತದೆ.

ಬೇಕಾದಷ್ಟು ಪುರಾಣ-ಪುಣ್ಯಕತೆಗಳನ್ನು ಕೇಳಬಹುದು. ಅಂಥ ಕತೆಗಳು ಸಾಕಷ್ಟಿವೆ. ವಿವಿಧ ಪ್ರಕಾರವೂ ಇವೆ. ಆದರೆ, ಮನಸ್ಸನ್ನು ಯೋಗ ಪ್ರಕ್ರಿಯೆಯಲ್ಲಿ ನೆಲೆಗೊಳಿಸಿ, ಚಿದ್ಬಯಲನ್ನು ತಲುಪುವುದು ದುರ್ಲಭವಾಗಿದೆ.

ತನ್ನ ದೇಹ ಭಾವದಿಂದ ಅಂಟಿಕೊಂಡ ಎಲ್ಲ ಪರಿವಾರವನ್ನೂ, ಎಳೆತ-ಸೆಳೆತಗಳನ್ನೂ ನಿಗ್ರಹಿಸಿದರೆ ಮಾತ್ರ ನೈಜ ಸಂತಸ ಪ್ರಾಪ್ತವಾಗುವುದು. ಇದಕ್ಕೆ ಯಾವುದು ಮರ್ತ್ಯ ? ಅಂದರೆ ಸಾವುಳ್ಳದ್ದು ಎಂಬುದನ್ನು ಅರಿತು ಅದನ್ನು

ತೊರೆದು, ಅಮರವಾದುದಕ್ಕೆ, ನಿತ್ಯವಾದುದಕ್ಕೆ ಅಂಟಿ ಸಾಗುವುದೇ ಮೇಲು ವರ್ತನೆಯಾಗಿದೆ.

ಅನಾತ್ಮವನ್ನು ಜ್ಞಾನದ ಛೂರಿಯಿಂದ ಕಡಿಯಬಹುದು, ಅದು ಛೇದ್ಯವಾದುದು. ಅದನ್ನು ಹಿಡಿದುಕೊಂಡೆನೆಂದು ಬೀಗಿದರೇನು ಫಲ ? ಮೂಲ ವಸ್ತುವಾದ ಆತ್ಮವನ್ನು ಹಿಡಿದುಕೊಳ್ಳಬೇಕು. ಅದನ್ನು ಹೊಂದದೆ ನಡುವೆ ಕೈ ಬಿಟ್ಟವನಿಗೆ ದಾರ್ಢ್ಯವೆಲ್ಲಿ ?

ಈ ಜಗವು ಮಾಯೆಯಾಗಿದೆ. ಇದನ್ನು ಮಾನವನು ಅರಿಯದೆ, ಮಾಯೆಯೊಳಗೆ ಮುಳುಗುತ್ತಾನೆ. ಕ್ಷಣಿಕವನ್ನೂ, ನಿತ್ಯವನ್ನೂ ವಿಂಗಡಿಸುವವನು ಮಾತ್ರ ಮಾಯೆಯನ್ನು ಅರಿಯಬಲ್ಲ. ಮಾಯೆಯ ಹಿಂದಿನ ಮರ್ಮವನ್ನು ಅರಿತು ಮರ್ಮಜ್ಞನಾಗಬಲ್ಲ. ಉದರಪೋಷಣೆಗಾಗಿ ಮಾತ್ರ ಜೀವಿಸಿದ್ದರೆ ಹೇಗೆ ? ಕಲ್ಲೊಳಗಿರುವ ಕಪ್ಪೆಗೂ ಹೊಟ್ಟೆಯಿದೆ ತಾನೇ ? ಅದಕ್ಕೆ ಅಲ್ಲಲ್ಲಿ ಆಹಾರ ನೀಡುವವರಾರು ? ಹಸಿವೆಯನ್ನು ಶಮನಗೊಳಿಸಲು ಭಕ್ತಿ ಮಾರ್ಗವಂತೂ ಇದೆ. ಯೋಗ ಸಾಧಕನಾಗಿ ಮುಕ್ತಿಮಾರ್ಗವನ್ನೂ ಕಂಡುಕೋ.

'ಲೀಯತೇ ಯಸ್ಮಿನ್, ಗಮ್ಯತೇ ಯಸ್ಮಾತ್ ತಲ್ಲಿಂಗಮ್' ಅಂದರೆ ಯಾವುದರಲ್ಲಿ ಎಲ್ಲವೂ ಲೀನವಾಗಿರುವುದೋ ಮತ್ತು ಯಾವುದರಿಂದ ಎಲ್ಲವೂ ಹೊರಹೊಮ್ಮುವುದೋ, ಆ ತತ್ತ್ವದಿಂದಲೇ ಭೂ, ಭುವಃ, ಸ್ವಃ, ಜನರ್, ಮಹಃ, ಸತ್ಯ, ಬ್ರಹ್ಮಲೋಕಗಳು, ಎಂದರೆ ಅನುಭವಕ್ಷೇತ್ರಗಳಾಗಿವೆ. ಇವುಗಳಲ್ಲಿ ಹುಟ್ಟಿ ಈ ಭುವಿಯಲ್ಲಿ ನೆಲೆಸಿದ ಜನರು ಲೋಕಗಳ ಸೂಕ್ಷ್ಮತ್ವ ಅರಿಯದೆ, ಜಡ ದೇಹಕ್ಕೆ ಲಿಂಗವು ಕಾಣದೆನ್ನುತ್ತಾರೆ.

ಈ ವಿಶ್ವದ ಉತ್ಪತ್ತಿ ಕರ್ತನಾಗಿ ಬ್ರಹ್ಮನೆಂದೂ, ವಿಶ್ವವನ್ನು ರಕ್ಷಿಸುವವನಾಗಿ ವಿಷ್ಣುವೆಂದೂ, ವಿಶ್ವವನ್ನು ಲಯಿಸುವವನಾಗಿ 'ಹರತಿ ಇತಿ' ಹರನೆಂದೂ ವಿಶ್ವದ ಈಶನಿಗೆ ವಿಭಿನ್ನ ನಾಮಗಳು ರೂಢಿಯಾದವು.

ಮಾನವನ ಮನಸ್ಸು ಸಂಸಾರ ಬಾಧೆಗೆ ಸಿಕ್ಕು ಬಳಲಿದೆ. ಅವನಿಗೆ ಭವರೋಗ ವೈದ್ಯನ ಮದ್ದು ಬೇಕೇ ಬೇಕು. ಇದಕ್ಕಾಗಿ ಮನೋ ನಿರ್ಧಾರವೇ ಅತಿ ಅಗತ್ಯ. ಆದ್ದರಿಂದ ಮದ್ದಿನಂಥ ಮನಸ್ಸನ್ನು ಮಾನವನು ಕಾಣಬೇಕು.

ಯುಗ ಯುಗಗಳಲ್ಲಿ ಅನೇಕ ತಪಸ್ವಿಗಳು ಈ ಪ್ರಪಂಚಕ್ಕೆ ತಗಲಿಕೊಳ್ಳದೆ ಇದ್ದಾರೆ. ಅವರನ್ನು ನೋಡಿ, ಮನದಲ್ಲಿ ದುಗುಡ, ತಳಮಳಿಗಳದ್ದರೆ, ಸಾಂತ್ವನ ಮಾಡಿಕೊಂಡಾಗ, ಮನದಲ್ಲಿ ಉಜ್ವಲ ಕಾಂತಿಯು ಬೆಳಗುವುದು.

ಶ್ರುತಿ, ಯುಕ್ತಿ, ಅನುಭವಗಳೆಂಬ ಮೂರು ಪ್ರಮಾಣಗಳಿವೆ. ಇವುಗಳನ್ನು ಆಧರಿಸದೆ, ಬುದ್ಧಿಗೇಡಿಗಳು ಆಡುವ ಮಾತನ್ನು ನಂಬಕೂಡದು. ಹಾಗಾದರೆ ಮಾತ್ರ ಅನುಪಮವಾದ ಪೂರ್ಣಪದವಿಯನ್ನು ಪಡೆಯಬಹುದಾಗಿದೆ.

— — — — — — — — — — — — — — — — — — — — —

೩೦೫೬ ಆಗಿ ಹೋದುದಿರಲಿ, ಆಗದಂಥದಿರಲಿ ;
ಆಡುವವರು ಮಾತು ಆಡುತಿರಲಿ ;
ಸಾಹಸದಿಂದ ಮಿಗಿಲು ಊಹೆಗಳನು ಮಾಡು. ವಿಶ್ವ

೩೦೫೭ ಗಡಿಗೆ ಹಾಲಿನಲ್ಲಿ ಕಾಸಿನಷ್ಟು ಹೆಪ್ಪು,
ಘಮಘಮಿಸುವ ಗಂಧ ; ಗುಟ್ಟು ಗಾಣು ;
ಹೆಪ್ಪು ಹಾಕದಿರಲು ಹೊಲಸು ಹುಳದ ಜನನ ; ವಿಶ್ವ

೩೦೫೮ ಮಂತ್ರವಿದ್ಯೆಯೆಲ್ಲ ಮಾಯೆಗಳ ಕೋರಿಕೆ ;
ಸೃಷ್ಟಿಯಲ್ಲಿ ಬ್ರಹ್ಮ ಸೃಷ್ಟಿ ಗೆಯ್ಮೆ,
ಮತ್ತರಾದವರು ಮನದಿ ನಿಲಿಸಲಾರರು, ವಿಶ್ವ

೩೦೫೯ ಆತ್ಮದೊಳಗೆ ಜ್ಯೋತಿ ಅಮರುವುದೇ ಲಿಂಗ,
ತಿಳಿವಿನಿಂದ ಹೊರತು ತೇಟವಿರದು,
ಅದು ಅಧೈರ್ಯಪರಗೆ ಕಾಣಬರದು ಮನದಿ, ವಿಶ್ವ

೩೦೬೦ ತಿರುಗು ಕೀಲಲಿ ತೂಗುತ ಬಿಡಲಾಗ,
ಸಲೆಯರಿಯುತ ಒಳಗೆ ಚೊಕ್ಕ ಹಿಡಿದು,
ಮತಿಯ ಗೂಡಿ ಮಿಂಚಿ ಮರ್ಮವನು ಕಾಣಿರಿ, ವಿಶ್ವ

೩೦೬೧ ಈಜರಿತವರಾಗಿದ್ದರು,
ಈ ಜಗದೊಳಾಳ ಭಾವಿಯಲಿ ಬೀಳರೇನ್ನೈ ?
ಈಜಲು ಕಲಿತೊಡೆ ಯೋಗವು,
ಕೈ ಜಾಲಾಡಿಸದಿರಲೇನು ಮಾಡ್ಕು ? ವೇಮಾ.

೩೦೬೨ ಸಿಡಿಲು ಬಡಿದ ತಾಣ ದಡದಡೆಸುತ ಉಂಟು,
ಸಿಡಿಲು ಬಡಿದ ಮನೆಯು ಅಡಿಗೆ ಬಿತ್ತು,
ಸಿಡಿಲು ಬಡಿದ ನರನ ಪ್ರೇತವೇನೆನಬಹುದು ? ವಿಶ್ವ

೩೦೬೩ ದಿನ ದಿನ ನಿರ್ಗುಣವೆನುತಿರೆ,
ತನಗಿನಿತೊಪ್ಪದು ; ತತ್ತ್ವಗಳನು ತಿಳಿಯದಿರಲ್,
ಮನಸಾಂತರಂಗದಲ್ಲಿಯೆ,
ವಿನಯವಹ ಬಯಲನು ಸೇರಿ, ವಿಭವಿಸು ವೇಮ.

---

೩೦೬೪ ಇಷ್ಟು ವೇಷಗಳಿಗೆ ಇಹುದು ತಿಳಿವೆ ಮೂಲ
ಯಮನ ಗೆಲ್ಲಬೇಕು ಸಮಯವರಿತು
ಕಳ್ಳ ವಸನವಷ್ಟೇ ಕಾಣಬಹುದೆ ಸೌಖ್ಯ ? ವಿಶ್ವ

೩೦೬೫ ಬೇಕಾದರೆ ಕೇಳಬಹುದು,
ಪ್ರಾಕಟವಿಹ ಕಥೆಗಳೆಲ್ಲ ಬಹು ವಿಧವಿಹವೈ,
ಏಕೀ ಭಾವವ ಹೊಂದುತ,
ಸೋಂಕುವುದು ದುರ್ಲಭ ಮನದಿ, ಸಂದೆಗ ವೇಮಾ.

೩೦೬೬ ತನ್ನ ದೇಹದಲಿ ತನಗಿರುವ ಪರಿವಾರ,
ಸಕಲ ನಿಗ್ರಹಿಸುತ ಸಂತಸಿಸುವ,
ಅಖಿಲ ಸಾವು ಅರಿತು, ಅಲ್ಲಿ ಇಲ್ಲಿ ತಿಳಿದು,
ನಡೆಯೆ ಮೇಲು ವರ್ತನಮರ ವೇಮ.

೩೦೬೭ ಭೇದ್ಯವಾದುದನ್ನು ಹಿಡಿದುಕೊಂಡೆನೆನಲು,
ಮೂಲ ವಸ್ತುವೆಂತೊ, ಎಲ್ಲೊ, ಹಿಡಿದು,
ಅದನು ಹೊಂದದವನು ದಾರ್ಢ್ಯವಿಲ್ಲದವನು, ವಿಶ್ವ

೩೦೬೮ ಮಾಯೆ ಜಗವು ಎಂದು ಮನುಜನರಿಯದಿದ್ದು,
ಮಾಯೆಯೊಳಗೆ ತಾನು ಮಗ್ನನಾದ,
ಮಾಯೆ ತಿಳಿದ ನರನು ಮರ್ಮಜ್ಞನಾಗುವ, ವಿಶ್ವ

೩೦೬೯ ಹೊಟ್ಟೆಗಾಗಿ ಏಕೆ, ಹೆಚ್ಚು ಕಳವಳವದು ?
ಉದರ ತಣ್ಣಗಿರಿಸೆ ಉಂಟು ಭುಕ್ತಿ,
ಕಲ್ಲೊಳಗಿನ ಕಪ್ಪೆಗುಂಟಲ್ಲವೆ ಉದರ ? ವಿಶ್ವ

೩೦೭೦ ಇಂಥ ಲಿಂಗದಲ್ಲಿ ಈರೇಳು ಜಗಗಳು,
ಹುಟ್ಟಿ ಬದುಕಿ ನರರು ಭುವಿಲಿ ನೆಲೆಸಿ,
ಗಟ್ಟಿ ಕಾಯಗಳಿಗೆ ಕಾಣದೆನ್ನುತಿಹರು, ವಿಶ್ವ

೩೦೭೧ ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವ ರಕ್ಷಿಸುವವ ವರ ವಿಷ್ಣುವೆ ಎನುತೀ,
ವಿಶ್ವವ ಲಯಿಸುವವ ರುದ್ರನು,
ವಿಶ್ವೇಶನಿಗಿಂಥ ನಾಮವಾದವು ವೇಮಾ !

೩೦೭೨ ವ್ಯಾಧಿ ಬಂದೊಡಾಗ, ವೈದ್ಯನ ಕೈ ಮದ್ದು,
ತೆಗೆದು ತಿನ್ನದಿರಲು, ತೀರದೆಂದೂ,
ಮದ್ದಿನಂಥ ಮನಸು ಮನುಜ ಕಾಣಬೇಕು. ವಿಶ್ವ

೩೦೭೩ ಯುಗವನು ಚೊಕ್ಕಟ ನೋಡುತ,
ತಗಲದೆ ಯುಗ ಯುಗಗಳಲ್ಲಿ ತಪಸ್ವಿಗಳಿರಲ್,
ದುಗುಡದ ತಳಮಳವಿದ್ದರೆ,
ನಿಗಿನಿಗಿ ಶಾಂತಿಯು ಮನದೊಳು ನಿಲುವುದು ವೇಮಾ.

೩೦೭೪ ಆಕುಂಚನ ವಿಧವರಿತು ಸ–
ದಾಕಾಲ ಮೂಲ ಬಂಧವನೇ ಮರೆಯದಿರಲ್,
ಲೋಕದೊಳಗಿಪ್ಪ ವೃದ್ಧರು
ಪ್ರಾಕಟವಾಗಿಯೆ ಚಿಕ್ಕ ವಯಸ್ಕರು ವೇಮಾ.

೩೦೭೫ ಬ್ರಹ್ಮ ಕುದುರೆ ಮಾಡಿ, ಭವನು ಜೀನು ಆಗೆ,
ಆದಿ ವಿಷ್ಣು ಬೆನ್ನು ಆಸರಾಗೆ,
ಅಲ್ಲಿ ಮೇಲಿರುವುದು ಅಂಗನೆಯೊ ? ಪುರುಷನೊ ? ವಿಶ್ವ

೩೦೭೬ ನಿಖಿಲ ದೋಷ, ಅರಿಯೆ, ನಿಂದೆಗಳಿಗೆ ಮೂಲ,
ಅರಿಯೆ ತತ್ತ್ವವೆಲ್ಲ ಆತ್ಮ ಜನನ,
ತಿಳಿವಿಗಾತುಕೊಳಲು ಧೀರನಾಗಬೇಕು, ವಿಶ್ವ

೩೦೭೭ ಕಲುಷವೆಲ್ಲ ಕೊನೆಗೆ ಗೌರವಕ್ಕೆ ಹಾನಿ,
ಅರಿಯೆ ತತ್ತ್ವವೆಲ್ಲ ಆತ್ಮಸೃಷ್ಟಿ,
ತಿಳಿದು ತಾನು ಬಳಿಕ ಸ್ಥಿರನು ಆಗಬೇಕು. ವಿಶ್ವ

೩೦೭೮ ಶ್ರುತಿ ಯುಕ್ತ್ಯೈನುಭವವಿಲ್ಲದೆ,
ಮತಿ ಹೀನರು ಆಡುವಂಥ ಮಾತನು ಕೇಳಲ್,
'ಸತ'ವೆಂದು ನಂಬಬಾರದು,
ಅತುಲಿತವಹ ಪೂರ್ಣ ಪದವಿ, ಎಟುಕದು, ವೇಮಾ !

●

# ೯. ಪರಾಗತಿ

**ಪರಾಗತಿ:**

ಯೋಗ ಸಾಧನೆಯಲ್ಲಿ ದೇಶ ಬಂಧವನ್ನು ನಿಮ್ನ ಚಕ್ರದಲ್ಲಿರಿಸಿ ನ್ಯಾಸ ಮಾಡಿದರೆ, ಪಂಚ ಭೂತಗಳ ನಿಗ್ರಹವಾಗಬಹುದು. ಆದರೆ ಆಗ್ನೇಯ ಚಕ್ರವು ಇಹ ಪರಗಳಿಗೆ ಸಂಧಿಯೆಂದು ತಿಳಿಯಲಾಗುತ್ತದೆ. ಆಗ್ನೇಯ ಮತ್ತು ಮೇಲಿನ ಚಕ್ರಗಳಲ್ಲಿ ನ್ಯಾಸವಿರಿಸುವುದು ಪರಾಗತಿಯೆನಿಸುತ್ತದೆ.

ಮೇಲಿನ ಉಪ ಜಿಹ್ವೆಗೆ ಸರಿ ಹೊಂದುವಂತೆ ಖೇಚರಿ ಮುದ್ರೆಯಲ್ಲಿದ್ದು, ತ್ರಿಪುಟಿಯನ್ನು ನೋಡುತ್ತ, ಮನಸ್ಸಿನೊಳಗೆ ತಪಸ್ಸನ್ನು ಆಚರಿಸಿದರೆ, ಅವನೇ ಭಕ್ತನೆನಿಸುತ್ತಾನೆ. ನಿಪುಣತೆಯಿಂದ ಇದನ್ನು ಯಾವಾಗಲೂ ಸಾಧಿಸುತ್ತಿರಬೇಕು.

ಯೋಗಿಯು ನಿಟಿಲ ದುರ್ಗದಲ್ಲಿ ಅಂದರೆ ಹುಬ್ಬುಗಳ ಮಧ್ಯೆ ಇರುವ ನಿಜವನ್ನು ಅರಿತು, ಪಟುತ್ವದಿಂದ ಮನವನ್ನು ನಿಲ್ಲಿಸಿದರೆ, ಯೋಗದಲ್ಲಿ ಪ್ರಬಲಿಸುತ್ತಾನೆ. ಅವನು ನಿರ್ಗುಣ ಪದವಿಯನ್ನು ತಲುಪುತ್ತಾನೆ. ಬಳಿಕ 'ಪರಾಕ್' ಆದಾಗ ರಹಸ್ಯವು ಬಯಲಾಗುತ್ತದೆ.

ನಾಸಿಕಾಗ್ರದಲ್ಲಿ ದೇಶಬಂಧ ಮಾಡಿ, ಸಾಧನೆ ಮಾಡುವ ಯೋಗಿಗೆ ಯಾವುದೇ ವರ್ಣಭೇದಗಳು ಉಳಿಯವು. ಎಲ್ಲವೂ ಪರಬ್ರಹ್ಮವಾಗಿ ತೋರುತ್ತದೆ. ಆಗ ಕಾಶಿನಾಥನನ್ನು ಅಂದರೆ ಸರ್ವವನ್ನು ಜಾಜ್ವಲ್ಯಮಾನಗೊಳಿಸುವವನನ್ನು ಯೋಗಿಯು ನೋಡುತ್ತಾನೆ.

ಆತ್ಮಬಿಂಬವನ್ನು ಬಿಗಿದ ದೃಷ್ಟಿಯೋಗದಿಂದ ಹಿಡಿದು, ಹಾಗೆ ಕೂಡಿದ ಲಗ್ನಚಿತ್ತಕ್ಕಂಟಿ, ಆ ಸ್ಥಿತಿಯನ್ನೇ ರಕ್ಷಿಸುತ್ತ ಇರಬೇಕು. ಕೈಗಳನ್ನು ಮೇಲಕ್ಕೆತ್ತಿ, ಕಾಲುಗಳನ್ನು ಅದುಗಿ ಹಿಡಿದು, ಊರ್ಧ್ವ ದೃಷ್ಟಿಯಿರಿಸಿ, ಮನವನ್ನು ನಿಲ್ಲಿಸಿದರೆ, ಎಲ್ಲವೂ ಹೊಳೆಯುವುದು. ಆತ್ಮವನ್ನು ಬೆಳಗುತ್ತ, ಅನುವು ಹಿಡಿದು ಅನಾತ್ಮವನ್ನು ತೂರಿ ಆತ್ಮವನ್ನು ಶೋಧಿಸುತ್ತ ಹೊಳೆಯುವ ಆತ್ಮವನ್ನು ಸ್ಫುಟಗೊಳಿಸಬೇಕು. ಕಳೆಯನ್ನು ಮೀರಿ ನಿತ್ಯ ತತ್ತ್ವದಲ್ಲಿ ಉಳಿಯಬೇಕು. ಮಾತಿನೊಳಗಿನ ಮಾತನ್ನು ಭದ್ರಪಡಿಸಿ, ಆತ್ಮದರ್ಶನಕ್ಕಾಗಿ ಪ್ರಾರ್ಥಿಸಿದರೆ, ಮುಕ್ತಿಯು ತಂತಾನೇ ಬರುವುದು. ಸೂಕ್ಷ್ಮಾತಿಸೂಕ್ಷ್ಮ ದೃಷ್ಟಿಯಿಂದ ಭ್ರೂಮಧ್ಯೆಯಲ್ಲಿ ಪುನರಪಿ ನೋಡುತ್ತಿದ್ದರೆ, ಆತ್ಮವು ಅನುಭವ ವೇದ್ಯವಾಗುತ್ತದೆ. ಮತ್ತೆ ಮರೆಯಾಗುತ್ತದೆ ಎಂಬೀ ಅನುಭವವು ಆಗುತ್ತದೆ.

ಮೂಗಿನ ಕೋಟೆಯ ಮೇಲೆ ದೃಷ್ಟಿಯನ್ನು ನಿಲ್ಲಿಸಿ ಬೇರಾವುದೇ ಮನದ ಕೋರಿಕೆಗಳನ್ನು ನೀಗಿ, ಚಿತ್ರ ದೀಪದಂಥ ಕಳೆಯನ್ನು ಅಂದರೆ ತೋರುವ ಆದರೆ ಇನ್ನೊಂದನ್ನು ಬೆಳಗದ, ಕಾಂತಿಯನ್ನು ದಾಟಿ, ಕಣ್ಣು ದೃಷ್ಟಿಯನ್ನು ನಿಲ್ಲಿಸಿ ನೋಡಬೇಕು. ಹೀಗೆ ನಾಸಿಕಾಗ್ರದಲ್ಲಿ ದೃಷ್ಟಿ ನಿಲ್ಲಿಸಿ, ಹೃದಯ ಕುಹರದಲ್ಲಿ ನೋಡಲು, ಮುಕ್ತಿಯನ್ನು

ಶಿವನು ಕರುಣಿಸುವನು. ಈ ಪದವಿಯನ್ನು ಅರಿತ ಯೋಗಿಯು ಪರಮಾತ್ಮನೇ ಸರಿ. ಮೊದಮೊದಲು ಅಭ್ಯಾಸಿಗೆ ದಾರಿ ತಿಳಿಯದಿರುವಾಗ, ಸಾಧಿಸಬೇಕಾದ ಲಕ್ಷ್ಯವು ತನಗೆ ಎಟುಕದಷ್ಟು ದೂರವೆನಿಸಬಹುದು. ಹೇಗೆ ದೇಶ ಬಂಧ ಹಾಗೂ ನ್ಯಾಸಗಳನ್ನು, ಅಭ್ಯಾಸ ಮಾಡಬೇಕೆಂಬುದನ್ನು ತಿಳಿಯುವವರೆಗೆ ಆತ್ಮಸಾಕ್ಷಾತ್ಕಾರವಾಗದು. ಅದುವರೆಗೆ ತಾಳ್ಮೆಯಿಂದ ನಾಸಿಕಾಗ್ರದಲ್ಲಿ ದೃಷ್ಟಿಯಿರಿಸಿ ಸಾಧನೆಯನ್ನು ಮುಂದುವರಿಸಬೇಕು.

ಮನದಲ್ಲಿ ಕಾಣಿಸುವ ವರ್ಣಗಳನ್ನೂ, ಕೇಳಿಸುವ ಧ್ವನಿಗಳನ್ನೂ ಚರ್ಚಿಸಿ, ಮೂಗು ತುದಿಯಲ್ಲಿ ಆಳವಾಗಿ ವೀಕ್ಷಿಸಬೇಕು. ಮತ್ತು ನೋಡುವ ದೃಕ್ ಆದ ತಾನೇ ಬ್ರಹ್ಮವೆಂದು ತಿಳಿದು, ಬ್ರಹ್ಮವೇ ಬ್ರಹ್ಮವನ್ನು ಅರಿಯುವುದೆಂದು ಪರಿಭಾವಿಸಿದರೆ ಮುಕ್ತಿ ಲಭ್ಯ. 'ಬ್ರಹ್ಮವಿದಃ ಬ್ರಹ್ಮೈವ ಭವತಿ', ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗುತ್ತಾನೆ.

ಯಾವುದೇ ವಿಕೃತಿ ಕಳೆಗಳಿಲ್ಲದೆ, ಭೃಕುಟಿಯಲ್ಲಿ ನೋಡಿ ವಿಹ್ವಲಗೊಳ್ಳದೆ ನಿಲಿಸಿದರೆ, ಕಳಂಕ ರಹಿತ ರೂಪವನ್ನು ಹೊಂದಿದರೆ ಮೋಕ್ಷವು ಘನವಾಗಿ ಇರುವುದು ಸತ್ಯವೇ ಸರಿ.

ಬ್ರಹ್ಮವೆಲ್ಲಿ ? ಎಂದು ಅನೇಕರು ನುಡಿಯುತ್ತಾರೆ. ಇವರೆಂಥ ಹುಚ್ಚರು ? ಬ್ರಹ್ಮವು ಎಲ್ಲರಲ್ಲಿಯೂ ಪರಿಪೂರ್ಣವಾಗಿಯೇ ಇದೆ. ಮೂರು ಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಹಿಂದಿನ ಮೂಲ ಪ್ರಕೃತಿ ಮಾತೆಯೊಂದಿಗೆ ಹೊಂದಿಕೆ ಮಾಡಿಕೊಂಡು, ಸತ್ ಮತ್ತು ಚಿತ್‌ಗಳೊಳಗಿನ ಸಾರವನ್ನು ಅರಿಯಬೇಕು.

ಅತ್ತಿತ್ತ ಪರ್ಯಟನ ಮಾಡಿ, ಅಲೆದಾಟವನ್ನು ನಿಲ್ಲಿಸಿ, ಯೋಗದ ದಾರಿ ಕಂಡುಕೊಂಡು ಪರಮವನ್ನು ಕೋರಿ ಪರಿಪೂರ್ಣತೆ ಹೊಂದಬೇಕು.

ಸನ್ಯಾಸಿಗಳ ವೇಷಗಳನ್ನು ಮುಖ್ಯವಾಗಿ ಆರು ವಿಧವಾಗಿ ಬಣ್ಣಿಸುತ್ತಾರೆ. ಅವುಗಳೆಂದರೆ ಕುಟೀಚಕ, ಬಹೂದಕ, ಹಂಸ, ಪರಮಹಂಸ, ತುರಿಯಾತೀತ ಮತ್ತು ಅವಧೂತ. ಈ ಆರು ವಿಧದ ಸನ್ಯಾಸಿಗಳಿಗೆ ವಿಭಿನ್ನ ವೇಷಭೂಷಣಗಳನ್ನು ಶಾಸ್ತ್ರಗಳಲ್ಲಿ ವಿಧಿಸಿದ್ದಾರೆ. ಈ ವೇಷ–ಭೂಷಣಗಳನ್ನು ಕಂಡು ಯಾರೂ ಭಯಪಡಬೇಕಿಲ್ಲ. ಇಲ್ಲವೆ ಇವು ಬಿರುದುಗಳೆಂದು ಆ ವೇಷಧಾರಿಗಳೂ ಭಾವಿಸಿ ಗರ್ವ ಪಡಬೇಕಿಲ್ಲ. ವಿರಕ್ತಿಯು ಸನ್ಯಾಸದ ಒರೆಗಲ್ಲೇ ಹೊರತು ವೇಷ–ಭೂಷಣಗಳಲ್ಲ. ಮತಭೇದ ಕಲ್ಪಿಸಿ ಜನರನ್ನು ಒಡೆದು ಆಳಬಯಸುವ ಹಲವರು ಶೈವ, ವೈಷ್ಣವ, ಶಾಕ್ತ, ಸೌರ, ಗಾಣಪತ್ಯ ಮತ್ತು ಕೌಮಾರ ಎಂಬ ಆರು ದೇವತಾಮೂರ್ತಿಗಳನ್ನು ಕಲ್ಪಿಸಿ, ಆರು ಮತಗಳನ್ನು ಪ್ರತಿಪಾದಿಸುತ್ತಾರೆ. ಆದರೆ ಸತ್ಯವೆಂದರೆ ಷಣ್ಮತಗಳಿಗೆಲ್ಲ ಒಬ್ಬನೇ ದೇವರೆಂದು ಏಕೆ ತಿಳಿಯಲೊಲ್ಲರೋ ಏನೋ ? ಎಂಬುದನ್ನು ನಾವು

ಕಾಣೆವು. 'ಏಕಂ ಸತ್ ವಿಪ್ರಾಃ ಬಹುಧಾ ವದಂತಿ', ಸತ್ ಏಕವಾಗಿದೆ. ವಿಪ್ರರು ಅನೇಕವಾಗಿ ಬಣ್ಣಿಸುತ್ತಾರೆ. ತಮ್ಮ ತಮ್ಮಲ್ಲಿ ಭೇದವಿದ್ದರೆ, ತತ್ತ್ವಕ್ಕಾವ ಭೇದವಿರಬಲ್ಲದು?

ಚಿತ್ಪರರು, ಯಾವ ಸ್ಥಿತ್ಯಂತರಗಳನ್ನೂ ಲೆಕ್ಕಿಸದೆ ಸೂರ್ಯನಂತೆ ನಡೆಯುತ್ತಾರೆ. ಮೂಲ ವಿದ್ಯೆ ಕುರಿತು ಮತ್ತು ಮುಖ್ಯ ತೇಜ ಕುರಿತು ಲಕ್ಷ್ಯವಿರಿಸಿದ ಅವರಿಗೆ ಕಾಲಕ್ಕನುಸಾರ ಬದಲಾಗುವ ಕರ್ಮಗಳ ಗೊಡವೆ ಇರದು. ಮನದಲ್ಲಿ ಆನಂದವನ್ನು ಅನುವು ಮೀರಿ ಹೊಂದುವ ನರನೇ ಪರಮನಲ್ಲವೇ ? 'ಆನಂದಂ ಬ್ರಹ್ಮ ಇತ್ಯಾಹುಃ', ಆನಂದವನ್ನೇ ಬ್ರಹ್ಮವೆನ್ನುತ್ತಾರೆ ಎಂಬ ಸೂತ್ರವಾಕ್ಯವು ಇದೆ. ಇದಕ್ಕೆ ಮನಸ್ಸು ನಿಲ್ಲಿಸಬೇಕು.

ಚಿನ್ಮಯವು ಸುಲಭ ಸಾಧ್ಯವಾಗಿ ಯಾರಿಗೂ ದಕ್ಕದು. ಆದರೆ, ಅದರ ದಾರಿಯಲ್ಲಿ ಸಾಗಿದರೆ ಅರಿವು ತನ್ನಲ್ಲಿಯೇ ತಾನು ಹೇರಿ ಮೇಲೆ ಬರುತ್ತದೆ. ಇದನ್ನು ಪುನರಪಿ ಕಂಡುಕೋ. ಬೋನಿನಲ್ಲಿ ಸಿಲುಕಿದ ಇಲಿಯು ಹೊರಗೆ ಹೋಗಲು ನೋಡುವಂತೆ, ಜ್ಞಾನ ಹೊಂದಿದ ಅರಿವು ಊರ್ಧ್ವಕ್ಕೆ ಚಲಿಸಿದಾಗ, ತನು ಭಾವವನ್ನು ಮರೆತು ಘನ ತತ್ತ್ವವನ್ನು ಹೊಂದು.

**೩೦೭೯ ತ್ರಿಪುಟಿ ನೋಡುತ, ಮೇಲಿಹ,**
**ಉಪಜಿಹ್ವೆಗೆ ಸರಿಗೊಳಿಸುತ, ಮನಸಿನ ಒಳಗೇ,**
**ತಪವಾಚರಿಸಲು ಭಕ್ತನು ;**
**ನಿಪುಣನೆ ಆಗಿ ಬೆಳಗೊಳಗೆ, ನಿರುತದಿ, ವೇಮಾ.**

**೩೦೮೦ ನಿಟಲ ದುರ್ಗದಲ್ಲಿ ಇರುವಂಥ ನಿಜವನರಿತು,**
**ಪಟುತೆ ಇರುವೆಡೆ ಮನ ನಿಲಿಸೆ ಪ್ರಬಲ ಯೋಗಿ ;**
**ಅಂಟಿ ಮುಟ್ಟುವನು ನಿರ್ಗುಣ ಆಂತು ಮನದಿ,**
**ಹೊರಗೆ ಬೀಳಲು ತಿಳಿಯುವುದು ರಹಸ್ಯ ವೇಮ.**

**೩೦೮೧ ಚೊಕ್ಕವಾದ ಪರವ ಚುರುಕಿನಿಂದ ನೋಡಿ,**
**ಮೂಗು ತುದಿಯ ಕುರಿತು ಮುದವ ಹೊಂದಿ,**
**ಬೇಸಿ ನೋಡಿದೊಡನೆ ಬಳಿಗೆ ಇರುವುದಷ್ಟೇ , ವಿಶ್ವ**

**೩೦೮೨ ನಾಸಿಕ ನಡುವೆ ತನ್ನ ನೋಡುವ ಯೋಗಿವರಗೆ,**
**ವರ್ಣ ಭೇದವಿಲ್ಲ ವಸುಧೆಯಲ್ಲಿ ;**
**ಕಾಶಿನಾಥನನ್ನು ಕಂಡುಕೊಳುವ ಯೋಗಿ ; ವಿಶ್ವ**

೩೦೮೩ ಬಿಗಿದ ದೃಷ್ಟಿ ಯೋಗ ಬಿಂಬದಲ್ಲಿ ಇರಿಸಿ,
ಮನದಲ್ಲಿ ಅರಿತು ಮಗ್ನನಹನು,
ಲಗ್ನ ಚಿತ್ತಕಂಟಿ ರಕ್ಷಿಸುತ ಇರಬೇಕು, ವಿಶ್ವ

೩೦೮೪ ಕರತಲಗಳನೆತ್ತಿ, ಕಾಲು ಅದುಮಿ ಹಿಡಿದು,
ಊರ್ಧ್ವ ದೃಷ್ಟಿಯಿಂದ ಒಪ್ಪ ನಿಲಿಸಿ,
ಸರ್ವವಾಗಿ ಹೊಳೆವುದು ಸಾಕು ; ಆಯು ಇಹುದು. ವಿಶ್ವ

೩೦೮೫ ಆತ್ಮ ತೇಜ ಮೂಡಿ ಅನುವಿನಲಿ ಶೋಧಿಸುತ,
ತೇಜ ಆತ್ಮದಲ್ಲಿ ತೇಟ ಪಡಿಸಿ,
ಗಗನ ಮಣ್ಣು ಮಧ್ಯೆ ಗಗನಕಂಟಿ ನೋಡಿ, ವಿಶ್ವ

೩೦೮೬ ನಿಜದ ಕಳೆಯ ಮೀರಿ ನಿತ್ಯನಾಗಬೇಕು,
ಮಾತಿನೊಳಗೆ ಮಾತು ಭದ್ರಪಡಿಸಿ,
ಬೇಡಿಕೊಳಲು ಮುಕ್ತಿ ಬೆನ್ನಿಗಂಟಿ ಇಹುದು. ವಿಶ್ವ

೩೦೮೭ ಸೂಚಿಕಾಗ್ರ ದೃಷ್ಟಿ ಸರಣಿಯಿಂ ಭ್ರೂ ಮಧ್ಯೆ,
ನೋಡಿ ನೋಡಿ ಮತ್ತೆ ನೋಡುತಿರಲು,
ಆತ್ಮದ ಬರುಹೋಗು, ಆಗಲೇ ತಿಳಿವುದು, ವಿಶ್ವ

೩೦೮೮ ಕಣ್ಣು ದೃಷ್ಟಿ ನಿಲಿಸಿ, ಕಾಂತಿಯನು ಗಮನಿಸಿ,
ಕಾಣಬೇಕು ಚಿತ್ರ ಕಳೆಯ ದಾಟಿ ;
ಕೋಟೆ ತುದಿಯ ಸೇರಿ ಕೋರ್ಕೆಗಳನು ನೀಗು, ವಿಶ್ವ

೩೦೮೯ ಮೂಗು ತುದಿಗೆ ದೃಷ್ಟಿ ಮುದದಿಂದಲಿ ನಿಲಿಸಿ,
ಹೃದಯದಲ್ಲಿ ನೋಡೆ ಹರಸುವ ಮುಕ್ತಿ,
ಪದವಿ ತಿಳಿದುಕೊಳಲು ಪರಮಾತ್ಮ, ಯೋಗಿಯು, ವಿಶ್ವ

೩೦೯೦ ನಯನವೆರಡರ ಮಧ್ಯೆ ನಿಲಿಸಿ ಅಲ್ಪ ಕಾಲ,
ಹುಬ್ಬು ಮೀರಿ ನೋಡಿ, ಹೊಂದಿಕೊಳ್ಳೊ,
ಕ್ರಮವನರಿತು ಒಳಗೆ ಕಾಂತಿಯನು ಹಿಡಿದುಕೊ ವಿಶ್ವ

— — — — — — — — — — — — — — — — — — — —

೩೯೯೧ ದಾರಿ ತಿಳಿಯದಿರಲು ; ದೂರವೆನಿಸುತಿಹುದು,
ತಾಣ ತಿಳಿಯದಿರಲು ಕಾಣಲಾರ,
ಕೋಟೆ ತುದಿಯ ಮೇಲೆ ನೀಟ ದೃಷ್ಟಿಯಿರಿಸು, ವಿಶ್ವ

೩೯೯೨ ನಿಯತ ವೃತ್ತಿ ಮೀರಿ ಹಣೆಯ ಕೋಟೆ ಸೇರಿ,
ಭಯವಿಲ್ಲದಿರುವವ ಬ್ರಹ್ಮವೇತ್ತ,
ಜಯವು ದೊರೆಯೆ, ಮುಕ್ತಿ ಸವಿ ನೋಡುತಿರುವನು, ವಿಶ್ವ

೩೯೯೩ ಸರಿಯ ತಪ್ಪಬೇಡ ಸೂಕ್ಷ್ಮ ತೇಜದಲ್ಲಿ,
ಕೋಟೆಯಂಚವೇರೆ, 'ವಾಟ' ವಾಯ್ತು,
ಮೀಂಟಿ ಜ್ಯೋತಿಗಂಟಿ ಮೀರಿಹುದೆ ಮುಕ್ತಿ, ವಿಶ್ವ

೩೯೯೪ ನಾಸಿಕದಲಿ ದೃಷ್ಟಿ ನಾಲ್ಕು ಜಾವ ನಿಲಿಸಿ,
ಕಾಶೀಶ್ವರ ಕೋರಿ ಕದಲದಿರುವ,
ಚೊಕ್ಕ ಯೋಗಿ ಕಂಡು ಸುತ್ತಿ ಮಣಿಯಬೇಕು, ವಿಶ್ವ

೩೯೯೫ ನಾಸಿಕಾಗ್ರದಲ್ಲಿ ನಯದೊಳು ಗುರಿ ನಿಲಿಸಿ
ಸರಿಗಂಡು ನೋಡಲು ಸೇರುತಿಹುದು,
ಕಾಶಿ ಕಂಚಿ ನೋಡೆ, ಕಣ್ಣು ದಣಿಸಲೇಕೆ ? ವಿಶ್ವ

೩೯೯೬ ಚೊಕ್ಕಟಾಗಿ ಮನದಿ ಚರ್ಚಿಸಿ ಕಾಣಬೇಕು,
ಮೂಗು ತುದಿಯ ಮೀರಿ ಮುದದಿ ನೋಡು,
ದೃಕ್ಕು ಬ್ರಹ್ಮವೆಂದು ತಾನು ನಮಿಸೆ ಮುಕ್ತಿ, ವಿಶ್ವ

೩೯೯೭ ವಿಕಲತ್ವವೇನುಯಿಲ್ಲದೆ,
ಭೃಕುಟಿಯಲಿ ನೋಡಿ ನಿಲ್ಲಿಸಿ, ವಿಹ್ವಲಗೊಳದೇ,
ಅಕಳಂಕ ರೂಪ ಹೊಂದಲು,
ನಿಕರವಹುದು ಮೋಕ್ಷವದುವೆ, ನಿಜವೈ, ವೇಮಾ !

೩೯೯೮ ಬ್ರಹ್ಮವೆಲ್ಲಿಯೆಂದು ಬಹು ಜನರು ನುಡಿದರು,
ವಿಚಿತ್ರ ಮತಿ ಜನರು ವಿಧವರಿಯದೆ,
ಬ್ರಹ್ಮವೆಲ್ಲರಲ್ಲಿ ಪರಿಪೂರ್ಣವುಂಟಲ ! ವಿಶ್ವ

೩೦೯೯ ಮೂರು ಮೂರ್ತಿಯೆನುವ ಮೂಲ ಭಾವವರಿತು,
ಮೂಲ ಇಪ್ಪನೊಡನೆ ಮುದ್ದಾಡುತ,
ಸತ್ತು ಚಿತ್ತಿನೊಳಗೆ ಸಾರ ತಿಳಿದುಕೊಳ್ಳಿ, ವಿಶ್ವ

೩೧೦೦ ಅರಿತು ಮರಳಿ ತಿರುಗಿ, ಏಕಾಂತವ ಕೋರಿ,
ಅಲೆತ ತೊರೆದು ಯೋಗ ಅಂಟಿ ದಾರಿ,
ಪರವ ಕೋರಿ ಮಿಂಚಿ, ಪರಿಪೂರ್ತಿ ಹೊಂದು, ವಿಶ್ವ

೩೧೦೧ ಆರು ವೇಷಗಳನ್ನು ಅರಿಯೆ ಅಚ್ಚರಿಯಲ !
ಆತ್ಮದಲ್ಲಿ ಧ್ಯಾನ ಅಮರ ಸತತ,
ಭೀಕರಲ್ಲ ಅಥವ ಬಿರುದಲ್ಲ ವಿರಕ್ತಿ, ವಿಶ್ವ

೩೧೦೨ ಶೈವ ವೈಷ್ಣವಾದಿ ಷಣ್ಮತಗಳೊಳಗೆಲ್ಲ,
ದೇವನೋರ್ವನೆಂದು ತಿಳಿಯರಲ್ಲ !
ತಮಗೆ ಭೇದವಿರಲು ತತ್ತ್ವಕ್ಕೆ ಭೇದವೇ ? ವಿಶ್ವ

೩೧೦೩ ಎಸೆವ ಜ್ಞಾನಿಯೆನಲು ಅರಿಯರು ಈ ನರರು,
ಸಾವಿರ ಪಥಗಳಲ್ಲಿ ಶ್ರೇಷ್ಠ ಅಜನು,
ಅವನಿ ಸೃಷ್ಟಿ ಕರ್ತ ; ಅವನಿಗಿಂತ ಗುರುವು
ಅತಿ ಶ್ರೇಷ್ಠನಿಹನು ಅರಿಯೆ, ವೇಮ.

೩೧೦೪ ಆದಿ ಮೂಲ ವಿದ್ಯೆ ಆನಂದಭರಿತವೈ,
ವೇದ ತುಲ್ಯವೆಂದು ಬಿಡದೆ ಹೆಣಗಿ,
ಪಾದ ಊರಿದವನು ಪಡೆವನು ಮೋಕ್ಷವನು, ವಿಶ್ವ

೩೧೦೫ ಮೂಲ ವಿದ್ಯೆಯೊಳಗೆ, ಮುಖ್ಯ ತೇಜದೊಳಗೆ,
ನಡೆವರು ಚಿತ್ಪರರು ನೇಸರಂತೆ,
ಕಾಲ ಕರ್ಮಗಳಿಗೆ ಕಾಲನೇ ಸಾಕ್ಷಿಯು, ವಿಶ್ವ

೩೧೦೬ ಅನುವು ಮೀರಿ ಮನದಿ ಆನಂದ ಹೊಂದುತ,
ನರನು ಪರನು ಇಹನು ನಯದಿ ಕಾಣು,
ಮನಸು ನಿಲಿಸದಿರಲು ಮತ್ತೆ ಮುಕ್ತಿ ಇಲ್ಲ, ವಿಶ್ವ

೩೧೦೭ ತಾಣ ತಿಳಿಯುವವನು ತಾಣ ಮುಟ್ಟುತಿಹನು,
ಯಾವುದೆ ವಿಧವಿರಲಿ ಎಲ್ಲೆ ಪಡೆವ ;
ಭಾವ ತಿಳಿಯದಿರಲು ಪರವ ತಿಳಿಯಬಹುದೆ ? ವಿಶ್ವ

೩೧೦೮ ಕನಲಿ ಸೋತು ನಡುಗಿ ಗುರಿಯ ಹಿಡಿತ ಬಿಡದೆ,
ಸ್ವಲ್ಪ ಬಲ ಸೇರಿಸಿ, ಚಿಂತೆ ಬಿಟ್ಟು,
ಉಳ್ಳವನೇ ಮುಕ್ತಿ ಉಳ್ಳವನಿಹ ಕಾಣು. ವಿಶ್ವ

೩೧೦೯ ಚೊಕ್ಕವಾಗಿ ಮನದಿ ಸಾಧಿಸಿ ಕಾಣಬೇಕು ;
ನಿಕ್ಕಿ ಕಂಡು ಅರಿವು ತಿಳಿವು ಮೀರಿ,
ಮೂಗು ತುದಿಯ ನೋಟ ಮುದದಿಂದ ನೋಡಿರೊ. ವಿಶ್ವ

೩೧೧೦ ಯಾರಿಗು ದಕ್ಕದ ಚಿನ್ಮಯ
ದಾರಿಗೆ ಹೊಂದುತಿಹ ಅರಿವು ತನ್ನೊಳು ತಾನೈ,
ಹೋರುತ ಮೇಲೆ ಬರುತಿಹನು,
ಬಾರಿಗೆ ಬಾರಿಗೆ ಸಮನಿಸಿ ನೋಡೆಲೊ ವೇಮಾ

೩೧೧೧ ತಾರಕದಿಂದ ನೋಡೆ ದಾರಿ ಬೇರೆ ಇಹುದು,
ಸಮದಿ ನೋಡಲಾಗ ಚೊಕ್ಕವಿಹುದು,
ಹುಚ್ಚನಾಗಿ ನೋಡೆ ಹೊಳೆವ ಜ್ಯೋತಿ ಕಾಣು, ವಿಶ್ವ

೩೧೧೨ ಬೋನಿನೊಳಿಹ ಇಲಿಯು ಪೋಗಲು ನೋಡುವಂತೆ,
ಜ್ಞಾನ ಹೊಂದಿದರಿವು ಚಲಿಸೆ ಮೇಲೆ
ಕಾಣ ; ದೇಹ ಮರೆತು, ಘನತತ್ತ್ವವೆನ್ನರೆ ? ವಿಶ್ವ

೩೧೧೩ ದೈವ ಘಟನೆಯಿರದೆ, ದೈವ ಸುಜ್ಞಾನವು,
ಅದೆಂತು ಬಹುದೆರಡು ಅರಿಯುವನಕ ?
ಅರಿವನರಿಯುವವನೆ ಅರಿವಿನೊಳು ಕಾಣುವನು, ವಿಶ್ವ

೩೧೧೪ ತಮವಳಿದು ಪುನರಪಿ, ತನುಗಳ ಮರೆಯುತ,
ಪರಮನಲ್ಲಿ ಮನಸು ಬಯಲುಗೊಳಿಸಿ,
ಅರಸುವಂಥ ಘನರು ಇರುವರೆಷ್ಟು ಮಂದಿ ? ವಿಶ್ವ

●

# ೧೦. ಪರಮ ಹಂಸ ಪಟ್ಟ

**ಪರಮ ಹಂಸ ಪಟ್ಟ:**

ಯೌಗಿಕ ಭಾಷೆಯಲ್ಲಿ ಜೀವನಿಗೆ ಹಂಸವೆನ್ನುತ್ತಾರೆ. 'ಹಂಸಃ' (ನಾನೇ ಅವನು) ಎಂಬ 'ಸೋಹಂ' ಮಂತ್ರದಿಂದ ಜೀವನು ಪರಮನಾಗುವುದರಿಂದ ಹಾಗೆ ಹೇಳುವುದುಂಟು. ಇನ್ನು ಪರಮಹಂಸವೆಂದರೆ ಪರದಲ್ಲಿಯೇ ಸದಾ ವಿಹರಿಸುವ ಜೀವ. ಆರು ಶಾಸ್ತ್ರ–ಸಮ್ಮತ ಸನ್ಯಾಸ ಪ್ರಕಾರಗಳಲ್ಲಿ ಪರಮಹಂಸವೂ ಒಂದು ಪ್ರಕಾರದ್ದು. ಇಲ್ಲಿ ಕರ್ಮ ಆಶ್ರಮಗಳ ಗೊಡವೆಯಿಲ್ಲ.

ತತ್ತ್ವವು ಅಚಲವಾಗಿದೆ. ಅದನ್ನು ಅನುಭವಿಸಬಹುದು. ಆದರೆ ಸೂಕ್ಷ್ಮಮತಿಗೆ ಮಾತ್ರ ತೋರುವ ಈ ತತ್ತ್ವವನ್ನು ಸಮೀಕ್ಷಿಸಿ ಹೇಳಲಾಗದು. ಅದು ಸೂಕ್ಷ್ಮ ಮನಕ್ಕೆ ತೋಚುತ್ತದೆ. ಆದರೆ ಅದನ್ನು ಅನ್ಯರಿಗೆ ತಿಳಿಸುವುದೆಂತು?

ಪರಮಹಂಸರೆಂದು ಅನೇಕರು ಹೇಳಿಕೊಳ್ಳುತ್ತಾರೆ. ಆದರೆ ಅವರು ಕಂಡ ಪರಮನಲ್ಲಿ ಏನಾದರೂ ಪ್ರಬಲವಾದುದು ಉಂಟೇ ? ಪರಮನು ಎಲ್ಲೆಡೆಯಲ್ಲಿ ಏಕವಾಗಿ ಪರಿಪೂರ್ಣವಾಗಿ ಉಂಟಲ್ಲವೇ ?

ಪರಮಹಂಸನೆಂದು ಹೇಳಿಕೊಳ್ಳುತ್ತ ಕೆಲವರು ಪರಧನಕ್ಕೆ ಆಶಿಸುವರು. ಅವರು ಪರಮಹಂಸರಲ್ಲ ಪ್ರತಿಯಾಗಿ ಪರಹಿಂಸಕರಷ್ಟೇ.

ಬ್ರಹ್ಮವು ನಾಲ್ಕು ಬೀದಿಗಳ ಮಧ್ಯದಲ್ಲಿರುವ ಬ್ರಹ್ಮರಂಧ್ರದ ಮೇಲಿದೆ. ಅದನ್ನು ಗುರುಚಕ್ರ ಮೂಲಕ ಹೊಂದಿ ಅವನ್ನು ಸಾಧಿಸುವವನಾಗು.

ವಿಶ್ವದಲ್ಲಿ ಇಹ–ಪರಗಳ ವಿವರವನ್ನು ತಿಳಿಯದಿರೆ ಪರಮಹಂಸನೆಂಬ ಪಟ್ಟ ಬರುವುದೆಂತು ? ಅದಕ್ಕಾಗಿ ಮನದಲ್ಲಿ ನಿಷ್ಠೆ ಹೊಂದಿ ಸಾಗಬೇಕು.

ಈ ಪರಮವು ಭಾವ ಮೂಲಕ ಹೊಂದಬೇಕಾದ ಅನುಭಾವಿಕವಾಗಿ ವೇದ್ಯವಾಗುವುದು. ಹಾಗಾಗಿ, ಅದು 'ಇಲ್ಲ, ಇಲ್ಲ' ಎನ್ನುವವನಿಗೆ ಅದು ಇಲ್ಲವಾಗಿಯೇ ಉಳಿಯುವುದು. ಬೇರೆಯವರು ತಮ್ಮ ಅನುಭಾವವನ್ನು ವಿವರಿಸಿದಾಗ, 'ಅಲ್ಲ, ಅಲ್ಲ' ಎಂದು ವಾದಿಸಿದರೆ, ಅದು ಅಲ್ಲವೆನಿಸುತ್ತದೆ. ಪ್ರತಿಯಾಗಿ ಗ್ರಹಿಸಿ, ಸೇರುವೆ ಸೇರುವೆ ಎಂದರೆ ಸೇರಿ ಅನುಭವಿಸುತ್ತಾನೆ.

ಕ್ಷಾಮವೇ ಬರಲಿ, ಕಷ್ಟ–ಕಾರ್ಪಣ್ಯಗಳೇ ಒದಗಲಿ, ಜೀವರಾಶಿಗಳಿಗೆ ಆಯುಸ್ಸು ಪೂರ್ವ ನಿಗದಿತವಿರುತ್ತದೆ. ಅಂದ ಮೇಲೆ ವಿಧಿಯನ್ನು ಇಲ್ಲವೆನ್ನುವುದೇಕೆ? ದೀನರಾಗಿ ಬೇಡುವುದೇಕೆ ? ಆದರೆ ಪರಮಾತ್ಮನು ದಯಾಳು. ಅವನ ಜ್ಞಾನವಿದ್ದರೆ ಸಾಕು. ದೀನನಾಗಿ ಬೇಡಬೇಕಿಲ್ಲ. ಶಿವನೇ ಕರ್ತನಾಗಿದ್ದಾನೆ. ಅವನೇ ಪಾಲಿಸುವ ಕರ್ತನಾಗಿದ್ದಾನೆ. ಅವನಿಗೆ ನಿನ್ನನ್ನು ನೀನು ಅರ್ಪಿಸಿಕೊಂಡುಬಿಡು. ಇಂದೇ ಆಗಲಿ, ಎಂದೇ ಆಗಲಿ, ಚಿಂತಿಸುವ ಮನವನ್ನು ನಿಲ್ಲಿಸುವವನೇ ಮತಿವಂತನು.

— — — — — — — — — — — — — — — — — — — — — —

೩೧೧೫ ಅಚಲ ತತ್ತ್ವವೆಲ್ಲ ಅನುಭವ ವೇದ್ಯವದು,
ಸಮೀಕ್ಷಿಸಿ ಹೇಳರು ಸೂಕ್ಷ್ಮಮತಿಯ,
ಮನಕೆ ತೋಚುವುದು, ಮರ್ಮ ತಿಳಿಸಲೆಂತು ? ವಿಶ್ವ

೩೧೧೬ ಪರಮ ಪರಮವೆಂದು ಪೇಳುತಿಹರೆಲ್ಲರು,
ಪರಮನಲ್ಲಿ ಏನು ಪ್ರಬಲವುಂಟು ?
ಪರಮನಲ್ಲಿ ಇಲ್ಲಿ ಪರಿಪೂರ್ಣನಲ್ಲವೇ ? ವಿಶ್ವ

೩೧೧೭ ಪರಮ ಹಂಸನೆಂದು ಭೂಮಿ ಅಲೆಯುತಿದ್ದು,
ಪರ ಧನಕ್ಕೆ ಆಶೆ ಪಡುವ ಅವನು,
ಪರಮಹಂಸನಲ್ಲ ; ಪರಹಿಂಸಕನವನು. ವಿಶ್ವ

೩೧೧೮ ಗುರುವೆನ್ನಲು ಮೊದಲಂತ್ಯವು,
ಗುರು ಶಿಷ್ಯರೆನಲು ಕೊಂಬೆಗಳೆಲ್ಲ ಕಾಣಾ,
ಗುರುವನು ಶೋಧಿಸಿ ಕಾಣಲು,
ಧರೆಯೊಳಗಿಹ ಮನುಜರೆಲ್ಲರರಿವರು ವೇಮಾ.

೩೧೧೯ ನಾಲಕು ಬೀದಿಯ ಮಧ್ಯದಿ,
ಮೇಲಕೆ ಬ್ರಹ್ಮವು ಇದೆ ಜಾಗ್ರತೆಯೊಡಗೂಡಲ್,
ಮೇಳವಿಸುತ ಗುರು ಮೂಲಕ,
ಆಲಿಸು, ಸಾಧ್ಯವ ಹೊಂದುವವನಾಗು, ವೇಮಾ !

೩೧೨೦ ವಿಶ್ವದಲ್ಲಿ ಪರದ ವಿವರವನು ಅರಿಯದೆ,
ಪರಮ ಹಂಸನೆಂಬ ಪಟ್ಟಬಹುದೆ ?
ಮಾನಸದಲಿ ನಿಷ್ಠೆ ಮತ್ತೆ ಹೊಂದಬೇಕು, ವಿಶ್ವ

೩೧೨೧ ಇಲ್ಲ ಇಲ್ಲವೆನಲು ಇಲ್ಲವೇನು ಇಲ್ಲ,
ಅಲ್ಲ ಅಲ್ಲ ಎನಲು ಅಲ್ಲವಲ್ಲ,
ಸೇರು ಸೇರು ಎನಲು ಸೇರಿ ಸೇರುತಿಹರು, ವಿಶ್ವ

೩೧೨೨ ಕ್ಷಾಮವು ; ಕೀಟಲು, ಕಠಿಣ ಕಷ್ಟವು, ರೋಗಗಳೆಲ್ಲ ಬಂದರೂ,
ಭೂಮನ ಜೀವರಾಶಿಗಳಿಗಾಯುವು ಗಟ್ಟಿಗೊಂಡಿರುತಿರಲ್,
ತಾಮಸಿ ದೈನ್ಯವೇಕೆ ? ಪ್ರತಿ ಮಾತಿಗೆ ಇಲ್ಲೆನಲೇಕೆ ಮೂಢರೇ !
ಸೌಮ್ಯ ದಯಾಳುವಿರುವ ಪರಮಾತ್ಮನ ಜ್ಞಾನವು, ಇರದೆ ವೇಮನಾಃ

**೩೧೨೩ ಇಂದಿನ ದಿನ ಮತ್ತೆ ಎಂದಾದರಾಗಲಿ,**
**ಮನಸು ನಿಲಿಸುವವನು ಮತಿವಂತನು,**
**ಶಿವನೆ ಭಕ್ತ ಕರ್ತ, ಚಿಂತಿಸುವನು ತಾನು, ವಿಶ್ವ**

●

# ೧೧. ಫಲ

**ಯೋಗ ಫಲ:**

ಯೋಗ ಸಾಧನವು ಫಲ ನೀಡದಿರದು. ಯೋಗಿಗಳ ಅನುಭವವನ್ನು ಕೇಳಿ ತಿಳಿಯಬಹುದು' ಹೇಳಿ ತಿಳಿಸಬಹುದು, ಕಂಡು ಅನುಭವಿಸಬಹುದು. ಇದೆಲ್ಲವೂ ವಿಚಿತ್ರವೆನಿಸುತ್ತದೆ. ಆದರೆ ನಿನ್ನೆ ಮೊನ್ನೆ ಕಂಡದ್ದು ಈಗ ಇಲ್ಲವಾಗಬಹುದು. ಆದ್ದರಿಂದ ಕಾಣುವುದನ್ನು ನಂಬಿ ಕೂಡಬೇಡ. ಇಂದ್ರಿಯ ವ್ಯಾಪಾರಕ್ಕಿರುವ ಇತಿಮಿತಿಗಳನ್ನು ಅರಿಯಬೇಕು. ಅಖಿಲವನ್ನು ತುಂಬಿಕೊಂಡಿರುವ 'ಬ್ರಹ್ಮವನ್ನು' ಅರಿಯಬೇಕು. 'ಸರ್ವಂ ಬ್ರಹ್ಮಮಯಂ ಜಗತ್' ಎಂಬುದು ಅನುಭವ ವೇದ್ಯವಾಗಬೇಕು.

ಸತ್ಯವು ಗೌಪ್ಯವಾಗಿದೆ, ಶಾಶ್ವತವಾಗಿದೆ ಎನ್ನುತ್ತಾರೆ. ನಿತ್ಯ ಭೋಗವು ನಿತ್ಯ ಸೌಖ್ಯವು ಎಂಬುದು ನಿಜ. ಆದರೆ ನಿರ್ಗುಣ ಮಾರ್ಗವೊಂದಿದೆ. ಅಲ್ಲಿ ಪರಮಾನಂದದಲ್ಲಿ ಮತ್ತನಾದವನು ಪರಿಪೂರ್ಣ ಚಿನ್ಮಯದ ಮರ್ಮವನ್ನು ತಿಳಿಯುತ್ತಾನೆ. ಅಲ್ಲಿ ತಲುಪಿ, ಹತ್ತಿ ಹೊಂದಿ, ಮನನ ಜ್ಞಪ್ತಿಯಲ್ಲಿ ಹೆಣಗಬೇಕು.

ಹೀಗೆ ಯತ್ನಿಸುತ್ತ ಹಿಡಿದ ಪಟ್ಟನ್ನು ಬಿಡದೆ, ಒಳಗುಟ್ಟನ್ನು ಗಮನಿಸುತ್ತ ಪರಮವನ್ನು ಮುಟ್ಟಲು ಅರಿವು ಮೂಲವಾಗಿದೆ. ಬಟ್ಟಬಯಲಲ್ಲಿ ಪರೀಕ್ಷಿಸಿದಾಗ ಏನನ್ನು ಅರಿಯಬಹುದು ? ತನ್ನನ್ನು ತಾನೇ ?

ಮರದ ಕೊರಡುಗಳನ್ನು ಜೋರಿನಿಂದ ಘರ್ಷಿಸಿದರೆ ಬೆಂಕಿ ಹುಟ್ಟುತ್ತದೆ. ಅದೇ ರೀತಿ ಮೊಸರನ್ನು ಕಡೆದು ಕಡೆದು ಬೆಣ್ಣೆಯಾಗಿ, ಮತ್ತಷ್ಟು ಕಾಯಿಸಿ ಶೋಧಿಸಿದರೆ ತುಪ್ಪವಾಗುತ್ತದೆ. ಆ ರೀತಿ ಈ ದೇಹವನ್ನು ಸವೆಸಿ ಸಾಧನೆ ಮಾಡಿದರೆ ತತ್ತ್ವವನ್ನು ಕಾಣಬಹುದು.

ವಿಶಾಲ ವಿಶ್ವ ರೂಪವನ್ನು ಮನದಲ್ಲಿ ವೀಕ್ಷಿಸುತ್ತ ಅತಿ ಸೂಕ್ಷ್ಮವಾದುದನ್ನು ಬುದ್ಧಿಯಿಂದ ಗ್ರಹಿಸಿದ ಸಜ್ಜನನು ಸ್ವಸ್ವರೂಪವನ್ನು ಕಾಣುತ್ತಾನೆ. ಈ ಅಚಲ ಸ್ವರೂಪವನ್ನು ಹೊಂದಿ ಯತ್ನ ಪಡದೆ ವಿಸ್ತಾರಗೊಳ್ಳುವವನು ಫಲ ಪಡೆದು ಸ್ತಬ್ಧವಾಗಿರುವ ಚಿನ್ಮಯಾಕಾರನೇ ಆಗಿದ್ದಾನೆ.

ವಿಶ್ವ ಗ್ರಹಿಕೆಗಿಂತ ಮುನ್ನ ವಿಶ್ವ ಭಾವ ಹೊಂದಬೇಕು. ಇಲ್ಲಿ ಸಂಧಿಸಬೇಕಾದ ಕ್ಷೇತ್ರವು ಪಕ್ವವಾಗಿರುತ್ತದೆ. ಕ್ಷೇತ್ರ ಭಾವವನ್ನು ಅರಿತರೆ ಬಟ್ಟ ಬಯಲೇ ಫಲವಾಗಿ ಲಭಿಸುತ್ತದೆ.

**೩೧೨೪ ಕೇಳಿ, ಹೇಳಿ, ಕಂಡು ಕಡು ವಿಚಿತ್ರಾಯ್ತು,**
**ನಿನ್ನೆ ಮೊನ್ನೆ ಕಂಡುದಿನ್ನು ಇಲ್ಲ,**
**ಅಖಿಲ ತುಂಬಿ ಇರುವ 'ಅವನ' ಹೊಂದಬೇಕು, ವಿಶ್ವ**

**೩೧೨೫ ಪಟ್ಟು ಬಿಡದೆ ಒಳಗುಟ್ಟನೇ ಗಮನಿಸುತ,**
**ಮುಟ್ಟಲದನೆ, ಅರಿವು ಮೂಲವಹುದು,**
**ಬಟ್ಟ ಬಯಲಿನಲ್ಲಿ ಪರೀಕ್ಷಿಸಿ ಅರಿವುದೇನು ? ವಿಶ್ವ**

**೩೧೨೬ ಸವೆ ಸವೆದು ಜನಿಸಿತು, ತರುವಿನಲ್ಲಿ ಅನಲ,**
**ಸವೆ ಸವೆದು ಜನಿಸಿತು, ಮೊಸರು–ತುಪ್ಪ,**
**ಸವೆ ಸವೆದು ಜನಿಸಿತು, ತನುವಿನಲ್ಲಿ ತತ್ತ್ವ, ವಿಶ್ವ**

**೩೧೨೭ ವಿಶ್ವರೂಪವ ಮನದೊಳಗೆ ವೀಕ್ಷಿಸುತ್ತ,**
**ಪ್ರಸ್ಥವನೊಪ್ಪವಹ ಬುದ್ಧಿಯಲಿ ಹೊಂದಿ ಹಿಡಿದು,**
**ಸ್ವಸ್ವರೂಪವ ಕಾಣುತ ಸಜ್ಜನನಿಹ, ವಿಶ್ವ**

**೩೧೨೮ ಆಂತು ಆಂತದಂಥ ಅಚಲ ಸ್ವರೂಪವನು,**
**ಹೊಂದಿ ಪಡದೆ ಯತ್ನ, ಹಬ್ಬುವವನು,**
**ಸಿಕ್ಕು ಸ್ವಬ್ಧವಿಪ್ಪ ಚಿನ್ಮಯಾಕಾರನು, ವಿಶ್ವ**

**೩೧೨೯ ವಿಶ್ವ ಮೂಲದಲ್ಲಿ ವಿಶ್ವಭಾವ ಹೊಂದಿ,**
**ಪಕ್ವವುಂಟು ಕ್ಷೇತ್ರಃ ಬಟ್ಟ ಬಯಲು,**
**ಫಲವು ಎಂಬ, ಕ್ಷೇತ್ರ ಭಾವ ತಿಳಿಯಿರಯ್ಯ, ವಿಶ್ವ**

●●●

# ೧೯. ಲಯ ಯೋಗ

## ನಾದಲಯ ಯೋಗ

**ಪಂಚವು ಅಕ್ಷಯ ಬಿಂದುವು**
**ಪಂಚಾಕ್ಷರಿ ನಾದವೆಂದು, ಪರಮ ಮುನೀಂದ್ರರ್,**
**ಕೊಂಚವದನೆ ಸಲೆ ತಿಳಿದೊಡೆ,**
**ಕಿಂಚಿದೊಳಿತು ಕಾಣೆ, ನಮಿಪ, ಮಹಿಯಲಿ ವೇಮಾ !**

●

## ನಾದ ಲಯ ಯೋಗ

ನಾದವೆಂದರೆ ಧ್ವನಿ. ಬ್ರಹ್ಮದಲ್ಲಿ ಸತ್ಸಂಕಲ್ಪವು ಮೂಡಿದರೆ, ಉದಿಸುವ ಸ್ಪಂದನವೇ ಓಂ. ನಾದಾನುಸಂಧಾನದಿಂದ ಜಗವೆಲ್ಲ ನಾದಮಯವಾಗುವದು. ದೇಹದಲ್ಲಿ ನಾದ ತುಂಬಲು, ಪರವಶದಿಂದ ಪರಮಾನಂದದಲ್ಲಿ ತೂಗಾಡಿ, ತನ್ನನ್ನು ತಾನು ಮರೆಯುವುದೇ ನಾದ ಲಯ ಯೋಗ. ಕಾಮ, ಕ್ರೋಧ, ಸಪ್ತವ್ಯಸನಗಳು ಲಯಿಸುವುದರಿಂದ ಈ ಯೋಗಕ್ಕೆ ಲಯಯೋಗವೆನ್ನುತ್ತಾರೆ. ಎಲ್ಲವನ್ನು ಲಯ ಮಾಡುವ ಸತ್ವವು ನಾದಾನುಸಂಧಾನದಲ್ಲಿದೆ.

ಸ್ವ–ಸ್ವರೂಪವು 'ಪ್ರಜ್ಞಾನಂ, ಅನಂತಂ, ಆನಂದಂ' ಆಗಿದೆ. ಅದು ಜ್ಞಾನದ ಬುಗ್ಗೆ, ಅರಿವಿನ ಸಾಗರ. ಸೃಷ್ಟಿಯ ಕಾಲಕ್ಕೆ ಗುಣಬಂಧನದಿಂದ ಅರಿವು ಹ್ರಸ್ವವಾಗುತ್ತ ಸತ್ತ್ವಗುಣ ಪ್ರಭಾವದಿಂದ ಪಾದವಾಗಿ, ರಜೋಗುಣ ಪ್ರಭಾವದಿಂದ ಕಳೆಯಾಗಿ, ತಮೋಗುಣ ಪ್ರಭಾವದಿಂದ ಬಿಂದುವಾಗಿ ಪರಿಣಮಿಸುತ್ತದೆ.

ಲಯಯೋಗಿಯು ಬಿಂದುವನ್ನು ನಾದವಾಗಿ, ನಾದವನ್ನು ಬಿಂದುವಾಗಿ ಮಾಡುತ್ತ ಭೂಮಮನದ ತೂಗುಯ್ಯಾಲೆಯಲ್ಲಿದ್ದು ಕೊನೆಗೆ ನಾದ ಬಿಂದುಗಳೆರಡನ್ನೂ ನಾದವಾಗಿ ಮಾಡುತ್ತಾನೆ. ಬಿಂದುವಿನಲ್ಲಿಯ ನಾದವನ್ನು ಭೇದಿಸಿ ಅರಿಯುತ್ತಾನೆ.

ಮಂತ್ರಾಕ್ಷರಗಳನ್ನು ಕಣ್ಣಿನ ಕಳೆಯಲ್ಲಿ ಮೇಳವಿಸಿ ಅಂದವಾದ ರವವನ್ನು ಅನುಭವಿಸಿದಾಗ ಮಂತ್ರಚೈತನ್ಯವುಂಟಾಗುತ್ತದೆ. ಅಲ್ಲಿ ಮನವು ಲಯಿಸಿದಾಗ, ಅವನಿಗೆ ಮಂತ್ರಾಕ್ಷರಗಳೇ ಮುಕ್ತಿದಾಯಿಯಾಗುತ್ತವೆ.

ಪಂಚ ಅಕ್ಷಯ ಬಿಂದುಗಳನ್ನು ಪಂಚಾಕ್ಷರಿ ಪಾದವೆಂದು ಮುನೀಂದ್ರರು ಕರೆದಿದ್ದಾರೆ. ಅದನ್ನು ಸ್ವಲ್ಪ ಅರಿತು ಮನಸಾ ಬಾಗಿ ಒಪ್ಪಬೇಕು.

— — — — — — — — — — — — — — — — — — — — — —

ಅಂಚೆ ಎಂದರೆ ಹಂಸ, 'ಹಂ ಸಃ' ಹಂ ಸ' ಇದರ ಅರ್ಥವೇ 'ಸೋಹಂ'. ಇದರಲ್ಲಿ ವ್ಯಂಜನಗಳನ್ನು ಲೋಪ ಮಾಡಿದರೆ ಓಂ ಆಗುತ್ತದೆ. ಇದುವೇ ಘನಾಕ್ಷರ ಬಿಂದುವಾಗಿದೆ. ಪಂಚಾಕ್ಷರಗಳ ನಾದದೊಂದಿಗೆ ಓಂಕಾರವನ್ನು ಮೇಳಿವಿಸಿದಾಗ ಪಂಚಾಕ್ಷರ ನಾದವೆಂದು ಮುನಿಗಳು ಬಣ್ಣಿಸುತ್ತಾರೆ. ಇದರ ಮೀರಿದ ಅಭ್ಯಾಸದಿಂದ ಮಹಿಮೆ ಉದಿಸಿ, ಉನ್ನತ ಪಟ್ಟವೇರುತ್ತಾನೆ.

ಮಂತ್ರ ಜಪಕ್ಕಾಗಿ ಅಡವಿ ಸೇರಬೇಕಾಗಿಲ್ಲ, ಮಣಿ ತಿರುಗಿಸಬೇಕಾಗಿಲ್ಲ. ನಮಃ ಶಿವಾಯ ಪಂಚಾಕ್ಷರಿಯನ್ನಾಗಲಿ 'ಶ್ರೀ ರಾಮ ಜಯರಾಮ' ಎಂಬ, ಸಪ್ತಾಕ್ಷರಿಯನ್ನಾಗಲಿ ಪಠಿಸಿ ಮಂತ್ರ ಚೈತನ್ಯ ಮೂಲಕ ನಾದವನ್ನು ಅನುಭವಿಸಬೇಕು. ಇದನ್ನು ಎಲ್ಲೆಡೆ ಅನುಭವಿಸಬಹುದು. ಇದುವೇ ಬ್ರಹ್ಮಾನುಭೂತಿಯಾಗಿದೆ.

ಪ್ರಣವವನ್ನು ಕೈದೀಪ ಮಾಡಿಕೊಂಡು ಕತ್ತಲು ಮನೆಯಂತಿರುವ ಹೃದಯ ಕುಹರವನ್ನು ಸೇರು. ಅಲ್ಲಿ ಪ್ರಣವ ರವವು ಕೈದೀಪದಂತೆ, ಕೇಳಿಬರುತ್ತದೆ. ಆ ಜಾಡನ್ನೇ ಹಿಡಿದು ಮುಂದುವರಿ.

ನಾದವೇ ಬ್ರಹ್ಮವೆಂದು ವೇದವನ್ನು ನಾದಾನುಸಂಧಾನದ ಸಾಧನವಾಗಿ ಓದಬಹುದು. ಆದರೆ ನಾದಂಗಳಿರದ ಬಯಲಲ್ಲಿ, ಅಂದರೆ ಸತ್ತ್ವ.

ನಾಡಿನಲ್ಲೆಲ್ಲ ತಂತ್ರವಾದವು ದಟ್ಟವಾಗಿ ಹಬ್ಬಿದೆ. ಆದರೆ ಮಂತ್ರ–ಚೈತನ್ಯವನ್ನು ಕುದುರಿಸಿ ಮಂತ್ರ ಮಹಿಮೆಯನ್ನು ಸಾಧಿಸುವವರು ತೀರ ವಿರಳ. ಇನ್ನು ಯಂತ್ರವಾದಿಯಂತೂ ಏನೇನೋ ರೇಖಾಚಿತ್ರ ಬರೆದು ಬೊಂಬೆಗಳನ್ನು ಬಳಸುವವನಾಗಿದ್ದಾನೆ. ಮಂತ್ರ ತಂತ್ರದಲ್ಲಿ ಸೇರಿಕೊಂಡು ಬಹು ಜನರು ಮರುಳಾಗಿದ್ದಾರೆ. ವೇದ ವಿದ್ಯೆಯ ಘನವಾದ ಯೋಗ ಪಥವದಲ್ಲ, ನಾದವು ಕೇಳತೊಡಗಿದೆ. ಪೂರ್ಣ ಪರಿಣಮಿಸುತ್ತಾನೆ.

ಮನವನ್ನು ಅರಿತು, ನಿಗ್ರಹಿಸಿ, ಏಕಾಂತದಲ್ಲಿ ಬೆರೆಸಬೇಕು. ಬರೀ ಭಾವಾವೇಶಕ್ಕೊಳಗಾಗಬೇಡ. ಜನನ–ಮರಣ, ಪಾಲನ–ಪೋಷಣೆಗಳ ಭಯದಿಂದ ಮುಕ್ತನಾದವನು ಮಾತ್ರ ಬಯಲನ್ನು ಸೇರುತ್ತಾನೆ.

ಲಯ ಯೋಗ ಸಾಧಕನು, ಛಿಣಿ, ಛಿಣಿ, ಛಿಣಿ, ಝುಣ, ತಾಳು, ಮೃದುಂಗ ವೀಣೆ, ಶಂಖ, ಘಂಟೆ, ಭೇರಿ ಮತ್ತು ಮೇಘ ಎಂಬೀ ದಶವಿದ ನಾದಗಳನ್ನು ಅನಾಹತ ಗೃಹದಲ್ಲಿ ಕೇಳುವನು. ಭೇದರಹಿತನಾಗಿ ಊರ್ಧ್ವಗಾಮಿಯಾಗಿ, 'ಸೋಹಂ' ಭಾವಯುಕ್ತನಾಗಿ ಮನದಲ್ಲಿ ಧ್ಯಾನಿಸುತ್ತಾನೆ. ಹಲವಾರು ಯೋಗಿಗಳು ಆತ್ಮದಲ್ಲಿ ನಾದವನ್ನು ಕೇಳುವ ಹಂತ ತಲುಪಿದರೂ ಅವರು ನಿಮ್ನ ಚಕ್ರಗಳಲ್ಲಿಯೇ ಮನಸ್ಸು ಇದ್ದುದರಿಂದ ಹಲವಾರು ಆಶೆಗಳಿಗೆ ಒಳಗಾಗುತ್ತಾರೆ. ಇದನ್ನು ಬಿಟ್ಟು ಆತ್ಮದ ಕೆಳಗೇ ಅಂಟಿಕೊಳ್ಳಬೇಕು.

ಹೃದಯಾಕಾರದಲ್ಲಿ ಸಂಕಲ್ಪಾದಿ ಅಡಗಿ ಶೂನ್ಯವಿರುತ್ತದೆ. ಅಲ್ಲಿ ಶಬ್ದದ ಜನನವಾಗುತ್ತದೆ. ಶಬ್ಧ ಮಧ್ಯೆ ನೋಡಿದರೆ, ಶಬ್ಧರಹಿತವಾಗುತ್ತದೆ. ಅದೇ ಬ್ರಾಹ್ಮೀಭೂತ ಸ್ಥಿತಿ.

ನಾಯಿ ಆಗೀಗ ಕೂಗುವುದು ರೂಢಿ. ಆದರೆ ಯಾವಾಗ ಕಳ್ಳರು ಬಂದ ಸದ್ದು ತಿಳಿಯುವುದೋ ಆಗ ಅದು ನರಿಯಂತೆ ಜಪ್ಪಿಸಿ, ಕೂಗದೆ ನೆಗೆಯುತ್ತದೆ. ಅದೇ ರೀತಿ ಹೃದಯದಲ್ಲಿ ನಾದವು ಒಮ್ಮಿಂದೊಮ್ಮೆ ಹುಟ್ಟುತ್ತದೆ. ಯೋಗಿಯು ಹೃದಯದಲ್ಲಿ ಆನಂದವನ್ನು ಹೊಂದುವ ಗುರಿ ಇರಿಸಿಕೊಂಡಾಗ ಸದ್ ಅಸದ್‌ಗಳನ್ನು ವಿಂಗಡಿಸಿ ಅರಿಯುವ ವಿವೇಕಿಯಾಗುತ್ತಾನೆ. ಆಮೇಲೆ ನಾದ ಕೇಳಿ ಆನಂದಿಸುತ್ತಾನೆ. ಮುಂದೆ ಎಲ್ಲ ಭ್ರಮೆಗಳಿಂದ ದೂರವಾಗುತ್ತಾನೆ. ಗುಣವು ಇಲ್ಲವಾದಲ್ಲಿ ಪೂರ್ಣಪದವಿಯಿರದು, ಆದರೆ ಸಾಧಕನು, ಸಿದ್ಧಿಯ ಪರ್ಯಂತ ನಾದವನ್ನು ಅರಳಿಸುತ್ತ ನಾದವೇ ತನುವಿನಲ್ಲಿ ತುಂಬಿ ತುಳುಕಿ, ಅನನ್ಯ ಸ್ಥಿತಿಯನ್ನು ಹೊಂದಬೇಕು. ಹೀಗಾದರೆ ಹರಿಯುವ ಕಾಲುವೆಯಂತೆ ನಾದವು ನಿರಂತರ ಕೇಳಬರುವುದು.

ಹೀಗೆ ಕೇಳಿ ಬರುವ ಸ್ವರಗಳನ್ನು ಏಳು ಭಾಗ ಮಾಡಿದರೆ, ಷಡ್ಜ, ಋಷಭ, ಗಾಂಧಾರ, ಮಧ್ಯಮೀ, ಪಂಚ, ಧೈವತ ಮತ್ತು ನಿಷಾದಗಳ ಸ, ರಿ, ಗ, ಮ, ಪ, ದ, ನೀ ಗಳೆಂಬ ಸಪ್ತಸ್ವರಗಳಾಗುತ್ತವೆ. ಸ್ವರ ಸಪ್ತಕವು ಶಾಸ್ತ್ರೀಯವೂ ಆಗಿದೆ.

ಸೃಷ್ಟಿ ಕ್ರಮದಲ್ಲಿ ಸತ್ವಗುಣ ಪ್ರಭಾವದಿಂದ ನಾದ ಸ್ಪಂದನಗಳು ಹುಟ್ಟುತ್ತವೆ. ರಜೋಗುಣ ಪ್ರಭಾವದಿಂದ ಕಳೆಯೂ ಮತ್ತು ತಮೋಗುಣ ಪ್ರಭಾವದಿಂದ ಬಿಂದುವೂ ಜನಿಸುತ್ತವೆ. ಬಿಂದುವಿನ ಹಂತದಲ್ಲಿ ತಮೋಗುಣದ ಅಧಿಕ ಪ್ರಭಾವದಿಂದ, ಚಿತ್ತ ನಿರ್ಮಾಣಾನಂತರ ಆಕಾಶಾದಿ ಪಂಚಭೂತಗಳು ಜನಿಸುತ್ತದೆ.

ಸೂಕ್ಷ್ಮದ ಮಧ್ಯೆ ಜೀವನುಂಟು. ಸ್ಥೂಲದ ಕೇಂದ್ರ ಬಿಂದುವಾಗಿ ಸೂರ್ಯನುಂಟು. ಬ್ರಾಹ್ಮೀ ಮನದ ನಾದ, ಬಿಂದು, ಕಳೆಗಳ ಕೇಂದ್ರವಾಗಿ ಬ್ರಹ್ಮನಿರುವನು.

ಸಾಧನದಲ್ಲಿ ಮಾತು ನಿಲ್ಲಬೇಕು. ಆಗ ಮನನ ಮೂಲಕ ಮಂತ್ರ ಚೈತನ್ಯ ಉಂಟಾಗುತ್ತದೆ. ಮನನವು ಮಾನಸ ಕ್ರಿಯೆ ತಾನೇ ? ಮಂತ್ರವು ಉಡುಗುವ ತನಕ, ಮನವು ನಿಲ್ಲಲಾರದು. ಮನವು ನಿಲ್ಲದ ಹೊರತು ಮುಕ್ತಿ ದೊರಕದು.

ಧ್ವನಿ ಹುಟ್ಟಿದೊಡನೆ ಅದನ್ನು ಆಲಿಸುತ್ತ ನಾದಾನುಸಂಧಾನಕ್ಕೆ ಮೊದಲಾಗಬೇಕು. ಮುದಿತ ಧ್ವನಿ ಮಧ್ಯದಲ್ಲಿ ಸೇರಿ ಅಂದರೆ ಆಳವಾಗಿ ಧ್ವನಿ ಆಲಿಸುತ್ತ ಧ್ವನಿಯೇ ತಾನು ಎನಿಸಬೇಕು. ಈ ರೀತಿ ಅದನ್ನೇ ಅನುಸರಿಸಿ ಹೃದ್ವನದಲ್ಲಿ ವೀಕ್ಷಿಸುತ್ತಿದ್ದರೆ, ಮನವು ಸರ್ವ ಬಂಧನಗಳಿಂದ ಬಿಡುಗಡೆ ಹೊಂದುತ್ತದೆ. ಹೀಗೆ

ಅನಾಹತ ನಾದದಲ್ಲಿ ಕಾಣುತ್ತ, ಉದಾನ ವಾಯುವಿಗಾಗಿ ಇಚ್ಛಿಸಿ, ಕುದುರಿಸಿ, ವ್ಯಾನ ವಾಯುವಿನಲ್ಲಿ ಕದಲದೆ ಉಳಿಯುವವನು ಹರನಲ್ಲದೆ ಬೇರೇನು?

ನಾದವನ್ನು ಅರಿತ ಯೋಗಿಯು ವೇದಾಂತದಲ್ಲಿ ತಿಳಿಸಿದ ವಿಧಿಯನ್ನು ಮನದಲ್ಲಿಯೇ ಅರಿಯುತ್ತಾನೆ. ನಾದವೇ ಮುಕ್ತಿ ಪದವೆಂದು ಜನರಿಗೆ ಸಾರಬಹುದು.

ಬಿಂದುವಿನಲ್ಲಿ ಪೆಂಪಾದ ನಾದವು ಅಂದರೆ ಸತ್ತ್ವದ ಕೇಂದ್ರದಲ್ಲಿ ಅನಾದಿ ಶಿವನುಂಟು. ಶಿವನ ಮಧ್ಯದಲ್ಲಿ ಅಂದರೆ ಸಗುಣಬ್ರಹ್ಮದೊಳಗೆ ಸೂಕ್ಷ್ಮವಾಗಿ ನಿರ್ಗುಣವು ಶೋಭಿಸುತ್ತದೆ.

ನಿಜವನ್ನರಿಯುವ ಕ್ರಮವನ್ನು ತಿಳಿದು ನಿರ್ಗುಣವನ್ನು ಹೊಂದಬೇಕು. ನಾದ ಕೇಳಿ ಬರಲು ಶಬ್ದವನ್ನು ನೇರವಾಗಿ, ಅಂದರೆ ಇಂದ್ರಿಯ ಮೂಲಕವಲ್ಲದೆ, ತಿಳಿದು ಬಳಿಕ ಮೌನವಾಗಿರುವವನು ಪರಮಾತ್ಮನೇ ಸರಿ.

ಕಣ್ಣು ಕದಲಿಸದೆ, ಮನದಲ್ಲಿ ಗುರಿಯನ್ನು ಸೇರಿಸಿ, ನುಣ್ಣನೆಯ ಪ್ರಣವವನ್ನು ಕೇಳುತ್ತ ಚಣ್ಣನೆ ನೆನೆಯುವುದೇ ನಿರ್ಗುಣ ಪಥವಾಗಿದೆ. ಕಿವಿಯೊಳಗೆ ಜನಿಸುವ ರವವೆ ಆಕಾಶವು. ಏಕೆಂದರೆ ಆಕಾಶವು ರವದ ಮಾಧ್ಯಮ ತಾನೇ ? ಕಣ್ಣಿಗೆ ಕಳೆಯ ಜ್ವಾಲೆ ಕಾಣುತ್ತದೆ. ಇಂಥ ಸ್ಥಿತಿಯಲ್ಲಿ ಪ್ರಾಣಾಯಾಮದ ಕ್ರಮವು ಮುಕ್ತಿ ಪಥದ ದಾರಿಯಾಗುತ್ತದೆ.

ಕೇಳಿ ಬರುವ ಶುದ್ಧ ನಾದವನ್ನೇ ಅಭಿಷೇಕ ಜಲವೆಂದು ಭಾವಿಸಿ, ತನ್ನ ದೇಹವನ್ನೇ ದೇಗುಲವೆಂದು ತಿಳಿದು, ತಾಳ್ಮೆಯಿಂದ ಸಾಗಿ, ಆತ್ಮ ಶಿವನನ್ನು ಸೇರಿದರೆ ಅವನೆ ಶಿವಯೋಗಿಯೆನಿಸುತ್ತಾನೆ. ಪ್ರಾರಂಭದಲ್ಲಿ ಮನಸ್ಸು ದೇವರನ್ನು ಕಾಣಲು ಅಲ್ಲಲ್ಲಿ ತಿರುಗುತ್ತಾರೆ. ಹೀಗೆ ಸುತ್ತಾಡಿ ಕೊನೆಗೆ ಮನಸ್ಸನ್ನು ಹರಿದು ಹಾಕಬೇಕು. ಹೀಗೆ ಸುತ್ತಲೂ ತಿರುಗುವಿಕೆಯಿಂದ ದೂರಾದ ಮನಸ್ಸು ಅಂತರ್ಮುಖವಾಗಿ ಸಾಧಕನು ತಾನೇ ದೇವನಾಗುತ್ತಾನೆ, ತನ್ನೊಳಗೇ ದೇವರನ್ನು ಕಾಣುತ್ತಾನೆ.

ಸ್ವ–ರೂಪದಲ್ಲಿ ಅರಿವು ಮೀರಿದ ಸ್ಥಿತಿ ತಲುಪಿ, ಬಿಂದು, ನಾದ, ಕಳಾತೀತ ಪರಮನಲ್ಲಿ ತನ್ಮಯವಾದ ಶರೀರವನ್ನು ಹೊಂದುವುದೇ ತತ್ತ್ವ. ಗುರು ಕಟಾಕ್ಷವು ಲಭಿಸಿದೊಡೆ, ಈ ಸ್ಥಿತಿ ಕುದುರುತ್ತದೆ.

ಶ್ರುತಿಯ ರವ ಕೇಳಿ ಶ್ರೋತ್ರಿಯನೆನಿಸುತ್ತಾನೆ. ಮನಸ್ಸಿನಲ್ಲಿ ಒಳಗುಟ್ಟನ್ನು ಅರಿತು ಮುಂದೆ ಅವನು ಪರಿಪೂರ್ಣ ಭಾವವನ್ನು ಹೊಂದುತ್ತಾನೆ. ಈ ಯೋಗ ಸಾಧಕನು ಸನ್ಯಾಸ ಸ್ವೀಕರಿಸಬೇಕಿಲ್ಲ. ಸಂಸಾರಿಯಾಗಿಯೇ ಇದ್ದು, ಕ್ಷೋಭೆಯಿರದ ಮನಸ್ಸನ್ನು ಮಸೆದು, ಧ್ವನಿ ಕೇಳಿ, ಆತ್ಮಮೂಲವನ್ನು ಹೊಂದಿ ಸದ್ದು ಮಾಡದ ಮೌನಿಯಾದ ಸಂಸಾರಿಯೂ ಯೋಗಿಯಾಗಬಲ್ಲನು.

— — — — — — — — — — — — — — — — — — — — — —

ಜ್ಞಪ್ತಿಯನ್ನು ನಿಲ್ಲಿಸಿ ನೋಡಿದಾಗ ಕಳೆಯು ತೊಳಗುವುದು. ಕಳೆಯು ಉಡುಗದೆ ನೋಡಿದಾಗ ಬಯಲು ಕಾಣುವುದೇ ಪರಮಾರ್ಥವಾಗಿದೆ. ಆಗ ಜೀವನು ಬ್ರಹ್ಮದಲ್ಲಿ ಲಯಿಸುತ್ತಾನೆ. ಇದನ್ನೇ ಆತ್ಮದ ಜಯವೆನ್ನುತ್ತಾರೆ.

೩೧೩೦ ಬಿಂದು ನಾದ, ನಾದ ಬಿಂದುವಾಗಿ ಮಾಡಿ,
ನಾದ ಬಿಂದುವಾಗಿ ನಾದ ಮಾಡಿ,
ಬಿಂದುವಿನೊಳು ನಾದ ಭೇದಿಸಿ ನೋಡಿಕೋ, ವಿಶ್ವ

೩೧೩೧ ಅಕ್ಷರ ಪುಟವಿಂತು ಅಕ್ಷಿಯೊಳಗೆ ಬೆರೆಸಿ,
ಅಂದ ರವವನೊಂದು ಅನುಭವಿಸಲು,
ಆತನಿಗೇ ಮುಕ್ತಿ ಅಕ್ಷರಾಗಿಯುಂಟು, ವಿಶ್ವ

೩೧೩೨ ಅಕ್ಷರದಡವಿಯಲಿ ಹೊರಳುತ,
ಅಕ್ಷರವದಹಮು ಕಾಣು ಅವನಿಯೊಳು ಮುನ್ನಂ,
ಅಕ್ಷರವನು ಜಪಿಸುತಿರಲ್,
ಅಕ್ಷರವದಾಯ್ತು ಚೊಕ್ಕಟ ಶುಭಕರ ; ವೇಮಾ.

೩೧೩೩ ಘಂಟಾ ರವವು ಮನದಲಿ,
ಉಂಟಾಗಲು ಕೇಳಿ ಕೇಳಿ ವಿಮಲ ಕಾಂತಿಂ,
ಅಂಟಿರುತಿರಲಾ ಬ್ರಹ್ಮದ
ನಂಟಿಗೆ, ದುಃಖವಿರದು ತನ್ನ ನೋಡೆ, ವೇಮಾ

೩೧೩೪ ಪಂಚವು ಅಕ್ಷಯ ಬಿಂದುವು,
ಪಂಚಾಕ್ಷರಿ ನಾದವೆಂದ್ರು ಪರಮ ಮುನೀಂದ್ರರ್,
ಕೊಂಚವದನೆ ಸಲೆ ತಿಳಿದೊಡೆ,
ಕಿಂಚಿದೊಳಿತು ಕಾಣೆ, ನಮಿಪ ಮಹಿಯಲಿ ವೇಮಾ !

೩೧೩೫ ಅಂಚೆ ಘನಾಕ್ಷರ ಬಿಂದುವು,
ಪಂಚಾಕ್ಷರ ನಾದವೆಂದು ಪರಮ ಮುನೀಂದ್ರರ್,
ಮಿಂಚುವ ಅದನೇ ತಿಳಿದೊಡೆ,
ಮಂಚಾಸನವೇರುತಿಹನು ಮಹಿಯಲಿ, ವೇಮಾ,
ಅಂಚೆ ವ ಹಂಸ ವ ಹಂಸಃ ವ ಸೋಹಂ

---

೩೧೩೬ ಜಪವನು ಮಾಡಲು ಸಿಕ್ಕದು ;
ವಿಪಿನದೊಳಿರಲೇನು ? ಬಿಡುತಿವೆ ಭ್ರಮೆಗಳಾ,
ಜಪ ಮಂತ್ರ ಮೂಲ ಸಿದ್ಧಿಗೆ
ನೆಪವೆನಿಸಲು, ಮೋಕ್ಷ ಪದವಿ, ನಿಲುವುದು, ವೇಮಾ.

೩೧೩೭ ಐದು ಅಕ್ಷರದಲಿ ಆನಂದ ಪೊಂದುವ,
ಅಲ್ಲಿ, ಇಲ್ಲಿ ಮುಕ್ತಿ ಅರಳುತಿಹುದು,
ಅಲ್ಲಿ ಇಲ್ಲಿ ತಿಳಿಯೆ, ಅದುವೆ ಹೋಗು ಬ್ರಹ್ಮ, ವಿಶ್ವ

೩೧೩೮ ಏಳೆ ಅಕ್ಷರಗಳು ನಿನ್ನೊಳಗೆ ಹೊಂದಿವೆ,
ಅಲ್ಲಿ ಇಲ್ಲಿ ಮುಕ್ತಿ ಅರಳುತಿಹುದು,
ಅಲ್ಲಿ ಇಲ್ಲಿ ತಿಳಿಯೆ, ಅದುವೆ ಹೋಗು ಬ್ರಹ್ಮ, ವಿಶ್ವ

೩೧೩೯ ಕತ್ತಲು ಮನೆ ಸೇರಿ, ಕೈದೀಪವಿಲ್ಲದೆ,
ಏನೂ ಕಾಣಬರದು ? ಎಣಿಸಿ ನೋಡು,
ಬರುವು ಹೋಗುಗಳಡಗಿ ಪ್ರಣವ ರವ ಕೇಳು, ವಿಶ್ವ

೩೧೪೦ ನಾದವೆ ಬ್ರಹ್ಮವು ಎನ್ನುತ,
ವೇದಗಳನು ಓದಬಹುದು, ಕೇಳುತ ಅರಿಯಲ್,
ನಾದಂಗಳಿರದ ಬಯಲೊಳು,
ನಾದಾಂತವೆ ಪೂರ್ಣ ಪದವಿ, ನಯವದು ವೇಮಾ.

೩೧೪೧ ನಾದವನ್ನರಳಿಸಿ, ನಾದ ತುಂಬಿ ಸುರಿಯೆ,
ಭೇದವಿನಿತು ಇರದೆ, ಬಹಳ ಹೆಣಗೆ,
ಹರಿವ ಕಾಲುವೆ ತೆರ ಹರಿಯುವುದೀ ನಾದ, ವಿಶ್ವ

೩೧೪೨ ಈ ಸ್ವರಂಗಳೆಲ್ಲ ಏಳು ಪಾಲು ಮಾಡಿ,
ಏಳು ಮಾರ್ಗಿಗವನೆ ಇತ್ತು ಬಿಟ್ಟು,
ನಿತ್ಯ ಕರ್ಮಗಳನು ನಿಲಿಸುವ ನೆರೆ ಯೋಗಿ, ವಿಶ್ವ

೩೧೪೩ ನಾದವು ಬಿಂದುವು ; ಬಿಂದುವು
ನಾದವು, ಮಾಡುತ, ಕಳೆಯನು ನಾದವ, ಬಿಂದುನ್,
ನಾದವ ಮಾಡುತ, ನೀನೊಂದು
ನಾದವ ನೋಡುತಿಹ ಯೋಗಿ ನಾಥನು ವೇಮಾ.

---

೩೧೪೪ ಜ್ಯೋತಿಯಲ್ಲಿ ಹುಟ್ಟಿತು ಸೊಂಪಾದ ನಾದವು,
ನಾದದಲ್ಲಿ ಹುಟ್ಟಿತು ಬಿಂದು ತಿಳಿಯೆ,
ಬಿಂದುವಿನಲಿ ಜನನ ಪೃಥಿವಿಯಾಗಸಗಳ್, ವಿಶ್ವ

೩೧೪೫ ನಾದ ಬಿಂದು ಕಳೆಯ ನಯದಿ ಹೊಂದಿ ಆತ್ಮ
ಚಪಲ ಚಿತ್ತ, ಮಮತೆ ಚೊಕ್ಕ ನಿಲಿಸಿ,
ಬ್ರಹ್ಮ ರಂಧ್ರದಲ್ಲಿ ಪ್ರಬಲಿಸೆ ಯೋಗಿಯೈ, ವಿಶ್ವ

೩೧೪೬ ಸೂಕ್ಷ್ಮ ಮಧ್ಯದಲ್ಲಿ ಸಲೆ ಜೀವನುಂಟು,
ಸ್ಥೂಲ ಮಧ್ಯದಲ್ಲಿ ಸೂರ್ಯನುಂಟು,
ನಾದ ಬಿಂದು ಕಳೆಯರಿ ನೀಟ ಬ್ರಹ್ಮವುಂಟು, ವಿಶ್ವ

೩೧೪೭ ಮಾತು ಉಡುಗುವನಕ ಮಂತ್ರವು ದೊರಕದು,
ಮಂತ್ರವುಡುಗುವನಕ ಮನಸು ನಿಲದು,
ಮನಸು ನಿಲ್ಲುವನಕ ಮತ್ತೆ ಮುಕ್ತಿ ಇರದು, ವಿಶ್ವ

೩೧೪೮ ತಂತ್ರವಾದವೆನಿತೊ ದಟ್ಟವಾಗಿ ಇಹುದು,
ಮಂತ್ರವಾದವರಿವವ ಮಹಿಯೊಳಿಲ್ಲ,
ಜಂತ್ರದವನು ಬೊಂಬೆ ಚೆಂದ ನೋಡಿದಾಗ, ವಿಶ್ವ

೩೧೪೯ ಮಂತ್ರ ತಂತ್ರಾದಿ ಯುಕ್ತರು ಮರುಳಾದರು,
ವೇದ ವಿದ್ಯಾದಿ ಘನ ಯೋಗ ವಿಧವು ಅಲ್ಲ,
ನಾದ ಕಂಡೊಳಗೆ ಪೂರ್ಣಾಗಿ ಪರಿಣಮಿಸುವ, ವಿಶ್ವ

೩೧೫೦ ಅರಿತು, ಮನವ ಹಿಡಿದು, ಏಕಾಂತದಲಿ ಬೆರೆಸಿ,
ಹಾರಬೇಡ ಭಾವ ಪದದ ಒಳಗೆ,
ಅಭಯ ನಾದ ಹೊರತು, ಬದಲು ತಾಕಲಾರ, ವಿಶ್ವ

೩೧೫೧ ನಿಜವೇನೆಂದರಿತು ನಿತ್ಯನಾಗಬೇಕು,
ಮಾತಿನೊಳಗೆ ಬಿಂದು ಭದ್ರ ಪಡಿಸಿ,
ಮೋದದೊಳಿಹ ಬಿಂದು ಬಾಧೆ ಪಡಿಸುತಿಹುದು, ವಿಶ್ವ

---

೩೧೫೨ ಕೇಳಾ ! ದಶ ವಿಧ ನಾದವ,
ಕಾಣಾ ! ನಿರ್ಭೇದ ಪದವ, ಕಾಣುತ ಊರ್ಧ್ವಂ,
ಕಾಣಾ ! 'ಸೋಹಂ' ಭಾವವ,
ಕಾಣಾ ಪರಿಪೂರ್ಣ ಧ್ಯಾನ ಮನದಲಿ ವೇಮಾ.

೩೧೫೩ ಆತ್ಮದೊಳಗೆ ನಾದ ಆಲಿಸುತಾಲಿಸುತ,
ಆಶೆಯಲ್ಲಿ ಸಿಕ್ಕ ಆದಿ ಯೋಗಿ,
ಆತ್ಮದೊಳಗೆ ಕಳೆಗೆ ಅಂಟುವುದೇ ತತ್ತ್ವ ವಿಶ್ವ

೩೧೫೪ ಉಜ್ವಲವಾದ ಪರಿಪೂರ್ಣತೆ ಅರಿತುಕೊಂಡೆ,
ಕುಂಭಗತ ದೀಪ ಶೋಭಿಪುದು ಕುಂಭಲೀಲೆ !
ಕುಂಭದಲಿ ಮನದಿ ಬೆರೆಯುತ ಸೇರ ಬೇಕು,
ಹೊರತು, ಗಾಂಭೀರ್ಯ ಬೀರಲು ಹೊಲ್ಲ ವೇಮ.

೩೧೫೫ ಆಕಾಶದಿ ಶೂನ್ಯ ; ಅಲ್ಲಿ ಶಬ್ದ ಜನನ,
ಶಬ್ದ ಮಧ್ಯೆ ನೋಡು ಸರಿಯಾಗಿಯೆ,
ಶಬ್ದರಹಿತವಾಯ್ತು ; ಶೋಭಿಸಿತು ಬ್ರಹ್ಮ ವಿಶ್ವ

೩೧೫೬ ನಾಯಿಗೆ ಸದ್ದಾಗೆ ಕೂಗುವುದಿಲ್ಲ ಮರೆತು,
ನರಿಯ ರೀತಿಯಿದ್ದು, ನೆಗೆಯುತಿಹುದು,
ನೆಗೆದು ಬಿಡುವ ರೀತಿ ನಾದ ಹುಟ್ಟಿತಲ್ಲ ! ವಿಶ್ವ

೩೧೫೭ ಹೊಂದುವ ಹೃದಯದಿ ಗುರಿ, ಯಾ–
ನಂದವ, ಸದಸದ್ವಿವೇಕ, ನಾದವ ಮೇಲಾ
ನಂದಿಸಿ ಭ್ರಮೆಗಳೆಲ್ಲವ
ಸಂದುಗೂಡದೆ, ಬಯಲು ಸೇರು, ಸಾಕ್ಷಿಯು ವೇಮಾ.

೩೧೫೮ ಧ್ವನಿ ಹುಟ್ಟಲು ಆಲಿಸುತಿರು,
ಧ್ವನಿ ಮಧ್ಯದೊಳಗೆ ಸೇರಿ ಧ್ವನಿ ತಾನಾಗಲ್,
ಅನುಸರಿಸುತದನೆ ಕಂಡು ಹೃ–
ದ್ವನಜದೊಳಗೆ ನೋಡೆ ಮುಕ್ತಿ, ವಶವೈ, ವೇಮಾ.

---

೩೧೫೯ ಅಂದರನಾಹತದಿ ಅದ ಲೇಸಾಗಿ ಕಂಡು,
ಇನ್ನುದಾನ ವಾಯು ಇಚ್ಛಿಸುತ್ತ,
ಕೊನೆಯ ವಾಯುವಿನಲಿ ಕದಲದಿರುವವನು,
ಹೇಳಲೇಕೆ ? ಅವನೆ ಹರನು ವೇಮ.

೩೧೬೦ ಧ್ವನಿ ಜನಿಸಲಾಲಿಸುತ್ತ,
ಧ್ವನಿ ಮಧ್ಯದಲ್ಲಿ ಸೇರಿ, ಧ್ವನಿ ತಾನೇ ತಾ
ನೆನಿಸುತ ತೋರಲು ತನ ಹೃ–
ದ್ವನಜದಲ್ಲಿ ನೋಡೆ, ಮುಕ್ತಿಯು ವಶವೈ ವೇಮಾ.

೩೧೬೧ ನಾದವ ತಿಳಿದಿಹ ಯೋಗಿಯೆ,
ವೇದಾಂತದೊಳಗಿಹ ವಿಧಿಯ ತಿಳಿಯುವ ಮನದೋಳ್
ನಾದವೆ ಮುಕ್ತಿ ಪದವೆಂದು,
ಆದರದಲಿ ಜನರೊಡಗೂಡಿ, ಅರುಹೋ ವೇಮಾ !

೩೧೬೨ ನಾದವು ಮುಕ್ತಿಗೆ ದಾರಿಯು,
ಪಾದವ ತಿಳಿದುಕೊಳುವವನು ತಾ ಪರಿಪಕ್ವಂ,
ಭೇದವ ನೀಗುತ ಮನದಲಿ,
ವೇದಿಕೆಯ ಸೇರಿ ಆಲಿಸು ; ಕೇಳದೆ ? ವೇಮಾ !

೩೧೬೩ ನಾದ ನಾದ ನೋಡೆ, ನಾದ ಹೃದಯದಂಟು,
ನಾದವಿಲ್ಲದಂಥ ನರರೆ ಇಲ್ಲ,
ಭೇದವುಡುಗಿದವರು ಪ್ರಿಯ ಪಡುವರು ಕಾಣು, ವಿಶ್ವ

೩೧೬೪ ಬಿಂದುವಿನಲಿ ಹುಟ್ಟಿತು ಪೆಂಪಾದ ನಾದವು,
ನಾದದಲಿ ಹುಟ್ಟಿದನಾದಿ ಶಿವನು ;
ಶಿವನ ಮಧ್ಯದಲ್ಲಿ ಸೂಕ್ಷ್ಮ ಬೆಳಗುತಿಹುದು, ವಿಶ್ವ

೩೧೬೫ ಬಿಂದು ನಾದ ಮಾಡಿ ಪ್ರಿಯವು ಒಪ್ಪವಾಗಿ,
ನಾದ ಬಿಂದು ಮಾಡಿ ನಯದಿ ಕಂಡು,
ಬಿಂದು ನಾದದಲ್ಲಿ ಭೇದಿಸಿ ನೋಡಿರೋ ! ವಿಶ್ವ

೩೧೬೬ ಪಿಂಡವಂಡದ ನಡುವೆ ಬಿಂದು ಆತ್ಮ ಜ್ಯೋತಿ,
ಭಾನು ಜ್ಯೋತಿಯರಿಯೆ, ಬ್ರಹ್ಮಾಂಡದಿ,
ನಾದ ಬಿಂದುಗಳಿಗೆ ನಡುವೆ ಅದ್ಭುತ ಜ್ಯೋತಿ ! ವಿಶ್ವ

೩೧೬೭ ನಿಜವ ಕ್ರಮದೊಳರಿತು ನಿರ್ಗುಣತ್ವ ಹೊಂದೆ,
ನಾದ ತಿಳಿಯೆ ಶಬ್ದ ನೇರ ತಿಳಿದು,
ಮಾತಿರದಿರಲು ಪರಮಾತ್ಮನೆನ್ನುತಿಹನು, ವಿಶ್ವ

೩೧೬೮ ಕಣ್ಣಿನ ಚಾಟು ಬಿಡದೆ ಗುರಿ,
ನುಣ್ಣಗೆ ಮನನದಿ ಸೇರಿ ನುಗಿಸಿ ಎದುರಾಗಳ್,
ತಣ್ಣಗೆ ಕೇಳುತ ಪ್ರಣವವ,
ಚಣ್ಣನೆ ಕ್ರಮಿಪುದೆ ನಿರ್ಗುಣ ಗತಿಯದು ವೇಮಾ

೩೧೬೯ ಕಿವಿಯೊಳಗೆ ಜನಿಸುವ ರವವೆ ಆಕಾಶವು,
ಕಣ್ಣಿಗೆ ಕಾಣುವುದೆ ಕಳೆಯ ಜ್ವಾಲೆ,
ಮೂಗಿನೊಳಿಹ ಗಾಳಿ, ಮುಕ್ತಿ ಪಥದ ದಾರಿ, ವಿಶ್ವ

೩೧೭೦ ಅಮಲವಾದ ನುಡಿಯು ಅಭಿಷೇಕ ವಾರಿಧಿ,
ತನುವು ದೇಗುಲೆಂದು ತಾಳ್ಮೆ ಹೊಂದಿ,
ಆತ್ಮ ಶಿವನ ಸೇರೆ, ಆತನೆ ಶಿವ ಯೋಗಿ, ವಿಶ್ವ

೩೧೭೧ ನೀತಿಯು, ಭಕ್ತಿಯು, ಜ್ಞಾನವು,
ರೀತಿಯಲಿ ನಡೆವ ಮನದಲಿ ಆಗುತ ಚಂದ್ರಂ,
ಜ್ಯೋತಿ ನಿನಾದವೆ ಬ್ರಹ್ಮವು,
ಭೂತಾತ್ಮನು ನಿನ್ನ ಹೊಂದಿ, ನೋಡುವ, ವೇಮಾ.

೩೧೭೨ ಸ್ವ ಸ್ವರೂಪದಲಿ ಅರಿವು ಹ್ರಸ್ವವಾಗಿ,
ಬಿಂದು–ನಾದ ಕಳಾತೀತ ಭಿನ್ನ ಪರಮ
ತನ್ನಯ ಶರೀರ ಹೊಂದುವುದೆ ತತ್ತ್ವವಾಯ್ತು,
ಗುರು ಕಟಾಕ್ಷವು ಲಭಿಸಿದೊಡೆ ಕುದುರಿತು, ವೇಮ,

೩೧೭೩ ವೇದ ಗೀತಂಗಳನು ಮೀರಿ ಬೆಳಗುವವನು,
ನಾದ ಬಿಂದುವು ಕಳೆಗಂಟೆ ಸುನಯವಾಗಿ,
ಸಾಧಕರೊಳಗೆ ಸೇರ್ಪುದೆ ಸನ್ಮತವದು,
ಜನ್ಮಸಾರ್ಥಕವಾಗಳೇ ತೀರ್ಕು ; ವೇಮ.

೩೧೭೪ ಶ್ರುತದಿಂದ ತಿಳಿವ ರವದಿಂ ಶ್ರೋತ್ರಿಯಾದ,
ಮನದಿ ಒಳಗುಟ್ಟಿನೊಳಗಣ ಗತಿಯನರಿತು,
ಮುಂದೆ ಪರಿಪೂರ್ಣ ಭಾವವನು ಹೊಂದುವನವ. ವಿಶ್ವ

೩೧೭೫ ಗದ್ದಲಿರದ ಮನವ ಮಸೆದು ಧ್ವನಿ ನೋಡಿ,
ಮುದ್ದುಗೊಳಿಪ ಆತ್ಮ ಮೂಲ ಹೊಂದಿ,
ಸದ್ದು ಮಾಡದಿದ್ದ ಸಂಸಾರಿ ಯೋಗಿಯೈ, ವಿಶ್ವ

೩೧೭೬ ನಾದ ನಾದ ಗೂಡಿ, ನಾಮ ರೂಪವಾಯ್ತು,
ನಾದದೊಳಗೆ ನಾದ ನಾಟಿಯುಂಟು,
ವಾದ ಗೆಯ್ಯುವವರು ವರ್ಣಿಸಲಾರರಲ ! ವಿಶ್ವ

೩೧೭೭ ಸೂಕ್ಷ್ಮ ಮಧ್ಯದಲ್ಲಿ ಸರಣಿ ಜೀವನುಂಟು ;
ಸ್ಥೂಲ ಮಧ್ಯದಲ್ಲಿ ಸೂರ್ಯನುಂಟು,
ನಾದ ಬಿಂದು ಕಳೆಯೊಳಾ ಬ್ರಹ್ಮನೆ ಉಂಟು, ವಿಶ್ವ

೩೧೭೮ ಏಕವಮರ ಯುಕ್ತಿ ಪಾಕವನು ಗಮನಿಸಿ,
ಸೋಂಕಿ ಇರುವುದೆಲ್ಲ ಸ್ಪಷ್ಟವಾಗಿ,
ತಾಕಿ ತಾಕಿ ಮಿಕ್ಕಿ ಥಳಕಾಗಿ ಹೊಳೆವುದು, ವಿಶ್ವ

೩೧೭೯ ತಿಳಿವು ನಿಲಿಸಿ ನೋಡು, ತೊಳಗುತಿಹ ಕಳೆಗಳ,
ಕಳೆಯುಡುಗದೆ, ನೋಡು ಕಾಣು ಬಯಲು,
ಬಯಲಿಗಂಟಿ ನೋಡು, ಬ್ರಹ್ಮವು ಕಾಣುವುದು, ವಿಶ್ವ

೩೧೮೦ ಆತ್ಮ ತನ್ನೊಳಗೆ ಗಮನಿಸುತ ಅನುದಿನವೂ,
ನಿರ್ಗುಣಾತ್ಮಾರ್ಚನವ ಗೆಯ್ದು ನಿತ್ಯ,
ಪ್ರತ್ಯಗಾತ್ಮನನೊಳಗರಿಯೆ, ಪ್ರಬಲ ಯೋಗಿ,
ಸಚ್ಚಿದಾನಂದ ಪದದಲ್ಲಿ ಸತ್ಯ ವೇಮ.

೩೧೮೧ ಅನುತನುತಿರೆ, ರಾಗ ಅತಿಶಯವಾಗುವುದು,
ತಿನುತ ತಿನುತ ಬೇವು ಸಿಹಿಯೆನಿಪುದು,
ಸಾಧನೆಯಿಂ ಕಾರ್ಯ ಸಿದ್ಧಿ ವಸುಧೆಯೊಳಗೆ, ವಿಶ್ವ

೩೧೮೨ ಚಂದ ಮಾಮ ಛಾಯೆ ಚೊಕ್ಕ ತನ್ನ ಒಳಗೆ
ಗಡನೆ ನೋಡನೇಕೆ ? ಹುಡುಕಿ ಹಿಡಿದು,
ಜೊನ್ನೆ ಬಯಲಿನಲ್ಲಿ ಶೋಧಿಸಿದೊಡೆ ಮುಕ್ತಿ, ವಿಶ್ವ

೩೧೮೩ ಭಯವೆಲ್ಲವು ದೇಹಾದಿಗೆ,
ಭಯವುಡುಗಲು ನಿಶ್ಚಯಾಗಿ ಪರಮಾರ್ಥವದೈ,
ಲಯವೆಲ್ಲವು ಜೀವನಿಗೇ,
ಜಯವಾತ್ಮಕೆ ಎಂಬರಯ್ಯ, ಜಗದಲಿ, ವೇಮಾ,

೩೧೮೪ ಭಯವು ಕಾಣಾ ಅಜ್ಞಾನವು,
ಭಯವುಡುಗಲು ನಿಶ್ಚಯಾಗಿ ಪರಮಾರ್ಥವದೈ,
ಲಯವು ಕಣಾ ಈ ದೇಹವು,
ಜಯವು ಕಣಾ ಜೀವನೆನಲ್ ಸಾರೆಲೊ ವೇಮಾ,

೩೧೮೫ ದಿನಕರ ಚಂದ್ರರು ಬರುವ ಹಾದಿ ಹಿಡಿದು,
ಹಾಸುಗೆಯಲ್ಲಿಯೆ ಸಿರಿಯ ಕೂಡಿ ಹಾಕಿ,
ಮೂರು ಮಾಲೆಯ ಗೃಹದಿ ಮಲಗಿ ನಿದ್ರಿಸಿ,
ಮುಂದಿನಂಗಳ ಮೇಲೆ ಶರಣು ಕೋರಿ,
ಕಡೆ ಹುಟ್ಟಿಸಿದ ಗುರುತಿಸಿ ನಡೆಯೆ ನಡು ಬೀದಿ,
ಶೋಧಿಸಿದ ಮಾತ್ರವೇ ಊರ್ಧ್ವದಿರಿಸಿ,
ಅನುವಿನಲಿ ಜ್ಯೋತಿಯೈ ; ಆನಂದ ರೂಪವೈ ;
ದಿವ್ಯ ತೇಜಂಗಳ ಮೇಲೆ ದೃಷ್ಟಿ ನಿಲಿಸಿ ;
ತೇಟ: ತಿಳಿಯದಿರಲಿದನ್ನು ತಿಳಿದು ಬರದು ಭೇದ,
ಜೋಕಾಲಿಯರ್ಥಿಯಾಗಿ ತಾ ಜೀಕಾಡುವವನು,
ಯೋಗೀಂದ್ರನೆಂದು ಹೇಳೆ ಒಪ್ಪವಹುದು,
ವೇಮನನೆಂಬ ಯೋಗಿಗೆ ವಿಭವ ಭುವಿಯಲಿ.

೩೧೮೬ ಅಕ್ಷರಾಳಿ ಹಿಂದೆ, ಅಡವಿ ವಾಸ ಹಿಂದೆ,
ಗುಡ್ಡಗಳಲಿ ಗೋಳುಗರೆವುದೇಕೆ ?
ಇರುವ ಹೃದಯದಲ್ಲಿ ಅರಿಯರೇಕೋ ಶಿವನೇ, ವಿಶ್ವ

●●●

# ೨೦. ಭಕ್ತಿಯೋಗ

**ಭಕ್ತಿಯುಳ್ಳ ಎಡೆಗೆ ಪರಮೇಶ್ವರನಿಹನು ;**
**ಭಕ್ತಿಯಿಲ್ಲದೆಡೆಗೆ ಪಾಪವುಂಟು,**
**ಭಕ್ತಿ ಹೊಂದಿದವನು ಪರಮಾತ್ಮನಾಗುವನು**
**ವಿಶ್ವದಾಭಿರಾಮ ಕೇಳು ವೇಮ.**

## (ಅ) ಭಕ್ತಿ ಎಂದರೇನು ?

ಭಜ್ ಧಾತುವಿನಿಂದ (ಭಜ್+ಕ್ವಿನ್) ಭಕ್ತಿ ಶಬ್ದದ ವುತ್ಪತ್ತಿಯಾಗಿದೆ. ಭಜ ಎಂದರೆ ಸೇವಿಸು, ಸತ್ಕರಿಸು, ಪೂಜಿಸು. ಯೋಗವೆಂದರೆ ಜೋಡಣೆ. ಅದರ ವ್ಯಾಖ್ಯೆ ಹೀಗೆ. 'ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ.' ಅಂದರೆ ಜೀವಾತ್ಮ ಪರಮಾತ್ಮರ ಸಮ್ಮಿಳನವೇ ಯೋಗ. ಭಕ್ತಿ ಮಾಡುವಲ್ಲಿ ಸೇವ್ಯನಾರು? ಸೇವಕನಾರು ? ಸೇವಾ ವಿಧಾನವಾವುದು ? ಎಂಬವುಗಳನ್ನು ತಿಳಿಯಬೇಕು. ನಾರದ ಭಕ್ತಿ ಸೂತ್ರಾನುಸಾರ, 'ಭಕ್ತಿಯು ಭಗವಂತನ ಸೇವೆ. ಭಕ್ತಿಯೆಂದರೆ ಪ್ರೇಮ ಸ್ವರೂಪ. ಭಕ್ತಿಯು ಆನಂದದ ರೂಪ. ಅಷ್ಟೇಕೆ ? ಭಕ್ತನ ಜೀವನವೇ ಭಕ್ತಿಯ ನಿದರ್ಶನವಾಗಿದೆ.'

ಪ್ರಣವ ನಾದವು ಅನಾಹತದಲ್ಲಿ ಜನಿಸುತ್ತದೆ. ಇದು ಜನಿಸಿದವನೇ ನಿಜವಾದ ಭಕ್ತನು. ಭಕ್ತಿ ಇರುವಲ್ಲಿ ಪರಮೇಶ್ವರನಿಹನು. ಭಕ್ತಿ ಇಲ್ಲದೆಡೆಗೆ ಪಾಪವುಂಟು. ಭಕ್ತಿ ಹೊಂದಿದವನೇ ಪರಮಾತ್ಮನಾಗುವನು. ಭಕ್ತಿ ಗಂಟಿಕೊಂಡಿದ್ದು ಮುಕ್ತಿ ಪಡೆಯುವುದು ಸುಲಭ ಮಾರ್ಗವು. ಯುಕ್ತಿ, ತರ್ಕ ಬುದ್ಧಿ ಕುದುರಿದರೆ ಊಹೆಗಳೇ ಹೆಚ್ಚು. ಪ್ರಬಲವಾದ, ಭಕ್ತಿ ಹೊಂದಿ ಪರಮನನ್ನು ಸೇರಬಹುದು.

ತನ್ನೊಳಗೇ ಶಿವನನ್ನು ಶೋಧಿಸಬೇಕು. ಶಿವನಲ್ಲಿ ಭಕ್ತಿ ನಿಲಿಸಬೇಕು. ಅವನು ಸರ್ವಮುಕ್ತನಾಗುತ್ತಾನೆ. ಸರ್ವದಲ್ಲಿ ತನ್ನನ್ನೇ ಕಾಣುತ್ತಾನೆ. ಆದರೆ ತನ್ನನ್ನೇ ದೊಡ್ಡವನೆಂದು ಮತ್ತ ಚಿತ್ತ ಹೊಂದಿವನು, ಚಂಚಲ ಚಿತ್ತನಾಗಿ ಜಗತ್ತಿನಲ್ಲಿ ಸಿಲುಕಿ ಕೆಟ್ಟು ಹೋಗುತ್ತಾನೆ. ಭಕ್ತಿಯೇ ಇಲ್ಲದಿದ್ದರೆ ಪರಮಾತ್ಮನನ್ನು ಹೇಗೆ ಹೊಂದಬಲ್ಲನು?

ಭೂಮಿಯಲ್ಲಿ ಬಾಳಬೇಕಾದರೆ, ಚಿಂತೆಯನ್ನು ತೊರೆಯಬೇಕು. ಸರ್ವ ಭಾರವನ್ನು ಪರಮಾತ್ಮನ ಮೇಲೆ ಹೊರಿಸಿ ಸೌಖ್ಯದಿಂದ ಇರಬೇಕು. ಸೌಖ್ಯ ಹೊಂದುವುದೇ ಸರಿಯಾದ ಮತವು.

---

ಭಕ್ತಿಯು ಬಾಹ್ಯ ಆಚಾರ ವಿಧಿಗಳಲ್ಲಿಲ್ಲ. ಡಂಭಾಚಾರದಲ್ಲಿ ಇಲ್ಲ. ಅದು ಬೂದಿ ಮುಚ್ಚಿದ ಕೆಂಡದಂತಿದೆ. ನಿಶ್ಚಲವಾದ ಭಕ್ತಿಗಂಟಿ ಮುಕ್ತಿ ಪಡೆಯಬಹುದು. ಆದರೆ ಈ ಜಗತ್ತಿನಲ್ಲಿ ಸರಿಯಾದುದನ್ನು ಹೇಳುವ ಜಾಣರು ವಿರಳ.

ತ್ರಿಕಾಲಗಳಲ್ಲಿ ಅಂದರೆ ಪ್ರಾತಃ ಸಂಧ್ಯೆ, ಮಧ್ಯ ಸಂಧ್ಯೆ, ಸಾಯಂ ಸಂಧ್ಯೆಗಳಲ್ಲಿ ಶಿವನನ್ನು ತನ್ನ ಆತ್ಮವೇ ಎಂದು ಪೂಜಿಸುವವನು ಪುಣ್ಯ ಮೂರ್ತಿಯೇ ಸರಿ. ಪೂಜೆಯ ಅನುಷ್ಠಾನ ಮಾಡದೆ, ಮನವು ನಿಲ್ಲದೆ ಮೋಕ್ಷ ಲಭಿಸದು.

ಈಶ್ವರ ಎಂದರೆ (ಈಶ್ + ವರ) ಪರಮ ನಿಯಂತ್ರಕ. ದೇಹದಲ್ಲಿ ಸುಷುಮ್ನ ನಾಡಿಗುಂಟ ಏಳು ಚಕ್ರಗಳನ್ನು ಗ್ರಹಿಸಿ ಮೂಲಾಧಾರದಲ್ಲಿ ವಿಘ್ನೇಶ್ವರನನ್ನೂ, ಅನಾಹತದಲ್ಲಿ ರುದ್ರನನ್ನೂ, ಅದೇ ರೀತಿ, ವಿಶುದ್ಧದಲ್ಲಿ ಜೀವನನ್ನೂ, ಆಜ್ಞಾದಲ್ಲಿ ಈಶ್ವರನನ್ನೂ ಮತ್ತು ಸಹಸ್ರಾರದಲ್ಲಿ ಪರಮಾತ್ಮನನ್ನೂ ಈಶ್ವರಾಂಶಗಳೆಂದು ಎಣಿಸುತ್ತಾರೆ. ಪ್ರಾರಂಭದಲ್ಲಿ ಆಯ್ದು ಕಲ್ಪಿತ ಮೂರ್ತಿಗಳನ್ನು ಗ್ರಹಿಸಿ ತದನುಸಾರ ನಿತ್ಯಕರ್ಮಗಳನ್ನೂ ನಿಲ್ಲಿಸಿ ನಿರ್ಗುಣ ಧ್ಯಾನದಲ್ಲಿ ನಿರತರಾಗುತ್ತಾರೆ. ಬರೀ ಬಾಹ್ಯ ಜಪಮಣಿ ಎಣಿಸಿ, ಕಪಟಾಚಾರವನ್ನು ತೊರೆಯದವರು ತಮಸ್ಸಿನಲ್ಲಿ ಮುಳುಗುತ್ತಾರೆ.

ಈ ದೇಹವೇ ಒಂದು ಗಾಣ. ತ್ರಿಗುಣಗಳೇ ಅದಕ್ಕೆ ಹೂಡಿದ ಕುರುಡೆತ್ತುಗಳು, ನಮ್ಮ ಕರ್ಮಗಳೇ ಗಾಣಕ್ಕೆ ಹಾಕಿದ ಎಳ್ಳು, ಇದನ್ನರಿತು ಗಾಣವಾಡಿಸಿದ ಗಾಣಿಗನಿಗೆ ತೈಲದಂಥ ಭಕ್ತಿ ಲಭ್ಯ.

ಭಾವ, ಅಭಾವಗಳು ಸಹಜ ಸ್ಥಿತಿಗಳು, ಅವುಗಳಿಗಂಟದೆ, ತನ್ನ ಬುದ್ಧಿಯನ್ನು ಸ್ಥಿರಗೊಳಿಸಿ, ಬಟ್ಟ ಬಯಲನ್ನೇ ಧ್ಯಾನಿಸುವ ಅವನೇ ಸ್ಥಿರವನ್ನು ಕಂಡ ಧನ್ಯಾತ್ಮನು.

ಪ್ರೇಮ, ಸಖ್ಯ, ವಾತ್ಸಲ್ಯ ಹೀಗೆ ಆಯಾ ಭಾವಗಳಿಗೆ ತಕ್ಕಂತೆ ನವವಿಧ ಭಕ್ತಿಗಳೆಂದು ಹೆಸರಿಸಲಾಗಿದೆ. ಈ ಭಕ್ತಿಯ ನಾಮಗಳು ಬೇರೆ ಬೇರೆಯಾದರೂ, ಭಕ್ತಿಯು ಒಂದೇ. ಶಿವನ ನಾಮ ಬೇರಾದರೂ ಶಿವನು ಓರ್ವನೇ. ವೇದ ಶಾಸ್ತ್ರಗಳು ಋಷಿಗಳಿಗನುಸರಿಸಿ ಭಿನ್ನವಾದರೂ ವೇದವು ಒಂದೇ.

**೩೧೮೭ ಪ್ರಣವನರಿಯದನಕ ಭಕ್ತನಾಗಲಾರ ;**
**ಜ್ಯೋತಿ ಕಾಣದನಕ ಜೋಗಿಯಲ್ಲ,**
**ನಿತ್ಯವರಿಯದನಕ ನಿರ್ವಾಣಿಯು ಅಲ್ಲ, ವಿಶ್ವ**

**೩೧೮೮ ಭಕ್ತಿಯುಳ್ಳ ಎಡೆಗೆ ಪರಮೇಶ್ವರನಿಹನು,**
**ಭಕ್ತಿಯಿಲ್ಲದೆಡೆಗ ಪಾಪವುಂಟು,**
**ಭಕ್ತಿ ಹೊಂದಿದವನು ಪರಮಾತ್ಮನಾಗುವನು, ವಿಶ್ವ**

— — — — — — — — — — — — — — — — — — — — —

೩೧೮೯ ಭಕ್ತಿಗುಂಟೆ ಮುಕ್ತಿ ಪಡೆಯುವುದು ಸುಲಭವು,
ಯುಕ್ತಿ ಚದುರಿದೊಡನೆ ಊಹೆ ಕೆಡುಕ,
ಶಕ್ತಿ ಯುಕ್ತ ಭಕ್ತಿ ಸಾಧನೆ ಪರಮವದು, ವಿಶ್ವ

೩೧೯೦ ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ,
ನಿಶ್ಚಲಾಗಿ ಭಕ್ತಿ ನಿಲಿಸಿದವನು,
ಸರ್ವ ಮುಕ್ತನಹನು, ಸರ್ವ ತಾನಾಗುವ, ವಿಶ್ವ

೩೧೯೧ ಮತ್ತ ಚಿತ್ತದವನು ಮರ್ಮವನು ತಿಳಿಯದೆ,
ಚಿತ್ತ ಚಲನ ಹೊಂದಿ ಜಗದಿ ಕೆಡುವ,
ಭಕ್ತಿ ಇಲ್ಲದವನು ಪರಮಾತ್ಮನನರಿವನೆ ? ವಿಶ್ವ

೩೧೯೨ ಸೌಖ್ಯ ವಿರಲಿಳೆಯಲಿ ಸದ್ಭಕ್ತಿಯೇ ಬೇಕು,
ಸೌಖ್ಯ ಉದಿಸುತಿಹುದು ಸನ್ಮತವದು,
ಸೌಖ್ಯ ಹೊಂದಿದವನು ಸಂತೋಷಿಸಬಹುದು, ವಿಶ್ವ

೩೧೯೩ ಬೂದಿ ಮುಚ್ಚಿದಂತೆ ಭಕ್ತಿ ನಿಶ್ಚಲವಿರೆ,
ತಗಲಿಕೊಂಡು ಮುಕ್ತಿ ತಾನೆ ಬಹುದು,
ಜಗದಿ ಒಪ್ಪ ನುಡಿಯೆ ಜಾಣರಿಲ್ಲವಲ್ಲ, ವಿಶ್ವ

೩೧೯೪ ಮೂರು ವೇಳೆಯಲ್ಲಿ ಮುದದಿ ಶಿವನ ಆತ್ಮ,
ಪೂಜೆ ಮಾಡುವವನು ಪುಣ್ಯ ಮೂರ್ತಿ !
ಪೂಜೆಯಿರದೆ ಮೋಕ್ಷ ಭೋಗವು ದೊರೆಯುವುದೆ ? ವಿಶ್ವ

೩೧೯೫ ಈಶ್ವರನ ನೆನೆಯಲು ಏಳು ಭಾಗ ಮಾಡಿ,
ತನ್ನ ಮೂರ್ತಿಯೆಲ್ಲ ತ್ಯಜಿಸಿ ಬಿಟ್ಟು,
ನಿತ್ಯ ಕರ್ಮಗಳನು ನಿಲಿಸುವ ನೆರೆಯೋಗಿ, ವಿಶ್ವ

೩೧೯೬ ಜಪವ, ಬಾಹ್ಯಪೂಜೆ ಸಾಕೆನಿಸುವರೆ ಮಾಡಿ,
ಕಪಟ ಬಿಡದೆ ಇರಲು ಕಷ್ಟ ಜನಕೆ,
ಮುಕ್ತಿ ಹೊಂದದಿದ್ದು ಮುಳುಗಿದರು ತಮದೊಳು, ವಿಶ್ವ

— — — — — — — — — — — — — — — — — — — —

೩೧೯೭ ಘಟವ ಗಾಣ ಮಾಡಿ, ಗುಣಗಳೆತ್ತು ಮಾಡಿ,
ಎಲ್ಲ ಕರ್ಮಗಳನು ಎಳ್ಳು ಮಾಡಿ,
ತಿಳಿದು ಗಾಣವಾಡಿದ ತೈಲ ಕಾರನಾತ್ಮ, ವಿಶ್ವ

೩೧೯೮ ಅಖಿಲ ಕೊರತೆ ತೀರಿ, ಅತಿಶಯ ಕಾಮಿಯಾಗಿ,
ನಿನ್ನ ನಂಬೆ ಪೂರ್ಣ ನಿಷ್ಠೆಯಿಂದ,
ನಿನ್ನ ನೆನೆಯೆ ಮುಕ್ತಿ ನಿಶ್ಚಯಾಗಿ ಉಂಟು, ವಿಶ್ವ

೩೧೯೯ ಭಾವಾಭಾವಕೆ ಅಂಟದೆ,
ಸೇವಿಸುವವ ಬಟ್ಟಬಯಲು ಸ್ಥಿರಮತಿಯೊಳಗೇ,
ಕೇವಲ ಶಿವನ ಧ್ಯಾನವ
ಸ್ಥಾವರವನು ಕಂಡ ಅವನೆ ಧನ್ಯನು ವೇಮಾ.

೩೨೦೦ ಭಕ್ತಿ ನಾಮ ಬೇರೆ, ಭಕ್ತಿ ಎಲ್ಲ ಒಂದೆ,
ಶೈವ ನಾಮ ಬೇರೆ, ಶೈವವೊಂದೆ,
ವೇದ ಶಾಸ್ತ್ರ ಬೇರೆ, ವೇದವಿಹುದು ಒಂದೆ, ವಿಶ್ವ

೩೨೦೧ ಅಖಿಲ ಜಾಡು ತೊರೆದ ಆನಂದ ಕಾಮಿಯು,
ನಿನ್ನ ನಂಬಲಾಗ ನಿಷ್ಠೆಯಿಂದ,
ನಿನ್ನ ನಂಬೆ ಮುಕ್ತಿ ನಿಶ್ಚಯ ನಿನ್ನಾಣೆ, ವಿಶ್ವ

೩೨೦೨ ಶಿವನ ಮೇಲೆ ಮನಸು ಸ್ಥಿರವಾಗಿ ಇದ್ದರೆ,
ಹೌದು ಮೋಕ್ಷ ಪಡೆವ, ಹೌದು ಅವನೆ,
ಶಿವನ ಮೇಲೆ ಮನಸು ಸರಿಯೆ ಇರುವೆಯಷ್ಟು,
ಇರದೆ ಇರಲು ಮುಕ್ತಿ ಇರದು ವೇಮ.

೩೨೦೩ ಜೇನು ಕಿಂಡಿ ನೋಡೆ ಜೇನು ನೊಣಕೆ ಗೊತ್ತು,
ಸುಮ ರಸವನು ನೋಡೆ ಭ್ರಮರಕರಿವು,
ಪರಮ ಯೋಗಿ ನೋಡೆ ಭಕ್ತನರಿಯುತಿಹನು, ವಿಶ್ವ

೩೨೦೪ ಜಂಗಮಾಖ್ಯ ಭಕ್ತಿ ಸಂಧಿ ಬೇರೇನಿಲ್ಲ,
ಸಗುಣ ಭಾವವದುವೆ ಶಾಸ್ತ್ರ ವಿಧಿಯು,
ನಿರ್ಗುಣವ ಬಿಡಲು ನೆರೆವೇರುವುದು ಯಾಗ, ವಿಶ್ವ

# ಆ. ಭಕ್ತಿ ಯೋಗ

ಭಕ್ತಿ ಎಂದರೆ ಸೇವಿಸುವುದು. ಯಾರನ್ನು ? ಎಂಬ ಪ್ರಶ್ನೆಯು ಸಹಜವಾಗಿ ಏಳುತ್ತದೆ. ಭಗವಂತನನ್ನು ತಾನೇ? 'ಭಕ್ತಿಃ ಭಗವತೋ ಸೇವಾ' ಎಂಬ ಸೂತ್ರವಾಕ್ಯವೂ ಇದೆ. ಈ ಭಗವಂತ ಎಂದರೇನು ? ಐಸಿರಿ, ಧೀ, ಸ್ಥೈರ್ಯ ಇತ್ಯಾದಿ ಷಡ್ಗುಣಗಳಿಗೆ 'ಭಗ' ಎನ್ನುತ್ತಾರೆ. ಇವುಗಳನ್ನು ಹೊಂದಿದವನೇ ಭಗವಂತ. ಈ ಭಗವಂತನ ವಿರಾಟ್ ದರ್ಶನವು ತನ್ನೊಳಗೇ ಇದೆ. ವಿರಾಟ ರೂಪವು ವಿಶ್ವ ತುಂಬಿಕೊಂಡಿದೆ.

ಯೋಗ ಸಾಧಕನು 'ಓಂ' ನಾದವನ್ನು ಅನಾಹತದಲ್ಲಿ ಕೇಳತೊಡಗಿದಾಗ ಅವನನ್ನು ಭಕ್ತನೆನ್ನಬಹುದು. ಸಾಧನೆಯಿಂದ ಆಂತರ್ಯದಲ್ಲಿ ಜ್ಯೋತಿ ದರ್ಶನವಾದಾಗ ಯೋಗಿ ಎನ್ನಬಹುದು. ನಿತ್ಯವನ್ನು ಅರಿತಾಗ, ಅಂದರೆ ಆದಿತ್ಯವನ್ನು ತೊರೆದಾಗ ನಿರ್ವಾಣ ಪದವಿ ಪಡೆದವನೆನ್ನಬಹುದು.

'ಓಂ' ಎಂಬ ಏಕ ಪದವನ್ನೇ ಮನದಲ್ಲಿ ಇರಿಸಿಕೊಂಡು ಎಲ್ಲ ಗುಟ್ಟನ್ನು ಪರಿವೀಕ್ಷಿಸಿದರೆ, ಸಕಲ ಶ್ರುತಿಗಳ ಅರ್ಥವೂ ಇದೇ ಆಗಿದೆಯೆಂದು ವೇದ್ಯವಾಗುತ್ತದೆ.

ಸಾಧನೆಯೆಂದರೆ, ಸಾಧುಗೊಳಿಸುವುದು. ದೇಹವನ್ನೇ ಒಂದು ಪಣತೆಯೆಂದು ಭಾವಿಸಿದರೆ, ತ್ರಿಗುಣಗಳನ್ನು ಬತ್ತಿ ಎನ್ನಬಹುದು. ಮತ್ತು ತಮ್ಮ ಕರ್ಮ ಸಂಚಯವನ್ನು ಎಣ್ಣೆ ಎನ್ನಬಹುದು. ಈ ಭಕ್ತಿ ಜ್ಯೋತಿಯನ್ನು ಹೊತ್ತಿಸಿದರೆ, ಕರ್ಮದ ತೈಲವೂ ತೀರುತ್ತದೆ. ತ್ರಿಗುಣಗಳ ಬತ್ತಿಯೂ ಉರಿದು ಹೋಗುತ್ತದೆ. ಕರ್ಮದೂರನಾಗಿ, ತ್ರಿಗುಣಾತೀತನಾಗಿ ಉಳಿಯುವುದೇ ಭಕ್ತಿ ಫಲವಾದ ಮುಕ್ತಿಯಾಗಿದೆ.

ಭಕ್ತಿಯೋಗ ಸಾಧನೆಯ ಸತ್ಯ, ಅಹಿಂಸೆ, ಆಸ್ತೇಯ, ಅಪರಿಗ್ರಹ ಮತ್ತು ಬ್ರಹ್ಮಚರ್ಯಗಳೆಂಬ ಯಮ ಸಾಧನೆಗಳೂ ಬೇಕು. ಶೌಚ, ಸಂತೋಷ, ತಪ, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನಗಳೆಂಬ ನಿಯಮ ಸಾಧನೆಗಳೂ ಬೇಕು. ಕ್ರಮದಿಂದ ಭಕ್ತಿ ಸಾಧನದಲ್ಲಿ ಮುಂದುವರಿದು ಪರಿಪೂರ್ಣವನ್ನು ಹೊಂದಬೇಕು.

ಕಾಗೆಯೊಂದು ಕಷ್ಟಪಟ್ಟು ಗೂಡು ಕಟ್ಟುತ್ತದೆ. ಅಲ್ಲಿ ಕಷ್ಟಪಡದ ಕೋಗಿಲೆಯು ತತ್ತಿ ಇಟ್ಟು ಹೋಗುತ್ತದೆ. ಕಾಗೆಯೇ ಅದರ ಪೋಷಣೆಯ ಭಾರ ಹೊರುತ್ತದೆ. ಅದೇ ರೀತಿ, ಕೀಟವು ಏನೂ ಮಾಡದೆ ಬೆದರಿಕೊಂಡಿರುತ್ತದೆ. ಭ್ರಮರವೇ ಅದನ್ನು ದಿಟ್ಟಿಸಿ, ನೋಡುತ್ತ ಅದನ್ನು ತನ್ನ ಹಾಗೆ ಮಾಡುತ್ತದೆ. ಇಂಥ ಮುಕ್ತಿಯ ದೃಷ್ಟಾಂತ ಕೇಳಿ ಮನುಷ್ಯನು, ತಾನೇನೂ ಮಾಡಬೇಕಿಲ್ಲವೆಂದು ತೆಪ್ಪಗಿದ್ದು, ಭಕ್ತಿಯ ಸಾಧನೆಗಿಳಿಯದೆ ಕೆಡುತ್ತಾನೆ.

ವಿಶ್ವ ತತ್ತ್ವವನ್ನು ವಿವರವಾಗಿ ತಿಳಿದು, ಭಕ್ತಿಯ ಮೂಲವಾದ ಸಮರ್ಪಿತ ಭಾವವನ್ನು ಹೊಂದಿ ವಿಧಿ ವಿಧಾನಗಳೆಲ್ಲ ವಿಶ್ವಕರ್ಮನ ವಿದ್ಯೆಗಳೇ ಆಗಿವೆ. ಅವನು

ವಿಶ್ವದ ಜನರ ಕಣ್ಣಿಗೆ ಕಾಣಿಸನು. ಅವನು ಇಂದ್ರಿಯಗೋಚರನಲ್ಲ, ಮರೆಯಲ್ಲಿದ್ದು, ಎಲ್ಲರನ್ನೂ ಮತ್ತು ಎಲ್ಲವನ್ನೂ ಬೊಂಬೆಗಳಂತೆ ಆಡಿಸುತ್ತಿರುವ ಸೂತ್ರಧಾರಿ ಅವನೇ ವಿಧಾತ.

೩೨೦೫ ಪ್ರಣವನರಿಯದನಕ ಭಕ್ತನಾಗನಾರ,
ಜ್ಯೋತಿ ಕಾಣದನಕ ಜೋಗಿಯಲ್ಲ,
ನಿತ್ಯವರಿಯದನಕ ನಿರ್ವಾಣಿಯು ಅಲ್ಲ, ವಿಶ್ವ

೩೨೦೬ ಏಕ ಪದವನು ಮನದಿರಿಸಿ,
ಪ್ರಕಟಿತವಹ ಗುಟ್ಟನರಿತು ಪರಿಕಿಸಿದಾಗಳ್,
ಸಕಲವಿರುವ ಶ್ರುತ್ಯರ್ಥವು
ನಿಕಟಾಗಿಹುವಿಲ್ಲಿ, ರಹಸ್ಯ ನಿಲಯ ವೇಮಾ,

೩೨೦೭ ಕಾಯ ಪಣತೆ ಮಾಡಿ, ಗುಣವ ಬತ್ತಿ ಮಾಡಿ,
ತಮ್ಮ ಕರ್ಮ ಕುಲವ ತೈಲ ಮಾಡಿ,
ಮೂಲವೊಂದೆ ಜ್ಯೋತಿ ಮುಟ್ಟಿ ನೋಡಿದಾಗ, ವಿಶ್ವ

೩೨೦೮ ಮಣ್ಣು ಗಡಿಗೆ ಮಾಡಿ ಮಹಿಯ ಮೇಲೆ ಬಾಳ್ವ,
ಭ್ರಷ್ಟ ಕುಂಬಾರನ ಬ್ರಹ್ಮನೆನಲು,
ನೂಕಲು ನಿಲುವುದೇ ? ನೀತಿಯೀ ಧರೆಯಲಿ, ವಿಶ್ವ

೩೨೦೯ ಯಮ ನಿಯಮ ಯೋಗ ವೃತ್ತಿಯ
ಕ್ರಮದಲಿ ಗಮನಿಸುತ ಮೀರೆ ಕಡು ಚಿತ್ರವಲಾ !
ಕ್ರಮಗಳು ತೀರಿದೊಡೆ ಮನಕೆ,
ಪ್ರಮುದಿತ ಪರಿಪೂರ್ಣದಲ್ಲಿ ಪೊಳೆವುದು, ವೇಮಾ.

೩೨೧೦ ಕಾಗೆ ಇರುವ ಗೂಡು ಕೋಗಿಲೆಗಾದಂತೆ ;
ಭ್ರಮರದಿಂದ ಕೀಟಕವಹ ರೀತಿ,
ಕೇಳಿ ಸತ್ಯ ಮುಕ್ತಿ ಕೆಡುತಿಹ ನರನಲಾ ! ವಿಶ್ವ

೩೨೧೧ ವಿಶ್ವ ತತ್ತ್ವವೆಲ್ಲ ವಿಶದವಾಗಿ ತಿಳಿದು,
ಭಕ್ತಿ ಮೂಲವೆಲ್ಲ ಭದ್ರಪಡಿಸಿ,
ರಕ್ಷಕತ್ತ್ವವಾಂತು ರಾಜಯೋಗಿಯಾದ, ವಿಶ್ವ

೩೨೧೨ ವಿಶ್ವ ಕರ್ಮನಿರದೆ, ವಿಶ್ವವೆಂಬುದಿರದು ;
ವಿಶ್ವ ಕರ್ಮ ಗೆಯ್ದ ವಿದ್ಯೆಯೆಲ್ಲ,
ವಿಶ್ವ ಕರ್ಮ ಹೀನ ವಿಶ್ವವೆಲ್ಲ ಹಾಳು, ವಿಶ್ವ

೩೨೧೩ ಟಿಪ್ಪಣಿಗಳ ಗೆಯ್ದು ಹೇಳಿದ ಮಾತುಗಳ,
ಪೇಳುತಿಹುವು, ಅಖಿಲ ಶ್ರುತಿ ಸ್ಮೃತಿಗಳು,
ಕೇಳಿ ಹೇಳರೇಕೆ ? ಕಾಣು ವೇದಾಂತ ಸಾರ, ವಿಶ್ವ

೩೨೧೪ ಕೊಡೆಯು ತಾನೀವುದು ಕಡು ಸುಖಕರ ನೆರಳು,
ಶಾಸ್ತ್ರವರಿಯೆ ತನಗೆ ಶುದ್ಧ ಜ್ಞಾನ,
ತಂದೆ ಇಷ್ಟವಂಗೆ ರಕ್ಷೆ ತಪ್ಪದೆಂದು, ವಿಶ್ವ

೩೨೧೫ ತತ್ತ್ವವರಿತಿರುವವ ದೈವವರಿಯುತಿಹನು,
ಸರ್ವ ಕಾಮಗಳನು ಸಾವ ಹೊಡೆವ,
ಬಾಳೆ ನುಂಗುವವನು ವಿಷವ ನುಂಗಬಹುದೆ? ವಿಶ್ವ

೩೨೧೬ ಮೊದಲಿನ ಮತವನು ಬಿಡದಲೆ,
ತುದಿಗಾವ ಮತವಿರಲಿ ದೂಷಿಸದಿರುವನು ತಾ,
ಕುದುರಿದ ಕೋರಿಕೆ ಕೋರದೆ,
ಮುದದಿಂದ ಚರಿಸುವಂಥ ಬುಧ ಮುಖ್ಯ ವೇಮಾ.

೩೨೧೭ ಬೊಂಬೆಯಾಟದವನು ಬೊಂಬೆಯಾಡಿಸುವನು,
ಧರಣಿ ಜನರ ನೋಟದೆಲ್ಲೆ ಮೀರಿ,
ತಾನು ಮರೆಯೊಳಿದ್ದು ದೈವವಾಡಿಸುವನು, ವಿಶ್ವ

೩೨೧೮ ಆರೆರಡಕ್ಷರ ಜಪದಲಿ,
ಹೋರಾಡಲು ಮುಕ್ತಿಯುಂಟು, ಯತ್ನಿಸುತಿಪ್ಪರ್,
ಮಾರು ನುಡಿಯದೆ, ಮನದೊಳಗೆ,
ಹೋರಿ ತಾವೇ ಪಡೆದಿಹರು ಪೂರ್ಣವ ವೇಮಾ.

●

# ಇ. ಭಕ್ತನ ಧ್ಯಾನ ಮೂರ್ತಿ

ಶಿವನ ಉಪಾಸನೆಯು ದ್ವಿವಿಧ. ಒಂದನೆಯದು ಸಗುಣೋಪಾಸನೆ. ಎರಡನೆಯದು ನಿರ್ಗುಣೋಪಾಸನೆ. ನಿರ್ಗುಣೋಪಾಸನೆಯಲ್ಲಿ ಶಿವನಿಗೆ ಯಾವುದೇ ಗುಣಗಳ ಸಂಗವಿಲ್ಲದ ಕಲ್ಪನೆ ಇರುತ್ತದೆ. ಸಗುಣದಲ್ಲಿ, ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವಾಂತರ್ಯಾಮಿತ್ವ, ಕರುಣೆ, ದಯೆ, ಶಾಪಾನುಗ್ರಹಶಕ್ತಿ ಇತ್ಯಾದಿ ಗುಣಗಳಿರುತ್ತವೆ. ಗುಣಗಳ ಸಂಕಲನಕ್ಕೆ 'ಭಗ' ಎನ್ನುತ್ತಾರೆ. ಗುಣಗಳುಳ್ಳವನು ಭಗವಂತ. ಮಹಿಮೆಗಳೇ ಅವನ ಐಸಿರಿ. ಸಿದ್ಧಿಗಳೆಲ್ಲ ಈಶ್ವರನವು. ಹಾಗಾಗಿ ಅವು ಆಶ್ಚರ್ಯಸಿದ್ಧಿಗಳಾಗಿವೆ.

ಇದಲ್ಲದೆ ಶಿವನನ್ನು ಅಮೂರ್ತ ಎಂದೂ ಮತ್ತು ಮೂರ್ತ ಎಂದೂ ವಿಂಗಡಿಸಿ ತಿಳಿಯಲಾಗುತ್ತದೆ. ಮೂರ್ತರೂಪದಲ್ಲಿ ವಿಶ್ವವೇ ಒಂದು ದೇಹವಾಗಿ ಸೂರ್ಯ, ಚಂದ್ರ, ಮತ್ತು ಅಗ್ನಿಗಳು ತ್ರಿನೇತ್ರಗಳೆಂದು ಕಲ್ಪಿಸಲಾಗುತ್ತದೆ. ಇಲ್ಲಿ ಪ್ರಕೃತಿಯು ಶಿವನ ಸಂಗಾತಿ. ಪರ್ವತ ಕನ್ಯೆ ಪಾರ್ವತಿಯೆಂದು ಅವಳಿಗೆ ಹೆಸರು. ಜಲಧಾರೆಯಾದ ಗಂಗೆ ಶಿವನ ಮುಡಿಯಿಂದ ಜಗತ್ ರಕ್ಷಕನಾದ ರಾಜಸ ದೇವತೆ ಹರಿಯ ಅಡಿಗೆ, ಜನರ ಸೇವೆಗಾಗಿ ಹರಿಯುವಳು. ಶಿವನ ಶಕ್ತಿಯಿಂದ ಕಾಮದಹನವಾಗುತ್ತದೆ. ಅವನನ್ನು ಹೀಗಳೆದ ದಕ್ಷಬ್ರಹ್ಮನ ಶಿರಚ್ಛೇದವಾಗುತ್ತದೆ. ಇದು ಶಿವನ ಮೂರ್ತ ರೂಪದ ಕಲ್ಪನೆ.

ಸಾಮಾನ್ಯ ಜನರಿಗೆ, ಅಧಮಾಧಮವೆಂದು ಮುನಿಗಳು ಹೀಗಳೆಯುವ ಚಿತ್ರ, ಶಿಲೆ, ಲೋಹ, ಕಟ್ಟಿಗೆಗಳ ಮೂರ್ತಿಗಳೂ ಸಮ್ಮತವಾಗಿವೆ.

ವೇಮನ ಯೋಗಿಗಳು ಜಡ ಮೂರ್ತಿ ಕಲ್ಪನೆಯನ್ನು ಒಪ್ಪಿಲ್ಲ. ಆದರೆ ಸಗುಣ–ನಿರ್ಗುಣ ಬ್ರಹ್ಮವನ್ನು ಒಪ್ಪಿದ್ದಾರೆ. ಅಮೂರ್ತ ಮತ್ತು ವಿರಾಟದ ಮೂರ್ತ ರೂಪವನ್ನು ಒಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಬೋಧಿಸುವ ಧ್ಯಾನ ಮೂರ್ತಿಯನ್ನು ಕುರಿತು ತಿಳಿಯುವಾ.

ಪರಮಾತ್ಮನಿಗೆ ವಿಶ್ವಕರ್ಮ ಎಂಬ ಹೆಸರಿದೆ. ಅವನೇ ವಿಶ್ವ ದೇವನಾಗಿದ್ದಾನೆ. ಅವನನ್ನು ಪರಹಿತಕ್ಕೋಸುಗ ಪೂಜಿಸಿ ನಂಬಿಕೊಳ್ಳದವರು ನರಕ ಕೂಪದಲ್ಲಿ ಬೀಳುವರು. ಈ ವಿಶ್ವಕರ್ಮನು ವಿಮಲನಾದ ವಿರಾಟನೇ ಆಗಿದ್ದಾನೆ. ಏಕೆಂದರೆ ಭೂ ಗಗನಗಳನ್ನು ಪಸರಿಸಿರುವ ಜಗವನ್ನಾಳುವ ರಾಜನು ಅವನೇ.

ಹರಿಯು ರಾಜಸ ಗುಣದ ಪ್ರತಿನಿಧಿ. ಹಾಗಾಗಿ ಜಗತ್ತಿನ ಪಾಲಕನೇ ಅವನು. ಹಾಗಾಗಿ ಎಲ್ಲ ದೇವತೆಗಳು ಹರಿಯ ಪೂಜೆಗೆಯ್ಯಲೇಬೇಕು. ಅಂದರೆ ಸತ್ತ್ವಗುಣಿಗಳೆಲ್ಲ ಆನಂದಿತರಾಗುತ್ತಾರೆ. ಅರ್ಥಾತ್ ಹರನು ತಾಂಡವ ನೃತ್ಯ ಮಾಡಿ ದುರ್ಗುಣಗಳನ್ನು ದೂರಮಾಡುತ್ತಾನೆ. ಇತ್ತ ತಾಮಸ ಪ್ರತಿನಿಧಿಯಾದ ಬ್ರಹ್ಮನು, ಬಿಂದುವಿನಿಂದ ನಾದ ಹುಟ್ಟಿಸಿ ; ಮದ್ದಳೆ ಬಾರಿಸಿದಂತಾಗುತ್ತದೆ. ಇವೆಲ್ಲ ಭಾವ

ಲೋಕಕ್ಕೆ ಸಂಬಂಧಿಸಿವೆ ನಿಜ. ಭಾವವೆಂದರೆ ಬೇರೆ ಪರದೇಶದಲ್ಲೇನೂ ಇಲ್ಲ. ಅವರವರು ಮಾಡಿದ ಕರ್ಮಗಳಿಗಂಟಿ ಆಯಾ ಭಾವ ಮೂಡುತ್ತದೆ. ಇಂಥ ಭಾವದಲ್ಲಿ ಶಿವನನ್ನು ಭಾವಿಸಿ ನೋಡಬೇಕು. ಹೀಗೆ ಭಾವಿಸಿ ನೋಡುತ್ತಿದ್ದರೆ, ತಾವೆ ಸಕಲವನ್ನು ತುಂಬಿಕೊಂಡ ತತ್ತ್ವವಾಗುತ್ತಾರೆ. ಅತ್ಯಂತ ಅಚ್ಚರಿಯ ಸಂಗತಿಯೆಂದರೆ, 'ಪ್ರಣವ' ನಾದವು ಮೀರಿ ಜಗವೆಲ್ಲವನ್ನೂ ತುಂಬಿಕೊಂಡಂತೆ ಭಾಸವಾಗುತ್ತದೆ. ಆ ಶಬ್ದವನ್ನು ದಾಟಿ ನಿರ್ಗುಣದ ಬಟ್ಟ ಬಯಲಲ್ಲಿ ಪಾದವಿರಿಸಬೇಕು.

ಹೀಗೆ ಭ್ರೂಮಧ್ಯದಲ್ಲಿ ಧ್ಯಾನಮಗ್ನನಾದಾಗ, ಶೃಂಗಾರಮಯ ರಾಗವನ್ನು ಕೇಳುವ ಚಿಹ್ನೆಗಳು ತೋರಿಬರಲು, ಪೂರ್ಣ ಮನದಲ್ಲಿ ಒಮ್ಮೆಲೆ ಆತ್ಮ ಲಿಂಗದಲ್ಲಿ ಬೆರೆಯುವುದೆಲ್ಲ ಲೀಲೆಯಂತೆ ನಡೆಯುತ್ತದೆ. ಏಕೆಂದರೆ ಅಲ್ಲಿ ಸ್ವಪ್ರಯತ್ನವಿರದೆ ಎಲ್ಲವೂ ದೈವ ಲೀಲೆಯಾಗಿರುತ್ತದೆ.

ಅರಿವಿನಿಂದ ಶಿವಪೂಜೆಯನ್ನು ಕ್ರಮವಾಗಿ ಮಾಡಬೇಕು. ಮೊದಲು ಹಿಡಿದ ಗ್ರಹಿಕೆಗಳನ್ನು ಬಿಡದೆ ಮುಂದುವರಿಯಬೇಕು. ಗೋಡೆಯನ್ನು ಅಡಿಪಾಯದಿಂದ ಪ್ರಾರಂಭಿಸದೆ, ತುದಿಗೆ ಪ್ರಾರಂಭಿಸುವರೇ? ಸಾಧನೆಯಲ್ಲಿ ಸಾಹಸ, ಧೈರ್ಯಗಳಿರಬೇಕು. ಅಲ್ಪ ತೃಪ್ತಿ ಇರದೆ ಅತಿಶಯವಾಗಿರಬೇಕು. ಅಂಥವನು ಶಿವನನ್ನು ನಂಬಿ ನಡೆದರೆ, ಮುಕ್ತಿ ಲಾಭವು ನಿಶ್ಚಯವಾಗಿ ಆಗುತ್ತದೆ.

ಸಾಧನದಲ್ಲಿ ಸ್ವಪ್ರಯತ್ನ ಬೇಕು. ಆದರೆ ಶಿವನ ಕರುಣೆಯಿಲ್ಲದೆ ಮರ್ತ್ಯವನ್ನು ದಾಟರು. ಅಭಯ ಸ್ಥಿತಿ ತಲುಪರು. ಇಲ್ಲಿ ಅರಿಷಡ್ವರ್ಗಗಳೊಡನೆ ಅಷ್ಟಪಾಶಗಳೊಡನೆ ಹೋರಾಡಿ, ಪೂರ್ಣತ್ವ ಹೊಂದಬೇಕು.

ಶಿವಯೋಗಿಯ ಹೃದಯವೇ ಶಿವನ ಮಂದಿರ. ಅಲ್ಲಿ ಭಕ್ತಿಯ ದೀಪ ಬೆಳಗಿಸಬೇಕು. ಆಗ ಎಲ್ಲವೂ ನಿತ್ಯ ಬೆಳಕಿನಿಂದ ತುಂಬುವದು. ಭೂ ಭುವಃ ಮತ್ತು ಸ್ವಃ ಎಂಬ ತ್ರಿಭುವನಗಳಿಗೆ ಶಿವನೇ ಕರ್ತನಾಗಿದ್ದಾನೆ.

ಮನವು ಒಲಿದ ಪೂಜೆಯನ್ನು ಶಿವನು ಮೆಚ್ಚುವನು. ಇನ್ನು ಮನಸ್ಸನ್ನೇ ನಿಲ್ಲಿಸಿದವನು ಮಹಿಮನಾಗುತ್ತಾನೆ. ಮನವಿಲ್ಲದೆ ಮಾಡುವ ಒಣಪೂಜೆಯು ಮಣ್ಣುಪಾಲೇ ಸರಿ. ಅಕ್ಷರಗಳ ಸಂಪುಟಗಳ ಕಾಶಿಯನ್ನು ಓದಿದರೆ ಏನಾಗುತ್ತದೆ? 'ಶಿವ' ಎಂಬ ಎರಡು ಅಕ್ಷರಗಳನ್ನು ಪಠಿಸಿದರೆ ಸಾಕು. ಮನವು ಶುದ್ಧವಾಗುತ್ತದೆ.

ಲೋಕದಲ್ಲಿ 'ಯದ್ಭಾವಂ ತದ್ಭವತಿ' ಭಾವಿಸಿದ ಪರಮಾತ್ಮನ ಕುರುಹು ಉಂಟು. ಭಾವಿಸಿದರೆ ಈ ಲೋಕವೇ ಬ್ರಹ್ಮವೆನಿಸುವುದು. ಆದರೆ ಚೆನ್ನಾಗಿ ತಿಳಿಯದ ವಿಧವನ್ನರಿಯದವರು ಕೆಡುತ್ತಾರೆ.

ಭಾವವು ನೆಲೆಗೊಂಡ ಪೂರ್ಣ ಪ್ರಜ್ಞೆ ಹೊಂದಿದಾಗ ದೇವರು ನಿರ್ವಿಕಾರನಾಗಿ ಉಂಟು. ಅವನು ನಿತ್ಯನಾಗಿಯೂ ಉಂಟು. ಭಾವವನ್ನು ಬಿಡದೆ, ಹೊಂದಿಕೊಂಡಿದ್ದರೆ, ಅದೇ ಒಳ್ಳೆಯ ಪದವಿಗೆ ಮಾರ್ಗ ತೋರುವುದು.

— — — — — — — — — — — — — — — — — — — —

ಹೀಗೆ ಬ್ರಹ್ಮರಂಧ್ರದಲ್ಲಿ ಲಕ್ಷ್ಯವನ್ನಿರಿಸಿ ಭಾವಿಸಿದರೆ, ಓರ್ವ ಕರ್ತನೇ ಇರುವನೆಂದು ಖಚಿತಪಡುತ್ತದೆ. ಅವನ ಸೇವೆ ಮಾಡಿದರೆ ಸಾಕು. ಭುಕ್ತಿಯನ್ನೂ ಮತ್ತು ಪರಮಾರ್ಥದಲ್ಲಿ ಮುಕ್ತಿಯನ್ನೂ ಅವನೇ ಈಯುತ್ತಾನೆ.

ರುದ್ರನೇ ಜೀವರಿಗೆ ಆಧಾರವಾಗಿದ್ದಾನೆ. ಅವನನ್ನು ಸೇವಿಸುತ್ತ ಅರ್ಚಿಸುತ್ತ ಸ್ಥಿರ ಬುದ್ಧಿ ಹೊಂದಿ, ಭಾವಕ್ಕೆ ಅತೀತನಾಗಬೇಕು. ಆಗ ಬಯಲಲ್ಲಿ ಘನತೆಯನ್ನು ಅರಿಯಬಹುದು.

ಖಂಡ ಪರಶುವಾದ ರುದ್ರನನ್ನು ಪೂಜಿಸಿದರೆ ಭಾರಿ ವಿಭೂತಿ ಅಂದರೆ ಮಹಿಮೆಗಳನ್ನು ತೋರುವನು. ಅದರಿಂದ ಹೇಗೆ ವರ್ತಿಸಬೇಕೆಂಬ ನೀತಿಯನ್ನು ತಿಳಿದು, ಶಿವನನ್ನು ಪ್ರಾರ್ಥಿಸುತ್ತಿದ್ದರೆ, ಶಿವಾನುಭವವನ್ನು ಹೊಂದುತ್ತಾನೆ ಮತ್ತು ಈಶ್ವರನ ಸಿದ್ಧಿಯನ್ನು ಪಡೆಯುತ್ತಾನೆ.

ಹೀಗೆ ಶಿವನನ್ನು ನಂಬಿಕೊಂಡು, ಅಂತರಂಗ ಶುದ್ಧವಾದವರು ಕಾಲ ಕರ್ಮಗಳ ಬಾಧೆಯನ್ನು ಮೆಟ್ಟಿ ನಿಂತು, ಪೂರ್ಣ ಪದವಿಯನ್ನು ಪಡೆಯುವರು. ಅವರೇ ಶಿವಯೋಗಿ.

೩೨೧೯ ವಿಶ್ವಕರ್ಮ ಹೆಸರು ; ವಿಶ್ವದೇವನೆನಲು,
ಪುಣ್ಯಕಾರ್ಯ ವಿಧದಿ ಪೂಜೆ ಗೆಯ್ದು,
ನಂಬಿಕೊಳ್ಳದವರು ನರಕದಿ ಬೀಳರೇ ? ವಿಶ್ವ

೩೨೨೦ ವಿಶ್ವಕರ್ಮ ಪೂಜೆ ವಿಪುಲ ಮುದದಿ ಗೆಯ್ಯೆ,
ವಿಶ್ವ ಜನನ ಮಯೀ ವಾಸವಾಯ್ತು,
ವಿಶ್ವಕರ್ಮ ಆದಿ ವಿಮಲ ವಿರಾಟನೇ ವಿಶ್ವ

೩೨೨೧ ಅಖಿಲ ದೇವತೆಗಳು ಹರಿಯ ಪೂಜೆ ಗೆಯ್ಯೆ,
ಹರನು ನೃತ್ಯ ಗೆಯ್ವ, ಆದಿಯಲ್ಲಿ,
ಆದಿ ಬ್ರಹ್ಮ ತಾನೆ ಅಂತೆ ಮದ್ದಳೆ ಬಡಿದ. ವಿಶ್ವ

೩೨೨೨ ಭಾವವೆನಲು ಬೇರೆ, ಪರದೇಶದೊಳಿಲ್ಲ ;
ಅವರು ಗೆಯ್ದ ಕಾರ್ಯ ಆತು ಉಂಟು ;
ಭಾವದಲ್ಲಿ ಶಿವನ ಭಾವಿಸಿ ನೀನಿಹುದು. ವಿಶ್ವ

೩೨೨೩ ಭಾವವರಿಯೆ ಬೇರೆ, ಪರದೇಶದಲಿ ಇಲ್ಲ,
ತಾನು ಗೆಯ್ದ ಕಾರ್ಯ ತಗಲಿ ಇಹುದು,
ಭಾವದಲ್ಲಿ ಶಿವನ ಪರಿಕಿಸುತಿರಬೇಕು, ವಿಶ್ವ

೩೨೨೪ ಭಾವಿಸುತ ನೋಡುತಿದ್ದೊಡೆ,
ತಾನೆ ಸಕಲ ತುಂಬಿಕೊಂಡ ನಿಲುಮೆಯೊಳಗಲಾ,
ಈ ವಸುಧೆಯಚ್ಚರಿ ತೋರ್ಪ,
ಆವನ ಶಬುದವೊ, ಅದ ದಾಟಿ, ರಾಜಿಸು ವೇಮಾ,

೩೨೨೫ ಭಾವಿಸಲು ಲಿಂಗವಿರುವುದು,
ಭಾವಿಸಲು ಲೋಕದಲ್ಲಿ ಬ್ರಹ್ಮವೆನುವುದು,
ಓವಿ ತಿಳಿದ ವಿಧವರಿಯದೆ,
ಈ ವಿಧದಲಿ ನರರು ಕೆಡುವರಿಳೆಯಲಿ, ವೇಮಾ.

೩೨೨೬ ಭಾವ ನೆಲೆಗೊಂಡ ಪೂರ್ಣವಹ ಪ್ರಜ್ಞೆ ಹೊಂದಿ,
ನಿರ್ವಿಕಾರನಾಗಿ ಉಂಟು, ನಿತ್ಯವಾಗಿ
ಹೊಂದು ಸಂತತ ಭಾವವನು ಹಿಡಿತ ಬಿಡದೆ,
ಸುಕರ ಪದವಿಗೆ ಮಾರ್ಗದರ್ಶನವು ವೇಮ.

೩೨೨೭ ಭಾವನೆಯಲಿ ತಿಳಿದು, ಬ್ರಹ್ಮರಂಧ್ರದೊಳಗೆ,
ಕರ್ತನಾಗಿ ನಿಲುವ ಕರ್ತ ನೋರ್ವ,
ಸೇವೆ ಗೆಯ್ಯಲೀವ ಶಿವನು ಮುಕ್ತಿ ಭುಕ್ತಿ ವಿಶ್ವ

೩೨೨೮ ಜೀವಾಧಾರನು ರುದ್ರನು,
ಸೇವಾರ್ಚನ ಪರನಾಗುವ ಸ್ಥಿರಮತಿ ಬೆಳಗಲ್,
ಭಾವಾತೀತ ಪರನಾಗೆ,
ಭಾವಿಸು ನೀ ಮನದ ಬಯಲು, ಘನತೆಯು, ವೇಮಾ.

೩೨೨೯ ಖಂಡ ಪರಶುವಿನ ಪೂಜಿಸಿ ದಾಂಡಿಗದ ವಿ–
ಭೂತಿಯೀವನು ಅದರಿಂ, ನೀತಿ ಹೊಂದಿ,
ಶಿವನ ಪ್ರಾರ್ಥಿಸುತಿರಲು ಅನುಭವವ ಹೊಂದು,
ಗೆಯ್ವನೈಶ್ವರ್ಯವೀವುದರಿಂದ, ವೇಮ.

೩೨೩೦ ಶಿವನ ನಂಬಿದ ಹೃದಯ ಶುದ್ಧಾಂತರಂಗರು,
ಕಾಲ ಕರ್ಮಗಳ ಕೆಳಗೆ ತುಳಿದು,
ಮೇಲು ಪೂರ್ಣ ಪದವಿ ಮೆಚ್ಚುವ ಶಿವಯೋಗಿ, ವಿಶ್ವ

೩೨೩೧ ರಂಗಾಗಿ ಭ್ರೂ ಮಧ್ಯದಿ,
ಶೃಂಗಾರ ರಾಗ ಕೇಳುವ ಚಿಹ್ನವು ತೋರಲ್,
ಚಂಗನೆ ತುಂಬಿದ ಮನದಲಿ,
ಲಿಂಗದಲಿ ಕರೆಯುತಿರುವುದು, ಲೀಲೆಯು, ವೇಮಾ !

೩೨೩೨ ಅರಿವಿನ ಶಿವಪೂಜೆ ಬರಿದಲ್ಲವೆಂದೂ,
ಮೊದಲು ಹಿಡಿದ ಪಟ್ಟು ಬದಲಿಸದಿರು,
ಮೊದಲ ಬಿಟ್ಟು ಗೋಡೆ ತುದಿ ಕಟ್ಟಲುಳಿವುದೆ ? ವಿಶ್ವ

೩೨೩೩ ಅರಸಿ ಧೈರ್ಯ ಮಾಡಿ, ಅತಿಶಯ ಕಾಮಿಯಿರೆ,
ನಿನ್ನ ನಂಬಿ ನಿಷ್ಠೆ ನೆಗೆಯುತಿಹುದು,
ನಿನ್ನ ಪೂಜಿಸೆ ಮುಕ್ತಿ ನಿಶ್ಚಯಾಗಿ ಉಂಟು, ವಿಶ್ವ

೩೨೩೪ ಶಿವನ ಕರುಣೆಯಿರದೆ ಜವದಾಟ, ಕಾಣರಲ !
ಆದಿ ಮೂಲವಾದ ಆತ್ಮ ಗೌಪ್ಯ,
ಹೋರಿ, ಸೇರಿ, ಹೊಂದಿ ಪೂರ್ಣವ ಹೊಂದಿರೋ, ವಿಶ್ವ

೩೨೩೫ ಶಿವನ ನೆನೆದು ದೀಪ ಹಿಡಿಯೆ,
ಶಿವ ಮಂದರದಿ ಜ್ಯೋತಿ ಸ್ಥಿರ ರೂಪಂ,
ಶಿವಯೋಗಿ ಹೃದಯದಲ್ಲಿಯೆ,
ಶಿವ ತ್ರಿಭುವನಗಳಿಗೆ ಕರ್ತ, ಸ್ಥಿರವದು ವೇಮಾ !

೩೨೩೬ ಮನವು ಒಲಿದ ಪೂಜೆ ಮದನಾರಿ ಮೆಚ್ಚುವ ;
ಮನಸು ನಿಲಿಸಿದವನು ಮಹಿಮನಹನು,
ಮನಸು ಇರದ ಪೂಜೆ ಮಣ್ಣಿಗೆ ಸಮವಿಹುದು, ವಿಶ್ವ

೩೨೩೭ ಅಕ್ಷರ ಪುಟಕಾರಂಭಿಸಿ,
ಲಕ್ಷಗಳನೋದುವುದೇಕೆ ? ಲಲಿತವದು ಪ್ರ–
ತ್ಯಕ್ಷವಹುದು 'ಶಿವ' ಎಂಬೆರ
ಡಕ್ಷರಗಳು ಮನಕೆ ಶುದ್ಧಿ ನಿಕ್ಕಿಯು, ವೇಮಾ.

●

## ಈ. ಶಿವಪೂಜೆ

ಶಿವಪೂಜೆ ಮಂಗಳಕರ. ಪೂಜೆಯೆಂದರೆ ಸೇವೆ ; ದೇವರ ಸೇವೆ. ಅಂದರೆ ಸ್ವಾರ್ಥಪರ ಕಾಮನೆಗಳನ್ನು ತೊರೆದು ಮಾಡುವ ಕಾರ್ಯ.

ಶಿವಪೂಜೆಯ ಅಧಮ ಅರ್ಥವೂ ಒಂದಿದೆ. ಶಿವನ ಮೂರ್ತಿಯನ್ನು ಕಲ್ಪಿಸಿಕೊಂಡು ಷೋಡಶೋಪಚಾರ ಅರ್ಚನೆ ಗೆಯ್ಯುವದೂ ರೂಢಾರ್ಥವಾಗಿದೆ. ಇನ್ನು ಶಿವಲಿಂಗ ಪೂಜೆಯನ್ನೂ ರೂಢಿಯಲ್ಲಿ ಶಿವನ ಪೂಜೆಯೆಂದೇ ಪರಿಗಣಿಸುತ್ತಾರೆ.

ಮಹಾಯೋಗಿ ವೇಮನರು ಮೂರ್ತಿ ಪೂಜೆಯನ್ನು ಒಪ್ಪಿಲ್ಲ, ಲಿಂಗ ಪೂಜೆಯನ್ನೂ ಒಪ್ಪಿಲ್ಲ. ಹೀಗಾಗಿ ಅವರ ಅರ್ಥದಲ್ಲಿ ಶಿವ ಪೂಜೆಯೆಂದರೆ ಮಂಗಳಮಯಿಯ ಸೇವೆಯೇ ಆಗಿದೆ.

ಶಿವ ತತ್ತ್ವವನ್ನು ಮೊದಲು ಸರಿಯಾಗಿ ಗ್ರಹಿಸಬೇಕು. ಅನಂತರ ಆ ಪಟ್ಟನ್ನು ಬಿಡದೆ, ಲಗುಬಗೆಯ ಸಿದ್ಧಿಫಲಗಳಿಗಾಸದೆ, ಮುಂದುವರಿಯಬೇಕು. ಗೋಡೆಯನ್ನು ಅಡಿಪಾಯದಿಂದ ಆರಂಭಿಸುವರೇ ಹೊರತು ತುದಿಯಿಂದಲ್ಲ, ಹಾಗೆಯೇ ಫಲಗಳೇ ಮೊದಲು ಬರಬೇಕೆಂದು ಶಿವಪೂಜೆಗೆ ತೊಡಗಬಾರದು.

ಶಿವನ ಧ್ಯಾನವನ್ನು ಹಗಲು ರಾತ್ರಿ ಬಿಟ್ಟೂ ಬಿಡದೆ ಸತತ ಮಾಡಬೇಕು. ಉಪಾಸಕನು ಬೇರೆ, ಉಪಾಸ್ಯವು ಬೇರೆ ಎಂಬ ಭೇದವಳಿಯಬೇಕು. ಅಂಥವನು ಮಾತ್ರ ಯೋಗಿ ಎನಿಸುತ್ತಾನೆ. ಜೀವಾತ್ಮ-ಪರಮಾತ್ಮರ ಸಂಯೋಗವೇ ಯೋಗವೆನಿಸುತ್ತದೆ.

ಸಾವು ಎಲ್ಲರಿಗೂ ಸುನಿಶ್ಚಿತ. ಸಾವಿನ ನಂತರ ಐಹಿಕ ಸಿರಿ ಸಂಪದ, ಬಂಧು ಬಳಗಗಳು ಸಂಗಡ ಬಾರವು. ಧರ್ಮವೊಂದೇ ಲಿಂಗ ಶರೀರದೊಂದಿಗೆ ಸಂಸ್ಕಾರ ರೂಪದಲ್ಲಿ ಉಳಿಯುವುದು. ಇದುವೇ ಹಿಡಿಯಲು ಕೊಂಬೆಯಿದ್ದಂತೆ. ಅದನ್ನು ಹಿಡಿದು ಅಶ್ವತ್ಥ ವೃಕ್ಷವನ್ನೇರಬೇಕು. ಆದ್ದರಿಂದ ಮೊದಲು ಶಿವನ ಪೂಜೆ ನಡೆಸು.

ಶಿವನ ಮಹಿಮೆಯನ್ನು ಸದಾ ಮನನ ಮಾಡಬೇಕು. ಅದನ್ನು ಎಂದೂ ಬಿಡಕೂಡದು. ಅವನು ಮಾತ್ರ ಮರ್ಮಜ್ಞನಾದ ಯೋಗಿಯೆನಿಸುತ್ತಾನೆ.

ದೃಶ್ಯ ಪ್ರಪಂಚವನ್ನು ಹೊಂದಿದ ಚಿತ್ತವು ಚಿತ್ರದ ಪ್ರತಿಮೆಯಂತಿದೆ. ಅದನ್ನು ನಿತ್ಯ ಬುದ್ಧಿಯತ್ತ ಹೊರಳಿಸಿ, ಚಿತ್ತವನ್ನು ಅರಿಯಬೇಕು. ಅವನನ್ನೇ ಇಹದಲ್ಲಿ ಸುಜ್ಞಾನಿಯೆನ್ನುತ್ತಾರೆ.

---

ಮನದಲ್ಲಿ ಅತಿಶಯ ಆನಂದವನ್ನು ಹೊಂದುತ್ತ ಸಾಗಿದ ನರನು ಸ್ಥಿರವಾದ ಆತ್ಮರೂಪನಾಗುತ್ತಾನೆ. ಬ್ರಹ್ಮವಾಗುತ್ತಾನೆ. 'ಆನಂದಂ ಬ್ರಹ್ಮ ಇತ್ಯಾಹುಃ' ಎಂಬ ಸೂತ್ರವಿದೆ. ಅಂಥ ನರನು ಅನ್ಯನಲ್ಲ ಆನಂದವೇ ಆಗಿರುತ್ತಾನೆ. ಆದರೆ ಮನಸ್ಸು ನಿಲ್ಲಿಸಿದರೆ ಇದೆಲ್ಲ ಸಾಧ್ಯ. ಇಲ್ಲವಾದರೆ ಮುಕ್ತಿ ಲಭಿಸದು.

ಶಿವನು ಸರ್ವಕ್ಕೂ ಆದಿ. ಆ ಆದಿಯನ್ನು ತಿಳಿದು, ಅದನ್ನೇ ಮನದಲ್ಲಿ ನಿಲಿಸಿ, ಅದನ್ನು ತೊರೆಯದೆ ಇದ್ದರೆ, ಅಭವ ಸ್ಥಿತಿ ಪ್ರಾಪ್ತವಾಗುತ್ತದೆ. ಭವನಾಶವಾಗುತ್ತದೆ. ಆದರೆ ಸಿದ್ಧಿಗಳಿಗಾಗಿ ಆಶಿಸಿ, ಮಧ್ಯಂತರ ಕ್ಷುದ್ರ ದೇವತೆಗಳಲ್ಲಿ ಮನವನ್ನು ಕೇಂದ್ರೀಕರಿಸಿದರೆ, ಅವನಿಗೆ ಆದಿಯು ಕಾಣಬರದು. ಆದಿಗೆ ಅವನು ಅಂಧನಾಗುತ್ತಾನೆ.

ಜನ ಸಾಮಾನ್ಯರಿಗೆ ಆದಿ ದೇವನೇ ಕರ್ತನೆಂದು ತಿಳಿಯದು. ಅವರು ಶಿಲೆಯ ಮೂರ್ತಿಗಳಿಗೆ ಮಣಿಯುತ್ತಾರೆ. ಈ ಪದ್ಧತಿಗೆ ರಾಜರೂ ಹೊರತಾಗಿಲ್ಲ. ಬಣ್ಣ ಬಣ್ಣದ ಸಿಂಗಾರ–ಸಡಗರಗಳು ಹೆಚ್ಚಿದಷ್ಟೂ ವೈಭವವೆನಿಸುತ್ತದೆ.

ಭವದಲ್ಲಿ ಹೊಗೆಯಂತೆ, ಕಾಮಾದಿಗಳು ಮುತ್ತಿ, ಮೇಲಿರುವ ಶಿವನನ್ನು ಮರೆ ಮಾಡಿರುತ್ತವೆ. ಇಂಥ ಸ್ಥಿತಿಯಲ್ಲಿ ಕಾಮಾದಿ ತೊರೆದು ಊರ್ಧ್ವಲೋಕಕ್ಕೆ ನೆಗೆದು ಶಿವನನ್ನು ಸೇರಬೇಕು.

ಅನೇಕ ರೂಪಗಳು ಧ್ಯಾನಿಸುವ ಸಾಧಕನಿಗೆ ಕಾಣಬರುತ್ತವೆ. ಈ ರೂಪಗಳು ಮನದ ಕೋರಿಕೆಗಳಷ್ಟೇ. ಈ ಕೋರಿಕೆಗಳನ್ನು ಮೀರಿ ನೋಡಿದರೆ ನಿರ್ಭಯವಾಗಿ ಬ್ರಹ್ಮವು ತೋರುವುದು. ತನಗೆ ಕಂಡ ರೂಪಗಳೇ ತಾನು ಎಂದು ಗ್ರಹಿಸಿ, ಧಾರುಣಿಯಲ್ಲಿ ತಾನೇ ಈಶ್ವರನಾಗಿ ಉಳಿಯುವನು.

ಕಾಣಬರುವ ರೂಪಗಳನ್ನೇ ನೋಡಿ, ಮೆಚ್ಚಿ ರೂಪಿಸಿಕೊಳ್ಳಬೇಕು. ವೇದ ಶಾಸ್ತ್ರಗಳಲ್ಲಿ ಹುಡುಕಿದರೆ ಸಿಗುವುದಿಲ್ಲ. ಶಿವನನ್ನು ಭಾವದಲ್ಲಿ ನೋಡಬೇಕು. ಈ ಭಾವವೇ ಕನ್ನಡಿ. ಅದರಲ್ಲಿ ಶಿವನು ಪ್ರತಿಬಿಂಬಿಸುತ್ತಾನೆ. ಅವರವರ ಭಾವಕ್ಕೆ ಅವರವರ ತೆರನಾಗಿ ಶಿವನು ತೋರುವನು.

ಚುಕ್ಕಿ ಬೆಳಕಿನಲ್ಲಿ ಸ್ವಲ್ಪವಾದರೂ ನೋಡಬಹುದು. ಅದೇ ರೀತಿ, ಜ್ಞಾನವು ದೀಪವಾಗಿ ಚಕ್ಷುಸ್ಸನ್ನು ಬೆಳಗುತ್ತದೆ. ಇಂಥ ದೀಪದ ಬೆಳಕಿಲ್ಲದೆ ಪರವು ಲಭ್ಯವಾಗದು. ಒಳ ನೋಟದಿಂದ ವೀಕ್ಷಿಸಿದಾಗ, ರೂಪಗಳಿಗೂ ರೂಪವಾಗಿ ಒಳಹೊರಗೆ ಏಕವಾಗಿ ಪರಿಪೂರ್ಣ ಮೂರ್ತಿಯು ಕಾಣಬರುವುದು.

ಸುಷುಮ್ನಾ ನಾಳದಲ್ಲಿ ಜ್ಯೋತಿ ದರ್ಶನ ಪಡೆಯಬೇಕು. ಅದುವೇ ಹಂಸದ ದಿಕ್ಕನ್ನು ಬೆಳಗುತ್ತದೆಯೇ ಹೊರತು ಬೇರೊಂದಲ್ಲ. ಇದನ್ನು ಎಲ್ಲರೂ

— — — — — — — — — — — — — — — — — — — — — —

ಕಾಣರು. ಕೆಟ್ಟ ಮನುಷ್ಯರಿಗಿದು ಕಾಣಬರದು. ಸೂರ್ಯನು ನಿತ್ಯವಿದ್ದರೂ ಮೋಡ ಕವಿದಾಗ ಕಾಣಬಾರದಂತೆ ಮೋಹ ಕವಿದಾಗ ಜ್ಯೋತಿ ಕಾಣದು.

ಅರಿವು ಇರುವವನಿಗೆ ಸದಾ ಅರಿವು ಇರುತ್ತದೆ. ಅರಿವು ಇಲ್ಲದವನಿಗೆ ಅರಿವು ಇರದು. ಆದರೆ, ಅರಿವು ಇಲ್ಲದ ಅರಿವನ್ನು ಅರಿಯುವುದೇ ತತ್ತ್ವವೆನಿಸುತ್ತದೆ. ಜ್ಞಪ್ತಿಯ ಆಚೆಯ ಸ್ವರೂಪ ಜ್ಞಾನವಿದು.

ತನ್ನ ಘಟದಲ್ಲಿ ಪರಮಾರ್ಥ ಸಾಧನೆಗೆ ಯಾವುದು ಮಿತ್ರ ? ಮತ್ತಾವುದು ಶತ್ರು ? ಎಂದು ವಿವೇಕದಿಂದ ಅರಿಯಬೇಕು. ಇಂಥ ತಿಳಿವು ಇಲ್ಲದ ತಿಳಿವಿನಿಂದ ಏನು ಪ್ರಯೋಜನ ? ಚೊಕ್ಕ ತಿಳಿವನ್ನು ಹೊಂದಿದರೆ ಅದೇ ದಿವ್ಯವಾದ ಅಮೃತವೆನಿಸುತ್ತದೆ.

ಸಾಧಕನು ಯಾವ ಹಂತದಲ್ಲಿ ನಿಂತು ನೋಡುವನೋ, ಆ ಹಂತದಲ್ಲಿ ಕಳೆ ತೋಚುತ್ತದೆ. ಅದಕ್ಕೆ ಅಂಟದೆ ತನ್ನ ಲಕ್ಷ್ಯದಲ್ಲಿ ಅಚಲನಾದ ವ್ಯಕ್ತಿಯು ಮುಕ್ತಿಯನ್ನು ಅರಿಯುತ್ತಾನೆ.

ದೇಹಕ್ಕೆ ಸ್ವಲ್ಪು ತೊಂದರೆಯಾಗುವುದು ನಿಜ. ಈ ಸಂಕಟದ ಅನುಭವವು ಮೂಲ ಲಕ್ಷ್ಯದ ಮೇಲೆ ಮೋಹದ ತೆರೆಯನ್ನು ಎಳೆಯುತ್ತದೆ. ಅದನ್ನು ಸರಿಸಿ, ತನ್ನ ಊಹೆಯನ್ನು ಮುಂದು ಮುಂದಕ್ಕೆ ಚಾಚಿ, ಪರಮ ತತ್ತ್ವದೊಂದಿಗೆ ಸ್ನೇಹವನ್ನು ಸಾದಿಸುವುದೇ ಯೋಗಸಿದ್ಧಿಯಾಗಿದೆ. ಜೀವನ ಸಂಚಾರವು ದಶೇಂದ್ರಿಯಗಳಿಂದ ನಡೆಯುತ್ತಿದೆ. ಹೀಗಾಗಿ ಅವನಿಗೆ ಹತ್ತು ಚರಣಗಳು. ಇನ್ನು ಕಾಲುಗಳ ಚಲನೆಗೆ ಹಿಂದೆ ಸಂಕಲ್ಪ–ವಿಕಲ್ಪಾತ್ಮಕ ಚಿತ್ತವಿದೆ. ಅದರನ್ವಯ ಚರಣಗಳ ಚಲನೆ. ಹೀಗಾಗಿ ಚಿತ್ತವೇ ಬಾಲವೆನ್ನಬಹುದು. ಜೀವನು ಕಾಣಿಸಿಕೊಳ್ಳುವದು ತ್ರಿಗುಣಗಳ ಅಭಿವ್ಯಕ್ತಿಯಿಂದ ತಾನೇ? ಅಂದ ಮೇಲೆ ಕಾಣಿಸಿಕೊಳ್ಳುವುದು ತ್ರಿಗುಣಗಳ ಮೂರು ತಲೆಗಳು. ಹೀಗೆ ಜೀವನು ಜಗತ್ತಿನಲ್ಲಿ ಸಂಚರಿಸುತ್ತಾನೆ. ಸ್ಥಿರ ಬುದ್ಧಿಯವನು ಸಾಕ್ಷಿಯಾಗಿ ಇದನ್ನೆಲ್ಲ ಅರಿಯಬೇಕು.

ಹರನ ಅರ್ಚನೆ ಮಾಡುವ ಪರಿಯೆಂತು ? ಮಮಕಾರವನ್ನು ಸುಟ್ಟು ಹಾಕಬೇಕು. ಬಳಿಕ ಅರ್ಪಿತ ಬುದ್ಧಿಯಿಂದ ಅಭವನ ಮೇಲೆ ಧ್ಯಾನವನ್ನು ಅಮರಗೊಳಿಸಬೇಕು. ಆಗ ತನ್ನನ್ನು ತಾನು ಹರನಿಗೆ ಅರ್ಪಿಸಿಕೊಂಡು ಪ್ರಪತ್ತಿಭಾವದಿಂದ ಹರನನ್ನು ಅರ್ಚಿಸಬೇಕು.

ಸೃಷ್ಟಿಯು ಉದಯ ಕಾಲಕ್ಕೆ ತ್ರಿಗುಣಗಳು ಭಾರಸಾಮ್ಯ ಕಾಪಾಡಿಕೊಂಡಿರುತ್ತದೆ. ಅರ್ಥಾತ್ ಪ್ರಕೃತಿಯು ಪುರುಷನೊಂದಿಗೆ ಯೋಗ ನಿದ್ರೆಯಲ್ಲಿರುತ್ತದೆ. ಮುಂದೆ ಈ ತ್ರಿಪುರದಲ್ಲಿ ಭಾರಸಾಮ್ಯ ತಪ್ಪಿ ಸತ್ತ್ವವು ಮೊದಲು, ರಜಸ್ಸು ನಂತರ ಮತ್ತು ತಮಸ್ಸು ಕೊನೆಗೆ ಹೊರಹೊಮ್ಮುತ್ತವೆ. ಈ ಅಭಿವ್ಯಕ್ತಿ

ಪೂರ್ವದಲ್ಲಿ ಪುರುಷನನ್ನು ಗುಣಾತೀತ ಎನ್ನಬಹುದು. ಅಲ್ಲಿ ನಿರ್ಗುಣನೇ ಆಳುತ್ತಾನೆ. ಭಕ್ತನು ಹೃದಯ ಕುಹರದಲ್ಲಿಯೇ ಬಯಲು ಕಂಡು ಅಲ್ಲಿ ಸೇರಿಕೊಳ್ಳುತ್ತಾನೆ.

'ಸೂಕ್ಷ್ಮಾದಪಿ ಸೂಕ್ಷ್ಮ' ಸೂಕ್ಷ್ಮ ರೂಪಿಯಾದ ಆ ಮಹಾದೇವನು, ಭುವಿಯ ಜನರು, ತಮ್ಮ ಮೃಗೀಯತೆಯನ್ನು ಬಚ್ಚಿಟ್ಟು ಮರೆಯಲು ನಿದ್ರೆ ಹೋಗಿಸುತ್ತಾನೆ. ಜನರನ್ನು ಈ ಭೂಮಿಯಲ್ಲಿ ಬದ್ಧರನ್ನಾಗಿಸುವನು. ಆದರೆ ಮಾನವನು ತನ್ನ ಪ್ರಯತ್ನದಿಂದ ತನ್ನ ಮೃಗೀಯತೆಯನ್ನು ತೊರೆದು, ಯೋಗ ಸಮಾಧಿ ಹೊಂದಿ ಮುಕ್ತನನ್ನಾಗಿಸಿಕೊಳ್ಳಲು ಆ ಮಹಾದೇವನ ಕೃಪೆಯೇ ಕಾರಣವಾಗಿದೆ.

ನಾನಿದನ್ನು ಸಾಧಿಸುತ್ತೇನೆ. ಇಂಥವನನ್ನು ಹಣಿಯುತ್ತೇನೆ, ಎನ್ನುವ ಹೇವ ಪಂಥಗಳನ್ನು ಬಿಟ್ಟರೆ ಮನಸ್ಸಿಗೆ ನೆಮ್ಮದಿ ಸಿಕ್ಕುತ್ತದೆ. ಪ್ರತಿಯಾಗಿ ಪರಮಾತ್ಮನ ಚಿಂತನದಲ್ಲಿ ಗುರುತನ್ನು ತಿಳಿದು ಚಿನ್ಮಯನಾಗಬಹುದು. ಅರಿವಿನ ರೂಪಿಯಾಗಬಹುದು. ಮನದಲ್ಲಿ ಏನೇನೋ ವಿಚಿತ್ರಗಳು ಕಾಣಿಸಿಕೊಂಡು, ಇಂಥ ತೋರಿಕೆಗಳನ್ನು ಹೇಳಿಕೊಳ್ಳದೆ ಅರಿಯುತ್ತಾ ಸಾಗಬೇಕು.

ದೈವ ಮಾಯೆಯು ತುಂಬಾ ಕ್ಲಿಷ್ಟಕರ. ಹೀಗೆಯೇ ಎಂದು ತಿಳಿಯುವುದು ಕಠಿಣ. ಈದ ಹುಲಿಯನ್ನಾದರೂ ಹಿಡಿದು ಇರಿಯಬಹುದು. ಮನದ ಮರ್ಮವನ್ನೂ ಕಾಣಬಹುದು. ಆದರೆ ದೈವ ಮಾಯೆಯನ್ನು ತಿಳಿಯುವುದು ಕಷ್ಟ ಸಾಧ್ಯ.

ಪ್ರಾಣ–ನಿದ್ರೆಗಳ ಸಂಧಿಯಲ್ಲಿಯೇ ಪರಮಾತ್ಮನಿದ್ದಾನೆ. ಏನನ್ನೂ ಭೋಗಿಸದ ನಿದ್ರೆಯ ಮೇಲ್ಮೈಯನ್ನು ಅರಿತುಕೊಂಡು, ಆ ಸ್ಥಿತಿಯನ್ನು ಕಾಯ್ದುಕೊಂಡು ಪ್ರಾಣದ ಮೇಲ್ಮೆಯನ್ನು ಅಲ್ಲಿಯೇ ನಿಲ್ಲಿಸಿದರೆ ಸಮಾಧಿಯನ್ನು ಅನುಭವಿಸಬಹುದು.

**೩೨೩೮ ಅರಿತ ಶಿವಪೂಜೆಯು ಎಂದೂ ಕೆಡಲಾರದು,**
**ಮೊದಲು ಪಟ್ಟು ಹಿಡಿದು ಬದಲಿಸದಿರು,**
**ಮೊದಲ ಬಿಟ್ಟು ಗೋಡೆ ತುದಿಗೆ ಕಟ್ಟಬಹುದೆ ? ವಿಶ್ವ**

**೩೨೩೯ ಹಗಲು ರಾತ್ರಿ ನೋಡು ಭಾವವನ್ನೆ ಒಳಗೆ,**
**ತಾನು ನಾನು ಎನುವ ತಿಳಿವು ಮರೆತು,**
**ಇರುವ ಅಂಥ ಅವನೆ, ಇಷ್ಟ ಉತ್ತಮ ಯೋಗಿ, ವಿಶ್ವ**

**೩೨೪೦ ಮನನ ವೃತ್ತಿಯಲ್ಲಿ ಮಹಿಮೆಯನರಿಯುತ,**
**ಮನಸಿನಲ್ಲೆ ಪೂಜೆ ಮಹಿಮೆ ಕಂಡು,**
**ಮಾಣದಿರುವ ಅವನು ಮರ್ಮಜ್ಞನಹ ಯೋಗಿ, ವಿಶ್ವ**

೩೨೪೧ ಚಿತ್ತಾರದ ಪ್ರತಿಮೆಯಂತೆ,
ಚಿತ್ತವನು ಹಿಡಿದು ಹೊರಳಿಸಿ ಚಿರತರ ಮತಿಯೋಳ್,
ಚಿತ್ತವನರಿತಿಹ ಅವನೇ,
ಉತ್ತಮ ಸುಜ್ಞಾನಿಯೆಂಬರು, ಇಹದಲಿ, ವೇಮಾ.

೩೨೪೨ ಅನುವು ಮೀರಿ ಮನದಿ ಆನಂದ ಹೊಂದುವ,
ನರನು ಪರನು ಅಲ್ಲ ಸ್ಥಿರನು ಕಾಣು,
ಮನಸು ನಿಲಿಸದಿರಲು, ಮತ್ತೆ ಮುಕ್ತಿ ಇಲ್ಲ, ವಿಶ್ವ

೩೨೪೩ ಆದಿಯೊಂದ ತಿಳಿದು, ಆದಿ ಮನದಿ ನಿಲಿಸಿ,
ಆದಿ ಬಿಡದೆ ಇರಲು ಅಭವನಾದ,
ಆದಿ ಬಿಡುವ ಅವನು ಅಂಧನಂಥ ರೀತಿ, ವಿಶ್ವ

೩೨೪೪ ಏ ರೂಪವೆಲ್ಲಿ ನೋಡಲು,
ಈ ರೂಪ ಕಾಣುತಿಹುದು ನಿಲಿಸಿ ಅರಿತಾಗಳ್,
ಈ ರೂಪವ ತಾನರಿತೊಡೆ,
ಧಾರುಣಿಯೊಳಗೀಶ್ವರಾಗಿ ತಾನಿಹ ವೇಮಾ !
ಏ = ಯಾವ

೩೨೪೫ ರೂಪ ನೋಡಿ, ಮೆಚ್ಚಿ ರೂಪಿಸಲು ಆರದೆ,
ವೇದ ಶಾಸ್ತ್ರಗಳ ಹುಡುಕಲೇಕೆ ?
ಬಳಿಗೆ ಇರುವಂಥ ಕನ್ನಡಿಯಂತೆ,
ಶಿವನು ಭಾವದಲ್ಲಿ ಶೋಭಿಪ ವೇಮ,

೩೨೪೬ ಏ ರೂಪವೆ ಎಲ್ಲ ರೂಪ,
ಆ ರೂಪವನೊಳಗೆ ಕಾಣೆ, ಲೋಕಾರಾಧ್ಯಂ,
ಏ ರೂಪವ ನೋಡುತಿರಲು,
ಆ ರೂಪವೆ ತೋರಿಬರುವ, ಅನುಭವದು, ವೇಮಾ !

೩೨೪೭ ನೋಟ ಕೊಂಚವಿರಲಿ ; ನೋಡಬಹುದು ಚುಕ್ಕೆ ;
ಜ್ಯೋತಿಯಾಶ್ರಯವಿರದೆ ಸಿಗದು ಪರವು,
ಜ್ಞಾನ ದೀಪವಂತೆ ಚಕ್ಷುವಿಗೆ ತೋಚುವುದು, ವಿಶ್ವ

೩೨೪೮ ನೋಟವ ನೋಡಲು ತೋಚಿತು,
ಮಾಟದಿ ರೂಪಗಳಿಗೆ ರೂಪ ಮನದಿ ರೂಪಂ,
ತೇಟವು ಒಳ ಹೊರಗದುವೇ,
ನೀಟ ಪರಿಪೂರ್ಣ ಮೂರ್ತಿಯ ಕಾಣಾ ವೇಮಾ

೩೨೪೯ ನನಗೆ ಯಾರು ದಿಕ್ಕು ? ನಡುವೆ ನಾಳದೊಳಗೆ,
ಬೆಳ್ಳಿ ಚುಕ್ಕೆಯಂತೆ ಬೆಳಕು ದಿಕ್ಕು,
ಬೆಳಕಿಗಿಂತ ದಿಕ್ಕು ಬೇರೆ ಇಲ್ಲವಯ್ಯ, ವಿಶ್ವ

೩೨೫೦ ಕೆಟ್ಟ ಮಾನಸರಿಗೆ ಕಾಣಬರುವದಿಲ್ಲ,
ಮೇಘದೊಳಗೆ ಭಾನು ಮುಚ್ಚಿದಂತೆ,
ತೇಟ ನೀರು, ಪುಣ್ಯ ದೇಹದಂತೆ ಇಹುದು, ವಿಶ್ವ

೩೨೫೧ ಅರಿವು ಉಳ್ಳವನಿಗೆ ಅರಿವು ಮಾತ್ರ ಉಂಟು,
ಅರಿವು ಇಲ್ಲದವಗೆ ಅರಿವೆ ಇಲ್ಲ,
ಅರಿವು ಇಲ್ಲದರಿವು ಅರಿಯುವುದೇ ತತ್ತ್ವ, ವಿಶ್ವ

೩೨೫೨ ತಾನು ಇರುವ ಗೃಹದಿ ತಕ್ಕ ಶತ್ರು ಮಿತ್ರ,
ತಿಳಿವು ಇಲ್ಲದವನ ತಿಳಿವು ಏಕೆ ?
ತಿಳಿದು ಚೊಕ್ಕಗೊಳಿಸೆ ದಿವ್ಯಾಮೃತವದೇ, ವಿಶ್ವ

೩೨೫೩ ಮಲಿನ ತೊಗಲಿಗೆಲ್ಲ ಮೂಲ ಮನದ ಚಿಂತೆ,
ನರಕ, ಮಬ್ಬು ಮೋಸ ನೀಗಿ ತಿಕ್ಕಿ,
ಪರವ ಕೋರಿದಾಗ ಬಯಲಾಯ್ತು ಈ ಬೆಡಗು, ವಿಶ್ವ

೩೨೫೪ ಎಲ್ಲಿ ಸತತ ನಿಂತು, ಎಷ್ಟೇ ನೋಡಿದರೂ,
ಅಲ್ಲಿ ತೋಚಿತು ಕಳೆ ಅಂಟದಿದ್ದು ;
ಅಚಲನಾದ ವ್ಯಕ್ತಿ ಅರಿತುಕೊಳುವ ಮುಕ್ತಿ, ವಿಶ್ವ

೩೨೫೫ ದೇಹ ಸಂಕಟದಲಿ ತೆಗೆದು, ತೆರೆಯ ಕಂಡು,
ಮೋಹ ದೃಷ್ಟಿ ಬಿಟ್ಟು, ಮೂಲವರಿತು,
ಊಹೆಯೊಂದ ಚಾಚಿ, ಆ ಹೃದಯ ಸಂಧಿಸಿ,
ಸ್ನೇಹವರಿಯೆ ಯೋಗ ಸಿದ್ಧಿ ವೇಮ.

೩೨೫೬ ಚರಣಂಗಳು ದಶ ಬಾಲವು,
ಹೊಳೆವ ಮೂರು ತಲೆಗಳು ಬಯಲು ತಿರುಗಲ್,
ವರ ಭೂಮಿ ತಲ್ಲಣಿಸುವುದು ;
ಸ್ಥಿರವಾಗಿಯೆ ಇದನು ತಿಳಿವುದಿಳೆಯಲಿ ವೇಮಾ.

೩೨೫೭ ಸೀಸಃ ಕಿವಿಯು ಕೋರ್ವುದು ಒಳ್ಳೆ ಉಲಿಗಳ
ಮಧುರ ವಚನ ಗುಚ್ಛ ಕೋರ್ವುದು,
ಚರ್ಮ ಕೋರ್ವುದು ಸರಣಿಯಿಂದ ಮತ್ತೆ
ಶೀತ, ಮೃದು, ಸಂಸ್ಪರ್ಶ ಸಂಪದವೆಂದಿಗ
ಕಣ್ಣು ಕೋರ್ವದು ಕಮನೀಯ ವರ್ಣಗಳ
ಇಷ್ಟು ರೂಪಗಳ ಒಪ್ಪಿ ನೋಡುವವು.
ನಾಲಗೆ ಕೋರ್ವುದು ನಯದಿಂದ ಸಿಹಿಯ
ಒಗರು ಕ್ಷಾರ, ಕಹಿಯುಪ್ಪು, ಹುಳಿಯ,
ತೇಟ: ಮೂಗು ಕೋರ್ವದು, ಸದ್ಗಂಧ ಮುನ್ನ ಚೊಕ್ಕ,
ಚರ್ಮ ಕಿವಿಗಳು, ಕಣ್ಣುಗಳು, ಜಿಹ್ವೆ, ಮೂಗು,
ನಡೆಯಲೊಂದಾಗಿ ಎಲ್ಲವನು ನೀಗಿ ಘಟವ,
ತನ್ನ ಕಾಣಲು ಸುಖವೆಲ್ಲ ತನಗೆ ವೇಮ.

೩೨೫೮ ಅಗ್ನಿ ಶಿಖೆಗಳಲ್ಲಿ ಅಮರವು ಮಮಕಾರ,
ಅಭವ ಮೇಲೆ ಧ್ಯಾನ ಅಮರಗೊಳಿಸಿ,
ಆಹುತಿಯಾದ ಬಳಿಕ ಆ ಹರನನರ್ಚಿಸು, ವಿಶ್ವ

೩೨೫೯ ಒಂದು, ಎರಡು, ಮೂರು ಯೋಗೀಂದ್ರರು ಕೂಡಿ,
ಉದಯ ಪರ್ವತದಲಿ ಮೊದಲಿಗಿರುವ
ಕ್ರಮವನರಿತು ಕಾಣು ಘನ ಪಟ್ಟಣವನು ;
ವೀರನೋರ್ವನಾಳ್ವ ವೇಮ ಕೇಳು.

೩೨೬೦ ಪರಿ ಪಕ್ವವಿಪ್ಪ ಶಿಷ್ಯನು,
ಉರದಲ್ಲಿಯ ಬಯಲು ಕಂಡು, ಹೋರುತ ಮೀರಲ್,
ಪರಿ ಪೂರ್ಣಕಂಟಿ ಸೇರುವ,
ಗುರುವು ಪರಬ್ರಹ್ಮವಪ್ಪ, ಗುಣನಿಧಿ ವೇಮಾ.

೩೨೬೧ ಮೃಗವ ಬಚ್ಚಿಟ್ಟು ಕೆಡುವವನು ಮೈಯ ಮರೆವ,
ನಿದ್ರೆ ಹೋಗುವ ತೆರ ಗೆಯ್ವ, ನಿಖಿಲ ಗತಿಯ,
ಈಕ್ಷಿಸಿಳೆ ಬದ್ಧರನು ಗೆಯ್ವ, ಸೂಕ್ಷ್ಮ ರೂಪ –
ನಾ ಮಹಾದೇವನಲ್ಲವೆ ? ನೆಲದಿ ವೇಮ.

೩೨೬೨ ಅಂತರಾತ್ಮಾನುಭವ ಹೊಂದಿ ಆರ್ಯ ಮತಿಲಿ,
ಸಂತತಾರ್ಚನ ಮನದಿ ನಿಷ್ಠೆ ಸಲಿಸಿ ಕೋರಿ,
ಸುತ್ತಿ ಏರಿದವನೆ ಹೋಗು ಶ್ರೇಷ್ಠನಿಹನು,
ಅವನಿಗಾರು ಸಮರು ? ಅವನೆ ಕಾಣು ವೇಮ.

೩೨೬೩ ಪಂಥವ ಬಿಡುವುದೆ ನೆಮ್ಮದಿ,
ಚಿಂತನದಲಿ ಗುರುತು ತಿಳಿದು ಚಿನ್ಮಯನಪ್ಪನ್,
ಎಂಥ ವಿಚಿತ್ರ ಮನದಡಗಿ,
ಇಂಥದು ಎನ್ನುತ ಹೇಳದೆ, ಅರಿವುದು, ವೇಮಾ.

೩೨೬೪ ಮೂಗು ತುದಿಗೆ ದೃಷ್ಟಿ ಮುದದಿಂದಲಿ ನಿಲಿಸಿ,
ಹೃದಯದಲ್ಲಿ ನೋಡೆ ಎಸೆವ ಮುಕ್ತಿ,
ಪದವಿ ಮಾರ್ಗ ನೋಡೆ ಪರಮಾತ್ಮ ಯೋಗಿಯು ವಿಶ್ವ

೩೨೬೫ ಅಂತರಿಕ್ಷದಲ್ಲಿ ಹೃದಯಕಂಟಿ ಸಾಧಿಸುವುದು,
ಚಿಂತೆ ತೆಗೆದು ಹಾಕಿ ಸಿಕ್ಕಿಕೊಳದೆ,
ವಿಚಿತ್ರ ನೋಡುತಿರೆ ವಿಜ್ಞಾನವೆನುವರು, ವಿಶ್ವ

೩೨೬೬ ಸೀಸ: ನೇಮದಲ್ಲಿ ಇರುತ ನೀಡುತ ಚಿತ್ತವನು,
ತಾಮಸದೊಳಗಾಗಿ ತಗಲಿ ಹೋದ,
ಬೆಲೆಯುಳ್ಳ ಚಿತ್ತದಲಿ ನಿರ್ಭೀತಿ ಮೂಡುವುದು,
ನಿರ್ಭೀತಿ ಸೌಖ್ಯವನು ನೀರಸೆನಿಸುವುದು,
ಸೌಖ್ಯ ದೂರ ಗುಣವನು ಸಮನಿಸಿ ಹೊಂದುತ್ತ,
ಶಮ ಗುಣಗಳ ಕಂಡು ಶಮತೆ ಹುಟ್ಟಿ,
ಅಂಥ ಶಮತೆ ; ವಿಶ್ವ ಅಖಿಲವು ತಾನಾದ ;
ತಾನೆ ವಿಶ್ವವೆಂಬ ತತ್ತ್ವವಾದ.

---

ತೇಟ: ತತ್ತ್ವವಿಂದ್ರಿಯಗಳು ನೆರೆಗಂಡು ಗೆಲುವನು,
ತತ್ತ್ವವೇತ್ತನಾಗಿ ತಾನೆ ಇಹನು,
ರಾಜ ಯೋಗಿಯಾಗಿ ತೇಜದಿಂದ ಇರುವ ;
ಖ್ಯಾತನಿಹನು ಜಗದಿ ಕೇಳು ವೇಮಾ.

೩೨೬೭ ಸೀಸ: ಧರಣಿಯೊಳು ಓದು ಎಲ್ಲ, ಪರಮಾತ್ಮನೊಳು ಆತ್ಮ,
ಐಕ್ಯಗೊಳದಿರೆ ಬ್ರಹ್ಮನಿಗೂ ದೋಷ,
ಪಂಚ ಭೂತಗಳು ವಿಶೇಷ ಪ್ರಕೃತಿಯು ತಲೆ ಹಾಕಿ
ನಿಲುಗಡೆಯರಿದವನ ನೆತ್ತಿ ದೋಷ,
ಪಂಚ ವಿಂಶತಿ ತತ್ತ್ವ ಪದ್ಧತಿ ಇಲ್ಲದೆ,
ವೇದಾಂತಿ ನಾನೆನುವಾತಗೊಂದು ದೋಷ,
ಅಂತರಂಗದ ಒಳಗೆ ಅನುಕೂಲವರಿಯದೆ,
ಯೋಗಿ ನಾನೆನುವಾತಗೊಂದು ದೋಷ.
ತೇಟ: ತಾನುತಾನಾದ ತತ್ತ್ವಗಳಿಗೆ ತಗಲಿಕೊಂಡು,
ಒಳಗೆ ಹೊರಗೆ ಒಂದಾಗಿ ತಿಳಿದು ತಿಳಿದು,
ಬ್ರಹ್ಮವೇದಗಳು ಗೊತ್ತಿರದ ಪಾಮರರಿಗು
ಹಿಂದೆ ಒಂದು ದೋಷ ಹೌದಲ್ಲೊ ಹೇಳು ವೇಮ.

೩೨೬೮ ಮೋದ ಪಡುವನಾರೊ ? ಮೋದಿಸದವನಾರೋ ?
ಪಾಡು ಪಟ್ಟು ನೋಡೆ ಬಟ್ಟ ಬಯಲು,
ಕ್ರಮದಿ ನೀರುಗೊಡದಿ ಕಾಣುವಿನದ ಚೆಂದ ! ವಿಶ್ವ

೩೨೬೯ ಎಲೆಗಳಲ್ಲಿ ಓದಿ ಎನಿತು ಅರಿಯದಿದ್ದು,
ಏಕ ಅಮರ ಯುಕ್ತಿ ಅರಿಯಬೇಕು,
ತಾಕಿ ಪೂರ್ತಿಯಾಗಿ ತನ್ಮಯತೆಯ ಹೊಂದು ವಿಶ್ವ

೩೨೭೦ ಈದಿರುವ ಹುಲಿಯನು ಇರಿಯಬಹುದು ಹಿಡಿದು ;
ಮನಸು ಮರ್ಮವರಸಿ ಕಾಣಬಹುದು,
ದೈವ ಮಾಯೆ ತಿಳಿಯೆ ತನಗೆ ಸಾಧ್ಯವಿಲ್ಲ, ವಿಶ್ವ

೩೨೭೧ ಚಕ್ರಧರನ ಬೇಡಿ, ಜಲಧಿ ದಾಟಬಹುದು ;
ವಿಕೃತವಾದ ಬುದ್ಧಿ ವ್ಯಥೆಯ ಪಟ್ಟು,
ನಕ್ರ ಮತ್ತೆ ಗಜವ ನಯವಾಗಿ ತಿನುವುದು, ವಿಶ್ವ

೩೨೭೨ ಮೂಗು ದಾರ ತುರುಕಿ, ಮಲಿನ ಕಳೆಯೆ ತಿರುವಿ,
ಸ್ವಚ್ಛ ನೀರು ತುಂಬಿ ತೊಳೆದು ತೊಳೆದು,
ತಿಕ್ಕುತಿರಲು ಪಕ್ಕೆ ದೊರೆವುದೇನು ಮೋಕ್ಷ ? ವಿಶ್ವ

೩೨೭೩ ಯೋಗವ, ಮುದ್ರೆಗಳ, ಲಕ್ಷ್ಯವ
ಬೇಗ ಸಲೆಯರಿತು ಲಕ್ಷ್ಯವಿರೆ ತಾ ಬಯಲೈ,
ರಾಗ ದ್ವೇಷ ಸಮುಚ್ಚಯ
ವೇಗದಿ ಕೊಚ್ಚುತ ಮೀರಲು, ಬಿಡುಗಡೆ, ವೇಮಾ

೩೨೭೪ ಜವದಾಟನೇಕೆ ? ಗುರಿಯಿರೆ,
ಭವಹರವಹ ಭಕ್ತಿ ಹೊಂದಿ ಪರಿಪಕ್ವವಲಾ !
ಧ್ರುವವಿದೆ ಬಯಲು ಸೇರುತ್ತ,
ಶಿವ ತನ್ಮಯ ಚಿನ್ಮಯವದು, ಪ್ರಾಪ್ತಿಯು ವೇಮಾ.

೩೨೭೫ ಸೀಸಃ ದೇಹಗಳನಿತ್ತ ದೇಹಿ ನಿತ್ಯನಿಹನು,
ದೇಹೇಂದ್ರಿಯಾದಿಯು ತೀವ್ರ ಗತಿಯು,
ಮೋಹಂಗಳೆಲ್ಲವ ಮೊದಲಿಗೆ ವರ್ಜಿಸುತ,
ಆ ಪರಮಾತ್ಮನೊಡನೆ ಐಕ್ಯಗೊಂಡು,
ಚಿತ್ತಶಾಂತಿಯ ಹೊಂದಿ ಚಿನ್ಮಾತ್ರದಲಿ,
ಇತರರನ್ನು ನೋಡದೆ ಎಂದಿಗೂನು
ಸರ್ವಾತ್ಮವೆಂಬ ಸತ್ಯವನು ಸಲೆಗಾಣು ;
ವವರೆ ತತ್ವಜ್ಞರು ವಸುಧೆಯಲ್ಲಿ
ತೇಟ: ಅಂಥವರ ಮರ್ಮವನು ಅರಿತುಕೊಳಲು,
ಹರಿಹರ ಬ್ರಹ್ಮರಿಗೂ, ಅಳವು ಅಲ್ಲ,
ಹೀಗೆ ಶಾಸ್ತ್ರಗಳೆಲ್ಲ ಹೇಳುತಿಹವು ;
ತಿಳಿದು ಹೇಳಿದ ವೇಮನ ದೇಶಿಕಾರ್ಯ.

೩೨೭೬ ದಾನ ಕೊಡುವಕಿಂತ, ಧ್ಯಾನ ಮತ್ತೆ ಮೇಲು,
ಧ್ಯಾನಗೈವಕಿಂತ, ತಿಳಿವು ಮೇಲು,
ತಿಳಿವಿಗಿಂತ ಆಶೆ ತೊಡೆಯುತಿಹುದೆ ಮೇಲು, ವಿಶ್ವ

೩೨೭೭–ಸೀಸಃ ಅವನಿಯೊಳಗೊಂದು ಕಪ್ಪೆ ಐದು ಹಾವುಗಳ ಹಿಡಿದು,
ಬಿಟ್ಟು ಬಿಡದೆ ನುಂಗಿದ ವಿಧವದೇನು ?

---

ಒಪ್ಪ ಒಂದು ಎರಡು ವಾನರ ವಿಜೃಂಭಿಸಿ,
ಒಂಟಿ ಮಗುಗಳ ನಿನ್ನ ಯೋಚನೆಯೇನು ?
ಕಲಿಯುಗದಲಿ ನರಿಯ ಗರ್ಭವಾಸದಲ್ಲಿ,
ಕಾಮ ಧೇನುವು ಹುಟ್ಟಿದನುವು ಏನು ?
ಆಲದಾ ಮರ ಮೇಲೆ ಬಾಳೆಯಾ ಫಲಂಗಳು,
ಹುಟ್ಟಿರುವಂಥಾ ವಿಧವದೇನು ?
ಮೇಲೊಂದು ಹುಟ್ಟಿ ಬೆಳೆದು ದೊಡ್ಡದಾಗಿ,
ಮುರಿದು ಬೀಳುವ ದೃಢತೆಯೇನು ?
ತೇಟ: ಅರಿಯಲರಿತಂಥ ಸರ್ವಜ್ಞರಾದವರೂ
ಬೆಳಗುವ ನಿನ್ನ ಮೂರು ಪದ್ಯ ಪ್ರಾಪ್ತಿ ಹೊಂದಿ,
ಹೇಳಲರಿತಂಥವರು ಅದನು ಹೇಳರೇಕೆ ?
ಶಿವನ ಹೊಂದಿದವರು ಭುವಿಯಲ್ಲಿ ವಿಖ್ಯಾತರು ;
ನಿನಗೆ ತಿಳಿಯದದು ಮುನ್ನ ಇನ್ನೇನು ? ವೇಮ

೩೨೭೮– ಸೀಸ: ಕೋರಿಕೆ ಬಲೆ ಬೀಸಿ ಗುಡಿಸಲು ಹಾಕಿದ ಹಳ್ಳಿ,
ಪದ್ಮನಾಭನು ಹೊತ್ತು ದಣಿದಂಥ,
ಹರುಷದೊಂದಿಗೆ ಜನರೆಲ್ಲ ಬಿಚ್ಚಿದಂಥ ಭರಣಿ,
ಗೌರವಗಳಿಗೆಲ್ಲ ಕೊಟ್ಟು ಆದ್ಯತೆ,
ಅಜನು ದಿನವು ತಪ್ಪಿ ಆಶನ ಮಾಡುವ ಬಟ್ಟಲು,
ರಾಜರು ಪಿಡಿದಿಹ ಗಾಜು ಬಟ್ಟಲು ;
ಶಿವನ ಭಿಕ್ಷಾಪಾತ್ರೆ ಚುಕ್ಕೆ ಸೊಗಸಾದ ಕಿರೀಟ ;
ಮಹಿಮ ಇಂದ್ರನ ಗರ್ವದಲ್ಲಿ ಬುರುಡೆ,
ಆಃ ಹಾಡನೋಡು ಕಲಿತು ಪರಿಕಿಸಿ ನೋಡುತ,
ಆಡಲು ಕಲಿಸುವವ ತಾನಾದನು,
ಇಂಥಕಿಂತ ಬೇರೆ ಇನ್ನಾವುದು ಬೇಕು ? ವಿಶ್ವ

೩೨೭೯ ಸೀಸ: ನಿಯಮಾದಿ ಸಂಗಿಯಾಗಿ, ನಿಲಿಸಿದ ಚಿತ್ತವದು
ತಾಮಸದಿ ನಿದ್ರೆಗಿಳಿಯುತಿಹುದು
ನಿದ್ರೆ ತೊಲಗಿದೊಡನೆ ನಿರ್ಭೀತಿ ಹೊಂದುವುದು,
ತಮದೊಳಗಾನಂದ ಸಮಿತಿ ಹುಟ್ಟು,
ತತ್ತ್ವವಿಂದ್ರಿಯ ಪಂಚಕತ್ವದಲ್ಲಿ ನಿಲ್ಲಿಸಿ,
ತತ್ತ್ವವನು ನಿಲ್ಲಿಸಲು ತಾನೆ ಆದ.

---

ತೇಟ: ರಾಜಯೋಗೀಂದ್ರನಾತನೈ ತೇಜಿಸುವನು,
ಮೆರೆವ ಜಗದಲಿ ವಿಹರಿಸುತ ವಿಶ್ರುತನಾಗಿ,
ಬಹಳ ವಿಧದಲಿ ವರ್ಧಿಸಿ ಹಾದಿ ತಲುಪಿ,
ಕಾಣೆ ಮೂಢಕ್ರಿಯೆ ವಿಧವ, ಘನತೆ ವೇಮ.

೩೨೮೦ ಕೃಪೆ ಬಿಟ್ಟು ಮನಸು ಕಾಂಕ್ಷಿಸದೆ ಏನನೂ,
ಜ್ಞಾನ ತಪವ ತೊರೆದು ಕದಲ ಬೇಡ,
ಕುದುರಿ ಆತ್ಮ ಬಯಲ ಗಗನಕಂಟಿ ಇರುವ, ವಿಶ್ವ

೩೨೮೧ ನಿದ್ರೆ ಮೇಲ್ಮೆ ತಿಳಿದು, ನಿಲಿಸುವುದಿದರೊಳಗೆ,
ಪ್ರಾಣ ಮೇಲ್ಮೆ ತಿಳಿದು, ಬೇರೆ ಇಡದೆ ;
ಪ್ರಾಣ–ನಿದ್ರೆ ಸಂಧಿ ಪರಮಾತ್ಮನಿರುವನು, ವಿಶ್ವ

೩೨೮೨ ಭೃಕುಟೀ ಮಧ್ಯಸ್ಥಿತ ಘನ
ಪ್ರಕಟ ದ್ವಿದಳ ಪಾಪೆ ಶಿಖರಿ ಪ್ರಭವದ್ವಿದ್ಯಾಂ ;
ವಿಕಟವು ದೇಹ ಜಗತ್ರಯ,
ವಿಕಸಿತ ರೂಪ ಪ್ರತಾಪ ವೀರನು ವೇಮಾ.

೩೨೮೩ ಸಲೆ ತ್ರಿಪುಟಿಯಲಿ ಗುರಿಗಂಡು,
ಒಳಗೂಹಿಸುವುದು ಇಹ ನಾದಗಳಾಲಿಸುತಾ,
ಬಳಿಗಂಡು, ನಿನ್ನ ಮರೆತೊಡೆ,
ಬೆಳದಿಂಗಳು ಬಯಲು ಸೇರಿ ಬೆಳಗೈ ವೇಮಾ.

●

## ೮. ಶಿವನು ಇರುವುದೆಲ್ಲಿ ?

'ಸರ್ವಂ ಖಿಲ್ವಿದಂ ಬ್ರಹ್ಮ', 'ಸರ್ವಂ ಶಿವಮಯಂ ಜಗತ್' ಹೀಗೆ ದೇವರ ವ್ಯಾಪ್ತಿತ್ವವನ್ನೂ, ಮಹಿಮೆಯನ್ನೂ ಬಣ್ಣಿಸುತ್ತಾರೆ. ಕಲ್ಲು ಮರಗಳಲ್ಲಿ, ನದಿ–ನದಗಳಲ್ಲಿ, ಗಿರಿಕಂದರಗಳಲ್ಲಿ, ಕ್ರಿಮಿಗಳಲ್ಲಿ, ಪಶು–ಪಕ್ಷಿಗಳಲ್ಲಿ, ಮಾನವರಲ್ಲಂತೂ ಸರಿಯೇ, ಶಿವನಿರುವುದನ್ನು ಎಲ್ಲರೂ ಒಪ್ಪಿದ್ದಾರೆ. ಆದರೆ ಧ್ಯಾನ ಕೇಂದ್ರವಾಗಿ ಆತ್ಮ ಇಲ್ಲವೆ ಶಿವನಿಗೆ ಸ್ಥಾನವನ್ನೂ, ಆಕಾರವನ್ನೂ ಉಪನಿಷತ್ ಋಷಿಗಳು ಕಲ್ಪಿಸಿ, ಶಿವನು ಹೃದಯಸ್ಥನೆಂದೂ, ಅಂಗುಷ್ಠ ಮಾತ್ರನೆಂದೂ ಬಣ್ಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವೇಮನ ಯೋಗಿಗಳ ಗ್ರಹಿಕೆಯನ್ನು ಅರಿಯೋಣ.

— — — — — — — — — — — — — — — — — — — — — — — —

ಆತ್ಮನಿಗೆ ಕುಲವಾವುದು ? ಆತ್ಮನಿಗೆ ಸ್ಥಳವಾವುದು ? ಇದನ್ನು ಹುಡುಕಲು ಅಲ್ಲಲ್ಲಿ ಅಲೆಯಬೇಕಿಲ್ಲ. ಆದರದಿಂದ ಮನದಲ್ಲಿಯ ಪಕ್ವತೆಯನ್ನು ಅರಿತರೆ, ಅವನು ಆತ್ಮನನ್ನು ಅನಾಯಾಸವಾಗಿ ಪಡೆಯುತ್ತಾನೆ.

'ಮೂರ್ಖರಿಗೆ ಕಲ್ಲು, ಕಬ್ಬಿಣ, ಮೂರ್ತಿಗಳಲ್ಲಿ ದೇವರಿದ್ದರೆ, ಪಂಡಿತರಿಗೆ ಹೃದಯಸ್ಥನಾಗಿದ್ದಾನೆ' ಎಂದು ವಿಷ್ಣು ಪುರಾಣವೂ ಸಾರುತ್ತಿದೆ. ಅಂದ ಮೇಲೆ, ಹೃದಯದಲ್ಲಿ ಶಿವನು ಇರುವುದನ್ನು ಅರಿಯದೆ ಶಿಲೆಗಳಿಗೆ ಎರಗುವುದೇಕೆ? ಕುರುಡರು ಕನ್ನಡಿಯನ್ನು ನೋಡಿದರೆ ಏನು ಕಾಣಬಲ್ಲರು ? ಅದೇ ರೀತಿ ಅರಿವುಗೇಡಿಯು ದೇವರನ್ನು ಶಿಲೆಯಲ್ಲಿ ಅರಸುತ್ತಾನೆ.

ಶಿವನನ್ನು ಅರಿಯಲು ಅಕ್ಷರಾದಿ ಹಿಂದೆ ಅಂದರೆ ವೇದಗಳ ಹಿಂದೆ, ಅಡವಿಯ ಹಿಂದೆ, ಗಿರಿ ಗಂಹ್ವರಗಳಲ್ಲಿ ಗೋಳು ಪಡುವುದೇಕೆ ? ಹೃದಯದಲ್ಲಿ ಶಿವನಿರುವುದನ್ನು ಹಾಯಾಗಿ ಅರಿಯಬೇಕು.

ಕಪಾಲವು ಶಿವನ ಸಂಕೇತವೇ ಆಗಿದೆ. ಶಿವಲಿಂಗವು ಸಹ ಶಿವನ ಸಂಕೇತವಾಗಿದೆ. ಹೀಗೆ ಶಿವನನ್ನು ಕೈಯಲ್ಲಿ ಹಿಡಿದು, ತೀರ್ಥಗಳಲ್ಲಿ ಅರಸುತ್ತ ತಿರುಗುವುದೇಕೆ ? ಕೈಯಲ್ಲಿ ಬೆಣ್ಣೆಯನ್ನಿರಿಸಿಕೊಂಡು, ಅದೇ ತುಪ್ಪದ ಪೂರ್ವಾವಸ್ಥೆಯೆಂದು ತಿಳಿಯದೆ, ಬೇರೆಡೆಗೆ ತುಪ್ಪವನ್ನು ಅರಸಿದಂತೆ ಇಂಥವರ ತಿಯಾಗಿದೆ.

ಶಿವನನ್ನು ಹುಡುಕುತ್ತ ಕಾಶಿಗೆ ಹೋಗುವುದೇಕೆ ? ತೀರ್ಥಕ್ಷೇತ್ರ ಪರ್ಯಟನೆಯ ಚಿಂತೆಯೇಕೆ ? ದೋಷಕಾರಿ ಇದ್ದರೆ, ಅವನಲ್ಲಿಗೆ ಹೋದರೇನು? ಕಾಶಿ ಎಂದರೆ ಹೊಳೆಯುವ ತತ್ತ್ವವು, ದೊರಕಬಹುದೇ ?

ಶಿವಧ್ಯಾನವು ಎಲ್ಲದಕ್ಕೂ ಕಶಕ ಬೀಜದಂತೆ. ಅಂದರೆ ಶುದ್ಧಿಕಾರಕ. ಸುಷುಮ್ನಾ ನಾಳದಲ್ಲಿ ಬೆಳ್ಳಿ ಚುಕ್ಕೆಯಂತೆ, ಜ್ಯೋತಿದರ್ಶನ ಮಾಡಿಕೊಂಡು ತನ್ನ ಗಮನದ ದಿಕ್ಕು ತಿಳಿಯಬೇಕು. ಇಂಥ ಅಂತರ್ಜ್ಯೋತಿಗಿಂತ ಬೇರಾರು ದಿಕ್ಕು ತೋರಬಹುದು?

ಗುಡಿಯಲ್ಲಿ ಶಿಲೆಯ ಪೂಜೆ ಮಾಡಿ ಮಾಡಿ ಪೂಜಾರಿಯಾದನು. ಪೂಜ್ಯ ವಸ್ತುವೆಂದರೆ ಈ ಭುವಿಯೇ ಆಗಿದೆ. ಅದನ್ನು ಸರ್ವ ದಿಶೆಗಳಲ್ಲಿ ಪೂಜಿಸಬೇಕಷ್ಟೇ. ಆಗ ಮಾತ್ರ ನೋಡಿದಲ್ಲೆಲ್ಲ ಶಿವ ದರ್ಶನ ಪಡೆಯಬಹುದು. 'ಸೋಹಂ' ಅಂದರೆ 'ಅವನೇ ನಾನು' ಎಂದು ಅರಿಯಬಹುದು.

'ದಿವ್' ಎಂದರೆ ಬೆಳಗು, 'ದೇವ' ಎಂದರೆ ಬೆಳಗುವವ ಎಂದರ್ಥ. ಅಂದ ಮೇಲೆ, ದೀಪ ಹೊಂದಿದವನು ದೇಹದೊಳಗೇ ಇರುವನೆಂದಾಯಿತು. ಲಿಂಗವೆಂದರೆ ಕುರುಹು. ಇಂಥ ಶಿವಲಿಂಗವನ್ನು ದೇಹದಿಂದ ಕದ್ದು ಬೇರ್ಪಡಿಸಲೇಕೆ? ಪೂಜೆ ಪತ್ರೆಯಿರದೆ ಆತ್ಮಲಿಂಗವನ್ನು ಪೂಜೆ ಮಾಡಬೇಕು.

ಶಿವನೇ ವಿಶ್ವಕರ್ಮನಾಗಿದ್ದಾನೆ. 'ಸರ್ವಂ ಶಿವಮಯಂ ಜಗತ್.' ಅಂದ ಮೇಲೆ, ವಿಶ್ವಕರ್ಮನಿರದೆ ವಿಶ್ವವನ್ನು ಕಂಡಿರುವಿರಾ? ಅಷ್ಟೇಕೆ ? ವಿಶ್ವಕರ್ಮನಿರದೆ ಊಟವೂ ಇಲ್ಲ; ತೊಡುವ ಉಡುಗೆಯೂ ಇಲ್ಲ. ಅಂದ ಮೇಲೆ ವಿಶ್ವಮಯವೇ ಆದ ವಿಭುವನ್ನೇಕೆ ತಿಳಿಯಲಾರರೋ ಏನೋ ?

೩೨೮೪ ಯಾವ ಕುಲವು ನಿನಗೆ ? ಯಾವ ಸ್ಥಳವು ಮತ್ತೆ ?
ಅಲೆಯದಿದ್ದು ಮನದಿ ಅರಿತು ಪಕ್ವ,
ಆದರಿಸುವ ಅವನೆ ಅನಾಯಾಸ ಪಡೆವ, ವಿಶ್ವ

೩೨೮೫ ಹೃದಯದಲ್ಲಿ ಶಿವನು ಇರುವುದನು ಅರಿಯದೆ,
ಎರಗಲೇಕೆ ಶಿಲೆಗೆ ಎತ್ತಿ ಕೈಯ ?
ಅಂಧಕ, ಕನ್ನಡಿಯ ಅರಸಿ ನೋಡಿದಂತೆ, ವಿಶ್ವ

೩೨೮೬ ಅಕ್ಷರಾದಿ ಹಿಂದೆ, ಅಡವಿಯಾದಿ ಹಿಂದೆ,
ಬೆಟ್ಟ ಕಲ್ಲು, ಗೋಳು ಪಡುವುದೇಕೆ ?
ಹೃದಯದಲ್ಲಿ ಶಿವನು ಹಾಯಾಗಿಹುದನರಿಯರೆ?ವಿಶ್ವ

೩೨೮೭ ಕರದಲ್ಲಿಯೆ ತಾವು ಗಂಗಾಧರನ ಹಿಡಿದು,
ತೀರ್ಥಗಳಿಗೆ ಹೋಗಿ ತಿರುಗುತಿಹರು,
ಬೆಣ್ಣೆ ಹಿಡಿದು ತುಪ್ಪ ಬಯಸಿ ಹುಡುಕುವ ತೆರ, ವಿಶ್ವ

೩೨೮೮ ಕಾಶಿಗೆ ಹೋಹೆನೆಂದು ಕೊನೆಗೆ ಹೆಣಗಲೇಕೆ ?
ತೀರ್ಥಕ್ಷೇತ್ರ ಕುರಿತು ಚಿಂತೆಯೇಕೆ ?
ದೋಷಕಾರಿಗೆಂತು ದೊರಕಬಹುದು ಕಾಶಿ ? ವಿಶ್ವ

೩೨೮೯ ಶತಕವಖಿಲಗಳಿಗೆ ; ನಡು ನಾಳದೊಳಗಿಹ,
ಬೆಳ್ಳಿ ಚುಕ್ಕೆಯಂತೆ ಬೆಳಗಿ ದಿಕ್ಕು,
ಬೆಳಕಿಗಿಂತ ದಿಕ್ಕು ಬೇರೆ ಯಾರು ಉಂಟು ? ವಿಶ್ವ

೩೨೯೦ ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ,
ಪೂಜ್ಯ ವಸ್ತುವೆನಲು ಭುವಿಯು ತಾನೆ,
ಎಲ್ಲಿ ಪೂಜಿಸುವುದು ? ಎಲ್ಲದಿಶೆಯಲಷ್ಟೆ,
ತಾನೆ ನಾನು, ನಾನೆ ತಾನು ವೇಮ.

---

೩೨೯೧ ದೀಪ ಹೊಂದಿದವನು, ದೇಹದೊಳಗೆ ಇರುವ,
ಲಿಂಗವ, ಎಂತಾದರು ದೋಚಿಕೊಂಡ ?
ಪೂಜೆ ಪತ್ರಿಯಿರದೆ ಪೂಜೆಯನ್ನು ಸಲಿಸು, ವಿಶ್ವ

೩೨೯೨ ಅಕ್ಷರವೆಂಬಡವಿ ಸೇರೆ,
ಅಕ್ಷರಾದ ಮಹಿಮೆಗಾಣನಿಹದಲಿ ಮೊದಲಿನಾ,
ಅಕ್ಷರವನು ಜಪಿಸುತ್ತಿರೆ,
ಅಕ್ಷಯವಾದ ಅದುವೆ ಸಾಕು, ಅರಿಯೊ, ವೇಮಾ

೩೨೯೩ ವಿಶ್ವಕರ್ಮನಿರದ ವಿಶ್ವ ಕಂಡಿರೇನು ?
ವಿಶ್ವಕರ್ಮ ಗೆಯ್ದ ವಿಶ್ವವೆಲ್ಲ,
ವಿಶ್ವಕರ್ಮನಿರದೆ ವಿಶ್ವವೆಂಬುದಿಲ್ಲ, ವಿಶ್ವ

೩೨೯೪ ವಿಶ್ವಕರ್ಮನಿರದೆ, ವಿಶ್ವ ಮತ್ತೆ ಇಲ್ಲ,
ಉಣಲು ಊಟವಿಲ್ಲ, ಉಡುಗೆಯಿಲ್ಲ,
ವಿಶ್ವಮಯನೆ ಆದ ವಿಭುವ ತಿಳಿಯರೇಕೊ ? ವಿಶ್ವ

೩೨೯೫ ಸೀ: ಧರೆಯೊಳು ಓದು ಎಲ್ಲ, ಪರಮಾತ್ಮನೊಳು ಆತ್ಮ,
ಐಕ್ಯಗೊಳದಿರೆ, ಬ್ರಹ್ಮನಿಗೂ ದೋಷ,
ಪಂಚ ಭೂತ ವಿಶೇಷ ಪ್ರಕೃತಿಯಲಿ ತಲೆ ಹಾಕಿ,
ನಿಲುಗಡೆ ಮರೆಯದವನ ನೆತ್ತಿ ದೋಷ
ಪಂಚ ವಿಂಶತಿ ತತ್ತ್ವ ಪದ್ಧತಿ ಇಲ್ಲದೇ,
ವೇದಾಂತಿ ನಾನೆನುವಾತಗೊಂದು ದೋಷ,
ಅಂತರಂಗದ ಒಳಗೆ ಅನುಕೂಲವರಿಯದೆ,
ಯೋಗಿ ನಾನೆನುವಾತಗೊಂದು ದೋಷ,
ತೇಟ: ತಾನು ತಾನಾದ ತತ್ತ್ವಗಳಿಗೆ ಅಂಟಿಕೊಂಡು,
ಹೊರಗೆ ಒಳಗೆ ಒಂದಾಗಿ ತಿಳಿದು ತಿಳಿಯದು ;
ಬ್ರಹ್ಮವೇದಗಳ ಗೊತ್ತಿರದ ಪಾಮರರಿಗು
ಹಿಂದೆ ಬಂದು ದೋಷ ; ಹೌದಲ್ಲೊ, ಕೇಳು ವೇಮ.

●

## ಊ. ಶಿವ ದರ್ಶನ

'ಸರ್ವಂ ಶಿವ ಮಯಂ ಜಗತ್' ಎಂದು ಆಗಮಗಳು ಬಣ್ಣಿಸುತ್ತವೆ. ಅದನ್ನೇ ಬ್ರಹ್ಮವಾದಿಗಳು 'ಸರ್ವಂ ಖಲ್ವಿದಂಬ್ರಹ್ಮ' ಎಂದು ಬಣ್ಣಿಸುತ್ತಾರೆ. 'ಬ್ರಹ್ಮವಿದಃ ಬ್ರಹ್ಮೈವ ಭವತಿ' ಅಂದರೆ ಬ್ರಹ್ಮವಿದನು ಬ್ರಹ್ಮವೇ ಆಗುತ್ತಾರೆ. ಅಂದ ಮೇಲೆ ತನ್ನನ್ನೇ ಎಲ್ಲೆಡೆ ನೋಡಬಲ್ಲವನಿಗೆ ಶಿವದರ್ಶನವಾದಂತೆ.

ಇಂಥ ಶಿವಾನುಭವ ಕುರಿತು ಹೇಳುವುದಾದರೆ, ಕೇಳುವವನಿಗಿಂತ ಕಾಣುವವನು ಅಧಿಕನೆನಿಸುತ್ತಾನೆ. ಕಾಣುವವನಿಗಿಂತ ಕಲೆಯುವವನು ಅಧಿಕನೆನಿಸುತ್ತಾನೆ. ಹೀಗೆ ಶಿವನಲ್ಲಿ ಸೇರಿ ಒಂದಾದವನು ಉರ್ವಿಯಲ್ಲಿ ಉನ್ನತೋನ್ನತನೆನಿಸುತ್ತಾನೆ.

ಶಿವ ಪಂಚಾಕ್ಷರಿಯಲ್ಲಿ ಐದು ವರ್ಣಗಳಿವೆ. ನ–ಮಃ–ಶಿ–ವಾ–ಯಃ ಎಂದು. ಇವುಗಳನ್ನು ಪೃಥ್ವಿ, ಅಪ್, ತೇಜ, ವಾಯು ಮತ್ತು ಆಕಾಶ ತತ್ತ್ವಗಳ ಸಂಕೇತವೆನ್ನಲಾಗುತ್ತಿದೆ. ಮತ್ತು ಈ ಬೀಜಾಕ್ಷರಗಳನ್ನು ನಿಮ್ನ ಐದು ಚಕ್ರಗಳಲ್ಲಿ ಧ್ಯಾನಿಸುವುದುಂಟು. ಹೀಗೆ ಐದು ವರ್ಣಗಳ ಮಥಿತಾರ್ಥವನ್ನು ತಿಳಿದು ಅಖಿಲವನ್ನು ಅರಿತರೆ, ಅಲ್ಲಿ ಮುಕ್ತಿ ಉಂಟು. ಐದರಲ್ಲಿ ಇರುವಾತನೇ ಅಖಿಲಾತ್ಮನಾಗಿದ್ದಾನೆ.

ಬ್ರಹ್ಮವು ಏಕವಾಗಿದೆ, ನಿತ್ಯವಾಗಿದೆ. ಉಳಿದೆಲ್ಲವೂ ವಿಕಲ್ಪಿತವಾದುದಷ್ಟೇ, ಅವುಗಳ ಮೂಲದಲ್ಲಿ ಏಕತ್ವವನ್ನು ಅರಿತರೆ ಶೋಕವಿಲ್ಲದಂಥ ಮುಕ್ತಿಯಾಗುತ್ತದೆ.

ತಾನೇ ಸರ್ವವೂ ಆಗಿದ್ದಾನೆ. ತಾನು ಬೇರಾವುದಕ್ಕೆ ಮಣಿಯಬಹುದು? ತನಗಿಂತ ಅನ್ಯವೆಂಬ ಭಾವವೇ ಭೇದಬುದ್ಧಿ. ಈ ರಹಸ್ಯವನ್ನರಿತು ನಿರ್ಭೀತನಾಗು, ಎಲ್ಲವೂ ನಿನಗಂಟಿಯೇ ಇದೆ.

ಹಗ್ಗವನ್ನು ಕಂಡು ಕತ್ತಲಲ್ಲಿ ಹಾವು ಎಂದು ಭಯ ಪಡಬಹುದು. ಆದರೆ ಅದು ಹಾವಲ್ಲ, ಹಗ್ಗವಷ್ಟೇ ಎಂದು ತಿಳಿದರೆ ಭಯವೆಲ್ಲಿ? ಅದೇ ರೀತಿ ಜಗತ್ತು ಹಾವು ಎನಿಸುತ್ತದೆ. ಆದರೆ ಗುಣಗಳ ಮಾಯೆಯಿಂದ ಹಾಗೆನ್ನಿಸಿದೆ. ನಿರ್ಗುಣದಲ್ಲಿ ಭ್ರಾಂತಿ ನಿರಸನವಾಗುತ್ತದೆ. ಭಯವು ಇಲ್ಲವಾಗುತ್ತದೆ. ತೀರಿದೊಡನೆ ತಾನೇ ಬ್ರಹ್ಮವಾಗುತ್ತಾನೆ. 'ಅಹಂ ಬ್ರಹ್ಮ ಅಸ್ಮಿ' ಎಂದು ಅರಿಯುತ್ತಾನೆ.

ತನ್ನಲ್ಲಿ ಕಶ್ಮಲವು ಇರುವ ವರೆಗೆ ತಾನೇ ಶಿವನೆಂದು ಕಾಣಲಾರನು. ರೂಢಿಯಿಂದ ವಿಭಿನ್ನ ವೇಷ ಭೂಷಣ ಧರಿಸಬಹುದು. ಆದರೆ ತನ್ನ ತಾಮಸ ಅಜ್ಞಾನ ಉಡುಗದೆ ಜ್ಞಾನವು ಬಾರದು.

ಗಾಳಿಯಿಲ್ಲದ ಜಾಗೆಯಲ್ಲಿ ದೀಪವು ಅಲುಗದೆ ಉರಿಯುವಂತೆ, ಮನದಲ್ಲಿ ಸಂಕಲ್ಪ–ವಿಕಲ್ಪಗಳ ಹೊಯ್ದಾಟವಿಲ್ಲದಾಗ, ಸರ್ವಾತ್ಮನ ಜ್ಯೋತಿಯು ಬೆಳಗುವುದು. ಆಗ ದುರ್ಗತಿಗಳಾದ ಗರ್ವಾದಿಗಳು ನಶಿಸಿ ಪರಮ ಪ್ರಾಪ್ತಿಯಾಗಬಹುದು.

— — — — — — — — — — — — — — — — — — — — — — —

ಶಿವನನ್ನು ಹೊರಗಣ್ಣುಗಳಿಂದ ಬಾಹ್ಯದಲ್ಲಿ ಕಾಣಲಾಗದು. ಆದರೆ ಅಂತರಂಗದಲ್ಲಿ ಅಭವನನ್ನು ಅಂದರೆ ಭವದ ಪೂರ್ವಾವಸ್ಥೆಯನ್ನು ತಲುಪಿ ಅಲ್ಲಿಯೇ ನಿಂತು ಶಿವನನ್ನು ಕಾಣಬೇಕು.

ಭ್ರೂಮಧ್ಯದಲ್ಲಿ ಸೂಕ್ಷ್ಮದೃಷ್ಟಿಯಿಂದ ನೋಡಿ ನೋಡಿ, ಮತ್ತೆ ಮತ್ತಷ್ಟು ಸೂಕ್ಷ್ಮತರವಾಗಿ ನೋಡುತ್ತಿದ್ದರೆ, ಆತ್ಮ ಕಾಣುವುದೂ, ಕಾಣದಿರುವುದೂ ಅನುಭವ ವೇದ್ಯವಾಗುತ್ತದೆ.

ಭವಾರಣ್ಯದಲ್ಲಿ, ಆತ್ಮದರ್ಶನದ ಚಂದ್ರಕಳೆಯು ಬೆಳಗಿದಾಗ, ದುರ್ಲಭವಾದ ಯೋಗ ಫಲವು ಕಾಣಬಂದು ದೊರೆಯುತ್ತದೆ. ಅದು ಶ್ರೇಷ್ಠವಾದುದಾಗಿದೆ. ಆದರೆ ಪಾಡುಗಾಯಿಯ ಗಿಡವನ್ನು ಆಯ್ದು ಹಿಡಿಯಬೇಕಷ್ಟೇ.

ಯಾರೆ ಇರಲಿ; ಇಂದ್ರನೇ ಇರಲಿ; ಚಂದ್ರನೇ ಇರಲಿ; ಆನಂದದ ದುರ್ಗವನ್ನೇರಿ, ಪ್ರಕೃತಿಯ ಜೊತೆ ಸೇರಿ ಶಕ್ತಿಹ್ರಾಸ ಮಾಡಿಕೊಳ್ಳದೆ, ಮುಕ್ತಿಗಾಗಿ ಹೋರಾಡಬೇಕು.

ಪ್ರಚಲಿತ ಶೈವ, ಶಾಕ್ತ, ಗಾಣಪತ್ಯ, ಕೌಮಾರ, ಕಾಪಾಲಿಕ, ಕಾಳಾಮುಖ ಮತ್ತು ಲಿಂಗವಂತ ಎಂಬ ಏಳುಮತಗಳಲ್ಲಿ, ಲಿಂಗ ಮತವೇ ಶ್ರೇಷ್ಠವಾಗಿದೆ. ಈ ಮತದ ಮೂಲವು 'ಲೀಯತೆ ಯಸ್ಮಿನ್, ಗಮ್ಯತೇ ಯಸ್ಮಾತ್ ತಲ್ಲಿಂಗಂ' ಎಂಬ ಗ್ರಹಿಕೆಯಲ್ಲಿದೆ. ಇದೇ ಅದರ ಶ್ರೇಷ್ಠತೆಯ ಮರ್ಮ ತಾನೇ ?

ದೇವರ ಸೃಷ್ಟಿಯಲ್ಲಿ ಎಲ್ಲವೂ ಲೀಲೆಯಂತೆ ನಡೆದು ಹೋಗುತ್ತದೆ. ಅಂದ ಮೇಲೆ ಯಾವುದು ಕನಿಷ್ಠ ? ಮತ್ತಾವುದು ಶ್ರೇಷ್ಠ ? ಜೇಕು ಗಡ್ಡೆಗೆ ಒಳ್ಳೆಯ ವಾಸನೆಯಿದೆ. ಆದರೆ, ಮೈಮೇಲೆ ಧರಿಸುವ ಬಂಗಾರಕ್ಕೆ ಅಂಥ ವಾಸನೆಯಿಲ್ಲ. ಇದ್ದರೆ ಎಷ್ಟು ಚೆನ್ನಾಗಿತ್ತು ? ಬ್ರಹ್ಮ ಚೇಷ್ಟೆಗಳೆಲ್ಲ ಬರಿಯ ಹಾಳು ಕೆಲಸಗಳಷ್ಟೇ.

ಹಾಲು ಕರೆದರೆ, ಅದು ಕೆಳಗೆ ನೆಲಕ್ಕೆ ಬಿದ್ದು ಹಾಳಾಗುತ್ತದೆ. ಆದರೆ ಆ ಹಾಲನ್ನು ಕೆಡಿಸದೆ, ಕಾಸಿ, ಪಕ್ವಗೊಳಿಸಿ ಕುಡಿಯಬೇಕಷ್ಟೇ, ಅದೇ ರೀತಿ ಮನುಷ್ಯ ಚಿತ್ತವೃತ್ತಿಯು ಅಧೋಮುಖೀ ವಿಷಯ ಭೋಗದಲ್ಲಿ ವ್ಯರ್ಥವಾಗಿ ಹೋಗುತ್ತದೆ. ಅದನ್ನೇ ಸಾಧನೆಯಿಂದ ಸಾಧುಗೊಳಿಸಿ ಬಾಳನ್ನು ಉದ್ದೀಪಿಸಿಕೊಳ್ಳಬೇಕು.

ಮೊದಲು ಮರವಾಗಿದೆ ಎಂಬ ಕೂಟ ವೇದಾಂತ ಪದ್ಯವೊಂದಿದೆ. ಕಾಲಾನುಕ್ರಮದಲ್ಲಿ, ಸಂಸ್ಕಾರ ಬೀಜದಿಂದ ದೇಹ ಧರಿಸಿ, ಫಲ ಭೋಗಿಸಲು ಜೀವಿಯು ಧರೆಗಿಳಿಯುತ್ತಾನೆ. ಈ ಸಂಸಾರ ಪ್ರಕ್ರಿಯೆಯು ವಿವಿಧ ಹಂತದಲ್ಲಿ, ಬೇರು, ಬೊಡ್ಡೆ, ರೆಂಬೆ, ಎಲೆ, ಹೂ, ಕಾಯಿ ಮತ್ತು ಹಣ್ಣುಗಳಿರುವ ಗಿಡದ ತೆರನಂತಿರುತ್ತದೆ. ಈ ಗಿಡದಲ್ಲಾವ ಪಕ್ಷಿಯೂ ಇರದು. ಆದರೆ ಕಾಲವೇ ಪಕ್ಷಿಯಂತಿರುತ್ತದೆ. ಈ ಕಾಲನಿಗಾವ ಬಾಯಿಯಿಲ್ಲ. ಆದರೆ ಕಾಲನ ಪರಿಣಾಮವಾಗಿ

ಶರೀರವು ಜನನ, ಬಾಲ್ಯ, ಯೌವನ, ವೃದ್ಧಾಪ್ಯ, ಮರಣಗಳನ್ನು ಹೊಂದುತ್ತದೆ. ಈ ಕಾಲವೇನೂ ಜೀವಿಯಲ್ಲ, ಆದರೆ ಅದು ಜೀವಿಗಳನ್ನು ಕೊಲ್ಲಬಲ್ಲದು. ಕಾಲಾಯ ತಸ್ಮೈ ನಮಃ.

ತೊಗಲು ತಂದು, ಮನುಷ್ಯನೆಂಬ ಗೊಂಬೆ ಮಾಡಿ, ಹಲವು ದಿನ ಲೀಲೆಯಿಂದ ಆಡಿದಂತೆ ಮಾಡಿ, ಸತ್ತೊಡೆ ಅತ್ತ ಒಗೆವನು. ಹೀಗೆ ತನ್ನನ್ನು ತಿರುಗಿಸುವ ಸೂತ್ರಧಾರನನ್ನು ತಾನೇಕೆ ಕಾಣನೊ ?

**೩೨೯೬ ಕೇಳುವವನಿಗಿಂತ ಕಾಣುವವನು ಅಧಿಕ,**
**ಕಾಣುವವನಿಗಿಂತ ಕಲೆಯುವವನು,**
**ಉನ್ನತತೋನ್ನತನು ಉರ್ವಿಯಲ್ಲಿ ಉಂಟು ; ವಿಶ್ವ**

**೩೨೯೭ ಐದು ವರ್ಣಗಳಲಿ ಅಖಿಲವನ್ನು ಅರಿಯೆ,**
**ಐದರಲ್ಲಿ ಮುಕ್ತಿ ಅಮರಿ ಉಂಟು,**
**ಐದರೊಳಗೆ ಇರುತಿಹ ಅವನೆ ಹೋಗು ಅಖಿಲ, ವಿಶ್ವ**

**೩೨೯೮ ಏಕ ಬ್ರಹ್ಮವು ನಿತ್ಯವು,**
**ವೈಕೃತವೆನಿಪಂಥ ವಸ್ತು ಎಲ್ಲವುಗಳೋಳ್,**
**ಏಕತ್ವವನ್ನು ಅರಿತೊಡೆ,**
**ಶೋಕವು ಇರದಂಥ ಮುಕ್ತಿ, ಸುಲಭವು, ವೇಮಾ ।**

**೩೨೯೯ ಎಲ್ಲೆಡೆ ಹುಡುಕಲು ತಾನೇ ;**
**ಇಲ್ಲ ಮಣಿಯೆ ತಾಣವೆಲ್ಲು ; ಮೂಲವು ತಾನೆ.**
**ಜಲ್ಲನೆ ನಿರ್ಭೀತನಾಗಲು,**
**ಎಲ್ಲವೂ ನಿನಗಂಟಿರುವುದು, ನಿಜವಿದು, ವೇಮಾ**

**೩೩೦೦ ಅರಿವು ಪರಿಗಣಿಸುತ ಅರಿತರಿತು ಕೊಳುವ ;**
**ಪರಮ ತಾಕಿ ನೋಡೆ, ಪಟ್ಟು ಹಿಡಿವ,**
**ಗುರಿಯ ಬಯಲು ಸೇರಿ ಗುಣ ರಹಿತನಾಗನೆ ? ವಿಶ್ವ**

**೩೩೦೧ ಹಗ್ಗ ಹಾವು ಎಂದು ಹೆದರುತಿಹನು ಕಂಡು ;**
**ತಿಳಿಯೆ, ಹಗ್ಗವೆಂದು ತೀರಿತು ಭಯ !**
**ಭಯವು ತೀರಿದೊಡನೆ, ಬ್ರಹ್ಮ ತಾನಾಗುವ, ವಿಶ್ವ**

೩೩೦೨ ಕಲ್ಮಶವು ಹೋಗದೆ, ಕಾಣಲಾರೆ ಎಂದು,
ರೂಪವಾರಿಗೇನು ರೂಢಿಯಿಂದ ;
ತಾಮಸವುಡುಗಿದರೆ, ತಾನೆ ಬಹುದು ಜ್ಞಾನ, ವಿಶ್ವ

೩೩೦೩ ನಿರ್ವಾತ ಕಳೆಯ ಉಪಮೆಯು ;
ಸರ್ವಾತ್ಮನ ಮನದಿ ನೋಡಿ ಸಾರವ ಕಾಣಲ್,
ನಿರ್ವೇದನಾಯ್ತು ; ದುರ್ಗತಿ
ಗರ್ವ ನಶಿಸಿ ಪರಮ ಲಭ್ಯ, ಅಲ್ಲವೆ ? ವೇಮಾ,
ನಿರ್ವೇದ – ತಿರಸ್ಕಾರ, ತ್ಯಾಗ

೩೩೦೪ ಎಣ್ಣೆ ನಾಮ ಬೇರೆ ಎಣ್ಣೆಯೆಲ್ಲ ಒಂದೆ,
ಪತ್ರಿ ನಾಮ ಬೇರೆ ಪತ್ರಿಯೊಂದು,
ಜ್ಯೋತಿ ನಾನು ಬೇರೆ ಜ್ಯೋತಿಯೆಲ್ಲ ಒಂದೆ. ವಿಶ್ವ

೩೩೦೫ ಅಂತರಂಗದಲ್ಲಿ ಅಭವನನುದ್ದೇಶಿಸಿ,
ನಿಲಿಸಿ ನೋಡೆ ನೋಡೆ, ನಿಲಿವುದಲ್ತೆ ?
ಬಾಹ್ಯದಲ್ಲಿ ಶಿವನ ಭಾವಿಸಿ ನಿಲಿಸುವರೆ ? ವಿಶ್ವ

೩೩೦೬ ಸೂಚಿಕಾಗ್ರದೃಷ್ಟಿ ಸರಣಿ ಭ್ರೂ ಮಧ್ಯದಿ
ನೋಡಿ, ನೋಡಿ ಮರಳಿ ನೋಡುತಿರಲು,
ಆತ್ಮಬರುಹೋಗು ಆಗಲೆ ತಿಳಿಯುವುದು, ವಿಶ್ವ

೩೩೦೭ ಸಿಗದ ಹಣ್ಣು ಅಡವಿ ಜೊನ್ನೆಯೊಳಗೆ ಉಂಟು,
ಇಹುದು ನೋಡು ಪಿರಿದು ಇರುವುದಷ್ಟೆ,
ಪಾಡು ಬಿದ್ದ ಗಿಡವ ಹಿಡಿಯಲಾರರಲ್ಲ ! ವಿಶ್ವ

೩೩೦೮ ಇಂದ್ರನಾದರಿರಲಿ, ಚಂದ್ರನಾದರಿರಲಿ,
ನಂದಿ ದುರ್ಗವೇರಿ, ನಾರಿ ಜೊತೆಗೆ,
ಹೊಂದಿಕೊಳದೆ, ಮುಕ್ತಿಗೆ ಹೋರಾಡಬೇಕೆಲೊ, ವಿಶ್ವ

೩೩೦೯ ತಕ್ಕ ಊಟವನೆ ಮಾಡಿಸಿ, ದೇಹ ಮರೆತು,
ನಿದ್ರೆ ಹೊಗಲು, ಹಚ್ಚುವ, ನಿಖಿಲ ಗತಿಗಳ
ಸೂಚಿಸಿಳೆಬದ್ಧರಾಗಿಸುವ, ಸೂಕ್ಷ್ಮ ರೂಪ–
ನಾ ಮಹ ದೇವನಿಹನಲ್ತೆ ? ವೇಮ,

— — — — — — — — — — — — — — — — — — — — —

೩೩೧೦ ಏಳು ಮತಗಳಲ್ಲಿ ಎಣಿಸಿ ನೋಡಿದಾಗ,
ಮತ್ತೆ ಲಿಂಗ ಮತವೆ ಮಿಗಿಲು ಇಹುದು,
ಮತದ ಮೂಲವರಿಯೆ ಮರ್ಮವೆಂಬುದಿಲ್ಲ ! ವಿಶ್ವ

೩೩೧೧ ಜೇಕು ಗಡ್ಡೆಯೊಳೇಕೆ ಹುಟ್ಟಿಸಿದ ವಾಸನೆ ?
ಕನಕವು ತನಗೇನು ಕೇಡು ಗೆಯ್ತು ?
ಬ್ರಹ್ಮಚೇಷ್ಟೆಯೆಲ್ಲ, ಬರಿಯ ಹಾಳು ಕೆಲಸ ! ವಿಶ್ವ

೩೩೧೨ ಕೆಳಗೆ ಹೊಯ್ವ ಹಾಲು, ಕಾಸಿ ಪಕ್ವಗೊಳಿಸಿ,
ವ್ಯರ್ಥ ಕೆಡಿಸಲೇಕೆ ? ಕುಡಿಯಿರಯ್ಯ !
ತಿಳಿವು ಎಷ್ಟೆ ಇರಲಿ ಥೇಟ ನೋಳ್ಪರಾರೊ ? ವಿಶ್ವ

೩೩೧೩ ಮೊದಲು ಮರವಾಗಿದೆ, ತುದಿಗೆ ಪಕ್ಷಿಯು ಅಲ್ಲ,
ಬಾಯಿ ಇಲ್ಲ, ಹಲ್ಲು ಆರು ಉಂಟು,
ಜೀವವೊಂದು ಇಲ್ಲ ಜೀವಿಗಳ ಕೊಲುವುದು, ವಿಶ್ವ

೩೩೧೪ ಶ್ವಾನ–ತೊಗಲು ತಂದು ತಾನು ಗೊಂಬೆ ಮಾಡಿ,
ಆಡಿದಂತೆ ಮಾಡಿ ಅಂತೆ ಒಗೆವ;
ತನ್ನ ತಿರುಗಿಸುವನ ತಾನು ಕಾಣನೇಕೆ ? ವಿಶ್ವ

●

## ೩೮. ಭಕ್ತನ ಸ್ಥಿತಿ

'ಭಕ್ತಿಃ ಪ್ರೇಮ ಸ್ವರೂಪಾ; ಭಕ್ತಿಃ ಆನಂದ ರೂಪಾ, ಭಕ್ತಿಃ ಭಕ್ತಸ್ಯ ಜೀವನಂ' ಎಂದು ನಾರದ ಭಕ್ತಿ ಸೂತ್ರವು ಹೇಳುತ್ತಿದೆ. ಭಕ್ತನ ಸ್ಥಿತಿಯು ಏನಿರಬೇಕು ? ಏನಾಗಿದೆ ? ಎಂಬುದನ್ನು ಕುರಿತು ವೇಮನ ಯೋಗಿಗಳು ವಿವೇಚಿಸಿದ್ದಾರೆ.

ಭಕ್ತನು ಮೊದಲು ಒಂದು ಮತಾನುಸಾರ ತನ್ನ ಸಾಧನೆಯನ್ನು ಆರಂಭಿಸುತ್ತಾನೆ. ಹೀಗೆ ಆರಂಭಿಸಿದ ಬಳಿಕ, ಬೇರೆ ಸಿದ್ಧಿಯ ಲಾಭಕ್ಕಾಗಿ ಅದನ್ನು ತೊರೆಯತಕ್ಕದ್ದಲ್ಲ. ಇಲ್ಲಿ ತಾಳ್ಮೆಯು ಅಗತ್ಯ. ಎರಡನೆಯದಾಗಿ, ಅವನು ಅನ್ಯರ ಮತವನ್ನು ದೂಷಿಸಕೂಡದು. ಹೀಗೆ ತನ್ನ ಸ್ಥಿತಿಯಿಂದ ಅದರದೆ, ಕೋರಿಕೆಗಳನ್ನು ಕೋರದೆ, ಪ್ರೇಮ ಪೂರ್ವಕ ಸಾಗುವವನೇ ಜಾಣನು.

ಹರನನ್ನು ಮನದಲ್ಲಿ ಸದಾ ಧ್ಯಾನಿಸುತ್ತಿದ್ದರೆ, ಶೀಘ್ರ ಫಲ ದೊರೆಯದಿರಬಹುದು, ಕೇಲವರಿಗೆ, ಆದರೆ ಯಾರಿಗೂ ಅದರಿಂದ ಹಾನಿಯಂತೂ ಇಲ್ಲ. ಆದ್ದರಿಂದ ಹಿಡಿದ ನಿಷ್ಠೆ ಬಿಡದೆ ಸಾಗಬೇಕು.

— — — — — — — — — — — — — — — — — — — — —

ಭಕ್ತಿ ಜನಿಸಲು ಜ್ಞಾನವೇ ಮೂಲವಾಗಿದೆ. ಭಕ್ತಿಯೆಂದರೆ ಕರ್ಮ ಶುದ್ಧಿಯಿಂದ, ಜ್ಞಾನ ಪಡೆದುಕೊಂಡದ್ದರ ಫಲವೇ ಆಗಿದೆ. ಹೀಗೆ ಗಳಿಸಿದ ಭಕ್ತಿಯನ್ನು ಗುರುವಿನ ಮಾರ್ಗದರ್ಶನ ಪಡೆದು ಬೆಳೆಸಿಕೊಳ್ಳಬೇಕು. ಆಗ ಯುಕ್ತಿಯಿಂದ ಲಕ್ಷ್ಯದ ದಾರಿ ಸಿಕ್ಕುತ್ತದೆ. ಮತ್ತು ಅದುವೇ ಮುಕ್ತಿಗೆ ದಾರಿಯಾಗುತ್ತದೆ.

ಬೇಟೆ ನಾಯಿಯನ್ನು ಅರಣ್ಯದಲ್ಲಿ 'ಛೂ' ಬಿಟ್ಟರೆ, ಪ್ರಾಣಿಗಳನ್ನು ವಾಸನೆ ಹಿಡಿದು ಹುಡುಕುತ್ತದೆ. ಅದೇ ರೀತಿ, ಜ್ಞಾನಿಯು ಆನಂದವನ್ನು ಅರಿಯುತ್ತಾನೆ. ಭಕ್ತಿ ಆನಂದ ರೂಪವು ತಾನೇ.

ಧೀ ಶಕ್ತಿ ಸಂಪನ್ನರಾದವರೂ, ದ್ಯುಲೋಕ, ಭೂಲೋಕ ಮತ್ತು ಪಾತಾಳ ಲೋಕದಲ್ಲಿ ಹಗ್ಗವನ್ನು ಹಾವೆಂದು ಭ್ರಮಿಸುತ್ತಾರೆ. ಮೂರು ಲೋಕದ ಜನರು ಮೂಢರಲ್ಲವೇ? ಇನ್ನು ಕಪ್ಪೆಚಿಪ್ಪನ್ನು ರಜತವೆಂದು ಕರೆದರೆ, ಗೆಜ್ಜೆಗಳಲ್ಲಿ ಹೊಳೆಯುವಂತಾಗುತ್ತದೆ. ಅಂದ ಮೇಲೆ, ಭ್ರಮೆಯೇ ಎಲ್ಲೆಡೆಗೆ ಸರ್ವ ಮಾನ್ಯವಾದರೆ ಸತ್ಯವನ್ನು ಕಾಣುವುದೆಂತು?

ಶ್ರವಣ, ಮನನ ವೃತ್ತಿಗಳನ್ನು ಸೇರಿಸುತ್ತ ಬ್ರಹ್ಮ ಜಿಜ್ಞಾಸುವು ಪರಮ ಸಿದ್ಧಿಗಾಗಿ, ತನ್ನ ಜ್ಞಪ್ತಿಯನ್ನು ಸಹ ಮರೆತು ಹೋಗುವನು. ಅವನೇ ಏಕಾಗ್ರಚಿತ್ತನು. ಇನ್ನು ಸಾಧಕನು ಅನಿಮಿಷ ನೇತ್ರನಾಗಿ ತನುವಿನಲ್ಲಿಯೂ ಮತ್ತು ಮನದಲ್ಲಿಯೂ ತತ್ತ್ವದಲ್ಲಿ ಸೇರಿ, ಒಪ್ಪವಾಗಿ ನೋಡುತ್ತಿದ್ದರೆ, ಮುಕ್ತಿಯು ಸುಲಭಸಾಧ್ಯವಾಗುತ್ತದೆ.

ಅವನೇ ಕರ್ತ; ಅವನೇ ಭರ್ತ. ಹುಟ್ಟು ಯಾವಾಗ ? ಸಾವು ಯಾವಾಗ? ಎಂಬುದನ್ನು ಮಾನವನು ತಿಳಿಯನು. ಶಿವನು ಕೃಪೆ ಮಾಡಿದರೆ ಮಾತ್ರ ತಿಳಿಯಬಲ್ಲನು. ಅಂದ ಮೇಲೆ, ತಾನು ಈ ಮಧ್ಯೆ ಕರ್ತನೆಂದುಕೊಳ್ಳುವುದು ನಗುಪಾಟಲೇ ಸರಿ.

ಭಕ್ತನು ಮಾತು ಮನಂಗಳಿಂದಾಚೆಯ ಆನಂದ ಕೇಳಿಯಲ್ಲಿ ತನ್ನ ಮನವನ್ನು ನೂಕಿ, ಎಲ್ಲೆಡೆ ಆನಂದವೇ ತುಂಬಿ ಸೂಸಿದರೆ, ಅಂಥವನ ಭಕ್ತಿಗೆ ಯಾವುದು ಸಾಟಿಯೆನಿಸೀತು ? ಇಲ್ಲಿ ಡಾಂಭಿಕತನಕ್ಕಾವ ಇಂಬೂ ಇಲ್ಲ.

ಜೀವನ ಬಾಹ್ಯ ಇಂದ್ರಿಯ ವ್ಯಾಪಾರವು ವಶವರ್ತಿಯಾದ ಬಳಿಕ ಚಿನ್ಮಾತ್ರ ತನುವು ಮಿಂಚುತ್ತದೆ. ಅಲ್ಲಿ ಸ್ಥೂಲ ಪ್ರಪಂಚವು ನಿಂತು ಭಾವವು ಕುದುರುತ್ತದೆ. ಲಕ್ಷ್ಯದ ಭಾವವನ್ನು, ಗಟ್ಟಿಯಾಗಿ ಮನದಲ್ಲಿ ಹಂಸವನ್ನು ಸೇರಿ, ಅಂದರೆ ಸೋಹಂ ಧ್ಯಾನ ಮಾಡಿದರೆ, ಕರ್ಮತ್ಯಾಗವೆನ್ನಬಹುದು.

ಮಾನವನು ದೇವರನ್ನು ಹುಡುಕುತ್ತ ತೀರ್ಥ-ಕ್ಷೇತ್ರಗಳಿಗೆ ಅಲೆದಲೆದು ಮರುಳಾಗಿರುವನಷ್ಟೇ. ಈ ಅಂಡಲೆತದಿಂದ ಮನೋ ಶುದ್ಧಿಯೂ ಆಗದು. ಮನದ ನಿಲುಗಡೆಯೂ ಆಗದು. ಅಂತರಾತ್ಮವನ್ನು ಕಂಡುಕೊಂಡು, ಮನಸ್ಸನ್ನು ನಿಲ್ಲಿಸುವವನೇ ಬ್ರಹ್ಮವಾಗುತ್ತಾನೆ. ಊರಿನ ಭಾವಿ, ಕೇರಿಯ ಭಾವಿಯ ನೀರನ್ನು ಅಪವಿತ್ರವೆಂದು

ಬಗೆದು, ಯಾವನೋ ಸಾಧು ವೇಷಧಾರಿಯ ಪಾದತೀರ್ಥವನ್ನು ಪವಿತ್ರವೆಂದು ಗ್ರಹಿಸಿದರೆ ಅದರಿಂದಾವ ಫಲ ದೊರಕೀತು ? ಅವರವರ ಅಹಂಕಾರ ಹೆಚ್ಚುವುದಷ್ಟೇ.

ದೇವರ ಸೇವೆಯೆಂಬ ಹೆಸರಿನಿಂದ, ಉಪವಾಸವಿದ್ದು, ನೀರು ಮುಳುಗಿ, ಸ್ನಾನ ಮಾಡಿ, ಅಡಿಗೆ ಮಾಡಿ, ದೇವರಿಗೆ ಎಡೆ ಹಿಡಿಯುವನು. ಅವನೇನು ದೇವರಿಗೆ ಉಣಬಡಿಸುವನೇ? ಕಲ್ಲು ಮೂರ್ತಿ ಉಣ್ಣುವುದೇ? ಅದಕ್ಕೆ ತೋರಿಸಿ ತಾವೇ ತಿನ್ನುವರಷ್ಟೇ.

ಉಪವಾಸ ಮಾಡಿದರೇನಾಗುತ್ತದೆ ? ಶರೀರದಲ್ಲಿ ಕೂಡಿಬಿದ್ದ ನೆಣಮಲ ಇತ್ಯಾದಿಗಳನ್ನು ಜಠರಾಗ್ನಿ ಪಚನ ಮಾಡತೊಡಗುತ್ತದೆ. ಮಲ ತಿನ್ನುವುದೇ ಹಂದಿಯ ವೃತ್ತಿಯಷ್ಟೇ ? ಅರ್ಥಾತ್ ಉಪವಾಸವಿರುವವನು ಊರ ಹಂದಿಯಾಗಬಹುದಷ್ಟೇ. ಯೋಗಿಗೆ ಜೀವ ನಿಯಮಿತ ಆಹಾರ ಸೇವನೆಯನ್ನು ನಿರ್ದೇಶಿಸಲಾಗಿದೆಯೇ ಹೊರತು ಉಪವಾಸವನ್ನಲ್ಲ. ಉಣಿಸುವವನು ಆ ಮಹಾದೇವನೇ. ಹಸಿವು ಮರೆಸಿ ನಿದ್ರೆ ಹೊಗಿಸುವವನೂ ಅವನೇ.

ಮಾರುತಿಯ ಕತೆಯು ಭಕ್ತಿಯೋಗಿಗಳಿಗೆ ಸುಂದರ ದೃಷ್ಟಾಂತವಾಗಿದೆ. ರಾಮಾಜ್ಞೆಯನ್ನು ಮನದಲ್ಲಿ ಭದ್ರವಾಗಿರಿಸಿಕೊಂಡು, ಮಾಯೆಯನ್ನು ಕಳೆದುಕೊಂಡು ಮಾರುತಿಯು ಸಮುದ್ರವನ್ನು ಹಾರುತ್ತಾನೆ. ಮರುತ್ ತತ್ತ್ವವನ್ನು ಸರಿಯಾಗಿ ಅರ್ಥೈಸಿಕೊಂಡು ಹನುಮಂತನು ತತ್ತ್ವಜ್ಞನಾಗುತ್ತಾನೆ. 'ಕಾಲು ಕೈಗಳಿಲ್ಲ......' ಎಂಬುದು ಕೂಟ ವೇದಾಂತದ ಪದ್ಯ. ಕಾಯಕವೆಂದರೆ ಶರೀರ ಇಲ್ಲವೆ ದೇಹ – ಈ ದೇಹವು ಸೂಕ್ಷ್ಮವಿರಬಹುದು ಇಲ್ಲವೆ ಸ್ಥೂಲವಿರಬಹುದು, ಇಲ್ಲವೆ ಕಾರಣವೂ ಆಗಿರಬಹುದು. ಮನೋ ವ್ಯಾಪಾರವು ಸೂಕ್ಷ್ಮವಾಗಿರುವುದರಿಂದ ಅದಕ್ಕೆ ಅವಯವಗಳಿಲ್ಲ. ಅದು ನಿರವಯವವಾಗಿದೆ. ಹೀಗಾಗಿ ಅದಕ್ಕೆ ಕಾಲು ಕೈಗಳಿಲ್ಲ. ದನಕ್ಕಿರುವ ಕೋಡುಗಳಂತೂ ಇಲ್ಲವೇ ಇಲ್ಲ. ಆದರೂ ಅದು ತನ್ನ ಚೂಟಿ ನುಡಿಗಳಿಂದ ಕೊಸರಿ ಚಿಮ್ಮಿ ವಿರೋಧಿಗಳನ್ನು ಗಾಸಿಗೊಳಿಸುತ್ತದೆ. ಜನರ ಬಿರುನುಡಿಗಳಿಗೆ, ಚಾಡಿ ಮಾತುಗಳಿಗೆ, ಮಿಥ್ಯಾರೋಪಗಳಿಗೆ ಬೇಸರಗೊಂಡು ಪ್ರಾಣ ತೆತ್ತುವವರೆಷ್ಟೋ ?

ಇಹದಲ್ಲಿ ಎಲ್ಲವೂ ವಿನಾಶಿಯೇ, ಪ್ರಳಯ ಕಾಲದಲ್ಲಿ ಭೂಮಿ ತೀರ್ಥ ಕ್ಷೇತ್ರಗಳೆಲ್ಲ ನಾಶವಾಗುವವುಗಳೇ. ಈ ಮುನ್ನ ಇದ್ದ ಸುರ ಮುನಿಗಳೂ ಸಹ ತೊಲಗಿರುವಾಗ, ಸಾಮಾನ್ಯ ಜನರು ಇಲ್ಲಿ ಚಿರವಾಗಿ ಉಳಿಯಬಹುದೇ ? ಬಾಳಿನ ಕ್ಷಣಿಕತೆಯನ್ನು ಅರಿತು ಶಾಶ್ವತವಾದುದನ್ನು ಪಡೆಯಲು ಯತ್ನಿಸಬೇಕು. ಅದುವೇ ಆತ್ಮ.

ಸುಣ್ಣವು ಶುಭ್ರವರ್ಣ ಹೊಂದಿರುತ್ತದೆ. ಇದು ಸತ್ತ್ವಗುಣದ ಸಂಕೇತ. ಇದು ಸತ್ತ್ವ ಸಂಗವನ್ನು ಪ್ರತಿನಿಧಿಸುತ್ತದೆ. ಹೀಗೆ ಸುಣ್ಣವನ್ನು ತಿನ್ನುವವನಿಗೆ ಅಂದರೆ

ಜ್ಞಪ್ತಿಯನ್ನು ಮೀರಿ ಹೋಗುವವನಿಗೆ, ಉನ್ನತವಾದ ಸ್ವರ್ಗವೇಕೆ ಸಿಕ್ಕದು? ಸುಣ್ಣವು ಶುಭ್ರ ವರ್ಣದ್ದು, ಅರ್ಥಾತ್ ವರ್ಣಾತೀತವಾದುದು. ಇದುವೇ ಉನ್ನತ ಬ್ರಹ್ಮಕ್ಕೆ ಉಪಮೆಯಾಗಿದೆ.

ಗೋವು ಹಚ್ಚಮಲವನ್ನು ತಿನ್ನುತ್ತದೆ. ಹಣ್ಣು ಎಲೆಯನ್ನು ತಿನ್ನುತ್ತದೆ. ಅಂಥ ಗೋವಿನ ದಪ್ಪ ಮೂತ್ರ ಕಾಯಿಸಿ ಕುದಿಸಿ ಕುಡಿದರೆ, ತತ್ತ್ವವನ್ನು ಕಾಣಬಹುದೇ? ಪುಣ್ಯ ಬರುವುದೇ?

ಜೀವ್ ಅಂದರೆ ಉಸಿರಾಡಿಸು. ಜೀವವಿರುವ ಕಾಲದಲ್ಲಿ ಪರಮಾತ್ಮನ ಲೀಲೆಗಳನ್ನು ಸ್ಮರಿಸದೆ ಮಾಯೆಗಂಟಿದರೇನು? ಪ್ರತಿಯಾಗಿ ಆತ್ಮವಿಶ್ವಾಸ ತಾಳಿ ಆತ್ಮವನ್ನು ಅರಿಯುವ ಕೀಲಿ ಕೈಯನ್ನು ಕಾಣಬೇಕು. ಸಾಧನವೇ ಇಂಥ ಬೀಗದ ಕೈ. ನೀನು ನಿನ್ನಲ್ಲಿಯೇ ಇರುವುದೇ ನಿನಗೆ ಮೇಲು.

ಪುರಾಣಗಳಲ್ಲಿ ದೇವಾಸುರರು ಸಮುದ್ರಮಂಥನ ಮಾಡಿದ ಕತೆಯಿದೆ. ಭವ ಸಾಗರವನ್ನು ಕಡೆದಾಗ ಅಮೃತ ದೊರೆಯುತ್ತದೆ, ಆದರೆ ಅಮೃತಕಷ್ಟೇ ಅಂಟಿಕೊಳ್ಳಲಿಲ್ಲ, ಅಮೃತವು ಹಾಲಾಹಾಲವಾಗಿ ಪರಿಣಮಿಸಿತಲ್ಲವೇ ?

ಭೂಮಿಯಲ್ಲಿ, ಕನ್ಯೆಗೆ ಎಲ್ಲ ಶೃಂಗಾರಗಳಿದ್ದರೂ, ಗಂಡನ ಕರುಣೆಯೊಂದು ಇರದಿದ್ದರೆ ಅವಳು ಬೆಳಗಲಾರಳು. ಅದೇ ರೀತಿ ದೈವ ಕೃಪೆ ಇಲ್ಲದಿದ್ದರೆ, ಮಾಡಿದ ಕೆಲಸ ಫಲವೀಯದು.

ಮೋಕ್ಷ ಕಾಮನೆಯು ಅತಿಶಯವಾದ ಕಾಮನೆಯೇ ಸರಿ. ಅಂದ ಮೇಲೆ ಕಾಮಿಯಲ್ಲದವನು ಕವಿಯೂ ಅಲ್ಲ; ರವಿಯೂ ಅಲ್ಲ; ಮೋಕ್ಷಕಾಮಿಯೂ ಅಲ್ಲ.

'ಶರೀರಂ ಖಲು ಧರ್ಮ ಸಾಧನಂ' ಎನ್ನುತ್ತಾರೆ. ಅರಿವು ಮೂಡುವ ಮುನ್ನ ಇಹ ಬೇರೆ, ಪರವು ಬೇರೆ ಎನಿಸುತ್ತದೆ. ಇಲ್ಲಿಯೇ ಅರಿತರೆ, ಅಂದರೆ ಜೀವನ್ಮುಕ್ತಿ ಪಡೆದರೆ, ಇಹಪರಗಳು ಇರವು. ಪ್ರಳಯದಲ್ಲಿ ಬ್ರಹ್ಮೀ ಭೂತವಾಗುವುದಷ್ಟೇ. ಪ್ರಾಣ ಹಾನಿಯಾಗದು.

ಮಾತಿನ ಒಳಮರ್ಮವನ್ನು ತಿಳಿದರೆ ಮಾತೇ ಬ್ರಹ್ಮ ಪದವಿಗೆ ಮಾರ್ಗ ತೋರುತ್ತದೆ. ಮಾತಿನ ಮಹಿಮೆಯನ್ನು ತಿಳಿಯದಿದ್ದರೆ ಮಾನವಿರದು, ಮುಕ್ತಿಯು ವೇದದಲ್ಲೂ ಇಲ್ಲ, ಶಾಸ್ತ್ರದಲ್ಲೂ ಇಲ್ಲ, ವಾದದಲ್ಲೂ ಇಲ್ಲ. ಆ ದೈವ ಈ ದೈವ ಎಂಬ ದೈವ ಭೇದಗಳಲ್ಲೂ ಇಲ್ಲ. ಮನವು ಸಂಸ್ಕಾರ ದೂರವಾಗಿ ಚಿದ್ ಬಯಲು ಅನುಭವ ವೇದ್ಯವಾದರೆ, ಅದೇ ಮುಕ್ತಿಯಾಗಿದೆ.

ವೇದದ ಕರ್ಮ ಕಾಂಡವು ವೇಶ್ಯೆಯಂತೆ, ಭೋಗದ ಆಸೆ ತೋರುತ್ತದೆ. ಬ್ರಹ್ಮ ಸಾಧಕನನ್ನು ಹಾದಿ ತಪ್ಪಿಸಿ ಭ್ರಮಿತನನ್ನಾಗಿಸುತ್ತವೆ. ಮನಸ್ಸನ್ನು ಶುದ್ಧಗೊಳಿಸಿ

— — — — — — — — — — — — — — — — — — — —

ಬಯಲು ಸೇರಗೊಡದು. ಆದರೆ, ಗುಪ್ತ ವಿದ್ಯೆಯಾದ ವೇದಾಂತವು ಮಾತ್ರ ಕುಲಕಾಂತೆಯಂತೆ, ಆನಂದದಾಯಿಯಾಗಿದೆ.

ಸಾಧಕನು ವರ್ಣ, ಆಶ್ರಮಗಳ ಭೇದವನ್ನು ಮೀರಬೇಕು. ದರ್ಶನಗಳಲ್ಲಾಗಲಿ, ಷಣ್ಮತಗಳಲ್ಲಾಗಲಿ, ಸಿಲುಕದೆ ಇರಬೇಕು. ಇಲ್ಲವಾದರೆ ಅವನು ಅಜ್ಞಾನಿಯೇ ಸರಿ.

ಇತಿಹಾಸ ಪುರಾಣಾದಿಗಳಲ್ಲಿ ಕಥೆಗಳನ್ನು ಹೆಣೆಯಲಾಗಿದೆ. ಅವುಗಳನ್ನು ಅನಧಿಕಾರಿಯು ಓದಿ ಗೊಂದಲದಲ್ಲಿ ಬೀಳಬಹುದು. ಆದರೆ ಒಂದು ಮಾತಂತೂ ನಿಶ್ಚಿತ. ಹುಟ್ಟಿದವನು ಸಾಯಲೇಬೇಕು. ಅಂದ ಮೇಲೆ ಇದೆಲ್ಲ ನಶ್ವರವಾಗಿದೆ. ಬ್ರಹ್ಮವೊಂದೇ ಶಾಶ್ವತ. ಆದ್ದರಿಂದ ಅದಕ್ಕೇ ಅಂಟಬೇಕು.

ಸಾಧಕರಲ್ಲಿ ಹಲವರು ಮನವನ್ನು ನಿಲ್ಲಿಸಲು ಶಕ್ತರಾಗುತ್ತಾರೆ. ಮತ್ತೆ ಅದನ್ನು ಜಯಿಸುತ್ತಾರೆ. ಆದರೆ ಉನ್ಮನದಲ್ಲಿ ಮಾಯೆಗೆ ಸಿಕ್ಕು ಸಿದ್ಧಿಗಳಿಗೆ ಮರಳುತ್ತಾರೆ. ಇಲ್ಲಿ ಹೆಚ್ಚು ಮಾತನಾಡುವುದೆಲ್ಲ ಅಹಮಿನ ಬಲವರ್ಧನೆಯೇ ಆಗಿದೆ.

ಭವ ಸಾಗರದಲ್ಲಿ ಜ್ಞಾನದ ಕೆಂಡವನ್ನು ಇಟ್ಟರೆ ಅದು ಇದ್ದಲಾಗುತ್ತದೆ. ಅದೇ ಭವಸಾಗರದಿಂದ ಹೊರಬಂದು, ನಮಗೆ ಅಗತ್ಯವಿರುವಷ್ಟು ಸಾಗರದ ನೀರನ್ನು ಜ್ಞಾನದ ಕೆಂಡದ ಮೇಲಿಟ್ಟು ಕಾಯಿಸಿದರೆ, ನೀರು ಬಿಸಿಯಾಗುತ್ತದೆ. ಹೀಗೆ ಸಂಸಾರದ ಲೇಪವನ್ನು ಮಿತಗೊಳಿಸಬೇಕು.

'ಮನದಲ್ಲಿ ವೇಷವು ಮೇಣ್ಗಮಟಿನ ಜಿಡ್ಡು.........' ಎಂಬೀ ಪದ್ಯವು ವೇಷ ಸೂಚಕ ಇಲ್ಲವೆ ಜಾತಿ ಸೂಚಕವೆಂದು ಮೇಲ್ನೋಟಕ್ಕೆ ತೋರಿದರೂ ಇದೊಂದು ಕೂಟವೇದಾಂತದ ಪದ್ಯವಾಗಿದೆ. ಮನಸ್ಸಿನ ವಿಷಯ ವಾಸನೆಗಳು ಮೇಣಗಮಟಿನ ವೇಷದಂತೆ ಅಂಟಿವೆ. ಅವುಗಳನ್ನು ಹಿಮ್ಮೆಟ್ಟಿಸಲು ಐದು ಇಂದ್ರಿಯಗಳೆಂಬ ಹಸುಗಳನ್ನು ದೊಡ್ಡಿಯಲ್ಲಿ ಕಟ್ಟಿಹಾಕಿ, ಅನುವಿಡಿದು ಸರ್ವವನ್ನು ಸಮರ್ಪಿಸಿ ಸುವಿಖ್ಯಾತನಾದನು ವೇಮನರೆಡ್ಡಿ.

ಅನ್ನವನ್ನು ತಾಮಸಿಕ, ರಾಜಸಿಕ ಮತ್ತು ಸಾತ್ವಿಕವೆಂದು ವರ್ಗೀಕರಿಸಬಹುದು. ಸಾತ್ವಿಕ ಆಹಾರವು ಶುದ್ಧ ಮನಸ್ಸು ಬೆಳೆಸಲು ಪೋಷಕವಾಗುತ್ತದೆ. ಅನ್ನವು ತಾಮಸಿಕವಾದರೆ ಮನವು ತಾಮಸಿಕ ವಿಷಯಗಳ ಸಂಗ ಬಯಸುತ್ತದೆ. ಅಂಥ ಮನದಲ್ಲಿ ಆತ್ಮವು ಸರಿಯಾಗಿ ಪ್ರತಿಬಿಂಬಿಸದು. ಹೀಗೆ ಅನ್ನಕಿಪ್ಪ ದೋಷವು ಆತ್ಮದೋಷವೆನಿಸುತ್ತದೆ. ಆತ್ಮಶುದ್ಧವಾದರೆ ಶುದ್ಧ ಅನ್ನವನ್ನೇ ಸೇವಿಸಬೇಕೆನಿಸುತ್ತದೆ. ಹೀಗೆ ಸಾತ್ವಿಕ ಅನ್ನ ಮತ್ತು ಶುದ್ಧ ಆತ್ಮಗಳು ಸೇರಿ ಹೊಳೆಯುತ್ತವೆ.

ಮರ್ತ್ಯರಾದ ಜನರು ತಮ್ಮ ಮನಸ್ಸಿನಲ್ಲಿ ಹಾದಿ ಬಿಟ್ಟು ನಡೆಯುತ್ತಾರೆ. ಭ್ರಮಿತರಾಗುತ್ತಾರೆ. ಹೀಗಾಗಿ ಭಕ್ತಿದೂರವಾಗಿ, ಪರಮಾತ್ಮನ ಮೇಲೆ ವಿಶ್ವಾಸ

ಕಳೆದುಕೊಳ್ಳುತ್ತಾರೆ. ಎಲ್ಲ ಚಿಂತೆಯನ್ನು ತಮಗೆ ಅಂಟಿಸಿಕೊಳ್ಳುತ್ತಾರೆ. ಹೀಗಾಗಿ ಹೋಗಿ ಬರುವ ಹುಟ್ಟು ಸಾವುಗಳಾಗುತ್ತವೆ. ಇಂಥ ಪಾಮರರಿಗೆ ಕಷ್ಟಗಳು ಅಳಿವುದೆಂತು ? ಇದಕ್ಕೆ ಒಂದೇ ಉಪಾಯ. ಅದೇ ಗುರುಸನ್ನಿಧಿ ಸೇರುವುದು.

ಇನ್ನುಮೇಲಾದರೂ ದೇವರಿಲ್ಲವೆನ್ನುವ ಚಾರ್ವಾಕ ಮತ ಸಾಕು. ಶಿವ ಶಕ್ತಿ ಸಂಪುಟವನ್ನು ಚೊಕ್ಕವಾಗಿ ನಂಬು.

ಯೋಗಿಯಲ್ಲಿ ಶಿವನ ಕೃಪೆಧಾರೆ ತನ್ನ ನೀರ್ನಾಳದಲ್ಲಿ ಸುರಿಯುತ್ತದೆ. ಅದು ಸುರಿಯುತ್ತಿದ್ದಷ್ಟು ಸೌಖ್ಯವು ಹೆಚ್ಚುತ್ತದೆ. ಈ ಸೌಖ್ಯ ಇನಿಯಳಿಂದ ಬರುವ ಬಾಹ್ಯ ಸುಖ ಭೋಗವಲ್ಲ. ಇನಿಯಳು ಅಳಿದರೆ ನಿಲ್ಲದ ಸೌಖ್ಯವಿದು! ಶಿವನು ಯೋಗಿಯಲ್ಲಿ ಇದ್ದು ಸೌಖ್ಯವನ್ನು ಸುರಿಯುತ್ತಾನೆ.

ಭವ ಸಾಗರದಲ್ಲಿ ಬಾಳನೌಕೆಯೊಂದಿದೆ. ಅದನ್ನು ಪಾರುಗಾಣಲು ಬಳಸಬೇಕು. ಆದರೆ, ಭವದಲ್ಲಿ ಬಿದ್ದೆನಲ್ಲಾ! ಏನು ಮಾಡಲಿ ? ಎಂದು ಈ ನೌಕೆಯೇ ಭೂತವೆಂದೂ ತನ್ನನ್ನು ವಂಚಿಸುವುದೆಂದೂ ತಿಳಿದು ಇದ್ದರೆ, ನೌಕೆಯ ಪಟವು ಪಲ್ಲಟವಾಗಿ, ನೌಕೆ ತೇಲದೆ ಮುಳುಗುತ್ತದೆ. ಭವಸಾಗರದಲ್ಲಿ ಭಕ್ತಿಯ ಕುಂಬಳಕಾಯಿ ಕಟ್ಟಿಕೊಂಡು ಈಸಬಲ್ಲವರಾದರೆ, ಆ ಮಾತೇ ಬೇರೆ.

ತನ್ನನ್ನು ತಾನು ತಿಳಿದರೆ ದೈವವನ್ನೂ ತಿಳಿಯಬಹುದು. ಆದರೆ ನಾನಾರು ಎಂಬುದನ್ನು ತಿಳಿಯದ ದೈವಜ್ಞರಿರಬಹುದೇನು ? ಇನ್ನು ದೈವವನ್ನು ತಿಳಿಯದಿದ್ದರೆ, ನಿಲ್ಲದೆ ಕುಪ್ಪಳಿಸುತ್ತಾನೆ. ಮಾಯೆಯನ್ನು ಅರಿಯಬೇಕು. ಇಲ್ಲವಾದರೆ, ಎಲ್ಲವೂ ಮಣ್ಣು ಪಾಲಷ್ಟೇ.

ತಾನೇ ತತ್ತ್ವವಾಗಿದ್ದಾನೆ. ಆದರೆ ತನ್ನನ್ನು ಅರಿತು ಕೊಳ್ಳದಾಗ ಮಾಯೆಯೇ ತತ್ತ್ವವೆಂದು ಭ್ರಮಿಸುತ್ತಾನೆ. 'ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬಂತೆ ಎಲ್ಲ ಧರ್ಮ–ಕರ್ಮಗಳನ್ನು ತೊರೆದು ಶಿವನಲ್ಲಿ ಒಂದಾಗುವುದೇ ತತ್ತ್ವವಾಗಿದೆ.

ತಿಳಿವಿನಲ್ಲಿ ಶಿವನನ್ನು ತಿಳಿಯದ ಜ್ಞಪ್ತಿ ಮೀರಿದ ಸ್ಥಿತಿ ತಲುಪಿ, ತಿಳಿವು ಎಂದರೆ ಬಾಹ್ಯ ತಿಳಿವಷ್ಟೇ ಎಂದು ಮನಗಂಡು, ತಾನು ಬೇರೆ ತಿಳಿವು ಬೇರೆ ಎನ್ನದೆ ತಿಳಿವೇ ತಾನಾಗಿದ್ದರೆ, ಅವನೇ ತತ್ತ್ವಜ್ಞನಾಗಿರುತ್ತಾನೆ.

**೩೩೧೫ ಮೊದಲಿನ ತನ್ನ ಮನ ಬಿಡದೆ,**
**ತುದಿಯಲಿ ಅನ್ಯರ ಮತವನು ದೂಷಿಸದಿರೆ ತಾ–**
**ನದರದೆ, ಕೋರಿಕೆ ಕೋರದೆ,**
**ಮುದದಿಂದ ಜನಿಸುತಿರುವನು, ಬುಧನಿಹ, ವೇಮಾ.**

---

೩೩೧೬ ಹಾನಿಯುಂಟಾಗದು, ಹರನ ಮನದಿ ನೆನೆಯೆ,
ಅವಗೆ ಲಭ್ಯ ಪರಮ ಅವನಿಯಲ್ಲಿ,
ಹಿಡಿದ ನಿಷ್ಠೆ ಬಿಡದೆ ಹೊಂದುವುದು ಶ್ರೇಯ, ವಿಶ್ವ

೩೩೧೭ ಭಕ್ತಿಗೆ ಮೂಲವು ಜ್ಞಾನವೇ,
ರಕ್ತಿಯಲಿ ಗುರು ಬಳಿ ಸಾರಿ ಉನ್ನತಿ ಪಡೆಯಲ್,
ಮುಕ್ತಿಯಲರಿವೇ ತೋಚಲು,
ಮುಕ್ತಿಗೆ ನಿಲಯವಹ ದಾರಿ ತೋರ್ಪುದು ವೇಮಾ.

೩೩೧೮ ಬೇಟೆ ನಾಯಿಯ ಬೆಳೆಸಿ ಬಿಡಲು ವನದೊಳಗೆ,
ಜೀವ ಜಂತುವಿರುವ ಜಾಡರಿವುದು,
ಅದೇ ರೀತಿ ಜ್ಞಾನಿ ಆನಂದವರಿಯನೇ ? ವಿಶ್ವ

೩೩೧೯ ರಜ್ಜುವು ಶಕ್ತರಿಗು ಭ್ರಮೆ,
ಮುಜ್ಜಗಗಳೊಳಗಿಹ ಜನರು ಮೂಢರು ಅಲ್ಲೇಂ ?
ಸಜ್ಜನರು ರಜತವೆನುತಿರೆ,
ಗೆಜ್ಜೆಗಳಿಗೆ ರಜತವಾಯ್ತು, ಘನವೈ ವೇಮಾ.

೩೩೨೦ ಪರಮ ಸಿದ್ಧಿಗಾಗಿ ಬ್ರಾಹ್ಮಣ ಮೇಲೆದ್ದು,
ಶ್ರವಣ ಮನನ ವೃತ್ತಿ ಸಂಗ್ರಹಿಸುತ,
ಅರಿವು ಮರೆಯುವವನೆ ಏಕಾಗ್ರಚಿತ್ತನು, ವಿಶ್ವ

೩೩೨೧ ರೆಪ್ಪೆಯ ಮುಚ್ಚಿಯು ಮುಚ್ಚದೆ,
ತಪ್ಪದೆ ತನು ಮನಗಳಲ್ಲಿ ತತ್ತ್ವವ ಕೂಡಲ್,
ಒಪ್ಪದಿ ನೋಡುವ ಆತಗೆ
ಒಪ್ಪವು ಎಲ್ಲೆಡೆ ಮುಕ್ತಿಯೂ ಸುಲಭವು ವೇಮಾ.

೩೩೨೨ ಜನನ ಮರಣಗಳಿಗೆ ಸರಿ ಸ್ವತಂತ್ರವಲ್ಲ,
ಮೊದಲು ಕರ್ತನಲ್ಲ, ತುದಿಗು ಅಲ್ಲ,
ನಡುವೆ ಕರ್ತನೆನಲು ನಗುಪಾಟಲಲ್ಲವೆ ? ವಿಶ್ವ

---

೩೩೨೩ ಮೌನಿ ನಿಜ ಕೇಳಿಯೊಳಗೆ ನಿಜ ಮನಸನು ನೂಕಿ,
ಆವರಿಸಿದೊಡನೆ ಪರಿಪೂರ್ತಿ ಅಂತು ಇರುವ,
ಅವನ ಭಕ್ತಿಗೆ ಸಾಟಿಯಹುದೆ ಅವನಿಯಲ್ಲಿ ?
ಡಾಂಭಿಕವಾದ ನಡೆಗಿರದು ಇಂಬು ವೇಮ.

೩೩೨೪ ಜೀವ ವಶದ ರೀತಿ ಚಿನ್ಮಾತ್ರ ತನು ಮಿಂಚಿ,
ಭಾವ–ಮಮತೆ ಅಮರಿ ಪಟ್ಟು ಹಿಡಿದು,
ಕೂಡೆ ಹಂಸ ಮನದಿ, ಕರ್ಮ ಸನ್ಯಾಸಿಯ್ಯೆ. ವಿಶ್ವ

೩೩೨೫ ತಿರುಗಿ ತಿರುಗಿ ನರನು ಮರುಳು ಆದನಷ್ಟೆ,
ಅದರಿಂದ ಯಾವುದೆ ಆಶೆಯಿಲ್ಲ,
ಅಂತರಾತ್ಮ ನಿಲಿಸೆ ಅವನೆ ಹೋಗು ಬ್ರಹ್ಮ, ವಿಶ್ವ

೩೩೨೬ ಊರು ಕೇರಿ ಬಾವಿ ಉದಕವ ನಿಂದಿಸುತ,
ಪಾದ ತೀರ್ಥಕಾಗಿ ಭ್ರಮಿಸುತಿಹರು,
ಪಾದ ತೀರ್ಥದಿಂದ ಫಲವು ಏನು ಉಂಟು ? ವಿಶ್ವ

೩೩೨೭ ಉಪವಾಸದಿ ಇದ್ದು, ಯೋಗಿ ನೀರು ಮುಳುಗಿ,
ಕೂಳು ಅಟ್ಟು ದೇವಗೆ ಕೊಳ್ಳಿ ಎನುತ,
ಅವನ ಬಾಯಿಗೆ ತೋರಿ, ತಾವೆ ತಿನುವರಲ್ಲ ! ವಿಶ್ವ

೩೩೨೮ ಉಪವಾಸವಿರುವಗೆ ಊರ ಹಂದಿಯ ಹುಟ್ಟು
ತಪಸಿಯಾಗೆ ದರಿದ್ರ ತನವೆ ಬಹುದು,
ಶಿಲೆಗೆ ಮಣಿಯಲಾಗ ಜೀವ ಹೋದ ಬೊಂಬೆ ! ವಿಶ್ವ

೩೩೨೯ ಉಣಿಸುತಿರುವವನಾರು ? ಉರವನೆಲ್ಲ ಮರೆಸಿ,
ನಿದ್ರೆ ಹೊಗಿಸುವನಾರು ? ನಿಖಿಲ ಗತಿಯ,
ತೋರಿ, ಇಳೆ–ಬದ್ಧರನು ಗೆಯ್ದು, ಸೂಕ್ಷ್ಮರೂಪಿ–
ಯಾ ಮಹಾದೇವನಲ್ಲವೆ ಜಗದಿ ವೇಮ ?

೩೩೩೦ ಉದದಿ ಹಾರುತ್ತ ದಾಟಿದೊಡೆ ಉತ್ತಮನಿಹ,
ಮನದಿ ರಾಮಾಜ್ಞೆ ಮೀರದೆ, ಮಾಯೆಯಡಗಿ,
ಹೃದಯದಲ್ಲಿಯೆ ರಾಮನ ಭದ್ರಪಡಿಸಿ,
ಅಬಬ ! ಮಾರುತಿ ತತ್ತ್ವಜ್ಞ ಆದ ವೇಮ.

೩೩೩೧ ಕಾಲು ಕೈಗಳಿಲ್ಲ ಕಾಯ ಮಾತ್ರ ಉಂಟು,
ಕೊಂಬು ಇಲ್ಲ, ನೇಣು ಚಿಮ್ಮು ಬೇಗ,
ಮಲ್ಲಯುದ್ಧವಿರದೆ ಕೊಲ್ಲುವುದತಿ ಚೋದ್ಯ, ವಿಶ್ವ

೩೩೩೨ ಧರೆ ಗಿರಿಯು ಜಲಧಿಯೆಲ್ಲವು,
ಪರೀಕ್ಷಿಸಲು ಪ್ರಳಯದಲ್ಲಿ ಭಸ್ಮವು ಅಯ್ಯ !
ಸುರ ಮುನಿಗಳಾದಿ ತೊಲಗಲು,
ನರಯೋಧರಿಲ್ಲಿ ಅರಿತು ಇರಬಹುದೆ ? ವೇಮಾ !

೩೩೩೩ ಸುಣ್ಣವನು ತಿನ್ನುವವನಿಗೆ,
ಉನ್ನತವಹ ಸ್ವರ್ಗವೇಕೆ ಇಲ್ಲವು ? ನೋಡಲ್,
ವರ್ಣಕೆ ಮೀರಿದ ಸುಣ್ಣವು,
ಉನ್ನತವಹ ಬ್ರಹ್ಮಗಳಿಗೆ ಉಪಮೆಯು ವೇಮಾ ;

೩೩೩೪ ಹಚ್ಚಿ ಮಲವ ತಿನಲು, ಹಣ್ಣು ಎಲೆಯ ಮೆಲಲು,
ಉಚ್ಚಿ ದಪ್ಪ ತೀರ್ಸಿ, ಕಾಸಿ ಕುದಿಸಿ,
ಕಚ್ಚೆಯ ಬಿಗಿಯಿರಿಸೆ ಕಂಡು ಬರುವುದೆ ತತ್ತ್ವ ? ವಿಶ್ವ

೩೩೩೫ ಬೇವಿನ ಬೀಜದೆಣ್ಣೆ ಬಾಹ್ಯಕೆ ತೆಗೆದು ಬಿಡಲು,
ಬೇವು ವಿಷವೆ ಎಂದು ಬೊಗಳುತಿಹರು,
ಬೀಜ ಬೀಜವಿರಲು ಬೇವು ಕಹಿಯೆಂತಾಯ್ತು ? ವಿಶ್ವ

೩೩೩೬ ಗಾಳಿ ಬರುತ ಹೋಗುತಿರುವ ಕಾಲದಲ್ಲಿ ಬದುಕು ಇದೆ !
ಲೀಲೆಯಿಂದ ಪರಮಾತ್ಮನ ನೆನೆಯದೆ ಮಾಯೆಗಂಟುತಿರುವರೈ !
ಬಾಳ ನಂಬುತ, ಆತ್ಮ ಶೀಲದ ಸಾಧನಗಳ ಕಾಣಿರೋ !
ಮೇಲು ಆಗಲು, ನೀನು ನಿನ್ನೊಳು ಇದ್ದ ಹಾಗೆ, ವೇಮಾ.

೩೩೩೭ ಅಮೃತ ಸಾಧನದಲ್ಲಿ, ಅಖಿಲರು ಬಲಯುತರು ;
ಅಮೃತ ಚೊಕ್ಕ ನೋಡಿ ಅಂಟಲಿಲ್ಲ,
ಅಮೃತವು ವಿಷವಾಯಿತು, ಅದೇನು ವಿಚಿತ್ರ ! ವಿಶ್ವ

೩೩೩೮ ಅಖಿಲ ಜಾಡು ಉಡುಗಿ ಆನಂದ ಕಾಮನು
ನಿನ್ನ ನಂಬಿ ಬಹಳ ನಿಷ್ಠೆಯೊಡನೆ,
ನಿನ್ನ ನಂಬೆ ಮುಕ್ತಿ ನಿಕ್ಕಿ ನಿನ್ನ ಆಣೆ, ವಿಶ್ವ

೩೩೩೯ ಸರಿ, ಭೂಮಿ ಕನ್ಯೆಗೆ ಶೃಂಗಾರಾದಿಯಿರೆ,
ವಿಭುವಿನ ಕರುಣೆಯಿರದೆ, ಬೆಳಗದಂತೆ,
ದೈವ ಕೃಪೆಯು ಇರದೆ ತಿಳಿವು ಕೆಟ್ಟು ಹೋಯ್ತು,ವಿಶ್ವ

೩೩೪೦ ಕಾಮಿಯಲ್ಲದವನು ಕವಿಯಲ್ಲ ರವಿಯಲ್ಲ,
ಕಾಮಿಯಿರದೆ ಮೋಕ್ಷ ಕಾಮಿಯಲ್ಲ,
ಕಾಮಿಯಾದ ಅವನೆ ಕವಿಯು ರವಿಯು ಅಹುದು, ವಿಶ್ವ

೩೩೪೧ ಇಲ್ಲಿ ಅರಿಯುವವಗೆ ಇಹ ಪರಗಳು ಇರವು,
ಪ್ರಾಣ ಹಾನಿ ಇರದು ಪ್ರಳಯವಿರಲು,
ಪ್ರಳಯ ಕಾಲವಿರಲು ಪರಮಾತ್ಮನಲಿ ಬೆರೆವ, ವಿಶ್ವ

೩೩೪೨ ಮಾತಿನೊಳ ಮಾತು ಮಥಿಸಿ ಮಥಿಸಿ ನೋಡೆ,
ಮಾತಿನಲ್ಲಿ ಬ್ರಹ್ಮ ಪದವಿಯುಂಟು,
ಮಾತು ಅರಿಯದಿರಲು ಮಾನವಿರದು ಜನರೆ ! ವಿಶ್ವ

೩೩೪೩ ಓದಿನಲ್ಲಿ ಇಲ್ಲ, ಶಾಸ್ತ್ರಗಳಲಿ ಇಲ್ಲ,
ವಾದಗಳಲಿ, ದೈವ ಭೇದಗಳಲಿ,
ಬಯಲಿನಲ್ಲಿ ಮುಕ್ತಿ ಪರಿಕಿಸಿ ನೋಡಿರೋ, ವಿಶ್ವ

೩೩೪೪ ವೇದ ವಿದ್ಯೆಯೆಲ್ಲ ವೇಶ್ಯೆಯಂತೆ ಇಹುದು,
ಭ್ರಮೆ ಹಿಡಿಸಿ ಬಯಲು ಪಡೆಯಗೊಡದು,
ಗುಪ್ತ ವಿದ್ಯೆಯೊಂದೆ ಕುಲ ಕಾಂತೆಯಂತಿದೆ, ವಿಶ್ವ

೩೩೪೫ ಪಟ್ಟು ಹಿಡಿದು ವ್ಯರ್ಥ ಹಠ ವಾದಗಳೇಕೆ ?
ನೆಟ್ಟಿದಂಥ ಅರಿವು ನಿಲಿಸಬೇಕು,
ಅಂಥ ಮಾತು ಬಿಡದಿರೆ ಅವನಿಯಲಿ ನಗುವರು, ವಿಶ್ವ

೩೩೪೬ ದರ್ಶನಗಳಲಿ, ಧರೆಯ ಷಣ್ಮತಗಳಲಿ,
ವರ್ಣಮಾಶ್ರಮಗಳ ವರ್ಜಿಸದೆಂದು
ತಿರುಗುತಿರುವವನು ಧರೆಯಲ್ಲಿ ಅಜ್ಞಾನಿ, ವಿಶ್ವ

೩೩೪೭ ಓದನು ಅರಿತಿರುವಂಥವ
ಹೊಂದರು ಪರಮಾರ್ಥ ಪದವಿಯೇತಕೆ ತಿಳಿಯೆ ?
ಸಾಧಿಸಿ ತುಟಿ ಪಿಟುಕೆನ್ನದೆ,
ಬೋಧೆ ಮನದಿರೆ ಮಹಿಮೆ, ರಾಜಯೋಗ, ವೇಮಾ.

೩೩೪೮ ಜಯವ ಭಯವ ದಾಟಿ ಹಠವ ಹಿಡಿದು ಇರುತ,
ದಯಕೆ ಪಾತ್ರನಾದ ಧರ್ಮ ಪರನು,
ನಯನ ಕಾಣು ಗುರುವ ನಂಬಿ ನೆಮ್ಮದಿ ಬೇಡು, ವಿಶ್ವ

೩೩೪೯ ಕಥಿಸೆನಲು ಮುನ್ನವಾದುದೆ,
ಕಥೆಗಳೆನಿತೊ ಓದಿಯೋದಿ ಗೊಂದಲಕಿಳಿವರ್,
ಪೃಥಿವಿಯಲಿ ಸಾವುದು ನಿಕ್ಕಿ,
ಮಥಿಸಿ, ಮುದದಿ ಬೊಮ್ಮಗಂಟೆ ಮುಕ್ತಿಯು ವೇಮಾ.

೩೩೫೦ ಮನ ನಿಲುಗಡೆ ಗೆಯ್ದು, ಮರಳಿ ಅದನೆ ಜಯಿಸಿ,
ಮಾಯೆ ಕೃತಿಗೆ ಸಿಕ್ಕು ಮರ್ದಿಸುತ್ತ,
ಹೆಚ್ಚು ಮಾತನಾಡೆ ಸಿಕ್ಕುವುದೆ ಮಾಯೆ ? ವಿಶ್ವ

೩೩೫೧ ನೀರ ಮೇಲೆ ಬಿದ್ದ ನಿಗಿಗೆಂಡವಿದ್ದಲು,
ಕೆಂಡದ ಮೇಲೆ ಜಲ ಕಾಯಲಿಡಲು,
ಕಾಯ್ದು ಸುಡುತಲಿಹುದು, ಕಡುಚೋದ್ಯವಲ್ಲವೇ? ವಿಶ್ವ

೩೩೫೨ ಆದಿ, ಸೋಮ, ಭೌಮ, ಆದಿಗೇ ಬುಧಗೂಡಿ,
ಗುರುವು, ಶುಕ್ರ, ಶನಿಯು ಗುರುತು ಎಷ್ಟೊ,
ಎಷ್ಟೊ ದಿನಗಳಿರಲಿ, ಒಟ್ಟು ರೂಪವೊಂದೆ, ವಿಶ್ವ

೩೩೫೩ ಮಾಯೆ ಇಂಥವೆಂಬ ಮರ್ಮವನು ಅರಿಯದೆ
ತಿಳಿಸಿ ಹೇಳಿ ಕೇಳುತ ತೇಟವಾಗಿ,
ಜನರೆಲ್ಲರೂನು ಬುದ್ಧಿ ಚಾಂಚಲ್ಯವನು ತೊರೆದು,

ಎಚ್ಚರಿರದೆ ಕೇಳರು ಅವನಿಯಲ್ಲಿ,
ಕೇಳಿದೊಡನೆ ಒಳಗೆ ವಿಜ್ಞಾನವನು ಮರೆತು,
ಪಾಪಾತ್ಮರು ಕೇಳರು ಕಲಿಯುಗದಲಿ,
ಕಂಡರಿಯರು ನಿನ್ನ ಗೌಪ್ಯದ ಕಲುಷ ಮತಿಗಳು,
ಬ್ರಹ್ಮವೇನೆಂದು ಭಾವಿಪುದ ಬಿಟ್ಟು ಕೊಟ್ಟು,
ನರಕ ಕೂಪದಿ ಬೀಳುವದು ನಿಯಮಿತಾಗಿ
ವಿಮಲ ಗುಣ ರಾಜ ಯೋಗೀಂದ್ರ ವೇಮನಾರ್ಯ.

೩೩೫೪ ಮನದಲಿ ವೇಷವು ಮೇಣ್ಗಮಟಿನ ಜಿಡ್ಡು,
ಬಾಗಿದ ಐದಾಕಳುಗಳ ದೊಡ್ಡಿ,
ಅನುವಿನಲೆಸಗಿದ ಎಲ್ಲವ ನೊಡ್ಡಿ,
ಬೆಳೆದನು ನೋಡಾ ವೇಮನ ರೆಡ್ಡಿ,

೩೩೫೫ ಕಲಿಯುಗದಲ್ಲಿ ಇಷ್ಟ ಕಾಪು ಕುಲಜ ಜನಕೆ,
ವೇಮನ ತನ ಕೀರ್ತಿ ವಿಕ್ರಯಿಸಿದ,
ಉಳ್ಳ ಧರ್ಮವೆಲ್ಲ ಉರ್ವಿ ಜನರ ಮಧ್ಯೆ,
ಹಂಚಿ ಪರವ ಕೋರಿ, ಹೋದ ವೇಮ.

೩೩೫೬ ಅನ್ನಕಿಪ್ಪ ದೋಷ ಆದುದಾತ್ಮದೋಷ,
ಆತ್ಮವು ಹೊಂದುವುದು ಅನ್ನ ದೋಷ,
ಆತ್ಮ ಶುದ್ಧಿಯನ್ನ ; ಅನ್ನಶುದ್ಧಿಯಾತ್ಮ,
ಗಗನ ಗಗನ ಸೇರಿ ಹೊಳೆವುದು ವೇಮ.

೩೩೫೭ ಭ್ರಾಂತಿ ಚೇತನ ಮರ್ತ್ಯರು, ಭಕ್ತಿ ಬಿಡಲು,
ಭಯವು ಆಗಿ, ಹುಟ್ಟು–ಸಾವುಗಳು ಪ್ರಾಪ್ತವಿಹವು,
ಇಂಥ ನರರಿಗೆ ಕಷ್ಟಗಳು ಎಂತಳಿವವು ?
ಗುರುವಿನ ಸನ್ನಿಧಿ, ಕಳೆವುದು, ಕೊರತೆ ವೇಮ.

೩೩೫೮ ಸಾಕು ಇನ್ನು ಮೇಲೆ ಚಾರ್ವಾಕ ಮತ ರೀತಿ,
ಶಕ್ತಿ ಶೈವವೆಂದು ಚೊಕ್ಕ ನಂಬು,
ಸರಣಿ, ಮೀರಿ ಕೆಡುಗು ಚಂಡಾಲ ಸೇವೆಯು, ವಿಶ್ವ

— — — — — — — — — — — — — — — — — — — —

೩೩೫೯ ಆಕಳ ಹಾಲು ಶಿವನ ಅಭಿಷೇಕಕೆ ಒಪ್ಪು ;
ಆಕಳ ಹಾಲು ನೋಡೆ ಔಷಧವದು,
ಆಕಳ ಹಾಲು ಇರಲು ಅತಿಶಯ ಅರಿಯರೇ ? ವಿಶ್ವ

೩೩೬೦ ಸುರಿಯಲೀಯಲೊಂದು ಸೌಖ್ಯ ಹೆಚ್ಚುತಿಹುದು,
ಇನಿಯಳಲಿಹ ಗತಿಯು ಇಲ್ಲವದಕೆ,
ಉಂಟು ನೋಡು ಶಿವನು ಯೋಗಿಯಾದವನಲಿ, ವಿಶ್ವ

೩೩೬೧ ನಂಬಿಕೊಂಡು ಇಹನು ನೌಕೆ ಭೂತವೆಂದು
ಹಾಕೆ ಪಟವ ತಿರುವಿ, ಹೋಯ್ತು ಮುಳುಗಿ,
ಈಜ ಬಲ್ಲವನಿರೆ ಇಂತೇಕೆ ಪಡುವನು ? ವಿಶ್ವ

೩೩೬೨ ಅನ್ನ ತಿನುವ ವೇಳೆ, ಆತ್ಮ ರುಚಿ ಕೊರ್ಪುದು,
ನಾಲುಗೆ ಹೇಳಿದಂತೆ ನಡೆಯುವುದದು,
ಆತ್ಮಕೆ ತೃಣವಾದರು ಅಯ್ಯಯೋ ಎನಬೇಡ !

೩೩೬೩ ತಾವು ಇರುವ ಭೂಮಿ ಕ್ಷಾಮ ನುಗ್ಗಿಯಿರಲು,
ಪರರ ದೇಶ, ಗುಳೆಯ ಹೋಗಬೇಕು,
ಕೊಳವು ಬತ್ತಿದಾಗ ಕೊಕ್ಕರೆಗಳುಳಿವವೇ ? ವಿಶ್ವ

೩೩೬೪ ತನ್ನ ತಿಳಿಯದಂಥ ದೈವಜ್ಞರಿಹರೇನು ?
ನಿನ್ನ ತಿಳಿಯದಿರಲು ನಿಲ್ಲಬಹುದೆ ?
ಮಾಯೆ ತಿಳಿಯದಿರಲು ಮಣ್ಣು ಪಾಲು ಅಷ್ಟೆ, ವಿಶ್ವ

೩೩೬೫ ತಾನೇ ತತ್ತ್ವವಿರುವ ತನ್ನನರಿಯದಿರಲು,
ಮಾಯೆ ತತ್ತ್ವವೆಂದು ಮರುಗುತಿರುವ,
ಧರ್ಮ ಕರ್ಮಗಳನು ತಾ ತೊರೆಯೆ ತತ್ತ್ವವು, ವಿಶ್ವ

೩೩೬೬ ತಿಳಿವಿನಲಿ ಶಿವನ ತಿಳಿಯಲಾರದಿದ್ದು,
ತಿಳಿವುದೆಲ್ಲ ಬಾಹ್ಯ ತಿಳಿವು ಮಾಡಿ,
ತಿಳಿವು ತಾನೆ ಇರಲು, ತತ್ತ್ವಜ್ಞನಹ ಕಾಣು, ವಿಶ್ವ

●

# ೫೮. ನಿರ್ಗುಣ ಭಕ್ತಿ

ತನು, ಮನ, ಇಂದ್ರಿಯಗಳನ್ನು ಶಿವನಿಗೊಪ್ಪಿಸಿ, ತಾನು ಬೇರೆ, ಶಿವನು ಬೇರೆ ಎನ್ನದೆ, ಚಿದ್ ಬಯಲಿನಲ್ಲಿ ಸೊಗಯಿಸುವ ಭಕ್ತಿ ಮೂಡುವುದೇ ನಿರ್ಗುಣೀ ಭಕ್ತಿಯಾಗಿದೆ. ಇದು ಭಕ್ತಿಯ ಅಂತಿಮ ಅವಸ್ಥೆಯಾಗಿದೆ.

ನಿರ್ಗುಣ ಭಕ್ತಿಯಲ್ಲಿ ಎರಡು ವಿಧ. ಒಂದು ಬಿಂಬ ಅಪರೋಕ್ಷ. ಇನ್ನೊಂದು ಶುದ್ಧ ಅಪರೋಕ್ಷ. ಈಶ್ವರನ ಸಿರಿ ಸೊಬಗನ್ನು ಇದಿರಿಟ್ಟುಕೊಂಡು ಮಾಡುವ ಭಕ್ತಿಯು ಬಿಂಬ ಅಪರೋಕ್ಷ. ತನ್ನ ನಿಜವನ್ನೇ ಒಳಗೆ ಅರಿಯುವುದು ಶುದ್ಧ ಅಪರೋಕ್ಷವು. ವೇಮನರು ಶುದ್ಧ ಅಪರೋಕ್ಷವನ್ನು ಲಕ್ಷ್ಯವಾಗಿ ಒಪ್ಪಿದ್ದಾರೆ.

ನಿರ್ಗುಣಾಂಶದಲ್ಲಿ ಮನವನ್ನು ಅರಿತು ಮೀರಿ, ಸ್ವರ್ಗ ಅಂದರೆ ತನ್ನಲ್ಲಿ ತಾನು ಸೇರುವುದು ಶಾಶ್ವತವೆನ್ನುತ್ತಾರೆ. ಶಿವನಾದ ತಾನು ಬ್ರಾಹ್ಮಣನಿಗೂ ಬ್ರಾಹ್ಮಣನೆನಿಸುತ್ತಾನೆ. ಈ ಮುನ್ನ ದುರ್ಗುಣಗಳ ಭ್ರಮೆಯನ್ನು ಕೊಚ್ಚಿ ಸಾಗಬೇಕು.

ನಿರ್ಗುಣದ ಮರ್ಮವನ್ನರಿತು ಹಿತಕರ ಬುದ್ಧಿ ಹೊಂದಿರಬೇಕು. ಸತತ ಅಭ್ಯಾಸವನ್ನು ಮುಂದುವರಿಸಬೇಕು. ಆಗ ಸರ್ವವೂ ಸಂಪೂರ್ಣವಾಗಿ ಅತುಲಿತ ಆನಂದವಾಗಿರುವುದು.

"ಅವನು ಅವನು ಅವನು ......." ಎಂಬೀ ಪದ್ಯವನ್ನು ಕೂಟ ವೇದಾಂತ ಸರಣಿಯಲ್ಲಿಯೇ ಸೇರಿಸಲಾಗಿದೆ. ಅದರ ಅರ್ಥವು ಹೀಗೆ.

ಅವನು ನಿರ್ಗುಣನು; ಅವನು ಸಗುಣನೂ ಅಹುದು. ಸಗುಣನೂ ನಿರ್ಗುಣದೊಳಗೇ ಉಂಟು – ನಿರ್ಗುಣನೇ ಸಗುಣನಾಗಿದ್ದಾನೆ. ಆದರೂ ನಿರ್ಗುಣನು ಸಗುಣಕ್ಕಿಂತ ಭಿನ್ನನಾಗಿದ್ದಾನೆ. ನಿರ್ಗುಣನು ಸಗುಣಕ್ಕಾಗಿಯೇ ಇರುವನು. ಈ ನಿರ್ಗುಣನೇ ಪರಬ್ರಹ್ಮ ಪದವಿಯಾಗಿದ್ದಾನೆ.

ಸಗುಣವೆಂದರೆ ಇಲ್ಲದಿರುವುದೇ ಆಗಿದೆ. ಏಕೆಂದರೆ, ಗುಣಗಳು ಸದಾ ಬದಲಾಗುತ್ತವೆ. ಅಂದ ಮೇಲೆ, ಅವುಗಳ ಪ್ರಭಾವವಿರುವುದು ಸಹ ಕ್ಷಣಿಕ ತಾನೇ? ನಮ್ಮ ಮನದೆದುರು, ಸಗುಣವು ಆಕರ್ಷಣೀಯ ಮೋಹದ ಪರದೆ ಎಳೆಯುತ್ತದೆ. ಆದ್ದರಿಂದ ಸಗುಣಕ್ಕೆ ಅಂಟಬೇಡ. ಸಗುಣವನ್ನು ತೊರೆದು ನಿನ್ನ ಅಂತರ್ಯದಲ್ಲಿ ಅನುಸಂಧಾನ ಮಾಡುವುದೇ ನಿರ್ಗುಣದ ದಾರಿಯಾಗಿದೆ.

ಮುಕ್ತಿ ಸಾಧನವು ಸಗುಣ–ನಿರ್ಗುಣಗಳಲ್ಲಿದೆ. ಆತ್ಮನು ಸಗುಣನೆಂದು ಅವನ ಮಹಿಮೆಯನ್ನು ಮನಗಾಣದೆ, ಸಮ್ಮತಿಸದೆ ಇದ್ದರೆ ಭಕ್ತಿಯು ಹೇಗೆ ಅಚಲವಾಗಿ ದೃಢವಾದೀತು ? ಜಗತ್ತಿನಲ್ಲಿ ಇಂಥ ಸಗುಣ ಉಪಾಸಕರಿಗೆ ಸಜ್ಜನರ ಸಂಗತಿಯು ದೊರಕದಿದ್ದೀತೇ ? ಸಗುಣವನ್ನು ಮೀರಿದ ಮನದಲ್ಲಿ ನಿರ್ಗುಣ ಚಿಂತನ ಮಾಡದಿದ್ದರೆ, ಅಗಣಿತವಾದ ಮೋಕ್ಷ ಪದವಿಯನ್ನು ಹೊಂದುವಲ್ಲಿ ಯಾವ ಗತಿಯಾಗಬಹುದು?

— — — — — — — — — — — — — — — — — — — — — —

ಜಂಗಮ ಎನ್ನುವವರ ಭಕ್ತಿ ಪ್ರಕಾರವು ಸಗುಣ ಭಾವವೇ ಆಗಿದೆ. ಇದು ಶಾಸ್ತ್ರ ವಿಧಿಯೂ ಆಗಿದೆ. ಆದರೆ, ಅವರು ತಿಳಿಯಬೇಕಾದುದೊಂದಿದೆ. ಅದೆಂದರೆ, ನಿರ್ಗುಣವನ್ನು ಬಿಟ್ಟರೆ ಯೋಗವು ಕೈಗೂಡದು.

ತನ್ನಲ್ಲಿ ಅನುದಿನವೂ ಆತ್ಮನನ್ನು ಗಮನಿಸಬೇಕು. ಭಕ್ತಿಯು ಆತ್ಮಾನುರಕ್ತಿಯೇ ಆಗಿದೆ. ನಿರ್ಗುಣ–ಆತ್ಮನ ಅರ್ಚನೆಯನ್ನು ಮಾಡಬೇಕು. ಇಂಥ ನಿರ್ಗುಣ ಸ್ಥಿತಿಯನ್ನು ಪ್ರತ್ಯಕ್ ಆತ್ಮದಲ್ಲಿ ನೆನೆಯುವವನು ಸಚ್ಚಿದಾನಂದ ಪದದಲ್ಲಿ ಪ್ರಬಲಿಸುತ್ತಾನೆ.

ಅಂಥ ಇಂಥ ವಿದ್ಯೆಗಳನ್ನು ಕಲಿತರೂ, ಆತ್ಮವನ್ನು ಅರಿಯರು. ಆತ್ಮ ಸಾಕ್ಷಾತ್ಕಾರವಾಗಬೇಕಾದರೆ ನಿರ್ಗುಣ ಜ್ಞಪ್ತಿಯನ್ನು ತಲುಪಬೇಕು. ಇದರ ಹೊರತು ಬೇರಾವ ನಿರ್ಣಯವೂ ಇಲ್ಲ ಎಂಬ ಭಾವವು ತುಂಬಿರಬೇಕು. ಗುರುವಿನ ಬೋಧೆಯೇ ಪರಮವು. ಅದನ್ನು ಹೊರತು ಪಡಿಸಿ ಬೇರಾವುದೂ ಸರಿಯಾಗಲಾರದು.

ನಿಗಮ ವೇದ್ಯವಾದ ನಿತ್ಯಪದವಿಯು, ತೀರ್ಥಕ್ಷೇತ್ರಗಳಲ್ಲಿಲ್ಲ. ಅದನ್ನು ಸಗುಣ–ನಿರ್ಗುಣಗಳಲ್ಲಿ ಸಾಧಿಸಿ ನೋಡಬೇಕು.

ಸಗುಣವಾವುದು ? ನಿರ್ಗುಣವಾವುದು ? ಇವುಗಳಲ್ಲಿ ಭೇದದ ಅರ್ಥವೇನು? ಇದನ್ನು ಗುರುವು ತಿಳಿಸಿಕೊಡುತ್ತಾನೆ. ಏನೇ ಇರಲಿ, ಅಗಣಿತವಾದುದನ್ನು ಮನದಲ್ಲಿ ಹೊಂದಬೇಕು. ಇದನ್ನು ಬಿಟ್ಟು ವಾದದಲ್ಲಿಯೇ ಮುಳುಗಿದರೆ, ಜನರು ಮೆಚ್ಚುವುದಿಲ್ಲ.

ಅನುಭವ ಕ್ಷೇತ್ರಗಳಾದ ಲೋಕಗಳೆಲ್ಲವೂ ಸಗುಣವೇ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೆಂಬ ತ್ರಿಮೂರ್ತಿಗಳೂ ಮತ್ತು ಇಂದ್ರ, ಸೋಮ, ಅಗ್ನಿ ಮುಂತಾದ ಸುರೇಶ್ವರರೂ ಸಗುಣವೇ ಆಗಿದ್ದಾರೆ. ಎಲ್ಲಿಯ ವರೆಗೆ ಜ್ಞಪ್ತಿ ಇರುವುದೋ, ಅದು ವರೆಗಿನ ಅನುಭವವೆಲ್ಲ ಸಗುಣವೇ ಆಗಿದೆ. ಇನ್ನೇನು ? ಸಗುಣವೇ ಜ್ಞಪ್ತಿಗೆ ಮೂಲವಾಗಿದೆ. ಸಗುಣವು ನಿರ್ಗುಣಕ್ಕೆ ದಾರಿಯಾಗಿದೆ.

ಮೇಲೆ ಬಣ್ಣಿಸಿದ ಸಗುಣವು ತಾನಲ್ಲ. ತಾನು ನಿರ್ಗುಣವೇ ಎಂದು ನಿಶ್ಚಯಿಸಿಕೊಂಡು, ತನ್ನಲ್ಲಿ ತಾನು ಪೂರ್ಣವಾಗಿ ತಗಲಿಕೊಂಡಿದ್ದರೆ ಅವನನ್ನು ಅವತರಿಸಿದ 'ಶಿವ' ಎನ್ನುತ್ತಾರೆ.

ಪಾಪ–ಪುಣ್ಯ ಕರ್ಮಗಳ ಫಲವೇ ದುರ್ಗತಿ ಸ್ವರ್ಗಗಳು. ಇಂಥ ಕರ್ಮಗತಿಯ ಭಾವನೆಯನ್ನು ಮೀರಿ, ದುರ್ಗುಣಗಳನ್ನೇ ಮೀರಿ, ಹೃದಯ ದುರ್ಗವನ್ನು ಸೇರಿದರೆ ಆಗ ಸ್ವರ್ಗ ಸೇರುವುದೂ ದುರ್ಗತಿ ಎನ್ನಿಸುತ್ತದೆ. ಸುಖದ ಅಪೇಕ್ಷೆಯೂ ದುರ್ಗತಿಯೆನಿಸುತ್ತದೆ. ಆಗ ನಿರ್ಗುಣದಲ್ಲಿ ಐಕ್ಯವಾಗಬಹುದು.

ಸತತ ನಿರ್ಗುಣ ಧ್ಯಾನವನ್ನು ರೂಢಿಸಿಕೊಂಡು, ತನಗೇನೂ ತೋಚುವುದಿಲ್ಲವೆಂದು, ತತ್ತ್ವಗಳ ನಿರ್ಣಯದಲ್ಲಿ ತೊಡಗದೆ, ಅಂತರಂಗದ ಮನದ ಮೂಲಕ, ವಿನಯ ಪೂರ್ವಕ ಬಯಲು ಸೇರಿ ಬೆಳಗಬಹುದು.

ಚಿದಾಕಾಶದಲ್ಲಿ ಗೋಚರಿಸುವ, ಗಮ್ಯ ನಿರ್ಗುಣವನ್ನು ಶೋಧಿಸಿ, ತದೇಕ ಧ್ಯಾನದಿಂದ ತಮವನ್ನು ಮೀರಿ, ತತ್ಪರನಾಗಿದ್ದರೆ ಆ ಮಾರ್ಗದಲ್ಲಿಯೇ ಮೋಕ್ಷ ಪದವಿಯು ದೊರಕುತ್ತದೆ. ಅದನ್ನು ತಲುಪಿ, ನಿರ್ಮಲ ಸುಜ್ಞಾನ ಪಡೆದು ಬೆಳಗಬೇಕು.

ತ್ರಿಗುಣ ಭಾವವನ್ನು ಮೀರಿ, ಜಗದ ಮೇಲಾಗಿಸದೆ ಬ್ರಹ್ಮ ಯಂತ್ರದಲ್ಲಿ ತಿರುಗುವವರು, ಬೂದಿ ಮುತ್ತಿದ ಬೆಂಕಿಯಂತೆ ಬಾಳುತ್ತಾರೆ.

ಆ ಜನ್ಮವೂ ಬೀಜವು ಸಿಪ್ಪೆಯೊಂದಿಗೆ ಹುಟ್ಟುತ್ತದೆ. ಕೊನೆಗೆ ಸಿಪ್ಪೆಯು ಕಳಚಿ ಬೀಜವಷ್ಟೇ ಉಳಿಯುತ್ತದೆ. ಅದೇ ರೀತಿ, ಕರ್ಮ ಮೂಲಕ ದೇಹ ಜನಿಸುತ್ತದೆ. ಇದನ್ನರಿತ ಜ್ಞಾನಿಯು ಸಿಪ್ಪೆಯಂಥ ಕರ್ಮವನ್ನು ಕಳಚಿ ಬೀಜಪ್ರಾಯವಾದ ಆತ್ಮವಷ್ಟೇ ಬೆಳಗುವಂತೆ ಮಾಡುತ್ತಾನೆ.

**೩೩೬೭ ನಿರ್ಗುಣಾಂಶದಲಿ ಸಲೆ ಮನವನರಿತು ಮೀರಿ,**
**ಸ್ವರ್ಗವೆನ್ನುತ ಇರುತಿರೆ ಶಾಶ್ವತವದು,**
**ಭರ್ಗನಾದ ತಾನು ಬ್ರಾಹ್ಮಣರಿಗೆ ಬ್ರಾಹ್ಮಣನು,**
**ದುರ್ಗುಣ ಭ್ರಮೆಗಳ ಕೊಚ್ಚುತ ನೀಗು ವೇಮ.**

**೩೩೬೮ ಮತಿ ಹಿತವಾಗಿಹ ನಿರ್ಗುಣ ಮರ್ಮವರಿತು,**
**ಸತತ ಅಭ್ಯಾಸ ಯುಕ್ತಿಯಲಿ,**
**ಅತುಲಿತಾನಂದ ಸಂಪೂರ್ಣ ಆಗಿ ಉಂಟು. ವಿಶ್ವ**

**೩೩೬೯ ಅವನು ಅವನು ಅವನು ಅವನು ಒಳಗೆ ಉಂಟು,**
**ಅವನು ಅವನು ಅವನು ಅವನಲ್ಲವೆ ?**
**ಅವನು ಅವನು ಅವನೆ ಅವನೆ ಹೋಗು ಬ್ರಹ್ಮ, ವಿಶ್ವ**

**೩೩೭೦ ಸಗುಣವೆನಲು ಇಲ್ಲದಿಹುದೆ,**
**ಸಗುಣವೆನಲದುವೆ ಮೋಹದ ಜಾಲವೆ ಸಕಲಂ,**
**ಸಗುಣವನು ಮರೆತು ನಿನ್ನೊಳು,**
**ತಗಲುವುದೆ ನಿರ್ಗುಣ ದಾರಿ ತಿಳಿಯೆಲೋ ವೇಮಾ !**

**೩೩೭೧ ಸಗುಣವನಾತ್ಮದೊಳಗೆ ಸನ್ನುತಿ ಗೆಯ್ಯದೆ ಭಕ್ತಿ ನಿಲ್ವುದೇ ?**
**ಜಗದಲಿ ಇಂಥವರಿಗೆಲ್ಲ ಸಜ್ಜನ ಸಂಗತಿ ಬಾರದಿರ್ಪುದೇ ?**
**ಸಗುಣವ ಮೀರಿದ ಮನದಿ ಸಂಚಿತ ಚಿಂತನ ಮಾಡದಿದ್ದೊಡೇ**
**ಅಗಣಿತವಾದ ಮೋಕ್ಷ ಪದ ಅಪ್ಪುವೊಡಾವ ಗತಿಯಹುದು ವೇಮನಾ?**

---

೩೩೭೨ ಜಂಗಯಾಖ್ಯ ಭಕ್ತಿ ಸಂಧಿ ಬೇರೆ ಇಲ್ಲ,
ಸಗುಣ ಭಾವವಿದುವೆ ಶಾಸ್ತ್ರ ವಿಧಿಯು,
ನಿರ್ಗುಣವನು ಬಿಟ್ಟು ನೆರವೇರದು ಯೋಗ, ವಿಶ್ವ

೩೩೭೩ ಆತ್ಮವ ತನ್ನೊಳು ಗಮನಿಸಿ, ಅನುದಿನವೂ
ನಿರ್ಗುಣಾತ್ಮಾರ್ಚನೆಯ ಗೆಯ್ದು, ನಿತ್ಯ ಅಮರ,
ಪ್ರತ್ಯಗಾತ್ಮನೊಳು ನೆನೆಯೆ ಪ್ರಬಲ ಯೋಗಿ,
ಸಚ್ಚಿದಾನಂದ ಪದದಲ್ಲಿ ಸತ್ಯ ವೇಮ.

೩೩೭೪ ಎನಿತೊ ವಿದ್ಯೆಗಳ ಕಲಿತರು ಅರಿಯರಲ್ಲ,
ತಾನು ನಿರ್ಗುಣ ಜ್ಞಪ್ತಿಯನು ತಾಳಬೇಕು,
'ನಿರ್ಣಯೋ ನಾಸ್ತಿ' ಎನುವುದು ತುಂಬಿಯುಂಟು ;
ಗುರುವಿನ ಬೋಧೆಗೆ ಅನ್ಯವು ಸರಿಯೆ ? ವೇಮ.

೩೩೭೫ ಜಗದಲ್ಲಿಯು ಇಲ್ಲ; ಜಲದಲ್ಲಿಯು ಇಲ್ಲ,
ನಿಗಮ ವೇದ್ಯವಾದ ನೈಜ ಪದವಿಯ,
ಸಗುಣ ನಿರ್ಗುಣದೊಳು ಸಾಧಿಸಿ ಸಲೆ ಕಾಣು, ವಿಶ್ವ

೩೩೭೬ ಸಗುಣ ನಿರ್ಗುಣ ಭೇದಾರ್ಥ ಸಂಶಯವದು,
ಪರಮ ಗುರುವಾಜ್ಞೆಯಿಂದುಳಿದು ಪರಲು ಬಿಡದು,
ಅಗಣಿತವಾದುದು ಮನದೊಳಗೆ ಅಂಟಬೇಕು,
ವಾದಗಳ ಗೆಯ್ಯೆ, ಮೆಚ್ಚದು ವಸುಧೆ, ವೇಮ.

೩೩೭೭ ಸಗುಣವೆ ಲೋಕಗಳೆಲ್ಲವು,
ಸಗುಣಂ ತ್ರಿಮೂರ್ತಿ ತಿಳಿವೊಡೆ ಸಕಲ ಸುರೇಶ್ವರ್
ಸಗುಣವೆ ಜ್ಞಪ್ತಿಗೆ ಮೂಲವು,
ಸಗುಣವೆ ನಿರ್ಗುಣಕೆ ದಾರಿಯಪ್ಪುದು ವೇಮಾ !

೩೩೭೮ ಸಗುಣವೆಂದೂ ತಾನಲ್ಲ ಸತ್ಯವಾಗಿ,
ನಿರ್ಗುಣ ಬ್ರಹ್ಮವೆಯೆಂದೂ ನಿಶ್ಚಯದಿ,
ತಾನು ತನ್ನೊಳಗೆ ಪೂರ್ಣಾಗಿ ತಗಲಿರಲು,
ಅವತರಿಸಿದ ಶಿವನೆನುವರು, ಅವನ ವೇಮ.

---

೩೩೭೯ ದುರ್ಗತಿ ಸವರ್ಗಗಳೆನ್ನುವ,
ದುರ್ಗಣಗಳ ದಾಟಿ, ಹೃದಯ ದುರ್ಗವ ಸೇರಲ್,
ಸ್ವರ್ಗವ ಸೇರ್ಪುದೆ ದುರ್ಗತಿ,
ನಿರ್ಗುಣದೊಳೈಕ್ಯಗೊಳುವುದೆ, ನಿಜವೈ, ವೇಮಾ.

೩೩೮೦ ಅನುವಿನ ನಿರ್ಗುಣ ರೂಢಿಸಿ,
ತನಗಾವುದು ತೋಚದೆಂದು ತತ್ತ್ವವರಿಯದೇ,
ಮನಸಾಂತರಂಗದಲ್ಲಿಯೆ
ವಿನಯದಿ ಬಯಲನು ಸೇರುತ ಬೆಳಗೈ ವೇಮಾ.

೩೩೮೧ ಗಗನ ಗೋಚರ ನಿರ್ಗುಣ ಗಮ್ಯ ಸೋಸಿ,
ತಮವು ಮೀರಿದ ಧ್ಯಾನದಲಿ ತತ್ಪರಾಗಿ,
ತ್ವರಿತವಾಗಿಯೆ ಮೋಕ್ಷದ ದಾರಿಯಲ್ಲಿ,
ತಲುಪಿ ನಿರ್ಮಲ ಸುಜ್ಞಾನ, ತೊಳಗು ವೇಮ.

೩೩೮೨ ನಿತ್ಯ ಸತ್ಯ ನಿರಾಮಯ ನಿರ್ಗುಣವದು
ಮೃತ್ಯು ಸಮ ದೃಷ್ಟಿಯೊಳಗೆಣಿಸಿ ಮೀರದಿದ್ದು,
ಭೃತ್ಯ ಭೃತ್ಯಾನುರಾಗನೈ ಭೃಕುಟಿಗಂಟಿ,
ನೃತ್ಯ ಮಾಡುತ ಇರುವುದೇ ನಿಯತಿ ವೇಮ.

೩೩೮೩ ತ್ರಿಗುಣ ಭಾವವನ್ನೆ ಮೀರಿ ತಿರುಗುವವನು,
ಜಗದ ಮೇಲಾಸಿಸದೆ ಬ್ರಹ್ಮ ಯಂತ್ರದಲ್ಲಿ,
ಬೂದಿ ಮುತ್ತಿದ ಬೆಂಕಿ ತೆರ ಬಾಳುತಿಹನು,
ವಿಮಲ ಗುಣರಾಜ ಯೋಗೀಂದ್ರ ವೇಮನಾರ್ಯ !

೩೩೮೪ ಅಕ್ಷಯೆನುವುದ ಬಳಿಯ ಅಂಡದೊಡನೆ ಬೆಳೆಸಿ,
ಅಮರ ಗುಣ ವಿಕಾರ ಅನುಭವಿಸುತ,
ಅಕ್ಷಯವನು ಅಂಟೆ ಅಕ್ಷಯವೇ ಉಂಟು, ವಿಶ್ವ

೩೩೮೫ ಬೀಜವು ಸಿಪ್ಪೆಯು ತಮ್ಮೊಳು
ಆಜನ್ಮ ಜೊತೆ ಜನಿಸಿ, ಸಿಪ್ಪೆ ಹೋಹ ತೆರದಿಂ,
ನೈಜ ಸುಜ್ಞಾನ್ನಿಗೆ ಕರ್ಮವು
ತೇಜದಿ ತೊರೆದೋಡುತಿಹುದು, ಅನುವಲಿ ವೇಮಾ.

೩೩೮೬ ಸೀಸಃ ಮನಸು ನಿಲ್ಲಿಸಿದವನು ಮತ್ತೆ ಸರ್ವ ಸಮತೆಯಲ್ಲಿ
ಅನುಭವವನು ಕೋರಿ ಅಚಲನಿಹನು,
ನಿಗಯಾಂತವೇದ್ಯನಿಹ; ನಿತ್ಯ ಪ್ರಕಾಶನಿಹ,
ಪರಮ ಪೂರ್ಣವ ಕೋರಿ ಪಟ್ಟು ಬಿಡನು,
ಅರಿತು ತಾನು ಇಪ್ಪ ಪರಬ್ರಹ್ಮವೆಂದು
ತನ್ನನೆ ತಿಳಿಯುತ ತಿಳಿವು ಬಿಡನು,
ನಿರುತವಾತ್ಮನು ಸ್ತುತಿಸಿ ನಿರ್ಗುಣವನು ಹೊಂದಿ,
ನಿತ್ಯ ಬ್ರಹ್ಮನಿಹ ನಿಯತಿ ಬಿಡನು.

ತೇಟಃ ಸಗುಣವೆಂದಿಗೂ ತಾ ಕಾಣದೆ, ಸತ್ಯವೆನಲು
ನಿರ್ಗುಣ ಬ್ರಹ್ಮವೇ ಎಂದು ನಿಶ್ಚಯಿಸಿ,
ತಾನು ತನ್ನೊಳಗೆ ಪೂರ್ಣನಾಗಿ ಬಿಡದಿರೆ,
ವಿಮಲ ಗುಣ ರಾಜ ಯೋಗೀಂದ್ರ ವೇಮನಾರ್ಯ.

●●●

# ೨೧. ರಾಜಯೋಗ

**ತಿಳಿವು ನಿಲಿಸಿ ನೋಡು ದೀಪ್ತಿಪುದಾ ಕಳೆಯು ;**
**ಕಳೆಯುಡುಗಲು ನೋಡು ಕಾಣು ಬಯಲು,**
**ಬಯಲಿಗಂಟಿ ನೋಡು ; ಬ್ರಹ್ಮ ಕಾಣುತಿಹುದು,**
**ವಿಶ್ವದಾಭಿರಾಮ ಕೇಳು ವೇಮ.**

●

## (ಅ) ಬ್ರಹ್ಮ ಸ್ವರೂಪ

'ಬೃಹತ್ವಾತ್ ಬ್ರಹ್ಮ; ಬೃಂಹಣತ್ವಾತ್ ಬ್ರಹ್ಮ.' ಅಂದರೆ ಅಳತೆಗೂ ಮೀರಿ ಬೃಹತ್ತಾಗಿರುವುದು ಬ್ರಹ್ಮ. ಬ್ರಹ್ಮದ ಲಕ್ಷಣವೆಂದರೆ ಇನ್ನೊಂದನ್ನು ಬೃಹತ್ತಾಗಿಸುವುದು. 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿ ವಾಕ್ಯವೂ ಸರ್ವವಿದಿತವಿದೆ. ಮೇಲಾಗಿ, 'ಸರ್ವಂ ಬ್ರಹ್ಮ ಮಯಂ ಜಗತ್' ಎಂಬ ಶ್ರುತಿ ವಾಕ್ಯವೂ ಇದೆ. ರಾಜಯೋಗದಲ್ಲಿ ನಿರ್ಗುಣ ಬ್ರಹ್ಮವೇ ಲಕ್ಷ್ಯವಾಗಿದೆ. ಅಂದ ಮೇಲೆ ಬ್ರಹ್ಮ ಕುರಿತು ಸ್ಪಷ್ಟ ತಿಳಿವಳಿಕೆ ಅಗತ್ಯ. ಈ ಬಗ್ಗೆ ವೇಮನ ಯೋಗಿಗಳ ಬೋಧೆಯನ್ನು ಅರಿಯುವಾ ः

ನಿರ್ಗುಣ ಬ್ರಹ್ಮವು ಚಿದಾಕಾಶದಲ್ಲಿ ಅವಿರತವಾಗಿ ಏಕಾಕೃತಿಯಾಗಿರುತ್ತದೆ. ಇದುವೇ ಲೋಕಪಾಲಕವಾಗಿದೆ. ಅಂತರಾತ್ಮನು ಅಮರನು, ಅವ್ಯಯನು. ಸರ್ವ ಸಂಕಲ್ಪ–ವಿಕಲ್ಪಗಳಿಂದ ದೂರವಾಗಿರುವ ವಿಮಲ ದೃಷ್ಟಿಯಿಂದ ಅವನನ್ನು ವೀಕ್ಷಿಸುತ್ತ, ಮುಂದೆ ವೀಕ್ಷಿಸುವವನು. ಬೇರೆಂಬ ಭಾವವನ್ನು ತೊರೆದು ಉಳಿಯುವವನು. ಕೊನೆಯ ಬಯಲನ್ನು ಮುಟ್ಟುತ್ತಾನೆ.

ಚಿದಾಕಾಶದಲ್ಲಿ ಅಷ್ಟ ಐಶ್ವರ್ಯ ಸಿದ್ಧಿಗಳ ಮೋಹದಿಂದ ಬಂಧವಾಗುವುದು. ಮೋಹದ ಪರದೆಯನ್ನು ಸರಿಸಿ, ನಿರ್ಗುಣವನ್ನೇ ಲಕ್ಷ್ಯವಾಗಿರಿಸಿಕೊಂಡು ಮುಂದಾದರೆ, ಬಂಧವು ತೊಲಗುವುದು. ಬಯಲಲ್ಲಿಯ ಬಂಧವು ಹೀಗೆ ದೂರಾಗಲು, ನಯ ವರ್ತನದಿಂದ ಮುಕ್ತಿ ನಗರಿಗೆ ನಡೆಯುವೆ.

ಲಕ್ಷ್ಯವಸ್ತುವನ್ನು ಎದುರಿಗಿಟ್ಟುಕೊಂಡು ಅದರಿಂದ ತಾನು ಬೇರೆಯಾಗಿ ನೋಡುವುದನ್ನು ನಿಲ್ಲಿಸಿ, ನೋಟವೇ ತಾನಾಗಿ, ಏಕವಾಗಿ, ಅರಿಯುತ್ತ, ಮರೆಯುತ್ತ ಹಾಗೆ ಹೀಗೆ ಎಣಿಸಬೇಡ. ಆಗ ಮನದ ಒಳ–ಹೊರಗೆ ಬಯಲಾಯಿತು. ಆಗ ನೋಡುವ ತಾನು ಮರೆಗೆ ಸರಿಯಬೇಕು ಮತ್ತು ಸ್ಥಿತಪ್ರಜ್ಞನಾಗಬೇಕು.

— — — — — — — — — — — — — — — — — — — — —

ತನಗೆ ಎದುರಾಗಿರುವುದಾವುದನ್ನೂ ಲೆಕ್ಕಿಸದೆ, ಮನದಲ್ಲಿಯೇ ಗುರುತು ಹೊಂದಿ ಇದ್ದರೆ, ಅದುವೇ ಸಮ್ಮತವು. ಸದಯದಿಂದ, ಸಹೃದಯತೆಯಿಂದ ಸಾಕ್ಷಿಯಾಗಿ ಸಮೀಕ್ಷಿಸಬೇಕು. ಆಗ ಹೃದಯಕ್ಕೆ ಹಿಡಿಸಬಹುದು.

ಹುಚ್ಚ ಜನರು ಬ್ರಹ್ಮವೆಲ್ಲಿ ? ಎಂದು ಸಂದೇಹ ಪಡುತ್ತಾರೆ. ಸ್ವಲ್ಪ ತಿಳಿದು ನೋಡಿದರೆ, ಬ್ರಹ್ಮವು ಎಲ್ಲೆಡೆಯಲ್ಲಿ ಪರಿಪೂರ್ಣವಾಗಿದೆಯಲ್ಲವೇ ?

ಬ್ರಹ್ಮವು ಭಾವಾತೀತವಾಗಿದೆ. ಅನುಭಾವದಿಂದ ಮೇಲೇರಬೇಕು. ಕೊನೆಗೆ ಭಾವಾತೀತರೂ ಆಗಬೇಕು. ಭಾವಕ್ಕಂಟಿ ಇದ್ದರೆ, ಬ್ರಹ್ಮವು ತಿಳಿಯಲಾರದು. ಅದಕ್ಕೆ ಸಾಧನೆ ಬೇಕು. ದೇಹವನ್ನು ಗುಡಿಯನ್ನಾಗಿಸಿ, ತನ್ನನ್ನು ನಿಲ್ಲಿಸಿ, ಲೋಕ ಬುದ್ಧಿ ಬಿಟ್ಟು, ಒಳ ನೋಟದಿಂದ ನೋಡಬೇಕು.

ಬ್ರಹ್ಮವಾದಿಗಳೆಲ್ಲ ಬ್ರಹ್ಮ ಕುರಿತು ಹೇಳುತ್ತಿರುತ್ತಾರೆ. ಆದರೆ ತಿಳಿದಿರುವುದಿಲ್ಲ. ಮನ ಒಲಿದು, ಅರಿವಿನಿಂದ ನೋಡಿದರೆ, ಅದು ನಿಕಟದಲ್ಲಿಯೇ ಇದೆ. ಬ್ರಹ್ಮ ಮುದ್ರಿಕೆಯಾಗಿ ಸಚರಾಚರ ಜಗತ್ತು ಇದೆ. ಎದುರಿಗಿರುವ ಅದನ್ನು ಬ್ರಹ್ಮವಾಗಿ ಕಾಣರಲ್ಲ !

ದೇಹವು ಬ್ರಹ್ಮ ಘಟವೇ ಆಗಿದೆ. ಪ್ರಾಣವು ಅದರಲ್ಲಿಯ ಗಾಳಿ. ಇನ್ನು ಸೂರ್ಯ, ಚಂದ್ರ ಮತ್ತು ಅಗ್ನಿಗಳು ತ್ರಿನಯನಗಳು. ಇದನ್ನು ಬಿಟ್ಟು ಬ್ರಹ್ಮವೆಂಬುದು ಮಹಿಯ ಮೇಲಿರುವುದೇ ?

ಬ್ರಹ್ಮಾಂಡದ ಪ್ರಾತಿನಿಧಿಕ ರೂಪವೇ ಪಿಂಡಾಂಡವಾಗಿದೆ. ಬ್ರಾಹ್ಮಣನೇ ಆದರೂ ಪರಬ್ರಹ್ಮವನ್ನು ಅರಿಯಲಾರನು. ಏಕೆಂದರೆ ಅದು ಅರಿವಿನಾಚೆಗಿದೆ. ತನ್ನ ಮನಸ್ಸನ್ನು ತಿಳಿದರೆ ತೀರಿತು. ತಾನೇ ಬ್ರಹ್ಮನೆನಿಸುತ್ತಾನೆ.

ಬ್ರಹ್ಮವು ಸರ್ವಮಯವಾಗಿದೆ. ಆದರೆ, ಆ ಬ್ರಹ್ಮವನ್ನರಿಯದೆ ಇಲ್ಲಿ ಮಡಿ. ಅಲ್ಲಿ ಮೈಲಿಗೆಯೆನ್ನುತ್ತ, ಮಡಿಯಾಗಿ ಇರಲು ಅವರೆಷ್ಟು ಹಾರುತ್ತಿರುತ್ತಾರೆ ? ಯಜ್ಞ–ಕರ್ಮಗಳ ಮೂಲಕ ನಾಲಗೆಯ ರುಚಿಯನ್ನು ತೃಪ್ತಿ ಪಡಿಸಿಕೊಳ್ಳುವರಷ್ಟೇ. ಬ್ರಹ್ಮವೇನು ಜಿಹ್ವೆರುಚಿಗಳಿಂದ ವೇದ್ಯವೇ ? ಮನಸ್ಸಿನ ಗವಿಯನ್ನು ಸೇರಿ, ಅದನ್ನು ಮೀರಿ, ಬ್ರಹ್ಮವನ್ನು ಅರಿ.

ಬ್ರಹ್ಮ ಸಂತಾನವೆಂದರೆ, ಭಕ್ತರೇ ಸರಿ. ಆದರೆ ಋಷಿ ಮುನಿಗಳು ಅನೇಕ ಜಾತಿಯವರೆನಿಸಿದ್ದಾರೆ. ಭಕ್ತರಾದವರೆಲ್ಲ ಒಂದೇ ತಂದೆಯ ಮಕ್ಕಳು. ಒಂದೇ ಜಾತಿಯವರು. ಅದುವೇ ಮಾನವ ಜಾತಿ. ಹೀಗಿದ್ದೂ ಕಲಿಯುಗದಲ್ಲಿ ಜಾತಿ ಭೇದ ಕಲ್ಪಿಸಿ, ಹೊಲಸು ಹೆಚ್ಚಾಗಿದ್ದರೂ ಬ್ರಹ್ಮಸಂತಾಪ ಇಲ್ಲವೆ ಬ್ರಾಹ್ಮಣ ಜಾತಿ ಎಂದು ಹೇಳುವರಲ್ಲವೇ ?

— — — — — — — — — — — — — — — — — — — — — —

ಏನನ್ನಾದರೂ ಅರಿಯಬೇಕಾದರೆ, ಜ್ಞಪ್ತಿಯಂತೂ ಬೇಕಲ್ಲವೇ ? ಆದ್ದರಿಂದ ಲೋಕ ಜ್ಞಪ್ತಿಯನ್ನು ಅಳಿಸಬೇಕು. ಬ್ರಹ್ಮನನ್ನು ಅರಿಯುವ ಅಂತರ್ಯ ಜ್ಞಪ್ತಿಯನ್ನು ಉಳಿಸಿಕೊಳ್ಳಬೇಕು. ಅಂದರೆ ತನುವನ್ನು ಮರೆಯುವ ಮೂಲಕ ಭೂಮ ನಾನುವನ್ನು ನಿಲ್ಲಿಸಿಕೊಂಡು ಲೋಕ ಬುದ್ಧಿ ಮರೆತು ಒಳ ನೋಟದಿಂದ ನೋಡಬೇಕು.

ಸಗುಣ ಬ್ರಹ್ಮವು ನಿರ್ಗುಣದಲ್ಲಿ ಪ್ರಲಯಿಸುತ್ತದೆ. ಹೀಗೆ, ಸಗುಣ ಬ್ರಹ್ಮದಾಚೆಗಿರುವ ನಿರ್ಗುಣ ಬ್ರಹ್ಮವು ಸಗುಣದಿಂದಾಗಿ ಒಪ್ಪವಾಗಿದೆ. ಬ್ರಹ್ಮಕ್ಕೆ ಅಂಟಿ ಜ್ಞಪ್ತಿಯನ್ನು ಹಿಡಿದು ನಿಲ್ಲಿಸಬೇಕು.

ಸರ್ವಂ ಬ್ರಹ್ಮ ಮಯಂ ಜಗತ್, ಏಕವಾದ ಬ್ರಹ್ಮವೇ ಎಲ್ಲೆಡೆಗೆ ತುಂಬಿಕೊಂಡಿದೆ. ಇದನ್ನು ಸರಿಯಾಗಿ ತಿಳಿದು ಹೇಳುವುದಾದರೆ ಯಾರೂ ಬೇರೆಯವರಾಗರು. ಆದರೆ, ತಾನು ಬೇರೆ ಎಂದುಕೊಳ್ಳುವ 'ಮಮ'ಕಾರವು ಲೋಕ ಮಾಯೆಯನ್ನು ಹರಡಿದೆ. ಒಳ ಹೊರಗೆ ಕಂಡು ಲೋಕ ಮಾಯೆಯನ್ನು ಅರಿಯಬೇಕು.

ಬ್ರಹ್ಮವು ಏಕವಿದೆ. ಅದೇ ವಿಕಲ್ಪವಾಗಿ ಜಗತ್ತಿನ ಜನರಿಗೆ ಭಿನ್ನವಾಗಿ ತೋರುತ್ತಿದೆ. ಸಾಕಾರತ್ವ ಉಡುಗಿದರೆ, ಶೋಕ ಮತ್ತು ಮೋಹಗಳಿಲ್ಲದ ಶುಭವಾಗುತ್ತದೆ. ಇಂಥ ಬ್ರಹ್ಮವು ತನ್ನನ್ನು ಬಿಟ್ಟು ಪರದೇಶದಲ್ಲೇನೂ ಇಲ್ಲ. ಬ್ರಹ್ಮವೆಂದರೆ ಚಿದಾಕಾಶದಲ್ಲಿಯ ಬಟ್ಟ ಬಯಲು. ತನ್ನನ್ನು ತಾನು ತಿಳಿದರೆ, ತಾನೇ ಬ್ರಹ್ಮನಾಗುತ್ತಾನೆ.

ಮೂಲದಲ್ಲಿ, ಅರ್ಥದಲ್ಲಿ ಸಹ, ನಿರ್ಮಲಾತ್ಮ ನಿಯಾಮಕನಲ್ಲಿ, ಬಯಲಿನಲ್ಲಿ ಶ್ರುತಿಯ ಮಥಿತಾರ್ಥವು ಏಕರೂಪವಾಗಿದೆ. ಅಲ್ಲಿ ಹೊಳೆಯುವ ಶಿವನನ್ನು ಕಂಡು ಹರ್ಷ ಪಡಬೇಕು.

ಸಹಸ್ರಾರ ಚಕ್ರವು ಗಿರಿಯ ತುದಿಯಂತೆ. ಅಲ್ಲಿ ಚಿದ್‌ಜ್ಯೋತಿಯು ಸುಂದರವಾಗಿ ದೀಪ್ತಿಸುತ್ತದೆ. ಅದರ ಬೆಳಕಿನಲ್ಲಿ ಹಂಸವು ಹಾದಿ ಹಿಡಿಯಬೇಕು. ಆ ಜ್ಯೋತಿಯು ದಟ್ಟವಾಗಿ ತುಂಬಿರುತ್ತದೆ. ಹೀಗಿದ್ದು ಮಾನವನು ಸಾಧನದಿಂದ ಉದ್ದೀಪ್ತನಾಗದೆ, ಆ ಜ್ಯೋತಿಯ ಬಳಿಸಾರದಿದ್ದರೆ, ಅದಕ್ಕೆ ಅಂಟಿಕೊಳ್ಳುವುದು ಹೇಗೆ ಸಾಧ್ಯ ?

ಲೋಕ ಜ್ಞಪ್ತಿ ಬಿಟ್ಟು, ಉತ್ತಮ ಜ್ಞಪ್ತಿಯಲ್ಲಿ ಸತ್ತೆಯ ನಿಜ ರೂಪವನ್ನು, ಸಾದೃಶ್ಯ ಭಾವದಿಂದ ಹೊಂದಿ ಅರಿಯಲು ಪಾರಂಗತನಾಗಿ, ಆತ್ಮವಿದ್ಯೆಗೆ ಹತ್ತಿಕೊಳ್ಳಬೇಕು. ತಾನು ಏಕಾಂತದಲ್ಲಿರುವಾಗ, ಒಳಗಣ್ಣನ್ನು ಚಿದಾಕಾಶದಲ್ಲಿ ಬಿಟ್ಟು ತಾನಿದ್ದು ಬಳಿಕ ಚಿದಾತ್ಮನಲ್ಲಿಯೇ ಲೀನಗೊಳ್ಳಬೇಕು.

ಪ್ರಪಂಚದಲ್ಲಿರುವ ಅನೇಕ ಪ್ರಕಾರದ ವಸ್ತುಗಳನ್ನು ಈ ಭೂಮಿಯೊಳಗಿನ ಜನರು ಅರಿಯುತ್ತಾರೆ. ಅವರು ತೇಜದಿಂದ ಬ್ರಹ್ಮವನ್ನು ಮನದಲ್ಲಿ ಗ್ರಹಿಸಬೇಕೆಂದಾಗ

ಮಾತ್ರ ಕಥನ ಮೂಲಕ ತಿಳಿಸಬಹುದಷ್ಟೇ. ಉಳಿದದ್ದೆಲ್ಲ ಅನಿರ್ವಚನೀಯವಾದ ಆನಂದವೇ ಆಗಿದೆ.

ಇಂಥ ಸ್ಥಿತಿಯನ್ನು ಅನ್ಯರಿಂದ ಕೇಳುವವನಿಗಿಂತಲೂ ಸ್ವಯಂ ಕಾಣುವವನು ಶ್ರೇಷ್ಠನಾಗಿದ್ದಾನೆ. ಕಾಣುವವನಿಗಿಂತಲೂ ಕಲೆಯುವವನು ಶ್ರೇಷ್ಠನು. ಅವನೇ ಉರ್ವಿಯಲ್ಲಿ ಉನ್ನತೋನ್ನತನಾಗಿರುತ್ತಾನೆ.

ಸರ್ವವನ್ನೂ ಸಮಭಾವದಿಂದ ನೋಡಿದರೆ, ಬ್ರಹ್ಮ ಸಂಪ್ರಾಪ್ತಿಯು ಸುನಿಶ್ಚಿತವಾಗಿದೆ. ತಾನು ಸಾಧನಾ ನಿರತನಾಗಿ ಹಗಲೆನ್ನದೆ ಇರುಳೆನ್ನದೆ, ಅನಿಮಿಷನಾಗಿ, ಉಳಿದರೆ, ಪರಮಾತ್ಮನು ಹಗಲಿಗಿಂತ ಹೆಚ್ಚು ಪ್ರಕಾಶಿತನಾಗುತ್ತಾನೆ.

ವಿಷಯಗಳು ದೃಶ್ಯ. ಆದರೆ, ಇಂದ್ರಿಯಗಳು ದೃಕ್. ಇಂದ್ರಿಯಗಳು ದೃಶ್ಯವಾದರೆ ಮನಸ್ಸು ದೃಕ್. ಮನಸ್ಸು ದೃಶ್ಯವಾದರೆ ಬುದ್ಧಿಯು ದೃಕ್, ಬುದ್ಧಿಯು ದೃಶ್ಯವಾದರೆ, ಆತ್ಮವು ದೃಕ್, ಆತ್ಮವು ದೃಕ್‌ಗೆ ದೃಕ್ ಆಗಿದ್ದಾನೆ. ಅದೇ ಬ್ರಹ್ಮ. ಆ ಬ್ರಹ್ಮವೇ ಎಲ್ಲೆಲ್ಲೂ ತುಂಬಿದೆ. 'ಸರ್ವಂಬ್ರಹ್ಮಮಯಂ ಜಗತ್'. ಅಂದ ಮೇಲೆ ಭೇದವೆಂತು ಎಣಿಸಬಹುದು ?

ಹೀಗೆ ಯೋಗಿಯು ಏಕ ವರ್ಣವನ್ನು ಅರಿಯುತ್ತಾನೆ. ಅವನಿಗೆ ಪರವೆಂದರೆ, ಆಕೃತಿಗಳಷ್ಟೇ. ತಾನೇ ಅಖಿಲವಾಗಿರುವನು, ಪರರನ್ನು ಸರಿಯಾದ ವಿಧದಲ್ಲಿ ತಿಳಿಯಪಡಿಸಿದರೆ, ಇಹವನ್ನು ತೊರೆಯಬಹುದು ಪರವನ್ನೂ ತೊರೆಯಬಹುದು. ಗುಡ್ಡೆ ಕದಲದಿದ್ದು, ಆ ಸಂಧಿಯಲ್ಲಿ ಬ್ರಹ್ಮವನ್ನು ಕಾಣಬಹುದು. ಕಾಣಬಾರದ ಶಿವನು, ಅನುಭವ ಮೂಲಕ ಕಂಡು ಬಂದೊಡನೆ, ಕರುಣೆ ತೋರಿ ಭಕ್ತನನ್ನು ಕಾಯುವನು. ಅವನ ಕರುಣೆಗೆ ಯಾವ ಕುಂದೂ ಇಲ್ಲ.

ಒಂದು ಗಡಿಗೆಯಲ್ಲಿ ನೀರು ತುಂಬಿದರೆ, ಅದರಲ್ಲಿ ಆಕಾಶದ ನೀಲಧಾರೆಯು ಪ್ರತಿಬಿಂಬಿಸುತ್ತದೆ. ಅದರ ಗಾತ್ರವೂ ಗಡಿಗೆಯ ಗಾತ್ರಕ್ಕೆ ಸಮವಾಗಿರುತ್ತದೆ. ಹೀಗೆ ಜ್ಞಪ್ತಿಯನ್ನು ಉಳಿಸಿಕೊಂಡರೆ ಜ್ಞಪ್ತಿಯ ವ್ಯಾಪ್ತಿಯನ್ನು ಬ್ರಹ್ಮ ಗೋಚರಿಸುತ್ತದೆ. ಜ್ಞಪ್ತಿಯನ್ನು ಮೀರಿದರೆ, ಕಾಣದ ನಿರ್ಗುಣವು ತಾನೇ ತಾನಾಗುತ್ತದೆ. ಅದೇ ರೀತಿ ದೇಹದೊಳಗಿನ ಆತ್ಮ ಜ್ಯೋತಿಯನ್ನು ಕ್ರಮದಿಂದ ನೋಡಬೇಕು.

ಸಗುಣ ಬ್ರಹ್ಮವು ಹೇಗೆ ತೋರುತ್ತದೆ ? ರೂಪ ನೋಡಿ ಅದಕ್ಕೊಂದು ಹೆಸರು ಕೊಡುತ್ತೇವೆ. ಹೆಸರಿನಿಂದ ಆ ಕುರಿತು ಕರ್ಮಗಳು ಹತ್ತುತ್ತವೆ. ಕೊನೆಗೆ ನಾಮ, ರೂಪ, ಕ್ರಿಯೆಗಳು ನಶಿಸುತ್ತವೆ.

ದರ್ಶನವೇ ನೋಟ; ದೃಶ್ಯವೇ ರೂಪ. ದೃಕ್ ಆದವನು ದರ್ಶನ ಮತ್ತು ದೃಶ್ಯಗಳನ್ನು ನೋಡಿ, ಮನವನ್ನು ಒಳಹೊಕ್ಕು ಅವುಗಳೆರಡೂ ಒಂದೇ ಎಂದು

ಅರಿಯುತ್ತಾನೆ. ಅಂಥವನು ಘಟದಲ್ಲಿ ನಿರ್ಮಲ ಜ್ಞಾನಕ್ಕಾಗಿ ಶ್ರಮಿಸಿದರೆ ಕೈವಲ್ಯ ಪದವಿ ಘಟಿಸುತ್ತದೆ.

ನೋಟ ರೂಪಗಳೆರಡನ್ನೂ ನೋಡಿ, ಅದೆಲ್ಲವೂ ಅಲ್ಲವೆ ಎಂದು, ತನ್ನನ್ನು ಅರಿತೊಡಾಗ, ಎಲ್ಲ ಮಲಗಳೂ ದೂರವಾಗಿ ನಿರ್ಮಲನಾಗುತ್ತಾನೆ. ನಿರ್ಮಲನಾದ ಬಳಿಕ ನಿರ್ಗುಣ ಬ್ರಹ್ಮವು ಅಂಗೈಯಲ್ಲಿ ಕಾಣುತ್ತದೆ.

ಕಾಣುವ ರೂಪವೆಲ್ಲವೂ ತನ್ನ ಒಳಗಿನ ಸಂಸ್ಕಾರಗಳ ಫಲವೇ ಆಗಿದೆ, ಎಂದು ಕಂಡುಕೊಂಡು ಮನಸ್ಸನ್ನು ದಾರಿಯ ದೀಪವಾಗಿಸಿಕೊಂಡು, ನಡೆದರೆ ಅವನೇ ಬ್ರಹ್ಮವೆನಿಸುತ್ತಾನೆ.

ರೂಢಿಯಿಂದ ಹೊಳೆಯುವ ರೂಪವೆಲ್ಲ ಮಾಯೆಯೇ ಆಗಿದೆ. ಈ ಸಂಸಾರವೆಂಬ ವೃಕ್ಷದ ಫಲಗಳೆಲ್ಲ ಮಾಯೆಯೇ. ಈ ವೃಕ್ಷ ಕಲ್ಪ ವೃಕ್ಷದಂತೆ. ಆದರೆ ಬಾಹ್ಯ ನೋಟವನ್ನು ತೊರೆದು ಕಾಮನಾ ತೃಪ್ತಿಯಲ್ಲಿ ಸಿಲುಕದೆ, ನೋಟವನ್ನು ಒಳಗೆ ಮಾಡಿ ನೋಡುವುದೇ ಹೆಚ್ಚು ಸುಖದಾಯಕವಾಗುತ್ತದೆ.

ಎಲ್ಲ ರೂಪವೂ ಅಡಗದೆ 'ಜೀವ'ನನ್ನು ಕಾಣಲಾರನು. ಆದರೆ ಎಲ್ಲ ರೂಪಗಳನ್ನು ಅಡಗಿಸಲು ಯಾರಿಗೆ ಸಾಧ್ಯ ? ರೂಪದಲ್ಲಿ ಬ್ರಹ್ಮವಿದೆಯೆಂದು ಭಾವಿಸುವವರಿಗೆ, ಬ್ರಹ್ಮವು ಕಾಣಬರದು. ರೂಪದಿಂದ, ನಾಮ ಅಂಟುವುದು. ರೂಪ–ನಾಮಗಳು ಇರುವಾಗ ಕರ್ಮಗಳೂ ಅಂಟುತ್ತವೆ. ಆದರೆ ನಾಮ, ರೂಪಾದಿಗಳು ಅರಿವು ಮೂಡಿದ ಮೇಲೆ ನಶಿಸುತ್ತವೆ. ಎಲ್ಲವೂ ಏಕವೆನಿಸುತ್ತದೆ.

ಇಲ್ಲದ್ದನ್ನು ರೂಪಿಸಿಕೊಂಡು, ಇದ್ದ ರೂಪವನ್ನು ಇಲ್ಲವಾಗಿಸಿಕೊಂಡು, ಇದ್ದ ಮತ್ತು ಇಲ್ಲವೆಗಳನ್ನು ನೇತಿಗಳೆದು, ಮಾಯೆಯಲ್ಲಿ ಮಾಯೆಯ ಮಹಿಮೆಯನ್ನು ಅರಿಯಬೇಕು.

ಚಿತ್ತದಲ್ಲಿ ಆಕಾಶವನ್ನೇ ನೋಡುತ್ತ, ಊರ್ಧ್ವ ಮಟ್ಟದಲ್ಲಿದ್ದು, ಅತಿ ಚತುರಮತಿಯಾಗಿ ಅಚಲ ತತ್ತ್ವಕ್ಕಂಟಿ, ಉಜ್ವಲತೆಯಲ್ಲಿ ತತ್ತ್ವವನ್ನು ಊಹಿಸಬೇಕು. ನೋಟದೊಳಗೆ ನೋಡಬೇಕು. ಅಂದರೆ ದೃಶ್ಯದ ಹಿಂದಿನ ದೃಕ್ ಯಾರೆಂದು ತಿಳಿಯಬೇಕು. ನೋಟದೊಳಗಿನ ನೋಟದಿಂದ, ಮಲಗಳು ಇಲ್ಲವಾಗಿ ದೇವ ತುಲ್ಯನಾಗುತ್ತಾನೆ.

ನಮಗೆ ಎಂಟೂ ದಿಕ್ಕುಗಳಿಂದ ವಿಷಯಗಳು ವೇದ್ಯವಾಗುತ್ತವೆ. ಈ ಎಂಟೂ ದಿಕ್ಕುಗಳು ಬಯಲಾಗಬೇಕು. ಷಡೂರ್ಧ್ವಗಳೂ ಇಲ್ಲವಾಗಬೇಕು. ಮುಂದೆ ಶಬ್ದ ರಹಿತ ಬಯಲಲ್ಲಿ ಬೆಸೆದು 'ನನ್ನನ್ನು' ಕಾಣಬೇಕು.

ಬಾಹ್ಯ ಚಕ್ಷುಸ್ಸಿಗೆ ಕಾಣಬಾರದ ಬಯಲನ್ನು ಅಂತರ್ಯದಲ್ಲಿ ಕಂಡೊಡನೆ ಮೋಕ್ಷವಾದಂತೆ. ಆಗ ಅನುಭಾವವನ್ನು ಮರೆಯುವ ಸುಷುಪ್ತಿ ಸ್ಥಿತಿಯುಂಟಾಗಿ

ಪ್ರಿಯವಾಯಿತು. ಮತ್ತು ಅನ್ಯನ್ಯವಾದ ತಾನೇ ತಾನಾಗುತ್ತಾನೆ. ಇಲ್ಲಿ ಜ್ಞಪ್ತಿಯು ಮರೆಯುತ್ತದೆ.

ದೃಶ್ಯವನ್ನು ತೊಡೆದು ಶುದ್ಧ ಮನಸ್ಸನ್ನು ಸಂಪಾದಿಸಬೇಕು. ರೈತನು ಕಳೆಯನ್ನು ತೆಗೆದು ಬೆಳೆಯನ್ನು ಬೆಳೆಸಿದಂತಿದು.

ಬಾಹ್ಯ ನೋಟವೆಲ್ಲವನ್ನೂ ಬಯಲು ಮಾಡಬೇಕು. ಹೀಗೆ ಬಾಹ್ಯ ನೋಟವೇನೂ ಇರದೆ, ಭಾವದಲ್ಲಿ ನಡೆದಾಗ, ಬಯಲೇ ಬ್ರಹ್ಮವೆಂದು ಭಾವಿಸಬಹುದು. ಇದುವೇ ತತ್ತ್ವವಾಗಿದೆ.

ಮನದಾಚೆಯ ಬಯಲಲ್ಲಿ, ಸಿದ್ಧಿ ಇತ್ಯಾದಿ ಕಾಮನೆಗಳೆಂಬ ಬಂಧವನ್ನು ಲಯಿಸಿದರೆ, ಕೈಲಾಸ ಸೇರಿ, ಮುಕ್ತಿ ಕಾಣುವನು.

ಬಯಲೇ ಬ್ರಹ್ಮವೆಂದು, ಅಂದರೆ 'ಆಕಾಶಾತ್ ಬ್ರಹ್ಮ' ಎಂದು ಸೂತ್ರಕಾರರು ನುಡಿದಿದ್ದಾರೆ. ಸ್ಥೂಲ ಬಯಲೆಂತು ಬ್ರಹ್ಮವಾದೀತು ? ಬ್ರಹ್ಮವಾದ ಬಯಲು ಭಾವಗತವಾಗಿದೆಯಲ್ಲವೇ ? ಹಾಗಾದರೆ ಮುಂದುವರಿಯುವ ಪರಿ ಯಾವುದು? ತಿಳಿವು ನಿಲ್ಲಿಸಿ ನೋಡಬೇಕು. ಆಗ ಕಳೆಯು ಜ್ಞಪ್ತಿಸುತ್ತದೆ. ಕಳೆಯು ಉಡುಗುವ ಮುನ್ನ ಬಯಲು ತೋರುತ್ತದೆ. ಆ ಬಯಲಿಗಂಟಿ ನೋಡಿದರೆ ಬ್ರಹ್ಮವನ್ನು ಕಾಣಬಹುದು.

ಚಿದಾಕಾಶದಲ್ಲಿ ರೂಪವನ್ನು ಊಹಿಸಿ, ಮತ್ತೆ ಆ ರೂಪವನ್ನು ಬಯಲಿನಲ್ಲಿ ಸೇರಿಸಿ, ಅರಿವು ಮರೆವುಗಳ ಸಂಧಿಯಲ್ಲಿರುತ್ತ, ಬಯಲಿನ ರೂಪವನ್ನು ಸಹ ಬಟ್ಟಬಯಲಾಗಿ ಮಾಡಿ, ಆ ಬಟ್ಟ ಬಯಲಿನಲ್ಲಿ ಇರುವ ಅಭವನನ್ನು ಭಾವಿಸಬೇಕು. ಅದುವೇ ತತ್ವವಾಗಿದೆ.

ಯೋಗಿಯ ಸ್ಥಿತಿಯನ್ನು ಹೀಗೆ ತಿಳಿಸಬಹುದು, ತನ್ನ ಚಿದಾಕಾಶದಲ್ಲಿ ಅಂದರೆ ಒಳಗಿನ ಬಯಲಿನಲ್ಲಿ ಎಲ್ಲ ಲೋಕಗಳನ್ನು ಲಯಗೊಳಿಸಿ, ಕುಲ–ಭಾವನೆಯನ್ನು ನಾಶ ಪಡಿಸಿ, ತ್ರಿಗುಣಗಳನ್ನು ತೊರೆದು, ಆಳ ಚಿಂತನಕ್ಕಿಳಿವವನೇ ಯೋಗಿಯೆನಿಸುತ್ತಾನೆ.

ಇಂಥ ಬಯಲಿನಲ್ಲಿ ನೆಲೆಗೊಂಡು, ಅತ್ತ ಹೆಚ್ಚು ಲಕ್ಷ್ಯ ಹಾಕದೆ, ಭ್ರಮೆಯಿಂದ ಬೇರೆಡೆ ತಿರುಗುವವನು ಬಡ ಮನುಷ್ಯನಷ್ಟೇ. ಆದರೆ ಅವನು ಬಯಲಲ್ಲಿ ನೆಲೆಸಬೇಕು. ಆಗ ತಾನೇ ಬ್ರಹ್ಮವೆನಿಸುತ್ತಾನೆ.

ಯೋಗಿಯ ಸಾಧನೆಯಲ್ಲಿ ಈಗ ಸಗುಣ ಬ್ರಹ್ಮನ ಆಕೃತಿ ಇದ್ದದ್ದು ನಿರ್ಗುಣ ಬ್ರಹ್ಮದ ನಿರಾಕೃತಿಯೆನಿಸುತ್ತದೆ. ಮತ್ತೀಗ ನಿರಾಕೃತಿಯು ಆಕೃತಿಯಾಗುತ್ತದೆ. ಇಂಥ ತೂಗಾಟ ನಡೆದು ಕೊನೆಗೆ ಇದು ಇರದಾಗುವ ಆಕೃತಿ–ನಿರಾಕೃತಿಗಳೆರಡೂ ಸರಿದು, ಕೇಡಿರದ ನವರೂಪವು ಅನುಭವಕ್ಕೆ ಬರುತ್ತದೆ.

ಯೋಗಿಯು ಸಾಧನೆಯಲ್ಲಿ ಅನುಸರಿಸುವ ಕ್ರಮಗಳನ್ನು ಹೀಗೆ ಹೇಳಬಹುದು. ಮುಕ್ತವಾದಂಥ ಚಿದ್ ಬಯಲಲ್ಲಿ ಆತ್ಮವನ್ನು ಊಹಿಸಿ, ಅದರಲ್ಲಿಯೇ ತನ್ಮಯನಾಗಿ, ಅನುರಕ್ತಿ ಹೊಂದಿ, ಮುಕ್ತನಾಗಬೇಕು. ತಾನಿಂಥ ಪೂರ್ಣಪದವಿಯನ್ನು ತಲುಪಿದ ಬಳಿಕ, ಭುಕ್ತಿಯನ್ನು ಮತ್ತು ಸ್ವಂತ ಶಕ್ತಿಯ ಅಹಮಹಿಮಿಕೆಯನ್ನು ಮರೆಯಬೇಕು. ಅದೇ ಕಾಲಕ್ಕೆ ಪರಮಾತ್ಮನಲ್ಲಿ ಪೂರ್ಣ ಆಸಕ್ತನಾಗಬೇಕು.

ಬ್ರಹ್ಮವೆಲ್ಲಿದೆ? ದೇವರನ್ನು ಕಂಡಿದ್ದೀರಾ ? ಎಂದು ಹಲವರು ಪ್ರಶ್ನಿಸುತ್ತಿದ್ದಾರೆ. ಬ್ರಹ್ಮನು ಎಲ್ಲರಲ್ಲಿಯೂ ಪರಿಪೂರ್ಣವಾಗಿ ಇದ್ದಾನೆ. ಜನರಿದನ್ನು ಅರಿಯದಿರುವುದು ವಿಚಿತ್ರವಲ್ಲವೇ ?

ಭ್ರುಕುಟಿಯಲ್ಲಿ ಧ್ಯಾನಿಸುವಾಗ, ಒಂದು ಅವಸ್ಥೆಯಲ್ಲಿ ತೇಜಾನು ಸಂಧಾನದ ಕ್ರಮದಲ್ಲಿ ಚೊಕ್ಕ ಹೊಳಪು ಕಾಣುತ್ತದೆ. ಆ ಬೆಳದಿಂಗಳ ಜ್ಯೋತಿಯು ಬಯಲಾಗುತ್ತದೆ. ಆ ಬಯಲಿನ ರೂಪವನ್ನು ತಿಳಿದರೆ ತೀರಿತು. ಮುಕ್ತಿ ಲಭಿಸುತ್ತದೆ.

ಈಗ ಯೋಗಿಯ ಸಾಧನೆಯ ಒಂದು ಮಧ್ಯಂತರ ಅವಸ್ಥೆಯನ್ನು ಶೂನ್ಯವೆಂದು ಹೇಳುತ್ತಾರೆ. ಹಾಗಾದರೆ ಶೂನ್ಯವೆಂದರೇನು ? ಸ್ಥೂಲ ಜಗತ್ತಿನಲ್ಲಿ ಸೂಕ್ಷ್ಮದ ಗ್ರಹಿಕೆಯನ್ನು ಶೂನ್ಯವೆನ್ನಬಹುದು. ಇದನ್ನೇ ಬೇರೊಂದು ವಿಧದಲ್ಲಿ ಹೇಳುವುದಾದರೆ ಇಹದ ದೃಶ್ಯವು ಸರಿಯುವುದೇ ಶೂನ್ಯವಾಗಿದೆ. ಆಗ ಪರವು ಅನುಭವಕ್ಕೆ ಬಂದು ಎಲ್ಲವೂ ಸರಸವಾಗಿ ತೋರುತ್ತದೆ.

'ನಾನು ಯಾರು?' ಎಂಬ ಪರಿಶುದ್ಧ ವಿಚಾರಣೆಯೇ ಆತ್ಮವನ್ನು ತಲುಪುವ ಸೂತ್ರವಾಗಿದೆ. ಅರ್ಧ ಕಣ್ಣು ಮುಚ್ಚಿ, ಅನಿಮಿಷನಾಗಿ, ಆತ್ಮವನ್ನು ಚೆನ್ನಾಗಿ ಕಾಣಬೇಕು. ಅದರ ಗಾತ್ರವು ಬ್ರಹ್ಮಾಂಡದಷ್ಟಿದೆ. ಅದನ್ನು ಅನುಭವಿಸುವ ಪಾತ್ರತೆ ಹೊಂದಿ ಬುದ್ಧಿಯನ್ನು ಒಳನೂಕಿ ಪರವನ್ನು ಹೊಂದಬೇಕು.

ಲೋಕದ ಜ್ಞಪ್ತಿ ಇರಿಸಿಕೊಂಡು ನೋಡಿದರೆ, ಚಿದ್ಬಯಲನ್ನು ಅರಿಯಲು ಸಾಧ್ಯವೆನಿಸದು. ಆದರೆ ಅದನ್ನೇ, ಮನದಲ್ಲಿ, ಹೊಂದಿಕೊಂಡಿದ್ದರೆ, ಸಾಯುಜ್ಯದಿಂದ ಅದು ಗೋಚರಿಸುತ್ತದೆ. ಹೀಗೆ ಸತತ ಸಾಯುಜ್ಯ ಹೊಂದುತ್ತ ಅದು ಗಾಢ ಅರಿವಾಗಿ ತೋರುವುದು.

ಈ ಜಗತ್ತಿನಿಂದ ಮುಕ್ತಿ ಪಡೆಯಬೇಕಾದರೆ ತ್ರಿಗುಣಗಳ ಬಂಧನವನ್ನು ಹರಿಯಬೇಕು. ತ್ರಿಗುಣಾತೀತವಾದ ರಾಜ ಮಾರ್ಗಕ್ಕಂಟಿ, ತನ್ನ ಜೀವನ ರಂಗದಲ್ಲಿ ಕಾಲಿರಿಸಬೇಕು. ಅಲ್ಲಿ ಆತ್ಮಕೇಳಿಯನ್ನು ಸಂಪಾದಿಸಿ, ಗ್ರಹಿಸಿ, ಧೈರ್ಯ ಹೊಂದಬೇಕು.

ದೇವರನ್ನು ಸ್ಥೂಲ ಇಂದ್ರಿಯಗಳಿಂದ ಅನುಭವಿಸುವುದು ಹೇಗೆ ಸಾಧ್ಯ? ಅವನು ಸೂಕ್ಷ್ಮಾತಿಸೂಕ್ಷ್ಮನಾಗಿದ್ದಾನೆ. ಸ್ಥೂಲ ಕಣ್ಣುಗಳಿಂದ ತನ್ನ ಸ್ಥೂಲ ದೇಹದ ಕಿವಿ, ಬೆನ್ನು, ತಲೆಗಳನ್ನು ಸಹ ನೇರವಾಗಿ ಕಾಣಲಾರನು. ತನ್ನ ಸ್ಥೂಲ ದೇಹವನ್ನೇ

ಕಾಣಲಾರದವನು ಸ್ಥೂಲ ಇಂದ್ರಿಯಗಳ ಮೂಲಕ ತತ್ತ್ವವನ್ನು ಹೇಗೆ ಅರಿಯಬಲ್ಲನು? ಆದ್ದರಿಂದ ಒಳ ದೃಷ್ಟಿ ಬೇಕು. ನೋಟವು ಒಳಗೆ ತಿರುಗಿ ನೋಡುವುದಲ್ಲವೇ ? ಸ್ಥೂಲ ಇಂದ್ರಿಯಗಳಿಗೆ ಗೋಚರಿಸುವುದೆಲ್ಲ ಕರ್ಮಾಧಿಕಾರವೇ ಸರಿ. ಹುಚ್ಚು ಮನುಜರು ಅದರ ಹಿಂದೆ ಬಿದ್ದು ಕೆಡುತ್ತಾರೆ. ಮುಕ್ತಿ ಎಂದರೆ ಬಟ್ಟ ಬಯಲಷ್ಟೇ. ಕಾಣುವುದೆಂದರೆ ದೃಷ್ಟಿಯನ್ನು ಸುಷಮ್ನ ನಾಳದಲ್ಲಿ ನೂಕಿ, ನಿರ್ಭಯನಾಗಿ, ಭ್ರಮೆಯನ್ನು ಮೆಟ್ಟಿನಿಂತ ತನ್ನನ್ನು ತಾನು ಕಾಣಬೇಕು.

ಹೊರ ದೃಷ್ಟಿಯಿಂದೇನು ಫಲ ? ದೃಷ್ಟಿಯೊಳಗಿನ ದೃಷ್ಟಿ ಬೇಕು. ಆಳಕ್ಕಿಳಿಯಬೇಕು. ಆದಿಯು ಅಚಲವಾಗಿದೆ. ಇದನ್ನು ಅರಿಯಲು ಗುರುಮೂರ್ತಿಯನ್ನು ನೆನೆಯುತ್ತ ಬೇಗ ಗುರು ಬೋಧಿಸಿದ ಸಗುಣ ಬ್ರಹ್ಮಪದವನ್ನು ಹೊಂದಬೇಕು. ಎಲ್ಲಿಯವರೆಗೆ ನೋಡಿದರೂ ಏಕರೂಪವನ್ನು ನೋಡಬೇಕು. ಸರ್ವಂ ಶಿವಮಯಂ ಜಗತ್ ! ಪಕ್ವವಾದ ಹಾಗೂ ಇರದ ಅರಿವಿನಿಂದ ಅದನ್ನು ಪಡೆಯಲಾರನು. ಅದನ್ನು ಮನದಲ್ಲಿ ನಿಲ್ಲಿಸಿ, ತತ್ತರಿಸುವುದು ಬೇಡ.

ಜಲ ತುಂಬಿದ ಕೊಡದಲ್ಲಿ ನೆರಳು–ಬಿಸಿಲುಗಳು, ಮತ್ತು ಬೆಳದಿಂಗಳು ಒಂದೇ ಬಗೆಯಾಗಿ ಇರುತ್ತವೆ. ಅದೇ ರೀತಿ, ಪೂರ್ಣತತ್ತ್ವವನ್ನು ಏಕರೂಪವಾಗಿ ತಿಳಿಯಬೇಕು.

ಬೆದರದ ವೃತ್ತಿಯಲ್ಲಿ ನೋಟವಂಟಿ, ಅರಳಿದ ಮನದಲ್ಲಿ ರೂಪವನ್ನು ಅಳಿಸಿ, ತನ್ನನ್ನು ತಾನು ಕಾಣುವವನೇ ತತ್ತ್ವವೇತ್ತನಾಗಿದ್ದಾನೆ. ಅವನೇ ಈ ಭೂಮಿಯಲ್ಲಿ ನಿರ್ವಿಕಾರನಾಗಿ ಮುಂದೆ ಹೋಗುತ್ತಾನೆ.

ಶಿವನನ್ನು ಅಂತರಂಗದಲ್ಲಿ ಅನುಭವಿಸಬೇಕು. ಅದೇ ಅವನ ಅಭವ ಸ್ಥಿತಿ. ಅಲ್ಲಿಯೇ ದೃಷ್ಟಿಯನ್ನು ನಿಲ್ಲಿಸಿ, ಅದನ್ನು ಅರಿಯಬೇಕು. ಇದನ್ನು ಬಿಟ್ಟು ಬಾಹ್ಯ ವಸ್ತುಗಳಲ್ಲಿ 'ಅಭವ'ವನ್ನು ಹುಡುಕುವುದು ವ್ಯರ್ಥ.

ನಿಜವಾಗಿ ತತ್ತ್ವಜ್ಞನಾಗಲು ತಮಸ್ಸನ್ನು ಮೀರಬೇಕು. ತಮಸ್ಸು ಇಲ್ಲದೆ ಜ್ಞಾನಗತ್ತಲೆಯನ್ನು ಕಳೆಯಬೇಕಾದರೆ, ದೃಷ್ಟಿ ಶುದ್ಧವಾಗಿರಬೇಕು. ವಿಜ್ಞಾನ ಪೂರ್ಣವೂ ಆಗಿರಬೇಕು.

**೩೩೮೭ ಶಕ್ಯವೆ ಹೇಳಲು ಕೇಳಲು,**
**ಪ್ರಕಟವಾಗಿಯೆ ಲೋಕವು ಪಾಲಿಸುವಂಥಾ**
**ಪಾಕವು ಮನಸಿನ ಬಯಲೊಳು,**
**ಏಕಾಕೃತಿಯವಿರತಾಗಿ ಅರಿಯೈ ವೇಮಾ.**

— — — — — — — — — — — — — — — — — — — — — —

೩೩೮೮ ಅಮರ ಅವ್ಯಯಾದ ಅಂತರಾತ್ಮನೊಳಗೆ,
ವಿಮಲ ದೃಷ್ಟಿಗೂಡಿ ಬಿಡದೆ ಮೀರಿ,
ಕೊನೆಯು ಇಲ್ಲದವನು ಕೊನೆ ಬಯಲು ಸೇರುವನು, ವಿಶ್ವ

೩೩೮೯ ಬಯಲಲಿ ಬಂಧವು ಆಯಿತು,
ಬಯಲಲಿ ಪರಮಾತ್ಮಗೆ ಬಂಧವು ತೊಲಗಿಹುದೈ,
ಬಯಲಲಿ ಬಂಧವು ಉಡುಗಲು,
ನಯ ವರ್ತನದಿಂ ಮುಕ್ತಿಯು ನರರಿಗೆ ವೇಮಾ.

೩೩೯೦ ಎದುರು ನಿಲಿಸಿದ ನೋಟದಲಿ ಏಕವಮರಿ,
ಅರಿತು ಮರೆಯುತ ಒಡನೆಯೇ ಎಣಿಸ ಬೇಡ,
ಮನದ ಒಳಹೊರಗೆ ಬಯಲಾಯ್ತು ; ಮರೆಗೆ ಸೇರು ;
ಸ್ಥಿರತೆ ಚಿತ್ತಕೆ ಕೂಡಿಸು ತೀವ್ರ ವೇಮ.

೩೩೯೧ ಎದುರು ಕಾಣುವುದು, ಅದನು ಎಣಿಸಬೇಡ,
ಮನದಿ ಗುರುತನೆ ಹೊಂದಿರಲು ಮಾನ್ಯವಹುದು,
ಸದಯ ಹೃದಯತೆ ಸಾಕ್ಷಿಯಾಗಿ ಸಮೀಕ್ಷಿಸಲು,
ಹೃದಯ ರಂಜಕವಾದಾಗ ಹೇಳು ವೇಮ.

೩೩೯೨ ಬ್ರಹ್ಮವೆಲ್ಲಿಯೆಂದು ಹಲವರಾಡುತಿಹರು,
ಹುಚ್ಚು ಮೂಢ ಜನರು ಹೊಲಬರಿಯದೆ,
ಬ್ರಹ್ಮವೆಲ್ಲ ಎಡೆಗೆ ಪರಿಪೂರ್ಣನಾಗಿಹನು, ವಿಶ್ವ

೩೩೯೩ ಬ್ರಹ್ಮ ತಿಳಿಯದಯ್ಯ ಭಾವಕಂಟಿ ಇರಲು,
ತನುವ ಗುಡಿಯ ಮಾಡಿ, ತನ್ನ ನಿಲಿಸಿ,
ಲೋಕ ಬುದ್ಧಿ ಬಿಟ್ಟು, ಒಳನೋಟದಿ ನೋಡು, ವಿಶ್ವ

೩೩೯೪ ಬ್ರಹ್ಮವಾದಿಗಳೆಲ್ಲ ಬ್ರಹ್ಮವೆನ್ನುತಿಹರು,
ಒಲಿದು ತಿಳಿದು ನೋಡೆ ಬಳಿಗೆ ಇಹುದು,
ಮುಂದೆ ಇರುವಂಥ ಮುದ್ರಿಕೆಯ ಕಾಣರು, ವಿಶ್ವ

೩೩೯೫ ಬ್ರಹ್ಮ ಘಟವು ದೇಹ ಪ್ರಾಣದಲ್ಲಿ ಗಾಳಿ,
ಮಿತ್ರ, ಚಂದ್ರ, ವಹ್ನಿ ನೇತ್ರ ಚಯವು,
ಮತ್ತೆ ಬ್ರಹ್ಮವೆನಲು ಮಹಿಯ ಮೇಲೆ ಉಂಟೆ ? ವಿಶ್ವ

೩೩೯೬ ಬ್ರಹ್ಮ ಅಂಡ ದೇಹ, ಪ್ರಾಣವುಂಟು ಗಾಳಿ,
ಕಣ್ಣು ಚಂದ್ರ ರವಿಯು ಗೌರವಿಪರು,
ಇದಕ್ಕಿಂತ ಬ್ರಹ್ಮ ಎಲ್ಲಿ ಇರಲುಬಹುದು ? ವಿಶ್ವ

೩೩೯೭ ಬ್ರಹ್ಮವನರಿಯುವುದು ಭಾವದಲ್ಲಿ ಇಹುದೆ ?
ತನುವ ಗುಡಿಯ ಮಾಡಿ ತನ್ನ ನಿಲಿಸಿ,
ಲೋಕ ಬುದ್ಧಿ ಬಿಟ್ಟು ಏಕನೊಳಗೆ ನೋಡು, ವಿಶ್ವ

೩೩೯೮ ಬ್ರಹ್ಮಾಂಡವೆನಲುಬಹುದು ಈ ಶರೀರ,
ಪರ ಬ್ರಹ್ಮವರಿಯೊ, ಬ್ರಾಹ್ಮಣರಲು,
ತನ್ನ ಮನಸು ತಿಳಿಯೆ, ತಾನೆ ಹೋಗು ಬ್ರಹ್ಮ ವಿಶ್ವ

೩೩೯೯ ಬ್ರಹ್ಮಾಂಡವೆನಲು ಪುರದ ಒಳಗಿರುವುದು,
ಬ್ರಹ್ಮವರಿಯಲಾರ ಬ್ರಾಹ್ಮಣರಲಿ,
ತನ್ನ ಮನಸು ತಿಳಿಯೆ, ತಾನು ಹೋಗು ಬ್ರಹ್ಮ, ವಿಶ್ವ

೩೪೦೦ ಬ್ರಹ್ಮನರಿದದ ಅವರೆಷ್ಟು ಹಾರುತಿಹರು ?
ಜಿಹ್ವೆ ರುಚಿಗೆ ವೇದ್ಯವೆ ಜೀವಿಗಳೇ ?
ಗಹ್ವರವಾದ ಮನಸಿನಲ್ಲಿ ಕಂಡು ಮೀರು, ವಿಶ್ವ

೩೪೦೧ ಬ್ರಹ್ಮ ಬ್ರಹ್ಮನೆನಲು ಬ್ರಹ್ಮ ಎಂಥದಯ್ಯ !
ಬಯಸಿ ತಿಳಿದು ನೋಡೆ, ಬಳಿಗೆ ಇಹುದು,
ಮುದ್ರೆಯೊಳಗೆ ಇರುವ ಮುದ್ರಿಕೆಯ ಕಾಣರು, ವಿಶ್ವ

೩೪೦೨ ಬ್ರಹ್ಮ ಸಂತತಿಯೆನೆ ಭಕ್ತರಾಗಿರುವರು,
ಋಷಿ ಜಾತಿಗಳೆಷ್ಟೊ ರೀತಿಯಿಹವು,
ಹೊಲಸು ಹೆಚ್ಚಾಗಲು, ಹೇಸದೆ ಹೇಳುವರೆ ? ವಿಶ್ವ

೩೪೦೩ ಬ್ರಹ್ಮನರಿವ ಜ್ಞಪ್ತಿ ಭದ್ರವಾಗಿ ಇರಿಸಿ,
ತನುವ ಮರೆತು ಬೇಗ ತನ್ನ ನಿಲಿಸಿ,
ಲೋಕ ಬುದ್ಧಿ ಮರೆತು ಲೋಕಿಸು ಒಳ ಸೇರಿ, ವಿಶ್ವ

೩೪೦೪ ಬ್ರಹ್ಮದಾಚೆಗಿರುವ ಪ್ರಳಯ ಕಾಲದಲ್ಲೂ,
ಅದು ಬ್ರಹ್ಮದಿಂದ ಅಂದವಹುದು,
ಬ್ರಹ್ಮವಮರಿ ಜ್ಞಪ್ತಿ ಪಿಡಿದು ಕಟ್ಟಬೇಕು, ವಿಶ್ವ

೩೪೦೫ ಏಕವಾದ ಅದನೆ ಎಲ್ಲೆಡೆ ಕಾಣುತಿರೆ,
ಪಾಕವರಿತು ಹೇಳು ಪರನು ಯಾರು ?
ಲೋಕ ಮಾಯೆ ಕಾಣು ಒಳಹೊರಗೆ ತುಂಬಿದೆ, ವಿಶ್ವ

೩೪೦೬ ಏಕಂ ಬ್ರಹ್ಮವು ಎನ್ನಲು,
ವೈಕಲ್ಪಿತಾಯ್ತು ಜಗದೊಳಿರುವ ಎಲ್ಲರಿಗುಂ,
ಸಾಕಾರತ್ವವು ಉಡುಗಲು,
ಶೋಕವು ಮೋಹಗಳಿಲ್ಲದ ಶುಭವದು, ವೇಮಾ.

೩೪೦೭ ಬ್ರಹ್ಮವೆನಲು ಬೇರೆ ಪರ ದೇಶದಿ ಇಲ್ಲ,
ಬ್ರಹ್ಮವೆನಲು ತಾನೆ ಬಟ್ಟ ಬಯಲು,
ತನ್ನ ತಾನರಿತೊಡೆ ತಾನೆ ಹೋಗು ಬ್ರಹ್ಮ, ವಿಶ್ವ

೩೪೦೮ ಅರಿಯೆ, ಮೂಲದಲ್ಲಿ, ಅರ್ಥದಲ್ಲಿ ಕೂಡ,
ನಿರ್ಮಲಾತ್ಮನಲ್ಲಿ, ನಿಯತನಲ್ಲಿ,
ಬಯಲಿನಲ್ಲಿ, ಶ್ರುತಿಯ ಭಾವದಲ್ಲಿ ಒಂದೆ,
ಹೊಳೆವ ಶಿವನ ನೋಡಿ ಹರ್ಷಿಸು ವೇಮ.

೩೪೦೯ ಜ್ಯೋತಿ ಗಿರಿಯ ಮೇಲೆ ಸುಂದರಾಗಿ ದೀಪ್ತಿಸೆ,
ತುಂಬಿ ಪೂರ್ಣದಲ್ಲಿ ದಟ್ಟವಾಗಿ,
ಬಳಿಗೆ ಸೇರದಿರಲು ಬಾರದಂಟಿಕೊಳಲು, ವಿಶ್ವ

೩೪೧೦ ಹಣೆಯನು ಸೇರಲು ಕೇಳೆಲೊ !
ಘನವಹ ಶಕ್ತಿಯು ಉಂಟು ; ಕಡು ವಿಚಿತ್ರವಿದಂ !
ಮನವವದನರಿಯಲು ಆಚೆಗೆ,
ಕನಕೆನುವ ಜ್ಯೋತಿಯುಂಟು ಕಾಣಾ ವೇಮಾ !

೩೪೧೧ ಉತ್ತಮವಿಹ ಜ್ಞಪ್ತಿಯಲಿ,
ಸತ್ತೆಯ ನಿಜ ರೂಪ ಭಾವ ಸಾದೃಶ್ಯದೋಳ್,
ಪೊತ್ತುಕಳೆ ಪಾರಂಗತ
ನಾತ್ಮದ ವಿದ್ಯೆಗೆ ಹತ್ತಿಕೊ ಅನುವಿಲಿ ವೇಮ.

೩೪೧೨ ತಾನೋರ್ವನೇ ಇರುವಾಗ,
ಕಣ್ಣು ಗಗನ ಮಧ್ಯೆ ನಿವಾಸವಾದ ಮನೆಯೋಳ್,
ಕಾಣುತ ತಾನಿರಲು, ಬಳಿಕ,
ಲೀನಗೊಳುವನು ಚಿದಾತ್ಮಮಯ ಜಪದಿ ವೇಮಾ.

೩೪೧೩ ಬಹು ವಿಧ ವಸ್ತುಗಳೆಲ್ಲವು,
ಮಹಿಯೊಳಗಿಹ ಸಕಲ ಜಾತಿ ಮನುಜರು ಅರಿಯಲ್ ;
ರಹಿ ಮೀರಿ ಬ್ರಹ್ಮ ಮನದಿ,
ಗ್ರಹಿಸುವುದೇ ಬಾಹ್ಯ ಕಥಿತವು ವೇಮಾ.

೩೪೧೪ ಕೇಳುವವನಿಗಿಂತ ಕಾಣುವವನು ಅಧಿಕ,
ಕಾಣುವವನಿಗಿಂತ ಕರೆಯುವವನು,
ಉನ್ನತೋನ್ನತಾಗಿ ಉರ್ವಿಯಲ್ಲಿ ಇರುವ, ವಿಶ್ವ

೩೪೧೫ ಸರ್ವವೊಂದೆ ನೋಡೆ, ಸಂಪ್ರಾಪ್ತಿ ಶಾಶ್ವತ,
ರೆಪ್ಪೆ ಬಡಿಯದಿದ್ದು ರಾತ್ರಿ ಹಗಲು,
ಹಗಲಿನಲ್ಲಿ ಹಗಲು ಪರಮಾತ್ಮ ನೋಡೆಲೊ, ವಿಶ್ವ

೩೪೧೬ ದೃಕ್ ಇಹಗೆ, ದೃಶ್ಯಗಳಿಗೆ,
ಕಕ್ಕುಲತೆಯಿಂದ, ಭೇದವೆಣಿಸೆ ಮತ್ತಿಲ್ಲವು, ಕಾಣಾ,
ದೃಕ್ಕಿಗೂ ದೃಕ್ಕು ಬ್ರಹ್ಮವೆ,
ಚೊಕ್ಕಟ ನೀನೆಲ್ಲ ತುಂಬೆ ಸನ್ನುತಿ ವೇಮಾ.

೩೪೧೭ ಏಕವಾದ ವರ್ಣವರಿತಿಹ ಯೋಗಿಗೆ,
ಪರವು ತಿಳಿದು ನೋಡೆ ಭಾವದಲ್ಲಿ
ಆಕೃತಿಗಳು ; ಮತ್ತೆ ಅಖಿಲ ತಾನಪ್ಪನು. ವಿಶ್ವ

೩೪೧೮ ತೊರೆಯಬಹುದು ಪರವ ತಕ್ಕ ವಿಧದಿ ತಿಳಿಸೆ,
ಕಾಣಬಹುದು ಗುಡ್ಡೆ ಕದಲದಿದ್ದು,
ಬಡಿಯದಿರುತ ರೆಪ್ಪೆ ಪರಿಕಿಸುಭಯ ಸಂಧಿ. ವಿಶ್ವ

೩೪೧೯ ಕಾಣಬಾರದವನು ಕಂಡು ಬಂದ ಒಡನೆ,
ಕಾಯುತಿಹನಲುಗದೆ ಕರುಣೆಯಿಂದ,
ಕಾಣಬಾರದವನ ಕರುಣೆಗೇನು ಕುಂದು ? ವಿಶ್ವ

೩೪೨೦ ಘಟದ ನೀರಿನಲ್ಲಿ ಗಗನ ಕಾಣಿಸುವುದು,
ಘಟದಿ ಜಲವಿರದಿರೆ, ಗಗನವೆಲ್ಲಿ ?
ಘಟದ ಒಳಗೆ ಜ್ಯೋತಿ ಕ್ರಮದಿಂದ ಕಾಣಿರಿ, ವಿಶ್ವ

೩೪೨೧ ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ,
ರೂಪವೇನು ಇರದ, ರೀತಿಯಲ್ಲಿ,
ಪರಮ ಯೋಗಿ ನೋಳ್ಪ ಪರಮಾತ್ಮನಿರವನು, ವಿಶ್ವ

೩೪೨೨ ರೂಪದಿಂದ ನಾಮ ರೂಢಿಯಾಗುತಿಹುದು ;
ಹೆಸರಿನಿಂದ ಕ್ರಿಯೆ ಹತ್ತುತಿಹುದು,
ನಶಿಸುತಿಹವು ಕೊನೆಗೆ ನಾಮ ರೂಪ ಕ್ರಿಯೆ. ವಿಶ್ವ

೩೪೨೩ ನೋಟ ರೂಪಗಳೆರಡನೂ ನೋಡಿ ಮತ್ತೆ,
ಕೀಲು ತಿಳಿಯುತ ಮನ ಹೊಕ್ಕು ಜಾಣ್ಮೆ,
ಗೃಹವೆ ಆಯಿತು ಕೈವಲ್ಯ, ಕಾರ್ಯವೆ ಸರಿ,
ನಿರ್ಮಲ ಜ್ಞಾನಿ ಶ್ರಮ ಗೆಯ್ಯೆ, ನಿಜವು, ವೇಮ.

೩೪೨೪ ನೋಟ ರೂಪಗಳೆರಡನೂ ನೋಡಿ ಮತ್ತೆ,
ಅವೆಲ್ಲವಲ್ಲವೆ ತನ್ನ ತಾನರಿಯದಾಗ,
ನಿರ್ಮಲವಾಗಿ ಮನದೆಣಿಸಿ ನಿರ್ಮಲುಂಟು,
ನಿರ್ಗುಣ ಬ್ರಹ್ಮ ಅಂಗೈಲಿ ನಿಲಿಸು ವೇಮ.

೩೪೨೫ ತನ್ನ ರೂಪವೆಲ್ಲ ತನ್ನ ಒಳಗೆ ನೋಡಿ,
ಮನಸು ದೀಪವಾಗಿ ಮಮತೆ ಬಿಟ್ಟು,
ಅನುದಿನವು ಕಾಣೆ, ಅವನೆ ಹೋಗು ಬ್ರಹ್ಮ, ವಿಶ್ವ

೩೪೨೬ ರೂಪ ಮಾಯೆ–ನೋಟ ರೂಢಿಯಿಂದ ಹೊಳೆಯೆ,
ಕಾಯಿ ಮಾಯೆ–ವೃಕ್ಷ ಕಲ್ಪತರುವು,
ನೋಟ ಒಳಗೆ ಮಾಡಿ, ನೋಡುವುದೆ ಸುಖಕರ, ವಿಶ್ವ

೩೪೨೭ ರೂಪವಡಗದೆ ಜೀವ ರೂಪ ಕಾಣಲಾರ,
ಅಡಗಿಸಲೆಲ್ಲ ರೂಪ ಅಳವು ಇಲ್ಲ,
ಭ್ರಾಂತಿಯುಡಗುವನಕ ಬ್ರಹ್ಮ ಕಾಣರಲ್ಲ ! ವಿಶ್ವ

೩೪೨೮ ರೂಪ, ಹೆಸರು ಎರಡು ರೂಢಿಯಾಗಿ ಉಂಟು,
ಕ್ರಿಯೆಯು, ನಾಮ ರೂಪ ಕೂಡಿ ಇಹವು,
ನಾಮ ರೂಪವಾದಿ ನಶಿಸುತಿಹುದೆ ಮೇಲು. ವಿಶ್ವ

೩೪೨೯ ಮಾಯೆ ರೂಪ ಮಾಡಿ, ರೂಪ ಮಾಯೆ ಮಾಡಿ,
ಮಾಯೆ ರೂಪಗಳನು ಮಾಯ ಮಾಡಿ,
ಮಾಯೆಯೊಳಗೆ ಮಾಯೆ ಮಹಿಮೆಯರಿಯುವರೇ? ವಿಶ್ವ

೩೪೩೦ ಗಗನ ಚಿತ್ತ ದೃಷ್ಟಿ ಗದ್ದುಗೆ ಮೇಲಿರಿಸಿ,
ಅತಿ ಚತುರನಾತನು ಅಚಲಕಂಟಿ,
ಉಜ್ವಲಾಂಶದಲ್ಲಿ ಊಹಿಸುವ ತತ್ತ್ವವ, ವಿಶ್ವ

೩೪೩೧ ದಿಶೆಗಳು ಎಂಟೂ ಬಯಲೈ ;
ದಿಶೆಯೆಂಟರಿಂದ ಮಿಕ್ಕಿದ ಷಡೂರ್ಧ್ವ ಅತಿಶಯ ಬಯಲೆ,
ನಿಃಶಬ್ದ ಬಯಲು ನಡೆಯುತ,
ಬೆಸೆಯುತ 'ನನ್ನ' ಕಾಣಾ ತಾಣದಿ, ವೇಮಾ.

೩೪೩೨ ಕಾಣಬರದ ಬಯಲು ಕಂಡ ಒಡನೆ ಮೋಕ್ಷ,
ಮೈಯ ಮರೆತ ನಿದ್ರೆ ಮುದ್ದು ಆಯ್ತು,
ತಾನು ತಾನೆ ಕಾಣು ; ತಿಳಿವು ಮರೆವು ದಾಟು, ವಿಶ್ವ

೩೪೩೩ ಕಳೆಯ ತೆಗೆದು ರೈತ, ಬೆಳೆಯ ರಕ್ಷಿಸುವಂತೆ ;
ಬೆಳೆದ ಹದುಳದಿಂದ ಬೆಳೆಸು ಮನಸು,
ದೃಶ್ಯ ತೊಡೆದು ಹಾಕೆ, ತಂಪೆನಿಪುದು ನೋಡು, ವಿಶ್ವ

೩೪೩೪ ಬಾಹ್ಯ ನೋಟವಿರದೆ ಭಾವದಲ್ಲಿ ಎಣಿಸಿ,
ಬಾಹ್ಯ ರೂಪ ಹಿಡಿದು ಬಯಲು ಮಾಡಿ,
ಬ್ರಹ್ಮ ಬಯಲು ಎಂದು ಭಾವಿಸುವುದೆ ತತ್ತ್ವ, ವಿಶ್ವ

೩೪೩೫ ಅಷ್ಟ ಕಷ್ಟಗಳಿಗೆ ಆಲಯಾಗಿರುವುದು,
ಗತಿ ದುರ್ಗತಿಗಳಿಗಿಂತ, ದೇಹ
ಕಾಣದಿದ್ದು ಹೋಗೆ, ಗಗನ ಸ್ವರೂಪನ್ನೈ, ವಿಶ್ವ

೩೪೩೬ ಬಯಲಿಗಿಹುದೆಷ್ಟೆಷ್ಟೋ ?
ಬಯಲು ಬ್ರಹ್ಮಾಂಡಗಳಿಗೆ ಬಲವದು ಎಷ್ಟೋ ?
ರಯದಲಿ ರವಿ ತಾನೆಷ್ಟೋ ?
ಭಯ ಪಡುವರವನ ನೋಡಲು, ಬಯಲಲಿ ವೇಮಾ.

೩೪೩೭ ಬೈಲೊಳು ಬಂಧವ ಬೆರೆಸದೆ,
ವಾಲಲು ಪರಮಾತ್ಮನಿಗದು ವಾಂಛಿತವಹುದೇ ?
ಬೈಲೊಳು ಬಂಧವ ಬೆರೆಸಲು,
ಕೈಲಾಸವ ಸೇರಿ ಮುಕ್ತಿಯ ಕಾಣಾ ವೇಮಾ.

೩೪೩೮ ಬಯಲು ಬಯಲು ಕಾಣು ಪರಿಕಿಸಿ ಸಾಕಷ್ಟು,
ಬಯಲಿನೊಳಗಿರುವವರು ಬಯಲಾಗಿ,
ಬಯಲಿನೊಳಗೆ ಬಹಳ ಪರಿಕಿಸಿದೊಡೆ ತತ್ತ್ವ, ವಿಶ್ವ

೩೪೩೯ ಬಯಲು ಬ್ರಹ್ಮವೆಂದು ಭಾಷ್ಯೆ ಗೆಯ್ಯುತಿಹರು,
ಬಯಲು ತಾನದೆಂತು ಬ್ರಹ್ಮವಹುದು ?
ಬ್ರಹ್ಮವಾದ ಬಯಲು ಭಾವದಲ್ಲಿ ಇರದೆ ? ವಿಶ್ವ

೩೪೪೦ ತಿಳಿವು ನಿಲಿಸಿ ನೋಡು, ದೀಪ್ತಿಪುದಾ ಕಳೆಯು,
ಕಳೆಯುಡುಗದೆ ನೋಡು, ಕಾಣು ಬಯಲು,
ಬಯಲಿಗಂಟಿ ನೋಡೆ, ಬ್ರಹ್ಮ ಕಾಣಬಲ್ಲೆ, ವಿಶ್ವ

೩೪೪೧ ಬಯಲೆನುತ ಬಯಲೆದುರಾಗೆ,
ಬಯಲಲಿ ತನ್ನ ಮನ ನಿಲಿಸಿ ಒಳಿತಾಗಿರಲ್ಲಾ
ಬಯಲಲಿ ತೋರಲು, ಭ್ರಾಂತಿಯು,
ಬಯಲಾದ ತನ್ನ ತಾನರಿಯೆ ಬೊಮ್ಮ ವೇಮಾ.

---

೩೪೪೨ ಬಯಲು ರೂಪ, ರೂಪ ಬಯಲನಾಗಿ ಮಾಡಿ,
ಬಯಲ ರೂಪ ಬಟ್ಟ ಬಯಲು ಮಾಡಿ ;
ಬಯಲಿನೊಳಗೆ ಇಹನ ಭಾವಿಸಲು ತತ್ತ್ವವು, ವಿಶ್ವ

೩೪೪೩ ಬಯಲು ಮಾಡಿ ಒಳಗೆ ಲಯಗೊಳಿಸಿ ಲೋಕವ,
ಕುಲವ ಸುಟ್ಟು ಹಾಕಿ ಗುಣವ ತೊರೆದು,
ಚಿಂತನದೊಳು ಚಿಂತನ ಸೇರಿದರೆ ಯೋಗಿಯೈ, ವಿಶ್ವ

೩೪೪೪ ಬಯಲಲಿ ಮನೆ ಕಟ್ಟಿ, ಪರಿಕಿಸಿ ನೋಡದೆ,
ಭ್ರಮಿಸಿ ತಿರುಗುವವನೆ ಪಾಮರಿಹನು,
ಬಯಲಿಗಿಳಿಯೆ ತಾನೆ ಬ್ರಹ್ಮವಾದ ಹೋಗು, ವಿಶ್ವ

೩೪೪೫ ಆಕೃತಿಯರಿತೊಡೆ ನಿರಾಕೃತಿಯೆ ಆಯ್ತು,
ಆಕೃತಿಯೇ ಆಯ್ತು ಆ ನಿರಾಕೃತಿ ತಾ –
ನಿಂಥ ಕೇಡೆರಡಿರದ ನವ ರೂಪವೆ ಉಂಟು, ವಿಶ್ವ

೩೪೪೬ ಯುಕ್ತವಾದಂಥ ಬಯಲೊಳು ಊಹೆ ಗೆಯ್ದು,
ರಕ್ತಿ–ತನ್ಮಯ ಎನುತಿದ್ದು, ಮುಕ್ತಿಯರಿತು,
ಭುಕ್ತಿ ಶಕ್ತಿಗಳ ಮರೆವುದು ಪೂರ್ಣ ಪದವಿ,
ಸಕ್ತಿ ಪರಮಾತ್ಮನಲ್ಲಿರಿಸು, ಜಗದಿ ವೇಮ.

೩೪೪೭ ಬಯಲಲಿ ಹುಟ್ಟಿದ ಪರ್ವವು,
ಬಯಲಲಿ ಲೀನಾಗುತಿಹವು ಬ್ರಹ್ಮಾಂಡಗಳಾ,
ಬಯಲನು ಮನದಲಿ ತಿಳಿದೊಡೆ,
ಬಯಲೊಳಗೆ ಮುಕ್ತಿ ಬಟ್ಟ ಬಯಲಾಯ್ತು ವೇಮಾ.

೩೪೪೮ ಬಯಲು ರೂಪ ತನಗೆ ಬಯಲಾಗಿ ಮಾಡಿ, ಆ
ಬಯಲು ರೂಪಕಂಟಿ ಭ್ರಮೆಯೂ ಮೂಡಿ,
ಬಯಲಿನೊಳಗೆ ಬಯಲು, ಭಾವಿಸೆ ಪರಮಾತ್ಮ, ವಿಶ್ವ

೩೪೪೯ ಬಯಲು ರೂಪ, ರೂಪ ಬಯಲಾಗಿ ಮಾಡಿ,
ಕಣ್ಣು ರೂಪ ಹೊರಗೆ ಅದನೆ ಗೆಯ್ದು,
ಬಯಲು ಹೊರತು ಬಯಲು ಪರಿಕ್ಷಿಸಲು ತತ್ತ್ವವು, ವಿಶ್ವ

೩೪೫೦ ಬ್ರಹ್ಮವೆಲ್ಲಿಯೆಂದು ಬಲು ಬಾರಿಯೆನುವರು,
ವಿಚಿತ್ರ ಮತಿ ಜನರು ವಿಧವರಿಯದೆ,
ಬ್ರಹ್ಮವೆಲ್ಲರಲ್ಲಿ ಪರಿಪೂರ್ಣವುಂಟಲ ! ವಿಶ್ವ

೩೪೫೧ ಚಂದ ಮಾಮ ಹೊಳಪು ಚೊಕ್ಕಟಾಗಿ ನೋಡು,
ಜ್ಯೋತ್ಸ್ನೆಯೊಳಗೆ ಇಪ್ಪ ಜ್ಯೋತಿ ಬಯಲು,
ಅದರ ರೂಪ ತಿಳಿಯೆ ಆಗುತಿಹುದು ಮುಕ್ತಿ, ವಿಶ್ವ

೩೪೫೨ ಶೂನ್ಯವೆನಲು ಜಗದಿ ಸೂಕ್ಷ್ಮವಾಗಿ ಉಂಟು,
ಶೂನ್ಯವೆನಲು ಇಹವು ಸರಿವ ನೋಟ,
ಶೂನ್ಯವೆ ಪರವಾಗಿ ಸರಸ ತೋರುತಿಹುದು ! ವಿಶ್ವ

೩೪೫೩ ಸೂತ್ರವೆಯಮಲ ವಿಚಾರಣೆ,
ನೇತ್ರಂಗಳನರ್ಧ ಮುಚ್ಚಿ ನೆಲೆಗಾಣದನೇ,
ಗಾತ್ರವಹುದು ಬ್ರಹ್ಮಾಂಡವು,
ಪಾತ್ರನಿರುತ ಬುದ್ಧಿ ನೂಕಿ, ಪರನಹ ವೇಮಾ. ವಿಶ್ವ

೩೪೫೪ ರೂಪವಡೆಗೆ, ಜೀವ ರೂಪ ಕಾಣಬರದು,
ಅಂಥ ರೂಪ ಅಡಗಿಸೆ, ಅಳವು ಅಲ್ಲ,
ಬ್ರಹ್ಮ ಅಡಗಿ ಇರಲು, ಬ್ರಹ್ಮ ಕಾಣಬರದು. ವಿಶ್ವ

೩೪೫೫ ಅಳವಿಗೆಟುಕದ ಬಯಲು ಆಂತು ಮನದಿ ನೋಡೆ,
ಕೂಡಿ ಇರುತಿರಲು ಗೋಚರಿಪುದು,
ನೋಡಿ ನೋಡಿ ಅರಿವು ಗೂಢವಾಗಿ ತೋರ್ಕು, ವಿಶ್ವ

೩೪೫೬ ಬಯಲ ರೂಪ, ರೂಪ ಬಯಲನ್ನೆ ಮಾಡಿ,
ಬಯಲ ರೂಪ ಬಟ್ಟ ಬಯಲು ಮಾಡಿ,
ಬಯಲಿನಲ್ಲಿರುವನ ಭಾವಿಸುವುದೆ ತತ್ತ್ವ, ವಿಶ್ವ

೩೪೫೭ ಒಳ ನೋಟವನೆಣಿಸಿ, ಒಂದು ಆಶ್ರಯ ಕಂಡು,
ಬಯಲು ದಾಟಿ, ಕೊಚ್ಚಿ ಬಂಧಗಳನು,
ಸಕಲ ಗೊತ್ತಿದ್ದರು ಸರ್ವೇಶನ ಕಾಣರೆ ? ವಿಶ್ವ

೩೪೫೮ ಬಯಲಲಿ ಬಂಧವು ಆಯಿತು,
ಬಯಲಲಿ ಪರಮಾತ್ಮನಿಗಾ ಬಂಧವು ತೊಲಗುಂ,
ಬಯಲಲಿ ಬಂಧವು ಅಳಿದರೆ,
ನಯ ವರ್ತನದಲಿ ಮುಕ್ತಿಯ ಕಾಣುವರು ವೇಮಾ.

೩೪೫೯ ರೂಪವಂತಗಿಂತು ರೂಪಗಳಿಹವು ಮೂರು,
ಅವರವರಿಗೆ ಅರಿತು ಗೌರವಿಸಲು,
ಮೊದಲು ತಾನೆ ಇಹನು ಮೋಕ್ಷವಾಗದೇನು ? ವಿಶ್ವ

೩೪೬೦ ಚೊಕ್ಕವಾಗಿ ಮನದುಚ್ಚರಿಸಿ ನೋಡುತಿರು,
ಮೂಗು ತುದಿಯ ಮೀರಿ ಮೋದದಲ್ಲಿ,
ದೃಕ್ಕು ಬ್ರಹ್ಮವೆಂದು ಮಣಿಯುವುದೇ ಮುಕ್ತಿ, ವಿಶ್ವ

೩೪೬೧ ಬಯಲೇ ನೋಡಲು ಸರ್ವವು,
ಬಯಲಲಿ ಲೀನವು, ಕಾಣು ಬ್ರಹ್ಮಾಂಡಗಳಾ,
ಬಯಲು ತೋಚಲು ಮನದಲಿ,
ಬಯಲಲ್ಲಿ, ಮುಕ್ತಿಯು, ಬಟ್ಟ ಬಯಲದು, ವೇಮಾ ! ವಿಶ್ವ

೩೪೬೨ ಈ ಜಗದಿ ಮುಕ್ತಿಗೆ ಮೂರರಾಚೆಗಿಪ್ಪ,
ರಾಜ ಮಾರ್ಗಕಂಟಿ ರಂಗ ಕಾಣು,
ತೇಜ ಗಳಿಸಿ, ಗ್ರಹಿಸಿ ಧೈರ್ಯವರಿತು ನೋಡು, ವಿಶ್ವ

೩೪೬೩ ಕಾಣಲಾರ ಹಣೆಯ ಕರ್ಣ ಬೆನ್ನು ಭಾಗ,
ನೇರಗಾಣಲಾರ ನೆತ್ತಿ ಮೇಲೆ,
ತನ್ನ ಕಾಣಲಾರ ತತ್ತ್ವವೇನರಿವನು ? ವಿಶ್ವ

೩೪೬೪ ಇಂಥ ಕಣ್ಣಿನಿಂದ ಎಂತು ಬೊಮ್ಮನರಿವು ?
ನೋಳ್ಪ ಕಣ್ಣು ಬೇರೆ, ನೋಟ ಬೇರೆ,
ನೋಟ ಒಳಗೆ ತಿರುಗಿ, ನೋಡುವುದಲ್ಲವೇ ? ವಿಶ್ವ

೩೪೬೫ ಕಣ್ಣು ಕಾಣದಂಥ ಕಲುಷ ದೂರನನ್ನು
ಮನದೊಳು ಗ್ರಹಿಸಿ, ಭ್ರಮೆಯ ಬಿಡದೆ,
ತನಗೆ ಮುಕ್ತಿಯಿಲ್ಲ ತಾನೆ ಚಿಂತೆಯೊಳಿರೆ, ವಿಶ್ವ

೩೪೬೬ ಕಣ್ಣು ಮೆಲ್ಲಗೆ ನೂಕಿ, ಗುರುವಿನಲಿ ಸೇರಿಸೆ,
ಗುರುವು ಚಿತ್ಕಳೆ ನಿಲಿಪ ಕಣ್ಣನೀವ,
ಸುಮ್ಮನೇ ಇರುತಿರಲು ಸದ್ದಿರದೆ ಬರುವುದೆ ? ವಿಶ್ವ

೩೪೬೭ ಕಾಣಲಾರರಲ್ಲ ! ಕಲಿಯುಗದೊಳಗಿರುವ,
ಮನುಜರೆಲ್ಲರಿಗೂ ಮಾನವೊಂದೆ,
ದಾರ್ಢ್ಯವಿದ್ದೊಡಾಗ ದೈವ ತಿಳಿಯುತಿಹುದು, ವಿಶ್ವ

೩೪೬೮ ಕಣ್ಣು ದೃಷ್ಟಿಯಿಂದ ಕಾಣು ವಿಶ್ವವೆಲ್ಲ,
ಕನ್ನಡಿಯಲ್ಲಿ ತನ್ನ ಕಂಡ ರೀತಿ,
ಆತ್ಮ ತತ್ತ್ವಮಾರ್ಗ ಆ ರೀತಿ ಕಾಣಿರೊ, ವಿಶ್ವ

೩೪೬೯ ಕಣ್ಣಿಗಂಟಿ, ಇರುವ, ಮಿಣುಕು ನೋಡದೆ ಹೆಣಗಿ,
ಅಂಟದಿರಲು, ಕೆಲರು ಅವಿಧಿ ಪಡುವರು
ಕಣ್ಣಿಗಂಟಿ ಜ್ಯೋತಿ ಕಾಣಲಾರರಯ್ಯ ! ವಿಶ್ವ

೩೪೭೦ ಕಣ್ಣಿನಲ್ಲಿ ಇಹುದ ಕರ ಕಂಠನು ಅರಿವ,
ಕಣ್ಣಿನಲ್ಲಿ ಇಹುದ ಕಾಣುವ ರವಿ,
ಕಣ್ಣು ಗಗನ, ಹೃದಯ ಕಮಲದಲ್ಲಿ ಅರಿವುದು, ವಿಶ್ವ

೩೪೭೧ ಕಣ್ಣು ಕಂಡಿತೆನಲು ಕರ್ಮಾಧಿಕಾರವು,
ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ,
ಬಟ್ಟ ಬಯಲು ಮುಕ್ತಿ ಪರಿಪರಿಯಲಿ ನೋಡು, ವಿಶ್ವ

೩೪೭೨ ನಯದಿ ಕಾಣು, ದೃಕ್ಕು ನಾಳದಲಿ ನೂಕಿ,
ಭಯವು ಇರದೆ ವ್ಯರ್ಥ ಭ್ರಮೆಯ ಮೆಟ್ಟಿ,
ಸ್ವಯವ ಕಾಣು ; ಬುದ್ಧಿ ಸಾಧಿಸುತ್ತ ನೋಡು, ವಿಶ್ವ

೩೪೭೩ ಶೋಧಿಸಬಹುದು ಪದವ ಚೊಕ್ಕವರಿಯೆ ರೂಢಿಲಿ,
ಕಾಣಬಹುದು, ಗುಡ್ಡೆ ಕದಲದಿರಲು,
ರೆಪ್ಪೆ ಬಡಿಯದಿರಲೆರಡರ ಸಂಧಿಯಲುಂಟು, ವಿಶ್ವ

೩೪೭೪ ಕಣ್ಣಿನೊಳಿರುವವನ ಕರ ಕಂಠನರಿಯುವ,
ಕಣ್ಣಿನೊಳಿರುವವನು ಗಗನ ಕಾಣ್ಬ,
ಕಣ್ಣು ಗಗನ ಹೃದಯ ಕಮಲದಲ್ಲಿ ಕಾಣು, ವಿಶ್ವ

೩೪೭೫ ಕಣ್ಣ ದೃಷ್ಟಿಯು ಅದರದೆ, ಕಟ್ಟಿ ಒತ್ತಿ,
ತನುವ ಮೇಲಾಸೆ ಬಿಡುತ ತಾಣ ಹಿಡಿದು,
ಉಳ್ಳ ಮನುಜನೆ ಶಿವನಲಾ ಉರ್ವಿಯಲ್ಲಿ,
ಆತಗೇತಕೆ ಸುಖ ದುಃಖ ವಿತತಿ ವೇಮ.

೩೪೭೬ ಕಣ್ಣುಗಳಿದ್ದರು ಕಾಣರು,
ಕರ್ಣಗಳಿದ್ದರು ಕೇಳರಿದು ವಿಸ್ಮಯವಲಾ !
ಕಣ್ಣಿನ ಗುಡ್ಡೆಯು ಕಾಣುವು–
ದಣ್ಣ ಕಿವಿ ಕೇಳ್ವುದು ಹೇಳೆ, ಜಗದಲಿ ವೇಮಾ.

೩೪೭೭ ದೃಷ್ಟಿಯೊಳಗೆ ದೃಷ್ಟಿ ಹೊರದೃಷ್ಟಿ ನೋಡನೇಕೆ ?
ಆದಿ ಯಂತ್ರವು ಇಲ್ಲದಿಹುದಚಲವಹುದು,
ವೇದ ಗುರು ಮೂರ್ತಿ ಮನದಣಿಸಿ ವೇಗವಾಗಿ,
ನಿರ್ಗುಣ ಬ್ರಹ್ಮ ನಿಲುವುದು ಅಂಗೈಲಿ ವೇಮ,

೩೪೭೮ ಬಿಗಿದ ದೃಷ್ಟಿ ಸದಾ ಬಿಂಬದೊಳಗಿರಿಸಲು,
ಮನನ ಮಾಡಿ ತಿಳಿಯೆ, ಮಗ್ನವಹುದು,
ಲಗ್ನ ಚಿತ್ತವಮರ ; ರಕ್ಷಿಸುವುದಲ್ಲವೆ ? ವಿಶ್ವ

೩೪೭೯ ಮ. ತಪ್ಪದೆ ನೋಡುತಿರಲಿತರವೇನನು,
ನೋಡದಿರೆ, ಮುಕ್ತಿ ಪಡೆವಂ,
ರೆಪ್ಪೆಯ ಮುಚ್ಚಿ ಮುಚ್ಚದೆ, ಹಗಲಿ–
ರುಳೊಂದೆ ರೀತಿಯಿರುತಿರಲ್,
ತಪ್ಪುಗಳನೊಪ್ಪಗೊಳಿಸಿ, ಯಮ
ಧರ್ಮನ ಕಡೆಗೆ ಕೊಂಡೊಯ್ಯಲ್,
ಒಪ್ಪವಿಹವೆಲ್ಲ ಮುಕ್ತಿ ವಿಧಾನಂಗಳು
ವೇಮನನಿಗದ ಪೇಳಲೇಂ ?

೩೪೮೦ ಬಿಡುಗಡೆ ಇಲ್ಲದೆ ನೋಡಲು
ಎಡೆಬಿಡದಿಹ ಅರಿವು–ಮರೆವು ಎಣಿಸದೆ ತನ್ನೋಳ್,
ಪೊಡವಿಯ ಮರೆವಿಚ್ಚೆಯೊಳಗೆ,
ಗಡಬಡಿಸದೆ ತತ್ತ್ವಾಂತು ತಗುಲದೆ ವೇಮಾ

೩೪೮೧ ಏಕರೂಪವಮರ ಎಲ್ಲಿವರೆಗೆ ನೋಡೆ,
ಹಾಗಿರದರಿವಿಂದ ಹೊಂದಲಾರ,
ತಾಕಿ ಮನದಿ ನಿಲಿಸಿ ತತ್ತರಿಸಲು ಬೇಡ, ವಿಶ್ವ

೩೪೮೨ ಕೂಟವಾಸಿಯಾದ ಗುಣವನೆ ಅತಿಶಯಿಸಿ,
ನೆರಳ–ನೆರಳಿನಂತೆ ನಿಂತಿರುವುದು,
ನೀರುಗೊಡದ ಒಳಗೆ ನಿಂತ ಸೂರ್ಯನಂತೆ ವಿಶ್ವ

೩೪೮೩ ನೆರಳು ಬಿಸಿಲು, ಜೊನ್ನೆ, ಇರುವವೇಕದಂತೆ,
ತುಂಬುಗೊಡದ ಒಳಗೆ ನಿಂತುಕೊಂಡು,
ಪೂರ್ಣ ತತ್ತ್ವವೆಲ್ಲ ಪೂರ್ತಿ ತಿಳಿದು ಕಾಣು, ವಿಶ್ವ

೩೪೮೪ ಬಿಸಿಲು ಕಾಲ ನಿಶೆಯು ಬೆಸೆದು ಅಡಗಿದಂತೆ,
ತುಂಬುಗೊಡದಿ ನೀರು ನಿಂತಿಹಂತೆ,
ತಿಳಿದುಕೊ ಪರಮಾತ್ಮ ತತ್ತ್ವ ಬಹಳಷ್ಟು, ವಿಶ್ವ

೩೪೮೫ ನೋಟ ಚೆದುರದ ವೃತ್ತಿಯಲಿ ನೋಟವಂಟಿ,
ಅರಳಿ ಮಿಂಚಿದ ಮನದಲ್ಲಿ ಅಳಿಸಿ ರೂಪು
ತನ್ನ ತಾ ಕಾಣುತಿರುವವ ತತ್ತ್ವವೇತ್ತ !
ನಿರ್ವಿಕಾರನಿಹ ಭುವಿಯಲಿ ನೆಗೆವ ವೇಮ

೩೪೮೬ ಎಲ್ಲಿ ನೋಡಿದೊಡನೆ ಅಲ್ಲಿ ಏನು ತೋಚಿ–
ತಲ್ಲಿಯ ದೃಶ್ಯವ ದೃಕ್ಕಿನಿಂ ತಗಲಿ ಹಿಡಿದು,
ಎಲ್ಲವ ರಟ್ಟು ಮಾಡೆ, ಮುಕ್ತಿಗೆ ರಾಜ ಪಥವು,
ಅಲ್ಲಿ ಸಚ್ಚಿದಾನಂದ ! ಸತತ ಅಂಟು ವೇಮ.

---

೩೪೮೭ ಅಂತರಂಗದಲ್ಲಿ ಅನುಭವನನುದ್ದೇಶಿಸಿ,
ನಿಲಿಸಿ ನೋಡಿ ನೋಡಿ ನಿಲಿಸಬಹುದು,
ಬಾಹ್ಯದಲ್ಲಿ ಶಿವನ ಭಾವಿಸಿ ನಿಲಿಸಬಹುದೆ ? ವಿಶ್ವ

೩೪೮೮ ನಾಸಿಕಾಗ್ರದಲ್ಲಿ ನಯದಿ ಸೇರಿಸುತ್ತ,
ಮುಚ್ಚಿ ಮುಚ್ಚದ ಮೂಲೆಯಲ್ಲಿ,
ಅರಸಿ ನೋಡಲವನೆ ಶುಕ ಯೋಗಿಯಹ, ತನ್ನ
ಬಿಡದೆ ಇರುವ ಅವನೆ ಪರಮ ; ವೇಮ

೩೪೮೯ ವಿಮಲ ದೃಷ್ಟಿಯಿಂದ ವಿಜ್ಞಾನ ಹೊಂದದೆ,
ನಿಶೆಯು ಕಳೆಯಲುಂಟೆ ನಿಜವಾಗಿಯು,
ತಮವ ಮೀರಲಾಗ ತತ್ತ್ವಜ್ಞನಾಗುವ, ವಿಶ್ವ

೩೪೯೦ ಆದಿ ನೋಡುತಿರಲು ಅದರೊಳಿಹುದು ಸಕಲ,
ಆದಿ ನೊಡಲಾರೂ 'ಆಳು' ಅಲ್ಲ,
ಆದಿ ಮುಕ್ತಿಮಾರ್ಗ ಆತ್ಮದಲ್ಲಿ ಇಹುದು, ವಿಶ್ವ

●

## ಆ. ಮನಸ್ಸು ಮತ್ತು ಆಚೆಗೆ

ಪ್ರಾಣ ವಾಯುವಿನ ಸಂಚಾರದ ಅನುಸಂಧಾನವು ಹಠಯೋಗವೆನಿಸಿದರೆ ನಾದ ತೇಜಗಳ ಅನುಸಂಧಾನವನ್ನು ಲಯಯೋಗವೆನ್ನಬಹುದು. ಇನ್ನು ಮನೋವೃತ್ತಿಗಳ ವೀಕ್ಷಣೆಯನ್ನು ರಾಜಯೋಗವೆನ್ನಬಹುದು. ಈ ಯೋಗವು ಇತರೆಲ್ಲ ಯೋಗಗಳಿಗೆ ರಾಜನಿದ್ದಂತೆ. ಇತರ ಹಠ, ನಾದಾದಿ ಯೋಗಗಳೆಲ್ಲ ಪ್ರಧಾನಿಗಳಿದ್ದಂತೆ. ಪ್ರಪಂಚದಲ್ಲೆಲ್ಲ ಜಾತಿ–ಮತಗಳೆ ಸೊಡರು ಇಲ್ಲದಂತೆ ಬಹು ಪ್ರಿಯವಾದ ಯೋಗ ಪದ್ಧತಿಯೇ ರಾಜಯೋಗ – ವೇಮನರ ಅಚ್ಚುಮೆಚ್ಚಿನ ಯೋಗವಿದೇ.

ಮನಸ್ಸನ್ನು ಸಾಧುಗೊಳಿಸಿ, ಮನಸ್ಸನ್ನು ಒಳಗೆ ತಿರುಗಿಸಿ, ಮನಸ್ಸನ್ನೂ ಬಯಲು ಸೇರಿಸಿ ಬಯಲಾಗಿಸುವ ಈ ಯೋಗವು ಸತರ್ಕವೂ ಆಗಿದೆ, ತರ್ಕಕ್ಕೆ ದೂರವೂ ಆಗಿದೆ.

ಧ್ಯಾನದ ಅಭ್ಯಾಸದಲ್ಲಿ ತಮೋಗುಣದ ಪ್ರಭಾವದಿಂದ ನಿದ್ರೆ ಅಮರುತ್ತದೆ. ಈ ತಮೋ ಗುಣವನ್ನು ಮೀರಿ ಧ್ಯಾನವು ಮುಂದುವರಿದರೆ ಅದುವೇ 'ತತ್'

ಪದವಾಗುತ್ತದೆ; ಅಲ್ಲಿ ತತ್ತ್ವದರ್ಶನವಾಗುತ್ತದೆ. ಯಾವುದೇ ಮಲ ದೋಷಗಳಿರದ ಸುಜ್ಞಾನದಲ್ಲಿ, ಪ್ರಜ್ಞೆಯನ್ನು ತೊರೆಯದೆ, ನಿರ್ಣಯವನ್ನು ಅರಿವಿನಿಂದ ಕಾಣುತ್ತಿರಬೇಕು.

ನಿರ್ಬಯಲನ್ನು ಲಕ್ಷ್ಯವಿರಿಸಿಕೊಂಡು ಧ್ಯಾನಿಸುತ್ತಾನೆ. ಧ್ಯಾನದಲ್ಲಿ ಧ್ಯೇಯವೂ ಧ್ಯಾತೃವೂ ಏಕೀಭವಿಸುತ್ತವೆ. ಹೀಗಾದರೆ, ಧ್ಯಾನದಿಂದ ಶೂನ್ಯ ತತ್ತ್ವವು ಅನುಭವಕ್ಕೆ ಬರುತ್ತದೆ. ಅಂದ ಮೇಲೆ ಧ್ಯಾನಿಸದೆ ಇದ್ದರೆ ಶೂನ್ಯ ತತ್ತ್ವದ ಪ್ರಾಪ್ತಿಯಾಗದು. ಧ್ಯಾನಿಸುವ ಮತ್ತು ಧ್ಯಾನಿಸದ, ಸಂಧಿಯಲ್ಲಿ ಜ್ಞಾತೃ ಮತ್ತು ಧ್ಯೇಯಗಳೆರಡೂ ಇಲ್ಲದಿರುವಲ್ಲಿ ಧ್ಯಾನವೂ ಏಕವಾಗಿರುವುದೇ ತತ್ತ್ವಾಗಿದೆ. ಇದನ್ನೇ ಇನ್ನೊಂದು ಬಗೆಯಾಗಿ ಹೀಗೆ ಹೇಳಬಹುದು. ಧ್ಯಾನಿಸಬೇಕಾದರೆ ಧ್ಯೇಯ ಬೇಕಷ್ಟೇ. ಧ್ಯಾನಿಸದಿದ್ದರೆ ಧ್ಯೇಯದ ಗೊಡವೆ ಬೇಡ. ಆದರೆ ಧ್ಯಾತೃ ಮತ್ತು ಧ್ಯೇಯಗಳು ಏಕರೂಪವಾಗಿರುವಾಗಿನ ಧ್ಯಾನವಿದ್ದರೆ, ಅದೂ ಅವುಗಳೊಂದಿಗೆ ಒಂದಾಗುತ್ತದೆ. ಈ ತ್ರಿಪುಟಿಗಳ ಐಕ್ಯವೇ ತತ್ವವಾಗಿದೆ.

ಲಿಂಗ ಎಂದರೆ, ಪರಮಾತ್ಮನ ಕುರುಹು. ಅಂತರಿಕ್ಷದಲ್ಲಿ ಇರುವುದೆಲ್ಲ ಅವನ ಲಿಂಗವೇ. ಅದನ್ನೇ ಧ್ಯೇಯವಾಗಿರಿಸಿಕೊಂಡು ಧ್ಯಾನಿಸಬೇಕು. ಈ ಮೂಲಕ ಆತ್ಮ ದರ್ಶನವಾಗಬಹುದು. ಇದಾದ ಕೂಡಲೇ ಅದರ ಬೆನ್ನ ಹಿಂದೆಯೇ ಒಂದರ ಹಿಂದೊಂದು ಅಚ್ಚರಿಗಳು ಕಂಡುಬರುತ್ತವೆ. ಇವುಗಳೇ ಸಾಧನ ಸಿದ್ಧಿಗಳ ಸರಮಾಲೆ.

ಯಜ್ಞದಲ್ಲಿ ಅಗ್ನಿ ಶಿಖೆಗಳಿಗೆ ಹವಿಸ್ಸನ್ನು ಅರ್ಪಿಸುತ್ತಾರೆ. ಅದರ ಬದಲು ಅಭವ ಅಂದರೆ ಭವದ ಪೂರ್ವಾವಸ್ಥೆಯ ಮೇಲೆ ಧ್ಯಾನವನ್ನು ಸದಾ ಅಮರಗೊಳಿಸಿ ಜ್ಞಾನಾಗ್ನಿಯಲ್ಲಿ ಮಮಕಾರವನ್ನು ಹರನಿಗೆ ಆಹುತಿಯಾಗಿ ಅರ್ಪಿಸಿ, ಪ್ರವೃತ್ತಿ ಭಾವ ತಾಳಬೇಕು.

ಇಂತಹ ಅರ್ಪಿತ ಭಾವದಿಂದ, ನಿರ್ಮಮನಾಗಿ ವೈಚಿತ್ರ್ಯಗಳು ಮನಕ್ಕೆ ತೋಚಿದರೂ ಮರುಳಾಗದೆ, ಚಿಂತಿತನಾಗದೆ ಇರಬೇಕು. ಸಿದ್ಧಿಗಳ ವೈಚಿತ್ರ್ಯಗಳು ತನ್ನ ಕೇಂದ್ರಿತ ಮನದ ಪ್ರದರ್ಶನಗಳೇ ಎಂದು ಮರ್ಮವರಿತು ಸಾಗಬೇಕು.

ಸಿದ್ಧಿ – ಮಹಿಮೆಗಳ ಮರೆಯಲ್ಲಿ ಆತ್ಮತೇಜವಿದೆ. ಅದನ್ನು ಕಂಡು ಬ್ರಹ್ಮದಲ್ಲಿ ಮನವನ್ನು ನಿಲ್ಲಿಸಬೇಕು. ಸಿದ್ಧಿಗೆ ಬಲಿಯಾಗದಂಥ ಘನ ಮಹಿಮರಿರುವುದೆಲ್ಲಿ ?

ವಿವೇಕವು ಒಂದು ವಿಚಿತ್ರ ಕೊಡಲಿ. ಅವಿದ್ಯೆಯ ಅರಣ್ಯವನ್ನು ಅದರಿಂದ ಕಡಿಯಬೇಕು. ಮತ್ತು ಜ್ಞಾನ ದೀಪ ಹಿಡಿದು, ಹಾದಿಯನ್ನು ಕಂಡುಕೊಂಡು ಸಾಗಬೇಕು.

ಸಾಧಕನು ತನ್ನ ಧ್ಯೇಯವನ್ನು ಸದಾ ಮನನ ಮಾಡುತ್ತ ಮೌನ ಸಮಾಧಿ, ಹೊಂದಿ, ತನ್ನ ಲೌಕಿಕ ಜ್ಞಪ್ತಿಯನ್ನು ಮೀರಿ, ತಾಳ್ಮೆಯಿಂದ ಮುಂದುವರಿದರೆ, ಪ್ರಿಯ ಭಕ್ತನಾಗುತ್ತಾನೆ.

ಮನವೆಂದರೆ ಚಿತ್ತ, ಅಹಂ ಮತ್ತು ಮಹತ್ತುಗಳ ಸಾಮಗ್ರಿಕತೆಯಷ್ಟೇ. ಹೀಗೆ ಮನದಲ್ಲಿ ಚಿತ್ತ ವೃತ್ತಿಗಳನ್ನು ಸೇರದಂತಿರಿಸಿ, ಚಿತ್ ಬಯಲಿನಲ್ಲಿ ತಾನು ಇರಿಸಿಕೊಂಡ ಗುರಿಯನ್ನು ದಾಟುತ್ತ, ಹಗಲು ರಾತ್ರಿ ಮಸ್ತ ಸ್ಥಿತಿಯಲ್ಲಿ ಇರುವವನೇ ಮಾನ್ಯನೆಂದು ಅರಿ. ಸತ್ಯವನ್ನು ತಿಳಿದೊಡನೆ ಹಾದಿಯನ್ನು ಕ್ರಮವಾಗಿ ಹಿಡಿಯುವನು.

ಎಲ್ಲಿ ಮನ ಹರಿಯುವುದೋ ಅದುವೇ ಜಗವಾಗಿ ಗೋಚರಿಸುವುದು. ಆದರೆ ಜಗವನ್ನು ದಾಟುವುದೆಂದರೆ ತನು ಭಾವವನ್ನು ತೊರೆದವರೇ ಸರಿ. ಅವರನ್ನು ಕುರಿತಿರುವ ಸತ್ಯಕಥೆಗಳನ್ನು ಶ್ರವಣಮಾಡಿ, ಮನನ ಗೆಯ್ದು, ಧ್ಯಾನಿಸಬೇಕು. ಏಕೆಂದರೆ ಮರಣವು ಯಾವಾಗ ಬರುವುದೆಂಬದನ್ನು ಅನಿಮಿಷನಾದ ದೇವರೂ ತಿಳಿಯನು. ಆದ್ದರಿಂದ, ಕಾಲ ಕಳೆಯದೆ, ನಿಧಿಧ್ಯಾಸಕ್ಕೆ ತೊಡಗಬೇಕು.

ಸಂಕಲ್ಪಗಳಿರುವಾಗ, ತವಕವಿರುತ್ತದೆ. ಸಂಕಲ್ಪ ರಹಿತನಾದಾಗ, ಮುಕ್ತನಾಗುತ್ತಾನೆ. ಮುಕ್ತಿಯೆಂದರೆ ಚಿತ್ತ ಶೂನ್ಯವೇ ಆಗಿದೆ. ಅದುವೇ ಮೋಕ್ಷಪದ. ಇದರ ನಿಜವನ್ನು ಕಂಡವನೇ ಮಹಾ ಮೌನಿಯಾಗುತ್ತಾನೆ.

ಮುಕ್ತಿಯ ಸ್ಥಿತಿಯನ್ನು ಹೀಗೂ ಬಣ್ಣಿಸುತ್ತಾರೆ. ಗಾಳಿಯಿಲ್ಲದಿರುವಾಗ ದೀಪವು ನಿಶ್ಚಲವಾಗಿರುವಂತೆ, ಅಲೆಗಳಿರದಾಗ ಸಾಗರವು ಶಾಂತವಿರುವಂತೆ ಮನವು ನಿಶ್ಚಲವಾಗಿದ್ದು ನಿರ್ವಿಕಾರವಾಗಿರುತ್ತದೆ.

ಧ್ಯಾತೃವು ರೆಪ್ಪೆಗಳನ್ನು ಮುಚ್ಚಿಯೂ ಮುಚ್ಚದ ಅಂದರೆ ಅನಿಮಿಷ ನೇತ್ರನಾಗಿ, ತನ್ನ ಮನದಲ್ಲಿ ತತ್ತ್ವದೊಂದಿಗೆ ಸೇರಿದಾಗ, ಮತ್ತು ಕೇವಲ ಸಾಕ್ಷಿಯಾಗಿರುವಾಗ, ಮುಕ್ತಿಯು ಲಭಿಸುತ್ತದೆ.

ಇರುಳು–ಬಿಸಿಲುಗಳ ಮಧ್ಯೆ ಎಂದರೆ ನಿದ್ರೆ–ಎಚ್ಚರಗಳ ಮಧ್ಯ ಸ್ಥಿತಿಯಲ್ಲಿ ನಿಂತು, ಲಕ್ಷ್ಯ ವಸ್ತುವಿನ ಧ್ಯಾನವೇ ಎಲ್ಲೆಡೆ ತುಂಬಿ, ಪೂರ್ಣ ಪರಮ ತತ್ತ್ವವನ್ನು ಜನರು ಏಕೆ ಅರಿಯಲೊಲ್ಲರೋ ?

ಮನವನ್ನು ನಿಗ್ರಹಿಸಬೇಕು. ಕ್ಲೇಶ ದೂರನಾಗಿ ಆನಂದದಿಂದಿರಬೇಕು. ಕೊನೆಗೆ ಮೋಕ್ಷ ಪದವಿಯನ್ನು ಕಾಣುವನು. ಪ್ರಯತ್ನಿಸುವ ಸಾಧಕನಿಗೆ ಫಲವು ಇದೆ. ಗಿಡ ನೆಡುವವನಿಗೆ ಫಲವು ದೊರೆಯದೇ ?

ಪ್ರಾರಂಭದಲ್ಲಿ ಧ್ಯೇಯವು ನಿಕಟವಾಗಿದೆಯೆಂದು ತೋರುತ್ತದೆ. ಮತ್ತೆ ದೂರವಾದಂತೆನಿಸುತ್ತದೆ. ಮನದಲ್ಲಿ ಧ್ಯೇಯವು ಚಿಗುರಿದಾಗ ಅದರ ಗುರುತನ್ನು ನಿಕ್ಕಿಯಾಗಿ ಹಿಡಿದುಕೊಂಡು ಸಂತೋಷಿಸುವವರೇ ಘನವಂತರು. ಅವರೇ ಸೂತ್ರಕರ್ತರು.

ಮನದಲ್ಲಿ ಸದಾ ಶಿವನ ಚಿಂತನ ಮಾಡುತ್ತ ವೀಕ್ಷಿಸಿದರೆ, ಯಾವ ಹಾನಿಯಿಲ್ಲದೆ ಶಿವ ಪದವಿ ಹೊಂದುವನು. ಹೊಂದಿ, ಅನ್ಯವನ್ನು ಮರೆತವನು ಸುಖ ಹೊಂದುವನು.

---

ಜಾಣತನದಿಂದ ಮನಸ್ಸನ್ನು ಪರೀಕ್ಷಿಸಿ ನೋಡಿ, ಪಾರಾಗುವ ಕೀಲು ತಿಳಿಯರಲ್ಲ ! ಸುಮ್ಮನೆ ಕಾತರಗೊಂಡು ಫಲ ಸಿಕ್ಕಲಿಲ್ಲವೆಂದು ಕೆರಳುತ್ತಾರೆ. ಇರುವ ಸ್ಥಿತಿ ತೊರೆದು ವೇಷ–ಭೂಷಣಗಳನ್ನು ಬದಲಿಸಿ 'ಸಾಧು' ಎನ್ನಿಸುತ್ತಾರೆ. ಆದರೆ ಮನವನ್ನು ಜಯಿಸಿದವನು ಮಾತ್ರ ಸಾಧಿಸಬಲ್ಲನು.

"ಮನ ಏವ ಕಾರಣಂ ಬಂಧ ಮೋಕ್ಷಯೋಃ" ಎಲ್ಲಕ್ಕೂ ಮನವೇ ಕಾರಣ. ಸದಾ ವೀಕ್ಷಿಸಿದರೆ ತಾನೇ ಆತ್ಮನೆನಿಸುತ್ತಾನೆ. ಇರುವ ಕಾಲಕ್ಕೆ ಎಲ್ಲಿಯಾದರೂ ಇರಬಹುದು ಅಷ್ಟೇ !

ಮನಸ್ಸು ಏಕವಿರದೆ ಮರ್ಮವು ತಿಳಿಯಲಾರದು. ಪರ ರಹಸ್ಯವೂ ಬಯಲಾಗದು. ಬಿದ್ದವನ ಮಾನವು ಎಲ್ಲರಿಗೂ ಬಯಲಾಗುವ ರೀತಿಯಲ್ಲಿ ಏಕ ಮನಸ್ಸಿನಿಂದ ಮರ್ಮವೆಲ್ಲವನ್ನೂ ಅರಿತರೆ, ಪರ ರಹಸ್ಯವೆಲ್ಲವೂ ಬಯಲಾಗುತ್ತದೆ. ಬಿದ್ದವನ ಮಾನವು ಬಯಲಾದಂತೆ. 'ಚಿತ್ತ ವೃತ್ತಿ ನಿರೋಧಃ ಯೋಗಃ' ಎಂಬುದು ಪಾತಂಜಲ ಸೂತ್ರ. ಆದರೆ ಚಿತ್ತ ನಿಗ್ರಹವೇ ನಿಯಮವಲ್ಲ. ಗಾಳಿಯನ್ನು ನಿಗ್ರಹಿಸಿಸದಂತೆ ಮನೋನಿಗ್ರಹವೂ ಕಷ್ಟಸಾಧ್ಯ. ಆದ್ದರಿಂದ ಮನವನ್ನು ಚಲಿಸಲು ಬಿಟ್ಟು, ಅದನ್ನು ನಿರೀಕ್ಷಿಸುತ್ತ, ನೋಟವನ್ನು ಬಾಹ್ಯದಿಂದ ಅಂತರ್ಮುಖಿ ಮಾಡಿ, ಮನಸ್ಸಿನ ಹರಿದಾಟದ ಮರ್ಮವನ್ನು ಅರಿಯಬೇಕು. ಈ ಕರ್ಮದಿಂದ ಸಾಧನೆಯಲ್ಲಿ ಮುಂದುವರಿದರೆ, ಮನಸ್ಸು ನಿಲ್ಲುತ್ತದೆ. ಮನಸ್ಸು ನಿಂತರೆ, ತೀರಿತು. ಅವನೇ ಬ್ರಹ್ಮನಾಗುತ್ತಾನೆ.

ಮನಸ್ಸು ವಿಷಯ ದೂರವಾಗುವುದೇ ಮುಕ್ತಿ. ಮನಸ್ಸಿನ ಸಹಜ ವೃತ್ತಿಯೆಂದರೆ ವಿಷಯದಲ್ಲಿ ಮುಳುಗಿ ಏಳುವುದು. ಹಾಗಾದರೆ, ಹಾಳಾದಂತೆಯೇ ಸರಿ. ಅನವಶ್ಯಕ ವಿಷಯ ಸಂಗದಿಂದ ದೂರವಾಗುವುದೇ ಮನೋಶುದ್ಧಿಯಾಗಿದೆ. ಶುದ್ಧಮನ ಹೊಂದಿದ ಯೋಗಿಯು ಮುಕ್ತಿ ಮಾರ್ಗದ ಮರ್ಮವನ್ನು ತಿಳಿಯುತ್ತಾನೆ.

ಮನವನ್ನು ಅರಿಯಬೇಕು. ಅಂದರೆ ಮನಸ್ಸಿನ ಅಸ್ತಿತ್ವ ಮತ್ತು ಅದರ ಅಭಾವಗಳನ್ನು ಕಂಡುಕೊಳ್ಳಬೇಕು. ಮನವನ್ನು ಅರಿಯದವನು ಮಹಿಯಲ್ಲಿ ಬೇರೆಲ್ಲೂ ಆತ್ಮವನ್ನು ಕಂಡುಕೊಳ್ಳಲಾರನು. ಆದರೆ ಅರಿತಿರುವ ಇಂಥ ಜನರು ಜಗತ್ತಿನಲ್ಲಿ ದೊರೆಯುವುದಿಲ್ಲ. ತನುವಿನಲ್ಲಿ ಹುಡುಕಿ, ಆನಂದ ತುಂಬಿ, ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು.

ಮನಸ್ಸನ್ನೇ ಅರಿತು ನಿರ್ವಿಷಯಗೊಳಿಸುವುದೇ ಮುಕ್ತಿಯಾಗಿದೆ. ಹೀಗಿದ್ದೂ ಬೇರೆ ಕಡೆಗೆ ಹುಡುಕಲು ಪರದಾಡುವುದು ಹುಚ್ಚುತನವಷ್ಟೇ. ಕುರಿಯನ್ನು ಬಗಲಲ್ಲಿರಿಸಿಕೊಂಡು ಅದನ್ನೇ ಇತರತ್ರ ಹುಡುಕುವ ಕುರುಬನಂತೆ ಅದೆಲ್ಲ.

ಸಾಧಕನು ಕಾಯಾ, ವಾಚಾ ಮತ್ತಯ ಮನಸಾ ಹೀಗೆ ತ್ರಿಕರಣ ಶುದ್ಧಿ ಹೊಂದಬೇಕು. ಅಂದರೆ ಮನಸ್ಸು, ಮಾತು ಮತ್ತು ಕರ್ಮಗಳನ್ನು ನಿಲ್ಲಿಸಬೇಕು.

ಸಂಕಲ್ಪ–ವಿಕಲ್ಪಗಳೂ ಬರುಹೋಗುಗಳೂ ನಿಲ್ಲಬೇಕು. ಹೀಗಾಗುವುದೇ ಆತ್ಮ ಸಾಕ್ಷಾತ್ಕಾರದ ಪರಮ ಪಥವಾಗಿದೆ. ಪರಮ ಯೋಗಿಯು ಇದನ್ನೆಲ್ಲ ಸರಿಯಾಗಿ ಅರಿತರೆ ಅವನು ಯಾವುದೇ ಹಾನಿಯುಲ್ಲದೆ ಗುರಿ ತಲುಪುತ್ತಾನೆ.

ಈ ಪರಮ ಪಥದಿಂದ ಸಾಗದೆ, ಕೆಲವರು ಮನಸ್ಸಿನಲ್ಲಿಯೇ ತಿಳಿವನ್ನು ಅದಮುತ್ತ, ಕೊಂಚವಾದರೂ ಕಂಡು, ಅರಿಯದೆ ಮುಂದಾಗುತ್ತಾರೆ. ಆತ್ಮ ತತ್ತ್ವದ ನಿಕಟ ತಲುಪುತ್ತಾರೆ. ಮತ್ತು ಹೆಣಗಾಡಿ ಒಂದು ನೆಲವನ್ನು ಹಿಡಿದುಕೊಳ್ಳುತ್ತಾರೆ. ಆದರೆ ಇಂಥ ಅಸಹಜ ಕ್ರಮವು ಬರಿ ಮಾಯೆಯಾಗಿದೆ. ಆಗಿನ ಸಿದ್ಧಿಗಳು ಹಾದಿ ತಪ್ಪಿಸುವ ಭ್ರಮೆಗಳಾಗಿವೆ.

'ಆತ್ಮ ಮೋಕ್ಷಾರ್ಥಂ ; ಜಗತ್ ಹಿತಾಯ ಚ' ಎಂದು ಧ್ಯೇಯವಿದೆ. ಆದರೆ ಮನದಲ್ಲಿ ಆತ್ಮವನ್ನರಿಯದವನು. ಜಗತ್ತಿನಲ್ಲಿ ಹೊಂದಿಕೊಂಡು ಬಾಳನು. ಮಹಿಯಲ್ಲಿ ಹೊಂದಿಕೊಂಡು ಬಾಳುವ ಮನುಷ್ಯನೇ ಮನದಲ್ಲಿ ತತ್ತ್ವವನ್ನು ಅರಿಯುತ್ತಾನೆ. ಆತ್ಮವನ್ನು ಶೋಧಿಸಿ ವಿರಕ್ತನಾಗಿ ದೇಹದಲ್ಲಿಯೇ ಆನಂದತುಂದಿಲನಾಗಿ ಸಾಕ್ಷಾತ್ಕಾರ ಪಡೆಯುತ್ತಾನೆ.

ಮನಸ್ಸಿನ ಗತಿಯು ಚಿದಾಕಾಶದತ್ತ ಇರಬೇಕು. ಯಾವ ಅಲಂಬನೆಯೂ ಇಲ್ಲದೆ, ನಿರಾಲಯವಾಗಿರಬೇಕು. ಆಗ ಸಾಕ್ಷಿಯಾಗಿದ್ದು, ಸಾಮರಸ್ಯಕ್ಕಾಗಿ ಎಳಸಬೇಕು. ಲಕ್ಷ್ಯವನ್ನುಳಿದು ಬೇರೆಡೆ ಕ್ರಮಿಸಬೇಕೆಂಬ ಭ್ರಮೆಗಳು ಅಡಗಿದರೆ, ಬ್ರಹ್ಮವು ಬಟ್ಟ ಬಯಲೇ ಎಂದು ಅನುಭವಕ್ಕೆ ಬರುವುದು. ತಮ್ಮೊಳಗೇ ತಮಸ್ಸು ತುಂಬಿದವರು ಇದನ್ನೆಲ್ಲ ಕ್ರಮವಾಗಿ ತಿಳಿಯಲಾರರು.

ಈ ಹಾದಿಯಲ್ಲಿ ಮನಸ್ಸು ದೃಢವಾಗಿ ನಿಲ್ಲಬೇಕು. ಕಬ್ಬಿಣ ಎರಡು ಮೂರು ಬಾರಿ ಮುರಿದರೂ ಕಮ್ಮಾರನು ಬೆಸೆಯುತ್ತಾನೆ. ಆದರೆ ಮನಸ್ಸು ಮುರಿದರೆ ಹೇಗೆ ಬೆಸೆಯಬಹುದು ?

ಸಂಕಲ್ಪಾತ್ಮಕ–ವಿಕಲ್ಪಾತ್ಮಕ ಮನದಲ್ಲಿ ಬ್ರಹ್ಮಮೂರ್ತಿಯನ್ನು ಕಾಣಲಾಗದು. ಈ ಭೂಮಿಯಲ್ಲಿ, ಮನದಲ್ಲಿ ಕಾಣುವವರು ಯಾರೂ ಇಲ್ಲ. ತನುವಿನಲ್ಲಿ ಶೋಧಿಸಿ, 'ಆನಂದಂ ಬ್ರಹ್ಮ ಇತ್ಯಾಹುಃ' ಎಂದರಿತು ಹರ್ಷ ಪಡುವವನೇ ಯೋಗಿಯು.

ಮನದಲ್ಲಿ ಚಿಂತನ ಮಾಡಿ, ಮನದ ಚಲನವಲನಗಳಲ್ಲಿ ಬೆರೆತು, ಅದರ ಹಿಂದಿರುವವನನ್ನು ಸೆಳೆದು ನಿಲ್ಲಿಸಬೇಕು. ಮನಸು ನಿಲ್ಲಿಸುವವನೇ ಮರ್ಮಜ್ಞನಾದ ಯೋಗಿಯಾಗಿದ್ದಾನೆ. ಆಂತರ್ಯದಲ್ಲಿ ತನ್ನನ್ನು ತಾನು ಚೊಕ್ಕವಾಗಿ ಅರಿಯಬೇಕು. ತನ್ನನ್ನು ತಾನು ಅರಿತರೆ, ಉರ್ವಿ ಜನರು ಅವನನ್ನು 'ಯೋಗಿ' ಎನ್ನುವರು. ಅವನೇ ಶಿವನು.

— — — — — — — — — — — — — — — — — — — — — —

ಮನದಲ್ಲಿ ಚಂಚಲತೆಗೆ ಯಾವ ಇಂಬೂ ಇರಕೂಡದು. ತುಂಬಾ ಜಾಗ್ರತವಾಗಿದ್ದು, ಗುರು ಭಕ್ತಿಯಿಂದ ಚಂಚಲತೆಯನ್ನು ಮೀರಿ ನಡೆದರೆ, ಪರಿಪೂರ್ಣವನ್ನು ಹೊಂದಿ ಬೆಳಗಬಹುದು.

ಮನವನ್ನು ಒಂದು ತಾಣದಲ್ಲಿ ನಿಲ್ಲಿಸಬೇಕು. ಅನ್ಯ ಬೋಧೆಗಳು ಉಡುಗಬೇಕು. ಆಗ ಜೀವಕ್ಕೂ ಆತ್ಮಕ್ಕೂ ಹೊಂದಾಣಿಕೆ ಏರ್ಪಟ್ಟು ಸಮಾನ ಸ್ಪಂದನಗಳು ಉಂಟಾಗುತ್ತವೆ. ಹೀಗೆ ನಿಶ್ಚಲ ಸ್ಥಿತಿ ಸೇರುವುದೇ ಸಮಾಧಿಯೆನಿಸುತ್ತದೆ.

ಆದರೆ, ಬ್ರಹ್ಮಚೇಷ್ಟೆಯೊಂದು ನಡೆದೇ ಇರುತ್ತದೆ. ಮನಸ್ಸನ್ನು ಕುದುರೆ ಮಾಡಿ, ಮಾಯೆಯನ್ನು ಹತ್ತಿಸಿ ಮೂರ್ಖ ಜನರನ್ನು ಮೋಸಗೊಳಿಸುತ್ತಾನೆ. ಇದನ್ನೆಲ್ಲ ಬ್ರಹ್ಮಜ್ಞಾನಿ ಮಾತ್ರ ಬಲ್ಲನು.

ಕೆಸರಿನಲ್ಲಿದ್ದರೂ ಕಂಬಳಿಹುಳವು, ಮೈಯನ್ನು ಕೆಸರು ಮಾಡಿಕೊಳ್ಳದೆ ಹೊರಳಾಡುತ್ತದೆ. ಅದೇ ರೀತಿ ಮನಕ್ಕೆ ಭಯ, ಮಂಕುತನದ ಕೆಸರು ಹತ್ತದಂತೆ ಈಶನಿದ್ದಾನೆ. ಇಂಥ ನಿರ್ಮಲ ಮನಸ್ಸಿನವರು ಸತ್ಪಥದಲ್ಲಿ ಸಾಗುವ ರೀತಿಯರಿತು, ಎಲ್ಲ ಭಯವನ್ನು ತೊರೆದು ಭದ್ರವಾಗಿ, ಮನವನ್ನು ಬಯಲಲ್ಲಿ ಸೇರಿಸುವವರು ತಾರಕ ಬ್ರಹ್ಮರೇ ಸರಿ.

ಶುದ್ಧವಾದ ಮನದಲ್ಲಿ ಆತ್ಮವು ಪ್ರತಿಫಲಿಸಿದಾಗ, ಅದಕ್ಕೆ ಅರಗು ಅಂಟುವಂತೆ ಗಟ್ಟಿಯಾಗಿ ಅಂಟಿಕೊಂಡು ಚಂದ್ರನ ಬೆಳದಿಂಗಳಂಥ ಪ್ರಶಾಂತತೆಯಲ್ಲಿ ಉಳಿದು, ವೇದಾಂತ ವೇದ್ಯನಾದ ಪರಬ್ರಹ್ಮವನ್ನು ಶೋಧಿಸಬೇಕು.

ಮೌನಿಯಾಗಿ ಎಲ್ಲ ಪ್ರಕ್ರಿಯೆಗಳನ್ನು ಅರಿಯುವುದು ಉತ್ತಮ ಯೋಗವಾಗಿದೆ. ಮನಸ್ಸನ್ನು ಹರಿಯಬಿಟ್ಟು ಮತ್ತೆ ಅದನ್ನು ಅಂತರ್ಮುಖವಾಗುವಂತೆ ಆಲಿಸಿಕೊಳ್ಳುವುದು ಮಧ್ಯಮ ಮಾರ್ಗವಾಗಿದೆ. ಇನ್ನು ಆಸನಾದಿ ವಿಧಿಯಿಂದ ಮನಸ್ಸನ್ನು ನಿಗ್ರಹಿಸುವುದು ಅಧಮ ಯೋಗವಾಗಿದೆ.

ಮಾಯೆಯ ಪರದೆಯನ್ನು ಸರಿಸುವ ವಿಧವನ್ನು ಅರಿಯದ ಮನುಜರಿಗೆ ನೀಟ ಮಾರ್ಗವು ಸ್ಫುಟವಾಗಿ ಕಾಣುವುದಿಲ್ಲ, ಮಸುಕಾಗುತ್ತದೆ. ಮಾಯೆಯನ್ನು ದಾಟದ ಮನುಷ್ಯನ ಬಾಳು ವ್ಯರ್ಥವೇ ಸರಿ.

ಮನವನ್ನು ಈಗ ಅರಿಯುತ್ತಾನೆ,, ಮತ್ತೆ ಮರೆಯುತ್ತಾನೆ. ಈ ಅರಿವು–ಮರೆವುಗಳ ಆಟ ಸಾಗಿರುತ್ತದೆ. ಮನವನ್ನು ಆಳವಾಗಿ ಪರೀಕ್ಷಿಸಿ, ಕಂಡು, ಕೇಳಿ ಅರಿಯರು. ಅಡವಿಯಲ್ಲಿ ಗಿಡಕ್ಕೆ ಸುತ್ತಿದ ಬಳ್ಳಿಯ ಒಂದು ಭಾಗವು ಕಾಣಬರುತ್ತದೆ. ಇನ್ನೊಂದು ಭಾಗವು ಕಾಣದು. ಅದೇ ರೀತಿ ಮನದ ಅರಿವು–ಮರೆವುಗಳು. ಒಟ್ಟಾರೆ ಮನದ ನೆಲೆಯೇ ಮಾಯೆಯಾಗಿದೆ.

ಮನಸ್ಸಿನ ಆದಿಯನ್ನು ನೋಡಲು ಯಾರು ಸಮರ್ಥರು ? ಜ್ಞಪ್ತಿಯನ್ನು ಮೀರಿದ ಸ್ಥಿತಿಯದು. ತನಗಾಗುವ ಸುಖವನ್ನು ತಿಳಿದು, ಪ್ರಶಂಸೆಗಳಿಗೆ ಒಲಿದು ಉನ್ನತ ಮನವನ್ನು ನಿಮ್ನ ಸ್ತರಕ್ಕಿಳಿಸಿ ಕಣಿ ಹೇಳುವುದು ತರವಲ್ಲ. ವಾದ ಹೂಡುವುದರಲ್ಲಿ ಏನಿದೆ ? ಚಿದ್ಬ್ರಯಲು ಸೇರಿ, ಬಣ್ಣಿಸಿ ನೋಡಬೇಕು.

ನಿದ್ರೆಯಲ್ಲಿ ಅರಿವು ಇದ್ದರೂ ಬಾಹ್ಯ ಸಂವೇದನೆ ಮತ್ತು ಇಂದ್ರಿಯ ವ್ಯಾಪಾರಗಳು ನಿಂತಿರುತ್ತವೆ. ಆದರೆ ಸಮಾಧಿಯಲ್ಲಿ ಬಾಹ್ಯ ಪ್ರಜ್ಞೆಯೂ ಇರದು, ಜ್ಞಪ್ತಿಯೂ ಇರದು. ಹೀಗೆ ಅದು ನಿದ್ರೆಯೊಳಗಿನ ನಿದ್ರೆಯಾಗಿದೆ. ಇದುವೇ ಸುರಕ್ಷಿತವಾದ ಬ್ರಹ್ಮವಿದ್ಯೆಯಾಗಿದೆ. ನಿದ್ರೆಯ ಇನ್ನಿತರ ಸ್ಥಿತಿಗತಿಗಳಿರುವಾಗಲೂ ಅರಿವು ಜಾಗ್ರತವಾಗಿರುವವನೇ ಯೋಗಿಯಾಗಿದ್ದಾನೆ.

ಏಕಾಂತ ಸ್ಥಳದಲ್ಲಿ ಆತ್ಮವಿದ್ಯೆಯನ್ನು ಅರಿಯಬೇಕು. ಅದನ್ನು ಸಾಧಿಸಲು ಚಿತ್ತದ ಕತ್ತಲೆಯನ್ನು ಅಡಗಿಸಿ, ಕಿತ್ತು ಹಾಕಿ, ಆಗ ಅನುಭವಕ್ಕೆ ಬರುವ ಬೆಳದಿಂಗಳಂಥ ತಂಪಿನಲ್ಲಿ ಕೊನೆಗೆ ಸಂಕಲ್ಪಗಳನ್ನು ನಿಲ್ಲಿಸಬೇಕು. ಚಿತ್ತದಲ್ಲಿ ದೃಶ್ಯಗಳನ್ನೆಲ್ಲ ಅರಿಯದಿದ್ದರೆ, ಅವನೇ ಘನವಂತನು. ಅಂಥವನು ಊರಲ್ಲಿ ಇದ್ದರೇನು ? ಅರಣ್ಯದಲ್ಲಿ ಇದ್ದರೇನು? ಎರಡೂ ಒಂದೇ.

ವೇದಾಂತ ವೇದ್ಯವನ್ನು ಪಡೆಯಬೇಕಾದರೆ ಮನಸ್ಸನ್ನು ಶೋಧಿಸಬೇಕು. ಶೋಧಿಸುವವರನ್ನು ಶುದ್ಧಗೊಳಿಸಲು ಅವನೂ ಮುಂದಾಗುತ್ತಾನೆ. ಶೋಧಿಸಬಲ್ಲ ಬುದ್ಧಿವಂತನು ಸೇರುತ್ತಾನೆ.

ಉತ್ತಮ ಅಂಶಗಳನ್ನೇ ಸೋಸಿ ಗ್ರಹಿಸಬೇಕು. ಹೀಗೆ ಶುದ್ಧವಾದ ಉನ್ಮನದಲ್ಲಿ ಸೇರಿ, ಮಸ್ತ ಭಾವವು ಹೆಚ್ಚಾದಂತೆ, ಅದನ್ನು ಮರಳಿ ಭೂ ಪ್ರಜ್ಞೆಗೆ ತರಬೇಕು. ಮತ್ತು ಸತ್ತ್ವವನ್ನೂ ಮೀರಿ ನಿಂತು ಗುಣಾತೀತನಾಗಿ ಮುಕ್ತಿಯನ್ನು ಸಾಧಿಸಬೇಕು.

ಗುರಿಯನ್ನು ಗ್ರಹಿಸಿ, ಕದಲದಿದ್ದು, ಸರಿಯದಿದ್ದರೆ, ಆತ್ಮವು ತೋಚುವುದು. ಹೀಗೆ ತಿಳಿದುಬರುವುದೇ ವಿನುತವಾಗಿರುವುದು.

ಚಂಚಲವಾದ ಮನಸ್ಸು ಮನೆಯೊಳಗಿನ ಕೋತಿಯಂತಿದೆ. ಅದನ್ನು ತಿಳಿಯದೆ, ನಿಲಿಸದೆ, ಅತ್ತ ಇತ್ತ ಭ್ರಮಿಸುವವನು ತ್ರಸ್ತನಾಗುತ್ತಾನೆ. ಜನರು ಈ ಚಂಚಲವನ್ನು ನಿಲ್ಲಿಸಿ, ಮನಸ್ಸನ್ನು ಅರಳಿಸಲಾರದವರಾಗಿದ್ದಾರೆ.

ಉಪವಾಸ–ವನವಾಸ ಮಾಡಿ ಕಠಿಣ ಬದುಕು ನಡೆಸುವುದರಿಂದ ಯಾವ ಪ್ರಯೋಜನವಿದೆ ? ಬ್ರಹ್ಮವು ಸ್ಪರ್ಶಮಣಿಯಂತೆ ತನ್ನ ನಿಕಟಕ್ಕೆ ಬರುವುದನ್ನು ತನ್ನಂತೆ ಮಾಡುತ್ತದೆ. ಆದರೆ ಭೇದ ಬುದ್ಧಿಯನ್ನು ಬೆಳಗಿಸಿಕೊಂಡರೆ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಸಮತ್ವ ಉಳ್ಳವನೇ ಈ ಜಗತ್ತಿನಲ್ಲಿ ಯೋಗ್ಯನಾಗಿದ್ದಾನೆ.

ಆಂತರ್ಯದಲ್ಲಿ ವಿಜ್ಞಾನ ದೃಷ್ಟಿ ತಾಳಿ, ಜ್ಞಾನ ತಪಸ್ಸನ್ನು ಆಚರಿಸಿದರೆ ತಾನೇ ಸೂಕ್ಷ್ಮ ರೂಪವೆಂದು ತಿಳಿದುಬರುತ್ತದೆ. ಹೀಗೆ ಪೂರ್ವದ ಅಜ್ಞಾನವನ್ನು ಅದುಮಿದರೆ ಪ್ರಜ್ಞಾನವೇ ತುಂಬಿಕೊಳ್ಳುತ್ತದೆ. 'ಪ್ರಜ್ಞಾನಂ ಬ್ರಹ್ಮ ಇತ್ಯಾಹುಃ', 'ಇದುವೇ ಪ್ರಬಲವಾದ ಬ್ರಹ್ಮಪದವಿಯಾಗಿದೆ.'

ಅರಿವು ಮರೆವುಗಳ ಮಧ್ಯೆ, ಅಸಂಪ್ರಜ್ಞಾತ, ಪ್ರಜ್ಞಾತಗಳ ನಡುವೆ ಅರಿವು ತೂಗುಯ್ಯಾಲೆಯಾಡಿ, ಸರಿಯಾಗಿ ಇರುವುದನ್ನು ಎಳೆದು ಜಗ್ಗಿ ಗ್ರಹಿಸಬೇಕು. ಆಗ ಸಾಕ್ಷಿಮಾತ್ರನಾಗಿ ಉಳಿಯುವುದು ಯೋಗಿಯ ಅಮರ ಮುಕ್ತಿಯಾಗಿದೆ. ಹೀಗಿರುವವನೇ ಪ್ರಾಜ್ಞನು.

ಸೂಜಿಗಲ್ಲು ತನ್ನ ನಿಕಟದ ಲೋಹ ಚೂರುಗಳನ್ನು ತನ್ನಂತೆ ಮಾಡುತ್ತದೆ. ಅದೇ ರೀತಿ, ಆತ್ಮವೂ ಸಹ ತನ್ನ ನಿಕಟಕ್ಕೆ ಬರುವವರನ್ನು ಆತ್ಮರೂಪಿಗಳಾಗಿ ಮಾಡುತ್ತದೆ. ಆದ್ದರಿಂದ ಸಾಧನವನ್ನು ಸರಿಯಾಗಿ ಮಾಡಿ, ಸರಿ ಹೊಂದಿಸಿ ಪಾದವೂರಿದ ನರರು ಪರಮಾತ್ಮ ರೂಪರಾಗುತ್ತಾರೆ.

ಕನ್ನಡಿಯಲ್ಲಿ ತನ್ನ ರೂಪವೇ ಕಾಣುತ್ತದೆ. ಅದೇ ರೀತಿ, ಜಾಣನ ಮನದೊಳಗೆ ಸ್ವ–ಸ್ವರೂಪವೇ ಅನುಭವಕ್ಕೆ ಬರುತ್ತದೆ. ತನ್ನನ್ನು ಆತ್ಮಾರ್ಪಣ ಮಾಡಿಕೊಂಡ ಅರಿವಿನಲ್ಲಿ ತಾನು ಅಲೆದು ಕಂಡುಕೊಳ್ಳುವ ಅರಿವು ಮೂಡಿದವನೇ ತನ್ನನ್ನು ಅರಿಯುವನು.

**೩೪೯೧ ತಮವು ಮೀರಿದ ಧ್ಯಾನವು ತತ್‌ಪದವಾಯ್ತು,**
**ವಿಮಲ ಸುಜ್ಞಾನದಲಿ ಬಿಡದಿಗಂಡು,**
**ನಿರ್ಣಯವನ್ನು ಕಾಣುತಿಹ ನೆರೆ ಅರಿವಿನಲಿ, ವಿಶ್ವ**

**೩೪೯೨ ಧ್ಯಾನಿಸಲು ತತ್ತ್ವವೆನಿಪುದೆ ? ;**
**ಧ್ಯಾನಿಸದೆ ತಾ ಸುಮ್ಮನಿರಲು ತತ್ತ್ವವೆನಿಪುದೇ ?**
**ಧ್ಯಾನಿಪ ಧ್ಯಾನಿಸದೆರಡನು,**
**ಧ್ಯಾನಿಸುತ ಇದ್ದರಾಗಳೆ ತತ್ತ್ವವು ವೇಮಾ**

**೩೪೯೩ ಅಂತರಿಕ್ಷದಲ್ಲಿ ಅಮರಿದಂಥ ಲಿಂಗ**
**ಧ್ಯಾನ ಮಾಡಬೇಕು, ತಿಳಿಯಲಾತ್ಮ,**
**ಅಚ್ಚರಿಯೊಳಚ್ಚರಿ ! ಅಹುದು ಬೆನ್ನು ಬಿಡದೆ, ವಿಶ್ವ**

— — — — — — — — — — — — — — — — — — — — — —

೩೪೯೪ ಅಗ್ನಿ ಶಿಖೆಗಳಲ್ಲಿ ಅರಿಯುತ ಮಮಕಾರ,
ಅಭವ ಮೇಲೆ ಧ್ಯಾನ ಅಮರಗೊಳಿಸಿ,
ಆಹುತಿಯಾದ ಬಳಿಕ ಅರ್ಪಿಸುವುದು ಹರಗೆ, ವಿಶ್ವ

೩೪೯೫ ಎಂಥ ವಿಚಿತ್ರ ? ಮನಕೆ ಏನೇನೋ ತೋಚಲು,
ಚಿಂತೆ ಮಾಡಬೇಡ, ಸಿಕ್ಕು ಅಲ್ಲಿ,
ವಿಚಿತ್ರದೊಳಗೆ ಗುಟ್ಟು ವಿವರಿಸೆ ತಾನಾದ, ವಿಶ್ವ

೩೪೯೬ ಅಬ್ಬರದಿಂದ ಅಲ್ಲಿ 'ಆವಾಗ ಹೊಂದುವೆ'
ಸಾಗು ಹಾಕಿ ಮನಸು ಚೊಕ್ಕ ಅರಿತು,
ಮೊಳಗಿಸಿ ಪ್ರಣವ ರವ ಮೂಲವನು ಕಾಣಿರೊ, ವಿಶ್ವ

೩೪೯೭ ತೆರೆಯ ಮರೆಯಲಿರುವ ತೇಜವೆಲ್ಲ ಕಂಡು,
ಮತ್ತೆ ಬ್ರಹ್ಮನಲ್ಲಿ ಮನವ ನಿಲಿಸಿ,
ಗರಿಮೆಯುಳ್ಳ ಅಂಥ ಘನರು ಎಲ್ಲಿ ಉಂಟು ? ವಿಶ್ವ

೩೪೯೮ ವಿವೇಕವೆನ್ನುತಿಹ ವಿಚಿತ್ರ ಕೊಡಲಿಯಿಂ,
ಅವಿದ್ಯೆಯೆನ್ನುತಿಹ ಅಡವಿ ಕಡಿದು,
ದೊಡ್ಡ ಜ್ಞಾನವೆಂಬ ದೀಪ ಕೈಯೊಳು ಹಿಡಿ, ವಿಶ್ವ

೩೪೯೯ ಮನನ ವೃತ್ತಿ ಗೆಯ್ದು, ಸಮಾಧಿಯಲಿ,
ತನ್ನ ಜ್ಞಪ್ತಿ ಮರೆತು ತಾಳ್ಮೆಗೂಡಿ,
ಬೆಳೆಯುವಂಥ ಅವನೆ ಪ್ರಿಯ ಭಕ್ತನಾಗುವ, ವಿಶ್ವ

೩೫೦೦ ಚಿತ್ತ ವೃತ್ತಿಗಳ ಮನದಲ್ಲಿ ಸೇರದಿರಿಸಿ,
ರಿಕ್ತ ಬಯಲಿನಲಿ ಗುರಿ ಮೀರಿ ರಾತ್ರಿ ಹಗಲು,
ಮತ್ತನಾಗಿಹನೆ ತಾ ಹೋಗು, ಮಾನ್ಯನರಿಯೆ,
ಸತ್ಯ ತಿಳಿದೊಡೆ ಪಥ ಸೇರ್ವ, ಸರಣಿ, ವೇಮ

೩೫೦೧ ಮನವಿರುವೊಡೆ ಜಗವೆಲ್ಲವು,
ತನು ತೊರೆದಿರುವವರ ಪುಣ್ಯ ಸತ್ಯಥಾ ಸಕಲಂ,
ಮನನಿಸಿ, ಕೇಳುತ ಧ್ಯಾನಿಸು
ಅನಿಮಿಷನೇ ಇರಲಿ ತಿಳಿಯದಂತ್ಯವು ವೇಮ

— — — — — — — — — — — — — — — — — — — — — — — —

೩೫೦೨ ತಾನು ಸಂಕಲ್ಪ ರೂಪನ್ನೈ ತವಕದಲ್ಲಿ,
ತಾನು ಸಂಕಲ್ಪರಹಿತನಿರೆ ತಗಲಿ ಮುಕ್ತಿ,
ಮುಕ್ತಿಯೆನೆ ಚಿತ್ತ ಶೂನ್ಯವೈ ಮೋಕ್ಷವದುವೆ,
ಮತ್ತದರ ನಿಜವ ಕಂಡವನೆ ಮೌನಿ ವೇಮ !

೩೫೦೩ ಚಿತ್ತದಿ ಸಂಕಲ್ಪಂಗಳ
ನೀತಿಯನು ವರ್ಣಿಸಿದಾಗ, ನಿರ್ಮಲ ಪದವೈ ;
ಪ್ರೀತಿಯ ಹೊಂದಿದೆನೆಂಬರು,
ಭೂತಲದಲಿ ಪರಮ ಯೋಗಿ ಪುರುಷರು, ವೇಮಾ

೩೫೦೪ ಗಾಳಿಯಿರದ ದೀಪ ಕಳೆಯ ರೀತಿಯಂತೆ,
ಜಗದಲೆಗಳಿರದ ಜಲಧಿಯಂತೆ,
ನಿಶ್ಚಲಾತ್ಮನಾಗಿ ನಿರ್ವಿಕಾರದಿಂದ,
ಇರಲು ಮುಕ್ತಿ ಎನ್ನುತಿಹರು ವೇಮ

೩೫೦೫ ರೆಪ್ಪೆಗಳ ಮುಚ್ಚಿ ಮುಚ್ಚದೆ,
ತಪ್ಪದೆ ತನ್ನ ಮನದಲ್ಲಿ ತತ್ತ್ವವ ಕೂಡಲ್,
ತೆಪ್ಪಗೆ ನೋಡುತಿರುವಂಗೆ,
ಒಪ್ಪವಹ ಮುಕ್ತಿ ; ಇಲ್ಲಿಯೆ ಸುಲಭವು, ವೇಮಾ

೩೫೦೬ ಇರುಳು – ಬಿಸಿಲುಗಳಿಗೆ ಇದ್ದು ಮಧ್ಯದಲ್ಲಿ,
ನಿಂತು ಪೂರ್ಣ ಘಟದಿ ನಿದ್ರೆ ಗೆಯ್ದು,
ಪೂರ್ಣ ಪರಮ ತತ್ತ್ವ ಪರಿಕಿಸಲರಿಯರಲ ! ವಿಶ್ವ

೩೫೦೭ ಹೆಣಗಿ ಬಳಿಕ ನರನು ಹಿಡಿದು ಕಟ್ಟಿ ಕಾಮ
ಚಿತ್ತದಲ್ಲಿ ನುಣುಪು ಚಿತ್ರ ರೂಪ;
ಅಂತೆ ಇಳೆಯೊಳಿರುವ ಅವನೆ ಘನನು ಕಾಣು ವಿಶ್ವ

೩೫೦೮ ಮನಸು ಹಿಡಿದು ಗೆದ್ದು, ಮನದೊಳು ಸುಖ ಹೊಂದಿ,
ಕೊನೆಗೆ ಮೋಕ್ಷ ಪದವಿ ಕಾಣುತಿಹನು
ಗಿಡ ನೆಡುವವ ಫಲದ ಗೊನೆಯ ಪಡೆದುಕೊಳನೆ ? ವಿಶ್ವ

೩೫೦೯ ಸಿಕ್ಕು ದಕ್ಕದಲ್ಲ ಚಿಗುರಿ ಮನದ ಒಳಗೆ,
ನಿಕ್ಕಿ ಹಿಡಿದು ಗುರುತು ನೋಡಿ ಅರಿತು,
ಸಂತಸದಿಹ ಘನರು ಸೂತ್ರಾತ್ಮರಾಗುವರು, ವಿಶ್ವ

೩೫೧೦ ಆದಿಯೊಂದನು ತಿಳಿದು ಅದನೆ ಮನದಿ ನಿಲಿಸಿ,
ಆದಿ ಬಿಡದೆ ಇರಲು ಅಭವನಹನು ;
ಆದಿ ಬಿಡಲು ಅವನು ಅಂಧರ ರೀತಿಯೈ ವಿಶ್ವ

೩೫೧೧ ಮನಸಿನೊಳಗೆ ಇರುವ, ಮರ್ಮವೆಲ್ಲವರಿತು,
ಸ್ಥಿರವಗೊಳಿಸಿ ಆತ್ಮ ತೇಟ ಪಡಿಸಿ,
ಘಟವ ನಿಲಿಸಬೇಕು, ಘನತೆ ಇನ್ನೇತಕೆ ? ವಿಶ್ವ

೩೫೧೨ ಚಿತ್ತದಲ್ಲಿ ಶಿವನ ಚಿಂತಿಸುತ ನೋಡಲು,
ಹೊಂದಿ ಪಡೆವ ಪದವಿ ಹಾನಿಯಿರದೆ,
ಹೊಂದಿ ಮರೆತ ಅವನೆ ಹೊಂದುವ ಸುಖವನ್ನು ವಿಶ್ವ

೩೫೧೩ ಮನಸು ಸೇರಿ ಗೆದ್ದು, ಮನಸಿನೊಳು ಸುಖಿಸುತ,
ಕಡೆಗೆ ಮೋಕ್ಷ ಪದವ ಕಾಣುವವನು,
ಸಸಿಯ ನೆಟ್ಟು ಫಲವ ಸೇರದಿರುವನೇನು ? ವಿಶ್ವ

೩೫೧೪ ಮನದಿ ಅರಿಯುವವರು ಮಹಿಯಲೆಂದು ಕಾಣ
ಮನದಿ ಅರಿತ ನರನು ಮಹಿಯ ನರನು,
ಹುಡುಕಿ ತನುವಿನಲ್ಲಿ ಹರುಷದಿಂದ ನೋಡು, ವಿಶ್ವ

೩೫೧೫ ಪಟುತೆ ಮೀರಿ ಮನಸು ಪರಿಕಿಸಿ ನೋಡಿದೊಡೆ,
ಕೀಲಿ ತಿಳಿಯರಲ್ಲ ಕೊರಗುತಿಹರು,
ಜಟಿಲ ವೇಷವೇಕೆ ? ಜಯಿಸಿದವ ಸಾಧಿಪ, ವಿಶ್ವ

೩೫೧೬ ಸರುವಕೆ ಮನಸೇ ಕಾರಣ ;
ನಿರುತದಿ ನೋಡುತಿರಲಾತ್ಮನು ತಾನೆ ತಾನೈ
ಇರುವ ಸಮಯದಲಿ, ಎಲ್ಲಿಯೊ
ಇರುವುದು ; ಇದುವೆ ನಿಜವಿಹುದು ಕಾಣಾ ವೇಮಾ

೩೫೧೭ ಮನವ ಹೆಣಗಿ ಗೆದ್ದು, ಮನಸಿನಲ್ಲಿ ಸುಖಿಸಿ,
ಕೊನೆಗೆ ಮೋಕ್ಷ ಪದವ ಕಾಣುತಿರುವ ;
ಗಿಡವ ನೆಟ್ಟು ಫಲವ ಕಡೆಗೆ ಪಡೆಯದಿಹನೆ ? ವಿಶ್ವ

೩೫೧೮ ಮರ್ಮ ತಿಳಿಯಲಾರ ಮನಸು ಏಕವಿರದೆ,
ಪರ ರಹಸ್ಯವೆಲ್ಲ ಬಯಲಾಗದು
ಬಿದ್ದ ಮಾನವೆ ಬಯಲಾಗುವ ರೀತಿ ವಿಶ್ವ

೩೫೧೯ ಮರ್ಮವೆಲ್ಲ ಅರಿತು, ಮನಸು ಏಕವಾಗೆ,
ಪರ ರಹಸ್ಯವೆಲ್ಲ ಬಯಲು ಆಯ್ತು,
ಬೀಳುವವನ ಮಾನ ಬಯಲು ಆದ ರೀತಿ, ವಿಶ್ವ

೩೫೨೦ ಅಮರಾತ್ಮನ ಮಾನಸದಲಿ,
ವಿಮರಾಂತರ್ಗತಿಯಾಗಲಿ, ವಿವರಿಸಬೇಕೈ
ಕ್ರಮವಾಗಿ ಛಾಯೆಯೊಳಗಿನ
ಮಮಕಾರವ ನೂಕಬೇಕು, ಮಹಿಯಲಿ, ವೇಮಾ

೩೫೨೧ ಮನಸು ಚಲಿಸಬಿಟ್ಟು ಮನಸು ತಾ ತಿರುಗಿಸಿ,
ಮನಸಿನೊಳಗೆ ಇರುವ ಮರ್ಮವರಿತು,
ಮನಸು ತಾನು ನಿಲಿಸೆ ಮತ್ತೆ ತಾನೆ ಬ್ರಹ್ಮ, ವಿಶ್ವ

೩೫೨೨ ಮನಸು ಮುಕ್ತಿಯೆಂದು ಮನವನರಿಯರಯ್ಯ !
ಮನಸಿನಂತೆ ನಡೆದು ಮಾಯವಾಗಿ ;
ಮನಸು ಶುದ್ಧವಾಗೆ, ಮರ್ಮವರಿವ ಯೋಗಿ ವಿಶ್ವ

೩೫೨೩ ಮನವರಿಯದವನು ಮಹಿಯೊಳೆಂದು ಕಾಣ ;
ಮನವನರಿತಿಹ ನರನು ವಿರಳ ಜಗದಿ,
ಹುಡುಕಿ ತನುವೊಳಾನಂದದಿ ನಿನ್ನ ನೋಟ ! ವಿಶ್ವ

೩೫೨೪ ಮನಸಿನಲ್ಲಿ ಮುಕ್ತಿ ಮಡಗಿಕೊಂಡಿರುತಿರೆ,
ಮನಸು ಅರಿಯಲಿಲ್ಲ ಮನುಜರೆಲ್ಲ ;
ಮನಸು ಮಣಿಸಲಿಲ್ಲ ಮಾಯವಾದರಲ್ಲ ! ವಿಶ್ವ

— — — — — — — — — — — — — — — — — — — — — —

೩೫೨೫ ಮನಸಿನಲ್ಲಿ ಮುಕ್ತಿ ಮತ್ತೆ ಒಂದು ಕಡೆಗೆ,
ಹುಡುಕ ಹೋಗುವವನು ಹುಚ್ಚನಷ್ಟೆ,
ಕುರಿಯ ಬಗಲೊಳಿಟ್ಟು ಕುರುಬ ಹುಡುಕುವಂತೆ, ವಿಶ್ವ

೩೫೨೬ ಮನಸಿನಲ್ಲಿ ಮುಕ್ತಿ ಮತ್ತೆ ಅರಿತುಕೊಳದೆ,
ಮನಸಿನೊಡನೆ ತಗಲಿ ಮಾಯವಾದ್ರು
ಮನಸು ತಾನೆ ಇರಲು, ಮರ್ಮಜ್ಞನಹ ಯೋಗಿ, ವಿಶ್ವ

೩೫೨೭ ಮನಸು, ವಾಕ್ಕು, ಕರ್ಮ ಮತ್ತಾವುದು ಇರದೆ,
ಬರು ಹೋಗುಗಳಿರದ ಪರಮ ಪಥವು,
ಹೊಳೆಯೆ ಹಾನಿಯಿಲ್ಲ ; ಪರತತ್ತ್ವ ಯೋಗಿಗೆ, ವಿಶ್ವ

೩೫೨೮ ಮನದಲಿ ತಿಳಿವನು ಅದುಮುತ,
ಇನಿತಾದರು ಕಂಡು ಕೇಳರಿಯದೆ, ಬಳಿಸಾರಿ ಬಳಿಕಾ,
ಹೆಣಗಾಡಿ ಹಿಡಿದು ಕೊಂಡಿಹ,
ತನಗಹ ನೆಲೆ ಮಾಯೆ ಮಾಯೆ, ಮಹಿಯಲಿ, ವೇಮ

೩೫೨೯ ಮನದಿ ಅರಿಯದವನು ಮಹಿಯ ಕಾಣ ಹೊಂದಿ,
ಮನದಿ ಅರಿಯುವವನೆ ಮಹಿಯ ಮನುಜ,
ಹುಡುಕಿ ತನುವಿನಲ್ಲಿ ಹರ್ಷದಿ ನಿನ್ನ ನೋಡು, ವಿಶ್ವ

೩೫೩೦ ಗಗನಗಮ್ಯ ನಿರಾಲಯ ಗತಿಯ ಮನಸು,
ಸಮರಸತ್ವಕ್ಕಾಗಿ ಎಳಸಿ ಸಾಕ್ಷಿ ಇರುತ,
ಭ್ರಮೆಗಳಡಗಲು ಬ್ರಹ್ಮವು ಬಟ್ಟ ಬಯಲು,
ಕ್ರಮವ ತಿಳಿಯರು, ಒಳಗೆಲ್ಲಾ ತಮವೆ ವೇಮಾ

೩೫೩೧ ಮುರಿದೊಡಾಗ ಲೋಹ ಮೂರು ಬಾರಿ ಕೂಡ,
ಕಾಸಿ ಬೆಸೆಯುತಿಹನು ಕಮ್ಮಾರನು,
ಮನಸು ಮುರಿಯಲಾಗ, ಮತ್ತೆ ಬೆಸೆಯಬಹುದೆ ? ವಿಶ್ವ

೩೫೩೨ ಮನದಿ ಕಾಣಲಾರ ಮತ್ತೆ ಬ್ರಹ್ಮ ಮೂರ್ತಿ
ಮನದಿ ಕಾಣುವವರು ಮಹಿಯೊಳಿಲ್ಲ,
ಹುಡುಕಿ ತನುವಿನೊಳಗೆ ಹರ್ಷದಿಂದರಿವುದು,
ಅವನೆ ಯೋಗಿ ವರನು ಎಂದ್ರು ವೇಮ

— — — — — — — — — — — — — — — — — — — — — —

೩೫೩೩ ಮನಸಿನೊಳಗೆ ತಿಳಿದು, ಮನಸಿನೊಳಗೆ ಬೆರೆತು,
ಮನಸಿನೊಳಿರುವವನ ಮರಳಿ ಸೆಳೆದು,
ಮನಸು ನಿಲಿಸುವವನು ಮರ್ಮಜ್ಞನಹ ಯೋಗಿ ವಿಶ್ವ

೩೫೩೪ ಮನಸಿನೊಳಗೆ ತನ್ನ ಮತ್ತೆ ಚೊಕ್ಕವರಿಯೆ,
ಉರ್ವಿ ಜನರು ಅವನ ಯೋಗಿಯೆಂದು,
ನೀನು ನಿನ್ನನರಿಯೆ ನೀನೆ ಹೋಗು ಶಿವನು, ವಿಶ್ವ

೩೫೩೫ ಮನದಿ ಕಾಣಬಹುದು ಮತ್ತೆ ಬ್ರಹ್ಮಮೂರ್ತಿ,
ಮನದಿ ಕಂಡ ಅವನೆ ಮಹಿಮನಾದ,
ಹುಡುಕಿ ತನುವಿನೊಳಗೆ ಹರುಷದಿಂದರಸಲು,
ಅವನೆ ಯೋಗಿ ವರನು, ಅನುವರು ವೇಮ

೩೫೩೬ ಕಿಂಚಿನ್ಮಾತ್ರವೆ ಮನದಲಿ,
ಚಂಚಲತೆಯು ಹುಟ್ಟಲೀಗ ಜಾಗ್ರತೆಯಿಂದಾ ;
ಅಂಚಿತವಹ ಗುರು ಭಕ್ತಿಲಿ
ಮಿಂಚಲು ಪರಿಪೂರ್ಣ ಹೊಂದಿ ಬೆಳಗೈ ವೇಮಾ

೩೫೩೭ ಕಡಲ ನೋಡೆ ಅಲೆಗಳು ಕಡು ಚೋದ್ಯವಾಗಿಹವು !
ಮನಸು ನೋಡೆ ಭ್ರಮೆಯ ಮುದಿಸಿಯುಂಟು ;
ಪರಮ ನೋಡೆ, ಮನಸು ಪಡಿಪಾಟು ಪಡುವುದು, ವಿಶ್ವ

೩೫೩೮ ಮನಸು ಗೆಲಿದು ಹೆಣಗುತಿರುವ ಸುಜ್ಞಾನಿಗಳೆ,
ಕಡೆಗೆ ಮೋಕ್ಷ ಪದವಿ ಕಾಣುತಿಹರು,
ಸಸಿಯ ನೆಟ್ಟು ಫಲವ ಸೇರದಿರುವನೇನು ? ವಿಶ್ವ

೩೫೩೯ ಮನವ ಒಂದು ತಾಣ ಮಾಣದೆ ನಿಲ್ಲಿಸುತ,
ಬೋಧೆಯುಡುಗುತಿರಲು, ಹೊಂದಿಕಾಯ್ತು,
ನಿಶ್ಚಲತೆಯ ಚೊಕ್ಕ ನಿಲಿಸುವುದೆ ಸಮಾಧಿ, ವಿಶ್ವ

೩೫೪೦ ಮನಸು ಕುದುರೆ ಮಾಡಿ, ಮಾಯೆಯ ಹತ್ತಿಸುತ್ತ,
ಮೋಸಗೊಳಿಪ ಬ್ರಹ್ಮ ಮೂರ್ಖ ಜನರ ;
ಬ್ರಹ್ಮನಡತೆ ತಿಳಿಯೆ, ಬ್ರಹ್ಮಜ್ಞಾನಿ ಬಲ್ಲ, ವಿಶ್ವ

೩೫೪೧ ಅಂಥ ವಾರ್ತೆ ಮಹಿಮೆ ಅರಿಯದೆ ಭುವಿಯಲ್ಲಿ,
ಮಿಡುಕುತಿಹುದು ಮನಸು ಮಿಡತೆ ರೀತಿ,
ಗಟ್ಟಿಯಾಗಿ ನಿಲಿಸೆ, ಘನ ಶಿವಯೋಗಿಯೈ, ವಿಶ್ವ

೩೫೪೨ ಭಯವು ಇರದ ಮನದಿ ಪರಮ ಈಶನುಂಟು,
ಮಂಕು ಬುದ್ಧಿ ಕಳೆದು, ಮಟ್ಟು ಹಾಕು ;
ಪಂಕದಲ್ಲಿ ಹುಳುವು ಬಿದ್ದು ಹೊರಳದೇನು ? ವಿಶ್ವ

೩೫೪೩ ಮನಸು ನಿರ್ಮಲವಿರಲು ಮಹಾ ನೀತಿ ತಿಳಿದು,
ಭಯವನೆಲ್ಲ ತೊರೆದು ಭದ್ರವಾಗಿ,
ತಾವು ಸೇರಿಸುವವರು ತಾರಕ ಬ್ರಹ್ಮವೇ, ವಿಶ್ವ

೩೫೪೪ ಮೇಘವಡ್ಡ ಬರಲು ಮಿಹಿರ ಮರೆಯಾಗುವನು,
ಚಿತ್ತವಡ್ಡ ಬರಲು ಸ್ಥಿರತೆ ಕೇಡು,
ಮರೆವು ಅಡ್ಡಬರಲು ಮತ್ತೆ ಮುಕ್ತಿ ಕೆಡುಗು, ವಿಶ್ವ

೩೫೪೫ ಕೊಂಪೆಯಲ್ಲಿ ಇದ್ದು, ಕೋರಿಕೆಗಳ ಭೇದಿಸಿ,
ಪೊರೆವ ಹೃದಯವಂತೆ ಭದ್ರಪಡಿಸಿ,
ಗೃಹವ ನಿಲಿಸುವವನು ಬಹು ತತ್ತ್ವ ವೇದಿಯು, ವಿಶ್ವ

೩೫೪೬ ಚಿತ್ತ ದೀಪದಂತೆ ಚಿಂತೆಯಡಿಗೆ ಮೆಟ್ಟಿ,
ಮಿತ್ರನಾಗು ಮನದ ಮಲವಡಗಿಸಿ
ಶತ್ರು ಗುಣಗಳೆಲ್ಲ ಸಾಧಿಸಿದೊಡೆ ಮುಕ್ತಿ, ವಿಶ್ವ

೩೫೪೭ ಅರಗುವಂಟುವಂತೆ, ಚಂದ್ರ ಬೆಳಗುವಂತೆ,
ಪ್ರತಿಫಲಿಸುವ ಗುರಿಯು ಪರಿಣಮಿಸಲು,
ಶೋಧಿಸಬೇಕು ಮನದಿ ವೇದಾಂತ ವೇದ್ಯನ, ವಿಶ್ವ

೩೫೪೮ ಸುಮ್ಮನಿದ್ದು ತಿಳಿಯೆ, ಉತ್ತಮ ಯೋಗವದು,
ಮನಸು ಒಲಿಸಿಕೊಳಲು ಮಧ್ಯಮವದು,
ಆಸನಾಧಿ ವಿಧಿಯು, ಅಧಮ ಯೋಗ ಕಣಾ, ವಿಶ್ವ

೩೫೪೯ ಮಾಯೆ ಹೋಹ ವಿಧವ, ಮನುಜರು ಅರಿಯದಿರೆ,
ನೀಟ ಮಾರ್ಗ ಮಸುಕು ನರ ಜನರಿಗೆ
ಮಾಯೆ ದಾಟದಂಥ ಮನುಜ ವ್ಯರ್ಥನಿಹನು, ವಿಶ್ವ

೩೫೫೦ ಶತ್ರುವರರನರಸಿ, ಶೀಘ್ರವೆ ಸಲೆ ಹಣಿದು,
ಮಿತ್ರ ವರ್ಗಗಳನು ಮೇಲು ಗೆಯ್ದು,
ಪೂರ್ಣ ಕಾಂತಿ ಕಂಡು ಪಿಂಡ ಮಧ್ಯದಲ್ಲಿ,
ಅರ್ಥಿ ನಿಲಿಸುವವನು ಹರನು ವೇಮ

೩೫೫೧ ಸಿಕ್ಕುದಕ್ಕದಿರದು ಚಿಗುರುತ ಮನದೊಳಗೆ,
ನಿಕ್ಕಿ ಹಿಡಿದು ಗತಿಯನರಿತು ನೋಡಿ.
ಸಂತಸಿಸುವ ಘನರು ಸೂತ್ರಾತ್ಮರಾಗುವರು, ವಿಶ್ವ

೩೫೫೨ ಮನವನು ಅರಿವನು, ಮರೆವನು,
ಕಾಣುತ ಕೇಳರಿಯರು ಸಲೆ ಪರಿಕಿಸುತಾಗಳ್,
ವನ ಲತೆ ತರು ಸುತ್ತಿದ ಪರಿ,
ಮನ–ನೆಲೆಯೇ ಮಾಯೆ ಮಾಯೆ ಮಹಿಯಲಿ ವೇಮಾ

೩೫೫೩ ಒಂದೆ ಮನಸಿನಿಂದ ಉಂಟು ಸಕಲ ತಾನು,
ಹುಚ್ಚು ಹಿಡಿದು ನರರು ಹೋಗುತಿಹರು,
ಚುಕ್ಕೆಯರಿತು ನಡೆವ ಸಾಲನೇನು ಓರ್ವ ? ವಿಶ್ವ

೩೫೫೪ ಅಚ್ಚು ಬಿದ್ದ ಮನಸು ಮೆಚ್ಚಿಸಿ ಕೈ ಹಿಡಿದು,
ಮುದ್ದುಗೊಳಿಸಿ ಶಿವ ಮೂರ್ತಿ ಕಂಡು,
ಕುತ್ಸಿತವನು ಅಳಿಸಿ, ಉತ್ಸುಕ ನಡೆಯೆ ಯೋಗ, ವಿಶ್ವ

೩೫೫೫ ನೂಕಿ ನೂಕಿ ಕೊಂಚ ತೂಗುತ ಬಿಟ್ಟೊಡನೆ,
ತೂಗು ಅಷ್ಟೆ ; ಗಮ್ಯ ತಲುಪಲಾರ,
ಪಟ್ಟು ಹಿಡಿದು ಗೆಯ್ಯೆ, ಪಕ್ವವಾಯ್ತು ಕೆಲಸ, ವಿಶ್ವ

೩೫೫೬ ಅರಸಬಹುದು ಪರವ ಅರಿತು ರೂಢಿಯಿಂದ,
ಕಾಣಬಹುದು ಗುಡ್ಡೆ ಕದಲದಿದ್ದು,
ರೆಪ್ಪೆ ಮುಚ್ಚದಿರಲು ಇಪ್ಪುದೆರಡರ ಮಧ್ಯೆ, ವಿಶ್ವ

೩೫೫೭ ಆದಿಗಂಟಿ ನೋಡೆ, ಅಳವೆ ಅರಿಗೇನು ?
ಕಣಿಯ ಹೇಳಲು ತರವೆ, ಸುಖವನರಿತು ?
ವಾದವೇಕೆ ? ಬಯಲು ವರ್ಣಿಸಿಕೊಂಡಿರೋ, ವಿಶ್ವ

೩೫೫೮ ಚಿತ್ತವೆಂಬ ಬೇರು ಶಿಥಿಲವಾಗಲಾಗ,
ಪ್ರಕೃತಿಯೆಂಬ ಮರವು ಪತತಿ ನೋಡು,
ಕೋರಿಕೆಂಬ ದೊಡ್ಡ ಕೊಂಬೆಗಳೊಣಗುವವು, ವಿಶ್ವ

೩೫೫೯ ಮನಸು ನಿಲಿಸಿದಂತೆ ಮರ್ಮಜ್ಞರಾಗುವರು,
ಶ್ರೇಷ್ಠ ಮೋಕ್ಷ ಪದವ ಸೇರುತಿಹರು,
ಸಸಿಯ ನೆಟ್ಟು ಫಲವ ಸೇರದಿಹನೆ ತಾನು ? ವಿಶ್ವ

೩೫೬೦ ರೆಪ್ಪೆಯ ಮುಚ್ಚಿಯು ಮುಚ್ಚದೆ,
ತಪ್ಪದೆ ತನ್ನ ಮನದಲ್ಲಿ ತತ್ತ್ವವು ಕೂಡಲ್,
ಒಪ್ಪವು ಸಂತತ ನೋಳ್ಪಗೆ,
ಬಪ್ಪುದು ಎಲ್ಲೆಡೆ ಮುಕ್ತಿಯು ಸುಲಭದಿ ವೇಮಾ

೩೫೬೧ ಮನಸಿನೊಳಗೆ ಇರುವ ಮರ್ಮವೆಲ್ಲ ಅರಿತು,
ಸ್ಥಿರವ ಗೆಯ್ದು ಆತ್ಮ ತೇಟಗೊಳಿಸಿ
ಘಟವ ನಿಲಿಸಬೇಕು ಘನತೆ ಇನ್ನೇತಕೆ ? ವಿಶ್ವ

೩೫೬೨ ರಮ್ಯವಾದ ಮನಸು ರಾಜನೆಂದು ಬಗೆದು,
ಗಮ್ಯ ತಾಣವದನು ಗಟ್ಟಿ ಗ್ರಹಿಸಿ,
ಮತ್ತೆ ಪೂರ್ಣ ಪದವಿ ಮಹಿಯ ಒಳಗೆ ನೋಡು, ವಿಶ್ವ

೩೫೬೩ ದಟ್ಟ ತಮವ ತೊರೆದು, ತನುಗಳನ್ನು ಮರೆತು,
ಪರಮನಲ್ಲಿ ಮನಸು ಬಯಲು ಮಾಡಿ,
ಬಳಿಯೊಳು ಇರುವಂಥ ಬಲು ಘನರು ಇರುವರೆ ? ವಿಶ್ವ

೩೫೬೪ ಪಡೆಯಲು ಆಗದು ಪೂರ್ಣವ,
ಗಡಬಡಿಸದೆ ಮನನದಲ್ಲಿ ಎದುರಿಸಿದಾಗಳ್,
ಸಿಡಿಮಿಡಿಗೊಳ್ಳದೆ ನಿಲಿಸುತ,
ಬಿಡದಿದ್ದೊಡೆ ಬಟ್ಟಬಯಲೆ, ಹೊಳೆವುದು, ವೇಮ

೩೫೬೫ ಉದರ–ಪೋಷಣದನ್ನಕಾಗಿ ಉಬ್ಬಬೇಡ,
ಮನದಿ ಒಳಗುಟ್ಟು ಬಿಡದಿದ್ದು, ಮರ್ಮ ತಿಳಿದು,
ಸದಯ–ಹೃದಯವಿಹ ಶಿವಯೋಗಿ, ಶಾಶ್ವತಿದ್ದು,
ಉಪಮೆ ಸಾಧಿಸುತ ಮೀರುವ ; ಉರ್ವಿ ವೇಮ

೩೫೬೬ ಸ್ನೇಹದಿಂದ ಮುಂದೆ ಚಿಂತಿಸಿ ಗಗನವನು,
ಬಲದಿಂದ ನುಸುಳುವ ಭಾವ ಮೂಡಿ,
ಫಲ ವಿಹೀನವಾದ ಭಾವ–ಚಿನ್ಮಯವಾಂತು,
ವಿಲಯ ಹೊಂದುವವನು ವಿಭುವು ವೇಮ

೩೫೬೭ ಕದಲದಿದ್ದು, ಮನವ ನಿಲಿಸಿ, ಗಟ್ಟಿ ಗ್ರಹಿಸಿ,
ನಿದ್ರೆಯೊಳಗೆ ನಿದ್ರೆಯ ನೋಡುತ ನಿಂತು ತಿಳಿವು
ಆದರದಿರುತಿರುವವ ಹೋಗು ಬ್ರಹ್ಮ ಸಮನು
ಇದುವೆ ಸಂತೋಷಗಳಿಗೆಲ್ಲ ಪಥವು ವೇಮ

೩೫೬೮ ಭದ್ರವಾದ ಮನಸು ಬಲಪಡಿಸುತಿರೆ ಬಳಿಕ,
ಬಳಿಕ ಇಹುದು ಪರವು ವಶವೆ ಆಗಿ,
ನಿದ್ರೆಯೊಳಗೆ ನಿದ್ರೆ ನಿಲಿಸಿಕೊಂಡು ನೋಡು ವಿಶ್ವ

೩೫೬೯ ದಿವ್ಯವಾದಂಥ ಪರಶಿವ ತೇಜಗೊಳಿಸಿ,
ಭವ್ಯವಹ ಯುಕ್ತಿ ಮನದೊಳಗೆ ಭದ್ರಗೊಳಿಸಿ,
ಸೇವ್ಯನಾಗಿಪ್ಪುದೇ ಮುಕ್ತಿ, ಸ್ಥಿರವು, ಕಾಣು,
ಕಾವ್ಯದಲಿ ಬರದು ; ಗುರು ಬೋಧೆಗುಂಟು ವೇಮ

೩೫೭೦ ನಿದ್ರೆಯೊಳಗೆ ನಿದ್ರೆ, ನಿಜವಾಗಿ ತಿಳಿದೊಡೆ,
ಭದ್ರವಾದ ವಿದ್ಯೆ, ಬ್ರಹ್ಮವಿದ್ಯೆ,
ನಿದ್ರೆ ತಿಳಿಯುವವನು ನಿರ್ಮಲ ಯೋಗಿಯೈ, ವಿಶ್ವ

೩೫೭೧ ನಿದ್ರೆಯಲ್ಲಿ ನಿದ್ರೆ ; ನಿರ್ಭೇದ್ಯ ಮನವಾಯ್ತು,
ತಾಮಸದಲಿ ನಿದ್ರೆ ತೊಲಗಹಚ್ಚಿ,
ಸತತ ಮನದಿ ನೆನೆಯೆ, ಸರ್ವದಾ ಯೋಗಿಯೈ, ವಿಶ್ವ

೩೫೭೨ ಸರ್ವವೊಂದೆ ಆಗಿ ಸಮಗಂಡು ಧ್ರುವವ ;
ರೆಪ್ಪೆ ಬಡಿಯಬೇಡ ರಾತ್ರಿ ಹಗಲು
ಹಗಲಿನೊಳಗೆ ಹಗಲು ಪರಮಾತ್ಮ ಭಾವವು, ವಿಶ್ವ

೩೫೭೩ ಒಳಗೆ ಭದ್ರಪಡಿಸಿ ಒಳ ವಿಕಾರಗಳನು,
– ಅ. ತಿಳಿದು ಹಿಡಿಯುವವರು ತಿಳಿಯುವವರು,
ಆಗಸದೊಳಾನಂದ ಅರಿತು ಹೊಂದುತಿಹರು, ವಿಶ್ವ

– ಆ. ಬಿಟ್ಟ ರಾತ್ರಿ ಬಿಟ್ಟು ತ್ವರೆಯಿಂ ತನು ದಾಟಿ,
ಪರಮನಲ್ಲಿ ಮನಸು ಭದ್ರ ಪಡಿಸಿ,
ಗರಿಮೆ ಹೊಂದಿದಂಥ ಘನರೆಲ್ಲು ಇಲ್ಲ, ವಿಶ್ವ

– ಇ. ಮನದೊಳಗರಿವುದು, ಮರೆವುದು,
ಅನುದಿನ ಕಾಣುತಿರಲಾರದೆ ಕೂಡಿ ಬಳಿಕಾ
ಹೆಣಗುತ ಹಿಡಿದಿಹೆನೆನ್ನಲು,
ಮನಸೊಕ್ಕ ಮಾಯಲಾಡಿಯು ಮಹಿಯಲಿ ವೇಮಾ.

– ಈ. ಇದುವೆ ಪರಮವೆಂದು ಮನಕೆ ತೋಚೆ ಸಾಕು,
ಮನಸು ಚತುರು ; ಕೋರ್ಕೆ ಮಟ್ಟ ಹಾಕಿ,
ಸುಧೆಯನೀಂಟುವವನು ಸುಳಿಗೆ ಬಿದ್ದು ಸಾಯ್ವನೇ ? ವಿಶ್ವ

೩೫೭೪ ಅದು ಇದೇನೆಂದು ತೋಚೆ,
ಸದನವ ಗುರುತಿಸುತೊಳಗೇ ಸಾಧಿಸುತದನೇ,
ಕುದುರಿದ ಬ್ರಹ್ಮಾನಂದವ,
ಕದಲದೆ ಮನಬೆರೆಯೆ, ನುಗ್ಗು, ಕಾಣಾ, ವೇಮಾ

೩೫೭೫ ಮನಸಿನಲ್ಲಿ ತಿಳಿದು, ಮನಸಿನಲ್ಲಿ ಬೆರೆತು,
ಮನಸಿನೊಳಗಿರುವನ ಸ್ಥಿರ ಪಡಿಸಿ,
ಮನಸು ನಿಲಿಸುವವನೆ ಮರ್ಮಜ್ಞನಹ ಯೋಗಿ, ವಿಶ್ವ

೩೫೭೬ ತನುವ ಶೋಧ ಮಾಡಿ, ದೈವ ಲಕ್ಷ್ಯ ಮಾಡಿ,
ಮುನ್ನ ಕರ್ಮಗಳನು ಮೂಲ ಕಿತ್ತು,
ಮನಸು ನಿಜವ ಮಾಡಿ ಮಮತೆಯೆಲ್ಲ ರೋಸಿ,
ಮೊನೆಗೆ ನಿಲ್ಲುವವನು ಮೋಕ್ಷಿ ವೇಮ

೩೫೭೭ ಛಾಯೆಯೊಳಗೆ ಛಾಯೆ ಚೊಕ್ಕ ಗುರುತಿಸುತ್ತ,
ಕೊಯ್ಯಬೇಕು, ಭ್ರಮೆಯ ಕೊಂಕು ಇರದೆ
ಮಾಯ ಮಾಯವಾಯ್ತು ಮಹಿ ತತ್ತ್ವವೆನುವರುವಿಶ್ವ

೩೫೭೮ ಅನ್ಯರಿಲ್ಲದ ಸ್ಥಲದಲಿ ಆತ್ಮವಿದ್ಯೆ,
ಚಿತ್ತ ತಿಮರವನು ಅಡಗಿಸಿ ಕಿತ್ತು ಹಾಕಿ,
ಪೂರ್ಣ ಬೆಳದಿಂಗಳು ಕಾಂತಿಯಲಿ ಬಗೆದು ನೋಡು,
ಆಗ ಆನಂದವ ಹೊಂದುತಿರು, ಬೇಗ ವೇಮ

೩೫೭೯ ಪರಮ ಸಿದ್ಧಿಗಾಗಿ ನೋಟ ನೇರಗೊಳಿಸಿ,
ಶ್ರವಣ ಮನನ ವೃತ್ತಿ ಸಂಗ್ರಹಿಸುತ,
ಅರಿವು ಮರೆಯುವವನೆ ಏಕಾಗ್ರ ಚಿತ್ತನು, ವಿಶ್ವ

೩೫೮೦ ಯಾವ ಸಾಧನಗಳ ಹೊಂದಲು ಏನು ಫಲವು ?
ತಾಮಸಾನ್ವಿತವಹ ಉಕ್ತಿ ತಗುಲದಿದ್ದು,
ನೇಮ ನಿಷ್ಠೆಗಳು ಮನದಲ್ಲಿ ನೆಲೆಸಬೇಕು
ಮನಸು ನಿಲುಗಡೆ ಕಾಂಬಂತೆ ಮಾಡು ವೇಮಾ

೩೫೮೧ ಕಡೆಗೆ ಸಂಕಲ್ಪಗಳ ಕಟ್ಟಿ ಹಾಕಿ ಸಕಲ,
ಚಿತ್ತದಿನಿತರಿಯದೆ ಚಿತ್ರ ರೂಪ,
ಅಂತೆ ಇಷ್ಟ ಅವನು ಅರಿಯೆ ಘನನು,
ಕಾಡಿನೊಳಗೆ ಏನು ? ನಾಡೊಳೇನು ವೇಮ

೩೫೮೨ ಸೂಕ್ತಗೊಳಿಸಿ ಮನಸು, ಸರ್ವೇಶ ಭಾವದಿ,
ವಕ್ರ ತೊಡೆಯುವವನ ವಂಶವೃದ್ಧಿ,
ವಕ್ರ ತೊಡೆಯುವನಕ ವರಿಸಬಹುದೆ ಪದವ ? ವಿಶ್ವ

೩೫೮೩ ಉತ್ತಮಾಂಶ ಸೋಸಿ ಉನ್ಮನಿಯೊಳು ಸೇರಿ,
ಮತ್ತು ಮೀರಿದಂತೆ, ಮರಳಿಸಲ್ಕೆ,
ಸತ್ತ್ವವನ್ನು ಮೀರಿ ಸಾಧಿಸುವನು ಮುಕ್ತಿ, ವಿಶ್ವ

೩೫೮೪ ಇದು ಅದು ಕಾಣದೆ ಮನದಲಿ,
ಚೆದರದೆ ಗುರು ಹೊಂದಿ, ಕೈ ಹಿಡಿದು ಕಂಡಾಗಳ್,
ಕದಲದೆ, ಅಲುಗದೆ ತೋಚಲು
ವಿಧಿತವು ಅಲ್ಲಿಯೆ ಬೆಸಗೊಂಡು ಬೆಳಗು ವೇಮಾ

೩೫೮೫ ಇದು ಇರದೆ ನಡೆಯದೆನ್ನುತ,
ಅದಾವ ವಸ್ತುವಿರೆ, ಮನದಿ ಮಮತೆಯಹ ಮತಿಂ
ಅದುಮಿ, ತೊರೆದು, ಹೋಗಲಾರ,
ಬಿಡು ನಡೆ ಸಂಸಾರ ಬೀಜ ಮನದಿ ವೇಮಾ

೩೫೮೬ ದೃಶ್ಯವಿದ್ದುದನ್ನು ತಿಳಿದು ನಂಬಿದಂತೆ,
ಬರಿಯದನೆ ನಂಬಿ ಬೀಳ ಬೇಡ,
ಆದ ದೃಶ್ಯವಿರಲಿ ; 'ಆದನೆ' ಕಾಣೆಯೇಕೆ ? ವಿಶ್ವ

೩೫೮೭ ಕದಲದ ಗುರು ಜೊತೆಗೆ ಕಂಡು ಕೈ ಹಿಡಿಯಲು,
ಅಲುಗದೆ ಸರಿಯರೆ ತೋಚುತಿಹುದು ;
ವಿದಿತವಾವುದದುವೆ ವಿನುತವಾಗಿ ಇಹುದು, ವಿಶ್ವ

೩೫೮೮ ಅಭವನ ಮನದಲಿ ಕಾಣುತ,
ಶುಭಕರವಹ ನೋಟ ಹೊಂದಿ, ಸೊಂಪಿಲಿ ಅರಳಲ್,
ಅಭಿಮುಖ ದೃಷ್ಟಿಯ ಹೊಂದುತ,
ರಭಸವೆ ಇರದಂಥ ಅರಿವು ಬೆಳಗಿತು ವೇಮಾ !

೩೫೮೯ ಮನೆಯ ಒಳಗೆ ಕೋತಿ, ಮತ್ತದನೆ ಕಾಣದೆ,
ತಿರುಗ ಹೋಗುವವನು ತ್ರಸ್ತನಿಹನು.,
ಕೋತಿಯೊಂದ ನಿಲಿಸಿ ಕುದುರಲಾರರಲ್ಲ ? ವಿಶ್ವ

೩೫೯೦ ಏನು ತಿನ್ನದೆ ಬದುಕಲು ಏನು ಉಂಟು ?
ವಾದಕೆ ಸಿಕ್ಕಲಾರದ ಪರುಷ ಕಾಣು,
ಭೇದ ಬುದ್ಧಿಯ ನೋಡಲು ಬಾರದೆದಕು
ಸಮತೆಯುಳ್ಳವನೆ ಯೋಗ್ಯನೀ ಜಗದಿ ವೇಮ

೩೫೧ ವಿಜ್ಞಾನ ದೃಷ್ಟಿ ಒಳಗಿರೆ,
ಸುಜ್ಞಾನ ತಪವ ಗೆಯ್ಯಲು ಸೂಕ್ಷ್ಮವು ನೀವೇ,
ಅಜ್ಞಾನವು ಅದುಮಿ, ತುಂಬಿರೆ
ಪ್ರಜ್ಞಾನವು, ಬ್ರಹ್ಮ, ಪದವಿ ಪ್ರಬಲವು ವೇಮ

೩೫೨ ಜೀಕಿ ಜೀಕಿ ಜಗ್ಗಿ, ಸರಿಗಂಡು ಇರುವುದೆ,
ಎಳೆದು ಜಗ್ಗಿ ಹಿಡಿದು, ಆಗಿ ಸಾಕ್ಷಿ,
ಯೋಗದಮರ ಮುಕ್ತಿ ಆಂತು ಇರುವ ಪ್ರಾಜ್ಞ, ವಿಶ್ವ

೩೫೩ ಸೂಜಿಗಲ್ಲಿನಂಥ ಸೂತ್ರವಿಹುದು, ಆತ್ಮ,
ಸಾಧನಗಳ ದಾಟಿ, ಸರಿಯಗೊಳಿಸಿ,
ಪಾದವಿಟ್ಟ ನರರು ಪರಮಾತ್ಮರೂಪರು, ವಿಶ್ವ

೩೫೪ ದರ್ಪಣದಲ್ಲಿ ಸ್ವ–ರೂಪ ತಗಲಿದಂತೆ,
ಜಾಣ್ಮೆ ಕುದುರಿದ ಮನದೊಳಗೆ ಸ್ವಸ್ವರೂಪ,
ಅರ್ಪಣದಲ್ಲಿ ಅರಿವಿನೊಳು ಅಲೆದು ನೋಡಿ,
ಅರಿವು ಮೂಡಿದವನೆ ತನ್ನ ಅರಿವ ವೇಮ

●

## ೩. ತಿಳಿವಿನಾಚೆಯ ಸಾಧನ

ತ್ರಿಗುಣಗಳಲ್ಲಿ ಸತ್ತ್ವಗುಣವು ಸೂಕ್ಷ್ಮತಮವಾಗಿದೆ. ಸತ್ತ್ವಗುಣವೆಂದರೆ ಜ್ಞಾನ ಸಂಗ ಮತ್ತು ಅನಂದ ಸಂಗ. ಸತ್ತ್ವ ಗುಣವನ್ನೂ ಮೀರಿ ಹೋಗುವ ಸಾಧನವೊಂದಿದೆ.

ಮೂಲದಲ್ಲಿ ಪರತತ್ತ್ವವನ್ನು ತಿಳಿಯಬೇಕೆಂದರೆ, ಅದು ತಿಳಿವಿನ ಅಳವಿನಲ್ಲಿ ಬರದು. ಏಕೆಂದರೆ ತಿಳಿವಿನಾಚೆಗಿದೆ. ಆತ್ಮದ ರಹಸ್ಯವನ್ನು ಮನದಲ್ಲಿ ಭಾವಿಸಿ ಯೋಚಿಸಿದರೆ, ಬ್ರಹ್ಮನ ಕಲ್ಪನೆ ಮೂಡುತ್ತದೆ. ಪ್ರತ್ಯಕ್ಷವಿರದ ಆತ್ಮ ನಿಧಿಯ ಪ್ರತ್ಯಕ್ಷ ಪ್ರಕಟಣೆಯೆಂದರೆ, ಜೀವರಿಗಾಗುವ ಪಾಶ ಕ್ಲೇಶಗಳಿಂದ ಮುಕ್ತಿ. ವೇಮನರು ಈ ಬ್ರಹ್ಮ ಕಲ್ಪನೆಯನ್ನು, ಈ ಶಕ್ತಿರೂಪವನ್ನು ಸನ್ನುತಿಸಿದರು.

ಬ್ರಹ್ಮವೆಂದರೆ ಪರಮದೈವ. ಆದರೆ ಅದು ತಿಳಿವಿನ ಅಳವಿಗೆ ಬಾರದು. ನರನೇ ಇರಲಿ, ಸುರನೇ ಇರಲಿ, ಬ್ರಹ್ಮನನ್ನು ತಿಳಿಯಲಾರ. ಉಸುಕಿನಲ್ಲಿ ಭಾವಿ ತೋಡಿದರೆ ನೀರು ಬರದು. ಅದೇ ರೀತಿ ತಿಳಿವು ಎಂಬ ಉಸುಕಿನಲ್ಲಿ ಬ್ರಹ್ಮನೆಂಬ ಜಲದ ಸೆಲೆ ಸಿಗದು.

ಆದ್ದರಿಂದ ಸತ್ತ್ವ ಗುಣವನ್ನು ಅಂದರೆ ತಿಳಿವಿನ ಸಂಗವನ್ನು ದಾಟಿ ಹೋಗಬೇಕು. ಆಗ ಕಳೆಯು ಬೆಳಗುತ್ತದೆ. ಆತ್ಮಾನುಸಂಧಾನವನ್ನು ಮುಂದುವರಿಸಿದರೆ, ಕಳೆಯೂ ಉಡುಗುವುದು. ಅಲ್ಲಿ ಬಯಲನ್ನು ಕಾಣು. ಬಯಲಿಗಂಟಿ ನೋಡಿದರೆ ಬ್ರಹ್ಮವನ್ನೂ ಕಾಣಬಹುದು.

ತಿಳಿವಿನಾಚೆಗೆ ಹೋದ ಅರಿವಿನಲ್ಲಿ ತಾನು ಬೇರೆ, ಬ್ರಹ್ಮ ಬೇರೆ ಎಂಬ ಭೇದವಿಲ್ಲ. ಅರಿವು–ಮರೆವುಗಳ ಮಧ್ಯೆ ಯೋಗಾಭ್ಯಾಸಿಯು ಜೀಕಾಟವಾಡುತ್ತಿರುತ್ತಾನೆ. ಆಗ ಅವನನ್ನು ಯೋಗೀಂದ್ರನೆನುವುದು ಸೂಕ್ತ. ಇಂಥ ಸ್ಥಿತಿಯಲ್ಲಿ ಇದ್ದವರಲ್ಲಿ ವೇಮನಯೋಗಿವರ್ಯರು ಪ್ರಖ್ಯಾತರು.

ಜ್ಞಾತೃವಾರು ? ಜ್ಞೇಯವಾವುದು ? ಜ್ಞಾನವಾವುದು ? ಎಂದು ತಿಳಿವಿನೊಳಗೆ ತಿಳಿದು, ಜ್ಞಾತೃ, ಜ್ಞೇಯ ಮತ್ತು ಜ್ಞಾನಗಳನ್ನು ಒಂದಾಗಿಸಿ, ತಿಳಿಯುವವನು ಇರದ ತಿಳಿವನ್ನು ಪಡೆಯುವುದೇ ತಕ್ಕ ರೀತಿಯಾಗಿದೆ. ಹೀಗೆ ತಿಳಿವಿನೊಳಗೆ ಇರುವ ತ್ರಿಪುಟಿಯನ್ನು ತಿಳಿದರೆ, ಅದೇ ತತ್ತ್ವವಾಗುತ್ತದೆ.

ತಿಳಿವು ಹೊಂದಿದ ಮನುಷ್ಯನು ತನ್ನ ಮನದ ಚಂಚಲತೆಯನ್ನು ನೀಗಿ, ಅಚಲನಾಗುವನು. ದೈವವನ್ನು ಅವನು ತಿಳಿದರೆ, ನಿಶ್ಚಿತ ವೃತ್ತಿಯಾದ ಧೀಶಕ್ತಿಯು ಅಂಟಿಕೊಳ್ಳುತ್ತದೆ. ಉದಯ ರವಿಯನ್ನು ಕಂಡು ಕತ್ತಲೆಯು ನಿಲ್ಲದಲ್ಲವೇ ? ಅದೇ ರೀತಿ ದೈವವನ್ನು ಅರಿತರೆ, ಚಂಚಲತೆಯು ದೂರಾಗುವುದು.

ತನಗೊದಗುವ ಕಷ್ಟ–ನಷ್ಟಗಳನ್ನೆಲ್ಲ ತಿಳಿದರೆ, ಅದೇ ಅರಿವಿಗೆ ಮೂಲವಾಗುತ್ತದೆ. ಅದೇ ರೀತಿ ತತ್ತ್ವಗಳನ್ನು, ನೀತಿ ಮಾರ್ಗ ಮೂಲಕ ಅರಿತುಕೊಂಡರೆ, ಆತ್ಮವೇ ಉಗಮ ಸ್ಥಾನವೆಂದು ವೇದ್ಯವಾಗುವುದು. ಹೀಗೆ ಆತ್ಮದ ಅರಿವು ಮೂಡಿದರೆ, ಅವನು ಧೀರನಾಗಿ ಬಾಳುತ್ತಾನೆ.

ದೀಪವನ್ನು ಗಾಜುಗೊಳವೆಯಲ್ಲಿ ಇಟ್ಟರೆ, ಅದು ಗಾಳಿಯ ಹೊಡೆತವನ್ನು ತಪ್ಪಿಸಿಕೊಂಡು, ನಿಶ್ಚಲವಾಗಿರುತ್ತದೆ. ಆದರೆ ಗಾಜಿನ ಪಾರದರ್ಶಕ ಗುಣದಿಂದಾಗಿ ಪ್ರಕಾಶವನ್ನೂ ಬೀರುತ್ತದೆ. ಅದೇ ರೀತಿ, ತಿಳಿದ ಜನರ ದೇಹದ ಅಂತರಾಳದಲ್ಲಿ ಜ್ಞಾನವು, ನಿಶ್ಚಲವಾಗಿರುತ್ತದೆ ಮತ್ತು ಪರಿಸರವನ್ನು ಪ್ರಕಾಶಿಸುತ್ತದೆ.

ಮನದಲ್ಲಿಯೇ ಸಾಧನದ ಕೀಲಿ ಕೈ ತಿಳಿದು, ಕೇವಲಾತ್ಮವನ್ನು ಸೇರಿ, ಭಾವದುಂಬಿ, ಚಿದ್ಬಯಲನ್ನು ತಲುಪಬೇಕು. ಮತ್ತು ಅದನ್ನು ಸೇರಿ ಚೊಕ್ಕವಾಗಿ ಹೊಂದಿಕೊಳ್ಳಬೇಕು.

ನಮ್ಮ ಲಕ್ಷ್ಯವು ತತ್ತ್ವಾವಳಿಯ ಆದಿಯಾದ ಆತ್ಮ, ಇದನ್ನಾದರೂ ನೋಡುತ್ತ ಅನುಸಂಧಾನಿಸಿದರೆ, ಅಲ್ಲಿ ಅನುಭವ ಕ್ಷೇತ್ರ ಅಂದರೆ ಲೋಕವಾಗುತ್ತದೆ. ಹೀಗೆ ನಿರ್ಗುಣ ಮತ್ತು ಸಗುಣಗಳ ತಿಳಿವು ಮರೆವುಗಳನ್ನು ದಾಟುವುದೇ 'ತತ್

ಮಯ'ರಾದಂತೆ. ಅಂದರೆ ಅದರಲ್ಲಿ ಮುಳುಗಿದಂತೆ. ಆ ಆತ್ಮಾನುಭವದಲ್ಲಿ ನಿತ್ಯ ಆನಂದವಿರುತ್ತದೆ.

ನಿತ್ಯ ಸಾಧನದಿಂದ ಫಲವುಂಟು. ಮರದ ಎರಡು ಕೊರಡುಗಳನ್ನು, ಅಂದರೆ ಅರಣಿ–ಉತ್ತರಾರಣಿಗಳನ್ನು, ತಿಕ್ಕುತ್ತಿದ್ದರೆ ಅಲ್ಲಿ ಬೆಂಕಿ ಹುಟ್ಟುತ್ತದೆ. ಇನ್ನು ಮೊಸರನ್ನು ಕಡೆದರೆ, ಅದರಲ್ಲಿ ಅಡಗಿದ್ದ ಬೆಣ್ಣೆ ಹೊರಬರುತ್ತದೆ. ಬೆಣ್ಣೆ ಕಾಯಿಸಿದರೆ ತುಪ್ಪವಾಗುತ್ತದೆ. ಅದೇ ರೀತಿ, ತನುವಿನಲ್ಲಿ ತಿಳಿಯುತ್ತ ಹೋದಂತೆ, ಇಂದ್ರಿಯ, ಚಿತ್ತ, ಅಹಂ, ಮಹತ್, ಪ್ರಕೃತಿಗಳ ಮೂಲದಲ್ಲಿ ಆತ್ಮ ತತ್ವವು ಗೋಚರಿಸುತ್ತದೆ.

ಮನದ ವಿಸ್ತಾರವು ಸುತ್ತು ಮುತ್ತು ಹಬ್ಬಿರಬಹುದು. ಇಲ್ಲವೆ ಮೇಲೆ–ಕೆಳಗೆ ಹಬ್ಬಿರಬಹುದು. ಸುತ್ತ ಮುತ್ತ ಪಸರಿಸುವ ಮನವು ಲೌಕಿಕ ರಂಗವಾಗಿದೆ. ಆದರೆ ಮೇಲೆ ಕೆಳಗೆ ಅಂದರೆ ಸ್ಥೂಲ–ಸೂಕ್ಷ್ಮಗಳ ದಾರಿಯಲ್ಲಿ ವಿಸ್ತರಿಸುವ ಮನವು ಸಾಧಕ–ಮನವಾಗಿದೆ. ಇಂಥ ಯಾವ ವಸ್ತುವೇ ಇರಲಿ; ಅದನ್ನು ಸ್ಥೂಲ–ಸೂಕ್ಷ್ಮಗಳ ದೃಷ್ಟಿಯಿಂದ ನೋಡಬೇಕು. ಅಲ್ಲಿ ಯಾವ ಘರ್ಷಣೆಗಳಿಲ್ಲದ ತಿಳಿವನ್ನು ಹೊಂದಿ, ಒಲಿದು ನೀಟವಾಗಿ ನೋಡಬೇಕು. ಅದುವೇ ಜಾಣ ವಿದ್ಯೆಯಾಗಿದೆ.

ಜ್ಞಾನವು ಸುತ್ತುಮುತ್ತಿನ ಅರಿವು; ಸುಜ್ಞಾನವು ಸ್ಥೂಲ–ಸೂಕ್ಷ್ಮಗಳ ಅರಿವು. ಹೀಗೆ ಜ್ಞಾನದ ಗತಿಯನ್ನು ಲೌಕಿಕ ಬಾಳಿಗಾಗಿ, ಸುಜ್ಞಾನದ ಗತಿಯನ್ನು ಪರದ ಪ್ರಾಪ್ತಿಗಾಗಿ ತಿಳಿಯುವ ದೈವಜ್ಞರಾದವರು ಅರಸಿ ನೋಡಿದರೆ, ಹಾಲು–ನೀರುಗಳ ಮಿಶ್ರಣದಿಂದ ಬರೀ ಹಾಲನ್ನೇ ಬೇರ್ಪಡಿಸಿ ಕುಡಿಯುವ ಹಂಸದ ವಿವೇಕವನ್ನು, ವಿಂಗಡಣೆಯ ಸಾಮರ್ಥ್ಯವನ್ನು ಹೊಂದುತ್ತಾರೆ.

ಲೌಕಿಕದ ಅರಿವು ಇರುವಾಗ ತತ್ತ್ವವನ್ನು ಅರಿಯುವುದು ಹೇಗೆ ? ಇನ್ನು ಇರದಾಗಲಂತೂ ತತ್ತ್ವವನ್ನು ಅರಿಯಲಾರನಷ್ಟೇ ? ಅಂದ ಮೇಲೆ ಅರಿವಿಗೂ ಸಿಕ್ಕದ ಮತ್ತು ಮರೆವಿಗೂ ಸಿಕ್ಕದ ನಿಜವನ್ನು ಅರಿಯುವವನೇ ಅರಿವನು.

ಅರಿವು–ಮರೆವುಗಳಲ್ಲಿ ಏನೇನೋ ತೋಚುತ್ತದೆ ? ಆದರೆ ಯೋಗಿಯು ಸತ್ಯವಾಗಿ ಸರಿಯಾದ ಗುರಿ ತಲುಪಿರಬೇಕು, ಅಲ್ಲಿ ಪರಮ ನಿರ್ಗುಣವನ್ನು ಚೆನ್ನಾಗಿ ಪರೀಕ್ಷಿಸಿ ನೋಡಬೇಕು.

ಸಾಧಕನಿಗೆ ನಿರಾಲಯವಾದ ಚಿದಾಕಾಶವೇ ಗಮ್ಯ ಸ್ಥಾನವಾಗಿದೆ. ಅತ್ತ ಸಾಗಿದ ಮನವು ಅದರೊಂದಿಗೆ ಸಮರಸಗೊಳ್ಳಲು ಬಯಸುತ್ತದೆ ಮತ್ತು ಸಾಕ್ಷಿಯಾಗಿಯೂ ನಿಲ್ಲುತ್ತದೆ. ಹೀಗೆ ತನ್ನ ಪರಮ ಲಕ್ಷ್ಯದಿಂದ ಭ್ರಮಿತನಾಗದಿದ್ದರೆ, ಬ್ರಹ್ಮವು ಬಟ್ಟಬಯಲೆನಿಸುತ್ತದೆ. ಈ ದಿಶೆಯಲ್ಲಿ ಯಾವುದು ತರ, ಮತ್ತಾವುದು ತಮ ಎಂಬ ಕ್ರಮವನ್ನು ಅರಿಯದಿದ್ದರೆ, ಒಳಗೆಲ್ಲವೂ ತಮವೇ ತುಂಬಿರುತ್ತದಷ್ಟೇ.

— — — — — — — — — — — — — — — — — — — — — —

ಅವರವರಿಗೆ ಅವರವರ ಹಾದಿ ತಿಳಿದಿರುತ್ತದೆ. ಜೇನಿನೊಳಗೆ ಹೋಗಿ ಬರುವ ಕಿಂಡಿಯು ಜೇನು ನೊಣಕ್ಕೆ ವಿದಿತವಿದೆ. ಇತ್ತ ಹೂವಿನ ಮಕರಂದದ ದಾರಿ ತುಂಬಿಗೆ ತಿಳಿದಿರುತ್ತದೆ. ಅದೇ ರೀತಿ, ಭಕ್ತನಿಗೆ ಪರಮ ಯೋಗಿ ಇರುವ ಪರಿಯು ತಿಳಿಯುತ್ತದೆ.

"ಜೀವಾತ್ಮ ಪರಮಾತ್ಮ ಸಂಯೋಗೋ, ಯೋಗ ಇತ್ಯುಚ್ಯತೇ." ಅಂದರೆ ಜೀವಾತ್ಮ ಪರಮಾತ್ಮರ ಸಂಯೋಗಕ್ಕೆ ಯೋಗವೆನ್ನುತ್ತಾರೆ. ಈ ಯೋಗವು ನೀರಿನಲ್ಲಿ ಉಪ್ಪು ಕರಗಿ ಒಂದಾದಂತೆ, ಇನ್ನು ಮನವು ಪರಮಾತ್ಮನಲ್ಲಿ ಒಂದಾಗುವುದೆಂದರೆ, ಕರ್ಪೂರವು ತನ್ನನ್ನು ಇಲ್ಲಗೊಳಿಸಿ, ಜ್ಯೋತಿಯಲ್ಲಿ ಸೇರಿದಂತೆ. ಮುಕ್ಕಣ್ಣನು ಮೂಡುವ ರೀತಿ ಈ ಬಗೆಯದು.

ಅತ್ಯಂತ ಸೂಕ್ಷ್ಮ ದೃಷ್ಟಿಯೊಳಗೆ, ಮತಿಗೆ ಹರ್ಷವುಂಟಾಗುವಂತೆ, ಶಿವನನ್ನು ಧ್ಯಾನಿಸುತ್ತ ಇರಲು, ಆಗ ಮೋಕ್ಷ ಪ್ರಾಪ್ತವಾಗುತ್ತದೆ. ಅದೇ ನಿರ್ವಾಣ ಪದವಿ ಪ್ರಾಪ್ತಿಗೆ ಸಾಕ್ಷಿಯೂ ಆಗಿದೆ.

ಒಂದು ಮನೆಯಲ್ಲಿ ದೀಪವೇ ಇಲ್ಲದಿದ್ದರೆ, ಆಗ ಪಸರಿಸಿದ ಕತ್ತಲಲ್ಲಿ ರೂಪವನ್ನು ತಿಳಿಯಲಾರರು. ಆದರೆ ಅರಿವಿನ ದೀಪವಿದ್ದಾಗ ಸತ್ಪಥವನ್ನು ಹಿಡಿಯದೆ ಪಾಪದತ್ತ ಸಾಗುವ ಪಥವನ್ನೇಕೆ ಹಿಡಿಯುವರೋ ?

ಜ್ಞಾನ–ಮುದ್ರೆಯಿಂದ ಮೇಲ್ಮೆಯೆಂದು ಮುನಿಗಳು ಹೇಳಿದ್ದಾರೆ. ಹೀಗೆ ಹೇಳಿದುದನ್ನು ಅರಿಯುವುದೇ ಪರಮಾರ್ಥವಲ್ಲವೇ ?

ದೇಹದಲ್ಲಿ ಮೇರು ದಂಡವಿದೆ. ಊರ್ಧ್ವದಲ್ಲಿ ಶಿಖರ ಪ್ರಾಯವಾಗಿ ಸಹಸ್ರಾರ ಚಕ್ರವೂ ಇದೆ. ಇದನ್ನು ಉನ್ಮತ್ತತೆಯಲ್ಲಿ ಜ್ಞಪ್ತಿ ಮೀರಿ, ನೋಡಬೇಕು. ಕಂಡು ಕಾಣದ ಅರಿವು ಮರೆವುಗಳ ತೂಗುಯ್ಯಾಲೆಯ ಜೀಕಾಟದಲ್ಲಿ ಕದಲದೆ ಇರಬೇಕು. ಆಗ ಧ್ವನಿಸುವ ರವವನ್ನು ಕೇಳಿ, ಕೇಳುವವನು ಅದರಲ್ಲಿ ಲಯಿಸಿ ಕೇಳದೆ, ಅನುಭವಿಸುವವನೇ ವಿಮಲಾತ್ಮನು.

ಶಿಶುವು ತನ್ನ ನೆರಳಿನಂತೆ ಇದೆ. ತನ್ನಿಂದ ಆಗಿದೆ. ಅದನ್ನು ತಾನೇ ನೋಡುತ್ತ ನೋಡುತ್ತ ಆಸಕ್ತಿ ಮೋಹಗಳು ಕುದುರಿ, ತನ್ನನ್ನೇ ಮರೆಯುತ್ತಾನೆ. ಅದೇ ರೀತಿ, ತಾನೇ ಆದ ಆತ್ಮವನ್ನು ಅರಿಯದೆ ಅದರ ನೆರಳಿನಂತಿರುವ ದೇಹದ ವ್ಯಾಪಾರಗಳಲ್ಲಿ ಆಸಕ್ತರಾಗುವ ಭ್ರಾಂತರನ್ನು ಏನೆಂದು ಕರೆಯಬೇಕು ?

ಗಡಿಗೆ ತಯಾರಿಸಲು ಮಣ್ಣಿನ ಮುದ್ದೆ ಮಾಡಿ ಅದನ್ನು ಬೆಂಕಿಯಲ್ಲಿ ಸುಡುತ್ತಾರಷ್ಟೇ. ಆಗ ಬೆಂಕಿ ಅದರಲ್ಲಿ ಸೇರಿ ಗಟ್ಟಿ ಮಾಡುವುದು. ಮುಂದೆ ಸುಟ್ಟ ಗಡಿಗೆಯು ಆರುತ್ತದೆ. ಆಗ ಬೆಂಕಿಯು ಎಲ್ಲಿ ಹೋಗುತ್ತದೆ ? ಅದೇ ರೀತಿ, ಆತ್ಮ

ದರ್ಶನಕ್ಕಾಗಿ ಮನವನ್ನು ದೃಢಗೊಳಿಸುವ ಅರಿವು ಆತ್ಮಾನುಭವದ ನಂತರ ಎಲ್ಲಿ ಹೋಗುತ್ತದೆ ?

ಲೌಕಿಕ ಜ್ಞಾನವನ್ನು ಚೆನ್ನಾಗಿ ಸಂಚಯಿಸಿದವನು ಅತ್ತಿತ್ತ ಅಲೆಯುವುದನ್ನು ನಿಲ್ಲಿಸುತ್ತಾನೆ. ಮತಿಯನ್ನು ಅತಿಶಯಿಸುತ್ತಾನೆ. ತಾನಿರುವ ವಾಸ ಭೂಮಿಯನ್ನು ಬಿಡದೆ, ಒಂದಗುಳು ಹಿಸುಕಿ ನೋಡಿದರೆ ಎಲ್ಲ ಅಗಳುಗಳು ಬೆಂದಿವೆಯೆಂಬ ತಿಳಿವು ಪಡೆಯಬಹುದೆಂಬ ಉಪಮೆಯನ್ನು ಹೊಂದಿ ತನ್ನ ಶರೀರ ಭಾವವನ್ನು ಮೀರಿ ತತ್ತ್ವಜ್ಞನಾಗುತ್ತಾನೆ.

ಕರ್ಮ ಸನ್ಯಾಸ ಕೈಕೊಂಡ ಯೋಗಿಯು ತಾನು ಸಂಗವನ್ನು ಕಡಿದು ಹಾಕುತ್ತಾನೆ. ನಿರ್ಮಲ ಜ್ಞಾನದಲ್ಲಿ ಪರಿಪೂರ್ಣ ನಿಷ್ಠೆ ತಾಳುತ್ತಾನೆ. ಇದರ ಹಿಂದಿನ ಮರ್ಮವರಿಯುವುದೇ ಮೌನವಾಗಿದೆ. ಈ ಧರ್ಮವನ್ನು ಧರೆಯ ಜನರಿಗೆ ಬೋಧಿಸಬೇಕು. ಅದರಲ್ಲಿಯೇ ನಿರತನಾಗಿರುವವನು, ಅರಿವಿನಾಚೆಯ ತತ್ತ್ವವನ್ನು ಅನುಭವಿಸಬೇಕೆಂದು ಕೋರಿ, ಆಲಸ್ಯವಿಲ್ಲದೆ ಅಲ್ಲಿ ಹೊಂದಿಕೊಳ್ಳಬೇಕು.

ಮನದಲ್ಲಿ ಸಂಕಲ್ಪ–ವಿಕಲ್ಪಗಳ ಅಲೆಗಳು ಇಲ್ಲವಾಗಬೇಕು. ಅಂದರೆ ಮನವು ತೆರೆಗಳಿಲ್ಲದ ಜಲಧಿಯಂತೆ ಪ್ರಶಾಂತವಾಗಿರಬೇಕು. ಅಲ್ಲಿ ತಿಳಿವು ಹೊಂದಿ, ತನ್ನನ್ನು ತಾನು ತಿಳಿಯಬೇಕು. ಅವನನ್ನೇ ಧರೆಯ ಜನರು ಸಜ್ಜನ ಎಂದು ಮನ್ನಿಸುತ್ತಾರೆ.

ಕಡಲು ನೋಡಿದರೆ, ಅಲೆಗಳು ಬಹಳ ಆಶ್ಚರ್ಯಕರವಾಗಿ ತೋರುತ್ತವೆ. ಅದೇ ರೀತಿ ಭ್ರಮಿತ ಮನಸ್ಸಿನ ಅಲೆದಾಟವೂ ಇದೆ. ಪರಮನನ್ನು ಒಮ್ಮೆ ಅನುಭವಿಸಿದರೆ, ಆ ಪ್ರಶಾಂತತೆಯನ್ನು ಉಳಿಸಿಕೊಂಡು ಪರಿಪಾಟಲನ್ನು ನಿಲ್ಲಿಸು.

ನಿತ್ಯವೂ ಮನದಲ್ಲಿ ತತ್ತ್ವವನ್ನು ಅರಿತು, ಆ ಸ್ಥಿತಿಯನ್ನು ನಿಲ್ಲಿಸಿಕೊಂಡರೆ, ಆಗ ಶಿವನು ಪ್ರತ್ಯಕ್ಷನಾಗಿದ್ದಾನೆ ಎನ್ನಬಹುದು. ಅಂಥವನು, ಸತ್ಯವಾದ, ಜ್ಯೋತಿಯನ್ನು ಕಾಣುತ್ತಾನೆ. ನಿತ್ಯವೂ ಅಂತರ್ಯದಲ್ಲಿ ತೃಪ್ತಿ ಹೊಂದಿ ಸುಖಿಸುತ್ತಾನೆ. ಕೊನೆಗೆ ಭ್ರಮೆಯ ಗಾಳಿಯಿರದ ಚಿದಾಕಾಶದಲ್ಲಿ, ಸಂಕಲ್ಪವಿಕಲ್ಪನಾಗುತ್ತಾನೆ. ಇದನ್ನೇ ಬೇರೊಂದು ಉಪಮೆಯಿಂದ ಹೇಳುವುದಾದರೆ ಮನಸ್ಸು ಯೋಗಿಗೆ ಕರ್ಪೂರದಂತೆ, ಆಗ ಜ್ಞಾನವು ದೀಪ ಶಿಖೆಯಂತೆ, ದೀಪ ಶಿಖೆಗೆ ಸೋಂಕಿ ಕರ್ಪೂರವು ಉರಿಯುತ್ತದೆ. ಕರ್ಪೂರವು ಉರಿದಷ್ಟು ದೀಪವು ಜ್ವಲಿಸುತ್ತದೆ. ಇದೇ ರೀತಿ ಆತ್ಮಾನುಭವವಾದಂತೆ ಮನಸ್ಸು ನಿಲ್ಲುತ್ತದೆ. ಮನಸ್ಸು ನಿಂತಷ್ಟು, ಆತ್ಮಾನುಭವವು ಘನೀಭೂತವಾಗುತ್ತದೆ.

ಯೋಚಿಸಿದಾಗಯೋಚಿಸುವವನೇ ಇಲ್ಲವಾಗಿ ಶೂನ್ಯ ತತ್ತ್ವವು ಅನುಭವವೇದ್ಯವಾಗುತ್ತದೆ. ಹೀಗೆ ಯೋಚಿಸುವವನ ಇಲ್ಲವೆಯಿಂದ ಅನುಭವಿಸುವುದನ್ನೇ ಶೂನ್ಯ ತತ್ತ್ವವೆನ್ನಬಹುದು. ಏಕೆಂದರೆ, ಯೋಚಿಸಿದಷ್ಟು ತಿಳಿವು ಉಂಟಾಗುವುದು. ಆದ್ದರಿಂದ ತಿಳಿವಿನಾಚೆಯ ತತ್ತ್ವವು ಯೋಚಿಸುವುದು ನಿಂತಾಗ ಮಾತ್ರ ಸಾಧ್ಯ.

---

ಸುಧಾ ರಸವನ್ನೇ ಹೊಟ್ಟೆ ತುಂಬುವಷ್ಟು ಕುಡಿದ ಬಳಿಕ, ಮನಸ್ಸು ಹಾಲಿನ ಮೇಲೇಕೆ ಹರಿಯಬಹುದು ? ಅದೇ ರೀತಿ, ನಿಜ ತತ್ತ್ವವನ್ನು ಅರಿತ ಬಳಿಕ ಇತರ ತತ್ತ್ವ ಸಂಕುಲದ ಮಾತೇಕೆ ? ಆದ್ದರಿಂದ ಸಾಧಕನು ಪರ ಚಿಂತೆ ಮಾಡದೆ, ಪೇಚಾಡದೆ, ಭೂ–ಪ್ರಜ್ಞೆಯನ್ನು ಮರೆತು, ಆತ್ಮ ಪ್ರಜ್ಞೆಗೆ ಅರಗಿನಂತೆ ಅಂಟಿ, ಅಲ್ಲಿ ಸರಸಾಟವಾಡಬೇಕು.

ಎಲ್ಲವನ್ನೂ ಕಂಡರಿತ ಜ್ಞಾನಿಗಳು ಯುಗ ಯುಗಾದಿಗಳಲ್ಲಿ ಇದ್ದಾರೆ. ಪ್ರಲಯವಿದ್ದಾಗಲೂ ಪ್ರಾಣ ಹಾನಿಯೇನಿಲ್ಲ. ಪ್ರಳಯವಿದ್ದರೆ, ಪರಮಾತ್ಮನಲ್ಲಿ ಲಯಿಸುವನಷ್ಟೇ.

ಆತ್ಮ–ಅನಾತ್ಮಗಳನ್ನು ವಿಂಗಡಿಸುವ ವಿವೇಕ ಬುದ್ಧಿಯು ಕುದುರಿ, ಸ್ವಾತ್ಮಾನುಗತಿಯ ಎಲ್ಲೆಯನ್ನೂ ಮೀರಿ, ಸ್ವಚ್ಛಂದವಾಗಿ ಆತ್ಮದಲ್ಲಿ ವಿಹರಿಸುವ ಮಹಾತ್ಮನನ್ನು ಹೊಗಳುವುದು ಸಾಧ್ಯವೇ ?

ಶಿವ ಮಂದಿರದಲ್ಲಿ ಇರಿಸಿದ ದೀಪವು ಆ ಮಂದಿರವನ್ನೆಲ್ಲ ಬೆಳಗುವಂತೆ, ಶಿವಯೋಗಿಯ ಜ್ಞಾನ ದೀಪವು ಇಡೀ ಭುವಿಯನ್ನೇ ಬೆಳಗುತ್ತದೆ. ಶಿವ ಧ್ಯಾನವೇ ಸಾಧಕನ ಊರುಗೋಲು. ಅದನ್ನು ಹಿಡಿದುಕೊಂಡು ಊರುತ್ತ ಸಾಗುತ್ತಾನೆ. ಮಂಗವು ಗಿಡದ ರೆಂಬೆಯನ್ನು ಊರುಗೋಲಾಗಿ ಹಿಡಿದು ಜಿಗಿಯುವಂತಿದು. ಅದೇ ತನ್ನೊಳಗೆ ಕಾಣುವ ಜ್ಯೋತಿಯೆಂಬ ಊರುಗೋಲನ್ನು ಹಿಡಿದು 'ಸೋಹಂ' ಜಿಗಿತಕ್ಕೆ ಅಣಿಯಾಗಬೇಕು.

ಸತ್ತ್ವ ಗುಣವು ಜ್ಞಾನ ಸಂಗಿಯಾಗಿದೆ. ಅಂದರೆ ಅರಿವು, ಎಣಿಕೆ ಹಾಕಿ ನೋಡಿದರೆ, ಅರಿಯುತ್ತಲೇ ಹೋಗುವುದು. ಆದ್ದರಿಂದ ಇಹವನ್ನು ತೊರೆದು, ಪರವನ್ನು ತಾಕಿ, ನೋಡಿ, ಹಿಡಿದ ಹಿಡಿತವನ್ನು ಬಿಡದೆ ಮುಂದೆ ಸಾಗಿದರೆ, ಚಿದ್ಬಯಲನ್ನು ಸೇರಿ, ಕೊನೆಗೆ ಗುಣ ರಹಿತನಾಗುತ್ತಾನೆ. ಅಂತೂ ಸತ್ ಗುಣವನ್ನೂ ಮೀರುತ್ತಾನೆ.

ಭೂಮಿಯ ಬಾಳು ಭವ ಸಾಗರ. ಅಲ್ಲಿ ಪಾರಾಗುವ ಈಜು ಕಲೆಯೇ ಜ್ಞಾನ. ಈ ಕಲೆಯನ್ನು ಕಲಿತವನು, ಜಲಸಂಧಿಯೆಂಬ ತಮವನ್ನು ಜಡಿಯುತ್ತಾನೆ. ತನ್ನ ಪರಿಮಿತ ಜ್ಞಾನದ ನಿಲಯದ ಕಟ್ಟನ್ನು ದಾಟುವ ಛಲವನ್ನು ಬಿಡಲಾರನು.

ಪರಿಪೂರ್ಣವಾದ ಬ್ರಹ್ಮ ಪದದಲ್ಲಿ ಸದಾ ಇರುತ್ತಿದ್ದರೆ, ಘೋರವಾದ ಅರಣ್ಯದಲ್ಲಿ ಚಲಿಸುತ್ತಿದ್ದರೂ ಜಗವೆಲ್ಲ ಅರಿಯುತ್ತದೆ.

ಹಗಲಾದಾಗ ರಾತ್ರಿಯು ನಿಲ್ಲದು. ಹಾಗಾದರೆ ಅದೆಲ್ಲ ಹೋಗುವುದು ಎಲ್ಲಿಗೂ ಇಲ್ಲ. ಇರುವ ಸತ್ಯವೆಂದರೆ, ಹಗಲಿನ ಅಭಾವವೇ ರಾತ್ರಿಯಷ್ಟೆ. ಅದೇ ರೀತಿ, ಪರಮಾತ್ಮ ತತ್ತ್ವವನ್ನು ಬಹಳವಾಗಿ ತಿಳಿದರೆ, ಐಹಿಕ ಬಂಧಗಳು ನಿಲ್ಲವು.

ತುಂಬುಗೊಡದಿ ಮೊದಲು ಆಕಾಶ ತತ್ತ್ವವಿತ್ತು. ಅದರಲ್ಲಿ ನೀರನ್ನು ತುಂಬಿದಾಗಲೂ ಆಕಾಶ ತತ್ತ್ವವು ಅಲ್ಲಿಯೇ ಇರುತ್ತದೆ. ಹಾಗೆ, ಪರಮಾತ್ಮ ತತ್ತ್ವವು ಜೀವನದಲ್ಲಿ ತುಂಬಿಕೊಂಡಿರುತ್ತದೆ.

ನರನು ತನ್ನ ಚಂಚಲತೆಯನ್ನು ತೊರೆದು ನಿಶ್ಚಲನಾದರೆ, ನಾರಾಯಣನೆನಿಸುತ್ತಾನೆ. ಇನ್ನು ನಾರಾಯಣ ತತ್ತ್ವವು ಭೂ–ಪ್ರಜ್ಞೆಯಲ್ಲಿ ಚಲಿಸಿದಾಗ ನರನೆನಿಸುತ್ತಾನೆ. ನಾರಾಯಣನಿಗೆ ತನ್ನ ಮಹಿಮೆ ತೋರಿಸಿಕೊಳ್ಳಲು ಲಜ್ಜೆಯೆನಿಸುತ್ತದೆ. ಆದರೆ ನರನು ಅದನ್ನು ತೊಡೆಯುವನು.

ಶ್ರುತಿಗೆ ದೃಷ್ಟಾಂತಗಳನ್ನು ನೀಡದೆ, ಮತಿಗೇಡಿ ಜನರು ಆಡುತ್ತಿರುವ ಮಾತುಗಳನ್ನು ನೋಡಿದರೆ, ಸತ್ಯವೆಂದು ನಂಬಬಾರದು. ಪೂರ್ಣ ಪದವಿಯು ಉಪಮಾತೀತವಾಗಿದೆ.

೩೫೫೫ ಚಂ। ತಿಳಿಯಲು ಮೂಲದಲ್ಲಿ ಪರತತ್ತ್ವ
ತಿಳಿವಿಗಳವು ಇಲ್ಲವೈ
ಬಲುಮೆಯಲಾತ್ಮ ಗುಟ್ಟು ಮನದಿ ಭಾವಿಸಿ
ಯೋಚಿಸೆ ಬ್ರಹ್ಮ ಕಲ್ಪಮಂ
ಕುಲುಕುವ ಮುಕ್ತಿ ಜೀವರಿಗೆ
ಆಗಲಿ ; ಆತ್ಮ ನಿಧಾನ ಕೃತ್ಯವೈ
ಸುಲಲಿತ ಶಕ್ತಿ ರೂಪವೆನೆ ಸನ್ನುತಿ
ವೇಮನ ಗೆಯ್ದ ಕಲ್ಪಮಂ

೩೫೫೬ ತಿಳಿವಿಗಳವು ಅಲ್ಲ, ದೈವವಾದ ಬ್ರಹ್ಮ,
ತಿಳಿಯಲಾರ ಬ್ರಹ್ಮ, ದೇವನಿರಲಿ
ಉಸುಕಿನಲ್ಲಿ ಭಾವಿ, ತೋಡಲಾವ ಶಕ್ತ ? ವಿಶ್ವ

೩೫೫೭ ತಿಳಿವು ನಿಲಿಸಿ ನೋಡು ದೀಪ್ತಿಪುದಾ ಕಳೆಯು,
ಕಳೆಯುಡುಗಲು ನೋಡು ಕಾಣು ಬಯಲು,
ಬಯಲಿಗಂಟಿ ನೋಡು ಬ್ರಹ್ಮಕಾಣುತಿಹುದು, ವಿಶ್ವ

೩೫೫೮ ತಿಳಿವಾವುದಿರದೆ ಭೇದ ತಿಳಿಯದಿದ್ದು,
ಜೋಗುಳದಲ್ಲಿ ಅರ್ಥಿಯಿರೆ ಜೀಕವಾಡು–
ತಿರಲು ಯೋಗೀಂದ್ರನೆನ್ನುತಿರೆ ತಕ್ಕದಾಯ್ತು,
ವೇಮನನೆಂಬ ಯೋಗಿ ವಿನುತನು ವೇಮ.

೩೯೯ ತಿಳಿವಿನಲ್ಲಿ ತಿಳಿವು, ತಿಳಿದು ತಿಳಿಯರಲ್ಲ !
ತಿಳಿವನೆಲ್ಲ ತ್ಯಜಿಸಿದ ತಕ್ಕ ಭಂಗಿ !
ತಿಳಿವಿನೊಳಗೆ ತಿಳಿಯೆ ತತ್ತ್ವವಹುದು ಆತ್ಮ ವಿಶ್ವ

೩೬೦೦ ತಿಳಿವಿನೊಳಗೆ ತಿಳಿವು ಧ್ಯಾನಿಸಿ ತಿಳಿಯರೇ ?
ತಿಳಿವು ಎಲ್ಲ ತೊರೆದು ತಕ್ಕ ರೀತಿ,
ತಿಳಿವಿನೊಳಗೆ ತಿಳಿಯೆ ತತ್ತ್ವವಾಯ್ತು ಆತ್ಮ, ವಿಶ್ವ

೩೬೦೧ ತಿಳಿವಿನೊಳಗೆ ಆಯ್ತು ತಾ ದೈವವಿಹ ಹೊತ್ತು,
ತಿಳಿದು ನೋಡಲದುವೆ ತತ್ತ್ವವಾಯ್ತು,
ತಿಳಿವಿನೊಳಗೆ ತಿಳಿವು ಧ್ಯಾನಿಸಲು ಇರುವುದು, ವಿಶ್ವ

೩೬೦೨ ತಿಳಿವು ಮಾಯೆ ಮಾಡಿ, ದಿಟ್ಟತನದಿಂದಲಿ,
ತಿಳಿವು ಭಸ್ಮವಾಯ್ತು ತೇಟ ಹರಡಿ,
ವಿಧವು ಕಾಣು, ಪರಸು ವೇದಿಯು ಅಲ್ಲವೋ, ವಿಶ್ವ

೩೬೦೩ ಮನುಜ ತಿಳಿವು ಹೊಂದಿ, ಮನವ ಚಲಿಸದಿಹನು,
ದೈವವನು ತಿಳಿಯಲು ಧೀ ಅಂಟಿತು,
ಕಂಡು ಉದಯ ರವಿಯ, ಕತ್ತಲೆ ನಿಲ್ಲುವುದೆ ? ವಿಶ್ವ

೩೬೦೪ ಕಷ್ಟವೆಲ್ಲ ತಿಳಿಯೆ, ಕಾಣು ಅರಿವಿಗೆ ಮೂಲ,
ಅರಿಯೆ, ತತ್ತ್ವಕೆಲ್ಲ ಆತ್ಮ ಉಗಮ,
ಅರಿವು ಮೂಡಿ ಮಿಕ್ಕಿ ಧೀರನಾಗಿ ಬಾಳು, ವಿಶ್ವ

೩೬೦೫ ಗಾಜು ಗೋಳವೆಯೊಳಗೆ ತೇಜಿಸುವ ದೀಪವು,
ಎಂತು ಇಹುದೊ ; ಜ್ಞಾನ ಅಂತೆ ಇಹುದು ;
ತಿಳಿದ ಜನರ ದೇಹದಂತರಾಳದಲ್ಲಿ, ವಿಶ್ವ

೩೬೦೬ ಕೀಲು ತಿಳಿದು ಮನದಿ ಕೇವಲಾತ್ಮಗೂಡಿ,
ಭಾವದಲ್ಲಿ ಉಬ್ಬಿ ಬಯಲು ತಾಕಿ,
ಸೇರಿಯುಂಟು ಮುಕ್ತಿ ಚೆಂದವಾಗಿ ಹೊಂದು, ವಿಶ್ವ

೩೬೦೭ ಯಾರು ಅರಿಯದ ತತ್ತ್ವವನು ಅರಿವುದೆಂತು ?
ಲೋಕಿಸುತಿರಲು ಒಳಗೊಳಗೆ ಲೋಕವಾಯ್ತು,
ತಿಳಿವು ಮರೆವುಗಳ ದಾಟುವುದೆ ತನ್ಮಯತೆಯು,
ನಿತ್ಯ ಪೂರ್ಣತೆ ಸಾನಂದ ನಿರತಿ ವೇಮ

೩೬೦೮ ತಿಕ್ಕಿ ತಿಕ್ಕಿ ಜನನ ತರುವಿನಲ್ಲಿ ಅಗ್ನಿ,
ಕಡೆದು ಕಡೆದು ಜನನ, ಮೊಸರು–ತುಪ್ಪ,
ತಿಳಿದು ತಿಳಿದು ಜನನ, ತನುವಿನಲ್ಲಿ ತತ್ತ್ವ, ವಿಶ್ವ

೩೬೦೯ ಮೇಲೆ ಕೆಳಗೆ ನೋಡು, ಮನದೊಳಾವ ಹೊತ್ತು,
ತಂಟೆಯಿರದೆ ತಿಳಿವು ಒಲಿದು,
ನೀಟ ನೋಡಲೆಲ್ಲ ನೆರೆ ಜಾಣ ವಿದ್ಯೆಯು, ವಿಶ್ವ

೩೬೧೦ ಜ್ಞಾನ ಸುಜ್ಞಾನ ಗತಿಯೊಪ್ಪ ಜಾಡನರಿಯೆ,
ಆಗುವ, ದೈವಜ್ಞರಾದವರೆ ಅರಸಿದೊಡನೆ,
ಹಾಲು ನೀರನು ಭೇದಿಸುವದು ಹೊಳೆವ ಹಂಸ,
ಅಂಥ ಸಾಮರ್ಥ್ಯ ಹೊಂದುವ ಅವನಿಲಿ ವೇಮ

೩೬೧೧ ಅರಿವುಗೂಡಿರೆ, ತತ್ತ್ವವನು ಅರಿವುದೆಂತು ?
ಅರಿವು ತೊಲಗಲು ತತ್ತ್ವವ ಅರಿಯಲಾರ,
ಅರಿವು ಮರೆವುಗಳಿಗೆ ಸಿಗದ ಇರವ ಕಂಡು,
ಅರಿಯುತಿರುವವನೇ ಅರಿವ, ವೇಮ

೩೬೧೨ ಗಮನ ಗಮ್ಯ ನಿರಾಲಯ ಗತಿಯಲಿ, ಮನ
ಸಮರಸತ್ವವನು ತಾನೆಣಿಸಿ, ಸಾಕ್ಷಿಯಾಗಿ,
ಭ್ರಮೆಯಡಗಲು ಬ್ರಹ್ಮವು ಬಟ್ಟ ಬಯಲು,
ಕ್ರಮವರಿಯದೊಡೆ, ಒಳಗೆಲ್ಲ ತಮವೆ ವೇಮ

೩೬೧೩ ಜೇನಿನೊಳಗೆ ಕಿಂಡಿ ಜೇನು ಹುಳಕೆ ಗೊತ್ತು,
ಸುಮದ ರಸದ ದಾರಿ ತುಂಬಿಗಷ್ಟೆ,
ಪರಮ ಯೋಗಿ ಪರಿಯು ಭಕುತಗಷ್ಟೆ ಗೊತ್ತು, ವಿಶ್ವ

೩೬೧೪ ಉಪ್ಪು ನೀರಿನಂತೆ ಊಹಿಸಿ ನೋಡಲು,
ಕಪ್ಪುರವು ಜ್ಯೋತಿ ಕಲೆತ ರೀತಿ,
ಮನದಿ ಮೂಡುತಿಹನು ಮುಕ್ಕಣ್ಣನೊಪ್ಪಾಗಿ, ವಿಶ್ವ

೩೬೧೫ ಅತಿ ಸೂಕ್ಷ್ಮ ದೃಷ್ಟಿಯ ಒಳಗೆ
ಮತಿಗಿಂಪಾಗಿ, ಶಿವನ ಕುರಿತು ತಾನಿರಲೋರ್ವಂ
ವ್ರತಿಯಿರದೆ, ಮೋಕ್ಷವದಾಯ್ತು ;
ಸತತವು ನಿರ್ವಾಣ ಪದವಿ ಸಾಕ್ಷ್ಯವು, ವೇಮಾ ।

೩೬೧೬ ದೀಪವು ಇಲ್ಲದ ಮನೆಯಲಿ
ರೂಪ ತಿಳಿಯಲಾರರು ರೂಢಿಯಿಂ ತಮದೊಳ್,
ದೀಪವೆ ಆದರಿವು ಹೊಂದಿಯು,
ಪಾಪಕೆ ವಾಲುವ ಪಥವನು ಪಿಡಿವರು ವೇಮಾ

೩೬೧೭ ಜ್ಞಾನಮುದ್ರೆಯಿಂದ ಕಾಣಬಹುದು ಥಳಕು,
ಮನದ ಮೇಲ್ಮೆಯದುವೆ ಮುನಿ ನುಡಿದರು,
ಪೇಳಿದುದು ಪರಮಾರ್ಥವಹುದಲ ! ವಿಶ್ವ

೩೬೧೮ ಉಂಟು ಮೇರು ಶಿಖರ ; ಉನ್ಮತ್ತತೆಯಲಿ ಕಾಣು,
ಕಂಡು ಕಾಣದಿದ್ದು, ಕದಲದವನೆ,
ಕೇಳಿ ಕೇಳದವನು, ಕಾಣು, ವಿಮಲಾತ್ಮನು, ವಿಶ್ವ

೩೬೧೯ ತನ್ನ ನೆರಳು ಶಿಶುವು ತಾ ನೋಡುತಿರುವನು,
ತನ್ನ ನೆರಳು ನೋಡಿ, ತನ್ನ ಮರೆವ,
ಬಹಳ ಕೆಲಸ ಮಾಳ್ಪ ಭ್ರಾಂತರನ್ನೇನನ್ನಲಿ ! ವಿಶ್ವ

೩೬೨೦ ಮಣ್ಣು ಮುದ್ದೆ ಮಾಡಿ ಬೆಂಕಿಯಲಿ ಬೇಯಿಸಿ,
ಬೆಂಕಿ ಗಡಿಗೆಗಂಟಿ ಮರಳಿ ತಿರುಗಿ,
ಮಣ್ಣು ಬೆಂಕಿ ಕಲೆಯೆ ಮತ್ತೆ ಹೋಹುದೆಲ್ಲಿ ? ವಿಶ್ವ

೩೬೨೧ ಗಮ್ಯವಹ ಜ್ಞಾನ ಹೊಂದುವುದೆ ಗಗನ ವಿದ್ಯೆ,
ಜ್ಞಾನವುದಯಿಸಿ ಮಿಂಚಲು ಪ್ರಜ್ಞಾನವಮರ
ಪೊಳೆವ ಪ್ರಜ್ಞಾನ ಹೊಂದುವುದೇ ಬ್ರಹ್ಮ ಪದವಿ,
ಪರ ಶಿವನಾಗುವ ಅಂದವಿದು, ಪೊಡವಿಲಿ, ವೇಮಾ

೩೬೨೨ ಅರೆವ ಜ್ಞಾನಮಯನು ಅತಿಶಯಿಸುವ ಮತಿಯ ;
ಉಳ್ಳ ವಾಸ ಬಿಡನು, ಉಪಮೆ ಹೊಂದಿ ;
ತನುವ ಮರೆತು ಮಿಂಚಿ ತತ್ತ್ವಜ್ಞನಾಗುವ, ವಿಶ್ವ

೩೬೨೩ ನಿರ್ಮಲ ಜ್ಞಾನ ಪರಿಪೂರ್ಣ ನಿಷ್ಠೆಯಲ್ಲಿ,
ಕರ್ಮ ಸನ್ಯಾಸ ಯೋಗಿ ತಾ ಕಡಿದು, ಹಾಕಿ,
ಮರ್ಮವರಿಯುತ ಇರುವುದೇ ಮೌನವಯ್ಯ,
ಧರ್ಮವಿಷ್ಟನು ಬೋಧಿಸು, ಧರೆಯಲಿ, ವೇಮ

೩೬೨೪ ನಿರ್ಮಲಾತ್ಮ ವಿದ್ಯೆ ನಿತ್ಯ ಸತ್ಯ ಜ್ಞಾನ,
ನಿರತನಾಗಿರುವವನರಿವು ಮೀರಿ,
ಅನುಭವಿಪುದ ಕೋರಿ, ಆಲಸದೆ ಹೊಂದಿಕೊ, ವಿಶ್ವ

೩೬೨೫ ಅಲೆಗಳಿರದ ಜಲಧಿ ಅಂತೆ ಇಪ್ಪ ಮನದಿ,
ತಿಳಿವು ಹೊಂದಿ ತನ್ನ ತಿಳಿದೊಡಾಗ,
ತಿಳಿದ ಸಜ್ಜನೆಂದು ಧರೆಯೇ ಕೂಗುವುದು ; ವಿಶ್ವ

೩೬೨೬ ಕಡಲು ನೋಡೆ ಅಲೆಯು, ಕಡು ಚೋದ್ಯವಕ್ಕು ;
ಮನಸು ನೋಡೆ ಭ್ರಮೆಯು ಮರೆಯೊಳುಂಟು,
ಪರಮ ನೋಡಿ ಮನಸು ಪರಿಪಾಟಲ ನಿಲಿಸು, ವಿಶ್ವ

೩೬೨೭ ಪ್ರತ್ಯಕ್ಷವಾಗುವ ಶಿವನೆನೆ,
ನಿತ್ಯವು ಮನದೊಳಗೆ ಅರಿತು ನಿಲಿಸಿದೊಡಾಗಳ್,
ಸತ್ಯವಹ ಜ್ಯೋತಿ ಕಾಣುವ,
ನಿತ್ಯವು ಒಳ ತೃಪ್ತಿ ಹೊಂದಿ ಸುಖಿಸೈ ವೇಮಾ.

೩೬೨೮ ಕಡೆಗೆ ಗಾಳಿಯಿರದ ಗಗನದಲ್ಲಿ ಭಂಗಿಸಿ,
ಬಲು ತೆರೆಗಳಿರದ ಜಲಧಿ ರೀತಿ,
ನಿರ್ವಿಕಾರದಲ್ಲಿ ನಿಶ್ಚಲಾಗಿ ಉಂಟು, ವಿಶ್ವ

೩೬೨೯ ಕಪ್ಪುರದಂತೆ ಮನಸು ಕಾಣುವುದು ಯೋಗಿಗೆ,
ಜ್ಞಾನ ದೀಪ ಶಿಖೆಯು ಜ್ವಲಿಸುತಿಹುದು,
ಕಾಣಬಹುದು ಆತ್ಮ ಕ್ರಮದಿಂದ ನೋಡಲು, ವಿಶ್ವ

೩೬೩೦ ಯೋಚಿಸಲು ಶೂನ್ಯ ತತ್ತ್ವವು ವೇಮಾ !
ಯೋಚಿಸಲು ಶೂನ್ಯ ತತ್ತ್ವ ಎನ್ನುವುದದುವೇ,
ಯೋಚನೆ ತಿಳಿವೀಡೇರ್ಪುದು,
ಯೋಚಿಸದಿರುವುದು ತಾನೇ ತತ್ತ್ವವು ವೇಮಾ !

೩೬೩೧ ಹೊಟ್ಟೆ ತುಂಬ ಸುಧೆಯ ಹವಣಾಗಿ ಕುಡಿಯಲು,
ಹಾಲ ಮೇಲೇಕೆ ಮನ ಹರಿಯಬಹುದು ?
ತತ್ತ್ವವರಿತ ಬಳಿಕ ತತ್ವ ಇತರವೇಕೆ? ವಿಶ್ವ

೩೬೩೨ ಪರಚಿಂತೆಯದೇಕೆ ? ಪೇಚಾಟಗಳೇಕೆ ?
ಅವನಿ, ಮರೆತು ಅಂಟಿ, ಅರಗಿನಂತೆ,
ಸತತ ಆತ್ಮದಲ್ಲಿ ಸರಸಾಟವಾಡೆಲೊ, ವಿಶ್ವ

೩೬೩೩ ಉಂಟು ಉಂಟು ಜ್ಞಾನಿ, ಯುಗಯುಗಾದಿ ಕಳೆಯೆ,
ಪ್ರಾಣ ಹಾನಿಯಲ್ಲಿ ಪ್ರಳಯವಿರಲು,
ಪ್ರಳಯದಿ ಮತ್ತೆ ಪರಮಾತ್ಮನ ಸೇರುತ, ವಿಶ್ವ

೩೬೩೪ ದಯವು ಸೊನ್ನೆಗಳಿಗೆ ಅತಿಶಯಾಗಿಪ್ಪಂಥ
ಕಲ್ಪವೇಕೆ ? ಜನಿಪ ಕಾರಣೇನು ?
ಹಯವು ಶೂನ್ಯ ತಿನಲು ಅಂಧಕಾರ ಹೋಯ್ತು ವಿಶ್ವ

೩೬೩೫ ಆತ್ಮಾನಾತ್ಮ ವಿವೇಕವ,
ಸ್ವಾತ್ಮಾನುಗತಿಯ ಎಲ್ಲೆಯ ಮೀರಿ, ಸ್ವಚ್ಛಂದಂ
ಆತ್ಮದೊಳಗಿರುವಂಥ ಮ–
ಹಾತ್ಮನ ಪೊಗಳಲು ಅಳವೆ, ಹರನಿಗು ವೇಮಾ ?

೩೬೩೬ ಶಿವನ ಗುಡಿ ದೀಪವಿರಿಸಲು,
ಶಿವ ಮಂದಿರವೆಲ್ಲ ಬೆಳಗುವುದು ಅಚ್ಚರಿಯ್ಕೆ !
ಶಿವಯೋಗಿ ಜ್ಞಾನ ದೀಪವು
ಭುವಿಯೆಲ್ಲವ ಬೆಳಗುತಿಹುದು, ಪೂರ್ಣವೆ, ವೇಮಾ

೩೬೩೭ ಊರುಗೋಲು ಹಿಡಿದು, ಊರುತ ಹೋಗುವವನು,
ಕೋತಿ ಕೊಂಬೆಯಲ್ಲಿ ಕುದುರಿದಂತೆ,
ಜ್ಯೋತಿಯಲ್ಲಿ ಇಣಿಕಿ ಸೋಹಂ ಕಾಣಿರೋ, ವಿಶ್ವ

೩೬೩೮ ಅವು ಎಣಿಸಿ ನೋಡೆ ಅರುಹುತ್ತ ಇರುವುದು,
ಪರವ ತಾಕಿ ನೋಡಿ, ಪಟ್ಟು ಬಿಡದೆ,
ಗುರಿಯ ಬಯಲು ಸೇರೆ, ಗುಣ ರಹಿತನಾಗುವ, ವಿಶ್ವ

೩೬೩೯ ಇಳೆಯಲಿ ಜ್ಞಾನವೆಂಬ ಈಜು ಕಲಿತಾತನೆ,
ಜಡಧಿಯೆಂಬ ತಮವ ಜಡಿಯದೆ ಬಿಡ,
ನಿಲಯವೆಂಬ ಕಟ್ಟು ಛಲ ಬಿಡದೆ ದಾಟುವ, ವಿಶ್ವ

೩೬೪೦ ನಿರುತದಿ ಎಡೆಬಿಡದಿರುತಿರೆ,
ಪರಿಪೂರ್ಣ ಬ್ರಹ್ಮವಾತ್ಮ ಪದದಲಿ ತಾನೇ,
ನಿರವದ್ಯವಾದ, ಅಡವಿಯಲಿ
ಚರಿಸುತಿರಲು ಜಗವರಿವುದು, ಸತ್ಯವು ವೇಮಾ.

೩೬೪೧ ಹಗಲು ಹೊತ್ತಿನಲ್ಲಿ ಹೋಯಿತೆಲ್ಲಿ ರಾತ್ರಿ ?
ನೀರು ತುಂಬುಗೊಡದಿ ನಿಂತ ಹಾಗೆ,
ತಿಳಿಯೋ ಪರಮಾತ್ಮ ತತ್ತ್ವಗಳನು ಬಹಳ, ವಿಶ್ವ

೩೬೪೨ ವರಿಸಿ ಹುಡುಕೆ ಸಿಗುವ ವೇದಾಂತ ವೇದ್ಯನು,
ಹುಡುಕುವವನ ತಾನೆ ಹುಡುಕುತಿಹನು,
ಹುಡುಕಲರಿತಂಥ ಕಡು ಜ್ಞಾನಿಯಹರೆ ? ವಿಶ್ವ

೩೬೪೩ ನರನು ನಿಂತುಕೊಳಲು ನಾರಾಯಣನಾದ,
ನಾರಾಯಣ ನಡೆಯೆ ನರನು ಆದ,
ನಾರಾಯಣನ ಲಜ್ಜೆ ನರನು ತೊಡೆಯುತಿಹನು, ವಿಶ್ವ

೩೬೪೪ ಶ್ರುತಿ ದೃಷ್ಟಾಂತವು ಇಲ್ಲದೆ,
ಮತಿ ಹೀನರು ಆಡುವಂಥ ಮಾತನು ನೋಡಲ್,
'ಸತ್ಯ' ವೆಂದು ನಂಬಬಾರದು,
ಅತುಲಿತವಹ ಪೂರ್ಣ ಪದವಿ ಎಟುಕದು ವೇಮಾ.

●

## ಈ. ನಿಜದ ಅರಿವು

ತನ್ನರಿವು ತನಗಾದರೆ ಮನವು ಬಂಧಗಳಿಂದ ಮುಕ್ತವಾಗುತ್ತದೆ.

ತನ್ನ ತಾನು ತಿಳಿಯಲು ತಾನೇ ಬ್ರಹ್ಮವೆನಿಸುತ್ತಾನೆ. ತನ್ನನರಿಯದವನು ಬ್ರಹ್ಮನಾಗಲಾರ. ತನ್ನ ತನುವಿನಲ್ಲಿಯೇ ಸೂಕ್ಷ್ಮತಮ ತತ್ತ್ವವನ್ನು ಅರಸಿ, ಅದೇ ನಾನೆಂದು ಕಂಡುಕೊಳ್ಳುವುದೇ ಆತ್ಮ ಸಾಕ್ಷಾತ್ಕಾರವಾಗಿದೆ.

'ನಾನು'ವು ಅಲ್ಲವೂ ಆಗಿರಬಹುದು ; ಭೂಮವೂ ಆಗಿರಬಹುದು. ಎರಡೂ ಸ್ತರದ ಅರಿವಿಗೆ ಅನುಕೂಲಕ್ಕಾಗಿ ಒಂದೇ 'ನಾನು' ಪದ ಬಳಸುತ್ತಾರೆ. ಅಲ್ಪ 'ನಾನು'ವು ಅಹಂಕಾರವಷ್ಟೇ. ಅದು ಮೈಮರೆಸಿ ತನ್ನನ್ನೇ ಕೆಡಿಸುತ್ತದೆ. ಅಲ್ಪ ಅಹಂಕಾರದಿಂದ 'ನಾನು' ಎಂದುಕೊಳ್ಳುವವರಿಗೆ ಈ ಭೂಮಿಯಲ್ಲಿ ಹಾನಿಯೇ ಉಂಟು; ಅದುವೇ ಅವರ ದುಷ್ಕರ್ಮಗಳ ಫಲವಾಗಿದೆ.

ಈ ಮನಸ್ಸಿನಲ್ಲಿಯೇ ತನ್ನ ಅಸ್ತಿತ್ವವನ್ನು ಕುರಿತು ತಿಳಿದುಕೊಂಡು, "ನಾನು" ಹೇಗೆ ಹುಟ್ಟುತ್ತದೆ ? ಹೇಗೆ ಬೆಳೆಯುತ್ತದೆ ? ಹೇಗೆ ತನ್ನನ್ನು ತಾನೇ ಅರಿತ ಮೇಲೆ 'ಭೂಮ' ವಾಗಿ ಪರಿಣಮಿಸುತ್ತದೆ ? ಎಂಬುದನ್ನೆಲ್ಲ ಅರಿತ ಮಾನವರಿಗೆ ಮುಕ್ತಿಯುಂಟು.

ತಾನು (ಭೂಮ ನಾನು) ಎಂದರೆ ಬೇರೆ ಮತ್ತು ನಾನು (ಅಲ್ಪನಾನು) ಎಂದರೆ ಬೇರೆ ; ಎಂದು ಮನದಲ್ಲಿ ಎಣಿಸುವಂಥ ಮಾನವರು ತತ್ತ್ವವನ್ನು ಕಾಣಲಾರರು. ಮೌನಿಗಳ ಜೊತೆಗೆ ತಿರುಗಿದರೇನು ? ತನ್ನೊಳಗೆ ತಾನರಿಯಬೇಕು.

ತನ್ನ ಇಂದ್ರಿಯಗಳನ್ನು ಸಾಧುಗೊಳಿಸಿ, ಬಳಿಕ ತತ್ತ್ವವನ್ನು ಅರಸಿದರೆ ತಾನೇ ತಾನಾಗುವನು. ಅವನೇ ರಾಜಯೋಗಿಯಂತೆ ಬೆಳಗುವನು.

ಒಲ್ಲದ ಗ್ರಹಿಕೆಗಳನ್ನು ಹಿಡಿಯಲಿಲ್ಲ. ಒಲಿದ ಗ್ರಹಿಕೆಗಳನ್ನು ಬಿಡಲಿಲ್ಲ. ಗುಣಗಳಿಂದಾಗುವ ಎಲ್ಲ ವಿಕಾರಗಳೂ ನಿಂತ ಬಳಿಕ, ಗರ್ವ ತಾಳದೆ, ತನ್ನೊಳಗೆ ತನ್ನನ್ನು ಕಂಡುಕೊಳ್ಳುವವನೇ ವಿಶೇಷಜ್ಞನೆನಿಸುತ್ತಾನೆ.

ತನ್ನ ಮನೆಯಲ್ಲಿ ದೀಪ ಉರಿದರೆ, ಅದರ ಬೆಳಕು ನೆರೆಹೊರೆಯಲ್ಲಿಯ ಕತ್ತಲನ್ನು ಕಳೆಯದು. ಅವರೂ ದೀಪ ಹೊತ್ತಿಸಿಕೊಳ್ಳಬೇಕು. ಹೊರಗಿನ ದೇವ ಪೂಜೆಯಿಂದ ತನ್ನೊಳಗೆ ಅರಿವು ಮೂಡದು. ತನ್ನ ಆತ್ಮ ಪೂಜೆಯಿಂದ ಮಾತ್ರ ತನ್ನಲ್ಲಿ ಬೆಳಕು ಕಾಣಬಹುದು.

ಸತ್ತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ತ್ರಿಗುಣಗಳು ಶಕ್ತಿ ತ್ರಿಕೋಣವನ್ನು ನಿರ್ಮಿಸುತ್ತವೆ. ಅದರ ಶಿಖರದಲ್ಲಿದ್ದು, ಧೈರ್ಯವನ್ನು ಬಿಡದೆ, ಗುಣಾತೀತನಾಗಲು ಹೆಣಗಿದರೆ, ಕೈವಲ್ಯ ಪದವಿ ದಕ್ಕುತ್ತದೆ. ಆದರೆ ಅರಿವಿರದ ಜೀವಿಯು ಇದನ್ನರಿಯದೆ,

ಅಷ್ಟಿಷ್ಟು ಕಾಲ ಜೀವಿಸಿದ್ದು, ಸತ್ತು, ಹುಟ್ಟಿ ಸಂಸಾರ ಚಕ್ರದಲ್ಲಿ ತಿರುಗುವನು. ಅವನು ಅರಿವನ್ನು ಮರೆಯುವ ತಾವನ್ನು ಅರಿತರೆ, ಅವನೇ ಬ್ರಹ್ಮನಾಗುತ್ತಾನೆ.

ಚಿತ್ರ ದೀಪವು ತೋರುತ್ತದೆ. ಆದರೆ ವಸ್ತುತಃ ಅಲ್ಲಿ ಬೆಳಗುವ ದೀಪವಿರುವುದಿಲ್ಲ. ಅದೇ ರೀತಿ, ಚಿಂತೆಯು ತೋರುತ್ತದೆ. ವಿಚಾರಿಸಿದರೆ ಚಿಂತೆಯು ಇರುವುದಿಲ್ಲ. ಹೀಗೆ ಚಿಂತೆಯನ್ನು ಅದುಮಿ, ಅನುಕೂಲಕರ ಮನವನ್ನು ಬೆಳೆಸಿ, ಶತ್ರು ಗುಣಗಳನ್ನು ನಿಗ್ರಹಿಸಿದರೆ ಮುಕ್ತಿ ದೊರೆಯುತ್ತದೆ.

ಕಾಮನಾ ತೃಪ್ತಿಗಾಗಿ ಆಕಾಂಕ್ಷಿಸುವ ಮನಸ್ಸಿನಲ್ಲಿ ಅನೇಕ ಕಷ್ಟಗಳುಂಟು. ಅಲ್ಲಿ ಅಜ್ಞಾನದ ಅಂಧಕಾರವೂ ಮುತ್ತಿರುತ್ತದೆ. ಮನವನ್ನು ಹೇಗೆ ನಿಗ್ರಹಿಸಬೇಕು ? ಎಂಬ ಅರಿವಿನ ಶಿಖೆಯನ್ನು ಉರಿಸಿದಾಗ, ಅದು ಇಂಪಾಗಿರುತ್ತದೆ. ಮತ್ತು ಆ ಶಿಖೆಯ ಬೆಳಕಿನಿಂದ ಆತ್ಮವನ್ನು ಕ್ರಮವಾಗಿ ಅರಿಯಬಹುದು.

ಅರಿವು ಮುತ್ತಿದ ಕತ್ತಲೆಯನ್ನು ಹೊಡೆದು ಹಾಕಿ, ದೇಹ ಭಾವವನ್ನು ಮರೆತು, ಪರಮನದಲ್ಲಿ ಮನವನ್ನು ಭದ್ರಪಡಿಸಿ ಶ್ರೇಷ್ಠತೆಯನ್ನು ಹೊಂದಿದಂಥ ಘನನು ಕಾಣುವುದು ಅಪರೂಪ.

ಘನಸಾರ ಶಬ್ದಕ್ಕೆ ಎರಡು ಅರ್ಥಗಳುಂಟು. ಕರ್ಪುರ ಮತ್ತು ನೀರು. ಕರ್ಪುರಕ್ಕೆ ಅಗ್ನಿ ಸೋಂಕಲು ಘನಸಾರವು ಅಗ್ನಿಯಲ್ಲಿ ಕೂಡಿ ಹೋಗುವ ದೃಷ್ಟಾಂತವು ಕಾರಣ ವಿದ್ಯೆ ಎನಿಸುತ್ತದೆ. ಆದರೆ ಅದೇ ಘನಸಾರವು ನೀರಿನ ಅರ್ಥದಲ್ಲಿ ಅಗ್ನಿಯನ್ನು ನಂದಿಸುತ್ತದೆ. ಆ ರೀತಿ (ವಿದ್ಯಾ) ಮಾಯೆಯು ಅರಿವನ್ನು ಕಾರಣದಲ್ಲಿ ಹೊಗಿಸಿದರೆ (ಅವಿದ್ಯಾ) ಮಾಯೆಯು ವಿದ್ಯಾಗ್ನಿಗೆ ಕಂಟಕವಾಗುತ್ತದೆ.

ರೇಚಕ ಪೂರಕಗಳು ರವಿ ಮತ್ತು ಚಂದ್ರ ನಾಳಗಳಲ್ಲಿಯ ವಾಯುಚಲನೆಯಷ್ಟೇ. ಇವುಗಳನ್ನು ಮೀರಿದ ಕುಂಭಕವು ಭವಹರವಾದ ಆತ್ಮ ತೇಜವಾಗಿದೆ. ಅದನ್ನು ಸಾಧಿಸುವ ಭಾಗ್ಯವು ತನಗಿದ್ದರೆ, ಶಿವ ಸಾಯುಜ್ಯವನ್ನು ಪಡೆಯಬಹುದು. ಬ್ರಹ್ಮಮಯತೆ ಹೊಂದುವುದೇ ಪೂರ್ಣ ಪದವಿಯಾಗಿದೆ.

ಸ್ವಾತಿ ಋತುವಿನಲ್ಲಿ ಮಿಂಚು ಜೋರಾಗಿರುವುದು. ಅದನ್ನು ಕಂಡು ಮಳೆ ಬರುವುದೆಂದು ರೈತರಿಗೆ ಬಲು ಸಂತೋಷ. ಆದರೆ ಸ್ವಾತಿ ಋತುವಿನ ಮಿಂಚು ಬಹಳಷ್ಟು ಸಲ ಮಳೆ ತರುವುದಿಲ್ಲ, ಅಂದರೆ ಸಫಲವಾಗುವುದಿಲ್ಲ. ಆದರೆ ಮಿಂಚು ಗುಡುಗುಗಳು ಮೇಘ ಸರಿಯುವ ಪೂರ್ವ ಘಟನೆಗಳಷ್ಟೇ. ಅದೇ ರೀತಿ ಯೋಗಸಾಧನೆಯಲ್ಲಿ ನಾದಾನುಸಂಧಾನ ಮತ್ತು ತೇಜಾನು–ಸಂಧಾನಗಳು ಆತ್ಮ ದರ್ಶನಕ್ಕೆ ಕರೆದೊಯ್ದು ಸಫಲವಾಗಬಹುದು. ಇಲ್ಲವೆ ಕೆಲವೊಮ್ಮೆ ಮನವು ಚದರಿ ಮುಂದಿನ ಗತಿರೋಧವಾಗಲೂಬಹುದು.

— — — — — — — — — — — — — — — — — — — — —

ಭ್ರೂಮಧ್ಯದಲ್ಲಿ ಸರ್ವ ಸಮತ್ವವನ್ನು ಸಾಧಿಸಿದ ಬಳಿಕ, ಅಗ್ರದೃಷ್ಟಿಯಿಂದ ಪರೀಕ್ಷಿಸಿದರೆ ಆತ್ಮವು ಸೂಚ್ಯವಾಗಿ ಕಾಣಬರುತ್ತದೆ. ಅದನ್ನು ಕಂಡು, ಕಂಡು ಇನ್ನೂ ಕಾಣುತ್ತಿದ್ದರೆ, ಆತ್ಮವು ಕಾಣುವ, ಕಾಣದಾಗುವದೆಲ್ಲ ತಿಳಿಯುತ್ತದೆ.

ಮನಸ್ಸಿನಲ್ಲಿ ಧ್ಯಾನವು ಬೆಳೆದು, ಆತ್ಮದ ಗುರುತು ಮಿಂಚುತ್ತದೆ. ಆಗ ತೋರುವ ರೂಪದ ಭ್ರಮೆಯು ಅಡಗಬೇಕು. ಭ್ರಮಿಸಿ ರೂಢಿಗೊಳ್ಳಬಾರದು. ಬರೀ ತ್ರಿಗುಣಗಳ ತ್ರಿಪುರವನ್ನು ಸೇರಿದರೆ ಬರೀ ಕಷ್ಟವೇ ಉಂಟು. ಆ ಗತಿಯನ್ನು ತೊರೆಯಬೇಕು.

ಹಾಲಿನಲ್ಲಿ ಹುಳಿಯನ್ನು ಸರಿಯಾದ ಕ್ರಮದಿಂದ ಬೆರೆಸಿದರೆ, ಅದು ಒಡೆದು ಮೊಸರಾಗುತ್ತದೆ. ಮೊಸರನ್ನು ಕಡೆದರೆ ಬೆಣ್ಣೆ ಬರುತ್ತದೆ. ಅದೇ ರೀತಿ ಮನಸ್ಸಿನಲ್ಲಿ ಧ್ಯಾನ ಮಂತ್ರವನ್ನು ಜಪಿಸಿದರೆ, ಮಂತ್ರ ಚೈತನ್ಯವುಂಟಾಗಿ ದಿವ್ಯ ತತ್ತ್ವವು ಫಲಿಸುತ್ತದೆ. ಹಾಲು, ಮೊಸರು, ಬೆಣ್ಣೆ, ಪಾಯಸಾನ್ನ ಹೀಗೆ ರೂಪಗಳೆಷ್ಟಾದರೂ ಮೂಲದಲ್ಲಿ ಅದು ಹಾಲೇ ಆಗಿದೆ. ಸಕಲವೂ ಮೂಲದಲ್ಲಿ ಬ್ರಹ್ಮವೇ ಆಗಿದೆ. ಕಾರಣ ಹಾಲಿನಂಥ ಕುಲದ ಬ್ರಹ್ಮವನ್ನು ಏಕೆ ತಿಳಿಯಲಾರರು?

ಇಂಥ ದೃಷ್ಟಾಂತಗಳನ್ನು ಋಷಿ–ಮುನಿಗಳು ವೇದಾಂತ ಗ್ರಂಥಗಳಲ್ಲಿ ಸಾಕಷ್ಟು ಬಾರಿ ನೀಡಿದ್ದಾರೆ. ಆ ಸತ್ಯ ನುಡಿಯು ಮರವೆಯ ಗಾಳಿಯಲ್ಲಿ ವೇದಾಂತ ಗ್ರಂಥಗಳಲ್ಲಿ ಮತ್ತೊಮ್ಮೆ ನಾವು ನೆನೆಪಿಸಿದರೆ, ಹಾಡಿದ್ದನ್ನು ಹಾಡುವನೆಂದು ಜರಿಯಬೇಡಿ.

'ಏಕಂ ಸತ್ ವಿಪ್ರಾಃ ಬಹುಧಾ ವದಂತಿ'। ಎಂದು ವೇದಗಳೇ ನುಡಿದಿವೆ. ಆಭರಣಗಳು ಅನೇಕ ಆದರೆ ಮೂಲವಸ್ತುವಾದ ಬಂಗಾರವು ಒಂದೇ. ಪಶುಗಳ ಬಣ್ಣ ಬೇರೆ ಬೇರೆಯಾಗಿರಬಹುದು. ಆದರೆ ಅವುಗಳ ಹಾಲು ಒಂದೇ ಬಿಳಿ ಬಣ್ಣದ್ದು. ಪುಷ್ಪಗಳು ವಿವಿಧ ಜಾತಿಗಳಾಗಿರಬಹುದು. ಆದರೆ ಪೂಜೆಯಲ್ಲಿ ಸ್ಫುರಿಸುವ ಭಕ್ತಿ ಒಂದೇ. ರುಚಿಗಳು ಹುಳಿ, ಖಾರ, ಒಗರು ಹೀಗೆ ಆರು ವಿಧಗಳಿರಬಹುದು. ಆದರೆ ರಸದ ಸಾರವು ಒಂದೇ ರೀತಿಯಿದೆ. ಸತ್ಯ ಕುರಿತು ಬೇರೆ ಬೇರೆಯವರ ನಿಷ್ಠೆ ಬೇರೆ ಇರಬಹುದು. ಆದರೆ ಸತ್ಯವು ಏಕರೂಪವಾಗಿದೆ. ಋಷಿಗಳು ಬೇರೆ ಬೇರೆ ಇರಬಹುದು. ಆದರೆ, ಅವರು ಭಾವಿಸುವ ನಿರ್ಣಯವು ಮಾತ್ರ ಒಂದೇ ಆಗಿದೆ.

ಬೇರೆ ಬೇರೆ ಭಾಷೆಗಳಲ್ಲಿ ಅದೇ ಸದ್ವಸ್ತುವನ್ನು ಬಣ್ಣಿಸಬೇಕಾದರೆ ಆಯಾ ಭಾಷೆಯ ಶಬ್ದಗಳನ್ನು ಬಳಸಬೇಕಷ್ಟೇ. ಹೀಗಾಗಿ ಭೇದ ತೋರಬಹುದಷ್ಟೇ. ಈಗ ನೋಡಿ.

— — — — — — — — — — — — — — — — — — — — —

ಕನ್ನಡದಲ್ಲಿ 'ಗಡಿಗೆ' ಎನ್ನುತ್ತೇವೆ. ಸಂಸ್ಕೃತದಲ್ಲಿ 'ಕುಂಭ' ಎನ್ನುತ್ತೇವೆ. ಕನ್ನಡದಲ್ಲಿ 'ಉಪ್ಪು' ಎನಿಸಿದರೆ ಸಂಸ್ಕೃತದಲ್ಲಿ 'ಲವಣ'ವೆನಿಸುತ್ತದೆ. ಭಾಷೆ ಬೇರಾದರೂ ಪರತತ್ತ್ವವು ಒಂದೇ ಇರುತ್ತದೆ.

ಒಂದೇ ಬಂಗಾರವನ್ನು ಬಯಕೆಗನುಸರಿಸಿ ಬೇರೆ ಬೇರೆ ಆಕೃತಿಗಳ ಆಭರಣಗಳಾಗಿಸಿದ್ದು ಎರಕ ಹೊಯ್ಯಬಹುದು. ದೇಹಗಳು ಬೇರೆ ಬೇರೆ ನಿಜ. ಆದರೆ ಅದರಲ್ಲಿ ಸುಳಿಯುವ ಪ್ರಾಣ ವಾಯುವು ಒಂದೇ ಆಗಿದೆ. ತಿನ್ನುವ ತಿಂಡಿಗಳು ಬೇರೆ ಬೇರೆ ಆಗಿವೆ. ಆದರೆ ಹಸಿವೆಯು ಮಾತ್ರ ಸಾಮಾನ್ಯವಾಗಿದೆ.

ತ್ರಿಗುಣಗಳು ಮೂರು. ಸತ್ವ ರಜಸ್ ಮತ್ತು ತಮಸ್. ಇವುಗಳು ಸೇರಿ ಸಮಸ್ಥಿತಿಯಲ್ಲಿ ಇದ್ದರೆ, ತ್ರಿಗುಣಾತೀತ ಪರಮಾತ್ಮನು ಶೋಭಿಸುತ್ತಾನೆ. ಎಲೆ, ಅಡಿಕೆ ಮತ್ತು ಸುಣ್ಣಗಳ ಬಣ್ಣಗಳು ವಿವಿಧ. ಅವುಗಳು ಸೇರಿದರೆ 'ಕೆಂಪು' ಬಣ್ಣ ಬರುತ್ತದೆ.

ಮೊದಲು ಇಂದ್ರಿಯಗಳನ್ನು ಸಾಧುಗೊಳಿಸಬೇಕು. ಆಗ ಅವನು ಸನ್ಯಾಸಿಯಾಗಬಹುದು. ಇಂದ್ರಿಯನಿಗ್ರಹ ಸಾಧಿಸದೆ, ಸನ್ಯಾಸಿಯಾಗುವನೆಂತು ? ಅದರಿಂದ ಫಲವೇನು ? ಆತ್ಮ ಶುದ್ಧಿ ಇರದೆ ಮೋಕ್ಷವು ಅಂಟಬಹುದೇ ?

ಈ ಸೃಷ್ಟಿಯನ್ನು ಊರ್ಧ್ವ ಬೇರುಳ್ಳ, ಮಧ್ಯ ಕೊಂಬೆ ರೆಂಬೆಗಳುಳ್ಳ ಮತ್ತು ಕೆಳಗೆ ಎಲೆಗಳುಳ್ಳ ವೃಕ್ಷಕ್ಕೆ ಹೋಲಿಸುತ್ತಾರೆ. ಹರಿಹರರೆಂದರೆ ರಾಜಸ, ಸತ್ತ್ವ ಗುಣಗಳ ಪ್ರತಿನಿಧಿಗಳು. ಗುಣಾಧೀನರು. ಈ ವೃಕ್ಷದ ಎಲೆಗಳನ್ನು ಮಾತ್ರ ಇಹದಲ್ಲಿ ಕಾಣಬಹುದು. ಅಲ್ಲಿಯೇ ಫಲಗಳನ್ನು ಪಡೆಯಬಹುದು. ಆದರೆ ಸ್ಥೂಲ ಅರಿವಿಗೆ ಟೊಂಗೆಯು ಕಾಣಬರದು. ಅದಕ್ಕಾಗಿ ಮನವು ಸಾಧನ ಮೂಲಕ ಸೂಕ್ಷ್ಮವಾಗಬೇಕು. ಕೊಂಬೆ ಕಾಣದಾದಾಗ, ಅಂದರೆ ಮನವು ಸೂಕ್ಷ್ಮವಾಗದಾದಾಗ, ಬೇರಿನ ವರೆಗೆ ತಲುಪಲಾರರು. ವೃಕ್ಷವನ್ನು ಕೊಂಡಾಡಲಾರರು.

ಈ ಸೃಷ್ಟಿಯ ಅಶ್ವತ್ಥ ವೃಕ್ಷದ ಮೂಲವು ಅಂದರೆ ಬೇರು ಊರ್ಧ್ವದಲ್ಲಿದೆ. ಅಲ್ಲಿಂದ ಸತ್ತ್ವ, ರಜಸ್ ಮತ್ತು ತಮಸ್ ಎಂಬ ಮೂರು ಕೊಂಬೆಗಳು ಹುಟ್ಟುತ್ತವೆ. ಈ ಗುಣಗಳೇ ಚಿಗುರಿ ತಮೋಗುಣದ ಅಧಿಕ ಪ್ರಭಾವದಿಂದ ಇನ್ನೂ ಸ್ಥೂಲವಾಗುತ್ತ ಮಹತ್, ಅಹಂ ಮತ್ತು ಚಿತ್ತಗಳಾಗಿ, ಪಂಚಭೂತಗಳಾಗಿ ಪರಿಣಮಿಸುತ್ತವೆ. ಇದನ್ನೇ ಪ್ರಸ್ತುತ ರೂಪಕದಲ್ಲಿ ಬಳ್ಳಿ, ಎಲೆ, ಹೂವು, ಮಿಡಿ, ಹಣ್ಣು ಎಂದು ಬಣ್ಣಿಸಲಾಗಿದೆ. ಇವು ಭುವನದಲ್ಲಿ ತುಂಬಿವೆ.

ಇಂಥ ವಿಶ್ವವೆಂದರೆ ಏನು ? ವಿವರಿಸಿ ನೋಡಿದರೆ, ಭೂತತ್ತ್ವ ಅಪ್ ತತ್ತ್ವ, ಅಗ್ನಿ ತತ್ತ್ವ, ವಾಯು ತತ್ತ್ವ ಮತ್ತು ಆಕಾಶ ತತ್ತ್ವಗಳೆಂಬ ಐದು ಪ್ರಕಾರಗಳಾಗಿ ವಿಖ್ಯಾತವಾಗಿದೆ. ವಿಶ್ವವನ್ನು ಮನದಲ್ಲಿ ವೀಕ್ಷಿಸುವವನೇ ವಿಬುಧನೆನಿಸುತ್ತಾನೆ.

---

ಸಾಧನೆಯ ತೇಜಾನುಸಂಧಾನ ಪ್ರಕ್ರಿಯೆಯಲ್ಲಿ ಆತ್ಮ ತೇಜವು ಕಾಣುತ್ತದೆ. ಅದನ್ನೇ ಗಮನಿಸಿ, ಸ್ತುತಿಸುತ್ತ ಬ್ರಹ್ಮವನ್ನು ತಲುಪಿಸುವ ಬೀಗದ ಕೈಯಂತಿರುವ ನಾದವನ್ನು ಕೇಳಿ ಅದರಲ್ಲಿ ಮಗ್ನನಾಗಿ ನಿತ್ಯವೂ ಪರಿಪೂರ್ಣತೆಯನ್ನು ಹೊಂದುವ ಸತ್ಯಸಂಪನ್ನರಿಗೆ ಆತ್ಮ ಸಾಕ್ಷಾತ್ಕಾರವು ಸಾಧ್ಯವಾಗುತ್ತದೆ.

೩೬೪೫ ತನ್ನ ತಾನು ತಿಳಿಯೆ ತಾನೆ ಹೋಗು ಬ್ರಹ್ಮ,
ತನುವಿನೊಳಗೆ ಮುಕ್ತಿ ತಗಲಿ ಉಂಟು,
ತನ್ನನರಿಯದವನು ತಾನು ಎಂಥ ಬ್ರಹ್ಮ ? ವಿಶ್ವ

೩೬೪೬ ತಾನೆನಲು ಅಹಂಕಾರವು
ಮಾಣದೆ ತನಗೆ ತಾ ಕೆಡಿಪುದು ಮೈ ಮರೆವೋಲ್,
ನಾನೆಂದುಕೊಳ್ಳುವವರಿಗೆ
ಹಾನಿಯು ದುಷ್ಕರ್ಮ ಫಲವು, ಮಹಿಯಲಿ ವೇಮಾ

೩೬೪೭ ತಾನಿಹುದ ತಿಳಿದು ಮನದಲಿ,
ತಾನಿರುವುದೆಂತು ? ತನ್ನನ್ನು ತಾನೇ ಎನುತಾ
ತಾನರಿತು ಪರಿಣಮಿಸಿದೊಡೆ,
ಮಾನವರಿಗೆ ಮುಕ್ತಿಯುಂಟು ಮಹಿಯಲಿ ವೇಮಾ

೩೬೪೮ ತಾನೆನೆ ನಾನೆನೆ ಬೇರೆಯೆ,
ಮಾನಸದಲಿ ತಿಳಿಯುವಂಥ ಮಾನವರೆಂತೋ ?
ಕಾಣಲು ಆರರು ತತ್ತ್ವವ
ಮೌನಿಗಳ ಜೊತೆಗೆ ತಿರುಗಿದರೇನ್ನೆ ವೇಮಾ

೩೬೪೯ ತಾನು ಇಂದ್ರಿಯಗಳ ತೂಗಿ ಜಯಿಸಿ, ಮತ್ತೆ
ತತ್ತ್ವವಸಿ ನೋಡೆ, ತಾನಾಗುವ
ರಾಜಯೋಗಿಯಂತೆ ರಾರಾಜಿಸುತಿಹನು ವಿಶ್ವ

೩೬೫೦ ಹಿಡಿತ ಹಿಡಿಯಲಿಲ್ಲ ಹಿಡಿದು ತೊರೆಯಲಿಲ್ಲ,
ಎನಿತು ಗುಣ ವಿಕಾರ ಎಲ್ಲ ಅಡಗಿ,
ಗರ್ವ ಪಡದೆ ಒಳಗೆ ಕಂಡೊಡೆ ಸುಜ್ಞನು, ವಿಶ್ವ

— — — — — — — — — — — — — — — — — — — — — —

೩೬೫೧ ಸಂದೇಹವೆ ಇರದೆ ಮನದೊಳಗೆ ಸತ್ಯವಾತ್ಮ,
ಹೊಂದಿಗೂಡಿಸಿ ಪ್ರತ್ಯಕ್ಷ ಪೂರ್ಣವೆಂದು,
ಹೊಂದಿರುತಹುದು ಪರತತ್ತ್ವ ಹೊಂದಿ ಸತತ,
ಹೊಂದುವುದೆ ಸ್ವರ್ಗ ಸೌಖ್ಯದ ಹಾಗೆ, ವೇಮ

೩೬೫೨ ಹೊರಗಿರುವ ಸಕಲವೂ ಹೊಳೆಯುತ ಬೆಳಗುತಿಹುದು ;
ಕಡೆಮೂಲೆಯಲ್ಲಿದ್ದೇ ಕಾಣುತಿರುವ ;
ವಿಶ್ವ ತುಂಬಿ ಇರುವ ಕೇಳದಾ ಗಾನವನು,
ಹೊರಗಡೆಗಿದ್ದೇ ಕೇಳಿಸಿಕೊಳುವೆ
ಎಟುಕದ ನೀರೂರಿತು ; ಮಾಗಿದ ಹಣ್ಣನು
ಇರುವ ಜಾಗೆಯಲ್ಲಿಯೆ ಪಡೆದಿರುವೆ ;
ಸಿಕ್ಕದುದು ಜಗದಲಿ ಸಿಕ್ಕಿರಲು ಕೊನೆಗೆ
ಕೊನೆಗಿರುತಲೇ ಅಡಗಿಸಿಕೊಂಡಿರುವೆ

ತೇಟ: ಗುಳಕ ಶಿಲೆಗಳಲಿ ಮಣಿಗಳನು ಆಯ್ದುಕೊಳುವೆ,
ಘೋರ ವಿಷದಲಿ ಅಮೃತವನು ಕಂಡುಕೊಳುವೆ
ಕಾರ್ಗತ್ತಲೆಯಲಿ ಕಾಂತಿ ಕಾಣುತಿರುವೆ,
ಪರಮ ಯೋಗೀಂದ್ರ ! ವೇಮ ಭೂಪಾಲ ಚಂದ್ರ !

೩೬೫೩ ಮನೆಯ ಒಳಗೆ ಜ್ಯೋತಿ ಮತ್ತೆ ಬೆಳಗದೆಷ್ಟು ?
ನೆರೆಹೊರೆಯರ ತಮವು ಕರಗದೆಂದು
ತಾನು ದೈವವಿದ್ದು ದೈವ ಪೂಜೆಯೇಕೆ ? ವಿಶ್ವ

೩೬೫೪ ಮುಕ್ಕೋಣ ಶಿಖರದಲಿ, ಗುರಿ
ದಕ್ಕಲು, ಪರಿಪೂರ್ತಿ ಹೊಂದಿ, ಧೈರ್ಯವ ಬಿಡದೇ,
ಸೊಕ್ಕಿಯು ಸೋಲದೆ ಇರುವೊಡೆ,
ನಿಕ್ಕಿಯು ಕೈವಲ್ಯವದು ತಾ ನಿಜವೈ ವೇಮಾ

೩೬೫೫ ಅರಿವುಗೇಡಿ ಜೀವಿ ಎನಿತು ಕಾಲವಿದ್ದು,
ಸತ್ತು ಹುಟ್ಟುತಿಹರು ಸಹಜವಾಗಿ,
ಅರಿವು ಮರೆವ ಠಾವು ಆರಿಯಬಹುದು ಬ್ರಹ್ಮ, ವಿಶ್ವ

೩೬೫೬ ಚಿತ್ರ ದೀಪದಂತೆ ಚಿಂತೆಯನ್ನು ಅದುಮಿ,
ಮಿತ್ರವಾದ ಮನಸು ಮೆಲನೆ ಬೆಳೆಸಿ,
ಶತ್ರು ಗುಣಗಳೆಲ್ಲ ಸಾಧಿಸಿದೊಡೆ ಮುಕ್ತಿ, ವಿಶ್ವ

೩೬೫೭ ಕಷ್ಟವಿಹುದು ಮನಸು ಕಾಂಕ್ಷಿಸುವ ಯೋಗಿಗೆ,
ಜ್ಞಾನದೀಪ ಶಿಖೆಯು ತಾನು ಇಂಪು,
ಕಾಣಬಹುದು ಆತ್ಮ ಕ್ರಮವಾಗಿ ಜ್ಞಪ್ತಿಯಿಂ, ವಿಶ್ವ

೩೬೫೮ ದೊಡ್ಡ ಕತ್ತಲೆ ತೊರೆದು, ದೇಹ ಮರೆತು, ಚೊಕ್ಕ
ಪರಮನಲ್ಲಿ ಮನಸು ಭದ್ರಪಡಿಸಿ,
ಗರಿಮೆ ಹೊಂದಿದಂಥ ಘನನು ಎಲ್ಲೂ ಇಲ್ಲ, ವಿಶ್ವ

೩೬೫೯ ಘನಸಾರವಗ್ನಿ ದೊರಕಲು,
ಘನಸಾರವಾಯಿತಲ್ಲವೆ ಕಾರಣ ವಿದ್ಯಾ ?
ಘನಸಾರವೆ ವಿದ್ಯಾಗ್ನಿಗೆ,
ಘನಸಾರ ಕಂಟಕವಾಗುವುದಲ ! ವೇಮಾ

೩೬೬೦ ರವಿ ಚಂದ್ರ ಗತಿಗಳ ಮೀರಿದ,
ಭವಹರವಾದಾತ್ಮ ತೇಜ, ಭಾಗ್ಯ ತನಗಿರಲ್
ಶಿವ ಸಾಯುಜ್ಯವು, ಬ್ರಹ್ಮವು
ಕವಿವುದೆ ಪರಿಪೂರ್ಣ ಪದವಿ, ಕಾಣಾ, ವೇಮಾ
ಕವಿ–ತುಂಬು, ಏರಿಬರು

೩೬೬೧ ಸ್ವಾತಿ ಮಿಂಚು ನೋಡಿ, ಸಂತೋಷ ಪಡುವರು,
ಸ್ವಾತಿ ಮಿಂಚು ಇರದು ಸಫಲವಾಗಿ,
ಮಿಂಚು ಗುಡುಗು ಇರದೆ, ಮೇಘ ಸುರಿಯಬಹುದೇ ? ವಿಶ್ವ

೩೬೬೨ ಅಂತರಂಗದಲ್ಲಿ ಅನುವಿಲಿ ಶೋಧಿಸುತ,
ತಿಳಿದು ತಿಳಿದು ಮುಕ್ತಿ ತನಗೆ ಆಯ್ತು ;
ಬಾಹ್ಯ ರಂಗದಲ್ಲಿ ಭಾವಿಸಲು ತಿಳಿವುದೇ ? ವಿಶ್ವ

೩೬೬೩ ಸೂಚಿಕಾಗ್ರದೃಷ್ಟಿ ಸಮದಿ ಭ್ರೂಮಧ್ಯದಲಿ,
ಕಂಡು, ಕಂಡು ಮತ್ತೆ ಕಾಣುತಿರಲು,
ಆತ್ಮನ ಬರುಹೋಗು ಆಗಳೆ ತಿಳಿಯುವುದು, ವಿಶ್ವ

೩೬೬೪ ಬೆಳೆದು ಬಹಳ ಮನದಿ, ಬಗೆಯ ಮಿಂಚಲು ಗುರುತು,
ರೂಪ ಭ್ರಮೆಯಡಗಿ, ರೂಢಿಗೊಳದೆ,
ಕೇಡಿ ಪುರವ ಸೇರಿ, ಕಷ್ಟ ಪಡಲು ಸಲ್ಲ, ವಿಶ್ವ

೩೬೬೫ ಹಾಲಿನಲ್ಲಿ ಹುಳಿಯ ಲೀಲೆಯಿಂದ ಕಲಸೆ,
ಒಡೆಯುತಿಹುದು ಆಗ ಒಟ್ಟು ತಾನೆ,
ತಿಳಿಯೊ ಮನಸಿನೊಳಗೆ ತೇಟ ದಿವ್ಯ ತತ್ತ್ವ, ವಿಶ್ವ

೩೬೬೬ ಹಾಲು, ಮೊಸರು, ಬೆಣ್ಣೆ, ಪಾಯಸಾನ್ನ, ತುಪ್ಪ,
ರೂಪವೆಷ್ಟಾದರೂ, ನೋಡೆ ಹಾಲೆ ?
ಹಾಲಿನಂಥ ಕುಲದ ಬ್ರಹ್ಮವನೆ ಕಾಣರು, ವಿಶ್ವ

೩೬೬೭ ಮುನ್ನ ನುಡಿದ ಸತ್ಯ ಇನ್ನು ನಶಿಸಿತಿಹದಿ,
ಇನ್ನೊಮ್ಮೆಯೇಕೆಂದು ಜರಿಯ ಬೇಡಿ,
ಮನುಜ ಬುದ್ಧಿ ; ಪುನರಪಿ ಪೇಳಲೂ ಮರೆವ, ವಿಶ್ವ

೩೬೬೮ ಕಾಣೆ ಸೊಮ್ಮು ಎಷ್ಟೋ ? ಕನಕ ಮಾತ್ರ ಒಂದೆ,
ಪಶುಗಳಂದವೆಷ್ಟೋ ? ಹಾಲು ಒಂದೆ.
ಪುಷ್ಪ ಜಾತಿಯೆಷ್ಟೋ ? ಪೂಜೆಯೊಂದೆ ಕಣಾ, ವಿಶ್ವ

೩೬೬೯ ರುಚಿಗಳಾರು ಬೇರೆ ರಸದ ಸಾರವೊಂದೆ,
ಸತ್ಯನಿಷ್ಠೆ ಬೇರೆ, ಸತ್ಯವೊಂದೆ,
ಪರಮ ಋಷಿಯು ಬೇರೆ ಭಾವ್ಯವಿಪ್ಪನೊಬ್ಬ, ವಿಶ್ವ

೩೬೭೦ 'ಗಡಿಗೆ' 'ಕುಂಭ' ವೆನಲು, 'ಗುಡ್ಡ' 'ಪರ್ವತ' ವೆನಲು,
ಉಪ್ಪು–ಲವಣವೆನಲು, ಒಂದಲ್ಲವೇ ?
ಭಾಷೆಯಂತು ಬೇರೆ ; ಪರತತ್ತ್ವ ಒಂದೇ, ವಿಶ್ವ

೩೬೭೧ ಬಯಸಿದೊಡನೆ ಬೇರೆ, ಬಂಗಾರವು ಒಂದೇ,
ಪರಿಕಿಸೆ, ಘಟ ಬೇರೆ ಹರಣವೊಂದೆ,
ಹಲವು ತಿಂಡಿ ಬೇರೆ, ಹಸಿವು ಅರಿಯಲೊಂದೆ ವಿಶ್ವ

೩೬೭೨ ಮಿನ್ನ ತನುಗಳು ದಶ ಮತ್ತೆ ಪ್ರಾಣ ಒಂದೆ,
ಪುಷ್ಪ ಜಾತಿ ಹತ್ತು, ಪೂಜೆಯೊಂದೆ,
ಪಶುಗಳ ಬಣ್ಣ ಹತ್ತು ಹಾಲು ಎಲ್ಲ ಒಂದೆ, ವಿಶ್ವ

೩೬೭೩ ಭೇದಾಭವಿದಂಗಳೊಳಿಹ,
ವಾದಂಗಳ ಬಿಟ್ಟು ನೋಡಿ ವರ್ತಿಸಬೇಕೈ,
ಭೇದಾಭೇದಗಳುಡುಗಲು,
ವೇದಾಂತಿ ಜ್ಞಾನಿಯಾಗು ವಿಭಜಿಸು ವೇಮಾ

೩೬೭೪ ಎಲೆಯು ಅಡಿಕೆ ಸುಣ್ಣ ಅವು ಮೂರು ಬಣ್ಣ,
ಒಂದೆ ಆಗಿ ಇರಲು ಆಯ್ತು ಕೆಂಪು,
ಸೋಂಕಿ ತ್ರಿಗುಣಗಳು ಶೋಭಿಪ ಪರಮಾತ್ಮ, ವಿಶ್ವ

೩೬೭೫ ಮುದದಿ ಇಂದ್ರಿಯಗಳ ಮೊದಲು ನಿಲಿಸದಿದ್ದು,
ಸವೆದು ಹೋಹ ವೇಳೆ ಸನ್ಯಾಸಿಯು !
ಆತ್ಮ ಶುದ್ಧಿಯಿರದೆ, ಅಂಟುವುದೆ ಮೋಕ್ಷ ? ವಿಶ್ವ

೩೬೭೬ ಎಲೆಯ ಕಾಣಬಹುದು ; ಇರಲಿ ಹರಿಹರಾದಿ ;
ಕೊಂಬೆಕಾಣಲಿಲ್ಲ; ಕೋರಿ ನೋಡೆ.
ಕೊಂಬೆ ಕಾಣದಿರಲು ಕೊಂಡಾಡದೆ ಇಹರು ! ವಿಶ್ವ

೩೬೭೭ ಮೊದಲು ತರುವಿನಲ್ಲಿ ಮೂರು ಕೊಂಬೆ ಹುಟ್ಟಿ,
ಚಿಗುರಿ ಕೊನೆಗೆ ಬಳ್ಳಿ ಎಲೆಗಳಾಗಿ,
ಹೂವು, ಮಿಡಿಯು, ಹಣ್ಣು ಭುವನದಲಿ ತುಂಬಿವೆ, ವಿಶ್ವ

೩೬೭೮ ವಿಶ್ವವೆನಲು ಏನು ? ವಿವರಿಸಿ ನೋಡಲು,
ವಿಶ್ವವೈದು ವಿಧದಿ ವಿಶ್ರುತ ಬೆಳಗಿ,
ವಿಶ್ವವ ಮನದೊಳಗೆ ವೀಕ್ಷಿಪನು ವಿಭುದನು, ವಿಶ್ವ

೩೬೭೯ ಆತ್ಮ ತೇಜವನು ಗಮನಿಸಿ ಅಭಿನುತಿಸುತ,
ಕೀಲಕ ಬ್ರಹ್ಮ ತನ್ಮಯ ಕೇಳಿ ಮುಳುಗಿ,
ನಿತ್ಯ ಪರಿಪೂರ್ಣ ಹೊಂದುತ ನಿರತಿಶಯದಿ,
ಸತ್ಯ ಸಂಪನ್ನರಿಗಿದು ಸಾಧ್ಯ ವೇಮ

●

# ೨೨. ಗುರು ಶಿಷ್ಯ ಲಕ್ಷಣ

**ಗುರುವು ಶಿಷ್ಯರೆನಲುಕೊನೆಯು ಮೊದಲು ಎಂತು ?**
**ಗುರುವು – ಶಿಷ್ಯರೆಂಬ ಗುರುತು ಎಂತು ?**
**ಗುರುವಿಗಿಪ್ಪ ತಕ್ಕ ಗೌರವಿರದಿರಲು,**
**ವಿಶ್ವದಾಭಿರಾಮ ಕೇಳು ವೇಮ**

●

## ಗುರು–ಶಿಷ್ಯ ಲಕ್ಷಣ

'ಗು' ಎಂದರೆ ಅಜ್ಞಾನ, ಕತ್ತಲೆ, 'ರು' ಎಂದರೆ ನಿವಾರಕನು. ಹೀಗೆ ಮನದಲ್ಲಿಯ ಅಜ್ಞಾನದ ಕತ್ತಲೆಯನ್ನು ಕಳೆಯುವವನೇ ಗುರು.

ಹಲವು ಮತ–ಸಂಪ್ರದಾಯಗಳಲ್ಲಿ ಧರ್ಮ–ನೀತಿಗಳು ಭ್ರಷ್ಟವಾಗಿ ಜಾತಿಯಿಂದ ಗುರುಗಳನ್ನು ಆಯ್ಕೆ ಮಾಡುವ ದುಷ್ಟ ಕ್ರಮವು ರೂಢಿಯಲ್ಲಿದೆ. ಇದರ ವಿರುದ್ಧ ಹೋರಾಟವೂ ನಡೆದಿದೆ.

ಈ ಗುರುವು ಯಾರು ? ಶಿಷ್ಯರು ಯಾರು ? ಯಾವ ಹಂತದ ವರೆಗೆ ಒಬ್ಬನು ಶಿಷ್ಯನೆನಿಸುತ್ತಾನೆ ? ಯಾವ ಮಟ್ಟ ತಲುಪಿದ ಬಳಿಕ ಗುರುವೆನಿಸುತ್ತಾನೆ ? ಗುರುವಿಗೆ ಮತ್ತು ಶಿಷ್ಯರಿಗೆ ಏನಾದರೂ ಗುರುತುಗಳಿವೆಯೋ ? ಗುರುತ್ವವೇ ಗೌರವವಾಗಿದೆ. ಗೌರವವಿಲ್ಲದಲ್ಲಿ ಗುರುತ್ವವೆಲ್ಲಿ ?

ಶಿಷ್ಯ ತನ್ನ ಧರ್ಮಕ್ಕನುಸರಿಸಿ ಗುರು ಸೇವೆ ಮಾಡಬೇಕು. ಆಜ್ಞೆಯನ್ನು ಪರಿಪಾಲಿಸಬೇಕು. ಆಗ ಗುರುವು ಹರ್ಷಿತನಾಗುತ್ತಾನೆ. ಅಷ್ಟಾದರೆ ಸಕಲ ಕಾರ್ಯಗಳು ತಟ್ಟನೆ ಕೈಗೂಡುತ್ತವೆ.

ಶಾಂತ ಮನಸ್ಸಿರಬೇಕು. ಶೀತದಂಶದ ಪ್ರಕೃತಿಯುವನಿರಬೇಕು. ಹಾಗಿರುವವನೇ ಪರಮಯೋಗಿ. ಅವನಿಗೆ ಬೇಗ ಮುಕ್ತಿ ಲಭಿಸುವುದು.

ಪರಮ ಗುರುವು ಶಿಷ್ಯನಿಗೆ ಭಕ್ತಿ ಸಾಧನೆಯನ್ನು ದೃಷ್ಟಾಂತ ಮೂಲಕ ಹೇಳಿ ರೂಢಿಸುವನು. ಅವನೇ ತನ್ನ ಪ್ರಾರ್ಥನೆಯ ಮೂಲಕ ವೇದಾಂತ ವೇದ್ಯವನ್ನು ಕಾಣುತ್ತಾನೆ.

ಶಿಷ್ಯರಿಗೆ ಗುರುವು ಮಾರ್ಗದರ್ಶಿಯಾಗಬೇಕು. ಹೋಗಬೇಕಾದ ಹಾದಿಯ ಗುರುತನ್ನು ತಾನು ಕಂಡುಕೊಂಡಿರಬೇಕು. ಆದರೆ ಶಿಷ್ಯರಿಗೆ ಶಿವರೂಪವನ್ನು ತಿಳಿಸದೆ, ಮತ–ಪಂಗಡಗಳನ್ನು ಕಟ್ಟಿ ಅವರನ್ನು ಒಡಕಿನ ಅಂಧಕಾರದಲ್ಲಿ ನೂಕುವ

ತಥಾಕಥಿತ ಗುರುಗಳು, ಗುರುತರಿಯದೆ ಬೆಳೆದ ನಿಲುವನ್ನು ಹೋಗುವ ಕುರುಡು ಎತ್ತಿನಂತಿರುತ್ತಾರೆ.

ಇನ್ನು ಕೆಲವರ ಗ್ರಹಿಕೆಯು ಹೀಗೆ : ಗುರುವಾಗುವವನು ಕಠಿಣ ತಪಸ್ಸು ಮಾಡಿರುತ್ತಾನೆ. ಮನೆ ಮಾರು ತೊರೆದು ಗುಡ್ಡ–ಗುಹೆಗಳಲ್ಲಿ ವಾಸಿಸುತ್ತಾನೆ. ಇತ್ಯಾದಿ. ಹೀಗೆ ಗುಹೆಗಳನ್ನು ಸೇರಿ, ಗುರುವನ್ನು ಅರಸುತ್ತ ಹೋದರೆ, ಕ್ರೂರ ಮೃಗವು ಗವಿಯಿಂದ ಹಾರಿ ಬಂದು ಈ ಲೋಕದಿಂದ ಮುಕ್ತಿ (?) ನೀಡಿ ಯಮ ಸದನಕ್ಕೆ ಕಳಿಸುತ್ತದೆ.

ಇನ್ನು ಕೆಲವರು ತಮಗೆ ತಿಳಿಯದಿದ್ದರೂ ತಿಳಿದವರಂತೆ ನಟಿಸುತ್ತಾರೆ. ಮತ್ತು ತಮಗಿಂತ ಹೆಚ್ಚು ತಿಳಿದವರನ್ನು ಹೀಗಳೆಯುತ್ತಾರೆ. ಹೇಗೆಂದರೆ ಮೊಟ್ಟೆಯೊಂದು ಮರಿಯನ್ನು ಕಂಡು ಅಣಿಕಿಸಿದಂತೆ. ಜ್ಞಾನಿಯು ತನ್ನ ಅವಸ್ಥೆಯನ್ನೆಲ್ಲ ಅರಿತು ದಾಟಿ, ಮುಂದೆ ಹೋದವನಷ್ಟೇ. ಅದನ್ನರಿಯದೆ ಮೊಟ್ಟೆಯಲ್ಲಿಯ ಪಿಂಡವು ಮರಿಯನ್ನು ಅಣಕಿಸಿದಂತೆ ಈ ಅಜ್ಞರು ಜ್ಞಾನಿಗಳನ್ನು ಅಣಕಿಸುತ್ತಾರೆ.

ಹಲವು ಮಾಯಾ ಜಾಲದ ಅವಿದ್ಯಾ ಸಾಧಕರೂ ಸಾಧನೆಯಲ್ಲಿ ನಿರತರಾಗಿರುತ್ತಾರೆ. ಅವರು ಮಾಯೆಯನ್ನು ತೋರಿ, ಜನಮನವನ್ನು ಮರುಳುಗೊಳಿಸುತ್ತಾರೆ. ಮಾಯೆಗೆ ದೂರವಾಗಿ ಮನವನ್ನಿರಿಸಿ, ಗುರುನಿಷ್ಠೆ ಹೊಂದಿ ಪ್ರಬಲವಾಗುವುದೇ ಸರಿಯಾದ ಹಾದಿಯಾಗಿದೆ.

ಮಾಯೆಗೆ ಬಲಿಯಾದ ಜನರು, ನಿಜವನ್ನು ಮೆಚ್ಚುವುದಿಲ್ಲ. ನಿಜವನಾಡಿದರೆ ಲೋಕದ ಜನರು ನಿಂದಿಸುತ್ತಾರೆ. ಆದ್ದರಿಂದ ನೀಚರೆದುರು ನಿಜವನ್ನು ಆಡಬಾರದು. ಅಸತ್ಯವನ್ನಂತೂ ಯಾರೆದುರೂ ಆಡಬಾರದು. ಆದರೆ ನಿಜವಾದ ಮಹಾತ್ಮರೊಡನೆ ನಿಜವನ್ನು ಆಡಬಹುದು.

ಪುರೋಹಿತ ಎಂದರೆ 'ಪುರಾಸಿ ಹಿತಂ ಇತಿ ಪುರೋಹಿತ' ಅರ್ಥಾತ್ ಎದುರೆದುರೇ ಹಿತವನ್ನು ಬೋಧಿಸುವವನೇ ಪುರೋಹಿತನು. ಆದರೆ ಬ್ರಹ್ಮವನ್ನು ಅರಿಯುವ ವರೆಗೆ ಪೌರೋಹಿತ್ಯವು ಸಲ್ಲ, ಇನ್ನು ಬ್ರಹ್ಮವನ್ನು ಅರಿತಾಗ ಭೂತ ಭವಿಷ್ಯಗಳನ್ನು ತಿಳಿಯಬಹುದು. ಆಗ ಪಂಚಾಂಗ ಹೇಳಬಹುದು. ಆದರೆ ಬುದ್ಧಿಯನ್ನು ಪಳಗಿಸುವ ತನಕ ಪಂಚಾಂಗ ಹೇಳುವುದು ಸರಿಯಲ್ಲ.

ಹಲವು ಗುರುಗಳು, ಜೊಳ್ಳು ಮಾತನಾಡುತ್ತ ಜಗತ್ತಿನಲ್ಲಿ ಅಲೆಯುತ್ತಾರೆ. ಅನೇಕ ಕರ್ಮಗಳನ್ನು ಮಾಡಲು ಹೇಳುತ್ತಾರೆ. ಅವರ ರೀತಿ ತೊಂದರೆದಾಯಕವಷ್ಟೇ. ಹಲ್ಲಲ್ಲಿ ಹುಳು ಸೇರಿ ನೋವು ಮಾಡುವಂತೆ.

ದೇವರು ಕೊಟ್ಟಿದ್ದನ್ನು ತಿಂದು ಅತ್ತಿ ಅಲೆಯದಿದ್ದರಾಗದೇ ? ದೊಡ್ಡವನೆನಿಸಿಕೊಳ್ಳಲು ಕಷ್ಟಪಡುತ್ತಾರಲ್ಲ, ಮೂಢ ಜನರು ! ದೊಡ್ಡಿಸ್ತಿಕೆ ಹೊಂದದೆ

ದೊಡ್ಡವನಾಗುವನೆಂದು ? ಬುದ್ಧಿಗೇಡಿ ಇದ್ದರೆ ಅವನನ್ನು ಪಂಡಿತ ಪಂಕ್ತಿಯಲ್ಲಿ ಸೇರಿಸಿಕೊಳ್ಳುವರೇ ?

ಏನೋ ತಿಳಿಯಬೇಕೆಂಬ ಜಿಜ್ಞಾಸೆಯಿಂದ ತಡಮಾಡದೆ ದೇಹಿಯು ತಿಳಿದು, ಪ್ರೀತಿ ಇನ್ನೂ ಇರುವಾಗಲೇ ಹಣವು ತೀರಿ ಹೋದರೆ, ಒಣತಿಳಿವಿನಿಂದೇನು ಪ್ರಯೋಜನ ? ಮುಕ್ತಿ ದಾರಿ ತೋರದ ಗುರುವು ಹಣ ದೋಚುವ ಕಳ್ಳನಷ್ಟೇ ಸರಿ.

ಎಲ್ಲ ದೋಷಗಳನ್ನು ಕೊಚ್ಚಿ ಹಾಕಿ, ಸರಿಯಾದ ಹಾದಿ ಹಿಡಿದು, ಚಿನ್ಮಯಾನಂದದಲ್ಲಿ ಪಟ್ಟಾಭಿಷಿಕ್ತನಾಗಿರುವವನನ್ನು ತಿಳಿಯಬಹುದೇ ? ಅವನಿಯಲ್ಲಿ ಅವನು ಪರಶಿವನೆಂದು ಬಣ್ಣಿಸುತ್ತಾರೆ.

ಅನ್ಯರ ತಪ್ಪನ್ನಾಗಲಿ ಗುರುವಿನ ತಪ್ಪನ್ನಾಗಲಿ, ಎಣಿಸುವವನು ಶಿಷ್ಯನಾಗಲಾರನು. ಆದರೆ ಸತ್ಸಂಗದಿಂದ ತಾನು ವೀಕ್ಷಿಸಿ ತನ್ನ ತಪ್ಪನ್ನು ಅರಿತುಕೊಳ್ಳುವವನೇ ಶಿಷ್ಯನು. ತಪ್ಪನ್ನು ಅರಿತುಕೊಂಡು ತಪ್ಪು ಮಾಡುವುದನ್ನು ಬಿಟ್ಟರೆ, ಅವನು ಭದ್ರವಾಗಿ ನಿಲ್ಲುತ್ತಾನೆ.

**೩೬೮೦ ಗುರುವು ಶಿಷ್ಯರೆನಲು ಕೊನೆಯು ಮೊದಲು ಎಂತು ?**
**ಗುರುವು–ಶಿಷ್ಯರೆಂಬ ಗುರುತು ಎಂತು ?**
**ಗುರುವಿಗಿಷ್ಟ ತಕ್ಕ ಗೌರವವಿರದಿರಲು; ವಿಶ್ವ**

**೩೬೮೧ ಶಿಷ್ಯಧರ್ಮವರಿತು ಚೊಕ್ಕ ಭಕ್ತಿಯಿಂದ,**
**ಗುರು ಸೇವೆಯು ಗೆಯ್ದು ಕುದುರಿದೊಡನೆ,**
**ಸರ್ವ ಕಾರ್ಯಗಳಲಿ ಚಕ್ಕನೆ ಸರಿ ಹೋಯ್ತು ವಿಶ್ವ**

**೩೬೮೨ ಶಾಂತ ಮನಸ್ಸಿನವ ಶೀತದಂಶವಿಹನ,**
**ಪರಿಯಂತಿರುವವನು, ಪರಮಯೋಗಿ,**
**ಅಂಥವನು ಮುಕ್ತಿಯ ಅತಿ ಬೇಗ ಹೊಂದುವ, ವಿಶ್ವ**

**೩೬೮೩ ರೂಢಿಯಿಂದ ಭಕ್ತಿ ರೂಪಿಸಿ ಹೇಳುವ ;**
**ಅವನೆ ಪರಮ ಗುರುವು ವಸುಧೆಯಲ್ಲಿ**
**ಬೇಡಿ ಪರವ ಕಂಡವ ವೇದಾಂತವೇದ್ಯನು ವಿಶ್ವ**

೩೬೮೪ ಶಿಷ್ಯ ವರ್ಗಕ್ಕೆಲ್ಲ ಶಿವರೂಪ ತಿಳಿಸದೆ,
ಸಲ್ಲದ ಮತ ಕಟ್ಟಿ ನೂಕುವವರೆ,
ಗುರುತರಿಯದೆ ನಿಲುವ ಹೊಕ್ಕ ಕುರುಡೆತ್ತಲ ! ವಿಶ್ವ

೩೬೮೫ ಗುಹೆಯೊಳಗೆ ಸೇರಿ, ಗುರುವನರಸುವಾಗ,
ಕ್ರೂರ ಮೃಗವದೊಂದು ಕೊಸರಿ ಬರಲು,
ಮುಕ್ತಿದಾರಿ ತಾನೆ ಮುಂದಾಗಿ ತೋರಿತು, ವಿಶ್ವ

೩೬೮೬ ಮೊಟ್ಟೆ ಬಂದು ಮರಿಯ ಮತ್ತೆ ಅಣಕಿಸುತಿಹ,
ಪರಿಯ ತಿಳಿಯರೇನು ಹೆಚ್ಚು ಜನರು ?
ಜ್ಞಾನಿಯಪ್ಪ ಜನರ ಜರೆಯುವರು ಸುಮ್ಮನೆ, ವಿಶ್ವ

೩೬೮೭ ಮಾಯಾ ಮೂಲದ ಕೆಲವರು,
ಮಾಯೆಗಳ ತೋರಿಸಿ ಮನವ ಮರುಳುಗೊಳಿಸುವರ್,
ಮಾಯೆಯ ಹೊರಗಿಹ ಚಿತ್ತವ,
ಕೊಯ್ಯದೆ ಗುರುನಿಷ್ಠೆ ತಾಳಿ ಪ್ರಬಲಿಸು, ವೇಮಾ.

೩೬೮೮ ನಿಜವನಾಡುವವನ ನಿಂದಿಸುವದು ಜಗವು,
ನಿಜವಾಡಬಾರದು ನೀಚರೊಡನೆ,
ನಿಜ ಮಹಾತ್ಮರೊಡನೆ ನಿಜವನಾಡಬೇಕು. ವಿಶ್ವ

೩೬೮೯ ಪಾಡಲ್ಲವೊ ಜಗದಿ ಪಂಚಾಂಗ ಪೇಳಲು,
ಇನಿತಾದರು ಬುದ್ಧಿ ದಣಿಸದನಕ ;
ಬ್ರಹ್ಮವರಿಯುವನಕ ಪೌರೋಹಿತ್ಯ ಹೊಲ್ಲ, ವಿಶ್ವ

೩೬೯೦ ಜೊಳ್ಳು ಮಾತನಾಡಿ ಜಗದಿ ತಿರುಗುವಂಥ
ಕಳ್ಳ ಗುರು ಕಟ್ಟುವ ಕರ್ಮಗಳನು,
ಹಲ್ಲೊಳು ಹುಳು ಸೇರಿ, ನೋವುಂಟು ಮಾಡದೆ? ವಿಶ್ವ

೩೬೯೧ ಕಾಣು ; ಇಹುದ ತಿಂದು, ಕದಲದಿರಬಾರದೆ ?
'ಮಹಾ' ಎನಿಸಹೋಹ, ಮೂಢ–ಸಾಧು,
ಬುದ್ಧಿಯಿಲ್ಲದವನ ಪಂಕ್ತಿಯಲಿ ಕರೆವರೆ ? ವಿಶ್ವ

೩೬೯೨ ತಿಳಿವಿಗಾಗಿ ತಿಳಿದು, ತಡಮಾಡದದೆ ದೇಹಿ,
ತೀರಗೊಡದೆ ಪ್ರೀತಿ, ತೀರಿ ರೊಕ್ಕ,
ಮುಕ್ತಿಕೊಡದ ಗುರುವು ಮತ್ತೆ ಕಳ್ಳ ಮಗನು, ವಿಶ್ವ

೩೬೯೩ ಕಲುಷಗಳನು ಎಲ್ಲ ಖಂಡಿಸಿ, ಗತಿಯರಿತು,
ಚಿನ್ಮಯಾನಂದ ಪಟ್ಟಾಭಿಷಿಕ್ತನಿರೆ,
ಅವನ ಎಣಿಸಲಳವೆ ? ಅಬಬ ಅವನಿಯಲ್ಲಿ,
ಪರಶಿವನವನೆಂದು ಬಣ್ಣಿಸುತಿರು ವೇಮ.

೩೬೯೪ ತಪ್ಪನೆಣಿಸುವವನು ಶಿಷ್ಯನು ತಾನಹನೆ ?
ತಪ್ಪು ಅರಿಯುವವನೆ ಶಿಷ್ಯನಹನು,
ತಪ್ಪನೆಣಿಸುವವನು ಶಿಷ್ಯನು ತಾನಹನೆ ? ವಿಶ್ವ

●

# ೨೩. ಸಾಧು ಲಕ್ಷಣ

**ಸತ್ಯ ಕಂಡರಿವುದೆ ಜ್ಞಾನದರಿವು ಕಣಾ;**
**ಜ್ಞಾನದರಿವಾದೊಡೆ ಸತ್ಯದರಿವು ;**
**ಜ್ಞಾನ ಸತ್ಯ ಸಮವಾಗಿಹ ದ್ವಿಜನೆನಿಪ,**
**ವಿಶ್ವದಾಭಿರಾಮ ಕೇಳು ವೇಮ.**

●

## ಸಾಧು – ಲಕ್ಷಣ

ಸಾಧಕನು ತನ್ನ ಮನ ಮತ್ತು ಇಂದ್ರಿಯಗಳನ್ನು ಸಾಧುಗೊಳಿಸಿದಾಗ ಸಾಧುವೆನಿಸುತ್ತಾನೆ. ಈ ಉದ್ದಿಶ್ಯವನ್ನು ವಿವಿಧ ಉಪಾಯಗಳಿಂದ ಸಾಧಿಸುವುದುಂಟು. ಜೀವಾತ್ಮ ಪರಮಾತ್ಮರ ಸಂಯೋಗವನ್ನು ಸಾಧಿಸುವ ಹಲವು ಯೋಗ ಮಾರ್ಗಗಳಲ್ಲಿ ರಾಜ ಮಾರ್ಗದಂತಿರುವ ರಾಜ ಯೋಗವು ಇಂಥ ಗುರಿಯನ್ನು ಸಾಧಿಸುವ ಪರಿಣಾಮಕಾರಿ ಸಾಧನೆಯಾಗಿದೆ.

ರಾಜಯೋಗಿಯ ಮಹಿಮೆಯನ್ನು ರಾಜಯೋಗಿಯೇ ಅರಿವನು. ಬೇರೆ ಜನರಿಗೇನು ಗೊತ್ತು ? ತಾನು –ನಾನುಗಳ ಭೇದವಳಿಸಿ ಒಂದಾದ ರಾಜಯೋಗಿಯು ತಾನೇ ದೈವವಾಗಿರುತ್ತಾನೆ. ಅವನಲ್ಲಿ ಉಪಾಸ್ಯ – ಉಪಾಸಕ, ಪೂಜ್ಯ – ಪೂಜಕ, ಎಂಬ ಅಂತರವಿರುವದಿಲ್ಲ. ಅಂದ ಮೇಲೆ ತನ್ನ ಹೊರತು ಬೇರಾವ ದೈವವನ್ನವನು ಪೂಜಿಸಬಲ್ಲನು?

ಗಾಜುಗೊಳವೆಯಲ್ಲಿ ದೀಪವಿರಿಸಿದರೆ, ಆ ದೀಪವು ಬೆಳಗಿ ಪರಾವರ್ತಿತ ಕಿರಣಗಳ ಮೂಲಕ ಸುತ್ತಲೂ ಪ್ರಕಾಶ ಬೀರುತ್ತದೆ. ಅದೇ ರೀತಿ ತಿಳಿದ ಜ್ಞಾನಿಗಳ ಮೂಲಕ ಸುತ್ತಲೂ ಪ್ರಕಾಶ ಬೀರುತ್ತದೆ. ಅದೇ ರೀತಿ ತಿಳಿದ ಜ್ಞಾನಿಗಳ ಅಂತರಾಳದಲ್ಲಿ ಜ್ಞಾನವು ಅಂತರ್ಯದಲ್ಲಿ ಬೆಳಗಿ, ಅವರಿಗೆ ಮಾರ್ಗಸೂಚಿಯಾಗುವುದಲ್ಲದೆ, ಸುತ್ತಮುತ್ತಣ ಇರುವವರಿಗೂ ಕೂಡ ದಾರಿದೀಪವಾಗುತ್ತದೆ.

ಜ್ಞಾನದ ಅರಿವು ಮೂಡಿದೊಡನೆ ಸತ್ಯವನ್ನು ಅರಿಯಬಹುದು. ಆತ್ಮ ಸತ್ಯವು ಅನುಭವಕ್ಕೆ ಬಂದಂತೆಲ್ಲ ಜ್ಞಾನವು ಘನಗೊಳ್ಳುತ್ತದೆ. ಜ್ಞಾನ ಮತ್ತು ಸತ್ಯಗಳು ಅಂದರೆ ಅರಿವಿನ ವಿಸ್ತಾರ ಮತ್ತು ಅನುಭವದ ಆಳಗಳು ಸಮನಿಸಿದರೆ, ಅವನು ಪರಲೋಕದ ಜ್ಞಾನಾನುಭವಗಳನ್ನು ಪಡೆಯಲು ಹೊಸ ಜನ್ಮ ತಾಳಿದ ದ್ವಿಜನೆನಿಸುತ್ತಾನೆ.

ಕಣ್ಣಿಗೆ ಅಂಜನವನ್ನು ಹಚ್ಚಿಕೊಂಡು, ಬಾಹ್ಯ ಚಕ್ಷುವಿಗೆ ಕಂಡುಬಾರದ ನಿಧಿ–ನಿಕ್ಷೇಪಗಳನ್ನು, ಗುಪ್ತ ಜಲರಾಶಿಯನ್ನು, ಕಳೆದುಹೋದ ವಸ್ತುಗಳನ್ನೂ

— — — — — — — — — — — — — — — — — — — — —

ಒಳಗಣ್ಣುಗಳಿಂದ ನೋಡುವುದುಂಟು. ಅದೇ ರೀತಿ ಬಾಹ್ಯ ಪ್ರಪಂಚದ ದೃಷ್ಟಿ ತೊರೆದು, ಒಳಗಣ್ಣಿನಿಂದ ಆತ್ಮ ವಸ್ತುವನ್ನು ಅರಿತುಕೊಳ್ಳುವವನೇ ಯೋಗಿಯೆನಿಸುತ್ತಾನೆ. ಬೆಳಗ್ಗೆ ಉಷೆಯ ಆಗಮನವನ್ನು ತಿಳಿದು ಕೂಗುವ ಹುಂಜವು ಹೊರಗಣ್ಣಿನಿಂದ ಬೆಳಕು ಕಂಡು ಕೂಗದೆ, ಅದಕ್ಕೆ ಅದರದೇ ಆದ ಮನೋವೇಧಕ ಸೂಚನೆಗಳಿರುತ್ತವೆ.

ನರ್ತಕಿಯು ನರ್ತನೆ ಮಾಡುತ್ತಿದ್ದರೆ ಅಭಿಮಾನೀ ಪ್ರೇಕ್ಷಕರು ಸುತ್ತುಮುತ್ತು ನೆರೆದು ಸುಖಪಡುತ್ತಾರೆ. ಅದೇ ರೀತಿ ನಾಯಕನು ತನ್ನ ನಾಯಕತ್ವವನ್ನು ಮೆರೆಸುವಾಗ ಪರಿಜನರು ಸುತ್ತು ಮುತ್ತು ನೆರೆದಿರುತ್ತಾರೆ. ಅಂದ ಮೇಲೆ, ಬ್ರಹ್ಮ ಪದದ ಉಚ್ಚ ಸ್ಥಿತಿಗೇರಿ, ನಾಯಕರಾಗಿ ಶಿಷ್ಯಗಣದ ಮಧ್ಯೆ ಬದುಕಬಹುದು.

ವಿವೇಕ ವೈರಾಗ್ಯಗಳು ಸಾಧಕನಿಗೆ ತುಂಬಾ ಅಗತ್ಯ. ಭುವಿಯಲ್ಲಿ ನರ–ಕುಲದಲ್ಲಿ ಜನಿಸಿ, ಬೆಳೆದು, ಅದರಲ್ಲಿ ವೈರಾಗ್ಯ ತಾಳಿ, ವಿವೇಕದಿಂದ ಅನವಶ್ಯಕವಾದುದನ್ನು, ಅನಿಷ್ಟವಾದುದನ್ನು 'ಛೀ'ಯೆಂದು ಪೂತ್ಕರಿಸಿ ಶಿವ ಕುಲದಲ್ಲಿ ಸಂಚರಿಸುವವನೇ ಸಿದ್ಧನಾಗುತ್ತಾನೆ.

'ಗುಣ' ಇದು ಸಂಸ್ಕೃತ ಪದ. ಅದರ ಅರ್ಥವೆಂದರೆ ಹಗ್ಗ. 'ಗುಣಿ' ಎಂದರೆ ಗುಣದಿಂದ ಪಶುವನ್ನು ಕಟ್ಟುವ ಗೂಟ.

ಅಖಿಲ ಜನಗಳೆಲ್ಲ, ಮಾನವ ಮನವನ್ನು ವಿಷಯಗಳಿಗೆ, ಗುಣಗಳಿಂದ ಕಟ್ಟಿ ಹಾಕುತ್ತವೆ. ಈಗ ಪಾರಾಗುವ ಉಪಾಯವೆಂದರೆ ಗುಣಗಳನ್ನು ಅಂದರೆ ಸತ್ತ್ವ, ರಜಸ್ ಮತ್ತು ತಮಸ್ಸುಗಳನ್ನು ಜ್ಞಾನವೆಂಬ ಖಡ್ಗದಿಂದ ಕೊಚ್ಚಿ ಹಾಕಿ ಮುಕ್ತನಾಗಬೇಕು.

ಅಜ್ಞಾನ–ಆಲಸ್ಯ ಸಂಗಧ ತಾಮಸ ಬುದ್ಧಿಯನ್ನು ಸುಟ್ಟುಹಾಕಿ, ಮನದಲ್ಲಿಯೇ ನಿಯಮ–ನಿಷ್ಠೆಗಳನ್ನು ಸರಳಗೊಳಿಸಿ, ಕಾಮಾದಿಗಳನ್ನು ಜಯಿಸಿದರೆ, ಮುಕ್ತಿ ಲಭ್ಯವಾಗುತ್ತದೆ. ಹೀಗೆ ಸಾಧಿಸಿದ ಮಹಾತ್ಮನನ್ನು ಸೇವಿಸಿ ಕೀಲು ತಿಳಿಯಬೇಕು.

ಆತ್ಮದ ಅರಿವನ್ನು ಇರಿಸಿಕೊಳ್ಳಬೇಕು. ಲೌಕಿಕವನ್ನು ಮರೆಯಬೇಕು. ಮುಂದೆ ಜ್ಞಪ್ತಿಯನ್ನೂ ಮೀರಿ ಹೋದವನು ತತ್ತ್ವವನ್ನು ಅರಿಯಬಹುದು. ಅವನೇ ಪರಮ ಪರಿಪೂರ್ಣ ಸುಖಧಾಮವನ್ನು ಪಡೆದುಕೊಳ್ಳಬಹುದು. ತನ್ನ ಹೃದಯದಲ್ಲಿ ಭದ್ರವಾಗಿ ಚಿಗುರಿಯನ್ನು ಕಂಡು ಉಳಿದುಕೊಂಡರೆ ನಿರುಪಮಾನಂದ ಸಂತೃಪ್ತಿ ದೊರೆಯುತ್ತದೆ.

ಜಗತ್ತಿನಲ್ಲಿ ಗಂಡ–ಹೆಂಡಿರು ಸೇರಿ ಸಂಭೋಗಿಸಿದಾಗ ಮೈಮರೆಯುತ್ತಾರೆ. ಎರಡೆಂಬ ಭಾವನೆಯೂ ಉಡುಗಿರುತ್ತದೆ. ಅದೇ ರೀತಿ, ಭೇದವುಡುಗಿ ಸರ್ವವನ್ನೂ ಏಕವೆಂದು ನೋಡಿದರೆ ಅರಿವು ಏಕವಾಗಿರುವುದು. ಲೋಕ–ಪತಿಯಾದ ಪರಮನು ಏಕರೂಪನಾಗಿ ಲೋಕದಲ್ಲಿ ಹೊಳೆಯುತ್ತಾನೆ.

— — — — — — — — — — — — — — — — — — — — — —

ತನ್ನನ್ನು ತನ್ನೊಳಗೇ ನೋಡಿದರೆ, ತತ್ತ್ವವನ್ನು ಅರಿಯುತ್ತಾನೆ. ನಿರ್ವಾಣ ಪದವಿಯನ್ನು ಈಕ್ಷಿಸುತ್ತಾನೆ. ಆಗ ಪರಮಾತ್ಮನ ಮಹಿಮೆಯನ್ನು ಸ್ತುತಿಸಬೇಕು. ಸಮತ್ವದ ಬುದ್ಧಿಯಿಂದ ಅವನನ್ನು ಕಂಡು ಅರಿಯಬೇಕು. ಹಾಗೆ ಕಾಣದೆ ಬೇರೇನನ್ನು ಕಾಣಬಯಸುವೆ ? ಅದೆಲ್ಲ ವ್ಯರ್ಥ.

ಒಬ್ಬನು ರೋಗಿಯಾದರೆ, ಇನ್ನೊಬ್ಬನು ನಿತ್ಯ ಜೀವನದ ದಿಕ್ಕು ತಿಳಿದು ನಡೆದು, ತ್ಯಾಗಿಯಾಗುತ್ತಾನೆ. ಒಬ್ಬನು ಐಹಿಕಕ್ಕೆ ಒಲಿದು ಭೋಗಿಯಾದರೆ ಇನ್ನೊಬ್ಬನು ಪರಮನನ್ನು ಸೇರ ಬಯಸುವ ಯೋಗಿಯಾಗುತ್ತಾನೆ. ಒಬ್ಬನು ಚಿಕ್ಕ ಪುಟ್ಟ ವಿಷಯಗಳಲ್ಲಿ ತೊಡಗಿ ಲಾಘವತ್ವ ಹೊಂದಿದರೆ, ಇನ್ನೊಬ್ಬನು ವೇಮನನಂತೆ ಘನ ಮಹಾತ್ಮನಾಗುತ್ತಾನೆ. ಕವಿಗಳು ಬಣ್ಣಿಸುವ ವಿವಿಧ ರೂಪಗಳೆಲ್ಲ ನೀನೊಬ್ಬನಿಗೆ ಸಲ್ಲುತ್ತದೆ. ತತ್ ತ್ವಂ ಅಸಿ; ಅದೇ ನೀನಾಗಿದ್ದೀ.

ಎದುರಿಗೆ ಬಂಗಾರವೇ ಇರಲಿ ; ಭಾಮೆಯರೇ ಇರಲಿ ಮನಸ್ಸಿನಲ್ಲಿ ಕಾಮಿನಿ–ಕಾಂಚನದ ಚಿಂತೆ ಮಾಡದೆ ತನ್ನ ಸ್ವಸ್ವರೂಪಾನಂದದಲ್ಲಿ ನಿರತನಾದವನೇ ಪರಮಯೋಗಿ. ಭೂಮಿಯಲ್ಲಿ ಅವನನ್ನೇ ಬಣ್ಣಿಸಬಹುದು.

ತನ್ನಲ್ಲಿರುವ ದೋಷಗಳನ್ನು ತೊಡೆದು, ಸಾಧನೆಯ ಮೂಲಕ ಚಿದ್ಬಯಲನ್ನು ಸೇರಿ ಸಂಪತ್ತಿನ ಮಾಯೆಗೆ ಸಿಕ್ಕು ಬೀಳದವನು ಶಿವನಂತಿರುವನು. ಅವನಂತಿರುವುದು ಜನರಿಗೆ ಶಕ್ಯವೇ ?

ನಾವು ಪುಣ್ಯ ಗಳಿಸಲು ತೀರ್ಥ ಕ್ಷೇತ್ರಗಳನ್ನು ಸುತ್ತಿ ಬರಬಹುದು. ಆದರೆ ಪುಣ್ಯರಾಶಿಯೆಲ್ಲವೂ ಸಾಧು ಜನರ ದರ್ಶನ ಮಾತ್ರದಿಂದ ಲಭಿಸುತ್ತದೆ. ಬಿದ್ದ ನೀರು ನದಿಯ ತಳದಲ್ಲಿ ಇಂಗಿದಾಗ ನೈಸರ್ಗಿಕ ಶೋಧನೆಯಾಗಿ ಶುದ್ಧವಾಗುವಂತೆ, ಮಹಾತ್ಮರ ಸಂಗದಲ್ಲಿ ಪರ್ಯವಸಾನಗೊಂಡ ಪರ್ಯಟನವು ಪುಣ್ಯಕರವಾಗುತ್ತದೆ.

ಸೃಷ್ಟಿಯಲ್ಲಿ ಶಿವಾನುಭವವಾಗದೆ ಸಾಧು ಕುಲಕ್ಕೆ ಸಂಶಯಗಳು ಅಳಿಯಲಾರವು. ಬೆಳಗುವ ದೀಪವಿಲ್ಲದಿದ್ದರೆ, ಕತ್ತಲು ಅಳಿಯುವುದೇ?

ಸ್ಕಂದ, ಸನಂದ, ವಶಿಷ್ಠ, ವಿಶ್ವಾಮಿತ್ರ ಕಾಶ್ಯಪರೆಂಬ ಐವರು ಋಷಿಗಳು ಭೂಮಿಯಲ್ಲಿ ಪರಮ ಪವಿತ್ರರಾಗಿ ಲೋಕಗಳಲ್ಲಿ ಮೇಲ್ಮೆಯನ್ನು ಪ್ರಕಾಶಿಸಿದ್ದಾರೆ. ಅವರ ಆದರ್ಶವನ್ನು ಎದುರು ಇರಿಸಿಕೊಂಡು, ಸಂಚಿತ ಕರ್ಮಗಳನ್ನು ಕಳೆದು, ನಿನ್ನನ್ನು ನೀನು ನೋಡಿಕೊಳ್ಳಬೇಕು.

ಚಿತ್ರದಲ್ಲಿಯ ದೀಪವು ನಿಜವಾದ ದೀಪವೇನೋ ಎಂಬಂತೆ ತೋರುವುದು. ಆದರೆ, ಅದು ಪ್ರಕಾಶವನ್ನೇನೂ ಬೀರಲಾರದು. ಹಾಗಾಗಿ ಕತ್ತಲೆಯನ್ನೂ ಕಳೆಯಲಾರದು. ಆ ರೀತಿ ಕೇವಲ ಶಾಸ್ತ್ರ ವಾಸನೆಯಿದ್ದು, ಸ್ವಾನುಭೂತಿಯಿಲ್ಲವಾದರೆ, ಸಾಧು ಕುಲದ ಸಂಶಯಗಳು ಅಳಿಯವು.

ಸ್ವಾನುಭೂತಿ ಇದ್ದರೆ, ಮತ್ತು ಅದಕ್ಕೆ ಪೋಷಕವಾಗಿ ಶಾಸ್ತ್ರವಾಸನೆಯೂ ಇದ್ದರೆ, ಸಾಧಕನಿಗೆ ಸಂಶಯಗಳು ಉಳಿಯಲಾರವು. ಅವನ ಚಿತ್ ಸ್ವರೂಪವೇ ಬೆಳಗುವ ದೀಪವಾಗಿ ಅಜ್ಞಾನದ ಕತ್ತಲೆಯನ್ನು ಕಳೆಯುತ್ತದೆ.

ಮಾನ್ಯರಾದ ವಿಭುಧ ಜನರು ಮನಸ್ಸನ್ನು ಗುಪ್ತವಾಗಿ ಇರಿಸುತ್ತಾರೆ. ತಮ್ಮ ಅಂಥ ಇಂಥ ಅನುಭೂತಿಗಳನ್ನು ಕುರಿತು ಬಡಾಯಿ ಕೊಚ್ಚುವುದಿಲ್ಲ. ಹೀಗೆ ನುಡಿಯದಿರುವುದೇ ಬುಧರ ಧರ್ಮವೆನಿಸುತ್ತದೆ. ಎಡೆ ಬಿಡದೆ ಮಾತನಾಡುತ್ತಿದ್ದರೆ ತತ್ತ್ವವು ವಿಚಲಿತವಾಗುತ್ತದೆ.

ತನುವೆಂಬ ಕ್ಷೇತ್ರದಲ್ಲಿ, ತನುಗುಣಗಳನ್ನೆಲ್ಲ ಅರಿಯುವವನೇ ಕ್ಷೇತ್ರಜ್ಞನು. ಅಲ್ಲಿಯ ವಿಸ್ತಾರಗಳನ್ನು ಕಂಡು, ನೀತಿಗಳನ್ನು ಲಕ್ಷಿಸಿ, ಹಗಲಿರುಳು ಒಂದೇ ಬಗೆಯಾಗಿ ಜೋಡಿಸಿದೊಡನೆ ಮನಸ್ಸು ಕ್ಲೇಶದಿಂದ ಮುಕ್ತವಾಗುತ್ತದೆ.

ಅರಳಿದ ಮನಕ್ಕೆ ಮಹಾ ಶಕ್ತಿಯುಂಟು. ತನ್ನ ಮೇಲ್ಮೆಯನ್ನು ಮೆರೆಯಲು ಧ್ವಜವನ್ನು ಏರಿಸಲೂಬಹುದು. ಗುಡ್ಡವನ್ನು ಮೇಲೆತ್ತಲೂಬಹುದು. ಅಜ್ಞಾನವನ್ನು ಪೂರ್ಣವಾಗಿ ನಾಶ ಮಾಡಿದರೆ, ಮುಕ್ತಿಯ ದಾರಿಯು ಪ್ರಕಾಶಿಸುವುದು.

ಯೋಗಿಯು ಇಚ್ಛಾಮರಣಿಯಾಗಿರಲೂಬಹುದು. ತನ್ನ ಕರ್ಮದ ಗಂಟು ಯಾವಾಗ ತೀರುವುದೆಂಬುದನ್ನು ಅವನು ತಿಳಿಯಬಲ್ಲನು. ಹೀಗಾಗಿ ಯಮನು ಯೋಗಿಗಾಗಿಯೇ ಬರನು. ಅಂದರೆ ಯೋಗಿಯ ಮರಣವು ಯೋಗಿಯ ವಶವಾಗಿರುತ್ತದೆ. ಇದನ್ನೇ ಹಾಸ್ಯ ಪೂರ್ಣವಾಗಿ ಹೇಳುವುದಾದರೆ, ಯಮನು ಯೋಗಿಗೆ ಭಯಪಟ್ಟು ಹೇಳದೆ ಹೋಗುತ್ತಾನೆ.

ಸಜ್ಜನರಿಗೆ ಸತ್ಯವು ತಿಳಿದಾಗ, ಅದನ್ನೇ ಇತರರಿಗೆ ಪ್ರಯೋಜನವಾಗಲೆಂದು ಹೇಳುತ್ತಾರೆ. ಅದನ್ನು ಬಚ್ಚಿಡುವುದೂ ಸಲ್ಲ, ಬೇರೊಂದು ರೀತಿ ವಿವರಿಸುವುದೂ ಸಲ್ಲ.

ಇದ್ದುದನ್ನು ಇದ್ದಂತೆ ನುಡಿದರೆ ಲೋಕದ ಜನರು ನಿಂದಿಸುತ್ತಾರೆ. ಅವರೊಂದಿಗೆ ನಿಜವಾಡಬಾರದು. ಕೇವಲ ನಿಜವಾದ ಮಹಾತ್ಮನೊಂದಿಗೆ ನಿಜವನ್ನು ಆಡಬೇಕಷ್ಟೆ.

ಮರ್ಮವರಿತ ಬಳಿಕ ಮಾತನಾಡಬಹುದು. ದೊಡ್ಡವನು, ಸಣ್ಣವನು ಎಂಬ ಗಣನೆಯೇಕೆ ? ಬಾಲಕನು ಕೈದೀಪ ಹಿಡಿದರೇನು ? ವೃದ್ಧನು ಹಿಡಿದರೇನು? ಬೆಳಕು ಬಹಳವಾಗಿ ಬೀಳುತ್ತದೆ ತಾನೇ ?

ಸಾಧಕನು ಆದಿ ಶಕ್ತಿಯನ್ನು ಹೊಂದಿ, ಅನುಭವವನ್ನು ಹೊಂದಿ, ವೇದವಿದ್ಯೆಯನ್ನು ಅರಿತು, ಅದನ್ನು ಬಿಡಕೂಡದು. ಸಾಧು ನಿಯತ್ತಿಯಿಂದ ಪಡೆದರೆ ಜಗತ್ತಿನಲ್ಲಿ ಸ್ಥೈರ್ಯ ಬರುತ್ತದೆ.

— — — — — — — — — — — — — — — — — — — — — —

ಸಾಧು ಸಂಗಕ್ಕೆ ಅಂಟಿಕೊಳ್ಳುತ್ತ ಶಾಂತಿ ಹೊಂದಿ, ಚಿತ್ತ ಶಾಂತಿಯು ಶಕ್ಯವಾಗಬಹುದು. ಹೀಗೆ ಶಕ್ತವಾದ ಚಿತ್ತದಲಿ ಪರವು ಶೋಭಿಸುತ್ತದೆ. ಪರವನ್ನು ಕಂಡೊಡನೆ ಶಿವನು ತಾನೇ ತನ್ನೊಳಗೆ ಹೊಳೆಯುತ್ತಾನೆ.

ಆತ್ಮವಂತನು ಪ್ರತಿದಿನ ಆತ್ಮನ ಮಹಿಮೆ ಮೂಲಕ ಆತ್ಮನನ್ನು ತಿಳಿಯುತ್ತ ಸಾಗಿದರೆ, ಅವನೇ ಅವನಿಯಲ್ಲಿ ಸಜ್ಜನನೆನಿಸುತ್ತಾನೆ.

**೩೬೯೫ ರಾಜಯೋಗ ಮಹಿಮೆ ರಾಜಯೋಗಿಯರಿವ,**
**ಇತರ ಜನರಿಗೆಲ್ಲ ಏನು ಗೊತ್ತು ?**
**ತಾನು ದೇವನಿದ್ದು ದೈವವ ಪೂಜಿಪನೆ ? ವಿಶ್ವ**

**೩೬೯೬ ಗಾಜುಗೊಳಿವೆಯೊಳಗೆ ಬೆಳಗುತಿಪ್ಪ ದೀಪ,**
**ಎಂತಿಹುದೋ ಜ್ಞಾನವಂತೆ ಇಹುದು**
**ತಿಳಿದ ಜನರ ದೇಹದಂತರಾಳದಲ್ಲಿ ವಿಶ್ವ**

**೩೬೯೭ ಸತ್ಯ ಕಂಡರಿವುದೆ ಜ್ಞಾನದರಿವು ಕಣಾ,**
**ಜ್ಞಾನದರಿವಾದೊಡೆ ಸತ್ಯದರಿವು,**
**ಜ್ಞಾನ ಸತ್ಯ ಸಮನಾಗಿಹ ದ್ವಿಜನೆನಿಪ, ವಿಶ್ವ**

**೩೬೯೮ ಆತ್ಮದೊಳಿಹ ವಸ್ತು ಅಂಜನದಿಂ ಕಂಡು,**
**ಅಂಟಿ ತಿರುಗುವಂಥ ಅವನೆ ಯೋಗಿ,**
**ಹುಂಜಗೂಡೊಳಿದ್ದು ಹೊತ್ತು ತಿಳಿಯುವಂತೆ, ವಿಶ್ವ**

**೩೬೯೯ ಸುತ್ತು ಪರಿಜನರು ಸುಖ ಲೀಲ ರೀತಿ,**
**ನಡುವೆ ನಾಯಕತ್ವ ನರ್ತಿಸುವುದು,**
**ಬ್ರಹ್ಮ ಪದವ ನೀವು ಬದುಕಿರೈ ಜನರೇ ! ವಿಶ್ವ**

**೩೭೦೦ ಭುವಿ ನರ ಕುಲದಲಿ ಹುಟ್ಟಿಯು,**
**ಭುವಿ ನರ ಕುಲದಲಿ ಬೆಳೆದು, ಭುವಿ, ನರ ಕುಲವಂ**
**ಅವಿರಳ 'ಛೀ ಛೀ' ಎನ್ನುತ,**
**ಶಿವಕುಲದಲಿ ತಿರುಗುವವನೆ ಸಿದ್ಧನು, ವೇಮಾ**

---

೩೭೦೧ ಅರಿಯೆ ಈಗ, ಹಗ್ಗ ಅಖಿಲ ಜಗಗಳೆಲ್ಲ
ಕಟ್ಟಿ ಹಾಕುತುಂಟು, ಕಾಣು ವಿಧವ
ಜ್ಞಾನ ಖಡ್ಗದಿಂದ ಸಾಗು ಕೊಚ್ಚುತಿದ್ದು, ವಿಶ್ವ

೩೭೦೨ ತಾಮಸಕಂಟಿದ ಬುದ್ಧಿಯನು ದಹಿಸಿ ಹಾಕಿ,
ನಿಯಮ ನಿಷ್ಠೆಗಳ ಮನದಲಿ ನೇರಗೊಳಿಸಿ
ಕಾಮ ವರ್ಗವನು ಜಯಿಸಿದೊಡೆ ಕಂಡು ಮುಕ್ತಿ,
ಆ ಮಹಾತ್ಮನನು ಸೇವಿಸಲು ಆಯ್ತು ವೇಮ !

೩೭೦೩ ಅರಿವು ಮರೆವುಗಳ ಕಾಣದೆ ಅರಿಯಲಾರ ;
ಪರಮ ಪರಿಪೂರ್ಣ ಸುಖಧಾಮ ಪಡೆದುಕೊಳರು
ಉರದಿ ಬೆದರದೆ ಗುರಿಗಂಡು ಉಳಿದುಕೊಳರು ;
ನಿನುಪಮಾನಂದ ಸಂತೃಪ್ತಿ ನಿಲುವು ವೇಮ !

೩೭೦೪ ಏಕದಲ್ಲಿ ನೋಡೆ, ಏಕವಿಹುದು ಅರಿವು,
ಜಗದಿ ಸತಿಯು ಪುರುಷ ಸೇರಿದಂತೆ
ಲೋಕ ಕಾಂತನಂತೆ ಲೋಕದೊಳಗೆ ಹೊಳೆವ, ವಿಶ್ವ

೩೭೦೫ ಇಪ್ಪ ನಿರ್ವಾಣ ನಿಜ ಪದವಿ ಈಕ್ಷಿಸುವವ,
ತನ್ನ, ತನ್ನೊಳಗೆ ನೋಡಿದೊಡೆ ತತ್ತ್ವವರಿತು,
ಸನ್ನುತಿಸು ಪರಮಾತ್ಮನ ಸಮ ಮತಿಯಲಿ,
ಕಂಡರಿ, ಕಾಣದಿರಲೇನನು ಕಾಣುವೆ ವೇಮ ?

೩೭೦೬ ಒಬ್ಬನು ಯೋಗಿಯಾದ, ಮತ್ತೊಬ್ಬನು
ದಿಕ್ಕರಿತ ತ್ಯಾಗಿಯಾದ, ಬೇ–
ರೊಬ್ಬನು ಭೋಗಿಯಾದ, ಮಗದೊಬ್ಬನು
ಚೊಕ್ಕಟಿಹ ಯೋಗಿ ಯಾದ ; ತಾ–
ನೊಬ್ಬನು ಲಾಘವಾದ ; ನಿನ್ನಂತೆಯೇ
ಮಹಾತ್ಮನು ಕಾಣು ಎಲ್ಲೆಡೆ,
ಕಬ್ಬದಖಿಲ ರೂಪಗಳು ನೀನೊಬ್ಬಗೆ
ಸಲ್ಲುವವಲ್ತೆ ವೇಮನಾ ?

೩೭೦೭ ಬಂಗಾರ ನೋಡುತ, ಭಾಮೆಯರ ನೋಡುತ,
ಮನಸಿನಲ್ಲಿ ಚಿಂತೆ ಮಾಡದವನು,
ಅವನೆ ಪರಮಯೋಗಿ ಅವನಿಯಲಿ ಬಣ್ಣಿಸೆ, ವಿಶ್ವ

೩೭೦೮ ಬಹಳ ದೋಷ ತೊಡೆದು ಬಯಲು ತಿಳಿದ ಅವನು,
ಸಿಂಧೂ ಪುತ್ರಿ ಮಾಯೆಗೆ ನಿಲುಕದಾತ
ಶೌರಿಯಂತಿರುವನು ಜನರಿಗೆ ಶಕ್ಯವೆ ? ವಿಶ್ವ

೩೭೦೯ ಪೊಡವಿ ತಿರುಗಿ ಪಡೆವ ಪುಣ್ಯ ರಾಶಿಯೆಲ್ಲ,
ಸಾಧು ಜನರ ನೋಡಿದೊಡನೆ ಲಭ್ಯ
ಬಿದ್ದ ನೀರು ನದಿ ತಳದೊಳಿಂಗಲು ಶುದ್ಧ, ವಿಶ್ವ

೩೭೧೦ ಶಿವಾನುಭವ ಸೃಷ್ಟಿಯೊಳೆ ಆಗದಿರಲು,
ಸಂಶಯಗಳಳಿಯವು ಸಾಧು ಕುಲಕೆ,
ಬೆಳಗು ದೀಪವಿರದೆ ಅಳಿಯುವುದೇ ನಿಶೆಯು ? ವಿಶ್ವ

೩೭೧೧ ಪಂಚ ಋಷಿ ಭುವಿಯಲಿ, ಪರಮ ಪವಿತ್ರರಾಗಿ,
ಮಿಂಚಿ ಲೋಕಗಳ ಮೇಲ್ಮೈಗಾಗಿ,
ಸಂಚಿತಾರ್ಥಗಳ ಸಲೆ ಕಳೆದು ನೋಡಿರೊ, ವಿಶ್ವ

೩೭೧೨ ಸ್ವಾನುಭೂತಿಯಿರದೆ ಶಾಸ್ತ್ರ ವಾಸನೆಯಂ,
ಸಂಶಯಗಳಳಿಯವು ಸಾಧು ಜನಕೆ,
ಚಿತ್ರ ದೀಪದಿಂದ ಚೆದುರದು ಕತ್ತಲೆಯು, ವಿಶ್ವ

೩೭೧೩ ಸ್ವಾನುಭೂತಿಯಲ್ಲಿ, ಶಾಸ್ತ್ರ ವಾಸನೆಯಲ್ಲಿ,
ಸಂಶಯಗಳು ಇರವು ಸಾಧಕನಲಿ,
ಬೆಳಗು ದೀಪದಂತೆ ಹೊಳೆವುದು ಚಿತ್ಸ್ವರೂಪ, ವಿಶ್ವ

೩೭೧೪ ಮನಸು ಗುಪ್ತವಿರಿಸಿ, ಮಾನ್ಯ ವಿಬುಧರುಂಟು ;
ತಾವು ನುಡಿಯದಿರಲು, ಧರ್ಮವೆಂದರು,
ಬಿಡದೆ ನುಡಿಯುತಿರಲು ಕೆಡದೆ ಇಹುದೆ ತತ್ತ್ವ ? ವಿಶ್ವ

೩೭೧೫ ಕ್ಷೇತ್ರದೊಳಗೆ ಕ್ಷೇತ್ರಜ್ಞನ
ಗಾತ್ರಂಗಳ ನೋಡಿ, ನಿಯತಿಗಂಡು ಲಕ್ಷ್ಯಂಗಳ್
ರಾತ್ರಿ ಹಗಲನೊಂದಾಗಿಸಿ,
ಸೂತ್ರಿಸಿದೊಡೆ, ಆಯ್ತು ಮುಕ್ತಿ, ಸುಲಭವು ವೇಮಾ

೩೭೧೬ ಧ್ವಜವನು ಏರಿಸಬಪ್ಪುದು ;
ಅಚಲವನೆತ್ತಬಹುದು, ಕುದುರಿದಂಥ ಮನದೊಳ್
ಅಜ್ಞಾನವನು ಪರಿಪೂರ್ಣ
ಜಜ್ಜಲು, ಮುಕ್ತಿಯ ಹಾದಿಯು ಬೆಳಗಿತು ವೇಮಾ

೩೭೧೭ ಯಮನಿಗೆ ರಸೀದಿ ಯೋಗಿಯೊಡನೆ ಉಂಟು
ಯೋಗಿಗಾಗಿಯೆಂದೆ ಯಮನು ಬರನು,
ಯೋಗಿಗೆ ಭಯಪಟ್ಟು ಯಮನು ಹೇಳದೆ ಹೋದ, ವಿಶ್ವ

೩೭೧೮ ನಿಜವು ತಿಳಿದ ಬಳಿಕ ಸುಜನರಾ ನಿಜವನೆ,
ಪೇಳುತಿರುವರಷ್ಟೆ ಪರರಿಗಾಗಿ,
ಬಚ್ಚಿಡುವುದು ಬೇಡ ; ಬೇರೆ ಹೇಳೆ ಹೊಲ್ಲ, ವಿಶ್ವ

೩೭೧೯ ನಿಜವನಾಡುವವನ ನಿಂದಿಸುವುದು ಜಗವು
ನಿಜವಾಡಬಾರದು ನೀಚರೊಡನೆ,
ನಿಜ ಮಹಾತ್ಮರೊಡನೆ ನಿಜವನಾಡಬೇಕು, ವಿಶ್ವ

೩೭೨೦ ಮಾತನಾಡಬಹುದು ಮರ್ಮವರಿತ ಬಳಿಕ,
ಗರಿಮೆ ಅಲ್ಪತನದ ಗಣನೆಯೇಕೆ ?
ಬಾಲನ ಕೈದೀಪ ಬೆಳಗದೆ ಬೃಹದಾಗಿ, ವಿಶ್ವ

೩೭೨೧ ಆದಿ ಶಕ್ತಿ ಗೂಡಿ ಅನುಭವವನು ಹೊಂದಿ,
ವೇದ ವಿದ್ಯೆ ಅರಿತು ಬಿಡುವುದಿಲ್ಲ
ಸಾಧು ವೃತ್ತಿ ಜಗದಿ ಸ್ಥೈರ್ಯವನು ಹೊಂದುವ, ವಿಶ್ವ

೩೭೨೨ ಸಾಧು ಸಾಂಗತ್ಯ ಕಮರುತ, ಶಾಂತಿಗಮರಿ,
ಶಾಂತಿಗಮರಲು ಚಿತ್ತವು ಶಕ್ಯವಹುದು,
ಶಕ್ತವಾದಂಥ ಮನದಲಿ ಶೋಭಿಪುದು ಪರವು ;
ಪರವ ಕಂಡೊಡೆ, ಶಿವ ತಾನು ಪೊಳೆವ ವೇಮ

೩೭೨೩ ಆತ್ಮ ಉಳ್ಳ ಅವನು ಅನುದಿನವೂ ನೋಡಿ,
'ಅವನ' ಮಹಿಮೆಯಂತೆ ಅವನ ತಿಳಿಯೆ,
ಅವನೆ ಸಜ್ಜನಿಹ ಅವನಿಯಲ್ಲಿ ಮತ್ತೆ. ವಿಶ್ವ

●

# ೨೪. ಸಹಜ ಸಮಾಧಿ

**ಕೇಳಿದವನಿಗಿಂತ ಕಾಣುವವನು ಅಧಿಕ,**
**ಕಾಣುವವನಿಗಿಂತ ಕೂಡಿರುವವ ;**
**ಉನ್ನತೋನ್ನತಾಗಿ ಉರ್ವಿಯಲ್ಲಿ ಬಾಳು,**
**ವಿಶ್ವದಾಭಿರಾಮ ಕೇಳು ವೇಮ**

## ಸಹಜ ಸಮಾಧಿ

ಸಹಜವಾಗಿರುವುದೆಲ್ಲವೂ ಬ್ರಹ್ಮವೇ. ತನ್ನ ಸಹಜವಾದ ಇರವನ್ನು ಅರಿತು ಅದರಲ್ಲಿ ಒಂದಾಗುವುದೇ ಸಹಜ ಸಮಾಧಿಯಾಗಿದೆ.

ಆಂತರ್ಯದಲ್ಲಿ ಗಾಳಿಯಿಲ್ಲದ ತಾಣದಲಿ ಇರುವ ಸ್ಥಿರವಾದ ದೀಪ ಕಳೆಯಂತೆ, ಅಲೆ–ತಿರುಗಣಿಗಳಿರದ ಪ್ರಶಾಂತ ಸಾಗರದಂತೆ, ನಿರ್ವಿಕಾರನಾಗಿ ನಿಶ್ಚಲಾತ್ಮನಾಗಿರುವುದೇ ಸಹಜ ಸಮಾಧಿಯೆನಿಸುತ್ತದೆ.

ಸಹಜ ಸಮಾಧಿಯ ಸುಖವನ್ನು ಕೇಳಿದವನಿಗಿಂತಲೂ ಅದನ್ನು ಕಂಡು ಅನುಭವಿಸುವವನೇ ಅಧಿಕನು. ಉನ್ನತೋನ್ನತವಾಗಿ ಉರ್ವಿಯಲ್ಲಿ ಕೂಡಿ, ಬಾಳಬೇಕು.

ತನ್ನ ಇರವನ್ನು ತಿಳಿದುಕೊಂಡು, ಪರಮಾರ್ಥವನ್ನು ಸೇರಿ, ಮುಂದುವರಿದು ಪರಮ ನಿರ್ಗುಣ ಬಯಲನ್ನು ಸೇರಿ, ತನ್ಮಯತೆ ಹೊಂದಿ, ಮನದಲ್ಲಿ ಆ ಸ್ಥಿತಿಯನ್ನು ನಿಲ್ಲಿಸುವವನೇ ತಕ್ಕ ಯೋಗಿ ಎನಿಸುತ್ತಾನೆ. ಅವನೇ ಶಾಶ್ವತ ಸುಖವನ್ನು ಹೊಂದುತ್ತಾನೆ.

ಕೊಂಕು–ಡೊಂಕುಗಳನ್ನು ತೊರೆದು, ಭೃಕುಟೀ ಸ್ಥಾನದಲ್ಲಿ ಮುಕ್ತಿಕಾಂತೆಗೆ ದೊರೆಯಾಗಿ ತಾನೊಬ್ಬನಿರಲು, ಆಗ ಆರತಿಯನ್ನೂ ಉಪರತಿಯನ್ನೂ ವ್ಯಕ್ತಗೊಳಿಸುವವನನ್ನು ಕಾಣಬೇಕು. ಅವನೇ ಪ್ರಭುವಾಗಿದ್ದಾನೆ.

ಅತಿ ಸೂಕ್ಷ್ಮ ದೃಷ್ಟಿಯಿಂದ ದೇಹದಲ್ಲಿರುವ ಆತ್ಮವನ್ನು ನೋಡಿದಾಗ ಅವನೇ ಯೋಗಿಯೆನಿಸುತ್ತಾನೆ.

ಕತ್ತಲಲ್ಲಿ ಒಡೆವೆಯು ಕಳೆದಾಗ, ಅದನ್ನು ಹುಡುಕಲು ದೀಪ ಬೇಕೇ ಹೊರತು, ಆ ಒಡವೆ ಸಿಕ್ಕ ಬಳಿಕ ದೀಪವೇಕೆ ಬೇಕು ? ಅದೇ ರೀತಿ 'ಶರೀರಂ ಖಲು ಧರ್ಮಸಾಧನಂ', ಲಕ್ಷ್ಯವು ಪ್ರಾಪ್ತವಾಗುವ ವರೆಗೆ ಶರೀರವು ಅಗತ್ಯವಾಗಿದೆ. ದೇವರಾದ ಬಳಿಕ ದೇಹದ ತೊಡಕೇಕೆ ?

ನಿರ್ಮಲವಾದ ಜ್ಞಾನದಲ್ಲಿ ಪರಿಪೂರ್ಣ ನಿಷ್ಠೆ ತಾಳಿ, ಕರ್ಮ ಸನ್ಯಾಸ ಹೊಂದಿ ಕರ್ಮ ಸಂಗವನ್ನು ಕಡಿದು ಹಾಕುತ್ತ ಒಳಗುಟ್ಟನ್ನು ಅರಿಯುತ್ತ ಇರುವುದೇ ಮೌನವಾಗಿದೆ. ಇದುವೇ ಧರ್ಮವೆಂದು ಜಗದಲ್ಲಿ ಬೋಧಿಸಬೇಕು.

ಬಾಹ್ಯ ಚಕ್ಷುಸ್ಸಿನ ದೃಷ್ಟಿಯನ್ನು ಮೀರಿ, ಆ ಮುಂದಿನ ನಡೆವಳಿಯನ್ನು ಗುರುತಿಸಿ ನಿರ್ಭಯವಾಗಿ, ಮುನ್ನುಗ್ಗಿ, ಬಾಹ್ಯವನ್ನು ನೆನೆಯದೆ, ದ್ವಯದ ಜ್ಯೋತಿಗೆ ಅಂಟಿ, ಅಲ್ಲಿ ಸೌಭಾಗ್ಯವನ್ನು ಪಡೆಯಬೇಕು.

ಪರಮ ಯೋಗಿಯು, ಊರ್ಧ್ವಲೋಕದಲ್ಲಿ ಉಚಿತ ಕ್ರಮದಿಂದ, ಯಾವುದೇ ರೂಪವಿಲ್ಲದ ರೀತಿಯಲ್ಲಿ ಪರಮಾತ್ಮನನ್ನು ಕಾಣುವನು.

ಆಗಬಹುದಾದ ದೋಷಗಳೆಲ್ಲವನ್ನೂ ಮೆಟ್ಟಿ ಹಾಕಿ, ಪ್ರಕಾಶಿಸುವುದಕ್ಕೆ ಆಚೆಗಿರುವ ಪ್ರಕಾಶವನ್ನು ಸೇರಿ, ನಿರ್ಗುಣದಲ್ಲಿ ನಿಂತು, ಇಳೆಯಲ್ಲಿ ಸಮಾಧಿ ಹೊಂದಿದವನೇ ಶಿವನಾಗಿದ್ದಾನೆ.

ತಿಳಿವು ನಿಲಿಸಿ ನೋಡಿದಾಗ ಕಳೆಯು ಬೆಳಗುವುದು. ಕಳೆಯು ಉಡುಗಿದ ಮೇಲೆ ಬಯಲು ಕಾಣುವುದು. ಆ ಚಿದ್ ಬಯಲಿಗಂಟಿ ನೋಡಿದರೆ ಬ್ರಹ್ಮವು ಕಾಣಬರುತ್ತದೆ.

ನಿಜವಾಗಿ ತಿಳಿದುಕೊಂಡರೆ, ಭದ್ರವಾದ ಬ್ರಹ್ಮ ನಿದ್ರೆಯು ನಿದ್ರೆಯೊಳಗಿನ ನಿದ್ರೆಯೊಳಗಿದೆ. ಅಂದರೆ ನಿದ್ರೆಯಲ್ಲಿ ಅರಿವು ಇರುವುದಾದರೂ, ಇಂದ್ರಿಯಾದಿ ವ್ಯಾಪಾರವು ನಿಂತಿರುತ್ತದೆ. ಹೀಗಾಗಿ ಬಾಹ್ಯ ಸಂಪರ್ಕವಿರುವುದಿಲ್ಲ. ಮನಸ್ಸು ಸುಪ್ತವಿರುತ್ತದೆ. ಇಂಥ ನಿದ್ರೆಯಲ್ಲಿ ಜ್ಞಪ್ತಿಯನ್ನೂ ಮೀರಿ ಹೋದರೆ, ಆ ಸ್ಥಿತಿಯನ್ನು ನಿದ್ರೆಯಲ್ಲಿಯ ನಿದ್ರೆಯೆನ್ನಬಹುದಷ್ಟೇ. ಅಂತೂ ನಿದ್ರೆಯ ಅವಸ್ಥೆಯನ್ನು ಅರಿಯಬಲ್ಲವನೇ ನಿರ್ಮಲ ಯೋಗಿ ಎನಿಸುತ್ತಾನೆ.

ಇಂಥ ಮಾರ್ಗವೇ ರಾಜಮಾರ್ಗವಾಗಿದೆ. ಎಲ್ಲವೂ ಸೂಕ್ಷ್ಮ ಕೃತಿಗಳೇ ಆಗಿ ಅವುಗಳ ಅನುಭವವು ಸುಧಾರಸಪಾನದಂತೆ ಮಧುರವಿರುತ್ತದೆ. ಅಲ್ಲಿ ಪರಿಶುದ್ಧಮಿತಿಯೆ ತೋರುತ್ತದೆ. ಅದುವೇ ಅಂದವಾದ, ಪರಮವಾದ ಬಯಲಾಗಿರುತ್ತದೆ.

ಇಹಪರ ಸೌಖ್ಯಗಳನ್ನು ತೊರೆದು, ಚಿದಾಕಾಶದಲ್ಲಿ ಗುರಿಯನ್ನಿರಿಸಿ ಪಡೆದ ಬಳಿಕ, ಹೃದಯ ಕುಹರದ ಒಳಗೂ ಹೊರಗೂ ಮಹತ್ ಆಕಾಶವನ್ನು ಸೇರಬೇಕು.

ಯಾವಾಗಲೂ ಸಮಾಧಿ ಪ್ರಜ್ಞೆಯಲ್ಲಿದ್ದುಕೊಂಡು ಅಲ್ಲಿ ಎದುರಾಗುವ ಅಚ್ಚರಿಗಳನ್ನು ಅರಿತು, ಅವುಗಳ ಮಹಿಮೆಗಳನ್ನು ಬಣ್ಣಿಸಿದ ಬಳಿಕ, ಪರಮಾತ್ಮನು ಮಂತವ್ಯನಾಗಿ ಹೊಳೆಯುತ್ತಾನೆ.

— — — — — — — — — — — — — — — — — — — — — —

೩೭೨೪ ಗಾಳಿಯಿಂದ ದೀಪ ಕಳೆ ಸ್ಥಿರತೆಯಂತೆ,
ಅಲೆ ತಿರುಗಣೆಯಿರದ ಜಲಧಿಯಂತೆ,
ನಿಶ್ಚಲಾತ್ಮನಾಗು ನಿರ್ವಿಕಾರದಿಂದ, ವಿಶ್ವ

೩೭೨೫ ಕೇಳಿದವನಿಗಿಂತ ಕಾಣುವವನು ಅಧಿಕ,
ಕಾಣುವವನಿಗಿಂತ ಕೂಡಿರುವವ ;
ಉನ್ನತೋನ್ನತಾಗಿ ಉರ್ವಿಯಲಿ ಬಾಳು, ವಿಶ್ವ

೩೭೨೬ ಇರವ ಕಂಡುಕೊಂಡು, ಪರಮ ಅರ್ಥ ಕೋರಿ,
ಪರಮ ನಿರ್ಗುಣ ಬಯಲಿಗೆ ಹರಿದು, ನಿಂತು,
ತನ್ಮಯವನು ಮನದಿ ನಿಲಿಪ ತಕ್ಕ ಯೋಗಿ
ಶಾಶ್ವತ ಸುಖವನು ಹೊಂದುವ ನಿತ್ಯ ವೇಮ

೩೭೨೭ ಸೀಃ ನಿಯಮಾದಿ ಸಂಗಿಯಾಗಿ, ನಿಲಿಸಿ ಚಿತ್ತವನು,
ತಾಮಸದಿ ನಿದ್ರೆಗಿಳಿಯುತಿಹುದು
ನಿದ್ರೆ ತೊಲಗಿದೊಡನೆ, ನಿರ್ಭೀತಿ ಹೊಂದುವುದು ;
ಶಮದೊಳಗಾನಂದ ಸಮಿತಿ ಹುಟ್ಟು
ಆನಂದದಲಿ ವಿಶ್ವವಖಿಲವು ತಾನಿಹನು ;
ತಾನು ವಿಶ್ವವಾದ ತತ್ತ್ವವಹನು
ತತ್ತ್ವವಿಂದ್ರಿಯ ಪಂಚಕತ್ವದಲ್ಲಿ ನಿಲಿಸಿ,
ತತ್ತ್ವವನು ನಿಲಿಸಲು ತಾನೆ ಆದ

ತೇ॥ ರಾಜಯೋಗೀಂದ್ರನಾತನೈ ತೇಜಿಸುವನು
ಮೆರೆವ ಜಗದಲಿ ವಿಹರಿಸುತ ವಿಶ್ರುತನಾಗಿ,
ಬಹಳ ವಿಧದಲಿ ವೃದ್ಧಿಸಿ ಹಾದಿ ತಲುಪಿ,
ಕಾಣು ಮೂಢ ಕ್ರಿಯೆ ವಿಧವ ; ಘನತೆ, ವೇಮ

೩೭೨೮ ವಿಕಟವ ತೊರೆದು ಭ್ರುಕುಟೀ
ನಿಜದಲಿ ಮುಕ್ತಿಕಾಂತೆಗೆ ಇಳೆಪತಿಯೈ ತಾ–
ನೊಕನಿರಲು ಆರತಿ, ಉಪರತಿ,
ಪ್ರಕಟಗೊಳಿಸುವವನ ಕಾಣು, ಪ್ರಭುವೈ, ವೇಮಾ

— — — — — — — — — — — — — — — — — — — — — —

೩೭೨೯ ಆತ್ಮ ದೇಹದಲ್ಲಿ ಅತಿ ಸೂಕ್ಷ್ಮದಿ ಕಂಡು,
ದೇಹವಾತ್ಮವೆಂದು ಥೇಟ ಗ್ರಹಿಸಿ,
ಆತ್ಮದಲ್ಲೆ ನೋಡೆ, ಅವನೆ ಹೋಗು ಯೋಗಿ, ವಿಶ್ವ

೩೭೩೦ ಸೊತ್ತು ದೊರೆಯುವನಕ ಜ್ಯೋತಿ ಬೇಕೆ ಹೊರತು,
ಸೊತ್ತು ದೊರೆತ ಬಳಿಕ ಜ್ಯೋತಿಯೇಕೆ ?
ದೇವನಾದ ಬಳಿಕ ದೇಹವು ಮತ್ತೇಕೆ ? ವಿಶ್ವ

೩೭೩೧ ನಿರ್ಮಲ ಜ್ಞಾನ ಪರಿಪೂರ್ಣ ನಿಷ್ಠೆಯಲ್ಲಿ,
ಕರ್ಮ ಸನ್ಯಾಸ ಯೋಗಿಯಾಗಿ, ಕಡಿತದೊಗೆಯುತ,
ಮರ್ಮ ಅರಿಯುತ ಇರುವುದೆ, ಮೌನವಯ್ಯ,
ಧರ್ಮವನೀ ತೆರ ಬೋಧಿಸು ಧರಣಿಲಿ ವೇಮಾ

೩೭೩೨ ನಯನ ದೃಷ್ಟಿ ಮೀರಿ, ನಡೆವಳಿಯ ಗುರುತಿಸಿ,
ಭಯವು ಇರದೆ ನುಗ್ಗಿ ಬಯಲಾಗದೆ,
ಸ್ವಯದ ಜ್ಯೋತಿಗಂಟಿ ಸೌಭಾಗ್ಯ ಹೊಂದಿರೋ, ವಿಶ್ವ

೩೭೩೩ ಊರ್ಧ್ವಲೋಕದಲ್ಲಿ ಉಚಿತ ಕ್ರಮದಿಂದ,
ರೂಪವೇನು ಇರದ ರೀತಿಯಲ್ಲಿ,
ಪರಮಯೋಗಿ ನೋಳ್ಪ ಪರಮಾತ್ಮ ನಿರವನು, ವಿಶ್ವ

೩೭೩೪ ಘಟಿಪ ದೋಷಗಳೆಲ್ಲವ ಕಾಲು ಮೆಟ್ಟಿ,
ಹೊಳೆವುದಕೆ ಆಚೆಗೆ ಹೊಳೆವ ಹೊಳಪು ಸೇರಿ,
ನಿಂತು ನಿರ್ಗುಣದಲ್ಲಿ ಇಳೆ ಸಮಾಧಿ,
ಶೋಭಿಸುತಂತಿಹನೆ ಪರಮ ಶಿವನು ವೇಮ

೩೭೩೫ ತಿಳಿವು ನಿಲಿಸಿ ನೋಡು ದೀಪ್ತಿಪುದಾ ಕಳೆಯು,
ಕಳೆಯುಡುಗಲು ನೋಡಿ ಕಾಣು ಬಯಲು,
ಬಯಲಿಗಂಟಿ ನೋಡು, ಬ್ರಹ್ಮ ಕಾಣುತಿಹುದು, ವಿಶ್ವ

೩೭೩೬ ನಿದ್ರೆಯೊಳಗೆ ನಿದ್ರೆ ನಿಜವಾಗಿ ತಿಳಿದೊಡೆ,
ಭದ್ರವಾದ ಮಿಗಿಲು ಬ್ರಹ್ಮವಿದ್ಯೆ,
ನಿದ್ರೆ ತಿಳಿಯುವವನು ನಿರ್ಮಲ ಯೋಗಿಯೈ, ವಿಶ್ವ

೩೭೩೭ ಇದು ರಾಜ–ಮಾರ್ಗ ಭಾವವು,
ಸುಧೆಯೈ ಜಗಗಳಿಗೆ ಎಲ್ಲ ಸೂಕ್ಷ್ಮಾಕೃತಿಯೈ,
ಸದಮಲ ಮತಿಯೇ ತೋರ್ಪುದು,
ಅದುವೇ ಪರಮವಹ ಬಯಲು, ಅಂದವು ; ವೇಮಾ

೩೭೩೮ ಇಹಪರ ಸೌಖ್ಯವನೊಲ್ಲದೆ,
ದಹರದಿ ಗುರಿಯಿರಿಸಿ ವಶ ಪಡಿಸಿಕೊಂಡಾಗಳ್,
ಕುಹರ ದೊಳಗು ಹೊರ ಬಯಲಲಿ,
ಮಹದಾಕಾಳವ ಸೇರ್ವೆ ಮಹಿಯಲಿ ವೇಮಾ

೩೭೩೯ ಸಂತತ ಸಮಾಧಿ ಪ್ರಜ್ಞೆಯಲಿ,
ಅಂಥಿಂಥ ಅಚ್ಚರಿಯರಿತು ವಿವರಿಸಿದೊಡೆ, ಆ
ನಂತರದಲಿ ಪರಮಾತ್ಮನು
ಮಂತವ್ಯನಾಗಿ ಹೊಳೆಯುವ, ಮಹಿಯಲಿ, ವೇಮಾ

## ವೇಮನ ವಾಕ್ಯ

ತೆಲಗು: ಪೂರ್ಣ ಸಮಾಧಿಲೋ ಪೂರಿಂಚಿ ಕುಂಭಿಂ ರೇಖಿಂಚಿ
ಪೆದ್ದ ಗಾಲಿ ವಲೆನೇ ಬರಗುಚುಂಡು ಯೇಡು ಕೋಟ್ಲ
ವೆರ್ರಿ ನಾದಂಬುಲು ಗಾನಬಡುನು, ಮೇನು ಚಿಲ್ಲನಿಗಾಲಿ ವಿಸುರುನು
ಗಾಲಿ ಲೋಪಲ ನುಂಡು ಗಂಧರ್ವ ನಾದಂಬು, ಗಾನಪಡುವಿನು
ಎಂತೈನ ನಡುವೀಧಿ ನಾಡುಚುಂಡು, ನಾಭಿ ನಡುಮ ವೆಲುಗು
ನಾಭಿರೆ ಚಕ್ಕಗಾ ನಡಿಯಿಂಟ ಭಯಮೌನು,
(ಬಯಟನುಂಡು ಬ್ರಹ್ಮ ಬಯಲೌನು, ವೇದಾಂತ ವೇದ್ಯುಲು)
ವೆರಗುಪಡಿ ಮರುಗು ಚುಂದುರು.
ದಾನಿ ಕೆಗುವನೆಯುಂಡು ರಾಜಸ ಕಲ್ಯಾಣ ಮೂರ್ತಿ,
ದಾನಿ ಕೆಗುವನೆ ಯುಂಡು ತಾಪಸ ಕಳಾಮೂರ್ತಿ !
ದಾನಿ ಕೆಗುವನೆಯುಂಡು, ನಡಿಯಿಂಟ ತ್ರೋವ,
ಆಡವುಂಡುನು ದಶೇಂದ್ರಿಯಾಲು ಅವತಾ ರೂಪೊಕಟಿ,
ದಾನಿ ಕೆಗುವನೆ ಯುಂಡು, ಚುಕ್ಕಲ ವಲೆಗೆ ಕೊಂತ,
ಚಂದ್ರ ಸೂರ್ಯಲ ಪ್ರಭಾಕರಮು ವೆಲುಗು
ದಾನಿ ಕೆಗುವನೆಯುಂಡು ನವರತ್ನಪು ದೇಹಿ,
ದಾನಿ ಕೆಗುವನೆಯುಂಡು ತಟಾಕಮು,

ದಾನಿ ಕೆಗುವನೆ ಯುಂಡು ನವರಂಧ್ರ ಮುಲ ತ್ರೋವ,
ತೊಮ್ಮಿದಿ ಚಾಯಲ ತೋ ಏಕಾಂತ ಮೆರುಪು ;
ದಾನಿ ಕೆಗುವನೆಯುಂಡು ಸಪ್ತದ್ವೀಪ ಮುಲು ದಿವ್ಯ ತೇಜಂಬು
ತೇಜಂಬುಲ ಲೋನುಂಡಿ ತೇಜ ವರ್ಣಚ್ಛಾಯ ವೆಲಗುಚುಂಡು;
ದಾನಿ ಕೆಗುವನೆ ಯುಂಡು ಪಗಡಂಪು ಚಾಯ,
ದಾನಿ ಕೆಗುವನೆಯುಂಡು ದೀಪ ಕಳಿಕಾ
ದೀಪಂಬು ವೆಲಗು ಅಣಿ ಮುತ್ಯಂಪು ಸರಲು,
ಅಪುಡೆ ಆಡು ನುಂಡಿ ಗುರಿನೆ ಅಮೃತಂಪು ಸೋನ,
ಗರಿನೆ ಮಂಚು ಧಾರಲವಂಟಿ ನರುಲು,
ದಿಗುನು ಚುಟ್ಟ ಬಯಲು ನಟ್ಟ ನಡುಮ ಕಪಾಲ ಪುಟ್ಟಿ
ಆಡವುಂಡುನು ಪಂಚವಂಟಿ ಮೇನು, ಕಡುವ ಕಡುಪುಲೋ ಕಾರಣ ತನೂಜ
ವಿಶ್ವದಾಭಿರಾಮ ವೇಮ ವಿನುರ

ಕನ್ನಡ: ಪೂರ್ಣ ಸಮಾಧಿಯಲಿ ಪೂರಕ, ಕುಂಭಕ ರೇಚಕಗಳ ಗ್ಯೇಯೆ,
ಭಾರಿ ಗಾಳಿಯಂತೆ ಬೆಳಗುತಿಹುದು ಏಳು ಕೋಟೆಗಳ ಹುಚ್ಚು ;
ನಾಮಗಳು ಕೇಳಿ ಬಪ್ಪುವು, ತನಿಗಾಳಿ ಸೂಸುತಿಹುದು,
ಗಾಳಿಯೊಳಂದು ಗಂಧರ್ವ ನಾದವು, ಕೇಳಿ ಬಪ್ಪುದು ಹಾದಿಯಲ್ಲಿ,
ಎನಿತಾದರೇನು ? ನಡುಬೀದಿಯೊಳಾಡುತಿಹುದು,
ನಾಭಿ ನಡುವಿನ ಬೆಳಕು !
ನಾಭಿಗೆ ಸರಿಯಾಗಿ ನಡುವೆಯೇ ಭಯವೆನಿಸುತಿಹುದು.
ಆಚೆಗಿದೆ ಬ್ರಹ್ಮ ಬಯಲು,
ವೇದಾಂತ ವೇದ್ಯರು ಬೆರಗುಗೊಳುವರು,
ರೂಪುಗೊಳ್ಳುತ್ತಿಹರು,
ಅದರ ಮೇಲ್ಗಡೆಯುಂಟು ರಾಜಸ ಕಲ್ಯಾಣ ಮೂರ್ತಿ !
ಅದರ ಮೇಲ್ಗಡೆಯುಂಟು ತಾಪಸ ಕಳಾ ಮೂರ್ತಿ !
ಅದರ ಮೇಲ್ಗಡೆಯುಂಟು ನಡುಮನೆಯ ಹಾದಿ !
ಅಲ್ಲಿಯೇ ಉಂಟು ; ದಶೇಂದ್ರಿಯಗಳ ಅವತಾರ, ರೂಪೊಂದು ;
ಅದರ ಮೇಲ್ಗಡೆಯುಂಟು ಚುಕ್ಕೆಗಳ ರೀತಿ !
ಚಂದ್ರ ಸೂರ್ಯರ ಪ್ರಭೆಯು ಬೆಳಗುತಿಹುದು.
ಅದರ ಮೇಲ್ಗಡೆಯುಂಟು ನವರತ್ನದ ದೇಹಿ !
ಅದರ ಮೇಲ್ಗಡೆಯುಂಟು ತಟಾಕವು !
ಅದರ ಮೇಲಗ್ಡೆಯುಂಟು ಹುಣ್ಣಿಮೆಯ ಬಯಲು,
ಅದರ ಮೇಲ್ಗಡೆಯುಂಟು ನವರಂಧ್ರಗಳ ದಾರಿ !

**ಒಂಭತ್ತು ಛಾಯೆಗಳ ಏಕಾಂತ ಮಿನುಗು,**
**ಅದರ ಮೇಲ್ಗಡೆಯುಂಟು ದೀಪಕಳೆಯು !**
**ದೀಪವು ಬೆಳಗುತಿದೆ, ಅಣಿ ಮುತ್ತಿನ ಮಾಲೆಯ !**
**ಅಲ್ಲಿಂದ ಸುರಿಯುತಿದೆ ಅಮೃತ ಸೋನೆ!**
**ಆಗಲೇ ಸುರಿಯುವುದು, ಮಂಜುಧಾರೆಯಂತೆ ಕರುಣೆ !**
**ಕರಗಿ, ಕರಗಿ, ಸುತ್ತಲೂ ಬಟ್ಟಬಯಲು, ನಟ್ಟ ನಡುವೆ ಕಪಾಲ ಬುಟ್ಟಿ**
**ಅಲ್ಲಿಯೇ ಉಂಟು, ಪಂಚಭೌತದೇಹ ಮೆಟ್ಟಿ ಒಡಲೊಳು ಕಾರಣ ತನೂಜ**
**ವಿಶ್ವದಾಭಿರಾಮ ಕೇಳು ವೇಮ.**

●●●

# ೨೫. ಜೀವನ್ಮುಕ್ತಿ ಸ್ಥಿತಿ

**ದಾಟಿ ಬಂದು ನದಿಯ, ದಡ ತಲುಪಿದ ಪುರುಷ ;**
**ನಾವೆಯನಿಚ್ಛಿಸದೆ ನಡೆಯುವಂತೆ,**
**ಯೋಗ ಪುರುಷಗೇಕೆ ಒಡಲುಚಿಂತೆಯೆಲ್ಲ ?**
**ವಿಶ್ವದಾಭಿರಾಮ ಕೇಳು ವೇಮ.**

●

## ಜೀವನ್ಮುಕ್ತಿ ಸ್ಥಿತಿ

ಜೀವ್ ಎಂದರೆ ಉಸಿರಾಡಿಸು ; ಮುಕ್ತಿ ಎಂದರೆ ವಿಮೋಚನೆ. ಉಸಿರು ಇರುವಾಗಲೇ ಮನವು ಆತ್ಮ ಸಾಕ್ಷಾತ್ಕಾರ ಹೊಂದಿ ಭವ ಬಂಧಗಳಿಂದ ಮುಕ್ತನಾಗುವುದೇ ಜೀವನ್ಮುಕ್ತಿಯಾಗಿದೆ. ಹಲವರು ವಿದೇಹ ಮುಕ್ತಿಯೂ ಉಂಟೆಂದು ಪ್ರತಿಪಾದಿಸುತ್ತಾರೆ. ಅಂದರೆ ದೇಹವು ಬಿದ್ದು ಹೋದ ಮೇಲೆ, ಲಿಂಗ ದೇಹವು, ಹೆಚ್ಚಿನ ಸಾಧನೆ ಮಾಡಿ, ಸೂರ್ಯ ಲೋಕಕ್ಕೆ ತೆರಳಿ, ಅಲ್ಲಿಂದ ಬ್ರಹ್ಮಲೋಕಕ್ಕೆ ಜೀವವು ಪಯಣಿಸುವುದೆಂದು ಅವರ ಮತ. ವೇಮನ ಯೋಗಿಗಳಿಗೆ ಈ ಮತವು ಸಮ್ಮತವಿಲ್ಲ.

'ರಸೋ ವೈ ಸಃ', ಜೀವ ರಸದಿಂದ ಜೀವ ಪೋಷಣೆಯಾಗುತ್ತಿದೆ. ಬ್ರಹ್ಮರಸದಿಂದ ಬ್ರಹ್ಮಾನುಭೂತಿಯಾಗುತ್ತದೆ. ಆ ಬ್ರಹ್ಮ ರಸ ಕುಡಿದ ಜನರು ತಮ್ಮನ್ನು ತಾವು ಆತ್ಮದೊಂದಿಗೆ ಗುರುತಿಸಿಕೊಳ್ಳುತ್ತಾರೆ. ಆತ್ಮಕ್ಕೆ ಸಾವಿಲ್ಲ. ಅಂದ ಮೇಲೆ ಬ್ರಹ್ಮವಿದರಿಗೆ ಸಾವು ಇಲ್ಲ. ಏಕೆಂದರೆ ಬ್ರಹ್ಮವೇ ಆಗಿರುತ್ತಾರೆ.

ಭೂಮಿಯ ಮೇಲೆ ಪ್ರಾಣ ಹೊಂದಿ ಇರುವಾಗಲೇ ಜೀವಿಯು ಪರವನ್ನು ಪಡೆಯುತ್ತಾನೆ. ಪ್ರಾಣವಿರುವಾಗ ಸಾಧಕನ ಮನಸ್ಸಿಗೆ ಮೋಹದ ಪರದೆಯು ಅಡ್ಡ ಬಂದಿದೆ. ಈ ದೇಹ–ಭಾವನೆಯನ್ನು ತೊರೆದು ಆತ್ಮವನ್ನು ಕಾಣುವವನೇ ಯೋಗಿ ಎನಿಸುತ್ತಾನೆ. ಆದರೆ ದೇಹವು ಬಿದ್ದು ಹೋಗಬೇಕೆಂದಲ್ಲ. ಕಾಯದಲ್ಲಿಯೇ ಮುಕ್ತಿಯ ಗತಿಯನ್ನು ಹೊಂದಬೇಕು.

ಇಹದಲ್ಲಿ ಫಲವಿಲ್ಲ, ದೇಹವು ಇಹದಲ್ಲಿ ನಾಶವಾದ ಬಳಿಕ ಲಿಂಗದೇಹವು ಮುಂದೆ ಸಾಧನೆ ಮಾಡಿ ಸದ್ಗತಿ ಪಡೆಯುತ್ತದೆ ಎಂದು ಹಲವರು ಈ ಭೂಮಿಯ ಜನರಿಗೆ ಹೇಳುತ್ತಿದ್ದಾರೆ. ಆದರೆ ಆ ಮತವು ಸರಿಯಲ್ಲ. ದೇಹದ ಅಂತಃಕರಣಗಳ

— — — — — — — — — — — — — — — — — — — —

ಸುದ್ಧಿಯು ಜೀವದಿಂದಿರುವಾಗ ಮಾತ್ರ ಸಾಧ್ಯ. ಇಹದ ಬಾಳಿನಲ್ಲಿಯೇ ಸಾಧನೆಯ ಮೂಲಕ ಪರವನ್ನು ಕಾಣಬೇಕು.

ಜೀವವು ಬೇರೆ, ಬ್ರಹ್ಮವು ಬೇರೆ ಎಂಬ ಗ್ರಹಿಕೆಯುಳ್ಳವರು ಮರ್ತ್ಯದ ಜೀವಭಾವಕ್ಕಂಟಿ ಸಾಯುತ್ತಾರೆ. ದೇಹವು ನಶಿಸುತ್ತದೆ. ಬ್ರಹ್ಮವಿದರು ಬ್ರಹ್ಮವೇ ಆಗುತ್ತಾರೆ. 'ಬ್ರಹ್ಮವಿದಃ ಬ್ರಹ್ಮೈವ ಭವತಿ', ಬ್ರಹ್ಮವು ಅಮರವಾಗಿದೆ ; ಅವಿನಾಶಿಯಾಗಿದೆ. ಬ್ರಹ್ಮಭಾವ ಹೊಂದಿ 'ಅಹಂ ಬ್ರಹ್ಮ ಅಸ್ಮಿ' ಎಂಬ ಭಾವದಲ್ಲಿ ನೆಲೆ ನಿಂತವರು ಸಾಯದೆ ಬಾಳುವರು. ನೀರು ಮುತ್ತಾದ ಮೇಲೆ ಮರಳಿ ನೀರಾಗದು.

ದೇಹವೆಂಬ ಗೃಹವನ್ನು ನಿಲ್ಲಿಸಿಕೊಂಡು, ಅದರ ತ್ರಿಗುಣಗಳನ್ನು ಇಲ್ಲವಾಗಿಸಿ, ಆನಂದ ಪಡೆಯಲಾರೆಯಾ ?

'ಶರೀರಂ ಖಲು ಧರ್ಮ ಸಾಧನಂ' – ದೇಹವನ್ನು ನಿಲ್ಲಿಸಿಕೊಂಡು ಯೋಗಿ ಯೋಗಪ್ರಕ್ರಿಯೆಗೆ ತೊಡಗುತ್ತಾನೆ. ಇಹದಲ್ಲಿ ಕಾಯವು, ಸಿದ್ಧಿಯ ಪೂರ್ವದಲ್ಲಿ ಬಿದ್ದು ಹೋದರೆ ಅವನು ಘನವೆನಿಸನು. ಕಾಯದಲ್ಲಿ ಇರುವಾಗಲೇ ಮುಕ್ತಿಯುಂಟು ; ಅಲ್ಲಿಯೇ ಕೊನೆಯನ್ನು ತಲುಪಬೇಕು.

ಕಾಯವನ್ನು ಶೋಧಿಸಿ ನೋಡುತ್ತ ಸೂಕ್ಷ್ಮಾತಿಸೂಕ್ಷ್ಮದತ್ತ ಸಾಗಬೇಕು. ಅನ್ನಮಯ ಕೋಶದಿಂದ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ, ಹಿರಣ್ಮಯ ಕೋಶಗಳನ್ನು ಕಂಡು ಅನುಭವಿಸಬಹುದು. ಈ ಕನಕಮಯ ಕೋಶದಿಂದ ಬ್ರಹ್ಮಮಯ ಕೋಶಕ್ಕೂ ನೆಗೆಯಬಹುದು. ಏಕೆಂದರೆ 'ಆನಂದಂ ಬ್ರಹ್ಮ ಇತ್ಯಾಹುಃ', ಆನಂದಮಯ ಕೋಶವೇ ಬ್ರಹ್ಮಮಯ ಕೋಶವಾಗಿದೆ. ಕಾಯದ ಮಹಿಮೆ ತಿಳಿದರೆ ಕೌಸ್ತುಭ ರತ್ನಧಾರಿಯೆನಿಸುವನು.

ನದಿಯನ್ನು ದಾಟುವವರೆಗೆ ನಾವೆಯ ಬಳಕೆ ಲೇಸು. ಆದರೆ ನದಿಯನ್ನು ದಾಟಿದ ಬಳಿಕ ನಾವೆಯ ಗೊಡವೆಯೇಕೆ? ಒಡಲು ಚಿಂತೆಯೆಲ್ಲ ಸಂಸಾರಿಗೆ ಮಾತ್ರ. ಹಸಿವೆ ನೀರಡಿಕೆಗಳನ್ನು ಜಯಿಸಿದ ಯೋಗಿಗೇಕೆ ಒಡಲು ಚಿಂತೆಗಳು ?

ದೇಹಾಭಿಮಾನವನ್ನು ಜ್ಞಾನದ ಬೆಂಕಿಯಲ್ಲಿ ದಹಿಸುವಾಗ, ದೇಹವು ತಲ್ಲಣಿಸುತ್ತದೆ. ಏಕೆಂದರೆ, ತಾನು ಅಂಟಿಕೊಂಡ ವಿಷಯ ಸಂಗವನ್ನು ತೊರೆಯಬೇಕಾಗುತ್ತದೆ. ಹೋರಾಡಬೇಕಾಗುತ್ತದೆ. ಆದರೆ ವಿಷಯ ಮೋಹವು ಕಳಚಿದರೆ ಶಿವನನ್ನು ಕಾಣಬಹುದು ; ಅದುವೇ ಮುಕ್ತಿಯಾಗಿದೆ.

ಗಡಿಗೆಯಿದೆ ಇದರೊಳಗೆ ಘಟಾಕಾಶವಿದೆ. ಗಡಿಗೆಯು ಒಡೆದರೆ ಏನಾಗುತ್ತದೆ ? ಘಟಾಕಾಶವೂ ಮಠಾಕಾಶವೂ ಒಂದಾಗುತ್ತವೆ. ಆ ರೀತಿ ವಿದೇಹವಾದರೆ ನಿರ್ಮಲವಾದ ಕೈವಲ್ಯ ಸಂಪದವು ಪ್ರಾಪ್ತವಾಗುತ್ತದೆ.

ದೇಹವು ಸರಿಯಾಗಿ ಸ್ವಾಸ್ಥ್ಯಪೂರ್ಣವಾಗದಿದ್ದರೆ, ಅದಕ್ಕೆ ಪೋಷಕವಾದ, ಆಹಾರ, ವ್ಯಾಯಾಮಾದಿಗಳನ್ನು ಚೊಕ್ಕಟವಾಗಿ ತಿಳಿದು ಆಚರಿಸಬಹುದು. ಆದರೆ ರೋಗರುಜಿನುಗಳು ಬಂದರೆ, ಪೋಷಕ ತತ್ತ್ವಗಳು ಅದರೊಂದಿಗೆ ಸೇರಿ ಹೊಂದಿಕೊಳ್ಳಲಾರವು.

ಈ ದೇಹವನ್ನು ಅದೆಷ್ಟೋ ವಿಧದಲ್ಲಿ ಪೋಷಿಸಿದರೂ ಕೊನೆಗೆ ನಶಿಸಿಹೋಗುವದಷ್ಟೇ. ಆದ್ದರಿಂದ ದೂಷಿತ ಭೇದಗಳನ್ನು ಅಳಿದರೆ ಮುಕ್ತಿಯು ಹೊಳೆಯುತ್ತದೆ.

ಕಾಯವು ಇರುವಾಗಲೇ ಕಾಯದ ಆಚೆಗಿರುವುದನ್ನು ಕಾಣಬೇಕು. ಕಾಯದ ಅಭಿಮಾನವನ್ನು ತೊರೆಯುವವನೇ ಯೋಗಿಯೆನಿಸುತ್ತಾನೆ. ಕಾಯದಲ್ಲಿಯೇ ಮುಕ್ತಿ ಗತಿಗೆ ಸಾಗಬೇಕು.

ಸಿದ್ಧಿ ಪಡೆದ ಜನರ ಚಿತ್ತವು ಶೋಭಿಸುವುದು. ಅವರು ತಮ್ಮ ದೇಹದ ಮೆರುಗಿಗಾಗಿ ಮನವೀಯರು, ಹಲಸಿನ ಹಣ್ಣು ಎಷ್ಟು ರುಚಿಯಾಗಿರುವುದು ! ಆದರೆ ಅದರ ಹೊರಮೈ ಬರೀ ಮುಳ್ಳು – ಮುಳ್ಳಾಗಿರುವುದಲ್ಲವೇ?

ಸಿದ್ಧಿ ಪಡೆಯುವ ತನಕ ಸಾಧನದ ಅಗತ್ಯವುಂಟು. ಕಳೆದ ಒಡವೆ ಸಿಕ್ಕುವ ತನಕ ಒಪ್ಪ ಬೆಳಕು ಬೇಕಾಗುತ್ತದೆ. ಒಡವೆ ಸಿಕ್ಕ ಬಳಿಕ ಬೆಳಕಿನ ಗೊಡವೆಯಿಂದೇನು? ಅದೇ ರೀತಿ, ದೇವರಾದ ಬಳಿಕ ದೇಹದ ತೊಡಕೇಕೆ ?

ಜೀವವು ಹೋಗುವ ಮೊದಲೆ ಜೀವವಸ್ತುಗಳನ್ನು ಒದಗಿಸಿ ಜೀವನನ್ನು ಜೀವನದಲ್ಲಿ ನಿಲ್ಲಿಸಬೇಕು. 'ಶರೀರಂ ಖಲು ಧರ್ಮ ಸಾಧನಂ.' ಅಂದರೆ ಶರೀರವನ್ನು ಸಾಧನೆಯಲ್ಲಿ ಬಳಸಬಹುದು. ಜೀವ ಹೋದ ಮೇಲೆ ಜೀವ ವಸ್ತುವನ್ನಿತ್ತರೇನು ಉಪಯೋಗವಾದೀತು ?

ಸುಧೆಯನ್ನು ಹೊಟ್ಟೆ ತುಂಬುವಷ್ಟು ಕುಡಿದ ಮೇಲೆ ಹಾಲಿನ ಮೇಲೆ ಮನಸ್ಸು ಹರಿಯದು. ಅದೇ ರೀತಿ, ತತ್ತ್ವವನ್ನು ತಿಳಿದ ಬಳಿಕ ತತ್ ಇರತದ ಗೊಡವೆಯೇಕೆ ?

ಕಾಮಿಯು ಕಾಮಪಿಪಾಸೆಯಿಂದ ಭೋಗಕ್ಕಿಳಿದು ಮೈಮರೆಯುತ್ತಾನೆ. ಆದರೆ ಜ್ಞಾನ–ಪಿಪಾಸುವು ಜ್ಞಾನ ನಿಷ್ಠೆ ಹೊಂದಿ ತನುವನ್ನು ಮರೆಯುತ್ತಾನೆ. ಇವನು ಕಾಮಿಯಲ್ಲ. ಆದರೆ ಅವನಿಗಾಗಿ 'ಮೋಕ್ಷ ಕಾಮಿ' ಎಂಬ ಶಬ್ದವನ್ನು ಬಳಸಬಹುದು. ಗುಣಸಂಗದಲ್ಲಿರುವಾಗ ನಿಯಮ ನಿಷ್ಠೆಗಳ ಆಚರಣೆಯಲ್ಲಿ ತೊಡಗಿದವನು ಆ ಸ್ಥಿತಿಯಿಂದ ಮೇಲೇರಿ ನಿರ್ಗುಣಕ್ಕೆ ಹೊಂದಬೇಕು.

— — — — — — — — — — — — — — — — — — — — — —

ಮುಕ್ತಿಯೆಂದರೆ, ಆತ್ಮದ ತೇಜವನ್ನು ಅನುಭವಿಸುವುದೇ ಆಗಿದೆ. ಆತ್ಮ ತತ್ತ್ವವನ್ನು ಅರಿತವನೇ ಯೋಗಿಯೆನಿಸುತ್ತಾನೆ. ಆ ಶೃಂಗ ಸ್ಥಿತಿಯಲ್ಲಿ ಜ್ಞಪ್ತಿಯನ್ನೂ ಮೀರಿ, ಅರಿವು ಮರೆತಾಗ ಅದ್ವೈತವು ಅನುಭವಕ್ಕೆ ಬರುತ್ತದೆ.

ಬುದ್ಧಿ ತತ್ತ್ವವನ್ನು ಸ್ಥಿರಗೊಳಿಸಿದ ಬಳಿಕ ಮೋಕ್ಷದ ಚಿಂತೆಯೇಕೆ ? ಮನಸ್ಸನ್ನು ಅರಿತೊಡನೆ ಅದರ ಹುಟ್ಟು, ಇರವು ಮತ್ತು ಅಳಿವುಗಳನ್ನು ಅರಿತ ಬಳಿಕ ಬಂಧವಿರದು. ಏನಾದರೂ ಪ್ರಗತಿಯ ಸಂಭಾವ್ಯತೆಯೇ ಇಲ್ಲದವರು ಬರಿ ಬಿನ್ನಹ ಮಾಡಿದರೇನು ಫಲ ?

ಹಾಗಾದರೆ ಮಾನವನ ಮಿತಿ ಯಾವುದು ? ಅಜ್ಞಾನದ ದಟ್ಟ ಕತ್ತಲೆಯನ್ನು ಬಿಟ್ಟು, ತನು–ಭಾವವನ್ನು ಅನುವಿನಿಂದ ಮರೆತು, ಪರಮನಲ್ಲಿ ಮನವನ್ನು ಭದ್ರಪಡಿಸಬೇಕು. ಹೀಗೆ ಘನತೆಯನ್ನು ಹೊಂದಿದವನು ವಿರಳ.

ಉತ್ತಮ ಶಿವಯೋಗ ಸಾಧಕನು, ಪರತತ್ತ್ವವನ್ನು ಊಹಿಸುತ್ತ ಮನಸ್ಸನ್ನು ದಾಟಿ, ಹೆಚ್ಚಿನ ತಿಳುವಳಿಕೆಗಾಗಿ ಹೆಣಗಿ, ಅತ್ತಿತ್ತ ಭ್ರಮಿಸದೆ, ಗುರಿಯನ್ನು ಹೊಂದಿ, ಜ್ಞಪ್ತಿ ಮೀರಿ, ತನ್ನನ್ನೇ ಮರೆತು, ಪೂರ್ಣ ಭಾವದಲ್ಲಿ ಇರುತ್ತಾನೆ.

ಲಲಿತವಾದ ಶಿವತತ್ತ್ವ ಪದದಲ್ಲಿ ಸೇರಿದ ಶಿವಯೋಗಿಯು, ಜಗದ ಜಂಜಡದಲ್ಲಿ ಬೆರೆಯನು. ಹೇಗೆಂದರೆ, ಮುತ್ತಾದ ಸ್ವಾತಿ ನೀರಿನ ಹನಿ ಮರಳಿ ನೀರಾಗದು.

ಪರಿಪೂರ್ಣ ಬ್ರಹ್ಮವು ಆತ್ಮ ಪದದಲ್ಲಿ ನಿರಂತರವೂ ಇರುತ್ತದೆ. ಆದರೆ ಜೀವನು ಹೀನವಾದ ಜಗತ್ತಿನ ಅಡವಿಯಲ್ಲಿ ತಿರುಗುತ್ತಾನೆ.

ಲೋಕವು ಮಾಯೆಯೇ ಮನದಲ್ಲಿ, ಲೋಕಗಳೊಳಗೆ ಬೆಳಗದೆ, ಒಳಗೇ ಬೆಳಗುತ್ತಲಿದ್ದರೆ, ಮಣ್ಣಲ್ಲಿ ಸುಳಿದಾಡಿದರೂ ಮೈಗೆ ಕೆಸರು ತಾಕಿಸಿಕೊಳ್ಳದ ಕುಂಬಾರು ಹುಳದಂತೆ, ಸಿದ್ಧನು ಲೋಕದಲ್ಲಿ ಇರುತ್ತಾನೆ.

**೩೭೪೦ ಜಿಹ್ವೆ ರಸದಿಂದಲಿ ಜೀವ ಪೋಷಣೆಯಿದೆ,**
**ಬ್ರಹ್ಮವೆಂಬ ರಸವ ಪಡೆಯದಿಹರು !**
**ರಸವ ಕುಡಿದು ಅಂಥ ರಾಜರು ಸಾಯುವರೇ ? ವಿಶ್ವ**

**೩೭೪೧ ಪ್ರಾಣವಿಳೆಯೊಳಿರದೆ ಪರವ ಹೊಂದಲಾರ,**
**ಪ್ರಾಣವಿದ್ದೊಡಾಗ ಪರವು ಉಂಟು ;**
**ಪ್ರಾಣಿ ಪರವ ಕಾಣೆ ಭಾವಿಸಿ ಅರಿಯರೇ ? ವಿಶ್ವ**

೩೭೪೨ ಕಾಯದಲ್ಲಿ ಅಡಗಿ ಕಾಣದಾದನವನು,
ಕಾಯವ ಬಿಡುವವನೆ ಕಾಣು ಯೋಗಿ,
ಕಾಯದಲ್ಲಿ ಮುಕ್ತಿ ಗತಿ ಹೊಂದಬೇಕು, ವಿಶ್ವ

೩೭೪೩ ಇಹವ ತೊರೆದು ಫಲವು ಇಹುದು ಎನ್ನುವರು,
ಮಹಿಯೊಳು ಪೇಳುತಿಹ, ಮತವಯೋಗ್ಯ ;
ಇಹದಲ್ಲಿಯೆ ಪರವು ಇಹುದೆಂಬುದರಿಯರಿ, ವಿಶ್ವ

೩೭೪೪ ಜೀವ ಭೇದವರಿತು ಸತ್ತು ಹೋದರಲ್ಲ,
ಬ್ರಹ್ಮಭಾವ ಹೊಂದಿ ಬಾಳುತಿಹರು,
ನೀರು ಮುತ್ತಾದರು, ನೀರಾಗಿ ಬದಲದು, ವಿಶ್ವ

೩೭೪೫ ಗೃಹವು ದೇಹವಿರಲಿ, ಕೇವಲ ಗುಣವಿರಲಿ,
ಅದನು ನಿಲಿಸಿಕೊಳುತ ಇಹನು ತೀರಿಸಿ,
ಕಾಣಲಾರೆಯೇನು ಆನಂದ ಸುಖ ಮನದಿ ? ವಿಶ್ವ

೩೭೪೬ ಕಾಯವ ಸಲೆಗೂಡಿ ಕ್ರಿಯೆಯೊಳಿರುವ ಯೋಗಿ,
ಕಾಯವಿಹದಿ ಬೀಳೆ, ಘನನು ಅಲ್ಲ ;
ಕಾಯದಲ್ಲಿ ಮುಕ್ತಿ ಕೊನೆಯ ಸೇರಬೇಕು, ವಿಶ್ವ

೩೭೪೭ ಕಾಯ ಕಾಯ ಸೋಸಿ ಕನಕವ ನೋಡಿರೋ,
ಕಾಯವೆನಲು ಬ್ರಹ್ಮ ಕಾಯವೆಂದರು,
ಕಾಯ ತಿಳಿದೊಡಾಗ ಕೌಸ್ತುಭ ಧರನಾದ, ವಿಶ್ವ

೩೭೪೮ ದಾಟಿ ಬಂದು ನದಿಯ, ದಡ ತಲುಪಿದ ಪುರುಷ ;
ನಾವೆಯವಿಚ್ಛಿಸದೆ ನಡೆಯುವಂತೆ,
ಯೋಗ ಪುರುಷಗೇಕೆ ಒಡಲು–ಚಿಂತೆಯೆಲ್ಲ ? ವಿಶ್ವ

೩೭೪೯ ದೇಹಿಯು ಜ್ಞಾನಾನಲದಲಿ,
ದಾಹಪಡಲು ದೇಹವೆಲ್ಲವು ತಲ್ಲಣಗೊಳದೇ ?
ದೇಹದೊಳಗೆ ಹೋರಾಡುತ,
ಮೋಹವಡಗಿ ಶಿವನ ನೋಡೆ ಮುಕ್ತಿಯು ವೇಮಾ

---

೩೭೫೦ ವಿದಿತವಿರುವ ಘಟ ಒಡೆಯಲು,
ಉದಿತವದು ಆಗಸದುಪ್ಪರಿಗೆಯೊಂದೆ ಕಣಾ,
ಅದೆ ತೆರದಿ ವಿದೇಹವೆನುವ,
ಸದಮಲ ಕೈವಲ್ಯ ಸರಣಿ ಸಂಪದ ವೇಮಾ.

೩೭೫೧ ದೇಹವು ಲೇಸಾಗಿರುತಿರೆ,
ಪೋಷಣ ತತ್ತ್ವಗಳೆಲ್ಲ ಚೊಕ್ಕಟ ತಿಳಿಸಲ್,
ದೇಹವು ಬಳಲಿಕೆ ಪಡುತಿರೆ,
ಪೋಷಣ ತತ್ತ್ವಗಳು ಸೇರಿ ಹೊಂದವು ವೇಮಾ

೩೭೫೨ ಎಷ್ಟು ವಿಧದಲಿ ತನುವನು
ಪೋಷಿಸಲೇನು ನಶಿಸಿ ಹೋಗದಿಹುದೇ ?
ದೋಷವ ತೊಳೆಯೆ, ಮುಗಿಬಿದ್ದ
ದೂಷಿತ ಭೇದವಳಿದು, ಮುಕ್ತಿ ಹೊಳೆವುದು ; ವೇಮಾ

೩೭೫೩ ಕಾಯವನ್ನು ಕಳಚಿ ಕಾಣನಾಚೆಗಿಹುದ ;
ಕಾಯವನ್ನು ಬಿಡಲು ಆಗ ಯೋಗಿ,
ಕಾಯದಲ್ಲಿ ಮುಕ್ತಿ ಗತಿಗೆ ಸಾಗಬೇಕು, ವಿಶ್ವ

೩೭೫೪ ಸಿದ್ಧರಾದ ಜನರ ಚಿತ್ತ ರಂಜಿಸುವುದು,
ಒಡಲ ಮೆರುಗು ಲೆಕ್ಕ–ಕೊಡರು ಅವರು,
ಹಲಸಿನ ಫಲ–ಹಿರಿಮೆ ಹೊರಗೆ ಏನಿರುವುದು ? ವಿಶ್ವ

೩೭೫೫ ಒಡವೆ ಸಿಗುವ ತನಕ ಒಪ್ಪ ಬೆಳಕು ಬೇಕು,
ಒಡವೆ ಸಿಕ್ಕ ಬಳಿಕ ಗೊಡವೆಯೇಕೆ ?
ದೇವರಾದ ಬಳಿಕ ದೇಹದ ತೊಡಕೇಕೆ ? ವಿಶ್ವ

೩೭೫೬ ಹೊಟ್ಟೆ ತುಂಬ ಸುಧೆಯ ಹಂತ ಹಂತ ಕುಡಿಯೆ,
ಹಾಲ ಮೇಲೆ ಹೇಗೆ ಹರಿವುದು ಮನ ?
ತತ್ತ್ವ ತಿಳಿದ ಬಳಿಕ 'ತತ್' ಇತರವೇತಕೆ ? ವಿಶ್ವ

೩೭೫೭ ಜ್ಞಾನ ನಿಷ್ಠೆ ಹೊಂದಿ ತನುವ ಮರೆಯುವವನು,
ಕಾಮಿಯಲ್ಲ ಮೋಕ್ಷ ಕಾಮಿಯವನು !
ನಿಯಮ ನಿಷ್ಠೆ ಉಡುಗಿ ನಿರ್ಗುಣತ್ವ ಹೊಂದು, ವಿಶ್ವ

೩೭೫೮ ಆತ್ಮ ತೇಜ ಹೊಂದಿ ಅನುಭವಿಪುದೆ ಮುಕ್ತಿ,
ಆತ್ಮ ತತ್ತ್ವವರಿತ ಅವನೆ ಯೋಗಿ,
ಅರಿತು ಮರೆತೊಡಾಗ ಏಕವಾಗಿ ತೋರ್ಕು, ವಿಶ್ವ

೩೭೫೯ ಬುದ್ಧಿ ನಿಲಿಸಿದ ಬಳಿಕ ಮೋಕ್ಷ ಚಿಂತನೇಕೆ ?
ಮನಸು ಅರಿತೊಡೆ ಬಳಿಕ ಬಂಧವೇಕೆ ?
ಗತಿಯು ಇಲ್ಲದವರ ಅತಿ ಬಿನ್ನಹವೇಕೆ ? ವಿಶ್ವ

೩೭೬೦ ದಟ್ಟ ಇರುಳು ಬಿಟ್ಟು, ತನು ಮರೆತು ಅನುವಿಲಿ,
ಪರಮನಲ್ಲಿ ಮನಸು ಭದ್ರಪಡಿಸಿ,
ಗರಿಮೆ ಹೊಂದಿದಂಥ ಘನವು ಎಲ್ಲು ಇಲ್ಲ ! ವಿಶ್ವ

೩೭೬೧ ಉತ್ತಮ ಶಿವಯೋಗಿ ಊಹಿಸಿ ಮನ ದಾಟೆ,
ಸತ್ತ್ವದಲ್ಲಿ ಹೋರಿ ಸರಿದುಕೊಳದೆ,
ಹೊಂದಿ ಮರೆತು ಇಹನು ಪೂರ್ಣ ಭಾವದಲ್ಲಿ, ವಿಶ್ವ

೩೭೬೨ ಲಲಿತ ಶಿವತತ್ತ್ವ ಪದದಲಿ
ಕಲೆತಿಹ ಶಿವಯೋಗಿಯೇಕೆ ಕಲೆಯುವ ಜಗದೊಳ್
ಜಲ ಬಿಂದುವು ಮುತ್ತಾಗಲು,
ಕಲೆಯುವುದೆ ಮತ್ತೆ ನೀರಲಿ, ಕಾಣಾ ವೇಮಾ

೩೭೬೩ ನಿರುತವು ಎಡೆಬೆಡದಂತೆಯೆ,
ಪರಿಪೂರ್ಣ ಬ್ರಹ್ಮನಾತ್ಮ ಪದದೊಳಗಿಹುದೈ,
ನಿರವದ್ಯವಾದಡವಿಯೋಳ್,
ಚರಿಸುತಿಹನು ಜಗವರಿಯುತ, ಸತ್ಯವು, ವೇಮಾ

೩೭೬೪ ಲೋಕವು ಮಾಯೆಯು ಮನದಲಿ,
ಲೋಕಂಗಳಲಿ ಬೆರೆಯದಿದ್ದು ಒಳಗೆ ಬೆಳಗಲ್,
ಆ ಕುಂಬರ ಹುಳುವಿನ ತೆರ
ಲೋಕದೊಳಗಿರುವನು ಯೋಗ ಲೋಲನು ವೇಮಾ

●

# ೨೬. ಅವಧೂತ ಚರ್ಯೆ

**ರಾಜಯೋಗದಲ್ಲಿ ರಾಜತ್ವವ ಹೊಂದಿ,**
**ರಾಜ ರಾಜ ದೊಡ್ಡ ರಾಜನೆಂಬ,**
**ರಾಜಯೋಗದಲ್ಲಿ ರಾಜ ಶೇಖರಾದ ;**
**ವಿಶ್ವದಾಭಿರಾಮ ಕೇಳು ವೇಮ**

## ಅವಧೂತ ಚರ್ಯೆ

ಶಾಸ್ತ್ರೋಕ್ತ ಸನ್ಯಾಸ ಪ್ರಕಾರಗಳಲ್ಲಿ ಅವಧೂತ ಚರ್ಯೆಯೂ ಒಂದಾಗಿದೆ. ಅವಧೂತನಿಗೆ ಆಶ್ರಮದ ಗೊಡವೆಯೂ ಇಲ್ಲ, ವೇಷ ಭೂಷಣಗಳ ಗೊಡವೆಯೂ ಇಲ್ಲ. ಕುಲ ಗೋತ್ರಗಳ ಸೊಡರು ಅವನನ್ನು ತಟ್ಟದು.

ರಾಜಯೋಗದ ಅಭ್ಯಾಸ ಮಾಡಿ ತೇಜವನ್ನು ಹೊಂದುವುದೇ ಮುಕ್ತಿಯಾಗಿದೆ. ತೇಜಾನುಸಂಧಾನದಲಿ ವಿಫಲನಾದರೆ ತುಚ್ಛನೆನಿಸುತ್ತಾನೆ. ಯೋಗ ಮರ್ಮವನ್ನು ಇನಿತಾದರೂ ತಿಳಿಯದಿದ್ದರೆ, ಮಹಿಯಲ್ಲಿ ಗುರುವಿಗೆ ಶರಣುಹೋಗಿ ಅರಿಯಬೇಕು. ಆಗ ಗುರುವು ತಕ್ಕ ಮಾರ್ಗದರ್ಶನ ಮಾಡುತ್ತಾನೆ. ಅದನ್ನು ಅನುವಿಡಿದು ಅನುಸರಿಸಿ ರಾಜಯೋಗದಲ್ಲಿ ರಾಜತ್ವವನ್ನು ಹೊಂದಬೇಕು. ಸ್ವರಾಟನಾಗಬೇಕು, ವಿರಾಟನಾಗಬೇಕು, ರಾಜಶೇಖರನಾಗಬೇಕು.

ಅವಧೂತ ಯೋಗಿಯು ದೇಹ ಭಾವವನ್ನು ಮೀರಿದ ಮುಕ್ತ ಪುರುಷ; ಅವನ ದೇಹವು ಮಲಿನವಾದರೇನು? ಅವನಿಗದರ ಪರಿವೆಯಿಲ್ಲ. ಪರಮ ಯೋಗಿಯ ಮಹಿಮೆಯನ್ನು ಹೇಗೆ ಪರೀಕ್ಷಿಸಬಹುದು ?

ನಾಯಿಗೆ ಸಿಟ್ಟು ಬಹಳ, ಹಂದಿಗೆ ಆಸೆ ಹೆಚ್ಚು, ಇನ್ನು ಆನೆಗೆ ಮದವು ಅಧಿಕ. ಈ ಪ್ರಾಣಿಗಳು ಈ ವೃತ್ತಿಗಳ ಪ್ರತಿನಿಧಿಗಳು. ಅಂದ ಮೇಲೆ ನಾಯಿ ತಿನ್ನುವವನು ಗುರುಲಿಂಗ-ಜಂಗಮನು. ಹಂದಿ ತಿನ್ನುವವನು ಪರಮಯೋಗಿ ಇನ್ನು ಆನೆ ತಿನ್ನುವವನು ಇಳೆಯಲ್ಲಿ ಎಂಥ ಸುಜ್ಞಾನಿಯೆನ್ನಿಸುವನೋ ?

ಅವಧೂತನು ಧ್ಯನಿಯಂತೆ ಇರುವನು. ಮೌನಿಯಾಗಿ ಇರುವನು. ಒಮ್ಮೆ ಭೋಗಿಯಂತೆ ತೋರುವನು. ರೋಗಿಯೂ ಆಗಿರಬಹುದು. ಸರ್ವವನ್ನು ಅರಿತ ಸರ್ವಜ್ಞನಾಗಿ ಕಾಣಬಹುದು. ಏನೇ ಇರಲಿ, ಇಂಥ ಪರಮಯೋಗಿಯಂತೆ ಹೊಳೆಯಬೇಕು.

'ಮೊದಲುಮೇಲಕೆ ಇರುವ........' ಎಂಬೀ ಪದ್ಯವು ಕೂಟ ವೇದಾಂತ ಸರಣಿಗೆ ಸೇರಿದುದಾಗಿದೆ. 'ಊರ್ಧ್ವಮೂಲಂ ಅರ್ಧಃ ಶಾಖಃ ಅಶ್ವತ್ಥಮಿದಂ ಅಮ್ಯಯಂ' ಎಂದು ಗೀತೆಯಲ್ಲೂ, ಉಪನಿಷತ್ತುಗಳಲ್ಲೂ ಬರುವ ಈ ಸಂಸಾರ ವೃಕ್ಷದ ಬಣ್ಣನೆ ಇಲ್ಲಿದೆ. ಇದರ ಬೇರುಗಳು ಬ್ರಹ್ಮಲೋಕದಲ್ಲಿವೆ. ಇದರ ಎಲೆ–ಹೂವು ಕಾಯಿಗಳು ಕೆಳಗಡೆ ಇಹದಲ್ಲಿವೆ. ಇಂಥ ವೃಕ್ಷವು ಮೊಳಕೆಯೊಡೆದು ಬೆಳೆದ ವಿಚಿತ್ರವೆಂತು ? ಮಹಿಯಲ್ಲಿ ದೇಹವೆಂಬೀ ಮನೆಯಲ್ಲಿ ಅಹಂಕಾರವೆಂಬ ಮಸ್ತ ಆನೆಯು ತಾನೊಂದೇ ಆಗಿ ವಿಹರಿಸುವುದರ ವಿವರವೇನು ? ಚಿಕ್ಕ ಪುಟ್ಟ ಇರುವೆಗಳು ಹುತ್ತದ ಮಣ್ಣನ್ನು ಕಲೆ ಹಾಕಿ ಹುತ್ತದ ಮನೆಯನ್ನು ನಿರ್ಮಿಸುತ್ತವೆ. ಅದರಲ್ಲಿ ಗೆದ್ದಲು ಸೇರುತ್ತವೆ. ಬಳಿಕ ಹಾವೂ ಸೇರುತ್ತದೆ. ಆದರೆ ತನ್ನ ಪರಿಶ್ರಮದ ಫಲವನ್ನು ಗೆದ್ದಲಿಗೆ ಬಲಿಗೊಟ್ಟ. ಇರುವೆಯು ಅಲ್ಪ ಜೀವಿಯೇನೂ ಅಲ್ಲ., ಅದುವೇ ಆನೆಯ ಸೊಂಡಿಲಲ್ಲಿ ಸೇರಿ ಅದಕ್ಕೆ ತುಂಬಾ ತೊಂದರೆ ಕೊಡಬಲ್ಲದು. ಕೆಂಪು ಕುದುರೆ (ಪುಲಿಚಿಂತೆ)ಯೆಂದರೆ ರಜೋಗುಣೀ ಇಂದ್ರಿಯ. ಇದರ ತಲೆಯಲ್ಲಿ ಅಂದರೆ ಚಿತ್ತದಲ್ಲಿ ಚಿಂತೆಯ ವೃಕ್ಷವನ್ನು ನಿಲ್ಲಿಸುವದರಿಂದ ವ್ಯಥೆಯೇ ಫಲಿಸುತ್ತದೆ. ಚಿಂತೆಯ ವೃಕ್ಷದ ಮೇಲೆ, ಕೊನೆಯಲ್ಲಿ ಘಮಘಮಿಸುವ ಆಹ್ಲಾದಕರವಾದ ಆನಂದರೂಪಿ ಸೇವಂತಿಗೆಯ ಹೂವು ಅರಳುವುದಲ್ಲವೇ? 'ಆನಂದ ಬ್ರಹ್ಮ ಇತ್ಯಾಹುಃ' (ಈ ಪದ್ಯದಲ್ಲಿ ಅಡಕವಾದ ಅರ್ಥವನ್ನು ಹೀಗೆ ಮಾಡಿದರೆ ಪ್ರಮಾದವಾಗದಿರ–ಬಹುದೆಂದು ಭಾವಿಸಿದ್ದೇವೆ)

ಈ ಭೂಮಿಯ ಮೇಲಿನ ಜನರು ಪರಮ ಯೋಗೀಶ್ವರನನ್ನು ಕಂಡು ಜರಿಯುವರೇ ಹೊರತು ಅರಿಯುತ್ತಿಲ್ಲ. ಅಮೃತಕ್ಕಿರುವ ರುಚಿಯನ್ನು ನಾಲಗೆ ಅರಿಯಬಹುದೇ ಹೊರತು ಹಸ್ತವೆಂತು ಅರಿಯುವದು ?

ಅಲ್ಲಲ್ಲಿ ದೇವರನ್ನು ಕಾಣಲು ತಿರುಗುವ ಮನುಷ್ಯನು ತಿರುಗುತ್ತಿದ್ದು ಅಲ್ಪ ಸ್ವಲ್ಪ ತಿಳಿವು ಇದ್ದರೂ ಸಹ, ತಾನು ಮರಳಿ ಮರಳಿ ತಿರುಗಿ ಬರುವ ಹಾದಿಯನ್ನೇ ಹಿಡಿದು ತಿರುಗುತ್ತಿರುತ್ತಾನೆ.

ಒಬ್ಬನು ರೋಗಿಯಾಗಿ, ಇನ್ನೊಬ್ಬನು ದಿಕ್ಕಿಲ್ಲದ ತ್ಯಾಗಿಯಾಗಿ, ಮತ್ತೊಬ್ಬನು ಭೋಗಿಯಾಗಿ, ಮಗುದೊಬ್ಬನು ರಾಗಿಯಾಗಿ ತಿರುಗುತ್ತಿರುವರು. ತಾನೊಬ್ಬನು ಜ್ಞಾನಿಯಾಗಬಹುದು. ಅಂಥವನು ಮಹಾತ್ಮನನ್ನು ಕಂಡು ಮೆಚ್ಚುತ್ತಾನೆ. ಅಪ್ಪಾ ! ಎಲ್ಲ ರೂಪಗಳಲ್ಲೂ ನೀನೊಬ್ಬನೇ ಇರುವೆಯಷ್ಟೇ.

'ಲೋಹದಿ ಗೆಯ್ದಿಹ ಮೇಣದ ಕಡ್ಡಿ...........' ಇದೊಂದು ಕೂಟವೇದಾಂತವಾದ ಪದ್ಯವಾಗಿದೆ. ಮನಸ್ಸನ್ನು ಹಸುವಿಗೆ ಹೋಲಿಸಲಾಗಿದೆ. ಮನೆಯ ಹಿತ್ತಲದಲ್ಲಿ ದನದ ಕೊಟ್ಟಿಗೆಯಲ್ಲಿ ಕಟ್ಟಿದ ಆಕಳುಗಳಿಗೆ ಹುಲ್ಲಿನ ಗಡ್ಡೆಯನ್ನು

— — — — — — — — — — — — — — — — — — — — —

ಮೇಯಿಸಿದರೂ, ಅವು ಹಾಯಲು ಮುಂದಾಗುತ್ತವೆ. ಅದೇ ರೀತಿ, ಬುದ್ಧಿ ಹೇಳಿದರೂ ಸಹ ಸಿಡುಕು ಬುದ್ಧಿಯವನು ಗುದ್ದಾಡಲು ಮುಂದಾಗುತ್ತಾನೆ. 'ಕಲ್ಲಿಗಿಂತಲೂ ಕಠೋರ, ಹೂವಿಗಿಂತಲೂ ಮೃದು' ಎಂದು ಮನಸ್ಸನ್ನು ಕುರಿತು ಹೇಳುವುದಿಲ್ಲವೇ? ಅದನ್ನೇ ಲೋಹದಿ ಮಾಡಿದ ಮೇಣದ ಕಡ್ಡಿ ಎಂದು ಇಲ್ಲಿ ಹೇಳಿದ್ದಾರೆ.

ಶುದ್ಧ-ಚಿತ್ತದ ಯೋಗಿಯು ಶಿವನ ರೀತಿ ಇರುವನು ಆದರೆ ಮಿಥ್ಯೆ ಯೋಗಿಯ ಗಣನೆಯೇನು ? ಅವನು ಅಲ್ಪ ಮಿಡತೆಯಂತೆ. ನಿತ್ಯ ತತ್ತ್ವವನ್ನು ಕೂಡಿದ ಯೋಗಿಯು ವೇಮನರಂತಿರುವನು.

ಆತ್ಮ ತತ್ತ್ವವನ್ನು ಅನುಭವಿಸುವ ಮುನ್ನವೇ ಜ್ಞಪ್ತಿಯನ್ನು ಮೀರಬೇಕಾಗುತ್ತದೆ. ಆದ್ದರಿಂದ, ತಿಳಿಯೆನೆನ್ನುವವನಿಗೆ ಆತ್ಮವು ತಿಳಿದಿರುತ್ತದೆ. ಅವನೇ ಕಡು ಜಾಣನು. ತಿಳಿದೆನೆನ್ನುವವನು, ಜ್ಞಪ್ತಿಯ ಈಚೆಗೇ ಇರುತ್ತಾನೆ. ಆದ್ದರಿಂದ ಆತ್ಮ ತತ್ತ್ವವನ್ನು ತಿಳಿಯಲಾರನು. ಮನವನ್ನು ಮೀರಿ ಮೌನದಲ್ಲಿರುವವನು ಮಹಿಯಲ್ಲಿ ಉತ್ತಮೋತ್ತಮನಾಗಿರುತ್ತಾನೆ.

ಹೇಗೆ ನಡೆಯಬಾರದೆಂದು ವಿಧಿಸಿರುವರೋ ಹಾಗೆ ನಡೆಯಬೇಕಾದರೆ ಲಜ್ಜೆಯೆನಿಸುವುದು. ಆದರೆ ಆತ್ಮದಲ್ಲಿ ನೆಲೆ ನಿಂತ ಬಳಿಕ ಸ್ವಯಂ ಜ್ಯೋತಿಯಾಗಿ ವ್ಯವಹರಿಸುತ್ತಾನೆ. ಈಗ ಆತ್ಮ ಜ್ಯೋತಿ ಬೆಳಗಿದರೆ, ಕತ್ತಲು ನಿಲ್ಲದು, ಹಸಿವೆ ನೀರಡಿಕೆಗಳು ಪ್ರಾಣದ ಧರ್ಮವಷ್ಟೇ. ಆತ್ಮದಲ್ಲಿ ನೆಲೆ ನಿಂತರೆ ಪ್ರಾಣಧರ್ಮವನ್ನು ಮೀರಬಹುದು. ನಿದ್ರೆಯೆಂದರೆ ಬಾಹ್ಯ ವ್ಯಾಪಾರಗಳನ್ನು ಬಚ್ಚಿಟ್ಟಿರುವುದೇ ಆಗಿದೆ. ಹೀಗೆ ಬಚ್ಚಿಡುವ ಪ್ರಕ್ರಿಯೆಯನ್ನೇ ಅರಿಯಬೇಕು. ಅಂದರೆ, ನಿದ್ರೆಯಲ್ಲಿಯೂ ಎಚ್ಚರವಾಗಿರಬೇಕು.

ರಾತ್ರಿ-ಹಗಲುಗಳೆನ್ನದೆ, ಭಾವಾತೀತನಾಗಿ, ತಾನು ನಾನು ಎನ್ನುವ ತಿಳಿವನ್ನು ಮೀರಿ, ಅಭೇದ ಸ್ಥಿತಿಯಲ್ಲಿ ಇರುವವನೇ ಉತ್ತಮ ಯೋಗಿಯೆನಿಸುತ್ತಾನೆ.

ತಾನಲ್ಲದೆ ಅನ್ಯವಿರುವಲ್ಲಿ ಭಯವಿರಬಲ್ಲದು. ಯಾವ ಭಯವೂ ಇಲ್ಲದ ಮನಸ್ಸಿನಲ್ಲಿ ಜಯಶೀಲನಾಗಿ ಪೂರ್ಣ ಬೆಳದಿಂಗಳು ಬೆಳಗಿದ್ದರೆ ಚಿದಾಕಾಶದಲ್ಲಿ ತುಂಬಿ, ಹೊಂದಿಕೊಂಡು, ಆತ್ಮ ಪದವಿಯಲ್ಲಿ ನಿಲ್ಲುವನು.

ನಡೆಯು ದೋಷರಹಿತವಿರಬೇಕು. ಆಗ ಲಜ್ಜೆಯೆಲ್ಲಿ ಇರುವುದು ? ಅಂಥ ನಡೆ ಇರುವಾಗಲೇ ಶಿವ ಸೌಖ್ಯ ಲಭಿಸುವುದು. ಬಾಗಿ ವಿನಯದಿಂದ ನಡೆದರೆ ಎಗ್ಗು ಬಿಡುತ್ತದೆ. ಲಜ್ಜೆ ತೊರೆಯುವವನು ನಾಶವಿರದ ಯೋಗಿಯೆನಿಸುತ್ತಾನೆ.

ನಿಜವನ್ನು ಸರಿಯಾಗಿ ತಿಳಿದು, ನಿರ್ಗುಣತ್ವವನ್ನು ಹೊಂದಬೇಕು. ನುಡಿಯೊಳಗಿನ ಅರ್ಥವನ್ನು ನೇರವಾಗಿ ತಿಳಿಯಬೇಕು. ಆದರೆ ಎಲ್ಲವನ್ನು ಹೇಳುವ ಚಪಲ ಬಿಡಬೇಕು. ಅಂಥ ಮಹಾಮೌನಿಯೇ ಪರಮಾತ್ಮನೆನಿಸುತ್ತಾನೆ.

ಘನವಂತನಾದ ಯೋಗಿಯು ವಾದ ಮಾಡಲು ಹೋಗನು. ದುಷ್ಟನ ಕೂಟವನ್ನೂ ಸೇರಿಕೊಳ್ಳನು. ತಾನು ಜ್ಞಾನಿಯಾಗಿ ಘನತೆ ಹೊಂದುವವನೇ ವಿಬುಧನೆನಿಸುತ್ತಾನೆ.

ಅರಿವನ್ನು ಮೀರಿದ ಅರಿವೊಂದಿಗೆ ಜ್ಞಪ್ತಿಯನ್ನು ಮೀರಿದ ಆ ಅರಿವು ಲೌಕಿಕವನ್ನು ಅರಿಯದು. ಅಂಥ ಅರಿವಿಗೆ ಏನೆನ್ನಬಹುದುದೆ? ಅದುವೇ ಆತ್ಮಜ್ಞಾನ ತಾನೇ ? ಅರಿವುಗೇಡಿಯು ಏನ್ನನ್ನೂ ಅರಿಯಲಾರನಷ್ಟೇ. ಅರಿವು ಇರದ ಲೌಕಿಕ ಜ್ಞಪ್ತಿ ದಾಟಿದ, ಅರಿವನ್ನು ಅರಿಯುವುದೇ ತತ್ತ್ವವಾಗಿದೆ.

ಮನಸ್ಸನ್ನು ನಿರ್ವಿಷಯಗೊಳಿಸಿ, ಲೋಕವನ್ನು ಅಳಿಸಿ ಹಾಕಿ ಒಳಗೆ ಚಿದ್ಬಯಲು ಮಾಡಿ, ಕಾಲ ಭಾವನೆ ತೊರೆದು, ತ್ರಿಗುಣಗಳ ಸಂಗವನ್ನು ಕೊಚ್ಚಿ ಹಾಕಿ ಚಿಂತನದೊಳಗೆ ಚಿಂತನ ನಡೆಸಿದರೆ ಆ ಯೋಗಿಯು ಗಮ್ಯ ಸ್ಥಾನವನ್ನು ತಲುಪಬಹುದು.

ಉನ್ಮನವು ಆತ್ಮಜಲಧಿಯಲ್ಲಿಯೇ ಇರಬೇಕು. ಅದು ತನ್ನ ಸ್ಥಾನದಿಂದ ಭ್ರಮಿಸಿ, ಮಹಿಮೆ ತೋರಿ ಫಲ ಭೋಗಿಸಲು ನಿಮ್ನ ಲೋಕಗಳಿಗೆ ಇಳಿಯುವುದೆಂದರೆ ಮೊಸಳೆಯು ನೀರನ್ನು ತೊರೆದು ಅಡವಿಯಲ್ಲಿ ಮೇಯ್ದಂತೆ. ಇಹ ಮತ್ತು ಪರಗಳೆಂಬ ಎರಡು ಕಾಲುಗಳು ಇರದ ಆತ್ಮನೆಂಬ ಮುದುಕನು, ತನ್ನ ಪ್ರಭಾವ ಬೀರಿ, ಮಾಯೆಗಂಟಿದ ಮನವನ್ನು ಕೊಚ್ಚಿ ಹಾಕುತ್ತಾನೆ.

"ಝುರಿಯು ಹಿತ್ತಲು ಸೇರಿ...." ಇದೊಂದು ಕ್ಲಿಷ್ಟವಾದ ಕೂಟವೇದಾಂತದ ಪದ್ಯ. ಇಂಥ ಪದ್ಯಗಳಿಗೆ ಇದೇ ಅರ್ಥ ; ಇದಿಷ್ಟೇ ಅರ್ಥ ಎಂದು ಹೇಳಲಾರೆವಾದರೂ ನಮ್ಮ ಅಳವಿಗೆ ತಕ್ಕ ಅರ್ಥ ಹಚ್ಚಲು ಪ್ರಯತ್ನಿಸಿದ್ದೇವೆ.

ಝುರಿಯೆಂದರೆ ಅರಿವು ಎಂದಿಟ್ಟುಕೊಳ್ಳೋಣ. ಇಂದ್ರಿಯಗಳ ದೃಷ್ಟಿಯಿಂದ ಚಿತ್ತ ಹಿತ್ತಲು ಎನಿಸುತ್ತದೆ. ಝುರಿಯು ಹಿತ್ತಲು ಸೇರಿದರೆ ಹಿತ್ತಲಲ್ಲಿಯ ಗಿಡದಲ್ಲಿ ತೂತು ಮಾಡುತ್ತದೆ. ಅಂದರೆ ಅರಿವು ಸಂಕಲ್ಪ ವಿಕಲ್ಪಗಳನ್ನು ನಿಲ್ಲಿಸಿ ತೂತು ಮಾಡಿದಂತೆ. ಆದರೂ ಪೂರ್ವದ ವಾಸನೆಗಳನ್ನು ಫಲಿಸಲೇಬೇಕಷ್ಟೇ. ಹೀಗೆ ತೂತು ಬಿದ್ದರೂ ಗಿಡವು ವಾಸನೆಯ ಹೂವುಗಳನ್ನು ಅರಳಿಸುತ್ತದೆ. ಮುಂದೆ ವಾಸನಾತೀತರಾಗಿ ಮುಕ್ತಿ ಪಡೆಯಬಹುದು. ಆಗ ಸಂಸಾರ ವೃಕ್ಷವು ಸಂಪೂರ್ಣವಾಗಿ ನಶಿಸಬಹುದು.

ಚಿದಾಕಾಶದಲ್ಲಿ ಜ್ಞಪ್ತಿಯನ್ನು ಹೊಗಿಸಿದರೆ ಅದು ದಹಿಸಿ ಇಲ್ಲದಾಗುತ್ತದೆ. ಇಲ್ಲಿ ಯಾವ ಅಗ್ನಿಯೂ ಇಲ್ಲದೆ ಪ್ರಶಾಂತತೆ ಇರುತ್ತದೆ. ಮೇಲೇರುವ ಆಕಾಶ ಬಾಣವು ಏರುತ್ತೇರುತ್ತ ಸದ್ದು ಮಾಡಿದಂತೆ ಇಲ್ಲಿ ಇರದೆ, ಧ್ವನಿಯು ನಿಲ್ಲುತ್ತದೆ. ಅಗ್ನಿ ಇದ್ದರೆ ಇಂಥ ಆಟವಾಡಬಹುದು. ಆದರೆ ಪ್ರಶಾಂತತೆಯಲ್ಲಿಯ ಆಟವೇ ಬೇರೆ.

'ಮೊದಲು ಮನವು ಆಯ್ತು...........' ಇದೊಂದು ಕೂಟವೇದಾಂತ ಪದ್ಯ. ಇದರ ಅರ್ಥವನ್ನು ಹೀಗೆ ಹೊಂದಿಸಬಹುದು.

ಕಾಲಾನುಕ್ರಮದಲ್ಲಿ ಸಂಸ್ಕಾರ ಬೀಜದಿಂದ ದೇಹ ಧರಿಸಿ, ಫಲ ಭೋಗಿಸಿ ಜೀವಿಯು ಭೂಮಿಗಿಳಿಯುತ್ತಾನೆ. ಆ ಸಂಸಾರ ಪ್ರಕ್ರಿಯೆಯು ವಿವಿಧ ಹಂತದಲ್ಲಿ ಬೇರು, ಬೊಡ್ಡೆ, ರೆಂಬೆ ಎಲೆ, ಹೂ, ಕಾಯಿ ಮತ್ತು ಹಣ್ಣುಗಳ ತರವಾಗಿ ಗಿಡವಾಗುತ್ತದೆ. ಈ ಗಿಡದಲ್ಲಿ ಯಾವ ಪಕ್ಷಿಯೂ ಇರದು. ಆದರೆ ಕಾಲವೇ ಪಕ್ಷಿಯಂತೆ ಹಾರಾಡುತ್ತದೆ. ಈ ಕಾಲನಿಗಾವ ಬಾಯಿಯಿಲ್ಲ. ಆದರೆ ಕಾಲದ ಫಲವಾಗಿ ಶರೀರರವು ಜನನ, ಬಾಲ್ಯ, ಕಿಶೋರ, ಯೌವನ, ವೃದ್ಧಾಪ್ಯ ಮತ್ತು ಮರಣಗಳನ್ನು ಹೊಂದುತ್ತದೆ. ಈ ಕಾಲವೇನೂ ಜೀವಿಯಲ್ಲ, ಆದರೆ ಇದು ಜೀವಿಗಳನ್ನು ಕೊಲ್ಲಬಲ್ಲದು. "ಕಾಲಾಯ ತಸ್ಮೈ ನಃ"

'ಅವನ ಕಂಡು ನೋಡು........' ಇದು ಇನ್ನೊಂದು ಕೂಟವೇದಾಂತದ ಪದ್ಯ. ಅವನು ಜೀವಾತ್ಮನಾಗಿದ್ದಾನೆ. 'ಅಹಂ' ಬಾಹ್ಯ ವ್ಯಾಪಾರ ನಡೆಸಿ ಇಂದ್ರಿಯ ವ್ಯಾಪಾರದಲ್ಲಿ ಅವನನ್ನು (ಸಃ) ಕಾಣದೆ, ಅಂತರ್ಮುಖಿಯಾಗಿ ಜ್ಞಪ್ತಿ ಇರುವ ವರೆಗೆ ಅಂದರೆ ಅಸ್ತಿತ್ವ ಭಾವವು ಇರುವ ವರೆಗೆ ಸಾಧನದಲ್ಲಿ ಮುಂದುವರಿಯುತ್ತಾನೆ. ಇಲ್ಲಿಗೆ ಮಾತು ಮೂಕವಾಗುತ್ತದೆ. ಮನಸ್ಸು ನಿಲ್ಲುತ್ತದೆ. ಆ ಬಳಿಕ ಆತ್ಮಾನುಸಂಧಾನವು ಮುಂದುವರಿದರೆ ಅವನು ಅರ್ಥಾತ್ ದೇಹಾತ್ಮಭಾವವು ಅಂದರೆ ಜೀವಭಾವವು ಇಲ್ಲವಾಗುತ್ತದೆ. ಅವನು ಇರದ, 'ಅವನನ್ನು' ಅಂದರೆ ಪರಮನನ್ನು ಕಾಣಲು ಮುಂದಾಗಬೇಕು. ಆಗ ಅಗ್ರ್ಯ ಬುದ್ಧಿಯಲ್ಲಿ ಆತ್ಮನು ಪ್ರತಿಬಿಂಬಿಸುತ್ತಾನೆ. ನಿರ್ವಾಣ ತಲುಪುತ್ತಾನೆ. ಅವನನ್ನು ಅರಿತು 'ಅವನೇ' ಆಗಿ ಬ್ರಾಹ್ಮೀಭೂತನಾಗುತ್ತಾನೆ. ಜೀವನ್ಮುಕ್ತನಾಗುತ್ತಾನೆ. ಅವನು ಇರುವ 'ಅವನು' ಅಂದರೆ ಜೀವಾತ್ಮ ಪರಮಾತ್ಮ ಸಂಯೋಗದಿಂದಾಗಿ ಯೋಗಿಯಾಗುತ್ತಾನೆ.

'ಘಟವು ಒಡೆದು ಉಂಟು..........' ಇದು ಮತ್ತೊಂದು ಕೂಟ ವೇದಾಂತ ಪದ್ಯವೇ ಆಗಿದೆ.

ದೇಹವನ್ನು ದಾರ್ಶನಿಕ ಭಾಷೆಯಲ್ಲಿ ಘಟಕ್ಕೆ ಹೋಲಿಸುತ್ತಾರೆ. ತತ್ತ್ವದಲ್ಲಿ ಕೊನೆಯದಾದ 'ತತ್' ಅನ್ನು ಅರ್ಥಾತ್ ಆತ್ಮವನ್ನು ಘನ ತತ್ತ್ವವೆನ್ನುತ್ತಾರೆ. ಅದು ಶುದ್ಧ ಸತ್ತ್ವವಾಗಿದೆ. ಅಂದರೆ ಬೆಳ್ಳಗಿದೆ. ಸಂಕಲ್ಪ ನಿಶಬ್ದಗಳ ಮೊತ್ತವೇ ಮನಸ್ಸು. ಸಂಕಲ್ಪ ವಿಕಲ್ಪಗಳು ನಿಂತಾಗ, ಮನಸ್ಸಿಗೆ ಶುದ್ಧ ಇಲ್ಲವೆ ಸ್ವಚ್ಛಮನವೆನ್ನುತ್ತಾರೆ. ವೃತ್ತಿ ಸಮೂಹವೇ ಮಲಿನತೆ. ನಿವೃತ್ತಿಯೇ ಸ್ವಚ್ಛತೆ. ದೇಹಭಾವವು ಇಲ್ಲದಾಗ ಅರ್ಥಾತ್ ಘಟವು ಒಡೆದಾಗ, ಸಂಕಲ್ಪ ವಿಕಲ್ಪಗಳು ನಿಂತಾಗ, ಮನಸ್ಸು ನಿರ್ವಿಷಯವಾಗಿ ಮಾತು ಮೂಕವಾಗುತ್ತದೆ. 'ಯತೋ ವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾ ಸಹ' ಎಂದು ಋಷಿ ವಾಕ್ಯವು ಸಾರುತ್ತಿದೆ. ಇಂಥ ಭಾವಾತೀತ ಮಹಾಮೌನದಲ್ಲಿ, ಆತ್ಮಾನುಭೂತಿಯಾಗುತ್ತದೆ. ಸಾಕ್ಷಾತ್ಕಾರವು ಸಿದ್ಧಿಸುತ್ತದೆ.

---

'ತೊಗಲು ಇರದ ಇಲಿಯು.......' ಇದೂ ಒಂದು ಕೂಟ ವೇದಾಂತ ಪದ್ಯವೇ. ಇಲಿಯು ಹೆಚ್ಚಾಗಿ ಪಂಜರದಲ್ಲಿ ಸಿಕ್ಕು ಬೀಳುತ್ತದೆ. ದೇಹವೆಂಬ ಪಂಜರದಲ್ಲಿ ಜೀವವು ಸಿಕ್ಕು ಬಿದ್ದು ಕರ್ಮಫಲಗಳನ್ನು ಭೋಗಿಸುತ್ತಿರುತ್ತದೆ. ಇದನ್ನೇ ಜೀವನ ಕಷ್ಟಕರ ತಪಸ್ಸೆನ್ನುವುದಾದರೆ, ಮುಕ್ತಿಯನ್ನು ಪಡೆಯುವದೆಂತು ?

೩೭೬೫ ರಾಜಯೋಗ ಮಾಡಿ, ತೇಜ ಪಡೆವುದೆ ಮುಕ್ತಿ,
ತೇಜ ಹೊಂದದಿರಲು ತುಚ್ಛರಷ್ಟೆ,
ಮರ್ಮವಿನಿತು ಇರದೆ, ಮಹಿಯಲಿ ಗುರುಗಾಣು, ವಿಶ್ವ

೩೭೬೬ ರಾಜಯೋಗದಲ್ಲಿ ರಾಜತ್ವವ ಹೊಂದಿ,
ರಾಜ ರಾಜ ದೊಡ್ಡ ರಾಜನೆಂಬ,
ರಾಜಯೋಗದಲ್ಲಿ ರಾಜಶೇಖನಾದ, ವಿಶ್ವ

೩೭೬೭ ಚಿಂದಿ ಬಟ್ಟೆಯಲ್ಲ ಚೀನಾಂಬರವೆ ಹೊರತು
ಮಲಿನ ಒಡಲು ಅಲ್ಲ ಮುಕ್ತಿ, ಹೊರತು,
ಪರಮ ಯೋಗಿ ಮಹಿಮೆ ಪರಿಕಿಸುವರೆಂತು ? ವಿಶ್ವ

೩೭೬೮ ನಾಯಿ ತಿನ್ನುವವನು ಗುರು ಲಿಂಗ ಜಂಗಮ
ಹಂದಿ ತಿನ್ನುವವನು ಪರಮಯೋಗಿ
ಆನೆ ತಿನ್ನುವವನು ಎಂಥ ಸುಜ್ಞಾನಿಯೊ ? ವಿಶ್ವ

೩೭೬೯ ಧ್ಯಾನಿಯಂತೆ ಉಂಟು, ಮೌನಿಯಂತೆ ಉಂಟು,
ಭೋಗಿಯಂತೆ ಉಂಟು, ರೋಗಿಯಂತೆ,
ಸಕಲವ ತಿಳಿದಿಪ್ಪ ಸರ್ವಜ್ಞನಾಗಿಯುಂಟು,
ಪರಮ ಯೋಗಿಯಂತೆ ಪೊಳೆಯೊ ವೇಮ

೩೭೭೦ ಸೀಸ ಮೊದಲು ಮೇಲಕೆ ಇರುವ, ತುದಿ ಮೊದಲಿಗೆ ಇರುವ
ವೃಕ್ಷ ತಾನೊಳೆತ ವಿಚಿತ್ರ ಏನು ?
ಮಹಿ ಮನೆಯ ಮೇಲಕೆ ಮದಗಜವು ಒಂದೇ
ವಿವರಿಸುತ ಇರುವಂಥ ವಿವರವೇನು ?
ಗೆದ್ದಲಿರಿಸದ ಬಂಟ ವಿಧದಲಿ ಗಜವನು
ಇರುವೆಗಳು ನುಂಗಿದ ಚಿತ್ರವೇನು ?
ಕಂದು ಕುದುರೆಯ ಮೇಲೆ ಕೊನೆಯಲೊಂದು ಚಿಂತೆ,
ವೃಕ್ಷವ ಕಟ್ಟಿದಂಥಹ ವ್ಯಥೆಯು ಏನು ?

ತೇಟ: ಚಿಂತೆ ವೃಕ್ಷ ಮೇಲೆ ಸೇವಂತಿಗೆ ಹೂವು ಅರಳಿ
ಕೊನರಿ ಪುಷ್ಪಿಸುವವಂಥ ಆ ಕೌತುಕೇನು ?
ಅರಿಯೆ ಕಲಿತಿರುವ ಸರ್ವಜ್ಞನುರಿತ ಜನರು
ವಿವರ ನುಡಿಯುವರೆಂತೊ ಕೇಳು ವೇಮ

೩೭೭೧ ಉರ್ವಿಜನರು ಪರಮ ಯೋಗೀಶ್ವರನ ಕಂಡು,
ಜರಿಯುತಿಹರು ಹೊರತು ಅರಿಯುತಿಲ್ಲ
ಅಮೃತಕಿರುವ ರುಚಿಯ ಅರಿವುದೆಂತು ಹಸ್ತ ? ವಿಶ್ವ

೩೭೭೨ ತಿರುಗಿ ತಿರುಗಿ ಇನ್ನು ತಿರುಗುತ ತಿರುಗುತ್ತ,
ತಿರುಗುತಿದ್ದು ಎಷ್ಟೋ ತಿಳಿವು ಇರಲು,
ತಿರುಗುವಂಥ ಹಾದಿ ತಿರುಗುವನೆಂದಿಗೂ ವಿಶ್ವ

೩೭೭೩ ಒಬ್ಬನು ರೋಗಿಯಾದ, ಮತ್ತೊಬ್ಬನು ದಿಕ್ಕೆಟ್ಟು ತ್ಯಾಗಿಯಾದ ;
ಬೇರೊಬ್ಬನು ಭೋಗಿಯಾದ, ಮಗುದೊಬ್ಬನು ರಾಗಿಯಾದ ;
ತಾನೊಬ್ಬನು ಜ್ಞಾನಿಯಾದ, ಕೇಳೊಬ್ಬ ಮಹಾತ್ಮನ ಕಂಡು ಮೆಚ್ಚುವಂ;
ಅಬ್ಬಬ! ಎಲ್ಲ ರೂಪ ನಿನೊಬ್ಬಗೆ ಸಲ್ಲುತಲಿಪ್ಪುವು ವೇಮನಾ.

೩೭೭೪ ಲೋಹದಿ ಮಾಡಿದ ಮೇಣದ ಕಡ್ಡಿ,
ಮನೆ ಹಿಂದಿನ ಹಾಯುವಾಕಳ ದೊಡ್ಡಿ,
ಅವುಗಳು ಮೇಯ್ದಿಹ ; ಹುಲ್ಲಿನ ಗಡ್ಡಿ,
ಬಿಚ್ಚಿ ಹೇಳಿರೋ ವೇಮಾರೆಡ್ಡಿ,

೩೭೭೫ ಚಿತ್ತ ಶುದ್ಧಯೋಗಿ ಶಿವನ ರೀತಿಯಿಹನು,
ಮಿಥ್ಯೆ ಯೋಗಿಯುಂಟು ಮಿಡತೆ ತೆರದಿ,
ನಿತ್ಯನಾದ ಯೋಗಿ ನಿನ್ನ ರೀತಿ ಇಹನು, ವಿಶ್ವ

೩೭೭೬ ತಿಳಿಯನೆನ್ನುವವನು ತಿರೆಯೊಳು ಕಡು ಜಾಣ ;
ತಿಳಿದೆನೆನ್ನುವವನು ತಿಳಿಯನೆಂದು,
ಮೌನವಾಗಿರುವವ ಮಹಿಮೋತ್ತಮನೆಂದು, ವಿಶ್ವ

೩೭೭೭ ಲಜ್ಜೆ ಎಲ್ಲಿಡುವುದು ? ಕತ್ತಲೆಲ್ಲಿಡುವುದು ?
ಹಸಿವೆಯೆಲ್ಲಿಡುವುದು ? ಆತ್ಮದಲ್ಲಿ,
ಬಚ್ಚಿಟ್ಟ ನಿದ್ರೆಯ ಬಚ್ಚಿಡುವುದರಿಯಿರೊ, ವಿಶ್ವ

೩೭೭೮ ಹಗಲು ಇರುಳು ಮರೆತು, ಭಾವವನ್ನೆ ಮರೆತು,
ತಾನು ನಾನು ಎನುವ, ತಿಳಿವು ಮರೆತು,
ಉಳ್ಳ ಮನುಜನೆ ತಿಳಿ ; ಉತ್ತಮ ಯೋಗಿಯವ ವಿಶ್ವ

೩೭೭೯ ಭಯವೇನಿಲ್ಲದ ಮನದೊಳ್,
ಜಯಪ್ರದವಾದ ಪೂರ್ಣದ ಚಂದ್ರಿಕೆ ಬೆಳಗಲ್,
ಬಯಲೊಳು ಹೊಂದುತ ತುಂಬಿರೆ,
ನಯ ಮೀರಿ ನಿಲುವ ಆತ್ಮ ಪದವಿಯಲಿ ವೇಮಾ

೩೭೮೦ ಲಜ್ಜೆ ತೊರೆಯದನಕ ಲಭಿಸದು ಶಿವ ಸೌಖ್ಯ,
ಬಗ್ಗಿ ನಡೆಯುವನಕ ಎಗ್ಗು ಬಿಡದು,
ಲಜ್ಜೆ ತೊರೆಯುವವನೆ ಲಯವಿಲ್ಲದ ಜೀವಿ, ವಿಶ್ವ

೩೭೮೧ ನಿಜದ ರೀತಿಯರಿತು, ನಿರ್ಗುಣತ್ವ ಹೊಂದಿ,
ನುಡಿಯೊಳಿರುವ ಅರ್ಥ ನೇರ ತಿಳಿದು,
ಪೇಳದಿರುವವನೇ ಪರಮಾತ್ಮನಾಗುವ, ವಿಶ್ವ

೩೭೮೨ ವಾದ ಮಾಡನೆಂದು ವರಿಸಿ ಯಾರ ಜೊತೆಗು,
ಸೇರಲಾರ ತಾನು ದುರಿತ ಕೂಟ,
ಜ್ಞಾನಿಯಾಗಿ ಬುಧನು ಘನತೆ ಹೊಂದುವ ನೋಡು, ವಿಶ್ವ

೩೭೮೩ ಅರಿವನರಿಯದಿರುವ ಅರಿವಿಗೇನೆನಬಹುದು,
ಅರಿವು ಇಲ್ಲದವನು ಅರಿಯಲಾರ,
ಅರಿವು ಇರದ ಅರಿವ ಅರಿಯುವುದೇ ತತ್ತ್ವ, ವಿಶ್ವ

೩೭೮೪ ಒಳಗೆ ಬಯಲು ಮಾಡಿ, ಒಟ್ಟು ಲೋಕವಳಿಸಿ,
ಕುಲವ ಕೊಚ್ಚಿ ಹಾಕಿ, ಗುಣವ ತೊರೆದು,
ಚಿಂತೆಯೊಳಗೆ ಚಿಂತೆ ಸೇರುತಿಹನು ಯೋಗಿ, ವಿಶ್ವ

೩೭೮೫ ಮೊಸಳೆ ಅಡವಿಯಲ್ಲಿ ಮೇಯುತ ಇರುವಾಗ,
ಎರಡು ಕಾಲು ಇರದೆ ಇರುವಂಥ ಮುದುಕನು
ರಟ್ಟೆ ತುಬಾಕಿಯಿಂ ಕೊಟ್ಟೇಟು ಕೊಂದನು, ವಿಶ್ವ

೩೭೮೬ ಲೋಕಾ ಲೋಕವು ನಾನೇನಲ್ಲವು ?
ನಾಕವು ಶಬ್ದವು ನಾನೇನಲ್ಲವು,
ಹೋಗುವ ಬರುವುದು ನಾನೇನಲ್ಲವು,
ತಾಕಲು ಚಿಕ್ಕದು ತಕ್ಕದು ಅಲ್ಲವು,
ಏಕವನೇಕವು ನಾನೇ ಎಂದಿರಿ.
ಸೋಕಿದ ಮನದಲಿ ತಾಕಿದೆನೆಂದಿರಿ,
ಪಾಕವ ತಪ್ಪದೆ ಬಿಡಿಸಿರಿ ಎಂದಿರಿ,
ಪ್ರಾಕ್ದರೆ ಉಪೆಯನು ಆಯಿರಿ ಎಂದಿರಿ,
ನೆಪ ನೀಡಲಿಕೆ ? ಸತ್ಯವ ನುಡಿದಿರಿ,
ಆಕಾರಗಳಿಗೆ ಆದಿಯು ಎಂದಿರಿ,
ಸಾಕಾರಗಳಿಗೆ ಸಾಕ್ಷಿಯೆ ಎಂದಿರಿ,
ನಿತ್ಯಾನಂದವು ನಿರ್ಮಲ ಎಂದಿರಿ,
ಸತ್ಯ ಪರತೆಯ ಸಂಧಿಯು ಎಂದಿರಿ,
ಸಂಧಿಯಲಿ ವೇಮನ ಶೋಭಿಪನೆಂದಿರಿ,
ಸೋಹಂ ಭಾವದಿ ಮುಳುಗಿಹೆನೆಂದಿರಿ,

೩೭೮೭ ವೇದಾತೀತನು ವೇಮನ ಕಾಣಾ ;
ವೇಮನ ಮಾತೇ ವೇದವು ಕಾಣಾ
ವೇದ ಶಾಸ್ತ್ರಗಳು ವಾದವು ಕಾಣಾ ;
ವಾದಿಪ ಬಾಯಿಗೆ ಬೂದಿಯು ಕಾಣಾ
ಕೇಳದವರು ಮತ್ತೆ ಹೇಳರು ಕಾಣಾ ;
ಹೇಳುವವರು ಮತ್ತೆ ಹೇಳರು ಕಾಣಾ ;
ಸಾಧಿಸಿದವನೇ ಸಿದ್ಧನು ಕಾಣಾ ;
ಸಿದ್ಧರ ಮಾತೇ ಪ್ರಸಿದ್ಧವು ಕಾಣಾ
ಜಾತರು ಜಾತರು ಜಾತರು ಕಾಣಾ
ಜಾತರ ತೀತನು ವೇಮನ ಕಾಣಾ

೩೭೮೮ ಝುರಿಯು ಹಿತ್ತಲು ಸೇರಿ, ತೂತು ತರುವು ನೋಡು,
ಅರಳಿ ಹೂವಾದ ರೀತಿಯಾ ಅಂದವೇನು ?
ಅರಿಯೈ ಕಲಿತವರು ಹೇಳುವರು, ಅಖಿಲ ಜನರು
ಕುಶಲವಪ್ಪ ನುಡಿ ಎಂತಿಹುದೊ ? ಕೇಳು ವೇಮ

**೩೭೮೯ ಆಕಾಶ ಬಾಣವ ಅಗ್ನಿ ಇರದೆ ಸುಟ್ಟು,**
**ಏರುತ ಧ್ವನಿ ಬಿಡುವ ತರವು ಅಲ್ಲ**
**ಅಗ್ನಿ ಇದ್ದರಲ್ತೆ, ಆಟವಿಂಥದಿಹುದು, ವಿಶ್ವ**

**೩೭೯೦ ಮೊದಲು ಮರವಾಗಿದೆ ತುದಿಗೆ ಪಕ್ಷಿಯು ಅಲ್ಲ**
**ಬಾಯಿ ಹಣ್ಣು ಆರಿಗುಂಟು ?**
**ಜೀವವೊಂದೆ ಇಲ್ಲ ; ಜೀವಿಗಳ ಕೊಲ್ಲುವುದು ವಿಶ್ವ**

**೩೭೯೧ ಅವನ ಕಂಡು ನೋಡು ಅವನು ಕಾಣಲಾರ,**
**ಅವನು ಇರದ ಅವನು ಅವನ ಕಾಣು**
**ಅವನು ಇರುವ ಅವನು ಅವನೆ ತಾ ಯೋಗಿಯು ವಿಶ್ವ**

**೩೭೯೨ ಘಟವು ಒಡೆದು ಉಂಟು ಘನವು ಬೆಳ್ಳಗುಂಟು,**
**ಮನಸು ಸ್ವಚ್ಛವುಂಟು ; ಮಾತೆ ಇಲ್ಲ**
**ಇದರ ಮರ್ಮವರಿಯೆ, ಯಾರಿಗಳವು ಇಹುದು ?**

ದೇಹವನ್ನು ದಾರ್ಶನಿಕ ಭಾಷೆಯಲ್ಲಿ ಘಟಕ್ಕೆ, (ಗಡಿಗೆಗೆ) ಹೋಲಿಸುತ್ತಾರೆ. ತತ್ತ್ವಗಳಲ್ಲಿ ಕೊನೆಯದಾದ ತತ್ವವನ್ನು ವರ್ತಾತ್ ಆತ್ಮವನ್ನು ಘನ ತತ್ತ್ವವೆನ್ನುತ್ತಾರೆ. ಅದು ಶುದ್ಧ ಸತ್ತ್ವವಾಗಿದೆ. ಇಲ್ಲವೆ ಬೆಳ್ಳಗಿದೆ. ಸಂಕಲ್ಪ–ವಿಕಲ್ಪಗಳ ಮೊತ್ತವೇ ಮನಸ್ಸು. ಸಂಕಲ್ಪ ವಿಕಲ್ಪಗಳು ನಿಂತಾಗ, ಆ ಮನಕ್ಕೆ ಶುದ್ಧ ಮನ ಇಲ್ಲವೆ ಸ್ವಚ್ಛ ಮನ ಎನ್ನುತ್ತಾರೆ. ವೃತ್ತಿ ಸಮೂಹವೇ ಮಲಿನತೆ ನಿವೃತ್ತಿಯೇ ಸ್ವಚ್ಛತೆ. ದೇಹ ಭಾವವು ಇಲ್ಲದಾಗ ಅರ್ಥಾತ್ ಘಟವು ಒಡೆದಾಗ ಸಂಕಲ್ಪ–ವಿಕಲ್ಪಗಳು ನಿಂತಾಗ, ಮನಸ್ಸು ನಿರ್ವಿಷಯವಾಗಿ ಮಾತು ಮೂಕವಾಗುತ್ತದೆ. 'ಯಥೋ ವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾ ಸಹ ಎಂದು ಋಷಿವಾಕ್ಯವೂ ಸಾರುವುದಷ್ಟೇ. ಇಂಥ ಭಾವಾತೀತ ಮಹಾಮೌನಿಯಲ್ಲಿ ಆತ್ಮಾನುಭೂತಿಯಾಗುತ್ತದೆ. ಸಾಕ್ಷಾತ್ಕಾರ ಸಿದ್ಧಿಯಾಗುತ್ತದೆ.

**೩೭೯೩ ತೊಗಲು ಇರದ ಇಲಿಯು, ತೊಗಟೆ ಇರದ ಹಣ್ಣು,**
**ಚೆಪ್ಪರಿಸುವುದು ತಾ ತಿರುಗಿ ತಿರುಗಿ,**
**ಇದುವೆ ತಪಸು ಇರಲು, ಏನಹುದೋ ನೋಡು ? ವಿಶ್ವ**

●

# ೨೭ ಅಧ್ಯಾತ್ಮ ಸುಖಬೋಧೆ

**ಅರಿತ ಮನುಜನ ಸುಖ ಅವ ಲೋಕದಿಲ್ಲ,**
**ಅರಿವು ಅರಿಯಲವಗೆ ಅರಿವೆ ಇಲ್ಲ,**
**ಅರಿವಿಗೆ ಸಮನರಿವೆ ; ಅರಿವೆ ತತ್ತ್ವವಹುದು,**
**ವಿಶ್ವದಾಭಿರಾಮ ಕೇಳು ವೇಮ.**

●

## ಅಧ್ಯಾತ್ಮ ಸುಖ

"ಸುಖಂ ಅನಂತಂ ಆನಂದಂ. ಆನಂದ ಬ್ರಹ್ಮ ಇತ್ಯಾಹುಃ" ಎಂಬ ಸೂತ್ರ ವಾಕ್ಯವಿದೆ. ಅನಂತವಾದ ಸುಖವೇ ಆನಂದ, ಆನಂದವೇ ಬ್ರಹ್ಮ ಯೋಗಿಯ ಕೊನೆಯ ಅವಸ್ಥೆಯನ್ನು 'ಸಚ್ಚಿದಾನಂದ' ಎಂದು ಹೇಳುತ್ತಾರೆ. ಸತ್, ಚಿತ್ ಮತ್ತು ಆನಂದ, ಜ್ಞಪ್ತಿ ಇರುವವರೆಗೂ ಸಚ್ಚಿದಾನಂದ ಸ್ಥಿತಿಯಲ್ಲಿ ಉಳಿದು, ಚಿತ್ ಎಂದರೆ ಅರಿವೇ ತಾನಾಗಿ ಉಳಿದು, ಯೋಗಿಯು ಮೈಮರೆಯುತ್ತಾನೆ. ಅವನು ತನ ಲಕ್ಷ್ಯವನ್ನು ಕದಲಿಸಿ ಚಲಿಸುವುದಿಲ್ಲ. ಹೀಗೆ ನಿಶ್ಚಲವಾಗಿ ಲಕ್ಷ್ಯದಲ್ಲಿ ನೆಲೆ ನಿಂತ ಯೋಗಿಯನ್ನೇ ಶಿವ, ಎನ್ನುತ್ತಾರೆ.

ಜ್ಞಪ್ತಿ ಇರುವವರೆಗೆ ಸುಖಿಸಬಹುದು. ಜ್ಞಪ್ತಿಯನ್ನೂ ಮೀರಿ ಹೋದವನಿಗೆ ಸುಖದ ಭಾವವಿಲ್ಲದಿರಬಹುದು. ಏನೇ ಇರಲಿ, ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ ಚಿದ್ ಬಯಲು ಘನಗೊಂಡು ಬಟ್ಟಬಯಲಾಗುತ್ತದೆ. ಸರಸಿ ಜಲದಲ್ಲಿ ಸೂರ್ಯಬಿಂಬವು ಜಲವಿರುವವರೆಗೆ ಪ್ರತಿಬಿಂಬಿಸುತ್ತದೆ. ಜಲವು ತೀರಿದರೆ ಪ್ರತಿಬಿಂಬವು ಕಾಣದಿದ್ದರೂ ಸೂರ್ಯ ಪ್ರಕಾಶವೇ ತುಂಬಿರುತ್ತದೆ.

ಬಯಲಿನಲ್ಲಿ ಕಸರತ್ತು ಮಾಡುವ ಡೊಂಬರ ಹುಡುಗಿ, ನೋಡಲು ತುಂಬಾ ಕುತೂಹಲ ಹುಟ್ಟಿಸುತ್ತಾಳೆ. ಆದರೆ ಚಿದಾಕಾಶದಲ್ಲಿ ನಿಜವಾದ ಸುಖವನ್ನು ನೀಡುವ ಹಂಸವನ್ನು ಕಾಣಬೇಕು.

ಅವ್ಯಯವಾದ ಬ್ರಹ್ಮ ಸುಖ ವಿಜ್ಞಾನದಲ್ಲಿ ಪರವನ್ನು ಕೋರಿ, ಗುರು ಚಕ್ರದ ವರೆಗಿನ ಕೋರಿಕೆ ಮೀರಿ, ತಾನು ಪರಮನೊಡನೆ ಬೆರೆಯುವೆನೆಂಬ ಭಾವನೆಯನ್ನು ಮೀರಿದ ಕಾಲಕ್ಕೆ ಯೋಗಿಯು ಶಿವನೇ ಎನಿಸಿ ಭೂಮಿಯಲ್ಲಿ ಬೆಳಗುತ್ತಾನೆ.

ನಿರ್ಗುಣದ ಮರ್ಮವನ್ನರಿತು, ಹಿತಕರವಾದ ಬುದ್ಧಿಯಿಂದ ಸತತ ಅಭ್ಯಾಸದಲ್ಲಿಯೇ ಮುನ್ನಡೆದರೆ, ಅನುಪಮವಾದ ಆನಂದವನ್ನು ಹೊಂದಬಹುದು. ಅವನು ಪರಶಿವನೆಂಬ ಭಾವವನ್ನೂ ಅರಿಯುತ್ತಾನೆ.

ಭ್ರೂಮಧ್ಯೆ ಆಜ್ಞಾ ಚಕ್ರದಲ್ಲಿ ಚಿದ್ಬಯಲನ್ನು ಕಂಡು ಅದೇ ಸ್ಥಿತಿಯಲ್ಲಿ ಉಳಿದು ನೋಡಿ ನೋಡಿದಂತ, ಸುಖವು ಸ್ಥಿರವಾಗುವುದು. ಸುಖವನ್ನೇ ಸೂತ್ರವಾಗಿ ಗ್ರಹಿಸಿ, ಮುನ್ನಡೆದರೆ ಬ್ರಹ್ಮಾನುಭೂತಿಗೆ ಹಾದಿಯಾಗುವುದು.

ಆತ್ಮವನ್ನು ಅರಿತರೆ ಆ ಸುಖವು ಬೇರಾವ ಲೋಕದಲ್ಲಿಯೂ ಸಿಕ್ಕದು. ನಿರ್ಗುಣದ ಅಂತಿಮ ಅವಸ್ಥೆಯಲ್ಲಿ ಅವನು ಜ್ಞಪ್ತಿ ಮೀರಿ ಹೋಗುತ್ತಾನೆ. ಹೀಗಾಗಿ ಅರಿವನ್ನು ಅರಿಯಲು ಸಹ ಅವನಿಗೆ ಅರಿವೇ ಇರದಂತೆ ಆಗುತ್ತದೆ. ಈ ಶುದ್ಧ ಅದ್ವೈತವು ತನಗೆದುರು ಏನೊಂದನ್ನೂ ಕಾಣದು. ಇದುವೇ ತತ್ತ್ವವಾಗಿದೆ.

ಆತ್ಮ ಸಾಕ್ಷಾತ್ಕಾರದ ಚಿಂತೆ ಬಿಟ್ಟು, ನಮಗೆ ಬೇರೆ ಚಿಂತೆಯೇಕೆ ? ಇತರ ಪೇಚಾಟಗಳೇಕೆ ? ಈ ಐಹಿಕವನ್ನೇ ಮರೆತು ಪರಕ್ಕೆ ಅರಗು ಅಂಟುವಂತೆ ದೃಢವಾಗಿ ಅಂಟಿ, ಯಾವಾಗಲೂ ಆತ್ಮಾನಂದದಲ್ಲಿ ಸರಸಾಟವಾಡಬಹುದು.

ಇಹದಲ್ಲಿ ಸೌಖ್ಯವಿಲ್ಲದ ಹಾದಿ ನಡೆದರೆ, ಆ ಸೌಖ್ಯ ಬೀಜವನ್ನೇ ಪರದಲ್ಲಿಯೂ ಉಳಿಸಿಕೊಂಡು ಮರಳಬೇಕಾಗುತ್ತದೆ. ಇಹದಲ್ಲಿ ಸಾತ್ವಿಕ ಬಾಳನ್ನು ಬಾಳಿದರೆ, ಸುಖಸಂಗವಾಗುತ್ತದೆ. ಸುಖವು ಪರದಲ್ಲಿ ಲಭಿಸುವುದೆಂದು ನಂಬಿ, ಇಲ್ಲಿ ಕಷ್ಟಪಡಕೂಡದು. ಮೊದಲು ಇಲ್ಲದ ಸುಖವು ತುದಿಗೆ ಬರುವುದೆಂತು ?

ಭಾವ ಪೂರ್ಣವಾಗಿ ನಿರ್ಗುಣ ಸ್ಥಿತಿಯಲ್ಲಿ ಮುನ್ನಡೆದು, ಮನದಲ್ಲಿ ಜ್ಞಾನಪೂರ್ವಕ ಮನನ ಮಾಡುತ್ತ ಏಕ ರೂಪವನ್ನೇ ಮನದಲ್ಲಿ ಕಾಣುತ್ತ ನಿತ್ಯವನ್ನು ಕಾಣು. ಆಗ ಶಾಶ್ವತವಾದ ಆನಂದವು ಸಿದ್ಧಿಸುತ್ತದೆ.

ಅತಿಯಾದ ಪರಿಪೂರ್ಣ ಆನಂದವನ್ನು ಪಡೆಯುವ ಮುಕ್ತಿಯಲ್ಲಿ ಸ್ವತಃ ಗುರು ಭಕ್ತಿಯನ್ನು ಸಂಪಾದಿಸಿ ದುರ್ಜಯವಾದ ಅನಿಷ್ಟ ವೃತ್ತಿಗಳನ್ನು ತೊಲಗಿಸಿದರೆ ನಮ್ಮ ಮುಕ್ತಿ ಸಂಪಾದನೆಯ ಕಾರ್ಯವು ಸಿದ್ಧಿಸುತ್ತದೆ.

ಮನಸ್ಸನ್ನು ಕೊರೆಯುವ ಎಲ್ಲ ಚಿಂತೆಯನ್ನು ಅಂತ್ಯಗೊಳಿಸಿ, ಯೋಗ ಸಾಧನೆಯಲ್ಲಿ ಮುಂದುವರಿದು, ಚಿದಾಕಾಶದಲ್ಲಿ ಚಂದ್ರನ ಕಾಂತಿಯ ತಂಪನ್ನು ಪಡೆದು, ನಿರ್ಗುಣ ಯೋಗವನ್ನು ಚೆನ್ನಾಗಿ ಸಾಧಿಸಬೇಕು.

ನೀರು ತುಂಬಿದ ಗಡಿಗೆಯಲ್ಲಿ ಸೂರ್ಯನು ಪ್ರತಿಬಿಂಬಿಸುತ್ತಾನೆ. ನೀರು ಇಲ್ಲವಾದರೆ ಸೂರ್ಯಕಿರಣಗಳು ತಾವೇ ತಾವಾಗಿ ಪಸರಿಸುತ್ತವೆ. ಅದೇ ರೀತಿ, ಯೋಗಿಯು ಸತ್ತ್ವ ಗುಣದ ಜ್ಞಪ್ತಿಯನ್ನು ಉಳಿಸಿಕೊಂಡಿದ್ದರೆ ಸುಖದ ಅನುಭವ

— — — — — — — — — — — — — — — — — — — —

ಹೊಂದುತ್ತಾನೆ. ಮೋದಿಸುತ್ತಾನೆ. ಆದರೆ ಮೋದ ಪಡುವವನಾರು ? ಮೋದಿಸುವವನಾರು ? ಎಂದು ಯೋಗ ಸಾಧನಾ ಮಾರ್ಗದಲ್ಲಿ ಮುನ್ನಡೆದು ನೋಡಿದರೆ, ಎಲ್ಲವೂ ಬಟ್ಟಬಯಲಾಗಿ ತೋರುತ್ತದೆ. ನಿರ್ಗುಣ ಸ್ಥಿತಿ ಪ್ರಾಪ್ತವಾಗುತ್ತದೆ.

'ಅವನು ಅವನು ಅವನು............ ' ಇದೊಂದು ಕೂಟ ವೇದಾಂತ ಪದ್ಯ. ಅರ್ಥವೇ ಆಗದೆಂದು ಹಲವು (ತೆಲಗು) ಪಂಡಿತರ ಅಭಿಮತ. ಅದರ ಅರ್ಥ ಹೀಗಿದೆ.

ಅವನು ನಿರ್ಗುಣನು. ಅವನು ಸಗುಣನೂ ಹೌದು. ಸಗುಣನು ನಿರ್ಗುಣನೊಳಗೇ ಉಂಟು. ನಿರ್ಗುಣನೇ ಸಗುಣನಾಗಿದ್ದಾನೆ. ಆದರೂ ನಿರ್ಗುಣನು ಸಗುಣಕ್ಕಿಂತ ಭಿನ್ನ. ನಿರ್ಗುಣನು ಸಗುಣವನ್ನು ವ್ಯಕ್ತಪಡಿಸಲೆಂದೇ ಇರುವನು. ಆ ಪರಮ ನಿರ್ಗುಣನೇ ಪರಬ್ರಹ್ಮ ಪದವಿಯಾಗಿದ್ದಾನೆ.

ಅದು ನಿರ್ಗುಣ, ಇದು ಸಗುಣ ಎಂದು ಮನದಲ್ಲಿ ತೋಚಿದಾಗ, ಅವುಗಳ ನೆಲೆಯನ್ನು ಆಂತರ್ಯದಲ್ಲಿ ಸಾಧಿಸಬೇಕು. ಆಗ ಬ್ರಹ್ಮಾನಂದವು ಸ್ಫುರಿಸುತ್ತದೆ. ಪ್ರೀತಿಗೂಡಿ ಅದನ್ನು ಮನದಲ್ಲಿ ಕಾಣಬೇಕು.

ಲೋಕವು ಅನುಭವ ಕ್ಷೇತ್ರವಷ್ಟೇ – ಸ್ಥೂಲ ಅನುಭವ. ಸೂಕ್ಷ್ಮ ಅನುಭವಗಳಿಂದ ಹಲವು ಲೋಕಗಳಾಗಬಹುದು. ಈ ಲೋಕಾನುಭವಗಳಿಂದ ಮೊದಲು ಮಾಡಿ, ಆಳಕ್ಕಿಳಿದು ಅದರಲ್ಲಿಯೇ ಮಗ್ನನಾಗಿ ಪೂರ್ಣತ್ವ ಹೊಂದುವನು ಪರಮ ಸಂತೋಷದನಿಲಯನಾಗಿ ಹೊಳೆಯುತ್ತಾನೆ.

"ಮರವ ಸುಟ್ಟು ಹಾಕಿ ......." ಇದು ಒಂದು ಕೂಟ ವೇದಾಂತ ಪದ್ಯಗಳಲ್ಲಿ ಸೇರಿದ ಪದ್ಯವಾಗಿದೆ. ಕೂಟವೇದಾಂತ ಪದ್ಯಗಳಿಗೆ ತೆಲುಗು ಪಂಡಿತರು ಅರ್ಥ ಹಚ್ಚ ಹೋಗಿಲ್ಲ. ಈ ಪದ್ಯಗಳಿಗೆ ಇದೇ ಅರ್ಥ. ಇದಿಷ್ಟೇ ಅರ್ಥ ಎಂದು ವಿವರಿಸಲು ಹಲವು ಸೂಕ್ಷ್ಮಮತಿಗಳು ಹಿಂಜರಿದಿದಾರೆ. ಇನ್ನು ಹಲವು ದೀಡು ಪಂಡಿತರು ಇಂಥ ಪದ್ಯಗಳಿಗೆ ಅರ್ಥವೇ ಆಗದೆಂದು ತಮ್ಮ ಪಾಂಡಿತ್ಯ (?) ಪ್ರದರ್ಶಿಸಿದ್ದಾರೆ. ಇದರ ಅರ್ಥ ಹೀಗಿದೆ.

ಮೇಲೆ ಬೇರುಗಳನುಳ್ಳ ಕೆಳಗೆ ರೆಂಬೆ, ಕೊಂಬೆ, ಪತ್ರ, ಪುಷ್ಪ, ಎಲೆ, ಕಾಯಿಗಳುಳ್ಳ ಮರವನ್ನು ಓರ್ವ ಜಾಣನು (ವೇಮನರು) ಸುಟ್ಟು ಹಾಕಿದ್ದಾನೆ. ಅದರಿಂದ ನಮಗೆ ಎಲೆಯೆಂಬ ವಿಷಯಗಳ ಸಂಗ ತಪ್ಪಿದೆ. ಶಾಸ್ತ್ರ ವಾಸನೆ, ಲೋಕ ವಾಸನೆ ಮತ್ತು ದೇಹ ವಾಸನೆಗಳೆಂಬ ವಾಸನಾತ್ರಯಗಳ ಹೂವುಗಳನ್ನೂ, ಕರ್ಮ ಫಲಾಸಕ್ತಿಯನ್ನು ತೊರೆದು ಆ ಜಾಣನು ಶರೀರವನ್ನು ಉಳಿಸಿಕೊಂಡು ಜೀವನ್ಮುಕ್ತನಾಗಿ ತಿರುಗುತ್ತಿದ್ದಾನೆ. ಹಸಿಯಾಗಿರುವಾಗ ಆ ಮರವು ವಿಷಯ ಭೋಗ

ಮತ್ತು ಕರ್ಮಫಲಗಳ ಗೂಡಾಗಿತ್ತು. ಅದು ಸುಟ್ಟು ಹೋದ ಮೇಲೆ ಸುಖ ದುಃಖಗಳಿಗೆ ಅತೀತವಾದ ಬ್ರಹ್ಮಾನಂದ ನೀಡುವಂಥ ದಗ್ಧ ಮರವಾಗಿ ಎಷ್ಟು ರಮ್ಯವಾಗಿ ಕಾಣುತ್ತದೆ ?

"ಮಹಿಯೊಳೊಂದು ನೊಣವು.........." ಇದು ಇನ್ನಷ್ಟು ಕ್ಲಿಷ್ಟವಾದ ಕೂಟ ವೇದಾಂತಕ್ಕೆ ಸೇರಿದ ಪದ್ಯ –

ಜೀವನವನ್ನು ಮಂಚದ ಮೇಲೆ ಮಲಗಿದಂತೆ ಬಿಂಬಿಸಲಾಗಿದೆ. ಏಕೆಂದರೆ ಅರಿವು ಸುಪ್ತವಿದೆ. ಮುಂದೆ ತೇಜಾನುಸಂಧಾನ ಮತ್ತು ನಾದಾನುಸಂಧಾನಗಳ ಮೂಲಕ ಮುನ್ನಡೆಯುವ ಸಾಧಕನಿಗೆ ಅನಾಹತ ನಾದವು ಕೇಳಿಸುತ್ತದೆ. ಇದೊಂದು ಗುಂಯ್ಗುಡುವ ಭೃಂಗಿಯ ಧ್ವನಿಯಂತೆ. ಈ ನಾದದಲ್ಲಿ ಸಾಧಕನು ಮೈಮರೆಯುತ್ತಾನೆ. ತಾನಿರುವ ಲೋಕವೆಂಬ ಮಂಚವನ್ನು ಸಹ ಆ ನಾದವು ನುಂಗಿತೇನೋ ಎನಿಸುತ್ತದೆ.

ಮನುಜನು ಮನೀಷಿಯು. ಮನನದ ಕ್ರಿಯೆಯಿಂದಲೇ ಅವನು ಮಾನುಷವಂತನೆನಿಸಿದ್ದಾನೆ. ಈ ಪ್ರಪಂಚದಲ್ಲಿ ಸಂಸಾರ ವೃಕ್ಷವೆಂಬ ದೊಡ್ಡ ಮರವೇ ಇದೆ. ಈ ಸಂಸಾರದ ಆಗು ಹೋಗುಗಳನ್ನು ಅರಿತು ಅದರಿಂದ ಹೊರಬೀಳುವವನು ಮನನಶೀಲ ಮಾನವ. ಇವನೊಬ್ಬ ಅಲ್ಪ ಜೀವಿ. ಸಂಸಾರ ವೃಕ್ಷಕ್ಕೆ ಹೋಲಿಸಿದರೆ ಇನ್ನೂ ಚಿಕ್ಕ ಬಾಲಕ. ಆದರೂ ತನ್ನ ಮನನ ಮೂಲಕ, ಮಂತ್ರ ಚೈತನ್ಯ ಮೂಲಕ, ಸಂಸಾರದ ಕಾರಣ, ಅದರಿಂದ ಪಾರಾಗುವ ಬಗೆ ಮುಂತಾದವುಗಳನ್ನು ಮೆಲುಕಾಡಿಸುತ್ತಾನೆ. ಅಂದರೆ ಮನನ ಮಾಡಿ ಅದನ್ನು ನಾಶಪಡಿಸುತ್ತಾನೆ.

ಈ ಮನನ ಮೂಲಕ ಮೇಲೇರಿದ ಅರಿವು ತುತ್ತ ತುದಿ ಮುಟ್ಟುತ್ತದೆ. ಅರಿವು ಏರಬೇಕಾದರೆ ಗಿರಿಯೇ ಸಹಸ್ರಾರ ಚಕ್ರ. ಜೀವಿಗಳೆಂಬ ನೊಣಗಳು ಅನಾಹತ ನಾದದ ಗುಂಯ್ಗುಡುವಿಕೆಯ ಮೂಲಕ ಗಿರಿಯನ್ನೇರಿ ಪರಮ ಪದವನ್ನು ಪಡೆಯುತ್ತವೆ.

ಈ ಪರಮ ಪದವನ್ನು ದಾಟುವ ಮುನ್ನ ಬಣ್ಣ ಬಣ್ಣದ ಮುತ್ತು ರತ್ನಗಳ ಪ್ರಭೆಯೂ, ಶಕ್ತಿಗಳ ಬಣ್ಣಗಳೂ ತೋರುತ್ತವೆ. ಬಹುವರ್ಣ ಮಹಾ ಪ್ರಭೆಯ ಪೆಂಪಿನಲ್ಲಿ ಈ ಮಹಾಗಿರಿಯ ಜ್ಞಪ್ತಿಯೇ ಉಳಿಯದು. ಪಂಚಾಕ್ಷರಿ ನುಡಿಯುವ ಶುಕಪಂಚಕವು ಪರ್ವತವನ್ನೇ ಇಲ್ಲವೆನಿಸುತ್ತದೆ.

ಇಂಥ ಉನ್ನತ ಅವಸ್ಥೆಯಲ್ಲಿ ಭೇದ ಬುದ್ಧಿಯೇ ಇರದು. ನಾನು ನೀನು ಭಾವವಳಿದು ತಾನು ತಾನಾಗಿ ಉಳಿಯುತ್ತಾನೆ. ಅರಿವು ಮರೆವುಗಳ ಸರಣಿ ಅಳಿದು ಸ್ವಯಂ ಜ್ಯೋತಿಯಾಗಿ ಬೆಳಗುತ್ತಾನೆ. ಹೀಗಾಗಿ ಭೋಗದ ದಾಹ ಹಿಂಗುತ್ತದೆ. ಭೋಗದ ದಾಹ ಇಲ್ಲದಾಗ ಕುರಿ ದೊಡ್ಡಿಯ ಬಳಿ ಯಾವ ಲತಾಗುಲ್ಮಗಳಿದ್ದರೇನು? ಕುರಿ ಮುಟ್ಟದು. ಆ ಗಿಡವು ಬೆಳೆಯುತ್ತದೆ. ಮೊಗ್ಗೆ ಅರಳಿ ಹೂವಾಗುತ್ತದೆ. ಹೀಗೆ

— — — — — — — — — — — — — — — — — — — — —

ಭೋಗ ವಿದೂರನಾದ ಜೀವಿಯು ತನ್ನಲ್ಲಿ ಹುದುಗಿರಬಹುದಾದ ಶಕ್ತಿಯು ಪೂರ್ಣವಾಗಿ ಅರಳುವುದಕ್ಕೆ ಇಂಬುಗೊಡುತ್ತಾನೆ. ತ್ಯಾಗ ಮೂಲಕ ಭೋಗಿಸುತ್ತಾನೆ. ಈ ಪರಮ ರಹಸ್ಯವನ್ನು ತಿಳಿಯುವವರೇ ಸರ್ವಜ್ಞರು. ಇಂಥ ಸರ್ವಜ್ಞರು ತಮ್ಮ ಇರುವನ್ನು ಪರಿಪರಿಯಿಂದ ಪರಿಚಯಿಸುವ ಪದಗಳನ್ನು ಕೇಳಿ ಸಾಧಕರು ಅರಿತುಕೊಳ್ಳಬೇಕು.

"ಎತ್ತು ಎರಡು ತಿನಲು ........" ಇದೂ ಕೂಟ ವೇದಾಂತ ಪದ್ಧತಿಯ ಪದ್ಯವೇ. ಇದಕ್ಕೆ ಹೀಗೆ ಅರ್ಥ ಮಾಡಬಹುದು.

ಎತ್ತುಗಳನ್ನು ಗುಣಗಳಿಗೆ ಹೋಲಿಸಬಹುದು. ಎರಡೆತ್ತಿನ ಬಂಡಿ ಇಹದಲ್ಲಿ ಸಾಗುತ್ತಿದೆ. ಆ ಎರಡೆತ್ತುಗಳನ್ನು ತಿಂದು ಹಾಕಿದರೆ ಇಹದಲ್ಲಿ ಬಾಳಿನ ಬಂಡಿ ನಿಲ್ಲುತ್ತದೆ, ಸ್ತಂಭಿಸುತ್ತದೆ. ಅಂದರೆ ಸೃಷ್ಟಿಗೂ, ಸ್ಥಿತಿಗೂ ಕಾರಣಗಳಾದ ತಮಸ್ಸು ಮತ್ತು ರಜಸ್ಸುಗಳನ್ನು ಸಾಧನೆಯ ಮೂಲಕ ಅತಿಶಯಿಸಿದರೆ, ಐಹಿಕ ಪ್ರವೃತ್ತಿಯು ನಿಲ್ಲುತ್ತದೆ, ಇನ್ನು ಮೂರನೆಯ ಎತ್ತಾದ ಸತ್ತ್ವ ಗುಣವನ್ನು ತಿಂದರೆ, ಅಂದರೆ ಅತಿಶಯಿಸಿದರೆ, ಅವನು ತ್ರಿಗುಣಾತೀತನಾಗಿ ಅಪರ ಅರ್ಥಾತ್ ಇಹವನ್ನು ತೊರೆಯಬೇಕಾಗುತ್ತದೆ. ಮತ್ತು ನಿರ್ಗುಣ ಬ್ರಹ್ಮದಲ್ಲಿ ಲಯಿಸುತ್ತಾನೆ. ಗುಣಗಳನ್ನು ಸರಿಯಾಗಿ ತಿಳಿದು ಅವುಗಳನ್ನು ಅತಿಶಯಿಸುವವನು ಯೋಗಿ ಎನಿಸುತ್ತಾನೆ.

"ಕಾಯ ಮೇಲೆ ಗಿಡವು ಘನವಾಗಿಯೇ ಉಂಟು........". ಇದೂ ಒಂದು ಕೂಟವೇದಾಂತದ ಪದ್ಯವೇ ಆಗಿದೆ. ಅದರ ಒಂದು ಸಾಮಾನ್ಯ ಅರ್ಥವು ಹೀಗಿದೆ.

ಸೋರೆ ಕಾಯಿಯ ಮೇಲೆ ತಂಬೂರಿಯು ಇರುತ್ತದೆ. ಅದನ್ನೇ ಗಿಡವೆನ್ನಬಹುದು. ಇನ್ನು ಅದರ ಮೇಲಿರುವ ಸ್ವರ ತಂತಿಗಳನ್ನು ಮರದ ಮೇಲಿನ ಬಳ್ಳಿಯೆಂದು ತಿಳಿಯಬಹುದು. ಈ ಬಳ್ಳಿಯ ತಂತಿಯ ಮೇಲೆ ಕೈ ಬೆರಳುಗಳು ಮೇಲೆ ಕೆಳಗೆ ಆಗುವುದನ್ನೇ ನಾದಕ್ಕಿಂತ ಪೂರ್ವದ ಶಿವನ ತಾಂಡವ ನೃತ್ಯವೆನ್ನಬಹುದು. ತಂತಿಗಳನ್ನು ಸುತ್ತಿ ಕಟ್ಟಿಡುವುದನ್ನೇ ಬೇರು ಎನ್ನಬಹುದಲ್ಲವೇ ?

**೩೭೯೪ ಸಚ್ಚಿದಾನಂದವಹ ಜ್ಞಪ್ತಿ ಸರಣಿ ಸೇರಿ,**
**ಮೆಚ್ಚಿ ಚಿನ್ಮಾತ್ರವಹ ಶಕ್ತಿ ಮೈಯ ಮರೆತು,**
**ನಿಶ್ಚಲತೆಯುಳ್ಳವನೆ ಹೋಗು ನಿತ್ಯಯೋಗಿ,**
**ನಿಶ್ಚಲಾತ್ಮನ ಶಿವನೆನ್ನು ನಿರುತ ವೇಮ**

**೩೭೯೫ ಸುಖಿಸುವವನಿರಲಿ, ಸುಖಿಸದವನಿರಲಿ ;**
**ಪರೀಕ್ಷಿಸಿ ನೋಡಲು ಬಟ್ಟಬಯಲು,**
**ಸರಸಿ ಜಲದಿ ತೋರ್ಪ ಸೂರ್ಯ ಬಿಂಬದಂತೆ, ವಿಶ್ವ**

— — — — — — — — — — — — — — — — — — — — — —

೩೭೯೬ ಆಗಸದ ಮೋಲಾಡುವ ಡೊಂಬರವನ ಹುಡುಗಿ,
ನೋಡಲಷ್ಟೆ ಹೊರತು ನಂದವಿಲ್ಲ,
ಆಗಸದಲಿ ಬೀದಿ, ಹಂಸನ ನೋಡಿರೋ, ವಿಶ್ವ

೩೭೯೭ ಬ್ರಹ್ಮ ಸಖ ತತ್ತ್ವ ವಿಜ್ಞಾನ ಕೋರಿ,
ಗುರು ಕಳಾ ಜಾಲ ನಿಯತವಹ ಕೋರ್ಕೆ ಮೀರಿ
ಯೋಗ ನಿರ್ಮುಕ್ತ ರೂಪದಿಯಿರುವ ಕಾಲ,
ಪರಮ ಶಿವನೇ ಬೆಳಗುವನು ಧರಣಿ ವೇಮಾ

೩೭೯೮ ಮತಿ ಹಿತವಾಗಿ ನಿರ್ಗುಣ ಮರ್ಮವರಿತು,
ಸತತವಭ್ಯಾಸ ಯುಕ್ತಿಯಲಿ, ಸಂಚರಿಸುತ,
ಅತುಲಿತಾನಂದ ಸಂಪೂರ್ಣ ಅರಿತು ಇಹುದು,
ಪರ ಶಿವನೆಂಬ ಭಾವವನು, ಅರಿತು, ವೇಮ.

೩೭೯೯ ಗಗನವಮರ ಕಂಡು, ಕಣ್ಣು ಮಧ್ಯೆ ಇರಿಸಿ,
ನಿಲಿಸಿ, ನೋಡೆ ನೋಡೆ ನಿಲುವುದು ಸುಖ,
ಸುಖದ ಒಳಗೆ ಸೂತ್ರವಿಹುದು ಬ್ರಹ್ಮ ವಿಶ್ವ

೩೮೦೦ ಅರಿತ ಮನುಜನ ಸುಖ ಆವ ಲೋಕದಲ್ಲಿ ?
ಅರಿವು ಅರಿಯಲವಗೆ ಅರಿವೆ ಇಲ್ಲ,
ಅರಿವಿಗೆ ಸಮನರಿವೆ ; ಅರಿವೆ ತತ್ತ್ವವಹುದು,
ವಿಶ್ವದಾಭಿರಾಮ ಕೇಳು ವೇಮ

೩೮೦೧ ಪರ ಚಿಂತೆಯದೇಕೆ ? ಪೇಚಾಟಗಳೇಕೆ ?
ಅವನಿ ಮರೆತು ಅಂಟಿ ಅರಗಿನಂತೆ,
ಸತತ ಆತ್ಮದಲಿ ಸರನಾಟವಾಡೆಲೊ, ವಿಶ್ವ

೩೮೦೨ ಇಹದಲ್ಲಿ ಸೌಖ್ಯವು ಈಡೇರುತಲಿಲ್ಲ,
ಪರವ ನಂಬಿ ತಾನು ಬದುಕಬಹುದೆ ?
ಮೊದಲು ಇರದ ಸುಖವು ತುದಿಗೆ ಬರುವುದೆಂತು ? ವಿಶ್ವ

— — — — — — — — — — — — — — — — — — — — — —

೩೮೦೩ ಪರಮ ನಿರ್ಗುಣ ವಿದ್ಯೆಯಲಿ ಭಾವದುಂಬಿ,
ಮಾನಸ ಜ್ಞಾನ ಪರಿಪೂರ್ಣ ಮನನದಲ್ಲಿ,
ಏಕ ರೂಪವ ಮನದೆಣಿಸಿ ನಿತ್ಯ ಕಾಣು,
ಶಾಶ್ವತಾನಂದ ಸಿದ್ಧಿ ಜರುಗು ವೇಮ.

೩೮೦೪ ಊರ್ಜಿತಾನಂದ ಪರಿಪೂರ್ಣ ಯುಕ್ತಿಯಲ್ಲಿ,
ಸ್ವಾರ್ಜಿತವಾದ ಗುರು ಭಕ್ತಿ ಸಂಪಾದಿಸಿ,
ದುರ್ಜಯದಲ್ಲಿ ತೊಲಗಿಸುತ್ತ ದೂರಗೊಳಿಸೆ,
ಕರ್ಜವಹ ಮುಕ್ತಿ ಲಭಿಸುವುದು, ಕಾಣು ವೇಮ

೩೮೦೫ ಕೊರೆವ ಚಿಂತೆಯೆಲ್ಲ ಕಡೆತನಕ ದಾಟಿಸಿ,
ಬೆಳಗುವಿಂದು ಕಾಂತಿ ಬೇಡಿ ಪಡೆದು,
ಸಾಧಿಸುತ್ತ ಕೋರು ಸಲೆ ನಿರ್ಗುಣ ಯೋಗ, ವಿಶ್ವ

೩೮೦೬ ಮೋದ ಪಡುವನಾರೊ ? ಮೋದಿಸದವನಾರೊ ?
ಬೀದಿ ಹಿಡಿದು ನೋಡೆ, ಬಟ್ಟ ಬಯಲು,
ಸರಣಿ ಜಲ ಘಟದಲಿ ಸೂರ್ಯನಿರುವ ಚೆಂದ, ವಿಶ್ವ

೩೮೦೭ ಅವನು ಅವನು ; ಅವನು ಅವನೊಳಗೆ ಉಂಟು ;
ಅವನೇ ಅವನು ! ಅವನು ಅವನೆ ಅಲ್ಲ,
ಅವನು ಅವನ ಸೇರೆ ಅವನೆ ಹೋಗು ಬ್ರಹ್ಮ, ವಿಶ್ವ

೩೮೦೮ ಅದು ಇದೆನುತ ಮನದಿ ತೋಚಿ,
ಸದನವ ಗುರುತಿಸಿ ಒಳಗೇ ಸಾಧಿಸಿದಾಗಳ್,
ಕುದುರಿತು ಬ್ರಹ್ಮಾನಂದವು ;
ಮುದದಿಂದ ಮನ ಬೆರೆತು ಕಾಣಬೇಕು ವೇಮಾ

೩೮೦೯ ಲೋಕಗಳಲ್ಲಿ ಲೋಕಿಸಿ ಆಚೆ ಆಳ,
ತೊಡಗಿ ವರ್ತಿಸುತ ಪರಿಪೂರ್ಣ ತಳೆಯುವವನು,
ಪರಮ ಸಂತೋಷ ನಿಲಯನಾಗಿ ಪೊಳೆವ ವೇಮ ವಿಶ್ವ

೩೮೧೦ ಮರವ ಸುಟ್ಟು ಹಾಕಿ, ಮಹಿಯೊಳೊಬ್ಬ ಜಾಣ,
ಶ್ರಮಿಸಿ ತಿರುಗುತಿರುವ ತನುವ ಹೊಂದಿ
ಸುಟ್ಟು ಹೋದ ಮರವು ಸಲೆ ರಮ್ಯವಪ್ಪುದು ! ವಿಶ್ವ

೩೮೧೧ ಮಹಿಯೊಳೊಂದು ನೊಣವು ಮತ್ತೆ ಗುಂಯ್ಗುಡುತ್ತಿದ್ದು
ಮುಂಜಾನೆ ನುಂಗಿದ ಮಹಿಮೆಯೇನು ?
ಮಾನುಷವಂತನಾಗಿ ಮಹಿ ಮೇಲೆ ಬಾಲಕನು
ಮರವ ಮೆಲಕಾಡಿಸಿದುದ ಮರೆಯಬಹುದೆ ?
ಅಲ್ಪ ನೊಣಗಳು ಗಿರಿಯ ಗಟ್ಟಿ ಹಿಡಿದು ತಾವು,
ಪರಮ ಗತಿ ಪಡೆವ ಬಲವದೇನು ?
ಪಂಚ ವರ್ಣದ ಶುಕ–ಪಂಚಕಗಳು ಸೇರಿ,
ಪರ್ವತವನೆ ತಿನುವ ಬಲವದೇನು ?

ತೇಟ: ಕುರಿಯ ದೊಡ್ಡಿಯ ಬಳಿ ಗಿಡ–ಗಂಟಿ, ಜಾಜಿ
ಅರಳಿ ಹೂ ಬಿಡುವಂಥ ವಿಧವದೇನು ?
ಅರಿಯಲರಿತಂಥ ಸರ್ವಜ್ಞರಾದವರು
ವಿವರಿಸಿ ನುಡಿಯುವ ಪದಗಳ ಕೇಳು ವೇಮ

೩೮೧೨ ಎತ್ತು ಎರಡು ತಿನಲು ಇಹದಲಿ ಸ್ತಂಭಿಸುವ,
ಎತ್ತು ಮೂರು ತಿನಲು ಇಹವ ಬಿಡುವ,
ಎತ್ತು ತಿಳಿವ ಮನುಜ ಏರ್ಪಡುವ ಯೋಗಿಯ, ವಿಶ್ವ

೩೮೧೩ ಕಾಯಿ ಮೇಲೆ ಗಿಡವು ಘನವಾಗಿಯೆ ಉಂಟು,
ಬಳ್ಳಿ ಗಿಡದ ಮೇಲೆ ಬಳುಕುತಿಹುದು,
ಬಳ್ಳಿ ಮೇಲೆ ಬೆರಳು ತ್ರಿಪುರ ತಾಂಡವವದು, ವಿಶ್ವ

** ಸಮಾಪ್ತಂ **